ಭಾವನಾ



ಏಪ್ರಿಲ್ 2001

ಹುಟ್ಟು ಹಬ್ಬ - ಯುಗಾದಿ ವಿಶೇಷಾಂಕ

ರೂ. 15

ಸರ್ವರಿಗೂ ಯುಗಾದಿ ಸುಖ-ಶಾಂತಿ-ಸಮೃದ್ಧಿ ತರಲಿ

WORLD CLASS

ESCORTS

ಉದ್ಯಮಕ್ಕಾಗಿ ಹೊಸ ಅವಕಾಶವನ್ನು ಕಂಡುಕೊಳ್ಳಿ ಮತ್ತು ಸಮೃದ್ಧ ಪ್ರತಿಫಲ ಪಡೆದುಕೊಳ್ಳಿ



ಜರ್ಮನ್ ತಂತ್ರಜ್ಞಾನದ ಎಸ್ಕಾರ್ಟ್ಸ್ - ಕ್ಲಾಸ್ "ಕ್ರಾಪ್ ಟೈಗರ್"

ರೈತರಿಗೆ ಪ್ರಯೋಜನಗಳು

- ಏಕಕಾಲದಲ್ಲಿ ಭತ್ತದ ಫಸಲನ್ನು ಕೊಯ್ದು, ಒಕ್ಕಣೆಮಾಡಿ, ಜೊಳ್ಳು ಭತ್ತ ಮತ್ತು ಕಸವನ್ನು ಹೊರತೆಗೆದು ಧಾನ್ಯವನ್ನು ಶೇಖರಿಸಿ ಯಂತ್ರದ ಎಡಪಕ್ಕದಲ್ಲಿರುವ ವ್ಯವಸ್ಥೆಯಿಂದ ಧಾನ್ಯವನ್ನು ಹೊರ ತೆಗೆಯುತ್ತದೆ.
- ನೀರು ನಿಂತ ಜಮೀನಿನಲ್ಲೂ ಸುಲಭವಾಗಿ ಒಂದು ಎಕರೆ ಜಮೀನನ್ನೂ 60 - 75 ನಿಮಿಷಗಳಲ್ಲಿ ಒಕ್ಕಿ ಶುದ್ಧವಾದ ಚೂರಾಗದ ಕಾಳನ್ನು ಕೊಡುತ್ತದೆ.
- ಪ್ರತಿ ಎಕರೆಗೆ ಕನಿಷ್ಠ 2 ಚೀಲ (ಪ್ರತಿ ಚೀಲ 75 ಕೆ.ಜಿ.) ಧಾನ್ಯ ನಷ್ಟದ ಉಳಿತಾಯ. ಸಮಯದ ಉಳಿತಾಯ.

ವ್ಯಾಪಾರೋದ್ಯಮಿಗಳಿಗೆ ಪ್ರಯೋಜನಗಳು

- "ಕ್ರಾಪ್ ಟೈಗರ್" ಮೇಲಿನ ಬಂಡವಾಳ ಹೂಡುವಿಕೆಯಿಂದ ಅಧಿಕ ಲಾಭ ಮತ್ತು ಬಂಡವಾಳದ ಮೇಲಿನ ಮರುಪಾವತಿ ಶೇ. 100% ಕ್ಕಿಂತಲೂ ಅಧಿಕ.
- ರೈಸ್ ಮಿಲ್, ಬೋರ್‌ವೆಲ್ ರಿಗ್ ವ್ಯಾಪಾರ ಇಲ್ಲವೇ ಬಸ್ ಹಾಗೂ ಟ್ರಕ್‌ಗಳ ಮೇಲೆ ಬಂಡವಾಳ ಹೂಡುವುದಕ್ಕಿಂತ ಈ ಒಕ್ಕಣೆ ಯಂತ್ರ ಕೊಂಡಲ್ಲಿ ಅಧಿಕ ಲಾಭ

ಜಪಾನ್ ತಂತ್ರಜ್ಞಾನದ ಅತ್ಯಾಧುನಿಕ ಭತ್ತದ ಸಸಿ ನಾಟಿ ಯಂತ್ರ

- ಸಸಿಗಳನ್ನು ನಾಟಿ ಮಾಡಲು ಸ್ವಯಂಚಾಲಿತ ಆಳನಿಯಂತ್ರಣ ವ್ಯವಸ್ಥೆ. RR6 ಭತ್ತದ ನಾಟಿಯಂತ್ರವು ಗುಚ್ಛ ಒಂದಕ್ಕೆ ಸಮಾನವಾದ ಸಸಿ ಸಂಖ್ಯೆ, ಒಂದೇ ಬಗೆಯ ಕುಳಿ, ನಾಟಿ ಮಾಡಿದ ಸಸಿಗಳ ನಡುವೆ ಸಮಾನ ಅಂತರ ಇರುವಂತೆ ಕೆಲಸ ಮಾಡುತ್ತದೆ.
- ಪ್ರತಿ ಸಸಿಗೂ ಸಾಕಷ್ಟು ಸೂರ್ಯನ ಬೆಳಕು, ಪೋಷಕಾಂಶಗಳು ದೊರೆಯುವಂತೆ ಮಾಡಿ, ಅಧಿಕ ಇಳುವರಿ ಹಾಗೂ ಉತ್ತಮ ಗುಣಮಟ್ಟದ ಕಾಳುಗಳನ್ನು ಉತ್ಪಾದಿಸಲು ಸಹಾಯ ಮಾಡುತ್ತದೆ.
- ಅದ್ವಿತೀಯ ರೋಟರಿಚಾಲಿತ ನಾಟಿ ವಿಧಾನ, ಪವರ್ ಸ್ಟೇರಿಂಗ್ ಮತ್ತು ನಾಲ್ಕು ಚಕ್ರದ ಚಾಲನೆ. ಬಳಸಲು ಸುಲಭ ಮತ್ತು ನಿರ್ವಹಿಸಲು ಸುಲಭ
- ಒಂದು ಎಕರೆ ನಾಟಿಯನ್ನು 60-75 ನಿಮಿಷಗಳಲ್ಲಿ ಮಾಡಿ ಸಮಯವನ್ನು ಉಳಿಸುತ್ತದೆ.
- ತೇವದಲ್ಲಿ ನಾಟಿ ಕೆಲಸ ಮಾಡುವಾಗ ಉಂಟಾಗುವ ಚರ್ಮದ ಸೋಂಕುಗಳನ್ನು ತಡೆಗಟ್ಟುತ್ತದೆ.

"ಎಸ್ಕಾರ್ಟ್ಸ್ - ಯಾನ್ಮಾನ್ RR 6" ಭತ್ತದ ಸಸಿ ನಾಟಿಯಂತ್ರ ಸವಾರಿ - ಅತ್ಯಧಿಕ ಇಳುವರಿಗೆ ದಾರಿ



ಹೈದರಾಬಾದ ಕರ್ನಾಟಕಕ್ಕೆ ಅಧಿಕೃತ ಮಾರಾಟಗಾರರು

ದೇವರಾಜ ಫಾರ್ಮ್ ಎಕ್ವಿಪ್‌ಮೆಂಟ್

ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ ಎದುರಿಗೆ, ಪಿ.ಡಬ್ಲ್ಯೂ.ಡಿ ಕ್ಯಾಂಪ್ ರಸ್ತೆ, ಸಿಂಧನೂರು - 584 128. ಜಿ: ರಾಯಚೂರು

Phone : (08535) 21124, 20816, 20699 (Fax), 20799 (Res) . E-Mail - devarajafarm@yahoo.com.in

ಎಸ್ಕಾರ್ಟ್ಸ್ ಲಿಮಿಟೆಡ್ ಅಗ್ರಿಮೆಷಿನರಿ ಮಾರ್ಕೆಟಿಂಗ್ ವಿಭಾಗ

9/1, ರಂಗಸ್ವಾಮಪ್ಪ ಕಲ್ಯಾಣ ಮಂಟಪ ರಸ್ತೆ, ಡಿವಿಜನ್ ನಂ. 8 ಗೊರಗುಂಟೆ ಪಾಳ್ಯ, ಯಶವಂತ ಪುರ, ಬೆಂಗಳೂರ - 560 022.

Phone : (080) 3473797, 3375148, 3377078

ಸಹಸಂಸ್ಥೆ: **ದೇವರಾಜ ಜ್ಯುವೆಲರ್ಸ್**

ಬೆಳ್ಳಿ-ಬಂಗಾರ ವ್ಯಾಪಾರಸ್ಥರು : ಸಿಂಧನೂರು


Phone :08535 - 20699, 20799


ನಮ್ಮೆಲ್ಲ ಹಂಚಿಕೆದಾರರಿಗೆ ಮತ್ತು ಗ್ರಾಹಕರಿಗೆ ಯುಗಾದಿ ಹಬ್ಬದ ಶುಭಾಶಯಗಳು
ಇದೀಗ
3 ಆಕರ್ಷಕ
ಪ್ಯಾಕ್‌ಗಳಲ್ಲಿ ಲಭ್ಯ
KASTURI
Royal Gold
TEA
THE HOMEMAKER'S CHOICE
ಕರ್ನಾಟಕದ ಎಲ್ಲೆಡೆ ಯಶಸ್ಸನ್ನು ಕಂಡು, ಲಕ್ಷಾಂತರ ಜನರ ಮೆಚ್ಚುಗೆ ಗಳಿಸಿರುವ
ಕಸ್ತೂರಿ ಮತ್ತು ರಾಯಲ್ ಗೋಲ್ಡ್ ಚಹವನ್ನು ಸವಿಯಿರಿ.
ಅದ್ಭುತ ರುಚಿ! ಮಿತವಾದ ಬೆಲೆ!! ಉತ್ಕೃಷ್ಟ ಗುಣಮಟ್ಟ!!!
SUPREME
KASTURI
DUST TEA
NOW IN A PET JAR
THE HOMEMAKER'S CHOICE
50 ಪೈಸೆ ಸೆಚೆಟ್ ನಿಂದ 25ಗ್ರಾಂ, 50ಗ್ರಾಂ, 100ಗ್ರಾಂ, 250ಗ್ರಾಂ, 500ಗ್ರಾಂ ಪ್ಯಾಕ್‌ಗಳಲ್ಲಿ ಲಭ್ಯ ಅಲ್ಲದೇ
100ಗ್ರಾಂ, 250ಗ್ರಾಂ ಪೆಟ್‌ಜಾರ್‌ನಲ್ಲಿ ಮತ್ತು 5Kg, 10Kg ಬ್ಯಾಗುಗಳಲ್ಲಿ ಉತ್ಕೃಷ್ಟ ಗುಣಮಟ್ಟದ CTC ಚಹ ದೊರೆಯುತ್ತದೆ.
ತಯಾರಕರು: ಐಶ್ವರ್ಯ ಎಂಟರ್ ಪ್ರೈಸಸ್
114/16, ಪಟೇಲ್ ಪುಟ್ಟಯ್ಯ ಕೈಗಾರಿಕಾ ಪ್ರದೇಶ, ಮೈಸೂರು ರಸ್ತೆ, ಬೆಂಗಳೂರು-26.
ಫೋನ್ : 6742484 ಫ್ಯಾಕ್ಸ್ : 6745282. ಮೊಬೈಲ್ : 98440 15282
Franchisee-Parry Agro Industries Ltd. KOCHI



ನೆನೆದರೆ ಎಲ್ಲ ಕನಸು ಅನಿಸುತ್ತಿದೆ. ಒಂದು ವರುಷದ ಹಿಂದೆ, ಇದೇ ಬಿಂದುವಿನಲ್ಲಿ ವಿಚಿತ್ರ ತಲ್ಲಣದಲ್ಲಿ ನಿಂತಿದ್ದೆವು. ಸೂಕ್ಷ್ಮ ಸಂವೇದನೆಯುಳ್ಳ ನಿಮಗಾಗಿ, ಯಾವುದೇ ಬಗೆಯ ಕಲಬೆರಕೆ, ಕುತಂತ್ರ ಇಲ್ಲದ, ಶುದ್ಧ ಸಾಹಿತ್ಯಿಕ ಮಾಸಪತ್ರಿಕೆಯೊಂದನ್ನು ರೂಪಿಸುವ ಹಟ ತೊಟ್ಟಿದ್ದೆವು. ಈಗಾಗಲೇ ಮಾರುಕಟ್ಟೆಯಲ್ಲಿರುವ ಮಾಸಿಕಗಳಿಗಿಂತ ಭಿನ್ನವಾಗುವುದು, ರಾಜಿ ಮಾಡಿಕೊಳ್ಳದೆ ಸತ್ವ ಮತ್ತು ಸ್ವರೂಪಗಳ ಗುಣಲಕ್ಷಣಗಳನ್ನು ನಿರಂತರವಾಗಿ ಕಾಯ್ದುಕೊಳ್ಳುವುದು-ಸುಲಭದ ಸಂಗತಿಯಾಗಿರಲಿಲ್ಲ. ಆದರೆ, ಈಗ ಈ ಮೊದಲ ಹುಟ್ಟುಹಬ್ಬದ ಸಂದರ್ಭದಲ್ಲಿ, ಒಂದು ವರುಷದ ನಮ್ಮ 'ನುಡಿದು ಬಂದ ದಾರಿ'ಯೆಡೆ ಕಣ್ಣು ಹೊರಳಿಸಿದಾಗ, ಖಂಡಿತ ತುಸು ಧೈರ್ಯ ಮತ್ತು ಖುಷಿ ಅನಿಸುತ್ತಿದೆ. ಇದು ಸಾಧ್ಯವಾಗಿದ್ದು ನಿಮ್ಮಿಂದ! ''ಹೊಸತನ್ನು ಕೊಟ್ಟರೆ ಓದುಗರು ಸ್ವೀಕರಿಸುವುದಿಲ್ಲ. ಕೇವಲ ಕಥಾಪ್ರಧಾನ ಮಾಸಿಕಕ್ಕೆ ಮಾರುಕಟ್ಟೆ ಇಲ್ಲ. ದಾಂಪತ್ಯ, ಕಾನೂನು ಸಲಹೆ, ಮಾಸ ಭವಿಷ್ಯ, ನಟಿಯರ ಮುಖಪುಟ- ಇಂಥ ಫಾರ್ಮುಲಾ ಇಲ್ಲದಿದ್ದರೆ ನಡೆಯುವುದಿಲ್ಲ. ಕಲೆ ಗಿಲೆ ಯಾರಿಗೂ ಬೇಕಾಗಿಲ್ಲ'' ಎಂಬ 'ತಜ್ಞ ಆತಂಕ'ಗಳನ್ನು ಸುಳ್ಳಾಗಿಸಿದ್ದೀರಿ. ಹೂರಣ, ಓರಣಗಳಲ್ಲಿ ನಾವು ಯತ್ನಿಸಿರುವ ಹೊಸತನ್ನು ತಕ್ಷಣ ಗುರುತಿಸಿದ್ದೀರಿ. ಎಲ್ಲ ಕಡೆಗಳಿಂದಲೂ ಸ್ವಾಗತಿಸಿದ್ದೀರಿ. ಕೃತಜ್ಞತೆಗಳು ಮತ್ತು ಅಭಿನಂದನೆಗಳು.

ಆಡದ ಮಾತುಗಳಿಗಿಂತ 'ಆಡಿದ ಮಾತು'ಗಳೇ ಹೆಚ್ಚಾದಂತಿರುವ ಈಗಿನ ಸಂದರ್ಭದಲ್ಲಿ, ನಿಶ್ಶಬ್ದ ಎಲ್ಲಿದೆ? ಬಹುಶಃ ಇದು ಒಳ್ಳೆಯ ಸಾಹಿತ್ಯಿಕ ಪುಟಗಳಲ್ಲಿದೆ. ಓದು, ಬರಹದ ಏಕಾಂತದಲ್ಲಿದೆ. ಇದು ಬೆಳಕಿನ ನಿಶ್ಶಬ್ದ. ಈ ಬೆಳಕು ಊರನ್ನೆಲ್ಲ ಬೆಳಗಲಾರದು, ನಿಜ. ಆದರೆ ನಮ್ಮ ನಮ್ಮ ಕಾಲ್ದಾರಿಗಳನ್ನು ಖಂಡಿತ ಬೆಳಗಬಲ್ಲದು.



ಕನ್ನಡ ಸಾಹಿತ್ಯಕ್ಕೆ ಈಗ, ಒಳ್ಳೆಯ 'ಕಸುಬುದಾರ'ರಲ್ಲ, ಒಳ್ಳೆಯ 'ಮನಸ್ಸು'ಗಳು ಬೇಕಾಗಿವೆ. ಭಾಷೆ ಈಗ ಹೊಸ ಮನಸ್ಸುಗಳಿಗಾಗಿ ತುಡಿಯುತ್ತಿದೆ. ಹೀಗಾಗಿ ಸಹಜವಾಗಿಯೇ ನಮ್ಮ ಲಕ್ಷ್ಯ ಹೊಸ ತಲೆಮಾರಿನ ಮೇಲಿದೆ. ಹೊಸ ಹೊಸ ಪ್ರತಿಭೆಗಳನ್ನು ಬೆಳಕಿಗೆ ತಂದಿದ್ದೇವೆ. ಬರೆಯುವುದನ್ನೇ ನಿಲ್ಲಿಸಿದ್ದ ಕೆಲವರನ್ನು ಮತ್ತೆ ಬರೆಯಲು ಹಚ್ಚಿದ್ದೇವೆ. ಅನುಭವ ವಿಸ್ತಾರಕ್ಕೆ ಇಂಬುಕೊಡುವಂತೆ ಹಳೆ, ಹೊಸ ಕಲಾವಿದರ ವಿವಿಧ ಶೈಲಿಯ ಕಲಾಕೃತಿಗಳನ್ನು ಪುಟಗಳಲ್ಲಿ ಅಳವಡಿಸಿದ್ದೇವೆ. ಪ್ರತಿ ಪುಟವೂ ವಿಶಿಷ್ಟವಾಗಿರಬೇಕು ಎಂದು ಹೆಣಗುವ ನಮಗೆ ನಮ್ಮ ಪ್ರತಿ ಸಂಚಿಕೆಯೂ ವಿಶೇಷಾಂಕವೇ. ಹುಟ್ಟುಹಬ್ಬದ ಈ ಸಂದರ್ಭದಲ್ಲಿ ಇನ್ನೂ ವಿಶಾಲವಾದ, ವಿಶೇಷವಾದ ಈ ಅಂಕವನ್ನು ನಿಮ್ಮ ಕೈಗಿಡಲು ಸಡಗರವೆನಿಸುತ್ತಿದೆ. ಇನ್ನೂರಕ್ಕೂ ಹೆಚ್ಚಿನ ವಿವಿಧ ಪ್ರಕಾರದ ಪ್ರತಿಭಾವಂತರು ಪಾಲ್ಗೊಂಡಿರುವ ಈ ಸಂಚಿಕೆ, ನಿಮಗೆ, ನಮ್ಮ ಹುಟ್ಟುಹಬ್ಬದ ಕೊಡುಗೆ!

ಒಂದು ಸರಪಳಿಯ ಶಕ್ತಿ ಅದರ ಅತಿ ದುರ್ಬಲ ಕೊಂಡಿಯಷ್ಟು-ಅನ್ನುತ್ತಾರೆ. ಹಳತು ಹೊಸತರ ಮಧ್ಯೆ, ಬುದ್ಧಿ ಭಾವದ ಮಧ್ಯೆ, ಅರಿವು ಇರವಿನ ಮಧ್ಯೆ ಒಂದು 'ಶಕ್ತ ಕೊಂಡಿ'ಯಾಗುವ ದಿಶೆಯಲ್ಲಿ ನಮ್ಮ ಪ್ರಯತ್ನಗಳಿವೆ. ಜೀವಸಖ್ಯದ 'ಕಟು ಮಧುರ' ಆಖ್ಯಾನಗಳನ್ನು ಪ್ರತಿಫಲಿಸಲು ಹಂಬಲಿಸುವ 'ಭಾವನಾ', ನಿಮ್ಮ ವ್ಯಾಮೋಹಕ್ಕೆ, ಮಮತೆಗೆ ಒಂದು ವೇದಿಕೆ. ನಮ್ಮ ಪುಟಗಳು ಸದಾ ನಿಮಗಾಗಿ ತೆರೆದಿರುತ್ತವೆ.

ಈ ಯುಗಾದಿ, ನಿಮ್ಮ ಬದುಕಿನ ರುಚಿಯನ್ನು ಹೆಚ್ಚಿಸಲಿ. ಪ್ರತಿ ಮುಂಜಾವು ನಿಮ್ಮ ಪಾಲಿಗೆ ಹಿತಕರವಾಗಿರಲಿ. ನಿತ್ಯದ ಅಲಗುಗಳಲ್ಲಿ ಹರಿತಗೊಳ್ಳುತ್ತಲೇ ಇರುವ ನಿಮ್ಮ ಮನಸ್ಸಿಗೆ, ಅಗೋಚರ ಸ್ವರಗಳು ಸದಾ ಕೇಳಿಸುತ್ತಿರಲಿ.

ಸಂಪಾದಕ

ಭಾವ ಲೋಕ

ಕತೆಗಳು





ವಿಶ್ವಭಾರತಿ

ವಿಚಾರ ಸಂಗಮ-1

ವಿಚಾರ ಸಂಗಮ-2


ಪುಸ್ತಕೀಯ

ಕವಿ ಸಮಯ-1

ಕವಿ ಸಮಯ-2/64-71

ಕವಿ ಸಮಯ-3/160-167

ಸಹ-ಮತ







ಭಾವನಾ

ಸಂಪುಟ -2 ಸಂಚಿಕೆ - 1
ಏಪ್ರಿಲ್ 2001

ಹುಟ್ಟುಹಬ್ಬ-ಯುಗಾದಿ ವಿಶೇಷಾಂಕ

ಪ್ರಕಾಶಕರು, ಮುದ್ರಕರು, ಮಾಲಿಕರು
ವಿಜಯ ಸಂಕೇಶ್ವರ
ಆನಂದ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ಸಂಪಾದಕ
ಜಯಂತ ಕಾಯ್ಕಿಣಿ

ಉಸ್ತುವಾರಿ: **ವಿ.ಎನ್. ವೆಂಕಟಲಕ್ಷ್ಮಿ**

ಒಟ್ಟಂದ ಒಪ್ಪ ಓರಣ: **ಶ್ರೀಪಾದ್**

ಅಕ್ಷರಸಾಲೆ: **ಆರ್. ರಾಘವೇಂದ್ರ**

ಚಿತ್ರಸಂಸ್ಕರಣ: **ಆರ್.ಎಸ್. ಪ್ರೇಮಕುಮಾರ್**
ಬಿ.ಎಸ್. ಮೋಹನ್, ಕೆ.ವಿ. ಶ್ರೀನಿವಾಸ್ ಪ್ರಸಾದ್

ನೆರವು: **ಅಪಾರ, ವೆಂಕಟರಮಣ ಗೌಡ**

ಮುಖಪುಟ ಕಲಾಕೃತಿ : **ಜಾನ್ ಫರ್ನಾಂಡಿಸ್**

ಸಂಚಿಕೆಯ ಕಲಾವಿದರು: ಸೃಜನ್, ಇಕ್ಬಾಲ್ ಅಹ್ಮದ್, ಕಮಲಮ್ ಅರಸು ಗೀತಾ ಸಾಳುಂಕೆ, ಉಮೇಶ್, ಭಾವೂರಾವ್ ಪತ್ತಾರ್, ಪ್ರೀತಿ ಸಂಯುಕ್ತಾ ಚಂದ್ರಕಾಂತ್ ಕುಸನೂರ್, ಕೆ.ಎನ್.ರಾಮಚಂದ್ರನ್, ಪ್ರವೀಣ್ ರಬಕವಿ ಅಣ್ಣಪ್ಪ, ಬಾಸುಮಾ, ಶಂಕರ ಪಾಟೀಲ್, ಮುರಳೀಧರ ರಾಠೋಡ್ ರಾಮಕೃಷ್ಣ ಸಿದ್ರಪಾಲ, ಕಮಲಾಕ್ಷ ಶೆಣೈ, ಹೇಮಂತರಾಜ ಕುಲಕರ್ಣಿ ಶಶಿಧರ್, ಶ್ರೀಪಾದ್, ಭಾವೂರಾವ್ ಪತ್ತಾರ್, ಎಸ್.ವಿ. ಪದ್ಮನಾಭ್


ಸಂಪಾದಕೀಯ ಕಾರ್ಯಾಲಯ
ನಂ. 38, ಎ.ಎಂ. ರಸ್ತೆ, ಕಲಾಸಿಪಾಳ್ಯಂ ನ್ಯೂ ಎಕ್ಸ್‌ಟೆನ್‌ಷನ್
ಬೆಂಗಳೂರು - 560 002
ಫೋನ್: 2246350, 2226044, 2229102 ಫ್ಯಾಕ್ಸ್: 080-2246349
E-mail: vksbc@ bgl.vsnl.net.in

ಪ್ರಧಾನ ಕಛೇರಿ
ಗಿರಿರಾಜ ಅನೆಕ್ಸ್ ಸರ್ಕ್ಯೂಟ್ ಹೌಸ್ ರಸ್ತೆ, ಹುಬ್ಬಳ್ಳಿ
ದೂರವಾಣಿ: 0836-253656, 253657 ಫ್ಯಾಕ್ಸ್: 0836-253630



ಮೊಗ್ಗಿನ ಜಡೆ







ಚಿತ್ರಗಳು
ಅರ್ಜುನ್ ಶತ್ರುಂಜಯ
ಅಹ್ಮದಾಬಾದ್

ಅಳು ಬಗ್ಗೆ

ಅಳು ಗಾಯವಾದಾಗ
ಬರುತ್ತದೆ ಅಥವಾ
ತುಂಬಾ ಖುಷಿಯಾದರೆ
ಬರುತ್ತದೆ
ಅಳು ಒಂದು
ಅಮೂಲ್ಯವಾದ
ವಸ್ತು ಅಲ್ಲವೆ?

ಕುಣಿಯುವವರು

ಕುಣಿಯುತ್ತಾರೆ ಅವರಿಗೆ
ಕಾಲುನೋವು ಬರುತ್ತದೋ
ಇಲ್ಲವೋ ನನಗೆ ಗೊತ್ತಿಲ್ಲ
ದೇವರಿಗೇ ಗೊತ್ತು


ರಾಕ್ಷಸ

ರಾಕ್ಷಸನನ್ನು ಸಾಯಿಸುವುದು
ಬಹಳ ಸುಲಭ ಒಂದು
ಇರುವೆ ಕಚ್ಚಿದರೆ ಸಾಕು
ಅವನು ಬಿದ್ದುಹೋಗುತ್ತಾನೆ
ಆಗ ನಾವೆಲ್ಲರೂ ಸೇರಿಕೊಂಡು
ಹೊಡೆಯಬಹುದು. 5 ವರ್ಷದ
ಮಗು ಕೂಡ ಹೊಡೆಯಬಹುದು
ಆದರೆ ಬುದ್ಧಿ ಇರಬೇಕು ಅಷ್ಟೆ

ಅಡಿಗೆ ಮನೆ

ನಮ್ಮ ಮನೆಯ ಅಡಿಗೆ ಮನೆ
ಮೊದಲು ಬಚ್ಚಲಮನೆಯ
ಹಾಗಿತ್ತು. ಈಗ ದೇವರ ಮನೆಯ
ಹಾಗಿದೆ

ಪೂರ್ಣಪ್ರಜ್ಞ



ಆಹಾರ

ಸಸ್ಯ ತಿನ್ನುವವರಿಗೆ ಸಸ್ಯ
ಒಳ್ಳೆಯದು ಆದರೆ
ಮಾಂಸ ತಿನ್ನುವವರಿಗೆ
ಅದೇ ಒಳ್ಳೆಯದು

ಮನೆ

ಈ ಒಂದು ಮನೆಯನ್ನು
ನಾವು ಬಿಡುತ್ತಿದ್ದೇವೆ ಆ ಮನೆಗೆ
ಬೇರೆಯವರು ಬರುತ್ತಾರೆ

ನಾಯಿ

ದೊಡ್ಡ ನಾಯಿ ಮಾತ್ರ
ನಮಗೆ ಕಚ್ಚುತ್ತದೆ
ಚಿಕ್ಕ ನಾಯಿ
ಕಚ್ಚುವುದಿಲ್ಲ
ನೀವೇ ಗಮನಿಸಿ

ಮಾಲೆ

ಗಂಧದ ಮಾಲೆಯನ್ನು
ಪರಿಮಳದಲ್ಲಿ
ಮಾಡುತ್ತಾರೆ

ಸುಳ್ಳು

ಸುಳ್ಳು ಹೇಳಿದರೆ
ಪೆಟ್ಟು ನಿಜ ಹೇಳಿದರೆ
ಪೆಟ್ಟು ಇಲ್ಲ. ಸುಳ್ಳು ಒಂದು
ಕೆಟ್ಟ ರೋಗ ನಿಜ ಒಳ್ಳೆಯ
ರೋಗ

ಚಿತ್ರ: ಸ್ವಯಂಪ್ರಭಾ ಹೆಗಡೆ





ಯಾರಿಗೆ?

ಸುಂದರ ಈ ನಾಡು ಯಾರಿಗೆ,
ಸುಂದರ ಈ ವನ ಬನ ಯಾರಿಗೆ,
ಸುಂದರ ಈ ಆಕಾಶ ನಕ್ಷತ್ರ ಯಾರಿಗೆ,
ಸುಂದರ ಈ ಕಾಮನ ಬಿಲ್ಲು ಯಾರಿಗೆ?

ಮಗು

ತಾಯಿಯ ಮಡಿಲಲಿ ಒದ್ದೆಯಾದ ಮಗು
ತಾಯಿಯ ಅಕ್ಕರೆಯ ಮಗು
ತಾಯಿಯ ಸುಂದರ ಮಗು

ಸುಂದರವಾಗಿ ನಗುವ ಮಗು
ಬೆದರಿಸಿದರೆ ಅಳುವ ಮಗು
ಎಲ್ಲರನ್ನು ನಗಿಸುವ ಮಗು
ಎಲ್ಲರ ಮೆಚ್ಚಿನ ಮಗು

ಮಳೆ

ಆಕಾಶ ತುಂಬ ಮೋಡ ಮುಸುಕಿತು
ಸಂಜೆಯಲಿ ತಣ್ಣನೆಯ ಗಾಳಿ ಬೀಸಿತು
ಗುಡುಗು ಸಿಡಿಲು ಹೊಡೆಯಿತು
ಮಳೆಯು ಇಳಿಯಿತು ಭೂಮಿಗೆ!

ಭೂಮಿ, ಆಕಾಶ ಒಂದೆ ಎಂಬ ಭಾವ
ಇದೇನು ಎಷ್ಟು ಚೆನ್ನ!
ನೆಲಕು ಇದಕು ಏನು ಸಂಬಂಧ?

ಸಂದೇಶ ಕಲಬುರ್ಗಿ,
6 ನೇ ತರಗತಿ



ಜಗದೀಶ್
ಭೂತನಾಳ,
ಬಸವನಬಾಗೇವಾಡಿ











ಕುಶಾಲ್ ಬಿಡಿಸಿದ ಚಿತ್ರಗಳ ಪ್ರದರ್ಶನ ಈಚೆಗೆ ಬೆಂಗಳೂರಿನಲ್ಲಿ ಜನಮನ್ನಣೆ ಗಳಿಸಿತು.




ನನ್ನ ಮದುವೆಯ ದಿನ ಭಾರೀ ಮಳೆ. ಬರಬೇಕಾದವರು ಬೇಕಾದಷ್ಟು ಜನ ಬಂದೇ ಇರಲಿಲ್ಲ. ಮಳೆಗೋಸ್ಕರ ಕತ್ತು ನೋಯಿಸಿಕೊಂಡು ಕಾದ ಜನ, ಮಳೆ ನಿಲ್ಲುವವರೆಗೂ ಕಾಯುವುದು ನನಗೆ ಯಾವತ್ತೂ ಸೋಜಿಗ. ನೆಗಡಿ, ಜ್ವರ ಬರುವುದಿಲ್ಲವೆ? ಬಟ್ಟೆ ಕೆಸರಾಗುವುದಿಲ್ಲವೆ? ಮುಂತಾಗಿ ನೀವು ಕೇಳಬಹುದು. ನಾನು ಹೇಳುವುದಿಷ್ಟೆ. ಹತ್ತಿರದ ಸಂಬಂಧಿಗಳ ಮದುವೆಯೆಂದರೆ ಬರಬೇಕಷ್ಟೆ. ಬರಬೇಕೆಂದರೆ ಬರಬೇಕು. ಮಳೆಯೋ, ಬಿಸಿಲೋ ನೀವು ಬಂದಿರಲಿಲ್ಲವೆ? ಹಾಗೆ.


ಮದುವೆ ಮುಗಿದ ದಿನವೇ ಪ್ರಸ್ಥ, ಗಂಡಿನ (ಅವರಿನ್ನೂ ನನ್ನ ಗಂಡನಲ್ಲವೆ?) ಮನೆಗೆ ಬಂದು, ಅಲ್ಲಿಂದ ಚೌಡೇಶ್ವರಿ ದೇವಸ್ಥಾನಕ್ಕೆ. ಅಲ್ಲಿ ಕಳಶ ನೋಡಿ, ಪೂಜೆ ಮಾಡಿ ಹೆಣ್ಣಿನ (ನಾನಿನ್ನೂ ಅವರ ಹೆಂಡತಿಯಲ್ಲವೆ?) ಮನೆಗೆ ಹೋಗಿ, ಅಲ್ಲಿ ಪ್ರಸ್ಥ ನಿಶ್ಚಿತಾರ್ಥವಾದ ಮೇಲೆ ಅಮ್ಮ ಹೇಳಿದ್ದರು: 'ಲೇ ಮಂಜಿ, ಹುಡುಗನ ಮನೇಲಿ ಕರೆಂಟಿಲ್ಲವಂತೆ, ಆದರೇನು? ನಿನ್ನ ಮದುವೆ ಆಗೋದು ಮುಖ್ಯ. ನೀನಿಲ್ಲಿ ಈ ಲಟಾಪಟಾ ಮಗ್ಗದ ನೆತ್ತಿಗೆ ಕಟ್ಟಿದ ಟ್ಯೂಬ್‌ಲೈಟಿನ ಬೆಳ್ಳು ಬೆಳಕಿನಲ್ಲಿ ನಿಂತು ಬಟ್ಟೆ ನೇಯ್ದೋಳು, ಸ್ವಲ್ಪದಿನ ಅಡ್ಜಸ್ಟ್ ಮಾಡ್ಕೊ.'

'ಅಡ್ಜಸ್ಟ್ ಮಾಡ್ಕೊಬೇಕಲ್ಲಾ'-ಸಂಜೆ ಮನೆಗೆ ಬಂದ್ರೆ, ದೂರದ ಸಾಬರ ಮನೆಯಿಂದ ಒಂದು ವೈರೆಳೆದು ಬಲ್ಬ್ ತಗುಲಿಹಾಕಿದ್ದರೂ ಕರೆಂಟಿರಲಿಲ್ಲ. ನನ್ನ ಜತೆಗಿದ್ದವಳೆಂದರೆ ಪದ್ದಿಯೊಬ್ಬಳೇ. ನನ್ನ ಎಲ್ಲ ನೋವಿಗೂ ಜೊತೆಯಾದವಳು. 'ನೋಡೇ, ಶೀಟಿಗೆ ಬಣ್ಣ ಬಳಿಸಿಲ್ಲಾ, ನೋಡೇ ಆ ಟೇಬಲ್ ಹೇಗೆ ಕಿಲುಬು ಹಿಡಿದಿದೆ? ನೋಡೇ, ಸೀಮೆಯೆಣ್ಣೆ ಬುಡ್ಡಿ' ಮುಂತಾಗಿ ಅವಳು, ನನ್ನ









ಕೆ. ನರಸಿಂಹಮೂರ್ತಿ

ಕರೆಂಟು

ತೊಡೆಯ ಮೇಲೆ ಕೈಯೂರಿ, ಪಿಸುಗುಟ್ಟುತ್ತಿದ್ದಾಗ ಅಮ್ಮ ಹೇಳಿದ್ದ ಮಾತು ನೆನಪಾಗುತ್ತಿತ್ತು. 'ಏಯ್ ಸುಮ್ಕಿರೆ' ಎಂದು ಗದರಿಸಿ, ಇಬ್ಬರೂ ನಕ್ಕಾಗ, ನಮ್ಮ ಸುತ್ತ ಇದ್ದವರು 'ಹೆಣ್ಣು ಬಾಳ ಖುಷಿಯಾಗಿದ್ದಾಳೆ' ಅಂತ ಮಾತಾಡ್ಕೊಂಡು ಖುಷಿಪಡ್ತಿದ್ದರು. ಹೇಗೆಂದರೆ ಹಾಗೆ, ನನಗೆ ಬೆನ್ನು ಮಾಡಿ ಕೂತ ಇವರು ಮೀಸೆಯ ಕೂದಲನ್ನು ಕೀಳುತ್ತಿದ್ದರು.

ಕತ್ತಲಾಗುತ್ತಾ ಬಂತು. ಆರು ಗಂಟೆ. ಇವರ ಏರಿಯಾ ಕಡೆಯೆಲ್ಲಾ ಹದಿನೈದು ದಿನ ಬೆಳಿಗ್ಗೆ, ಹದಿನೈದು ದಿನ ಮಧ್ಯಾಹ್ನದ ಕರೆಂಟು, ಹನ್ನೆರಡಕ್ಕೆ ಹೋಗಿದ್ದು ಆರಕ್ಕೆ ಬರತ್ತೆ ಅಂತ ಕಾದಿದ್ದೇ ಕಾದಿದ್ದು. 'ಮುಖ ತೊಳ್ಕೊ ಹೋಗಮ್ಮಾ' ಎಂದು ಯಾರೋ ಹೇಳಿದರೂ 'ಇರ್ಲಿ ಬಿಡ್ರೀ ಪರ್ವಾಗಿಲ್ಲ' ಎಂದ ನನ್ನ ಮಾತಿಗೆ ಸುಮ್ಮನಾದರು. ಒಂದಷ್ಟು ವಿಶ್ರಮಿಸಿಕೊಂಡಿದ್ದ ಮಳೆ ಮತ್ತೆ ಸಣ್ಣದಾಗಿ ಬೀಳಲು ಶುರುವಾಗಿ 'ಟಪ, ಟಪ' ಸದ್ದು ಮಾಡುತ್ತಾ ಬೀಳತೊಡಗಿದಾಗ ಕರೆಂಟು ಬಂತು. ಇದ್ದದ್ದು ಮೂರೇ ರೂಮು. ಇವರು ನಮ್ಮ ಮುಂದೆಯೇ ಶರ್ಟು, ಪ್ಯಾಂಟು ಬಿಚ್ಚಿ ಲುಂಗಿ ಉಟ್ಕೊಂಡು ಮುಖ ತೊಳೆದು ರೆಡಿಯಾದರು. ಯಾರೋ ಹೋಗಿ ಎರಡು ಆಟೋವನ್ನು ಬಾಡಿಗೆಗೆ ತಂದರು. ಕೊಡೆಯಿಲ್ಲದೆ ಮಳೆಯಲ್ಲಿ ನಡೆಯುವಾಗ, ನಮ್ಮ ಮೂಗು, ಮೂತಿ ಕಣ್ಣು, ಕೊನೆಗೆ ಕೂದಲನ್ನೂ ನಾವು ವಿಚಿತ್ರವಾಗಿ ಮಾಡಿಕೊಂಡು ನಡೆಯುತ್ತೇವಲ್ಲಾ, ಹಾಗೆ ನಡೆಯುವಾಗ, ಆಟೋ ಹತ್ತಿ ಕೂರುವಾಗ, ಸುತ್ತ-ಮುತ್ತಲಿನ ಜನ ನನ್ನನ್ನೇ, ಹೌದು, ನನ್ನನ್ನೇ ನೋಡುತ್ತಿದ್ದರು.

ಚೌಡೇಶ್ವರಿ ದೇವಸ್ಥಾನಕ್ಕೆಂದು, ಕೂತ ಆಟೋದಲ್ಲಿ ಇಕ್ಕಟ್ಟೋ ಇಕ್ಕಟ್ಟು. ಮೊದಲೇ ಇವರು, ನಂತರ ನಾನು, ನನ್ನ ಪಕ್ಕ ಪದ್ದು. ಅವಳ ಪಕ್ಕ ಇವರ ಅಕ್ಕ, ಸ್ವಲ್ಪ ಹಿಂದೆ-ಮುಂದೆ ಕೂತಾಗ ಇವರ ಮೊಣಕೈ ನನ್ನ ಹೊಟ್ಟೆಗೆ ತಿವಿಯುತ್ತಿತ್ತು. ಕಾಲುಗಳು ತಾಗಿದ್ದವು. 'ಹೆ ಹ್ಹೆ ಹ್ಹೆ ಈ ರಸ್ತೆಗಳು ಇರೋದೇ ಹೀಗೆ' ಎಂದು ನಗುತ್ತಾ, ಹಳ್ಳ ಬಂದಾಗ ಆಟೋ ವಾಲುತ್ತಾ, ಕುಂಟುತ್ತಾ, ಜಲ್ಲಿಯೂ ಹಾಕಿರದ ರಸ್ತೆಯಲ್ಲಿ ಸ್ಕಿಡ್ಡಾಗುತ್ತಾ ನಡೆದಾಗ, ಇವರು ಬೇಕೆಂತಲೇ ಒತ್ತಿಕೊಂಡು 'ಕಷ್ಟ ಆಗ್ತಾ ಇದೆಯಾ?' ಎಂದು ಕೇಳಿದ್ದರು, ಮೃದುವಾಗಿ. ಎಷ್ಟಾದರೂ ಗಂಡಸರು. ಪದ್ದು ಸುಮ್ನೆ ಕೂತಿದ್ದಳು. ಕತ್ತಲಾಗಿತ್ತಲ್ಲ, ಒಬ್ಬರ ಮುಖ ಒಬ್ಬರಿಗೆ ಕಾಣುತ್ತಿರಲಿಲ್ಲ. ಆಟೋದ ಟಾಪಿನ ಮೇಲೆ ಟಪಟಪ ಸದ್ದು. ಎರಚಲು ಚಳಿ. ಎಲ್ಲಿ ಒಟ್ಟೊಟ್ಟಿಗೇ ಕೂತದ್ದರಿಂದ, ನಾನು ಹಿಂದಕ್ಕೆ ವಾಲಿದ್ದರಿಂದ ಚಳಿಯೂ ಅಗಲಿಲ್ಲ. ಹನಿಯೂ ತಾಗಲಿಲ್ಲ.

ದೇವಸ್ಥಾನಕ್ಕೆ ಬರುವ ಹೊತ್ತಿಗೆ ಮಳೆ ನಿಂತಿತ್ತು. ಚೌಡೇಶ್ವರಿ ಮುಂದೆ ಕೈಮುಗಿದು, ಪುರೋಹಿತರು ಹೇಳಿಕೊಟ್ಟ ಹಾಗೆ, ಇವರ ಬಲಗಡೆಗೆ ನಿಂತು, ಬಲಗೈ ಹಿಡಿದು ಮಂಗಳಾರತಿ ಮಾಡುವಾಗ ನಾಚಿಕೆಯಾಗುತ್ತಿತ್ತು. 'ದಕ್ಷಿಣೆ ಹತ್ತು ರುಪಾಯಿ ಇಡಿ' ಎಂದು ಪುರೋಹಿತರು ನಾಚಿಕೆ ಬಿಟ್ಟು ಕೇಳಿದ್ದು ನೋಡಿ ಇರಿಸು ಮುರಿಸಾಯಿತು.

ಅಲ್ಲಿಂದ ನನ್ನ ಮನೆಗೆ (ಅಂದರೆ ಹೆಣ್ಣಿನ ಮನೆಗೆ) ಪ್ರಯಾಣ. ನಡೆದದ್ದು ಹೆಮ್ಮೆಯಿಂದ. ನನ್ನ ಮನೆಯಲ್ಲಿ ಕರೆಂಟಿದೆ, ಎರಡು ಮಗ್ಗ ಇವೆ. ಫೋನಿದೆ. ಕಬ್ಬಿಣದ ಗೇಟಿದೆ, ಹೀಗೆ. ನಾವೆಲ್ಲಾ ಹಾಗೇ ಅಲ್ಲವಾ? ಕಿಷ್ಕಿಂಧೆಯಂತಿರುವ ಮನೆಗಳಲ್ಲೆ ಸಾಮಾನುಗಳನ್ನು ಪೇರಿಸಿಡುತ್ತಾ, ಓಡಾಡಲೂ, ಕೊನೆಗೆ ಎಲ್ಲಾದರೂ ಹೋಗಿ ಬಂದು ಸುಸ್ತಾದಾಗ, ನಿಡಿದಾಗಿ ಕಾಲು ಚಾಚಿ 'ಉಸ್ಸಪ್ಪಾ' ಎಂದು ಕುಳಿತುಕೊಳ್ಳಲೂ ಜಾಗವಿಲ್ಲದಷ್ಟು ಸಾಮಾನುಗಳನ್ನು ತುಂಬುತ್ತೇವೆ. ಈಗ ನಮ್ಮ ಮನೆಯೇ ನೋಡಿ, ಎರಡು ಮಗ್ಗದ ಸಂದಿಯಲ್ಲಿ ಇಬ್ಬರು ಮಲಗುತ್ತಾರೆ. ಎರಡರ ಮಧ್ಯದ ಜಾಗದಲ್ಲಿ ಅಪ್ಪ, ಅಮ್ಮ. ನಾನು ಅಡಿಗೆ ಮನೆಯಲ್ಲಿ. ಗೊತ್ತಾ? ನಾನು ಕಾಲುಚಾಚಿ ಮಲಗಿದ್ದೇ ಇಲ್ಲ. ಇಂಥದ್ದರಲ್ಲಿ ನನ್ನ ಮದುವೆ ಆಗಿ ಹೋಗಿದೆ.

ಪ್ರಸ್ತದ ಮಾತಾಡುತ್ತಿದ್ದೆ. ಅಪ್ಪನಿಗೆ ಯಾವತ್ತೋ ಈ ಮನೆ, ಮಕ್ಕಳು, ಮದುವೆ, ಸಂಭ್ರಮಗಳ ಕುರಿತು ಜಿಗುಪ್ಸೆ ಬಂದುಬಿಟ್ಟಿದೆ. ಹಾಗೆ ನೋಡಿದರೆ, ಅಪ್ಪನನ್ನೇ ನಂಬಿಕೊಂಡಿದ್ದರೆ, ನನ್ನ ಮದುವೆಯನ್ನು ಅಮ್ಮ, ಮತ್ತೆ, ಎಲ್ಲರಿಗಿಂತ ದೊಡ್ಡವನಾದ ರಮೇಶ ಮಾಡಲಾಗುತ್ತಿತ್ತೆ? ನಮ್ಮಪ್ಪರಾಣೆಗೂ ಇಲ್ಲ. ಮನೆಗೆ ಹೋದಾಗ ರಾತ್ರಿ ಎಂಟೂ ಇಪ್ಪತ್ತು. ದಾರಿಯಲ್ಲಿ ಕಹೋನಾ ಪ್ಯಾರ್‌ಹೈ ಸಿನಿಮಾ ಪೋಸ್ಟರ್ ಕಾಣಿಸಿತ್ತು. ಸೌಂದರ್ಯ ಮಹಲಲ್ಲಿ ಹಾಕಿದ್ದು. 'ಪ್ಚ್' ಅದೊಂದು ಚಿಂತೆ; ಸಿನಿಮಾ ನೋಡಾಕಾಗಲ್ವಲ್ಲ.

ಅಡಿಗೇ ಮನೇಲಿದ್ದ ಗ್ಯಾಸ್ ಸ್ಟವ್, ಸಿಲಿಂಡರು, ಪಾತ್ರೆ-ಪಗಡ ಎಲ್ಲವನ್ನೂ ಮಗ್ಗದ ಸಂದಿಗೆ ತೂರಿಸಿ, ಅಲ್ಲೇ, ಮಲಗಲು ಏರ್ಪಾಟು ಮಾಡಿದ್ದರು. ಕಾಲು ಚಾಚುವಷ್ಟು ಜಾಗ ಇದ್ದದ್ದು ನೋಡಿ ಕುಷಿ. ಆದರೆ ಭಯ. ಯಾರ ಬಳಿ ಹೇಳಿಕೊಳ್ಳಲಿ? 'ಅಮ್ಮ, ನಂಗೆ ಭಯವಾಗುತ್ತೆ' ಎಂದು ಅಮ್ಮನ ಬಳಿ ಹೇಳಬಹುದಷ್ಟೆ. ಆದರೆ, ಅಷ್ಟೇ ಸಾಕೆ? ತಳಮಳ? ಅಮ್ಮ ಕೂಡ, 'ಇವತ್ತು ಅವರು ಏನ್ ಮಾಡುದ್ರೂ, ದೂಸರಾ ಮಾತಾಡ್ಬೇಡ, ಗೊತ್ತಾಯ್ತಾ?' ಎಂದಿದ್ದಳು. 'ಏನು ಮಾಡ್ತಾರೆ ಅವರು?' ಎಂದು ಕೇಳಿದ್ದು ಗಂಟಲಲ್ಲೇ ಉಳಿಯಿತು. ಆಲಿಂಗನ, ಚುಂಬನ, ಸಂಭೋಗ, ಹೀಗೆ ಕೆಲವು ಪದಗಳು ಗೊತ್ತಿದ್ದವಷ್ಟೆ. ಏನು ಮಾಡಲಿ? ತಿಂಗಳ ನೋವು ಮಾಗುವ ಮುಂಚೆಯೇ ಮದುವೆಯಾಯಿತಲ್ಲಾ.


ಅಂತೂ ಇಂತೂ ಒಳಗೆ ಸೇರಿದ್ದಾಯಿತು. ದೀಪ ಅಂಟಿಸಿದ್ದಾಯಿತು. ದೇವರಿಗೆ ನಮಸ್ಕಾರ ಮಾಡಿದ್ದಾಯಿತು. ಇಲ್ಲದ ಬಾಗಿಲಿಗೆ, ವಾಸ್ಕಾಲಿಗೆ ಎರಡು ಮೊಳೆ ಹೊಡೆದು ತೆರೆಬಿಟ್ಟಿದ್ದರು. ಹೇಗೆ!

ಅಪ್ಪ, ಅಮ್ಮ ಮಗ್ಗದ ಮನೆಯಲ್ಲಿ. ರಮೇಶ ಇನ್ನಿತರರು ಪಕ್ಕದ ಮನೆಯಲ್ಲಿ. ಅಪ್ಪ, ಅಮ್ಮನಾದರೂ ಯಾಕಿರಬೇಕಾಗಿತ್ತು?

ಇವರು ಮೊದಲು ಕೈ ಹಿಡಿದಾಗ ನಾನು ಎಳೆದ ಉದ್ಗಾರ ಅವರಿಗೆ ಕೇಳಿಸಿರುತ್ತೆ. 'ಭಯವಾ?' ಎಂದು ಇವರು ನನ್ನ ನುಂಗುವಂತೆ ನೋಡಿದಾಗ, ಸಂಜೆ ಮೀಸೆಯ ಕೂದಲನ್ನು ಕೀಳುತ್ತಿದ್ದಾಗ, ನನ್ನನ್ನು ನುಂಗುವ ಆಲೋಚನೆಯನ್ನೇ ಮಾಡುತ್ತಿದ್ದರೇನೋ ಇವರು! ಊ್ಹು ಎಂದು ಕೊಸರಿಕೊಂಡಷ್ಟೂ ಬಿಗಿ. ಇವರು ಕತೆ ಹೇಳತೊಡಗಿದರು. ಮೊದಲು ಮನೆಯಲ್ಲಿ ಆರು ಮಗ್ಗಗಳಿದ್ದವಂತೆ. ದಿಲ್‌ದಾರ್ ಜೀವನ ನಡೆಸುತ್ತಿದ್ದವರ ಅಣ್ಣ ವೆಂಕಟೇಶನ ಮದುವೆಯಾಗಿ, ಲತ್ತೆ ಹೊಡೆದು, ಒಂದೊಂದಾಗಿ ಎಲ್ಲ ಕಳಕೊಂಡು, ಖಾಲಿಯಾಗತೊಡಗಿ, ಈಗ, ತಾವೇ ಇದ್ದ ಮನೆಯನ್ನು ಕೊಂಡವರ ಬಳಿ ಮಗ್ಗ ಬಿಡುವ ಕೂಲಿ ಕೆಲಸ. 'ನೋಡು, ನಾನೊಬ್ಬನೇ ನಿನ್ನ ನೋಡ್ಕೊಂಡು ಬಂದು ಮದ್ವೆ ಆಗಿರೋದಕ್ಕೆ ನಮ್ಮಕ್ಕಂದಿರಿಗೆ, ಭಾವಂದಿರಿಗೆಲ್ಲ ಕೋಪವಿದೆ. ಆದ್ರೂ, ಪರ್ವಾಗಿಲ್ಲ, ನೀನು ನನ್ನ ಕೈ ಹಿಡಿದಿದ್ದೀಯಾ (ಅವರೇ ಅಲ್ವೇ ಆಗ ನನ್‌ಕೈ ಹಿಡಿದಿದ್ದದ್ದು?!) ಕೊನೇವರೆಗೂ ಜೊತೆಗೇ ಇದ್ದು ಪ್ರೀತಿ ಕೊಡ್ತೀಯಾ? ಸುಖ ಕೊಡ್ತೀಯಾ? ನೆಮ್ಮದಿ ಕೊಡ್ತೀಯಾ? ಎಲ್ಲಿ, ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡು, ಹೇಳು' ಎಂದು ದಿಟ್ಟಿಸಿದಾಗ ಅವರು ನನ್ನನ್ನು ನುಂಗುತ್ತಿರುವಂತೆ ಕಾಣಲಿಲ್ಲ. ಯಾವತ್ತೂ, ಪದ್ದು ಒಬ್ಬಳ ಕಣ್ಣನ್ನು ನೋಡಿದ್ದು ಬಿಟ್ಟರೆ, ಈಗ, ಅದು. ಹಾಗೆ ಯೋಚಿಸುತ್ತಿರುವಾಗಲೇ ಕೈ ಅದುಮಿದ್ದರು. ಬಿಸಿಯಾಗಿತ್ತು, ಹಿತವಾಗಿತ್ತು. ಅಳುಕುತ್ತಾ ಕಣ್ಣು ನೆಟ್ಟೆ. ಮಾರಾಯ, ಕಣ್ ಹೊಡೆಯೋದೆ? 'ಫಟಿಂಗ ನನ್ಮಗ' ಎಂದುಕೊಂಡೆ. ಇನ್ನೂ ಏನೇನು ಕಾದಿದೆಯೋ?

ಅಲ್ಲಾ, ನಾನು ನನ್ನ ಗಂಡನ ಜೊತೆಗೆ ಅವನ ಮನೆಯವರನ್ನೆಲ್ಲಾ ಮದುವೆಯಾಗಬೇಕಾ? ಯಾಕಾಗಬೇಕು? ಎಂದೆಲ್ಲಾ ಪ್ರಶ್ನೆಗಳು ನನ್ನ ಎದೆಯೊಳಗೆ ಮಿಸುಕಾಡುವಾಗ, ನನಗೆ ಇವರು ತಾಳಿ ಕಟ್ಟಿದ ನಂತರದಲ್ಲಿ ಒಬ್ಬ ಮುದುಕ ಬಂದು ಇವರ ಕಿವಿಯಲ್ಲಿ ಏನೋ ಉಸುರಿ ಹೊರಟುಹೋಗಿದ್ದು ನೆನಪಿಗೆ ಬಂತು. ಧೈರ್ಯ ಮಾಡಿ ಅದನ್ನು ಕುರಿತು ಕೇಳಿದೆ. 'ಆ ಮುದುಕ ಏನ್ ಹೇಳ್ದ?' ಇವರು ಹೇಳಿದರು. ಓ ಅದಾ, 'ಇಡೀ ರಾತ್ರಿ ದೀಪಾ ಆರಿಸ್ಬೇಡಿ' ಅಂದ. ಯಾಕೆ? ಎಂದೆ. ನಿನ್ನ ನಾನು, ನನ್ನ ನೀನು ಚೆನ್ನಾಗಿ ನೋಡ್ಬೇಕಲ್ಲಾ, ಅರ್ಥ ಮಾಡ್ಕೋಬೇಕಲ್ವಾ? ಎಲ್ಲೆಲ್ಲಿ ಏನೇನಿದ್ಯೋ ತಿಳ್ಕೋಬೇಕಲ್ಲಾ?... ಹೀಗೆ ಮಾತಾಡತೊಡಗಿದರು, ತಟಕ್ಕನೆ ಒಂದು ಮುತ್ತು ಕೊಟ್ಟರು. ಎಲ್ಲಿಗೆ ಕೊಟ್ಟರೋ ನನಗೆ ಗಾಭರಿಯಾಗಿ 'ಔಚ್' ಎಂದು ನೂಕಿದೆ. ಶುರುವಾಯಿತು ಕದನ. ವಜ್ರಮುನಿಯ ಹಾಗೆ, ಸುಧೀರ್‌ನ ಹಾಗೆ, ಮುಖ್ಯಮಂತ್ರಿ ಚಂದ್ರುವಿನ ಹಾಗೆ, ಎಳೆದಾಡಿದರು. ಯಾವ ಮುಲಾಜೂ ಇಲ್ಲದೆ ಬಟ್ಟೆಯನ್ನು ಬಿಚ್ಚಿದರು. ಕಿತ್ತರು. ಕಚ್ಚಿದರು, ಮುಂದೆ, ನಾನು ಪದಗಳೆಂದು ತಿಳಿದಿದ್ದುದೆಲ್ಲ ಏನೇನೋ ಅಸ್ಪಷ್ಟ ಅನುಭವಗಳಾಗಿ ಎಲ್ಲ ಮುಗಿದ ನಂತರ ನಾನು ನಾಚಿಕೆಯಿಲ್ಲದೆ, ಬಿಗುಮಾನವಿಲ್ಲದೆ, ಅಂಗಾತವಾಗಿ ಮಲಗಿದ್ದೆ. ಇವರೂ ಕೂಡ. ಎಲ್ಲ ನಾಚಿಕೆಯ, ಮುಜುಗರದ, ಸಂಕೋಚದ, ಲಜ್ಜೆಯ... ಹೀಗೆ ಏನೆಲ್ಲಾ ತೆರೆಗಳು ಗಂಡು ಹೆಣ್ಣಿನ ನಡುವೆ ಇರಬಹುದೋ ಅವೆಲ್ಲ ಹರಿದು ನಾವು ಗಂಡ ಹೆಂಡತಿಯರಾಗಿದ್ದೆವು. ತೇಲುಮುಳುಗಾಟ ಹೀಗೆ ರಾತ್ರಿಯಿಡೀ ಬೆಳ್ಳಂಬೆಳಕಿನಲ್ಲಿ ನಡೆಯುತ್ತಿದ್ದಾಗಲೆಲ್ಲಾ, ಇದೇ ಸ್ಥಿತಿಯಲ್ಲಿ ನಾನು ಅಪ್ಪ ಅಮ್ಮನನ್ನು ನೆನಪಿಸಿಕೊಳ್ಳುತ್ತಿದ್ದೆ. ಅಮ್ಮನನ್ನು ಕೂಡ ಅಪ್ಪ ಹೀಗೆಯೇ...

ನಾವು ಎದ್ದದ್ದು ಮಧ್ಯಾಹ್ನವೇ. ಊಟ ಮಾಡಿ, ಆಚೀಚೆ ಓಡಾಡಿ, ನಕ್ಕು, ನೆನಪ ಗಾಳಿಯ ರೋಮಾಂಚನಕ್ಕೆ ಸೋತು, ಸಂಜೆ, ಅದೇ ಇಳಿಬಿಟ್ಟ ತೆರೆಯೊಳಗಡೆ ಜಗಿದಾಟ. ಅದನ್ನೆಲ್ಲ ವಿವರವಾಗಿ ನಿಮಗೆ ಹೇಳುವುದಿಲ್ಲ. ನಮಗೆಂದೇ ಇಟ್ಟಿದ್ದ ಸ್ವೀಟ್ಸುಗಳು, ದ್ರಾಕ್ಷಿ, ಕರ್ಜೂರ ಎಲ್ಲವನ್ನೂ ತಿಂದು ಮುಗಿಸಿದ್ದೆವು. ಎಲ್ಲವನ್ನೂ, ಎಲ್ಲವನ್ನೂ, ನುಂಗಿಬಿಟ್ಟಿದ್ದೆವು. ನಾನು ಇವರನ್ನು, ಇವರು ನನ್ನನ್ನು, ಬಯಲು ಬಯಲಾಗಿ ಬಯಲಾಯಿತಯ್ಯಾ ಎಂಬ



ವಚನವನ್ನು ನನಗೆ ಕಾಲೇಜಿನಲ್ಲಿ ಪಾಠ ಮಾಡಿದ ಮೇಷ್ಟ್ರು ನೆನಪಾದರು. ಥತ್, ಪಸ್ಟ್ ಪಿಯೂಸಿಗೆ ಓಡಿ ಬಂದುಬಿಟ್ಟೆನಲ್ಲಾ ಎನ್ನಿಸಿತು.


ಗೊತ್ತಾ, ಇವರು ಓದಿದ್ದು ನಾಲಕ್ಕನೇ ಕ್ಲಾಸು. ಮೊದಲು ಕಂಡಿಕೆ (ಬಟ್ಟೆ ನೇಯುವಾಗ, ಮಗ್ಗದಲ್ಲಿ ಓಡಾಡುವ ಲಾಳಿಗೆ ಇಡುವ ಎಳೆತುಂಬಿದ ಪೈಪಿನ ರೀತಿಯ ಸಾಮಗ್ರಿ) ಹಾಕೋದನ್ನ ಕಲಿತರಂತೆ. ಆಮೇಲೆ ವೈಂಡಿಂಗು (ಕಂಡಿಕೆಗೆ ಎಳೆ ತುಂಬಲು ಇನ್ನೊಂದು ದೊಡ್ಡ ಗಾಲಿಗೆ ಎಳೆಗಳೇ ತಂಬಿದ 'ಲಡಿ'ಗಳಿಂದ ಎಳೆ ತುಂಬುವ-ಕೆಲಸ ವೈಂಡಿಂಗು.) ಆಮೇಲೆ ಮಗ್ಗ ಬಿಡೋದು. ಈ ಊರಲ್ಲಿ ಎಲ್ಲಾ ಹಾಗೇ ಅಲ್ವಾ. ಜಾರ್‍ತಾ ಇರೋ ನಿಕ್ಕರ್‌ನ ಎಳಕೊಳ್ಳೋಕೆ ಅಷ್ಟು ಬುದ್ಧಿ ಬಂತು ಅಂದ್ರೆ, 'ನಡಿ ಮಗ್ಗದ್ ಮನೇಗೆ' ಅನ್ನೋ ಮಾತು. ನಾನೂ ಮೊದಲು ಬಾಶೆಟ್ಟಳ್ಳಿಗೆ ಕೆಲ್ಸಕ್ಕೆ ಹೋಗ್ತಿದ್ದೆ. ಅಲ್ಲಿಗೆ ನನ್ನಂತೆ ಕೆಲ್ಸಕ್ಕೆ ಬರೋ ಹುಡ್ಗೀರ ಟಿಫಿನ್ ಬಾಕ್ಸು ಇಸ್ಕೊಂಡು, ನನ್ನ ಟಿಫಿನ್ ಬಾಕ್ಸನ್ನ ಕೊಟ್ಟಿಡ್ತಿದ್ದೆ. ಅವರು. 'ಬಾಳಾ ಚೆನ್ನಾಗಿದೆ' ಅಂತ ತಿಂದಾಗ ನನಗೆ ಕಸಿವಿಸಿ. ನಾವೆಲ್ಲಾ ಹಾಗೇ ಅಲ್ವಾ? ನಮ್ಮನೆ ತಿಂಡಿ ನಮಗೆ ರುಚಿಸೋದೆ ಇಲ್ಲ. ಬೇರೆಯವರ ಮನೇದು ಅಂದ್ರೆ 'ಆಹಾ' ಅಂತೀವಿ. ಅಮ್ಮ, ಇದನ್ನೇ 'ನಿಮ್ಗೆ ಕಂಡೋರ್ ಮನೆ ಕಷಾಯಾನೇ ಇಷ್ಟ' ಅಂತ ಹೇಳ್ತಿರ್‍ತಾಳೆ. ಇರಲಿ, ಅವರಿಂದ ನಾನು ಬೇರೆ ಬೇರೆ ರೀತಿ ತಿಂಡಿ ಮಾಡೋದನ್ನು ಕಲಿತುಕೊಂಡೆ. ಗೋಬಿಮಂಚೂರಿ, ಚಿಕನ್ ಪಲಾವ್. ಹೀಗೇ ಇದ್ದಾಗ, ಇದ್ದಕ್ಕಿದ್ದಂತೆ ಅಮ್ಮ 'ಬಾಶೆಟ್ಟಳ್ಳಿಗೆ ಹೋಗ್ಬೇಡ, ಮನೆಲೇ ಮಗ್ಗ ಬಿಡು' ಎಂದಳು. ಅಲ್ಲಿಗೆ ಬಾಶೆಟ್ಟಳ್ಳಿ ಇಂಡಸ್ಟ್ರಿಯಲ್ ಏರಿಯಾ ಸಾವಾಸ ಮುಗೀತು. ಮೂರು ದಿನದ ನಂತರ ಇವರ ಮನೆಗೆ ಬಂದೆವು. ನೋಡಿ, ಅಲ್ಲಿಂದ ಶುರುವಾಯಿತು ಸಂಸಾರ. ಅಪ್ಪ ಯಾವಾಗಲೂ ಅಮ್ಮನ ಬಳಿ ಜಗಳವಾಡಿ 'ಥೂ ಇವರಮ್ಮನ್, ಅದ್ಯಾವನ್ ಮಾಡಿದ್ನೋ ಈ ಸಂಸಾರಾನ?' ಎಂದು ಕೂಗಾಡ್ತಿದ್ದುದನ್ನು ನೆನಪಿಸಿಕೊಂಡೆ. ಯಾಕೆಂದು ಗೊತ್ತಾಗಲಿಲ್ಲ. ಆ ನನ್ನ ಮನೆಯಲ್ಲಿ ಸದಾ ಮಗ್ಗಗಳ ಲಟಾಪಟಾ ಸದ್ದು. ಬೆಳ್ಳಂಬೆಳಕು. ಇಲ್ಲಿ ಸದಾ ಕವಿದ ಮೌನದ ಜೊತೆ ನಿಂತ ಜನ್ಮಾಂತರದ ಗೆಳೆಯನಂತೆ ಕತ್ತಲು. ನಾನು ಇವರ ಬಾಳಿಗೆ ಬೆಳಕಾಗಿ ಬಂದೆನಂತೆ. ಈಗಲೂ ಅದನ್ನು ಹೇಳುತ್ತಾರೆ. ಆದರೆ ಗೊತ್ತೆ? ನನ್ನೊಳಗಿನ ಕತ್ತಲನ್ನು ತಡಕಾಡುವ ಇವರ ಬೆರಳು, ಮೈ, ಮನಸ್ಸು, ನನ್ನಲ್ಲಿ ಬೆಳಕಾಗುವ ಮನ್ನವೇ ಎಚ್ಚರ ತಪ್ಪುತ್ತವೆ. ಇಲ್ಲವೆ, ಆಸಕ್ತಿ-ಆವೇಶವನ್ನು ಕಳೆದುಕೊಂಡುಬಿಡುತ್ತವೆ. ಒನಕೆ ಬಂಡಿ ಹುಳದ ಹಾಗಾಗಿ ಬಿಡುತ್ತವೆ. ನನಗೆ ನಿದ್ರೆಯೇ ಬರುವುದಿಲ್ಲ. ಹಲವು ರಾತ್ರಿಗಳಲ್ಲಿ ಅಮ್ಮ ನೋವಿನಿಂದ 'ಬೇಡ, ಬೇಡ, ಸಾಕು ಸಾಕು' ಎಂದು ಮೆತ್ತಗೆ ಹೇಳುತ್ತಿದ್ದುದರ ಹಿಂದೆ ಅಪ್ಪನ ಬಿರುಸು ಇದ್ದಿತೆಂದು ಈಗ ಗೊತ್ತಾಗುತ್ತಿದೆ.

ಪ್ರಕೃತಿ ವಾಸ್ತು ನಿಧಿ ಪ್ರತಿಷ್ಠಾನ (ರಿ)

ನಂ. 1340, 26ನೇ ಮುಖ್ಯ ರಸ್ತೆ, 32ನೇ 'ಇ' ಕ್ರಾಸ್, 4ನೇ 'ಟಿ' ಬ್ಲಾಕ್,
ಜಯನಗರ, ಬೆಂಗಳೂರು-560 041 ದೂರವಾಣಿ : 6642217, 6633669


ವಾಸ್ತು ಜಾಗೃತಿ






ಶ್ರೀ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷರಾದ ತ್ರಿವಿಧ ದಾಸೋಹಿ. ಪರಮ ಪೂಜ್ಯ
ಡಾ. ಶ್ರೀಶ್ರೀ ಶಿವಕುಮಾರ ಮಹಾಸ್ವಾಮಿಗಳವರು

ಭೂಮಿ ನೀರು ಆಕಾಶ ವಾಯು ಸೂರ್ಯದೇವ
ಕಾಮಿತಾರ್ಥವನೀಯುವ ಪಂಚಭೂತಗಳೇ ದೈವ।
ಅಷ್ಟದಿಕ್ಪಾಲಕರುಗಳ ಗುಣನಡತೆ ಸ್ವಭಾವ
ಇಷ್ಟಾರ್ಥಗಳ ಸಲಿಸಿ ನಡೆವುದೇ ವಾಸ್ತುಪ್ರಭಾವ।। ಕೆ. ಈಶ್ವರ್ ಪ್ರಸಾದ್



ಶ್ರೀ ಯಯಮಾನ್ ಶ್ರೀಕಂಠಪ್ಪ
ಕೋಶಾಧ್ಯಕ್ಷರು.
ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾ ಸಂಸ್ಥೆ

ಹತ್ತು ಬಾವಿಗಳಿಗೆ ಒಂದು ಕೆರೆ ಸಮ
ಹತ್ತು ಕೆರೆಗಳಿಗೆ ಒಂದು ಜಲಾಶಯ ಸಮ
ಹತ್ತು ಜಲಾಶಯಗಳಿಗೆ ಒಬ್ಬ ಪುತ್ರ ಸಮ
ಹತ್ತು ಪುತ್ರರಿಗೆ ಒಂದು ವೃಕ್ಷಸಮ
-ಶಾರ್ಙ್ಗಧರ



ಶ್ರೀ ಎಸ್. ಎಸ್. [illegible]
[illegible]
ಪ್ರಕೃತಿ ವಾಸ್ತು [illegible] (ರಿ)

ಸಲಿಗೆಯಿಂದ ಇವರನ್ನ 'ಏಯ್' ಎನ್ನುತ್ತಿದ್ದೆ. 'ಹೋಗು' ಎನ್ನುತ್ತಿದ್ದೆ. 'ಬಾ' ಎನ್ನುತ್ತಿದ್ದೆ. 'ನೋಡಿಲ್ಲಿ' ಎನ್ನುತ್ತಿದ್ದೆ. ಹೀಗೆ ಏಕವಚನವೆಂಬುದು ನಮ್ಮಿಬ್ಬರ ನಡುವಿನ ಸಲಿಗೆಯನ್ನು, ಆತ್ಮೀಯತೆಯನ್ನು ಜಾಸ್ತಿ ಮಾಡುವ ಹಾಗೆ; ಗಂಡ-ಹೆಂಡತಿಯರು ಗೆಳೆಯ-ಗೆಳತಿಯರಂತೆ ಇರುತ್ತಿದ್ದೆವು. ಒಂದೊಮ್ಮೆ ಇದು ಅಮ್ಮನಿಗೆ-ಎಲ್ಲ ಸೊಸೇದೀರು ತಮ್ಮ ಅತ್ತೆಯರನ್ನು ಅಮ್ಮ ಎಂದು ಕರೆಯುತ್ತಾರಲ್ಲ. ಆದರೆ ಎಷ್ಟು ಜನ ಅತ್ತೇದೀರು ಸೊಸೇದೀರಿಗೆ 'ಅಮ್ಮ' ಆಗುತ್ತಾರೆ ಹೇಳಿ?-ಇದು ಗೊತ್ತಾಗಿ, ಮನೆಯ ಹತ್ತಿರವೇ ಇರುವ ಇವರ ಅಕ್ಕನಿಗೆ ದೂರು ಕೊಟ್ಟರಂತೆ. ಹತ್ತು ಸಾವಿರ ವರದಕ್ಷಿಣೆ, ಒಂದು ಮಗ್ಗ, ಮನೆಗೆ ಕರೆಂಟು ಇಷ್ಟೆಲ್ಲಾ ತರುವ ಹುಡುಗಿಯ ಕಲ್ಪನೆಯಲ್ಲಿದ್ದವರಿಗೆ, ನಾನು ಸಿಕ್ಕಿಬಿಟ್ಟಿದ್ದೆ. ಏನು ತಂದಿದ್ದೆ ನಾನು ?

ಈ ಪ್ರಶ್ನೆಯನ್ನು ನನಗಿಂತ ಇವರ ಮನೆಯವರೇ ಹೆಚ್ಚಿಗೆ ಹಾಕಿಕೊಂಡಿದ್ದರು. ಇವರನ್ನ ತಮ್ಮ ಮನೆಗೆ ಕರೆಸಿಕೊಂಡು ಏನೋ, ನಿನ್ನೆಂಡ್ತಿ ನಿನ್ನನ್ನ ಹೋಗು, ಬಾ ಅಂತೆಲ್ಲ ಅಂತಾಳಂತೆ? ಸ್ವಲ್ಪ ಹದ್ದುಬಸ್ತಿನಲ್ಲಿ ಇಟ್ಕೊಳಾಕಾಗಲ್ವ?... ಮುಂತಾಗಿ ಗದರಿ ಕಳಿಸಿದರಂತೆ. ಕಾಲು ಮುರಿದು ಹೋದ ಗಂಡನನ್ನ 'ನಿನ್ನ ನಿಕ್ಕರ್ ಉದುರಿಸಿಬಿಡ್ತೀನಿ ನೋಡು, ಬಿಕನಾಸಿ ನನ್ಮಗನೆ' ಮುಂತಾಗಿ ಬೈಯುವ ಇವರ ಅಕ್ಕನ ಮಾತಿಗೆ ತಲೆದೂಗಿ ಬಂದವರನ್ನ ಕಂಡು ಹೇಸಿಗೆಯಾಯಿತು. ಇವರು ಹೇಡಿಯೆನಿಸಿತು.

'ಇನ್ನು ಮುಂದೆ ನೀನು ನನ್ನನ್ನ ಹೋಗು, ಬಾ ಅಂತ ಕರೀಬೇಡ' ಎಂದಾಗ ನಾನು 'ಆಯ್ತುರೀ' ಎಂದೆ. ಅದರೊಳಗಿದ್ದ ವ್ಯಂಗ್ಯವನ್ನು, ಚುಚ್ಚುವಿಕೆಯನ್ನು ಗಮನಿಸಿದವರು ಸುಮ್ಮನಾದರು. ಈ ಮನೆಯ ಕತ್ತಲು ನಮ್ಮಿಬ್ಬರನ್ನೂ ನುಂಗುತ್ತಿತ್ತು.

ಒಂದು ದಿನ, ಇವರು ಮದುವೆಗೆಂದು ತಂದಿದ್ದ ಹೊಸ ಜೀನ್ಸ್‌ಪ್ಯಾಂಟು ಶರ್ಟು ಹಾಕ್ಕೊಂಡು, ಇವರ ಹೊಟ್ಟೆ ಮೇಲೆ ತಲೆಯಿಟ್ಟು ಮಲಗಿದ್ದೆ. ಯಾರೂ ಇರಲಿಲ್ಲ. ನಾವಿಬ್ಬರೇ. ಯಾರೋ ಬಂದರು. ಬಾಗಿಲು ತಟ್ಟಿದ್ದರು. 'ಅಜ್ಜೀ, ಇದೀಯಾ ಒಳಗೆ' ಎಂದು ಕೂಗಿದರು. ನಾನು ಇವರ ಕಡೆಯಿಂದ ಜಿಗಿದೆದ್ದು ಬಂದು ಬಾಗಿಲು ತೆಗೆದೆ. ಯಾರೆಂದು ತಿಳಿಯಲಿಲ್ಲ. 'ನಮತ್ತೆ ಇಲ್ಲ' ಎಂದೆ. ಮೇಲಿಂದ ಕೆಳಗಿನವರೆಗೆ ನೋಡಿದರು. 'ಊ' ಎಂದು ರಾಗ ಎಳೆದು ಹೊರಟುಹೋದರು. ಅದಾದ ಸಂಜೆಗೇ, ನಾನು ಹೆಂಚಿನ ಮೇಲೆ 'ಚೊಯ್' ಎಂದು ದೋಸೆ ಹುಯ್ಯುತ್ತಿದ್ದಾಗ, ಎಲ್ಲಿಂದಲೋ ಬಂದರಲ್ಲ, ಇವರ ಅಕ್ಕಂದಿರು. ಬಂದವರೇ ಸ್ವಲ್ಪವೂ ಎಗ್ಗು ತಗ್ಗಿಲ್ಲದೆ 'ಏನೋ, ನಿನ್ ಹೆಂಡ್ತಿ ಪ್ಯಾಂಟು ಶರ್ಟು ಹಾಕ್ತಾಳಂತಲ್ಲೋ ನಿನಗಾದ್ರೂ ಬುದ್ಧಿ ಬ್ಯಾಡ್ವೇನೋ. ನೀನು ನಿನ್ನೆಂಡ್ತಿ ಸೇರ್ಕೊಂಡು ಇಂಗೆಲ್ಲ ಆಡೋ ಅಂಗಿದ್ರೆ ಮನೆ ಬಿಟ್ಟೋಗು' ಎಂದು ವರಾತ ಶುರು ಮಾಡಿದರು. ನನಗೆ ಹೆಂಚಿನ ಬಿಸಿಯಷ್ಟು ಕಾವು ಮೈಯಲ್ಲೇರುತ್ತಿತ್ತು ಎನಿಸಿ ಅಡುಗೆ ಮನೆಯಿಂದ ಬಗ್ಗಿದೆ. ಇವರು ಜೇರಿನಲ್ಲಿ ಕುಳಿತು ಬಿಕ್ಕುತ್ತಿದ್ದರು. ಇಬ್ಬರೂ ಅಕ್ಕಂದಿರು ತಲೆ ಮೇಲೆ ಲೋಕ ಬಿದ್ದವರಂತೆ ಮುಖ ಮಾಡಿ ನಿಂತಿದ್ದರು.

ಮತ್ತೊಮ್ಮೆ ಹೇಸಿಗೆಯೆನಿಸಿತು. ಇವರು ಹೇಡಿಯೆನಿಸಿತು.


ಈ ಮನೆಗೆ ಬಂದ ಐದನೇ ದಿನ, ನಾನಿವರ ಐದು ದಿನದ ಹೆಂಡ್ತಿಯಾಗಿ, ಇವರ ಕಣ್ಣಿಂದ ದುಃಖದ ನೀರು ತರಿಸಿದ್ದೆ. ರಾತ್ರಿ ನಾನೇ ತಬ್ಬಿಕೊಂಡು ಹೇಳಿದೆ 'ಇದೇನ್ರೀ, ನಾನು ನಿಮ್ಮನ್ನಲ್ಲ ಮದುವೆಯಾದದ್ದು. ನಿಮ್ಮ ಅಕ್ಕಂದಿರನ್ನೆಲ್ಲ ಮದುವೆಯಾದ್ನ? ಎಂತ ಖಾಸಗಿ ವಿಷಯಾನೆಲ್ಲ ಬಿಚ್ಚಿಟ್ಟರಲ್ಲ? ನಿಮ್ಮನ್ನೂ ಕೂಡ, ಏನೇನೋ ಮಾತಾಡಿ, ವರಾತ ತೆಗೀತಿರ್ತಾರೆ?' ಎಂದೆ. ಇವರ ಮೀಸೆ ಮೇಲೆ ಈಗ ಕೈಯಾಡಿಸುತ್ತಿದ್ದೆ. ಈಗವರು ನನ್ನ ಕಡೆ ತಿರುಗಿಕೊಂಡು 'ಅಡ್ಜಸ್ಟ್ ಮಾಡ್ಕೋ ಚಿನ್ನಿ' ಎಂದರು. ನನ್ನ ಕತ್ತಿನ ಕೆಳಗೆ ಮುಖವಿಟ್ಟು ಮೌನವಾದರು.

ಇಲ್ಲ, ಇವರೂ ಕೂಡ, ಇವರಿಂದಲೂ ಕೂಡ ಏನೂ ಮಾಡಕ್ಕಾಗಲ್ಲ ಅಂತ ತೀವ್ರವಾಗಿ ಅನಿಸಿತು ನನಗೆ. ನಮ್ಮ ನಡುವಿನ ಮತ್ತು ನಮ್ಮನ್ನು ಆವರಿಸಿದ್ದ ಕತ್ತಲೂ ಕೂಡ 'ಸ್ವಲ್ಪ ಅಡ್ಜಸ್ಟ್ ಮಾಡ್ಕೋ, ಸ್ವಲ್ಪ ಅಡ್ಜಸ್ಟ್ ಮಾಡ್ಕೋ' ಎಂದು ಹೇಳತೊಡಗಿದಂತೆ ಭಾಸವಾಯಿತು. ಇವರನ್ನು ಬಿಗಿಯಾಗಿ ತಬ್ಬಿಕೊಂಡು ಕಣ್ಮುಚ್ಚಿದೆ. ಒಳಗೊಂದು ಬೆಳಕು ಗೋಚರಿಸಿತು. ಆ ಬೆಳಕಿನಲ್ಲಿ, ಸದಾ ಮುಖದ ತುಂಬ ನಗುವ ನನ್ನ ಅಮ್ಮನ ಚಿತ್ರವಿತ್ತು.

ತಾಯಿಯಂತೆ ಮಗಳು, ನೂಲಿನಂತೆ ಸೀರೆಯಂತೆ. ಅಮ್ಮ ಏನೇನನ್ನ ತನ್ನ ನಗು ಮುಖದಲ್ಲಿ ನುಂಗಿಕೊಂಡಳೋ ಹಾಗೇ, ಅವಳ ಮಗಳಾಗಿ ನಾನು ನುಂಗಿಕೊಂಡೆ ಎಂದು ಭಾವಿಸುತ್ತಿದ್ದೀರಾ? ಅಮ್ಮ ಇದ್ದದ್ದು ನಾಲ್ಕಡಿ ಉದ್ದ. ನಾನು ಅಪ್ಪನ ಹಾಗೆ, ಐದೂ ಮುಕ್ಕಾಲು. ಅಲ್ಲೇ ಅಷ್ಟೊಂದು ವ್ಯತ್ಯಾಸ.

ಅದಕ್ಕೇ 'ಜುಳ ಜುಳ ಜುಳ ಮಂಜುಳ' ಅಂತಲೇ ಅಮ್ಮ ವಿಪರೀತ ಖುಷಿಯಿಂದ ಕರೀತಿದ್ದದ್ದು. ಅಮ್ಮನುದ್ದ ನನ್ನ ಬಾಯಿ! ಹೋಗಮ್ಮೋಮೋ ಎಂದು ಕಿರುಚುತ್ತಿದ್ದೆ.

ಈಗ? ಮನೆ ಹತ್ತಿರದ ಸೀನೀರಿನ ಟ್ಯಾಂಕಿಯಿಂದ ನಾಲಕ್ ಬಿಂದಿಗೆ ನೀರು ತರೋಷ್ಟೊತ್ತಿಗೆ ಸುಸ್ತಾಗುತ್ತಿದ್ದ ಅಪ್ಪ, ಕೈಲಾಗದಿದ್ದರೂ ಮೈ ಪರಚಿಕೊಳ್ಳೋರು. ಇವರು ಹಾಗಲ್ಲ. ಕೈಲಾದಷ್ಟೂ ಮೈ ಬಗ್ಗಿಸಿ, ಕೆಲಸ ಮಾಡಿ, ಒಳ್ಳೆ ನರ್ಸಿಮ್ಮಾಜು



ಥರ ಆಗಿದ್ರು. ಈಗ ಒಂದ್ವಿಷಯ ಹೇಳಬೇಕು ನಿಮಗೆ. ಅದೇ ನಮ್ಮೆಜಮಾನರ ತಾಳ್ಮೆ ಕುರಿತು. ಮೊದಲು ರಾತ್ರಿ ಹತ್ತಾದರೂ ಮನೆಗೆ ಬರುತ್ತಿರಲಿಲ್ಲವಂತೆ. ಮನೆ ಹತ್ತಿರದ ಅಂಗಡಿಯಿಂದ ನಾಲ್ಕಾಣೆ ಕೊತ್ತಂಬರಿ ಸೊಪ್ಪೂ ಕೂಡ ತರ್ತಿರಲಿಲ್ಲವಂತೆ. ಇಲ್ಲೀವರೆಗೂ, ಒಬ್ಬಳೇ ಮುದುಕಿ, ತನ್ನ ಗಂಡನಿಗೆ ಕೊನೇ ಕ್ಷಣದಲ್ಲಿ ಡಾಕ್ಟರು ಬರೆದುಕೊಟ್ಟ ಟಾನಿಕ್ಕಿನ ಬಾಟಲನ್ನೇ, ಬುಡ್ಡಿಯಾಗಿ ಮಾಡಿಕೊಂಡು ಕಾದು ಕಾದು ನಿದ್ದೆ ಹೋಗುತ್ತಿದ್ದಳಂತೆ. ವಾರಕ್ಕೆ ಎರಡೇ ದಿನ ಸಾರು ಮಾಡುತ್ತಿದ್ದುದಂತೆ! ಅದನ್ನೇ ಕುದಿಸಿ ಕುದಿಸಿ. ಗವ್ವೆನ್ನುವ ಕತ್ತಲು ಮತ್ತು ಮುದುಕಿ ಇದ್ದ ಜಾಗದಲ್ಲಿ ನಾವಿದ್ದೇವೆ ಈಗ. ಈಗ ನೀರು ಹಿಡಿಯುವುದು, ತರಕಾರಿ, ರೇಷನ್ ತರುವುದು, ನನ್ನ ನೋವಿನ ದಿನಗಳಲ್ಲಿ ಅಡುಗೆ ಭಟ್ಟನಾಗುವುದು... ಎಲ್ಲ ಮುಂದುವರೆದು, ಈಗ, ನಾನು ಕೇಳಿದ್ದನ್ನು 'ಇಲ್ಲ' ಎನ್ನಲಾಗದೆ 'ಬಡ್ಡಿಮಗ'ನಾಗಿರುವುದು, ಶಿಸ್ತಿನ ಸಿಪಾಯಿಯಾಗಿರುವುದು-ಈ ಎಲ್ಲದರ ಹಿಂದೆ ನಾನೇ ಕಲಿಸಿದ ಅಥವಾ ನನ್ನನ್ನ ಕಟ್ಟಿಕೊಂಡ ಮೇಲೆ ಅವರೇ ಕಲಿತುಕೊಂಡ ತಾಳ್ಮೆ ಇದೆ. ಈಗ ಕಷ್ಟಕ್ಕೆ ಬಂದಿರೋದು ಅವರ ತಾಳ್ಮೆಯಿಂದಲೇ. ಇರೋ ಅಕ್ಕಂದಿರೆಲ್ಲ ಬೈಯ್ತಾ ಇದ್ರೆ ಭೂಮಿ ಹಂಗೆ ಸುಮ್ನೆ ಕೂತಿರೋದು. ನನಗೋ ಒಳಗೇ ಕುದೀತಿರುತ್ತೆ. ಎಂಥದೋ ಕೆಂಡ, ಅದರೊಳಗೊಂದು ಹಾವು ಭುಸುಗುಟ್ಟುತ್ತಿರುತ್ತದೆ. 'ಬಂದ ತಕ್ಷಣವೇ ಗಂಡನ್ನ ಬುಟ್ಟಿಗೆ ಹಾಕ್ಕೊಂಬುಟ್ಲು' ಎಂಬ ಅಪವಾದ ಎಲ್ಲ ಹೊಸದಾಗಿ ಮದುವೆಯಾದ ನನ್ನಂಥ ಕನಸುಗಣ್ಣಿನ ಹುಡುಗೀರಿಗೆ ಸಹಜ.

ನೀವು 'ಹೌದು, ಸಹಜ' ಎನ್ನುತ್ತೀರಿ. ನನಗೆ ಗೊತ್ತು. ನೀವೇ ಹೇಳಿ. ಐದು ನಿಮಿಷ ನಿಮ್ಮನೇಲಿ ಕರೆಂಟಿಲ್ಲದಿದ್ದರೆ ನೀವು, ನಿಮ್ಮ ಚಡಪಡಿಕೆ ಮುಗಿಲುದ್ದ, ನೆಲದುದ್ದ ಹರಿದು ಬಿಡುತ್ತದೆಯಲ್ಲವೆ? ನನ್ನ ಮನೆಯ ಕತ್ತಲು, ನಾನೊಬ್ಬಳೇ ಇರುವಾಗ ತರುವ ಭಯಾನಕ ಕನಸುಗಳನ್ನು, ನಮ್ಮ ಮನೆಹತ್ತಿರ ನೇಣುಹಾಕ್ಕೊಂಡು ಸತ್ತ ರಾಮಕ್ಕಳ ಮುಖವನ್ನು, ಬೆಂಕಿ ಹಚ್ಚಿಕೊಂಡು ಸತ್ತ ಸುಬ್ಬರಾಯಪ್ಪನನ್ನು, ನನ್ನ ಜೊತೆಗೇ ನಗುತ್ತಾ, ಕೆಲಸ ಮಾಡಿಕೊಂಡು, ಆಗಾಗ ಹೆಗಲ ಮೇಲೆ ತಲೆಯಿಟ್ಟು ಕಣ್ಮುಚ್ಚುತ್ತಿದ್ದ ಶಶಿಕಲಾ ಆಕ್ಸಿಡೆಂಟ್ ಆಗಿ ಸತ್ತು ಹೋಗಿದ್ದನ್ನು ಮುಂದೊಡ್ಡಿದರೆ ಆ ಮೌನದಲ್ಲಿ ಏನು ಮಾಡಬೇಕು? ಅಥವಾ ಅನೇಕ ಬಾರಿ 'ಕಳ್ಳನೇನಾದರೂ ಸೇರಿಕೊಂಡಿದ್ದರೆ?!' ಎಂಬ ಅನುಮಾನ ಬಂದಾಗ ಎದ್ದು ಓಡಿಬಿಡಲೆ ಎನಿಸಿದರೂ ಆಗುವುದಿಲ್ಲ. ಬಾಗಿಲು ತೆರೆದರೆ ಅಷ್ಟೆ. ಆಚೆ ಇರುವ ಇನ್ನೂ ಅನೇಕ ಕತ್ತಲ ದೆವ್ವಗಳು ಅವಸರಿಸಿ ಒಳಗೆ ಬಂದುಬಿಡುತ್ತವೆ. ನಾನು ಈಚೆಯೂ ಇರದೆ, ಆಚೆಯೂ ಇರದೆ, ಸಹಾಯಕ್ಕೆ ಕೂಗಬೇಕೆಂದುಕೊಂಡಾಗಲೆಲ್ಲಾ ನನ್ನ ನಾಲಿಗೆ ಬಿದ್ದುಹೋಗುತ್ತಿತ್ತು. ಇದನ್ನೆಲ್ಲಾ ಮೃದುವಾಗಿ, ಮನೋಹರವಾಗಿ (!) ವಿವರಿಸಿ 'ಕರೆಂಟ್ ಹಾಕುಸ್ರೀ' ಎಂದೆ. ಅದೆಲ್ಲಿತ್ತೋ ಗ್ಯಾನ 'ಊ್ಞ' ಅಂದ್ರು.

ಆ ಪ್ರಸ್ತಾಪ ಮಾಡಿದ್ದೇ ಬಂತು. 'ಕರೆಂಟಿಗೇನಿತ್ತು ಈಗ ಅವಸ್ರ. ಎಲ್ಲಾ ಖರ್ಚು ಮಾಡ್ಸೋರೇ ಆಗೋದ್ರು' ಎಂದು ಇವರ ಒಬ್ಬಕ್ಕ ಹೇಳಿದರೆ, 'ಜೇಬಲ್ಲಿ ದುಡ್ಡು ಕುಣೀತಾ ಅವೇನೋ? ಮೊದ್ಲು ಒಂದು ಅಕೌಂಟು ಓಪನ್ ಮಾಡಿ ಸ್ವಲ್ಪ ದುಡ್ಡು ಕೂಡ್ಸು' ಎಂದು ಇನ್ನೊಬ್ಬ ಅಕ್ಕ. ಈ ವರಾತ ಎಲ್ಲ ಮುಗಿದು, ಹೋಗ್ತಾ ಹೋಗ್ತಾ 'ಈ ಮನೆಗೆ ಕರೆಂಟ್ ಬೇರೆ ಕೇಡು' ಎಂದುಕೊಂಡಿದ್ದು ನನ್ನ ಕಿವಿಗೆ ಕೇಳಿಸಿ ಕಣ್ಣುಗಳು ಕೋಪ ಮಾಡಿಕೊಂಡವು. ಹೃದಯ ಭಾರವಾಯಿತು. ಹೊಸಬಳು, ಗಂಡನ್ನ ಬುಟ್ಟಿಗೆ ಹಾಕ್ಕೊಂಡೋಳು, ಏನೂ ಮಾಡದೆ ಕಾಲ ಹೆಬ್ಬೆರಳಲ್ಲಿ ರಂಗೋಲಿ ಬಿಡಿಸುತ್ತ ನಿಂತಿದ್ದೆ. ಎಲ್ಲ ಹೊರಟು ಹೋದರೂ ರಂಗೋಲಿ ಬಿಡಿಸಿದ್ದಾಗಿರಲಿಲ್ಲ.

ಗಂಡ ಹೆಂಡಿರ ನಡುವೆ ಈ ಪ್ರೀತಿ, ಹರಿಶಿನ ಕುಂಕುಮ, ತಾಳಿ, ಪ್ರೊಟೆಕ್ಷನ್ನು, ಮೈಮೋಹ, ಖುಷಿಯ ಹಂಚಿಕೆ... ಹೀಗೆ ಏನೆಲ್ಲಾ ಇತ್ತು. ಆದರೆ ಕರೆಂಟಿರಲಿಲ್ಲ. ಅದೊಂದು ಬಂದುಬಿಟ್ಟರೆ ಇನ್ನೂ ಅನುಕೂಲವಾಗುತ್ತೆ ಎಂದು ತೀವ್ರವಾಗಿ ಅನಿಸತೊಡಗಿ, ಕೊನೆ ಮೊದಲಿಲ್ಲದ ವೈರುಗಳು ತಮ್ಮ ಅಂತರಂಗದೊಳಗೆ ಇಟ್ಟುಕೊಂಡ ಮಿಂಚಿನ ಹಾಗೆ ಅಂಕುಡೊಂಕಾಗಿ, ಕೊನೆಯೇ ಇರದಂತೆ ರಂಗೋಲಿ ತುಂಬ ಹರಡಿಕೊಂಡಿದ್ದವು. ಈ ಮನೆಗೆ ಬಂದ ನಂತರ, ಮೊದಲ ಸುಖದ ನೋವಲ್ಲಿ ಅತ್ತಿದ್ದು ಬಿಟ್ಟರೆ, ನಿಜಕ್ಕೂ ಮನಸ್ಸಿಗೆ ನೋವಾಗಿ ಇವತ್ತು ಕಣ್ಣಿಂದ ಮೊದಲ ದುಃಖದ ಹನಿ ಆ ರಂಗೋಲಿ ನಡುವೆ ಬಿದ್ದು, ಅಷ್ಟಗಲ ನೆಲವನ್ನು ತೇವ ಮಾಡಿ ಮಾಯವಾಯಿತು.



ಕುತೂಹಲದ ದಂಡೆಯಿಂದ ನಾನು ಜಗಿದ ದೋಣಿ ಇನ್ನೊಂದು ತೀರ ಸೇರಿತು. ಅಲ್ಲಿ ಪರಿಚಿತವಾದ ಕಷ್ಟಗಳಿದ್ದವು. ಅಪರಿಚಿತವಾದ, ಸ್ಪಷ್ಟವಾಗದ ನೋವುಗಳಿದ್ದವು. 'ಏsss ಜಗತ್ತಲ್ಲಿ ಎಷ್ಟೋ ಜನ ಮನೇನೇ ಇಲ್ದೆ ಇರೋವಾಗ, ನೀನೇನು ಕರೆಂಟು ಕರೆಂಟು ಅಂತೀಯಲ್ಲ?' ಎನ್ನಬಹುದು ನೀವು. ಡೆಕ್ಕಿನಲ್ಲಿ ಹಾಕಿದ ಹಾಡು ಸ್ಪಷ್ಟವಾಗಿ ಕೇಳಿಸದಿದ್ದರೂ, ಅದನ್ನೇ ಗುನುಗಿ, ಲಟಾಪಟಾ ಸದ್ದೊಳಗೆ ಬಟ್ಟೆ ನೇಯುವಾಗ ಈ 'ಬೆಳಕಿನ' ಬಗ್ಗೆ ಏನೇನೂ ಯೋಚಿಸಿರಲಿಲ್ಲ. ಆಗ ಆಚೆಯೂ ಬೆಳಕು, ಈಚೆಯೂ ಬೆಳಕು. ಇಲ್ಲಿ ಎಲ್ಲಾ ಉಲ್ಟಾ. ಕುತೂಹಲ ಭಯವಾಗಿ, ಬೇಸರವಾಗಿ, ಅದೂ 'ಸತ್ತುಹೋಗ್ಬುಡ್ಬೇಕು' ಎನ್ನುವಷ್ಟು ಬೇಸರ ವಾಗಿ... ಅದನ್ನೆಲ್ಲ ಹೇಳಿದ್ರೆ ಗೊತ್ತಾಗಲ್ಲ. ಖುದ್ದಾಗಿ ಅನುಭವಿಸಬೇಕು.

ಇಲ್ಲ, ಇವರ ಕೈಲಿ ನನ್ನನ್ನ ಪ್ರೀತಿಸೋದೊಂದನ್ನ ಬಿಟ್ಟು ಮನೆಗೆ ಸಂಬಂಧಪಟ್ಟಂತೆ ಏನೂ ಮಾಡಕ್ಕಾಗಲ್ಲ ಅನ್ನಿಸಿ ಒಂದು ತೀರ್ಮಾನಕ್ಕೆ ಬಂದೆ. ಒಂದಷ್ಟು ಜನಾನ ವಿಚಾರಿಸಿ 'ಭಾಗ್ಯಜ್ಯೋತಿ' ಕರೆಂಟು ತಗೋಳೋಕೆ ಅರ್ಜಿ ಹಾಕಿದೆ. ಮನೆಯಿಂದ ಮಂಡಲ ಪಂಚಾಯಿತಿ ಆಫೀಸಿಗೆ ಸೆರಗು ಕಟ್ಟಿಕೊಂಡು ಓಡಾಡಿದೆ. ಇವರ ಮುತ್ತುಗಳಿಂದ ಮುದಗೊಂಡಿದ್ದ ನನ್ನ ಮುಖ ಬೆವರಿಂದ ತುಂಬಿ ಕಪ್ಪಗಾಯಿತು. ನನ್ನ ಮನೆ ಬೆಳಕಾಗಬೇಕಲ್ಲ. ನನ್ನ ಕಣ್ಣುಗಳು ಕಪ್ಪು ಬಾವಿಗಳಾದವು. ಮೊದಲೇ ಐದು ಮುಕ್ಕಾಲಡಿ ಇದ್ದವಳು. ಶಿಲ್ಪಾಶೆಟ್ಟಿಯನ್ನು ಅಣಕಿಸುವಂತಿದ್ದವಳು ನರಪೇತಲಿಯಾದೆ. ಇವರಿಗೆ ಗೊತ್ತಿಲ್ಲದಂತೆ ನನ್ನ ಅಮ್ಮನ ಬಳಿ ಆರುನೂರು ರುಪಾಯಿ ಸಾಲ ಇಸ್ಕೊಂಡು ಒಂದು ಬಲ್ಬು ನೇತಾಡಿಸಿಕೊಂಡೆ, ಮನೆ ಮಧ್ಯೆ.

ಮೊದಲು ಇವರ ಮುಖ ಊರಗಲವಾಯಿತು. ಕಣ್ಣು ತುಂಬಿ ಬಂತು ಅಂತರಾಲ್ಲ, ಹಾಗೆ ತುಂಬಿಬಂತು. ಆವತ್ತಿನ ತಬ್ಬುಗೆ ಮೊದಲಿನ ತಬ್ಬುಗೆಗಳಿಗಿಂತ ತೀವ್ರವಾಗಿತ್ತು. ಹೀಗೆ ಬೆಳಕಲ್ಲಿ (ಅದು ಟ್ಯೂಬ್ ಲೈಟಿನ ಬೆಳ್ಳಂಬೆಳಕೇನಲ್ಲ) ಭಯ ಇರಲಿಲ್ಲ. ನೆರಳುಗಳಿರುತ್ತವಲ್ಲ, ಹೀಗಾಗಿ, ಕಳ್ಳ ಬಂದರೂ ಅವನ ನೆರಳು ಕಾಣುತ್ತದೆ ಎಂಬ ವಿಶ್ವಾಸ. ಮೊದಲಿನ ಹಾಗೆ ಸುಬ್ಬರಾಯಪ್ಪ, ರಾಮಕ್ಕ, ಶಶಿಕಲಾ ಕಂಡರೆ ತಕ್ಷಣ ದೇವರ ಫೋಟೋ ಕಡೆ ಕಣ್ಣು ಹೊರಳಿಸಬಹುದಲ್ಲ. ದೇವರ ಪ್ರಸನ್ನ ವದನ ಸಾಕು. ಅಷ್ಟು ಸಾಕು.

ಬೆಡ್‌ಲೈಟು, ಟೂ ಇನ್‌ವನ್ನು, ಟಿ.ವಿ., ಹೀಗೆ ನನ್ನ ಕನಸುಗಳ ತುಂಬ ಹೊಸ ಹೊಸ ವಸ್ತುಗಳು ಬಂದು ಸೇರಿಕೊಳ್ಳತೊಡಗಿದವು. ಬೆಳಕು ತುಂಬಿದ, ಹಾಡು ತುಂಬಿದ, ಸಂಭ್ರಮ ತುಂಬಿದ ಬದುಕಿನ ರಂಗೋಲಿ ಅದು.

ಇದೆಲ್ಲಾ ಆಗುವ ಹೊತ್ತಿಗೆ ನಮ್ಮ ಮದುವೆಯಾಗಿ ಐದು ತಿಂಗಳಾಗುತ್ತಾ ಬಂದಿತ್ತು. ಒಳಗೆ ಕಸಿವಿಸಿಯಾದರೂ, 'ಶಬ್ದವೇಧಿ' ಸಿನಿಮಾ ನೋಡಿ ಬಂದು 'ನಮ್ಮೆಜಮಾನ್ರೂsss' ಎಂದು ಗುನುಗುತ್ತಿದ್ದೆ.

ಕಾಫಿ ಪುಡಿ ಕೇಳಲು ಬಂದ ನಿಮ್ಮನ್ನು ಕೂರಿಸಿಕೊಂಡು ಹೀಗೆ ಕಷ್ಟ ಸುಖ ಹೇಳ್ಕೊಂಡು ನಿಮಗೆ ಕಾಫಿ ಪುಡಿ ಕೊಡೋದೇ ಮರ್ತೋದೆ ನೋಡಿ. ಇರಿ, ಸ್ವಲ್ಪ ಕಾಫಿ ಮಾಡ್ಕೊಂಡು ಬರ್ತೀನಿ. 'ಇಲ್ಲ ನಮ್ಮತ್ತೆ ಬೈಯ್ತಾರೆ ಅಂತೀದೀರಾ?' ಎಲ್ಲಾ ಅತ್ತೇದೀರು ಒಂದೇ ತರ ಇರಲ್ಲ ಬಿಡಿ. ಈಗ ನಮ್ಮತ್ತೇನೇ ನೋಡಿ. ಮದುವೆಯಾದದ್ದೇ ತಡ, ನಮ್ಮನ್ನು ಈ ಗವ್ವೆನ್ನುವ ಕತ್ತಲು ಜೊತೆ ಬಿಟ್ಟು, ತನ್ನ ಹೆಣ್ಣುಮಕ್ಕಳ ಮನೆಯಿಂದ ಮನೆಗೆ ಓಡಾಡಿಕೊಂಡು ಇರತೊಡಗಿದರು.



ಯಾವಾಗೋ ಒಂದ್ಸಾರಿ ಇಲ್ಲಿಗೆ ವಿಸಿಟ್ ಹಾಕಿ ಹೋಗ್ತಾರೆ ಅಂತಾ ಕೋಪ. 'ಮುದುಕಿ ಮನಸಲ್ಲಿ ಅದೇನು ಇಟ್ಕೊಂಡಿದಾಳೋ' ಎಂದು ನೂರಾರು ಸಾರಿ ಅಂದ್ಕೊಂಡಿದೀನಿ. ಆದರೆ ಮನಸನ್ನ ಓದೋದಿಕ್ಕಾಗಲ್ವಲ್ಲ. ಮುಖದಲ್ಲಿ ನನ್ನ ಬಗೆಗಿನ ಅಸಹನೆಯಂತೂ ಕುಣಿಯುತ್ತೆ. ಆದರೂ, ಎಲ್ಲ ಅತ್ತೇದೀರೂ ಒಂದೇ ತರ ಇರಲ್ಲ ಬಿಡಿ.

ಕತೇನಾ ಬೇಗ ಮುಗ್ಸಿಬಿಡ್ತೀನಿ ನಿಮಗೆ ತೊಂದರೆಯಾಗುತ್ತೆ.

ಒಂದಿನ ಇದ್ದಕ್ಕಿದ್ದ ಹಾಗೆ, ರಾತ್ರಿ ಎಂಟೂವರೆಗೆ ಬರೋರು, ಇವರು ಆರಕ್ಕೇ ಬಂದುಬಿಟ್ಟರು. ಸೈಕಲ್ ಸ್ಟಾಂಡನ್ನ ವರಂಡಾ ಎಲ್ಲ ಅದುರೋ ಹಂಗೆ ಹಾಕಿ, 'ಮಂಜೀ' ಎಂದು ಕೂಗಿದರು. ಮತ್ತದೇ 'ನಮ್ಮೆಜಮಾನ್ರೂ.....' ಎಂದು ಗುನುಗುತ್ತಾ, ಮುಖಕ್ಕೆ ಸೋಪು ಹಾಕ್ಕೊಂಡು 'ಚಪ್‌ಚಪ್' ಎಂದು ನೊರೆ ಬರಿಸುತ್ತಿದ್ದೆ. ಅವಸರದಿಂದ ಮುಖ ತೊಳೆದು ಬಂದವಳನ್ನೇ ದಿಟ್ಟಿಸಿ ನೋಡಿದರು. ನಾನೇ ಕಣ್ ಹೊಡೆದು 'ಏನ್ರೀ ಇಷ್ಟು ಬೇಗ?' ಎಂದೆ. 'ಬೇಗ ಗೀಗ ಎಲ್ಲಾ ಹಾಳಾಗೋಗ್ಲಿ; ಕರೆಂಟು ಹಾಕುಸ್ದಲ್ಲಾ ಎಷ್ಟು ದುಡ್ಡು ಖರ್ಚಾಯ್ತು ಅದಕ್ಕೆ?' ಎಂದು ನಿಂತ ನಿಲುವಲ್ಲೆ ಕೂಗಿದಂತೆ, ಕಿರುಚಿದಂತೆ ಕೇಳಿದರು. ಅಮ್ಮನ ಬಳಿ ಆರ್ನೂರ್ ರುಪಾಯ್ ಸಾಲ ತಗೊಂಡಿದ್ದು ಇವರಿಗೆಲ್ಲಾದರೂ ಗೊತ್ತಾಗಿಬಿಡ್ತೇನೋ ಎಂದು ಅಳುಕುಂಟಾಯಿತು. ಅದರೂ ನಗುತ್ತಾ, 'ಪ್ಚ್ ಅಮ್ಮಮ್ಮಾ ಅಂದ್ರೆ ಒಂದ್ಸಾವ್ರ ಆಗಿರ್ಬೋರ್ದು; ಲೆಕ್ಕ ನಿಮ್ಗೇ ಗೊತ್ತಲ್ಲಾ' ಎಂದೆ. ಕರೆಂಟ್ ಹಾಕುಸ್ಕೊಡಿ ಅಂತ ಯಾರ್ಯಾರ್ ಹತ್ರ ಹೋಗಿದ್ದೆ? ಎಂದರು. ನಾನು ನೆನಪಿಸಿಕೊಳ್ಳುತ್ತಾ ಮಂಡಲ ಪಂಚಾಯ್ತಿಲೀ ಸೆಕ್ರೆಟ್ರಿ ಹತ್ರ, ಲೈನ್‌ಮೆನ್ ಹತ್ರ, ಆ ಅನ್ನಂತಪ್ಪನ ಹತ್ರ... ಜ್ಞಾಪಕ ಬರ್ತಾ ಇಲ್ಲ' ಅಂದೆ. 'ನಾನು ಇನ್ನೊಂದಷ್ಟು ಜನಾನ ತೋರಿಸ್ತೀನಿ ಅವರತ್ರ ಹೋಗು, ಮನೆ ಕಟ್ಟಿಸಿಕೊಡ್ತಾರೆ' ಎಂದು ಕಿರುಚಿದರು.

ಒಂದು ಕ್ಷಣ, ಇವರೇನು ಹೇಳ್ತಾ ಇದಾರೆ ಅಂತ ಗೊತ್ತಾಗಲಿಲ್ಲ. ನಂತರ ಅದರ ಅರ್ಥ ನನ್ನ ಮೈಯಲ್ಲೆಲ್ಲಾ ಕರೆಂಟು ಹರಿದಂತೆ ಹರಿದು ಜೋರಾಗಿ ಕಿರುಚಿದೆ. 'ಏನ್ ಮಾತಾಡ್ತಾ ಇದೀರಾ ಗೊತ್ತಿದಿಯಾ ನಿಮ್ಗೆ?' ನನ್ನುದ್ದಕ್ಕೂ ಬಂದ ಅವರು ಇನ್ನೂ ಜೋರಾಗಿ ಕಿರುಚಿದರು 'ಮಾನ ಮರ್ಯಾದೀನ ಅರಾಜ್ ಹಾಕಿ ಕರೆಂಟ್ ಯಾವ್ನೋನ್ ಹಾಕುಸ್ಕೋ ಅಂದ?' ಎಂದವರೆ ರಪ್ಪನೆ ಕಪಾಳಕ್ಕೆ ಒಂದು ಬಿಟ್ಟರು. 'ಅಕ್ಕಂದ್ರ ಹತ್ರ ಯಾರ್ಯಾರೋ ಏನೇನೋ ಹೇಳ್ತಿದಾರಂತೆ, ಥತ್‌ತೇರಿಕೆ' ಎಂದು ತಲೆ ಮೇಲೆ ಕೈ ಹೊತ್ತು ಕೂತರು.

ನನಗೆ ಸ್ಪಷ್ಟವಾಗತೊಡಗಿತು.

'ಈ ಮನೆಗೆ ಕರೆಂಟ್ ಬೇರೆ ಕೇಡು' ಎಂಬ ಮಾತು ಮತ್ತೆ ಅಸ್ಪಷ್ಟವಾಗಿ ಕೇಳಿಸಿತು. ಇವರು, ಇವರ ಅಕ್ಕಂದಿರ ಜೊತೆ ಒಂದು ತೀರದಲ್ಲಿ, ನಾನು ಇವರಿಗಾಗಿ ಕೈ ಚಾಚುತ್ತಾ ಇನ್ನೊಂದು ತೀರದಲ್ಲಿ ನಿಂತಿದ್ದಂತೆ ಭಾಸವಾಗಿ ದುಃಖ, ಕೋಪ, ಆಕ್ರೋಶ ಎಲ್ಲ ಕೂಡಿಕೊಂಡು ಕ್ರುದ್ಧಳಾದೆ. ಮುಖದ ತುಂಬ ನಗುವ ಅಮ್ಮನನ್ನು ನೆನೆಸಿಕೊಂಡರೂ ಸುಮ್ಮನಿರಲಾಗಲಿಲ್ಲ. ಕೈಲಿದ್ದ ಟವಲನ್ನು ಬಿಸಾಕಿದೆ. ''ನನ್ನ, ನನ್ನ ಅನುಮಾನಿಸ್ತೀರಾ? ನಾಚ್ಕೆಯಾಗಲ್ವಾ ನಿಮ್ ಮುಖಕ್ಕೆ?'' ಎಂದು ಅಲ್ಲೆ ಇದ್ದ ಸ್ಟೂಲನ್ನ ಜೋರಾಗಿ ಒದ್ದೆ. ಅಪ್ಪ ನೆನಪಿಗೆ ಬಂದು, ಕ್ಷಣ ಕಳೆಯುವುದರಲ್ಲೆ 'ಎದುರು ಮಾತಾಡ್ತೀಯಾ?' ಎಂದವರೆ ರಪ್ಪನೆ ಕಪಾಳಕ್ಕೆ ಬಿಟ್ಟರು ಇನ್ನೊಂದು. 'ಇವರಮ್ಮನ್ ಈ ಕರೆಂಟ್‌ನಾ ಕ್ಯಾಯ' ಎಂದವರೆ ಅಲ್ಲೆ, ನಮ್ಮ ಮದುವೆಯಾಗುವಾಗ ಮನೆಯಾಚೆಯಿದ್ದ ಒಳಕಲ್ಲನ್ನು ಮನೆಯೊಳಕ್ಕೆ ತರಲು ಉಪಯೋಗಿಸಿದ್ದ ಮೂರಡಿ ಗಧಾರಿಯನ್ನು ಎತ್ತಿಕೊಂಡವರೆ ಸ್ವಿಚ್‌ಬೋರ್ಡಿಗೆ ಹೊಡೆಯತೊಡಗಿದರು. ಆ ಶಾಕ್‌ನಿಂದ ನಾನು ಎಚ್ಚೆತ್ತುಕೊಳ್ಳುವಷ್ಟರಲ್ಲೆ ಅನಾಹುತ ನಡೆದುಹೋಗಿತ್ತು.

ಒಂದೇ ಏಟಿಗೆ ಒಡೆದು ಹೋದ ಸ್ವಿಚ್‌ಬೋರ್ಡಿನೊಳಗಿಂದ ಕರೆಂಟು ತನ್ನ ಪಾಡಿಗೆ, ಸಹಜವೆಂಬಂತೆ ಇವರ ಮೈಯೊಳಗೆ ಹರಿಯತೊಡಗಿತು. ಇವರು 'ಅಯ್' ಎಂದು ಕಿರುಚಿದ್ದಷ್ಟೆ. ಇವರನ್ನು ಹಿಡಿದುಕೊಳ್ಳಲು ನಾನು ದಾಪುಗಾಲು ಹಾಕಿ ನಡೆದೆ. ಮಕಾಡೆ ಬಿದ್ದಿದ್ದ ಸ್ಟೂಲನ್ನು ಎಡವಿ, ಮುಗ್ಗರಿಸಿ ಬಿದ್ದೆ.

'ಆಮೇಲೇನಾಯಿತು?' ಎಂದು ಕೇಳಬೇಡಿ. ಅರೆ, ನಿಮ್ಮ ಕಣ್ಣಲ್ಲೇಕೆ ನೀರು? ನನ್ನ ಕತೆಯಲ್ಲಿ ನಿಮ್ಮ ಮುಖ ಕಂಡಿತೆಂದೆ?


ಅರೇ, ನೀವ್ಯಾಕೆ ನನ್ನನ್ನು ಮುಟ್ಟಲು ಬರುತ್ತಿದ್ದೀರಾ? ಬ್ಯಾಡ ದಮ್ಮಯ್ಯ, ನಿಮಗೂ ತಾಕೀತು ಬೇಡ ಅಲ್ಲೇ ಇರಿ....



ತಂಗಿ ಮಗಳು 'ಅಂಶು'ವಿನೊಂದಿಗೆ ಲೇಖಕ


ನಮ್ಮ ನಡುವಿನ, ಮತ್ತು ನಮ್ಮನ್ನು ಅಗಲಿಸಿದ್ದ ಕರೆಂಟು ಕೂಡ 'ಸ್ವಲ್ಪ ಅಡ್ಜಸ್ಟ್ ಮಾಡ್ಕೊ, ಸ್ವಲ್ಪ ಅಡ್ಜಸ್ಟ್ ಮಾಡ್ಕೊ' - ಎಂದು ಹೇಳತೊಡಗಿದಂತೆ ಭಾಸವಾಯಿತು. ಇವರನ್ನು ಬಿಗಿಯಾಗಿ ತಬ್ಬಿಕೊಂಡು ಕಣ್ಮುಚ್ಚಿದೆ.

ಕೆ. ನರಸಿಂಹಮೂರ್ತಿ





ಸಾಲ್ಮಿಂಚು



ನವಿಲಿನ ಬಾಲದ ಹೊರೆಗಾಗಿ ಗುಬ್ಬಚ್ಚಿ ದುಃಖಿಸಿತು.

ಕೊಡಲಿ ತನ್ನ ಹಿಡಿಗಾಗಿ ಮರವನ್ನು ಬೇಡಿತು ಮರ ಕೊಟ್ಟಿತು.

ಸಾವಿನಲ್ಲಿ ಹಲವು ಒಂದಾಗುತ್ತವೆ, ಬದುಕಿನಲ್ಲಿ ಒಂದು ಹಲವಾಗುತ್ತವೆ, ದೇವರು ಸತ್ತಾಗ ಧರ್ಮ ಒಂದೇ ಆಗುತ್ತದೆ.

ನೀವು ತಪ್ಪುಗಳ ಬಾಗಿಲು ಮುಚ್ಚಿದರೆ, ಸತ್ಯದ ಬಾಗಿಲು ಕೂಡ ಮುಚ್ಚಿಬಿಡುತ್ತದೆ.

ಹಕ್ಕಿಯು ತಾನು ಕರುಣೆ ತೋರಿಸುತ್ತಿದೆಯೋ ಎಂಬಂತೆ ಮೀನನ್ನು ಗಾಳಿಯಲ್ಲಿ ಎತ್ತುತ್ತಿದೆ.

ಜೇಡರಬಲೆ ಇಬ್ಬನಿ ಹಿಡಿಯುವಂತೆ ನಟಿಸುತ್ತ ನೊಣಗಳನ್ನು ಹಿಡಿಯುತ್ತಿದೆ.

ಚಂದ್ರ ತನ್ನ ಬೆಳಕನ್ನು ಆಗಸದಲ್ಲಿ ತುಂಬಿದೆ ತನ್ನ ಕಪ್ಪು ಕಲೆಗಳನ್ನು ತಾನೇ ಇಟ್ಟುಕೊಂಡಿದೆ.

ಸ್ಪರ್ಶಿಸುವ ಮೂಲಕ ನೀನು ಕೊಲ್ಲಬಹುದು ಯಾವುದನ್ನಾದರೂ, ದೂರ ಇರುವುದರ ಮೂಲಕ ಅದನ್ನು ಹೊಂದಬಹುದು.

ಬಾಣ ಹಾರುವ ಮೊದಲು ಬಿಲ್ಲು ಹೇಳಿತು ಅದಕೆ: ನೀನು ಪಡೆದ ಸ್ವಾತಂತ್ರ್ಯ ನನ್ನದೂ ಹೌದು.

ಕಣ್ಣಿವೆ ಕಣ್ಣಿಗೆ ಸಂಬಂಧಿಸಿದ್ದು ಹೇಗೋ ವಿಶ್ರಾಂತಿ ಅನ್ನುವುದು ದುಡಿಮೆಗೆ.

ಭೂಮಿಯ ಉತ್ಕಂಠಿತ ನಿರೀಕ್ಷೆಯಂತೆ ಮರಗಳು ಸ್ವರ್ಗದತ್ತ ಮೆಟ್ಟಂಗಾಲಲ್ಲಿ ಇಣುಕುತ್ತಿವೆ.

ತಾನೇ ಅಸಲಿ ಎಂದು ಸಾಬೀತುಪಡಿಸುವುದಕ್ಕಾಗಿ ಪ್ರತಿಧ್ವನಿ ಧ್ವನಿಯನ್ನು ಅಣಕಿಸುತ್ತಿದೆ.

ಮಕ್ಕಳು ಬೊಬ್ಬಿಡುತ್ತ ನಕ್ಷತ್ರಗಳಿಗೆ ಕೈಚಾಚುವಂತೆ ನನಗೆ ಆ ಬೆಟ್ಟಗಳು ಕಾಣಿಸುತ್ತಿವೆ.

ಮರಣದ ಕಾರಂಜಿಯು ಬದುಕಿನ ನಿಶ್ಚಲ ನೀರನ್ನು ಕುಣಿಸುತ್ತಿದೆ.


ಹಕ್ಕಿಯ ರೆಕ್ಕೆಗಳಿಗೆ ಬಂಗಾರ ಹಚ್ಚು, ಮತ್ತೆಂದೂ ಅದು ಆಕಾಶಕ್ಕೆ ಹಾರಲ್ಲ.

ಮನುಷ್ಯರು ಕ್ರೂರಿಗಳು. ಆದರೆ ಮನುಷ್ಯ ದಯಾಳು.

ಮನುಷ್ಯ ಮುಗುಳ್ನಕ್ಕಾಗ ಪ್ರಪಂಚ ಅವನನ್ನು ಪ್ರೀತಿಸಿತು. ಆದರೆ ಅವನು ಗಹಗಹಿಸಿದಾಗ ಅದು ಭೀತವಾಯ್ತು.

ದಾರಿಬದಿಯ ಹುಲ್ಲೇ ನೀನು ನಕ್ಷತ್ರವನ್ನು ಪ್ರೀತಿಸು ನಿನ್ನ ಕನಸುಗಳು ಹೂಗಳಾಗಿ ಅರಳುತ್ತವೆ.

ಹಕ್ಕಿಯ ಹಾಡೆನ್ನುವುದು ಭೂಮಿಯಿಂದ ಹಿಂದಕ್ಕಪ್ಪಳಿಸುವ ಮುಂಜಾವಿನ ಬೆಳಕಿನ ಪ್ರತಿಧ್ವನಿ.



(ರವೀಂದ್ರನಾಥ ಟಾಗೋರ್‌ರ Stray Birds ಕವಿತಾ ಸಂಕಲನದಿಂದ. ಕನ್ನಡಕ್ಕೆ: ಹರಿಯಪ್ಪ ಪೇಜಾವರ)




ರತಿ ಪ್ರಸ್ತಾಪ ಅದು ಹೇಗೆ ಬಂತೋ ಗೊತ್ತಿಲ್ಲ. ಅಷ್ಟಕ್ಕೂ ಮಾತು ಶುರುವಾಗಿದ್ದು ನನ್ನ ಗುರುಗಳು ಎಸೆದ ಒಂದು ಪ್ರಶ್ನೆಯಿಂದ -

'ಅಲ್ಲಯ್ಯ, ಒಬ್ಬ ಒಳ್ಳೆ ಲೇಖಕ ಅಥವಾ ಕಲಾವಿದ ಆಗಕ್ಕೆ ಒಳ್ಳೆ ಮನುಷ್ಯನೇ ಆಗಿರಬೇಕು ಅಂತ ಯಾರಯ್ಯಾ ಹೇಳಿದ್ದು ನಿಂಗೆ? ಯಾವುದು ಒಳ್ಳೇತನ ಅಂದ್ರೆ? ನಿಮ್ಮ ಸಮಾಜ ಹಾಕೋ ಕಾನೂನು ಕಟ್ಟಳೆ ಪ್ರಕಾರ ಬದುಕೋನೇ ಒಳ್ಳೆಯವನಾ ಹಾಗಾದ್ರೆ?'

ಮೊದಲೇ ಗೊಂದಲಗಳ ಮೂಟೆ ನಾನು. ನನ್ನ ಅನುಮಾನಗಳು ಒಂದೊಂದಲ್ಲ. ಸ್ವತಃ ಸರಿ ತಪ್ಪುಗಳ ಅಳತೆ ಮೀರಿ ಬದುಕುವವನು ಅದು ಹೇಗೆ ಮನುಷ್ಯ ಜೀವನದ ನೈತಿಕ ತೀರ್ಮಾನಗಳನ್ನು ಕೊಡಬಲ್ಲ ಸಾಹಿತಿಯಾದಾನು ಅಂತ ದಿನಗಟ್ಟಲೆ ತಲೆಕೆಡಿಸಿಕೊಂಡವನು ನಾನು. ಆದರೀಗ ಗುರುಗಳು ಈ ಪ್ರಶ್ನೆ ಒಗೆದ ಕೂಡಲೇ ನನಗೆ ಬಾಯಿ ಕಟ್ಟಿದಂತಾಯಿತು. ಆಮೇಲೆ ಗುರುಗಳು ಚೇಷ್ಟೆಗೆ ಆಡಿದ ಮಾತುಗಳಲ್ಲೂ ಬದುಕಿನ ಗೂಢಾರ್ಥಗಳು ಹೊಳೆಯುತ್ತವೆ ಎಂಬ ನಂಬಿಕೆಯಿದ್ದಿದ್ದರಿಂದ, ಅವರ ಮುಂದಿನ ನಿವಾರಣೆಗೆ ಕಾತರದಿಂದ ಕಾಯುತ್ತ ಕೂತೆ.

ನಾವು ಅಲ್ಲಿದ್ದವರು ನಾಲ್ಕು ಜನ. 'ನೀನು ಕತೆಗಾರ ಆಗಲಾರೆ ಕಣಯ್ಯ' ಎಂದು ಗುರುಗಳು ನನಗೆ ಅಪ್ಪಣೆ ಕೊಡಿಸಿದ್ದರೂ, ಅವರೇ ಒಂದಿಲ್ಲೊಂದು ದಿನ ಒಪ್ಪುವಂಥ ಲೇಖಕನಾಗೇ ತೋರಿಸಬೇಕೆಂಬ ಛಲ ಹೊತ್ತ ನಾನು; ನನ್ನ ಪ್ರಖ್ಯಾತ ಗುರುಗಳು ನಮ್ಮೊಡನೆ ಒಂದು ಸಂಜೆ ಕಳೆಯಲು ನಮ್ಮ ಪುಟ್ಟ ಮನೆಗೆ ಬರುತ್ತಾರೆಂದು ಗೊತ್ತಾಗಿದ್ದೇ ತಡ, ಗುಂಡಿನ ಬಾಟಲಿಗಳು, ಕುರುಕು ತಿಂಡಿಗಳ ಸಮೇತ ಭಕ್ತಿಭಾವದಿಂದ ಹಾಜರಾದ ನನ್ನಿಬ್ಬರು ಸಾಹಿತ್ಯಪ್ರೇಮಿ ಮಿತ್ರರು - ಸೋಮು, ರಾಜಶೇಖರ. ಇನ್ನು ಗುರುಗಳ ಬಗ್ಗೆ ಹೇಳಬೇಕಾದ್ದೇ ಇಲ್ಲ. ಅಂತಾರಾಷ್ಟ್ರೀಯ ಖ್ಯಾತಿಯ ಲೇಖಕ, ನಾಟಕಕಾರ ಮತ್ತು ರಂಗ ನಿರ್ದೇಶಕ. ಈ ಸಲವೇ ಜ್ಞಾನಪೀಠ ಬರಬೇಕಿತ್ತು, ಹೇಗೋ ತಪ್ಪಿ ಹೋಗಿದೆ; ಮುಂದಿನ ಸಲವಂತೂ ಖಂಡಿತ ಎಂಬ ಪುಕಾರುಗಳಿದ್ದವು. ಅಲ್ಲದೆ ಒಂದು ಕಾಲದಲ್ಲಿ ನಟನಾಗುವ ಆಸೆಯೂ ಅವರಿಗಿತ್ತೆಂದು ನನ್ನ ಅನುಮಾನ!

ಈ ಸಮೂಹದ ಮುಂದೆ ಕರಿದ ಗೋಡಂಬಿ ಬೀಜ ಬಾಯಿಗೆಸೆದುಕೊಂಡು ಗುರುಗಳು ಒಂದು ಗುಟುಕು ಹೀರಿ ಮತ್ತೆ ಶುರು ಮಾಡಿದರು -



ಎನ್.ಎಸ್. ಶಂಕರ್

ರತಿ



'ನೋಡಯ್ಯ, ನಿನ್ನ ಒಳ್ಳೆತನ-ಕೆಟ್ಟತನ ಎಲ್ಲ ಇಲ್ಲಿ ಕೆಲಸಕ್ಕೆ ಬರಲ್ಲಯ್ಯ. ಹಾಗಿದ್ದಿದ್ರೆ ತಿಕ್ಕಲ ದಾಸ್ತೊವ್‌ಸ್ಕಿ ಹೇಗಯ್ಯ ಅಷ್ಟು ದೊಡ್ಡ ಪ್ರತಿಭಾವಂತ ಆಗ್ತಿದ್ದ? ನೀನು ಹೊರಗಿನ ಪ್ರಪಂಚ ಮಾತ್ರ ನೋಡ್ತಿರ್ತೀಯಾ. ಆದ್ರೆ ಒಳಗೇ ಹುಟ್ಟೋ ಜೀವದ ಚಿಲುಮೆ, ಎಲ್ಲಾನೂ ಮೀರಿ ಚಿಮ್ಮುತ್ತೆ. ಕೊನೆಗೂ ಮನುಷ್ಯನಿಗೆ ಏನು ಬೇಕು ಅಂತ ಯಾರಯ್ಯಾ ಕಂಡುಹಿಡಿದಿದ್ದಾರೆ?...' ನಕ್ಕು ಕೈಯಾಡಿಸಿ ತೇಗಿದರು ಗುರುಗಳು.

ನಮ್ಮ ಸಂಜೆ ಆರಂಭವಾಗಿದ್ದು ಈ ಧಾಟಿಯಲ್ಲಿ. ಗುರುಗಳು ಜಗತ್ತಿನ ಅನೇಕ ಸೃಷ್ಟಿಕರ್ತರ ವಿಪರ್ಯಾಸಖಚಿತ ಬದುಕಿನ ಕತೆ ಹೇಳುತ್ತ ಹೇಳುತ್ತ ನಮ್ಮ ಸಂಜೆ, ಗುಂಡು ಎರಡೂ ಕರಗುತ್ತ ಹೋದವು. ಆವಾಗ ಒಮ್ಮೆ ಅವರೇ ಯಾವುದೋ ಮಾತಿಗೆ ರತಿಯ ಹೆಸರು ತೆಗೆದಿದ್ದು. ತೆಗೆದ ಕೂಡಲೇ ನನಗೆ ಕ್ಷಣ ಧಸಕ್ಕೆಂದಿತು. ನಾನೋ ಮೊದಲೇ more loyal than the king! ಗುರುಗಳೆಲ್ಲಿ ತಮಗೇ ಮುಜುಗರವಾಗುವ ಮಾತುಗಳಾಡಿಬಿಡುತ್ತಾರೋ ಎಂದು ಚಡಪಡಿಸಿದೆ. ಯಾಕೆಂದರೆ ಗುರುಗಳೇ ಒಮ್ಮೆ ನನ್ನ ಹತ್ತಿರ 'she is a bitch I say' ಅಂದಿದ್ದರು. ಆದರೆ ರತಿಯ ಹೆಸರೇ ಕೇಳಿ ಗೊತ್ತಿರದ ನನ್ನ ಸ್ನೇಹಿತರು ಯಾವ ಪರಿವೆಯೂ ಇಲ್ಲದೆ ಕೂತಿದ್ದರಿಂದ ಸರಿಹೋಯಿತು.

ರತಿ ಯಾರು ಅಂತ ಇಲ್ಲೇ ಹೇಳಿಬಿಡ್ತೀನಿ.

ಈಗ ಮೂರು ವರ್ಷಗಳ ಹಿಂದೆ, ರತಿಯ ಹೆಸರೆತ್ತದ ನಾಟಕ ಪ್ರೇಮಿಯೇ ಇರಲಿಲ್ಲ. ಅವರ ಮುತ್ತಾತನ ಕಾಲದಿಂದಲೂ ಕಂಪನಿ ನಾಟಕಗಳಲ್ಲೇ ಜೀವ ಕಳೆದು ನಾಟಕ, ಸಿನಿಮಾಗಳಲ್ಲಿ ಹರಡಿಕೊಂಡ ಕಲಾವಿದರ ಕುಟುಂಬ ಅವಳದು. ಅವಳೂ ಮುಂದಕ್ಕೆ ಎರಡು ಕನ್ನಡ, ಒಂದು ತಮಿಳು ಸಿನಿಮಾದ ನಾಯಕಿಯಾದರೂ ಅವಳ ದುರಹಂಕಾರವೇ ಅವಳಿಗೆ ಮುಳುವಾಯಿತೆಂಬ ಮಾತು ಕೇಳಿದ್ದೇನೆ. ಆ ಮಾತು ಬೇರೆ.

ಚಿಕ್ಕಂದಿನಿಂದಲೂ ಬಾಲನಟಿಯಾಗಿ ಪಳಗಿದ್ದ ರತಿ, ಪ್ರಾಯಕ್ಕೆ ಬಂದ ಮೇಲೆ ಹಲವಾರು ನಾಟಕ ತಂಡಗಳು ಅವಳನ್ನು ಕರೆದು ಮುಖ್ಯ ಪಾತ್ರ ಕೊಡುವ ಪರಿಪಾಠ ಬೆಳೆಯಿತು. ಹಾಗೊಂದು ನಾಟಕದಲ್ಲೇ ಗುರುಗಳು ಅವಳನ್ನು ಮೊದಲ ಬಾರಿ ನೋಡಿದ್ದು. ಮಹಾಭಾರತದ ದ್ರೌಪದಿಯ ಸ್ಫೂರ್ತಿ ಪಡೆದು, ಆಧುನಿಕ ಹೆಣ್ಣೊಬ್ಬಳ ಸ್ವಾತಂತ್ರ್ಯ ಸ್ಥಿತ್ಯಂತರಗಳ ಬಗ್ಗೆ ಗುರುಗಳು ಆದೇ ತಾನೇ 'ಪಾಂಚಾಲಿ' ನಾಟಕ ಬರೆಯುತ್ತಿದ್ದರು. ರತಿಯನ್ನು ಕಂಡವರೇ 'ಇವಳೇ ಕಣಯ್ಯ ನನ್ನ ಪಾಂಚಾಲಿ' ಅಂದುಬಿಟ್ಟರು.

ಅಪ್ಸರ ಮಟ್ಟಿಗೆ ಗುರುಗಳ ಮನಸ್ಸು ಸೆರೆಹಿಡಿದ ರತಿ, ಅಂಥ ಅಪ್ರತಿಮ ಚೆಲುವೆಯೇನಲ್ಲ. ಈಗ ನೆನೆಸಿಕೊಂಡರೆ ಅವಳ ಮೂಗು, ಬಾಯಿ, ಎಲುಬಿನ ಚೌಕಟ್ಟಿಗೆ ಹಲವು ನ್ಯೂನತೆಗಳು ಹೊಳೆಯುತ್ತವೆ. ಎತ್ತರಕ್ಕೆ ತುಸು ನೀಳ ಅನ್ನಬಹುದಾದ ಆಕಾರ ಅವಳದು. ಆದರೆ ರತಿಯ ಚೆಲುವು ಪ್ರಕಟವಾಗುತ್ತಿದ್ದುದು ಅವಳ ತೀಕ್ಷ್ಣ ಕಣ್ಣುಗಳಲ್ಲಿ. ಮತ್ತು ಅವಳ ಹುಮ್ಮಸ್ಸಿಗೆ ಏರಿಳಿಯುವ ರಕ್ತದ ರಂಗು ಲೇಪಿಸಿಕೊಂಡ ಪಾರದರ್ಶಕ ಹೊಳಪಿನ ಕೆನ್ನೆಗಳಲ್ಲಿ. ಅಥವಾ ಹಾಗೆ ತೀರ್ಮಾನ ಕೊಡುವುದೂ ಕಷ್ಟವೇ. ಅವಳ ಮಾತು, ಓಡಾಟಗಳ ಹುಚ್ಚು ಧಾವಂತ, ಸಮೀಪ ಬಂದವರಿಗೆ ತಾಕುವ ಅವಳ ಪ್ರಾಯದ ಝಳ ಎಲ್ಲ ಸೇರಿರಬಹುದು. ಮಿಣುಕುಹುಳದ ಮಿಂಚು ಕಣ್ಣಿಗೆ ಕಂಡೀತೇ ಹೊರತು, ಆ ಬೆಳಕಿನ ಮೂಲ ಕಾಣಬಹುದೇ?

'ಪಾಂಚಾಲಿ'ಯ ತಾಲೀಮು ಶುರುವಾಯಿತು. ನನಗೂ ಒಂದು ಪಾತ್ರವಿತ್ತಾದ್ದರಿಂದ ರತಿಯನ್ನು ಸತತವಾಗಿ ಹತ್ತಿರದಿಂದ ಕಂಡು ತಲೆಕೆಡಿಸಿಕೊಳ್ಳುವ ಅವಕಾಶವೂ ಬಂತು! ಈ ಹುಡುಗಿ ಮಾಮೂಲು ಹುಡುಗ-ಹುಡುಗಿಯರ ಲೆಕ್ಕಕ್ಕೆ ಬರುವವಳಲ್ಲ ಅನ್ನುವುದೇ ಎಲ್ಲರಿಗೂ ಹೊಡೆದು ಕಾಣುವ ಅವಳ ಮೊದಲ ಗುಣ. ರತಿಯ ಸ್ವಚ್ಛಂದತೆ ಒಂದು ರೀತಿಯಲ್ಲಿ ಭೂತ-ಭವಿಷ್ಯದ, ಸರಿ-ತಪ್ಪುಗಳ ನಿರ್ಬಂಧವನ್ನು ಅರಿಯದ ವನ್ಯಮೃಗದ ಹಾಗೆ. ಅವಳ ಪ್ರತಿಯೊಂದು ನಡೆನುಡಿಯೂ ಹದ್ದು ಮೀರಿದಂತೆ ಇದ್ದಿದ್ದಕ್ಕೋ ಏನೋ, ಯಾರಿಗೂ ಅವಳ ಜತೆ ಸಹಜ ಸಂಬಂಧದ ಆತ್ಮವಿಶ್ವಾಸ ಸಾಧ್ಯವೇ ಇರಲಿಲ್ಲ. ಯಾರ ಸಂಪರ್ಕ ಬಂದರೂ, ತಕ್ಷಣ ತನ್ನ ಹತೋಟಿಗೆ ತೆಗೆದುಕೊಳ್ಳುವ ಅವಳ ವಾಂಛೆ ಎಷ್ಟು ಮೋಹಕವಾಗಿತ್ತೆಂದರೆ, ಎಲ್ಲ ವಯಸ್ಸಿನ ಗಂಡಸರೂ ತಾವಾಗಿ ಅವಳಿಗೆ ಶರಣಾಗುವ ಹಾಗೆ ತೋರುತ್ತಿತ್ತು. ಈಗ ಯೋಚಿಸಿದರೆ, ಹತ್ತು ವರ್ಷಗಳ ಜೀವನವನ್ನು ಒಂದೇ ವರ್ಷದಲ್ಲಿ ಅನುಭವಿಸಿ ಪೂರೈಸಿ ಬಿಡುವ ಆತ್ಮವಿನಾಶದ ಒಂದು ಎಳೆ ಅವಳಲ್ಲಿ ಉರಿದು ಮುಗಿದುಬಿಡುವ ಜ್ವಾಲೆಯಂತೆ ಪ್ರಜ್ವಲಿಸುತ್ತಿತ್ತು; ಮತ್ತು ಅದೇ ಅವಳ ಅದಮ್ಯ ಆಕರ್ಷಣೆಯ ಮೂಲವಾಗಿದ್ದಿರಬೇಕು ಅನಿಸುತ್ತದೆ. ಏನೇ ಆದರೂ ಇವೆಲ್ಲ ಊಹೆಗಳು ಮಾತ್ರ. ಯಾಕೆಂದರೆ ಯಾವ ವಿವರಣೆಯೂ ಆ ಹತ್ತೊಂಬತ್ತರ ಪ್ರಾಯದ ರತಿಯ ವ್ಯಕ್ತಿತ್ವದ ಸೆಳೆತದ ಕಾವನ್ನು ಪೂರ್ತಿಯಾಗಿ ಸಾಕಾರಗೊಳಿಸಲಾರದು.

ಈಗ ತಕ್ಷಣಕ್ಕೆ ಆಗಿನದೊಂದು ಪ್ರಸಂಗ ನೆನಪಾಗುತ್ತಿದೆ. ಅವತ್ತು ತಾಲೀಮಿಗಿನ್ನೂ ಗುರುಗಳು ಬಂದಿರಲಿಲ್ಲ. ನಮ್ಮ ಪದ್ದು ಯಾವುದೋ ಪುಸ್ತಕ

ಓದುತ್ತ ಕೂತಿದ್ದ. ಪದ್ದು ಅವಳನ್ನು ಮಾತಾಡಿಸಿರಲಿಲ್ಲ ಎಂಬ ಕಾರಣಕ್ಕೋ ಏನೋ, ರತಿ ಹತ್ತಿರ ಬಂದು 'ಲೇ ಪದ್ದು ನನ್ಮಗನೇ! ಆ ಬುಕ್ ಕೊಡೋ' ಅಂದಳು. ಅವನು 'ಕೊಡಲ್ಲ ಹೋಗೆಲೇ' ಅಂದ. ರತಿ ಆ ಕ್ಷಣ ಅವನ ಮೇಲೆ ಯಾವ ರಭಸದಲ್ಲಿ ಬಿದ್ದು ಕಿತ್ತುಕೊಂಡಳೆಂದರೆ - ತನ್ನದೊಂದು ಹೆಣ್ಣು ದೇಹ ಆ ಪದ್ದುವಿನ ಗಂಡು ದೇಹದ ಸ್ಪಂದನವನ್ನು ಉತ್ತೇಜಿಸಬಹುದು ಎಂಬ ಪರಿವೆಯೇ ಅವಳಿಗಿದ್ದಂತಿರಲಿಲ್ಲ. ಪದ್ದು ಪೆದ್ದುಪೆದ್ದಾಗಿ ನಗುತ್ತ ಸೋತ. 'ನೀನೇನು ಎಳೇ ಮಗು ಏನೇ? ಹಿಂಗಾಡ್ತೀಯಾ' ಅನ್ನುತ್ತ ಎದ್ದು ಕೂತ. ಇವಳೇನು ಮಾಡಬೇಕು? 'ಹೌದು ಕಣೋ, ನಾನು ಮಗುನೇ' ಅಂದವಳೇ ಸೀದಾ ಹೋಗಿ ಅವನ ತೊಡೆಯ ಮೇಲೆ ಕೂತುಬಿಟ್ಟಳು. ಪದ್ದು ಕಕ್ಕಾಬಿಕ್ಕಿಯಾಗಿ ಅವಳನ್ನು ದಬ್ಬಿದರೂ, ಆಮೇಲೆ ನೆನೆನೆನೆದು ರೋಮಾಂಚನಗೊಂಡು ಬೆವೆತನೇನೋ... ಆದರೆ ಅದಾಗಿ ಅರ್ಧ ಗಂಟೆಗೆ ರತಿ ತನ್ನ ಕೈಮುಷ್ಟಿ ಬಿಗಿ ಮಾಡಿ ರಪ್ಪನೆ ಅವನ ಮೂಗಿಗೆ ಗುದ್ದಿ ರಕ್ತ ಇಳಿಯುವ ದೃಶ್ಯ ಕಾಣಬೇಕಾಯಿತು ನಾವು!

ಗುರುಗಳು ಬಂದರು. ಬಂದು ಕೇಳಿದರು. 'ಅವನು ನನ್ನ ಸೊಂಟಕ್ಕೆ ಕೈ ಹಾಕಿ ಗಿಂಡಿದ' ಅಂತ ಅವಳೆಂದರೆ, 'ಇಲ್ಲ ನಾನು ಹಾಗೆ ಮಾಡೇ ಇಲ್ಲ. ಆಕಸ್ಮಾತ್ತಾಗಿ ಕೈ ಸೋಕಿತು' ಅಂತ ಅವನು ತಪ್ಪಿತಸ್ಥನ ಹಾಗೆ ನಿಂತ.

ಇಂಥ ರತಿ, ನಲವತ್ತರ ಪ್ರಾಯದ ಗುರುಗಳನ್ನು ಮೊದಲ ಭೇಟಿಯಲ್ಲೇ 'ಅಂಕಲ್' ಎಂದು ಸಂಬೋಧಿಸಿ, ಗುರುಗಳು ಪೆಚ್ಚಾಗಿದ್ದರು! 'ಫಸ್ಟ್‌ಗೆ ಅವಳು ನನ್ನನ್ನ ಅಂಕಲ್ ಅಂದ ಕೂಡಲೇ ಜೋಲಿ ಹೊಡೆದಂಗಾಯ್ತು ಕಣಯ್ಯ...' ಗುರುಗಳು ನಕ್ಕು ಕಥೆ ಆರಂಭಿಸಿದರು. ನನ್ನ ಸ್ನೇಹಿತರ ಜತೆ ನಾನೂ ಉತ್ಸುಕನಾಗಿ ಕಿವಿ ತೆರೆದು ಕೂತೆ.

ಅವಳ ಅಪ್ಪ, ಅಮ್ಮ ಇಬ್ಬರೂ ನನಗೆ ಗೊತ್ತಿದ್ದೋರೇ. (ಗುರುಗಳ ಕಥನ ಮುಂದುವರೆಯಿತು) ಸರಿ ಇವಳನ್ನ ಮಗಳ ಸಮಾನ ಅಂದ್ಕೊಂಡ್ರೆ ತಪ್ಪೇನು ಅಂತ ಸುಮ್ಮನಾದೆ. ಆದ್ರೆ ನನ್ನ-ಅವಳ ಸಂಬಂಧ ಒಂದು ಅಂತಿಮ ರೂಪಕ್ಕೆ ಬರೋವರೆಗೂ ಆ ಸಂಬಂಧಕ್ಕೆ ಯಾವ ಚೌಕಟ್ಟು ಹಾಕಬೇಕು, ಏನು ಹೆಸರು ಕೊಡಬೇಕು ಅನ್ನೋ ಗೊಂದಲ ತಪ್ಪಲೇ ಇಲ್ಲ. ಅವಳ ಸ್ವಭಾವನೇ ಅದಲ್ವಾ? ಎಲ್ರಿಗೂ ಗೊಂದಲ ಹುಟ್ಟಿಸಿ, ತಾನು ನಕ್ಕೊಂಡು ದರ್ಬಾರು ಮಾಡೋದು! ಒಂಥರಕ್ಕೆ ಮೊದಮೊದಲು ಅವಳನ್ನು ಮಗಳು ಅಂದ್ಕೊಂಡಿದ್ದೇ ವಾಸಿ. ಇಲ್ಲದಿದ್ರೆ ಮೊದಲಿಂದಲೇ ಆ ಸಂಬಂಧಕ್ಕೊಂದು ಕ್ಷೋಭೆ ಬಂದುಬಿಡೋದು. ಹಾಗಾಗಿದ್ರೆ ಅವಳು ಬೇರೆಯವರನ್ನು ಆಟವಾಡಿಸುವಾಗೆಲ್ಲ ಅದನ್ನು ತಮಾಷೆ ಅಂತ ನೋಡಕ್ಕೂ ಸಾಧ್ಯ ಆಗ್ತಿರಲಿಲ್ಲ. ಅವಳೇನು ನನ್ನನ್ನೂ ಬಿಡ್ತಿರಲಿಲ್ಲ ಅಂತ ನನಗೂ ಗೊತ್ತು. ಇದ್ದಕ್ಕಿದ್ದಂಗೆ ಗಡ್ಡ ಎಳೆಯೋದು, ಅಥವಾ ಕಿವಿ ಎಳೆಯೋದು. ತಿರುಗಿಸಿ ಅವಳಿಗೂ ಕಿವಿ ಹಿಂಡಬೇಕೋ ಬೇಡವೋ ಅಂತ ನಿರ್ಧಾರ ಮಾಡೋಷ್ಟು ಹೊತ್ತಿಗೇ ಅವಳು ಬೇರೆ ವಿಷಯ ಶುರು ಮಾಡಿರ್ತಿದ್ಲು. ಒಟ್ಟು ಅವಳು ತನ್ನ ದೇಹದ ಹಂಗು ತೊರೆದವಳಂತೆ ಮೆರೆಯುತ್ತಿದ್ದಳು. ಆದ್ರೆ ನಮಗ್ಯಾರಿಗೂ ನಮ್ಮ ದೇಹ ಮರೆಯಕ್ಕಾಗ್ತಿರಲಿಲ್ಲ! ಅಲ್ವಾ? ಇಷ್ಟೆಲ್ಲ ಆದರೂ ನನ್ನ ಮನಸಲ್ಲಿ ಅವಳು ನನ್ನ ಮಗಳು ಅನ್ನೋ ಥರ ಇತ್ತು. ಒಂಥರ ಶಾಂತಿಯಿತ್ತು....

'ಪಾಂಚಾಲಿ' ಮೊದಲನೇ ಷೋ ಎಷ್ಟು ಯಶಸ್ವಿಯಾಯ್ತು ನಿನಗೂ ಗೊತ್ತು. ಕಲಾಕ್ಷೇತ್ರದಲ್ಲಿ ಈವತ್ತಿಗೂ ನೆನೆಸ್ಕೋತಾರೆ. ಅದೇ ನಾಟಕ ತಗೊಂಡು ಮಂಗಳೂರು, ಉಡುಪಿ, ಕಾರವಾರದಲ್ಲಿ ಷೋ ಕೊಡಕ್ಕೆ ನಾವ್ರು ಟೂರ್ ಹೋದಾಗ ನೀನು ಬಂದಿರಲಿಲ್ಲ ಅಲ್ವಾ? ಹ್ಞಾಂ, ಆವಾಗ ನಿನಗೆ ಟಾನ್ಸಿಲ್ಸ್ ಆಪರೇಷನ್ ಆಗಿತ್ತು, ಕರೆಕ್ಟು. ಮೊದಲನೇ ದಿನ ಮಂಗಳೂರಲ್ಲಿ ನಾಟಕ. ಏನೂ ತೊಂದರೆ ಆಗಲಿಲ್ಲ. ಆವತ್ತು ಅಲ್ಲೇ ಉಳಕೊಂಡು ಮಾರನೇ ಬೆಳಗ್ಗೆ ವ್ಯಾನಲ್ಲಿ ಉಡುಪಿಗೆ ಹೊರಟ್ವಿ. ಸಂಜೆವರೆಗೂ ಟೈಮಿತ್ತಲ್ಲ ಅಂತ ಮಲ್ಪೆ ಬೀಚು, ಸೇಂಟ್ ಮೇರೀಸ್ ಐಲೆಂಡ್‌ಗೂ ಹೋದ್ವಿ. ನಮ್ಮ ಟೀಮಲ್ಲಿ ಆಗ ಇನ್ನಿಬ್ಬರು ಹುಡುಗೀರಿದ್ರು ಗೊತ್ತಲ್ಲ? ವೀಣಾ ಚರಂತಿಮಠ, ಇನ್ನೊಬ್ಬಳು ಚಂದ್ರಿಕಾ. ಚಂದ್ರಿಕಾ ಪಾಪ ಆ ಐಲೆಂಡಲ್ಲಿ ಒಂದು ಕಡೆ ಎಡವಿಬಿದ್ದು ಮಂಡಿಗೆ ದೊಡ್ಡ ಗಾಯ ಮಾಡಿಕೊಂಡಳಪ್ಪ. ಅವಳು ಅಳಕ್ಕೆ ಶುರು ಮಾಡಿದ ಕೂಡಲೇ ನಾವೆಲ್ಲ ಅವಳ ಸುತ್ತ ಸೇರಿಬಿಟ್ವಿ. ಪದ್ದೂನೇ ಫಸ್ಟ್ ಏಡ್ ಮಾಡಿದ. ಡಾಕ್ಟ್ರ ಹತ್ರ ಹೋದ್ವಿ, ಇಂಜೆಕ್ಷನ್ನೂ ಹಾಕಿದ್ರು. ಇನ್ನಲ್ಲಿ ನಾಟಕಕ್ಕೆ ತೊಂದರೆ ಆಗುತ್ತೋ ಅಂತ ನನಗೆ ಆತಂಕ. ಕೊನೆಗೆ ಚಂದ್ರಿಕಾನೇ ತಯಾರಾಗಿ 'ಏನೂ ಪರವಾಗಿಲ್ಲ ಸಾರ್. ನಾಟಕದಲ್ಲಿ ನಾನು ಮಾಡೇಮಾಡ್ತೀನಿ' ಅನ್ನುವಷ್ಟು ಹೊತ್ತಿಗೆ ಇನ್ನು ಒಂದೇ ಗಂಟೆ ಇದ್ದಿದ್ದು. ಉಡುಪೀಲಿ ಸ್ಟೇಜ್ ರಿಹರ್ಸಲ್ ಬೇರೆ ಮಾಡಕ್ಕಾಗಿರಲಿಲ್ಲ. ಆ ಟೈಮಿಗೆ ಸೋಡಪ್ಪ ಇವಳಿಗೆ-ರತಿಗೆ-ಇದ್ದಕ್ಕಿದ್ದಂಗೆ ವಾಂತಿ ಶುರುವಾಗೋಯ್ತು. ತಲೆಸುತ್ತು ಅಂತ ಮಲಗಿಬಿಟ್ಟಳು. ಇವರೆಲ್ಲ ಏನೇನೋ ಕೊಟ್ಟು ನೋಡಿದ್ರು. ಏನು ಮಾಡಿದರೂ ನಿಲ್ತಿಲ್ಲ. ಹತ್ತು ಹತ್ತು ನಿಮಿಷಕ್ಕೂ ವಾಂತಿ. ಡಾಕ್ಟ್ರು ಬಂದು ಚೆಕ್ ಮಾಡಿ 'ಏನೂ ತೊಂದ್ರೆ ಕಾಣ್ತಿಲ್ವಲ್ಲ?' ಅಂದ್ರು ಬೇರೆ. ನನಗೆ ರೇಗಿಹೋಯ್ತು. ನನ್ನ ಸ್ವಭಾವ ನಿಂಗೇ ಗೊತ್ತು. ಬೇರೆ ಸಮಯದಲ್ಲಿ ಎಷ್ಟು ಬೇಕಾದ್ರೂ 'ಅಯ್ಯೋ ಪಾಪ' ಅಂತೀನಿ. ಆದ್ರೆ ರಿಹರ್ಸಲ್ಲು, ಷೋ ಅಂದುಬಿಟ್ರೆ ಸಿಟ್ಟು ನೆತ್ತಿಗೇರಿಬಿಡುತ್ತೆ ನನಗೆ. ಸರಿ, ಅವಳನ್ನು ಮಾತಾಡಿಸಕ್ಕೂ ಹೋಗಲಿಲ್ಲ. ರೂಮಲ್ಲಿ ಮಲಗಿದ್ದಲ್ಲಿ, ಬಾಗಿಲಲ್ಲೇ ನಿಂತ್ಕೊಂಡು 'ಅವಳ ಕೈಲಾದ್ರೆ ಬಂದು ನಾಟಕ ಮಾಡಲಿ, ಇಲ್ಲಾಂದ್ರೆ ನಾನೀಗಲೇ ಬೆಂಗಳೂರಿಗೆ ವಾಪಸ್ ಹೋಗ್ತೀನಿ. ಈ ಷೋ, ಕಾರವಾರದ ಷೋ ಎಲ್ಲ ಕ್ಯಾನ್ಸಲ್ ಮಾಡಿ. ಏನು ಕರ್ಮ!' ಅಂತ



ಕೂಗಾಡಿ ಒಂದು ಕಡೆ ಹೋಗಿ ಕೂತುಬಿಟ್ಟೆ. ಇವಳು ಎಷ್ಟೇ ಒಳ್ಳೆ ನಟಿ ಆಗಿರಲಿ, ಇನ್ಯಾವತ್ತೂ ಇವಳ ಸಹವಾಸ ಬೇಡ, ಕತ್ತೆಮುಂಡೆ! ಅಂತ ಉರೀತಾ ಕೂತಿದ್ದೆ. ಕಾಲುಗಂಟೇಲಿ ಪದ್ದುನೇ ಬಂದು 'ಸಾರ್, ಅವಳು ಮೇಕಪ್ ಹಾಕ್ಕೊಂಡು ರೆಡಿ ಆಗಿದಾಳೆ' ಅಂತಂದ! ನನಗೆ ಇನ್ನೂ ರೇಗಿಹೋಯ್ತು, ಅಂದ್ರೆ ಇವಳು ಬೇಕೂಂತ ಆಟ ಕಟ್ಟಿದಳಾ? ತನ್ನನ್ನೇನು ಎಳೇಮಗು ಅಂದ್ಕೊಂಡಿದಾಳಾ? ಅಥವಾ ನನ್ನನ್ನು ಏನೂಂತ ತಿಳಕೊಂಡಿದಾಳೆ?...

'ಆದ್ರೆ ವಾಂತಿ ಮಾಡಿದ್ಲು ಅಂದ್ರಲ್ಲ ಸಾರ್?' -ಸೋಮು ತಡೆಯಲಾಗದೆ ಬಾಯಿ ಹಾಕಿದ. ಇವನು ಬಾಯಿ ಹಾಕಿದ್ದಕ್ಕೆ ನನಗೆ ಸಿಟ್ಟು ಬಂದರೂ ಗುರುಗಳು ರೇಗಲಿಲ್ಲ.

'ನೋಡಿ ರಾಜಶೇಖರ್...'

'ನಾನು ಸೋಮು ಸಾರ್'

'ಸಾರಿ. ನೋಡಿ ಸೋಮು - ನಮ್ಮ ಮನಸ್ಸು ನಮ್ಮ ದೇಹಾನ ಎಷ್ಟರ ಮಟ್ಟಿಗೆ ಕಂಟ್ರೋಲ್ ಮಾಡುತ್ತೆ ಅಂತ ನಮಗೇ ಗೊತ್ತಿರಲ್ಲ. ಈ ಹಠಯೋಗ ಅನ್ನೋದೆಲ್ಲ ಏನು ಹೇಳಿ?... ಅವಳು ಬೇಕಾಗಿ ವಾಂತಿ ಬರೋ ಥರ ಮಾಡಿಕೊಂಡಳಾ ಅಂತ ಕೇಳಿದ್ರೆ ಮೂರ್ಖ ಪ್ರಶ್ನೆ ಆಗುತ್ತೆ. ಆದ್ರೆ ಎಲ್ಲರ ಗಮನ ತನ್ನನ್ನ ಬಿಟ್ಟು ಇನ್ನೊಬ್ಬರ ಕಡೆ ಅದೂ ಇನ್ನೊಂದು ಹುಡುಗಿ ಕಡೆ ಹೋಗ್ತಿದೆಯಲ್ಲ ಅನ್ನೋ ಅಸೂಯೆ, ನೋವು. ಆ ನೋವಿಗೆ ಅವಳ ದೇಹ ಹಾಗೆ ರಿಯಾಕ್ಟ್ ಮಾಡ್ತು ಅಂದ್ಕೋಬೇಕು ನಾವು. ಮೊದಲೇ ನಾರ್ಮಲ್ ಹುಡುಗಿ ಅಲ್ಲ ಅವಳು.....


ಹ್ಞುಂ. ಸ್ಟೇಜ್ ಮೇಲೆ ಬರ್ತಾಳೆ ಅಂದಕೂಡಲೇ ನನಗಿನ್ನೂ ರೇಗಿಹೋಯ್ತು ಅಂದೆನಲ್ಲ, ಯಾವಾಗಲೂ ಸೈಡ್‌ವಿಂಗ್‌ನಲ್ಲಿ ನಿಲ್ತಿದ್ದೋನು, ಆವತ್ತು ಅವರು ಹ್ಯಾಗಾದ್ರೂ ಹಾಳು ಮಾಡಿಕೊಳ್ಳಲಿ ಅಂತ ಸೀದಾ ಪ್ರೇಕ್ಷಕರ ಮಧ್ಯೆ ಹೋಗಿ ಕೂತ್ಕೊಂಡೆ. ನಾಟಕ ಅಂದ್ರೆ ಸೋಮು, ನಿಮ್ಮ ಸಿನಿಮಾ ಥರ ಅಲ್ಲ! ಎಲ್ಲ ಆ ಕ್ಷಣದಲ್ಲಿ ನಿಜ ಆಗಬೇಕು. ನಟರ ಏಕಾಗ್ರತೆ, ಸ್ಫೂರ್ತಿ ಒಂದಕ್ಕೊಂದು ಅಲ್ಲೇ ಕೂಡಿಬರಬೇಕು. ಎಲ್ಲ ಕೂಡಿದ್ರೆ ನಾಟಕ ಸಕ್ಸೆಸ್ ಆಯ್ತು ಅಂತೀವಿ. ಆದ್ರೆ ಆವತ್ತು ಹೇಳ್ತೀನಿ ರಾಜಶೇಖರ್ - ಷೋ ಅದ್ಭುತ, ಅದ್ಭುತವಾಗಿ ಬಂತು. ರತಿಯಂತೂ ಮೈ ಗಾಡ್! ಆ ಪಾತ್ರಾನ ತಂದು ಸ್ಟೇಜ್ ಮೇಲೆ ದೀಪ ಹಚ್ಚಿಟ್ಟ ಹಾಗೆ ಇಟ್ಟುಬಿಟ್ಟಳು ಕಣ್ರೀ. ನಾನು ಅಂದ್ಕೊಂಡಿದ್ದನ್ನೂ ಮೀರಿಸಿ ಜೀವಂತವಾಗಿ ಬಂತು. ಅವಳ ಪ್ರತಿಭೆ, ತನ್ಮಯತೆ, ಆ ಉಮೇದು - ಮತ್ತಿನ್ಯಾವ ಷೋನಲ್ಲೂ ನೋಡಲಿಲ್ಲ ನಾನು. ಆಹಾ!.....

ಗುರುಗಳು ತುಸು ಹೊತ್ತು ಅದೇ ಗುಂಗಿನಲ್ಲಿ ಗುಟುಕು ಹೀರುತ್ತ ಒರಗಿದರು. ಹಾಳಾದ್ದು ಕರೆಂಟ್ ಹೋಯಿತು. ನಾನೇ ಹುಡುಕಾಡಿ ಎರಡು ಮೋಂಬತ್ತಿ ತಂದು ಹಚ್ಚಿಟ್ಟದ್ದೇ ನಮ್ಮ ಮನೆಯ ವಾತಾವರಣವೇ ಬದಲಾಗಿ ಹೋಯಿತು. ಕತ್ತಲಲ್ಲಿ ಅಲ್ಲಲ್ಲಿ ತೆಳುವಾಗಿ ಸುಯ್ದಾಡುವ ಬೆಳಕು, - ತಾನಾಗಿ ಕತ್ತಲನ್ನು ಅರಸಿ ಹೊರಟ ಮಬ್ಬು ಬೆಳಕು. ಎಲ್ಲರಿಗೂ ಅವರವರ ಪ್ರತ್ಯೇಕ ಏಕಾಂತ ದಕ್ಕದಂತೆ, ಬೆಳೆಯಲಿರುವ ಶೃಂಗಾರಲೇಪದ ಕತೆಗೆ ಹುರುಪುಗೊಂಡೆವು. ಗುರುಗಳು ಉಸಿರೆಳೆದು ಮುಂದುವರೆಸಿದರು.

ನೋಡಯ್ಯ, ನೀನು ಬರಹಗಾರ ಆಗಬೇಕು ಅಂತಿರೋನು. ಅದಕ್ಕೇ ಹೇಳ್ತಿದೀನಿ. ಬರಹಗಾರ ಒಂದು ಅನುಭವಾನ ಎದುರಿಸೋವಾಗ, ಅರಗಿಸಿಕೊಳ್ಳುವಾಗ ಅವನಿಗೆ ಪಾಪ, ಪುಣ್ಯ ಇರಲ್ಲ. ಸರಿ, ತಪ್ಪು ಇರಲ್ಲ. ಅರ್ಥ ಆಗ್ತಿದೆಯಾ ನಾನು ಹೇಳ್ತಿರೋದು? ಈಗ ನನ್ನ ಅನುಭವ ಹೇಳ್ತೀನಿ ಕೇಳು.

ಸ್ಟೇಜ್ ಮೇಲೆ ಅವಳ ಅದ್ಭುತ ಚೈತನ್ಯ ಕಾಣ್ತಲ್ಲ, ರತಿ ಮೇಲಿದ್ದ ಸಿಟ್ಟು-ಪೂರ್ತಿ ಮರೆತೇಹೋಯ್ತು ನನಗೆ. ಆ ಪ್ರತಿಭೆ ನೋಡಿದೋನು ಯಾರೇ ಆದ್ರೂ ಲಕ್ಷ ತಪ್ಪು ಕ್ಷಮಿಸಿಬಿಡ್ತಾನೆ.....

ರತಿ ಬಹಳ ಪ್ರಕ್ಷುಬ್ಧ ಬಾಲ್ಯ ಕಂಡೋಳು. ಮೊದಲೇ ಕಲಾವಿದರ ಕುಟುಂಬ. ಅಪ್ಪ, ಅಮ್ಮ ಡೈವೋರ್ಸ್ ತಗೊಂಡ್ರು. ಇವಳ ಕಣ್ಣ ಮುಂದೇನೇ ಅವರ ಹದ್ದು ಮೀರಿದ ಪ್ರೇಮ, ಪ್ರಣಯದ ಆಟಗಳು. ಭಾವನಾತ್ಮಕ ನೆಲೇನೇ ಇಲ್ದೆ ಬೆಳೆದು ನಿಂತಿದಾಳೆ ಇವಳು. ಹೀಗೆಲ್ಲ ನನ್ನ ಮನಸ್ಸಲ್ಲಿ ನಡೀತಿರಬೇಕಾದ್ರೆ ರತಿ ಬಂದ್ಲು. ಸಪ್ಪಗಿದ್ಲು. 'ಸಾರಿ ಅಂಕಲ್' ಅಂದ್ಲು. ಅದನ್ನು ಎಷ್ಟು ಮುದ್ದಾಗಿ, ಆರ್ತವಾಗಿ ಹೇಳಿದ್ಲು ಅಂತಂದ್ರೆ, ನನಗೆ ಅವಳನ್ನು ಅಲ್ಲೇ ಬಾಚಿ ತಬ್ಬಿಕೊಂಡು ಬಿಡಲಾ ಅನ್ನೋ ಅಕ್ಕರೆ ಬಂತು. ಅವಳ ತಲೆ ಮೇಲೆ ಮೆಲ್ಲಗೆ ಮೊಟಕಿ 'ಅದ್ಭುತವಾಗಿ ಮಾಡಿದೆಯಮ್ಮ' ಅಂದೆ. ಅಂದೆನಲ್ಲ, ಅದೊಂದು ಮಾತಿನ ಮೇಲೇ ಅವಳ ಭವಿಷ್ಯ ನಿಂತಿತ್ತು ಅನ್ನೋ ಥರ ಜಿಗಿದಾಡಿಬಿಟ್ಟು. ಜಿಂಕೆ ಥರ ಅಲ್ಲಿ ಇಲ್ಲಿ ಓಡಾಡಿದಳು. ಅವರಿವರ ಲಗೇಜ್ ತಂದು ವ್ಯಾನಿಗೆ ಹಾಕಿದ್ಲು. ಚಂದ್ರಿಕಾನ್ನಂತೂ ಮಗು ಥರ ಮುದ್ದು ಮಾಡ್ತಾ ಆಸ್ಥೆ ತೋರಿಸಿದ್ಲು. ವ್ಯಾನ್ ರಾತ್ರೀನೇ ಕಾರವಾರಕ್ಕೆ ಹೊರಡ್ತು. ವ್ಯಾನಲ್ಲೂ ನನ್ನ ಕೈ ಬಿಡದೆ ಹಿಡ್ಕೊಂಡು ಪಕ್ಕಾನೇ ಕೂತುಕೊಂಡಳು ರತಿ. ಶುರುವಾಯ್ತು ನೋಡು ಇವರ ಅಂತ್ಯಾಕ್ಷರಿ. ನಾನೂ ಹಳೇ ಹಿಂದಿ ಹಾಡು ಹೇಳ್ಕೊಂಡು ಜೊತೆಗೆ ಸೇರಿದ್ದು ನೋಡಿ ಎಲ್ಲರಿಗೂ ನಗು. ವ್ಯಾನ್ ಹೋಗ್ತಾ ಇದೆ. ಮಧ್ಯರಾತ್ರಿ ಕಳೆದ ಹಾಗೆ ಎಲ್ರಿಗೂ ನಿದ್ದೆ ಎಳೆಯಕ್ಕೆ ಶುರುವಾಯ್ತು. ಡ್ರೈವರ್ ಒಂದು ಕಡೆ ನಿಲ್ಲಿಸಿ ಕೆಳಗಿಳಿದ. ಚುಮು ಚುಮು ಚಳಿ. ನಾನೂ ಶಾಲು ಹೊದ್ಕೊಂಡು ಹೊರಗಿಳಿದೆ. ಸುತ್ತ ತೆಳ್ಳಗೆ ಮಂಜಿನ ಪರದೆ. ಒಂದು ಬದಿಗೆ ಹೋಗಿ ಒಂದಾ ಮಾಡ್ತಾ ಸುತ್ತ ನೋಡಿದೆ. ಜಗತ್ತೇ ಮಲಗಿದೆ. ನಾವು ಇಲ್ಲಿ ಅಂತ್ಯಾಕ್ಷರಿ ಹೇಳ್ಕೊಂಡು ಬೆಚ್ಚಗೆ ಹೋಗ್ತಿದೀವಿ. ಏನೋ ಉಲ್ಲಾಸ. ಒಳಗೇ ಜಿನುಗಿ ಮನಸ್ಸು ತುಂಬಿಕೊಳ್ಳೋ ನಿರುಮ್ಮಳ ಉಲ್ಲಾಸ... ಈ ನಾಟಕ, ರಿಹರ್ಸಲ್ಲು ಅಂತ ನಾವೆಷ್ಟು ಮೈ ಮರೀತೀವಿ ನಿನಗೇ ಗೊತ್ತು. ಅದರಲ್ಲೂ ಹೀಗೆ ಹೊರಗೆಲ್ಲಾದ್ರೂ ಹೋದಾಗ, ದಿನನಿತ್ಯದ ಪ್ರಪಂಚದಿಂದ ನಮಗೆ ಬಿಡುಗಡೆ ಸಿಕ್ಕಿಬಿಡುತ್ತೆ. ಇದೇ ಬೇರೆ ಲೋಕ. ಈ ಲೋಕದ ರೀತಿ ನೀತಿನೇ ಬೇರೆಯಾಗಿಬಿಡುತ್ತೆ. ಅಲ್ವಾ? ಅದಕ್ಕೆ ನಾವು ವಾಪಸು ನಮ್ಮ ಸಂಸಾರಕ್ಕೆ ಕಾಲಿಟ್ಟಾಗ ಏನೋ ತಳಮಳ, ಏನೋ ತಹತಹ ಉಳಿದುಬಿಡುತ್ತೆ ಎಷ್ಟೋ ದಿನ. ಅದು ಬಿಡು. ನಾನು ಈಗ ಇದೇ ಹಗುರವಾದ ಭಾವದಲ್ಲಿ ವ್ಯಾನ್ ಹತ್ತಿ ಕೂತ್ಕೊಂಡೆ. ವ್ಯಾನ್ ಹೊರಡ್ತು. ಅರ್ಧ ಕಿಟಕಿ ತೆಗೆದಿಟ್ಟು ಹೊರಗೆ ನೋಡ್ತಾ ಕೂತೆ. ಗಾಳಿ ಸುಂಯ್ ಸುಂಯ್ ಅಂತ ತಂಪಾಗಿ ಬೀಸ್ತಾ ಇದೆ. ಈ ಹುಡುಗಿ ನನ್ನ ಭುಜ ಒರಗಿಕೊಂಡು ನಿದ್ದೆ ಹೋಗಿದೆ. ಎಲ್ಲ ಕೂತಲ್ಲೇ ತೂಗ್ತಿದಾರೆ. ಚಳಿ ಆಯ್ತೇನೋ, ರತಿ ನಿದ್ದೇಲೇ ನನ್ನ ಬಲವಾಗಿ ತಬ್ಬಿಕೊಂಡಳು. ನನ್ನ ಶಾಲನ್ನೇ ಅವಳಿಗೂ ಹೊದೆಸಿ ಅವಳ ಭುಜ ಬಳಸಿಕೊಂಡು ಹಾಗೇ ಕೂತೆ. ನನಗೆ ನಿದ್ದೆ ಬರ್ತಾ ಇಲ್ಲ.



ಇದ್ದಕ್ಕಿದ್ದ ಹಾಗೆ, ನನಗೆ ಅದ್ಯಾಕೆ ಹಾಗನಿಸ್ತೋ ಏನೋ, ನನ್ನ ಅಪ್ಪಿಕೊಂಡು ಕೂತಿದ್ದಲ್ಲ ಇವಳು, ಇವಳನ್ನು ಹಾಗೇ ಆವರಿಸಿ ಬಲವಾಗಿ ನನ್ನ ದೇಹಕ್ಕೆ ಒತ್ತಿಕೋಬೇಕು ಅನಿಸಿಬಿಡ್ತು ಕಣಯ್ಯ! ಆ ಸೆಳೆತ ಹ್ಯಾಗೆ ಬಂತು ಅಂತೀ, ಪ್ರಚಂಡವಾಗಿ ನನ್ನನ್ನೇ ಕೊಚ್ಚಿಕೊಂಡು ಹೋಗೋಷ್ಟು ಬಲವಾಗಿ ಬಂತಲ್ಲ-ದಿಗಿಲಾಯ್ತು! ಎದೆ ಹೊಡಕೊಳ್ಳಕ್ಕೆ ಶುರುವಾಯ್ತು. ಈಗ ಕೇಳಿದ್ರೆ ನಿನಗೆ ವಿಚಿತ್ರ ಅನಿಸಬಹುದು, ಆದ್ರೆ ಆವಾಗ, ಆ ಕ್ಷಣ ನಾನು ತಗೊಳ್ಳೋ ನಿರ್ಧಾರ, ಅಂದ್ರೆ ಇವಳನ್ನು ತಬ್ಬಿಕೊಳ್ಳಲಾ ಬೇಡವಾ ಅನ್ನೋ ನಿರ್ಧಾರ-ಶಾಶ್ವತವಾಗಿ ನನ್ನ ಜೀವನಾನ್ನೇ ಬದಲಾಯಿಸಿಬಿಡುತ್ತೆ ಅಂತ ಅದುರಿಹೋದೆ. ಇಲ್ನೋಡು-ಅದು ದೈಹಿಕ ಬಯಕೆ ಅಲ್ಲ. ನನಗೆ ಚೆನ್ನಾಗಿ ಗೊತ್ತು. ಹೋಗಲಿ, ಈ ಹುಡುಗಿ ಮೇಲೆ ಪ್ರೀತೀನಾ ಅಂತ ಕೇಳಿಕೊಂಡೆ. ಅದೂ ಅಲ್ಲ. ಮತ್ತಾವುದಿದು ಹಾಗಾದ್ರೆ? ಈ ಆಕರ್ಷಣೆಗೆ, ಈ ಒತ್ತಡಕ್ಕೆ ಏನು ಹೆಸರು? ನನಗೀಗಲೂ ಗೊತ್ತಿಲ್ಲ! ಆದ್ರೂ ಸುಮಾರು ಹೊತ್ತು ನನ್ನ ಮನಸ್ಸಲ್ಲಿ ಹೋರಾಟಾನೇ ನಡೆದುಹೋಯ್ತು. ಅದ್ಯಾಕೋ ನನ್ನ ಹೆಂಡತಿ ನೆನಪಾದಳು-ಒಂದು ಎಚ್ಚರಿಕೆ ಥರ. ಇನ್ನೊಂದು ಕಡೆ, ದಾಟಿ ಬಿಡಲಾ ಅನ್ನೋ ಈ ಕ್ಷಣದ ಸೆಳೆತ. ಸೋಲ್ತಾ ಇರೋ ಮನಸ್ಸು...

ಗುರುಗಳು ದಣಿವಿನಿಂದ ನಕ್ಕರು. ಮತ್ತೊಂದೆರಡು ಗುಟುಕು ಹೀರಿದರು. ಮತ್ತೆ ಸಮಾಧಾನವಾಗಿ ಹೇಳತೊಡಗಿದರು.

ನನ್ನ ಕೈ ಅವಳ ಮೇಲೆ ಇತ್ತು. ಆದ್ರೆ ನಾನು ಕೊನೆಗೂ ಅವಳನ್ನು ಎಳಕೊಳ್ಳಲೇ ಇಲ್ಲ. ಹಾಗೇ ಕೂತೆ. ಅರ್ಥ ಮಾಡ್ಕೋ. ನನ್ನ ಭಯ ನಂದೇ. ಯಾಕಂದ್ರೆ ನಾನು ಅವಳನ್ನು ಅಪ್ಪಿಕೊಂಡಿದ್ರೂ ಅವಳಿಗೇನೂ ವ್ಯತ್ಯಾಸ ಗೊತ್ತಾಗ್ತಿರಲಿಲ್ಲ. ಇದು ನನ್ನೊಬ್ಬನದೇ ಹೋರಾಟ, ನನ್ನೊಬ್ಬನದೇ ನಿರ್ಧಾರ. ಹಾಗೇ ಸುಮ್ಮನಾದೆ ಅಂದೆನಲ್ಲ, ನಂಬ್ತಿಯೋ ಬಿಡ್ತೀಯೋ, 'ಬಚಾವಾದೆ' ಅನಿಸ್ತು! ದಣವಾಯ್ತು. ನಿದ್ದೆ ಬಂತು. ಹೆಜ್ಜೆಯಿಟ್ಟು ಹೊಸಿಲು ದಾಟೋದು ಎಂಥ ಭಯಾನಕವಾದ ಸಾಹಸ ಅಂತ ಆ ರಾತ್ರಿ ಮೊದಲನೆ ಸಲ ನನಗರ್ಥ ಆಯ್ತು.

ಸರಿ, ಬೆಂಗಳೂರಿಗೆ ವಾಪಸ್ ಬಂದೆವಲ್ಲ, ಮನೇಲಿ ದಿನಾ ಹಿಂಸೆ. ಕಾರಣ ಇದ್ರೂ, ಇಲ್ಲದಿದ್ರೂ ಚುಚ್ಚಾ, ಗೋಳಾಡ್ತಾನೇ ಇರೋ ಹೆಂಡತಿ. ಅದು ಮುಂಚೆಯಿಂದ ಅಭ್ಯಾಸ ಆಗಿರೋದೇ. ಈಗ ಹೊಸದೇನು? ಆದ್ರೂ



ಯಾಕೋ ಈವಾಗ ಅದನ್ನು ಸಹಿಸೋ ತಾಳ್ಮೆ ನನಗಿರಲಿಲ್ಲ. ಅಂದ್ರೆ ನನ್ನನ್ನ ಬದಲಾಯಿಸಿದ ವಸ್ತು ಯಾವುದು? ನನ್ನ ಮಗಳು ಅಂದ್ರೆ ಅಷ್ಟು ಇಷ್ಟ ನಂಗೆ. ಈಗ ಅವಳ ಮೇಲೂ ರೇಗಬೇಕು ಅನಿಸ್ತಿತ್ತು. ಮನೆ ತುಂಬ ಜೋರಾಗಿ ಕೂಗಾಡಬೇಕು ಅನಿಸ್ತಿತ್ತು. ಎಲ್ಲಿಂದ ಬಂತು ಈ ಅತೃಪ್ತಿ?

ಒಂದು ದಿನ, ಯಥಾಪ್ರಕಾರ ಜಗಳ ಆಡಿಕೊಂಡು, ಮನಸ್ಸು ಕೆಡಿಸಿಕೊಂಡು ಮನೆಬಿಟ್ಟೆ. ಕಾಲೇಜಿಗೂ ಬಂದೆ. ಯಾಕೋ ಎಲ್ಲದರ ಮೇಲೂ ಜುಗುಪ್ಸೆ ಬಂತು. ರಜಾ ಹಾಕಿ ಕಾಲೇಜಿಂದ ಹೊರಟುಬಿಟ್ಟೆ. ಸರಿ, ಎಲ್ಲಿಗೆ ಹೋಗೋದು ಅಂತ ಯೋಚನೆ ಮಾಡಿ ನಿರ್ಧಾರ ಮಾಡಕ್ಕೆ ಮುಂಚೇನೇ ನನ್ನ ಸ್ಕೂಟರ್ರು ರತಿ ಮನೆ ಮುಂದೆ ಬಂದು ನಿಂತುಬಿಟ್ಟಿತ್ತು! ಅರೆ, ಇಲ್ಯಾಕೆ ಬಂದೆ ನಾನು? ಒಳಗೆ ಹೋಗಬಾರದು, ಹೋದ್ರೆ ಯಾವುದೋ ಬಲೇಲಿ ಸಿಕ್ಕಿ ಹಾಕ್ಕೋತೀನಿ ಅಂದುಕೊಳ್ಳೋಷ್ಟರಲ್ಲಿ ಒಳಗೆ ಹೋಗಿದ್ದೆ. ಯಾಕೆ ಬಂದಿದ್ದು ಅಂತ ಕೇಳಿದ್ರೆ ಏನು ಹೇಳಬೇಕು ಅಂತ ಭಯ ಆಯ್ತು. ಆದ್ರೆ ರತಿ ನನ್ನನ್ನು ನೋಡಿದ ತಕ್ಷಣ ಓಡಿಬಂದ್ಲು. ಕೈ ಹಿಡಕೊಂಡು ಕುಣಿದಾಡ್ಕೊಂಡು ಅವಳ ಅಜ್ಜಿ ಹತ್ರ ಕರಕೊಂಡು ಹೋದ್ಲು. ಅವರಿಬ್ಬರೇ ಇದ್ದಿದ್ದು ಮನೇಲಿ. ಅಜ್ಜಿ ಮಲಗಿದ ಹಾಸಿಗೆ ಬಿಟ್ಟು ಏಳೋ ಥರ ಇರಲಿಲ್ಲ. ಸ್ವಲ್ಪ ಹೊತ್ತು ಅವರನ್ನ ಮಾತಾಡಿಸ್ತಾ ಮುಜುಗರದಿಂದಲೇ ಕೂತ್ಕೊಂಡೆ. ಈ ಮನೇಲಿ ನಾನ್ಯಾವ ನಿರೀಕ್ಷೆ ಇಟ್ಕೊಂಡು ಕೂತಿದೀನಿ ಅನ್ನೋದೇ ಸ್ಪಷ್ಟವಾಗಿರಲಿಲ್ಲ.

ಇವಳು ಟೀ ಮಾಡ್ತೀನಿ ಅಂತ ಹೊರಟವಳು ಮತ್ತೆ ಬಂದು ಕೈ ಹಿಡಕ್ಕೊಂಡು 'ನೀವೂ ಅಲ್ಲೆ ಬನ್ನಿ ಅಂಕಲ್' ಅಂತ ಎಳಕೊಂಡು ಹೊರಟಳು. ನನಗೆ ಏನೋ ಮಂಕು ಬಡಿದ ಹಾಗಾಗಿತ್ತು. ಸ್ವತಂತ್ರ ವಿಚಾರಶಕ್ತಿಯನ್ನೇ ಕಳಕೊಂಡ ಹಾಗೆ. ಸುಮ್ಮನೆ ಹೋದೆ. ಅಡಿಗೆ ಮನೇಲಿ ಒಂದು ಸ್ಟೂಲ್ ಮೇಲೆ ನನ್ನ ಕೂರಿಸಿ ಟೀಗಿಟ್ಟಳು. ಅವಳ ಬೆಕ್ಕು, ಫ್ರೆಂಡ್ಸು ಅದೂ ಇದೂ ಮಾತಾಡ್ತಾನೇ ಇದ್ಲು. ಅವಳ ಮುಖದ ನಲಿವಿಗೇ ದೃಷ್ಟಿ ಕೀಲಿಸಿ, ಅಲ್ಲಿಂದ ಕಣ್ಣು ತೆಗೆಯುವ ಬಲವೂ ಇಲ್ಲದಂತೆ ಕೂತಿದ್ದಾಗ, ನನ್ನಿಂದ ಏನೋ ತಪ್ಪು ನಡೀತಾ ಇದೇ ಅನ್ನೋ ಭಾವನೆ ಯಾಕೆ ಬಂತು?...ರತಿ ನಾನು ಕೂತ ಕಡೆ ಬಂದು ನನ್ನ ಮೇಲೇ ಬಾಗಿ ಹಿಂದಿನ ಶೆಲ್ಫಿನಲ್ಲಿ ಯಾವುದೋ ಡಬ್ಬ ಹುಡುಕತೊಡಗಿದಳು. ಆಗತಾನೇ ಸ್ನಾನ ಮಾಡಿದ್ದಳೇನೋ. ಆ ಸೋಪ್ ಪರಿಮಳ, ಅವಳ ಮೈ ವಾಸನೆ, ಅವಳ ಸೂಕ್ಷ್ಮ ಚಲನೆಗಳಿಗೆ ಆ ದೇಹ ಹೊರಡಿಸುತ್ತಿದ್ದ ಗುಪ್ತ ಸದ್ದುಗಳು. ತಕ್ಷಣ, ನನ್ನ ಕೈಗಳಿಂದ ಅವಳ ಸೊಂಟ ಬಳಸಿದರೆ ಹೇಗೆ ಅಂತ - ಆಸೆಯಲ್ಲ - ಯೋಚನೆ, ಅಥವಾ ಒಂದು ಲಹರಿ ಬಂತು. ಅದಕ್ಕಾಗೇ ಹೀಗೆ ದೇಹ ಒಡ್ಡಿದ್ದಾಳೋ ಅಂತ ಅನುಮಾನ! ಆದರೂ ಏನೂ ಮಾಡದೆ ಸುಮ್ಮನೆ ಕೂತೆ. ಅವಳು ಕಾರಣವಿಲ್ಲದೆ ನಗುತ್ತ ಮಾತಾಡುತ್ತಿದ್ದಳು. ಯಾವುದೂ ನನ್ನ ತಲೆಗೆ ಸ್ಪಷ್ಟವಾಗದೆ ಮಂಜು ಮಂಜು ಗುಂಗು. ಟೀ ಮಾಡಿಕೊಟ್ಟಳು. ಕೊಡುವಾಗ ಅವಳೇ ಬೀಳಿಸಿದಳೋ ಅಥವಾ ನಾನೇ ಬೀಳಿಸಿಕೊಂಡೆನೋ, ಅಂತೂ ಪೂರ್ತಿ ನನ್ನ ಶರ್ಟಿನ ಮೇಲೆ ಚೆಲ್ಲಿಹೋಯಿತು. ರತಿ ಕೇಕೆ ಹೊಡೆದು ನಕ್ಕಳು. ನಕ್ಕು ನಕ್ಕು ಸಾಕಾಗಿ 'ಶರ್ಟ್ ತೆಗೀರಿ ಅಂಕಲ್, ವಾಷಿಂಗ್ ಮೆಷಿನ್ನಲ್ಲಿ ಹತ್ತು ನಿಮಿಷಕ್ಕೆ ಕ್ಲೀನ್ ಆಗುತ್ತೆ' ಅನ್ನುತ ಬಲವಂತವಾಗಿ ಅವಳೇ ಬಿಚ್ಚಿಸಿ ಒಯ್ದಳು. ನಾನು ಮೈ ಬಿಟ್ಟುಕೊಂಡು ಮುಜುಗರಪಡುತ್ತ ಅಲ್ಲೇ ಕೂತೆ. ನಾನೇ ನನ್ನ ಸುತ್ತ ಬಲೆ ಹೆಣೆದುಕೊಂಡು ಸಿಕ್ಕಿಕೊಳ್ಳುತ್ತಿದ್ದೇನೆ ಎಂದು ಕುಗ್ಗುತ್ತ ಕೂತೆ. ಇದೆಲ್ಲ ಕೇಳುವಾಗ ನಿನಗೆ ಲೈಂಗಿಕ ವಾಸನೆ ಹೊಡೆಯಬಹುದೋ ಏನೋ, ನನಗಂತೂ ಅಂಥ ಯಾವ ಉದ್ದೀಪನವೂ ಇಲ್ಲದ ನಿರ್ಭಾವ. ಶರ್ಟ್ ಒಣಗಿಸಿ ಅವಳೇ ಇಸ್ತ್ರಿ ಮಾಡಿ ತಂದುಕೊಟ್ಟಳು. ಹಾಕಿಕೊಂಡೆ. ಆಮೇಲೆ ಅವಳು ಇನ್ನೊಂದು ಕಪ್ ಟೀ ಮಾಡಿಕೊಟ್ಟು ಅದ್ಯಾವುದೋ ಇಂಗ್ಲಿಷ್ ಸಿನಿಮಾ ಹೆಸರು ಹೇಳಿ 'ಅದಕ್ಕೆ ಕರಕೊಂಡು ಹೋಗ್ತೀರಾ ಅಂಕಲ್? ನನ್ನ ಹತ್ರ ದುಡ್ಡಿಲ್ಲ' ಅಂದ್ಲು. ಅವಳು ಹೇಳಿದ್ದಕ್ಕೆಲ್ಲ ಹ್ಞೂಂ ಅನ್ನೋ ಸ್ಥಿತಿಗೆ ಅದು ಹ್ಯಾಗೆ ಬಂದಿದ್ನೋ! ಹೋದೆವು. ಥಿಯೇಟರಲ್ಲಿ ನನ್ನ ಭುಜ ಬಿಗಿಯಾಗಿ ಅವುಚಿಕೊಂಡು ಕೂತಿದ್ಲು. ತೆರೆ ಮೇಲೆ ಬಿಸಿ ಬಿಸಿ ನಗ್ನ ದೃಶ್ಯಗಳು ಬಂದಾಗಲೂ ಅವಳು ಮಿಸುಕಲಿಲ್ಲ. 'ಈ ಶರ್ಟಲ್ಲಿ ಮುದ್ದಾಗಿ ಕಾಣ್ತೀರಿ' ಅಂದ್ಲು. ಸಂಜೆ ಅವಳನ್ನು ಮನೆಗೆ ಬಿಡುವಾಗ 'ನಾಳೆ?' ಅಂತ ಕೊರಳು ಕೊಂಕಿಸಿದಳು. ಅದನ್ನ ಎಷ್ಟು ಸಲೀಸಾಗಿ ಕೇಳಿದ್ಲು ಅಂತಂದ್ರೆ, ಇದು ಬಹಳಾ ದಿನದಿಂದ ನಡಕೊಂಡು ಬಂದಿರೋ ಅಭ್ಯಾಸವೇನೋ ಅನ್ನೋ ಥರ. ಬಾಯಲ್ಲಿ 'ಸಿಗ್ತೀನಿ' ಅಂದೆ. ಮನಸ್ಸಲ್ಲಿ ಇನ್ನ್ಯಾವತ್ತೂ ಇಲ್ಲಿಗೆ ಬರಲ್ಲ ಅಂದ್ಕೊಂಡೆ. ಅಂದುಕೊಂಡೆ, ಆದ್ರೆ ನಾಳೇನೂ ಹೋದೆ, ಅದರ ಮಾರನೇಗೂ ಹೋದೆ; ಹೋಗದೆ ಇರೋ ತೀರ್ಮಾನ ನನ್ನ ಕೈಲಿ ಇಲ್ವೇ ಇಲ್ಲ ಅನ್ನೋ ಥರ ಹೋಗ್ತಾನೇ ಇದ್ದೆ! ದಿನಾ ಹೋಟೇಲು, ಸಿನಿಮಾ, ಎಕ್ಸಿಬಿಷನ್ ಅಂತ ಸುತ್ತಿದ್ವಿ. ಈ ಕಡೆ ಮನೇಲಿ ನನ್ನ ಅಸಹನೆ ಜಾಸ್ತಿ ಆಗ್ತಾನೇ ಹೋಯ್ತು.

HYUNDAI
We 're listening

BEAT THE MUCH HYPED HARSH BUDGET
BUY INDIA'S NO.1 BEST SELLER
SANTRO/ACCENT NOW & SAVE



SANTRO zipDrive

Accent think smooth



COMPARISON BETWEEN HYUNDAI SANTRO LS & MARUTI ALTO VX

FEATURES	SANTRO LS	ALTO VX	SANTRO ADVANTAGE
Prices	Rs. 3,67,818	Rs. 3,74,741	Tall Boy effect, better road visibility, comfortable seating with Ample Legroom
Over all Height	1590mm	1460mm	
Wheel Base	2380mm	2360mm	Stable driving, spacious cabin
Front Track	1315mm	1290mm	
Rear Track	1300mm	1290mm	
Ground Clearance	172mm	160mm	Safe driving for the roughest Indian terrain
Min. Turning Radius	4.4mm	4.6mm	Lesser space required for turning
Rear Headroom	920mm	910mm	Comfortable & fatigue free seating for 5 adults
Rear Legroom	620mm	540mm	
Rear Seat Width	1270mm	1160mm	
Engine	Hyundai Epsilon	FC Engine	World's most advanced 1 litre Engine
Max. Torque kgm/rpm	8.4/2500	8.4/3500	Better torque, better pick-up, lesser Engine wear due to lower rpm
Engine Subframe	Available	Not available	Protects in front incase of major frontal collision
Dual Impact Beams on all four Doors	Available	Not available	Protects incase of side impact
Dual folding Rear Seat	Available	Not available	More luggage space
Tyre size	155/70 R 13	145/80 R 12	Wide tyre gives better road grip & enables to keep the vehicle steady in case of high speed turns
Power Steering	Available	Not available	Easy maneuverability even in narrow roads
Rear Seat Head Rest	Available	Not available	More safety & comfort
Warranty	2 Years unlimited mileage warranty +1 year extended mileage warranty	1year unlimited mileage warranty	1 Year unlimited mileage warranty +1 year extended mileage warranty

- **Attractive finance options available**
- **All models ready available**

Just a few reasons to buy India's No. 1 best seller.

To get convinced, call us for a Zip Drive today !!

BELLAD HYUNDAI *A Unit of Bellad Motors (P) Ltd.,*

Hubli: Ph: 370179, 373831,98441-35591,98441-35593 e-mail : bellad@bgl.vsnl.net.in
Belgaum: Ph: 476331,98441-35594 **Gulbarga:**Ph: 34924

Be Smart Buy Santro

CSD Rates approved for Santro

We strive to see you smile

ಹೆಂಡ್ತಿ ಕೂಗಾಟಾನೂ ಅಷ್ಟೇ. ಮನೆ ನರಕ ಆಗಿಹೋಯ್ತು... ನನ್ನ ಮನಸ್ಸಲ್ಲೇನು, ನಾನೇನೂ ಇವಳನ್ನ ಲವ್ ಮಾಡ್ತಿಲ್ಲ, ಅಥವಾ ನನಗೆ ಅವಳು ಬೇಕು-ನನ್ನವಳಾಗಬೇಕು ಅನ್ನೋ ಆಸೇನೂ ಇಲ್ಲ. ಅಂದಮೇಲೆ ನಾನ್ಯಾಕೆ ಅಳುಕಬೇಕು ಅನ್ನೋ ಭಂಡತನ. ಆದ್ರೆ ನನಗೆ ನಲವತ್ತು, ಅವಳಿಗೆ ಹತ್ತೊಂಬತ್ತು. ಅವಳ ಜೊತೆ ಇದ್ದಷ್ಟು ಹೊತ್ತೂ ಒಂದು ಬದುಕೋ ಹುರುಪು ಕೆರಳಿದ ಹಾಗಾಗ್ತಿತ್ತಲ್ಲ, ಅದಕ್ಕೇನು ಹೇಳಬೇಕು? ಈ ಸೆಳೆತಕ್ಕೆ ಏನು ಹೆಸರು ಕೊಡಬೇಕು ಅದೂ ಬಗೆಹರಿಯಲಿಲ್ಲ.

ಅದು ಹೇಗೆ ಸುದ್ದಿ ಹೋಯ್ತೋ, ನನ್ನ ಹೆಂಡತಿ ಕಿವಿಗೂ ಬಿತ್ತು. ಶುರುವಾಯ್ತು ನೋಡು ಯುದ್ಧ! ಅವಳು ಅತ್ತೂ ಕರೆದೂ ರಂಪ ಮಾಡ್ತಾ, ರತೀನ ಬಾಯಿಗೆ ಬಂದ ಹಾಗೆ ಬೈತಾ ಇದ್ರೆ, ನಾನು ಇವಳ್ಯಾರೋ ನನಗೆ ಸಂಬಂಧಾನೇ ಇಲ್ಲದವಳು ಅನ್ನುವಷ್ಟು ದೂರ ಬೆಳೆಸಿಕೊಂಡುಬಿಟ್ಟೆ. ಮಾನಸಿಕವಾಗಿ ನಮ್ಮ ನಂಟು ಕಡಿದುಹೋಗಿದೆ ಅಂತ ನನಗೆ. ಅದೂ ಕೂಡ ಎಂಥ ಯಾತನೆ ಅಂತ ನಿನಗರ್ಥ ಆಗಲ್ಲ. ಬಹಳ ತಣ್ಣಗೆ, ನನ್ನ ಹೆಂಡತಿ ಯಾಕೆ ಸತ್ತುಹೋಗಬಾರದು ಅಂತ ಆಸೆಪಟ್ಟೆ. ಆದ್ರೆ ಆ ಆಸೇಲೂ ಆವೇಶ ಇರಲಿಲ್ಲ, ತಿಳಕೋ. ಅಂಥ ಕೋಲಾಹಲದಲ್ಲೂ ನನ್ನನ್ನು ಈ ನೆಲಕ್ಕೆ ಕಟ್ಟಿಹಾಕಿದ್ದೋಳು ನನ್ನ ಮಗಳು ಮಾತ್ರ. ಇಲ್ಲಾಂದ್ರೆ ಪರಿಸ್ಥಿತಿ ಎಲ್ಲಿಗೆ ಮುಟ್ಟುತ್ತಿತ್ತೋ ಗೊತ್ತಿಲ್ಲ.

ಒಂದು ಆರು ತಿಂಗಳು ಹೀಗೆ ದಿಕ್ಕು ದೆಸೆ ಇಲ್ಲದಿರೋ ನನ್ನ - ರತಿ ಒಡನಾಟ ಮುಗಿದುಹೋಯ್ತು. ಒಂದು ವರ್ಷದ ಮೇಲೆ ಅವಳ ಜೊತೆ ಬೇರೆ ಥರ ಸಂಬಂಧ ಬೆಳೆದಿದ್ದೂ ನಿಂಗೆ ಗೊತ್ತು. ಆದ್ರೆ ಈಗ ಅದರ ಕತೆ ಬೇಡ. ಆಮೇಲಿಂದೆಲ್ಲ ಬಹಳ ಸರಳವಾದ ವಿಷಯಗಳು ` ಕಣಯ್ಯ! ನೀನು ಬರಹಗಾರ, ಸರಳವಾದ ವಿಷಯಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೋಬಾರದು!...

ಇಲ್ಲಿ ನನ್ನ ಪ್ರಶ್ನೆಯೇನು ಗೊತ್ತಾ? ನನ್ನೆ ಹೆಂಡತಿ ಸತ್ತು ನನಗೆ ಮುಕ್ತಿ ಸಿಕ್ಕಲಿ ಅಂತ ಆಸೆ ಪಟ್ಟೆನಲ್ಲ, ಒಂದು ವೇಳೆ ಅವಳು ನಿಜವಾಗಲೂ ಸತ್ತುಹೋಗಿದ್ರೆ ನಾನೇನು ರತಿ ಹಿಂದೆ ಹೋಗಿಬಿಡ್ತಿದ್ದೆನಾ? ಇಲ್ಲ; 'ಇಲ್ಲ' ಅಂತಾನೇ ಉತ್ತರ ಬರೋದು ನನ್ನ ಮನಸ್ಸಲ್ಲಿ. ಹಾಗಾದರೆ ಇಲ್ಲಿ ಪಾಪ ಯಾವುದು? ನಿಜವಾಗಲೂ ನಾನು ನನ್ನ ಹೆಂಡತಿಗೆ ಮೋಸ ಮಾಡಿ, ರತಿ ನನ್ನ ಪ್ರೇಯಸಿ ಆಗಿದ್ದಿದ್ರೆ, ಅದನ್ನ ಪಾಪ ಅನ್ನುತ್ತೆ ನಿಮ್ಮ ಸಮಾಜ. ಈ ಪ್ರಕಾರ ನಾನು ಪಾಪ ಮಾಡಲೇ ಇಲ್ವಲ್ಲ? ಅಂದಮೇಲೆ ಶಿಕ್ಷೆ ಯಾಕೆ ಅನುಭವಿಸಿದೆ ನಾನು?

'ಏನು ಶಿಕ್ಷೆ ಅನುಭವಿಸಿದಿರಿ ಸಾರ್?'

ಥೂ! ಈ ರಾಜಶೇಖರ ದಡ್ಡ ಪ್ರಶ್ನೆ ಕೇಳಿಯೇಬಿಟ್ಟ! ಸದ್ಯ, ಗುರುಗಳು ಅದಕ್ಕೂ ನಿರ್ಮಲವಾಗಿ ನಕ್ಕರು. 'ನನ್ನ ತಳಮಳ, ಕ್ಷೋಭೆ, ಹೆಂಡತಿ ಜೊತೆ ಹಾಳಾಯ್ತಲ್ಲ ಸಂಬಂಧ, ಅಷ್ಟೂ ಯಾಕೆ, ಅವಳು ಸತ್ತು ಹೋಗಲಿ ಅಂತ ಆಸೆಪಡೋ ನನ್ನ ಮನಸ್ಥಿತಿ - ಇವೆಲ್ಲ ನನಗೆ ಶಿಕ್ಷೆ ಅಲ್ವೇನ್ರಿ?'...

'ಅದು ಹೋಗಲಿ ಬಿಡು. ಈಗ ಆ ಮೂಲ ಪ್ರಶ್ನೆಗೆ ಬರ್ತೀನಿ. ಆರು ತಿಂಗಳಲ್ಲಿ ರತಿ ದೂರ ಆದ್ಲು ಅಂದೆನಲ್ಲ, ಅದಾದ ಮೇಲೆ ಒಂದಷ್ಟು ದಿನ ನನ್ನ ನಡವಳಿಕೆ, ನನ್ನ ಹೆಂಡತಿ ಕಣ್ಣಿಗೆ ಹ್ಯಾಗೆ ಕಂಡಿರಬಹುದು ಅಂತ ಯೋಚನೆ ಮಾಡಕ್ಕೆ ಶುರುಮಾಡಿದೆ ಕಣಯ್ಯ. ಆವಾಗ ನನಗೆ ಹೊಳೆದಿದ್ದು ಒಬ್ಬ ಹೆಣ್ಣಿನ ದೃಷ್ಟಿಕೋನದಲ್ಲಿ ಗಂಡಸನ್ನ ಅಳೆಯೋ ಪ್ರಯತ್ನ ಮಾಡಿದರೆ ಹೇಗೆ ಅಂತ. ಆ ಹೊಳಹು ಇಟ್ಕೊಂಡೇ ಮುಂದೆ ನಾನು 'ಮೋಡಗಳು' ನಾಟಕ ಬರೆದಿದ್ದು...'

'ಮೋಡಗಳು' -ನಾಟಕ ಕ್ಷೇತ್ರಕ್ಕೇ ಹೊಸ ಬಿಸಿ ತಂದ ನಾಟಕ. ಇಲ್ಲಿನ ಮತ್ತು ಹೊರದೇಶದ ಹಲವಾರು ಭಾಷೆಗಳಿಗೂ ತರ್ಜುಮೆಯಾಗಿ, ಗುರುಗಳಿಗೆ ಇನ್ನೊಮ್ಮೆ ಅಂತಾರಾಷ್ಟ್ರೀಯ ಖ್ಯಾತಿ ತಂದ ಕೃತಿ. ಗುರುಗಳು ಈಗ ಗುಟ್ಟು ಬಿಟ್ಟುಕೊಟ್ಟ ಮೇಲೆ, ಅರೆತ್ತೇರಿ! ಸೃಷ್ಟಿಯ ಮೂಲಗಳು ಎಂಥೆಂಥದಿರಬಹುದಪ್ಪ ಎಂದು ಬೆರಗಾಗಿ ಕೂತೆ. ಗುರುಗಳು ನಕ್ಕು,

'ಏನಯ್ಯಾ ಯೋಚನೆ ಮಾಡ್ತಿದೀಯಾ? 'ಮೋಡಗಳು' ನಾಟಕ ಹುಟ್ಟಿದ್ದು ನನ್ನ ಒಳ್ಳೆತನದಿಂದಲ್ಲ, ಕೆಟ್ಟತನದಿಂದ ತಾನೇ? ಅಷ್ಟೇ ಯಾಕೆ, ಆವತ್ತು ಉಡುಪೀಲಿ ರತಿ ಕೊಟ್ಟಳಲ್ಲ ಆ ಅಮೋಘ ಅಭಿನಯ - ಅದರ ಮೂಲಾನೂ ಸಣ್ಣತನ, ಅಸೂಯೆ ಅಲ್ವೇನಯ್ಯ?...' ಅನ್ನುವ ವಿಚಿತ್ರ ಪ್ರಶ್ನೆ ಮುಂದಿಟ್ಟರು.

ಕಥೆ ಇಷ್ಟಕ್ಕೇ ನಿಲ್ಲಿಸಿ ಗುರುಗಳು ಬೇರೆ ಏನೇನೋ ಮಾತಾಡಿ ಎದ್ದುಹೋದರು. ಆದರೆ ಅದುವರೆಗೆ ಬಾಯಿಬಿಟ್ಟುಕೊಂಡು ರೋಚಕ ವೃತ್ತಾಂತಕ್ಕೆ ಅಣಿಯಾಗಿದ್ದ ನನ್ನ ಗೆಳೆಯರಿಗೆ ಸಮಾಧಾನವಾಗಲು ಸಾಧ್ಯವೇ? ಗುರುಗಳು ಹೇಳಿದ್ದರಲ್ಲಿ ಕಥೆ ಅಂತ ಎಲ್ಲಿದೆ? ಎಲ್ಲ ಅರ್ಥಂಬರ್ಥ ಎಂದು ಗೊಣಗುತ್ತ ಅಲ್ಲಲ್ಲೇ ಬಿದ್ದು ನಿದ್ದೆ ಹೋದರು. ಆದರೆ ಈ ಕಥೆ ಹೇಳಬೇಕಾದ ನನಗಾದರೂ ಸಮಾಧಾನ ಆಗಬೇಡವೇ?


ಅದಕ್ಕೇ ನನಗೆ ಗೊತ್ತಿದ್ದಷ್ಟು ಹೇಳಿ ಮುಗಿಸುತ್ತೇನೆ.

ಗುರುಗಳು ಮುಂದಕ್ಕೂ ಎಷ್ಟೋ ತಾತ್ಕಾಲಿಕ ಪ್ರಣಯ ಸಂಬಂಧಗಳನ್ನು ಹೊಕ್ಕು ಹೊರಬಂದರೂ, ಈ ರತಿಯ ವೃತ್ತಾಂತದ ಕಾಲಕ್ಕೆ ಅವರಿನ್ನೂ 'ಶುದ್ಧ'ವಾಗಿದ್ದರು. ಆದರೆ ಒಂದು ವರ್ಷದ ನಂತರ ರತಿ ಅವರ ಪ್ರೇಯಸಿಯೇ ಆದಳು; ಮತ್ತು ಅದನ್ನೇ ಗುರುಗಳು 'ಸರಳ ವಿಷಯ' ಅಂದಿದ್ದು.

ಅತ್ತ, ತನ್ನ ದೇಹ-ಆತ್ಮಗಳಿಗೆ ತಾನೊಬ್ಬಳೇ ವಾರಸುದಾರಳೆಂಬಂತೆ ಬದುಕಿದ್ದ ರತಿ ತನಗಿಷ್ಟ ಬಂದವರ ಜತೆ ಅಪಾಯದ ಪ್ರೇಮ ಸಾಹಸಗಳನ್ನು ಮೈಮೇಲೆ ಎಳೆದುಕೊಂಡಳು. ಒಲಿದವರನ್ನು ತೆಕ್ಕೆಗೆಳೆದು, ಬೇಸರ ಬಂದಾಗ ಅವರನ್ನೇ ಒದ್ದು ದೂರ ಮಾಡಿದಳು. ಗುರುಗಳ ಜತೆ ಸಂಬಂಧ ಗಾಢವಾದಾಗಲೂ ಅವಳಿಗೆ ಇನ್ನೊಬ್ಬರೊಡನೆ ನಂಟು ಇತ್ತು ಎಂಬ ಸುದ್ದಿಗಳಿವೆ. ಅಂತೂ ಎಲ್ಲಿ ಏನು ಅನಾಹುವಾಯಿತೋ, ರತಿ ಆರು ತಿಂಗಳ ಹಿಂದೆ ನಿದ್ದೆ ಮಾತ್ರೆ ತಿಂದು ಆತ್ಮಹತ್ಯೆ ಮಾಡಿಕೊಂಡಳು.


ನನಗೆ ತಿಳಿದ ಮಟ್ಟಿಗೆ ಅದಕ್ಕೆ ಗುರುಗಳೇನೂ ಕಾರಣವಾಗಿರಲಿಲ್ಲ. ಆದರೆ ಅವರಂತೂ ಇಂದಿಗೂ ಆ ಪಾಪಪ್ರಜ್ಞೆಯಿಂದ ಹೊರಬಂದಿಲ್ಲ. ಮತ್ತು ಸದ್ಯಕ್ಕಂತೂ ಅವರು ಆ ವಿಷಯ ಬಾಯಿಬಿಡುವವರೂ ಅಲ್ಲ...

ಇಷ್ಟು ಹೇಳಿಯೂ ಈ ಕಥೆ ಅಪೂರ್ಣ ಅನಿಸಿದರೆ, ದಯವಿಟ್ಟು ಕ್ಷಮಿಸಿ ಬಿಡಿ.




ನೋಡಯ್ಯ, ನೀನು ಬರಹಗಾರ ಆಗಬೇಕು ಅಂತೀಯಾ. ಅದಕ್ಕೆ ಹೇಳ್ತೀನಿ ಬರಹಗಾರ ಒಂದು ಅನುಭವಾನ ಎದುರಿಸೋವಾಗ, ಅದಕ್ಕೆ ನಿರ್ಲಿಪ್ತನಾಗ ಅವನಿಗೆ ಪಾಪ, ಪುಣ್ಯ ಇಲ್ಲ.


ಎನ್. ಎಸ್. ಶಂಕರ್



ಸುಮಂಗಲಾ ಬಾದರದಿನ್ನಿ

ಭಂಯ್ಯಾ... ಭಂಯ್ಯಾ...





ಆಫೀಸಿನಿಂದ ಬಂದು ಇನ್ನೂ ಸೀರೆ ಕಳೆದಿರಲಿಲ್ಲ... ಗೇಟಿನಲ್ಲಿ ಮಗನ ಅಳುಧ್ವನಿ...

''ಎಂತ ಆಯ್ತೋ...?'' ಗೇಟ್ ಹತ್ತಿರ ಓಡಿದಳು.

''ಅಂವ...ಸಾಗರ್ ಜೋರಾಗಿ ಚೂಟಿದ ಇಲ್ಲಿ.''

ಕುತ್ತಿಗೆಯ ಬಳಿ ತೋರಿಸುತ್ತ ಅಳುತ್ತಿರುವ ಮಗ. ಅವಳು ಗೇಟ್ ತೆರೆದು ನೋಡಿದರೆ ನಾಲ್ಕಾರು ಮನೆದಾಟಿ ನಡೆದಿದ್ದ ಆ ಹುಡುಗ. ವಿಚಾರಿಸುವ ಎಂದುಕೊಂಡವಳೇ,

''ಸಾಗರ್...ಏ...ಸಾಗರ್'' ಜೋರು ಧ್ವನಿಯಲ್ಲಿ ಕರೆದಳು. ಇವಳ ಧ್ವನಿ ಕೇಳಿದ್ದೇ ಬೈಯ್ತಾರೆ ಅನ್ನಿಸಿತೇನೋ....ತಿರುಗಿ ನೋಡದೆ ತನ್ನ ಮನೆಯತ್ತ ಓಡಿದ. ಗೇಟ್ ಹಾಕುತ್ತ ಮಗನತ್ತ ತಿರುಗಿದಳು. ''ಅವನು ಚೂಟಬೇಕಿದ್ರೆ ನೀನೆಂತ ಮಾಡ್ತಿದ್ದೆ...? ನಿಂಗೆ ಕೈಯಿಲ್ಲವಾ... ನೀನು ಅವನನ್ನ ಆ ಕಡೆ ಜೋರಾಗಿ ನೂಕಬೇಕಿತ್ತು.''

''ನೂಕಿದೆ. ಅಂದ್ರೂ ಅಂವ ಮೇಲೆ ಬಿದ್ದು ಚೂಟಿದ.''

ಮತ್ತೆ ಮಗನ ಅಳು.

''ಇನ್ಮೇಲೆ ಅವನು ಹಾಗೆ ಚೂಟಲಿಕ್ಕೆ ಬಂದ್ರೆ ಜೋರಾಗಿ ಒಂದು ಒದಿ... ಒಂದೆರಡು ಹೊಡಿ. ಅವಾಗ್ಲೇ ಏನಾದ್ರೂ ಮಾಡು. ಆದ್ರೆ ಮನೆಗೆ ಜಗಳ ತಂದು ಅಳಬೇಡ'' ಸಿಟ್ಟಿನಿಂದ ಗದರಿದಳು. ''ಮತ್ತೆ, ಒಂದ್ ಕೆನ್ನಿಗೆ ಹೊಡೆದ್ರೆ ಇನ್ನೊಂದು ಕೆನ್ನೆ ಕೊಡ್ಬೇಕಂತ ಪಾಠದೊಳಗೆ ಇದೆಯಲ್ಲಮ್ಮಾ'' ಮಗ ಇನ್ನೂ ಅಳುಧ್ವನಿಯಲ್ಲೇ ಇದ್ದ.

''ಹಾಂ.... ಪಾಠದೊಳಗೆ ಇದೆ. ಆದ್ರೆ...'' ತಟ್ಟನೆ ಅಲ್ಲೇ ನಿಂತಳು. ತಾನು ಹೀಗೆ ಒಂದು ಕೆನ್ನೆಗೆ ಹೊಡೆವವರಿಗೆಲ್ಲ ಇನ್ನೊಂದು ಕೆನ್ನೆಯನ್ನು ಕೊಟ್ಟೇ ತಾನೆ... ಈ ಸ್ಥಿತಿಗೆ ಬಂದಿರೋದು...''ಅದೆಲ್ಲಾ ಮೊದ್ಲು ಪುಟ್ಟಾ. ಈಗೆ...ಈಗ ಹಾಗಲ್ಲ. ಒಂದು ಹೊಡೆದವರಿಗೆ ವಾಪಾಸು ಎರಡು ಹೊಡೆದ್ರೇನೇ ನಮ್ಮ ಸುದ್ದಿಗೆ ಇನ್ನೊಮ್ಮೆ ಬರೋದಿಲ್ಲ.'' ಯಾಕೋ ಗಂಟಲುಬ್ಬಿ ಬರ್ತಿದೆ. ಮತ್ತೆ ಮಾತನಾಡದೆ ಇಬ್ರೂ ಒಳಬಂದರು. ಮಗನ ಯೂನಿಫಾರ್ಮ್ ತೆಗೆದು, ಶೂಸ್ ಕಳಚಿ, ಮುಖ ತೊಳೆಸಿ, ಹಾಲು ಕೊಟ್ಟು, ತನಗೆಂದು ಕಾಫಿ ಬಿಸಿಗಿಟ್ಟುಕೊಂಡು ತಲೆಬಾಚಿಕೊಳ್ಳಲು ಕನ್ನಡಿ ಮುಂದೆ ನಿಂತವಳಿಗೆ ''ಅರೆ...ಯಾಕೋ ಹೊಟ್ಟೆ ಸ್ವಲ್ಪ ದಪ್ಪ ಕಾಣ್ತದೆಯಲ್ಲ...ಬೊಜ್ಜು ಬರ್ತಾ ಇದೆಯಾ'' ಎನ್ನಿಸತೊಡಗಿದ್ದೇ ಬಾಚಣಿಗೆ ಕೈಬಿಟ್ಟು ಮತ್ತೆ ಮತ್ತೆ ಹೊಟ್ಟೆ ಸವರಿಕೊಂಡಳು. ಹಾಲು ಕುಡಿದು ಸೀರೆಗೆ ಬಾಯಿ ಒರೆಸಿಕೊಳ್ಳುತ್ತ, ಇವಳ ಹೊಟ್ಟೆಗೆ ಆತುಕೊಳ್ಳುತ್ತ ನಿಂತ ಮಗ

''ಅಮ್ಮನ ಹೊಟ್ಟೆ ದಪ್ಪ ಆಗ್ತಿದೆ... ಇನ್ನೊಂದು ಪಾಪಾ ಬರುತ್ತೆ...'' ರಾಗವಾಗಿ ಹೇಳಿದ.

''ಸರಿಯೋ... ಇನ್ನೊಂದು ಪಾಪಾನೂ ಇಲ್ಲ ಎಂತದೂ ಇಲ್ಲ.'' ಹುಸಿಮುನಿಸಿನಿಂದ ಮಗನನ್ನು ಮೆಲ್ಲನೆ ನೂಕಿ, ಖುರ್ಚಿಯಲ್ಲಿ ಕುಳಿತಳು. ಮತ್ತೆ ಇವಳ ಹತ್ತಿರ ಬಂದ ಮಗ. ತೊಡೆ ಮೇಲೆ ಮುಖವಿಟ್ಟು ಬಾಗಿ ನಿಂತು,

''ಅಮ್ಮಾ...ಮದುವೆಯಾದ್ಮೇಲೆ ಮಕ್ಳು ಹುಟ್ಟತಾರಾ?''

''ಹೂಂ''

''ಹೆಂಗಮ್ಮಾ?'' ಧ್ವನಿಯಲ್ಲಿ ತುಂಬಿ ತುಳುಕುವ ಕುತೂಹಲ.

''ಹೆಂಗೇ ಅಂದ್ರೆ... ಹಂಗೇ.'' ಚಿಕ್ಕ ನಿಟ್ಟುಸಿರು.

''ಹಂಗೇ ಅಂದ್ರೆ, ಹೆಂಗಮ್ಮಾ?'' ತಿಳಿದು ಕೊಳ್ಳುವ ಅದಮ್ಯ ಕುತೂಹಲ... ಜೊತೆಗೆ ಅಮ್ಮ ಹೇಳಲೇಬೇಕೆಂಬ ಒತ್ತಾಯ. ''ಡಾಕ್ಟ್ರು ಒಂದು ಇಂಜೆಕ್ಷನ್ ಕೊಡ್ತಾರೆ. ಆಮೇಲೆ ಹೊಟ್ಟೆ ದಪ್ಪ ಆಗುತ್ತೆ. ಆಮೇಲೆ ಮಗು ಹುಟ್ಟುತ್ತೆ.''

''ಮತ್ತೆ ಮದುವೆಗಿಂತ ಮುಂಚೆ ಯಾಕ್ ಕೊಡಂಗಿಲ್ಲ?''

''ಯಾಕೆಂದ್ರೆ....ಯಾಕೆಂದ್ರೆ ಆ ಪಾಪುಗೊಂದು ಪಪ್ಪ ಬೇಕು ಅಲ್ಲವಾ. ಮದುವೆಗಿಂತ ಮುಂಚೇನೆ ಆದ್ರೆ ಪಪ್ಪ ಇರಲ್ಲ ನೋಡು... ಅದಕ್ಕೆ...''

''ಪಪ್ಪ ಯಾಕೆ ಬೇಕು ಅಮ್ಮಾ...''

''ಯಾಕೆ ಅಂದ್ರೆ...'' ಮತ್ತೊಂದು ಚಿಕ್ಕ ನಿಟ್ಟುಸಿರು.

ಮತ್ತೆ ಪಟ್ಟನೆ ಉತ್ತರಿಸಿದಳು.

''ಪಾಪುಗೆ ಅಂಗಿ ಚೆಡ್ಡಿ ತರಲಿಕ್ಕೆ, ಆಟದ ಸಾಮಾನು ತರಲಿಕ್ಕೆ, ಹುಷಾರಿಲ್ಲಿದ್ರೆ ರಾತ್ರಿ ಡಾಕ್ಟ್ರನ್ನ ಕರ್ಕಂಡು ಬರಲಿಕ್ಕೆ, ಆಮೇಲೆ ಸ್ಕೂಲಿಗೆ ಕಳಿಸಕ್ಕೆ, ಸ್ಕೂಲಿನ ಯೂನಿಫಾರ್ಮ್, ಶೂಸ್ ಎಲ್ಲ ತರಕ್ಕೆ... ಪಾಪು ಜೊತೆ ಆಡಲಿಕ್ಕೆ, ಮುದ್ದು ಮಾಡಲಿಕ್ಕೆ, ಎಲ್ಲದಕ್ಕೆ ಒಂದು ಪಪ್ಪ ಬೇಕು ಅಲ್ವಾ...''

''ಮತ್ತೆ... ಮತ್ತೆ ನಂಗೆ ಪಪ್ಪ ಯಾಕಿಲ್ಲ...'' ಈಗ ಮಾತ್ರ ಮಗುವಿನ ಧ್ವನಿಯಲ್ಲಿ ನೋವಿನ ಎಳೆ ಕೂಡ ಇತ್ತು. ಅವಳು ತಕ್ಷಣ ಅದನ್ನು ಗುರುತಿಸಿದಳು. ಮಗನನ್ನು ಹತ್ತಿರಕ್ಕೆಳೆದುಕೊಂಡು ಮುದ್ದಿಸಿದಳು.

''ಪಪ್ಪ ಮಾಡೋ ಕೆಲ್ಸ ಎಲ್ಲ ನಾನೇ ಮಾಡ್ತೀನಲ್ಲವಾ ಪುಟ್ಟಾ?''

''ಹಂಗಾರೆ...ನೀನು ಮದುವೆಗಿಂತ ಮುಂಚೇನೇ ಇಂಜಿ ಮಾಡ್ಸಿಕಂಡೆಯಾ...?''

ಮತ್ತೆ ಮಗನ ಪ್ರಶ್ನೆ. ಎಂತ ಹೇಳುವುದು ಈ ಐದೂವರೆ ವರ್ಷದ ಮಗನಿಗೆ... ಹೊಟ್ಟೆಯಿಂದ ಒತ್ತಿಕೊಂಡು ಬಂದ ಸಂಕಟ... ಫಕ್ಕನೆ ಉದುರಿದ ಎರಡು ಹನಿ ಕಣ್ಣೀರು. ಅಮ್ಮನ ಕಣ್ಣಲ್ಲಿ ನೀರು ನೋಡಿದ ಮಗು ಸುಮ್ಮನಾಯಿತು. ಕಣ್ಣೀರು ಒರೆಸಿಕೊಂಡು, ಮಗನನ್ನು ಮುದ್ದಿಸಿ, ಆಟ ಆಡಲಿಕ್ಕೆ ಕಳಿಸಿದಳು. ಮತ್ತೊಮ್ಮೆ ಕಾಫಿ ಕುಡಿದು, ಕಸಹೊಡೆದು, ಬೆಳಗಿನ ಪಾತ್ರೆ ತೊಳೆದು, ಎಲ್ಲ ಕೆಲಸ ಮುಗಿಸಿ ಕುಳಿತವಳಿಗೆ ಯಾಕೋ ಸುಸ್ತು ಎನ್ನಿಸಿ ಸ್ವಲ್ಪ ಮಲಗುವ ಎಂದು ಹಣೆಗೊಂದಿಷ್ಟು ಝುಂಡುಬಾಮ್ ಸವರಿಕೊಳ್ಳುತ್ತ ಮಲಗಿದವಳ ಕಣ್ಣ ಮುಂದೆ ಮತ್ತೆ ಅದೇ ಮಗನ ಪ್ರಶ್ನೆಗಳು... ತನಗೇ ಉತ್ತರ ಸಿಗದ ಎಷ್ಟೋ ಪ್ರಶ್ನೆಗಳು... ಉತ್ತರ ಹುಡುಕಲು ಹೊರಟರೆ ಒಂದು ಶೂನ್ಯದ ಹೊರತಾಗಿ.... ಶೂನ್ಯದೊಳಗೆ ತುಂಬಿಕೊಂಡ ಅನಂತ ವಿಷಾದದ ಹೊರತಾಗಿ ಮತ್ತೇನೂ ಸಿಗುವುದಿಲ್ಲ. ಯೋಚಿಸುತ್ತ ಅವಳು ಮಲಗಿದಾಗಲೇ ಆಟ ಮುಗಿಸಿ ಮಗ ಬಂದ. ಭಯ್ಯಾ ಭಯ್ಯಾ... ಅಂತ ತಪ್ಪುತಪ್ಪಾಗಿ ಹಾಡುತ್ತಲೇ ಒಳ ಬಂದವನು ''ಅಮ್ಮಾ.... ಭಯ್ಯಾ ಅಂದ್ರೆ ಏನು ಗೊತ್ತಾ?'' ಎಂದ.



''ಊಹೂಂ... ಏನೋ... ನಿಂಗೊತ್ತಾ...?''

''ಹೂಂ. ಅವರೆಲ್ಲ ಆ ಟ್ರೇನ್ ಮೇಲೆ ಹತ್ತಿ ಹಾಡ್ತಾಹೋಗ್ತಿರ್ತಾರೆ. ಆವಾಗ ಅಲ್ಲೊಂದು ಸಣ್ಣ ಕತ್ತೆ ಮರಿ ಹೋಗ್ತಿರುತ್ತೆ. ಅದ್ನ ನೋಡಿ ಅವರಿಗೆಲ್ಲ ಖುಷಿಯಾಗಿ ಭಯ್ಯಾ ಭಯ್ಯಾ ಭಯ್ಯಾ ಭಯ್ಯಾ'' ಅಂತ ಹಾಡ್ತೇಲ್ತಾರೆ. ಭಯ್ಯಾ ಅಂದ್ರೆ ಸಣ್ಣ ಕತ್ತೆ ಮರಿ'' ತನ್ನ ಬಾಲ ಭಾಷೆಯಲ್ಲಿ ಮಗ ವಿವರಿಸಿದಾಗ ಅವಳಿಗೆ ನಗು ಬರದಿರಲಿಲ್ಲ.

''ಹೂಂ ಹೂಂ... ಭಯ್ಯಾ ಅಂದ್ರೆ ಕತ್ತೆ ಮರಿ... ನಿನ್ನ ಶಾರೂಕ್‌ಖಾನ್ ಆ ಕತ್ತೆ ಮರಿಯನ್ನೇ ಮುದ್ದು ಮಾಡ್ತಾನೇನೋ'' ಜೋರಾಗಿ ನಕ್ಕಳಾಕೆ.

''ಹೂಂ ಮತ್ತೆ'' ಮಗನೂ ನಕ್ಕ. ಆಟ ಆಡಿ ಮಣ್ಣಾಗಿದ್ದ ಕೈಗಳಿಂದ ಅವಳ ಮುಖ ಸವರುತ್ತ ಮತ್ತೆ ಮತ್ತೆ ನಕ್ಕ. ''ಏ...ಆ ಹೊಲಸು ಕೈಯಲ್ಲಿ ಮುಖ ಮುಟ್ಟಬೇಡ ಪುಟ್ಟಾ. ಹೋಗು... ಕೈ ಕಾಲು ತೊಳ್ಕೊಂಡು ಬಾ'' ಗದರಿದಳು. ಅವಳು ಮತ್ತೆ ಖುಷಿಯಾದಳು. ಇದೊಂದು ಪುಟ್ಟ... ಬೆಚ್ಚನೆಯ ಪ್ರಪಂಚ; ತನ್ನ ಮತ್ತು ತನ್ನ ಮಗನದು. ಇದೊಂದು ಪುಟ್ಟ ದಿಗಂತ... ತಾವಿಬ್ಬರೇ ರೆಕ್ಕೆಯಗಲಿಸಿ ಹಾರುವ ನೀಲಿ ದಿಗಂತ... ಇದೊಂದು ಪುಟ್ಟ ಸಾಗರ... ಅದರ ತುಂಬ ತಮ್ಮಿಬ್ಬರದೇ ಪ್ರೀತಿಯ ಜಲ... ಹೀಗೆ ಅವಳು ಲಹರಿಯಲ್ಲಿದ್ದಾಗಲೇ ಕೈಕಾಲು ಮುಖ ತೊಳೆದು ಮಗ ಬಂದ. ಅವನು ಪ್ರಶ್ನೆಗಳ ಗಂಟೊಂದನ್ನು ತನ್ನೊಳಗೆ ಇಟ್ಟುಕೊಂಡು ತಳಮಳಿಸುತ್ತಿರುವ ಹಾಗೆ... ಊಹೂಂ... ಅವನೊಳಗೆ ಪ್ರಶ್ನೆಗಳ ಗಂಟಲ್ಲ... ಅವನೇ ಒಂದು ಓಡಾಡುತ್ತಿರುವ ಪ್ರಶ್ನೆಗಳ ಮೂಟೆಯಂತೆ ಅನ್ನಿಸಿ, ತನ್ನ ಅನ್ನಿಸಿಕೆಗೆ ತಾನೇ ನಕ್ಕಳು.

''ಯಾಕಮ್ಮ ಮಲಕ್ಕೊಂಡೆ...?'' ಪ್ರಶ್ನೆಯಲ್ಲಿ ಸ್ವಲ್ಪ ಕಾಳಜಿ ಕೂಡ ಬೆರತಂತಿತ್ತು.

''ಬೆಳಿಗ್ಗೆಯಿಂದ ಆಫೀಸಿನಲ್ಲಿ ಕೂತು ಕೆಲಸ ಮಾಡಿ ಸೊಂಟ ನೋಯ್ತಿದೆ ರಾಜ.''

''ನಾನೂ ಸ್ಕೂಲಲ್ಲಿ ಕೂತ್ಗಂಡು ಬರೀತಿದ್ದೆ. ಮತ್ತೆ ನಂಗೆ ಸೊಂಟ ನೋಯಲ್ಲ... ನಿಂಗೆ ಯಾಕೆ ನೋಯುತ್ತಮ್ಮಾ?'' ಶುರುವಾಯಿತು ಪ್ರಶ್ನೆಯ ಮಳೆ.

''ನಂಗೆ ವಯಸ್ಸಾಯ್ತಲ್ಲ ಪುಟ್ಟಾ... ಅದಕ್ಕೇ ನೋಯುತ್ತೆ.''

''ಶೀss...ಇಲ್ಲ ಹೋಗಮ್ಮಾ'' ಮಗ ತಾನೂ ಮಂಚದ ಮೇಲೆ ಇವಳ ಹತ್ತಿರಕ್ಕೆ ಕುಳಿತುಕೊಳ್ಳುತ್ತ ಹೇಳಿದ.

''ಯಾಕೋ... ನಂಗೆ ವಯಸ್ಸಾಗಿಲ್ಲವಾ... ನೋಡು ತಲೆಕೂದಲು ಎಲ್ಲ ಬೆಳ್ಳಗಾಗ್ತಿದೆ...''

''ಊಹೂಂ...ಇಲ್ಲ...'' ಕುತ್ತಿಗೆಯ ಬಳಿ ಮುಖವಿರಿಸಿ ಮುದ್ದಾಗಿ ಹೇಳಿದ. ನಸುನಕ್ಕು ಸುಮ್ಮನಾದಳು.

''ಅಮ್ಮಾ... ಅವತ್ ಆ ಕೊನೇ ಮನೆ ಅಜ್ಜಿ ತೀರಿಕೊಂಡ್ರಲ್ಲ... ಹೆಂಗಮ್ಮಾ...?'' ಮಗ ಮತ್ತೆ ಹೊಸ ಪ್ರಶ್ನಾವಳಿ ಪ್ರಾರಂಭಿಸಿದ ಎಂದುಕೊಂಡಳು.

''ಅಜ್ಜಿಗೆ ವಯಸ್ಸಾಗಿತ್ತು.''

''ವಯಸ್ಸಾದ್ಮೇಲೆ ನಾವೂ ಸಾಯ್ತೀವಾ ಅಮ್ಮಾ?''

''ಹೂಂ''

''ನಿಂಗೆ ಹಂಗಾರೆ ವಯಸ್ಸಾಗೋದೇ ಬೇಡ.'' ಮಗನ ಧ್ವನಿಯಲ್ಲೀಗ ಭಯದ ಸಣ್ಣ ಕಂಪನ.

ಮತ್ತೆ ಹೂಂಗುಟ್ಟಿ ಮಗನ ತಲೆ ಸವರಿದಳು. ತುಸು ಹೊತ್ತು ಬಿಟ್ಟು ಮಗನನ್ನು ಸರಿಸಿ ಏಳುತ್ತ ''ಸರಿ ಆ ಕಡೆ. ಅಡಿಗೆಗಿಡ್ತೀನಿ'' ಎಂದಳು.

''ಟಿ.ವಿ. ಹಾಕಿಕೊಡಮ್ಮ.''

ಸ್ವಿಚ್ ಹಾಕಿ ಅಡಿಗೆ ಮನೆಗೆ ನಡೆದಳು. ಕುಕ್ಕರ್ ಜೋಡಿಸಿಟ್ಟು ತುಸು ಹೊತ್ತು ಬಿಟ್ಟು ಹೊರಗೆ

ಬಂದಾಗ ಟಿ.ವಿ.ಯಲ್ಲಿ ಯಾವುದೋ ಛಾನಲ್‌ನಲ್ಲಿ ಯಾವುದೋ ಸಿನಿಮಾ ಬರ್‍ತಿತ್ತು.

''ಅರೆ ಮಧುಬಾಲ... ಎಷ್ಟ್ ಚೆಂದ ಇದಾಳೆ... ಎಷ್ಟ್ ಚೆಂದ ಸೀರೆ ಉಟ್ಟಿದಾಳೆ...'' ನೋಡುತ್ತ ಜೋರಾಗಿಯೇ ಉದ್ಗರಿಸಿದಳು.

''ಅವಳು ಚೆನ್ನಾಗಿಲ್ಲ'' ಮಗ ಪಟಕ್ಕನೆ ಹೇಳಿದಾಗ ತುಸು ಅಚ್ಚರಿಯೆನಿಸಿತು ಅವಳಿಗೆ. ಯಾಕೆಂದ್ರೆ, ಅವನ ಧ್ವನಿಯಲ್ಲಿದ್ದದ್ದು ಒಂಥರಾ ಖಚಿತತೆ...

''ನಿಂಗೇನು ಗೊತ್ತಾಗುತ್ತೆ..ಮಹಾ...'' ನಕ್ಕಳು.

''ಯಾಕೆ ಗೊತ್ತಾಗಲ್ಲ...ಎಲ್ಲ ಗೊತ್ತಾಗುತ್ತೆ'' ಮಗ ಅವಮಾನಗೊಂಡಂತೆ ಹೇಳಿದ.

''ಹಾಂ...ಎಲ್ಲಾ ಗೊತ್ತಾಗುತ್ತಾ... ಸರಿಯಪ್ಪಾ... ನಾನು ಚೆಂದ ಇದೀನೋ... ಅವಳೋ...ಹೇಳು ಹಾಗಾದ್ರೆ...''

''ನೀನೇ ಚೆಂದ ಇದೀಯ''. ತಾನು ಕುಳಿತಲ್ಲಿಂದ ಎದ್ದು ಬಂದು ಇವಳ ಕೊರಳಿಗೆ ಜೋತುಬಿದ್ದಾಗೆಲ್ಲ ಚಿಕ್ಕವಳಿದ್ದಾಗ ಜಾತ್ರೆಯಲ್ಲಿ ತೆಗೆದುಕೊಂಡ ಮುತ್ತಿನ ಸರ... ಸರದಲ್ಲಿ ಜೋತುಬಿದ್ದಿದ್ದ ಸರಕ್ಕಿಂತ ಸುಂದರ ಪದಕ... ದಿನಗಳೆದು ಮುತ್ತುಗಳ ಮೇಲಿನ ಹೊಳಕೆ ಕಿತ್ತಿದರೂ ಹೊಳಪು ಮಾಸದ ಆ ಪದಕ ನೆನಪಾಗಿ ಬಣ್ಣಗೆಟ್ಟಂತೆ ತೋರುವ ಹಗಲು-ಸಂಜೆಯ ಮುತ್ತಿನಮಣಿಗಳ ತನ್ನ ಸರದಲ್ಲಿ ಅವನು ಒಂದು ಸುಂದರ ಪದಕದಂತೆ ಎನ್ನಿಸುತ್ತಿತ್ತು.

''ನಾನು ಹ್ಯಾಗೆ ಚೆಂದ ಇದೀನಿ ಪುಟ್ಟಾ... ಅವಳು ಹೀರೋಯಿನ್ ಅಲ್ಲವಾ...ಅವಳೇ ಚೆಂದ ಇದಾಳೆ...'' ಅವಳೊಳಗೆ ಎದ್ದ ನೋವಿನ ಸುಳಿ... ಆ ಸುಳಿಯಿಂದ ಎದ್ದ ಚಿಕ್ಕದೊಂದು ನೆನಪಿನ ನೀರಗುಳ್ಳೆ... ''ನೀನಂತೂ ಚೆನ್ನಾಗಿಲ್ಲ. ಯಾರೂ ನಿನ್ನ ಮುಖ ನೋಡಿ ಪ್ರೀತಿಸಲಿಲ್ಲ, ಅಂದ್ರೆ ನನ್ನನ್ನೂ ಯಾರೂ ಪ್ರೀತಿಸಬಾರ್ದೇನೆ? ನಿಂಗೆ ಹೊಟ್ಟೆಕಿಚ್ಚು ಅಷ್ಟೆ.''

ತನ್ನನ್ನು ಪ್ರೀತಿಸಿದವನನ್ನು ಮದುವೆಯಾಗುವ ಮುಂಚೆ ತಂಗಿ ಕೇಳಿದ ಪ್ರಶ್ನೆ.

''ಹೆಂಗೆ ಅಂದ್ರೆ, ಹಂಗೇ. ಹೋಗಮ್ಮಾ... ನಂಗೆ ನೀನೇ ಚೆಂದ.'' ಮತ್ತೆ ಮಗ ಹೇಳಿದ... ನೀರಿನ ಗುಳ್ಳೆ ಒಡೆಯಿತು. ಒಳಗೇ....ಸುಳಿ ಮಾಯವಾಗಿ ಬರೀ ನೀರಿನ ಅಲೆಗಳು. ಅವಳ ಮುಖವನ್ನೆಲ್ಲ ತನ್ನ ಪುಟ್ಟ ಪುಟ್ಟ ಬೆರಳಿನಿಂದ ಸವರುತ್ತ ಹೇಳಿದ. ಅವಳು ಜೋರಾಗಿ ನಕ್ಕಳು. ಆ ಪುಟ್ಟ ಪುಟ್ಟ ಬೆರಳುಗಳ ರೇಷ್ಮೆ ಸ್ಪರ್ಶ... ಅವಳ ಕಣ್ಣು, ಮೂಗು, ಕಿವಿ, ಕೆನ್ನೆ ಮೆಲ್ಲನೆ ಸವರುವಾಗ ಆ ಸ್ಪರ್ಶದಲ್ಲೇ ಎಲ್ಲ ಹೇಳುವ ವಾತ್ಸಲ್ಯದ, ಮಮತೆಯ ಭಾಷೆ.... ಎಲ್ಲ ಹೀಗೆಯೇ ಇರಲಿ... ಇಂಥದೊಂದು ಪ್ರೀತಿಯ ಗಾಳಿ ಸುಳಿದಾಡುತಿರಲಿ ಹೀಗೇ... ಅವಳು ತನ್ನೊಳಗೇ ಪ್ರಾರ್ಥಿಸಿಕೊಳ್ಳುವಾಗಲೇ ಮಗ ಮತ್ತೆ ಕೇಳಿದ.


''ಅಮ್ಮಾ... ನೀನು ಇಂಜಿ ಮಾಡಿಸಿಕೊಳ್ಳಲಿಕ್ಕೆ ಹೋಗಿದ್ಯಲ್ಲ... ಆವಾಗ ನೀ ಒಬ್ಬೇ ಹೋಗಿದ್ಯೋ ಅಥ್ವಾ ಪಪ್ಪಾನೂ ಜೊತೆಗಿದ್ರೋ?''

ಎಷ್ಟು ಜಾಣತನದಿಂದ ಕೇಳಿದ ಪ್ರಶ್ನೆ... ಅವಳಿಗೆ ಫಜೀತಿಗಿಟ್ಟುಕೊಂಡಿತು. 'ಜೊತೆಗಿದ್ರು ಅಂದ್ರೆ, ಈಗೆಲ್ಲಿ ಅಂತ ಕೇಳ್ತಾನೆ. ಹಾಗಾದ್ರೆ, ಇಲ್ಲ ಅನ್ನಲೇ.... ಹೇಗೆ ಹೇಳುವುದು ಇವನಿಗೆ... ಈ ಐದೂವರೆ ವರ್ಷದ ಮುಗ್ಧ ಮಗುವಿಗೆ... 'ಡಾಕ್ಟ್ರು ಇಂಜಿ ಕೊಡಲೂ ಇಲ್ಲ ಪಪ್ಪನೂ ಬೇಕಾಗಿರಲಿಲ್ಲ... ಪಪ್ಪ ಎಂಬ ವ್ಯಕ್ತಿಯೊಂದು ಜೊತೆಯಲ್ಲಿ ತನ್ನೊಡನೆ ನಾಲ್ಕು ಹೆಜ್ಜೆ ಹಾಕಲೂ ಇಲ್ಲ... ನೀನು ಅನಾಥಾಶ್ರಮದಿಂದ ತಂದ ಮಗು... ನೀನು ಹುಟ್ಟುತ್ತಲೇ ಏಕಾಂಗಿಯಾದವನು, ನಾನು ತಮ್ಮ, ತಂಗಿ ಎಲ್ಲರನ್ನು ಆ ದಡಕ್ಕೆ ಕಳಿಸಿದ ಮೇಲೆ ಈ ದಡದಲ್ಲಿ ಒಬ್ಬಂಟಿಯಾಗಿ ನಿಂತವಳು... ಈಗ ಈ ಬದುಕ ದೋಣಿಯಲ್ಲಿ ಒಬ್ಬರಿಗೊಬ್ಬರು ಆಸರೆಯಾದವರು... ಏನಂತ ಹೇಳಲಿ ಈ ಮಗುವಿನ ಮುಂದೆ?' ಯಾಕೋ ಸಂಕಟವೆನ್ನಿಸತೊಡಗಿತು.

''ಪುಟ್ಟಾ.... ನಿಂಗೆ ಪಪ್ಪಾ, ಅಮ್ಮಾ ಎಲ್ಲ ನಾನೆ. ಹಾಗೆಲ್ಲ ಹುಚ್ಚುಚ್ಚಾಗಿ ಕೇಳಬೇಡ ರಾಜ'' ಮತ್ತೆ ಫಳಕ್ಕನೆ ಕಣ್ಣಿನಿಂದ ಉದುರಿತು ನೀರು. ಮಗ ಸುಮ್ಮನಾದ. ''ಅಮ್ಮಾ.... ನೀನೇ ನಂಗೆ ಪಪ್ಪ, ಅಮ್ಮಾ ಎಲ್ಲ ಇದ್ದ ಹಾಗಾ?'' ಮತ್ತೆ ಕೇಳಿದ.

''ಹೂಂ ಪುಟ್ಟು'' ಧ್ವನಿ ಸ್ಥಿಮಿತಕ್ಕೆ ತಂದುಕೊಳ್ಳುತ್ತ ಹೇಳಿದಳು.

''ಹಂಗಾದ್ರೆ, ನೀ ಡಾಕ್ಟ್ರ ಹತ್ರ ಇನ್ನೊಂದು ಇಂಜಿ ಮಾಡಿಸ್ಕೋ. ಇನ್ನೊಂದು ಪಾಪ ಬರುತ್ತೆ. ಅದಕ್ಕೂ ನೀನೇ ಪಪ್ಪ, ಅಮ್ಮ ಆಗಿಬಿಡು. ನಂಗೂ ಒಂದು ತಂಗಿ ಬರುತ್ತೆ, ಆಟ ಆಡಕ್ಕೆ'' ಎಷ್ಟು ಸರಳವಾದ ಪರಿಹಾರ....



ಈ ಮಗುವಿಗೆಂತ ಗೊತ್ತು... ಹೊರಜಗತ್ತನ್ನು ಎದುರಿಸುವ ಸಂಕಟ... ಒಂದು ಮಗುವಿಗೇ ಇಷ್ಟೆಲ್ಲ ಗೋಳು, ಏನೆಲ್ಲ ಅಪವಾದ... ''ಬೇಡ ಪುಟ್ಟ. ನಂಗೆ ನೀನೊಬ್ಬನೇ ಸಾಕು'' ಮಗನನ್ನು ಬರಸೆಳೆದು ಬಿಗಿದಪ್ಪಿದಳು. ಈ ಬಾರಿ ಮಾತ್ರ ''ಯಾಕಮ್ಮಾ....'' ಅಂತ, ಮುಂದೇನೂ ಪ್ರಶ್ನಿಸದೆ ತನ್ನ ಪುಟ್ಟ ಎಳೆಯ ಕೈಗಳಿಂದ ಅವಳ ಕೊರಳನ್ನು ಮಗ ತಬ್ಬಿಕೊಂಡ. ಅವಳ ಕಣ್ಣಿನಿಂದ ದಳದಳನೆ ಇಳಿದ ನೀರು ಮಗನ ರೇಷ್ಮೆಕೂದಲಿನ ಮೇಲೆ ಬೀಳುತ್ತ.... ಒದ್ದೆಯಾಗುತ್ತ... ''ಏ ಅಮ್ಮಾ... ನನ್ನ ತಲೆ ಮೇಲೆ ಮಳೆ ಬರ್‍ತಿದೆಯಾ...'' ಅವಳ ಕೊರಳನ್ನು ತಬ್ಬಿಕೊಂಡಿದ್ದ ಒಂದು ಕೈ ತೆಗೆದು ತನ್ನ ತಲೆ ಮೇಲೆ ಪುಟ್ಟ ಬೆರಳಾಡಿಸುತ್ತ ಮಗ ಉದ್ಗರಿಸಿದ.

ಒಂದು ಬೆರಳನ್ನು ಬಾಯಿಗಿಟ್ಟು ನೋಡಿ


''ಅಮ್ಮಾ... ಉಪ್ಪುಪ್ಪ'' ಎನ್ನುತ್ತ ನಕ್ಕ.

''ಶೀss....ಗಲೀಜು ಪುಟ್ಟ ನೀನು'' ಅಳು ನಿಲ್ಲಿಸಿ ಅಕ್ಕರೆ ಉಕ್ಕಿ ನಕ್ಕಳಾಕೆ. ಮಳೆ ನಿಂತ ಮೇಲಿನ ಎಳೆಬಿಸಿಲು ಅಲ್ಲಿ ಹೊಳೆದಂತೆ.... ಹೊಂಬಿಸಿಲ ರೇಖೆಗಳು ಅವರಿಬ್ಬರನ್ನೂ ಆವರಿಸಿಕೊಂಡವು.



''ಹೂಂ ಮತ್ತೆ' ಮಗನೂ ನಕ್ಕ. [illegible] ಆಟ ಆಡಿ ಈ ಮಣ್ಣಾಗಿದ್ದ ಕೈಗಳಿಂದ ಅವಳ ಮುಖ ಸವರುತ್ತ ಮತ್ತೆ ಮತ್ತೆ ನಕ್ಕ.

ಸುಮಂಗಲ [illegible].



ಬುದ್ಧ ಕವಿತೆ

ಕೆ. ವಿ. ತಿರುಮಲೇಶ್

ಕಾವ್ಯ ಧಾರಾವಾಹಿ - 1

ಕಾಸರಗೋಡಿನಲ್ಲಿ ಹುಟ್ಟಿ, ಮೈಸೂರಿನಲ್ಲಿ ಓದಿ, ಕೆಲಕಾಲ ಕಾಸರಗೋಡಿನಲ್ಲಿ ಅಧ್ಯಾಪನ ಮಾಡಿ, ಈಗ ಮೂರು ದಶಕಗಳಿಂದ ಹೈದರಾಬಾದಿನಲ್ಲಿ ನೆಲೆಸಿರುವ ಕೆ.ವಿ. ತಿರುಮಲೇಶ್ ಕನ್ನಡದ ಬಹು ಮಹತ್ವದ ಕವಿ. 'ವಠಾರ', 'ಮುಖವಾಡಗಳು', 'ಮುಖಾಮುಖಿ', 'ಅವಧ', 'ಪಾಪಿಯೂ...' ಈ ಸಂಕಲನಗಳ ತಿರುಮಲೇಶ್, ತಮ್ಮದೇ ವಿಶಿಷ್ಟ ಪಾತ್ರ, ಚಿತ್ರ, ಪ್ರತಿಮೆ, ಲಯ, ರೂಪಕಗಳ ಮೂಲಕ, ಮನುಜವಿಶ್ವದ ತುಡಿತಗಳನ್ನು ಅನುಭವಕ್ಕೆ ತರುವ ಕವಿ. ಶ್ರೇಷ್ಠ ಕತೆ, ಕಾದಂಬರಿಕಾರರೂ ಆಗಿರುವ ಅವರ ಬಗ್ಗೆ ಈಚೆಗಷ್ಟೇ ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದಿರುವ ಸಂಕಿರಣ ಪುಸ್ತಕ, ಅವರ ಮಹತ್ವವನ್ನು ಸರಿಯಾಗಿಯೇ ಲಕ್ಷ್ಯಕ್ಕೆ ತಗೊಂಡಿದೆ. 'ಸುದ್ದಿಯಲ್ಲಿದ್ದವನೇ ಸಾಹಿತಿ' ಎಂಬ ಹೊಸ ವರಸೆಗೆ ವ್ಯತಿರಿಕ್ತವಾಗಿ, 'ತಾರನಾಕಾ, ಅಫಜಲ್ ಗಂಜ್, ಚೋಟೇಲಾಲ'ರ ಪ್ರಪಂಚವನ್ನು ಸೃಷ್ಟಿಸುತ್ತ-ದೂರದ ಹೈದರಾಬಾದಿನ ಮಿನಾರುಗಳ ನೆರಳಲ್ಲಿ, ತಮ್ಮ ಗಡ್ಡ, ಮಂದಸ್ಮಿತ, ಅಕ್ಕರೆಯ ಮಕ್ಕಳು ಸಿಂಧು ಅವಲೋಕಿತ, ಪ್ರೀತಿ ಸಂಯುಕ್ತಾ, ಅಪೂರ್ವ ಅಪರಿಮಿತ (ಇವರಿಬ್ಬರ ರೇಖಾಚಿತ್ರಗಳು 'ಭಾವನಾ'ದಲ್ಲಿ ಆಗಾಗ ಪ್ರಕಟವಾಗುತ್ತಿವೆ) ಮತ್ತು ಪತ್ನಿ ನಿರ್ಮಲಾರ ಜೊತೆ ವಾಸಿಸುತ್ತಿದ್ದಾರೆ.

ಈ ಸಂಚಿಕೆಯಿಂದ ತಿರುಮಲೇಶರ 'ಬುದ್ಧ ಕವಿತೆ'ಯನ್ನು ಕಾವ್ಯಧಾರಾವಾಹಿಯಾಗಿ ಆರಂಭಿಸುತ್ತಿದ್ದೇವೆ. ಹೀಗೊಂದು ಕವಿತೆಯನ್ನು ಧಾರಾವಾಹಿಯಾಗಿ ಪ್ರಕಟಿಸುವ ಅಪೂರ್ವ ಅವಕಾಶವನ್ನು ನಮಗೆ ಒದಗಿಸಿಕೊಟ್ಟಿರುವ ತಿರುಮಲೇಶರಿಗೆ ಕೃತಜ್ಞರಾಗಿದ್ದೇವೆ. ನಮ್ಮ ಕಾಲದ ತಲ್ಲಣಗಳನ್ನು ಸರಳ, ತೀವ್ರ, ಚಿತ್ರವತ್ತಾದ ನುಡಿಗಳಲ್ಲಿ ಹಿಡಿಯುವ 'ಬುದ್ಧ ಕವಿತೆ' ಉತ್ತರಗಳ ಹಂಗಿಲ್ಲದ ಪ್ರಶ್ನೆಗಳನ್ನು ಎತ್ತುತ್ತದೆ. ಇದು ನಿಮಗೂ, ಹೊಸ ಕವಿಗಳಿಗೂ ಸ್ಫೂರ್ತಿದಾಯಕ ಪುಟವಾಗಲಿ ಎಂದು ಹಾರೈಸುತ್ತೇವೆ.



ಯಾರಿದ್ದಾರೆ ಯಾರಿಲ್ಲ
ಆಸ್ಪತ್ರೇಲಿ ಡಾಕ್ಟರಿಲ್ಲ ಸ್ಕೂಲಲ್ಲಿ ಮಾಸ್ತರರಿಲ್ಲ
ಕೋಟೆಯಲ್ಲಿ ಕೊತ್ವಾಲ ಇಲ್ಲ
ಕಚೇರಿಯಲ್ಲಿ ಕ್ಲರ್ಕಿಲ್ಲ ದೇವಾಲಯದಲ್ಲಿ ದೇವರಿಲ್ಲ

ಯಾರಿಗ್ಹೇಳಲಿ ಏನು ಮಾಡಲಿ
ಬುದ್ಧನಿಗೇಳು

ಬಸ್ಸು ಬಂದರೆ ನಿಲ್ಲೋದಿಲ್ಲ
ನಿಂತ್ರೂ ಅದರಲ್ಲಿ ಸೀಟಿರೋದಿಲ್ಲ
ಆಟೋ ಗೀಟೋ ಯಾರಿಗಾಗುತ್ತೆ
ನಡೆದೂ ನಡೆದೂ ಸಾಕಾಗುತ್ತೆ
ರಸ್ತೆ ಕುದಿದು ದಾಮರಾಗುತ್ತೆ

ಬುದ್ಧನಿಗೇಳು

ನಲ್ಲಿಯೊಳಗೆ ನೀರಿಲ್ಲ
ಕೊಳವಿ ಬಾವಿ ವರ್ಕಾಗಲ್ಲ
ಶಾಪಿಗೆ ಸಕ್ರೆ ಬಂದೇ ಇಲ್ಲ
ಸೀಮೆಣ್ಣೆ ಸಿಗ್ತಾನೆ ಇಲ್ಲ
ಕರೆಂಟು ಈ ಕಡೆ ಇಲ್ವೇ ಇಲ್ಲ

ಯಾವ ಬುದ್ಧ ಎಲ್ಲಿ ಬುದ್ಧ
ಬುದ್ಧನಿಗೇಳು

★



ಬುದ್ಧ ಯಾಕೆ ಮಾತಾಡ್ತ ಇಲ್ಲ?
ಇದುವರೆಗೂ ಮಾತಾಡ್ತ ಇದ್ದ!

ಮಾತಾಡದಿರೋದೇ ಅವ್ಯಾಕತ
ವಚ್ಚಗೊತ್ತ ಗೊತ್ತ? ಅವ ಬಂದಿದ್ದ
ನಡೆದಾಡುವ ಸನ್ಯಾಸಿ

ಆತ್ಮಕ್ಕೆ ಸಾವಿದೆಯೆ, ಅಥವಾ ಇಲ್ವೇ ಅಥವಾ ಎರಡೂ
ಇವೆಯೇ ಅಥವಾ ಒಂದೂ - ಎಂದ

ಸತ್ತ ಮೇಲೆ ತಥಾಗತ ಇರುತ್ತಾನೆಯೇ ಅಥವಾ ಇರೋದಿಲ್ವೆ
ಅಥವಾ ಎರಡೂ ಅಥವಾ ಯಾವುದೂ - ಎಂದ

ಮಾತಾಡದಿರೋದೇ ಅವ್ಯಾಕತ
ಮಾತಾಡೋದು ಅನಾಹುತ
(ಎಂದು ಆಮೇಲೆ ತಥಾಗತ):

ಪ್ರಶ್ನೆ ಬಲೆಯ ಹಾಗೆ
ಸಿಗಹಾಕಿಕೊಳ್ಳುವಿರಿ
ಪ್ರಶ್ನೆ ಅರಣ್ಯದ ಹಾಗೆ
ದಾರಿ ತಪ್ಪಿಸುತ್ತದೆ
ಪ್ರಶ್ನೆ ಮಯಣದ ಹಾಗೆ
ಅಂಟಿಕೊಳ್ಳುತ್ತದೆ
ಬಿರಡೆ ತೆಗೆದರೆ ಮತ್ತೆ ಒಳಗೆ ಕಳಿಸುವುದು ಕಷ್ಟ
ಬಿರಡೆ ತೆಗೆಯದಿರೋದೆ ವಾಸಿ

ಅಲ್ಲರೀ ಕಳೆದೆರಡು ಸಾವಿರ ವರ್ಷ
ಇವೇ ಕೇಳ್ತಾ ಇದ್ದಾನೆ
ಇನ್ನೆರಡು ಸಾವಿರ ವರ್ಷ
ಇವೇ ಕೇಳ್ತಿರುತ್ತಾನೆ
ಶುದ್ಧ ಸೋಂಭೇರಿ ಈ ವಚ್ಚ
ಎಲ್ಲಕ್ಕಿಂತ ದೊಡ್ಡ ಪ್ರಶ್ನೆ ಇವನೇ!



★

ಹೆಚ್ಚು ಎತ್ತರವಿರದ - ಕಾರಣ ಕುತ್ತಿಗೆ
ನೋಯದಿರಲೆಂದು
ಹೆಚ್ಚು ಗಿಡ್ಡವಿರದ - ಕಾರಣ ದೇಹ
ಬಾಗದಿರಲೆಂದು
ಹೆಚ್ಚು ದಪ್ಪವಿರದ - ಕಾರಣ ಕಾಲುಗಳು
ಎಡವದಿರಲೆಂದು
ಹೆಚ್ಚು ತೆಳ್ಳಗಿರದ - ಕಾರಣ ಆಧಾರ
ತಪ್ಪದಿರಲೆಂದು

ಹಾಗೂ ಮೊಲೆಗಳು ತುಂಬಿ ತುಳುಕಬಾರದು-
ಉಗುವ ಹಾಲಿಗೆ ಮೋರೆ ಸೀಯದಿರಲೆಂದು
ಹೆಚ್ಚು ಕಪ್ಪಿರಬಾರದು-
ಹಾಲು ತಣ್ಣಗಿರಬಹುದೆಂದು

ನೂರು ಜನ ಸ್ತನದಾಯಿನಿಯರು
ಚೆಲುವೆಯರಲ್ಲಿ ಚೆಲುವೆಯರು
ನನ್ನ ಬುದ್ಧನ್ನ ಮಾಡುವುದಕ್ಕೆ

ಬಿಡುವುದಕ್ಕೆ ನೀನೊಬ್ಬಳೇ ಯಶೋಧರ !

★



ನದಿ ಹರಿಯುತ್ತದೆ ನಿರಂತರ - ನೀರು
ಬದಲಾಗುತ್ತದೆ ಪ್ರತಿ ನಿಮಿಷ
ಕೊಳದ ಮೇಲೆ ನೊರೆ ತೇಲುತ್ತದೆ
ನೊರೆ ಮಾಯವಾಗುತ್ತದೆ
ಮತ್ತೆ ಉಂಟಾಗುತ್ತದೆ

ಕೆಲವರು ನಸುಕಿನಲ್ಲಿ
ಕೆಲವರು ಮಧ್ಯರಾತ್ರಿ
ಎಲ್ಲಿಂದ ಬಂದರು ಎಲ್ಲಿಗೆ ಹೋದರು
ಯಾರಿಗೂ ಗೊತ್ತಿಲ್ಲ

ಮುಂಜಾವದ ಹೂಗಳ ಮೇಲೆ ಮಂಜು ಕುಳಿತು
ಇಬ್ಬನಿಯಾಗುತ್ತದೆ
ಹೂವಿನ ಎಸಳುಗಳಿಂದ ಒಂದೊಂದೇ ಹನಿ
ಕೆಳಕ್ಕೆ ಬೀಳುತ್ತದೆ - ಹೂವನ್ನು ಹಿಂದೆ ಬಿಟ್ಟು
ಸೂರ್ಯ ಮೇಲೇರಿದಂತೆ ಹೂ ಕೂಡ
ಬಾಡಿ ಹೋಗುತ್ತದೆ


ಎಂದಾದರೂ ಇದೆಯೆ
ಹೂ ಬಾಡಿ ಇಬ್ಬನಿ ಮಾತ್ರ ಉಳಿಯುವುದು?
ಇಬ್ಬನಿ ಕೂಡ ಹೋಗುತ್ತದೆ - ಸಂಜೆಗೆ ಮೊದಲೆ ಅಳಿಯುತ್ತದೆ

ಮುಂಜಾವದ ನಕ್ಷತ್ರ
ನೀರ ಮೇಲಿನ ಗುಳ್ಳೆ
ಮಿಂಚಿನ ರೇಖೆ ಬೇಸಿಗೆಯ ಮೋಡ
ಎಣ್ಣೆ ಆರಿದ ದೀಪ, ಮಾಯೆ, ಕನಸು

ಬುದ್ಧ ದೂರವಿಲ್ಲ
ನನ್ನ ಕಣ್ಣಲ್ಲಿ ನಿನ್ನ ಕಣ್ಣಲ್ಲಿ
ಮರಳ ಕಣದಲ್ಲಿ ಶಿಲಾಖಂಡದಲ್ಲಿ
ಬುದ್ಧ ಅವನೆ

(ಮುಂದುವರೆಯುವುದು)








ಲೂಯಿ ಗೆ ಪಿರಾಂಡೆಲೋ

ಹೂಜಿ

ಕನ್ನಡಕ್ಕೆ : ಶರದ್ ಸೌಕೂರ್



ಹೊನ್ನೆಯ ಬೆಳೆ ಆ ವರ್ಷ ಹುಲುಸಾಗಿ ಬಂದಿತ್ತು. ಕಳೆದ ಸಲ ಮರಗಳು ಹೂಗಳಿಂದ ಸಮೃದ್ಧವಾಗಿದ್ದವು. ಚಳಿ ಸಾಕಷ್ಟು ಬಿದ್ದಿದ್ದರೂ ಹಣ್ಣುಗಳು ಹುಲುಸಾಗಿ ಮೂಡಿದ್ದವು. ಪ್ರಿಮ್‌ಸೋಲ್‌ನಲ್ಲಿ ಲೋಲೋ ಝಿರಾಫಾನ ಸುಂದರ ತೋಟವಿದೆ. ತನ್ನ ನೆಲಮಹಡಿಯಲ್ಲಿದ್ದ ಐದು ಹಳೆಯ ಮಣ್ಣಿನ ಹೂಜಿಗಳು ಬರಲಿರುವ ಎಣ್ಣೆಗೆ ಸಾಕಾಗಲಿಕ್ಕಿಲ್ಲವೆಂದು ಲೆಕ್ಕಹಾಕಿ ಮತ್ತೊಂದು ಹೂಜಿಗಾಗಿ ಮೊದಲೇ ಆರ್ಡರು ಕೊಟ್ಟಿದ್ದ. ಎದೆಯೆತ್ತರ ಗಾತ್ರದ ಗುಡಾಣ ಹೊಟ್ಟೆಯ ಈ ಹೊಸ ಹೂಜಿ ಮರಿಗಳಿಂದ ಸುತ್ತುವರಿಯಲ್ಪಟ್ಟ ತಾಯಿ ಹೇಂಟೆಯಂತೆ ಕಾಣುತ್ತಿತ್ತು.

ಮಡಕೆಯವನ ಜೊತೆ ಡಾನ್‌ಲೋಲೋ ಝಿರಾಫಾನ ವ್ಯಾಜ್ಯವಿರಲಿಲ್ಲವೆಂದು ಹೇಳಲು ಬರುವುದಿಲ್ಲ, ಯಾಕೆಂದರೆ ಅವನು ಜಗಳವಾಡದ ಯಾವದೊಂದು ವ್ಯಕ್ತಿಯನ್ನು ತೋರಿಸುವದೂ ಕಷ್ಟದ ಕೆಲಸ. ಅತ್ಯಂತ ಕ್ಷುಲ್ಲಕ ಕಾರಣಕ್ಕಾಗಿ-ಪಾಗಾರದ ಒಂದು ಕಲ್ಲು ಬಿದ್ದದ್ದಕ್ಕಾಗಿ ಅಥವಾ ಒಂದು ಹಿಡಿ ಹುಲ್ಲಿಗಾಗಿ ಸಹ ಅವನು ಕೂಗಾಡುತ್ತ

ಕುದುರೆ ಬಂಡಿಯೇರಿ ಶಹರಕ್ಕೆ ಹೋಗಿ ಖಟ್ಲೆ ಹಾಕಿ ಬರುತ್ತಿದ್ದ. ಈ ಬಗೆಯಾಗಿ ತನ್ನ ಅರ್ಧಕ್ಕರ್ಧ ಸಂಪತ್ತನ್ನು ಕಳೆದುಕೊಂಡಿದ್ದ. ಯಾಕಂದರೆ ಕೋರ್ಟಿನ ಫೀ, ಲಾಯರುಗಳ ಬಿಲ್ಲುಗಳಷ್ಟೇ ಅಲ್ಲ, ಬಹುತೇಕ ವ್ಯಾಜ್ಯಗಳಲ್ಲಿ ಸೋತು ಪ್ರತಿವಾದಿಯ ಖರ್ಚುಗಳನ್ನೂ ಇವನೇ ಭರಿಸಬೇಕಾಗುತ್ತಿತ್ತು. ಹೀಗೆ ವಾರದಲ್ಲಿ ಎರಡು ಮೂರು ಸಲ ಇವನನ್ನು ಕಂಡು ಕಂಡು ಇವನ ವಕೀಲರಿಗೇ ಎಷ್ಟು ಬೇಸರ ಬಂದಿತ್ತೆಂದರೆ ಅವರಾಗಿ ಇವನಿಗೆ ಪ್ರಾರ್ಥನೆಯ ಪುಸ್ತಕದಂತೆ ಕಾಣುತ್ತಿದ್ದ ಪುಟ್ಟದೊಂದು ಕಾಯದೆಯ ಪುಸ್ತಕವನ್ನು ಕಾಣಿಕೆಯಾಗಿ ಕೊಟ್ಟುಬಿಟ್ಟಿದ್ದರು. ಸಣ್ಣಪುಟ್ಟ ವಿಷಯಗಳಿಗೆ ತಮ್ಮಲ್ಲಿಗೆ ಧಾವಿಸಿ ಬರದೆ ಖಟ್ಲೆ ಹೂಡುವ ಮೊದಲು ಆ ಪುಸ್ತಕವನ್ನೊಮ್ಮೆ ನೋಡಲಿ-ಎಂಬುದು ಅವರ ಆಶಯ. ಮೊದಲೆಲ್ಲ ಜಗಳವಾದೊಡನೆ ''ಬಂಡಿಗೆ ಕುದುರೆ ಕಟ್ಟಿ!'' ಎಂದು ಕೂಗುತ್ತಿದ್ದ ಲೋಲೋ ಈಗ ''ನಿಮ್ಮ ಕಾಯದೆಯ ಪುಸ್ತಕ ನೋಡಿ!'' ಎಂದು ಕೂಗಲು ಆರಂಭಿಸಿದ್ದ.

ನಾಲ್ಕು ಫ್ಲೋರಿನ್ ಕೊಟ್ಟು ಕೊಂಡ ಹೊಸ ಹೂಜೆ, ಬಂದ ಹೊಸತರಲ್ಲಿ ಗಾಣದ ಶೆಡ್ಡಿನಲ್ಲೇ ಇಡಲ್ಪಟ್ಟಿತು. ಉತ್ಕೃಷ್ಟ ಮಾದರಿಯ ಈ ಹೊಚ್ಚಹೊಸ ಹೂಜೆ ಕೊಳೆತ ರಸಗಳ ವಾಸನೆ ಹೊಡೆಯುವ, ಗಾಳಿ ಬೆಳಕಿಲ್ಲದ ಆ ಮಬ್ಬು ಕೋಣೆಯಲ್ಲಿ ಅಧೋಗತಿಗೆ ಜಿದ್ದಂತೆ ತೋರುತ್ತಿತ್ತು. ಕಳೆದ ಎರಡು ದಿನದಿಂದ ಹೊನ್ನೆಯ ಫಸಲನ್ನು ಕೊಯ್ಯುವ ಕೆಲಸ ಆರಂಭವಾಗಿತ್ತು. ಡಾನ್ ಲೋಲೋಗೆ ಪುರುಸೊತ್ತೇ ಇರಲಿಲ್ಲ. ಮರಗಳಿಂದ ಹಣ್ಣುಗಳನ್ನು ಇಳಿಸುವವರ ಉಸ್ತುವಾರಿಯನ್ನಷ್ಟೇ ಅಲ್ಲ, ಕುದುರೆಗಳ ಮೇಲೆ ಗೊಬ್ಬರ ತರುವವರನ್ನೂ ನೋಡಿಕೊಳ್ಳಬೇಕಿತ್ತು. ಗುಡ್ಡದ ಪಕ್ಕದ ಹೊಲದಲ್ಲಿ ಅವನು ಮುಂದಿನ ಸೀಝುನ್ನಿಗೆ ಅವರೆಯ ಬೆಳೆ ತೆಗೆಯುವವನಿದ್ದ. ಇದೆಲ್ಲ ಕೆಲಸ ತನ್ನೊಬ್ಬನ ಸಾಮರ್ಥ್ಯವನ್ನು ಮೀರಿದ್ದೆಂದು ಅನಿಸುತ್ತಿದ್ದರೂ, ಯಾವ ಕಡೆ ಎಷ್ಟು ಲಕ್ಷ್ಯವಹಿಸಬೇಕೆಂದು ತಿಳಿಯದೆ ಗೊಂದಲಿಸಿದ್ದ. ಮರದ ಮೇಲಿನ ಹಣ್ಣುಗಳನ್ನೆಲ್ಲ ಲೆಕ್ಕ ಮಾಡಿಟ್ಟವನಂತೆ, ಒಂದೇ ಒಂದು ಹಣ್ಣು ಮಾಯವಾದರೆ ಕೊಂದೇಬಿಡುತ್ತೇನೆಂದು ಹೆದರಿಸುತ್ತಿದ್ದ, ಹಾಗೆಯೇ ಬೆಟ್ಟದ ಬದಿಗೆ ಧಾವಿಸಿ ಹೋಗಿ ಗೊಬ್ಬರದವರ ಬಳಿ ಕೂಗಾಡುತ್ತಿದ್ದ-ಒಂದೇ ಒಂದು ರಾಶಿ ಬೇರೆ ರಾಶಿಗಳಿಗಿಂತ ಸಣ್ಣದಾದರೆ ಏನು ಮಾಡುತ್ತೇವೆಂದು ನೋಡಿ-ಎಂದು ತಲೆಯ ಮೇಲೊಂದು ಕ್ಯಾಪು ಧರಿಸಿ, ಹೊಟ್ಟೆಯವರೆಗೆ ತೆರೆದಿದ್ದ ಅಂಗಿಯ ತೋಳುಗಳನ್ನು ಮೇಲಕ್ಕೇರಿಸಿ ಅತ್ತ, ಇತ್ತ, ಎತ್ತೆಂದರತ್ತ ಹರಿಹಾಯುತ್ತಿದ್ದ. ಬೆವರಿನಿಂದ ತೊಯ್ದು ಅವನ ಕುರುಚಲು ಗಡ್ಡದ ಮುಖ ಕೆಂಪಗೆ ಹೊಳೆಯುತ್ತಿತ್ತು. ಹಸಿದ ತೋಳದಂತಹ ಕೆಂಗಣ್ಣುಗಳನ್ನು ಕೆಕ್ಕರಿಸಿ ಏದುಸಿರು ಬಿಡುತ್ತಿದ್ದ.

ಕೆಲಸ ಆರಂಭವಾದ ಮೂರನೆಯ ಸಂಜೆ ಮೂವರು ಕೆಲಸದಾಳುಗಳು ಗಾಣದ ಕೋಣೆಗೆ ಹೋದರು. ಹೊನ್ನೆಯ ಮರಗಳನ್ನು ಬಡಿಯುವ ಕೋಲುಗಳನ್ನು, ಏಣಿಗಳನ್ನು ಅವರು ಅಲ್ಲಿಡುವದಿತ್ತು. ಕೋಣೆ ಹೊಕ್ಕಿದ್ದೇ ಅವರಿಗೊಂದು ಅಚ್ಚರಿ ಕಾದಿತ್ತು. ಹೊಸ ಹೂಜೆ ಎರಡು ತುಂಡಾಗಿ ಬಿದ್ದಿತ್ತು. ಹರಿತ ಕತ್ತಿಯಿಂದ ಅದರ ಉಬ್ಬುಹೊಟ್ಟೆಯನ್ನು ಚಕ್ರಾಕಾರವಾಗಿ ಕತ್ತರಿಸಿದಂತೆ ತೋರುತ್ತಿತ್ತು. ಆ ಮೂವರಲ್ಲಿ ಮೊದಲನೆಯವನು ಸೂಚಿಸಿದ: ಕೋಣೆಯ ಬಾಗಿಲನ್ನು ಮೊದಲಿನಂತೆಯೇ ಮುಚ್ಚಿ, ಏಣಿ, ಕೋಲುಗಳನ್ನು ಹೊರಗಿನ ಗೋಡೆಗೆ ಆನಿಸಿಟ್ಟು, ತೆಪ್ಪಗೆ ಹೋಗಿ ಬಿಡೋಣ ಎಂದು. ಉಳಿದಿಬ್ಬರು ಇಂಥ ಕ್ರಮದ ಭಯಂಕರ ಪರಿಣಾಮವನ್ನು ಯೋಚಿಸಿಯೇ ಹೌಹಾರಿದರು. ಹಾಗೇನಾದರೂ ಮಾಡಿದ್ದಲ್ಲಿ ಹೂಜೆಯನ್ನೊಡೆದ ಆಪಾದನೆ ಇವರ ಮೇಲೆಯೇ ಬರುವದು ನಿಸ್ಸಂಶಯವಾಗಿತ್ತು. ಆದದ್ದಾಗಲಿ ಎಂದು ಕೈಗಳನ್ನು ಟ್ರಂಪೆಟ್ಟಿನಂತೆ ಹಿಡಿದು ಅವರು ''ಡಾನ್ ಲೋಲೋ! ಡಾನ್ ಲೋಲೋ'' ಎಂದು ಕೂಗಿ ಕರೆಯಲು ಆರಂಭಿಸಿದರು. ಕರೆಗೆ ಓಗೊಟ್ಟು ಬಂದ ಡಾನ್ ಲೋಲೋ ಅನಾಹುತವನ್ನು ನೋಡಿ ನಿರೀಕ್ಷಿಸಿದಂತೆ ಕ್ರೋಧಾಗ್ನಿಯ ಜ್ವಾಲಾಮುಖಿಯಾದ. ಕೈಗೆ ಸಿಕ್ಕ ಮೂವರಲ್ಲೊಬ್ಬನ ಕತ್ತು ಹಿಡಿದು ಗೋಡೆಗೊತ್ತಿ 'ನಿನ್ನ ನೆತ್ತರು ಕುಡಿದು ವಸೂಲಿ ಮಾಡುತ್ತೇನೆ, ಬಿಡುವದಿಲ್ಲ' ಎಂದು ಅರಚತೊಡಗಿದ. ಉಳಿದಿಬ್ಬರು ತಮ್ಮ ಶಕ್ತಿಯನ್ನೆಲ್ಲ ಉಪಯೋಗಿಸಿ ಅವನನ್ನು ಬೇರ್ಪಡಿಸಬೇಕಾಯಿತು. ಬಳಿಕ ಡಾನ್ ಲೋಲೋನ ಸಂತಾಪ ತನ್ನ ಮೇಲೆಯೇ ತಿರುಗಿತು. ಕಾಲುಗಳನ್ನು ಅಪ್ಪಳಿಸುತ್ತ ಕ್ಯಾಪನ್ನು ಬಿಸುಟ, ತನ್ನ ಗಲ್ಲಗಳಿಗೆ ತಾನೇ ಹೊಡೆದುಕೊಳ್ಳುತ್ತ, ಆಪ್ತ ಸಂಬಂಧಿಯ ಮರಣವಾದಂತೆ ಊಳಿಟ್ಟು ಅಳಲು ಆರಂಭಿಸಿದ. ಹೊಚ್ಚಹೊಸ ಹೂಜೆ, ನಾಲ್ಕು ಫ್ಲೋರಿನ್ನಿನ ಹೂಜೆ, ಯಾರಿದನ್ನು ಒಡೆದಿರಬಹುದು? ಹಿಂಸೆಯ ಬೇರೆ ಯಾವ ಲಕ್ಷಣಗಳೂ ಇಲ್ಲ. ಯಾರ ಕೆಟ್ಟ ದೃಷ್ಟಿ ಇದರ ಮೇಲೆ ಬಿದ್ದಿರಬಹುದು? ಕೊಂಡು ತರುವಾಗ ಏನೊಂದೂ ಇರಲಿಲ್ಲ. ಆದರೂ ಹೀಗೇಕಾಯಿತು?

ತಮ್ಮ ಒಡೆಯನ ಉನ್ಮಾದ ತುಸು ಕಡಿಮೆಯಾದೊಡನೆ ಕೆಲಸದಾಳುಗಳು ಅವನಿಗೆ ಸಮಾಧಾನ ಹೇಳಲು ತೊಡಗಿದರು. ಹೂಜೆಯ ರಿಪೇರಿ ಸಾಧ್ಯವೆಂದು ಸೂಚಿಸಿದರು. ಅಷ್ಟೇನೂ ಕೆಟ್ಟದಾಗಿ ಒಡೆದಿಲ್ಲ. ಕೇವಲ ಎರಡು ತುಂಡಾಗಿದೆ. ಒಳಗಿನಿಂದ ಕಬ್ಬಿಣದ ಪಟ್ಟಿ ಹೊಡೆದು ಜೋಡಿಸಿದರೆ ಹೊಸದರಂತೆಯೇ ಕಾಣುತ್ತದೆ. ಮೇಲಾಗಿ ಹೆಚ್ಚು ಬಾಳಿಕೆಯೂ ಬರಬಹುದು ಎಂಬಿತ್ಯಾದಿಯಾಗಿ. ಈ ಕೆಲಸಕ್ಕೆ ಝಿ ಡೀಮಾ ಲಿಕಾಸಿಯೇ ಹೇಳಿ ಮಾಡಿಸಿದ ಮನುಷ್ಯನೆಂದು ನಿರ್ವಿವಾದವಾಗಿ ತೀರ್ಮಾನವಾಯಿತು. ಅವನ ಬಳಿ ಸಂದು ಜೋಡಿಸುವ ತುಂಬ ಪರಿಣಾಮಕಾರಿಯಾದ ವಿಚಿತ್ರ ಸಿಮೆಂಟೊಂದಿದೆ ಯೆಂದು ಅವರು ಕೇಳಿದ್ದರು. ಮೊದಮೊದಲು ಕೆಲಸದಾಳುಗಳ ಸಲಹೆಗಳನ್ನು ಕಿವಿಗೆ ಹಾಕಿಕೊಳ್ಳದ ಡಾನ್‌ಲೋಲೋ ಕೊನೆಗೊಮ್ಮೆ ಝಿ ಡೀಮಾನನ್ನು ಕರೆಸಲು ಸಿದ್ಧನಾದ.

ಮರುದಿನ ಮುಂಜಾನೆ ಝಿ ಡೀಮಾ ತನ್ನ ಸಾಧನ ಸಲಕರಣೆಗಳ ಚೀಲವನ್ನು ಬೆನ್ನಿಗೇರಿಸಿ ಪ್ರಿಮ್‌ಸೋಲ್‌ನಲ್ಲಿ ಹಾಜರಾದ. ಅವನೊಬ್ಬ ಕುಬ್ಜ ಮುದುಕನಾಗಿದ್ದ. ಪುರಾತನ ಹೊನ್ನೆಯ ಮರವೊಂದರ ಟೊಂಗೆಗಳಂತೆ ಅವನ ಕೈ ಕಾಲುಗಳು ಮುರುಟಿಕೊಂಡಿದ್ದವು. ಅವನ ಬಾಯಿಯಿಂದ ಶಬ್ದಗಳನ್ನು ಇಕ್ಕಳ ಹಾಕಿಯೇ ಹೊರತೆಗೆಯಬೇಕೆಂದು ಜನ ಆಡಿಕೊಳ್ಳುತ್ತಿದ್ದರು. ವಿಲಕ್ಷಣ ಅತೃಪ್ತಿ, ನಿರಾಶೆ ಹಾಗೂ ದುಃಖಗಳು ಅವನನ್ನು ಕವಿದುಕೊಂಡಿದ್ದವು. ಚಮತ್ಕಾರಿ ಸಿಮೆಂಟಿನ ಸಂಶೋಧಕನ ರೂಪದಲ್ಲಿ ಜನ ತನ್ನನ್ನು ನೋಡದೆ ತನ್ನ ಯೋಗ್ಯತೆಗೆ ಅನ್ಯಾಯವೆಸಗುತ್ತಿದ್ದಾರೆಂದು ಅವನ ಭಾವನೆಯಾಗಿತ್ತು. ಅದೇ ಸಮಯದಲ್ಲಿ ತನ್ನ ಸಂಶೋಧನೆಯ ಗುಟ್ಟನ್ನು ಕಾಪಾಡಿಕೊಳ್ಳುವದೂ ಅವನಿಗೆ ಅವಶ್ಯವೆನಿಸುತ್ತಿತ್ತು. ಡಾನ್ ಲೋಲೋ ಅವಿಶ್ವಾಸಪೂರ್ಣ ದನಿಯಲ್ಲಿ ''ಎಲ್ಲಿ? ನಿನ್ನ ಆ ಸಿಮೆಂಟನ್ನು ತೋರಿಸು, ನೋಡೋಣ'' ಎಂದಾಗ ಗಂಭೀರವಾಗಿ ತಲೆ ಅಲುಗಿಸಿ ನುಡಿದಿದ್ದ: ''ನೀವದರ ಪರಿಣಾಮವನ್ನಷ್ಟೇ ನೋಡಬಹುದು.''
''ಆದರದು ಗಟ್ಟಿಯಾಗಿ ಹಿಡಿದುಕೊಳ್ಳುತ್ತದಷ್ಟೇ?''

ಝಿ ಡೀಮಾ ಮಾತಿಲ್ಲದೇ ತನ್ನ ಚೀಲವನ್ನು ಕೆಳಗಿಳಿಸಿ, ಅದರಿಂದ ಕೊಳಕು ಬಟ್ಟೆಯ ಗಂಟೊಂದನ್ನು ಹುಡುಕಿ ತೆಗೆದು, ಜಾಗ್ರತೆಯಿಂದ ಸುರುಳಿ ಸುರುಳಿ ಬಿಚ್ಚತೊಡಗಿದ. ಕೊನೆಗೊಮ್ಮೆ ಅದರಿಂದ ಪುರಾತನವಾದ ಕನ್ನಡಕವೊಂದು ಹೊರಬಂದಾಗ ಅತಿ ಕುತೂಹಲದಿಂದ ಸುತ್ತ ನಿಂತವರಿಗೆ ಗೊಳ್ಳನೆ ನಗು ಬಂತು. ವಿಧಿಪೂರ್ವಕವಾಗಿ ಆ ದಾರದಿಂದ ಜೋಡಿಸಿದ ಕನ್ನಡಕವನ್ನು ಮೂಗಿಗೇರಿಸಿ ಒಡೆದ ಹೂಜೆಯನ್ನೊಮ್ಮೆ ಪರೀಕ್ಷಿಸಿದ ಝಿ ಡೀಮಾ, ಕೊನೆಗೊಮ್ಮೆ ನುಡಿದ:

''ಹೌದು.''

''ನನಗೆ ಸಿಮೆಂಟು ಮಾತ್ರದಲ್ಲಿ ವಿಶ್ವಾಸವಿಲ್ಲ. ನನಗೆ ಕಬ್ಬಿಣದ ಪಟ್ಟಿಗಳೂ ಬೇಕು.'' ''ಒಳ್ಳೇದು, ನಾನು ಹೊರಡುತ್ತೇನೆ.'' ಝಿ ಡೀಮಾ ತನ್ನ ಚೀಲವನ್ನೆತ್ತಿ ಕೊಳ್ಳಲು ಅನುವಾದ. ಒಡನೆಯೇ ಡಾನ್‌ಲೋಲೋ ಅವನ ರಟ್ಟೆ ಹಿಡಿದು ''ಹೊರಡುತ್ತೀಯ? ಎಲ್ಲಿಗೆ? ನಿನಗೆ ಸ್ವಲ್ಪವಾದರೂ ಸೌಜನ್ಯ ಬೇಡವೇ? ಈ ಮುದುಕನ ಧಿಮಾಕು ನೋಡಿ! ನನಗದರಲ್ಲಿ ಎಣ್ಣೆ ತುಂಬುವದಿದೆ. ಗೊತ್ತೇ, ನಿನಗೆ? ನಾಳೆ ಹೂಜೆ ಸೋರಲು ಆರಂಭವಾದರೆ ಏನು ಮಾಡುತ್ತಿ ನೀನು? ಸಿಮೆಂಟೊಂದೇ ಸಾಕಂತೆ! ಕಬ್ಬಿಣದ ಪಟ್ಟಿಗಳೂ ಬೇಕು. ಅದನ್ನು ನಿಶ್ಚಯಿಸುವವನು ನಾನು. ಗೊತ್ತಾಯಿತೇ?'' ಎಂದೆಲ್ಲ ಕೂಗಾಡತೊಡಗಿದ.

ಝಿ ಡೀಮಾ ತನ್ನ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡ. ತುಟಿಗಳನ್ನು ಅಮುಕಿ ಹಿಡಿದುಕೊಂಡು ತಲೆ ಅಲುಗಿಸಿದ. ಜನರೆಲ್ಲ ಹೀಗೆಯೇ. ಅವನ ಸಂಶೋಧನೆಯ ಮಹತ್ವವನ್ನು ಮನಗಾಣುತ್ತಿರಲಿಲ್ಲ. ತನ್ನ ಕೌಶಲ್ಯ ಹಾಗೂ ಚಮತ್ಕಾರಿ ಸಿಮೆಂಟಿನ ಪರಿಣಾಮವನ್ನು ಪ್ರದರ್ಶಿಸಿದ ಸಮಾಧಾನವನ್ನು ಕೂಡ ಅವನಿಗೆ ಅಲ್ಲಗಳೆಯುತ್ತಿದ್ದರು.

''ನಿಮ್ಮ ಹೂಜಿ ಮತ್ತೆ ಮೊದಲಿನಂತಾಗದಿದ್ದರೆ...''

''ನಿನ್ನ ಒಂದು ಮಾತೂ ಬೇಡ. ನನಗೆ ಕಬ್ಬಿಣದ ಪಟ್ಟಿ ಬೇಕು. ಅದಕ್ಕಾಗಿ ಮತ್ತು ನಿನ್ನ ಸಿಮೆಂಟಿಗಾಗಿ ಎಷ್ಟು ಖರ್ಚಾಗುತ್ತದೋ ಹೇಳು.''

''ಸಿಮೆಂಟು ಮಾತ್ರ ಉಪಯೋಗಿಸಿದಲ್ಲಿ...''

''ಅಯ್ಯೋ ದೇವರೇ! ಈ ಮುದುಕನ ಉದ್ಧಟತನವನ್ನು ನೋಡಿ! ನಾನೇನು ಹೇಳಿದೆ? ನನಗೆ ಕಬ್ಬಿಣದ ಪಟ್ಟಿ ಬೇಕು. ಬೇಗ ಕೆಲಸ ಮುಗಿಸಿ ಎಷ್ಟಾಯಿತೆಂದು ಹೇಳು. ನಿನ್ನ ಜೊತೆ ಕಾಡು ಹರಟೆಗೆ ನನ್ನ ಬಳಿ ಸಮಯವಿಲ್ಲ'' ಎಂದು ಹೇಳಿ ಡಾನ್ ಲೋಲೋ ಹೊಲದತ್ತ ನಡೆದ.

ಅವಮಾನಭರಿತ ಸಿಟ್ಟಿನಿಂದಲೇ ಝಿ ಡೀಮಾ ತನ್ನ ಕೆಲಸ ಆರಂಭಿಸಿದ. ಹೂಜಿಯ ಒಡೆದ ಅಂಚುಗಳ ಗುಂಟ ಸೂಕ್ಷ್ಮ ರಂಧ್ರಗಳನ್ನು ಕೊರೆದ. ಕಬ್ಬಿಣದ ಪಟ್ಟಿಯನ್ನು ಅಳತೆಗನುಗುಣವಾಗಿ ಕತ್ತರಿಸತೊಡಗಿದ. ಅವನ ಆಯುಧಗಳು ಮಾಡುವ ಸದ್ದಿನೊಂದಿಗೆ ಕೆಳದನಿಯಲ್ಲಿ ಅವನು ಹಾಕುತ್ತಿದ್ದ ಶಾಪಗಳೂ ಸೇರಿಕೊಂಡಿದ್ದವು. ಮೊದಲ ಹಂತದ ಕೆಲಸ ಮುಗಿದೊಡನೆ ಝಿ ಡೀಮಾ ರಂಧ್ರಗಳೆಲ್ಲ ಸರಿಯಾದ ಕಡೆ ಇವೆಯೆಂದು ಮತ್ತೊಮ್ಮೆ ಪರೀಕ್ಷಿಸಿ ಸಮಾಧಾನಿತನಾದ. ಬಳಿಕ ತನ್ನ ಚೀಲದಲ್ಲಿ ನಿಗೂಢವಾಗಿ ಇಟ್ಟುಕೊಂಡಿದ್ದ ಚಮತ್ಕಾರಿ ಸಿಮೆಂಟಿನ ಪುಟ್ಟ ಡಬ್ಬಿಯನ್ನು ತೆರೆದು, ಆಕಾಶದತ್ತ ಎತ್ತಿ ಹಿಡಿದು, ಮಣಮಣ ಪ್ರಾರ್ಥನೆ ಮಾಡಿ, ಹೂಜಿಯ ಒಡೆದ ಅಂಚುಗಳಿಗೆ ಸರಸರ ಸವರಿದ. ಬಳಿಕ ಒಡೆದ ಹೂಜಿಯ ತಳದ ಭಾಗವನ್ನು ಪ್ರವೇಶಿಸಿ ಉಳಿದರ್ಧ ಭಾಗವನ್ನು ಮೇಲಿನಿಂದ ಇಟ್ಟು ಬಿಗಿಯಾಗಿ ಹಿಡಿಯುವಂತೆ ವೀಕ್ಷರಲ್ಲೊಬ್ಬನನ್ನು ಕೇಳಿಕೊಂಡ. ರಂಧ್ರಗಳಿಂದ ತಂತಿಯ ತುಂಡುಗಳನ್ನು ಹಾಯಿಸಿ ಒಳಗಿನಿಂದ ಕಬ್ಬಿಣದ ಪಟ್ಟಿಯನ್ನು ಚಿಮ್ಮಟದಿಂದ ಬಿಗಿಯಾಗಿ ಭದ್ರಪಡಿಸಲು ತೊಡಗಿದ. ಬಳಿಕ ರಂಧ್ರಗಳನ್ನೆಲ್ಲ ಸಿಮೆಂಟಿನಿಂದ ಮುಚ್ಚಿದ. ಹೂಜಿಯೊಳಗೆ ಬೆವರಿನಿಂದ ತೊಯ್ದು ಝಿ ಡೀಮಾ ತನ್ನ ದುಃಸ್ಥಿತಿಗಾಗಿ ವಟಗುಟ್ಟುತ್ತಿದಾಗ ಕೆಲಸದಾಳುಗಳು ಹೊರಗಿನಿಂದ ಅವನಿಗೆ ಸಾಂತ್ವನ ಹೇಳಿ ಪ್ರೋತ್ಸಾಹಿಸುತ್ತಿದ್ದರು. ಸುಮಾರು ಸಮಯದ ಬಳಿಕ ತನ್ನೆಲ್ಲ ಕೆಲಸ ಮುಗಿಸಿದ ಆತ ''ಈಗ ನನಗೆ ಹೊರಗೆ ಬರಲು ಸಹಾಯ ಮಾಡಿ'' ಎಂದು ಹೂಜಿಯ ಬಾಯಿಯೊಳಗಿಂದ ತಲೆಯೆತ್ತಿದ.

ಹೂಜಿ ಗುಡಾಣ ಹೊಟ್ಟೆಯದಾಗಿದ್ದರೂ ಅದರ ಕತ್ತು ಮತ್ತು ಬಾಯಿ ತೀರ ಕಿರಿದಾಗಿದ್ದವು. ತನಗಾದ ಅವಮಾನ ಮತ್ತು ದುಃಖಗಳ ನಡುವೆ ಝಿ ಡೀಮಾ ಇದನ್ನು ಗಮನಿಸಿರಲಿಲ್ಲ. ತಾನೇ ರಿಪೇರಿ ಮಾಡಿದ ಹೂಜಿಯೊಳಗೆ ಈಗ ಆತ ಬಂದಿಯಾಗಿದ್ದ. ಕೆಲಸದಾಳುಗಳು ಅವನನ್ನು ಹೊರಕ್ಕೆಳೆಯುವ ಯೋಚನೆಯೇ ಇಲ್ಲದೆ ಅವನ ಅವಸ್ಥೆಯನ್ನು ಇತರರಿಗೂ ಕರೆದು ತೋರಿಸಿ, ನಗಲು ಪ್ರಾರಂಭಿಸಿದ್ದರು. ಈಗವನನ್ನು ಬಂಧ ಮುಕ್ತಗೊಳಿಸಲು ಹೂಜಿಯನ್ನೊಡೆಯವದೊಂದೇ ಮಾರ್ಗವಾಗಿತ್ತು. ಮತ್ತು ಹಾಗೆ ಒಡೆದ ಹೂಜಿಯ ರಿಪೇರಿ ಮತ್ತೂ ಅಸಾಧ್ಯವಾಗಿತ್ತು. ಗಾಣದ ಶೆಡ್ಡಿನ ಬಳಿ ಗಲಾಟೆ ಕೇಳಿ ಡಾನ್‌ಲೋಲೋ ಧಾವಿಸಿ ಬಂದ. ಹೂಜಿಯೊಳಗಿನಿಂದ ಝಿ ಡೀಮಾ ಸಿಟ್ಟಿಗೆದ್ದ ಬೆಕ್ಕಿನಂತೆ ಸದ್ದು ಮಾಡುತ್ತಿದ್ದ.



''ಸಹಾಯ! ಹೊರಕ್ಕೆ ಬರಲು ನನಗೆ ಸಹಾಯ ಮಾಡಿ. ಬೇಗ ನನ್ನನ್ನು ಹೊರಕ್ಕೆಳೆಯಿರಿ!''


''ಸಹಾಯ? ಮೂರ್ಖ ಮುದುಕನೇ, ಮೊದಲೇ ಯಾಕೆ ಅಳತೆ ತೆಗೆದುಕೊಳ್ಳಲಿಲ್ಲ? ಸ್ವಲ್ಪ ತಡೆ. ಮೊದಲು ಒಂದು ಕೈ ಹೊರಕ್ಕೆ ಹಾಕು ಹ್ಞಾಂ! ಈಗ ತಲೆಯನ್ನು ಹೊರಗೆ ತಾ. ಹೊರಕ್ಕೆ ನುಸುಳಲು ಪ್ರಯತ್ನಿಸು. ಚಾಂಡಾಲನೇ! ಯಾಕೆ ಹೀಗೆ ಮಾಡಿದೆ? ಈಗ ನನ್ನ ಹೂಜಿಯ ಗತಿಯೇನು?''

ಝಿ ಡೀಮಾನನ್ನು ಹೊರಕ್ಕೆ ತೆಗೆಯುವ ಪ್ರಯತ್ನಗಳೆಲ್ಲ ವಿಫಲವಾದೊಡನೆ ಡಾನ್‌ಲೋಲೋ ಯೋಚನೆಗೆ ಬಿದ್ದ. ''ಸುಮ್ಮನಿರಿ, ಸುಮ್ಮನಿರಿ. ನನ್ನನ್ನು ಯೋಚಿಸಲು ಬಿಡಿ'' ಎನ್ನುತ್ತ ಹೂಜಿಯನ್ನೊಮ್ಮೆ ಕುಟ್ಟಿ ಪರೀಕ್ಷಿಸಿದ. ಹೊಚ್ಚ ಹೊಸತರಂತೆ ಅದು ಸದ್ದು ಹೊರಡಿಸಿತು.

''ಒಳ್ಳೇದು. ರಿಪೇರಿಯನ್ನೇನೋ ಚೆನ್ನಾಗಿ ಮಾಡಿದ್ದೀಯಾ. ಆದರೆ ಮುಂದಿನ ಸಮಸ್ಯೆಯ ಬಗ್ಗೆ ನಾನು ವಕೀಲರನ್ನೇ ಕಾಣಬೇಕು. ನನ್ನ ಹಕ್ಕು ಬಾಧ್ಯತೆಗಳ ರಕ್ಷಣೆ ಮಾಡಿಕೊಳ್ಳಬೇಕಷ್ಟೇ? ಅದುವರೆಗೆ ನೀನು ನಿನ್ನ ಸ್ವಂತ ಹಿತ ದೃಷ್ಟಿಯಿಂದ ಶಾಂತಚಿತ್ತನಾಗಿರಬೇಕು. ಇಗೋ ನಿನ್ನ ಮಜೂರಿ-ಐದು ಲ್ಯಾರ್, ಸಾಕಷ್ಟೇ?'' ''ನನಗೇನೂ ಬೇಡ. ನನ್ನನ್ನು ಹೊರಕ್ಕೆ ಬಿಟ್ಟರೆ ಸಾಕು'' ಎಂದು ಝಿ ಡೀಮಾ ಕೂಗಿದ. ''ಹೊರಗಂತೂ ಬರುತ್ತೀಯಾ. ಆದರೆ ನ್ಯಾಯ ಸಮ್ಮತವಾದ ನಿನ್ನ ಮಜೂರಿಯನ್ನು ನಾನು ಕೊಡಲೇಬೇಕಷ್ಟೇ?'' ಎಂದು ಡಾನ್‌ಲೋಲೋ ಐದು ಲ್ಯಾರುಗಳನ್ನು ಹೂಜಿಯೊಳಕ್ಕೆ ಹಾಕಿದ. ಬಳಿಕ ಕಾಳಜಿಪೂರ್ಣ ದನಿಯಲ್ಲಿ ''ನಿನ್ನ ಊಟವಾಗಿದೆಯೇ? ಸ್ವಲ್ಪ ಬ್ರೆಡ್ ಮತ್ತೇನಾದರೂ ತಿನ್ನುತ್ತಿಯಾ? ಬೇಡವೇ? ನೋಡು, ನ್ಯಾಯಸಮ್ಮತವಾದ ನನ್ನ ಕರ್ತವ್ಯವನ್ನು ನಾನು ಮಾಡುತ್ತಿದ್ದೇನೆ. ಬೇಡವಾದರೆ ಬಿಡು.'' ಎಂದು ನುಡಿದು ಕುದುರೆಯೇರಿ ಶಹರಕ್ಕೆ ಹೊರಟ.



ಲೂಯಿ ಗೆ ಪಿರಾಂಡೆಲೋ (1867-1936) ಹುಟ್ಟಿದ್ದು ಸಿಸಿಲಿಯಲ್ಲಿ, ಮಾಫಿಯಾದೊಂದಿಗೆ ಹೋರಾಡುತ್ತಿದ್ದ ಗಂಧಕದ ಗಣಿಗಳ ಶ್ರೀಮಂತ ಮಾಲಿಕನೊಬ್ಬನ ಮಗನಾಗಿ. ರೋಮ್ ಯೂನಿವರ್ಸಿಟಿಯಲ್ಲಿ ಅಧ್ಯಯನ ನಡೆಸುತ್ತಿದ್ದಾಗ ಸಾಹಿತ್ಯದತ್ತ ಆಕರ್ಷಿತನಾದ. ಮುಂದೆ ಜರ್ಮನಿಗೆ ಹೋಗಿ ಫಿಲಾಲಜಿಯಲ್ಲಿ ಡಾಕ್ಟರೇಟು ಮಾಡಿದ. ಇಟಲಿಗೆ ಮರಳಿ, ತನ್ನ ತಂದೆಯ ಬಿಸಿನೆಸ್ ಪಾರ್ಟನರನ ಮಗಳನ್ನೇ ಮದುವೆಯಾದ. ಮುಂದಿನ ಹತ್ತಾರು ವರ್ಷ ಹಲವು ಸಣ್ಣ ಕತೆಗಳನ್ನು ಬರೆದು ಪ್ರಕಟಿಸಿದ. ಆಗೊಮ್ಮೆ ಅವನ ತಂದೆಯ ಗಣಿಗಳೆಲ್ಲ ಮಹಾಪೂರದಲ್ಲಿ ತುಂಬಿಹೋಗಿ ನಾಶವಾದವು. ಒಂದು ಕಾಲಕ್ಕೆ ಯುವರಾಜನಂತೆ ಜೀವಿಸಿದ್ದ ಲೂಯ್ಗಿ ಕಡು ಬಡತನವನ್ನು ಕಾಣಬೇಕಾಯ್ತು. ಅವನ ಹೆಂಡತಿ ಮಾನಸಿಕ ರೋಗಿಯಾದಳು. ಲೂಯ್ಗಿ ಸಾಹಿತ್ಯದ ಅಧ್ಯಾಪನ ವೃತ್ತಿಯನ್ನು ಕೈಗೊಂಡ. ನಾಟಕಗಳನ್ನು ಬರೆಯತೊಡಗಿದ. ''ಲೇಖಕನ ಶೋಧದಲ್ಲಿ ಆರು ಪಾತ್ರಗಳು'' (Six characters in search of an Author) ಅವನ ಬಹು ಚರ್ಚಿತ ನಾಟಕಗಳಲ್ಲೊಂದು. 1934ರಲ್ಲಿ ನೊಬೆಲ್ ಬಹುಮಾನ ಬಂದ ನಂತರ ಲೂಯ್ಗಿ ತನ್ನೆಲ್ಲ ಗೌರವಧನವನ್ನು ತನ್ನ ಮೂವರು ಮಕ್ಕಳಲ್ಲಿ ಸರಿಸಮವಾಗಿ ಹಂಚಿ ದೇಶಾಂತರಕ್ಕೆ ಹೋದ. ಗುರಿಯಿಲ್ಲದೆ, ವಿಳಾಸವಿಲ್ಲದೆ, ಯಾವ ಆಸ್ತಿಯನ್ನೂ ಹೊಂದದೆ ಅನಾಮಧೇಯ ಪರಿವ್ರಾಜಕನಾಗಿ ಊರೂರು ಸುತ್ತುತ್ತ 1936ರಲ್ಲಿ ಮಡಿದ.



ಈ ಕತೆಯನ್ನು ಕನ್ನಡಕ್ಕೆ ತಂದಿರುವ ಶರದ್ ಸೌಕೂರ್, ಸೂಕ್ಷ್ಮ ಸಂವೇದನೆಯ ಸಾಹಿತ್ಯ ಪ್ರೇಮಿ. ಕತೆ, ಕವಿತೆ ಬರೆದಿದ್ದಾರೆ. ಸಿನಿಮಾ, ಕಲೆ, ಸಮಾಜಶಾಸ್ತ್ರ ಆಸಕ್ತಿಯ ಕ್ಷೇತ್ರಗಳು. ಮುಂಬಯಿಯಲ್ಲಿ ಬ್ಯಾಂಕ್ ಉದ್ಯೋಗದಲ್ಲಿದ್ದಾರೆ.

ಲಾಯರನ್ನು ಕಾಣಲು ಅವನು ಬಹಳ ಹೊತ್ತು ಕಾಯಬೇಕಾಗಲಿಲ್ಲ. ಆದರೆ ಪ್ರಕರಣವನ್ನು ಕೇಳಿ ಅವರು ಹೊಟ್ಟೆ ಹಿಡಿದುಕೊಂಡು ನಗಲು ಪ್ರಾರಂಭಿಸಿದ ಬಳಿಕ ಅದು ಮುಗಿಯುವ ತನಕ ಸುಮಾರು ಹೊತ್ತು ಕಾಯಬೇಕಾಯಿತು.

''ಹೂಜೆಯ ಒಳಗೇ ಇದ್ದಾನೆ. ಹೊರಕ್ಕೆ ಬರಲಾಗುತ್ತಿಲ್ಲ, ಹ್ಞಂ? ಇದಕ್ಕೇನೆನ್ನುತ್ತಾರೆ ಗೊತ್ತೇ? 'ಅಕ್ರಮ ಬಂಧನ'. ತನ್ನನ್ನು ಅಕ್ರಮವಾಗಿ ಬಂಧಿಸಿದ್ದರ ಬಗ್ಗೆ ಅವನೇ ನಿನ್ನ ಮೇಲೆ ಖಟ್ಲೆ ಹಾಕಬಹುದು ಗೊತ್ತೇ?''

ವಕೀಲರ ಮಾತಿಗೆ ಡಾನ್‌ಲೋಲೋ ಹೌ ಹಾರಿದ.

''ಆದರೆ ನಾನು ಅವನನ್ನು ಬಂಧಿಸಿಲ್ಲ. ಅವನು ತನ್ನನ್ನು ತಾನೇ ಬಂಧಿಸಿಕೊಂಡಿದ್ದಾನೆ.''

ವಕೀಲರು ವಿವರಿಸಿದರು-ಇದರಲ್ಲಿ ಎರಡು ಪಾಯಿಂಟುಗಳಿವೆ. ಮೊದಲನೇದಾಗಿ ಡಾನ್‌ಲೋಲೋ ಝಿ ಡೀಮಾನನ್ನು ಕೂಡಲೇ ಬಿಡುಗಡೆ ಮಾಡಬೇಕು. ಎರಡನೇದಾಗಿ ಝಿ ಡೀಮಾ ತನ್ನಿಂದಾದ ಹಾನಿಯನ್ನು ತುಂಬಿಕೊಡಬೇಕು.

''ಹ್ಞಾಂ! ನನ್ನ ಹೂಜೆಯ ಕ್ರಯವನ್ನು ಅವನು ಕೊಡಬೇಕು, ಅಲ್ಲವೆ?''

''ಇಲ್ಲ. ಹೊಸ ಹೂಜೆಯದಲ್ಲ. ಅವನು ಕೈಗೆ ತೆಗೆದುಕೊಂಡಾಗಿನ ಒಡೆದ ಹೂಜೆಗಷ್ಟೇ ಅವನು ಬಾಧ್ಯ.''

''ಆದರೆ ಅವನದನ್ನು ಹೊಸದರಷ್ಟೇ ಚೆನ್ನಾಗಿ ರಿಪೇರಿ ಮಾಡಿದ್ದಾನೆ''

''ಹಾಗಾದರೆ ಅವನದೇ ಅಂದಾಜಿನ ಪ್ರಕಾರ ಅದರ ಕ್ರಯವನ್ನು ಕಂಡು ಹಿಡಿದು, ಅಷ್ಟನ್ನೇ ಪಡೆಯಬಹುದು. ತನ್ನ ಕೆಲಸದಲ್ಲಿ ತೋರಿಸಿದ ಅದಕ್ಷತೆ ಮತ್ತು ಮೂರ್ಖತೆಗಾಗಿ ಅವನದನ್ನು ಭರಪಾಯಿ ಮಾಡಬೇಕಾಗುತ್ತದೆ.''

ಇಂತಹ ಕಾನೂನು ಸಲಹೆಯಿಂದ ಸಮಾಧಾನಿತನಾಗಿ ಡಾನ್‌ಲೋಲೋ ಮರಳಿದ.

ದಿನವಿಡೀ ಬೋನಿಗೆ ಬಿದ್ದ ಕಾಡುಪ್ರಾಣಿಯಂತೆ ಒದ್ದಾಡುತ್ತಿದ್ದ ಝಿ ಡೀಮಾ ಸಂಜೆಯಾಗುತ್ತಿದ್ದಂತೆ ಶಾಂತನಾಗತೊಡಗಿದ್ದ. ವಿಧಿಯ ವಿಪರ್ಯಾಸವನ್ನು ಅವನು ಸ್ವೀಕರಿಸಿದಂತಿತ್ತು. ಇದು ತನ್ನ ಜೀವನದ ಒಂದು ಕೌತುಕಭರಿತ ಸಾಹಸ ಅಥವಾ ಹಾಸ್ಯಮಯ ಸನ್ನಿವೇಶವೆಂದು ಅವನು ಗಣಿಸಲು ತೊಡಗಿದ್ದ. ಹೂಜೆಯಲ್ಲಿ ಬಂಧಿತ ಮನುಷ್ಯನ ಚೋದ್ಯವನ್ನು ನೋಡಲು ಊರಿಗೆ ಊರೇ ಬಂದು ಹೋಗಿತ್ತು. ಹಲವರಿಗೆ ಅವನ ಬಗ್ಗೆ ಸಹಾನುಭೂತಿಯೂ ಇತ್ತು. ನೆರೆದಿದ್ದ ಜನರನ್ನು ಬದಿಗೆ ಸರಿಸಿ ಡಾನ್‌ಲೋಲೋ ಹೂಜೆಯೊಳಗೆ ಬಗ್ಗಿ ''ಹಲೋ! ಹೇಗಿದ್ದೀಯಾ?'' ಎಂದ.

''ಚೆನ್ನಾಗಿಯೇ ಇದ್ದೇನೆ. ಇದು ನನ್ನ ಮನೆಗಿಂತ ಚೆನ್ನಾಗಿದೆ'' ಎಂದು ಉತ್ತರ ಬಂತು.

''ಒಳ್ಳೇದು, ಸಂತೋಷ. ನಿನಗೆ ಗೊತ್ತೇ? ಈ ಹೂಜೆಗಾಗಿ ನಾನು ನಾಲ್ಕು ಫ್ಲೋರಿನ್ ತೆತ್ತಿದ್ದೇನೆ. ಈಗ ಇದರ ಬೆಲೆ ಎಷ್ಟಿರಬಹುದು?''

''ನನ್ನನ್ನು ಸೇರಿಸಿಯೇ?''

ಜನರೆಲ್ಲ ಗೊಳ್ಳನೆ ನಕ್ಕರು.

''ಹಾಸ್ಯ ಬೇಡ. ನೋಡು, ನೀನು ರಿಪೇರಿ ಮಾಡಿದ ಹೂಜೆಗೆ ಬೆಲೆಯಿಲ್ಲವೆಂದಾದರೆ ನಿನ್ನ ಸಿಮೆಂಟು ನಿರರ್ಥಕ. ಮತ್ತು ನೀನೊಬ್ಬ ಮೋಸಗಾರ. ಹಾಗಲ್ಲವಾದರೆ ನಿನ್ನ ಅಂದಾಜಿನ ಪ್ರಕಾರ ಈಗ ಇದರ ಬೆಲೆ ಎಷ್ಟೆಂದು ಹೇಳು.''

ಸ್ವಲ್ಪ ಮೌನದ ನಂತರ ಝಿ ಡೀಮಾ ನುಡಿದ.

''ಕೇವಲ ನನ್ನ ಸಿಮೆಂಟಿನಿಂದ ನನಗೆ ಬೇಕಾದಂತೆ ನೀವು ರಿಪೇರಿ ಮಾಡಲು ಬಿಟ್ಟಿದ್ದರೆ ಇದಕ್ಕೆ ಮೊದಲಿನದೇ ಕಿಮ್ಮತ್ತಿತ್ತು. ಮೇಲಾಗಿ ನಾನಿದರ ಒಳಹೊಕ್ಕು ಬಂಧಿತನಾಗುತ್ತಲೂ ಇರಲಿಲ್ಲ. ಆದರೆ ನೀವು ಹಟಹಿಡಿದು ಒಳಗಿನಿಂದ ಪಟ್ಟಿ ಹೊಡೆಸಿದ್ದರಿಂದ ಇದರ ಬೆಲೆ ಈಗ ಹೆಚ್ಚೆಂದರೆ ಮೊದಲ ಬೆಲೆಯ ಮೂರನೇ ಒಂದು ಭಾಗದಷ್ಟಾಗಬಹುದು.''

''ಅಂದರೆ ಒಂದು ಫ್ಲೋರಿನ್ ಮತ್ತು ಮೂವತ್ತಮೂರು ಸೆಂಟ್ಸ್. ಒಳ್ಳೇದು. ನೀನು ಈ ಮೊತ್ತವನ್ನು ಕೊಡುತ್ತೀಯೆಂದು ವಾಗ್ದಾನ ಮಾಡು. ನಿನ್ನನ್ನು ಈಗಲೇ ಹೊರಗೆ ಬಿಡುತ್ತೇನೆ.''

''ಏನು ಹೇಳುತ್ತಿದ್ದೀರಿ?'' ಝಿ ಡೀಮಾಗೆ ಅರ್ಥವಾಗಲಿಲ್ಲ.

''ನೋಡು, ನಾನು ವಕೀಲರ ಸಲಹೆ ಪಡೆದು ಬಂದಿದ್ದೇನೆ. ನಿನ್ನದೇ ಅಂದಾಜಿನ ಪ್ರಕಾರ ನೀನು ಹೂಜೆಯ ಬೆಲೆಯನ್ನು ಭರಿಸುವದಾದರೆ ಹೂಜೆಯನ್ನೊಡೆಯಲು ನಾನು ತಯಾರಿದ್ದೇನೆ.''

''ನಾನು ಹಣ ಕೊಡಬೇಕೇ? ನೀವು ನನ್ನನ್ನು ಹೊರಕ್ಕೆ ತೆಗೆಯುವದೇ ಬೇಡ. ನಾನು ಇದರಲ್ಲೇ ಇದ್ದು ಬಿಡುತ್ತೇನೆ''

ಇಂಥದೊಂದು ಸಾಧ್ಯತೆಯ ಬಗ್ಗೆ ಡಾನ್ ಲೋಲೋ ಆಗಲಿ ಅವನ ವಕೀಲರಾಗಲಿ ಯೋಚಿಸಿಯೇ ಇರಲಿಲ್ಲ. ಮತ್ತೊಮ್ಮೆ ವಕೀಲರ ಸಲಹೆ ಪಡೆಯಬೇಕೆಂದು ಡಾನ್ ಲೋಲೋಗೆ ಅನಿಸತೊಡಗಿತ್ತು. ಆದರೆ ಆಗಲೇ ಕತ್ತಲಾಗತೊಡಗಿತ್ತು. ಕೈಕೈ ಹಿಸುಕಿಕೊಳ್ಳುತ್ತ ಅವನು ಬುಸುಗುಟ್ಟಿದ. ಹಾಗಾದರೆ ಕ್ರಯವನ್ನು ಕೊಡುವದರಿಂದ ತಪ್ಪಿಸಿಕೊಳ್ಳಲು ನೀನು ಹೂಜೆಯಲ್ಲೇ ವಾಸ್ತವ್ಯ ಹೂಡುವ ಯೋಚನೆಯಲ್ಲಿದ್ದೀಯಲ್ಲವೇ? ನಿನ್ನ ಹೇಳಿಕೆಗೆ ಇಲ್ಲಿ ನೆರೆದವರೆಲ್ಲ ಸಾಕ್ಷಿ. ನಾಳೆ ಬೆಳಿಗ್ಗೆಯೇ, ನನ್ನ ಹೂಜೆಯನ್ನು ಅಕ್ರಮವಾಗಿ ಆಕ್ರಮಿಸಿ, ಅದರ ನ್ಯಾಯಸಮ್ಮತ ಉಪಯೋಗದಿಂದ ನನ್ನನ್ನು ವಂಚಿಸಿದ ಬಗ್ಗೆ ನಿನ್ನ ಮೇಲೆ ಖಟ್ಲೆ ಹಾಕುತ್ತೇನೆ, ನೋಡುತ್ತಿರು.''

ತನ್ನ ಉಡುಪಿನೊಳಗಿಂದ ಎಲ್ಲಿಂದಲೋ ಕೊಳಕು ಪ್ಯಾಪೊಂದನ್ನು ತೆಗೆದು ಸೇದಲು ತೊಡಗಿದ್ದ ಝಿ ಡೀಮಾ ನಾಟಕೀಯವಾಗಿ ನುಡಿದ:

''ಇಲ್ಲ ನ್ಯಾಯವಾದಿಗಳೇ! ನಿಮ್ಮನ್ನು ನಿಮ್ಮ ಯಾವ ಹಕ್ಕುಬಾಧ್ಯತೆಗಳಿಂದ ವಂಚಿಸುವ ಇರಾದೆ ನನಗಿಲ್ಲ. ನಾನು ಸ್ವಂತ ಖುಷಿಯಿಂದ ಇಲ್ಲಿ ವಾಸ್ತವ್ಯ ಹೂಡಿಲ್ಲ. ಆದರೆ ನಿಮಗೆ ಹಣ ಕೊಡುವದನ್ನು ಮಾತ್ರ ನನಗೆ ಕನಸಿನಲ್ಲೂ ಎಣಿಸಲು ಸಾಧ್ಯವಿಲ್ಲ.''

ಸಿಟ್ಟಿನಿಂದ ಹುಚ್ಚನಂತಾಗಿದ್ದ ಡಾನ್ ಲೋಲೋ ಹೂಜೆಯನ್ನು ಎರಡೂ ಕೈಗಳಿಂದ ಗಲಗಲ ಅಲುಗಿಸಿ, ''ಹಾಗಾದರೆ ಇದರಲ್ಲೇ ಕೊಳೆತು ಸಾಯಿ!'' ಎಂದು ಶಪಿಸಿ ಮನೆಗೆ ಮರಳಹತ್ತಿದ. ಝಿ ಡೀಮಾ ನಗುತ್ತ ''ನನ್ನ ಸಿಮೆಂಟ್ ಎಷ್ಟು ಚೆನ್ನಾಗಿ ಕೆಲಸಮಾಡಿದೆಯೆಂಬುದನ್ನು ನೋಡಿ'' ಎಂದು ಕೂಗಿ ಹೇಳಿದ.

ಕೆಲಸದಾಳುಗಳು, ಆ ರಾತ್ರಿಯನ್ನು ಮನೆಗೆ ಮರಳದೇ, ಹೊಲದಲ್ಲೇ ಝಿ ಡೀಮಾನೊಂದಿಗೆ ಕಳೆಯುವದೆಂದು ನಿಶ್ಚಯಿಸಿದ್ದರು. ಒಂದು ಬಗೆಯ ಹಬ್ಬದ ವಾತಾವರಣ ಅವರಲ್ಲಿ ಏರ್ಪಟ್ಟಿತ್ತು. ಬೆಳಿಗ್ಗೆ ಡಾನ್‌ಲೋಲೋ, ಹೂಜೆಯಲ್ಲಿ ಹಾಕಿ ಹೋದ ಐದು ಲ್ಯಾರಿನಿಂದ ಬೇಕಾದ ಖರೀದಿಗಳನ್ನು ಅವರು ಮಾಡಿದ್ದರು. ಹುಣ್ಣಿಮೆಯ ಬೆಳದಿಂಗಳು ಅವರ ಸಡಗರಕ್ಕೆ ಇಂಬುಕೊಟ್ಟಿತ್ತು.

ಮಧ್ಯರಾತ್ರಿ ಕಳೆದ ಎಷ್ಟೋ ಹೊತ್ತಿನ ಬಳಿಕ ಡಾನ್ ಲೋಲೋ ಗಾಣದ ಶೆಡ್ಡಿನ ಕಡೆಯಿಂದ ಕೇಳಿಬರುತ್ತಿದ್ದ ಸದ್ದುಗದ್ದಲಕ್ಕೆ ಎಚ್ಚೆತ್ತ. ಬಾಲ್ಕನಿಯಿಂದ ನೋಡಿದಾಗ ಬೆಳದಿಂಗಳಲ್ಲಿ ಹೂಜೆ ಥಳಥಳ ಹೊಳೆಯುತ್ತಿತ್ತು. ಅದರ ಸುತ್ತಲೂ ಪಾನಮತ್ತ ಕೆಲಸದಾಳುಗಳು ಚಪ್ಪಾಳೆ ತಟ್ಟುತ್ತ ವೃತ್ತಾಕಾರವಾಗಿ ಕುಣಿಯುತ್ತಿದ್ದಾರೆ. ಹೂಜೆಯೊಳಗಿಂದ ಝಿ ಡೀಮಾ ಎತ್ತರದ ದನಿಯಲ್ಲಿ ಹಾಡುತ್ತಿದ್ದಾನೆ. ಅವರ ಈ ಉನ್ಮತ್ತ ಉಲ್ಲಾಸ ಅರ್ಥವಾಗದೆ, ಪಂಥಾಹ್ವಾನವೊಂದನ್ನು ತನತ್ತ ಎಸೆಯುತ್ತಿರುವಂತೆ ಡಾನ್ ಲೋಲೋಗೆ ಅನಿಸತೊಡಗಿತು. ಅವನು ಹುಚ್ಚು ಗೂಳಿಯಂತೆ ಗಾಣದ ಶೆಡ್ಡಿನ ಕಡೆ ನುಗ್ಗಿ, ಹೂಜೆಯನ್ನೊಮ್ಮೆ ಬಲವಾಗಿ ಒದ್ದುಬಿಟ್ಟ. ಈ ಆಘಾತಕ್ಕೆ ಹೂಜೆ ಪಕ್ಕದ ಇಳಿಜಾರಿನಲ್ಲಿ ಉರುಳುತ್ತ ಸಾಗಿ, ಹೊನ್ನೆಯ ಮರವೊಂದರ ಕಾಂಡಕ್ಕೆ ಅಪ್ಪಳಿಸಿ ಚೂರುಚೂರಾಯಿತು. ಮೊಟ್ಟೆಯೊಡೆದು ಬಂದ ಹಕ್ಕಿಮರಿಯಂತೆ ಝಿ ಡೀಮಾ ಆಳುಮಕ್ಕಳ ಹರ್ಷೋದ್ಗಾರಗಳ ನಡುವೆ ಎದ್ದುನಿಂತ. ಮೂಡಣದಲ್ಲಾಗ ನೇಸರು ಮೂಡತೊಡಗಿತ್ತು.




ನಮ್ಮ ಮನೆಯಲ್ಲೊಂದು ಗುಬ್ಬಿ ಗೂಡು ಕಟ್ಟಿತ್ತು. ಆ ಗೂಡು ನಾನು ಮಲಗುವ ಮಂಚದ ಮೇಲ್ಗಡೆ ಛತ್ತಿನಲ್ಲಿತ್ತು. ಗೂಡು ಕಟ್ಟಿ ಹುಲ್ಲು ಹಾಸಿತ್ತು. ಅದಕ್ಕಾಗಿ ವಾರಗಟ್ಟಲೇ ಪ್ರಯತ್ನ ಮಾಡಿತ್ತು. ಬಹುತೇಕ ಅದಕ್ಕೆ ಅಲ್ಲಿ ಮೊಟ್ಟೆ ಇಡಬೇಕಾಗಿತ್ತೇನೋ! ಮೊಟ್ಟೆ ಇಟ್ಟಿತು. ಎಣಿಸಿದಂತೆ ಒಂದು ನಾಲ್ಕು ದಿನ ಗೂಡಿನಿಂದ ಒಂದು ಕಸವೂ ನನ್ನ ತಲೆಯ ಮೇಲೆ ಬೀಳಲಿಲ್ಲ. ಬಹುತೇಕ ಕಾವು ಕೊಡುತ್ತಿರಬೇಕು. ಮೊಟ್ಟೆ ಒಡೆಯಿತು; ಮರಿಯು ಹೊರಬಿದ್ದಿತು; ಗದ್ದಲ ಶುರುವಾಯಿತು. ಗುಬ್ಬಿಯ ಗೂಡು ಮದುವೆಯ ಸಂಭ್ರಮದಂತೆ ಗದ್ದಲದಲ್ಲಿ ತುಂಬಿತು. ಮರಿಗಳ ಚೀಂ ಚೀಂ ಕೂಗು ಅಳುವೋ ನಗುವೋ ಎಂದು ನನಗೆ ತಿಳಿಯಲಿಲ್ಲ. ತಾಯಿಗುಬ್ಬಿ ಮಾತ್ರ ಕ್ಷಣ-ಕ್ಷಣಕ್ಕೆ ಢ್ರರ್ರ-ಢ್ರರ್ರ ಎಂದು ಹೊರಗೆ ಮತ್ತು ಒಳಗೆ ಹಾರಡುತ್ತಲೇ ಇರುತ್ತಿತ್ತು. ತಾಯಿಯ ರೆಕ್ಕೆಯ ಸಪ್ಪಳಕ್ಕೆ ಮೊದಲು ಗೂಡಿನಂಚಿನವರೆಗೆ ತೂರಿಬಂದ ಮರಿಗಳು ತಮ್ಮ ಬಾಯಿಯನ್ನು ತೆರೆದುಕೊಂಡು ಗದ್ದಲವೆಬ್ಬಿಸುತ್ತಿದ್ದವು. ತಾಯಿಯ ಬಾಯಿಯ ತುತ್ತನ್ನು ಕಸಿದು ನುಂಗುವ ಗದ್ದಲದಲ್ಲಿ ಒಂದೆರಡು ಮರಿಗಳು ನನ್ನ ಬೋಳು ತಲೆಯ ಮೇಲೆ ಬಿದ್ದು ಪ್ರಾಣ ಕಳೆದು ಕೊಂಡಿದ್ದವು. ತಾಯಿಗುಬ್ಬಿ ನನ್ನ ಮಂಚಕ್ಕೆ ಬಂದು ಅವುಗಳನ್ನು ವಿಚಾರಿಸಿಕೊಂಡಿದ್ದಿಲ್ಲ. ಕೆಲವು ದಿನ ಕಳೆದವು. ನೋಡನೋಡುತ್ತಲೇ ಗದ್ದಲ ಶಾಂತವಾಯಿತು. ಬಹುತೇಕ ಮರಿಗಳು ರೆಕ್ಕೆ ಬಲಿತು ಹಾರಿ ಹೋದವೇನೋ. ಮತ್ತೆ ತಾಯಿಯತ್ತ ಹಾರಿ ಬಂದಿದ್ದನ್ನು ಕಾಣೆ.


ಕಥೆಯೊಂದನ್ನು ಬರೆಯಬೇಕೆಂದಾಗ, ಈ ಗುಬ್ಬಿಯ ನೆನಪು, ಆಕಸ್ಮಿಕವೋ, ಸ್ವಾಭಾವಿಕವೋ ನೆನಪಿಗೆ ಬಂದಿತ್ತು. ನಾನು ಬರೆಯಬೇಕೆಂದು ಮನಸ್ಸು ಮಾಡಿದ ಕತೆ ಇನ್ನೊಂದು ವಿಷಯವನ್ನು ನೆನಪಿಗೆ ತರುತ್ತದೆ.

ನಾನಿರುವುದು ಹೂ ತೋಟದ ನಗರ ಬೆಂಗಳೂರು. ಸುದೈವವೋ ದುರ್ದೈವವೋ ನನ್ನ ಬಾಡಿಗೆಯ ಮನೆಯಿರುವುದು ಕೊಳಚಿ ಪ್ರದೇಶದ ಎದುರುಗಡೆ. ನನ್ನ ಮನೆಯ ಎದುರುಗಡೆಯ ರಸ್ತೆಯ ಆಚೆಗೆ, ಅದಕ್ಕೆ ತಾಗಿಯೇ ಹರಕು-ಮುರುಕು ಗುಡಿಸಿಲುಗಳ ರಾಶಿ. ಈ ಕೊಳಚೆಯ ನೆನಪು ಯಾಕೆ ಬಂತೆಂದರೆ ಅದರ ಸಮೃದ್ಧ ಕೊಳಚೆಯಲ್ಲಿ ಹುಟ್ಟಿ ಬೆಳೆದು ಸ್ವಚ್ಛಂದವಾಗಿ ಅಡ್ಡಾಡುವ ದಷ್ಟ-ಪುಷ್ಟ ಪಕ್ಕಾ ಕಂತ್ರಿ ನಾಯಿಗಳು. ಈ ನಾಯಿಗಳ ಹಿಂಡುಗಳ ಮಧ್ಯ, ಮೈ ಮೇಲೆ ಚೂರು ಬಟ್ಟೆಯಿಲ್ಲದೆ, ಚಿಕ್ಕ-ಚಿಕ್ಕ ಎಲುಬಿನ ಹಂದರಗಳಂತೆ ಕುಣಿದಾಡುವ ಬೀದಿಯ ಮಕ್ಕಳು.

ಮಾಘದ ಚಳಿಯಲ್ಲಿ ಗುಡಿಸಿಲಿನ ಸಂದಿ-ಸಂದಿಗಳಿಂದ ತಲೆ ಹಾಕಿ ಕಿರುಚಾಡುವ ನಾಯಿಮರಿಗಳು. ತಾಯಿಯೆಂದು ನಂಬಿಕೊಂಡ ಹೆಣ್ಣುನಾಯಿಯ ಹಿಂದೆ ಹತ್ತಾರು ಮರಿಗಳು ಅದರ ಮೊಲೆಗಳನ್ನು ಹಿಡಿಯುವ ಗುದ್ದಾಟದಲ್ಲಿ ರಸ್ತೆಯ ತುಂಬ ಓಡಾಡುವುದೇ ಓಡಾಡುವುದು. ತಾಯಿ ಮಲಗಿತೋ ಅದರ ಮೈಮೇಲೆ ಬಿದ್ದು ಹೊರಳಾಡುವುದು. ಆ ಹೆಣ್ಣುನಾಯಿ ಈಗ ತುಂಬ ಬಡಕಲಾಗಿದೆ. ಮೈಯಲ್ಲಿ ರಕ್ತ, ಮೊಲೆಯಲ್ಲಿ ಹಾಲು ಇಲ್ಲದಾಗಿದೆ. ಹಾಗಾಗಿ ಮರಿಗಳಿಂದ ತಪ್ಪಿಸಿಕೊಂಡು ಸಂದಿ-ಗೊಂದಿಗಳಲ್ಲಿ ಓಡಾಡುತ್ತಲೇ ಇರುತ್ತದೆ. ಹಳಸಿದ ಅನ್ನದ ಅಗಳುಗಳು, ಮಾಂಸದ ತುಂಡುಗಳನ್ನು ಆಕಸ್ಮಿಕವಾಗಿ ಕಂಡರೆ ಅವುಗಳನ್ನು ತಿನ್ನಲು ಸ್ವಲ್ಪ ಅಲ್ಲಲ್ಲಿ ನಿಲುತ್ತದೆ. ಆಗ ಬೆನ್ನು ಹತ್ತಿ ಬಂದ ಮರಿಗಳು ಆ ತುಂಡುಗಳಿಗೆ ಮುಗಿಬೀಳುತ್ತವೆ. ಅದೇ ಸೂಕ್ತ ಸಮಯವೆಂದುಕೊಂಡು ತಾಯಿ ಆ ತುಂಡುಗಳನ್ನು ಅವುಗಳಿಗೆ ಬಿಟ್ಟು ಬದಿಯ ಬೂದಿಗುಪ್ಪೆಯ ಮೇಲೆ ಸತ್ತ ಹಾಗೆ ಮಲಗಿ ಬಿಡುತ್ತದೆ.




ಕಥೆಯನ್ನು ಬರೆಯಬೇಕಾಗಿದೆ. ಅದೂ ಈ ಹೊಸ ಮಿಲ್ಲೆನಿಯಂ ಕಥೆ. ಆದರೆ ತೊಡಕೆಂದರೆ ಕಥೆಯನ್ನು ಇನ್ನೇನು ಪ್ರಾರಂಭಿಸಬೇಕು! ಅಷ್ಟರಲ್ಲಿ ಮತ್ತೇನೋ ನೆನಪಾಗಿಬಿಡುತ್ತದೆ. ನೋಡಿ-ಆಗ ಹೇಳಿದೆನಲ್ಲ ನನ್ನ ಮನೆ ಕೊಳಚೆ ಪ್ರದೇಶದ ಎದುರಿನಲ್ಲಿದೆ ಎಂದು. ಹಾಗಾಗಿ, ಮಾನವರ ಕಥೆಗೆ ಮೊದಲು ಪ್ರಾಣಿಗಳ ನೆನಪೇ ಹೆಚ್ಚಾಗಿ ಬಂದುಬಿಡುತ್ತದೆ. ಈಗ ನೋಡಿ ಹೊಟ್ಟೆಗೆ ತಿನ್ನಲು ಏನೂ ಇಲ್ಲವಾದರೂ ಈ ಕೊಳಚೆಯ ಮಕ್ಕಳು ರಸ್ತೆಯ ತುಂಬ ಎಲ್ಲೆಂದರಲ್ಲಿ ಕಕ್ಕಸು ಮಾಡುತ್ತಲೇ ಇರುತ್ತವೆ. ಗುಡ್ಡೆ-ಗುಡ್ಡೆಯಾಗಿ ಬಿದ್ದ ಈ ರಾಶಿಗೆ ಶುಂಡಿ ಚಪ್ಪರಿಸುತ್ತ ಹಂದಿಗಳ ಹಿಂಡು ಮುಗಿಬೀಳುತ್ತದೆ. ರಸ್ತೆಯ ಮೇಲೆ ಕಾಲಿಡಲು ಹೇಸಿಗೆಯಾಗಿದ್ದಾಗ, ಬೆಳಗಿನ ಜಾವದಲ್ಲಿ ದಾಳಿಯಿಡುವ ಹಂದಿಗಳನ್ನು ಕಂಡರೆ ಹಾರ್ದಿಕ ಸ್ವಾಗತ ನೀಡುವ ಉತ್ಸುಕತೆ ಮತ್ತು ಪ್ರೀತಿ ನನಗೆ. ಒಂದಷ್ಟೂ ಅನುಮಾನಿಸದೆ ನಮ್ಮ ಮನೆಯ ಗೇಟಿನ ಬಳಿ ನಿಂತು ಅವುಗಳನ್ನೇ ಮಮತೆಯ ಕಣ್ಣಿನಿಂದ ನೋಡುತ್ತ ಇದ್ದುಬಿಡುತ್ತೇನೆ. ಒಂದು ಹೆಣ್ಣು ಹಂದಿಯ ಹಿಂದೆ ಹತ್ತೆಂಟು ಪುಟಿಯುವ ಚೆಂಡಿನಂತಹ ಮರಿಗಳು. ತಾಯಿಹಂದಿ ತಿಪ್ಪೆಯನ್ನು ಮುಗಿಸಿ ಮುಂದೆ ಸಾಗಿದಂತೆಲ್ಲ ಮರಿಗಳು ಹಿಂದೆ ಹಿಂದೆ ಗುದ್ದಾಡುತ್ತ ಸಂತಸದಿಂದ ಸಾಗುತ್ತವೆ. ಕೆಲವು ದಿನಗಳ ನಂತರ ಆ ಹಂದಿಮರಿಗಳ ಲೋಕವೇ ಬೇರೆಯಾಗಿಬಿಡುತ್ತದೆ. ''ಯಾರಿಗೆ ಯಾರೋ ಪುರಂದರ ವಿಠಲ...''



ಪಿ.ವ್ಹಿ. ಶಾಸ್ತ್ರಿ ಕಿಬ್ಬಳ್ಳಿ

ನಮ್ಮ ಮನೆಯಲ್ಲೊಂದು ಗುಬ್ಬಿ...!



ಈಗ ಕಥೆಯನ್ನು ಬರೆಯಲು ಪ್ರಾರಂಭಿಸಬೇಕು ಎಂದು ದೃಢ ಸಂಕಲ್ಪ ಮಾಡುತ್ತೇನೆ. ಅಷ್ಟರಲ್ಲಿ untamed Africaದ ದೃಶ್ಯಗಳು ನೆನಪಿಗೆ ಬಂದು ಬಿಡುತ್ತವೆ. ಚಿರತೆಗಳು ತಮ್ಮ ಮರಿಗಳನ್ನು ನೆಕ್ಕಿ ನೆಕ್ಕಿ ಸ್ವಚ್ಛ ಮಾಡುವ ದೃಶ್ಯ. ಆ ಮರಿಗಳು ತಾಯ ಬೆನ್ನು ಹತ್ತಿ ಕೆಳಗೆ ಹಾರಿ ಆಟವಾಡುವ ದೃಶ್ಯ. ತಾಯಿ ಚಿರತೆ ಚಿಗರೆಗಳ ಬೆನ್ನುಹತ್ತಿ, ಬೇಟೆಯಾಡಿ, ಅದರಲ್ಲೊಂದರ ಗಂಟಲು ಕಚ್ಚಿ, ಮರಿಗಳ ಮುಂದೆ ತಂದು ಹಾಕುವ ದೃಶ್ಯ. ಈ ಎಲ್ಲ ವಿಷಯಗಳನ್ನು ಮನದಲ್ಲಿ ತುಂಬಿಟ್ಟುಕೊಂಡು ಕಥೆಯನ್ನು ಪ್ರಾರಂಭಿಸುವುದು ಹೇಗೆ ಎಂಬ ಕಾರಣದಿಂದ ಈ ಪ್ರಸಂಗವನ್ನು ಹೇಳ ಹೊರಟಿದ್ದು.

ನನ್ನ ದುರ್ದೈವದಿಂದಲೋ ಸುದೈವದಿಂದಲೋ ಬೆಂಗಳೂರಿನಂಥ ಹೂದೋಟದ ನಗರದಲ್ಲಿ ನನಗೆ ಬಾಡಿಗೆ ಮನೆ ಸಿಕ್ಕಿದ್ದು ಕೊಳಚೆ ಪ್ರದೇಶದ ಎದುರುಗಡೆ ಎಂದು ಮೊದಲೊಮ್ಮೆ ಹೇಳಿದ್ದೇನೆ. ಕೆಲವೊಮ್ಮೆ ಬೆಳಗ್ಗೆ ಐದು ಘಂಟೆಗೆ ಎಚ್ಚರವಾಗುವುದುಂಟು. ಬಹುತೇಕ ಎಲ್ಲ ಗುಡಿಸಲುಗಳ ಮೇಗಡೆ ಹೊಗೆ ಹಾಯುತಿದ್ದರೂ, ಒಂದು ಗುಡಿಸಿಲಿನಲ್ಲಿ ಮಾತ್ರ ಎಚ್ಚರಾದ, ಕೆಲಸ ಪ್ರಾರಂಭವಾದ ಸುಳಿವು ಕಾಣುತ್ತಿರಲಿಲ್ಲ. ಕಾರಣವಿಷ್ಟೆ: ಆ ಗುಡಿಸಲು ಒಬ್ಬ ಕುರುಡನಿಗೆ ಸೇರಿದ್ದು, ಸದಾ ಕತ್ತಲೆಯ ಲೋಕದಲ್ಲಿ ಬದುಕಿದ್ದ ಅವನಿಗೆ ಬೆಳಗಾಗುತ್ತಿರುವುದರ ಅರಿವಿರುತ್ತಿರಲಿಲ್ಲ. ಆತನಿಗೆ ಎಂಟೋ ಹತ್ತೋ ಮಕ್ಕಳು. ಹೆಂಡತಿ ಸತ್ತುಹೋಗಿದ್ದಾಳೆ. ಆ ಮಕ್ಕಳಲ್ಲಿ ಹಿರಿಯುವ ಚಿಕ್ಕ-ಪುಟ್ಟ ಕಾಟ್ರಾಕ್ಟ್ ಮಾಡಿ ಕೊಳಚೆ ಪ್ರದೇಶದಲ್ಲಿಯೇ ಗಾರೆ ಮನೆ ಕಟ್ಟಿ-ಕೊಂಡು ಪ್ರತ್ಯೇಕವಾಗಿದ್ದಾನೆ.


ಎರಡನೆಯವನು ಗಾರೆ ಕೆಲಸ ಮಾಡಿಕೊಂಡು ದಿನಕ್ಕೆ ನೂರೈವತ್ತು ರೂಪಾಯಿ ಗಳಿಸುತ್ತ ಬೇರೆ ಮನೆ ಮಾಡಿಕೊಂಡಿದ್ದಾನೆ. ಮೂರು ಮತ್ತು ನಾಲ್ಕನೆಯವನು ಸೇರಿ ಸಿಮೆಂಟು ಕಲಸುವ ಒಂದು ಬಂಡಿಯನ್ನಿಟ್ಟು ಕೊಂಡಿದ್ದಾರೆ. ಐದು ಮತ್ತು ಆರನೆಯವರಿಬ್ಬರು ಜೊತೆಯಲ್ಲಿದ್ದುಕೊಂಡು ಬಡಗಿಯ ಕೆಲಸ ಮಾಡುತ್ತಿರುತ್ತಾರೆ. ಏಳನೆಯವನು ಮಾತ್ರ ತಂದೆಯ ಜೊತೆ ಹೊಗೆ ಹಾಯದ ಗುಡಿಸಲಿನಲ್ಲಿದ್ದಾನೆ. ತಂದೆಯನ್ನು ಸಾಧಾರಣ ಏಳು ಗಂಟೆಗೆ ರಸ್ತೆಗೆ ತಂದು, ಕೈಗೆ ಒಂದು ಬಡಿಗೆ ಕೊಟ್ಟು, ರೈಲ್ವೆ ಸ್ಟೇಶನ್‌ಗೆ ಮುಖ ಮಾಡಿ ನಿಲ್ಲಿಸಿ, ಹೋಗೋ ಅನ್ನುತ್ತಾನೆ; ಮತ್ತೊಂದು ಕಡೆ ಎಲ್ಲಿಗೋ ತಾನು ಹೊರಟು ಬಿಡುತ್ತಾನೆ. ಮುದುಕ ರೈಲ್ವೆ ಸ್ಟೇಶನ್ ಎದುರು ಎಲ್ಲೋ ಒಂದು ಕಡೆ ಕುಳಿತು ''ತಾಯಿ ಕುರುಡಾ, ಏನಾದ್ರೂ ಹಾಕಿ'' ಎಂದು ಎಡೆ ಬಿಡದೆ ಕೂಗುತ್ತ ಇರುತ್ತಾನೆ. ಸುಮಾರು ರಾತ್ರಿ ಹತ್ತು ಗಂಟೆಗೆ ಆ ಮಗ ತಂದೆ ಎಂಬ ಆ ಮುದುಕನನ್ನು ದಬ್ಬಿಕೊಂಡು ಗುಡಿಸಲಿನೆದುರು ತಂದು ಕೂಡಿಸುತ್ತಾನೆ. ಅವನ ಬೇಡುವ ಬಟ್ಟಲಲ್ಲಿ ಬಿದ್ದ ಚೂರು-ಪಾರು ದುಡ್ಡನ್ನು ಒಟ್ಟು ಗೂಡಿಸಿಕೊಂಡು ಹೊರಡುತ್ತಾನೆ. ಸುಮಾರು ಹನ್ನೆರಡು ಘಂಟೆಯ ಹೊತ್ತಿಗೆ ಗುಡಿಸಲಲ್ಲಿ ಮಲಗಿದ್ದವರೆಲ್ಲ ಎದ್ದು ಕೂಡುವಂತೆ ಕೂಗಾಡುತ್ತ, ತೂರಾಡುತ್ತ ತಂದೆಯ ಗುಡಿಸಲಿನ ಬಳಿ ಬಂದು ತಂದೆಯನ್ನು ಎಳೆದು ಬದಿಗೆ ಸರಿಸುತ್ತಾ, ಒಳಗೆ ಹೋಗಿ ದೊಪ್ಪೆಂದು ಬೀಳುತ್ತಾನೆ.

ಹದಿನೈದು ದಿನಗಳಿಂದ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಎದುರಿನ ಗುಡಿಸಿಲುಗಳ ಸುತ್ತ ನೀರು ಮಡುಕಟ್ಟಿ ನಿಂತಿತ್ತು. ತುಂಬಿಕೊಂಡ ನೀರನ್ನು ಮೊರದಲ್ಲಿ, ಪಾತ್ರೆಯಲ್ಲಿ ತುಂಬಿ ಹೊರದಬ್ಬುವ ಕೆಲಸ ನಡೆದೇ ಇತ್ತು. ಆ ರೆಕ್ಕೆ ಬಲಿತ ಹುಡುಗ ಗುಡಿಸಲಿನ ಹತ್ತಿರ ಕಾಣುತ್ತಲೇ ಇರಲಿಲ್ಲ.

ಒಂದು ದಿನ ಬೆಳಗಿನಲ್ಲಿ ನೋಡುತ್ತೇನೆ: ಆ ಗುಡಿಸಲಿನ ಸುತ್ತ ಆಚೆ-ಈಚೆ ಜನ ಕಿಕ್ಕಿರಿದು ತುಂಬಿಕೊಂಡಿದ್ದಾರೆ. 'ಭೀಮಣ್ಣ' ಎಂದು ನನಗೆ ಗುರುತಿದ್ದವನೊಬ್ಬನನ್ನು ಹೆಸರಿಡಿದು ಕರೆದೆ. ''ಏನು, ಹಾಗೇಕೆ ಜನ ಸೇರಿಕೊಂಡಿದ್ದಾರೆ?'' ಎಂದೆ. ''ಆ ಕುರುಡ ಸತ್ತು ಬಿದ್ದಾನ್ರಿ, ಗಬ್ಬ ವಾಸನೆ ಹೊಡಿತತ್ರಿ, ಎಲ್ಲರೂ ಬಂದಾರ್ರಿ, ಹೆಣ ನಗಾರಿ ಹಾಗೆ ಉಬ್ಬಿಕೊಂಡಿದೆ. ಅವ್ನ ಮಗ ಮಾತ್ರ ಕಾಣಾಕೆ ಇಲ್ರಿ'' ಎಂದ. ''ಹಾಗಾದ್ರೆ ಈಗ ಏನ ಮಾಡ್ತೀರಿ''? ''ಏನು ಮಾಡೋದ್ರಿ, ಎತ್ಕೊಂಡ್ ಹೋಗಿ ಮಣ್ಣ ಮಾಡೋದ್ರಿ,'' ಅಂದ.

ಬೆಳಗಾಯಿತು. ನನ್ನ ಮಂಚದ ಮೇಲಿನ ಗುಬ್ಬಿಯ ಗೂಡಿನಲ್ಲಿ ಮತ್ತೆ ಚಿಲಿಪಿಲಿ ಗದ್ದಲ ಶುರುವಾಗಿದೆ. ಆ ಗುಬ್ಬಿಯೆಂದೋ ಮೊಟ್ಟೆಯಿಟ್ಟಿರಬೇಕು. ಮರಿಗಳು ಹೊರ ಬಂದಿರಬೇಕು. ತಾಯಿ ಗುಬ್ಬಿ ಒಂದೊಂದೆ ಹುಳ ಹಿಡಿದುಕೊಂಡು ನಸುಕಿನಲ್ಲೇ ಬಂದಿರಬೇಕು. ಗುಟುಕಿಗಾಗಿ ಮರಿ ಗುಬ್ಬಿಗಳ ಚಿಲಿಪಿಲಿ ಗದ್ದಲ. ಕಿಡಕಿಯ ಹೊರಗಡೆ ರಸ್ತೆಯಲ್ಲಿ ಶ್ರಾವಣದ ಸಂಭ್ರಮದಲ್ಲಿ ನಾಯಿಗಳು ಬೊಗಳುತ್ತಿವೆ, ಕಾದಾಡುತ್ತಿವೆ, ಸಡಗರದಲ್ಲಿ. ಹಂದಿಗಳು ಹೊಸ ಮರಿಗಳ ಮೆರವಣಿಗೆಯಲ್ಲಿ ಸಾಗಿವೆ. ನಮ್ಮ ಮನೆಯಲ್ಲೊಂದು ಗುಬ್ಬಿ ಗೂಡು ಕಟ್ಟಿತು... ರೆಕ್ಕೆ ಬಲಿತು...







ವೈಜ್ಞಾನಿಕ ದೃಷ್ಟಿಕೋನ ಅಂದರೇನು?

ರಾಹುಕಾಲ ನೋಡಿ ಉಪಗ್ರಹಗಳನ್ನು ಉಡಾಯಿಸುವ ವಿಜ್ಞಾನಿಗಳು ಒಂದೆಡೆ... ಮಂಡಿಗಾಯವನ್ನು ಎಳನೀರಿನಿಂದ ತೊಳೆಯುವ ಆದಿವಾಸಿಗಳು ಇನ್ನೊಂದೆಡೆ. ವಿಜ್ಞಾನವೇ ಹೊಸ ಯುಗಧರ್ಮ ಎನ್ನುವ ಚಿಂತಕರಿದ್ದಾರೆ. ವಿಜ್ಞಾನ ಸೃಜನಶೀಲತೆಗೆ ವಿರುದ್ಧವಾದದ್ದು ಎನ್ನುವ ಕಲೆಗಾರರೂ ಇದ್ದಾರೆ. 'ವೈಜ್ಞಾನಿಕ ದೃಷ್ಟಿಕೋನ' ಬರೇ ವಿಜ್ಞಾನದ ವಿದ್ಯಾರ್ಥಿಗಳ ಗುತ್ತಿಗೆ ಅಂತ ಕೆಲವರು, ಕಾಮನ್ ಸೆನ್ಸೇ ವೈಜ್ಞಾನಿಕ ಅಂತ

ರಾಘವೇಂದ್ರ ಪಾಟೀಲ

ಹರಿವ ನೀರಲ್ಲಿ ಒಂಟಿ ಕಾಲು

ವೈಜ್ಞಾನಿಕ ದೃಷ್ಟಿಕೋನವೆನ್ನುವುದು ಒಂದು ತರ್ಕ ವಿನ್ಯಾಸ; ಬದುಕಿನ ಹರವಿಗೆ ಒಂದು ನಂಬಿಕೆಯ ಚೌಕಟ್ಟನ್ನು ಕಟ್ಟಿಕೊಡುವಂತಹದು. ನನ್ನ ಬದುಕಿನ ನಡೆಯು ಸರಿಯೇ-ತಪ್ಪೇ...? ನಾನು ಹೀಗೆ ಬದುಕದೆ ಹಾಗೆ ಬದುಕಿದರೆ ಏನು ತಪ್ಪು? ಅಥವಾ ಹಾಗೆ ಬದುಕುವುದು ಎಷ್ಟು ಒಳ್ಳೆಯದು?... ಇತ್ಯಾದಿಯಾಗಿ ಬದುಕಿನ ನಡೆಯನ್ನು ವೈಚಾರಿಕತೆಯ ಒಂದು ತರ್ಕದ ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದು ವೈಜ್ಞಾನಿಕ ದೃಷ್ಟಿಕೋನವಾಗಿದೆ.

ಯಾವತ್ತಾದರೂ, ಮನುಷ್ಯ ತನ್ನ ಬದುಕಿನ ಹೊರಗಿರುವ ಯಾವದಾದರೊಂದು ವ್ಯವಸ್ಥೆಯಲ್ಲಿ, ಕ್ರಿಯಾಶೀಲವಾಗಿರುವ ತರ್ಕ ವಿನ್ಯಾಸವನ್ನು ಆಧರಿಸಿ ಅರ್ಥೈಸಿಕೊಳ್ಳುತ್ತ, ತನ್ನ ಬದುಕಿನ ನಡೆಗೆ ನಂಬಿಕೆಯ ಒಂದು ಚೌಕಟ್ಟನ್ನು ನಿರ್ಮಿಸಿಕೊಳ್ಳುತ್ತಾನೆ... ಸೌರಮಂಡಲದ ವ್ಯವಸ್ಥೆ, ತನ್ನ ಸುತ್ತಲೂ ಕಾಣುವ ಋತುಮಾನಗಳ ವ್ಯವಸ್ಥೆ, ಸಸ್ಯ ಪ್ರಪಂಚ-ಅವುಗಳ ಹೂ ಬಿಡುವಿಕೆ-ಕಾಯಿ ಕಟ್ಟುವಿಕೆಯ ವ್ಯವಸ್ಥೆ, ಕ್ರಿಮಿ ಕೀಟಾದಿ ಪ್ರಾಣಿಗಳ ಜೀವನ ಚಕ್ರದ ವ್ಯವಸ್ಥೆ, ವಸ್ತುಗಳ ರಚನೆಯನ್ನು ಕುರಿತಾಗಿ ಇದ್ದ ತಿಳಿವಳಿಕೆ/ನಂಬಿಕೆಗಳ ವ್ಯವಸ್ಥೆ, ಯಂತ್ರಗಳು ಕೆಲಸ ಮಾಡುವ ತತ್ವಗಳ ವ್ಯವಸ್ಥೆ-ಹೀಗೆ ಮನುಷ್ಯನ ಸುತ್ತಲೂ ಇರುವ ಹತ್ತು ಹಲವು ವ್ಯವಸ್ಥೆಗಳಲ್ಲಿ ಅಡಕವಾಗಿರುವ ತರ್ಕಗಳು ಸೇರಿ ಉಂಟಾದ ಒಂದು ತರ್ಕ ವಿನ್ಯಾಸವನ್ನು ಅನುಸರಿಸಿ ಮನುಷ್ಯನು ತನ್ನ ಬದುಕಿನ ನಂಬಿಕೆಯ ಚೌಕಟ್ಟನ್ನು ರಚಿಸಿಕೊಳ್ಳುತ್ತಾನೆ.



ಮಲ್ಲಾಡಿಹಳ್ಳಿಯಲ್ಲಿ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರಾಗಿರುವ ಬೆಳಗಾವಿಯ ರಾಘವೇಂದ್ರ ಪಾಟೀಲ ಕನ್ನಡದ ಅತ್ಯುತ್ತಮ ಕತೆಗಾರರು. 'ಸಂವಾದ' ಎಂಬ ಸಾಹಿತ್ಯಿಕ ದ್ವೈ ಮಾಸಿಕದ ಸಂಪಾದಕರು.


ಹೀಗಾಗದೇ, ಯಾವದೋ ಒಂದು ಪ್ರಧಾನ ವ್ಯವಸ್ಥೆಯ ತರ್ಕ ವಿನ್ಯಾಸವೇ ಆದ್ಯಂತವೆಂದು ತೋರಿ, ಮನುಷ್ಯನು ಅದೊಂದನ್ನೇ ಅನುಸರಿಸುವ ಪ್ರಯತ್ನವನ್ನೂ ಮಾಡಿರುವುದುಂಟು. ಕಳೆದೆರಡು ಶತಮಾನಗಳ ಕಾಲದಲ್ಲಿ ನ್ಯೂಟನ್ ಚಲನ ಶಾಸ್ತ್ರದ ನೆಲೆಯಲ್ಲಿ ರೂಪುಗೊಂಡ ಯಂತ್ರವಾದೀ ತರ್ಕವು ಆದ್ಯಂತವೆಂದು ತೋರಿ, ಮನುಷ್ಯನು ಆ ತರ್ಕವನ್ನು ಅನುಸರಿಸಿ ತನ್ನ ಬದುಕಿನ ನಡೆಯನ್ನು ನಿರೂಪಿಸಿಕೊಂಡಿರುವುದನ್ನು, ಈ ತರ್ಕದ ಆಚೆಗಿರುವುದನ್ನೆಲ್ಲ ಅವೈಜ್ಞಾನಿಕವೆಂದು ತುಚ್ಛೀಕರಿಸಿದ್ದನ್ನು ಕಾಣುತ್ತೇವೆ; ಈ ತರ್ಕಕ್ಕೆ ಹೊಂದದ ಮನುಷ್ಯನ ಎಲ್ಲ ನಂಬಿಕೆಗಳನ್ನೂ ಅವೈಜ್ಞಾನಿಕ-ಮೂಢನಂಬಿಕೆಗಳೆಂದು ಕೀಳುಗಳೆದುದನ್ನು ಕಾಣುತ್ತೇವೆ.

ಮನುಷ್ಯನ ವೈಜ್ಞಾನಿಕ ದೃಷ್ಟಿಕೋನವು ಅಂದಂದಿನ ಪ್ರಧಾನ ವ್ಯವಸ್ಥೆಯಲ್ಲಿ, Hegemonic ಚಿಂತನೆಯಲ್ಲಿ ಅಡಕವಾಗಿರುವ ತರ್ಕವನ್ನು ಅನುಸರಿಸುತ್ತದೆ. ಭೂಮಿಕೇಂದ್ರಿತ ಸೌರಮಂಡಲದ ನಂಬಿಕೆಯ ಜಾಡು ಒಂದು ಕಾಲಕ್ಕಾದರೆ, ಸೂರ್ಯಕೇಂದ್ರಿತವಾದದ ಸರದಿ ಮತ್ತೊಂದು ಕಾಲಕ್ಕೆ. ದೈವಸೃಷ್ಟಿವಾದ (Theory of Special creation)ವು ಒಂದು ಕಾಲದಲ್ಲಿ ಮನುಷ್ಯನ ಜೀವನಕ್ಕೆ ಪ್ರೇರಣೆ ನೀಡಿದರೆ, ಜೀವ ವಿಕಾಸ ತತ್ವವು ಮುಂದಿನ ಕಾಲಕ್ಕೆ ಪ್ರೇರಣೆ ನೀಡಿದೆ. ಈ ಜೀವವಿಕಾಸ ತತ್ವ ಕುರಿತಂತೆಯೂ ಸೃಷ್ಟಿ ಸಂಕಲ್ಪದ ಪರಿಕಲ್ಪನೆಯ ಪ್ರೇರಣೆ ಮತ್ತು ಜೀವಿಯ ಆಯ್ಕೆಯ ಸ್ವಾತಂತ್ರ್ಯದ ಪ್ರೇರಣೆಗಳಿವೆ. ಇವೆಲ್ಲವುಗಳಿಗಿಂತಲೂ ಮೂಲ ಭೂತವಾದ-ನ್ಯೂಟನ್‌ನ ಭೌತಶಾಸ್ತ್ರ ಮತ್ತು ಯಂತ್ರವಾದೀ ತರ್ಕದ ಪ್ರೇರಣೆ ಒತ್ತಟ್ಟಿಗಾದರೆ, ಐನ್‌ಸ್ಟೀನ್‌ನ ಸಾಪೇಕ್ಷವಾದ, ವಸ್ತು-ಶಕ್ತಿಗಳ ದ್ವಂದ್ವಮಾನ ಸ್ವರೂಪದ ಅಸ್ತಿತ್ವ ಮತ್ತು ಕ್ವಾಂಟಮ್ ಚಲನಶಾಸ್ತ್ರದ ಪರಿಕಲ್ಪನೆಗಳು ನೀಡುವ ಪ್ರೇರಣೆಗಳು ಮತ್ತೊಂದು ಕಡೆಗಿವೆ.

ಇವೆಲ್ಲವುಗಳ ನಡುವೆ ಅಂದಂದಿನ ಕಾಲದಲ್ಲಿ ನಿಂತಿರುವ ಮನುಷ್ಯನ, ತನ್ನ ಕಾಲವೇ ಸ್ಥಿರವಾದದ್ದು, ಅದೇ ಕೊನೆ ಪೂರೈಸುವಂತಹದು ಎಂದು ನಂಬುತ್ತ, ತನ್ನ ಕಾಲದ ಪ್ರಧಾನ ವ್ಯವಸ್ಥೆಯ ತರ್ಕವೊಂದೇ ಆದ್ಯಂತವಾದದ್ದೆಂದು ಘೋಷಿಸುತ್ತಾನೆ. ಹರಿವ ನದಿಯಲ್ಲಿ ಕಾಲನ್ನು ಎತ್ತಿ ಎತ್ತಿ ಅದ್ದುತ್ತ, ತಾನು ಅದೇ ಬದಲಾಗದ ನದಿಯಲ್ಲಿ ನಿಂತಿದ್ದೇನೆ ಎಂದುಕೊಳ್ಳುತ್ತಾನೆ!

ರಾಘವೇಂದ್ರ ಪಾಟೀಲ


ಕೆಲವರು. ಮತ್ತು ಇದ್ಯಾವುದರ ಗೊಡವೆಗೂ ಹೋಗದೆ 'ಎಂದಿನಿಂದ ಹರಿವ ನೀರಿ'ನ 'ಈಗಿನ ಅಲೆ'ಗಳಲ್ಲಿ ಈಸುತ್ತಲೇ ಜಯಿಸಲೆತ್ನಿಸುವ ನಿತ್ಯಯಾತ್ರಿಗಳು...
'ವೈಜ್ಞಾನಿಕ ದೃಷ್ಟಿಕೋನ' ಮನುಷ್ಯನ ವಿಕಾಸ ಮಾರ್ಗದ ಸಹಜ ಸ್ಥಿತಿಯೇ? ಅಥವಾ ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಳ್ಳಬೇಕಾದ ಸಂಗತಿಯೆ? ಅನಿವಾರ್ಯವೇ?
'ವೈಜ್ಞಾನಿಕ ದೃಷ್ಟಿಕೋನ'ವನ್ನು ನೀವು ಹೇಗೆ ಪರಿಭಾವಿಸುತ್ತೀರಿ?



ಜಿ. ರಾಜಶೇಖರ್

ವೈಜ್ಞಾನಿಕ ದೃಷ್ಟಿಕೋನವನ್ನೂ ಪ್ರಶ್ನಿಸಬೇಕು

ಹಿರೋಶಿಮ ಮತ್ತು ನಾಗಸಾಕಿಗಳ ಮೇಲೆ ನಡೆದ ಅಣುಬಾಂಬ್ ಸ್ಫೋಟವನ್ನು ಕೂಡ ಒಂದು ಪ್ರಯೋಗ ಎಂದು ಭಾವಿಸಿದ ಅಣು ವಿಜ್ಞಾನಿಗಳಿದ್ದರು. ಆದರೆ ಅಣುವಿಜ್ಞಾನದ ಮೂಲ ಪುರುಷರಲ್ಲಿ ಒಬ್ಬನಾದ ಒಪೆನ್ ಹೀಮರ್, ಆ ಸ್ಫೋಟದಿಂದ ಆದ ಸಾವು-ನೋವು ಕಂಡು ಮಾನಸಿಕ ಆಘಾತಕ್ಕೆ ಒಳಗಾದ; ಇನ್ನೊಬ್ಬ ವಿಜ್ಞಾನಿ ಐನ್‌ಸ್ಟೀನ್, ''ತಾನು ಒಬ್ಬ ವಿಜ್ಞಾನಿಯಾಗಿರುವುದರ ಬದಲು, ತನ್ನ ಅಪ್ಪನ ಹಾಗೆ ವಾಚ್ ರಿಪೇರಿ ಮಾಡಿಕೊಂಡಿದ್ದರೇ ಚೆನ್ನಾಗಿರುತ್ತಿತ್ತು'' ಎಂದು ಉದ್ಗರಿಸಿದ. ಇತ್ತೀಚೆಗೆ ಭಾರತ, ಪರೀಕ್ಷಾರ್ಥವಾಗಿ ಒಂದು ಅಣುಬಾಂಬ್ ಸ್ಫೋಟಿಸಿದಾಗ, ಅದೊಂದು ವೈಜ್ಞಾನಿಕ ಸಾಧನೆ ಎಂದು ಪ್ರಶಂಸಿಸಿದವರಲ್ಲಿ ವಿಜ್ಞಾನಿಗಳೂ ಇದ್ದರು. ವಿಜ್ಞಾನಿಗಳಲ್ಲದವರೂ ಇದ್ದರು. ಭಾರತದ ಅಣು ಆಯೋಗದ ಮುಖ್ಯಸ್ಥರೂ, ಸ್ವತಃ ಒಬ್ಬ ಅಣು ವಿಜ್ಞಾನಿಯೂ ಆಗಿರುವ ಅನಿಲ್ ಕಾಕೋಡ್ಕರ್, ಆ ಪ್ರಯೋಗದ ಸಾಮಾಜಿಕ-ನೈತಿಕ ಪ್ರಶ್ನೆಗಳು ತನಗೆ ಸಂಬಂಧ ಪಡದ ವಿಚಾರಗಳು ಎಂದು ಹೇಳಿದರು. ಆದರೆ ಭಾರತದ ಈ ಪ್ರಯೋಗವನ್ನು ಪ್ರತಿಭಟಿಸಿದವರಲ್ಲಿ ಅನೇಕ ವಿಜ್ಞಾನಿಗಳು ಇದ್ದರು. ಅಣುಬಾಂಬ್ ಪರ ಮತ್ತು ವಿರುದ್ಧದ ಈ ಪ್ರತಿಕ್ರಿಯೆಗಳಲ್ಲಿ ಯಾವುದು ವೈಜ್ಞಾನಿಕ ದೃಷ್ಟಿಕೋನ?



ಸ್ಪಷ್ಟ, ಸೂಕ್ಷ್ಮ ಚಿಂತನೆ, ಬರವಣಿಗೆಗೆ ಹೆಸರಾಗಿರುವ ಜಿ. ರಾಜಶೇಖರ ಉಡುಪಿಯಲ್ಲಿ ಜೀವ ವಿಮಾ ನಿಗಮದಲ್ಲಿ ಕೆಲಸ ಮಾಡುತ್ತಾರೆ.

ಅಣುಬಾಂಬ್ ಕೇವಲ ಒಂದು ಉದಾಹರಣೆ: ವಿಜ್ಞಾನದ ಪರಿಣಾಮಗಳಿಗೆ ವಿಜ್ಞಾನ ಎಷ್ಟರ ಮಟ್ಟಿಗೆ ಜವಾಬ್ದಾರ? ಅಥವಾ ಅದಕ್ಕೆ ಯಾವ ಜವಾಬ್ದಾರಿಯೂ ಇಲ್ಲವೆ? ಈ ಪ್ರಶ್ನೆ 20 ನೆಯ ಶತಮಾನದಲ್ಲಿ ಮತ್ತೆ ಮತ್ತೆ ಕೇಳಿಬಂದಿದೆ. ಅದು ಇನ್ನೂ ಒಂದು ನಿಲುಗಡೆಗೆ ಬಂದಿಲ್ಲ. ವಿಜ್ಞಾನದ ಪರಿಣಾಮ ಮಾತ್ರವಲ್ಲ, ಅದರ ಸತ್ಯಾನ್ವೇಷಣೆಯ ವಿಧಾನ ಕೂಡ ಈಗ ಸಂದೇಹಕ್ಕೆ ಒಳಗಾಗಿದೆ. ಮನುಷ್ಯ ಪ್ರಕೃತಿಯ ಒಂದು ಭಾಗ ಎಂಬುದನ್ನು ಮರೆತು, ವಿಜ್ಞಾನ, ಮನುಷ್ಯಪ್ರಜ್ಞೆಯನ್ನು ಪ್ರಕೃತಿಯಿಂದ ಪ್ರತ್ಯೇಕಿಸಿದೆ. ಪ್ರಕೃತಿ ಈಗ ಮನುಷ್ಯನ ನೋಟ, ಅಧ್ಯಯನ ಮತ್ತು ಪ್ರಯೋಗಗಳಿಗೆ ಒಂದು ವಸ್ತುವಾಗಿದೆ. ಜ್ಞಾನಯುಗದ ಚಿಂತಕ ಡೇಕಾರ್ಟೆಯ, 'I think therefore I am' ಎಂಬ ಮಾತು, ವಿಜ್ಞಾನದ ಈ ಆತ್ಮವಿಶ್ವಾಸವನ್ನು ಬಿಂಬಿಸುತ್ತದೆ. ಈ ಮಾತಿಗೆ ಪ್ರತಿಯಾಗಿ, ಸೆನೆಗಾಲ್‌ನ ಕವಿ ಸೆನೆಟ್ ಸೆಂಗೋರ್, 'I feel, therefore I am' ಎಂದು ಹೇಳಿದ. ವಿಷಾದ ಅಥವಾ ಇತರ ಯಾವುದೇ ಭಾವನೆಗೂ ವಿಜ್ಞಾನದಲ್ಲಿ ಎಡೆ ಇಲ್ಲ. ಆ ದೃಷ್ಟಿಯಿಂದ ಅನಿಲ್ ಕಾಕೋಡ್ಕರ್ ನಿಜವಾದ ವಿಜ್ಞಾನಿ. ಅಣುಬಾಂಬ್ ಸ್ಫೋಟದ ನಂತರ ಒಪೆನ್, ಹೀಮರ್ ಮತ್ತು ಐನ್‌ಸ್ಟೀನ್ ತಮ್ಮ ಅಸ್ತಿತ್ವವನ್ನು ತಮ್ಮ ಭಾವನೆಗಳಲ್ಲಿ ಅರಸಿದರು. ಅವರ ಸಂಕಟಕ್ಕೆ ವಸ್ತುನಿಷ್ಠ ವೈಜ್ಞಾನಿಕ ದೃಷ್ಟಿಕೋನದಲ್ಲಿ ಅಭಿವ್ಯಕ್ತಿಯೇ ಇರಲಿಲ್ಲ.

ವಿಜ್ಞಾನವನ್ನು ಇನ್ನೂ ಒಂದು ನೆಲೆಯಿಂದ ಈಗ ಪ್ರಶ್ನಿಸಬೇಕಾಗಿದೆ. 20ನೆಯ ಶತಮಾನದಲ್ಲಿ ವಿಜ್ಞಾನಕ್ಕೆ, ರಾಜಕೀಯ ಪ್ರಭುತ್ವ ಅಥವಾ ಬಂಡವಾಳಶಾಹಿಯ ಜೊತೆ ಸ್ನೇಹದಿಂದ ಇರುವುದು ಅತ್ಯಗತ್ಯವಾಗಿದೆ. (ಯಾವ ವಿಜ್ಞಾನಿ ತಾನೇ ಸ್ವತಂತ್ರವಾದ ಪ್ರಯೋಗಾಲಯ ಹೊಂದಿರಬಲ್ಲ?) ವಿಜ್ಞಾನದ ಉದ್ದೇಶ ಮತ್ತು ಪರಿಣಾಮಗಳು, ಈಗೀಗ ಎಲ್ಲ ದೇಶಗಳಲ್ಲಿ, ಪ್ರಭುತ್ವದ ಅನುಕೂಲಕ್ಕೆ ತಕ್ಕಂತೆಯೇ ಇರುತ್ತವೆ. ಹೀಗಾಗಿ ವಿಜ್ಞಾನ ಪ್ರಶ್ನೆಗೆ ಒಳಪಡುವುದು ಪ್ರಜಾಪ್ರಭುತ್ವದ ರಕ್ಷಣೆಗೆ ಅವಶ್ಯವಾಗಿದೆ.

ಜಿ. ರಾಜಶೇಖರ

ವ್ಯಾಸರಾವ್ ನಿಂಜೂರ್

ಸತ್ಯಕ್ಕೆ ತೆರಬೇಕಾದ ಬೆಲೆ

ಬದುಕು ಒಂದು ಕಲೆ ಎಂದು ಪರಿಭಾಷಿಸಿದಲ್ಲಿ, ಸೃಜನಶೀಲತೆ ಮತ್ತು ವಿಜ್ಞಾನಗಳ ನಡುವೆ ವಿರೋಧಾಭಾಸವಿದೆ ಎನ್ನುವ ಕಲ್ಪನೆಯನ್ನು ಸ್ವೀಕರಿಸಲಾಗುವುದಿಲ್ಲ. ಯಾಕೆಂದರೆ, ವೈಜ್ಞಾನಿಕ ವೃತ್ತಿ-ಪ್ರವೃತ್ತಿಗಳೂ, ಮೂಲಭೂತವಾಗಿ ಸೃಜನಶೀಲತೆಯನ್ನು, ಕಲಾತ್ಮಕತೆಯನ್ನು ಮೈಗೂಡಿಸಿಕೊಂಡವೇ ಆಗಿವೆ. ಸೃಜನಶೀಲತೆ ಇಲ್ಲದ ವಿಜ್ಞಾನಿ ಕೇವಲ ಟೆಕ್ನಿಶಿಯನ್ ಆಗುವುದು ಹೀಗೆ.


ವೈಜ್ಞಾನಿಕ ಮನೋಭಾವದೊಂದಿಗೆ ಬದುಕಿನ ವ್ಯಾಪಾರಗಳಿಗೆ ಸಂವೇದಿಸುವಾಗ, ಕೆಲವೊಮ್ಮೆ ಅದ್ಭುತಗಳೆಲ್ಲ ಮೈ ನೀಗಿ, ಮೋಹಕ ಕಲ್ಪನೆಗಳು ಮುರಿದು ಮೂರಾಬಟ್ಟೆಯಾಗುವ ಸಂದರ್ಭಗಳಿವೆ. ಇದು ಸತ್ಯಕ್ಕೆ ನಾವು ತೆರಬೇಕಾದ ಬೆಲೆ ಎನ್ನುವುದು ಸ್ಪಷ್ಟ.

ಕುತೂಹಲ ಎನ್ನುವುದು ನಮ್ಮ ಬಾಳಗಂಟದ ಚಾಳಿ. ಕಂದಮ್ಮಗಳ ಕುತೂಹಲವೇ, ಬೆಳೆಯುತ್ತ ಬಂದಂತೆ, ಹಿಂದೆ ಸರಿದು, ರೂಢಿಗತ ಮೌಲ್ಯಗಳೇ ನಮ್ಮ ಸ್ಪಂದನೆಗಳಿಗೆ ಮಾರ್ಗದರ್ಶಿಯಾದಾಗ, ವೈಜ್ಞಾನಿಕ ಮನೋಭಾವ ಮಬ್ಬುಗೊಳ್ಳುವ ಅಪಾಯವಿದೆ. ಶಿಶುಗಳಿಗೆ ನಿತ್ಯ ಪರಿಪಾಠವಾದ, 'ಯಾಕೆ? ಹೇಗೆ?' ಎನ್ನುವ ಪ್ರಶ್ನೆಗಳು ನಮ್ಮನ್ನು ಅವಿರತವಾಗಿ ಕಾಡಿದಾಗ, ವೈಜ್ಞಾನಿಕವನ್ನು, ಬೇರಾವುದೇ ನಾಮಧೇಯದಿಂದ ಕರೆಯಿರಿ, ಒಂದು ದಿಕ್ಸೂಚಿ ಪ್ರಜ್ಞೆ ನಮ್ಮಲ್ಲಿ ಅನಾವರಣಗೊಳ್ಳುತ್ತದೆ. ಸಂಭಾವ್ಯವೂ, ಔಚಿತ್ಯಪೂರ್ಣವೂ ಆದ ಉತ್ತರವನ್ನು ಈ ಪ್ರಶ್ನೆಗಳಿಗೆ ಒದಗಿಸುತ್ತದೆ. ಹೀಗೆ ಪಡಿಮೂಡಿದ ತೀರ್ಮಾನವೇ ವೈಜ್ಞಾನಿಕ ನೆಲೆಯಲ್ಲೂ ಪ್ರಶ್ನಾತೀತವಾಗಿರಬೇಕು ಎನ್ನುವ ಕಟ್ಟುಪಾಡು ಇಲ್ಲಿ ಅವಶ್ಯವಿಲ್ಲ.

ವಟ ವೃಕ್ಷಕ್ಕೆ ನೂಲು ಸುತ್ತುವ, ಅಶ್ವತ್ಥ ಮರಕ್ಕೆ ಪ್ರದಕ್ಷಿಣೆ ಬರುವ ಮುತ್ತೈದೆಯರ ಆಚರಣೆ ಅವೈಜ್ಞಾನಿಕವೆನ್ನೋಣ. ಆದರೆ, ವರ್ಷಾನುವರ್ಷ, ಉರಿಬಿಸಿಲಲ್ಲಿ ನೆರಳಿನ ತಂಪೊದಗಿಸುವ, ಅಸಂಖ್ಯ ಪಕ್ಷಿ ಸಂಕುಲಗಳಿಗೆ ಆಶ್ರಯ ನೀಡುವ ಈ ಮರಗಳನ್ನು ಕೊಡಲಿ ಏಟಿನ ಕುತ್ತಿನಿಂದ ಪಾರು ಮಾಡಿದ ಈ ತಾಯಂದಿರ ಅಗೋಚರವಾದ ವೈಜ್ಞಾನಿಕ ದೃಷ್ಟಿಕೋನವನ್ನು ಅಲ್ಲಗಳೆಯಲಾದೀತೆ? ಕೆಲ ಪ್ರತಿಷ್ಠಿತ ವ್ಯಕ್ತಿಗಳು ತಮ್ಮ ಗತ್ತು, ವರ್ಚಸ್ಸು, ಶ್ರೀಮಂತಿಕೆಯನ್ನು ಪ್ರದರ್ಶಿಸಲು ನಾಗಬನವನ್ನು ಕೆಡವಿ ಅಲ್ಲಿ ಕಾಂಕ್ರೀಟಿನ ಕುರೂಪಿ ಗುಡಿಗಳನ್ನು ಈಗೀಗ ಎಬ್ಬಿಸುತ್ತಿದ್ದಾರೆ. ಆದರೆ ನಾಗನ ನಡೆಗಾಗಿ ನಿರ್ಮಿತವಾದ ಹಚ್ಚ ಹಸುರಿನ ಬನ ಒದಗಿಸಲು ನಮ್ಮ ಹಿಂದಿನ ತಲೆ ಮಾರುಗಳಿಗೆ ಮೂಡಿದ ಪ್ರೇರಣೆ ಯಾವುದು? ಇದರ ಹಿಂದೆ ಕೆಲಸ ಮಾಡಿದ ಮನೋಭಾವ ಎಂತಹುದು? ಹಳ್ಳ, ಕೊಳ, ಕೆರೆ, ಹಾದಿ, ತೋಟ, ಹುಲ್ಲುಗಾವಲು ಎಲ್ಲವನ್ನೂ ಪರಿಸರಕ್ಕೆ ಪೂರಕವಾಗಿರುವಂತೆ ಕಟ್ಟಿ ಬೆಳೆಸಿದ ನಮ್ಮ ಜನ, ಅದರ ಪಾಲನೆಗಾಗಿ ದೈವತ್ವದ ಹುಸಿ ಆರೋಪ ನೀಡಿದ್ದು ನಿಜವಾದರೂ, ಇಲ್ಲಿ ನಿಚ್ಚಳವಾಗುವ ದೃಷ್ಟಿಕೋನ ಅವೈಜ್ಞಾನಿಕವೆನ್ನಲಾದೀತೆ?

ವೈಯಕ್ತಿಕವಾಗಿ ಹೇಳಬೇಕೆಂದರೆ, ಧರ್ಮ ನಿಷ್ಠೆ ಇದ್ದಲ್ಲಿ, ವೈಜ್ಞಾನಿಕ ದೃಷ್ಟಿಕೋನ ಇರಬಾರದೆಂದೇನಿಲ್ಲ. ಆದರೆ ಅಜ್ಜ ನೆಟ್ಟ ಆಲದ ಮರಕ್ಕೆ ಜೋತು ಜೀಳುವ, ಅಲ್ಲೂ ಸಲ್ಲುತ್ತ, ಇಲ್ಲೂ ಸಲ್ಲಲೆಳೆಸುವ ಪ್ರವೃತ್ತಿ ಮಾತ್ರ ಖಂಡನೀಯ.

ವ್ಯಾಸರಾವ್ ನಿಂಜೂರ್




ಮುಂಬಯಿಯ ಬಿ.ಎ. ಆರ್.ಸಿ.ಯಲ್ಲಿ ಜೀವರಸಾಯನ ಶಾಸ್ತ್ರಜ್ಞರಾಗಿದ್ದ ವ್ಯಾಸರಾವ್ ನಿಂಜೂರ್, ಕನ್ನಡದ ನುರಿತ ಕತೆ, ಕಾದಂಬರಿಕಾರರು. ಅವರೇ ಕಂಡುಹಿಡಿದ 'ಎನ್‌ಝೈಮ್' ಒಂದು ಅವರ ಹೆಸರಿನಲ್ಲಿದೆ!

ಇಂದಿರಾ ಮೂರ್ತಿ

ವಿಜ್ಞಾನ-ವಿವೇಕಗಳ ನಡುವೆ ಅಂಥ ನಂಟಿಲ್ಲ

'ಸೈನ್ಸ್ ರಿಪೋರ್ಟರ್' ಪತ್ರಿಕೆಯ ಸಂಪಾದಕೀಯ ಬಳಗದಲ್ಲಿದ್ದ ಇಂದಿರಾ ಮೂರ್ತಿ ಈಗ ಬೆಂಗಳೂರಿನಲ್ಲಿ ವಾಸಿಸುತ್ತಾರೆ.



ಇಂದು ಯಾವುದಾದರೊಂದು ಸಮಾಜ, ಇಲ್ಲಾ ದೇಶ ಉನ್ನತ ಸ್ಥಿತಿಯಲ್ಲಿದೆಯೆಂದರೆ ಅಲ್ಲಿನ ಜನರ 'ವೈಜ್ಞಾನಿಕ ದೃಷ್ಟಿಕೋನ' ಕಾರಣ ಎಂದೇ ನನ್ನ ನಂಬಿಕೆ. ಆದರೆ ವೈಜ್ಞಾನಿಕ ದೃಷ್ಟಿಕೋನದ ಸ್ವರೂಪ ಕಾಲಕಾಲಕ್ಕೂ ಬದಲಾಗುತ್ತಾ ಬಂದಿರುವುದು ಸುಸ್ಪಷ್ಟ.

ವೈಯಕ್ತಿಕವಾಗಿ ಹೇಳಬೇಕೆಂದರೆ, ವೈಜ್ಞಾನಿಕ ಮನೋಭಾವದ ಅರಿವು ನನಗೆ ಮೂಡಿದ್ದು ನಮ್ಮ ತಂದೆಯವರಿಂದ. 45 ವರ್ಷಗಳ ಹಿಂದೆ ಅರ್ಥವಿಲ್ಲದ ಸಂಪ್ರದಾಯಗಳಿಂದ ತುಂಬಿ ತುಳುಕಾಡುತ್ತಿದ್ದ ಕಾಲದಲ್ಲಿ, ದೇವರು ಎಲ್ಲೆಲ್ಲೂ ಇರುವುದು ನಿಜವಾದರೆ, 'ಆ' ಸಮಯದಲ್ಲಿ ದೇವರ ಮನೆಗೆ ಹೋಗುವುದು, ದೇವಸ್ಥಾನಕ್ಕೆ ಹೋಗುವುದು ಕೂಡದು ಎನ್ನುವುದು ಅರ್ಥಹೀನ, ಎಂದು ಧೈರ್ಯವಾಗಿ ಹೇಳಿ, ನಂಬಿದಂತೆ ನಡೆಯುವುದನ್ನು ಕಲಿಸಿದವರು ಅವರೇ.

ನಾನು ವಾಸಿಸುತ್ತಿದ್ದ ಮುಂಬಯಿ ಅಣುಶಕ್ತಿ ನಗರದ ವಿಜ್ಞಾನಿಗಳ ಕಾಲನಿಯಲ್ಲಿ ವೆಜ್ ವಿಜ್ಞಾನಿಗಳು ನಾನ್‌ವೆಜ್ ವಿಜ್ಞಾನಿಗಳ ಮನೆಯಲ್ಲಿ 'ಟಿಫನ್ ಬೇಡ, ಹಾಲಾದರೆ ನಡೆದೀತು'' ಎನ್ನುವುದನ್ನು ನೋಡಿದಾಗ ವಿಜ್ಞಾನ-ವಿವೇಕಗಳ ನಡುವೆ ಬಿಡಿಸಲಾಗದ ನಂಟು ಇಲ್ಲವೆಂಬುದು ಮನದಟ್ಟಾಯಿತು. ಹದಿವಯಸ್ಸಿನ ಮಕ್ಕಳಿಗೆ, ಸರಿಯಾದ ರೀತಿಯಲ್ಲಿ ವೇಷಭೂಷಣ ತೊಡಬೇಕೆಂದು ಬೋಧಿಸುವ ನಾವು, ಟಿವಿಯಲ್ಲಿ 'ಬೇಲೂರು ಶಿಲಾಬಾಲಿಕೆಯರ ವಿಗ್ರಹ'ಗಳನ್ನು ತೋರಿಸಿ, ಕ್ಯಾಮರಾದ ಕಣ್ಣು ಹೆಜ್ಜೆಗಳ ಕಾಲ ಅದರ ಮೇಲೆ ಓಡಾಡುವಂತೆ ಮಾಡುವಾಗ ಕಂಡೂ ಕಾಣದಂತೆ ಇರಬಲ್ಲೆವು.

ಹೀಗಾಗಿ, ಸಂಪ್ರದಾಯ, ಸಂಸ್ಕೃತಿ, ಧರ್ಮ ಇತ್ಯಾದಿಗಳ ಹೆಸರಿನಲ್ಲಿ ನಡೆಯುವ ವಂಚನೆ (double standard) ಸ್ವಲ್ಪವಾದರೂ ಕಡಿಮೆಯಾದಾಗ ಮಾತ್ರ, ವೈಜ್ಞಾನಿಕ ಮನೋಧರ್ಮದ ಬಗ್ಗೆ ಮಾತಾಡಬಹುದೇನೋ.

ಇಂದಿರಾ ಮೂರ್ತಿ

GREENGLORY

INDIAN GREEN GLORY SERVICES PVT. LTD.

A Unit of Intigrated Greenology Charitable Trust (Reg.No. 490:95)

S.R.Plaza, 3rd Floor, No. 25/1, Lady Curzon Road, Bangalore-01. Ph: 080-5594900

ಇಂಡಿಯನ್ ಗ್ರೀನ್ ಗ್ಲೋರಿ ಸರ್ವೀಸಸ್ (IGS) ಮೂಲಕ



ಸಾಧನೆಯ ಐಖ್ಯತೆ ಮತ್ತು ಮಿತ್ರತ್ವ, ಶಾಂತಿ ಹಾಗೂ ಸಹಬಾಳ್ವೆಯ ಪ್ರೀತಿ

ಟ್ರಸ್ಟ್

ದಿ ಇಂಟಗ್ರೇಟೆಡ್ ಗ್ರೀನ್ ಗ್ಲೋರಿ ಚಾರಿಟಬಲ್ ಟ್ರಸ್ಟ್ 1995ರಲ್ಲಿ ಸ್ಥಾಪಿಸಲಾಯಿತು. ಬಡವರ ನಿರ್ಗತಿಕರ ಮತ್ತು ವಯೋವೃದ್ದರ ಸೇವೆಯೆ ಇದರ ಒಂದು ಗುರಿ. ಮಾನವ ಸಾಯುವಾಗ ಅವನೊಂದಿಗೆ ಸಂಪಾದಿಸಿದ ಯಾವುದೇ ಆಸ್ತಿ ಹಣ ಒಯ್ಯಲಾರ. ಅವನ ಜೀವಿತಾವಧಿಯಲ್ಲಿ ಮಾಡಿದ ಒಳ್ಳೆಯ ಕಾರ್ಯವಷ್ಟೇ ಸದಾ ಸ್ಮರಣೀಯ.

ಪವಿತ್ರ ಬೈಬಲ್ ಮತ್ತು ಮಹಾತಾಯಿ ಮದರ್ ಥೇರೆಸಾರವರ ಸ್ಪೂರ್ತಿ ಪಡೆದ ಈ ಟ್ರಸ್ಟ್ ಕಡು ಬಡವರಿಗೆ ನೆರವಾಗುವ ಏಕೈಕ ಉದ್ದೇಶದಿಂದ ಸ್ಥಾಪಿಸಲ್ಪಟ್ಟದೆ. ಟ್ರಸ್ಟಿನ ಈ ಉದ್ದೇಶದ ಈಡೇರಿಕೆಗೆ ನೆರವಿನ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಂಸ್ಥೆಗಳು ಕಂಪನಿಗಳು ನೀಡುವ ಉದಾರ ದೇಣಿಗೆಯನ್ನು ಸ್ವೀಕರಿಸಲಾಗುವುದು. ಈ ರೀತಿ ಟ್ರಸ್ಟ್‌ಗೆ ಆಧಾರವಾಗಿ ನಿಂತ ಸಂಸ್ಥೆಯೆಂದರೆ ಇಂಡಿಯನ್ ಗ್ರೀನ್ ಗ್ಲೋರಿ ಸರ್ವೀಸಸ್. ಇದರ ಟ್ರಸ್ಟಿಗಳು ಸ್ವಯಂ ಸೇವಕರು ನಿರ್ಲಕ್ಷಿತ ಜನರ ಅಭಿವೃ ದ್ಧಿಗೆ ನೆರವಾಗಲು ಮುಂದಾಗಿದ್ದಾರೆ.

ಉಡುಗೊರೆ ಯೋಜನೆಯೆಂದರೆ....

ಉಡುಗೊರೆಯು ಪರಸ್ಪರ ಸ್ನೇಹ, ಪ್ರೀತಿ, ಹಾರ್ಧಿಕತೆ ದ್ಯೋತಕ, ವಯಸ್ಸು ಜಾತಿ ಅಥವಾ ಮತದ ಭೇಧವಿಲ್ಲದೆ ನಮ್ಮಲ್ಲಿ ಉಡುಗೊರೆ ಸಂಪ್ರದಾಯ ಅನೂಚಾನವಾಗಿದೆ. ಪರಿಚಿತರೊಂದಿಗೆ ಮತ್ತು ಅಪರಿಚಿತರಿಗೆ ಮದುವೆ, ಹುಟ್ಟುಹಬ್ಬ, ನಿವೃತ್ತಿ, ವ್ಯಾಸಂಗ, ವಾರ್ಷಿಕೋತ್ಸವ ಮತ್ತು ಹಬ್ಬದ ಸಮಯದಲ್ಲಿ ಉಡುಗೊರೆ ಕೊಡುವಾಗ ಆಗುವ ಸಂತೋಷ ಅಷ್ಟಿಷ್ಟಲ್ಲ. ಅನಿರೀಕ್ಷಿತವಾಗಿ ಬರುವ ಉಡುಗೊರೆಯಂತೂ ಅತೀವ ಆನಂದ ಉಂಟು ಮಾಡಿ ಸಂತೋಷ, ಆಶ್ಚರ್ಯವನ್ನುಂಟು ಮಾಡುತ್ತದೆ. ಇವೆಲ್ಲಕ್ಕಿಂತ ಮಿಗಿಲಾಗಿ, ಉಡುಗೊರೆಯ ವಿನಿಮಯವು ಶಾಂತಿ, ಸಮೃದಿಯನ್ನುಂಟು ಮಾಡುತ್ತದಷ್ಟೇ ಅಲ್ಲದೆ ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಪಡಿಸುತ್ತದೆ.

ಇಂಟೆಗ್ರೇಟೆಡ್ ಗ್ರೀನಾಲಜಿ ಚಾರಿಟೆಬಲ್ ಟ್ರಸ್ಟ್‌ನ ಉದ್ದೇಶವು ಉಡುಗೊರೆಯ ಯೊಜನೆಗಳ ಮೂಲಕ, ಶಾಂತಿ, ಸಮೃದಿಯನ್ನು ತರುವುದು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವುದಾಗಿದೆ. ಒಬ್ಬ ಸದಸ್ಯನಾಗಿ ಈ ಉಡುಗೊರೆ ಯೋಜನೆಯಲ್ಲಿ ನಿಮ್ಮ ಭಾಗವಹಿಸುವಿಕೆಯು ನಿಮ್ಮನ್ನು ಅರ್ಥಿಕವಾಗಿ ಸಮೃದಗೊಳಿಸುತ್ತದೆ ಹಾಗೂ ನಿಮ್ಮ ಹಾಲಿ ವ್ಯಾಪಾರವನ್ನು ಅಭಿವೃದಿಗೊಳಿಸುತ್ತದೆ.

ಇದು ಕಾನೂನು ಬದ್ದ ಗಿಫ್ಟ್ ಸ್ಕೀಮ್ ಆಗಿದ್ದು ಸದ್ಯ ಹೀಗೆ ನಡೆಸುತ್ತಿರುವ ಕಂಪನಿಗಳಲ್ಲಿಯೇ ಇಂಡಿಯನ್ ಗ್ರೀನ್ ಗ್ಲೋರಿ ಸರ್ವಿಸಸ್ ಪ್ರೈ.ಲಿ.ಅಗ್ರ ಸ್ಥಾನದಲ್ಲಿದೆ. ಇದು ಸದಸ್ಯರಲ್ಲಿ ಮುಂದುವರೆಯುತ್ತಾ ಸಾಗುತ್ತದೆ ಹಾಗೂ ಲಾಭವನ್ನು ತರುತ್ತದೆ.

ಕಾನೂನು ಬದ್ಧ ಗಿಫ್ಟ್ ಸ್ಕೀಮ್

ಸದ್ಯ ಪ್ರಚಾರದಲ್ಲಿರುವ ಗಿಫ್ಟ್ ಯೋಜನೆಗಳನ್ನು ನಡೆಸುವ ಸಂಸ್ಥೆಗಳಲ್ಲಿ ಇಂಡಿಯನ್ ಗ್ರೀನ್‌ಗ್ಲೋರಿ ಸರ್ವಿಸಸ್ ಲಿಮಿಟೆಡ್ (ಐ.ಜಿ.ಎಸ್) ಅಗ್ರಸ್ಥಾನದಲ್ಲಿದೆ. ಈ ಐ.ಜಿ.ಎಸ್.ನ ಮಾತೃಸಂಸ್ಥೆಯಾಗಿರುವ ಇಂಟಗ್ರೇಟೆಡ್ ಗ್ರೀನ್‌ಗ್ಲೋರಿ ಚಾರಿಟೇಬಲ್ ಟ್ರಸ್ಟ್ ದೀನ ದಲಿತರಿಗೆ ಸಹಾಯ ಮಾಡುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶ. ಲೋಕ ಹಿತದ ಕಾರ್ಯಗಳಿಗೆ ಹಣ ಸಂಗ್ರಹಿಸುವುದರೊಂದಿಗೆ ಸಮಷ್ಟಿಯ ಸಮೃದ್ಧಿಯನ್ನು ಉದ್ದೇಶವಾಗಿಟ್ಟುಕೊಂಡು ಇಂಡಿಯನ್ ಗ್ರೀನ್‌ಗ್ಲೋರಿ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ.

ಈ ಉಡುಗೊರೆ ಯೋಜನೆಯಲ್ಲಿ ಎಲ್ಲ ಕೊಡು ಕೊಳ್ಳುವಿಕೆಗಳೂ ಡಿ.ಡಿ.ಯ ಮೂಲಕವೇ ನಡೆಯುತ್ತಿವೆ. ಆದ್ದರಿಂದ ಮೋಸದ ಪ್ರಶ್ನೆಯೇ ಇಲ್ಲ. ಇಲ್ಲಿ ಮನವೊಲಿಸುವಿಕೆ ಇದೆ ಹೊರತು ಒತ್ತಾಯವಿಲ್ಲ. ಪ್ರಯತ್ನಿಸಿದರೆ ಎಲ್ಲರಿಗೂ ಅವರವರ ಪ್ರಯತ್ನಕ್ಕೆ ತಕ್ಕಂತೆ ಫಲ ಲಭಿಸಿಯೇ ಲಭಿಸುತ್ತಿದೆ. ಈಗಾಗಲೇ ಅನೇಕರಿಗೆ ಪ್ರಯೋಜನವಾಗಿದೆ. ಎಷ್ಟೋ ಮಂದಿ ಸ್ವಾವಲಂಬಿಗಳಾಗಿದ್ದಾರೆ. ಇದು ಲಾಟರಿಗೆ ಹಣ ಹಾಕಿದಂತೆ ಅಲ್ಲ. ಒಬ್ಬೊಬ್ಬರು ನಾಲ್ವರಂತೆ ಹೊಸ ಸದಸ್ಯರನ್ನು ಸೇರಿಸುವ ಮೂಲಕ ಬಳಗ ಬೆಳೆಯುತ್ತಿದೆ. ಒಬ್ಬನು ಒಬ್ಬನೇ ಸದಸ್ಯನನ್ನು ಸೇರಿಸಿದರೂ ಅವನಿಗೆ ಲಾಭಕ್ಕೆ ಕೊರತೆಯಿಲ್ಲ.

★ ನೀನೇನು ಪಡೆದಿದ್ದರು ಅದನ್ನು ಇಲ್ಲಿಂದಲೇ ಪಡೆದಿರುವೆ
ಏನನ್ನು ನೀಡಿದ್ದರೂ ಅದನ್ನು ಇಲ್ಲಿಗೆ ನೀಡಿರುವೆ
ಪರಿವರ್ತನೆ ಜಗದ ನಿಯಮ ★

INSERTED BY: GREEN GLORY SERVICE PVT LTD.,
SERVICE CENTRE,
SHOP NO.1, Ist Floor,
Eureka towers, Traffic Island, HUBLI-29 PH: 0836 -256878

೨೦೦೧ನೇ ಹೊಸ ವರ್ಷದ ಯುಗಾದಿ ಹಬ್ಬಕ್ಕೆ ಇಂಡಿಯನ್ ಗ್ರೀನ್ ಗ್ಲೋರಿಯವರಿಂದ ಹಾರ್ದಿಕ ಶುಭಾಶಯಗಳು

ರೂಪರಾಜ್ ಎಂ.ಎಸ್.


ಪಶ್ಚಿಮ ಪೂರ್ವಗಳ ನಮ್ಮೀ ವಿಜ್ಞಾನಿಗಳು ಏನು ಮಾಡುತ್ತಿದ್ದಾರೆ?

ಕುತೂಹಲಾವಿಷ್ಟವಾದ ಯುಗ ಒಂದರಲ್ಲಿ ಮಾತ್ರ ಜನ್ಮ ನೀಡು-ಇದು ಪೂರ್ವದ ಒಂದು ಅನನ್ಯ ವೈದಿಕ ಪ್ರಾರ್ಥನೆ.

'ಸ್ಟ್ರಿಂಗ್-ತಂತು-ಸಿದ್ಧಾಂತದಲ್ಲಿ ದೇವರನ್ನು ಕಾಣಲು ಸಾಧ್ಯವೆ?'-ಪ್ರಶ್ನೆಗೆ ಉತ್ತರಿಸುತ್ತಾ ಜಗತ್ತಿನ ಮಹಾಮೇರು ವಿಜ್ಞಾನಿ ಸ್ಟೀಫನ್ ಹಾಕಿಂಗ್ಸ್, 'ಸಾಧ್ಯ-ಆದರೆ, ದೇವರು ಅನಿಶ್ಚಿತತೆಯ ಸಿದ್ಧಾಂತಗಳಿಂದ ಬಂಧಿಸಲ್ಪಟ್ಟಿದ್ದಾನೆ. ಆದ್ದರಿಂದ ನಿಖರವಾದ ಭವಿಷ್ಯವನ್ನು ದೇವರೂ ಕೂಡ ಹೇಳಲಾರ. ಅತಿ ಗುರುತ್ವಾಕರ್ಷಣ ಶಕ್ತಿಗಳು ತಮ್ಮ ಸಂಯಕ್-ಕ್ವಾಂಟಮ್-ಸಿದ್ಧಾಂತದಲ್ಲಿ ಸಹಜವಾಗಿ ತೆರೆದುಕೊಳ್ಳುವುದೇ ಹೀಗೆ ಎಂದ. ನಮಗೆ ಅರ್ಥವಾಗುವ ಹಾಗೆ ವಿವರಿಸಬಾರದೇ ಎಂದರೆ ಅವನ ಸಹಜವಾದ ಉತ್ತರ: 'ಕ್ವಾಂಟಮ್ ಮೆಕಾನಿಕ್ಸ್ ನಿಜವಿದ್ದರೆ ಕಪ್ಪು ರಂಧ್ರ-ಬ್ಲಾಕ್ ಹೋಲ್-ನಿಜಕ್ಕೂ ಕಪ್ಪಾಗಿಲ್ಲ.'

ಈ ಮಾತನ್ನು ಸಮರ್ಥಿಸಲೇ ಇರಬೇಕು; ನೆನ್ನೆ ಮೊನ್ನೆಯಷ್ಟೇ ಕಪ್ಪು ರಂಧ್ರ ಹುಡುಕಿದ ಆಕಾಶಯಾನ ವೀಕ್ಷಣಾಲಯದ ದೂರದರ್ಶಕಕ್ಕೆ 'ಎಕ್ಸ್‌ರೇ' ಕಣ್ಣಿತ್ತು. ಇಷ್ಟೇ ಅಲ್ಲ ಬ್ರಹ್ಮಾಂಡದ ಚೋದ್ಯಗಳದು: ಸುಮಾರು ನಾಲ್ಕುವರೆ ಲಕ್ಷ ಮಿಲಿಯನ್ ಜ್ಯೋತಿರ್ ವರ್ಷಗಳ 'ಆಚೆಗೆ'-ನಮ್ಮ ದೂರದರ್ಶಕ ನೂಕಿದಾಗ ಕಂಡ ವಿಸ್ಮಯ ಇನ್ನಷ್ಟು ವಿಚಿತ್ರವಿತ್ತು. 'ಆಚೆಯ' ಅಂಚಿನವರೆವಿಗೂ ದೂರದರ್ಶಕದಿಂದ ದೂರದೂರಕ್ಕೆ ಹೋಗುತ್ತಿದ್ದ ಆಕಾಶಗಂಗೆಗಳು, ಒಮ್ಮೆಲೆ ಥಟ್ಟನೆ ದೂರದರ್ಶಕದ ಒಳಕ್ಕೆ ಬಂದು ಇಲ್ಲವಾಗಬಿಡತೊಡಗಿದವು! ಅಂದರೆ ನಾಲ್ಕುವರೆ ಲಕ್ಷ ಜ್ಯೋತಿರ್ ವರ್ಷಗಳ 'ಆಚೆಗೆ' ನಾವು ಈ ಕ್ಷಣದವರೆವಿಗೆ ಕಂಡಿರುವ ಬ್ರಹ್ಮಾಂಡದ ರಚನೆಗೆ ವಿರುದ್ಧವಾದ ಅನ್ಯ ಬ್ರಹ್ಮಾಂಡ ಇದೆಯೇ ಅಥವಾ ಅದು ಕೇವಲ ನಮ್ಮ ಅನಿಸಿಕೆಯೇ? ಅಂದರೆ ನಮ್ಮ ಇಂದ್ರಿಯಗಳೇ ಅವುಗಳನ್ನರಿಯಲು ಅಶಕ್ತವಾಗಿವೆಯೇ?

ಈ ಕಾರಣಕ್ಕೆ, ಸ್ಟೀಫನ್ ಹಾಕಿಂಗ್ಸ್‌ನ ಗ್ರಂಥ, 'ಕಾಲದ ಪುಟ್ಟ ಇತಿಹಾಸ' ನಮ್ಮ ಪುರಾತನ 'ಗೊಡ್ಡು' ಋಷಿಗಳು-ಅಭಿನವ ಗುಪ್ತನಂತಹ ಅರ್ಥಕ್ಕೆ ಅತೀತರು-ಬರೆದ ಶಾಸ್ತ್ರ-ಗ್ರಂಥಗಳ ಹರಿದ ಪುಟಗಳ ಚೂರುಪಾರಿನಂತೆ ನನ್ನಂಥವನಿಗೆ ಕಾಣುತ್ತದೆ.



ಏಕೆಂದರೆ ಸೌರಮಂಡಲ ವಿದೇಶಿ ವಿಜ್ಞಾನಿಗಳ ಅನ್ವೇಷಣೆಯ ಮೂಲ ಘಟಕ ಆಗಿರುವುದು ದೊಡ್ಡದಲ್ಲ. ಪುರಾತನ ಭಾರತೀಯ ಬ್ರಹ್ಮಾಂಡಶಾಸ್ತ್ರಜ್ಞರ ಅನ್ವೇಷಣೆಯ ಮೂಲ ಘಟಕ ನಮ್ಮ ಸೌರ ಮಂಡಲಕ್ಕೆ ಜನ್ಮ ನೀಡಿದ ಆಕಾಶ ಗಂಗೆಯಾಗಿದ್ದು, ತನ್ನ ಸುತ್ತ ತಾನೇ ಸುತ್ತುವ ಧ್ರುವ ನಕ್ಷತ್ರ ಅದರ ಮೇರು ದಂಡವಾಗಿತ್ತು ಎನ್ನುವುದು ತೀರ ಆಶ್ಚರ್ಯಕರ.

ಬ್ರಹ್ಮಾಂಡದ ಹುಡುಕಾಟದ ಕಥೆ ಇಷ್ಟಾದರೆ, ಇನ್ನು ನಮ್ಮ ಪಿಂಡಾಂಡದ ಹುಡುಕಾಟದ ಕಥೆ ಇನ್ನೂ ವಿಚಿತ್ರವಿದೆ. ಇಡೀ ಮಾನವಕುಲದ ಇತಿಹಾಸದಲ್ಲಿ ಅತ್ಯಂತ ದೊಡ್ಡ ಸಾಧನೆ ಎನಿಸಿಕೊಂಡ ಮಾನವ ಶರೀರದ ಪರಿಪೂರ್ಣ ಜೆನೆಟಿಕ್ ಕೋಡ್-ಜಿನೋಮ್‌ನ ಮ್ಯಾಪನ್ನು ಈಗಷ್ಟೇ ವಿಜ್ಞಾನಿಗಳು ಪ್ರಕಟಿಸಿದ್ದಾರೆ. ಮಾನವ ವಿಕಾಸದ ಮೂಲವನ್ನು ದರ್ಶಿಸುವ 'ಈ ಪುರಾತನ ಗ್ರಂಥ'ದ ಇಣುಕುನೋಟ ಇಂದು ನಮ್ಮದಾಗಿದೆ. ಇಲ್ಲಿ ನಮ್ಮ ಸಮಸ್ಯೆಗಳಿಗೆ ಕೆಲವು ಉತ್ತರಗಳನ್ನು, ನಮ್ಮ ಆಶ್ಚರ್ಯಗಳಿಗೆ ಹಲವಾರು ರಹಸ್ಯಗಳನ್ನು ನಾವು ಕಾಣುತ್ತಿದ್ದೇವೆ. ಈ ಜಿನೋಮ್‌ಗಳ ಅಧ್ಯಯನ ನಮ್ಮ ಭವಿಷ್ಯದ ತುಂಬಾ ಆಗಲಿದ್ದು, 'ಈ ಗ್ರಂಥ' ಹಲವಾರು ಅವತಾರಗಳನ್ನು ಪಡೆಯಲಿದೆ. ಕನಿಷ್ಠ 20.000 ಜೀನ್‌ಗಳು ಮಾತ್ರ ಏಕೆ ಇವೆ? ಹೇಗೆ ಇವೆ? ಎನ್ನುವುದು ರಹಸ್ಯವಾಗಿಯೇ ಉಳಿದುಬಿಡುವ ಸಾಧ್ಯತೆಗಳಿವೆ. ವೈದ್ಯಶಾಸ್ತ್ರದಲ್ಲಿನ ಈ ಅನನ್ಯ ಶೋಧದಿಂದ ಕನಿಷ್ಠ 5000 ಹೊಸ ಔಷಧಿಗಳನ್ನಾದರೂ ನಾವು ನಿರ್ಮಿಸಬೇಕಾಗಿದೆ-ಎಂದು ಗೊತ್ತಾಗಿದೆ. ಈ ಹೊಸ ಔಷಧಿಗಳ ಹುಡುಕಾಟ ಏನೇನೂ ಸುಲಭದ್ದಲ್ಲ-ಎಂದರೆ ಮಾನವನ ಪರಿಪೂರ್ಣ ಆರೋಗ್ಯ ಎಂದಿನಂತೆ ಇಂದೂ ಕನಸಾಗಿ ಉಳಿಯಿತು.

ಆದರೆ, 'ಕಾಣಬಲ್ಲವ'ನಿಗೆ ಮುಪ್ಪನ್ನು ಒಂದು ರೋಗವೆಂದು ಪರಿಗಣಿಸಿ, ಚಿಕಿತ್ಸೆ ನೀಡುವ ಆಯುರ್ವೇದ, ಪ್ರಾಣಶಕ್ತಿಯನ್ನು ಮಾನವ ಎಷ್ಟು ಬೇಕಾದರೂ ಬೆಳೆಸಿಕೊಂಡು ಇಚ್ಛಾಮರಣಿ ಆಗಬಲ್ಲ ಎಂದು ಸಾರುವ ಗರ್ಭ ಮೂಲದಲ್ಲಿ, ಜೆನೆಟಿಕ್ ಸಮಸ್ಯೆಗಳಿಗೆ ಉತ್ತರವಿದೆ ಎಂದು ನಾನು ಅಂದುಕೊಂಡಿದ್ದೇನೆ.

ಜೆನೆಟಿಕ್ಸ್-ಅನುವಂಶೀಯತೆ ನಮಗೆ ಈ ಮೊದಲೇ ತೆರೆದಿಟ್ಟ ವಿಶ್ವಾಮಿತ್ರ ಸೃಷ್ಟಿಯ ಕ್ಲಾನಿಂಗ್ ಎನ್ನುವ ಭೀಕರ ಹಾಗೂ ಏನೆಂದೇ ಅರ್ಥವಾಗದ ಜಗತ್ತೊಂದು ನಮ್ಮ ಮುಂದೆ ತೆರೆದುಕೊಳ್ಳಲು ಆರಂಭಿಸಿದೆ.

ಏಳೆಂಟು ವರ್ಷಗಳ ಸುಮಾರಲ್ಲಿ ಯಂತ್ರ ಒಂದರಿಂದ ಜೆರಾಕ್ಸ್ ಪ್ರತಿಗಳನ್ನು ಪಡೆಯುವಂತೆ, ಮಾನವ ಪ್ರತಿಗಳನ್ನು ಪಡೆಯುವ ವೈಜ್ಞಾನಿಕ ಶೋಧ ಒಂದು ಸಾಧ್ಯವಾಯಿತು. ಇದರ ಫಲವಾಗಿ ಕುರಿ ಡಾಲಿಯ ನಕಲು ರೂಪ ನಮಗೆ ಸಾಲದೆ, ಮನುಷ್ಯನ ಪ್ರತಿರೂಪಗಳನ್ನು ಪಡೆದೇ ತೀರಲು ಮೊನ್ನೆ ಬ್ರಿಟನ್ನಿನ ಸಂಸತ್ತು ತನ್ನ ಒಪ್ಪಿಗೆ ನೀಡಿತು. ಮಾನವನ ಆರೋಗ್ಯದ ರಕ್ಷಣೆ ಮತ್ತು ಬೆಳವಣಿಗೆ ಇದಕ್ಕೆ ಕಾರಣ ಎಂದು ಸಂಸತ್ತು ಹೇಳಿದ್ದರೂ, ಪರಮ ಕುತೂಹಲಿಯಾದ ಮಾನವ ಈ ತನ್ನ ಪ್ರಯತ್ನದಲ್ಲಿ ತನ್ನ ತಲೆಯ ಮೇಲೇ ಚಪ್ಪಡಿಯನ್ನು ಎಳೆದುಕೊಂಡರೆ ಆಶ್ಚರ್ಯವಿಲ್ಲ. ಸಾವಿರಾರು ವರ್ಷಗಳಿಂದ 'ಸಾವೆನ್ನುವ ನಿದ್ದೆಯಲ್ಲಿರುವ' ಮಮ್ಮಿಗಳು, ಹಾಳಾಗದೇ ಮಂಜಿನ ಗಡ್ಡೆಯಲ್ಲಿ ಉಳಿದಿರುವ ಮಾನವ ದೇಹಗಳು, ಎಚ್ಚರಗೊಂಡೋ, ಜೀವತಳೆದೋ ನಮ್ಮ ಮುಂದೆ ಸುತ್ತಾಡಲಿವೆ. ಜೊತೆಗೆ ಬುದ್ಧನದೆಂದು ಕಾದಿರಿಸಲ್ಪಟ್ಟ, ಅವರಿವರದೆಂದು ಸಂರಕ್ಷಿಸಲ್ಪಟ್ಟ 'ಬುದ್ಧು'ಗಳ ಅಂಗಗಳ ಭಾಗಗಳಿಂದ 'ಭೂತ'ದ ಮಾನವರು ಮೇಲೇಳಲು ಸಾಧ್ಯವಿರುವಂತೆಯೇ

ಡೈನೊಸಾರಸ್‌ಗಳು, ರೈನೋಸಾರಸ್‌ಗಳು, ಇನ್ನೆಂಥವೋ ಹುಳು-ಹುಪ್ಪಟೆ ಚುಟ್ಟು-ಪಟ್ಟೆಗಳು ಮತ್ತೊಮ್ಮೆ ಹುಟ್ಟಿ, ಈ ಲೋಕವನ್ನು ವಿಚಿತ್ರ ಸಂದಿಗ್ಧಗಳಿಗೆ ಸಿಕ್ಕಿಸಲಿವೆ. ಮಾನವ ಆರೋಗ್ಯ ಸಂವರ್ಧನೆಯ ಕಾರಣಕ್ಕಾಗಿಯೇ ಅರ್ಧ, ಮಾನವ, ಸಿಗಲಾರದವನಾಗುವ ಕಾಲ ಹತ್ತಿರವಾಗುತ್ತಿದೆ. ತಾನೇ ದೇವರಾಗಬೇಕೆನ್ನುವ ಆಸೆಯಲ್ಲಿನ ಮನುಷ್ಯ ಪ್ರಯತ್ನಗಳು ಅವನ ಈ ಪ್ರತಿ ಸೃಷ್ಟಿಯಲ್ಲಿ ಮುಳುಗಿಸಿ ಬೇರೊಂದು ವಿಚಿತ್ರ ಲೋಕ ತೆರೆದುಕೊಳ್ಳುವ ಸಾಧ್ಯತೆಗಳು ಅನಂತವಾಗಿವೆ.


ಅಮೇರಿಕಾದ ಇನ್‌ಕಾ ಎನ್ನುವ ಪುರಾತನ ಸಂಸ್ಕೃತಿಯ ಹೆಂಗಸರು ಹಾಗೂ ಸ್ತ್ರೀ ಮಲೆಯಾಳ ಎನಿಸಿಕೊಂಡ ಪುರಾತನ ಕೇರಳದ ಯೋಗಿನಿಯರು ಮಾನವ ಯೋನಿಯಲ್ಲಿ ತಮ್ಮ ಸ್ತ್ರೀ ಸಂತಾನವನ್ನು ಮಾತ್ರ ಪಡೆಯುತ್ತಿದ್ದ ಕ್ರಮ ಕ್ಲಾನಿಂಗ್ ತಂತ್ರವನ್ನು ಅತ್ಯಂತ ಸಂಯಮ ಮತ್ತು ವಿವೇಕದಿಂದ ಬಳಸುತ್ತಿದ್ದುದ್ದಕ್ಕೆ ಒಂದು ಶ್ರೇಷ್ಠ ಸಾಕ್ಷಿಯಾಗಿದೆ ಎನ್ನುವುದರ ಅರಿವಿಲ್ಲ ನಮಗೆ.

ಪರಿಷ್ಕರಣ ಇತ್ಯಾದಿಗಳಿಂದ ಸರಿಪಡಿಸಲೇಬೇಕಾಗಿರುವ, ಈಗಷ್ಟೇ ಪ್ರಕಟವಾದ ಜೆನೆಟಿಕ್ ಮ್ಯಾಪ್‌ನ 3.1 ಬಿಲಿಯನ್ ಡಿ.ಎನ್.ಎ 'ಅಕ್ಷರ'ಗಳು 30ರಿಂದ 40 ಸಾವಿರ ಜೀನ್‌ಗಳಿಂದಾಗಿವೆ ಎನಿಸಿಕೊಂಡಿವೆ. ಬರಲಿರುವ ಬದಲಾವಣೆಗಳಲ್ಲಿ ಈ ಅಕ್ಷರ ಸಂಖ್ಯೆಗಳು ಏರುಪೇರಾಗಲಿವೆ. ಆಗೆಲ್ಲೊ, ವೇದವಿಜ್ಞಾನ ಎಂದೋ ವಿವರಿಸಿರುವ ಶರೀರದ ಷಟ್ಚಕ್ರಗಳು, ಸಹಸ್ರಾರ ಮತ್ತು ಮೂರುವರೆ ಲಕ್ಷ ನಾಡಿಗಳ 'ಜೀವಂತ' ಮ್ಯಾಪ್‌ನೊಡನೆ ಹೋಲಿಕೆಗೆ ಒಳಗಾಗಲೇಬೇಕಾಗುತ್ತದೆ. ಅಲ್ಲಿ ಮಾನವ ಶರೀರದ ಜ್ಯೋತಿರ್‌ಮಯ ಕೋಶದ (ಬಾಡಿ ಕರೆಂಟ್ ಆ್ಯಂಡ್ ಇಟ್ಸ್ ಲ್ಯೂಮಿನಾಸಿಟಿ) ವಿವರಗಳು ಪರಮ ಊರ್ಧ್ವಮುಖವಾಗಿದ್ದು, ಮಾನವ ಶರೀರದ ಅಮರತ್ವಕ್ಕೆ ನೇರ ಹಾದಿಯನ್ನು ಋಷಿಗಳು ಎನ್ನುವ ವಿಜ್ಞಾನಿಗಳು ವರ್ಣಿಸಿರುವುದನ್ನು ಕಾಣಲೇಬೇಕಾಗುತ್ತದೆ.

ಅವ ಅಣು-ಸಬ್ ಅಟಾಮಿಕ್-ಭೌತಶಾಸ್ತ್ರದ ಅನ್ವಯ, ಇಂದು ಅತ್ತ 'ವಸ್ತು'ವೂ ಅಲ್ಲದ, ಇತ್ತ 'ಆಕಾಶ'ವೂ ಅಲ್ಲದ, 'ಅರ್ಧವಸ್ತು-ಅರ್ಧಶೂನ್ಯ' ಎನ್ನಬಹುದಾದ ಕ್ವಾರ್ಕ್ (Quark) ಕಾಣಿಸಿಕೊಂಡಷ್ಟೇ ವೇಗವಾಗಿ ಕ್ಷಣದ ಅತಿಸಣ್ಣ ಭಿನ್ನಾಂಶದಲ್ಲಿ ಮರೆಯಾಯಿತು. ಕಂಡದ್ದು 'ಅತ್ಯಗಾಧ' ಎನ್ನುವ ತೃಪ್ತಿ.

ಇಲ್ಲಿನ ಮುಂದಣ ಸಂಶೋಧನೆಗಳು ಇಂದ್ರಿಯಗಳ ಆಚಲ ಅರಿವಿಗೆ ಮಾತ್ರ ಸಿಗಬಲ್ಲಂಥವು ಎಂದು ಗೊತ್ತಾಗಿದೆ. ಮನುಷ್ಯ ತನ್ನ, ಜಾಗ್ರತ್, ಸ್ವಪ್ನ, ಸುಷುಪ್ತಿಗಳ ಆಚಲ ಪ್ರಜ್ಞೆ ಎನಿಸಿಕೊಂಡ ನಾಲ್ಕನೇ ಪ್ರಜ್ಞಾವಸ್ಥೆಗೆ-ಆಲ್ಟರ್ಡ್ ಸ್ಟೇಟ್ ಆಫ್ ಕಾಂಷಿಯಸ್‌ನೆಸ್‌ಗೆ ಜಿಗಿದು, ಅಲ್ಲಿನ ವಿದ್ಯಮಾನಗಳ ಶೋಧ ಕೈಗೊಂಡ 'ಯೋಗಿ'ಯಾಗಿದ್ದಾನೆ. ವೇದವಿಜ್ಞಾನಗಳ ಅದ್ಭುತತೆ ಹಾಗೂ ಅಗಾಧತೆಗೆ ಮಾರು ಹೋಗಿರುವ ಪಶ್ಚಿಮ, ಇದಕ್ಕೆ ಕಾರಣ ಇರುವುದೇ ಆದರೆ, ಅದು ಋಷಿಗಳಿಗೆ ಪ್ರಜ್ಞೆಯ ನಾಲ್ಕನೆ ಅವಸ್ಥೆಯ ಮೇಲಿದ್ದ ನಿಯಂತ್ರಣಾಧಿಕಾರವೇ ಎಂದು ನಿರ್ಧರಿಸಿದೆ.


ಇತ್ತಿಚೆಗೆ ಇಥೋಪಿಯದ ಗೈನೆಕಾಲಜಿಸ್ಟ್ ಒಬ್ಬ, ಮಾನವ ಮೈಥುನದ ಉದ್ದಕ್ಕೂ, ಶರೀರದ ಒಳಗೆ ಪ್ರಾಣಶಕ್ತಿಯ ಪ್ರವಾಹ ಹುಚ್ಚುಚ್ಚಾಗಿ ವೃದ್ಧಿಯಾಗುವುದನ್ನು ಕಂಡ! ಇದರಿಂದಾಗಿ ಭಾರತ, ಚೀನಾ, ಟಿಬೆಟ್ ಮತ್ತು ಜಪಾನಿನ ಪುರಾತನ ಸಂಸ್ಕೃತಿಯಲ್ಲಿನ 'ತಂತ್ರ ಮೈಥುನ'ಕ್ಕೆ ಎಲ್ಲಿಲ್ಲದ ಅರ್ಥಗೌರವ ಪ್ರಾಪ್ತವಾಗಿಹೋಯಿತು. ಶರೀರದ ಒಳಗಲ ಕರೆಂಟ್‌ನ ಹರಿದಾಟ-'ಕ್ರೋಕಸ್' ಪ್ರವಾಹ ಎನ್ನುವುದರ ಪರಿಪೂರ್ಣ ಸಿದ್ಧಾಂತ ಮಾನವ ಜೀವನದ ಪರಮ ಗುರಿಯಾಯಿತು. ಆದ್ದರಿಂದಲೇ, ರಾತ್ರಿಯಷ್ಟೇ ನಡೆದು ಹೋದ ಈ ಸಾರಿಯ ಕುಂಭಮೇಳಕ್ಕೆ, ಅದರ ತಾತ್ವಿಕ ತಳಹದಿಯಾದ ಅಮರತ್ವಕ್ಕೆ, ಅಗ್ರಮಾನ್ಯತೆ ಪ್ರಾಪ್ತವಾಗಿ ಹೋಯಿತು. ವಿಶ್ವದ ಮೂಲೆ ಮೂಲೆಗಳಿಂದ, ನೂರಾರು ವೈದ್ಯ ಸಂಶೋಧನಾ ತಂಡಗಳು, ಕುಂಭಮೇಳದ ಯೋಗಿಗಳನ್ನೂ, ಯೋಗಿನಿಯರನ್ನೂ 'ಅರ್ಧ' ನೂರಾರರ ಸಲುವಾಗಿ ಅನ್ವೇಷಿಸಿ, ಮಾನವ ಯೋನಿ ಪೂಜೆಯ ರಹಸ್ಯ ಸಹಸ್ರಾರು ಏನೆಂದು ಪರೀಕ್ಷಿಸಿದವು. 'ಜ್ಯೋತಿಷ್ಯ' ಎಂದರೆ ಶರೀರದ ಒಳಗಲ ಜ್ಯೋತಿಯ ಬೆಡಗು ಎಂದು ಅರ್ಥವಾಗ ತೊಡಗಿ, ನವ ಮನ್ವಂತರದ ಮೈಥುನದ ವಿಜ್ಞಾನಿ, ಪೂರ್ವದ ಋಷಿಯಂತೆ ತಾನೇ ಶಿವನಾಗಿ, ತನ್ನ 'ಅನ್ವೇಷಣೆ'ಯನ್ನು ಅರ್ಥಮಾಡಿಕೊಳ್ಳತೊಡಗಿದ. ಭುವನೇಶ್ವರ ಸೂರ್ಯದೇವಾಲಯದ ಗೋಡೆಗಳ ಮೇಲೆ ಬರೆದು, ಅರೆಬರೆಯಾಗಿ ಅಳಿಸಿಹಾಕಿರುವ ಶ್ಲೋಕ ಒಂದರಲ್ಲಿ, ಮಾನವ ಎಂದೂ ಕಂಡು ಕೇಳಿ ಅರಿಯದ ಇತಿಹಾಸಾತೀತ ಯುಗ ಪುರುಷನೊಬ್ಬನ ಜನ್ಮದ ಸಾಧ್ಯತೆಯನ್ನು ಕುರಿತು ದೀರ್ಘವಾಗಿ ಯೋಚಿಸ ತೊಡಗಿದ್ದಾನೆ.



ಗುಡಿಗಳ ಮೂಲೆಗಳಲ್ಲಿ, ಗವಿಗಳ ಕಾರ್ಗತ್ತಲಲ್ಲಿ ಅವಿತು ಹೋಗಿದ್ದ ತಂತ್ರಗ್ರಂಥ ಸಹಸ್ರಗಳನ್ನು ಬಿಚ್ಚಿನೋಡಿ, 'ಬ್ರಹ್ಮಾಂಡದೊಳಗಡೆ ಪಿಂಡಾಂಡ, ಪಿಂಡಾಂಡದ ಒಳಗಡೆ ಬ್ರಹ್ಮಾಂಡ' ಹೂತುಹೋಗಿರುವ ಕ್ರಮವನ್ನು ಕಂಡು, ಮನುಷ್ಯ ತನ್ನ ಬುದ್ಧಿಯ ಕ್ರಮವನ್ನು ಆಮೂಲಾಗ್ರವಾಗಿ ತಿದ್ದಿಕೊಳ್ಳಲು ಆರಂಭಿಸಿದ್ದಾನೆ.

'ದೇವರು' ಎಂದರೆ ಸೃಷ್ಟಿಯ ಆದ್ಯಂತವಷ್ಟೇ! ಅಂದಿನ ಪೂರ್ವದ ಋಷಿ ತಾನೇ ದೇವರಾಗಿ, ಸೃಷ್ಟಿಯ ರಹಸ್ಯಗಳನ್ನು ನೇರ ನೇರವಾಗಿ ಬದಲಾಯಿಸಲುತೊಡಗಿದಂತೆ, ಇಂದಿನ ಪಶ್ಚಿಮ ವಿಜ್ಞಾನಿ, ದೇವರ ವಿರುದ್ಧ ಬಂಡೆದ್ದು, ಸೃಷ್ಟಿಯ ಆದ್ಯಂತದ ಪರಮಾಧಿಕಾರವನ್ನು ದೇವರಿಂದ ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದಾನೆ.

'ಕೌಂಟರ್ ಥಿಯರಿ ಆಫ್ ರಿಲೆಟಿವಿಟಿ' -'ಪ್ರತಿ ಸಾಪೇಕ್ಷವಾದ ಸಾಧ್ಯವೆ?'- ಎಂದು ಚಿಂತಿಸುತ್ತಿರುವ ನಾನು, ಕಾಪ್ರಾ ತನ್ನ 'ತಾವೋ ಆಫ್ ಫಿಸಿಕ್ಸ್- 'ಭೌತಶಾಸ್ತ್ರ ಯೋಗ' ಬರೆದು, ಮನುಕುಲದ ಚಿಂತನೆಯನ್ನು ಸಂಪೂರ್ಣವಾಗಿ ಬದಲಿಸಿದ ಹತ್ತು ವರ್ಷದ ಮೊದಲೇ, ಈ ಸಿದ್ಧಾಂತದ ಪಕ್ಷಿನೋಟವನ್ನು ನನ್ನ ಕಾದಂಬರಿ 'ಪ್ರೇಮಾಂಜಲಿ'ಯ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ ಯಾತನಾಮಯ ಹೆಮ್ಮೆಯನ್ನು ನನ್ನದಾಗಿಸಿಕೊಂಡವನೂ ಆಗಿದ್ದೇನೆ-ಕ್ಷಮಿಸಿ.



ಸಾಹಿತ್ಯ, ವೈದ್ಯವಿಜ್ಞಾನ, ನಾಟಕ, ಕಲೆ-ಎಲ್ಲವುಗಳಲ್ಲಿ ಅಪರಿಮಿತ ಆಸಕ್ತಿಯಿಂದ ಅಧ್ಯಯನ ಮಾಡಿರುವ ರೂಪರಾಜ್ ಮೂಲಭೂತ ಚಿಂತಕ. ಸುತ್ತಲಿನ ಜಂಜಡದ ಲೋಕದಲ್ಲಿದ್ದು ಕೊಂಡೇ ತಮ್ಮ ಆಧ್ಯಾತ್ಮಿಕ ಸೆಳೆತಗಳನ್ನು ಜೀವಂತವಾಗಿಟ್ಟುಕೊಂಡಿರುವವರು.


ನೇಮಿಚಂದ್ರ

ಪುನರ್‌ಮೌಲ್ಯೀಕರಣದ ಅಗತ್ಯ

ನಾವು ಇಂದು ಬದುಕುತ್ತಿರುವುದು ವೈಜ್ಞಾನಿಕ ಯುಗದಲ್ಲಿ. ದಿನದಿನದ ಬದುಕನ್ನು ಗುರುತು ಸಿಗದಷ್ಟು ಬದಲಿಸಿರುವ, ಗುಂಡಿ ಒತ್ತಿದರೆ ಕೆಲಸವಾಗುವ, ನಡುಮನೆಯಲ್ಲಿ ಕುಳಿತು ಪ್ರಪಂಚದ ಆಗುಹೋಗುಗಳನ್ನು ವೀಕ್ಷಿಸಬಲ್ಲ ವಿಜ್ಞಾನದ ಕಾಲದಲ್ಲಿ. ಆದರೂ ಪ್ರಣಾಳ ಶಿಶು-ಕೃತಕ ಗರ್ಭಧಾರಣೆಯ ಈ ಕಾಲದಲ್ಲೂ ಪುತ್ರಕಾಮೇಷ್ಟಿಗಳು ನಡೆಯುತ್ತವೆ. ಕಂಪ್ಯೂಟರುಗಳನ್ನು ಜಾತಕ ನೋಡಲು, ಜ್ಯೋತಿಷ್ಯ ಹೇಳಲು ಬಳಸುತ್ತಾರೆ. ಇಂಥ ವೈಪರೀತ್ಯಗಳ ನಡುವೆ ಬದುಕುತ್ತಿರುವ ನಮಗೆ, ವಿಜ್ಞಾನ ಮತ್ತದರ ಅನುಕೂಲಗಳಿಗಿಂತ, ವೈಜ್ಞಾನಿಕ ಮನೋಧರ್ಮ, ವೈಜ್ಞಾನಿಕ ದೃಷ್ಟಿಕೋನದ ಅಗತ್ಯ ಹೆಚ್ಚಿದೆ.

ಪ್ರಶ್ನಿಸದೆ ಕುರುಡಾಗಿ ಹಿಂಬಾಲಿಸುವ, ಸುಲಭವಾಗಿ ನಂಬುವ ಜನರ ಮೌಢ್ಯತೆಯನ್ನು-ಮುಗ್ಧತೆಯನ್ನು ರಾಜಕೀಯ ಹಿತಾಸಕ್ತಿಗಳು ತಮ್ಮ ಗೆಲುವಿಗೆ, ಕೋಮುಗಲಭೆಗೆ ಬಳಸಿಕೊಳ್ಳುತ್ತಿರುವ ಭಯಂಕರ ವಾಸ್ತವದ ನಡುವೆ ನಿಂತ ನಮಗಿಂದು, ಜನರ ಚಿಂತನಶೀಲತೆಯನ್ನು ಜಾಗೃತಗೊಳಿಸುವ, ಪ್ರಶ್ನಿಸುವ, ಶೋಧಿಸುವ, ವೈಜ್ಞಾನಿಕ ದೃಷ್ಟಿಕೋನದ ಪ್ರಸಾರಕ್ಕೆ ಹೆಚ್ಚು ಹೆಚ್ಚು ಮಾರ್ಗಗಳು, ಮಾಧ್ಯಮಗಳು ಬೇಕಿವೆ.

ನಮ್ಮ ದಿನನಿತ್ಯದ ಪ್ರತಿ ಕಾರ್ಯದಲ್ಲಿ ಅಂಧಾಚರಣೆಯನ್ನು ಅನುಕರಿಸದೆ, 'ಏನು, ಏಕೆ, ಹೇಗೆ?' ಎಂದು ಪ್ರಶ್ನಿಸುವ ಅಗತ್ಯವಿದೆ. ವಿಜ್ಞಾನ ಸತ್ಯಶೋಧನೆಯ ಸಲಕರಣೆ. ವೈಜ್ಞಾನಿಕ ದೃಷ್ಟಿಕೋನ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಮಹತ್ತರದ ಪರಿವರ್ತನೆಯನ್ನು ತರಬಲ್ಲದು. ಯಾವುದನ್ನೇ ಆಗಲಿ, 'ಹಿರಿಯರು ಹೇಳಿದ್ದು, ಶಾಸ್ತ್ರದಲ್ಲಿ ಹೇಳಿದೆ, ಎಂದಿನಿಂದಲೋ ನಡೆದು ಬಂದದ್ದು, ಲೋಕರೂಢಿ' ಎಂದು ಪ್ರಶ್ನಿಸದೆ ಒಪ್ಪಿಕೊಳ್ಳುವುದು ಅಪ್ಪಟ ಬೌದ್ಧಿಕ ಆಲಸ್ಯವನ್ನು ಎತ್ತಿ ತೋರಿಸುತ್ತದೆ. ನಾಲ್ಕು ಜನ ಮಾಡಿದಂತೆ ಮಾಡುವುದು ಸುಲಭವಾಗಿ ಕಂಡರೂ, ಈ ಅಂಧಾಚರಣೆಗಳ ಅನಾಹುತಗಳು ವಿಪರೀತ.



ವೈಜ್ಞಾನಿಕ ದೃಷ್ಟಿಕೋನ ಮಾನವನ ಅತಿ ಸಹಜ ಸ್ವಾಭಾವಿಕ ಗುಣ. ಮಗು ಹುಟ್ಟುತ್ತಿದ್ದಂತೆಯೇ ತನ್ನ ಸುತ್ತ ಪ್ರತಿಯೊಂದನ್ನೂ ಅದಮ್ಯ ಕುತೂಹಲದಿಂದ ನಿಟ್ಟಿಸುತ್ತದೆ, ತನ್ನ ಇಂದ್ರಿಯಾನುಭವದ ಪ್ರಯೋಗಕ್ಕೆ ಒಳಪಡಿಸುತ್ತದೆ. 'ಏನು, ಏಕೆ' ಎಂದು ನಿರಂತರವಾಗಿ ಪ್ರಶ್ನಿಸುತ್ತಲೇ ಬೆಳೆಯುವ ಮಗುವಿನ ಶುದ್ಧ ಮನಸ್ಸನ್ನು, ಹಿರಿಯರು 'ಅದೆಲ್ಲ ಕೇಳಬಾರದು, ಹೀಗ್ಹೀಗೇ ನಡೆಯಬೇಕು, ಇಲ್ಲಿ ಗುಮ್ಮ ಇದೆ...' ಎಂಬೆಲ್ಲ ಅಂಧವಿಶ್ವಾಸಗಳಿಂದ ತುಂಬಿಬಿಡುತ್ತಾರೆ. ನಮ್ಮ ಸಮಾಜ ಹಿಂದಿನಿಂದಲೂ, ಹಿರಿಯರು ಹೇಳಿದ್ದನ್ನು ಪ್ರಶ್ನಿಸದೆ, ಸ್ವಂತ ವಿವೇಕವನ್ನು ಉಪಯೋಗಿಸದೆ, ತಲೆ ಬಾಗಿ, ಎದುರುತ್ತರ ನೀಡದೆ ನಡೆವ ಹಿಂಬಾಲಕ ಗುಣವನ್ನೇ ಹೆಚ್ಚುಗಾರಿಕೆಯನ್ನಾಗಿ ಬಿತ್ತರಿಸಿದೆಯೆ ಎಂದು ಅನುಮಾನ ಬರುತ್ತದೆ. ಇದರಿಂದ ವೈಜ್ಞಾನಿಕ ದೃಷ್ಟಿಕೋನ ಸದ್ದಿಲ್ಲದೆ ಅಡಗಿತೆ ಎಂಬ ಪ್ರಶ್ನೆ ಕಾಡುತ್ತದೆ. 'ತಾಯಿಯ ತಲೆ ಕಡಿ' ಎಂದೊಡನೆ ಮರು ಪ್ರಶ್ನಿಸದೆ ಕಡಿದುರುಳಿಸಿದ ಪರಶುರಾಮ, ಶೂದ್ರನ ತಪಸಿನಿಂದಲೇ ಅಕಾಲವಾಯಿತು ಎಂದು ಶೂದ್ರನನ್ನು ತುಂಡರಿಸಿದ ಶ್ರೀರಾಮರ ವೈಭವೀಕೃತ ಕತೆಗಳನ್ನು ಕೇಳುತ್ತಲೇ ಬೆಳೆದ ನಮ್ಮಲ್ಲಿ ದ್ವಂದ್ವ, ವಿಪರ್ಯಾಸಗಳು ಹಾಸು ಹೊಕ್ಕಿವೆ.

ಒಂದು ಕಾಲಕ್ಕೆ, ಒಂದು ಪರಿಸರಕ್ಕೆ ಅರ್ಥಪೂರ್ಣವಾಗಿದ್ದ ಆಚರಣೆಗಳೂ, ಕಾಲದ ಅನಂತ ಪರಿವರ್ತನೆಯಲ್ಲಿ ಬದಲಾಗದೆ ಉಳಿದರೆ, ಬರೀ ಅಂಧಾಚರಣೆಗಳಾಗುತ್ತವೆ. ಪ್ರತಿ ಹಂತದಲ್ಲಿ ಆಚರಣೆಯನ್ನು, ಜೀವನ ಕ್ರಮವನ್ನು, ನಮ್ಮ ನಂಬಿಕೆಗಳನ್ನು ಪುನರ್ ಪರಿಶೀಲನೆಗೆ ಪುನರ್‌ಮೌಲ್ಯೀಕರಣಕ್ಕೆ ಒಳಪಡಿಸುವ ಅಗತ್ಯವಿದೆ.

ನಮ್ಮಲ್ಲಿ ಜಾತಕಗಳು ಕೂಡುತ್ತವೆ, ಕುಂಡಲಿಗಳು ಪ್ರಶಸ್ತವಾಗಿರುತ್ತವೆ, ಕಟ್ಟಿಕೊಂಡ ಗಂಡು-ಹೆಣ್ಣಿನ ಮನಸ್ಸುಗಳು ಮಾತ್ರ ಕೂಡುವುದಿಲ್ಲ. ಮಾನಸಿಕ ರೋಗಗಳಿಗಿರಲಿ, ದೈಹಿಕ ರೋಗಗಳಿಗೂ ಚಿಕಿತ್ಸೆ ಕೊಡಿಸದೆ ಭೂತ-ದೈವದ ಹೆಸರಲ್ಲಿ ಹರಕೆ, ಬಲಿ, ವೇಶ್ಯಾವಾಟಿಕೆ ನಡೆಯುತ್ತದೆ. ಬದುಕು-ಭವಿಷ್ಯಕ್ಕಾಗಿ ದುಡಿದು ಶ್ರಮಿಸದೆ, ಪೂಜೆ-ಪವಾಡಗಳ 'ಶಾರ್ಟ್‌ಕಟ್' ಹಿಡಿಯುವುದು ಯಥೇಚ್ಛವಾಗಿ ಕಂಡು ಬರುತ್ತದೆ. ಅಂಧವಿಶ್ವಾಸಗಳು ಮನುಷ್ಯನಿಗೆ ತನ್ನ ಸಾಮರ್ಥ್ಯದ ಬಗ್ಗೆ ಇರಬೇಕಾದ ಆತ್ಮವಿಶ್ವಾಸವನ್ನು ಕಸಿದುಕೊಂಡು, ಆತನನ್ನು ಗ್ರಹ-ನಕ್ಷತ್ರಗಳ ವಿಧಿನಿಯಮಗಳ ಆಟಿಗೆಯಂತೆ ನಿಷ್ಕ್ರಿಯಗೊಳಿಸಿಬಿಡುತ್ತವೆ. ಮನುಷ್ಯನ ಶಕ್ತಿ-ಸಾಮರ್ಥ್ಯಗಳಲ್ಲಿ ವಿಶ್ವಾಸ ಮೂಡಲು, ವಾಸ್ತವದ ಬದುಕಿನ ಸಮಸ್ಯೆಗಳಿಗೆ, ವಾಸ್ತವ ಪರಿಹಾರಗಳನ್ನು ಶೋಧಿಸಲು ವೈಜ್ಞಾನಿಕ ದೃಷ್ಟಿಕೋನದ ಅತ್ಯವಶ್ಯಕತೆ ಇದೆ.

ನೇಮಿಚಂದ್ರ

ಎಚ್.ಎ.ಎಲ್.ನಲ್ಲಿ ಡಿಸೈನಿಂಗ್ ವಿಭಾಗದಲ್ಲಿ ಕೆಲಸ ಮಾಡುವ ನೇಮಿಚಂದ್ರ ಚಿಂತನಶೀಲ ಕತೆಗಾರ್ತಿ. ವೈಜ್ಞಾನಿಕ ಅಂಕಣಗಳನ್ನು, ಪುಸ್ತಕಗಳನ್ನು ಬರೆಯುತ್ತಾರೆ.



ಎಂ. ಆರ್. ನಾಗರಾಜು

'ಅಪ್ರಮಾದ'ದಿಂದ ಕಾಯ್ದುಕೊಳ್ಳಬೇಕು

ರಸಾಯನಶಾಸ್ತ್ರಜ್ಞ ಎಂ.ಆರ್. ನಾಗರಾಜು ಕನ್ನಡ ವೈಜ್ಞಾನಿಕ ಸಾಹಿತ್ಯ ಕ್ಷೇತ್ರದಲ್ಲಿ ನಿಷ್ಪೃಹತೆಯಿಂದ ದುಡಿಯುತ್ತ ಬಂದವರು 'ವಿಜ್ಞಾನಲೋಕ' ಪತ್ರಿಕೆಯನ್ನು ತಮ್ಮ ಕ್ರಿಯಾಶೀಲ ಸಂಪಾದಕತ್ವದಲ್ಲಿ ನಡೆಸುತ್ತಿದ್ದಾರೆ



ಯಾವುದೇ ವಿದ್ಯಮಾನಕ್ಕೆ ಕಾರಣವಿದೆಯೆಂದು ನಂಬದವರು, ಇಲ್ಲವೆನಿಸುವಷ್ಟು ಅಪರೂಪ. ವಿಜ್ಞಾನಿಗಳೂ ವಿದ್ಯಮಾನಗಳಿಗೆ ಕಾರಣ ಊಹಿಸುತ್ತಾರಾದ್ದರಿಂದ ತಾವೂ ವಿಜ್ಞಾನ ಮಾರ್ಗದಲ್ಲಿ ಸಾಗಿರುವುದಾಗಿ ಜನರ ಭಾವನೆ.

ಆದರೆ, ಕಾರಣ ಊಹಿಸುವುದು ಕೇವಲ ವಿಜ್ಞಾನಮಾರ್ಗದ ಪ್ರಾರಂಭ ಬಿಂದುವಿನ ಸಾಮ್ಯ ಮಾತ್ರ! ಅದು ನಿಜವಾಗಿಯೂ ವೈಜ್ಞಾನಿಕ ಮಾರ್ಗವಾಗಬೇಕಾದರೆ ಇನ್ನೂ ಕೆಲವು ನಿರ್ಬಂಧಗಳಿವೆ.

1) ನಿಸರ್ಗದ ಸಮಸ್ಯೆಗಳನ್ನು ಅರಿಯುವಾಗ, ಅಲೌಕಿಕ ಶಕ್ತಿಯನ್ನು ನಂಬಿ, ಆ ಆಧಾರದ ಮೇಲೆ ವಿವರಿಸುವುದಿಲ್ಲ. ನಾಗರಹಾವಿನ ವರ್ತನೆಗೆ ಕಾರಣವನ್ನು ನಾಗರಹಾವಿನ ಅಧ್ಯಯನದಿಂದಲೇ ಪಡೆಯಬೇಕು. ಕಾರಣದ ನೆಲೆ ಕಂಡುಕೊಳ್ಳುವಲ್ಲೂ ವೈಜ್ಞಾನಿಕತೆ ಇದೆ.

2) ನೈಸರ್ಗಿಕ ವಿದ್ಯಮಾನವನ್ನು ನಿಸರ್ಗವನ್ನಾಧರಿಸಿಯೇ ಊಹಿಸಿದರೂ, ಅದನ್ನು ಮತ್ತೆ ಮತ್ತೆ ವಾಸ್ತವತೆಯೊಂದಿಗೆ ತಾಳೆ ನೋಡಬೇಕಾಗುತ್ತದೆ. 'ಪುಂಗಿಯ ನಾದಕ್ಕೆ ನಲಿದು ನಾಗರ ಹೆಡೆಯಾಡುತ್ತದೆ' ಎಂಬುದು ವೀಕ್ಷಣೆ ಆಧಾರಿತ ವಿವರಣೆಯಾದರೂ ಅದರ ಸತ್ಯಾಸತ್ಯತೆಯನ್ನು ಮರು ಪರಿಶೀಲಿಸಬೇಕಾಗುತ್ತದೆ. ವಿಜ್ಞಾನದ ಆರಂಭದಲ್ಲಿನ ದಾರ್ಶನಿಕ ಅರಿಸ್ಟಾಟಲ್‌ನ ಹೇಳಿಕೆಗಳನ್ನು ಗಮನಿಸಿ. "ನಿನ್ನ ಮೊದಲ ಆಲೋಚನೆಗಳನ್ನು ನಂಬಬೇಡ; ಮರುಪರಿಶೀಲಿಸು" (Don't believe your first thoughts; re-consider it) ಇತ್ತೀಚಿನ ವಿಜ್ಞಾನಿ ಐನ್‌ಸ್ಟೀನ್ ಅವರು ಹೇಳುತ್ತಾರೆ: "ಸಾವಿರ ಪ್ರಯೋಗಗಳು ನನ್ನ ಸಿದ್ಧಾಂತಕ್ಕೆ ಪುರಾವೆ ಒದಗಿಸಿದ್ದರೂ, ಒಂದು ಸೂಕ್ತ ಪ್ರಯೋಗ ನನ್ನ ವಾದವನ್ನು ಸುಳ್ಳಾಗಿಸಬಹುದು." ಈ ಬಗೆಯ ನಿಷ್ಠುರ ಸತ್ಯನಿಷ್ಠೆಯನ್ನು ವಿಜ್ಞಾನ ಬೇಡುವುದರಿಂದಲೇ ಅದು ಗಹನ ಹಾಗೂ ಕಠಿಣ.

3) ವೈಜ್ಞಾನಿಕವಲ್ಲದ ಊಹೆಗಳು ಸುಂದರ, ರೋಚಕ ಹಾಗೂ ಸಾಂತ್ವನಕಾರಿಯಾಗಿರುವಾಗಲೂ ನಗ್ನಸತ್ಯಕ್ಕೆ

ಎಂ.ವಿ. ಪ್ರಭಾಕರ ರಾವ್

ದಿನನಿತ್ಯದ ಬದುಕಿನಲ್ಲಿ ವೈಜ್ಞಾನಿಕ ಮನೋಭಾವ


ಈ ಜಗತ್ತಿನ ಪ್ರತಿಯೊಂದು ಜೀವ ಸೃಷ್ಟಿಯೂ ವೈಜ್ಞಾನಿಕ ನಿಯಮಗಳನ್ನು ಪಾಲಿಸುತ್ತದೆ. ಪ್ರತಿ ಅಣುವಿನ ರಚನೆ ಮತ್ತು ಪ್ರವೃತ್ತಿಗೂ ಒಂದು ವೈಜ್ಞಾನಿಕ ತಳಹದಿ ಇದೆ. ವೈಜ್ಞಾನಿಕ ಅಭಿವೃದ್ಧಿಯಾದಂತೆ, ಮಾನವ, ಪ್ರಕೃತಿಯ ಹಲವಾರು ವಿಶಿಷ್ಟ ರೂಪಗಳನ್ನು ಅರ್ಥಮಾಡಿಕೊಳ್ಳತೊಡಗಿದ. ಹಾಗಾಗಿ ಸೃಷ್ಟಿಯ ಪ್ರತಿಯೊಂದು ವೈಚಿತ್ರ್ಯಕ್ಕೂ ಒಂದು ವೈಜ್ಞಾನಿಕ ಹಿನ್ನೆಲೆ ಇರುವಾಗ, ಮಾನವ ತನ್ನ ದಿನನಿತ್ಯದ ಬದುಕಿನಲ್ಲೂ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬಾರದೇಕೆ ಎನ್ನುವುದು ಸಹಜ ಪ್ರಶ್ನೆ.

ವಿಜ್ಞಾನದಲ್ಲಿ, ನಾವು ಯಾವ ವಿಚಾರವನ್ನೂ ಒಪ್ಪುವ ಮೊದಲು ಅವನ್ನು ಪ್ರಶ್ನಿಸಿ, ಪರೀಕ್ಷಿಸಿ ನೋಡಬೇಕೆಂದು ಹೇಳಿಕೊಡುತ್ತಾರೆ. ಒಂದು ತತ್ವ ಒಪ್ಪಿಗೆ ಪಡೆಯಬೇಕಾದರೆ, ಅದನ್ನು ಸಾಬೀತುಗೊಳಿಸಲು ಸಾಕಷ್ಟು ಪುರಾವೆ ಇರಬೇಕು. ಮತ್ತೆ ಇದರ ವಿರುದ್ಧವಾಗಿ ನಂತರ ಏನಾದರೂ ಸಾಕ್ಷಿ ಸಿಕ್ಕರೆ, ಇದೇ ತತ್ವ ನಿರಾಕರಣಕೊಳ್ಳಬಹುದು. ಇಲ್ಲಿ ಯಾವುದನ್ನೂ ಅಂತಿಮ ಸತ್ಯವೆಂದು ಸ್ವೀಕರಿಸುವುದಿಲ್ಲ.

ಕೆಲವು ವಿಷಯಗಳಲ್ಲಿ ತಿಳುವಳಿಕೆ ಅಸ್ಪಷ್ಟವಾಗಿದ್ದರಿಂದ ಆಗಿನ ಕಾಲದಲ್ಲಿ ಮೂಢ ನಂಬಿಕೆಗಳು ಹುಟ್ಟಿಕೊಂಡವು. ಈಗ ಮನುಷ್ಯ ಇದೆಲ್ಲಾ ವಿಷಯಗಳನ್ನು ಅರ್ಥ ಮಾಡಿಕೊಂಡ ಮೇಲೂ ಅವೇ ಮೂಢ ನಂಬಿಕೆಗಳನ್ನು ನಂಬುತ್ತಾ ಹೋಗುವುದರಲ್ಲಿ ಅರ್ಥವಿಲ್ಲ. (ಗ್ರಹಣದ ಕಾರ್ಯಕಾರಣ ಲೆಕ್ಕದ ಮೇಲೂ ಆ ಕುರಿತ ಆಚರಣೆಗಳನ್ನು ಮುಂದುವರೆಸಬೇಕಾಗಿಲ್ಲ.) ಹೊಸ ವೈಜ್ಞಾನಿಕ ಆವಿಷ್ಕಾರಗಳನ್ನು ಒಪ್ಪಿಕೊಳ್ಳಲೂ ಜನರಲ್ಲಿ ಸಾಕಷ್ಟು ಅನವಶ್ಯಕ ವಿರೋಧವಿದೆ. ಹಾಗಾಗಿಯೇ, ಮೈಕೆಲ್ ಫ್ಯಾರಾಡೇ ವಿದ್ಯುತ್ ಶಕ್ತಿಯನ್ನು ಕಂಡು ಹಿಡಿದಾಗ, 'So what?', 'ಇದರಿಂದೇನು ಪ್ರಯೋಜನ' ಇತ್ಯಾದಿ ಹೇಳಿಕೆಗಳನ್ನು ಕೊಟ್ಟರು.

ನಿರ್ದಿಷ್ಟ ಸಾಮಾಜಿಕ, ವೈಜ್ಞಾನಿಕ ಸಂಶೋಧನೆಯ ಫಲವಾಗಿ ಇಂದು ಆಗುತ್ತಿರುವ ಅದ್ಭುತ ತಂತ್ರಜ್ಞಾನ ಬೆಳವಣಿಗೆಗಳು ಈಗಲಾದರೂ ಸಮಾಜದ ಒಪ್ಪಿಗೆ ಪಡೆಯಬೇಕು.

ಎಂ. ವಿ. ಪ್ರಭಾಕರ ರಾವ್



ಮುಂಬಯಿಯ ಭಾಭಾ ಅಣುಶಕ್ತಿ ಸಂಸ್ಥೆಯಲ್ಲಿ ವಿಜ್ಞಾನಿಯಾಗಿ ನಿವೃತ್ತರಾಗಿರುವ ಎಂ.ವಿ. ಪ್ರಭಾಕರ ರಾವ್‌ರ ಆಸ್ಥೆಯ ಕ್ಷೇತ್ರ ಅಣುವಿಕಿರಣದಿಂದ ಕೃಷಿಯ ಸುಧಾರಣೆ.

ಬದ್ಧರಾಗುವ ದಿಟ್ಟತೆ ಬಹಳ ಮಂದಿಗೆ ಇರದು. "ಧರ್ಮವು ಚೀಪಲು ಬೆರಳೊದಗಿಸುತ್ತದೆ; ಹಿಡಿಯಲು ಸೆರಗು ನೀಡುತ್ತದೆ" (Religion provides a thumb to suck and a skirt to hold) ಎಂಬ ಮಾತನ್ನು ಕಾರ್ಲ್ ಸಗನ್ ಹೇಳಿರುವುದನ್ನು ಗಮನಿಸಿ.

4) ವಿಜ್ಞಾನದ ಕ್ರಮಕ್ಕೆ ವಿರುದ್ಧವಾಗಿರುವ ಅಂಶಗಳು ಕಲೆ, ಧರ್ಮ, ಸಂಸ್ಕೃತಿ ಮತ್ತು ಪರಂಪರೆಯ ಹೆಸರಿನಲ್ಲಿ ಅವ್ಯಾಹತವಾಗಿ ನಡೆದುಬಂದಿರುವಾಗ 'ನದಿಗೆದುರೀಸುವ ಜೀವಂತ ಮತ್ಸ್ಯ'ಗಳಿಗಿಂತ 'ಹೊನಲಿನ ದಿಕ್ಕಿಗೆ ಸಾಗುವ ಕಸಕಡ್ಡಿಗಳೇ' ಹೆಚ್ಚು. ಬಹುಜನರ ಅಭಿಪ್ರಾಯ, ಸ್ವಂತ ಅನಿಸಿಕೆ/ಊಹೆ, ಆಪ್ತವಾದ ಮಾತು, ಆಪ್ತರ ಮಾತು, ಶಾಸ್ತ್ರದ ಪ್ರಮಾಣ ಯಾವುದೂ ಪೂರ್ವಗ್ರಹ ನಿರ್ಮಿಸದಂತೆ ನೋಡಿಕೊಳ್ಳುವುದು ಹಾಗೂ ಉತ್ತರಕ್ಕಾಗಿ ದುಡುಕದಿರುವುದು, ಅನ್ವೇಷಕತೆಯಲ್ಲಿಯೇ ಆನಂದ ಕಂಡುಕೊಳ್ಳುವುದು; ತೀರ್ಪನ್ನು ಅಮಾನತ್ತಿನಲ್ಲಿಡುವುದು-ಯಾರಿಗಾದರೂ ಕಠಿಣ ಸವಾಲೇ ಸರಿ.

5) ಸಮಸ್ಯೆಯನ್ನು ಅಮೂರ್ತಗೊಳಿಸಿ ಆನಂದಿಸುವ ಕಲೆ (Art)ಯ ಪ್ರಕಾರ, ನಿಗೂಢಗೊಳಿಸುವ, ಗೋಜಲಾಗಿಸುವ ತತ್ತ್ವಶಾಸ್ತ್ರ, ನಿಷ್ಠುರ ಸತ್ಯ ಹೇಳುವ ವಿಜ್ಞಾನಗಳಿಗಿಂತ, ಆಪ್ಯಾಯಮಾನವಾಗಿ ವಿವರಿಸಿ ರಮಿಸುವ ರೂಢಿ ಮತ್ತು ನಂಬಿಕೆಗಳು ಜನರಿಗೆ ಹೆಚ್ಚು ಹತ್ತಿರವಾದರೆ, ಕಲಾವಿದರು, ದಾರ್ಶನಿಕರು ಮತ್ತು ವಿಜ್ಞಾನಿಗಳು ಕುಪಿತರಾಗಬೇಕಿಲ್ಲ; ಕನಿಕರಿಸಬೇಕು. ಈ ಮೂರು ಕ್ಷೇತ್ರಗಳನ್ನು ಜನಪ್ರಿಯಗೊಳಿಸಲು ಪರಸ್ಪರ ಪೂರಕವಾಗಿ ಪ್ರಯತ್ನಿಸಬೇಕು.

6) ಕಲೆಯಲ್ಲಿ ಸೃಜನಶೀಲತೆ ಇರುವಷ್ಟೇ ವಿಜ್ಞಾನದಲ್ಲೂ ಸೃಜನಶೀಲತೆ ಇದೆ. ಆದರೆ ಅದು ವಿಭಿನ್ನ ಸ್ವರೂಪದ್ದು.

7) ವಿಜ್ಞಾನವು ಸಮರ್ಥಿಸಬಹುದಾದ ಆಚರಣೆ ಯಿದ್ದ ಮಾತ್ರದಿಂದಲೇ ಆ ಆಚರಣೆ ವೈಜ್ಞಾನಿಕ ಕಾರಣಗಳಿಂದಲೇ ಬಂದಿತೆನ್ನುವುದು; ಆಚರಿಸುವವರು ವೈಜ್ಞಾನಿಕ ಚಿಂತನೆ ಇರುವವರು ಎನ್ನುವುದು-ವಿತಂಡವಾದ.

ವೈಜ್ಞಾನಿಕತೆ ಎಂದು ಹೇಳಿಕೊಳ್ಳುವವರಲ್ಲಿ 'ಕತೆ' ಅಡಗಿದ್ದರೆ ಆಶ್ಚರ್ಯವಿಲ್ಲ. ಅದು ವಿಜ್ಞಾನದ ತಪ್ಪಾಗಲೀ, ದೌರ್ಬಲ್ಯವಾಗಲಿ ಅಲ್ಲ. ವಿಜ್ಞಾನ ಕ್ರಮ ಪ್ರಜ್ಞಾಪೂರ್ವಕವಾಗಿ ತಂದುಕೊಳ್ಳಬೇಕಾದ, ತಂದುಕೊಂಡಮೇಲೂ 'ಅಪ್ರಮಾದ'ದಿಂದ ಕಾಯ್ದುಕೊಳ್ಳಬೇಕಾದ ಜ್ಞಾನನಿಷ್ಠೆ.

ಎಂ.ಆರ್. ನಾಗರಾಜು

ಪ್ರಚಂದ್ರ

ವಿಶೇಷವಾದ ಜ್ಞಾನ

'Science is a systematic way of understanding'. ಗದ್ದೆಯಲ್ಲಿ ತೊನೆಯುವ ಭತ್ತದ ಬಗ್ಗೆ ಇರಬಹುದು; ಮಾನವನ ಮನೋವ್ಯಾಪಾರದ ವಿಚಾರಗಳಿರಬಹುದು. ಏಕೆ ಏನುಗಳ, ಬೇಕು-ಬೇಡಗಳ ಮೂಲವೇ ವೈಜ್ಞಾನಿಕ ದೃಷ್ಟಿಕೋನ.

ಆಕಸ್ಮಿಕವಾಗಿ ಕಲ್ಲಿನಿಂದ ಹೊರಟ ಬೆಂಕಿಯ ಕಿಡಿಯ ಬಗೆಗಿನ ಆದಿಮಾನವನ ಹೇಗೆ, ಏಕೆ ಎಂಬ ಚಿಂತನೆ ನಮ್ಮನ್ನು ವಿದ್ಯುತ್ ಬೆಂಕಿಯನ್ನು ಹೊರಡಿಸುವವರೆಗೂ ತಂದು ನಿಲ್ಲಿಸಿದೆ. ಅದು ಪ್ರತಿಯೊಂದು ಕ್ರಿಯೆಯಲ್ಲೂ ಅರ್ಥ ಕಂಡುಕೊಳ್ಳುವ ದೃಷ್ಟಿ. ಅರಿವಿನಿಂದ charge ಆದ ಪ್ರಜ್ಞಾಪೂರ್ವಕ ಕ್ರಿಯೆ. ಇದು ತೌಲನಿಕವಾಗಿಯೂ ನಡೆಯಬಹುದು ಅಥವ ಸ್ವತಂತ್ರವಾಗಿಯೂ ನಡೆಯಬಹುದು. ಈ ಪ್ರಕ್ರಿಯೆ ಮಾನವನ ಮನೋ ವ್ಯಾಪಾರಕ್ಕೆ ಮಾತ್ರ ಸಂಬಂಧಪಟ್ಟದ್ದು.

ಒಂದು ಲೀಟರ್‌ಗೆ 40 ಕಿ.ಮೀ. ಬಂದರೇ, ತಾನು ತಲುಪಬೇಕಾದ ಸ್ಥಳಕ್ಕೆ ಎಷ್ಟು ಲೀಟರ್ ಪೆಟ್ರೋಲ್ ಬೇಕು ಎಂದು ಯೋಚಿಸುವುದೂ 'ವೈಜ್ಞಾನಿಕ ದೃಷ್ಟಿಕೋನವೇ'! ಸಾಮಾಜಿಕ, ಮಾನಸಿಕ, ಆರ್ಥಿಕ ಪ್ರಶ್ನೆಗಳೂ ವೈಜ್ಞಾನಿಕ. ವರದಕ್ಷಿಣೆ ಏಕೆ ಕೊಡಬೇಕು ಎಂಬ ಪ್ರಶ್ನೆಯೂ ವೈಜ್ಞಾನಿಕವೇ! ಇಲ್ಲಿ ಕಲ್ಪನೆಗೆ ಜಾಗವಿಲ್ಲ. ಅದು ಮೈಕ್ರೋಸ್ಕೋಪ್, ಟೆಲಿಸ್ಕೋಪ್‌ಗಳಿಂದ ನೋಡುವ biological ಆಕಾರಗಳಲ್ಲ. ಪ್ರಜ್ಞೆಯಿಂದ ನೋಡುವ ವಿಶ್ಲೇಷಣೆ. ಹೊಸದಾಗಿ ನಿರ್ಮಾಣವಾಗುವ ಬ್ರಿಜ್ ಮುಂಬರುವ ನೀರಿನ ಉಬ್ಬರಕ್ಕೆ ಅನುಗುಣವಾಗಿ ಎತ್ತರವಾಗಿ ಕಟ್ಟಲ್ಪಡುತ್ತದೆ. ಅಂದರೆ 'ವೈಜ್ಞಾನಿಕ ದೃಷ್ಟಿಕೋನ' ಎನ್ನುವುದು ಭೂತದ ಅವಲೋಕನ-ವರ್ತಮಾನದ ಅವಶ್ಯಕತೆ-ಭವಿಷ್ಯದ ಪರಿಣಾಮ ತಿಳಿದುಕೊಳ್ಳುವ ವೈಚಾರಿಕ ಕ್ರಿಯೆ. ವೈಜ್ಞಾನಿಕ ದೃಷ್ಟಿಕೋನ ನಮ್ಮ ಪೂರ್ವಿಕರಲ್ಲಿ ಇಲ್ಲದಿದ್ದುದರಿಂದಲೇ ನಮ್ಮಲ್ಲಿ ಮೂಢ ನಂಬಿಕೆಯ ವೃಕ್ಷ ತನ್ನ ಆಳವಾದ ಬೇರನ್ನು ಬಿಟ್ಟಿರುವುದು.

ದೇವಾಲಯಗಳಲ್ಲಿ ಹಚ್ಚುವ ಕರ್ಪೂರದ ಹೊಗೆಯಿಂದ ಇಡೀ ದೇವಾಲಯ ಕರಕಲಾಗುತ್ತದೆ. ಕರ್ಪೂರ ಹಚ್ಚುವುದು ಬೇಡ, ದೇವಾಲಯವನ್ನು ಶುಭ್ರವಾಗಿ ಇಟ್ಟುಕೊಳ್ಳೋಣ; ಅಭಿಷೇಕದ ನೀರನ್ನು ತೀರ್ಥವೆಂದು ಸ್ವೀಕರಿಸದೆ ಸ್ವಚ್ಛತೆಯ ದೃಷ್ಟಿಯಿಂದ ನಿಷೇಧಿಸೋಣ ಎನ್ನುವ ಭಾವನೆ-ಚಿಂತನೆಗಳೂ ವೈಜ್ಞಾನಿಕ ದೃಷ್ಟಿಕೋನದ ಕೂಸುಗಳೇ!

ಮನುಷ್ಯನ ಪ್ರಜ್ಞೆಯಲ್ಲಿ ತೂಕಡಿಸುತ್ತಿದ್ದ ಎಷ್ಟೋ ವಿಚಾರಗಳು ಎಚ್ಚರಗೊಂಡಿದ್ದು ಮ್ಯಾಕ್ಸ್‌ಮುಲ್ಲರ್, ಮಾರ್ಕ್ಸ್, ಫ್ರಾಯ್ಡ್, ರಸಲ್ ನಂಥವರು ಜೀವನವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದ್ದರಿಂದಲೇ! ಮೊದಲು ದೃಷ್ಟಿಕೋನ, ನಂತರ ಪ್ರಯೋಗಾಲಯ.

ಪ್ರಚಂದ್ರ

ಜಾಹೀರಾತು ಕ್ಷೇತ್ರದಲ್ಲಿ ಕಲೆಗಾರ, ವಿಷುವಲೈಸರ್ ಆಗಿ ಕೆಲಸ ಮಾಡುತ್ತಿರುವ ಸಾಹಿತ್ಯಾಸಕ್ತ.




ಮಾರುತಿ ಶಾನಭಾಗ

ಅಂತಃಸ್ಫೂರ್ತಿಯ ನೆಲೆಯಿಂದಲೂ...

(1) ಮನುಷ್ಯ ವರ್ಗದ ವಿಕಾಸವಾಗಿದೆಯೆನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಈ ವಿಕಾಸಕ್ಕೆ ವೈಜ್ಞಾನಿಕ ದೃಷ್ಟಿಕೋನವೊಂದೇ ಕಾರಣವಾಗಿದೆಯೆಂದು ಸಿದ್ಧಪಡಿಸಿದರೆ, ಈ ದೃಷ್ಟಿಕೋನವೇ ಮಾನವಕುಲದ ಸಹಜಸ್ಥಿತಿಯೆಂದು ಒಪ್ಪಿಕೊಂಡಂತಾಯಿತು. ವಿಜ್ಞಾನದಿಂದ ಹುಟ್ಟಿಕೊಂಡ ತಂತ್ರಜ್ಞಾನದಿಂದ ಮನುಕುಲಕ್ಕೆ ಕನಸಿನಲ್ಲಿಯೂ ಎಣಿಸದಂತಹ ಲಾಭಗಳಾಗಿವೆ. ಆದರೆ ಅದೇ ತಂತ್ರಜ್ಞಾನದ ದುರುಪಯೋಗದಿಂದ ವಿಧ್ವಂಸಕ ಪ್ರವೃತ್ತಿಯೂ ಹರಡಿಕೊಂಡು, ಮನುಷ್ಯ ಸಮುದಾಯವು ಹಲವು ಗುಂಪುಗಳಲ್ಲಿ ಹರಡಿಕೊಂಡುಬಿಟ್ಟಿದೆ. ಇದಕ್ಕೆ ವಿಕಾಸವೆಂದು ಹೇಳಲಿಕ್ಕಾಗುವುದಿಲ್ಲ. ಎಲ್ಲೆಲ್ಲಿಯೂ ಭೀತಿ, ಅಸುರಕ್ಷತೆಯ ವಾತಾವರಣ ಹಬ್ಬಿಕೊಳ್ಳುತ್ತಿರುವದರಿಂದ ವಿಕಾಸಕ್ಕೆ ಅಡ್ಡಗೋಡೆ ಕಟ್ಟಿದ್ದೂ ವಿಜ್ಞಾನದ ವಿಪರೀತ ಉಪಯೋಜನೆಯೇ. ಆದರೂ ವೈಜ್ಞಾನಿಕ ದೃಷ್ಟಿಕೋನದಲ್ಲಿ ಗರ್ಭಿತವಾಗಿರುವ-ವಿಶ್ವದ ಅನೇಕ ಸ್ವರೂಪಗಳನ್ನು ಕಾಣುವೆನೆಂಬ ವೈಜ್ಞಾನಿಕನ ಸಂಕಲ್ಪದಲ್ಲಿಯ ನಮ್ರತೆಯನ್ನು ನಾವು ಮರೆಯುವಂತಿಲ್ಲ. ಈ ನಮ್ರ ಶ್ರದ್ಧೆಗೆ, ವೈಚಾರಿಕತೆಯ ಅಂಚು ಅವಶ್ಯ. ತರ್ಕ ಶುದ್ಧತೆಯ ಆಧಾರದಿಂದ ತನ್ನ ಪಾಲಿಗೆ ಸಿದ್ಧವಾದದ್ದನ್ನು, ಮಾನವ ಹಿತಕ್ಕಾಗಿ ಉಪಯೋಗಿಸುವೆನೆಂಬ ಮೌಲ್ಯವೂ ವೈಜ್ಞಾನಿಕ ನಂಬಿಕೆಯ ಒಂದು ಅಂಗ.

ಒಂದು ರೀತಿ ವೈಜ್ಞಾನಿಕತೆಯತ್ತ ಹೆಜ್ಜೆ ಇಡುವ ಪರಿಸ್ಥಿತಿ ಬಂದದ್ದು, ಎದುರಾಳಿಯಾದ ಧರ್ಮಶ್ರದ್ಧೆಯಲ್ಲಿ ತೋರಿಬರುವ, ಅಂತಿಮ ಸತ್ಯವನ್ನು ಕಂಡೆನೆಂಬ ಮೌಢ್ಯವನ್ನು ತಿರಸ್ಕರಿಸುವ ಉಗ್ರವಾದ ಉದ್ಧಟತನದ ಮೂಲಕ! ಬಹಿರಂಗವಾದ, ಅನುಭವ ಸಾಧ್ಯವಾದ ವಾಸ್ತವದಲ್ಲಿ ಮಾತ್ರ ಶ್ರದ್ಧೆ ತೋರುವೆನೆಂಬ ವೈಜ್ಞಾನಿಕನ ಹಟದ ಎದುರು, ಸನಾತನ ಧರ್ಮಗ್ರಂಥಗಳ ಆಧಾರವೊಂದೇ ಸಾಧನವೆನ್ನುವ ಭಾವಜನ್ಯ ಒತ್ತಡ ಮತ್ತು ಘೋಷಣೆಗಳಿವೆ. ಹೀಗಿದ್ದರಿಂದ ನಮ್ಮಲ್ಲಿಯ ಪ್ರಜ್ಞೆಯನ್ನು ಜಾಗರಿಸುವದು ಅತ್ಯಂತ ಅವಶ್ಯವಾಗುತ್ತದೆ. ಮತೀಯ ಇಲ್ಲವೆ ಸಂಕುಚಿತ ಅಟ್ಟಹಾಸವನ್ನು ಬಿಟ್ಟು ನೋಡುವ ಔದಾರ್ಯದ, ಉದಾತ್ತ ವೃತ್ತಿಯೇ ವೈಜ್ಞಾನಿಕ ದೃಷ್ಟಿಕೋನಕ್ಕೆ ದಾರಿ ಮಾಡಿಕೊಡುತ್ತದೆ.



ಮುಂಬಯಿಯಲ್ಲಿ ತತ್ವ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಮಾರುತಿ ಶಾನಭಾಗ. ಸ್ವೋಪಜ್ಞ ವಿಮರ್ಶಕ. ನಾಡಿನ ಹೊರಗೇ ಉಳಿದವರು. ಅಥವಾ ಹೊರಗಿದ್ದುದರಿಂದಲೇ ಉಳಿದವರು!

2) ವಿಜ್ಞಾನದ ಹುಟ್ಟು ಮತ್ತು ಪ್ರಸಾರ ಯುರೋಪ ಮತ್ತು ಅಮೇರಿಕದಲ್ಲಿ ವಿಶೇಷವಾಯಿತು. ಚಂದ್ರನ ಸೀಮೆಯಲ್ಲಿ ಅಂತರಿಕ್ಷ ಯಾನ ಮಾಡಿ ಇಳಿಸಿ ಮನುಷ್ಯ ಕಾಲಿಟ್ಟ. ಅಲ್ಲಿಂದ ತನ್ನ ಹುಟ್ಟುಗ್ರಹವಾದ ಪೃಥ್ವಿಯನ್ನು ಕಂಡು ಸಂತೋಷಗೊಂಡ. ಒಂದು ರೀತಿಯಿಂದ ಈ ಮಾನವ ಕುಲದ ಅನುಭವದಿಂದ ವಿಜ್ಞಾನವು ಒಂದು ಮಹತ್ವದ ಘಟ್ಟವನ್ನು ತಲುಪಿತು. ತಾನು ಕಂಡಿದ್ದು ಈ ವರೆಗಿನ ವೈಚಾರಿಕ-ಪಾತಳಿಗಿಂತ ಭಿನ್ನವೆನ್ನುವ ಅರಿವು ಬಂದದ್ದು ಆಗ. ಅಂತರಿಕ್ಷದಿಂದ ನೋಡುವ ಮಾನವ ತನ್ನ ಪರಿಸರದಿಂದ ಹೊರಬರುವ ಹೊಸ ಶಕ್ಯತೆಗಳನ್ನು ಪಡೆದವನಾಗಿದ್ದ. ಈವರೆಗಿನ ನಂಬಿಕೆಗಳಿಂದ ಒಂದು ದೊಡ್ಡ ಜಿಗಿತ ಮಾಡಿದ ಅಸಾಧಾರಣನಾಗಿದ್ದ. ಸೃಷ್ಟಿಕರ್ತ ತನ್ನ ಕಲ್ಪನೆಗಳಲ್ಲಿ ಒಂದು ಎನ್ನುವ ಹಂತಕ್ಕೆ ತಲುಪಿದ್ದ. ಈಶ್ವರನೇ ನಿರ್ಮಿತಿಯಾದದ್ದಲ್ಲ; ಹಾಗೆ ನೋಡಿದರೆ ಈಶ್ವರನ ನಿರ್ಮಿತಿ ಮನುಷ್ಯನ ಕಲ್ಪನಾ ಶಕ್ತಿಯ ನಿರ್ಮಿತಿ! ವಿಶ್ವದ ಅನೇಕ ಗ್ರಹಗಳಲ್ಲಿ ಪೃಥ್ವಿ ಒಂದಾದರೆ, ಆ ಪೃಥ್ವಿಯ ಮೇಲಿನ ಅನೇಕ ಜೀವಿಗಳಲ್ಲಿ ಮನುಷ್ಯ ಒಂದು ಜಾತಿ. ಇಂತಹ ಮನುಷ್ಯ ಜೀವಿಗಳ ವಿವಿಧ ಕಾಲ್ಪನಿಕ ಆವರ್ತನೆಗಳಿಂದ ಈಶ್ವರನ ಸಂಕಲ್ಪನೆ ಹುಟ್ಟಿಕೊಳ್ಳುತ್ತದೆ. ಈಶ್ವರ ಒಂದು ವಾಸ್ತವವಲ್ಲ. ಅದು ಮನುಷ್ಯನ ಮನೋಭೂಮಿಯಲ್ಲಿ ಏಳುವ ಬೀಳುವ ಅನೇಕ ಕಲ್ಪನೆಗಳಲ್ಲಿ ಒಂದು. ಈಶ್ವರನ ಕಾಲ್ಪನಿಕ ಅಸ್ತಿತ್ವ ಹಾಗೆಂದು ಸಾಂಸ್ಕೃತಿಕವಾದದ್ದು ಮತ್ತು ಅದರ ಬೇರೆ ಬೇರೆ ಆವೃತ್ತಿಗಳು ಆಗುತ್ತಲೇ ಇರುವ ಸಾಧ್ಯತೆಯಿದೆ.

ಈ ರೀತಿಯ ತರ್ಕ ಸಾಧ್ಯತೆಯಿಂದ ವಿಜ್ಞಾನ ಮಾನವ ಜಾತಿಯನ್ನು ಒಂದು ಹೊಸ ಯುಗಕ್ಕೆ ಇಳಿಸಿದ್ದೇನೋ ಹೌದು. ಆದರೆ ವಿಚಾರ ಪದ್ಧತಿಯ ಏಕದಿಶಾ ಮಾರ್ಗವೂ ಎದ್ದು ತೋರುವಂತಿತ್ತು. ಇಂತಹ ವಸ್ತುನಿಷ್ಠತೆಯ ಮಾನದಂಡ ಯಥಾರ್ಥವೇ? ವಿಜ್ಞಾನ ಈ ತಡಕಾಟದಲ್ಲಿ ಯಾವದೋ ಅಂಗವನ್ನು ಮರೆತಂತಿಲ್ಲವೆ? ವಸ್ತುವನ್ನು ಅರಿಯುವ ಅರಿವು ವಸ್ತುವಿಗಿಂತ ಭಿನ್ನವಿದ್ದ ಹೊರತು ವಸ್ತುವಿನ ಅಸ್ತಿತ್ವ ಹೇಗೆ ಸಂಭಾವ್ಯ? 'ಅರಿವು' ವಾಸ್ತವತೆಯಿಂದ ಹೊರತಾಗಿದ್ದರೆ ಅರಿವಿನ ಅಂತರಂಗದಲ್ಲಿಯೇ ಎಲ್ಲ ವಾಸ್ತವವೂ ಮಡುವುಗೊಂಡಿದೆಯನ್ನಬಹುದಲ್ಲ? ಅರಿವಿನಲ್ಲಿ ಪ್ರತಿಬಿಂಬಿತವಾದ ವಾಸ್ತವಕ್ಕೆ ಹೊರಗೂ ಇಲ್ಲ, ಒಳಗೂ ಇಲ್ಲ. ವಿಶ್ವವೇ ಒಂದು ಕೇಂದ್ರದಲ್ಲಿ, ಒಂದು ಬಿಂದುವಿನಲ್ಲಿ ಅಡಕ ಗೊಳ್ಳಬಹುದಾದ ತರ್ಕಕ್ಕೆ ಪರ್ಯಾಯವಿಲ್ಲ.

ಅಂದಹಾಗೆ ವಿಜ್ಞಾನ ವಾಸ್ತವವನ್ನು, ಭೌತಿಕತೆಯನ್ನು ಒಂದು ಹಟವಾಗಿ ಪ್ರಸ್ತಾಪಿಸಿದೆ. ಅದರ ಇನ್ನೊಂದು ಧ್ರುವ ಅರಿವು. ಇವೆರಡುಗಳ ಜಗ್ಗಾಟ ವೈಜ್ಞಾನಿಕ ದೃಷ್ಟಿಕೋನದ ಬಗ್ಗೆ ದೊಡ್ಡ ಪ್ರಶ್ನ ಚಿಹ್ನೆಯನ್ನು ಎತ್ತಿದಂತಿದೆ. ಅದು ಅನಿವಾರ್ಯವೆ?

3) ನಮ್ಮ ಸಾಮಾಜಿಕ ಮೌಲ್ಯಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಗ್ರಸ್ಥಾನ, ಕಳೆದ ಒಂದು ಶತಮಾನದಿಂದ ಪ್ರಚಲಿತವಾಗಿದೆ. ಈ ಸ್ವಾತಂತ್ರ್ಯದ ಪ್ರಜ್ಞೆಗೆ ಮೂಲ, ಮನುಷ್ಯ ಜೀವಿಯೊಂದನ್ನೇ ಈಶ್ವರನು ಪ್ರಜ್ಞಾಸಹಿತನಾಗಿ ನಿರ್ಮಿಸಿದ್ದಾನೆ ಎನ್ನುವ ನಂಬಿಕೆ. ಇಂದಿನ ಯುಗಾಂತರದ ಸಂದರ್ಭದಲ್ಲಿ, ವಿಜ್ಞಾನದಿಂದ ತಳೆದುಕೊಂಡಿರುವ ಈ ನಂಬಿಕೆಯನ್ನು ಪುನರ್ವಿಮರ್ಶಿಸಿ ನೋಡಬೇಕಾಗಿದೆ. ತನ್ನ ವಿಚಾರ ಶಕ್ತಿಯ ಮೂಲಕವೇ ಮಾನವ, ತನಗೆ ಬರುವ ಅನುಭವಗಳ ಸತ್ಯಾಸತ್ಯತೆಯನ್ನು ಅಳೆದು ನೋಡುವ ಕ್ಷಮತೆಯವನಾಗಿದ್ದಾನೆ ಎನ್ನುವ ಸಂಕಲ್ಪನೆಯ ಬಗ್ಗೆ ಈ ಶಂಕೆ ಎದ್ದಿದೆ. ವ್ಯಕ್ತಿಸ್ವಾತಂತ್ರ್ಯದ ಒಂದು ಮುಖವೆಂದರೆ ಇನ್ನೊಬ್ಬನ, ವಿಚಾರಗಳನ್ನು ನಿರ್ಭಿಡೆಯಿಂದ ಪರೀಕ್ಷಿಸುವ ಜಾಗೃತಿಯದು. ವಿಜ್ಞಾನದ ಈವರೆಗಿನ ಪಟಲವನ್ನು ವೀಕ್ಷಿಸಿದರೆ, ಮಂಡನದಷ್ಟೇ ಖಂಡನದ ಪ್ರಕಾರಗಳಿಂದ ಅದರ ಇತಿಹಾಸ ತುಂಬಿಕೊಂಡಿದೆ. ಅಂದರೆ, ವಿಜ್ಞಾನದಲ್ಲಿ ಮಾನ್ಯತೆ

ಪಡೆದ ಸಂಕಲ್ಪನೆಗಳಿಗೆಲ್ಲ ಸಂದಿಗ್ಧತೆಯ ಆವರಣ ತಪ್ಪಿದ್ದಲ್ಲ. ಹಿಂದಿನದನ್ನು ಮುಂದಿನವನು ತಿದ್ದುತ್ತಾನೆ... ಇಂತಹ ಪರಿಸ್ಥಿತಿಯಲ್ಲಿ, ಒಂದೇ ಸಮಯದಲ್ಲಿ ಅನೇಕರು ತಮ್ಮ ತಮ್ಮ ಸಿದ್ಧಾಂತಗಳನ್ನು ಮಂಡಿಸುವದಾದರೆ ಯಾವುದರ ಬಗ್ಗೆ ಶಂಕೆ ಯೋಗ್ಯ ಮತ್ತು ಯಾವದರ ಬಗ್ಗೆ ಅಯೋಗ್ಯ ಎನ್ನುವ ಮಾನಸಿಕ ಆಂದೋಲನ ಹುಟ್ಟಿಕೊಳ್ಳುವದು ಸಹಜ. ಜೈನ ಪರಂಪರೆಯ ಅನೇಕಾಂತವಾದ ಇಲ್ಲಿ ಅಪ್ರಸ್ತುತವಾಗುವದಿಲ್ಲ. ವೈಚಾರಿಕತೆಯಿಂದ ಬರುವ ಶುಷ್ಕ ತರ್ಕಸಂಗತವಾದ ಭಾಷೆ ತನ್ನ ಸ್ಪಷ್ಟತೆಯಿಂದ ಏನನ್ನೂ ಹೇಳಿದಂತಾಗುವದಿಲ್ಲ. ಕಾವ್ಯದಲ್ಲಿಯ ಪ್ರತೀಕಾತ್ಮಕ ಭಾಷೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇನ್ನೊಮ್ಮೆ ನಾವು ವ್ಯಕ್ತಿಯ ಕಲ್ಪನಾ ಶಕ್ತಿಯ ಸೀಮೆಯನ್ನು ಸೇರುತ್ತೇವೆ. ಅವನ ನಿರ್ಮಿತಿ ಕ್ಷಮತೆಯನ್ನು ಒಪ್ಪಿಕೊಳ್ಳುತ್ತೇವೆ. ವ್ಯಕ್ತಿಸ್ವಾತಂತ್ರ್ಯ, ವ್ಯಕ್ತಿಯ ನಿಖರ ಪ್ರಜ್ಞಾಶಕ್ತಿ ಎನ್ನುವಂತಹ ವೈಜ್ಞಾನಿಕ ಮನೋಭೂಮಿ ಶಿಥಿಲವಾಗುತ್ತದೆ. ವಿಶ್ವದ ವಿಶಾಲತೆಯ ಎದುರು, ಬರಿಯ ಮಾನವ ಕೇಂದ್ರಿತ ವಿಚಾರಗಳಿಂದ ಹುಟ್ಟಿಕೊಂಡ ಅನೇಕ ಸಾಮಾಜಿಕ ವ್ಯವಸ್ಥೆಗಳ ಬಗ್ಗೆ ಸಾಶಂಕರಾಗುತ್ತೇವೆ. ಪರಿಸರ ಪ್ರಜ್ಞೆಯ ಮೂಲಕ ನಿಸರ್ಗಕ್ಕೂ ಮಾನವನಿಗೂ ಇರುವ ಅನ್ಯೋನ್ಯ ಸಂಬಂಧಗಳ ಬಗ್ಗೆ ಚಿಂತನೆ ಮಾಡತೊಡಗುತ್ತೇವೆ. ಜೀವ ಸೃಷ್ಟಿಯ ಸಂರಕ್ಷಣೆಯಷ್ಟೇ ಅಜೀವ ಸೃಷ್ಟಿಯ ನಾಶವನ್ನೂ ತಡೆಹಿಡಿಯುವ ಜವಾಬುದಾರಿಯನ್ನು ಕಳೆದುಕೊಳ್ಳುತ್ತೇವೆ. ವಿಶ್ವವನ್ನು ಪಾಶ್ಚಾತ್ಯರಿಂದ ಬಂದ ಆಧುನಿಕ ಬುದ್ಧಿವಾದೀ ದೃಷ್ಟಿಯೊಂದರಿಂದಲೇ ನೋಡದೆ, ಜಗತ್ತಿನ ಎಲ್ಲ ಮಾನವ ಸಮುದಾಯ, ಎಂದಿನಿಂದ ಕಾಣುತ್ತಬಂದಿರುವ, ಅಂತಃಸ್ಫೂರ್ತಿಯ ಕಾವ್ಯಾತ್ಮಕ ನಿಲ್ವನಿಂದಲೂ ಕಂಡುಕೊಳ್ಳುವ ಜರೂರನ್ನು ಅನುಭವಿಸುತ್ತೇವೆ. 'ವೈಜ್ಞಾನಿಕ ದೃಷ್ಟಿಕೋನ' ಹೀಗೆ ವ್ಯಾಪಕವಾಗುತ್ತ ನಡೆದಿದೆ ಎಂದು ನಂಬುವವನು ನಾನು.



ಮಾರುತಿ ಶಾನಭಾಗ

ಬಿ.ಎಸ್. ಶೈಲಜ

ತರ್ಕ ಮತ್ತು ಮಾವಿನಸೊಪ್ಪು...


ಈಚಿನ ದಿನಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ ಎಂಬ ಪದವನ್ನು 'ಬಂಡಾಯ' ಎಂಬ ಅರ್ಥದಲ್ಲಿ ಹೆಚ್ಚಾಗಿ ಬಳಸಲಾಗುತ್ತಿದೆ. ಪರಂಪರಾಗತವಾಗಿ ಬಂದ ಕೆಲವು ಅಂಶಗಳನ್ನು ಒರೆಹಚ್ಚಿ ನೋಡುವುದಷ್ಟೇ ವೈಜ್ಞಾನಿಕ ದೃಷ್ಟಿಕೋನ ಎಂಬ ವಾದವೂ ಕೇಳಿಬರುತ್ತಿದೆ. ಆದರೆ ಮನುಷ್ಯ ಮುನ್ನಡೆದಂತೆ, ಹಿಂದೆ ತುಳಿದುಬಿಟ್ಟ ಹೆಜ್ಜೆಗಳನ್ನು ನೋಡಬೇಕಾದುದು ಅತಿ ಅವಶ್ಯಕ. ಎಲ್ಲರೂ ನಡೆಯುವಾಗಲೇ ಎಡವುತ್ತಾರಲ್ಲವೇ? ಆದರೆ ಅವರು ಹಾಗೆ ಎಡವಿದಾಗ, ಯಾವ ರೀತಿಯಲ್ಲಿ ತಂತಮ್ಮ ನಡೆಯನ್ನು ವಿಶ್ಲೇಷಿಸಿದರು ಎಂಬುದನ್ನು ವಿಚಾರಿಸಿದಾಗ ವೈಜ್ಞಾನಿಕ ದೃಷ್ಟಿಕೋನದ ಅರ್ಥ ತೆರೆದುಕೊಳ್ಳುತ್ತದೆ. ಆರ್ಯಭಟನಂತಹ ಮೇಧಾವಿ, 'ಚಂದ್ರ ನೀರಿನಿಂದ ಮಾಡಲ್ಪಟ್ಟಿದೆ' ಎಂದು ಹೇಳಿರುವುದು ನಿಜ. ಅವನ ಆ ನಿರ್ಧಾರಕ್ಕೆ ಕಾರಣೀಭೂತವಾದ ಅಂಶಗಳನ್ನು ಪರಿಶೀಲಿಸಿದಾಗ, ಅಂದಿನ ದಿನಗಳಲ್ಲಿ ಲಭ್ಯವಿದ್ದ ಪರಿಮಿತ ಭೌತವಿಜ್ಞಾನ ವ್ಯಾಪ್ತಿಯಲ್ಲಿ ಆ ಹೇಳಿಕೆ ಸಾಧುವೇ ಆಗಿತ್ತು ಎಂಬುದನ್ನು ನಾವು ಅರಿಯಬಹುದು. ಸರ್ ಐಸಾಕ್ ನ್ಯೂಟನ್ ಸಹ 'ಧೂಮಕೇತುಗಳು ಸರಳ ರೇಖೆಯಲ್ಲಿ ಚಲಿಸುತ್ತವೆ' ಎಂದಿದ್ದನಾದರೂ, ಮುಂದೆ ಅವನು ಬಳಸಿದ ತತ್ತ್ವಗಳ ಆಧಾರದ ಮೇಲೆಯೇ ಅವುಗಳ ಕಕ್ಷೆಯನ್ನು ನಿರ್ಧರಿಸಲಾಯಿತಲ್ಲವೇ? ಯಾವ ವೀಕ್ಷಣೆಯ ಅಂಶಗಳನ್ನು ಬಳಸಿ ಹದಿನೈದು ಶತಮಾನಗಳ ಕಾಲ ಭೂಮಿಯೇ ವಿಶ್ವದ ಕೇಂದ್ರ ಎಂದು ನಂಬಲಾಗಿತ್ತೋ, ಅದೇ ಅಂಶಗಳ ಆಧಾರದ ಮೇಲೆ ಸೌರಕೇಂದ್ರವಾದವನ್ನು ಮಂಡಿಸಲು ಕೊಪರ್ನಿಕಸ್ ಹುಟ್ಟಿ ಬರಬೇಕಾಯಿತು.

ಮೊದಲಬಾರಿ 'ಚಂದ್ರನ ಮೇಲೆ ಜೀವ ಇಲ್ಲ; ಭೂಮಿಯಂತೆ ಹಳ್ಳತಿಟ್ಟುಗಳಿವೆ' ಎಂಬ ಅಂಶ ಪ್ರಕಟವಾದಾಗ ಕವಿಗಳು, ಕಲಾವಿದರು ನಿರಾಶೆಪಟ್ಟರಂತೆ- 'ಚಂದ್ರನೆಂದರೆ ಇಷ್ಟೇನೆ? ಇನ್ನು ಮುಂದೆ ಕಾವ್ಯ ರಚಿಸಲು ಪ್ರೇರಣೆಯೆ ಇಲ್ಲದಂತಾಯಿತು' ಎಂದು. ಆದರೆ ಚಂದ್ರ ಇಂದಿಗೂ ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿದ್ದಾನೆ, ರಸಿಕರ ಅಚ್ಚುಮೆಚ್ಚಿನ ವಸ್ತುವಾಗಿ ಉಳಿದಿದ್ದಾನೆ. ಆದ್ದರಿಂದ ವೈಜ್ಞಾನಿಕ ದೃಷ್ಟಿಕೋನ ಸೃಜನಶೀಲತೆಗೆ ಎಂದೂ ಅಡ್ಡಿ ಬರುವುದಿಲ್ಲ.

ವಿಚಿತ್ರವೆಂದರೆ, ವೈಜ್ಞಾನಿಕ ದೃಷ್ಟಿಕೋನ, ಮನೋಭಾವ ಈ ಬಗೆಯ ಪದಗಳು ಐಷಾರಾಮದ ಬದುಕಿನಲ್ಲಿ ಜನಪ್ರಿಯವಾಗಿವೆ. ಮಳೆಗಾಗಿ ಕಾದು ಕುಳಿತ ರೈತ ರಾಹುಕಾಲಕ್ಕಾಗಲೀ, ಅಮೃತ ಘಳಿಗೆಗಾಗಲೀ ಕಾಯುವುದಿಲ್ಲ. ಮೊದಲ ಹನಿ ಬಿದ್ದೊಡನೆ ಜಾಗೃತನಾಗುತ್ತಾನೆ. ಪ್ರಯೋಗಾಲಯದಲ್ಲಿ ಅವಿರತವಾಗಿ ಶ್ರಮಿಸುವ ವಿಜ್ಞಾನಿಯೂ ಅಷ್ಟೇ. ಇಂದಿನ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ 'ಶಿವರಾತ್ರಿಯ ದಿನ ಜಾಗರಣೆ ಏಕೆ?' ಎಂಬಂತಹ ಪ್ರಶ್ನೆಗಳನ್ನು ಶತಮಾನಗಳ ಹಿಂದೆಯೇ ಅದುಮಿಹಾಕಲಾಗಿದೆ. ಈಗ ಅವುಗಳ ಉತ್ತರವನ್ನು ಹುಡುಕುವುದು ಕತ್ತಲಲ್ಲಿ ಕಿವುಡ, ಕಪ್ಪು ಬೆಕ್ಕನ್ನು ಹುಡುಕಿದಂತಾಗುತ್ತದೆ. ಮೂಲತಃ ಉದರ ಪೋಷಣೆಯೇ ಗುರಿಯಾಗಿರುವುದರಿಂದ, ಯಾವುದೋ ದೌರ್ಬಲ್ಯಗಳು ಹೊಸಹೊಸ ಅವೈಜ್ಞಾನಿಕ ನಂಬಿಕೆಗಳ ಬೀಜಗಳನ್ನು ಬಿತ್ತುತ್ತಲೇ ಇರುತ್ತವೆ. ಇಂದಿನ ವ್ಯವಸ್ಥೆಯಲ್ಲಿ ವೈಜ್ಞಾನಿಕ ದೃಷ್ಟಿಕೋನದ ಕ್ರಾಂತಿ ಎಬ್ಬಿಸಲು ಹೊರಟರೆ, ಏಟು ತಿನ್ನುವವರು ಬಡವರು. ಹಬ್ಬಕ್ಕೆಂದು ಮಾವಿನಸೊಪ್ಪು ಮಾರಿ ಬದುಕುವ ಜನ ಇರುವಾಗ, ಭೂಕಂಪದಿಂದ ತತ್ತರಿಸಿ ಬೃಹದಾಕಾರವಾಗಿ ನಿಂತ ಹೊಟ್ಟೆಪಾಡಿನ ಸಮಸ್ಯೆ ಎದುರಿಸುವವ ಇರುವಾಗ, ತರ್ಕ ವಿಫಲವಾಗುತ್ತದೆ. ಇತರರ ಮನೋದೌರ್ಬಲ್ಯಗಳು ಹೊಸ ಹಾದಿ ಹುಡುಕಿಕೊಡುತ್ತವೆ. ಹಾಗಾಗಿ ಸಂತಾಪ ಸೂಚಿಸಿ ಲೊಚಗುಟ್ಟುವ ಜನ, ದೂರದಲ್ಲಿರುವ ತಿರುಪತಿಯಲ್ಲಿ ಪದ್ಮಾವತಿಯ ಮಾಂಗಲ್ಯ ಬಿದ್ದುಹೋಯಿತೆಂದು ಕುಳಿತಲ್ಲೇ ಪರಿತಾಪ ಪಡುತ್ತಿರುತ್ತಾರೆ.

ಬಿ. ಎಸ್. ಶೈಲಜ

ಖಗೋಳ ವಿಜ್ಞಾನದಲ್ಲಿ ಉನ್ನತ ಅಧ್ಯಯನ, ಸಂಶೋಧನೆ ಮಾಡಿರುವ ಶೈಲಜ ಈಗ ಬೆಂಗಳೂರಿನ ಜವಹರಲಾಲ್ ಪ್ಲಾನಟೋರಿಯಂನಲ್ಲಿ ವಿಜ್ಞಾನಿ. ವೈಜ್ಞಾನಿಕ ಸಿದ್ಧಾಂತ, ವಿದ್ಯಮಾನಗಳನ್ನು ಸರಳ ಕನ್ನಡದಲ್ಲಿ ಬರೆಯುವುದರಲ್ಲಿ ಸಿದ್ಧಹಸ್ತರು.



ಕವಿತಾ ವಿಶ್ವನಾಥ್

ವೈಜ್ಞಾನಿಕ ದೃಷ್ಟಿಕೋನ ಇಲ್ಲದ್ದರಿಂದಲೇ ಶೋಷಣೆ, ಹಿಂಸೆ!

'ವೈಜ್ಞಾನಿಕ ದೃಷ್ಟಿಕೋನ' ಮಾನವನ ಜನ್ಮಸಿದ್ಧ ಹಕ್ಕಿನಂತೆ. ಅದು ಯಾರ ಗುತ್ತಿಗೆಯೂ ಅಲ್ಲ. ಅದು ಮನುಷ್ಯನ ವಿಕಾಸ ಮಾರ್ಗದ ಸಹಜ ಸ್ಥಿತಿ. ಇಂದಿನ ಕಂಪ್ಯೂಟರ್ ಭಾಷೆಯಲ್ಲಿ ಹೇಳುವುದಾದರೆ, ವೈಜ್ಞಾನಿಕ ದೃಷ್ಟಿಕೋನ ಮಾನವನ 'ಸಹಜ ಸ್ವಭಾವ' (ಹುಟ್ಟುಗುಣ default nature). ಇದಕ್ಕೆ ಮನುಷ್ಯನಷ್ಟೇ ಹಳೆಯ ಇತಿಹಾಸವಿದೆ. ಮಾನವನ ದೈನಂದಿನ ಸಮಸ್ಯೆಗಳನ್ನು ಹಾಗೂ ಪ್ರಕೃತಿಯ ನಿಗೂಢ ರಹಸ್ಯಗಳನ್ನು ವಿಜ್ಞಾನದ ಬೆಳಕಿನಡಿಯಲ್ಲಿ ಅರಿಯಲೆತ್ನಿಸುವುದು. ಅಂದರೆ ವಾಸ್ತವ ಸತ್ಯವನ್ನು ಅರಿಯುವುದೇ ವೈಜ್ಞಾನಿಕತೆ ಅಥವ ವೈಜ್ಞಾನಿಕ ದೃಷ್ಟಿ. ಮನುಷ್ಯ ತನ್ನ ಸುತ್ತಲ ಪ್ರಪಂಚದ ಬೆರಗುಗಳ ಬಗ್ಗೆ ಏನು, ಏಕೆ, ಹೇಗೆ, ಇದು ಸರಿ-ತಪ್ಪು, ಹೌದು- ಅಲ್ಲ ಇಂತಹ ಪ್ರಾಶ್ನಿಕ ಮನೋಭಾವವೇ ವಿಕಾಸದ ಜೀವಾಳ. ಈ ವಿಶೇಷ ಪ್ರಾಶ್ನಿಕ ಸ್ವಭಾವದಿಂದಲೇ ಮಾನವ, ಸೃಷ್ಟಿಯ ಜೀವರಾಶಿಯಿಂದ ಹಾಗೂ ಸೃಷ್ಟಿಯ ಸರ್ವಶ್ರೇಷ್ಠ ಜೀವವಿಕಾಸವೆಂಬ ಹೆಗ್ಗಳಿಕೆ ಕೂಡ. ಇಂದು ನಾವು ಕಾಣುತ್ತಿರುವ ಎಲ್ಲಾ ಕ್ರಾಂತಿಕಾರಿ ಬೆಳವಣಿಗೆ, ವಿಜ್ಞಾನದ ಮುನ್ನಡೆ ಐತಿಹಾಸಿಕ ಮಹತ್ವದ ಬದಲಾವಣೆ, ಜೊತೆಗೆ ವಿಚಾರ ಶಕ್ತಿಯ ಪರಕಾಷ್ಠೆ ಈ ಎಲ್ಲವೂ ಪ್ರಶ್ನೆಯ ಫಲಿತಾಂಶಗಳೇ.

ಈ 'ವೈಜ್ಞಾನಿಕ ದೃಷ್ಟಿಕೋನ' ಅಂಧಶ್ರದ್ಧೆ ಮತ್ತು ಮೂಢನಂಬಿಕೆಯೊಂದಿಗೆ ಸರಿಸಮಾನವಾಗಿ ಸ್ಪರ್ಧಿಸ ಬೇಕಾಗಿರುವುದು ಒಂದು ವಿಪರ್ಯಾಸ. ಇದಕ್ಕೆಲ್ಲ ಕಾರಣ ವಿಜ್ಞಾನ ಬೆಳೆದಷ್ಟು ಎತ್ತರಕ್ಕೆ ನಮ್ಮ 'ವೈಜ್ಞಾನಿಕ ದೃಷ್ಟಿ' ಬೆಳೆಯದೆ ಇರುವುದು. ವಿಜ್ಞಾನದ ಕೊಡುಗೆಗಳಿಗೆ ಸಂದ ಮಾನ್ಯತೆ ಅದರ ಮನೋಧರ್ಮಕ್ಕೆ, ಮೂಲಗುಣಕ್ಕೆ ಸಂದದೆ ಇರುವುದು, ಮತ್ತು ಜನರಲ್ಲಿ ಮೂಢನಂಬಿಕೆಯನ್ನು ನಿವಾರಿಸಿ, 'ವೈಜ್ಞಾನಿಕ ದೃಷ್ಟಿ'ಯನ್ನು ಮೂಡಿಸಬೇಕಾದ ನಮ್ಮ ವಿಜ್ಞಾನಿಗಳೇ, ವೃತ್ತಿಯಲ್ಲಿ ಮಾತ್ರ ವಿಜ್ಞಾನಿಗಳಾಗಿದ್ದು, ಪ್ರವೃತ್ತಿಯಲ್ಲಿ ಕಂದಾಚಾರಿಗಳಾಗಿ ರುವುದು. ವಿಜ್ಞಾನಿಗಳಿಗೂ ವೈಜ್ಞಾನಿಕ ಸಂಸ್ಕಾರ ಅಗತ್ಯವಾಗಿದೆ.

ಗಣಪತಿ ವಿಗ್ರಹ ಹಾಲು ಕುಡಿಯುವ ಘಟನೆ, ಕುಂಭಮೇಳದ ಪವಿತ್ರ(!) ಸ್ನಾನಕ್ಕಾಗಿ ಪೈಪೋಟಿ, ವಾಸ್ತುವಿಗೆ ಅನುಕೂಲವಾಗಿ ನಿವಾಸಗಳ ಪುನರ್ರಚನೆ, ನಾಡಿಶಾಸ್ತ್ರ ಕೇಳಿ ಚುನಾವಣೆಗೆ ಸ್ಪರ್ಧಿಸುವುದು, ದೇವರನ್ನು ಕೇಳಿ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು, ಮಾನವನ ಕಲ್ಯಾಣವೆಂದು ಮಕ್ಕಳ ಬಲಿ ಕೊಡುವುದು, ಇಂತಹ ಅನೇಕ ಪ್ರಮಾದಗಳಿಗೆ ನಮ್ಮ ಅಂಧಶ್ರದ್ಧೆ ಪೋಷಕವಾಗಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಆಗುತ್ತಿರುವ ಹಿಂಸೆ, ಶೋಷಣೆ, ದಬ್ಬಾಳಿಕೆ ಹಾಗೂ ಇನ್ನೂ ಯಾವುದೇ ಕರಾಳ ಕೃತ್ಯಗಳಿಗೆ 'ವೈಜ್ಞಾನಿಕ ದೃಷ್ಟಿಕೋನದ' ಕೊರತೆಯೇ ಪೂರಕವಾಗಿದೆ. ಆಧುನಿಕ ವಿಜ್ಞಾನದ ಕೊಡುಗೆಗಳಾದ ರೇಡಿಯೋ, ದೂರದರ್ಶನ, ಇಂಟರ್‌ನೆಟ್ ಇನ್ನೂ ಅನೇಕ ಸುದ್ದಿಮಾಧ್ಯಮಗಳಿಂದಾಗಿ, ಪ್ರಪಂಚದ ಆಗುಹೋಗುಗಳ ಅರಿವು ನೇರವಾಗಿ ಜನಸಾಮಾನ್ಯರನ್ನು ತಲುಪುವಂತಾಗಿ, ಅವರ ಜ್ಞಾನದ ಪರಿಧಿಯನ್ನು ವಿಸ್ತರಿಸಿ. ಅಂದಮಾತ್ರಕ್ಕೆ 'ವೈಜ್ಞಾನಿಕ ದೃಷ್ಟಿಕೋನ' ಸಾರ್ವತ್ರಿಕವಾಗಿದೆ ಎಂದೇನಲ್ಲ.

ಮೊದಲು ತಿಳಿಯಬೇಕಾದ್ದು, ವಿಶ್ವದಲ್ಲಿ ಕಾರ್ಯ-ಕಾರಣ ಸಂಬಂಧ ಬಿಟ್ಟು ಎಲ್ಲೂ, ಏನೂ ಘಟಿಸುವುದಿಲ್ಲ. ಹಾಗೆ ಆದದ್ದು ಕಂಡುಬಂದಲ್ಲಿ ಅದು ನಮ್ಮ ಜ್ಞಾನದ ಅಭಾವದಿಂದಷ್ಟೇ. ಒಟ್ಟಿನಲ್ಲಿ 'ವೈಜ್ಞಾನಿಕ ದೃಷ್ಟಿಕೋನ' ಮಾನವನ ಸುಖ, ಶಾಂತಿಗೆ ಬೀಜಮಂತ್ರವಾಗಬೇಕಾಗಿದೆ. ಇದಕ್ಕಾಗಿ ನಾವು ಮಹಾ ಮೇಧಾವಿಗಳಾಗಬೇಕಿಲ್ಲ. ಸ್ವತಃ ವಿಜ್ಞಾನಿಗಳಾಗಬೇಕಿಲ್ಲ. ಯಾರಿಗೂ ಕಾಯಬೇಕಾಗಿಲ್ಲ. ಯಾವ ದೇವಮಾನವರ ಆಶೀರ್ವಾದ ಬೇಕಿಲ್ಲ. ಇದಕ್ಕಾಗಿ ನಾವು ಬೆಳೆಸಿಕೊಳ್ಳಬೇಕಾಗಿರುವುದು ಬುದ್ಧಿ ಸ್ವಾತಂತ್ರ್ಯ, ವಿವೇಕದ ಬಲವಿರುವ ವಿಚಾರ ಶಕ್ತಿ, ಆತ್ಮವಿಶ್ವಾಸ ಹಾಗೂ ಸ್ವಯಂಪ್ರಜ್ಞೆ.

ನಮಗೆ ಬೇಕಾಗಿರುವುದು, 'ವೈಜ್ಞಾನಿಕ ಸಂಸ್ಕಾರ'. ಇಂತಹ ಒಂದು ಸಂಸ್ಕಾರ ಸಮಾಜದ ಸಮಸ್ತರ ಸಂಸ್ಕೃತಿಯಾದಾಗ ಮಾತ್ರ ಅದು ಉಳಿದು ಬೆಳೆಯಲು ಸಾಧ್ಯ.

ಕವಿತಾ ವಿಶ್ವನಾಥ್

ಮೂಲತ: ದಾವಣಗೆರೆಯ ಕವಿತಾ ವಿಶ್ವನಾಥ್, ಖಚಿತ ನಿಲುವು-ಧೋರಣೆಗಳ, ಸಾಮಾಜಿಕ ಕಳಕಳಿಯ ಕ್ರಿಯಾಶೀಲ ಗೃಹಿಣಿ. ಬೆಂಗಳೂರಿನಲ್ಲಿದ್ದಾರೆ.




ಕೊಳ್ಳೇಗಾಲ ಶರ್ಮ

ವೈಯಕ್ತಿಕ ನೆಲೆಯನ್ನು ಮೀರಿ

'ವೈಜ್ಞಾನಿಕ ದೃಷ್ಟಿಕೋನ' ವೆಂಬುದು ಮಾನವನ ವಿಕಾಸ ಮಾರ್ಗದ ಸಹಜ ಸ್ಥಿತಿ ಎಂಬುದರಲ್ಲಿ ಸಂಶಯವಿಲ್ಲ. ನನ್ನ ದೃಷ್ಟಿಯಲ್ಲಿ ವೈಜ್ಞಾನಿಕ ದೃಷ್ಟಿಕೋನ ಎಂಬುದು ಕಲೆ, ತತ್ವಜ್ಞಾನ, ಸಾಹಿತ್ಯದಂತೆಯೇ ಮಾನವನ ಸೃಜನಶೀಲ ಪ್ರವೃತ್ತಿಯ ಒಂದು ರೂಪ. ಅಷ್ಟೇ. ಬಾನಂಚಿನಲ್ಲಿ ಮುಳುಗುವಾಗ ಸೂರ್ಯ ರಂಗೇರುವುದೇಕೆ? ಕಮಲ ಅರಳುವುದಕ್ಕೂ ರವಿಯ ಉದಯಕ್ಕೂ ಏನದು ನಂಟು? ಅಪ್ಪನಂತೆ ಮಗ, ಅಮ್ಮನಂತೆ ಮಗಳು! ಎಲ್ಲ ನದಿಗಳ ಕೊನೆಯೂ ಸಾಗರವೇ ಏಕೆ? ಹೂವಿಗೂ, ದುಂಬಿಗೂ ಏತರ ಸಂಬಂಧ? ಇಂತಹ ನೂರೆಂಟು ಪ್ರಶ್ನೆಗಳು ಇಂದಿನ ವಿಜ್ಞಾನದ ಬೆಳವಣಿಗೆಗೆ ಕಾರಣವಾಗಿವೆ. ಇವು ಪರಿಸರದಲ್ಲಿನ ವಿದ್ಯಮಾನಗಳನ್ನು ಕಂಡು ಜನಿಸಿದ ಸಂದೇಹಗಳು. ವಿಜ್ಞಾನಿಯ ಮನಸ್ಸು ಈ ಪ್ರಶ್ನೆಗಳಿಗೆ ಉತ್ತರಿಸಲು ತವಕಿಸಿದಂತೆಯೇ, ಕವಿಯ ಮನಸ್ಸೂ ಹಾತೊರೆಯುತ್ತದೆ. ತತ್ವಜ್ಞಾನಿಗಳ ಚಿಂತನೆಯ ಗುರಿಯೂ ಅಂತಿಮವಾಗಿ ಇದುವೇ! ಇವೆಲ್ಲ ಪ್ರಶ್ನೆಗಳಿಗೂ ಮೂಲ ಮಾನವ ಸಹಜವಾದ, ಶಿಶು ಸಹಜವಾದ ಕುತೂಹಲ.


ವೈಜ್ಞಾನಿಕ ಮನೋಭಾವವನ್ನು ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಳ್ಳಬೇಕೆ ಎಂಬ ಪ್ರಶ್ನೆ ಎತ್ತಿದ್ದೀರಿ. ಸಾಹಿತ್ಯ ಹೇಗೆ ಮಾನವಿಕ ವಿದ್ಯಾರ್ಥಿಗಳ ಗುತ್ತಿಗೆಯಲ್ಲವೋ ಹಾಗೆಯೇ, ವೈಜ್ಞಾನಿಕ ಮನೋಭಾವವೂ ವಿಜ್ಞಾನದ ವಿದ್ಯಾರ್ಥಿಗಳ ಗುತ್ತಿಗೆ

ಸರಳ, ಸಂವಹನಶೀಲ ಕನ್ನಡ ವೈಜ್ಞಾನಿಕ ಬರಹಗಳಿಂದ ಜನಪ್ರಿಯರಾಗಿರುವ ಕೊಳ್ಳೇಗಾಲ ಶರ್ಮ ದೆಹಲಿಯಲ್ಲಿದ್ದವರು. ಈಗ ಮೈಸೂರಿನ ಸಿ.ಎಫ್.ಟಿ.ಆರ್.ಐ.ದಲ್ಲಿ ಕೆಲಸ ಮಾಡುತ್ತಾರೆ.



ಅಲ್ಲ. ಆದರೆ ಕಲೆ ಮತ್ತು ತತ್ವಜ್ಞಾನದ ಉಪಾಸನೆ ಹಾಗೂ ವಿಜ್ಞಾನದ ಉಪಾಸನೆಯಲ್ಲಿ ಕೆಲವು ವ್ಯತ್ಯಾಸಗಳಿವೆ. ಕಲೆ ವೈಯಕ್ತಿಕ ಅನುಭವಗಳ ಅಭಿವ್ಯಕ್ತಿ. ಕಲೆಗಾರನ ವೈಯಕ್ತಿಕ ಅನುಭವಗಳ ವಿಶ್ಲೇಷಣೆ. ಪಿಕಾಸೋನ ಅಥವಾ ಸಾಲ್ವಡಾರ್ ಡಾಲಿಯ ಕಲೆ ಮಹಾನ್ ಎನ್ನಿಸುವುದು ಅವು ಆ ಕಲೆಗಾರರ ಅನುಭವಗಳ ಅಭಿವ್ಯಕ್ತಿಯಾದ್ದರಿಂದ. ಆದರೆ ವಿಜ್ಞಾನದ ಪರಿ ಹೀಗಲ್ಲ. ಇಲ್ಲಿನ ಅನುಭವಗಳು ಸಾಕಾರಗೊಳ್ಳುವುದು ಸಾಂಘಿಕ ನೆಲೆಯಲ್ಲಿ. ಇಲ್ಲಿ ವಿಜ್ಞಾನಿಯ ಅನುಭವಗಳು ವೈಯಕ್ತಿಕ ನೆಲೆಯನ್ನು ಮೀರಿದಂತಹವು. ಉಪಕರಣಗಳು ಹಾಗೂ ಯಂತ್ರಗಳು ಗ್ರಹಿಸಿದ ಸಂಗತಿಗಳೂ ಈ ಸಾಂಘಿಕ ಸಂವೇದನೆಯ ಅಂಗವಾಗುತ್ತವೆ. ಸಂಶೋಧನೆಯ ಪಾಲಾಗುತ್ತವೆ. ಬಹುಶಃ ಇದರಿಂದಲೇ ವಿಜ್ಞಾನಿ ಉಪಕರಣಗಳ ದಾಸನೆಂಬ ಭಾವನೆ ನೆಲೆಯಾಗಿರಲಿಕ್ಕೂ ಸಾಕು. ಇದು ನನ್ನ ಅಭಿಪ್ರಾಯ.

ಒಂದು ಮಾತು. ನಾಲ್ಕು ಸಾಲು ಗೀಚಿದವರೆಲ್ಲ ಹೇಗೆ ಕವಿಗಳಾಗುವುದಿಲ್ಲವೋ, ಹಾಗೆಯೇ ವಿಜ್ಞಾನದ ವಿದ್ಯಾರ್ಥಿಯಾದ ಮಾತ್ರಕ್ಕೆ ಆತ ವಿಜ್ಞಾನಿ ಆಗಲಾರ. ಕಾಲ, ಧರ್ಮಗಳನ್ನೂ ಮೀರಿ ಕಲೆ ಹೇಗೆ ಅರಳಬಲ್ಲುದೋ ಹಾಗೆಯೇ ವಿಜ್ಞಾನವೂ ಆಯಾಯಾ ಪರಿಸರಕ್ಕೆ ತಕ್ಕಂತೆ ವಿಕಾಸಗೊಳ್ಳುತ್ತದೆ.





ರಾಮಶೇಷ ಮೂಡಿಗೆರೆ

‘ಟೆಕ್ನಾಲಜಿ’ಯೇ ‘ವಿಜ್ಞಾನ’ ಎಂಬ ಹೊಸ ಮೂಢನಂಬಿಕೆ

ಇಂದಿನ ದಿನಗಳಲ್ಲಿ ‘ವಿಜ್ಞಾನ’ ದಂತೆ ತೋರುವ ಹಲವು ‘ಮುಖ’ಗಳತ್ತ ತಮ್ಮ ಸೃಜನಾತ್ಮಕ ರೂಪಕಗಳೊಂದಿಗೇ ಗಮನ ಸೆಳೆದು, ‘ವೈಜ್ಞಾನಿಕ ದೃಷ್ಟಿಕೋನ’ದ ಬಗ್ಗೆ ಹಲವು ಪ್ರಶ್ನೆಗಳೆತ್ತಿದ್ದೀರಿ.

ಮೊದಲು ‘ವಿಜ್ಞಾನ’ ಶಬ್ದವನ್ನು define ಮಾಡಿ ನಂತರ ಮುಂದುವರೆಯುವುದು ವಿಜ್ಞಾನದ ವಿದ್ಯಾರ್ಥಿಯಾದ ನನ್ನ ಕ್ರಮ.

1) ಈ ಪ್ರಪಂಚದಲ್ಲಿರುವ ಎಲ್ಲ ವಸ್ತುಗಳು ಮೂಲತಃ ‘ಪರಬ್ರಹ್ಮ’ ಎಂಬ ಅರಿವಿನೊಂದಿಗೆ, ಅವುಗಳ ಬಾಹ್ಯ ರೂಪ-ಕ್ರಿಯೆ ಗುಣಗಳ ಅಭ್ಯಾಸವನ್ನು ವಿಜ್ಞಾನವೆಂದರು ನಮ್ಮ ಸನಾತನ ಋಷಿ ಮುನಿಗಳು.

2) ಪ್ರಕೃತಿಯನ್ನು ವಸ್ತುನಿಷ್ಠವಾಗಿ ಅಭ್ಯಸಿಸಿ ಅಲ್ಲಿ ಕಂಡು ಬರುವ ನಿಗೂಢಗಳಿಗೆ ರೂಪಕ ಸೃಜಿಸುವ ಹಾಗೂ ಅದರಲ್ಲಿ ಬೆರಗು ಮತ್ತು Harmony ಯನ್ನು ಕಾಣುವ ಪ್ರಕ್ರಿಯೆಗೆ Science ಎಂದವರು ಪಾಶ್ಚಾತ್ಯರು.

3) ಪ್ರಕೃತಿಯನ್ನು ನಿರ್ಲಿಪ್ತತೆಯಿಂದ ‘Third degree treatment’ಗೆ ಗುರಿ ಮಾಡಿ ಹೊರಡಿಸಿದ ಸತ್ಯಗಳಿಂದ ‘ನಿಯಂತ್ರಣ’ ಸಾಧಿಸುವ, ಮನುಷ್ಯನ ‘ಸುಖ ಸಮೃದ್ಧಿ’ಯನ್ನು ಹೆಚ್ಚಿಸುವ ತಂತ್ರಜ್ಞಾನ ಭಂಡಾರವೇ Science ಎಂಬ ನಂಬಿಕೆ Francis Bacon ನಿಂದೀಚೆಗೆ ಬಲವಾಯಿತು.


‘ವೈಜ್ಞಾನಿಕ ದೃಷ್ಟಿಕೋನ’ವನ್ನು ನಾವು ಮೇಲೆ ತಿಳಿಸಿದ ವೈಜ್ಞಾನಿಕ, Scientific ಹಾಗೂ Technological ಎಂಬ ಮೂರು ಪ್ರಭೇದಗಳಲ್ಲಿ ತಿಳಿಯಬೇಕಿದೆ. ಈ ಹಿನ್ನೆಲೆಯಲ್ಲಿ ನಿಮ್ಮ ಪ್ರಶ್ನೆಗಳಿಗೆ ನನ್ನ ಉತ್ತರ ಹೀಗಿದೆ.

ಅ) ‘ವೈಜ್ಞಾನಿಕ’ ದೃಷ್ಟಿಕೋನ ಮನುಷ್ಯನ ವಿಕಾಸ ಮಾರ್ಗದ ಸಹಜ ಸ್ಥಿತಿಯಷ್ಟೇ ಅಲ್ಲ; ಮನುಷ್ಯನನ್ನ ಇತರ ಪ್ರಾಣಿ ವರ್ಗದಿಂದ ಬೇರ್ಪಡಿಸಿದ ಏಕೈಕ ಗುಣ. ಪ್ರತಿಯೊಬ್ಬ ಮಾನವನಲ್ಲಿ ಪ್ರಚ್ಛನ್ನವಾಗಿ ಇರುವ ಈ ಧೀಶಕ್ತಿಯನ್ನು ಶ್ರಮದಿಂದ ಬೆಳಗಿಸುವುದೇ ಈ ಜೀವನದ ಗುರಿ ಎಂಬುದು ಸನಾತನ ಧರ್ಮದ ದೃಷ್ಟಿಕೋನ.

ಆ) ಇಂಗ್ಲಿಷಿನ ‘Science’ ಕನ್ನಡದ ‘ವಿಜ್ಞಾನ’ವಾದಂತೆ, ಮೇಲೆ ಹೇಳಿದ ತಿಳುವಳಿಕೆ ಮುಕ್ಕಾಗಿ ‘ವಿಜ್ಞಾನ’ದ ವ್ಯಾಪ್ತಿ ಕಿರಿದಾಯಿತು. Can men be rational? ಎಂಬ ಪ್ರಶ್ನೆ ಕೇಳಿಕೊಂಡು, Man is not rational but rationalizing animal ಎಂಬ ಉತ್ತರ ಮೂಡುವವರೆಗಿನ ಬೆಳವಣಿಗೆ Scientfic ದೃಷ್ಟಿ ಕೋನದ್ದು.

ಇ) ಮುಂದುವರೆದು, ‘ವಿಜ್ಞಾನ’ವೆಂಬುದು ಜನ-ಜೀವನದ ಐಷಾರಾಮದ ತಾಯಾಗಿ, ಪ್ರಗತಿಯ ಹಾಗೂ ಸಂಪತ್ತಿನ ದ್ಯೋತಕವಾಗಿ, ಅಧಿಕಾರ ನಿಯಂತ್ರಣದ ಮೂಲೋಪಕರಣವಾಗಿ ಪರಿವರ್ತಿತವಾದಂತೆ, ಇದೆಲ್ಲ ಸೃಜನಶೀಲತೆಯೂ ಬತ್ತಿ, ಮೊದಲೇ ಕಿರಿದಾಗಿದ್ದ Science ನ ವ್ಯಾಪ್ತಿಗೆ ‘ಉಪಯುಕ್ತತೆ’ಯ ಬಲವಾದ ಚೌಕಟ್ಟು ಬಿತ್ತು. ತನ್ನ ಮೂಲಸೆಲೆಯನ್ನೇ ‘ಉಪಯುಕ್ತ’ ಮತ್ತು ‘Wasteful’ ಎಂದು ವಿಂಗಡಿಸುವ ವಿರೋಧಾಭಾಸವನ್ನು ಚಾಲ್ತಿಗೆ ತಂದಿರುವ Technological ದೃಷ್ಟಿಕೋನ ಇಂದಿನ ದಿನಗಳಲ್ಲಿ ವೈಜ್ಞಾನಿಕ ದೃಷ್ಟಿಕೋನವೆಂದು ಪರಿಗಣಿತವಾಗಿದೆ. ಇಂತಹ ವಿಷಮ ಸನ್ನಿವೇಶದಲ್ಲಿ, ಈ Technological ವೈಜ್ಞಾನಿಕ ದೃಷ್ಟಿಕೋನವನ್ನ ಅಸಹಜವಾದರೂ (ಕನಿಷ್ಟ-ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ) ವಿಧಿಯಿಲ್ಲದೆ ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆ-ನಿಷ್ಟವಾಗಿದೆ.

ಒಂದು ಕಾಲದಲ್ಲಿ ವಿದ್ಯಾವಂತರೆಂದರೆ ಕಲೆ-ಸಾಹಿತ್ಯಗಳ ಅರಿವೂ ಇದ್ದೇ ತೀರಬೇಕೆಂಬ ತಿಳುವಳಿಕೆ ಇತ್ತು (ಅಂದು ವಿಜ್ಞಾನದ Degree ಗಳೂ B.A. ಎಂದೇ ಕರೆಯಲ್ಪಡುತ್ತಿತ್ತು.) ನಂತರ B.Sc ಯ ಪ್ರಾಮುಖ್ಯ ಹೆಚ್ಚಿ, B.A. ಎಂದರೆ Below Average ಎಂಬ ಪರಿಹಾಸ್ಯ ಹೆಚ್ಚಿತು. ಇತ್ತೀಚಿನ ದಿನಗಳಲ್ಲಿ B.Sc ಓದುವವರೇ ಇಲ್ಲವಾಗಿ, ಎಲ್ಲರೂ B.E. ಓದಲು ಮುಗಿ ಬೀಳುತ್ತಿರುವ ‘ವಿಶೇಷ’ ಗಮನಿಸಿದಾಗ ನಾನು ಮೇಲೆ ತಿಳಿಸಿದ ಸಂಗತಿ ಹೆಚ್ಚು ಸ್ಪಷ್ಟವಾದೀತು.





ದಶಕಗಳ ಕಾಲ ಅಮೆರಿಕದಲ್ಲಿ ಗಣಕ ತಜ್ಞರಾಗಿದ್ದ ರಾಮಶೇಷ ಮೂಡಿಗೆರ ಈಗ ಮೈಸೂರಿನಲ್ಲಿ ನೆಲೆಸಿದ್ದಾರೆ. ಕೆಲ ಸಂಸ್ಥೆಗಳಿಗೆ ಸಂದರ್ಶಕ ಅಧ್ಯಾಪಕರಾಗಿರುವ ಇವರ ಆಸಕ್ತಿಯ ಕ್ಷೇತ್ರ, ಸಾಹಿತ್ಯ, ಸಂಗೀತ, ವಿಜ್ಞಾನ.

ಜಶವಂತ ಜಾಧವ

ಪ್ರಕೃತಿಯೇ ದೊಡ್ಡ ವಿಜ್ಞಾನ

ಹೊರಗೆ ಧರೆ ಹತ್ತಿ ಉರಿವಲ್ಲಿ, ಒಳಗೆ ನಿತ್ಯನಿಯತವಾಗಿ ತಂಗಾಳಿ ತಂಪು ತಂಗಿರುವಂತೆ ಗೂಡು ಕಟ್ಟುವ ಕೀಟಗಳು; ಗಣಿತ ಶಾಸ್ತ್ರದ ಸಾವಿರ ಸೂತ್ರಗಳಿಗೆ ಸ್ಫೂರ್ತಿ ನೀಡುವ ಹಾಗೆ ಮೈದಾಳುವ ಸಾಗರದಾಳದ ಜೀವಿಗಳು; ವರುಷಕ್ಕೊಮ್ಮೆಯಷ್ಟೆ ಬೀಳುವ ಹತ್ತು ಹನಿ ಮಳೆಯನ್ನೆ ಬಳಸಿಕೊಂಡು ಬಾಳುವ ಮರಳುಗಾಡಿನ ಮುಳ್ಳುಗಿಡಗಂಟಿಗಳು; ಸಾವಿರಾರು ಮೈಲು ವಲಸೆ ಬಂದು ಋತುಚಕ್ರ ತಿರುಗುತ್ತಿದ್ದ ಹಾಗೆ, ಲವಲೇಶವೂ ಲೆಕ್ಕ ತಪ್ಪದಂತೆ ಮೂಲ ನಿವಾಸಕ್ಕೆ ವಾಪಸಾಗುವ ಹಕ್ಕಿಗಳು; ಇಂಥದೆ ಇನ್ನೊಂದು ಯಾತ್ರೆಯಲ್ಲಿ ಐದು ತಲೆಮಾರುಗಳು ಗತಿಸಿಹೋಗಿ, ತಾವು ಮೊದಲೆಂದೂ ಕಾಣದಿದ್ದ ತಾತ ಮುತ್ತಾತಂದಿರ ತಾಣಗಳಿಗೆಯೆ ಮರಳುವ ಪಾತರಗಿತ್ತಿಗಳು...

ಎಷ್ಟೆಲ್ಲ ಪರಿಯ ತಜ್ಞತೆಗಳು! ಎಷ್ಟೆಲ್ಲ ಬಗೆಯ ವಿಜ್ಞಾನಗಳು! ಒಂದನ್ನೊಂದು ಆಧರಿಸಿಯೂ, ಒಂದಕ್ಕೊಂದು ಭಾರವಾಗದ ಅಸಂಖ್ಯ ಜೀವ ರೂಪಗಳು, ಜೀವನ ಕಲೆಗಳು!

-ಅಥವಾ, ಇವನ್ನೆಲ್ಲ ಸೃಷ್ಟಿಸಿ, ಪಾಲಿಸಿ, ಲಯಗೊಳಿಸಿ ಸಮತೋಲದ ಲೀಲೆಯನ್ನಾಡುವ ಪ್ರಕೃತಿಯೇ ಅತಿದೊಡ್ಡ ವೈಜ್ಞಾನಿಕ ಪ್ರಜ್ಞೆಯಾಗಿರಬಹುದೆ?

'ವೈಜ್ಞಾನಿಕ ದೃಷ್ಟಿಕೋನ'ವನ್ನು ನಿಖರವಾಗಿ ವ್ಯಾಖ್ಯಾನಿಸುವುದು ಕಡುಕಷ್ಟದ ಮಾತು. ಆ ಪ್ರಯತ್ನ, ತಕ್ಷಣ, 'ಅದು ಆಧುನಿಕ ಪೂರ್ವ ವಿಜ್ಞಾನವೋ? ಆಧುನಿಕ (ಪಾಶ್ಚಿಮಾತ್ಯ) ವಿಜ್ಞಾನವೋ? ಇಲ್ಲ, ಆಧುನಿಕೋತ್ತರ ವಿಜ್ಞಾನವೋ?' ಎಂಬ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಅದು ಈಗ ಗೃಹೀತವಾಗಿರುವಂತೆ 'ಆಧುನಿಕ ಪಾಶ್ಚಿಮಾತ್ಯ ವಿಜ್ಞಾನ'ವೆಂದಾದಲ್ಲಿ ಇನ್ನಷ್ಟು ಪ್ರಶ್ನೆಗಳು ಏಳುತ್ತವೆ. ಉದಾಹರಣೆಗೆ- 'ವೈಜ್ಞಾನಿಕತೆ ಆಧುನಿಕ ಮಾನವನ ಸೊತ್ತು' ಎನ್ನುವಲ್ಲಿ 'ಪ್ರಕೃತಿ ಮಾನವನ ತೊತ್ತು' ಎನ್ನುವ ಸೂಕ್ಷ್ಮವೂ ಅಡಗಿಲ್ಲವೆ? ಅದು ಆತನ ವಿಕಾಸದ ಸಹಜ ಸ್ಥಿತಿಯೆ ಎಂಬುದಾದಲ್ಲಿ ಅದು ಉಳಿದ ಜೀವಿಗಳ ಅಸಹಜ ವಿನಾಶಕ್ಕೆ ಕಾರಣವಾಗುತ್ತಿರುವುದೇಕೆ?...

ಆಧುನಿಕ ಪಾಶ್ಚಿಮಾತ್ಯ ವಿಜ್ಞಾನದ ಅವೈಜ್ಞಾನಿಕತೆಯನ್ನು ಹಲವಾರು ಧೀಮಂತರು ಈಗಾಗಲೆ ಗುರುತಿಸಿದ್ದಾರೆ; ಅದು ತನ್ನ ಪೂರ್ವ ಕಾಲದ ಬಹುರೂಪಿ ವಿಜ್ಞಾನಗಳನ್ನು ನಿರ್ನಾಮಗೊಳಿಸಿ, ತನ್ನನ್ನು ಪರಮಜ್ಞಾನದ ಏಕೈಕರೂಪವೆಂದು ಪ್ರತಿಷ್ಠಿಸಿಕೊಂಡ ಕ್ರಮದ ಹಿಂದಿನ ವಸಾಹತುಶಾಹಿ ಕ್ರೌರ್ಯವನ್ನು ಬಯಲು ಮಾಡಿದ್ದಾರೆ. ಡಾರ್ವಿನ್ ವಿಕಾಸವಾದದ ಮೂಲಭೂತ ಸಂಕುಚಿತತೆಯನ್ನೂ, ಆಧುನಿಕ ತಂತ್ರಜ್ಞಾನದ ಸಮಸ್ಯಾತ್ಮಕತೆಯನ್ನೂ ಅನೇಕರು ಈ ಮೊದಲೆ ಅನಾವರಣಗೊಳಿಸಿಯಾಗಿದೆ. ತಮ್ಮಲ್ಲಿ ಹೆಚ್ಚುತ್ತಿರುವ ಅನಿಷ್ಟಗಳಿಗೆಲ್ಲ, ಇಂಥ ಅದೈವಿಕ ವೈಜ್ಞಾನಿಕತೆಯ ಅಹಂಕಾರ ಜನಕ ಗುಣವೆ ಕಾರಣವೆಂದೂ, ಅದನ್ನು ತೊಡೆದು ವಿನಯವನ್ನು ಬೆಳೆಸಲು ಮತ್ತೆ ಆಧ್ಯಾತ್ಮಿಕತೆಯನ್ನು ಅವಲಂಬಿಸಬೇಕೆಂದೂ ಪಶ್ಚಿಮದಲ್ಲಿಯೆ ಇಂದು ಕೆಲವರು ಒತ್ತಾಯಿಸುತ್ತಿರುವುದುಂಟು.

ಜರ್ಮನಿಯ ಮಹಾಮೇಧಾವಿ ಗಯಟೆ, ಆಧುನಿಕ ಪಾಶ್ಚಿಮಾತ್ಯ ವಿಜ್ಞಾನಕ್ಕಿಂತ ಸಂಪೂರ್ಣ ಭಿನ್ನವಾದೊಂದು ವಿಜ್ಞಾನ ರೂಪವನ್ನು ಪರಿಕಲ್ಪಿಸಿಕೊಂಡಿದ್ದನಂತೆ (ದುರ್ದೈವದಿಂದ ಅದು ಪ್ರಚುರವಾಗದೆ ಉಳಿಯಿತಂತೆ) ನಮ್ಮ ಕಾಲದಲ್ಲಿಯೆ ಕೃಷಿಋಷಿ ಫುಕುವೊಕಾ, ಭೌತಜ್ಞಾನಿ ಅಮೂಲ್ಯ ರೆಡ್ಡಿಯಂತಹ ಅನೇಕರು ಆ ಬಗೆಯ ಪರಿಸರ ಸಂವೇದಿ ಪರ್ಯಾಯ ವಿಜ್ಞಾನ ರೂಪಗಳನ್ನು ಪ್ರತ್ಯಕ್ಷಗೊಳಿಸಿಟ್ಟಿರುವುದುಂಟು. ಅದೇ ಸಾಲಿಗೆ ಸೇರುವ ಜೀವಪ್ರಾಜ್ಞ ಹಾಲ್ಡೇನ್ (ಈತ ಗಾಂಧಿ ಸ್ಫೂರ್ತಿಯಿಂದ ಭಾರತದಲ್ಲಿ ನೆಲೆಸಿ, ಇಲ್ಲಿ ಮಣ್ಣಾದವನು) ಹೇಳುತ್ತಾನೆ: 'ಸಸ್ಯಗಳು ಪ್ರಕೃತಿಯಿಂದ ಮಣ್ಣು, ನೀರು, ಗಾಳಿ, ಬೆಳಕುಗಳ ಕಚ್ಚಾವಸ್ತುಗಳನ್ನು ಪಡೆದು, ಸಂಸ್ಕರಿಸಿ, ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತವೆ, ಇನ್ನೊಬ್ಬರ ಅಗತ್ಯಗಳನ್ನು ಪೂರೈಸುತ್ತವೆ; ಅರ್ಥಾತ್ , ನಮ್ಮ ಕೈಗಾರಿಕೆಗಳಂತೆಯೆ ಕೆಲಸ ಮಾಡುತ್ತವೆ. ಆದರೆ ಅವು ನಮ್ಮಂತೆ ವಿಷರಾಶಿಯನ್ನು ಕಾರುವುದಿಲ್ಲ, ಪರಿಸರವನ್ನು ಹಾಳುಗೆಡುವುದಿಲ್ಲ. ಬದಲಿಗೆ ಅವು ನಿಸರ್ಗವನ್ನು ನಿರ್ಮಲಗೊಳಿಸಿ, ಅದರ ಸಮತೋಲನವನ್ನು ಸಂರಕ್ಷಿಸುತ್ತವೆ. ನಮ್ಮ ಕಾರ್ಖಾನೆಗಳೂ ಇದೇ ರೀತಿಯಿದ್ದರೆ ಎಷ್ಟು ಚೆನ್ನ!'

ಜಶವಂತ ಜಾಧವ





ಸಾಗರದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿರುವ ಜಶವಂತ ಜಾಧವ, ರಂಗಭೂಮಿ, ಸಿನಿಮಾ, ವಿಮರ್ಶೆ, ಕಲೆಗೆ ಸಂಬಂಧಿಸಿದ ಸೂಕ್ತ ಕಥನೇತರ ಬರವಣಿಗೆ, ಅನುವಾದಗಳಲ್ಲಿ ಆಸಕ್ತರು.

ಡಿ.ಎಸ್. ನಾಗಭೂಷಣ


ಮನುಷ್ಯತ್ವದ ಸ್ಪರ್ಶವಿಲ್ಲದೆ ವಿಜ್ಞಾನ ಅಪೂರ್ಣ

ಒಂದು ನಿರ್ದಿಷ್ಟ ಚಹರೆ ಪಡೆದುಕೊಂಡುಬಿಟ್ಟ ಎಲ್ಲ ತತ್ವ ಸಿದ್ಧಾಂತಗಳೂ ಒಂದಲ್ಲ ಒಂದು ಕಾಲಕ್ಕೆ ಸ್ಥಾವರಗೊಳ್ಳುವುದು ಸಹಜ. ವೈಜ್ಞಾನಿಕ ಮನೋಭಾವ ಎಂಬ ತತ್ವದ ಸ್ಥಿತಿಯೂ ಇಂದು ಅದೇ ಆಗಿದೆ. ತನ್ನ ಗ್ರಹಿಕೆಯ ತೆಕ್ಕೆಗೆ ಸಿಗದ ಎಲ್ಲ ಹಳೆಯ ನಂಬಿಕೆಗಳನ್ನೂ ಪಾರಂಪರಿಕ ಮೌಢ್ಯಗಳು ಎಂದು ಕರೆದು, ಅವನ್ನು ತಮ್ಮ ಹೊಸ ವಿಜ್ಞಾನ ವಿದ್ಯೆಯ ಬಲದಿಂದ ನಿವಾರಿಸುತ್ತಾ, ಲೋಕ ಕಲ್ಯಾಣ ಮಾಡುತ್ತಾ ಹೋಗುತ್ತಿದ್ದೇವೆಂಬುದು ಈ ವೈಜ್ಞಾನಿಕ ಧರ್ಮ ಪ್ರಚಾರಕರ ನಂಬಿಕೆಯಾಗಿದೆ. ಆದರೆ ತಮಾಷೆ ಎಂದರೆ, ಇವರ ಮೌಢ್ಯ ನಿವಾರಣಾ ಕಾರ್ಯಕ್ರಮದ ಪರೋಕ್ಷ ಪರಿಣಾಮವೋ ಎಂಬಂತೆ ದಿನೇ ದಿನೇ ಜಗತ್ತಿನಾದ್ಯಂತ ಈ 'ಪಾರಂಪರಿಕ ಮೌಢ್ಯ'ಗಳ ಸಂಖ್ಯೆ ಹಾಗೂ ವೈವಿಧ್ಯ ಹೆಚ್ಚುತ್ತ ಹೋಗುತ್ತಿರುವುದನ್ನು ನಾವು ಗಮನಿಸಬಹುದಾಗಿದೆ! ಹೀಗಾಗಿ ಇವರ ಈ ನಂಬಿಕೆಯೇ, ಬಹುಜನರು ಕ್ಯಾರೇ ಎನ್ನದ ಒಂದು ಓಬೀರಾಯನ ಕಾಲದ ನಂಬಿಕೆಯ ಚಹರೆ ಪಡೆದು, ಕ್ರಮೇಣ ತಾನೇ ಒಂದು 'ಪಾರಂಪರಿಕ ಮೌಢ್ಯ'ವಾಗಿ ಪರಿವರ್ತಿತವಾಗುತ್ತಿರುವ ದುರಂತವನ್ನು ನಾವಿಂದು ನೋಡುತ್ತಿದ್ದೇವೆ.



ಚಿತ್ರದುರ್ಗ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿರುವ ಡಿ.ಎಸ್. ನಾಗಭೂಷಣ, ಮೂಲತಃ ಗಣಿತಶಾಸ್ತ್ರದ ವಿದ್ಯಾರ್ಥಿ. ಹಲವು ಆಸ್ಥೆಯ ಕ್ಷೇತ್ರಗಳನ್ನು ನೆಚ್ಚಿಕೊಂಡಿರುವ ವಿಮರ್ಶಕ.

ವೈಚಾರಿಕತೆ ಎಂದಿನಿಂದಲೂ ಇದೆ; ಅದು ವಿಕಾಸವಾಗುತ್ತಲೂ ಇದೆ. ಆದರೆ ವಿಜ್ಞಾನವಾದಿಗಳು ಇಂದ್ರಿಯ ಸಾಕ್ಷ್ಯದ ನಿಕಷಕ್ಕೊಡ್ಡಲ್ಪಟ್ಟ ವೈಚಾರಿಕತೆಯೇ ಆತ್ಯಂತಿಕವೆಂಬ ಮೂಢನಂಬಿಕೆಗೆ ಸಿಕ್ಕಿ (ಕೊನೆಯ ಪ್ರವಾದಿ) ಈ ವಿಕಾಸಕ್ಕೆ ಕಣ್ಣು ಮುಚ್ಚಿದ್ದಾರೆ. ವಿಜ್ಞಾನ ಒಂದು ಸ್ವಯಂ ಚಾಲಿತ ಧಾರೆಯಾಗಿರುವುದರಿಂದ ಅದು ಇಂತಹ ಎಲ್ಲ ಮೌಢ್ಯವನ್ನೂ ನಿರಾಕರಿಸುತ್ತಾ ಬೆಳೆದು, ಇಂದು 'ಅನಿಶ್ಚಿತತಾ ತತ್ವ' (Principle of uncertainty) ದ ಹೊಸ್ತಲಲ್ಲಿ ನಿಂತಿದೆ. ಈ ಹೊಸ್ತಿಲು ದಾಟಿದರೆ, ಎಲ್ಲ ವಿಜ್ಞಾನಗಳ ಮೂಲಧಾರೆ ಎನಿಸಿದ ಇಡೀ ಭೌತಶಾಸ್ತ್ರವೇ ಪ್ರಜ್ಞಾಶಾಸ್ತ್ರವಾಗಿ ಪರಿವರ್ತಿತವಾಗಿ, ವಿಜ್ಞಾನ ತನ್ನೆಲ್ಲ ಚಾಲು- ಚಹರೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಅದನ್ನೇ ನಮ್ಮ ಕಾಲದ ಶ್ರೇಷ್ಠ ಭೌತವಿಜ್ಞಾನಿ ಎನಿಸಿದ Stephen Hawking, ಮೊನ್ನೆ ಭಾರತಕ್ಕೆ ಭೇಟಿ ನೀಡಿದ್ದಾಗ, 'ಭೌತಶಾಸ್ತ್ರದ ಅಂತ್ಯ ಸನ್ನಿಹಿತವಾಗುತ್ತಿದೆ' ಎಂದು ಪುನರುಚ್ಚರಿಸಿ ಸೂಚಿಸಿದ್ದು. ಇದನ್ನರಿಯದ ಸಂಪ್ರದಾಯಸ್ಥ ವಿಜ್ಞಾನವಾದಿಗಳು ಹಳೆಯ ಪುಸ್ತಕದ ಬದನೇಕಾಯಿಯನ್ನೇ ಒಪ್ಪಿಸುತ್ತಿದ್ದಾರೆ. ಎಲ್ಲ ಮನುಷ್ಯರ ಮೂಲಕಾಳಜಿ ನೆಮ್ಮದಿ. ಅದನ್ನು ಒದಗಿಸದ ಯಾವ ತತ್ವವೂ ಪರಿಪೂರ್ಣವಲ್ಲ. ಇದು ವಿಜ್ಞಾನಕ್ಕೂ ಅನ್ವಯಿಸುವ ಸತ್ಯ.



ನಮ್ಮ ಕಾಲದ ವೈಜ್ಞಾನಿಕತೆ ಹಾಗೂ ವೈಚಾರಿಕತೆಗಳ ಆತ್ಮಸಾಕ್ಷಿಯಂತಿದ್ದ ಶಿವರಾಮ ಕಾರಂತರನ್ನು ನಾನೊಮ್ಮೆ- ಎಂಭತ್ತರ ದಶಕದಲ್ಲಿರಬೇಕು-ಅವರ ಮನೆಯಲ್ಲಿ ಭೇಟಿಯಾಗಿದ್ದಾಗ, 'ವೈಜ್ಞಾನಿಕ ದೃಷ್ಟಿಕೋನ'ದ ಮಸ್ತಿಯಲ್ಲಿ, 'ನೀವು ನಿಮ್ಮ ಪತ್ನಿಯನ್ನು ಸಾಯಿಬಾಬಾರ ದರ್ಶನಕ್ಕೆ ಕಳಿಸುವುದು ಸರಿಯೇ' ಎಂದು ಕೇಳಿದೆ. ಅದಕ್ಕವರು, 'ಅದು ಅವಳ ಹಕ್ಕು ಹಾಗೂ ನನ್ನ ಮನುಷ್ಯತ್ವದ ಪ್ರಶ್ನೆ' ಎಂದು ಉತ್ತರಿಸಿ ನನ್ನ ಕಣ್ಣಂಚಿನಲ್ಲಿ ನೀರುಕ್ಕುವಂತೆ ಮಾಡಿದರು.

ವಿಜ್ಞಾನ ಎಲ್ಲ ಮನುಷ್ಯರ ಬದುಕುವ ಹಕ್ಕನ್ನು ಮಾನ್ಯ ಮಾಡಿ, ಮನುಷ್ಯತ್ವದ ಸ್ಪರ್ಶವನ್ನು ಪಡೆದಾಗ ಮಾತ್ರ ವೈಜ್ಞಾನಿಕ ಮನೋಭಾವ ಎಂಬುದು ಪರಿಪೂರ್ಣ ತತ್ವವಾದೀತು. ಅಲ್ಲಿಯವರೆಗೆ, ಕುಂಭ ಮೇಳಿಗರ ಹಾಗೂ ಅಣು ಬಾಂಬಿಗರ ನರ್ತನ ಒಟ್ಟಿಗೆ ನಡೆದೇ ಇರುತ್ತದೆ.



“ರೀ... ಮರೆತೇಬಿಟ್ಟಿದ್ದೆ... ಅಂದಹಾಗೆ ಇಂದು ಮಧ್ಯಾಹ್ನ...”

ಗೌರಿ “ರೀ” ಎಂದಿದ್ದಳು ಹೀಗೆ ಬಾಯ್ತೆರೆದು. ದೊಡ್ಡ ಸುದ್ದಿಯೊಂದನ್ನು ಬಿತ್ತರಿಸತೊಡಗಿರುವೆ ಎಂಬ ಉತ್ಕಟತೆ ಇತ್ತು ಧ್ವನಿಯಲ್ಲಿ. ಹಲವು ಸಲ ಅವಳು ಹೇಳತೊಡಗುವ ಸುದ್ದಿಯಲ್ಲಿ ಅಂಥ ಮಹತ್ವದ ಸುದ್ದಿ ಏನೂ ಇರುವುದಿಲ್ಲ. ಹಾಗಾಗಿ ಉತ್ಸಾಹ ಗರಿಗೆದರುವುದಿಲ್ಲ ನನ್ನಲ್ಲಿ, ಅವಳು ಇಂಥ ಸುದ್ದಿ ಹೇಳ ಹೊರಟಾಗ.

“ರೀss... ಕೇಳ್ತಾ ಇದೀರೇನ್ರಿ?”

ನನಗೆ ತಿಳಿಸಲೇಬೇಕೆಂದು ಬಾಯ್ತುಂಬ ಸುದ್ದಿ ಹಿಡಿದುಕೊಂಡಂತಿತ್ತು.

“ಹುಂ... ಏನು ಹೇಳು...” ತಗ್ಗಿದ್ದ ದನಿಯಲ್ಲಿಯೂ ಉತ್ಸಾಹ ಇದ್ದಂತೆ ಮಾರ್ನುಡಿದೆ.

ಜಾಣೆ ಇವಳು. ಗುರತಿಸಿಬಿಡುತ್ತಾಳೆ. ತಗ್ಗಿದ ಧ್ವನಿಯೂ, ಉತ್ಸಾಹವೂ ಒಂದಕ್ಕೊಂದು ಬೆರೆಯಲಾರದ ಸಂಗತಿಗಳು ಎಂಬುದನ್ನು ಆಕೆ ತಿಳಿಯಲಾರದವಳೇನಲ್ಲ.

ನನಗೂ ಇದು ಆಶ್ಚರ್ಯವೆ! ಯಾಕೆ ಗೌರಿಯ ಕುರಿತು ಇಷ್ಟೊಂದು ನಿರಾಸಕ್ತಿ ಎಂಬುದಕ್ಕೆ. ಹಾಗೆ ನೋಡಿದರೆ ಅದು ನಿರಾಸಕ್ತಿಯೂ ಅಲ್ಲ.


ಆದರೂ “ಏನೇss ಅದು...” ಎಂಬ ಮಾತಿನಲ್ಲಿ, ಬೇಗ ಒದರಿಬಿಡು ನಿನ್ನ ಸುದ್ದಿ ಎಂಬ ಅನಾದರದ ಎಳೆ ಸೂಕ್ಷ್ಮವಾಗಿಯೇ ಇರುತ್ತದೆಂಬುದೂ ಸುಳ್ಳಲ್ಲ.

ಯೋಚನೆಯಾಗುತ್ತದೆ, ಒಮ್ಮೆ ಉತ್ಸಾಹವಿದ್ದಂತೆ ಒಂದು ನಟನೆಯನ್ನಾದರೂ ಮಾಡಬಹುದಲ್ಲ ಎಂದು. ಆದರೆ ಮಾಡಿ ತೋರಿಸಲು ಸಾಧ್ಯವಾಗದು. ನಟನಾಗಿ ಅನುಭವವೇ ಇಲ್ಲ ಎಂದಲ್ಲ. ನಾಟಕಗಳಲ್ಲಿ ಪಾತ್ರ ಮಾಡಿದ್ದೇನೆ. ಹ್ಹಾ! ಮಾಡಿದ್ದೇನೆ ಏನು ಬಂತು? ಬಹುಮಾನಗಳೂ ಕೂಡ ಬಂದಿವೆ. ಇವಳೇ ಆ ಫೋಟೋಗಳನ್ನು, ಫಲಕಗಳನ್ನು, ಸರ್ಟಿಫಿಕೆಟ್‌ಗಳನ್ನು ಜೋಪಾನವಾಗಿ ಕಾದುಕೊಂಡಿದ್ದಾಳೆ. ಶೋಕೇಸ್ ಮನೆಯಲ್ಲಿ ತುಂಬಿಕೊಂಡು ತುಳುಕಿದೆ. ಬಂದವರೆದುರು ಇದು ಸಾಕಾಗದೇ ಆಲ್ಬಂ ಗೀಲ್ಬಂ ತಂದು ರಾಶಿ ಹಾಕುತ್ತಾಳೆ.

ನಾನು ಅಭಿನಯಿಸಿದ ಒಂದು ನಾಟಕದಲ್ಲಿ ಪದ್ಮಿನಿ ಅಂತ ಒಬ್ಬಳು. ಬಹುಶಃ ಆಕೆ ನನ್ನನ್ನು ತುಂಬಾನೆ ಪ್ರೀತಿಸಿರಬೇಕು. ಒಳ್ಳೆಯ ನಟಿ. ಆದರೆ ನನಗೋ ಅವೆಲ್ಲ ಒಂದು ಒಣ ರಗಳೆಯಂತ ಅನಿಸಿ ಅವಳ ಜತೆ ಸುತ್ತಾಡಲು ಸಾಧ್ಯವೇ ಆಗಲಿಲ್ಲ. ನೋಡಲು ಚೆನ್ನಾಗಿದ್ದಳು. ಆದರೆ ರಂಭೆಯೇನಲ್ಲ.

ಇದೇ ನಾಟಕದ ಮತ್ತೊಬ್ಬ ನಟಿ- ಹೆಸರು ರುಕ್ಮಿಣಿ ಅಂತ. ಅವಳ ಜತೆ ಅಭಿನಯಿಸುತ್ತಿದ್ದವನು ರಮಾಕಾಂತ ಅಂತ. ರುಕ್ಮಿಣಿ ಒಳ್ಳೆಯ ನಟಿಯೇನಲ್ಲ. ಆದರೆ ಅವಳ ಥಳಕ್ಕು, ಬಳಕು ಎಲ್ಲ ಮೋಹಕ. ಪದ್ಮಿನಿ ಚೆನ್ನಾಗಿಯೇ ಅಭಿನಯಿಸಿದ್ದರೂ ಅವಳ ಬಳಿ ಸುಳಿದಾಡಬೇಕು ಎಂದು ಅನಿಸುತ್ತಿರಲಿಲ್ಲ. ಆದರೆ ರುಕ್ಮಿಣಿಯ ಕುರಿತಂತೆ ಹೀಗಲ್ಲ. ಅದೇನೋ, ಅವಳನ್ನು ಹತ್ತಿರ ಮಾಡಿಕೊಳ್ಳಬೇಕೆಂಬ ತವಕವಿರುತ್ತಿತ್ತು.

ಆ ನಾಟಕದಲ್ಲಿ ಪದ್ಮಿನಿ ಚೆನ್ನಾಗಿಯೇ ಅಭಿನಯಿಸಿದ್ದರಿಂದ ಅಭಿನಂದನೆಗೆ ಅರ್ಹಳಾಗಿದ್ದಳು. ನಾನು ಈ ಕೆಲಸ ಮಾಡಿದ್ದರೆ ಸಂತೋಷಗೊಳ್ಳುತ್ತಿದ್ದಳು. ಆದರೆ ರುಕ್ಮಿಣಿ, ಚೆನ್ನಾಗಿ ಅಭಿನಯಿಸುವುದಿರಲಿ ಡೈಲಾಗ್ ಕೂಡ ಸರಿಯಾಗಿ



ಮಹಾಬಲಮೂರ್ತಿ ಕೊಡ್ಲೆಕೆರೆ

ಕಿಡಕಿಯೊಳಗಿನ ಬಿಸಿಲು





ಒಪ್ಪಿಸಿರಲಿಲ್ಲ. ತಡವರಿಸುತ್ತಲೇ ಇದ್ದಳು. ಆದರೂ ರಂಗದ ತುಂಬಾ ಮುದ್ದಾಗಿ ಓಡಾಡಿಕೊಂಡಿದ್ದಳು. ಅಂದಿನ ಅನುಭವ ಶಬ್ದಗಳಿಗೆ ನಿಲುಕುವಂತಿರಲಿಲ್ಲ. ನಾಟಕದ ನಡುವೆಯೇ ರುಕ್ಮಿಣಿಯಿದ್ದಲ್ಲಿಗೇ ಹೋಗಿ ಅವಳನ್ನು ಅಭಿನಂದಿಸಬೇಕು ಎಂಬ ಉತ್ಸಾಹ.

ಅದೇನೋ ಗೂಳಿಯಂತೆ ಅದು ಲೇಡೀಸ್ ಗ್ರೀನ್ ರೂಮು ಎಂಬುದು ತಿಳಿದೂ ಧೈರ್ಯದಿಂದ ನುಗ್ಗಿದ್ದೆ. ಭಾರೀ ಬೆಳಕಿನ ಬಲ್ಬುಗಳು ಚೆಲ್ಲಿದ ಹಾಲು ಧಾರೆಯಂಥ ಬೆಳಕಿನ ಪುಂಜವನ್ನೆಲ್ಲ ಗೋಡೆಗಿದ್ದ ದೊಡ್ಡ ಕನ್ನಡಿಗಳು ಪ್ರತಿಫಲಿಸುತ್ತಿದ್ದ ಮಿಂಚಿನ ಎದುರು ಹಲ್ಲಲ್ಲಿ ಸೆರಗು ಕಚ್ಚಿ ರುಕ್ಮಿಣಿ ನಿಂತಿದ್ದಳು. ಪೂರ್ತಿಯಾಗಿ ಸೆರಗು ಎದೆಯನ್ನು ಮುಚ್ಚಿರಲೂ ಇಲ್ಲ. ಪೂರ್ತಿ ಬ್ಲೌಸ್, ಬ್ರಾ ಕೂಡ ಹಾಕಿರದ, ಹಾಕುತ್ತಿರುವ ಹೀಗೆ ಏನೋ ಎಲ್ಲವೂ ಅರ್ಧರ್ಧ ಹಂತದಲ್ಲಿದ್ದ ಅವಳ ಭಂಗಿ. 'ಓಹ್... ಸಾಽರಿ... ತಿಳಿಯದೇ ಬಂದುಬಿಟ್ಟೆ ಕ್ಷಮಿಸಿ' ಎಂದು ಅನ್ನು ತ್ತಲೋ, ಅಂದರೂ ಹೇಳಿದ್ದು ತಿಳಿಯದಂತೆ ತೊದಲುತ್ತಲೋ ಗಾಬರಿಯಿಂದ ಓಡಿ ಹೊರ ಬಂದುಬಿಟ್ಟಿದ್ದೆ.

ಅವಳು ಏನು ತಿಳಿದುಕೊಂಡಳೋ? ಅನಾಗರಿಕ ಎಂದೂ ಆಕೆ ಅಂದುಕೊಂಡಿರಲೂ ಸಾಕು. ನಾನು ತುಸು ಆತುರ ಮಾಡಿದೆ ಎಂದೇ ಅನಿಸಿತ್ತು.

ಆದರೆ ಆ ದಿನ ಅವಳು... ನನ್ನ ಮನಸ್ಸಿನಲ್ಲಿ ಬೆಂಕಿಯಂತೆ ಪ್ರಜ್ವಲಿಸುತ್ತಿದ್ದಳು. ಸೀರೆಯ ಸೆರಗೊಂದು ಅಷ್ಟೆಲ್ಲ ಮಾರ್ದವವಾಗಿ ಹೆಣ್ಣಿನ ಅಂಗಾಂಗಗಳನ್ನು ಬಚ್ಚಿಟ್ಟುಕೊಂಡು, ಬಿಚ್ಚಿಟ್ಟುಕೊಂಡು ಸಂಭ್ರಮಿಸಿದ್ದ ರೀತಿಯನ್ನು ನಾನು ನೋಡಿದ್ದು ಅದೇ ಮೊದಲು.

"ನೀವು ನನ್ನನ್ನು ತಪ್ಪು ತಿಳಿದಿರೇನೋ? ಹೌದು... ನಾನು ಹಾಗೆ ನುಗ್ಗಕೂಡದಿತ್ತು. ಅಭಿನಂದಿಸಬೇಕು ನಿಮ್ಮನ್ನು ಎಂಬ ಆತುರದಲ್ಲಿ ಹಾಗೆ ಮಾಡಿಬಿಟ್ಟೆ, ಕ್ಷಮಿಸಿ... ನಿಮ್ಮ ಅಭಿನಯವಂತೂ ಚೆನ್ನಾಗಿತ್ತು. ಅಭಿನಂದನೆಗಳು ನಿಮಗೆ'' ಎಂದು ಮತ್ತೆ ನಂತರ ನಾಟಕ ಮುಗಿದ ಮೇಲೆ ಎಂಬುದಕ್ಕಿಂತ ಮುಗಿಯಲಿಕ್ಕೆ ತುಸು ಮುಂಚೆ ಅವಳಿದ್ದಲ್ಲಿಗೆ ಉತ್ಸಾಹದಿಂದಲೇ ಹೋದೆನಾದರೂ, ಅಲ್ಲಿ ನಾನು ಕಂಡಿದ್ದೇನು? ರಮಾಕಾಂತ ಮೃದುವಾಗಿ ಅವಳ ಕೈಗಳನ್ನು ಹಿಡಿದುಕೊಂಡು 'ವೆಲ್‌ಡನ್' ಎಂದು ಹೇಳುತ್ತ ಮುಖಕ್ಕೊತ್ತಿಕೊಳ್ಳತೊಡಗಿದ್ದ.

ತೀವ್ರ ಆಘಾತ, ಅಸೂಯೆಗಳೊಡನೆ ನಾನು ಹೊರಗೋಡಿ ಬಂದುಬಿಟ್ಟಿದ್ದೆ. ಅವರು ನನ್ನನ್ನು ನೋಡಿದರೊ ಇಲ್ಲವೋ ತಿಳಿಯದು. ನಂತರ ತಾನು ಮೃದುವಾಗಿ ಹಿಡಿದ ರುಕ್ಮಿಣಿಯ ಕೈಗಳನ್ನು ರಮಾಕಾಂತ ಬಿಡಲಿಲ್ಲ. ಒಂದೇ ವರ್ಷದಲ್ಲಿ ಅವರಿಬ್ಬರೂ ಮದುವೆಯಾಗಿದ್ದರು.

ಆನಂತರ ಪದ್ಮಿನಿಯೂ ಎಲ್ಲಿಗೆ ಹೋದಳೊ... ತಿಳಿಯದು. ಅವಳ ತಂದೆ ತಾಯಿಗಳಿಗೆ ಚಿತ್ರದುರ್ಗಕ್ಕೆ ವರ್ಗವಾಗಿ ಆ ಕಡೆ ಹೊರಟುಹೋಗಿದ್ದರು. ಅವರದು ಸರಕಾರೀ ಇಲಾಖೆಯಲ್ಲಿ ಕೆಲಸ. ವರ್ಗಾವರ್ಗಿ ಸ್ವಾಭಾವಿಕ. ನಂತರ ಅವಳು ಯಾರನ್ನು ಮದುವೆಯಾದಳೊ? ಅವಳಿಗೀಗ ನನ್ನ ನೆನಪಾದರೂ ಇದೆಯೊ ಇತ್ಯಾದಿ ಪ್ರಶ್ನೆಗಳೆಲ್ಲ ನನ್ನಲ್ಲಿ ಉತ್ತರವಿಲ್ಲದೆ ಬಿದ್ದಿವೆ. ಆಗಾಗ ಅವಳು ನೆನಪಿಗೆ ಬರುತ್ತಾಳೆ. ಮರೆತುಹೋದಂತೆಯೂ ಇದ್ದಾಳೆ.

ಸರಿ, ಈಗ ಹೇಳಬೇಕಾದದ್ದು ಈ ವಿಷಯಗಳನ್ನಲ್ಲ. ಪದ್ಮಿನಿಗೂ ನನ್ನ ನೆನಪು ಬಂದೀತು, ಬಾರದೆಯೂ ಇದ್ದೀತು, ಇದು ದೊಡ್ಡದಲ್ಲ. ಅದು ಬೇರೆಯದೇ


ಕತೆ. ಈಗ ಪ್ರಧಾನವಾಗಿ ಹೇಳಹೊರಟದ್ದು ನಟನೆಯ ಕುರಿತು. ನಾನು ಅಭಿನಯಿಸಬಲ್ಲೆ ಎಂಬ ವಿಷಯ ತಿಳಿಸಲಿಕ್ಕಾಗಿ.

ಆದರೂ ನನ್ನನ್ನು ಮದುವೆಯಾಗಿರುವ ಈಕೆಯ ಎದುರು ಅಭಿನಯ ಮಾಡಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಗೌರಿ! ಈಕೆ ನನ್ನ ಮಡದಿ. ಸೋದರ ಮಾವನ ಮಗಳು. ಊರು ಬಿಟ್ಟು ಪರ ಊರಿನಲ್ಲೀಗ ನಮ್ಮ ವಾಸ. ಅದೂ ನಗರ ಪ್ರದೇಶ. ಕೈತುಂಬ ಸಂಬಳವಿದೆ, ಚಂದವಾದ ಸಂಸಾರ... ನೋಡುವವರ ಕಣ್ಣಿಗೆ ಎಲ್ಲವೂ ಸುಸಂಬದ್ಧ. "ಅವರಿಗೇನು ಕಡಿಮೆ, ಎಲ್ಲ ಇದೆ. ಒಳ್ಳೆಯ ಸ್ಥಳದಲ್ಲಿ ದೊಡ್ಡ ಸೈಟು, ಮನೆ ಕಟ್ಟಿಸುವುದೊಂದು ಬಾಕಿ. ತಿರುಗಾಡಲು ಕಾರು, ಮನೆಗೆ ಹೊಂದಿದ ಕಾರಿನ ಶೆಡ್ಡು. ಗಂಡ ಹೆಂಡತಿಯನ್ನು, ಅವರ ಸಂಭ್ರಮವನ್ನು ನೋಡುವುದೇ ಕಣ್ಣಿಗೆ ಹಬ್ಬ." ಇಂಥ ಮಾತುಗಳು ಹೆರವರ ಬಾಯಲ್ಲಿ ಬಂದಿದ್ದಿದೆ. ಹೌದು... ಪರವಾಗಿಲ್ಲ... ಗೌರಿ ಚೆನ್ನಾಗಿದ್ದಾಳೆ ನೋಡಲು. ನಾನೂ ಹಾಗೇ ಇದ್ದಿರಬಹುದು. (ನಾನು ಚೆನ್ನಾಗಿದ್ದೇನೆ ನೋಡಲು ಎಂಬುದು ತುಸು ಅತಿಯಾಯಿತೇನೊ? ಆದರೆ ಹಿಂದೆ ಪದ್ಮಿನಿ ತುಂಬಾ ಸಲ ಗೆಳತಿಯರ ಬಳಿ ಹೇಳಿಕೊಂಡು ತಿರುಗಾಡುತ್ತಿದ್ದಳಂತೆ. ನನಗೆ ಯಾರೋ ಇದನ್ನು ಹೇಳಿದ್ದರು.)

ಗೌರಿಯೂ ನನ್ನನ್ನು ರೇಗಿಸಿದ್ದಿದೆ, ಪದ್ಮಿನಿಯ ವಿಷಯದಲ್ಲಿ. "ನನಗಂತೂ ತುಂಬಾ ಕೋಪ ಬಂದಿತ್ತು. ನಿಮ್ಮನ್ನು ಮದುವೆಯಾಗೊ ಇಚ್ಛೆಯೇ ನನಗಿರಲಿಲ್ಲ. ನೀವೇ ನಮ್ಮಪ್ಪನ ಬಳಿ ಕೇಳಿ ಮದುವೆ ಮಾಡಿಕೊಂಡಿರಿ. ನಿಮ್ಮ ಮುಖ ಕೂಡ ನೋಡುವ ಮನಸ್ಸಿರಲಿಲ್ಲ. ಆ ದಿನದ ನಾಟಕದಲ್ಲಿ ಅದೇನು ನಟನೆಯೊ? ಅಥವಾ ನಿಜವಾಗಿಯೂ ನೀವು ಆ ಪದ್ಮಿನಿಯನ್ನು ಪ್ರೀತಿಸಿದ್ದಿರೊ? ಅವಳಂತೂ ಅವಳ ಗೆಳತಿಯರ ಬಳಿ ನಿಮ್ಮ ಕುರಿತೇ ಹೇಳಿಕೊಂಡಿರುತ್ತಿದ್ದಳು ಎಂಬ ವಿಷಯ ನನ್ನ ಕಿವಿಗೂ ಬಿದ್ದಿತ್ತು. ಒಬ್ಬಳನ್ನು ಪ್ರೀತಿಸದೆ ರಂಗದ ಮೇಲೆ ಹಾಗೆಲ್ಲಾ ಪ್ರೀತಿಸುವುದು ಸಾಧ್ಯವೇನ್ರಿ? ಎಲ್ಲಿದ್ದಾಳೊ ಆ ಮಹಾ ತಾಯಿ, ಮೂದೇವಿ. ವ್ಹಾ ನಿಮ್ಮದು ರತಿ ಮನ್ಮಥರ ಜೋಡಿಯಂತಿತ್ತು. ಹೋಗಿ ಹೋಗಿ ನನ್ನನ್ನು ಕಟ್ಟಿಕೊಂಡಿರಿ. ಪ್ಲೀಸ್... ನಿಜಕ್ಕೂ ನೀವವಳನ್ನು ಪ್ರೀತಿಸಿರಲಿಲ್ಲ ತಾನೆ...? ನನಗೆ ಹೇಳಿ ಒಂದಿಷ್ಟು" ಎಂದು ತಮಾಷೆಯೊ, ಸೀರಿಯಸ್ಸೊ ಎಂಬುದು ತಿಳಿಯದಂತೆ ಅಂಗಲಾಚುತ್ತಿದ್ದಳು. ನಾನಾಗ ರೇಗುತ್ತಿದ್ದೆ. ರೇಗಿದಾಗ ನಗುತ್ತಿದ್ದಳು. ಹೇಗೂ ನಗುತ್ತಾಳೆ ಎಂದುಕೊಂಡಾಗ ಮುಖ ಗಂಟಿಕ್ಕಿಕೊಂಡೇ ಇರುತ್ತಿದ್ದಳು. ಗೌರಿ ಒಗಟಾಗಿಯೇ ಉಳಿಯುತ್ತಿದ್ದಳು ಹೀಗೆ.

ಪದ್ಮಿನಿಯ ವಿಷಯ ಕೇಳಿ ತಿಳಿಯುವ ತವಕವಂತೂ ಅವಳಲ್ಲಿ ಇದ್ದೇ ಇರುತ್ತಿತ್ತು. ಪ್ರೀತಿ ಇರದೆ ಒಬ್ಬಳನ್ನು ರಂಗದ ಮೇಲೆ ನೈಜವಾಗಿ ಪ್ರೀತಿಸಿದಂತೆ ಅಭಿನಯಿಸಲು ಸಾಧ್ಯವಿಲ್ಲ ಎಂಬುದನ್ನು ಒಂದು ಸಿದ್ಧಾಂತದಂತೆ ಹೇಳುತ್ತಿದ್ದಳು. ಬೇರೆ ಯಾವುದೇ ಕಾರಣಕ್ಕಾಗಿ ಅನಾಸ್ಥೆ ತಳೆದರೂ "ಪದ್ಮಿನಿಯ ನೆನಪು ಬಂದಿರಬೇಕು... ನನ್ನ ಬಗ್ಗೆ ಆಸ್ಥೆ ಹೇಗೆ ಸಾಧ್ಯ" ಎಂದು ಮೂದಲಿಸುತ್ತಿದ್ದಳು. ಹೀಗಾಗಿ ಇವಳ ವಿಷಯದಲ್ಲಿ ತಪ್ಪಿಯೂ ಅನಾಸ್ಥೆಯನ್ನು ತೋರಿಸಲು ಸಾಧ್ಯವಾಗುತ್ತಿರಲಿಲ್ಲ.

ಇಂದೂ ಇದೇ ಆದದ್ದು. "ರೀ... ಹೇಳಲು ಮರೆತೆ" ಎಂದು ಈಕೆ ರಾಗವಾಗಿ ಹೇಳಿದಾಗ 'ಏನೋ ಮಹತ್ವದ್ದೆಂಬಂತೆ ರಾಗ ಎಳೆದು ತುಂಬಾ



ಸಾಮಾನ್ಯ ಸುದ್ದಿ ತೆಗೆಯುವ ಸಂಪ್ರದಾಯ ನಿನಗಿದ್ದಿದ್ದೇ. ಈಗ ಏನನ್ನೂ ಹೇಳಬೇಡ' ಎಂದು ಹೇಳಬೇಕೆನಿಸಿದರೂ ನಂತರ ಅವಳು ಮುನಿಸಿಕೊಂಡು ಆ ಪದ್ಮಿನಿಯ ಸುದ್ದಿ ತೆಗೆಯಬಹುದೆಂದೆಣಿಸಿ ಆಸ್ಥೆ ಇರುವವನಂತೆ "ಏನೆ ಅದು...?" ಎಂದು ಸಾಕಷ್ಟು ಉತ್ಸಾಹವಿದೆ ಎಂಬ ದನಿ ತೆಗೆದು ನಾನು ಪ್ರಶ್ನಿಸಿದ್ದೆ.

ಪ್ರಶ್ನೆಯಲ್ಲಿ ತೆರೆದಿಟ್ಟ ಉತ್ಸಾಹ ಪರಿಣಾಮ ಬೀರಿತ್ತು. ಕೂಡಲೇ ಅವಳಿಗೆ ನಾನು ಅಷ್ಟೆಲ್ಲ ಉತ್ಸಾಹ ತೋರುವುದು ಮನಸ್ಸಿಗೆ ಸರಿ ಬರಲಿಲ್ಲವೇನೋ? ಸುದ್ದಿ ಹೇಳತೊಡಗಿದವಳು ಮತ್ತೆಲ್ಲೋ ಎದ್ದು ಹೋಗಿ ಏನನ್ನೋ ತರುತ್ತಲಿದ್ದೇನೆ ಎಂಬಂತೆ ಒಳಗೆ ಕರಗಿದಳು. ನಿಜಕ್ಕೂ ಈಗ ಕಾತರಿಸಿ "ಏನೆ ಅದು" ಕೇಳಿದರೆ ಇನಿಷ್ಟು ಕಾತರ ಉಂಟಾಗಲಿ ಎಂಬಂತೆ ವಿಷಯವನ್ನು ಹೇಳದೆಯೇ ಒಳಗೆ ಹೋದ ಗೌರಿಯ ಕುರಿತು ಕೋಪವೇ ಬಂದಿತ್ತು. ಆದರೂ ತೋರಿಸಲಿಲ್ಲ.

ಮತ್ತೆ ಸುಮ್ಮನಿದ್ದ ನನ್ನನ್ನು ಎದುರಿಗೇ ಬಂದು ಉದ್ದೇಶಿಸಿ "ಇಂದು ಏನಾಯಿತು. ಎಂದರೆ..." ಎಂದು ಅನ್ನುತ್ತ ತುಸು ದೂರದಲ್ಲಿದ್ದ ಬೆತ್ತದ ಖುರ್ಚಿಯನ್ನು ನನ್ನ ಬಳಿಗೇ ಸರಿಸಿಕೊಳ್ಳುತ್ತ ನನಗೆದುರಾಗಿ ಕುಳಿತು, ಕಣ್ಣುಗಳನ್ನು ಅಗಲಿಸುತ್ತ ಶುರು ಹಚ್ಚಿದಳು. "ಅಲ್ಲಾರಿ, ಅವಳು ಇನ್ನೊಬ್ಬಳು ಆ ದಿವಸ ನಿಮ್ಮ ನಾಟಕದಲ್ಲಿ ಇದ್ದಳಲ್ಲ? ಹಾಂ! ರುಕ್ಮಿಣಿ ಅಂತ ಅಲ್ಲೇನ್ರಿ ಅವಳ ಹೆಸರು?" ಎಂದು ಕೇಳುತ್ತ ಮತ್ತೊಮ್ಮೆ ಮಾತಿನ ವಿರಾಮ ಘೋಷಿಸಿದಳು. ಆ ವಿರಾಮ ಮುದ್ದಾಂ ನಿರ್ಮಿಸಿದ ವಿರಾಮದಂತೆಯೂ ಇರಲಿಲ್ಲ. ಅಥವಾ ಹಾಗಲ್ಲ ಎಂದೂ ಹೇಳುವಂತಿರಲಿಲ್ಲ.

ಅಷ್ಟರಲ್ಲಿ ನಾನು ತುಸು ಬೆವರಿದ್ದೆ. ಏನಪ್ಪಾ ಗ್ರಹಚಾರ? ಮತ್ತೇನೊ ಹೊಸ ಪ್ಲೇಟನ್ನೇ ಹೊರ ತೆಗೆಯತೊಡಗಿದಳಲ್ಲಪ್ಪ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ "ಹಾಂ... ಹೌದಲ್ಲ, ನೀನು ಸರಿಯಾಗಿಯೇ ಹೇಳಿದೆ. ಅವಳ ಹೆಸರು ರುಕ್ಮಿಣಿಯೆ. ಸರಿ... ಸರಿ... ಏನು ವಿಶೇಷ ಈಗ? ಏನು ಸಮಾಚಾರ? ನಿನ್ನ ಸುದ್ದಿಗೂ-ಆ ರುಕ್ಮಿಣಿಗೂ ಏನು ಸಂಬಂಧ?" ಎಂದು ಜೋರಾಗಿಯೇ ಕೇಳಿದ್ದೆ. ರುಕ್ಮಿಣಿಯ ಕುರಿತು ಅನಾಸ್ಥೆಯೂ ಇದೆ ಎಂಬಂತಿತ್ತು ನನ್ನ ಧ್ವನಿ.

"ಯಾಕ್ರಿ... ಅಷ್ಟೊಂದು ಗಾಬರಿಪಡ್ತೀರಾ? ಗಾಬರಿಪಟ್ಟು ಸುಸ್ತಾಗಬೇಡಿ. ಹೇಳುತ್ತಿರುವ ಸುದ್ದಿ ಇಷ್ಟಕ್ಕೂ ರುಕ್ಮಿಣಿಯದೇ ವಿನಾ ಪದ್ಮಿನಿಯದೇನು ಅಲ್ಲವಲ್ಲ? ಇದು ರುಕ್ಮಿಣಿ ವಿಷಯ. ತುಸು ಕೇಳಿ" ಎಂದು ಮತ್ತೆ ರಾಗವಾಗಿ ತಿವಿದಳು ಮಾತಿನಿಂದ. ಸಿಟ್ಟು ಬಂದರೂ ನಾನು ತೋರಿಸಿಕೊಳ್ಳಲಿಲ್ಲ.

"ನಾನ್ಯಾಕೆ ಗಾಬರಿಗೊಳ್ಳಲಿ? ನನಗೆ ರುಕ್ಮಿಣಿಯೂ ಒಂದೆ, ಪದ್ಮಿನಿಯೂ ಒಂದೆ. ಎಲ್ಲರೂ ಎಲ್ಲಿದ್ದಾರೊ? ಹೇಗಿದ್ದಾರೊ? ಮತ್ತೆ ಸಂಧಿಸುತ್ತಾರೊ? ಹಾಗೇ ಒಂದು ದಿನ..." ಎಂದು ದೊಡ್ಡ ವೇದಾಂತಿಯಂತೆ ನಾನು ಹೇಳತೊಡಗಿದಾಗ ಒಮ್ಮೆಗೇ ನನ್ನನ್ನು ತಡೆದು "ರೀ ಬಿಡಿ ಸಾಕು ನಿಮ್ಮೀ ಹರಿಕಥೆ. ನನಗಿದರಲ್ಲಿ ಆಸಕ್ತಿಯಿಲ್ಲ. ಇಂದು ನಿಮ್ಮನ್ನು ಕಾಣಲು ರುಕ್ಮಿಣಿ ಬಂದಿದ್ದಳಂತೆ ನಮ್ಮ ಮನೆಗೆ" ಎಂದು ಆಸಕ್ತಿ ಹುಟ್ಟಿಸುವ ವಿಷಯವೊಂದನ್ನು ತೇಲಿಬಿಟ್ಟಳು ಗೌರಿ.

ಆದರೆ ನನಗೆ ದಿಗಿಲು, ಆಶ್ಚರ್ಯ ಎಲ್ಲ ಒಮ್ಮೆಗೇ ಆಗತೊಡಗಿತು.

"ರುಕ್ಮಿಣಿ... ರುಕ್ಮಿಣಿ... ನಮ್ಮ ನಾಟಕದ ರುಕ್ಮಿಣಿ...? ಅದ್ಯಾಕೆ ಬರ್ತಾಳೆಯೆ? ನನ್ನ ವಿಳಾಸ ಎಲ್ಲಿಂದ ಸಿಗುತ್ತದೆ ಅವಳಿಗೆ? ಅವಳ ಗಂಡ



ರಮಾಕಾಂತನೂ ಬಂದಿದ್ದನೇನು? ಬಂದವರು ಎಲ್ಲಿಗೆ ಹೋದರು? ವಿಳಾಸ ಕೊಟ್ಟಿದ್ದಾರೇನು?'' ಒಂದೇ ಸಮನೆ ಪ್ರಶ್ನೆಗಳನ್ನು ಎಸೆದಿದ್ದೆ. ಆದರೆ ಜತೆಗೆ ಹೆದರಿಕೆಯೂ ಅನಿಸಿತು. 'ಒಬ್ಬ ಹೆಂಗಸಿನ ಕುರಿತು ಇಷ್ಟೆಲ್ಲ ಆಸಕ್ತಿ ಏಕೆ' ಎಂದು ಗೌರಿ ಕೇಳಿಬಿಡಬಹುದೆಂಬ ಹೆದರಿಕೆ ಅದು.

ಆದರೆ ಸದ್ಯ ರುಕ್ಮಿಣಿಯ ಕುರಿತಾದ ದೊಡ್ಡ ಪ್ರಮಾಣದ ನನ್ನ ಉತ್ಸಾಹವನ್ನು ಗೌರಿ ಗಮನಿಸಿರಲಿಲ್ಲ. ಬದಲು ಅವಳಿಗೇ ಹೆಚ್ಚಿನ ಉತ್ಸಾಹ, ಆಸಕ್ತಿ ರುಕ್ಮಿಣಿಯ ಕುರಿತು ತುಂಬಿದಂತಿತ್ತು.

''ಅದೇರಿ, ಅದೇ ನನಗೂ ಆಶ್ಚರ್ಯವೆನಿಸಿದ್ದು. ನೋಡಿ ಅದ್ಹೇಗೆ ವಿಳಾಸ ಹುಡುಕಿ ತೆಗೆದಳೊ? ಅದೇಕೆ ಬಂದಳೊ? ಏನನ್ನು ಹೇಳುವ ಅವಸರ ಅವಳಲ್ಲಿತ್ತೊ? ಎಷ್ಟು ಆಶ್ಚರ್ಯ ಅಲ್ವಾ?'' ಎಂದು ಗೌರಿ ರಾಗವೆಳೆದಾಗ ನೆಮ್ಮದಿಯೆನಿಸಿತು.

''ಅದೇ ನಾನು ತರಕಾರಿ ತರಲಿಕ್ಕೆ ಮಾರ್ಕೆಟಿಗೆ ಹೋಗಿದ್ದೆ ನೋಡಿ, ಆಗ ಒಬ್ಬಳು ಹೆಂಗಸು ನಮ್ಮ ಮನೆಯ ಬಾಗಿಲ ಬಳಿ ಬಂದು ಬೆಲ್ ಮಾಡಿದಳಂತೆ. ಆ ಎದುರು ಮನೆ ಗಿಣಿ ಮೂಗಿನ ರಾಧಾಕೃಷ್ಣ ಇಲ್ಲವೇನ್ರಿ? ಅವರ ಅಪ್ಪ ಕೃಷ್ಣರಾಜಪ್ಪ ಇವಳನ್ನು ಗಮನಿಸಿ 'ಇಲ್ಲಾ, ಅವರು ಎಲ್ಲೋ ಹೊರಟುಹೋದಂತಿದೆ. ಅವರ ಯಜಮಾನರು ಬರುವಾಗ ಸಂಜೆ ಏಳರ ಮೇಲಾಗುತ್ತದೆ. ನೀವು ಯಾರು? ನೀವು ಅವರಿಗೆ ಏನಾಗಬೇಕು? ನಿಮ್ಮ ಹೆಸರು, ಊರು ಇತ್ಯಾದಿ ಎಲ್ಲ ವಿವರಗಳನ್ನು ತಿಳಿಸಿದರೆ ಅವರು ಮನೆಗೆ ಬಂದಮೇಲೆ ಎಲ್ಲವನ್ನು ಅವರಿಗೆ ತಿಳಿಸಲು ಅನುಕೂಲವಾಗುತ್ತದೆ' ಅಂತ ಅಂದರಂತೆ.

'ನಾನು ಮಿಸೆಸ್ ರಮಾಕಾಂತ ಅಂತ. ನಾನು ಬಂದಿದ್ದೆ ಹೀಗೆ ಎಂದರೆ ಅವರಿಗೆ ತಿಳಿಯುತ್ತೆ. ನಾನು ಬಂದಿದ್ದನ್ನು ದಯಮಾಡಿ ಅವರಿಗೆ ತಿಳಿಸಿ' ಎಂದು ವಿನಂತಿಸಿ ಬಂದಿದ್ದ ಅವಳು ಹೊರಟು ಹೋದಳಂತೆ.

ನನಗೆ ಮತ್ತಿಷ್ಟು ಆಶ್ಚರ್ಯವಾಯ್ತು. ತಾನು ಬಂದವಳು ರುಕ್ಮಿಣಿ ಅಂತ ನೇರವಾಗಿ ಹೇಳದೆ, ತಾನು ಮಿಸೆಸ್ ರಮಾಕಾಂತ್ ಎಂದು ಹೇಳಲು ಹೇಳಿದ್ದರಲ್ಲಿ ತಾನು ರಮಾಕಾಂತನನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತಿದ್ದೇನೆ ಎಂಬುದನ್ನು ಸೂಚಿಸಲು ಇದ್ದೀತೆ ಎಂದು ಅನಿಸದಿರಲಿಲ್ಲ. ಗ್ರೀನ್ ರೂಮಿಗೆ ಗೂಳಿಯಂತೆ ನಾನು ನುಗ್ಗಿದ್ದ ಘಟನೆಯ ಕುರಿತಾದ ವ್ಯಂಗ್ಯದ ಎಳೆಯನ್ನು ಇನ್ನೂ ಎತ್ತಿ ತೋರಿಸುತ್ತಿರಬಹುದೆ ರುಕ್ಮಿಣಿ ಎಂದೇ ಅನಿಸಿತು.

ಆಶ್ಚರ್ಯವೇ ಸರಿ ಇದು. ಇವರನ್ನೆಲ್ಲ ಮತ್ತೆ ಸಂಧಿಸಲಾರೆ ಎಂಬುದು ಖಾತ್ರಿಯಾಗುತ್ತಿದ್ದ ಈ ಹಂತದಲ್ಲಿ ಅಯಾಚಿತವಾಗಿ ರುಕ್ಮಿಣಿ ಧುತ್ತೆಂದು ಬಂದು ಹೋದಳಲ್ಲ, ಏನನ್ನೋಣ... ಫನ್ನಿ ಎಂದನಿಸಿತು. ಆದರೆ ಕುತೂಹಲ ಹುಟ್ಟಿಸಿದ ಸಂಗತಿ ಎಂದರೆ ನನ್ನ ಮನೆಯನ್ನು ಈಕೆ ಹೇಗೆ ಪತ್ತೆ ಹಚ್ಚಿದಳು ಎಂಬ ಬಗ್ಗೆ. ಅಂದು ಗ್ರೀನ್ ರೂಮಿನ ಪ್ರಜ್ವಲ ಬೆಳಕಿನಲ್ಲಿ, ಹೊನಲಲ್ಲಿ, ಕಾಂತಿಯುಕ್ತವಾಗಿ ಪ್ರತಿಫಲನಗೊಂಡ ಕನ್ನಡಿ ಎದುರು ಉಕ್ಕಿದ್ದ ಮಾದಕ ಮೈಯ ಏರಿಳಿತಗಳಲ್ಲಿ ಕಂಡ ರುಕ್ಮಿಣಿ ಈಗ ಹೇಗಿರಬಹುದು ಎಂದು ಯೋಚಿಸಿದೆ. ಅಂದು ಬಿಗಿ ಮೈಯ್ಯಾಗಿ ಪ್ರಜ್ವಲಿಸಿದ ರುಕ್ಮಿಣಿಯ ನೆನಪು ಈಗಲೂ ಜೀವಂತ.

ಈ ನಾಟಕ ನಡೆದು ಇದೀಗ ಸುಮಾರು ಹತ್ತು ಹನ್ನೊಂದು ವರ್ಷಗಳೇ ಉರುಳಿಹೋಗಿವೆ. ಇದು ಕಡಿಮೆ ಕಾಲಾವಧಿ ಏನಲ್ಲ. ಆಗ ರುಕ್ಮಿಣಿಗೆ ಹೆಚ್ಚೆಂದರೆ ಇನ್ನೂ ಇಪ್ಪತ್ತು ವರ್ಷಗಳಾಗಿತ್ತೇನೊ? ನನಗಿನ್ನೂ ಆಗ ಇಪ್ಪತ್ತಾರು. ರಮಾಕಾಂತ್‌ಗೆ ಹೆಚ್ಚೆಂದರೆ ಮೂವತ್ತು. ಪದ್ಮಿನಿಗೆ ಇಪ್ಪತ್ತೆರಡು ಎಂದು ನೆನಪು. ನಾಟಕ ಮುಗಿದ ಮೇಲೆ ತೆಗೆಸಿಕೊಂಡ ಫೋಟೋ ಸ್ನಿಗ್ಧವಾಗಿ ಇನ್ನೂ ಆಲ್ಬಂನಲ್ಲಿ ಗರಿಗರಿಯಾಗಿಯೇ ಇದೆ.

ನಾನೂ ಕೂಡ ಭಾರತ ಸರಕಾರದ ಉನ್ನತ ಪರೀಕ್ಷೆಯೊಂದನ್ನು ಪಾಸು ಮಾಡಿದ ಕಾರಣ ನಾಟಕ ಮುಗಿದ ಎರಡೇ ತಿಂಗಳ ಕಾಲಾವಧಿಯಲ್ಲಿ ಈ ನಗರದ ಸದ್ಯದ ಕೆಲಸಕ್ಕೆ ನೇಮಕಗೊಂಡು ಬಂದೆ. ಮತ್ತೆರಡು ತಿಂಗಳುಗಳಲ್ಲಿ ರಮಾಕಾಂತ್ ಕೂಡ ವರ್ಗವಾಗಿ ರತ್ನಾಗಿರಿಯ ಕಡೆ ಹೋದರು ಎಂದು ಬೇರೆಯವರಿಂದ ಕೇಳಿ ತಿಳಿದಿದ್ದೆ. ಪಂಜಿಮ್‌ನಲ್ಲಿ ಅವರನ್ನು ಕಂಡೆ ಒಮ್ಮೆ ಎಂದು ನಾನು ಊರಿಗೆ ಹೋಗಿದ್ದಾಗ ನಾರಾಯಣ ಯಾಜಿ ತಿಳಿಸಿದ್ದ. ಆ ದಿನ ನಾಟಕದಲ್ಲಿ ತಂದೆಯ ರೋಲ್ ಮಾಡಿದ್ದ ಆತ. ಇದನ್ನು ಹೇಳಿಯೇ ಐದು ವರ್ಷಗಳಾದರೂ ಕಳೆದುಹೋಗಿರಬಹುದು. ''ರಮಾಕಾಂತ್ ಜತೆ ರುಕ್ಮಿಣಿ ಇದ್ದಳೇನು'' ಎಂದು ಮೆತ್ತಗೆ ಕೇಳಿದ್ದೆ ನಾನು. ಆದರೆ ನಾನು ಹೀಗೆ ಕೇಳಿದ್ದನ್ನು ಆತ ಕೇಳಿಸಿಕೊಳ್ಳಲಿಲ್ಲವೇನೋ ಎಂಬಂತೆ ಆತ ಉತ್ತರವನ್ನು ನೀಡಲಿಲ್ಲ. ನಾನು ಮತ್ತೆ ಕೇಳುವ ಗೋಜಿಗೆ ಹೋಗಲಿಲ್ಲ.

ಈ ರುಕ್ಮಿಣಿ ನಮ್ಮೂರ ಕಡೆಯವಳೇ ಆಗಿದ್ದರೂ ಅವಳ ಬಂಧುಗಳೆಲ್ಲ ಮುಂಬೈ, ದೆಹಲಿ, ಸೂರತ್ ಮುಂತಾದ ಕಡೆ ಇದ್ದಿದ್ದರಿಂದ ರುಕ್ಮಿಣಿಯ ಕುರಿತು ತಿಳಿಯಲು ಊರಲ್ಲೂ ಸಾಧ್ಯವಾಗಿರಲಿಲ್ಲ. ನಮ್ಮ ನಮ್ಮ ನೆನಪುಗಳ ಉಮೇದುಗಳಲ್ಲಿ ಇವರೆಲ್ಲ ಮನದಾಳದಲ್ಲಿ ಬಂದು ಹರಳುಗಟ್ಟುವ ಸಂದರ್ಭಗಳಿವೆಯಾದರೂ ಇವರ ಕುರಿತು ಏನನ್ನೇ ಆದರೂ ತಿಳಿಯುವ ಅವಕಾಶಗಳೇ ಇಲ್ಲದಿರುವುದರಿಂದ ಮನದ ಅಂಗಳದಿಂದ ಕಳೆದೂ ಹೋಗುತ್ತಾರೆ. ಆದರೂ ರುಕ್ಮಿಣಿಯಂಥವಳು, ಪದ್ಮಿನಿಯಂಥವಳು ಮನದಿಂದ ದೂರವಾಗುತ್ತಾರೆ ಎಂಬುದೂ ಅಷ್ಟು ಸರಿ ಅಲ್ಲ. ಹೌದು, ಇದು ಅಷ್ಟು ಸರಿ ಅಲ್ಲ. ಆದರೂ ರುಕ್ಮಿಣಿ ಕಳೆದೇಹೋದಂತಿದ್ದವಳು ಇಂದು ಮತ್ತೆ ಮನವನ್ನು ಕಾಡಲಾರಂಭಿಸಿದ್ದಳು.

ಹೀಗೆ ಯೋಚಿಸುತ್ತ ಉಳಿದೆನಾದರೂ ರುಕ್ಮಿಣಿಯ ಕುರಿತಾಗಿ ಇವೆಲ್ಲ ಎಂಬುದನ್ನು ಗೌರಿಯ ಸುಳಿವಿಗೆ ಹತ್ತದಂತೆ ಉಳಿಸಿಕೊಂಡೆ. ಇದನ್ನು ತಿಳಿಸುವುದು ಮಾತ್ರ ತನ್ನ ಕರ್ತವ್ಯ ಎಂಬಂತೆ ಗೌರಿಯೂ ಮತ್ತೇನು ವಿಷಯಗಳನ್ನೂ ಸದ್ಯ ಎತ್ತಲಿಲ್ಲ ಮತ್ತೆ.

ಹೀಗೆ ರುಕ್ಮಿಣಿ ನಮ್ಮ ವಿಳಾಸವನ್ನು ಪಡೆದು ನಮ್ಮ ಮನೆ ಹುಡುಕಿಕೊಂಡು ಬಂದು ನಾವು ಸಿಗದೇ ವಾಪಸಾಗಿ ಹೋದ ಸಂಗತಿ ಕಳೆದು ಒಂದು ವಾರವೇ ಕಳೆದಿರಬೇಕು. ನಾನಿನ್ನೂ ಅದೇ ಆಗ ಆಫೀಸಿಗೆ ಬಂದು ನನ್ನ ಛೇಂಬರಿನಲ್ಲಿ ಕುಳಿತು ಕೆಲವು ತುರ್ತು ಫೈಲುಗಳತ್ತ ಕಣ್ಣಾಡಿಸತೊಡಗಿದ್ದೆ. ಆಗ ಯಾರೋ ಹೆಂಗಸು ಬಾಗಿಲು ತೆಗೆದು ಒಳ ಬರುತ್ತಿದ್ದಂತೆ ಕಂಡಿತು. ತಲೆ ಎತ್ತಿ ನೋಡಿದರೆ ಬಂದವಳು ರುಕ್ಮಿಣಿಯಾಗಿದ್ದಳು. ''ಅರೇ ರುಕ್ಮಿಣಿ ನೀವು'' ಎಂದು

ಆಶ್ಚರ್ಯದಿಂದ ಚೀರಿದ್ದೆ ನಾನು. "ಬನ್ನಿ, ಬನ್ನಿ, ಎಷ್ಟು ಅಪರೂಪ, ಏನು ಕತೆ, ಮನೆಯ ಕಡೆ ಬಂದಿದ್ದಿರಂತೆ, ಸಾರಿ ನಾವಿರಲಿಲ್ಲ ಅಂದು, ಹೇಗಿದ್ದೀರಿ? ಎಲ್ಲಿದ್ದೀರಿ? ರಮಾಕಾಂತ್ ಚೆನ್ನಾಗಿರುವರೇನು?" ಎಂದು ಒಂದೇ ಬಾರಿಗೆ ಹಲವು ಪ್ರಶ್ನೆಗಳನ್ನು ಕೇಳಿದ್ದೆ. ಡೆಲ್ಲಿಯಿಂದ ನಮ್ಮ ಚೀಫ್ ಎಂ.ಡಿ. ಬಂದಾಗಲೂ ನಾನು ಹಾಗೆ ನಿಂತು, ಆದರದಿಂದ, ತುಂಬು ನಗೆಯಿಂದ ಸ್ವಾಗತ ಕೋರುತ್ತಿರಲಿಲ್ಲ ಎಂದೇ ಹೇಳಬಹುದು. ನನಗೆ ತುಂಬ ಸಂತೋಷವೆನಿಸಿತ್ತು ಅವಳನ್ನು ಹಾಗೆ ಅನಿರೀಕ್ಷಿತವಾಗಿ ಕಂಡು.

ಆದರೆ ರುಕ್ಮಿಣಿಗೆ ನನ್ನ ಸಂತೋಷವನ್ನಾಗಲೀ, ಒಮ್ಮೆಗೇ ಕೇಳಿದ ಹಲವಾರು ಪ್ರಶ್ನೆಗಳನ್ನೇ ಆಗಲಿ ಗ್ರಹಿಸಿ ಸ್ಪಂದಿಸುವಷ್ಟು ನೆಮ್ಮದಿ ಹಾಗೂ ಉತ್ಸಾಹ ಇದ್ದಂತಿರಲಿಲ್ಲ. ಇದನ್ನು ನಾನು ಗ್ರಹಿಸುತ್ತಿದ್ದಂತೆ ಅವಳು ಅಳಲಿಕ್ಕೇ ಪ್ರಾರಂಭಿಸಿದ್ದಳು. ರುಕ್ಮಿಣಿ ಹೀಗೆ ಅಳಹತ್ತಿದ್ದು ಕಂಡು ಕಸಿವಿಸಿಯಾಯ್ತು.

"ಮಿಸ್ಟರ್ ಶಂಕರ, ಕ್ಷಮಿಸಿ. ನನ್ನ ನಿಯಂತ್ರಣವನ್ನೂ ಮೀರಿ ಹೀಗೆಲ್ಲ ವರ್ತಿಸುತ್ತಿರುವುದಕ್ಕೆ. ಕಡೇಪಕ್ಷ ಒಂದಿಷ್ಟು ಅತ್ತಾದರೂ ಸಮಾಧಾನ ಮಾಡಿಕೊಳ್ಳುವಷ್ಟು ದುರ್ಬಲತೆ ತೋರಿಸುತ್ತಿರುವುದಕ್ಕೆ ತಪ್ಪು ತಿಳಿಯಬೇಡಿ." ಹೀಗನ್ನುತ್ತ ಕೈಯೊಳಗಿನ ಕರ್ಚೀಫಿನಿಂದ ಬರುತ್ತಿದ್ದ ಬಿಕ್ಕನ್ನು ಬಾಯಿಗೊತ್ತಿ ತಡೆದಳು. ಆದರೂ ಕಣ್ಣಲ್ಲಿ ಜಿನುಗಿದ ನೀರು, ಕೆನ್ನೆ, ಗಲ್ಲ, ಕಣ್ಣ ಕೆಳ ಭಾಗಗಳೆಲ್ಲ ಕೆಂಪಾಗಿ ಕಂಪಿಸುತ್ತಿದ್ದವು. ಸಂದರ್ಭವನ್ನು ಒಮ್ಮೆ ನಿಭಾಯಿಸುವುದು ದುಸ್ತರವೆನಿಸಿತು.


ಮತ್ತೆ ಅವಳೇ ತುಸು ಸಮಯದ ನಂತರ ತನ್ನನ್ನು ತಾನೇ ಸುಧಾರಿಸಿಕೊಂಡು "ಮಿಸ್ಟರ್ ಶಂಕರ್, ನಾನು ನಿಮ್ಮ ಮನೆಗೇಕೆ ಬಂದಿದ್ದೆ... ಇದೀಗ ನಿಮ್ಮ ಆಫಿಸಿಗೂ ಏತಕ್ಕಾಗಿ ಬಂದೆ ಎಂಬುದೆಲ್ಲಾ ವಿವರಿಸಲು ನನಗೆ ಅಸಾಧ್ಯವೆನಿಸಿದೆ. ನಿಮ್ಮನ್ನು ನೋಡಬೇಕೆನಿಸಿತು. ಹಾಗಾಗಿ ಬಂದುಬಿಟ್ಟೆ. ತಪ್ಪಿಲ್ಲ ತಾನೆ?

ಕ್ಷಮಿಸಿ, ಈಗ ನಾನು ರಮಾಕಾಂತ್ ಜತೆಗೂ ಇಲ್ಲ. ಅವರೊಂದಿಗಿನ ನನ್ನ ಸಂಬಂಧ ಮುಗಿದುಹೋಗಿದೆ. ನಾನೀಗ ಡೈವೋರ್ಸಿ. ಕಾರಣಗಳನ್ನೆಲ್ಲ ಕೇಳಬೇಡಿ. ಪದ್ಮಿನಿ ನನ್ನ ಬಳಿ ಕೆಲವು ಸುಳ್ಳುಗಳನ್ನು ಹೇಳಿರದಿದ್ದರೆ ಇವೆಲ್ಲ ಹೀಗೆ ಇಷ್ಟು ದೂರದವರೆಗೆ ಮುಂದುವರಿಯುತ್ತಿರಲಿಲ್ಲವೋ ಏನೊ? ಗೊತ್ತಿಲ್ಲ... ಅದೇ ಪದ್ಮಿನಿ... ನಾಟಕದ ಪದ್ಮಿನಿ. ನಿಮ್ಮ ಹೀರೋಯಿನ್... ಇವಳಿಂದಾಗಿ ನನ್ನ ಇಡೀ ಬದುಕೇ ಹಾಳಾಗಿಹೋಯ್ತು.

ಹಾಗೆ ನೋಡಿದರೆ ಯಾರೂ ಯಾರ ಬದುಕನ್ನೂ ಹಾಳು ಮಾಡಲಾರರು. ಆದರೆ ನಾನು ಅವಳಿಂದ ನನ್ನ ಬದುಕನ್ನು ಹಾಳು ಮಾಡಿಸಿಕೊಂಡುಬಿಟ್ಟೆ. ಸರಿ, ಇರಲಿ ಬಿಡಿ ನಿಮಗೇಕೆ ಇವೆಲ್ಲ ಈ ಉಪದ್ರವ. ಕ್ಷಮಿಸಿ, ವಿವರಗಳನ್ನೆಲ್ಲ ಕೇಳಬೇಡಿ. ಅಂದು ನಿಮ್ಮ ಮನೆಯ ವಿಳಾಸ ಹುಡುಕಿಕೊಂಡು ನಿಮ್ಮ ಮನೆಗೆ ಬಂದಾಗ ನೀವು ಸಿಗದಿದ್ದುದೇ ಒಳ್ಳೆಯದಾಯ್ತೇನೊ? ನಿಮ್ಮ ಮನೆಯಲ್ಲಿ ಹೀಗೆಲ್ಲ ವಿವರವಾಗಿ ನನ್ನ ಅಳಲನ್ನು ನಿಮ್ಮ ಮುಂದೆ ತೆರೆದಿಡಲು ಸಾಧ್ಯವಾಗುತ್ತಿರಲಿಲ್ಲವೇನೊ?

ಹಾಗೆ ನಿಮ್ಮ ಮನೆಗೆ ನಾನು ಬಂದಾಗಲೂ ನಿಮಗೆ ರುಕ್ಮಿಣಿ ಎಂದರೆ ನೆನಪು ಬರುತ್ತದೋ ಇಲ್ಲವೋ ಎಂದುಕೊಂಡು ಮಿಸೆಸ್ ರಮಾಕಾಂತ್ ಬಂದಿದ್ದರು ಎಂದು ಹೇಳಿ ನಿಮ್ಮ ಮನೆಯೆದುರಿನ ಮುದುಕನ ಬಳಿ ಹೇಳಿ ಬಂದಿದ್ದೆ. ಇಷ್ಟು ತಿಳಿಸಿ ಅವರಿಗೆ ತಿಳಿಯುತ್ತೆ ಎಂದು ಕೂಡ ಹೇಳಿದೆ" ಎಂದಂದು ಜೋರಾಗಿ ನಿಟ್ಟುಸಿರು ಬಿಟ್ಟಳು. ಆದರೆ ಅವಳಿಗೆ ಹೇಳಬೇಕಾದುದನ್ನೆಲ್ಲ ಹೇಳಿ ಮುಗಿಸಿದ ನೆಮ್ಮದಿ ಇದ್ದಂತಿರಲಿಲ್ಲ. ಇನ್ನೂ ಹೇಳಬೇಕಾದುದು ತುಂಬಾ ಇದೆ ಎಂಬಂತೆ ಅವಳ ಮುಖಭಾವವಿತ್ತು.

ಅಷ್ಟರಲ್ಲಿ ಜವಾನ ಕಾಫಿ ತಂದಿದ್ದ. ರುಕ್ಮಿಣಿ ಮಾತನಾಡುತ್ತಿರುವಾಗಲೇ ಅವನಿಗೆ ಸನ್ನೆಯ ಮೂಲಕ ಕಾಫಿ ತರಲು ತಿಳಿಸಿದ್ದೆ. ನಾವು ಕಾಫಿ ಕುಡಿದೆವು. ತುಂಬಿದ ಮೌನವಿತ್ತು. ಗೋಡೆಯ ಗಡಿಯಾರದ ಪುಟ್ಟ ಶಬ್ದವೂ ತುಸು ಜೋರಾಗಿಯೇ ಕೇಳುತ್ತಿತ್ತು. ಒಟ್ಟಿನಲ್ಲಿ ನನಗೂ ಕೆಲ ಮಾತುಗಳನ್ನು ಆಡಬೇಕೆನಿಸುತ್ತಾ ಇರುವಾಗಲೇ ರುಕ್ಮಿಣಿ ಮತ್ತೆ ಮಾತಿಗೆ ಶುರು ಹಚ್ಚಿದಳು.



"ಆ ದಿನ ನೀವು ಪದ್ಮಿನಿ ಒಳಗಿದ್ದಾಳೆ ಎಂದು ತಿಳಿದು ಲೇಡೀಸ್ ಗ್ರೀನ್ ರೂಮಿನೊಳಗೆ ಬಂದುಬಿಟ್ಟಿರಿ ನೇರವಾಗಿ. ಓಹ್ ಇಲ್ಲಿ ಪದ್ಮಿನಿ ಇಲ್ಲ. ಇದ್ದವಳು ರುಕ್ಮಿಣಿ ಎಂದುಕೊಂಡು ಮುಜುಗರದಿಂದ ಜೋರಾಗಿ ಹೊರಗೆ ಓಡಿಯೂ ಬಿಟ್ಟಿರಿ. ಆ ದಿನ ನನಗೆ ನನ್ನ ಕುರಿತೇ ಬೇಸರವೆನಿಸಿತು. ಹಾಗಾದರೆ ಜಗತ್ತಿನಲ್ಲಿ ಪದ್ಮಿನಿಯೊಬ್ಬಳನ್ನು ಬಿಟ್ಟರೆ ಇತರ ಹುಡುಗಿಯರ ಮುಖ ಕೂಡ ನೋಡಬಾರದೇನು ಇವರು ಎಂದು ಮನಸ್ಸಿಗೆ ಪಿಚ್ಚೆನಿಸಿತ್ತು. ನಿಮಗೆ ಇಷ್ಟವಿರದ ಸಂಗತಿ ಎಂದು ನಿಖರವಾಗಿ ತಿಳಿದ ಮೇಲೆ, ಆಗ ಆ ಹೊತ್ತಿನಲ್ಲಿಯೇ ನಿರ್ಧರಿಸಿದೆ. ನಾನು ನನಗಾಗಿ ಹಾತೊರೆಯುತ್ತಿರುವ ರಮಾಕಾಂತರನ್ನೆ ಮದುವೆಯಾಗಿಬಿಡಬೇಕು ಎಂದು. ಅರ್ಧರ್ಧ ಬಟ್ಟೆ ತೊಟ್ಟಿದ್ದ ನನ್ನ ಎದುರಿನ ಕನ್ನಡಿಯಲ್ಲಿ ಮೂಡಿದ್ದ ನನ್ನ ಪ್ರತಿಬಿಂಬದ ಎದುರೇ ತಳೆದ ಈ ನಿರ್ಧಾರ ಕಡೆಗೂ ಕನ್ನಡಿಯ ಗಂಟಿನಂತೆ ಉಳಿದುಕೊಂಡುಬಿಟ್ಟಿತು. ಆ ನಾಟಕದ ದಿವಸದ ನನ್ನ ಅಂತಿಮ ನಿರ್ಧಾರ ಕೊನೆಗೂ ಸರಿಯಾಗಿರಲಿಲ್ಲ.

ಪದ್ಮಿನಿ ಕೂಡ ನಿಮಗೆ ಮೋಸ ಮಾಡಿ ಹೋಗಿಬಿಟ್ಟಳೇನೋ? ರಮಾಕಾಂತ್ ಕೂಡ ನನಗೆ ಮೋಸ ಮಾಡಿದರು. ನಾನು ನಿಮ್ಮ ಕುರಿತು, ಆ ದಿವಸ ನಾಟಕದಲ್ಲಿ ಮೂಡಿದ ನಿಮ್ಮ ಒಳ್ಳೆಯ ಅಭಿನಯದ ಕುರಿತು ತಿಳಿಸುವಾಗೆಲ್ಲ ಬಹುಶಃ, ನನ್ನ ಬಗೆಗೆ ತಪ್ಪು ತಿಳಿಯುತ್ತಲೇ ಉಳಿದರು ಅಂತ ಈಗ ಅನಿಸುತ್ತಿದೆ. ಅನಿಸುವುದೇನು ಮತ್ತೆ ಬೇರೆ ಕಾರಣಗಳು ಏನೂ ಇಲ್ಲ. ಕೈ ಹಿಡಿದ ಗಂಡನಿಗೆ ಹೆಂಡತಿಯ ಕುರಿತು ತಪ್ಪು ತಿಳಿಯುತ್ತ ಹೋಗುವುದೇ ಆದಮೇಲೆ ಮುಂದಿನದನ್ನು ನೀವು ಊಹಿಸಬಲ್ಲಿರಲ್ಲವೆ? ಸರಿ ನಮ್ಮಲ್ಲಿ ಹೊಂದಾಣಿಕೆ ತಪ್ಪಿತು. ಸಂಸಾರದಲ್ಲಿನ ದುಗುಡ, ತಳಮಳ, ಜಗಳ ಎಲ್ಲ ಪ್ರಾರಂಭವಾದವು.

ನನಗೀಗ ದೂರ ದೇಶವೊಂದರಲ್ಲಿ ಕೆಲಸ ಕೂಡ ಸಿಕ್ಕಿದೆ. ದೂರದ ದೇಶ ಯಾವುದು ಎಂಬುದನ್ನು ನಿಮಗೆ ತಿಳಿಸಬಾರದು ಎಂದು ಅಂದುಕೊಂಡಿದ್ದೇನೆ. ಎಲ್ಲವನ್ನೂ ಮರೆತುಬಿಡಲೆಂದೇ ಅಲ್ಲಿಗೆ ಹೋಗುವ ನಿರ್ಧಾರ ತಳೆದದ್ದು ಆಶ್ಚರ್ಯ ತರುವಂಥದೆ. ನೀವೇ ಹೇಳಿ, ಮರೆಯಲು ಹೇಗೆ ಸಾಧ್ಯ. ಮರೆಯಲಾಗದು ಎಂದು ಕಟ್ಟಕಡೆಯ ಅನುಭವವಾದಾಗ ಮತ್ತೆ ಸಂಪರ್ಕಿಸುತ್ತೇನೆ. ನಿಮ್ಮನ್ನು ಮತ್ತೆ ಕಾಣುತ್ತೇನೆ. ಬಹುಶಃ ಎಲ್ಲವನ್ನೂ ಒಗಟುಗಳಾಗಿಸುತ್ತಿರುವೆ ಎನಿಸುತ್ತಿದೆ.

ನಿಜಕ್ಕೂ ನಿಮ್ಮ ಅಭಿನಯ ನನ್ನಲ್ಲಿ ಹುಚ್ಚು ಹಿಡಿಸುತ್ತಿತ್ತು. ನೀವು ಅಭಿನಯ ಪ್ರಪಂಚಕ್ಕೇ ಸೇರಿಬಿಡಬೇಕಾಗಿತ್ತು. ನಿಮ್ಮೆದುರಿಗಿನ ಈ ಫೈಲುಗಳು, ನಿಮ್ಮ ಚೇರು, ಟೇಬಲ್ಲು, ಪೆನ್ನು, ಈ ನಿಮ್ಮ ಛೇಂಬರು ಎಂಬ ಎಲ್ಲ ಒಳ ವಲಯಗಳೂ ನಿಮ್ಮ ವ್ಯಕ್ತಿತ್ವವನ್ನು ಕಿರಿದಾಗಿಸಿವೆ ಎಂದು ಅನಿಸುತ್ತಿದೆ.

ನಾನು ನಿಮ್ಮನ್ನು ತುಂಬಾ ಮೆಚ್ಚಿಕೊಂಡಿದ್ದೆ. 'ನನ್ನ ಪ್ರೇಮದ ದಾರಿಗೆ ನೀನು ತಡೆಯಾಗಕೂಡದು' ಎಂದು ಪದ್ಮಿನಿ ಆ ದಿನಗಳಂದು ನನ್ನನ್ನು ಕೈ ಜೋಡಿಸಿ ಬೇಡಿಕೊಂಡಿದ್ದರಿಂದ ನನ್ನ ಭಾವನೆಯ ಕಡಲಿನ ಎಲ್ಲ ತೆರೆಗಳನ್ನೂ ಒಳಗೊಳಗೇ ಇಂಗಿಸಿಕೊಂಡು ನಿಂತ ನೀರಾಗಿ ಹೋದೆ ನಾನು. ಆದರೂ ನಿಮ್ಮನ್ನು ಕಂಡಾಗಲೆಲ್ಲ ನನ್ನ ನಿರ್ಧಾರದ ತಳಹದಿಯೆಲ್ಲ ಕುಸಿದು ಕಷ್ಟಕರ ಹೊಯ್ದಾಟದಲ್ಲಿ ತುಂಬಿಕೊಂಡಿರುತ್ತಿದ್ದೆ.

ಆ ದಿವಸ ಗ್ರೀನ್ ರೂಮಿನವರೆಗೂ ಬಂದ ನೀವು ಇಲ್ಲಿ ಪದ್ಮಿನಿಯೇ ಇಲ್ಲ ಎಂದು ತಿಳಿದ ಮೇಲೆ ನನ್ನನ್ನು ಒಂದೂ ಮಾತು ಆಡಿಸದೇ ದುಡು ದುಡು ಹೊರಟುಹೋದಾಗ ಎಷ್ಟು ನೊಂದುಕೊಂಡೆ ಎಂದರೆ... ಬಿಡಿ ಅವೆಲ್ಲ ಬೇಡ ಈಗ. ಅಭಿಮಾನ ಪಟ್ಟುಕೊಂಡ ನನ್ನ ದೇಹದ ಎಲ್ಲ ಅಂಗಾಂಗಗಳೂ ಈ

ಕನ್ನಡಿಯ ಎದುರು ನಿರ್ಜೀವದಿಂದ ತುಂಬಿಕೊಂಡು ಜೀವರಹಿತ ಎನಿಸಿದವು. ಕನ್ನಡಿಯನ್ನೇ ಒಡೆದು ಆ ಕನ್ನಡಿಯ ತುಂಡುಗಳಿಂದ ಮೈಯನ್ನೆಲ್ಲ ಪರಚಿಕೊಂಡು ಸಾಯೋಣ ಎಂದೂ ಅನಿಸಿತ್ತು. ಆದರೆ ಆ ಕ್ಷಣವೇ ಒಂದು ಅಚಲ ನಿರ್ಧಾರವನ್ನೂ ತಳೆದೆ. ಅದು ರಮಾಕಾಂತ್ ಹೆಜ್ಜೆಗಳನ್ನು ಅನುಸರಿಸಬೇಕು ಎಂದಾಗಿತ್ತು. ನನ್ನೊಡನೆ ಪ್ರೀತಿಗಾಗಿ ಹಾತೊರೆಯುತ್ತಿದ್ದ ರಮಾಕಾಂತ್‌ಗೆ ನಾನು ದಕ್ಕಿಕೊಂಡದ್ದು ಹೀಗೆ.

ಹೌದು... ಆದರೆ ಪದ್ಮಿನಿ ಯಾಕೆ ನಿಮ್ಮಿಂದ ದೂರ ಸರಿದಳು. ನಿಮ್ಮ ಮನೆಯವರ ಹೆಸರು, ಅದು ಗೌರಿ ಎಂದು ಆ ಮುದುಕ ಹೇಳಿದ. ಅವಳು, ಆ ನಾಟಕದ ಪದ್ಮಿನಿ ಈಗ ಯಾರ ಜತೆಗಿದ್ದಾಳೆ? ಎಲ್ಲಿದ್ದಾಳೆ? ನನ್ನನ್ನೂ ನಿಮ್ಮ ದಾರಿಗೆ ಬರಲು ಬಿಡದೆ, ತಾನೂ ಪೂರ್ತಿ ನಿಮಗೆ ಸಂದಾಯವಾಗದೆ ಯಾರ ಹಿಂದೆ ಓಡಿಹೋದಳು? ಈ ರಮಾಕಾಂತ್, ಪದ್ಮಿನಿ ಇಂಥವರೆಲ್ಲ ನಿಜಕ್ಕೂ ವಿಷ ಜಂತುಗಳು. ತಮ್ಮ ತಮ್ಮ ಮನಸ್ಸುಗಳನ್ನೇ ವಂಚಿಸಿಕೊಂಡು ಸುಖವಾಗಿ ಬದುಕುವುದಕ್ಕೆ ಇವರಿಗೆಲ್ಲ ಸಿಗುವ ಚೈತನ್ಯದ ದಾರಿಯಾದರೂ ಯಾವುದು? ಇವರೆಲ್ಲ ಮನುಷ್ಯರಲ್ಲ... ರಾಕ್ಷಸರು...'' ಎಂದು ಗಳಗಳ ಅತ್ತುಬಿಟ್ಟಳು.

''ರುಕ್ಮಿಣಿ, ನೀವು ಅಳಬಾರದು. ಶಾಂತವಾಗಿರಿ ನೀವು ..'' ಎಂದು ನಾನು ಹೇಳ ಹೊರಟಂತೆ ಥಟ್ಟನೆ ಮತ್ತೊಂದು ಪ್ರಶ್ನೆ ಹಾಕಿದ್ದಳು. ''ಶಂಕರ್, ನೀವು ಸುಖವಾಗಿದ್ದೀರಾ...?''

ಇದು ಉತ್ತರಿಸಲಾಗದ ಪ್ರಶ್ನೆ. ಆದರೆ ಅವಳು ಉತ್ತರಕ್ಕಾಗಿ ಕಾಯಲೂ ಇಲ್ಲ. ಅಳುವನ್ನು ನಿಲ್ಲಿಸಿ ಎದ್ದುನಿಂತಳು. ''ಶಂಕರ್, ನಾನು ಸಂಜೆಯ ಫ್ಲೈಟ್‌ನಲ್ಲೇ ಮುಂಬೈಗೆ ಹೋಗಬೇಕು. ನಾನು ಅಂದುಕೊಂಡಂತೆ ಇದು ನಿಮ್ಮ ಜತೆಗಿನ ಕೊನೆಯ ಭೇಟಿ. ಆದರೆ ಅದು ಹಾಗಾಗದಿರಲಿ ಎಂದೇ ಆಶಿಸುತ್ತೇನೆ'' ಎಂದನ್ನುತ್ತ ಬಿರುಗಾಳಿಯಂತೆ ಹೊರಟುಹೋದಳು.

ಅಕಾಲದ ಒಂದು ದೊಡ್ಡ ಮಳೆ ಥಟ್ಟನೆ ನಿಂತಂತಾಯಿತು. ಅವಳ ಹಿಂದೆಯೇ ನಾನೂ ಅವಳನ್ನು ಬೀಳ್ಕೊಡಲೆಂದೋ, ಇನ್ನೂ ಏನನ್ನೋ ಎಲ್ಲ ಕೇಳಬೇಕೆಂದೋ ಅವಳನ್ನು ವೇಗದಿಂದ ಅನುಸರಿಸಿದೆನಾದರೂ ಅವಳ ವೇಗ ನನ್ನ ವೇಗವನ್ನು ಮೀರಿಸಿತ್ತು. ನನ್ನ ಚಲನವಲನಗಳಿಂದಾಗಿ ಏನೋ ನಡೆಯಿತೆಂಬುದು ಆಫೀಸಿನಲ್ಲೂ ಯಾರ ಗಮನಕ್ಕೆ ಬರಬಾರದೆಂಬುದು ನನ್ನ ವೇಗವನ್ನು ನಿಯಂತ್ರಿಸಲು ಮತ್ತೊಂದು ಕಾರಣವಿದ್ದಿರಬಹುದು. ಯಾವ ಅನುಮಾನಗಳಿಗೆಡೆ ಇರದಂತೆ ಅವಳನ್ನು ಅನುಸರಿಸಿದೆನಾದರೂ ನನ್ನ ಆಫೀಸಿನ ಮುಂಭಾಗದವರೆಗೆ ನಾನು ಬರುತ್ತಿರುವಂತೆಯೇ ಅವಳು ಆಟೋ ಒಂದರಲ್ಲಿ ಒಳ ಸೇರಿ ಹೊರಟು ಹೋಗುತ್ತಿರುವುದನ್ನು ಕಂಡೆ. ನನ್ನ ಕಾರಿನಲ್ಲಿ ಅವಳನ್ನು ಹಿಂಬಾಲಿಸಲೇ ಎಂದನಿಸಿತಾದರೂ ಹಾಗೆ ಮಾಡುವಷ್ಟರಲ್ಲಿ ಅವಳು ಎಲ್ಲೆಲ್ಲಿಯ ದಾರಿಗಳನ್ನು ಸೀಳಿಕೊಂಡು ಹೋಗತೊಡಗುವಳೋ ಎಂಬುದನ್ನು ತಿಳಿಯಲಾಗದು ಎಂದನಿಸಿ ನನ್ನ ಮನಸ್ಸನ್ನು ಅಷ್ಟರ ಮಟ್ಟಿಗೆ ತಡೆದುಕೊಂಡೆ.

ತಿರುಗಿ ನನ್ನ ಛೇಂಬರಿಗೆ ಬಂದಾಗ ಅವಳು ತನ್ನ ಕರ್ಚೀಫೊಂದನ್ನು ಬಿಟ್ಟು ಹೋದದ್ದು ನನ್ನ ಗಮನಕ್ಕೆ ಬಂತು. ಅಳು ಬಂದಾಗ ತಡೆದ, ಕಣ್ಣೀರು ಒರೆಸಿಕೊಂಡ ಕರ್ಚೀಫಿನಂತಿರಲಿಲ್ಲ ಅದು. ಹೌದು ಅದನ್ನು ಸ್ಪರ್ಶಿಸಿದೆ. ಗರಿಮುರಿಯಾಗಿತ್ತು. ಬಹುಶಃ ಬೇಕೆಂತಾನೇ ಬಿಟ್ಟುಹೋದಳು. ಮತ್ತೆ ಭೇಟಿಯಾಗಲಾರೆ ಎಂದಳು. ಆದರೆ ಹಾಗಾಗದಿರಲಿ ಎಂದೂ ಅಂದಳು. ಯಾರಿಗೋ ಕೇಳಬೇಕಾದ ಕೆಲವು ಪ್ರಶ್ನೆಗಳನ್ನು ನನಗೆ ಕೇಳಿ ಹೋದಳೇನೊ? ನನಗಾಗಿಯೇ ಕೇಳಬೇಕಿದ್ದ ಪ್ರಶ್ನೆಗಳನ್ನು ಬಹುಶಃ ಪದ್ಮಿನಿಗೆ ಕೇಳಿದಳೇನೊ?

ಕೊನೆಯದಾಗಿ ನನಗೆಂದೇ ಕೇಳಿದ ಪ್ರಶ್ನೆ 'ಶಂಕರ್ ನೀವು ಸುಖವಾಗಿದ್ದೀರಾ?' ಎಂದು. ಆದರೆ ಪ್ರಶ್ನೆಗೊಂದು ಉತ್ತರವನ್ನು ಕೇಳಿಸಿಕೊಳ್ಳಬೇಕು ಎಂಬ ವ್ಯವಧಾನವನ್ನೂ ತೋರದೆ ಹೊರಟುಹೋದಳು. ಹೊರಟುಹೋದ ರಭಸದ ಗಾಳಿಯ ಅಬ್ಬರ ನನ್ನ ಛೇಂಬರಿನಲ್ಲಿ ಎಷ್ಟೋ ಹೊತ್ತಿನ ತನಕ ಸುಳಿಸುಳಿಯಾಗಿ ತಿರುಗಿಕೊಂಡಂತೆ ಭಾಸವಾಗುತ್ತಿತ್ತು. ಪೂರ್‌ಚ್ಯಾಪ್. ಪೂರ್ ಸೆಂಟಿಮೆಂಟ್ಸ್... ಪೂರ್ ಗರ್ಲ್... ಎಂದು ರುಕ್ಮಿಣಿಯ ಕುರಿತು ಅನಿಸಿತಾದರೂ, ಅವಳು ಬಿಟ್ಟುಹೋದ ಕರ್ಚೀಫಿನಲ್ಲಿ ಜೀವನವು ನನಗೆ ದಕ್ಕಿಸಲು ಸಾಧ್ಯವಾಗದ ಸುಗಂಧ ಒಂದು ಇದೆ ಎಂದನಿಸಿ ನನ್ನ ಕೋಟಿನ ಕಿಸೆಯೊಳಗೆ ಸೇರಿಸಿಕೊಂಡಿದ್ದೆ ಅದನ್ನು.

ಎಲ್ಲವೂ ಇನ್ನೊಂದು ನಾಟಕದಂತೆಯೇ ನಡೆಯಿತು. ಈ ನಾಟಕದಲ್ಲಿ ಕೂಡ ರುಕ್ಮಿಣಿ ಚೆನ್ನಾಗಿ ಅಭಿನಯಿಸಲಿಲ್ಲವೇನೋ? ಅಥವಾ ಹಾಗೆ ತಿಳಿಯುವುದೇ ಮಹಾ ದುರಂತದಂತೆ ಕಂಡಿತು. ಪದ್ಮಿನಿಯ ಕುರಿತು ಕೆಲವನ್ನೆ ತಿಳಿಸಿದಳು. ನಾನು ತಿಳಿಸಲೇಬೇಕಾದುದನ್ನು ತಿಳಿಯದೇ ಹೊರಟು ಹೋದಳು. ನನ್ನನ್ನೂ ಹೊಸ ಚಿಂತೆಗೆ ಹಚ್ಚಿ ಹೋದಳು. ಅಲ್ಲಿ ನಾಟಕದ ಗ್ರೀನ್ ರೂಮಿನಲ್ಲಿ ಕೇವಲ ಕ್ಷಣದೊಳಗಿನ ಕೇವಲ ಚಿಕ್ಕ ಕಾಲಾವಕಾಶದಲ್ಲಿ ಕಂಡುಕೊಂಡ ಅವಳ ದೇಹದ ಉನ್ಮಾದ ಅಂಗಗಳೆಲ್ಲ ನಿನಗೆ ಸೇರಿದ ಸರಕಾಗಿದ್ದವು ಎಂಬುದನ್ನು ತಿಳಿಸಲಷ್ಟೇ ಬಂದು ಹೋದಳು. ಪದ್ಮಿನಿ, ನನ್ನ ಮತ್ತು ರುಕ್ಮಿಣಿಯ ಎಲ್ಲ ದಾರಿಗಳ ಮೇಲೆ ತನ್ನ ನೆರಳಿನ ಗ್ರಹಣಗಳನ್ನು ಒದಗಿಸಿದಳೆಂಬುದು ತುಂಬಾ ಮಾರ್ಮಿಕವಾದದ್ದು.

ರಮಾಕಾಂತ್ ಕೂಡ, ತನ್ನ ಪಾಲಿಗೆ ದೊರಕಲಾರದ ನಿಧಿಯೊಂದು ನಿರಾಯಾಸವಾಗಿ ದಕ್ಕಿದಾಗಲೂ ಅದನ್ನು ಹೀಗೆ ಸ್ವೀಕರಿಸಲಾಗದೇ ಉಳಿದುಕೊಂಡ. ತಿಳಿದಿರದ ಕಥೆಯ ಬೇರುಗಳು ಹೀಗೆ ಹೇಗೆ ಎನ್ನುತ್ತ ನನ್ನ ಜೀವನದ ಸಂಗಾತಿ ಗೌರಿ, ಪದ್ಮಿನಿಯ ಕುರಿತಾದ ನನ್ನ ಕತೆಗಳನ್ನು ಹೇಳುತ್ತಲೇ ಇರದಿರುವುದನ್ನು ಇದೆಯೆಂಬಂತೆ ಹೇಳುತ್ತಿರುತ್ತಾಳೆ. ಪಾಪ ಅವಳಿಗೇನು ಗೊತ್ತು? ನಾನೇ ತಿಳಿಯದೇ ಉಳಿದ ನನ್ನ ಕಥೆಯ ಧಾಟಿಯನ್ನು ಅವಳು ಗ್ರಹಿಸುವುದು ಹೇಗೆ ಸಾಧ್ಯ?

ಇಲ್ಲ ಪದ್ಮಿನಿಯನ್ನೂ ಮತ್ತೆ ಸಂಧಿಸಬೇಕು. ರುಕ್ಮಿಣಿಯನ್ನೂ ಮತ್ತೆ ಸಂಧಿಸಬೇಕು. ಇನ್ನೂ ತಿಳಿಯದೇ ಉಳಿದ ಕೆಲವು ಸಂಗತಿಗಳನ್ನು ನಾನು ತಿಳಿಯಲೇಬೇಕು ಎಂದು ಅನ್ನಿಸುತ್ತಲೇ ಇದೆ.



ತಾನು ಬಂದವಳು ರುಕ್ಮಿಣಿ ಅಂತ ನೇರವಾಗಿ ಹೇಳದೆ, ತಾನು ಮಿಸೆಸ್ ರಮಾಕಾಂತ್ ಎಂದು ಹೇಳಲು ಹೇಳಿದ್ದರಲ್ಲಿ ತಾನು ರಮಾಕಾಂತನನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತೇನೆ ನಂಬುವಷ್ಟು ಕಾಣಿಸಲು ಇದ್ದೀತೆ ಎಂದು ಅನಿಸದಿರಲಿಲ್ಲ. ಗ್ರೀನ್ ರೂಮಿಗೆ ಗೂಳಿಯಂತೆ ನುಗ್ಗಿದ್ದ ಶಂಕರನನ್ನು ಕುರಿತಾದ ಮೋಹಗ್ರಸ್ತ ಎಳೆಯನ್ನು ಇನ್ನೂ ಎತ್ತಿ ತೋರಿಸುತ್ತಿರಬಹುದೆ ರುಕ್ಮಿಣಿ ಎಂದೇ ಅನಿಸಿತು.

ಮಹಾಬಲಮೂರ್ತಿ ಕೊಡ್ಲೆಕೆರೆ.



ಕವಿ ಸಮಯ



ಕೊರ್ರ ಪರಶ್ಯಾ

ಸರಜೂ ಕಾಟ್ಕರ್

ಕೊರ್ರ ಪರಶ್ಯಾ ಕಳ್ಳಭಟ್ಟಿ ಕುಡಿದು ಸತ್ತ
ಎಷ್ಟು ವರ್ಷಗಳಾಯಿತು ಆತ ಸತ್ತು?
ನಿನ್ನೆ ಮೊನ್ನೆ ಅಥವಾ ಇಂದು?
ಅಥವಾ ಕೆಲವೇ ಕ್ಷಣಗಳ ಹಿಂದೆ?

ಪರಶ್ಯಾ ದನಗಳ ಜೊತೆಗೆ
ದನಗಳಂತೆಯೇ ಇದ್ದ
ಹೆಂಡತಿಗೆ ಬಾರುಕೋಲಿನಿಂದ ಹೊಡೆಯುತ್ತಿದ್ದ
ಅವ್ವನಿಗೆ ಹಲ್ಕಟ್ ಹಲ್ಕಟ್ ಬೈಯುತ್ತಿದ್ದ

ಪರಶ್ಯಾ ಸತ್ತ ಎರಡು ದಿನ
ಹೆಂಡತಿ ಅತ್ತಳು ಅವ್ವ ಅತ್ತಳು
ಹಸಿವು ಹೆಚ್ಚಾದಾಗ ಇಬ್ಬರೂ
ಕೆಲಸಕ್ಕೆ ಹೊರಟರು; ಎಲ್ಲರೂ
ಪರಶ್ಯಾನನ್ನು ಮರೆತುಬಿಟ್ಟರು

ಹೋಳಿ ಹುಣ್ಣಿಮೆ ಮೊಹರಂನಲ್ಲಿ ಪರಶ್ಯಾ
ಹುಲಿಯಾಗಿ ಊರೆಲ್ಲ ಬೆಚ್ಚುವಂತೆ ಗರ್ಜಿಸುತ್ತಿದ್ದ
ಕೃಷ್ಣಾಷ್ಟಮಿಯಲ್ಲಿ ಮೊಸರಿನ ಗಡಿಗೆಯನ್ನು
ಒಂದೇ ಕಲ್ಲಿನಲ್ಲಿ ಬೀಳಿಸುತ್ತಿದ್ದ
ಜಾತ್ರೆಯಲ್ಲಿ ಕರಡಿಯಾಗಿ ಪರಶ್ಯಾ ಹುಡುಗರಿಗೆಲ್ಲ
ಮನರಂಜಿಸುತ್ತಿದ್ದ
ಪ್ರತಿವರ್ಷ ತಪ್ಪದೆ ದೇವರ ಪಲ್ಲಕ್ಕಿ ಹೊರುತ್ತಿದ್ದ


ಸೂರ್ಯ ಇಂದೂ ಹುಟ್ಟಿದ್ದಾನೆ
ಮೇಯಲು ದನಗಳು ಕಾಡಿಗೆ ಹೋಗಿವೆ
ಪರಶ್ಯಾನ ಸ್ಥಳದಲ್ಲಿ ಕಲ್ಯಾ ಬಂದಿದ್ದಾನೆ

ಪೂರ್ಣಿಮೆಯ ಎದೆಯೊಳಗೆ

ಫಾಲ್ಗುಣ ಗೌಡ

ಅವಳು ಹರಡಿರುವ ಬೆಳಕು
ಕಾಡ ಕತ್ತಲೆಯಲ್ಲೂ
ವ್ಯರ್ಥವಾಗಲಿಲ್ಲ
ತಂಬೆಲರ ದನಿಯೊಳಗೆ
ಅವಳೆದೆಯ ಹಾಲಬೆಳಕು
ಹರಡುವ ಪ್ರಶಾಂತ ಗಾಳಿಗೆ
ಮುಗ್ಧ ಪ್ರತಿಬಿಂಬ.
ನನ್ನೆದೆಯೊಳಗೆ ಮೊರೆವ
ಸಮುದ್ರ ಮತ್ತಷ್ಟು ಆರ್ದ್ರ.

ಬೆಳದಿಂಗಳ ಬಯಲಲ್ಲಿ
ನೋಡುತ್ತ ಅವಳ
ಎದೆಯಲ್ಲಿ ಮೊಳೆವ
ಪ್ರೀತಿಯ ಸಾಲುಗಳ ಕಂಡೆ
ಹಕ್ಕಿಯ ಹೊಟ್ಟೆಯೊಳಗಿನ
ಮೊಟ್ಟೆಸರದಂತೆ



ತೆಳ್ಳಗೆ ತಣ್ಣಗೆ

ನರೇಶ್ ಮಯ್ಯ


ನಾವೆಲ್ಲರೂ ಕೂಡಿ
ಒಂದು ಅದ್ಭುತ
ಸಮಷ್ಟಿ.
ಗೊಮ್ಮಟನಗಾಧತೆಗ್ಗೆದರಿ
ಅವನೆದುರು ಮೈ ಬಿಚ್ಚಲಾದೀತೇ?
ಅಂತರಂಗದ ಸುಪ್ತ ತೇಜ
ಅಂತೆಯೇ ಆಮೂಲಾಗ್ರ.
ನಿಂತ ನೀರ ನಿಚ್ಚಳತೆ ಖಂಡಿತಾ ಬೇಡ
ತೆಳ್ಳಗೆ, ತಣ್ಣಗೆ ಹರಿಯುವ ತೀರ್ಥದಲೇ
ಕಾಣಸಯ್ಯಾ ಇರವ.
ಅದೆ ಇರವು
ಅದೆ ಹರಿವು
ಅದೇ ಬಂಧ ಸಂಬಂಧಗಳೊಸಗೆ

ಕೊಲೆ

ಜೆ.ಪಿ. ಕುಸುಮ

ಎಷ್ಟೋ ವರುಷಗಳ ಬಳಿಕ
ಮನೆಯೊಳಗೆ ಕಾಲಿಟ್ಟಳು
ಗೆಳತಿ.
ಹಸಿದಿದ್ದಳು.
ವಿಶ್ವಾಸದ ಚಾಪೆಯಲಿ ಕುಳ್ಳಿರಿಸಿ
ಬಣ್ಣಬಣ್ಣದ ಸಂತೋಷ
ಹೊರನೂಕಿ ಯಾರಿಗೂ
ತಿಳಿಯದಂತೆ
ಉರುಲು ಹಾಕಿ
ಬಿಗಿದುಕೊಂಡು ನರಳಿದ
ಒಂದಿಷ್ಟು ಬೇನೆ
ಬಡಿಸಿದೆ ಬಟ್ಟಲಲ್ಲಿ.
ಗೋಡೆ ಒಡೆದು
ಬಯಲಾದಳು.
ನಾನು ಹಕ್ಕಿಯಾಗಿ ಗರಿಬಿಚ್ಚಿದ್ದೆ,
ಅವಳು ನೀರಾದಳು
ನಾನು ಮೀನಾಗಿದ್ದೆ,
ಅಲೆಗಳ ನಾಟ್ಯಕ್ಕೆ ಮರುಳಾಗಿ
ಅವಳ ಒಡಲ ಕಡಲಿಗೆ
ಧುಮುಕಿದೆ.

ಹೀಗೆ ಎಷ್ಟೋ ವರುಷಗಳ ಬಳಿಕ
ಒಂದು ಭ್ರಮೆಯ ಕೊಲೆಯನ್ನು
ಇಬ್ಬರೂ ಮಾಡಿದೆವು.










ಕಳೆದದ್ದು...

ಪ್ರಸನ್ನ




ನಿನ್ನ ಹೆಂಗಸಿನ ಕಡೆ ನೀನು
ನಿನ್ನ ಸಂಗಡಲೆ ನಾನು
ಮೀನು ಹಿಡಿವಾಗ
ಸಹಜ ಆಕರ್ಷಣೆಗೊಳಗಾಗಿ
ಇಡೀ ಸಂಜೆ ಮುಜುಗರವಾಗಿ ಕಳೆದೆನು

ಮೃದು ಮಧುರ ಸ್ವರವಾಗಿ
ಉಲಿದ ಮಹಿಳೆಗೂ ಅದೇ ಸಮಸ್ಯೆ
ಆಕೆಗೂ ಆಗಿ-ಕ್ಷಮಿಸು
ಅಸಾಮಾನ್ಯ ಸಭ್ಯೆ ಆಕೆ-
ಮುಜುಗರ ಪಟ್ಟೇ ಕಳೆದಳು
ಇಡೀ ಸಂಜೆ
ನನ್ನ ನಿನ್ನ ಸಹಿತವಾಗಿ



ಆಘ್ರಾಣಿತ

ಶ್ಯಾಮಸುಂದರ ಬಿದರಕುಂದಿ



ಅಂಗಳದೊಳೊಂದು ಹೂವು
ಬಿದ್ದಿತ್ತು ನಿನ್ನೆ ಸಂಜೆ.

ಯಾರ ಮುಡಿಯಿಂದ ಉದುರಿತೋ
ಜಡೆಯಿಂದ ಜಾರಿತೋ-
ಮೂಸಲಿಲ್ಲ, ಎತ್ತಿ
ಕಿಸೆಯೊಳಿಟ್ಟೆ.

ಆ ಹೂವು ಈ ಬೆಳಗು
ಪಕಳೆ ಪಕಳೆ
ಕಿಸೆಯ ಹತ್ತಿರದ ಎದೆ ತುಂಬ
ನರುಗಂಪು.

ಬಾಡಲಾಗದ ಹೂವು
ಅರಳಿರಬೇಕು ಇರುಳಿಡೀ
ನೆನಪ ಕಂಪಿನಲಿ
ಕನಸೂ ಕಂಡಿರಬೇಕು
ಸುವಾಸನೆಯ ಜೊಂಪಿನಲಿ

ಇರುಳ ಹಾಡುಗಾರ

ಎಚ್. ಶೋಭಾ

ಹೊತ್ತು ಮುಳುಗಿ ಕತ್ತಲಾಗುತ್ತಿದ್ದಂತೆ
ಹೊತ್ತಿಕೊಳ್ಳುತ್ತವೆ ಅವನಲ್ಲಿ ಹಾಡುಗಳು
ದಪ್ಪ ದಪ್ಪ ಹೊತ್ತಿಗೆ ಬರೆದ ಕವಿಯಲ್ಲ ಅವ
ಆದರೂ ಮೂಡುತ್ತವೆ ಅವನಲ್ಲಿ ಕವನಗಳು.

ಅವ ಬೀದಿಯಲ್ಲಿ ಹೋಗುತ್ತಿದ್ದಾನೆಂದರೆ
ಅದು ಮತ್ತೇನಲ್ಲ; ಹಾಡಿನದೇ ಸಂಚಾರ
ಹಾಗಂತ ತಂಬೂರಿಯ ದಾಸನಲ್ಲ
ದಿನದ ಬದುಕಿಗದು ಪದಗಳ ಸಾಕಾರ.

ಅವನ ಹಾಡಿಗೆ ರಾಗ-ತಾಳದ ಹಂಗಿಲ್ಲ
ಆದರೆ ಹರಿಯಬಿಟ್ಟಿರುತ್ತಾನೆ ಅನುರಾಗವನು
ಸಂಗೀತವದೆನ್ನಲು ಗಾಯಕನಲ್ಲ ಅವ,
ಆದರೂ ಬೆಂದ ಮನಕೆ ತಂಪ ನೀಡುವನು.

36ನೆ ವಾರ್ಡಿಂದ ಕಂಡಿದ್ದು


ಆರ್. ಪವಿತ್ರ ಪ್ರಿಯಭಾಷಿಣಿ

ಆಸ್ಪತ್ರೆಯ ಚುಚ್ಚು
ಕಂಬಗಳ ತುದಿ ಹಿಂದೆ
ಅವಿತ ಸೂರ್ಯನ ಹಾಸು,
ಕಾರ್ತಿಕದ ಮಿಣಿ ಮಿಣಿ
ದೀಪಗಳ ಇಲ್ಲಿ
ಕದ್ದು ತಂದಂತಿದೆ

ಎಳನೀರು, ಕಿತ್ತಳೆ,
ಗ್ಲುಕೋಸ್ ಒಯ್ಯುವ
ನಿತ್ರಾಣದ ಕೈಗಳು
ಮೇಟ್ರನ್‌ಗಳ ಕಣ್ತಪ್ಪಿಸಿ
ಊಟಕ್ಕೆ ಕೂತ ಜನರು
ಗಿಜಿಗುಟ್ಟುವ ಮೆಟ್ಟಿಲ ಸಂದಿಗಳು
ರೇಜಿಗೆ ತರುವ
ಕವಕವ ಸದ್ದು, ಗದ್ದಲ.
ಬಿಕೋ ಅನ್ನುವ ಇರುಳಲಿ
ಕಿರುಗುಟ್ಟುವ ಆಕ್ಸಿಜನ್ ಒತ್ತು
ಎಲ್ಲವ ಮೊಗೆದು ನೋಡುವ
ಮಗಳು.

ನಡು ಹಗಲು, ಸಂಜೆಯ
ಉಲ್ಟಾ ಹೊಡೆಸುವ
ಡಿಸೆಂಬರ್ ಮಬ್ಬು ಬೆಳಕಲಿ
ಬ್ರೆಡ್ ತರಲು ಹೊರಬಂದ ಅಮ್ಮ,
ಅವಳಿಗೆ ಕಾಫಿ ಕೊಡಿಸಿ-
ಕಂಡರಿಯದ ಲೋಕದ
ಅಚ್ಚರಿ - ತುಣುಕ ಹಾಗೆ
ಬೆಳಕ ಹೀರಿದ
ಕಂಬಗಳ ಕಾಣಿಸುತಾಳೆ.


ಸಂಜೆ ರಂಗೋಲಿಯಚ್ಚು
ಮನಕ್ಕಿಳಿದು,
ತಾನೇ ಬಣ್ಣದುಂಬಿ
ಜೀವ ಪಡೆದ
ಕಲೆಯೇನೋ ಎನ್ನುವಂತೆ
ಮೌನವಾಗುತಾಳೆ ಮಗಳು.
ಇಬ್ಬರೂ ಬೆಳಕತ್ತಲಿರುವಾಗಲೆ,
ಕ್ಯಾಂಟೀನಿಗೆ ಬೆನ್ನು ಹಾಕಿ
ಒಳಕ್ಕೆ ನಡೆಯುತಾರೆ.











ಸುನೀತಾ ಶೆಟ್ಟಿ



ಎಂ. ಮಹ್ಮದ್ ಬಾಷ ಗೂಳ್ಯಂ



ಬಂದಗದ್ದೆ ರಾಧಾಕೃಷ್ಣ



ಸ. ರಘುನಾಥ



ಸುನೀತ. ಎಚ್.ಡಿ.

ನಮ್ಮೂರು

ಬಂದಗದ್ದೆ ರಾಧಾಕೃಷ್ಣ

ಕಟ್ಟಿಕೊಟ್ಟರೆ ನೀವು
ಕಟ್ಟಡಗಳ, ಬಹುಮಹಡಿ ಮಹಲುಗಳ
ಅದು ನಮ್ಮ ಮನೆಯಾಗದು
ಅಂಥ ಕೇರಿ ನಮ್ಮೂರಾಗದು ಕಣಾ

ಕಟ್ಟಡಗಳ ಕಟ್ಟಿಕೊಟ್ಟರೆ ಅದು ಊರಲ್ಲ
ತಾನಾಗಿ ಹುಟ್ಟಿ ಬೆಳೆಯೋದು
ಊರಿನ ಗುಣಾ
ಅದು ನಮ್ಮೂರು ಕಣಾ

ಹುಣಸೆ, ಮಾವು, ಪೇರಲೆ ಮರಗಳು
ದನ, ಎಮ್ಮೆ, ಎತ್ತು, ಕರುಗಳು
ಕಟ್ಟಿಕೊಡಲು ಬರದೋ
ನಮ್ಮೂರು ಬಿಟ್ಟ ಬೇರದು
ಬೇರೆಲ್ಲೂ ಇರದೋ.





ಮದುವೆ

ಸುನೀತಾ ಶೆಟ್ಟಿ

ಒಂದು ಮುಂಜಾವು,
ಕ್ಷಿತಿಜದಂಚಿನ ಬೆಳಕು
ನಿಬ್ಬಣದ ಸಂಭ್ರಮಕೆ
ಹಸೆಯ ಹಾಡಿಗೆ, ಪಲ್ಲಕ್ಕಿಗೆ
ಗೊಂಡೆ ಏರಿಸಿದೆ.
ಬಿಗಿದ ಕಮಾನು, ತೋರಣದ ನಡುವೆ
ಜೋಡಿ ಹೆಜ್ಜೆಗಳ
ರಂಗೋಲಿ.

ಇದು ದ್ವೈತವೂ ಅಲ್ಲ,
ಅದ್ವೈತವೂ ಅಲ್ಲ
ಸಿಂಗರದ ತೇರಿನರಮನೆಯೊಳಗೆ
ಮುಗ್ಧ ಬಿಂಬಗಳೆರಡು
ಹೂ ನಗು ಚೆಲ್ಲಿ ಹೊರಟ
ಚೈತ್ರಯಾತ್ರೆ!

ಕಣ್ಮರೆ

ಎಂ. ಮಹ್ಮದ್ ಬಾಷ ಗೂಳ್ಯಂ

ಆ ಕಿರಣ ಈ ಮರಣ
ಕೈಯಲ್ಲಿ ಹಿಡಿದು
ಕತ್ತೆಯ ಮೇಲೆ ಕೂತಿದ್ದೇನೆ!

ಕತ್ತಲ ಜೊತೆ ಗುದ್ದಾಡುವ ಕಣ್ಣು
ನೆಲಕ್ಕೊದ್ದು ನೆಗೆಯುವ ಶಕ್ತಿ,
ಯನ್ನನು ಹೊತ್ತ ಕತ್ತೆಗಿದೆ.

ಆದರೂ ಕತ್ತೆ ಕಿವಿಯಗಲಿಸುತ್ತಿಲ್ಲ
ಕೊಂಯ್‌ಕ್ಯಾ ಅಂತ ಕಿರುಚುತ್ತಿಲ್ಲ.
ಬಡಿದರೂ ಜಿವೆತರೂ
ಬಯಲು ಬಿಡುತ್ತಿಲ್ಲ.
ಕಾರಣ...????

ಮರಣದಿಕ್ಕೆಟ್ಟು ಓಡಿತೆ!
ಕಿರಣ ಕಣ್ಮರೆಯಾಯಿತೆ!



ಹಾಗೆ ತಪ್ಪಿಸಿಕೊಳ್ಳುವುದು

ಸುನೀತ ಎಚ್.ಡಿ.

ನೆನಪಿದೆ
ಚಿಕ್ಕಂದಿನಲ್ಲಿ ಜಾತ್ರೆಯಲ್ಲಿ
ತಪ್ಪಿಸಿಕೊಂಡು ಜಂಗುಳಿಯಲ್ಲಿ
ಕಳೆದಿದ್ದು

ಅಪ್ಪನ ಕಿರುಬೆರಳಿಗೆ ಕೈ ಸಿಗಿಸಿ
ಅಮ್ಮನ ಸೆರಗು ಹಿಡಿದು
ದೂರದ ನಿಯಾನ್ ಬಲ್ಬುಗಳ ಮಂದ
ತೊಟ್ಟಿಲಾಟ ಗಿರಗಿಟ್ಟಿ ನೋಡುತ್ತಾ
ಕುಣಿಕೆ ತಪ್ಪಿದ್ದು

ಋಷಿ ನೆರೆದ ಜಾತ್ರೆಗೆ
ತಾನೊಬ್ಬ ಒಂಟಿಯೆಂದು
ಕಂಡ ಮುಖವೆಲ್ಲ ಅಪ್ಪನದು
ಎಲ್ಲ ಹೂಮುಡಿ ಅಮ್ಮ ಅನ್ನಿಸಿ
ಭಯವಾಗಿ ಬಿಕ್ಕಳಿಸಿ ಅತ್ತಿದ್ದು

ತಿರುಗಿ ಸಿಕ್ಕ ನಗೆ ನೋವಿಗೆ
ಐಸ್‌ಕ್ಯಾಂಡಿ ಪೀಪಿ ಬೇಕಾ ಕೇಳಿದ್ದು
ತಿರುಗಿ ಸಿಕ್ಕ ನಿರಾಳಕ್ಕೆ
ಐಸ್‌ಕ್ಯಾಂಡಿ ಪೀಪಿ ಒಲ್ಲೆ ಅಂದದ್ದು

ನೆನಪಿದೆ. ವಿಸ್ಮಯ ತೋರುತ್ತದೆ
ಹಾಗೆ ಅಳುವುದೀಗ ಸಾಧ್ಯವಾಗುವುದಿಲ್ಲ
ಹಾಗೆ ತಪ್ಪಿಸಿಕೊಳ್ಳುವುದೂ
ಕಳೆದುಹೋಗುವುದೂ

ಹಾರಾಟ

ಸ. ರಘುನಾಥ

ನಾಯಿ ಬೊಗುಳಿತು ಅಂತ
ಬಾಗಿಲು ತೆರೆದ್ರೆ,

ಮಿಡತೆ ಹಾರಿ ಬಂತು
ಒಳಕ್ಕೆ.

ಏನಿದೆ ಅಂತ ಬಂತೊ
ತಿನ್ನೋದಿಕ್ಕೆ.

ಹೊರಗೆ ಬಿಡೋಣಾಂತ ಹೋದ್ರೆ, ಹಾರ್‍ತು
ಕೊಲ್ಲೋಕೆ ಬಂದೆ ಅನ್ನೋ ಹಾಗೆ

ಟ್ಯೂಬ್‌ಲೈಟ್ ಹತ್ತಿರಕ್ಕೆ ಹಾರಿದ್ದೇ
ಹಲ್ಲಿ ತುಂಬಿಸ್ಕೊಂತು ಹೊಟ್ಟೆ.



ಗಾಳಿಪಟ

ಬಿ.ಆರ್. ಲಕ್ಷ್ಮಣ ರಾವ್

ಪಡ್ಡೆ
ಗಾಳಿಪಟ
ಅವಳ ಮನೆಯ ಮಾಡಿನ ಮೇಲೆ
ನೀಲಿಯಲ್ಲಿ
ಆಡುತ್ತಿದೆ
ಹೆಡೆ ಬಿಚ್ಚಿದ ಮಿಡಿ ನಾಗರದಂತೆ
ತೂಗಿ ತೊನೆಯುತ್ತ
ಜೋಲಿ ಹೊಡೆಯುತ್ತ
ಬಾಲ ಓಲಾಡಿಸುತ್ತ
ಬಿಸಿಲ ಮಚ್ಚಿನ ಮೇಲೆ
ನಿಂತ
ಆ ಅವಳ
ನೋಟದ
ಪುಂಗಿಯ
ಗುಂಗಲ್ಲಿ.

ಹಠಾತ್ತಾಗಿ
ರಿವ್ವೆಂದು ಎರಗಿದೆ
ಹಾವಿಗೆ
ಕೇರಿಯ ಹದ್ದು
ತುಂಡಾಗಿದೆ
ಸೂತ್ರ.

ಛಿದ್ರ
ಗಾಳಿಪಟ
ಕುಸಿದು ನೆಲಕ್ಕೆ
ಈಗ
ಎಲ್ಲೋ ದೂರದ
ಯಾರದೋ ಮನೆಯ
ಅಂಗಳದಲ್ಲಿನ
ತೆಂಗಿನ ಮರಕ್ಕೆ
ಆಗಿದೆ
ಬಾಸಿಂಗ.



ಮೈ ಹುಣ್ಣಿಮೆ

ಹ.ರಾ. ಮಹೇಶ

ಮುಖ ಬಾನಿನ ಬಾಲ ಚಂದಿರ
ಮೆದಳು ಜೇಡದ ಬಲೆ,

ಜಡೆ ಉಡಿದ ಕಪ್ಪುನಾಗರ
ನುಲಿದ ನೇಣು ಹಗ್ಗ,

ತುಟಿ ಜೇನು ಅದ್ದಿದ ಕೆಂಪು ಹತ್ತಿ
ಪುಟಿಯುವ ಕಾರ್ಕೋಟಕ ವಿಷ,

ಬಳೆ ಪೋಣಿಸಿದ ಹೊಂಬಾಳೆ ಕೈ
ಮುಟ್ಟಿದರೆ ನಿಗುರಿದ ಮುಳ್ಳು,

ಗೆಜ್ಜೆ ಕಟ್ಟಿದ ದುಂಡುಗಾಲು
ತುಳಿವ ಹಾದಿಯು ಕಲ್ಲು,

ಬಳಸಿ ಬಂಧಿಸಲು ನವಿರ ಬಸಿರು
ಒಳಗೆ ಕತ್ತಲು ನೆತ್ತರು,

ನಡಿಗೆಯಲ್ಲಿ ಕೊಳದ ಹಂಸ
ನಡತೆಯಲ್ಲಿ ಸುರಪಾನ,

ಮೈ ಹುಣ್ಣಿಮೆ
ಮನಸ್ಸು ಅಮವಾಸ್ಯೆ.



ಆತ್ಮ-ಕಥೆ

ನಯನಾ ಕಾಶ್ಯಪ್

ಬಡಿಸು ಎಂದರು
ಉಪ್ಪೆ ಹಾಕಿರಲಿಲ್ಲ

ಹೊರಡು ಎಂದರು
ಸ್ನಾನವೆ ಆಗಿರಲಿಲ್ಲ

ಅಳುವೆಯ? ಎಂದರು
ಮೂಗು ತುಸು ಅರಳಿತ್ತು

ನಗು ಎಂದರು
ಕಣ್ಣ ಕೊನೆ ಹನಿದಿತ್ತು

ಮಾತಾಡು ಎಂದರು
ತುಟಿಯಂಚು ಹೊಲಿದಿತ್ತು

ಬಾಯಿ ಮುಚ್ಚೆಂದರು
ಹಲ್ಲೊಂದು ಇಣುಕಿತ್ತು

ಚಿತ್ರಿಸು ಎಂದರು
ಗೀಗೀಚು ಗೆರೆಯಾಯ್ತು

ಬರೆ ಎಂದರಾಗ
ಆತ್ಮ ಎಲ್ಲಡಗಿತು?

ಹುಡುಕುತ್ತ ಹೊರಟಳು



ದೇವರ ಜೊತೆ

ಚಿಂತಾಮಣಿ ಕೊಡ್ಲೆಕೆರೆ

ದೇವರು ಮಲಗಿದ್ದರೆ
ನಾನೇಕೆ ಅವನನ್ನು ಎಬ್ಬಿಸಲಿ?

ಅವನ ನಿದ್ದೆಯೊಳಗೇ ನಾನು
ಸದ್ದಿರದೆ ಹೋಗುವೆ
ಅವನ ಕನಸುಗಳ ನೋಡುವೆ
ಸಾಕಾದರೆ
ನಾನೂ ನಿದ್ದೆ ಮಾಡುವೆ

ಬೆಳಗಾಗುವುದು
ದೇವರು ಏಳುವನು
ಆಗ
ನಾನು ಏಳುವೆನು

ಅವನ ಜತೆಯಲ್ಲೇ ಹಲ್ಲುಜ್ಜಿ
ಮುಖತೊಳೆದು
ಅವನು ಕಿರೀಟ, ತ್ರಿಶೂಲ, ಹಾವು, ಹೂವು
ಧರಿಸುವಾಗಲೇ
ನಾನೂ ಅಂಗಿ ಪ್ಯಾಂಟ್ ಧರಿಸುವೆನು


ನನ್ನ ಆಫೀಸಿಗೆ ನಾನು ನಡೆದುಕೊಂಡು
ದೇವರ ಆಫೀಸಿಗೆ ದೇವರು
ಹಾರಿಕೊಂಡು.














ಶೇಷ ಪ್ರಶ್ನೆ

ಶರತ್ ಕಲ್ಕೋಡ್

''ಕವಿತೆ ಎಂದರೇನೆಂದು ಹೇಳಬಲ್ಲಿರಾ ನೀವು?''
ಪ್ರಶ್ನಿಸಿದರು ಕವಿಯೊಬ್ಬರು ತುಂಬು ಸಭೆಯೊಂದನು
ಫಕ್ಕನೆ ಎದುರಾದ ಪ್ರಶ್ನೆಗೆ ನೆರೆದವರೆಲ್ಲ ತಬ್ಬಿಬ್ಬು
ತಡವರಿಸಿ ತಡಕಾಡಿ ಉತ್ತರಿಸಿದರು ಕೆಲವರು

ಕವಿತೆ ಎಂದರೆ ಪದ್ಯ ಅಷ್ಟೇ ಅದು?
ಹೌದೌದು ಛಂದೋಬದ್ಧ ಪದಗಳ ಸಾಲು
ರಾಗ ತಾಳ ಲಯ ಸ್ವರ ಪಲ್ಲವಿಯ ಹಾಡು
ಶಬ್ದಾರ್ಥ ಅಲಂಕಾರ ಪ್ರತಿಮೆಗಳ ಗೂಡು

ಕವಿತೆ ಎಂದರೆ ಅರಳುವ ಹೂವು, ಹಕ್ಕಿಯ ಕೊರಳು
ಜೇಡಂಗಳ ಬಲೆಯ ಮನಮೋಹಕ ಬೆಡಗು

ಮುಗ್ಧ ಕಂದನ ನಗು ತುಂಟತನ ಲಲ್ಲೆ ಮಾತು
ಬಡವರ ಬೆವರು ದುಡಿತದ ಶ್ರಮ ಕಣ್ಣೀರು

ತಲ್ಲಣಿಸಿದ ಕವಿವರ್ಯರು ತಾವೇ ಮಂಗಳ ಹಾಡಿದರು
ಕವಿತೆ ಎಂದರೆ ಕವಿಯ ಕಾಣ್ಕೆ ಕನಸುಗಳ ಕೂಸು
ಒಬ್ಬಿಗೊಬ್ಬರ ಒಬ್ಬರಿಗೆ ಮತ್ತೊಬ್ಬರ ಮಾತು
ಮಾತಿಗೆ ಮಾತು ಬೆಳೆಬೆಳೆದು ಅಲ್ಲೇರಿತು ಕಾವು

ಅಂತೂ ಇಂತೂ ಮುಗಿಯಿತು ಸಭೆ, ಜನ ಚದುರಿತು
ಸಮಸ್ಯೆ ಮಾತ್ರ ಬಗೆಹರಿಯದೆ ಹಾಗೇ ಉಳಿಯಿತು
ಉತ್ತರ ಅರಸುತ್ತಾ ಹೊರಟಿರುವೆನು ನಾನು
ಕವಿತೆಯನ್ನೇ ಕೇಳುತ್ತ: ಕವಿತೆ ಎಂದರೇನು?

ಗೈರು ಹಾಜರಿ

ಸಾ.ಮ. ಶಿವಮಲ್ಲಯ್ಯ

ನಿಮ್ಮ ದಮ್ಮಯ್ಯ ಹೊಡಿಬೇಡಿ ಸಾರ್
ನಿಮ್ಮ ದಮ್ಮಯ್ಯ ಬಡಿಬೇಡಿ ಸಾರ್
ಕೆರೆ-ಬಾವಿಗ್ಹೋಗ್ತಾಳೆಂದು
ನಮ್ಮವ್ವನ್ನ ಕಾಯ್ಕಂಡಿದ್ದೆ ಸಾರ್

ಕೂಲಿ-ನಾಲಿ ಮಾಡಿ ತಂದ
ಹಣವನೆಲ್ಲ ನಮ್ಮಪ್ಪ ಹೊಡೆದು
ಬಡಿದು ಕಿತ್ಕೊಂಡ್ಹೋಗಿ ಕುಡಿದು
ಬಂದು ಹೊಡಿತಾನೆ ಬಡಿತಾನೆ ಸಾರ್

ಕೆರೆ-ಬಾವಿಗ್ಹೋಗು ಅಂತಾನೆ
ನೀನಿರುವುದೇಕೆ ಸಾಯಿ ಅಂತಾನೆ
ತಣ್ಗೆ-ತಪ್ಲೆ ಮಾರ್ತಿನಂತಾನೆ
ನಮ್ಮೇಲೆ ಕಣ್ ಕಣ್ ಬಿಡ್ತಾನೆ

ನಿನ್ನೆ ದಿವಸ ಮಚ್ಚಿನಿಂದ
ನಮ್ಮವ್ವಳ ಕೆನ್ನೆಗ್ಹೊಡೆದು
ರಕ್ತ ಬಂದು, ಬಾವಿಗ್ಬಿದ್ದು
ಸಾಯ್ತಿನಂತ ಹೋಗ್ತಿದ್ಲು ಸಾರ್

ಅಷ್ಟೇ ಸಾರ್ ನಿನ್ನೆ ನಾನು
ಶಾಲೆಗೆ ಬರ್ಲಿಲ್ಲ, ನಮ್ಮವ್ವಳ
ಬಿಟ್ಟು ಎಲ್ಲು ಹೋಗ್ಲಿಲ್ಲ,
ಕಾಯ್ತು ಕುಳಿತೆ ದಿನವೆಲ್ಲ.



ಒಂದು ಹೂವು ಸಾಕು

ಕಸ್ತೂರಿ ಬಾಯರಿ

ಒಂದು ಕೆಂಪು ಗುಲಾಬಿ ಸಾಕು
ಎದೆಮಟ್ಟ ನಿಂತ ಸಮುದ್ರ ದಾಟಿ
ಮೌನವಾಗಿ ನಿಲ್ಲಲು
ನಡುಗಡ್ಡೆಯ ಮೇಲೆ ಮುಗ್ಧ ಪ್ರೇಮಿಗೆ

ಒಂದು ಹಳದಿ ಸೇವಂತಿಗೆ ಸಾಕು
ಸಿಸರಿನ್ ಗಾಯ ಮರೆತು
ಮೊಲೆ ತುದಿಯ ಎಳೆಕಂದನ
ಕೆಂದುಟಿಗೆ ಸವರಲು ಹಸಿ ತಾಯಿಗೆ

ಒಂದು ಸಂಪಿಗೆಯ ಕಂಪು ಸಾಕು
ಸೂತಕದ ಮೌನದಲ್ಲಿ
ಬಟ್ಟೆ ತೊಳೆದು ಕತ್ತಲಲ್ಲಿ ಮಿಂದವರಿಗೆ
ಕೆಸರು ತುಂಬಿದ ಓಣಿ ದಾಟಿ ಬಂದವರಿಗೆ




ಬಿಂಬ


ಗಣೇಶ ಪಿ. ನಾಡೋರ

ಕನ್ನಡಿಯ ಮುಂದೊಂದು ಗಿಳಿ
ಒಳಗೊಂದು!
ಕೆಂಪು ತುಟಿಯ ಕೊಂಕಿಸಿ
ಸೇಬುಗೆನ್ನೆಯ ಸವರಿ
ನಗುತ್ತದೆ
ಸಂತೋಷವೋ ವಿಷಾದವೋ
ಸುತ್ತಲೂ ಹೊಳೆಯುವ
ಪಂಜರ
ಭದ್ರವಾಗಿದೆ

ನನ್ನೊಳಗೊಂದು ಬೆಕ್ಕು
ಮನುಷ್ಯನ ಮುಖ ಹೊತ್ತು
ಗಿಳಿಯ ತುಟಿಯ ರಕ್ತ
ಮೃದು ಮಾಂಸ ಸವಿದು
ಹಾಕುತ್ತದೆ ಮೊಸಳೆ ಕಣ್ಣೀರು


ಮೋಡದೊಳಗಿನ ಚಂದ್ರನಿಗೂ
ಇದೆ ಬಿಡುಗಡೆ
ಇಲ್ಲ ತಾರೆಗಳಿಗೆ!
ಸೌಂದರ್ಯದ ಕಣ್ಣಾಗಿ
ಇದ್ದಲ್ಲೇ ಮಿನುಗಬೇಕು
ಸೂರ್ಯನ ಬೆದರಿಕೆಗೆ
ಕರಗಬೇಕು
ಇದ್ದಲ್ಲೇ !





ಶರತ್ ಕಲ್ಕೋಡ್





ಗಣೇಶ ಪಿ. ನಾಡೋರ



ಶ್ರೀನಿವಾಸ ಜೋಕಟ್ಟೆ



ಗೀರ್ವಾಣಿ ಹೆಗಡೆ



ಕೆ.ಪಿ. ಮೃತ್ಯುಂಜಯ

ಹಣತೆಯ ಸುತ್ತ

ಶ್ರೀನಿವಾಸ ಜೋಕಟ್ಟೆ

ಬೆಳಕ ಹುಡುಕಲು ಸುತ್ತಾಡಿದವರಿಗೆ
ಗಾಳಿಯ ಹೊಡೆತಕ್ಕೆ ತತ್ತರಿಸುತ್ತಿರುವ
ದೀಪ ಹೇಳಿತು
ಇದೇ ದಾರಿಯಲ್ಲಿ ಮುಂದೆ ಬನ್ನಿ

ಒಂದು ಮೌನದಲ್ಲಿ ನೂರು ಸುಖವಂತೆ
ಅಂದಿನಿಂದಲೂ ಕನವರಿಸಿದವರಿಗೆ
ಅಚ್ಚರಿ, ಅರೆ!
ಇದ್ದೇವಲ್ಲಾ ಇನ್ನೂ ಜೀವಂತ

ಹೊಲಗಳ ಫಸಲು, ಪಶುಗಳ ಮೇವು
ಸ್ವಿಸ್ ಬ್ಯಾಂಕ್ ಖಾತೆಯ ಡಾಲರ್‌ಗಳು
ಡೆಸ್ಕ್‌ಗಳಲ್ಲಿ, ಕುರ್ಚಿಗಳಲ್ಲಿ
ಹಾಜರಿ ಖಾಲಿ ಖಾಲಿ
ಕತ್ತಲೆಯ ದುಃಖತಪ್ತರು
ಸಿಟ್ಟುಗಳಲ್ಲೇ ಹರಿಯುತ್ತಾರೆ
ಖಾಲಿ ಸೀಟುಗಳನ್ನು ಅಯ್ಯೋ ಪಾಪ

ಗಾಳಿಯ ಹೊಡೆತಕ್ಕೆ ದೀಪ ಮತ್ತೆ
ಹೇಳಿತು ನಿಲ್ಲಿ
ಹಚ್ಚಿದವರೆಲ್ಲಿ?

ನಿಶ್ಚಿತಾರ್ಥ

ಗೀರ್ವಾಣಿ ಹೆಗಡೆ

ಮೊನ್ನೆ ಇವರು ನನ್ನ
ಹಳೆಯ ಡೈರಿ ಓದಿ,
ಅರೆ ಇವೆಲ್ಲ ನೀ ಬರೆದ
ಕವನಗಳಾ? ತುಂಬಾ
ಚೆನ್ನಾಗಿವೆಯಲ್ಲಾ ಎಂದಾಗ
ಬಿಮ್ಮನೆ ನಕ್ಕಿದ್ದೆ.
ನಿಶ್ಚಿತಾರ್ಥದ ನಂತರ
ಮದುವೆಗೆ ಬರೀ ಆರೇ
ತಿಂಗಳಿರುವಾಗ ಇಷ್ಟೆಲ್ಲ
ಕವನ ಬರೆದರೂ ತೋರಿಸಲೇ
ಇಲ್ಲವಲ್ಲ ಎಂದಾಗ
ಸಣ್ಣಗೆ ನಡುಗಿದ್ದೆ.
ನಿನ್ನ ಪ್ರೀತಿ, ಈ ವಿರಹ,
ಬರುವೆಯೆಂದು? ಬಂದುಬಿಡಲೆ?
ಎಂಬಿತ್ಯಾದಿ ಕವನ ಓದಿ
ಅವರು ಬೀಗುತ್ತಿರುವಾಗ
ಮೆಲ್ಲಗೆ ಬೆವತಿದ್ದೆ.
ಈಗೇಕೆ ನೀ ಪೆನ್ನು
ಮುಟ್ಟುತ್ತಿಲ್ಲ? ಈಗೇನು
ಕೊರತೆ ನಿನಗೆ? ಬರೆದುಬಿಡು
ಒಂದು ಸುಂದರ ಬದುಕಿನ
ಕವನ ಎಂದಾಗ
ನಿಂತಲ್ಲೇ ಕಲ್ಲಾಗಿ ಕಂಪಿಸಿದೆ.

ಕೊಡೆಗಳ ಹೆಸರಿಗೆ ಏನು ಬರೆಯಲಿ

ನಜೀರ್ ಚಂದಾವರ




ಸಂಜೆಯು ಹೊದಿಸಿದೆ ಮಕ್ಮಲ್ ಚದ್ದರ ಹೇಳಾಗ ಏನು ಬರೆಯಲಿ
ಈ ನಗರದ ಬೋಳು ರಸ್ತೆಗಳ ಬೇನಾಮಿ ಹೆಸರಿಗೆ ಏನು ಬರೆಯಲಿ

ಮೊದಲ ಮಳೆಯ ಒಂದೊಂದು ಬಿಂದು ಗುಲ್‌ಮೊಹರನು ಲೂಟಿಗೈಯುವಾಗ
ಮಹಲಿನ ಕತ್ತಲೆಯಲ್ಲಿ ಬಿಕ್ಕಳಿಸುವ ಭಿಕಾರಿಯ ಹೆಸರಿಗೆ ಏನು ಬರೆಯಲಿ

ಅದ್ಯಾರ ನಿಟ್ಟುಸಿರಿಗೆ ಉರಿಯುತಿವೆ ಜ್ಯೋತಿಗಳು ಕಾಣುವ ತವಕದಿ ನಸುಕು
ಗೋಡೆಗಳು ಬಿರಿದವು ಜಡಿಮಳೆ ಹಾಡುವಾಗ, ಜೋಪಡಿಗಳ ಹೆಸರಿಗೆ ಏನು ಬರೆಯಲಿ

ಅಂಬರದ ಅಟ್ಟಹಾಸಕ್ಕೆ ಸುರಿದ ಮಳೆಯ ಅಳಲಿಗೆ ಚುಕ್ಕಿಗಳು ಮುಚ್ಚಿದವು ಕಣ್ಣು
ಕೊಳೆಯಾಯಿತು ಬದುಕು ತಲೆಗಳು ಮರೆಯಾದಾಗ, ಕೊಡೆಗಳ ಹೆಸರಿಗೆ ಏನು ಬರೆಯಲಿ




ಆಲಿಕಲ್ಲು ಬಿದ್ದಾಗ ಹಂಚುಗಳ ಮೇಲೆ, ಎದೆಯಾಯಿತು ಚೂರು ಯಾರದೋ ಕೂಗು
ಉರಿವ ಜ್ಯೋತಿ ಸುತ್ತ ಉರಿದ ಪತಂಗಗಳು, ನರಳುವ ರಾತ್ರಿಯ ಹೆಸರಿಗೆ ಏನು ಬರೆಯಲಿ.

ರಾತ್ರಿಯು ಬಳಕುತ್ತಾ ಸಾಗಿದೆ ಮೂಕರ ಹೆಸರಿಗೆ ಏನು ಬರೆಯಲಿ
ಗಝುಲ್‌ದ ಬಿಡಿನುಡಿಗಳು ತೇಪೆಗಳಾಗುತ್ತಿವೆ, ಬೀದಿ ಹೆಳವರ ಹೆಸರಿಗೆ ಏನು ಬರೆಯಲಿ.

ನಜೀರ್ ಚಂದಾವರ





ಎಳೆ ಬಿಸಿಲು ಬಿದ್ದು

ಕೆ.ಪಿ. ಮೃತ್ಯುಂಜಯ

1

ಬೆಳಗಿನ ಬರವಣಿಗೆಯು ಮೇಲೆ
ಎಳೆ ಬಿಸಿಲು ಬಿದ್ದು

ಹಕ್ಕಿಯ ಏಕಮಾತ್ರ ಕೂಗುಳಿದು
ತಳಮನೆಯಲ್ಲಿ;

ನೂರು ಯತ್ನಗಳೂ
ತಾರಲಾಗದೆ ಹಾಳೆಯಲ್ಲಿ

ಬೆರಳು ಬೆಳೆಯಿತು
ಉಗುರು ತಾನೂ;
ತಲೆಯು ಬೆಳೆಯಿತು
ಕೂದಲು ತಾನೂ.

ಮನಸ್ಸು ಬೆಳೆದು
ಹೃದಯ ಬೆಳೆದು

ಕಣ್ಣ ಬೊಗಸೆಗಳಲಿ ಏನದು?
ರಾತ್ರೆ-ಹಗಲು.

2


ಇಷ್ಟರಲಿ ನೆತ್ತರಿನ ಬಣ್ಣದ
ಹೋರಿಯು ತಿವಿಯ
ಬರುತ್ತಿದೆ.

ಉಳಿಯಲೊಂದೇ ದಾರಿ
ಉಸಿರಧಾರೆ

ಹೋ!

ಹೋರಿಯ ಹೊಕ್ಕುಳಲಿ
ಯಮಯಾತನೆ ಶಿವನೆ!

ಹೋರಿಯ ಉಳಿಯಬಿಡು
ನನ್ನವನೆ



ಬೆಳಕಿನ ಮರ

ಡಿ.ಎ. ಶಂಕರ

ಹೀಗೆ ಪೂರ್ವಕ್ಕೆ ಮುಖಮಾಡಿ
ಎರಡು ದಿನ, ವಾರ, ತಿಂಗಳು, ಸಂವತ್ಸರ
ಇಲ್ಲ
ನಡೆವ ಕಾಲು ನಡೆಯಬಲ್ಲಷ್ಟು ನಡೆದರೆ
ಕಡೆಗೆ ಸಿಗುತ್ತದೆ ಬೆಳಕಿನ ಮರ.

ಇದೇ ಚಿಗುರಿದ ಎಲೆ ಹಾಗಿರಲಿ
ನೆಲದೊಳಗೆ ಆಳಕ್ಕಿಳಿದು ಹರಡಿರುವ
ಬೃಹಜ್ಜಾಲದ ಬೇರುಗಳ ಎಳೆಎಳೆಯೂ
ಥಳಥಳ ಹೊಳೆದು, ಭದ್ರ ಅಮುಕಿ ಹಿಡಿದಿರಿಸಿರುವ
ಮಣ್ಣ ರಾಶಿಗೂ ತಂದುಕೊಟ್ಟಿದೆ ಅಪೂರ್ವ ಪ್ರಭೆ.
ಇಳಿದ ಬೇರಿನ ಮೇಲೆ ಊರಿ ಭಾರ
ಆಕಾಶದತ್ತ ಸವಾಲು ಎಸೆದಂತೆ ನಿಂತಿರುವ
ತೊಗಟೆಗಟ್ಟಿರುವ ಶಾಖೋಪಶಾಖೆಗಳ
ಹೊರ ಮೈಯಲ್ಲೂ ಮಿನುಗುವ ಬೆಳ್ಳಿರೇಕು.

ಬೆಳಕ ಬಾವಿಯೊಳಗಿಂದ ಜೀವ ಜಲ ಪಡೆದಂತೆ
ನೆಲದೊಳಗೆ ಬಾನ ಸೂರ್ಯನ ಹಡೆದು ನಿಂತಂತೆ
ಬೆಳಕಿನ ಮರ ಚೆಲ್ಲಿ ಬೆಳಕನ್ನು
ಅವಿರತ ಹಾಡಿದೆ ಬೆಳಕಿನ ಹಾಡು.

ನಡೆದಿದ್ದೀರಿ ನೂರಾರು ಸಾವಿರ ಮೈಲಿ
ಸಿಕ್ಕಿದೆಯೇ ನೋಡಲೀ ಬೆಳಕಿನ ಮರ?

ದೂರದಿಂದಷ್ಟೆ ಅದು ಚೆನ್ನವಂತೆ.
ಹತ್ತಿರ ಹೋದಂತೆ ಕಣ್ಣು ಆ ಬೆಳಕಲ್ಲಿ
ಕುರುಡಾಗಿ, ಕತ್ತಲೂ ಕಾಣದಂತಾಗುವುದಂತೆ
ಹೇಗೋ ಅದನ್ನೀಸಿ ಮುಂದೆ ನಡೆದು
ಮರದ ಬೊಡ್ಡೆಗೆ ಕೈ ಹಚ್ಚಿದರೆ
ಬೆರಳಲ್ಲಿ ಅಂಗೈಲಿ ಒಸರುವುದಂತೆ ರಕ್ತ:
ಅಂಥ ಮುಳ್ಳಿಡಿದ ಮರ ಅದು!
ಎಲ್ಲ ಕಡೆ ಚೂಪು ಬೆಳಕಿನ ಮುಳ್ಳಂತೆ.

ಈಗೇನು ಮಾಡುವುದು?
ಕರೆಯುತ್ತಿದೆ ಬೆಳಕಿನ ಮರ.

ನಿಶ್ಚಲ ಪುಷ್ಪ

ಗ.ಸು. ಭಟ್ಟ, ಬೆತ್ತಗೇರಿ



ಸುಳಿಗಾಳಿಯಿಲ್ಲ. ತಿಳಿಗಾಳಿಯಿಲ್ಲ
ರಣ ರಣ ಬಿಸಿಲ ಸೊಲ್ಲ
ಗುನುಗುತ್ತ ಮುಗಿಲಲ್ಲಿ ತಟಸ್ಥ ಬಿಳಿ ಮೋಡ.
ಸುತ್ತ ಗಿಡ ಮರಗಳೂ ಬೆವರುವ ಹೊತ್ತು
ಪೊದೆಯಿಂದ ಮೇಲೆದ್ದ ದಂಟು
ನಾರಾಯಣನ ಹೊಕ್ಕುಳ ಹೂವು.
ದಳ ದಳದ ಕಟ್ಟೆಯೂ ಕಾಮನ ಬಿಲ್ಲ ತುಣುಕು,
ನಡುವೆ ಸುಟ್ಟ ಮಕರಂದದ ಕೊಳ-
ಪ್ರತಿಬಿಂಬಿಸಿದೆ ಬೋರಲು ನೀಲಿಯ, ಮೋಡದ ಚೂರ,
ಮತ್ತೂ, ತನ್ನದೇ ಶಲಾಕಾಗ್ರ ಬ್ರಹ್ಮನ;
ಬಗೆಯೊಡಲು ಹಂಬಲವ ಪ್ರತಿ ಬಿಂಬಿಸುವ ಹಾಗೆ
ಬಣ್ಣ-ಬಗೆ ಇರುವಿಕೆಯ ಅತಿರಂಜಿಸುವ ಹಾಗೆ.
ಒಮ್ಮಿಂದೊಮ್ಮೆಲೇ!
ನಿಶ್ಚಲ ನಿಂತಂತಿದ್ದ ಕಾಲದ ತಂತುವೇ ತಂತಿಯಾಗಿ
ತನಗೆ ತಾನೇ ಮಿಡಿಯತೊಡಗಿದಂತೆ
ಭವದ ಬಂಧನಕೆಂದೇ ಅಲೆವ ಜಂಗಮ ಭೃಂಗ
ಗುಂಯ್ ಽಽ...

ಮೂಲ

ಭಾಗೀರಥಿ ಹೆಗಡೆ

ನಡು ಬೀದಿಯಲ್ಲಿ
ಎತ್ತರೆತ್ತರ ನಿಂತ
ಜ್ಞಾನಿ ಹೇಳಿದ-
ಮಣ್ಣಿಂದಾ ಕಾಯ ಮಣ್ಣಿಂದ.

ಪ್ರಯೋಗ ಶಾಲೆಯ ಬಾಗಿಲಲ್ಲಿ
ಪರೀಕ್ಷಾ ನಳಿಕೆ ಹಿಡಿದು
ವಿಜ್ಞಾನಿ ಕೂಗಿದ-
ಹಣ್ಣಿಂದಾ ಬೀಜ ಹಣ್ಣಿಂದ.

ತಿಪ್ಪೆ ಗುಂಡಿಯ ಕೆದರಿ
ಕಸ ಕಡ್ಡಿ
ಮಣ್ಣು ಮಸಿ ಜಾಲಾಡಿ
ಲೋಭಿ ಉಸುರಿದ-
ಹೊನ್ನಿಂದಾ ಬಾಳ್ವೆ ಹೊನ್ನಿಂದ.

ಎಲ್ಲರನ್ನೂ ಆಲಿಸಿದ ಪ್ರೇಮಿ
ಅಲ್ಲೇ ಮುಸಿ ಮುಸಿ ನಕ್ಕು
ಗೆಳತಿಯ ಕೈ ಹಿಡಿದು
ಮರೆಗೆ ನಡೆದ.




ದ್ವೇಷಿಸಲು

ಹರಿಯಪ್ಪ ಪೇಜಾವರ

ದ್ವೇಷಿಸುವೆನು ನಾನವನ
ನಡು ಬೀದಿ ಒಂಟಿಯಾಗಿ
ಡಾಮರು ರೋಡಿನಲ್ಲಿ

ದ್ವೇಷಿಸುವೆ ನಾನವನ
ಅಂಗಡಿ ತಿಟ್ಟೆಯಲಿ
ವ್ಯಂಗ್ಯ ಸೂಸುವ
ತುಟಿಯ ಕೊಂಕಿನಲ್ಲಿ

ದ್ವೇಷಿಸುವೆ ನಾನವನ
ಗೆಳೆಯರ ಜತೆ ಆಟದ ಮೈದಾನದಲ್ಲಿ
ತಿರುಗಿ ಬಡಿಯುವ ಕೊಂಕು ಮಾತಿನಲ್ಲಿ



ದ್ವೇಷಿಸುವೆ ನಾನವನ
ಆಫೀಸು ಕೌಂಟರಲ್ಲಿ-ಕೀಳು ಹಾಸ್ಯದ
ಪೋಲಿ ಮಾತುಗಳಲ್ಲಿ

ದ್ವೇಷಿಸುವೆ ನಾನವನ
ಸ್ನೇಹ ಸಂಘಗಳಲ್ಲಿ
ಎತ್ತುವ ಚಂದಾಗಳ ಧೂರ್ತ ಅವಸರದಲ್ಲಿ

ಆದರೆ ದ್ವೇಷಿಸಲಾರೆ ನಾ ಅವನ
ಅವನ ಪುಟ್ಟ ತಮ್ಮನ ಸಾನಿಧ್ಯದಲ್ಲಿ
ಹರಕು ಚಿಲ್ಲರೆಯ ಅವನವ್ವನ ನೆನಪಿನಲ್ಲಿ
ಇನ್ನು ಮದುವೆಯಾಗದ ಅವನ ತಂಗಿಯ
ಬೀಡಿ ಎಲೆ ದುಡಿಮೆ ನೆನಪಿನಲ್ಲಿ

ದ್ವೇಷಿಸಲೊ ಅವನ ಒಂಟಿಯಾಗಿಡುವೆನು
ಪ್ರೀತಿಸಲು ಇವರೆಲ್ಲರ ಕರೆಯುವೆನು

ನಾಟಿ ಮುಗಿಸಿ ಬಂದ ಅವ್ವಾ

ಪಿ. ಮಂಜುನಾಥ್

ಮೊಣಕಾಲ ದಾಟಿಸಿ ಸೀರೆ ಕಟ್ಟಿ
ದರ್ಪ ಮೀಸೆಯ ಅಪ್ಪನೆದುರೆ-
ಕುಂಡಿ ಸೂರ್ಯನಿಗೆ ಕೊಟ್ಟು
ಪಯಿರು-ಪಯಿರಿಗೂ ಕರುಳ ಬಳ್ಳಿ
ಕತ್ತರಿಸಿಕೊಂಡ ಅವ್ವಾ,
ಗಾಂಧಾರಿಯಂಥ ನೂರು ಹೆಂಗಸರ ತಾಯಿ
ಅವಳ ಬೆರಳುಗಳು ಬಾತಿವೆ.

ನಾಟಿ ಮುಗಿಸಿ ಬಂದ
ಅವ್ವನ ಬೆರಳುಗಳೇ ಬಾತಿವೆ!

ಪಯಿರು ಗದ್ದೆ ತುಂಬುವ ಸಿರಿಗೆ
ಇಷ್ಟಿಷ್ಟೆ ಹಿಂದೆ ಚಿಮ್ಮುವ ಅವ್ವನ ಕಾಲುಗಳು
ಥೇಟ್ ಕುಂಟೋಬಿಲ್ಲೆ ಚಿಮ್ಮುವ ಬಾಲೆಯವು;
ಕನಸೂ ಭಾರವೆನ್ನುವ ಬಾಲೆ ಕಾಲ ಮೇಲೆ
ನೀರ ಕಟ್ಟುವ ನರಸ
ಕಣ್ಣಭಾರ ಬಿಟ್ಟು ನಿಂತ ನೋಡು
ಅವ್ವನ ಕಾಲುಗಳು ಬಾತಿವೆ.

ನಾಟಿ ಮುಗಿಸಿ ಬಂದ
ಅವ್ವನ ಕಾಲುಗಳೇ ಬಾತಿವೆ.



ಮೀನಿನ ಹೆಜ್ಜೆ

ಸುಬ್ರಾಯ ಚೊಕ್ಕಾಡಿ

ನೀರಿನಲಿ ಮೀನಿನ ಹೆಜ್ಜೆ ಹುಡುಕುತ್ತ ಹೊರಟವರು
ತಿಳಿದಿರಬೇಕು-ಮೀನು ಹಾಗೂ ನೀರ ಅಂಟಿರದ ನಂಟು.
ಮೀನಿಗೋ ಇಡಿ ದೇಹವೇ ಪಾದ, ನೀರಿಗಿದೆ
ಯಾವುದೇ ಬಂಧನವಿರದ ಸಂಬಂಧ, ಎರಡೂ ಜತೆಗೆ
ಸಾಗುತ್ತ, ಬೇರೆಯಾಗುತ್ತ; ಇದ್ದೂ ಇರದಂತೆ ಬಾಳುವುವು.


ಇಡಿ ದೇಹ ಹೆಜ್ಜೆಯಂತೂರಿ ಸಾಗುವ ಮೀನು
ಆ ಗುರುತನೋಡನೆಯೇ ಒರೆಸಿಹಾಕುವ ನೀರು
ಮೀನ ಕಣ್ಣಿನ ಬೆಳಕು ನೀರನ್ನು ಬೆಳಗುತ್ತ
ನೀರು ಆ ಕಂಗಳಿಗೆ ಜೀವವನು ಊಡುತ್ತ
ಗುರುತಿರದೆ ಬಾಳಿ, ಆಗುವುವು ಜೀವನ್ಮುಕ್ತ.

ಪಾತ್ರವನ್ನಾಧರಿಸಿ ಇರುವ ನೀರಿನ ಒಳಗೆ
ಆಳ ಅಗಲಗಳ ಅರಿತಿರುವ ಮೀನಿನ ನಡಿಗೆ,
ನೀರಿನ ಚಲನೆ, ಘನವಾಗಿ ಸ್ಥಿರ ಚಿತ್ರವಾದಾಗ
ಹಿಡಿದಿಡಲೂ ಬಹುದು ಮೀನಿನ ಹೆಜ್ಜೆಗುರುತಾಗ.

ಬೆಂಗಳೂರು

ಎಚ್. ಎಸ್. ಮುಕ್ತಾಯಕ್ಕ

ಒಣಗಿ ಕೊಳೆಯುತ್ತಿರುವ ಅರ್ಧ ಸೇಬು
ಒಣ ಹುಲ್ಲಿನ ಬಣವೆ, ತೇಪೆ ತೇಪೆ
ಹೊಲಿಗೆ ಕಂಡ ಉಪನಗರಗಳು, ಬಡಾ
ವಣೆಗಳು, ಬಡವನ ಗುಡಿಸಿಲಿನಲ್ಲಿ
ಕಾಲಿಡಲೂ ಆಗದಂಥ ಕಿಷ್ಕಿಂಧ.
ಪ್ರತಿಯೊಬ್ಬನ ಉಸಿರೂ ಕಮ್ಮಾರನ ಕುಲುಮೆ.
ರಾತ್ರಿ ಕರಾಳ ಮುಖದ ಮಾಟಗಾತಿ.
ಒಂದು ಮುಖದಲ್ಲೂ ತಾಜಾತನವಿಲ್ಲ
ವಂಚನೆಯ ಕಂಗಳಲ್ಲಿ, ಸುರಿವ ಜೊಲ್ಲು
ಎಣಿಸುವರು ಹಣವೆಂದು ನಕ್ಷತ್ರವನ್ನು.



ಮೊನಾಲಿಸಾಳಿಗೆ

ಉಗಮ ಶ್ರೀನಿವಾಸ್

ನಿನ್ನಂಥ ಸುಪ್ತ ಚೆಲುವೆ
ನನಗೆ ದಕ್ಕಿದ ದಿನ
ನಿನ್ನ ಕಣ್ಣಗೆ ನಾನು ಕಾಣುವುದಿಲ್ಲ
ಮೊನಾಲಿಸ!

ನಿನ್ನ ಕಣ್ಣಗೆ ನಾನು
ಕೇವಲ ನಾನಾಗಿಯೇ ಕಾಣಬಹುದು.
ಆದರೆ-


ನನಗೆ ಮಾತ್ರ ನಿನ್ನ ಕಣ್ಣು
ಪ್ರಿಯಕರನ ದಾರಿ ನೋಡಿ ನೋಡಿ
ಮಂಜಾದಂತೆ ಕಾಣುತ್ತಿವೆ.

ಆ ಸೋತ ಕಣ್ಣಲ್ಲಿ
ಒಮ್ಮೆಯಾದರೂ ಈ ಗೆದ್ದ
ಹುಡುಗನನ್ನು ಬಚ್ಚಿಟ್ಟುಕೊಳ್ಳಬಾರದೇ!

ನನಗೆ, ನಿನ್ನಂಥ ಸುಪ್ತ ಚೆಲುವೆ
ಸಿಕ್ಕ ದಿನ, ನಿನ್ನೆರಡೂ
ಕಣ್ಣುಗಳನ್ನು ಅವಳಿಗೆ ತೊಡಿಸಿಬಿಡು.







ಪಿ. ಮಂಜುನಾಥ

ಹಸಿರು ಒಡಲಿನ, ಕೆಂಪು ಜರಿ ಅಂಚಿನ ಲಂಗ, ದಾವಣಿ, ಕುಚ್ಚು ಧರಿಸಿ ಹೆಣೆದ ನಾಗರ ಜಡೆ, ಜಡೆ ಮಧ್ಯೆ ಥಳ ಥಳ ಹೊಳೆಯುವ ಕೆಂಪು ಕಲ್ಲಿನ ಜಡೆ ಬಿಲ್ಲೆ; ಹಣೆಯಲ್ಲಿ ದುಂಡು ಕುಂಕುಮ; ಕೊರಳಲ್ಲಿ ಕಾಸಿನ ಸರ; ಕಿವಿಯಲ್ಲಿ ಕೆಂಪಿನೋಲೆ.


ಇವೆಲ್ಲವನ್ನೂ ಸಾಕಾರಗೊಳಿಸಿ ಕಾವೇರಿ ಸಾಲಂಕೃತಳಾಗಿ ನಿಂತಾಗ ನಮ್ಮ ಭುವನ ಸುಂದರಿಯರು ಇರಲಿ ರವಿವರ್ಮನ ಶಕುಂತಲೆ, ಮೇನಕೆಯರೂ ನಾಚಬೇಕು.

ಮಂಗಳಾರತಿ ತಗೊಂಡರೆ ಉಷ್ಣ, ತೀರ್ಥ ತಗೊಂಡರೆ ಶೀತ ಎಂಬ ನಯ, ನಾಜೂಕುಗಳಲ್ಲಿ; ನಡೆದರೆ ಕಾಲು ಸವೆಯುತ್ತೆ, ಕೆಲಸ ಬೊಗಸೆ ಮಾಡಿದರೆ ಕೈ ಒರಟಾಗುತ್ತೆ ಎಂಬಂಥ ತಾಯಿಯ ಮುಚ್ಚಟೆಯಲ್ಲಿ ಬೆಳೆದ ಕಾವೇರಿ ಹಳ್ಳಿ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗುವುದಕ್ಕೂ ಮೈನೆರೆಯುವುದಕ್ಕೂ ಸರಿ ಹೋಯಿತು.

ತಂದೆ ಕಪನೀಪತಿಗಳು ಅಂದೇ ಮಗಳ ಜಾತಕದೊಂದಿಗೆ, ಗಂಡು ಹೆಣ್ಣುಗಳನ್ನು ಜೊತೆಗೂಡಿಸುವ ಗುಂಡಾಭಟ್ಟರ ಮನೆಗೆ ಧಾವಿಸಿ ''ಒಂದು ಒಳ್ಳೆ ವರನನ್ನು ತಲಾಶು ಮಾಡಿ ಭಟ್ಟರೆ'' ಎಂದು ಮೊರೆಯಿಟ್ಟರು.

''ಬೆಂಗಳೂರು-ಮೈಸೂರುಗಳಲ್ಲಿ ಗಾರೆಗಚ್ಚು ಇರುವ ಸ್ವಂತ ಮನೆ, ನಲ್ಲಿ ನೀರು, ಸರ್ಕಾರಿ ಸಂಬಳ ಇರೋ ಅಂಥ ಒಳ್ಳೆ ವೈನಾದ ಹುಡುಗನನ್ನ ನೋಡಲಿಕ್ಕೆ ಹೇಳಿ. ಒಬ್ಬನೇ ಮಗನಾದರಂತೂ ಇನ್ನೂ ವೈನವೇ. ನಾದಿನಿ ಮೈದುನರ ಸೇವೆ, ಸಾರಿಸು-ಗುಡಿಸು-ನೀಡು ಈ ಎಲ್ಲಾ ನನ್ನೊಂದಿಗೇ ಮುಗಿಯಲಿ ಎಂದು ಕರುಳ ಕುಡಿಯ ಕಕ್ಕುಲಾತಿಯಿಂದ ವೆಂಕಟಲಕ್ಷ್ಮಮ್ಮನವರು ರಾಯರಿಗೆ ತಾಕೀತು ಮಾಡಿದ್ದರು. ರಾಯರೂ ಮಗ್ಗಿ ಒಪ್ಪಿಸಿದಂತೆ ಎಲ್ಲವನ್ನೂ ಗುಂಡಾಭಟ್ಟರಿಗೆ ಮುಟ್ಟಿಸಿದ್ದರು.

ಬೆಂಗಳೂರು, ಮೈಸೂರು, ಶಿವಮೊಗ್ಗಗಳಿಂದ ಅಂಚೆಯಲ್ಲಿ ಜಾತಕಗಳು ಬಂದವು. ಕಪನೀಪತಿಗಳೂ, ಗುಂಡಾಭಟ್ಟರ ವರ್ಚಸ್ಸು, ಪ್ರಭಾವ




ಗಳನ್ನು ಮೆಚ್ಚಿಕೊಂಡರು. ಆದರೇನು, ಇದಾವುದೂ 'ನಳ-ದಮಯಂತಿ'ಯರನ್ನು ಕೂಡಿಸುವ 'ಅಂಚೆ' ಯಾಗಲಿಲ್ಲ. ಕಾವೇರಿಯ ಜಾತಕದಲ್ಲಿನ ಯಾವುದೋ, ಕುಜದೋಷವೋ ಮತ್ತಿನ್ಯಾವುದೋ ತಕರಾರಿನಿಂದಾಗಿ ಜಾತಕಗಳು ಹೊಂದಿಕೆಯಾಗುತ್ತಲೇ ಇರಲಿಲ್ಲ.

ಗುಂಡಾಭಟ್ಟರ ಪ್ರಯತ್ನಗಳೆಲ್ಲ ವಿಫಲವಾದಂತೆ ಕಾವೇರಿ ಸುಮ್ಮನೆ ಕೂಡಲಿಲ್ಲ. ಪಿ.ಸಿ.ಎಂ.ನಲ್ಲಿ ಒಳ್ಳೆ ಮಾರ್ಕುಗಳಿಸಿದ ಅವಳು ಹಟ ಮಾಡಿ ಪಟ್ಟಣ ಸೇರಿ, ಹೆಣ್ಣುಮಕ್ಕಳ ಹಾಸ್ಟೆಲ್‌ನಲ್ಲಿ ಉಳಿದು ಓದು ಮುಗಿಸಿ, ಆರ್ಕಿಟೆಕ್ಚರ್‌ನಲ್ಲಿ ಪದವಿಯನ್ನೂ ಪಡೆದಳು.

ಕಂಕಣ ಬಲ ಕೂಡಿಬರಲಿಲ್ಲ ಎಂದು ಕೊರಗುವುದಷ್ಟೆ ತಂದೆ-ತಾಯಿಯರ ಕೆಲಸವಾಯಿತು. ವೆಂಕಟಲಕ್ಷ್ಮಮ್ಮನವರಂತೂ ಕಂಕಣ ಬಲ ಎಂದು ಕೂಡಿಬರುವುದೋ ಎಂದು ಅಲವತ್ತುಕೊಳ್ಳುತ್ತಲೇ ದೇವರಿಗೆ ಹರಕೆ ನೇಮಗಳನ್ನು ಚಾಚೂತಪ್ಪದೆ ಮಾಡುತ್ತಿದ್ದರು.


ಕಾವೇರಿಗೆ ಕೆಲಸದ ಆರ್ಡರೂ ಬಂತು. ಅದು ಬೆಂಗಳೂರಿನ ಮರಾಮತ್ ಇಲಾಖೆಯಲ್ಲಿ. ''ಹೋಗಲಿ ಸೇರಿಕೋ. ನನ್ನ ಹಾಗೆ ಎಲ್ಲದಕ್ಕೂ ಗಂಡನ ಕೈ ಕಾಯುವುದು ತಪ್ಪುತ್ತೆ'' ಎಂದು ವೆಂಕಟಲಕ್ಷ್ಮಮ್ಮ ಹರಸಿದರು.

''ಕೆಲಸಕ್ಕೆ ಸೇರಿದ ಮುಹೂರ್ತ ಚೆನ್ನಾಗಿದ್ದಲ್ಲಿ ಕಂಕಣ ಬಲವೂ ಕೂಡಿಬಂದೀತು. ಬೊಗಸೆ ಭರ್ತಿ ಸಂಬಳ ಬರುವ ಹೆಣ್ಣು ಯಾರಿಗೆ ಬೇಡ'' ಎಂದು ವೆಂಕಟಲಕ್ಷ್ಮಮ್ಮ ಮನಸ್ಸಿನಲ್ಲೇ ಸಮಾಧಾನ ಮಾಡಿಕೊಂಡರು. ಗುಂಡಾಭಟ್ಟರೂ ತಮ್ಮ ಇಷ್ಟು ವರುಷಗಳ ಅನುಭವದಿಂದ ಕಾವೇರಿಯ ಜಾತಕಕ್ಕೆ ಹೊಂದುವಂಥ ಗಂಡಿನ ಜಾತಕವೊಂದನ್ನು ತಲಾಶ್ ಮಾಡಿಯೇಬಿಟ್ಟರು. ವರ, ಮಲ್ಲೇಶ್ವರದ ಮೈಲಾರಿ ರಾಯರ ಏಕೈಕ ಪುತ್ರ, ಮಹಾಬಲ; ಮಹಾಬಲ ರಾವ್, ಬಿ.ಇ., ವೃತ್ತಿ ಕಂಪ್ಯೂಟರ್ ಎಂಜಿನಿಯರ್. ತಲೆಯ ಮೇಲೆ ಸ್ವಂತ ಸೂರು.



ಜಿ.ಎನ್. ರಂಗನಾಥ ರಾವ್

ಮಳೆ ಬಂದರೆ



ಕಪನೀಪತಿಗಳು ವರಮಹಾಶಯನಿಗೆ ತಮ್ಮ ಕುಲವಧುವಿನ ದರ್ಶನ ಮಾಡಿಸಲು ಗುಂಡಾ ಭಟ್ಟರ ಮೂಲಕ ಶುಭದಿನ, ಶುಭತಿಥಿ ಇತ್ಯಾದಿಗಳನ್ನು ಗುಣಿಸಿ. ಭಾಗಿಸಿ ಅಂಥ ಶುಭ ಮುಹೂರ್ತದಲ್ಲಿ ಮೈಲಾರಿ ರಾಯರ ಮನೆಗೆ ಬಂದಿಳಿದರು.

ವಧೂ ವರರು ಎಗ್ಗು-ತಗ್ಗು ಇಲ್ಲದೆ, ಪರಸ್ಪರ ಸಮಾ ಸಮ ಕುಳಿತು, ಕಣ್ಣಲ್ಲಿ ಕಣ್ಣಿಟ್ಟು, ಇಂದಿನ ಸಾಫ್ಟ್‌ವೇರ್-ಹಾರ್ಡ್‌ವೇರ್, ವೈರಸ್ ಪ್ರಾಬ್ಲಮ್, ಸಿಂಗ್‌ಪುರವಾಗಲಿರುವ ಬೆಂಗಳೂರಿನ ಸಂಕ್ರಮಣಾವಸ್ಥೆಗಳು ಇತ್ಯಾದಿ ಮುಕ್ತವಾಗಿ ಚರ್ಚಿಸಿದರು.

ವೆಂಕಟಲಕ್ಷ್ಮಮ್ಮನವರು ಭಾವಿ ಬೀಗಿತ್ತಿಯವರೊಂದಿಗೆ ಅದೂ ಇದೂ ಮಾತನಾಡುತ್ತ ಮನೆಯ ಅವಲೋಕನ ನಡೆಸಿದರು.

ದೊಡ್ಡ ಹಜಾರ. ಎರಡು ಬೆಡ್‌ರೂಮು. ಮಹಡಿ ಮೇಲೆ ಏಕಾಂತಕ್ಕೆ ಇನ್ನೊಂದು ರೂಮು.

ಹಾಲಿನಲ್ಲಿ ಹಾಲು ಚೆಲ್ಲಿ ಮತ್ತೆ ಪಾತ್ರೆಗೆ ಬಳಿದುಕೊಳ್ಳಬಹುದಾದಂಥ ಫಳಫಳಿಸುವ ಕನ್ನಡಿಯಂಥ ಅಮೃತಶಿಲೆಯ ನೆಲ. ರೂಮುಗಳಲ್ಲೂ ಸ್ಟಾರ್‌ಟಿಕೊ ಎಂಥದೋ ಟೈಲುಗಳು ಹಾಸಿದ ನೆಲ.

''ಸದ್ಯ, ಕಾವಿಗೆ ಸಾರಿಸಿ, ಗುಡಿಸಿ, ರಂಗೋಲಿ ಇಡುವುದೂ ತಪ್ಪಿತು'' ಎಂದು ನೆಮ್ಮದಿಗೊಂಡಿತು ತಾಯಿ ಮನಸ್ಸು.

ಅಡಿಗೆ ಮನೆಯಲ್ಲೂ ಗಾರೆಗಚ್ಚು ಇಲ್ಲ. ಅಲ್ಲೂ ಕಡಪಾ ಮಾದರಿಯ ಕರಿಯ ಶಿಲೆಯೇ ನೆಲದ ಹಾಸು.

''ಕಾಲು ಜಾರಿ ಬೀಳುವುದಿಲ್ಲವೆ'' ಎಂದು ಒಂದು ಕ್ಷಣ ದಿಗಿಲಾಯಿತು.

''ಕಾವಿ ಏನು ಅಡಿಗೆ ಮಾಡುವುದಿದೆಯೇ. ಸಂಬಳ ತರುವ ಹುಡುಗಿ. ಅಡಿಗೆಯವಳನ್ನು ಇಟ್ಟುಕೊಳ್ಳುತ್ತಾಳೆ'' ಎಂದು ತಾಯಿಯ ಬುದ್ಧಿಗೆ ತೋಚಿ ಮನಸ್ಸಿಗೆ ಸಮಾಧಾನವಾಯಿತು.

''ಬನ್ನಿ ಹಿತ್ತಲು ತೋರಿಸುತ್ತೇನೆ'' ಎಂದು ಬೀಗಿತ್ತಿ ಮುಂದಾದರು. ಹಿತ್ತಿಲಿನಲ್ಲಿ ನೋಡುವುದೇನಿದೆ ಎಂದುಕೊಳ್ಳುತ್ತಲೇ ವೆಂಕಟಲಕ್ಷ್ಮಮ್ಮ ಹಿಂಬಾಲಿಸಿದರು. ಬೆಂಗಳೂರು ಮಹಾನಗರಕ್ಕೆ ಅಪರೂಪವಾದ ದೊಡ್ಡ ಹಿತ್ತಲೇ. ನಾಲ್ಕು ತೆಂಗಿನ ಮರಗಳು. ಜೊತೆಗೆ ಕರಿಬೇವು, ಸೀಬೆ, ಹೇರಳೆ ಗಿಡಗಳು. ಮಧ್ಯದಲ್ಲೊಂದು ಬಾವಿ. ಬಾವಿ ಕಂಡದ್ದೇ ಹತ್ತಾಳುದ್ದ ಬಾವಿಯಿಂದ ನೀರು ಸೇದಿ ಸೇದಿ ಸುಸ್ತಾಗಿದ್ದ ಅವರ ಎದೆ ಧಸಕ್ಕೆಂದಿತು.

ಬಾವಿಯಲ್ಲಿ ಹಣಕಿ ಹಾಕಿ, ನಮ್ಮದರಷ್ಟು ಆಳ ಇಲ್ಲ ಎಂದುಕೊಳ್ಳುತ್ತಲೇ ''ಏಕೆ, ನಲ್ಲಿ ಇಲ್ಲವೆ?'' ಎಂದು ಕೇಳಿದರು.

''ಇದೆ, ಆದರೆ ಒಂದು ದಿನ ಬಂದು ಒಂದು ದಿನ ಇಲ್ಲ. ಅದೂ ತಿಪ್ಪಗೊಂಡನಹಳ್ಳಿ ಕೆರೆ ತುಂಬಿದರೆ? ಇಲ್ಲದಿದ್ದರೆ ಬಾವಿಯೇ ಗತಿ. ಒಂದೊಂದು ದಿನವಂತೂ ಸೇದಿ ಸೇದಿ ರಟ್ಟೆ ನೋಯುತ್ತೆ.''

''ಪಂಪ್ ಹಾಕಿಸಬಹುದಲ್ಲ?''

ಕಪನೀಪತಿಗಳ ವ್ಯವಹಾರ ಮೂಗು ತೂರಿಸಿತು.

''ಉಂಟೆ ಈಗಲೇ ಕರೆಂಟ್ ಬಿಲ್ 600-700 ಬರ್ತಿದೆ. ಇನ್ನು ಮೋಟರು-ಪಂಪ್ ಅಂದರಂತೂ 1000ವೇ ಆದೀತು. ಜೊತೆಗೆ ಕರೆಂಟ್ ದರ ಬೇರೆ ಜಾಸ್ತಿ ಮಾಡ್ತಾರಂತೆ. ಜೊತೆಗೆ ಆಗೊಮ್ಮೆ ಈಗೊಮ್ಮೆ ನೀರು ಸೇದಿದರೆ ರಟ್ಟೆಗೆ ಬಲವೂ ಬರುತ್ತೆ'' ಮೈಲಾರಿರಾಯರು ವ್ಯವಹಾರದ ಮಾತಿನಲ್ಲಿ ಚಾಣಾಕ್ಷರು.

''ಏಕೆ ಕೆಲಸದವಳಿಲ್ಲವೆ?'' ವೆಂಕಟಲಕ್ಷ್ಮಮ್ಮ ಕೇಳಿದರು.

''ಇದ್ದಾಳೆ ಕಸಮುಸುರೆಗೆ ಮಾತ್ರ. ನಮ್ಮದು ಮಡಿ ಮೈಲಗೆ ಸಂಪ್ರದಾಯ. ಕೆಲಸದವರು ಸೇದಿದ ನೀರು ಹೇಗೆ ಮಡಿಗೆ ಬಂದೀತು?''

ಬೀಗಿತ್ತಿಯ ಮಾತಿನಿಂದ ವೆಂಕಟಲಕ್ಷ್ಮಮ್ಮನವರು ಉಸಿರು ಉಡುಗಿಯೇ ಹೋಯಿತು ಎನ್ನುವಂತೆ ಒಂದು ಕ್ಷಣ ನಿಶ್ಚಲರಾದರು.

ಅತ್ತ ಮಹಡಿ ಮೇಲಿನ ಏಕಾಂತದ ರೂಮಿನಲ್ಲಿ ಕಂಪ್ಯೂಟರ್ ಮುಂದೆ ಕುಳಿತು ಕಾವೇರಿ



ಮೌಸ್ ಮೇಲೆ ಕೈಯ್ಯಾಡಿಸುತ್ತಾ "ಈಗೀಗ ವೆಬ್ ಸೈಟ್‌ಗಳಲ್ಲೂ ಮದುವೆ ಮಾಡಿಸುತ್ತಾರಲ್ಲ. ವೆಬ್‌ಸೈಟ್‌ನಲ್ಲಿ ನಿಮಗೆ ಯೋಗ್ಯವಾದ ಕನ್ಯೆ ಸಿಗಲಿಲ್ಲವೆ?"

ಎಂದು ಮಹಾಬಲನನ್ನು ಕಿಚಾಯಿಸಿದಳು.

"ಪ್ರಯತ್ನಿಸಿದ್ದುಂಟು. ಆದರೆ ವೆಬ್ಬುಪಬ್ಬುಗಳಲ್ಲಿ ಕಾವೇರಿಯಂಥ ಕನ್ಯೆ ಯಾವುದೂ ಕಂಡಂತಿಲ್ಲ" ಎಂದು ಮಹಾಬಲ ರಸವತ್ತಾದ ಜೋಕ್ ಹೇಳಿದಂತೆ "ಹ್ಹೆಹ್ಹೆ" ಎಂದು ಮುಖ ಮಾಡಿದ.

"ವೆಬ್ಬು ನನಗೆ ಸೇರುವುದಿಲ್ಲವ್ವ" ಎಂದು ಕಾವೇರಿ ರಾಗವೆಳೆದಳು.

"ಹಾಗಾದ್ರೆ, ನಲ್ಲೀಲಿ ನೀರು ಬರೋದೇ ಇಲ್ವೇ..."

"ಬರುತ್ತೆ ತಿಪ್ಪಗೊಂಡನಹಳ್ಳಿ ಕೆರೇಲಿ ನೀರು ಇದ್ದಾಗ..."

"ಇಲ್ಲದೇ ಇದ್ದಾಗ..."

"ಬರೋಲ್ಲ... ಅದಕ್ಕೇ..."

"ಅದಕ್ಕೇ..."

"ಅದಕ್ಕೇ ಬಾವಿ ತೋಡಿಸಿರೋದು..."

ಕೆಳಗೆ ಭಾಜಿಗಳ (ಭಾವಿ ಬೀಗಿತ್ತಿಗಳು) ನಡುವೆ ಈ ಸಂಭಾಷಣೆ ನಡೆಯುತ್ತಿದ್ದಂತೆ ಮಹಾಬಲ, ಕಾವೇರಿಯರು ಏಕಾಂತದ ವೆಬ್‌ಸೈಟ್‌ನಿಂದ ಅಮೃತಶಿಲೆಯ ನೆಲದಲ್ಲಿ ಕಾಲಿಟ್ಟಿದ್ದರು.

"ನಿಮ್ಮ ವೆಬ್‌ಸೈಟ್‌ನಲ್ಲಿ ವಾಟರ್ ಪ್ರಾಬ್ಲಂ ಗೀಟರ್ ಪ್ರಾಬ್ಲಂ ಇಲ್ಲವೋ?..."

-ಎಂದು ವಿನೋದ ಲಹರಿಯಲ್ಲೇ ಮಹಾಬಲನನ್ನು ಛೇಡಿಸಿದ ಕಾವೇರಿ-

"ಇಲ್ಲದೇ ಇರುತ್ತೆ ದಿನ ಬೆಳಗಾದರೆ ಇನ್‌ಫ್ರಾಸ್ಟ್ರಕ್ಚರ್ ಕೊರತೆ ಅಂತ ವಿದೇಶಿ ಬಂಡವಾಳ ಬೊಮ್ಮಡಿ ಹೊಡೆಯುತ್ತಲ್ಲ" ಎಂದು ಪ್ರಶ್ನೆಗೆ ತಾನೇ ಉತ್ತರನ್ನೂ ಹೇಳಿದಳು.

"ಏನೋಪ್ಪ... ನಗರದ ಮಾತಿರಲಿ, ನಮ್ಮ ನೀಲಂತೂ ಧಾರವಾಡ ಭಾಷೇಲಿ ಹೇಳೋದಾದ್ರೇ, ವಾರದಲ್ಲಿ ನಾಲ್ಕೈದು ದಿವಸ ನಳ ಬಂದ್..."

"ಏಕೆ?"

-ಕಾವೇರಿ ಹುಡುಗಾಟದಿಂದ ಗಾಂಭೀರ್ಯಕ್ಕೆ ಇಳಿದಳು.

"ನಾಲ್ಕು ದಿವಸ ತಿಪ್ಪಗೊಂಡನಹಳ್ಳಿ ಕೆರೇಲಿ ನೀರು ಇರೋದಿಲ್ಲ. ಇನ್ನೊಂದು ದಿವಸ ಪಂಪ್ ಮಾಡೋದಿಕ್ಕೆ ಪವರ್ ಇರೋದಿಲ್ಲ."

"ನಳ ಬಂದ್ ಆದಾಗ ಏನ್ಮಾಡ್ತೀರ್ರಿ, ಸಾಹೇಬ.."

"ಅಗಡಿ ಚಲೋ ಬಾವಿ ಅದೈತ್ರೀ... ಮುವತ್ತು ಅಡಿ ತಳದಾಗ ಕಾವೇರಿ ಪ್ರತ್ಯಕ್ಷ ಆಗ್ತಾಳ್ರೀ... ಇನ್ನೂ ಕೊಂಚ ಬಿಸಾ... ಮತ್ತಷ್ಟು ಮೇಲೆ ಬಿಸಾ ಅನ್ಸೋತ ಬಿಂದಿಗೆ ನೀರು ಸೇದೋದೆ ಮುಂಜಾನಿ ಎಕ್ಸೈಜ್ ಆಗ್ತೈತ್ರಿ, ಬಾಯಿ ಸಾಹೇಬ್ರಾ...."



ಎಂದು ಮಹಾಬಲ ಮನೋಸ್ವಾಮಿನಿಯನ್ನು ಮೆಚ್ಚಿಸುವ ಧಾವಂತದಲ್ಲಿ ಧಾರವಾಡದ ಶೈಲಿಯಲ್ಲೇ ನಾಟಕೀಯವಾಗಿ ನುಡಿದ.

"ಹಾಂಗಾರ ನಳ ಬಂದ್ ಆದಾಗ..."

"ತಮ್ಮದಾ ಬಾಯರಾ ಸೇವಾ... ಕಾವೇರಿ ಬಾಯಾರಿಂದ ಕಾವೇರಿ ತರೋ ಸೇವಾ..."

"ಹಾಂಗ ಅಷ್ಟಯ್ಯಾ ನ ಒಪ್ಪೀರ್ರೀ..."

ಎಂದು ಕಾವೇರಿ ಅಷ್ಟೇ ನಾಟಕೀಯ ಧಾಟಿಯಲ್ಲಿ ಹೇಳಿದಳು.

ಚಿರಂಜೀವಿಗಳ ವಿನೋದ ವಿಪರೀತವಾಯಿತು ಎನಿಸಿತು ಹಿರಿಯರಿಗೆ.

"ಹಾಗೇನಿಲ್ಲ. ಈ ವರ್ಷ ಮಳೆ ಸ್ವಲ್ಪ ಯದ್ವಾತದ್ವ ಆಯಿತು ನೋಡಿ. ಮುಂದಿನ ವರ್ಷ ಮಳೆ ಸರಿಯಾದರೆ ತಿಪ್ಪಗೊಂಡನಹಳ್ಳಿ ಕೆರೆ ತುಂಬೇ ತುಂಬತ್ತೆ..."

ಮೈಲಾರಿ ರಾಯರು ತುಸು ಗಂಭೀರವಾಗಿಯೇ ಹೇಳಿದರು.

ಕಂಪನೀಪತಿಗಳು ವಿಷಯ ಮುಂದುವರಿಸುವ ಎಳೆ ಕಾಣದೆ ಧರ್ಮ ಪತ್ನಿ ವೆಂಕಟಲಕ್ಷ್ಮಮ್ಮನವರತ್ತ ನೋಡಿದರು.

"ಹಾಗಾದೆ. ಮುಂದಿನ ಮಳೆಗಾಲದವರೆಗೂ ಕಾಯೋಣ. ಮುಂದಿನ ವರುಷ ತಿಪ್ಪಗೊಂಡನಹಳ್ಳಿ ಕೆರೆ ತುಂಬಿದರೆ, ಶುಭಸ್ಯ ಶೀಘ್ರಂ... ಏನಂತೀರಿ ಮಹಾಬಲರಾಯರೆ..."

ಕಾವೇರಿ, ಉಳಿದೆಲ್ಲ ಹಿರಿಯರೂ ತುಟಿ ಎರಡು ಮಾಡುವ ಮೊದಲೇ ತನ್ನ ನಿರ್ಧಾರ ತಿಳಿಸಿಬಿಟ್ಟಳು.

"ಆಯಿತು... ಆಯಿತು... ಮುಖ್ಯ ಈ ಜಲಮಂಡಳಿಯವರು ನಮಗೆ ಕಾವೇರಿ ನೀರು ತಿರುಗಿಸಿದ್ದಿದ್ದರೆ ಇಷ್ಟೆಲ್ಲ ಮಾತೇ ಇರುತ್ತಿರಲಿಲ್ಲ."

ಎಂದು ಮೈಲಾರಿ ರಾಯರು ಸಂಗತವೋ ಸಾರ್ವತ್ರಿಕವೋ ತಿಳಿಯದ ಹಾಗೆ ಎಡಬಿಡಂಗಿಯಾಗಿ ವಟಗುಟ್ಟಿದರು.

ಲಂಗ ದಾವಣಿಯಿಂದ ಚೂಡಿದಾರ್ ಪೈಜಾಮಕ್ಕೆ ಬಡ್ತಿ ಪಡೆದ ವಾಸ್ತುಗಿತ್ತಿ (ಆರ್ಕಿಟೆಕ್ಟ್ ಎಂದು ಓದಿಕೊಳ್ಳುವುದು) ಮಗಳ ಮಾತು ಕಂಪನೀಪತಿಯವರಿಗೆ ಅತ್ಯಾಧುನಿಕವೆನ್ನಿಸಿ ಕಸಿವಿಸಿಗೊಂಡರು.

"ಹಾಗೇನಿಲ್ಲ. ಹಾಗೇನಿಲ್ಲ" ಎಂದು ತಮ್ಮ ಸಮಾಧಾನಕ್ಕೋ ಬೀಗರ ಸಮಾಧಾನಕ್ಕೋ ಹಲುಬಿದರು.

ವೆಂಕಟಲಕ್ಷ್ಮಮ್ಮನವರಿಗೂ ಮಗಳ ಮಾತು ಕೊಂಚ ಅತಿಯಾಯಿತೆನಿಸಿತು. ಹತ್ತಾಳು ಅಡಿ ಬಾವಿ, ಸಾರಿಸಿ ಗುಡಿಸಬೇಕಾದ ಸೆಗಣಿ ನೆಲ, ಕಿಡುಕು ಮೋರಿಯ ಆ ದಿನಗಳ ಪ್ರಾಣವಲ್ಲಭ ಎಲ್ಲಿ ನೆನಪಾದದ್ದೇ ಮಗಳ ವರ್ತನೆ ಸರಿ ಎನಿಸಿತು. ಆದರೂ ಈ ರೀತಿ ಬಜಾರಿತನವನ್ನು ಮಾತಿನಲ್ಲಿ ಪ್ರದರ್ಶನವೇ ಕ್ರಿಯಲ್ಲಿ ಚುರುಕು ಮುಟ್ಟಿಸಬೇಕು ಎಂಬುದು ಇನ್ನೂ ಏಕೆ ಹುಡುಗಿಗೆ ತಿಳಿಯದು ಎಂದು ಮನಸ್ಸಲ್ಲಿ ಮರುಗಿದರು.


"ಆಯಿತು... ಆಯಿತು" -ಎಂದು ಹೇಳುತ್ತಾ ಮೈಲಾರಿ ರಾಯರು ಕಾವೇರಿ ಪರಿವಾರವನ್ನು ಬಾಗಿಲವರೆಗೆ ಮುಟ್ಟಿಸಿದರು.

ಮಹಾಬಲನೂ ಬಾಗಿಲವರೆಗೆ ಬಂದು, ಹೊರಟು ನಿಂತ ಪರಿವಾರಕ್ಕೆ ಟಾಟಾ ಹೇಳುವ ಮೊದಲು "ಮಿಸ್. ಕಾವೇರಿ" ಎಂದು ಆದಷ್ಟು

ನಾಜೂಕಿನಿಂದಲೇ ಕರೆದ. ಏನು ಮಿ. ಮಹಾಬಲ ಎಂದು ಹತ್ತಿರಕ್ಕೆ ಬಂದವಳನ್ನು ಅಂತರಂಗಕ್ಕೆ ತೆಗೆದುಕೊಂಡಂತೆ ಹೇಳಿದ-

"ಮಿಸ್. ಕಾವೇರಿ ಮುಂದಿನ ಮಳೆಗಾಲ ದವರೆಗೆ ಕಾಯೋಣ ಎಂದರೆ ತಪ್ಪೇನಿಲ್ಲ. ಈ ಕಾರ್ಡ್ ನಿಮ್ಮ ಹತ್ತಿರ ಇರಲಿ. ಆಗಾಗ್ಗೆ ಭೇಟಿಯಾಗ್ತಾ ಇರೋಣ. ಒಬ್ಬರನ್ನೊಬ್ಬರು ಪರಸ್ಪರ ಅರ್ಥ ಮಾಡಿಕೊಳ್ಳಲು, ನಿಮ್ಮ ರುಚಿ, ಅಭಿರುಚಿ ಎಲ್ಲ ತಿಳಿದುಕೊಳ್ಳಲು ಈ ಒಂದು ವರ್ಷ..."

ಮಹಾಬಲ ಮಾತು ಮುಗಿಸುವುದರೊಳಗೇ ಕಾವೇರಿ ಚಟಪಟಗುಟ್ಟಿದಳು. "ಹೌದು... ಹೌದು... ಮುಂದಿನ ಒಂದು ವರ್ಷದಲ್ಲಿ ಇಷ್ಟೆಲ್ಲ ತಿಳಿದೂ ನಮ್ಮಿಬ್ಬರಲ್ಲೂ ಇನ್ನೂ ಮದುವೆ ಆಕರ್ಷಣೆ ಉಳಿದಿದ್ದರೆ..."



"ಮಳೆ ಬಂದು ತಿಪ್ಪಗೊಂಡನಹಳ್ಳಿ ಕೆರೆ ತುಂಬಿದರೆ..."

ಮಹಾಬಲ ಕಾವೇರಿಯ ಮಾತನ್ನು ಪೂರ್ತಿ ಮಾಡಿದ. ಕಾವೇರಿ ಕಿಲಕಿಲಿಸಿದಳು.

ಎರಡು ದಿನಗಳ ನಂತರ ಮೊದಲು ಫೋನ್ ಮಾಡಿದವನು ಮಹಾಬಲನೇ.

"ಮಿಸ್. ಕಾವೇರಿ ಸಂಜೆ ಫ್ರೀ ಇದೀರಾ...?"

"ಫ್ರೀ ಮಾಡ್ಕೋಬೇಕೂಂದ್ರೆ, ಮಾಡ್ಕೋಬೇಕು."

"ನನ್ನ ಸಲುವಾಗಿ ಫ್ರೀ ಮಾಡ್ಕೋತೀರಾ?"

"ಓ.ಕೆ. ಎಲ್ಲಿ ಸಿಗ್ತೀರಾ?"

"ಬ್ರಿಗೇಡ್ಸ್‌ನ ಬೆಲ್ ಪಾಯಿಂಟ್?"

"ಆ ಜಾಗ ನನಗೆ ಸೇರೋಲ್ಲ. ಎಂ.ಜಿ. ರೋಡ್ ಮ್ಯೂಸಿಕ್ ಪಾಯಿಂಟ್."

"ಓಯಸ್ ನಂದೇನೂ ತಕರಾರಿಲ್ಲ. ಸಂಜೆ 6.30ಕ್ಕೆ..."

"ಓ.ಕೆ."

ಮಹಾಬಲ ಚರ್ಚ್‌ಸ್ಟ್ರೀಟ್‌ನಲ್ಲಿ ಬಾಕ್ಸರ್ ಪಾರ್ಕ್ ಮಾಡಿ 6-15ಕ್ಕೆಲ್ಲ ಮ್ಯೂಸಿಕ್ ಫಾಯಿಂಟ್ ಮಹಾದ್ವಾರದಲ್ಲಿ ಕಾಯುತ್ತಾ ನಿಂತ.

ಕಾವೇರಿ ಎಂ.ಜಿ. ರೋಡಿನ ಒಂದು ತುದಿಯಲ್ಲಿ ಸ್ಕೂಟಿ ಪಾರ್ಕ್ ಮಾಡಿ ಠಾಕೋಠಾಕ್ಕಾಗಿ 6.30ಕ್ಕೆ ಮ್ಯೂಸಿಕ್ ಪಾಯಿಂಟ್ ಮಹಾದ್ವಾರಕ್ಕೆ ಬಂದಳು.

"ತುಂಬಾ ಹೊತ್ತಾಯ್ತ ಬಂದು?"

"ಇಲ್ಲ ಹದಿನೈದು ನಿಮಿಷ ಆಯ್ತು. ಮೊದಲನೇ ದಿವಸಾನೇ ಲೇಟ್ ಲತೀಫ್ ಅನ್ನಿಸ್ಕೊಬಾರ್ದಂತ ಸ್ವಲ್ಪ ಮುಂಚೆ ಬಂದೆ"

ಇಬ್ಬರೂ ಮ್ಯೂಸಿಕ್ ಪಾಯಿಂಟ್‌ನ ಹಾಲ್‌ಗೆ ಬಂದರು.

"ಎಲ್ಲಿ ಕೂರೋಣ?"

"ಅಗೋ ಅಲ್ಲಿ, ಆ ಕೋಸಿ ಕಾರ್ನರ್‌ನಲ್ಲಿ."

ಎರಡೇ ಕುರ್ಚಿಗಳಿದ್ದ ದುಂಡು ಗಾಜಿನ ಮೇಜು. ಕರಿಯ ಚಿತ್ತಾರದ ಫ್ರೇಮಿನ ಮಧ್ಯೆ ದುಂಡು ಗಾಜು ನಗುನಗುತ್ತಿತ್ತು. ಮೆತ್ತನೆಯ ಪೀಠ. ಕುರ್ಚಿ ಹಿತಕರವಾಗಿತ್ತು.

ವೈಟರ್ ರೆಕ್ಸಿನ್ ಹೊದಿಕೆಯಿಂದ ಸುಂದರವಾಗಿ ಅಲಂಕೃತಗೊಂಡ ಮೆನು ಪುಸ್ತಕ ಮುಂದಿಟ್ಟು ಹೋದ.

"ಏನ್ ತಗೋತೀರ?"

ಕಾವೇರಿ ಮೆನು ಪುಸ್ತಕ ತಿರುವಿ ಹಾಕುತ್ತಾ ಕೇಳಿದಳು.


"ಏನಾದ್ರೂ, ಸರಿ. ನಿಮ್ಮ ಚಾಯ್ಸೇ ನನ್ನ ಚಾಯ್ಸೂನೂ..."

"ಏನಾದರೂ ಲೈಟಾಗಿ" ಎಂದ ಕಾವೇರಿ ತನಗೆ ಎರಡು ರಸಮಲೈ, ದೋಸೆ ಮತ್ತು ಕೋಲ್ಡ್ ರೋಸ್ ಮಿಲ್ಕ್ ಹೇಳಿದಳು.

ಮಹಾಬಲ "ಡಿಟ್ಟೋ" ಎಂದ.

ಅಲ್ಲಲ್ಲಿ ಹರಡಿಕೊಂಡು ಕೂತ ಯುವ ಜೋಡಿಗಳ ಕಲರವ. ಅಲೆ ಅಲೆಯಾಗಿ, ಆಕಾಶದಲ್ಲಿ ಹಿಂಜಿದ ಹತ್ತಿಯ ಎಳೆಗಳಂತೆ ತೇಲಿಬರುತ್ತಿದ್ದ ಬಿಸ್ಮಿಲ್ಲಾ ಖಾನರ ಶಹನಾಯ್... ಕೆಲವೊಮ್ಮೆ ಮಂದ್ರದಲ್ಲಿ, ಕೆಲವೊಮ್ಮೆ ತಾರಕದಲ್ಲಿ ಮಂದ ಮಾರುತದಂತೆ, ವಸಂತದ ಗುಲ್‌ಮೊಹರ್‌ನ ಗುಚ್ಛಗಳಂತೆ, ಷಹನಾಯ್ ವಾತಾವರಣಕ್ಕೆ ಮುದ ತಂದಿತ್ತು.

ಮಹಾಬಲ ಕಾವೇರಿಯನ್ನೇ ದಿಟ್ಟಿಸಿ ನೋಡುತ್ತಾ "ನಿಮಗೊಂದು ಸುದ್ದಿ ಹೇಳೋದಿದೆ" ಎಂದ.



"ಹೌದಾ, ಏನದು?"

"ನೀವು ಮೊದಲ ನೋಟದಲ್ಲೇ ನನ್ನ ಕ್ಲೀನ್ ಬೌಲ್ಡ್ ಮಾಡಿಬಿಟ್ಟಿರಿ"

ರಕ್ತ ಚಿಲುಮೆಯಂತೆ ಚಿಮ್ಮಿ ಕಾವೇರಿಯ ಮುಖದಲ್ಲಿ ಕೆಂಪಡರಿತು. ಶಹನಾಯ್ ಷಡ್ಜ-ವೃಷಭ-ಗಾಂಧಾರಗಳನ್ನು ದಾಟಿ ಪಂಚಮದಲ್ಲಿ ವಿಜೃಂಭಿಸುತ್ತಿತ್ತು.

ಮಹಾಬಲ ಕಾವೇರಿಯ ಬಲಗೈಯನ್ನು ಮೃದುವಾಗಿ ಅದುಮುತ್ತ ಹೇಳಿದ-

"ಕಾವೇರಿ ನಾನು ನಿನ್ನ ಪ್ರೀತಿಸ್ತೀನಿ."

"......"

"ನಾನು ನಿನ್ನ ಪ್ರೀತಿಸ್ತೀನಿ. ನನ್ನ ಪ್ರೀತಿ ಅಚಲವಾದದ್ದು, ಹಿಮಾಲಯದಂತೆ."

"......"

"ಮಾತಾಡು ಕಾವೇರಿ ನೀನು..."

"ಏನ್ ಹೇಳ್ಲಿ... ನಾನೂ, ನನ್ನ ಪ್ರೀತಿಗೆ ಯಾವುದಾದರೂ ಉಪಮಾನ ಸಿಗುತ್ತೋ ಅಂತ ಯೋಚಿಸ್ತಾ ಇದೀನೀ..."

"......"

"ನೀವು ಹಿಮಾಲಯಾನ ಹಿಡಿದಿದ್ದೀರಿ... ಹರಿಯುವ ನದಿ..."

"......"

"ಉಹ್ಞೂ ಅದು ಚಂಚಲ ಅನ್ನಿಸ್ತೋತ್ತೆ... ಸಮುದ್ರ... ಅಗಾಧವಾದರೂ ಭೋರ್ಗರೆಯುತ್ತೆ..."

"......"

"ಐ ಸಿಂಪ್ಲೀ ಲವ್ ಯು ಮಾಬ್ಲೀ.."

ಈಗ ಮಹಾಬಲನ ಕೆನ್ನೆಯಲ್ಲಿ ರಂಗೇರಿತ್ತು.

ರಸಮಲೈ, ಶಹನಾಯ್ ತುಂಬ ಮಧುರವೆನಿಸಿತು.

ಮಹಾಬಲ ರೋಸ್ ಮಿಲ್ಕ್ ಹೀರುತ್ತಾ "ಒಂದು ಮಾತು" ಅಂದ.

"ಏನು?"

''ಅವರೂ ಮುಂದಿನ ಮಳೆಗಾಲದವರೆಗೂ ಕಾಯೋದು ಅಂದೆ... ಮಳೆ ಬಂದು ತಿಪ್ಪಗೊಂಡನಹಳ್ಳಿ ಕೆರೆ ತುಂಬಿ...''

''ನನ್ನ ನೀವೆ ಹೇಳಿದರೆ ಟೆಸ್ಟಿಂಗ್ ಟೈಂ ಅಂತ...''

''ಹ್ಞಾಂ ಹ್ಞಾಂ ಹೇಳಿದೆ...''

''ಅಲ್ಲೀವರೆಗೂ ಕಾಯೋದು...''

''ಕಾಯೋದು...''

''ಕಾಯೋದರಲ್ಲೂ ಮಜಾ ಇದೆ ಮಾಬ್ಲೀ...''

''ಹಾಗಾದರೆ ಕಾಯೋಣ...''

''ಕಾಯೋಣಾ...''

''ಹಲೋ ಮಾಬ್ಲೀನ...''

''ಏನ್ ಕಾವೂ...''

''ಸಂಜೆ 6.30 ಮ್ಯೂಸಿಕ್ ಪಾಯಿಂಟ್''

''ಓ.ಕೆ.''

ಕಾವೇರಿಯೇ ಮೊದಲು ಬಂದಿದ್ದಳು. ಪಾರ್ಕಿಂಗ್ ಸ್ಪೇಸ್ ಸಿಗಲಿಲ್ಲ ಎಂದು ಗೊಣಗುತ್ತಾ ಮಹಾಬಲ ಬಂದ. ಇಬ್ಬರೂ ಕೋಸಿ ಕಾರ್ನರ್ ಸೇರಿಕೊಂಡರು.

ಮಹಾಬಲ ನನಗೆ ರಸಮಲೈ ಬೇಡ ಎಂದ.

''ಪರವಾಗಿಲ್ಲ ಒಂದು ತಿನ್ನು'' ಎನ್ನುತ್ತ ಕಾವೇರಿ ತಿಂಡಿ ಹೇಳಿದಳು.

''ಈ ವರ್ಷ ಮಳೆ ಕೈಕೊಡುತ್ತೆ ಅಂತ ನಾನು ತಿಳ್ಕೊಂಡಿರಲಿಲ್ಲ''

ಮಹಾಬಲ ನಿಷ್ಠುರವಾಗಿ ನುಡಿದ.

''ಪರ್ವಾಗಿಲ್ಲ. ಮುಂದಿನ ವರುಷ ಬಂದೇ ಬರುತ್ತೆ...''

''ಅಲ್ಲೀವರ್ಗೆ ಕಾಯೋದು...''

''ಕಾಯೋದರಲ್ಲಿ ಮಜಾ ಇದೆ...''

ಮಹಾಬಲನ ದನಿಯಲ್ಲಿ ವ್ಯಂಗವೋ, ವಿಷಾದವೋ ಕಾವೇರಿಗೆ ತಿಳಿಯಲಿಲ್ಲ.

''ಕಾಯೋಣ''

''ಕಾಯೋಣ''

ಮಹಾಬಲ ತುಂಬ ಯಾಂತ್ರಿಕವಾಗಿ ಸ್ಪಂದಿಸಿದಂತೆ ಅನಿಸಿತು. ಕಾವೇರಿ ಅವನ ಕೈಯನ್ನು ಹಿಡಿದು ಮೆಲುದನಿಯಲ್ಲಿ ಹೇಳಿದಳು

''ಕಮಾನ್ ಚಿಯರಪ್, ಏಮಾಲಯ ತಲೆ ಮೇಲೆ ಕುಸಿದಂತೆ ಆಡ್ತೀಯ...''

''.......''

''ಇನ್ನೊಂದು ವರ್ಷ ಆಪ್ಪತ್ತಬರುತ್ತೆ. ನನಗೆ ನಿನಗೆ ಬೇರೆ ಕನಸುಗಳಿಲ್ವ, ಆಸೆಗಳಿಲ್ವಾ''

ಕಾವೇರಿಯ ಸ್ಪರ್ಶದಿಂದ ಮಹಾಬಲನಿಗೆ ಹಿತವೆನಿಸಿತು.

''ಹೌದು ವರ್ಷ ಆಪ್ಪತ್ತ ಬರುತ್ತೆ. ಕಳೆದ



ಒಂದು ವರುಷ ಕಳೆದದ್ದೆ ಗೊತ್ತಾಗಲಿಲ್ಲ. ಒಂದು ದಿನ ಮ್ಯೂಸಿಕ್ ಪಾಯಿಂಟ್, ಇನ್ನೊಂದು ದಿನ ದೋಸೆ ಪಾಯಿಂಟ್... ಹೀಗೆ ಪಾಯಿಂಟ್ ಟು ಪಾಯಿಂಟ್... ಪಾಯಿಂಟು ಪಾಯಿಂಟ್. ವಾಟೀಸ್ ದಿ ಪಾಯಿಂಟ್?''

ಮಹಾಬಲ ಕಾವೇರಿಗೆ ಕೇಳಿಸಿಯೂ ಕೇಳಿಸದಂತೆ ಗುಣಮುಣಗಿಸಿದ.

''ನೋಡು ನಾನು ನನ್ನ ಒಂದು ಆಸೆ ಕನಸು ಹೇಳ್ತೀನಿ. ನೀನು ನಿನ್ನದೊಂದು ಹೇಳು''

ಕನಸು ಎಂದದ್ದೇ ಮಹಾಬಲನಿಗೆ ಅಮೆರಿಕ ನೆನಪಾಗಿ ''ಆಗಲಿ'' ಎಂದ ಹುಮ್ಮಸ್ಸಿನಿಂದ.

''ಮೊದಲು ನೀನು ಹೇಳು?''

'ಆಗಲಿ' ಎಂದು ಕಾವೇರಿ ಕನಸಿನ ಎಳೆಗಳನ್ನೆಲ್ಲ ಜೋಡಿಸಿಕೊಳ್ಳುವಂತೆ ಒಂದೆರಡು ಕ್ಷಣ ಮೌನಿಯಾಗಿ ನಂತರ ನುಡಿದಳು-

''ನೋಡು, ನಗಬಾರದು''

''ಇಲ್ಲ''

''ರಾಜಕಾರಣಿ ಆಗಬೇಕು ಅನ್ನೋದು ನನ್ನ ಆಸೆ; ನನ್ನ ಕನಸು''

''ಫೆಂಟಾಸ್ಟಿಕ್''

''ಅತಿಯಾಯ್ತು ಅಂತೀಯ?''

''ಇಲ್ಲ''

''ಹೇಗಿದ್ದರೂ ಲೋಕಸಭೆ/ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33 ಮೀಸಲಿಡಬೇಕೂಂತಿದಾರೆ. ಆ ಮಸೂದೆ ಪಾಸಾದರೆ ನಾನು ಎಂ.ಎಲ್.ಎ./ಎಂ.ಪಿ./ಮಂತ್ರಿ ಆಗೋದು ಖಂಡಿತಾ.''

ಕಾವೇರಿ ಭರವಸೆಯ ದನಿಯಲ್ಲಿ ಹೇಳಿದಳು.

''ಹೌದು ಹೌದು'' ಎಂದು ಮಹಾಬಲ ತಲೆದೂಗಿದ.

''ಆಗ ಮಾತ್ರ, ನೀನು ನನಗೆ ಸ್ವಾತಂತ್ರ್ಯ ಕೊಡಬೇಕಪ್ಪ. ಸಭೆ/ಸಮಾರಂಭ/ಅಧಿವೇಶನ ಇನ್ನೂ ಏನೇನೋ ಇರುತ್ತೆ. ಈಗಿನ ಹಾಗೆ ಆ ಪಾಯಿಂಟು ಈ ಪಾಯಿಂಟೂ ಅಂತ... ಏನಂತೀಯ?''

''ಹೌದು. ನೀನು ಹೇಳೋದರಲ್ಲೂ ಪಾಯಿಂಟಿದೆ''

''ಎಲ್ಲಿ ಈಗ ನಿನ್ನ ಆಸೆ, ಕನಸು ಹೇಳು?''

''ಅಮೆರಿಕಕ್ಕೆ ಹೋಗೋದು'' ಮಹಾಬಲ ಆತ್ಯುತ್ಸಾಹದಿಂದ ಹೇಳಿದ.

''ವಂಡರ್ ಫುಲ್''

''ಬಿಲ್‌ಗೇಟ್ಸ್‌ಗೆ ಬಯೋಡಾಟ ಕಳಿಸಿದೀನಿ. ಯಾವತ್ತಾದರೂ ಕರೆಬಹುದು''

''ಹೌದಾ... ಮಾಬ್ಲೀ, ಬೆಸ್ಟ್ ಆಫ್‌ಲಕ್''

''ಆಗ ನೀನು ಈ ಕೆಲಸಾ ಬಿಟ್ಟು ಅಮೆರಿಕಕ್ಕೆ ಬರಬೇಕಾಗುತ್ತೆ''

''ಬರ್ತೀನಿ. ಈ ಪ್ರತಿಭಾ ಸಂಪನ್ನೆ, ಸ್ವರ್ಣ ಪದಕ ವಿಜೇತೆ ಕಾವೇರಿಗೆ ಅಲ್ಲಿ ಒಂದು ಕೆಲಸ ಸಿಗಲ್ಲವೇನೋ...''

''ಸಿಗಬಹುದು... ಸಿಗಬಹುದು...''

ಗಂಟೆ 8.30 ದಾಟಿತ್ತು.

''ಹೋಗೋಣ್ವಾ''

ಕಾವೇರಿ ಪಿಸುಗುಟ್ಟಿದ್ದಳು.

''ಹಾಗಾದ್ರೇ...''

ಇನ್ನೂ ಕನಸಿನ ಲೋಕದಲ್ಲೇ ಇದ್ದ ಮಹಾಬಲನ ಮಾತನ್ನು ಅರ್ಧಕ್ಕೇ ತಡೆದು ಕಾವೇರಿ ಹೇಳಿದಳು-

''ಕಾಯೋಣ...''

''ಹ್ಞೂಂ ಕಾಯೋಣಾ''

''ಹಲೋ, ಕಾವೂ... ನಾನು...''

''ಮಾಬ್ಲೀ ಬೆಳಗ್ಗೆ ಬೆಳಗ್ಗೆ ಏನೋ...''

''ಅದೇ, ಪೇಪರ್ ಓದ್ತಾ ಇದ್ದೆ... ಹವಾಮಾನ ಹೇಳುತ್ತೆ ಶುಭ್ರ ಆಕಾಶ...''

''ಮಾಬ್ಲೀ ಪ್ಲೀಸ್ ಸಂಜೆ ಮಾತಾಡೋಣ... ನಾನು ಬೇಗ ಆಫೀಸಿಗೆ ಹೋಗಬೇಕು. ಸಿಂಗಪುರ ಫ್ಲೈ ಓವರ್ ಫ್ರಾಬ್ಲಮ್ಮು, ಜೊತೆಗೆ ನೆಲದೊಳಗೂ ತಲೇ ಮೇಲೂ ರೈಲು ಓಡಿಸೋ ವ್ಯವಸ್ಥೆ ಎಲ್ಲಾ ನನ್ನ ತಲೆ ತಿಂತಿದೆ...''

''ಕಾವೂ ರೈಲು ಬಿಡೋದು ಕಲಿತುಕೊಂಡರೆ ಎಲ್ಲ ಸುಲಭ... ಓಕೆ ಸಂಜೆ...''

ಅದೆ ಪಾಯಿಂಟು ಅದೇ ಕೋಸಿ ಕಾರ್ನರ್.

''ಮೇಡಂ ನಿನ್ನೆದೆ ರಿಪೀಟಾ..''

ಕಾವೇರಿ ಮಾಬ್ಲಿಯತ್ತ ನೋಡಿದಳು, ಆಮೇಲೆ 'ಯೆಸ್' ಎಂದಳು.

ಮಹಾಬಲ ಮಾತನಾಡುವ ಮೊದಲೇ ''ಮಾಬ್ಲೀ ನೀ ಈಗ ಏನೂ ಮಾತಾಡ್ಬೇಡ... ನನಗೆ ಅಮ್ಮ ಚಿಕ್ಕಂದಿನಲ್ಲಿ ಹೇಳಿಕೊಟ್ಟ ಒಂದು ನರ್ಸರಿ ರೈಂ ಮಾದರೀದು ನೆನಪಾಗ್ತಿದೆ...'' ಕಾವೇರಿ ಉತ್ಸಾಹ ಸೂಸುವ ಬಟ್ಟಲುಕಣ್ಣುಗಳಿಂದ ಹೇಳಿದಳು.

''ಏನದು?''

''ಕೇಳ್ಕೋ...

ಹಾಗಲ್ವಾಡೀಗೆ ಹೋದ್ರೇಗೀದ್ರೆ...

ಅಗ್ಗದ ಎಮ್ಮೆ ತಂದ್ರೇಗಿಂದ್ರೇ...

ತಂದ ಎಮ್ಮೆ ಕರೆದ್ರೆಗಿರದ್ರೇ...

ಹಾಲು ಮೊಸರು ಕಂಡ್ರೆಗಿಂಡ್ರೇ...

ಹಾಲು ಬೋನ ಉಂಡ್ರೇಗಿಂಡ್ರೇ...''

''ಚೆನ್ನಾಗಿದೆ ತುಂಬಾ ಚೆನ್ನಾಗಿದೆ ಈ 'ರೇ' ಪ್ರಪಂಚ. ನಾನಿದನ್ನ ಮುಂದುವರಿಸಲಾ.''

''ಓ ನೀನೂ ಕವೀನಾ... ಓಕೆ...''

''ಮುವತ್ಮೂರು ಪರ್ಸೆಂಟ್ ಬಿಲ್ ಪಾಸಾದ್ರೆಗೀದ್ರೆ... ಶಾಸಕಿ ಮಂತ್ರಿ ಪಟ್ಟ ಸಿಕ್ರೇ. ಗಿಕ್ರೆ...''

''.......''

''ಏನಂತೀ...?''

''ಬಿಲ್‌ಗೇಟ್ಸ್ ನಕ್ಕರೇಗಿಕ್ರೇ...

ಅಮೆರಿಕದಿಂದ ಆರ್ಡರ್ ಬಂದ್ರೆಗಿಂದ್ರೆ...''

''ರೇ.. ರೇ... ಫೆಂಟಾಸ್ಟಿಕ್ ಅಲ್ವಾ'' ಬಹುತೇಕ ಕೋರಸ್ ಎಂಬಂತೆ ಇಬ್ಬರೂ ಹೇಳಿದರು.

ಕೋರಸ್ ಮುಂದುವರಿಸೋಣ...

ಅಕ್ಟೋಬರ್ ನವೆಂಬರ್‌ನಲ್ಲಿ ಮಳೆ ಬಂದ್ರೆ ಗಿಂದ್ರೇ

ತಿಪ್ಪಗೊಂಡನಹಳ್ಳಿ ಕೆರೆ ತುಂಬಿದ್ರೆ ಗಿಂಬಿದ್ರೆ,

''ಏನಂತಿ?''

ಕಾವೇರಿ ತುಂಬ ಕಕ್ಕುಲಾತಿಯಿಂದ ಕೇಳಿದಳು.

''ಕಾಯೋಣ''

''ಕಾಯೋಣಾ''

''ಹಲೋ ಕಾವೂನ...''

''ಹ್ಲೂಂ... ಏನೋ ಮಾಬ್ಲೀ...?''

''ಅಲ್ಲ ಹವಾಮಾನ ವರದಿ ಓದ್ತಾ ಇದ್ದೆ...''

''ಏನನ್ನುತ್ತೆ ನಿನ್ನ ಹವಾಮಾನ ವರದಿ''

''ಶುಭ್ರ ಆಕಾಶ... ಒಣ ಹವೆ... ಅಕ್ಟೋಬರ ನವೆಂಬರ್ ಪೂರ್ತಿ ಹೀಗೆ ಇರುತ್ತಂತೆ''

''ಇರ್ಲಿ ಬಿಡು ಸಂಜೆ ಸಿಗೋಣ''

''ಓ.ಕೆ.''

''ಯಾರೆ ಅದು?''

ಕಾವೇರಿ ರಿಸೀವರ್ ಇಡುತ್ತಿದ್ದಂತೆ ವೆಂಕಟಲಕ್ಷ್ಮಮ್ಮನವರು ಮಗಳನ್ನು ಕೇಳಿದರು.

''ಅದೇ ಮಾಬ್ಲೀ...''

''ಅಂದ್ರೆ...''

''ಅಂದ್ರೆ, ನಿನ್ನ ಭಾವಿ ಅಳಿಯ ಮಿಸ್ಟರ್ ಮಹಾಬಲ ರಾವ್ ಬಿ.ಇ., ಕಂಪ್ಯೂಟರ್ ಎಂಜಿನಿಯರ್''

''ಏನೇ ಇದು ಗಂಡನ ಹೆಸರು ಹೇಳ್ತಾರೇನೆ?''

''ಸೋ ವಾಟ್... ಏನು ಹೆಸರು ಹೇಳಿದ್ರೆ''

''ಆಯಸ್ಸು ಕಡಿಮೆ ಆಗುತ್ತಂತೆ. ಗಲ್ಲಕ್ಕೆ ಹಾಕ್ಕೋ...''

''ಇಷ್ಟಾಗಿ ಅವನೇನೂ ಇನ್ನೂ ಗಂಡ ಅಲ್ವಲ್ಲ ಭಾವಿಗಂಡ ಅಲ್ಲಅಲ್ಲ ಬಾವಿ ಗಂಡ''

''ಏನಂತೆ ಫೋನ್ ಮಾಡಿದ್ದು...''

''ಈ ವರ್ಷವೂ ಮಳೆ ಇಲ್ಲ, ಕೆರೆ ತುಂಬೋ ಸಾಧ್ಯತೆ ಇಲ್ಲಾಂತೆ''

''ನೀನ್ ಏನಂದಿ?''

'ಏನ್ ಅನ್ನೋದು. ಮುಂದಿನ ವರ್ಷದವರೆಗೂ ಕಾಯೋಣಾ ಅಂದೆ...''

''ಇದೇನೆ ಹುಡುಗಾಟ...''

''ಹುಡುಗಾಟ ಏನಮ್ಮ ಬಂತು. ನೀನೆ ತಾನೆ ಬಾವಿ ಇರೋ ಮನೆ ಬೇಡಾಂದದ್ದು.

''ಅವನು ಬೇಡಾ, ಬೇರೆ ನೋಡೋಣ...''

''ಅಮ್ಮಾ ನಾನು ಮಾಬ್ಲನ್ನ ಪ್ರೀತಿಸ್ತೀನಿ. ಆದರೆ ಅವನ್ನೇ ಮದುವೆ ಆಗೋದು... ಆಗದಿದ್ದರೂ, ಮದುವೆ ಇಲ್ದೆ ಸುಖವಾಗಿರೊಕ್ಕಾಗಲ್ವೇನಮ್ಮ'' ವೆಂಕಟಲಕ್ಷ್ಮಮ್ಮನವರಿಗೆ ಏನು ಹೇಳಬೇಕೋ ತೋಚಲಿಲ್ಲ.


ಮಗ ಕೆಳಗಿಳಿದು ಬರುವುದನ್ನೇ ಕಾಯುತ್ತಿದ್ದ ಮೈಲಾರಿ ರಾಯರು, ಮಹಾಬಲ ತಿಂಡಿ ಮುಗಿಸಿ ಬ್ರೀಫ್ ಹಿಡಿದು ನಿಂತಾಗ ವರಾಂಡದಲ್ಲೇ ಅಟಕಾಯಿಸಿಕೊಂಡರು.

''ಮಾಬಲ ಸ್ವಲ್ಪ ಮಾತಾಡೋದಿತ್ತು''

''ಅದೇನು ಬೇಗ ಹೇಳಪ್ಪ...''

''ಇನ್ನೂ ಎಷ್ಟು ದಿನಾ ಹೀಗೆ. ಶ್ರಾವಣದಲ್ಲಿ ಒಳ್ಳೆ ಮುಹೂರ್ತಗಳಿವೆಯಂತೆ''

''ಈ ವರ್ಷ ಮಳೆ ಬಂದು ತಿಪ್ಪಗೊಂಡನಹಳ್ಳಿ



ಕೆರೆ ತುಂಬಿದರೆ ಮುಂದಿನ ಶ್ರಾವಣಕ್ಕೆ ನೋಡೋಣ''

''ಇದೇನೋ ನಾಲ್ಕು ವರ್ಷದಿಂದ ಹೀಗೆ ಹೇಳಿದೀರ''

''ನೀವೇ ತಾನೆ ಬಾವಿ ತೊಡಿಸ್ಬೋರು ಕರೆಂಟ್ ದರ ಬೇರೆ ಶೇ. 17ರಷ್ಟು ಜಾಸ್ತಿ''

''ಹಾಗಂತ...''

ಮೈಲಾರಿರಾಯರು ಏನು ಹೇಳಲು ತೋಚದೆ ರಾಗ ಎಳೆದರು.

''ನೋಡಪ್ಪ ನಾನು ಕಾವೇರಿನ ಪ್ರೀತಿಸ್ತೀನಿ. ಮದುವೆ ಆದರೆ ಅವಳನ್ನೇ...''

''ಹಾಗಂತ ಎಷ್ಟು ದಿವಸ ಕಾಯ್ತಿ. ಈ ಹಟ ಬೇಡಾಂತ ಮಗಳಿಗೆ ಬುದ್ಧಿ ಹೇಳಿ ಅಂದರೆ ಆ ಕಪನೀಪತಿ ಗುಮ್ಮನ ಗುಸ್ಕನ ಥರಾ ಕೂತಿರ್ತಾನೆ''.

''ಕಾಯ್ತೀವಿ... ಈ ವರ್ಷ, ಮುಂದಿನ ವರ್ಷ, ಅದರ್ ಮುಂದಿನ ವರ್ಷ... ಆಗದಿದ್ದರೂ ಮದುವೆ ಇಲ್ದೆನೆ ಸುಖವಾಗಿರಲಿಕ್ಕಾಗಲ್ವೇ...''

ಮೈಲಾರಿ ರಾಯರು ''ಇದೇನು ಹುಚ್ಚೋ ಬೆಪ್ಪೋ, ಶಿವಲೀಲೆಯೋ'' ಎಂದು ಹಣೆ ಹಣೆ ಚಚ್ಚಿಕೊಂಡರು.

ಡಿಸೆಂಬರ್ ತಿಂಗಳ ಕೊರೆಯುವ ಚಳಿಗೆ ಕೋಸಿ ಕಾರ್ನರ್ ಹಿತವಾಗಿತ್ತು. ಕಾವೇರಿ ಶಾಲನ್ನೂ ಹೊದ್ದಿದ್ದಳು. ಆ ಬ್ಯಾಂಕಿಂಗ್ ಸೆಕ್ಟರ್ ಸಾಫ್ಟ್‌ವೇರ್ ಪ್ರಾಜೆಕ್ಟ್ ಮುಗಿಯೋ ವೇಳೆಗೆ ಹೆಣಾ ಬಿದ್ಹೋಗತ್ತೆ ಎಂದು ಆಯಾಸ ಪಡುತ್ತಾ ಕುರ್ಚಿಗೊರಗಿದ; ಮಹಾಬಲ.

''ಈ ಚಳಿಗಾಲದ ಸಂಸತ್ತಿನಲ್ಲೂ ಶೇ 33ರ ಬಿಲ್ ಪಾಸಾಗಲಿಲ್ಲ. ಎಲ್ಲ ನಾಯಿಮೂತಿನ ಶೂರರು...''

''ಹೋಗ್ಲಿ ಬಿಡು. ನನಗೂ ಅಮೇರಿಕದ ಹಾಟ ಕಾದು ಕಾದು ಸಾಕಾಯ್ತು...''

''ಹೀಗೆ ಮಾಗಿ ಮಂಜಿನಂತೆ ಕನಸುಗಳೆಲ್ಲ ಕರಗಿಹೋದರೆ ಕೊನೆಗೆ ಉಳಿಯುವುದೇನೋ ಮಾಬ್ಲೀ...''

''ನಾನು ನೀನು''

''ಯು ಆರ್ ಟೂ ಕ್ರೂಡ್...''

ಮಬ್ಬು ಬೆಳಕಿನಲ್ಲಿ ಮಾಬ್ಲಿ ಸುತ್ತ ಕಣ್ಣು ಹಾಯಿಸಿದ. ಒತ್ತೊತ್ತಿ ಕುಳಿತು ಪಿಸುಗುಡುತ್ತಿದ್ದ ಹೊಸ ಜೋಡಿಗಳು. ತಾವು ಇಲ್ಲಿಗೆ ಕಾಯಂ ಗಿರಾಕಿಗಳಾದೆವೇನೋ, ಜಾಗ ಬದಲಾಯಿಸ ಬೇಕು ಎಂದುಕೊಂಡ.

''ನನಗೆ ಕೇಕ್''

''ಯಾವುದು?''

''ಬ್ಲಾಕ್ ಫಾರೆಸ್ಟ್''

''ನನಗೆ ವೆಜಿಟಬಲ್ ಸ್ಯಾಂಡ್‌ವಿಚ್''

''ನೀನು ಸ್ವಲ್ಪ ಡಯಟ್ ಮಾಡೋದು ಒಳ್ಳೇದು...''

''ಯಾಕೋ...''

''ಸೊಂಟದ ಸುತ್ತ ಎರಡು ಟೈರ್ ಬಂದಿದೆ. ನೋಡ್ಕೊಂಡಿದೀಯ''

''ನನ್ನ ದೇಹದ ಹಕ್ಕುದಾರನ ಥರಾ ಮಾತಾಡೋದು ನನಗೆ ಇಷ್ಟವಾಗಲ್ಲ. ನೀನು ನೋಡ್ಕೊಂಡಿದೀಯ? ನಿನ್ನ ಶರಟಿನೊಳಗೆ ಒಂದು ಬೂದುಗುಂಬಳ ಇರೋದು ಗೊತ್ತಿಲ್ವಾ?''

''ಅಲ್ಲಾ ನಿನ್ನ ಆರೋಗ್ಯದ ದೃಷ್ಟಿಯಿಂದ ಹೇಳ್ದೆ... ಕೋಪ ಮಾಡ್ಕೋಬೇಡ...''

''ನಾನೂ ಅಷ್ಟೇ...''

''ಇವತ್ತು ಯಾಕೋ ಶಹನಾಯ್ ಹಾಕಿಲ್ಲ. ಯೆಹೂದಿ ಮೆನುಹಿನ್ ಇರಬೇಕು. ಬದಲಾಯಿಸ ಲಿಕ್ಕೆ ಹೇಳಲಾ...?'' ವಾತಾವರಣ ತಿಳಿಗೊಳಿಸು ವಂತೆ ಮಹಾಬಲ ನುಡಿದ.

''ಬೇಡ''

''ಹೋಗ್ಲಿ ಏನಾದರೂ ಒಳ್ಳೇದು ಮಾತಾ ಡೋಣ...''

''ಹ್ಞಾಂ, ಒಳ್ಳೇದಿದೆ. ನೀನು ಬರ್‍ತಾನೆ ಕಿರಿಕಿರಿ ಮಾಡ್ಕೊಂಡ್ ಬಂದೆ. ನಂಗೆ ಹೇಳೋದೆ ಮರೆತು ಹೋಯ್ತು''

''ಏನದು?''

''ನಂಗೆ ಚೀಫ್ ಆರ್ಕಿಟೆಕ್ಟ್ ಆಗಿ ಪ್ರಮೋಷನ್''

''ಹೌದಾ... ಕಂಗ್ರಾಚುಲೇಷನ್ಸ್... ಹಾಗಾ ದರೆ ನಂಗೆ ರಸಮಲೈ ಬೇಕೇ ಬೇಕು... ವೈಟರ್'' ಎಂದು ಕೂಗಿದ ಮಹಾಬಲ-

''ನಾನೂ ಒಂದು ಗುಟ್ಟು ಹೇಳ್ಲಾ...''

''ಏನು?''

''ನನಗೂ ವೈಸ್ ಪ್ರೆಸಿಡೆಂಟ್ ಆಗಿ ಪ್ರಮೋ ಶನ್. ಆರ್ಡರ್ ನಾಳೆ ನಾಳಿದ್ದರಲ್ಲಿ ಬರ ಬಹುದು.''

''ಹಾಗದರೆ ನನಗೆ ಡಬ್ಬಲ್ ರಸಮಲೈ...''

ಇಬ್ಬರೂ ಮಕ್ಕಳಂತೆ ನಲಿದಾಡುತ್ತ ರಸಮಲೈ ಸವಿದರು. ದೋಸೆ, ಕಾಫಿಯೂ ಆಯಿತು.

ಮಹಾಬಲ ಕುರ್ಚಿಯನ್ನು ಮುಂದಕ್ಕೆ ಎಳೆದು, ಅವಳ ಮುಖದ ಹತ್ತಿರ ಮುಖ ತಂದು ಅವಳ ಕೈಯನ್ನು ತೆಗೆದುಕೊಂಡ. ಅವಳ ಕೈ ಶಾಖ ಹಿತವೆನಿಸಿತು.

''ಕಾವೂ ನನಗೆ ಒಂದೊಂದು ಸರ್ತಿ ಅನ್ನಿಸುತ್ತೇ...''

''ಏನಂತ?''

''ನಾವಿಬ್ಬರೂ ಮಹಾಪೆದ್ದರು ಅಂತ...''

''ಇಬ್ಬರೂ ಅಂತ ಹೇಳಬೇಡ. ನಾನು ಅಂತ ಹೇಳ್ಕೋ. ಅದೂ ರಾಯರಿಗೆ ತಡವಾಗಿ ಜ್ಞಾನೋದಯವಾಗಿದೆ.''

-ಎಂದು ಸಿಡುಕುತ್ತಾ ಕೈಸೆಳೆದುಕೊಂಡು ಕುರ್ಚಿಗೆ ಒರಗಿದಳು.

''ಯಾಕೆ ಹೇಳಿದೇ ಅಂದರೇ...''

''ಹ್ಞೂಂ ಪೂರ್ತಿ ಮಾಡು''

''ಅಲ್ಲ ಅದ್ಯಾವುದೋ ಒಂದು ಬಾವಿ ಕ್ಷುಲ್ಲಕ ವಿಚಾರ ಹಚ್ಚಿಕೊಂಡು ಮದುವೆ ಪೋಸ್ಟ್ ಪೋನ್ ಮಾಡ್ತಾ ಬಂದೀದೀವಲ್ಲ ಪೆದ್ದರಲ್ಲವಾ?''

''ಹೌದಾ...''

''ಅಲ್ವಾ... ನಲ್ಲೀಲಿ ನೀರು ಬರದೇ ಹೋದರೆ ನೀನು ನೀರು ಸೇದ್ಲೇ ಬೇಕಾ...''

''ಮತ್ತೆ...''

''ಬಿಸ್ಲೇರಿ ಇಲ್ಲವಾ?''

ಕಾವೇರಿಗೆ ಅವನ ಮಾತಿನಲ್ಲಿ ಸತ್ಯ ಇದೆ ಎನ್ನಿಸಿತು.

''ಅದ್ಸರಿ... ಮಳೆ ಯಾಕೆ ಬರಲ್ಲಾ ಅಂತ?''

''ಅದೇ, ಅದೇ ನನ್ನ ಪ್ರಶ್ನೇನೂ...''

''ಯಾಕೆ ಬರಲ್ಲ? ಬರ್‍ಲೇ ಬೇಕು. ಈ ವರ್ಷ ಇಲ್ಲದಿದ್ದರೆ ಮುಂದ್ಲ ವರ್ಷ ತಿಪ್ಪಗೊಂಡನ ಹಳ್ಳಿ ಕೆರೆ ಕೋಡಿ ಬೀಳೋ ಅಷ್ಟು ಮಳೆ ಬರುತ್ತೆ.''

ಕಾವೇರಿ ಸ್ವಲ್ಪ ಆವೇಶದಿಂದಲೇ ಹೇಳಿದಳು.

''ಹೌದಾ...''

''ಹೌದು...''

''ಹಾಗಾದರೆ...''

''ಕಾಯೋಣ...''

''ಕಾಯೋಣಾ...''

ವೆಂಕಟಲಕ್ಷ್ಮಮ್ಮ ಮಗ್ಗುಲು ಬದಲಾಯಿಸಿ ದರು. ಸಂಧಿವಾತ. ಎರಡು ಮಂಡಿಗಳು ಹಿಡಿದು ಕೊಂಡುಬಿಟ್ಟಿವೆ. ಓಡಾಡುವುದೇ ಕಷ್ಟ. ಈ ರೋಗಕ್ಕೆ ಔಷಧಿಯೇ ಇಲ್ಲವಂತಲ್ಲ. ಕಣ್ಣಿಗೆ ಕತ್ತಲು ಕವಿದಂತಾಯಿತು. ಅಲ್ಲ...

ಮುಸ್ಸಂಜೆ. ಸಂಜೆಗತ್ತಲು ನಿಧಾನವಾಗಿ ಹಜಾರ, ರೂಮುಗಳನ್ನು ತುಂಬಿಕೊಳ್ಳುತ್ತಿದೆ. ಸಂಜೆ ಮಹಾಲಕ್ಷ್ಮೀ ಸೌಭಾಗ್ಯ ತರೋ ಸಮಯ ದೇವರಿಗೆ ದೀಪ ಹಚ್ಚಬೇಕು. ಆಮೇಲೆ ಮನೆ ದೀಪ ಹಚ್ಚಬೇಕು. ಯಾರಿದಾರೆ ಇದನ್ನೆಲ್ಲ ಮಾಡಲು? ಅವರು ಪ್ರಯಾಸದಿಂದ ಎದ್ದು ನಿಂತು ಕುಂಟುತ್ತಾ ಅಡಿಗೆ ಮನೆಯ ದೇವರ ಜಗುಲಿ ಹತ್ತಿರ ಬಂದರು. ಎರಡು ಪ್ರಣತಿಗೂ ಎಣ್ಣೆ ಹಾಕಿದರು. ಕಡ್ಡಿ ಗೀರಿ ತೊಯ್ದು ಹೂ ಬತ್ತಿಗೆ ಬೆಳಕು ಮುಟ್ಟಿಸಿದರು. ಯಾಂತ್ರಿಕವಾಗಿ ದೇವರಿಗೆ ನಮಸ್ಕಾರ ಮಾಡಿದರು.

ರೂಮಿಗೆ ಬಂದು ಹಾಸಿಗೆಯಲ್ಲಿ ಅಡ್ಡಾದರು.

''ಅಲ್ಲಾ ಮಾತಿಗೆ ಹೇಳ್ತೀನಿ-''

ಅವರು ಓರಿಗೆಯವರ ಜೊತೆ ಮಾತನಾಡು ತ್ತಿರುವಂತೆ...

''ಮೊದಲೆಲ್ಲ ದೇವರಿಗೆ ನಮಸ್ಕಾರ ಮಾಡಿ ದಾಗ 'ದುಡ್ಡು ಕೊಡು, ದವಸ ಕೊಡು, ಒಂದು ಗಂಡು ಮಗು ಕೊಡು. ನನ್ನ ಮಾಂಗಲ್ಯ ಕಾಪಾಡು...' ಅಂತ ಬೇಡ್ಕೋತಾ ಇದ್ದೆ. ಆಮೇಲಾಮೇಲೆ ನಮ್ಮ ಕಾವಿಗೆ ಒಳ್ಳೆ ಗಂಡು ತೋರಿಸು ಅಂತ. ಈಗೀಗ ದೇವರನ್ನ ಏನು ಕೇಳಿಕೋ ಬೇಕು ಅಂತ್ಲೇ ತೋಚಲ್ಲ.''

''ಇವಳಿಗೆ ಎಷ್ಟು ಸರ್ತಿ ಕೂಡಿಸಿ ಹೇಳಿಕೊಟ್ಟಿದ್ದೀನಿ ಅಂತೀರಿ...

ಹೇಳೇ:

ಸಂಜೆಯಾಯ್ತು, ಸೌಭಾಗ್ಯ ಬಂತು
ಆಕಳು ಬಂತು, ಆಕಳ ಕರು ಬಂತು
ಹೂ ಬಂತು, ಹೂವಿನ ಹೆಡಿಗೆ ಬಂತು
ವಂಕಿಸರ, ಗೆಜ್ಜೆ, ಕಾಲ ಕಡಗ
ವಂಕಿ ಸರಗಿ ತೊಟ್ಟ ಮಗ ಆಡಲಿಕ್ಹೋಗಿದಾನೆ
ಚಿನ್ನದ ಪಣತಿ, ರನ್ನದ ಬತ್ತಿ



ನಾ ಹಾಕಿದ ಎಣ್ಣೆ, ನೀ ಹಚ್ಚಿದ ದೀಪ
ಸಂಜೆ ಮಹಾಲಕ್ಷ್ಮೀ ಸೌಭಾಗ್ಯ ಕೊಡಮ್ಮಾ
ಹೇಳೆ... ಹೇಳೆ..

ಸಂಜೆಯಾಯ್ತು ಅಂದರೆ ಗಂಡು ಹುಡುಗರ ಜೊತೆ ಗೋಲಿ ಗಜ್ಜುಗ, ಚಿನ್ನಕೋಲು ಆಡೋದು. ಇಲ್ಲವೇ ಲಂಗದ ತುದೀನ ಸೊಂಟಕ್ಕೆ ಸಿಕ್ಕಿಸಿಕೊಂಡು ಗಂಡು ಹುಡುಗರ ಥರಾ ಸೈಕಲ್ ಕತ್ತರಿ ಹೊಡೆಯೋದು ಆಮೇಲೆ ಬಂದು ಪುಸ್ತಕ ಹಿಡಿದು ಕೂತ್ಕೋಳ್ಳೋದು. ಕಾವೇರಿ ಕೊನೆಗೂ ಕಲಿತ್ಕೊಳ್ಳಲೇ ಇಲ್ಲ.

ಎಲ್ಲಿ ವಂಕಿಸರಗಿ ತೊಟ್ಟ ಮಗಳು?
ಎಲ್ಲಿ ಗೆಜ್ಜೆ ಕಾಲ ಕಡಗ ತೊಟ್ಟ ಮಗ?''

ಏದುಸಿರು ಬಂದಂತಾಗಿ ಕ್ಷಣ ಮಾತು ನಿಲ್ಲಿಸಿದರು. ಮನಸ್ಸು ಜೀಕಿ ಬಿಟ್ಟ ಉಯ್ಯಾಲೆ.

ಆಗ ನನಗಿನ್ನೂ ಹನ್ನೆರಡು ವರ್ಷ. ಎಲ್. ಎಸ್. ಅಂತಾರಲ್ಲ ಆ ಪರೀಕ್ಷೆ ಮುಗಿಸಿದ್ದೆ. ಅಪ್ಪ ಶಾಲೆ ಸಾಕು ಎಂದರು. ಅಮ್ಮ, ದೊಡ್ಡೋಳಾದೆ ಲಂಗ ದಾವಣಿ ಸಾಕೂಂತ ಕಿರಿಗೆ ಉಡಿಸಿದರು. ವಂಕಿಸರಿಗೆ ಕೆಂಪಿನೋಲೆ, ಕೆನ್ನೆ ಸರಪಳಿ ಎಲ್ಲ ಇಟ್ಟು ದೃಷ್ಟಿ ಆಗುತ್ತೆ ಅಂತ ಲಟಲಟ ನೆಟ್ಟಿಗೆ ಮುರಿದರು. ನನ್ನ ಸೊಂಟ ಚಿಕ್ಕದು. ಕಿರಿಗೆ ನಿಲ್ತಾ ಇರಲಿಲ್ಲ. ಅಪ್ಪ ಬೆಳ್ಳಿ ಡಾಬು ಮಾಡಿಸಿಕೊಟ್ಟಿದ್ದರು.

ಮುಂದಿನ ವರ್ಷವೇ ಮದುವೆ. ಇವರಿಗೆ ಹದಿನೆಂಟೇನೋ ಹೈಯ್ಯರ್. ಸೆಕೆಂಡರಿ ಆದದ್ದೇ, 'ಕಾಲೇಜ್ ಓದಿ ಡೆಪ್ಯೂಟಿ ಕಮೀಷನರ್ ಕೆಲಸ ನಮ್ಮ ಮನೆತನಕ್ಕೆ ಬಂದದ್ದಲ್ಲ. ಇರೋ ಶ್ಯಾನುಭೋಗಿಕೆ ಐದು ಎಕರೆ ಗದ್ದೆ ಸಾಕೂಂತ' ಇವರನ್ನ ಕಿರದಿ ಬರೀಲಿಕ್ಕೆ ಹಚ್ಚಿದ್ದರು. ಮುಂದೆ ಶ್ಯಾನುಭೋಗಿಕೇನೂ ಹೋಯ್ತು, ಗದ್ದೇನೂ ಹೋಯ್ತು ಅನ್ನಿ...

ಹದಿನೈದಾದರೂ ನಾನು ಮೈನೆರೀಲಿಲ್ಲ. ಮಾವನವರಂತೂ ಮಗನಿಗೆ ಬೇರೆ ಹೆಣ್ಣು ತರ್ತೀನಿ ಅಂತ ದೂರ್ವಾಸರಾಗಿಬಿಟ್ಟರು. ಸದ್ಯ ಅಷ್ಟರಲ್ಲಿ ರಜಸ್ಸು ಕಾಣಿಸಿಕೊಂಡಿತು. ಮುಂದೆ ಎರಡು ವರ್ಷಕ್ಕೆ ಕಾವೇರಿ ಹುಟ್ಟಿದಳು. ಅದೇಕೋ ಮುಂದೆ ನನಗೆ ಮಕ್ಕಳಾಗಲಿಲ್ಲ. ಒಂದು ಗಂಡು ಮಗು, ವಂಶ ಬೆಳಸಲಿಕ್ಕೆ, ಅಂತ ಇವರು ಕೊರಗಿದರು. ನಾನೂ ದೇವರನ್ನ ಬೇಡಿಕೊಂಡೆ...

ಪೀತಾಂಬರ ಉಟ್ಟು, ವಂಕಿಸರಗಿ ತೊಟ್ಟು ಗೌರಿ ಹಬ್ಬದ ದಿನ ಹಸಿ ಗೌರಿ ತರಲಿಕ್ಕೆಂತ ಹತ್ತಾಳುದ್ದದ ಬಾವಿಗೆ ಹೋಗಿ... ಬಿಂದಿಗೇನ ಕೆಳಕ್ಕೆ ಬಿಡೋ ಮೊದಲು ಬಗ್ಗಿ ನೋಡಿದರೆ ಬಿಸಿಲಿನ ಝಳಕ್ಕೆ ಕನ್ನಡಿ ಆಗಿದ್ದ ನೀರಿನಲ್ಲಿ ಎಂಥ ಅಪ್ಸರೆ ಅಂತೀರ! ಇವರೂ ಮಂತ್ರ ಹೇಳೋದು ಮರೆತು ನಿಂತು ಬಿಡ್ತಿದ್ದರು...


ಈಗ ನೋಡಿ...

ಏನು ಹುಡುಗೀರೋ... ಸೀರೆ ಅಂತೂ ಇಲ್ಲವೇ ಇಲ್ಲ. ಚೂಡಿದಾರೋ ಪೈಜಾಮವೋ ಜುಬ್ಬವೋ... ಪ್ಯಾಂಟೋ... ಕೈಯ್ಯಂತೂ ಬೋಳೇ ಬೋಳು. ಮನಸ್ಸು ಬಂದರೆ ಫ್ಯಾಕ್ಟರೀಲಿ ಮಾಡಿದ ಹಸಿರು ಕುಂಕುಮ...

ಹಸಿರು ಕುಂಕುಮ ಎಲ್ಲಾದರೂ ಕೇಳಿದ್ದೀರ...?

ಇದೇನೆ ಕಾವೇರಿ ಈ ವೇಷ?

ಹಾಲಿನಲ್ಲಿ ಬೆಳಕು. ಇವರು ವಾಕಿಂಗ್ ಮುಗಿಸಿ ಬಂದರೂಂತ ಕಾಣುತ್ತೆ. ಪುಣ್ಯಾತ್ಮ ಉಭ ಇಲ್ಲ ಶುಭ ಇಲ್ಲ. ಮಾತೇ ಕಮ್ಮಿ, ದೀಪ ಹಾಕಿದರೆ ಬಂದರೂಂತ...



''ನೋಡಿದ್ರಾ ...''

''...''

''ನಿಮಗೇ ಹೇಳ್ತಿರೋದು ನೋಡಿದಿರಾ...''

''ಏನು?''

''ನಿಮ್ಮ ಮಗಳ ಇತ್ತೀಚಿನ ವೇಷ...''

''......''

''ಪ್ಯಾಂಟು, ಮೇಲೊಂದು ಶರಟು ಅಥವಾ ಅದೇನೋ ಕಾಫೀನೋ-ಟೀನೋ ಶರಟು. ಅದನ್ನು ಪ್ಯಾಂಟಿನೊಳಗೆ ತುರುಕಿ ಬೆಲ್ಟ್ ಬೇರೆ ಏನೂಂತೀನಿ...''

''ನೀನೆ ಹೇಳಿದ್ಯಲ್ಲ ಮಗನೂ ಅವಳೇ ಮಗಳೂ ಅವಳೇ ಅಂತ''

''ಯಾಕೆ ಕುಟುಕ್ತೀರ್ರೀ...''

''ಇಲ್ಲ ನಿನ್ನ ಮಾತನ್ನ ನಿನಗೇ ಒಪ್ಪಿಸಿದೆ''

''.......''

''.......''

''ಅಲ್ಲ ನಾವು ಪಟ್ಟ ಕಷ್ಟ ಮಕ್ಕಳಿಗೆ ಬೇಡಾಂತ ಹೇಳೋದು ತಪ್ಪಾ? ಬಾವಿ ಸೇದಿ ರಟ್ಟೆ ನೋಯಿಸ್ಕೊಳ್ಳೋದು ಬೇಡಾಂತ ಬಯಸಿದ್ದುಂಟು. ಆದರೇ ಅದನ್ನೇ ಹಠ ಹಿಡಿಯೋದೆ... ಮುವತ್ತಾಯಿತಲ್ಲ...''

''.......''

''ಪರ್ಜನ್ಯವನ್ನಾದರೂ ಮಾಡಿಸಿದ್ರೆ ಚೆನ್ನಾಗಿತ್ತೇನೋ...''

''......''

''ಹಾಳು ಮಂಡಿ ನೋವು''

ವೆಂಕಟಲಕ್ಷ್ಮಮ್ಮ ಮತ್ತೊಂದು ಮಗ್ಗಲು ಬದಲಾಯಿಸಿದರು.

''ಹಲೋ... ಮಾಬ್ಲೀ...''

''ಹೌದೇ...''

''ನ್ಯೂ ಮಿಲೇನಿಯಂ ಶುಭಾಶಯಗಳು''

''ಸೇಮ್ ಟುಯೂ. ಬೆಟರ್‌ಲಕ್ ಇನ್‌ದಿ ನ್ಯೂ ಮಿಲೇನಿಯಂ''

''ವಿಷ್‌ಯು ದಿ ಸೇಮ್... ನ್ಯೂ ಮಿಲೇನಿಯಂ ಪಾರ್ಟಿ''

''ಒಂದೆರಡು ದಿವಸ ಬಿಟ್ಟು. ಇವತ್ತು ವಿಪರೀತ ಕೆಲಸ''

''ಸರಿಯಪ್ಪ''

ಮಹಾಬಲ ಹೊತ್ತಾಯಿತೆಂದು ತಾಯಿ ಕೊಟ್ಟ ಇಡ್ಲಿಯನ್ನ ಗಬಗಬ ತಿನ್ನುತ್ತಿದ್ದ.

ಮೈಲಾರಿ ರಾಯರು ಡೈನಿಂಗ್ ಮುಂದೆ ದಿಢೀರನೆ ಪ್ರತ್ಯಕ್ಷವಾಗಿ ಮುಂದೆ ಕುಳಿತರು.

''ನೋಡು ಮಾಬಲ... ಈ ಮೈಲಾರಿ ಕೊನೆ ಜಂಕ್ಷನ್ನಿಗೆ ಬಂದು ನಿಂತಿದಾನೆ. ನಿನ್ನಮ್ಮನೂ ಅಷ್ಟೆ. ಮುಂದೆ ಏನು?''

''ಏನು?''

''ಒಂಟಿಯಾಗಿರಬಾರದೋ... ವಂಶ ಮುಂದುವರಿಬೇಕೋ...''

''ಏನ್ಮಾಡೂಂತೀಯ?''

''ಬೇರೆ ಸಂಬಂಧ...''

''ಅಂಥಾ ಹೊಸ ಸಾಫ್ಟ್‌ವೇರ್ ಬಂದಿಲ್ಲಪ್ಪ''

''ಏನೋ ಹಾಗಂದ್ರೆ...''

''ಡೆವಲೆಪ್ ಆಗ್ತಿರಬಹುದೇನೋ...''

ಮೈಲಾರಿ ರಾಯರಿಗೆ ಕಕ್ಕಾಬಿಕ್ಕಿಯಾಯಿತು. ಮಗ ಬ್ರೀಫ್ ಕೇಸ್‌ನೊಂದಿಗೆ ಪರಾರಿಯಾಗಿದ್ದ.

''ಹಲೋ ಮಾಬ್ಲೀ...''

''ಹೇಳಮ್ಮ...''

''2000 ಇಸ್ವೀನೂ ಮುಗೀತಾ ಬಂತಲ್ಲೋ...''

''ಹ್ಲೂಂ...''

''ಹೇಗಿದೆ ಹವಾಮಾನ ವರದಿ...''

''ಶುಭ್ರ ಆಕಾಶ, ಒಣಹವೆ...''

ಹಲೋ... ಕಾವೇರಿ...''

''ಮಾಬ್ಲೀ...''

''ರಾತ್ರಿ ಊಟಕ್ಕೆ...''

''ಮ್ಯೂಸಿಕ್ ಪಾಯಿಂಟ್ ಡೈನಿಂಗ್‌ರೂಮ್, ಎಂಟಕ್ಕೆ...''

''ಓ.ಕೆ.''

ಎರಡೆರಡು ನಾನ್ ರೊಟ್ಟಿ, ವೆಜಿಟೆಬಲ್ ಕರಿ, ಮೇಲೊಂದು ಕರ್ಡ್ಸ್ ಬಾತ್.

''ಸಾಕಲ್ಲವೆ ಕಾವು...''

''ಅಲ್ಲೀವರ್ಗೆ ಒಂದು ಟೊಮೆಟೋ ಸೂಪ್''

''ನನಗೆ ಮಷ್‌ರೂಮ್ ಸೂಪ್''

''ಏಕೋ ಈಗೀಗ ಬಿಸ್ಮಿಲ್ಲಾ ಖಾನ್ ಕೂಡಾ ಮನಾಟನಸ್ ಅನಿಸುತ್ತೆ'' ಕಾವೇರಿ ಸೂಪ್ ಹೀರುತ್ತ ಹೇಳಿದಳು.

''ಹೌದು, ಹಾಗೇನೆ...''

''ಹಾಗೇನೆ ಅಂದ್ರೆ?''

ಕಾವೇರಿ ಪ್ರಶ್ನಾರ್ಥಕವಾಗಿ ನೋಡಿದಳು.

''ಸ್ವಲ್ಪ ಕಾಲ ಆದರೆ ರಸಮಲೈ, ದೋಸೆ, ಬಿಸಿ ಬೇಳೆ ಬಾತ್ ಎಲ್ಲಾದರಲ್ಲೂ ರುಚಿ ಕಳ್ಕೋತಾ ಹೋಗ್ತೀವಿ...''

''ಹಾಗಂತೀಯ...?''

''ಹೌದು, ಸಂಬಂಧಗಳೂ ಅಷ್ಟೇ''

''ಯಾಕೋ ನೀನು ಸಿನಿಕನ ಥರಾ ಮಾತಾಡ್ತಿದೀಯ...''

''.....''

''ನಂಗೆ ಹಾಗನ್ಸಲ್ಲಪ್ಪ. ನಂಗೆ ಭರವಸೆ ಇದೆ. ಖಂಡಿತಾ ಭರವಸೆ ಇದೆ...''

''ಯಾವುದರಲ್ಲಿ...?''

''ನೋಡು ಗಾಳೀಲಿ ಮಳೆ ವಾಸ್ನೆ ಬರ್ತಿದೆ''

''ನಿಂಗೆಲ್ಲೊ ಹುಚ್ಚು ಈ ಫ್ಯಾನ್ ಗಾಳೀಲಿ ಎಂಥಾ ಮಳೆ ವಾಸ್ನೆ''

''ಇಲ್ಲ ಕಿಡಕಿ ಹತ್ತಿರ ಹೋಗಿ ಗಾಳಿಗೆ ಮುಖ ಒಡ್ಡಿ ನೋಡು...''

''......''

''ಮಳೆ ವಾಸ್ನೆ... ಗುಡುಗಿದ ಸದ್ದೂ...''

''ಹಾಗಾದ್ರೆ...''


''ಮಳೆಬರುತ್ತೆ ಖಂಡಿತಾ ಬರುತ್ತೆ. ಭರ್ಜರಿ ಮಳೆ ಬರುತ್ತೆ...''

(ಇವಳು ಹಿಸ್ಟೆರಿಕ್ ಆಗ್ತಿದಾಳೆ? ಮಹಾಬಲನಿಗೆ ಒಂದು ಕ್ಷಣ ದಿಗಿಲಾಯಿತು)

''ಹಾಗಾದ್ರೆ ಏನ್ ಮಾಡೋಣ ಕಾವು...''

''ಕಾಯೋಣ''

''ಕಾಯೋಣಾ''.



[illegible]

[illegible]



Delicious & Healthy
TASTEE SOFTY
ಕೇವಲ ರೂ.5/-ಮಾತ್ರ
ರುಚಿಕರ ಮತ್ತು ಆರೋಗ್ಯಕರ
ಟೇಸ್ಟಿ ಸಾಫ್ಟಿ
ಹಂಚಿಕೆದಾರರು
ಧಾರವಾಡ, ಹಾವೇರಿ, ದಾವಣಗೆರೆ, ಗದಗ ಜಿಲ್ಲೆಗಳಿಗೆ.
★ ಶ್ರೀ ಮಲ್ಲಿಕಾರ್ಜುನ ಟ್ರೇಡರ್ಸ್, ನಂ. 38, ವಿನಾಯಕನಗರ, ವಿದ್ಯಾನಗರ,
ಹುಬ್ಬಳ್ಳಿ. ಫೋನ್: 0836-375878 ಮೋ: 9844095263.
ಜಗದೀಶ್. ಎಂ. ತೊಸಮಠ
ಬಿಜಾಪುರ ಜಿಲ್ಲೆಗೆ.
ಕಿಶೋರ್.ಎಂ.ಗಂಗಣ್ಣನವರ್. ವಿಜಯಲಕ್ಷ್ಮಿ
ಬಾಗೇವಾಡಿ ರೋಡ್,
ಬಳ್ಳಾರಿ ಜಿಲ್ಲೆಗೆ.
ವಿ. ಶಿವರಾಜ್, ಶಿವ ಮಾರ್ಕೆಟಿಂಗ್, ಮುಖ್ಯ ರಸ್ತೆ, ಕಂಪ್ಲಿ,
ಫೋನ್: 08394-50784/50529
ಬೆಳಗಾಂ ಜಿಲ್ಲೆಗೆ ★ ಮೆ|| ರೇಷ್ಮಿ ಬ್ರದರ್ಸ್
ಜವಳಿಗಲ್ಲಿ, ಬೈಲಹೊಂಗಲ್, ಫೋನ್ : 08288-33294/36494
E-Mail : reshmi_balu@yahoo.com ಎಮ್.ಎಸ್. ರೇಷ್ಮಿ
ರಾಯಚೂರು ★ ಅಲರ್ಟ್ ಎಂಟರ್‌ಪ್ರೈಸಸ್
12-83/78, ಜಿಲ್ಲಾ ನ್ಯಾಯಾಲಯ ಎದುರು, ತಾಜ ಕಾಲೋನಿ,
ರಾಯಚೂರು. ಫೋನ್: 08532-33122. ಮಹಮ್ಮದ್ ಸಯೀದ್
ಬೆಂಗಳೂರು ಜಿಲ್ಲೆಗೆ
ಬಾಗಲಕೋಟಿ ಜಿಲ್ಲೆಗೆ.
ಸುರೇಶ ಗಂಗಣ್ಣನವರ್, ಮಧು ಜೆರಾಕ್ಸ್ ಮತ್ತು ಎಸ್.ಟಿ.ಡಿ. ಸೆಂಟರ್
ಗಾಂಧಿ ಸರ್ಕಲ್ ಹತ್ತಿರ, ಮುಧೋಳ್. ಫೋನ್: 08350-20447
ಹಾಸನ ★ ವಿಶ್ವದೀಪ ಎಂಟರ್‌ಪ್ರೈಸಸ್
ನಂ. 968, ರೇಣುಕಾ ನಿಲಯ, 4ನೇ ಕ್ರಾಸ್, ಶಂಕರ ಮಠ ಹತ್ತಿರ,
ಕೆ.ಆರ್. ಪುರಂ, ಹಾಸನ. ಫೋನ್: 08172-69776.
ಮೋ: 9844111254. ಬಿ.ವಿ. ಶರತ್‌ಕುಮಾರ್ / ಬಿ.ವಿ. ಲೋಕೇಶ್
ಶಿವಮೊಗ್ಗ ★ ಶ್ರೀರಂಗನಾಥ ಎಂಟರ್‌ಪ್ರೈಸಸ್
''ಶ್ರೇಯಸ್'' ಎನ್.ಎಂ.ಸಿ. ಮೇನ್‌ರೋಡ್, ಭದ್ರಾವತಿ-577 301.
ಫೋನ್: 69009. ರಾಘವೇಂದ್ರರಾವ್. ಆರ್.
ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಮಡಿಕೇರಿ ಜಿಲ್ಲೆಗಳಿಗೆ
★ ಶ್ರೀ ಗಣೇಶ ಎಂಟರ್‌ಪ್ರೈಸಸ್, ನಂ. 813/ಬಿ, 4ನೇ ಘಟ್ಟ, 13ನೇ ಮುಖ್ಯ ರಸ್ತೆ,
ಟಿ.ಕೆ.ಲೇಔಟ್, ಮೈಸೂರು. ಫೋನ್: 0821-342766 ಮೋ: 9844037566.
ಬಿ.ಪಿ. ಮನೋಹರ.
ಗುಲ್ಬರ್ಗಾ ಜಿಲ್ಲೆಗೆ
★ ಚಂದ್ರಲಾ ಎಂಟರ್‌ಪ್ರೈಸಸ್
ನಂ. 1-871/2, ಇನಾಂದಾರ್ ಬಿಲ್ಡಿಂಗ್, ವೆಂಕಟೇಶನಗರ,
ಗುಲ್ಬರ್ಗಾ-585102.ಫೋನ್: 32204 ಮೋ: 98441 26487.
ಸುರೇಶ್ ಕೆ ಇನಾಂದಾರ್
Miami
Miami Enterprises Private Limited
12/69, 59th Cross, Opp. MEI Polytechnic, 4th Block, Rajajinagar,
Bangalore-10. Ph : 080 - 3105729 Mobile : 9844013472

ಇಷ್ಟವಾದ ಸಂಗತಿಗಳನ್ನು ತಲೆಯೊಳಗೆ ಇಟ್ಟುಕೊಂಡು ಹೃದಯದ ದಾರಿ ಹಿಡಿಯಬೇಕು

ಸುನೀಲ್‌ಕುಮಾರ್ ದೇಸಾಯಿ

'ಬೆಳದಿಂಗಳ ಬಾಲೆ', 'ಪ್ರತ್ಯರ್ಥ', 'ನಮ್ಮೂರ ಮಂದಾರ ಹೂವೆ', 'ತರ್ಕ', 'ಸ್ಪರ್ಶ' ಹೀಗೆ ಪ್ರತಿ ಚಿತ್ರದಲ್ಲೂ ಹೊಸದೇನನ್ನಾದರೂ ಮಾಡಲು ಯತ್ನಿಸುತ್ತ ಅದರಲ್ಲಿ ಯಶಸ್ಸನ್ನು ಪಡೆಯುತ್ತಾ ಬಂದಿರುವ ಸುನೀಲ್ ಕುಮಾರ್ ದೇಸಾಯಿ, ಪೂನಾದಲ್ಲಿ ಕಲಿಯುತ್ತಿದ್ದ ಆರ್ಕಿಟೆಕ್ಚರ್ ಬಿಟ್ಟು, ಕನ್ನಡ ಚಿತ್ರರಂಗದ ಮೋಡಿಗೆ ಸೆಳೆಯಲ್ಪಟ್ಟರು. ಈಗ ಕನ್ನಡದಲ್ಲಿ ನಟ, ನಟಿ, ನಿರ್ಮಾಪಕರೆಲ್ಲರೂ ಕೆಲಸ ಮಾಡಲು ಬಯಸುವ ಈ ವ್ಯಾಮೋಹಿ ನಿರ್ದೇಶಕ, ಈಗ ಸಂಗೀತವೇ ಜೀವಾಳವಾದ 'ಪರ್ವ' ಚಿತ್ರದ ಚಿತ್ರಕಥೆಯನ್ನು ಬರೆಯುತ್ತಿದ್ದಾರೆ.



ಡಿ.ಸಿ. ನಾಗೇಶ್

"ನನ್ನ ಬಾಲ್ಯದಲ್ಲಿ ನಮ್ಮ ನೆರೆಮನೆಯಲ್ಲಿ ಒಬ್ಬ ಕುಡುಕ ಇದ್ದ. ದಿನಾ ಬಂದು ಹೆಂಡ್ತೀನ ಬಡೀತಿದ್ದ. ಅವಳು ಅಳ್ತಾ ಇದ್ಲು. ಕೆಲದಿನ ನಮಗೆ ಕಾಳಜಿ ಆಗ್ತಿತ್ತು. ಕ್ರಮೇಣ ಅದು ಆ ಹೊತ್ತಿನ ಒಂದು ರೂಟಿನ್ ಸಂಗತಿ ಆಯ್ತು. ನಮಗ್ಯಾಕೆ ಅವಳಿಗೂ ಅದು ರೂಟಿನ್ ಆಗಿತ್ತು ಅಂತ ಗೊತ್ತಾಯ್ತು. ಆ ಕುಡುಕ ನನ್ನ ತಲೇಲಿದ್ದ. 'ತರ್ಕ' ಚಿತ್ರದ ದೇವರಾಜನ ಪಾತ್ರದ ಮೂಲ ಸ್ಫೂರ್ತಿ ಅವ. ಅದೇ ರೀತಿ [illegible] ಹೋಟ್ಲೊಂದರಲ್ಲಿ ಒಮ್ಮೆ ತಿಂಡಿ ತಿನ್ನುವಾಗ, ನನ್ನ ಅಜಾಗರೂಕತೆಯಿಂದ ಪ್ಲೇಟು ಜಾರಿ ಹೋಟೆಲ್ ಹುಡುಗನ ಮೈಮೇಲೆ ಇಡ್ಲಿ-ಸಾಂಬಾರ್ ಚೆಲ್ಲಿತು. ನಾನು ಎದ್ದು ಅವನ ಬಟ್ಟೆಯನ್ನು ನೀರಿನಿಂದ ತೊಳೆಯಲು ಮುಂದಾದಾಗ ಅವನು ಬೇಡ ಸಾರ್ ಎಂದು ಮುಜುಗರದಿಂದ ತಾನೇ ಸ್ವಚ್ಛಗೊಳಿಸಲು ಹೋದ. ನಾನೇ ಅವನ ಆ ಬಟ್ಟೆಯನ್ನು ತೊಳೆಯಬೇಕಿತ್ತು-ಆಗಲೇ ನನಗೆ ಸಮಾಧಾನ ಎನ್ನುವಂತೆ ಎರಡು ದಿನ ನಾನು ತೀವ್ರ ತಳಮಳದಲ್ಲಿದ್ದೆ. ಆ ಕ್ಷಣ ಅಪೂರ್ಣ ಅನಿಸಿತು. ಈ ಘಟನೆ ನನ್ನೊಳಗೇ ಉಳಿದು-'ತಪ್ಪಿತಸ್ಥನಿಗೆ ಶಿಕ್ಷೆ ಆಗಲೇಬೇಕು' ಎಂಬ- ನನ್ನ 'ಸ್ಪರ್ಶ'ದ ಮುಖ್ಯ ಎಳೆಯನ್ನು ರೂಪಿಸಿತು.

ಹೀಗೆ ಇಷ್ಟವಾದ ಸಂಗತಿಗಳನ್ನು ತಲೆಯೊಳಗೇ ಇಟ್ಟುಕೊಳ್ಳುತ್ತೇನೆ. ತಕ್ಕ ಮುಹೂರ್ತದಲ್ಲಿ ಒಂದು ವಸ್ತು ತನ್ನ ಅಗತ್ಯಗಳನ್ನು ತಾನೇ ಹೇಳುತ್ತ ನನ್ನನ್ನು ತಳ್ಳುತ್ತದೆ. ಒಂಥರಾ ಭ್ರಮಾಧೀನನಂತೆ ಅದಕ್ಕೆ ಆಕಾರ ಕೊಡುತ್ತ ಹೋಗುತ್ತೇನೆ. ಪ್ರತಿ ವಸ್ತುವಿಗೂ ಅದರದ್ದೇ ಆದ form ಇರುತ್ತದೆ. 'ತರ್ಕ', 'ಪ್ರತ್ಯರ್ಥ'ದಂಥ action ಚಿತ್ರಗಳಲ್ಲಿ shotsಗಳು ತುಂಬಾ ಇರುತ್ತವೆ. ಏಕೆಂದರೆ ಅಲ್ಲಿ ನಾಟಕೀಯ ಸಂಭಾಷಣೆಗಳು ಕಡಿಮೆ. ಕಾರು ಬಂತು. ಬಾಗಿಲು ತೆರೀತು. ಕಿಟಕಿಯಿಂದ ಗನ್ನಿನ ತುದಿ ಕಂಡಿತು. ಬೂಟು ಹೊರ ಬಂತು.... ಹೀಗೆ ನೂರಾರು ಕಟ್‌ಶಾಟ್, ಝೂಮ್‌ಶಾಟ್‌ಗಳ ಸರಮಾಲೆ ಬರುತ್ತದೆ. ಮಾತು ಕಡಿಮೆ ಇರುತ್ತದೆ. 'ನಮ್ಮೂರ ಮಂದಾರ ಹೂವೆ', 'ಸ್ಪರ್ಶ'ದಂಥ ಚಿತ್ರಗಳಲ್ಲಿ ಒಂದು ಭಾವನಾತ್ಮಕವಾದ mood ನೆಲೆಗೊಳ್ಳಲು ಸನ್ನಿವೇಶ ನಾಟಕೀಯವಾಗಿರುತ್ತದೆ. ಸಂಭಾಷಣೆ ಬೇರೆ ಥರ ಇರುತ್ತದೆ. ಒಟ್ಟಾರೆ ಆಯಾ subjectಗೆ ಅನುಗುಣವಾಗಿ ನಾನು ಚಿತ್ರಕಥೆಯ formನ್ನು ಬದಲಾಯಿಸುತ್ತೇನೆ.



'ಢಿಶುಂ' ಶಬ್ದ ಹೇಗೆ ಬರುತ್ತದೆ?
'ಚಿತ್ರಕಥೆ' ಕಥೆಗಿಂತ ಹೇಗೆ ಭಿನ್ನ?
ಒಂದು ಹಾಡನ್ನು ಹೇಗೆ ಟ್ಯೂನ್ ಮಾಡ್ತಾರೆ?
ಹಿಮಾಲಯದ ಸೆಟ್ ಹೇಗೆ ಹಾಕುತ್ತಾರೆ?
ನಿರ್ದೇಶಕರ ಮನಸ್ಸಿಗೆ ಒಂದು ದೃಶ್ಯ ಹೇಗೆ ಕಾಣುತ್ತದೆ?

...ಇಂಥ ಅನೇಕ ಅಮಾಯಕ ಪ್ರಶ್ನೆಗಳು ನಮ್ಮಂಥ 'ಸಿನೆಹೋಕರ' ಮನದಲ್ಲಿರುತ್ತವೆ. ಇವುಗಳಿಗೆ ಉತ್ತರ ನಮಗೆಲ್ಲೂ ಸಿಗುವುದಿಲ್ಲ. ಬೆಳ್ಳಿ ತೆರೆಯ ಮೇಲೆ ಮೂಡಿದ ಒಂದು ದೃಶ್ಯದ ಹಿಂದೆ, ಛಾಯಾಗ್ರಾಹಕ, ಚಿತ್ರಕಥೆಗಾರ, ಕಲಾನಿರ್ದೇಶಕ, ಗೀತ-ಸಂಗೀತಗಾರ, ವಸ್ತ್ರ ವಿನ್ಯಾಸಗಾರ, ಧ್ವನಿಗ್ರಹಣಕಾರ ಹೀಗೆ ಎಷ್ಟೆಲ್ಲ ವಿಭಾಗಗಳ ಪರಿಶ್ರಮ ಇದೆ. ಆದರೆ ನಮ್ಮ ಕಣ್ಣಲ್ಲಿ ಉಳಿಯುವುದು ಕೇವಲ ತಾರೆಗಳ ಬಿಂಬ!

ಈ ನಮ್ಮ 'ವಿಶೇಷಾಂಕ'ದ ಸಿನಿಮಾ ಪುಟಗಳನ್ನು ತಾರೆಗಳ ಆಲ್ಬಂ ಮಾಡದೆ, ಬೆಳ್ಳಿತೆರೆಯ ನೇಪಥ್ಯದ ಕಲೆಗಾರರ ಕಾರ್ಯವೈಖರಿಯ ಕಿಂಚಿತ್ ಸಂಕ್ಷಿಪ್ತ ಪರಿಚಯ ಲೇಖನ

'ಬೆಳ್ಳಿ ಕಸುಬು'

ಸಂಯೋಜನೆ: ಜಯಂತ ಕಾಯ್ಕಿಣಿ

rigid ಆದ್ರೆ magic ತಪ್ಪುತ್ತೆ

Rigid ಇರೋದ್ರಿಂದ ಒಮ್ಮೊಮ್ಮೆ ನಾವು ಕಳಕೊಳ್ಳೋದೇ ಹೆಚ್ಚು. ಚಿತ್ರಕಥೆಯಲ್ಲಿ ಕೊನೇ ಗಳಿಗೆಯ ಬದಲಾವಣೆಗೆ ಅವಕಾಶ ಇಟ್ಟುಕೊಳ್ತೇನೆ. ಚಿತ್ರಕಥೆಯಲ್ಲಿ ಹತ್ತು ಶಾಟಲ್ಲಿ ಯೋಜಿಸಿದ್ದ ಒಂದು ದೃಶ್ಯ, ಲೊಕೇಶನ್ ಅಥವಾ ನಟನಟಿಯರ ಪ್ರತಿಭೆಯನ್ನವಲಂಬಿಸಿ ಕೇವಲ ಮೂರು ಶಾಟ್‌ನಲ್ಲಿ ಮುಗೀಬಹುದು. ಈ ರೀತಿಯ ಹೊಂದಾಣಿಕೆಗೆ ಮನಸ್ಸು ತಯಾರಾಗಿರದಿದ್ದರೆ ಒಮ್ಮೊಮ್ಮೆ magic ಹೊರಟುಹೋಗಿಬಿಡುತ್ತದೆ. ಅದ್ಭುತವಾದ ಪಾತ್ರವೊಂದಕ್ಕೆ ನಟ ನ್ಯಾಯ ಒದಗಿಸದಿದ್ದರೆ, close upಗಳಲ್ಲೇ ಅವನನ್ನು ಹಿಡಿದು ಅವನ ವೀಕ್‌ನೆಸ್‌ಗಳನ್ನು ಮುಚ್ಚುವಂತೆ ಚಿತ್ರಕಥೆಯನ್ನು on the spot ಬದಲಾಯಿಸ ಬೇಕಾಗುತ್ತದೆ.



ಅಭಿರುಚಿಗಿಂತ feeling ಮುಖ್ಯ

ಬೇರೆ ಯಾವ ರಾಜ್ಯದಲ್ಲೂ ಇರದಷ್ಟು ಭಾಷಾ ಪ್ರಭೇದಗಳು ಕರ್ನಾಟಕದಲ್ಲಿವೆ. ಪ್ರತಿ ನೂರು ಕಿಲೋಮೀಟರಿಗೆ ನಮ್ಮಲ್ಲಿ ಭಾಷೆ, ನಡವಳಿಕೆ ಬದಲಾಗುತ್ತವೆ. ಆಯಾ ಪರಿಸರದ ಶೈಕ್ಷಣಿಕ-ಸಾಮಾಜಿಕ-ವಾತಾವರಣದಂತೆ ಅಲ್ಲಲ್ಲಿಯ ಪ್ರೇಕ್ಷಕರ ಅಭಿರುಚಿ ಇರುತ್ತದೆ. ಮಂಡ್ಯದವರ ಅಪೇಕ್ಷೆ, ಮಂಗಳೂರಿನವರ ಅಪೇಕ್ಷೆ, ಬಿಜಾಪುರದವರ ಅಪೇಕ್ಷೆ-ಎಲ್ಲಾ ಬೇರೆ. ಆದರೆ ಈ ಎಲ್ಲ ವ್ಯಕ್ತಿಗಳೂ ಮೂಲಭೂತವಾಗಿ ಮಾನವೀಯರಾಗಿರುತ್ತಾರೆ. ನೋವು, ನಲಿವು, ಅನಿಸಿಕೆಗಳಲ್ಲಿ ಒಂದೇ ಇರುತ್ತಾರೆ. ಹೀಗಾಗಿ ಇವರೆಲ್ಲರನ್ನೂ ತಲುಪುವ ಏಕಮೇವ ಮಾರ್ಗ-ಅವರ basic instinctಗಳನ್ನು ತಟ್ಟೋದು. ಅದು positive ಆಗಿರುವಂತೆ ನಾನು ಎಚ್ಚರವಹಿಸುತ್ತೇನೆ. 'ಮಾನವೀಯ ಸಂಬಂಧಗಳು' ಎಲ್ಲರನ್ನೂ ಯಾವ ಕಾಲಕ್ಕೂ ತಟ್ಟುವಂಥವು. ಅವರ ಅಭಿರುಚಿಗಿಂತ ಅವರ feeling ನನಗೆ ಮುಖ್ಯ. ನನ್ನದು ಹೃದಯದ ದಾರಿ.

ಹಾವು ಏಣಿ ಆಟ

ಹೀಗಾಗಿ 'ಚಿತ್ರಕಥೆ'ಯ ಹಂತದಲ್ಲಿ ನಾನು ತುಂಬಾ sensitive ಆಗಿರುತ್ತೇನೆ. ಮೊದಲು ರಂಗಣ್ಣ ಎನ್ನುವವರ ಜತೆ ಚರ್ಚೆ ಮಾಡುತ್ತ ಬರೆಯುತ್ತಿದ್ದೆ. ಈಗ ಶಶಿಧರ್ ಭಟ್ ಜತೆ ಚರ್ಚಿಸುತ್ತೇನೆ. ಒಂದು ಎಳೆ ಹಿಡಿದು ಹೊರಡುತ್ತೇವೆ. ಒಮ್ಮೊಮ್ಮೆ ಅದು dead endನಲ್ಲಿ ನಿಂತುಬಿಡಬಹುದು. ಆಗ ಮತ್ತೊಂದು ಟೊಂಗೆ ಹಿಡಿದು ಹೊರಡುತ್ತೇವೆ. ಹೀಗೆ 'ಮಂಥನ' ನಾನು ತುಂಬಾ ಇಷ್ಟಪಡುವ ವಿಧಾನ. ಆದರೆ ಇದಕ್ಕೆ ತುಂಬಾ ತಾಳ್ಮೆ ಬೇಕು, ಸ್ಥೈರ್ಯ ಬೇಕು. ತಿಂಗಳುಗಟ್ಟಲೆ ಕೂತು ಹೆಣೆದ ಕಥೆಯೊಂದನ್ನು, ಕಸದ ಬುಟ್ಟಿಗೆ ಬಿಸಾಕುವ ಎದೆಗಾರಿಕೆ ಬೇಕು. ಮತ್ತೆ ಎಲ್ಲ ಮರೆತು ಹೊಸತಿಗಾಗಿ ತವಕಿಸುವ ಮನಸ್ಸು ಬೇಕು. ಇದೊಂದು ಹಾವು ಏಣಿ ಆಟ. ನನ್ನ ಸಂಭಾಷಣೆಗಳನ್ನು ನಾನೇ ಬರೀತೇನೆ. ಏಕೆಂದರೆ ಸಿನಿಮಾದಲ್ಲಿ



ಮಾಲಿಕೆಯನ್ನಾಗಿ ಮಾಡಿಕೊಟ್ಟರೆ, ಅದು ನಮ್ಮ ಓದುಗರಿಗೆ ಖಂಡಿತ ಆಪ್ತವಾಗುತ್ತದೆ ಅಂದುಕೊಂಡೆವು.

ಚಿತ್ರಕಥೆಯ ಕುರಿತು ಗಿರೀಶ್ ಕಾಸರವಳ್ಳಿ ಮತ್ತು ಸುನೀಲ್‌ಕುಮಾರ್ ದೇಸಾಯಿ, ಕಲಾ ನಿರ್ದೇಶನದ ಕುರಿತು ಶಶಿಧರ ಅಡಪ ಮತ್ತು ಅರುಣಕುಮಾರ್, ಹಾಡೊಂದು ಮೂಡುವ ಬಗೆಯ ಕುರಿತು ವಿ.ಮನೋಹರ್ ಮತ್ತು ಕಲ್ಯಾಣ್, ಛಾಯಾಗ್ರಹಣದ ಕುರಿತು ಎಸ್.ರಾಮಚಂದ್ರ ಮತ್ತು ವೇಣು-ಇಲ್ಲಿ ನಿಮ್ಮೊಂದಿಗೆ ಮಾತಾಡಿದ್ದಾರೆ. 'ಭಾವನಾ'ಕ್ಕೆ ಸಮಯ ಕೊಟ್ಟು, ಯಾವ ಬಿಗುಮಾನವಿಲ್ಲದೆ ಆಪ್ತವಾಗಿ ತಮ್ಮ ಕಲೆ ಮತ್ತು ಕಸುಬಿನ ಬಗ್ಗೆ, ಕಾರ್ಯವೈಖರಿಯ ಬಗ್ಗೆ ಮಾತನಾಡಿದ ಈ ಎಲ್ಲ ಪ್ರತಿಭಾವಂತರಿಗೂ ನಾವು ಆಭಾರಿಯಾಗಿದ್ದೇವೆ. ಇದೇ ರೀತಿ ಸಂಭಾಷಣೆ, ಧ್ವನಿಗ್ರಹಣ, ಮೇಕಪ್, ವಸ್ತ್ರ ವಿನ್ಯಾಸ ಇತ್ಯಾದಿ ಕ್ಷೇತ್ರಗಳ ಬಗ್ಗೂ ನಮ್ಮ ಮುಂದಿನ ಸಂಚಿಕೆಗಳಲ್ಲಿ ತಜ್ಞ ಪ್ರತಿಭಾವಂತರ ಜತೆ ಮಾತುಕತೆ ಮುಂದುವರೆಸುತ್ತೇವೆ.

ನಿಮಗೆಂದೇ ಹಮ್ಮಿಕೊಂಡ ಈ 'ಬೆಳ್ಳಿ ಕಸುಬಿ'ನ ವಿಭಿನ್ನ ಪುಟಗಳು ನಿಮಗೆ ಇಷ್ಟವಾದರೆ ನಮಗೆ ಖುಷಿ.

S —— of Sudeep and Suma. – Sudeep —
—— "Oe... [illegible] ಕನ್ನಡ [illegible] ?...

C.S —— of Muthu —— " [illegible]

C.S —— of Sudeep —— "Oe.. [illegible]...
[illegible] recorder [illegible]?

C.S —— of Muthu —— " [illegible] ?...
... [illegible] ~~[illegible]~~ beautifull Songs [illegible]. Then he
puts on the tape recorder.

C.S —— of Sudeep looks at Suma and smile
then tries to go near to her, but again
gets dissapointed after hearing [illegible]
very Sad song – ([illegible])
Then he removes his hand from Suma's
Sholder...

(ಸ್ಕರ್F)

ಶಬ್ದಗಳು ತುಂಬ ಸೂಕ್ತವಾಗಿರಬೇಕು. ಬೇರೆಯವರಿಂದ ಬರೆಸಿದರೆ ಮತ್ತೆ ನಾನೇ ತಿದ್ದುಪಡಿ ಮಾಡಬೇಕಾಗುತ್ತದೆ. ಅದಕ್ಕೆ ಚಿತ್ರಕಥೆಯೊಂದಿಗೆ-ಸಂಭಾಷಣೆಯನ್ನೂ ಬರೀತಾ ಹೋಗುತ್ತೇನೆ. ಸಂದರ್ಭಕ್ಕನುಗುಣವಾಗಿ ಅದನ್ನು ಅಲಂಕಾರಿಕ ಅಥವಾ ಸರಳಗೊಳಿಸುತ್ತೇನೆ.

ನಾನೊಬ್ಬ ಪ್ರೇಕ್ಷಕನಾಗಿ...

ನನ್ನ ಚಿತ್ರವನ್ನು ನಾನೂ ಒಬ್ಬ ಟಿಕೇಟು ತಗೊಂಡ ಪ್ರೇಕ್ಷಕನಾಗಿಯೇ, ಅದು ನನ್ನದಲ್ಲವೇ ಅಲ್ಲ ಅನ್ನೋ ರೀತಿಯೋ ನೋಡಿದಾಗಲೇ - ಅದರ ಮೌಲ್ಯಮಾಪನ ಮಾಡಬಲ್ಲೆ. ಆದಷ್ಟು ಆ ರೀತಿ ನೋಡಲು ಯತ್ನಿಸುತ್ತೇನೆ. ಅದರಿಂದ ನನ್ನ ಮುಂದಿನ ಚಿತ್ರಗಳಿಗೆ ತುಂಬಾ ನೆರವಾಗುತ್ತದೆ. ನನ್ನ ಪ್ರಯತ್ನಗಳನ್ನು ಸಮರ್ಥಿಸುವಂತೆ ನಾನು ನೋಡಿದರೆ ನಾನು ಎಂದಿಗೂ ಬೆಳೆಯಲಾರೆ!''

ಸುನೀಲ್‌ಕುಮಾರ್ ದೇಸಾಯಿ.

> ಕಳೆದ ಇಪ್ಪತ್ತೈದು ವರ್ಷಗಳಿಂದ, ವ್ರತದಂತೆ ತಮ್ಮ ಅಭಿರುಚಿ, ಶಿಲ್ಪದಲ್ಲಿ ಯಾವ ಬಗೆಯ ರಾಜಿಯನ್ನೂ ಮಾಡಿಕೊಳ್ಳದೆ-ಉತ್ತಮ ಗುಣದ ಚಿತ್ರಗಳನ್ನು ಮಾಡುತ್ತ-ಭಾರತೀಯ ಚಿತ್ರರಂಗದಲ್ಲಿ ಕನ್ನಡದ ಹೆಸರನ್ನು ಹಸಿರಾಗಿಟ್ಟಿರುವ ಮೇಧಾವಿ ನಿರ್ದೇಶಕ ಗಿರೀಶ್ ಕಾಸರವಳ್ಳಿ. ಬಹುತೇಕ ತಮ್ಮ ಚಿತ್ರಗಳಿಗೆ ತಾವೇ ಚಿತ್ರಕಥೆ ಬರೆಯುತ್ತಾರೆ. (ಘಟಶ್ರಾದ್ಧ, ಬಣ್ಣದ ವೇಷ, ತಬರನ ಕಥೆ, ತಾಯಿ ಸಾಹೇಬ, ಮೂರು ದಾರಿಗಳು, ಕ್ರೌರ್ಯ) ಸತ್ಯಜಿತ್ ರೇ ನಂತರ ಮೂರು ಬಾರಿ ರಾಷ್ಟ್ರಪತಿ ಪದಕ ಪಡೆದ ಏಕಮೇವ ನಿರ್ದೇಶಕ ಎಂಬ ಹೆಗ್ಗಳಿಕೆ ಇವರದು.

ಸಮಯದ ಎಳೆಯಲ್ಲಿ ಪ್ರತಿಮೆಗಳನ್ನು ಪೋಣಿಸುವುದು

ಗಿರೀಶ್ ಕಾಸರವಳ್ಳಿ



ನ್ಯೂಸ್‌ಫ್ರೇಮ್ಸ್

''ಸಾಮಾನ್ಯವಾಗಿ ನನ್ನ ಚಿತ್ರಗಳಿಗೆ ನಾನೇ ಚಿತ್ರಕಥೆ ಬರೆಯುವುದನ್ನು ಇಷ್ಟಪಡುತ್ತೇನೆ. ಏಕೆಂದರೆ ಬೇರೆಯವರು ಬರೆದ ಚಿತ್ರಕಥೆಯಲ್ಲಿ ಕೆಲವೊಮ್ಮೆ ಅವರ ತಲೆಯಲ್ಲಿ ಏನಿದೆ ಎಂಬುದು ಕಾಣುವುದಿಲ್ಲ. ವಿವರಗಳು ಯಾಕಿವೆ ಎಂದು ಸ್ಪಷ್ಟವಾಗುವುದಿಲ್ಲ. ಏಕೆಂದರೆ ಚಿತ್ರಕಥೆ ಕೊನೆಗೂ ಬರೆದವನ ಒಳಗಣ್ಣಿಂದ ಕಂಡ ದೃಶ್ಯಗಳ ಸರಮಾಲೆ. ನಾನು ಮೂರು ಹಂತದಲ್ಲಿ ಚಿತ್ರಕಥೆ ಬರೆಯುತ್ತೇನೆ.''

ಬರೆದಾಗಲೇ ಬರುವ ದೃಶ್ಯ

ಮೊಟ್ಟ ಮೊದಲಿಗೆ ಕಥೆ ಬರೆದಂತೆ ಬರೆಯುತ್ತೇನೆ. ನನ್ನ ಮೊದಲ ಕರಡು ನೀವೆಲ್ಲ ಬರೆಯುವ ಕಥೆಯಂತೆ ಇರುತ್ತದೆ. ಅದನ್ನು ಕಥೆಯ ತರವೂ ನೀವು ಓದಬಹುದು. ನಾನು ಸುಮ್ಮನೆ ಬರೆಯುತ್ತ ಹೋಗುತ್ತೇನೆ. ಮಾತಾಡುವಾಗ 'ಅವನು ಬಂದ' ಅಂತ ಹೇಳಿದರೆ, ನಾನು ಅದನ್ನು ಬರೆಯುವಾಗ ಅವನು ನಡೆಯುವ ಶೈಲಿ, ಅವನ ಉಡುಪು, ರಸ್ತೆಯ ಚಿತ್ರ-ಇವೆಲ್ಲ ಬರತೊಡಗುತ್ತವೆ. ಇವೆಲ್ಲಾ ಬರೆದಾಗಲೇ ಬರುವಂಥವು.

ಅತ್ತರು ಪರಿಮಳ

ಹೀಗೆ ಕಥೆಯ ಆಕೃತಿಯೊಂದು ಮೊದಲ ಹಂತದಲ್ಲಿ ಮೂಡಿಬಂದ ಮೇಲೆ ಅದನ್ನು ಕೆಲ ಆಪ್ತರೊಂದಿಗೆ ಚರ್ಚಿಸುತ್ತೇನೆ. ಕಥೆಯೊಂದಕ್ಕೆ ಇತರರು ಸ್ಪಂದಿಸಿದಾಗ ಹೊಸ ಹೊಸ ಆಯಾಮಗಳು ಸಿಗುತ್ತ ಹೋಗುತ್ತವೆ. ಅಥವಾ ನಾನು ತೀರ ಸಾಮಾನ್ಯ ಅಂದುಕೊಂಡ ಅಂಶದ ಮಹತ್ವ ನನಗೆ ಮನವರಿಕೆಯಾಗುತ್ತದೆ. ಉದಾಹರಣೆಗೆ 'ತಾಯಿ ಸಾಹೇಬ'ದಲ್ಲಿ ಅವಳು ಮಗನನ್ನು ಅಲಂಕರಿಸುವ ಸಂದರ್ಭ. ಮಲೆನಾಡಿನವನಾದ ನನಗೆ, ಉತ್ತರ ಕರ್ನಾಟಕದವರೇ ಆದ ವೈಶಾಲಿ 'ಅತ್ತರು' ಹಚ್ಚುವ ವಿವರವನ್ನು ಸೂಚಿಸಿದರು. ಆ ಕ್ಷಣಕ್ಕೆ ಅದೊಂದು ಸಣ್ಣ ವಿವರ. ಆದರೆ ನಾನು ಎರಡನೇ ಕರಡು ಬರೆಯುವ ಹೊತ್ತಿಗೆ ಅತ್ತರಿನ ಪರಿಮಳ ವಿಚಿತ್ರ ಶಕ್ತಿಶಾಲಿ ರೂಪಕವಾಗಿ ಬೇರೆ ಬೇರೆ ರೀತಿಯಾಗಿ ಬೆಳೆಯುತ್ತಾ ಹೋಯಿತು. ಅಂದರೆ ಆಟ ಆಡುವಾಗ ಅವನನ್ನು ಪರಿಮಳದಿಂದ ಗುರುತು ಹಿಡಿಯುವುದು, ಚಂದ್ರಿಯ ಮಗಳೊಂದಿಗಿನ ಅವನ ನಂಟು, ಅವಳ ಮೈಗೆ ಅಂಟಕೊಂಡ ಆ ಪರಿಮಳ, ಕೊನೆಗೆ ಆ ಪರಿಮಳವೇ ಇಲ್ಲದ ಒಂದು ಸ್ಥಿತಿ, ಹೀಗೆ. 'ಕಾಗೋಡು ಸತ್ಯಾಗ್ರಹ' ಸಾಕ್ಷ್ಯಚಿತ್ರ ಮಾಡುವಾಗ ನನ್ನ ಮನದಲ್ಲಿದ್ದ ವಿವರಗಳು 'ತಾಯಿಸಾಹೇಬ'ದ

ಚಿತ್ರಕತೆಯಲ್ಲಿ ಬಂದಿವೆ. ಮಕ್ಕಳ ಕಥೆಗಳ ಒಂದು ಸರಣಿ ಮಾಡಬೇಕೆಂದಿದ್ದಾಗ ಮನಸ್ಸಿನಲ್ಲಿ ಬಂದ ವಿವರಗಳು 'ಕ್ರೌರ್ಯ'ದಲ್ಲಿ ಮೈ ತಳೆದಿವೆ.


ಈ ಎಲ್ಲ ಪ್ರತಿಮೆಗಳು ಒಂದು ಕಥಾನಕದಲ್ಲಿ ವಿವಿಧ ಎಳೆಗಳಾಗಿ ಬೆಳೆಯುತ್ತ ಹೋಗುವುದೇ ಚಿತ್ರ ಕಥೆಯ ಮುಖ್ಯ ಗುಣ.

ಲೊಕೇಶನ್ ಮತ್ತು ಚಿತ್ರಕಥೆ

ಎಷ್ಟೋ ನಿರ್ದೇಶಕರು ಲೊಕೇಶನ್ ನೋಡಿ ಕೊಂಡು ಬಂದು ಚಿತ್ರಕಥೆ ಬರೆಯುವುದುಂಟು. ಆದರೆ ನನ್ನದು 'ಉಲ್ಟಾ'. ನಾನು ಮೊದಲು ಬರೆದು ನಂತರ, ಬರೆಯುವಾಗಲೇ ಹೊರಾಂಗಣ ಹುಡುಕುತ್ತೇನೆ. ಉದಾಹರಣೆಗೆ 'ಕ್ರೌರ್ಯ'ದ ಮನೆಯ ಪಕ್ಕ ಬಂಡೆಗಲ್ಲು ಇದೆ ಎಂದು ನನಗೆ ಅನಿಸುತ್ತಿತ್ತು. ಅದೇ ರೀತಿ 'ತಬರನ ಕಥೆ'ಯ ಅಂಗಡಿಗೆ ಕಟಾಂಜನ ಇರಬೇಕೆಂಬ ನನ್ನ ಹಟ. ಯಾಕೆಂದರೆ ಬಾಲ್ಯದಲ್ಲಿ ನನ್ನ ಮನದ ಮೇಲೆ ಅಚ್ಚಳಿಯದ ಮುದ್ರೆ ಬೀರಿದ ಅಂಗಡಿಗೆ ಕಟಾಂಜನ (ತಳಿ) ಇತ್ತು. 'ಬಣ್ಣದ ವೇಷ'ದ ದೇವಸ್ಥಾನಕ್ಕೆ ನೂರಾರು ಮೆಟ್ಟಿಲುಗಳು ಬೇಕಿತ್ತು. ಹೀಗೆ ಮನದ ಒಳಾಂಗಣದಿಂದ ಹೊರಟು ಹೊರಾಂಗಣ ಹುಡುಕುವುದು ನನ್ನ ಚಾಳಿ. ಬಹುಶಃ ಯಾವುದೇ ನಿರ್ದೇಶಕನ ಒಂದು ಛಾಪು ರೂಪುಗೊಳ್ಳುವುದು ಈ ಖಾಸಗೀ ಕಿಟಕಿಯಿಂದ ಕಂಡ ದೃಶ್ಯಗಳಿಂದ ಅಂತ ನನ್ನ ನಂಬುಗೆ. ಮಲೆನಾಡಿನವನಾದ ನನಗೆ verticals (ನೇರ ರೇಖೆಗಳ) ಬಗ್ಗೆ ವ್ಯಾಮೋಹ. ಕರಾವಳಿಯವರಿಗೆ ವಿಸ್ತಾರದ ಆಕರ್ಷಣೆಯಿರಬಹುದು ಹಂಗೇರಿಯನ್ ನಿರ್ದೇಶಕರಿಗಿದ್ದಂತೆ.



ಡಿ.ಸಿ.ನಾಗೇಶ್



(ಶಾಯಿಸಾಹೇಬ)

ಸಾಹಿತ್ಯ ಕೃತಿಯಿಂದ take off

ನಾನೊಂದು ಕಾದಂಬರಿ ಅಥವಾ ಕಥೆಯನ್ನು ಸಿನಿಮಾಕ್ಕೆಂದು ಓದುವಾಗ ಮೊದಲಿಗೆ ಅದರ salient features ಅಥವ ಮುಖ್ಯ ಕಥಾ ಆಕೃತಿಯನ್ನು ಗಮನಿಸುತ್ತೇನೆ. ಅದರಲ್ಲಿನ ನಾಟಕೀಯ ಎಳೆಯನ್ನು, ಮುಖ್ಯ ಘಟನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುತ್ತೇನೆ. That's it. ನಂತರ ಮತ್ತೆ ಅದರ ಗೊಡವೆಗೆ ಹೋಗದೆ ನಾನು ಚಿತ್ರಕಥೆಗೆ ತೊಡಗುತ್ತೇನೆ. ಚಿತ್ರಕಥೆ ಬರೆದಾದ ಮೇಲೆ ಏನಾದರೂ missing link ಇದ್ದರೆ, ಅನುಮಾನಗಳಿದ್ದರೆ ಅದನ್ನು ಕೃತಿಯಿಂದಲೇ ತುಂಬಲು ಪ್ರಯತ್ನ ಪಡುತ್ತೇನೆ. ಈ ರೀತಿಯಿಂದ 'ಘಟಶ್ರಾದ್ಧ' ಮತ್ತು 'ಮನೆ' ನನಗೆ ತುಂಬಾ ತೃಪ್ತಿ ತಂದ ಚಿತ್ರಕಥೆಗಳು. ಸತ್ಯಜಿತ್ ರೇ, ಕುರೋಸೋವಾ ಮತ್ತು ಇಟಲಿಯ ಎಂಟನಿಯುನಿ -ನಾನು ತುಂಬಾ ಇಷ್ಟಪಡುವ ಚಿತ್ರಕತೆಗಾರರು. ಒಳ್ಳೆಯ ಕಥೆಯೊಂದರ ಎಲ್ಲ ಸಾಧ್ಯತೆಗಳನ್ನು ಸೂರೆ ಹೊಡೆ ಯುವುದೇ ಅತ್ಯುತ್ತಮ ಚಿತ್ರಕಥೆಯ ಲಕ್ಷಣ.

ಟೆಲಿವಿಜನ್ ಮತ್ತು ಸಿನಿಮಾ

ಟೆಲಿವಿಜನ್ ಪತ್ರಿಕೋದ್ಯಮದಂತೆ, ಅದಕ್ಕೆ ಕೇವಲ ಮಾಹಿತಿಯಲ್ಲಿ ಆಸಕ್ತಿ. ಸಿನಿಮಾ ಒಂದು ಸಾಹಿತ್ಯಕೃತಿಯಂತೆ, ಒಂದು ಅನುಭವವನ್ನು ಮೂಡಿಸುವುದೇ ಅದರ ಮುಖ್ಯ ಗುರಿ. ಟೆಲಿವಿಜನ್ ಬರವಣಿಗೆ ಮಾಹಿತಿಯನ್ನು ವರ್ಗಾ ಯಿಸುವುದರಲ್ಲಿ ತೃಪ್ತಿ ಹೊಂದುತ್ತದೆ. ಕಥನದ ವ್ಯಾಕರಣ ಇಟ್ಟುಕೊಂಡ ಮಾಹಿತಿ ಅದು. ಪತ್ರಿ ಕೋದ್ಯಮದಲ್ಲಿ ವರದಿ ಕೊಡುವಾಗ ವ್ಯಕ್ತಿ ಯೊಬ್ಬನ ಹೆಸರು ಕೊಟ್ಟು ಕಂಸದಲ್ಲಿ ಹೆಸರು ಕಾಲ್ಪನಿಕ ಎಂದು ಹೇಳುತ್ತಾರಲ್ಲ ಹಾಗೆ. ಓದು ವವರು ಅದು ಕಾಲ್ಪನಿಕ ಹೆಸರು ಎಂಬ ಅರಿವಿ ನಲ್ಲೇ ಅದನ್ನು ಓದುತ್ತಾರಲ್ಲ ಅದೇ ವಿಚಿತ್ರ. ಟೆಲಿವಿಜನ್ ಕತೆಗಾರಿಕೆ ಇಂಥದ್ದು. ಕೆಲವು ಸೀರಿಯಲ್‌ಗಳಲ್ಲಿ ಒಂದೇ ಪಾತ್ರವನ್ನು ಬೇರೊಂದು ಪಾತ್ರಧಾರಿ ಮುಂದುವರೆಸಿದ್ದೂ ಇದೆ. ಇದನ್ನು ಯಾವ ಆಭಾಸವಿಲ್ಲದೆ 'ಟೀವೀಕ್ಷಕ' ನೋಡುತ್ತಾನೆ. ಟೀವಿಯಲ್ಲಿ every-body is in a hurry to pass on the information. ಸಿನಿಮಾ ಹಾಗಲ್ಲ. ಅದು ತಾನು ಎತ್ತಿಕೊಂಡ ಅನುಭವಕ್ಕೆ ಪೂರ್ತಿ ನಿಷ್ಠವಾಗಿರಲು ಯತ್ನಿಸುತ್ತದೆ.

ಸಂಭಾಷಣೆ


ಸಿನಿಮಾದಲ್ಲಿ ಸಂಭಾಷಣೆ ತನ್ನ ಪಾತ್ರ, ಪರಿಸರಗಳ ಒಡಲಿಂದ ಅತ್ಯಂತ ಸಹಜವಾಗಿ ಹೊಮ್ಮಿದಂತೆ ಇರಬೇಕಾಗುತ್ತದೆ. ನಾಟಕದಲ್ಲಿ, ಟೆಲಿವಿಜನ್‌ನಲ್ಲಿ ಸಂಭಾಷಣೆ ಭಾರವಾಗಿ ಅಭಿಪ್ರಾಯಗಳನ್ನು ಮಂಡಿಸಬಹುದು. ಆದರೆ ಸಿನಿಮಾದಲ್ಲಿ ಅದು ವಿಫಲ. ಸಿನಿಮಾ ಅತಿ ಕಡಿಮೆ ಶಬ್ದದಲ್ಲಿ, ಅತಿ ಸರಳ ರೀತಿಯಲ್ಲಿ, ಮೆಲುವಾದ ತೀವ್ರತೆಯಲ್ಲಿ ತನ್ನ ಮಾತು ಆಡುತ್ತದೆ. ನಿಜ ಜೀವನದಲ್ಲೂ ಅಷ್ಟೇ ತಾನೆ? ನಿಜಜೀವನದಲ್ಲಿ ನಾವು ಭಾರವಾದ ಭಾಷೆಯನ್ನು ಬಳಸದೆಯೂ ಮಹತ್ವದ ಮಾತುಗಳನ್ನು ಆಡಬಲ್ಲೆವು. ಸಿನಿಮಾಕ್ಕೆ ಅದು ತಕ್ಕ ರೀತಿ.

ಎರಡನೆಯ ಕರಡಿನಲ್ಲಿ ನಾನು, lens, ವರ್ಣಛಾಯೆ, ಸಂಗೀತ ಪ್ರಸ್ತಾಪ ಇವುಗಳನ್ನು ಮಾಡಿಕೊಳ್ಳುತ್ತೇನೆ. Close up, longs hot ಇವೆಲ್ಲ ಇದರಲ್ಲಿದ್ದು ತಾಂತ್ರಿಕವಾಗಿ ಎಲ್ಲಾ shotಗಳ ವಿಭಜನೆ ಇದರಲ್ಲಿ ಬರುತ್ತದೆ. ಸಾಮಾನ್ಯವಾಗಿ ನನ್ನ ಕ್ಯಾಮರಾಮನ್‌ಗೆ, ಸಂಗೀತ ನಿರ್ದೇಶಕರಿಗೆ ಇದನ್ನು ನಾನು ಓದಲು ಕೊಡುತ್ತೇನೆ. ಇದರಿಂದ ಅವರಿಗೆ ತಮ್ಮ ತಯಾರಿ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ನನ್ನ ಅಪೇಕ್ಷೆಗಳ ಒಂದು ಕಲ್ಪನೆ ಅವರಿಗೆ ಇರುತ್ತದೆ.

ಮೂರನೆ ಹಂತ

ಇಲ್ಲಿ ನಾನು ಪ್ರತೀ shotನ್ನೂ ಒಂದು ಪುಟ್ಟ ಅಂಗೈ ಅಗಲದ ಹಾಳೆಯಲ್ಲಿ ವಿವರವಾಗಿ ಬರೆಯುತ್ತೇನೆ. ಇದರಲ್ಲಿ ಸ್ಕೆಚ್‌ಗಳನ್ನು ಕೂಡ ಬಳಸುತ್ತೇನೆ.

ಒಂದು ಮಾತಿನಲ್ಲಿ ಹೇಳಬೇಕೆಂದರೆ ಉತ್ತಮ ಚಿತ್ರಕಥೆ ಅಂದರೆ ಒಂದು ಕಥೆಯ ಸಕಲಸಾಧ್ಯತೆಗಳನ್ನು ದೃಶ್ಯಗಳಲ್ಲಿ ಪೋಣಿಸುವ ಕಲೆ.''



ನಿತ್ಯ ಜೀವನದಿಂದ ವಿವರ ಹೆಕ್ಕುವ ಕಲೆ

ಅರುಣ್‌ಕುಮಾರ್

"ಭೂಮಿಗೀತ' ಚಲನಚಿತ್ರಕ್ಕೆ ಕೇಸರಿ ಹರವೂ ಅವರನ್ನು ನಾನು ಕಾಣಲು ಹೋಗಿದ್ದು-ನಾಯಕ ಪಾತ್ರದ ಸಂದರ್ಭದಲ್ಲಿ. ಆದರೆ ನನ್ನ 'ಸ್ವರೂಪ' ನೋಡಿದ ಕೇಸರಿ, ನನ್ನನ್ನು ಕಲಾ ನಿರ್ದೇಶಕನನ್ನಾಗಿ ನೇಮಿಸಿ ಬಿಟ್ಟರು. ಅತ್ಯಂತ ಕಡಿಮೆ ಬಜೆಟ್‌ನಲ್ಲಿ unconventional ಆಗಿ, ಅದ್ಭುತ ವಾತಾವರಣ ಸೃಷ್ಟಿಸುವ ಕೆಲಸ. ಬಿದಿರು, ಚಾಪೆ, ಹುಲ್ಲು, ಸಗಣಿ, ಮಣ್ಣು, ಎಲೆ, ಗರಿಕೆಗಳೇ ನನ್ನ ಸಲಕರಣೆ.

ಆಗ ಬಯಲು ದಶಂಬದ ಒಬ್ಬ ಕಲಾವಿದ ನಾನು ಬರೇ



> ನನ್ನ ನಲ್ಲ, ಪಿ ಆತ್ಯೋದ್ ತಪ್ಪಾ ಇಂಥ ಶ್ರೀಮಂತ ಚಿತ್ರಗಳ ಕಲಾ ನಿರ್ದೇಶಕ ಅರುಣ್‌ಕುಮಾರ್ ಈಗ ರಾಘವೇಂದ್ರರಾವ್ ನಿರ್ದೇಶನದ ಭಾರೀ ಪೌರಾಣಿಕ 'ಮಂಜುನಾಥ'ದ ಕಲಾನಿರ್ದೇಶನದಲ್ಲಿ ನಿರತರಾಗಿದ್ದಾರೆ. ಸಾಗರದಲ್ಲಿ ಹುಟ್ಟಿ ಬೆಳೆದು, ಅಲ್ಲಿನ ಆರ್ಕೆಸ್ಟ್ರಾದಲ್ಲಿ ಮಿಮಿಕ್ರಿ/ಡಾನ್ಸ್ ಮಾಡುತ್ತಿದ್ದ ಅರುಣ, ಮಾಸೂರ್, ವಿಜಯವಾಮನ, ಇಕ್ಬಾಲ್ ಅಹ್ಮದ್‌ರ ಸಹವಾಸದಲ್ಲಿ ರಂಗಭೂಮಿಯ ರುಚಿ ಹತ್ತಿಸಿಕೊಂಡು ರಂಗಾಯಣ ಸೇರಿ, ಅಲ್ಲಿ ಪೋಸ್ಟರು, ಸ್ಟೇಜ್ ವಿನ್ಯಾಸದಿಂದ ನಟನೆಯವರೆಗೆ- ಎಲ್ಲದರಲ್ಲೂ ಬಿ.ವಿ. ಕಾರಂತರ ಗರಡಿಯಲ್ಲಿ ಪಳಗಿದವರು.

ಬಯಲುಕಲೆಯನ್ನೂ ಅಲ್ಲಿ ಸ್ಟೈರ್ಯ ವನ್ನೂ ಕಲಿತೆ. ಅಲ್ಲೊಂದು ಹೋಟೆಲ್ ಗಡಿಯಲ್ಲಿ ಹಗಲುರಾತ್ರಿ ಕಷ್ಟಪಟ್ಟು ಬಿದಿರಿನ ಸೆಟ್ ಹಾಕಿದ್ದೆವು. ಮುಂಜಾನೆ ಹೋಗಿ ನೋಡಿದರೆ-ಯಾವುದೋ ಸ್ಥಳೀಯ ಗಡಿಬಿಡಿಯ ಫಲವಾಗಿ ನರಕಾವವರು ಅದನ್ನು ನೆಲಸಮ ಮಾಡಿಬಿಟ್ಟಿದ್ದರು. ನಾನು ಜಗತ್ತೇ ಕುಸಿದವನಂತೆ ಕೂತುಬಿಟ್ಟಿದ್ದೆ. ಆಗ ಆ ಬಿದಿರಬ್ಬ-'ಏಯ್, ಇಷ್ಟಕ್ಕೆಲ್ಲಾ ಅಳ್ತಾ ಕೂಡ್ತಾರೇನೋ. ನಡಿ...ಇಂಥಾ ನೂರು ಸೆಟ್ ಮಾಡೋಣ ಬಾ...' ಎಂದು ನನ್ನನ್ನು ಕೆಣಕಿ ಎಬ್ಬಿಸಿದ. ಈ ಕೆಲಸಕ್ಕೆ ಬೇಕಾದ ತಾಳ್ಮೆ ಮತ್ತು ಸಂಯಮದ ಮೊದಲ ಪಾಠ ಅದು.


ಸುರೇಶ ಹುಬ್ಬಳ್ಳಿ, ಶಶಿಧರ ಅಡಪರಂಥ ಹಿರಿಯರು ನನಗೆ ಈ ಕೆಲಸ ಕಲಿಸಿದ್ದು. 'ಭೂಮಿಗೀತ'ದ ಅಕ್ಷರಗಳಿಗೆ ಜೀವ ಬರುವ್ಹ ತುಂಬುತ್ತಿದ್ದ ಟಿ.ಜಿ. ಶ್ರೀನಿವಾಸ ಅವರ 'ಶಾಂತಿ ಶಾಂತಿ ಶಾಂತಿ'ಯಲ್ಲಿ ಖ್ಯಾತ ಛಾಯಾಗ್ರಾಹಕ ಪಿ.ಸಿ. ಶ್ರೀರಾಂ ಅವರಿಂದ ಒಂದು frameನಲ್ಲಿ rawness ಉಳಿಸಿಕೊಳ್ಳುವುದೂ ಮುಖ್ಯ ಎಂಬುದನ್ನು ಕಲಿತೆ.

ಬುದ್ಧನ ಕಣ್ಣು

ಹೀಗೆ 'ರಂಗ ಕಲೆ'ಗಳಿಂದ ರೂಪುಗೊಂಡ ನಾನು, ಹೈ ಬಜೆಟ್ ಚಿತ್ರಗಳಿಗೆ ಕಲಾನಿರ್ದೇಶನ ಮಾಡುತ್ತೇನೆಂದು ಖಂಡಿತ ಎಣಿಸಿರಲಿಲ್ಲ. ಆದರೆ ರವಿಚಂದ್ರನ್‌ರ ಹಾಡು, ಚಿತ್ರಗಳು-ನನ್ನ ಕಾರ್ಯಕ್ಷೇತ್ರವನ್ನು ತುಂಬಾ ವಿಸ್ತರಿಸಿದ್ದವು. ದೇಶ-ವಿದೇಶಗಳ ಹೊರಾಂಗಣಗಳು, ಭಾರೀ ಮನೆಗಳು, ಬಜಾರುಗಳು... ಈ ಬಗೆಯ ಒಂದು ರಮ್ಯ ಸ್ವಪ್ನಲೋಕವನ್ನು ಸೃಷ್ಟಿಸುವ ಕೆಲಸ ನನ್ನದಾಯಿತು. 'ಓ ನನ್ನ ನಲ್ಲೆ'ಯ ಕಲ್ಪನಾ ಹಾಡಿನಲ್ಲಿ ನಾನು ಬಳಸಿದ 'ಬುದ್ಧನ ಕಣ್ಣಿನ' ರೂಪಕ ಯಶಸ್ವಿಯಾಯಿತು. ನನಗೂ ತುಂಬಾ ಆತ್ಮವಿಶ್ವಾಸವನ್ನು ಕೊಟ್ಟಿತು.

ಟೆಂಪರರೀ ಮತ್ತು ಹುಂಬ ಧೈರ್ಯ

ನಾನು ಹುಡುಗನಾಗಿದ್ದಾಗ, ಸಾಗರದಲ್ಲಿ ನನ್ನ ಗೆಳೆಯನ ಸಿನಿಮಾ ಥೇಟರಿನಲ್ಲಿ, ಗೇಟಿನಲ್ಲಿ ಟಿಕೇಟು ಹರಿಯಲು ನಿಲ್ಲುತ್ತಿದ್ದೆ. ಆಗ ಬೆಳಗಿನ ಶೋ ಇಂಗ್ಲಿಷ್. ಮೊದಲ ಶೋ ಹಿಂದಿ ಮತ್ತು ಉಳಿದೆರಡು ಶೋ ಕನ್ನಡ ಸಿನಿಮಾಗಳಾಗುತ್ತಿದ್ದವು. ಹೀಗಾಗಿ ಎಲ್ಲಾ ಬಗೆಯ ಚಿತ್ರಗಳನ್ನು ಹೊಟ್ಟೆಬಾಕನಂತೆ ನೋಡುತ್ತಿದ್ದೆ. ಸಿನಿ ಪರದೆಗಳನ್ನು ನೀರಲ್ಲಿ ಕರಗಿಸಿ, ಅದರಿಂದ ಪೋಸ್ಟರುಗಳನ್ನೂ ಬರೆಯುತ್ತಿದ್ದೆ. ಆರ್ಕೆಸ್ಟ್ರಾದಲ್ಲಿ ಮಿಮಿಕ್ರಿ, ಡಾನ್ಸ್ ಮಾಡುತ್ತಿದ್ದೆ. 'ಟೆಂಪರರಿ' ಉದ್ಯೋಗಗಳ ಒಂದು ಒಳ್ಳೆಯ ಸಂಗತಿ ಎಂದರೆ ಒಳ ಪ್ರತಿಭೆಗೆ ಬೇಕಾದ ಪರಿಕ್ಷೆ ಒಡ್ಡುವ. ಸ್ವಾತಂತ್ರ್ಯ ಅಲ್ಲಿ ಇರುತ್ತದೆ. ರಂಗಾಯಣದಲ್ಲೂ ಆ



ರೀತಿ ಫೀಲಿಂಗ್ ಇತ್ತು. ಈಗ ಈ ಸಿನಿಮಾರಂಗದಲ್ಲೂ ಅದು ಇದೆ. 'ಈವತ್ತು ಇದ್ದೇನೆ, ನಾಳೆ ಯಾರಿಗೆ ಗೊತ್ತು?'-ಎಂಬ ಫೀಲಿಂಗ್ ಯಾವತ್ತೂ ಸ್ಥಾಯಿ. ಮತ್ತು ಅದರಿಂದಾಗೇ-'ಇದನ್ನು ಮಾಡಿಯೇ ಬಿಡೋಣ'-ಎಂಬ ಹುಂಬ ಧೈರ್ಯ.

ಎಷ್ಟು ಬೇಕೋ ಅಷ್ಟೇ

ಈಗ ನಾನು ಕೆಲಸ ಮಾಡುತ್ತಿರುವ ಪೌರಾಣಿಕ ಚಿತ್ರಕ್ಕೆ ಕೈಲಾಸ, ಅರಮನೆ, ನೃತ್ಯಶಾಲೆ... ಇಂಥ ಭಾರೀ ಸೆಟ್ಟುಗಳನ್ನು ಮಾಡಿದ್ದೇನೆ. ಇದು ನೂರಾರು ಕುಶಲಕರ್ಮಿಗಳನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್, ಫೈಬರ್ ಗ್ಲಾಸ್ ಇತ್ಯಾದಿಗಳನ್ನು ಬಳಸಿ ಸೆಟ್ ಮಾಡುವ ಕೆಲಸ. ಆಂಧ್ರ ಮತ್ತು ಮದ್ರಾಸುಗಳಲ್ಲಿ ಪೌರಾಣಿಕ ಚಿತ್ರಗಳಿಗೆ ಒಂದು ಪರಂಪರೆ ಇದೆ. ಅವುಗಳ ಕುಶಲಕರ್ಮಿಗಳೂ ಇದ್ದಾರೆ. ವಸ್ತು, ಪರಿಕರಗಳ ಆಕರಗಳೂ ಇವೆ. ನಮ್ಮಲ್ಲಿ ಎಲ್ಲವನ್ನೂ ಹೊಸದಾಗಿಯೇ ಮಾಡಬೇಕು.

ಶಶಿಧರ್ ಅಡಪರ ಮಾರ್ಗದರ್ಶನದಂತೆ ನಾನು ಈ ಭವ್ಯ ಸೆಟ್ಟುಗಳನ್ನು ಫ್ರೇಂಗಳ ಪರಿಮಿತಿಯಲ್ಲಿ ಮಾಡುವ ವಿಧಾನವನ್ನು ಅನುಸರಿಸುತ್ತಿದ್ದೇನೆ. ನಾಲ್ಕೂ ಚಿತ್ತಾರದ ಗೋಡೆಯ ಮಧ್ಯೆ ಕೆತ್ತನೆ ಉಯ್ಯಾಲೆ ಇಡೋದಕ್ಕಿಂತ, ಒಂದು ಉಯ್ಯಾಲೆ ಇಟ್ಟು ನಂತರ ಕ್ಯಾಮೆರಾದ ಕೋನ ನೋಡಿ, ಅದಕ್ಕೆ ಬೇಕಾದಷ್ಟೆ ಹಿನ್ನೆಲೆಯನ್ನು ಉಯ್ಯಾಲೆಗೆ ಕೊಡಬಹುದು.

ಸುತ್ತ ಮುತ್ತ

ಊಹಿಸಿಕೊಂಡು ನಾನು ಸ್ಕೆಚ್ ಮಾಡೋದಿಲ್ಲ. ಸುತ್ತ ಮುತ್ತ ಇರೋದನ್ನು ತೀರಾ ಕೂಲಂಕಷವಾಗಿ ನೋಡುತ್ತಿರುತ್ತೇನೆ. ಬಸ್‌ಸ್ಟಾಪು, ಪಾನ್‌ಶಾಪು, ಸೀರೆ ಅಂಗಡಿ, ದರ್ಶಿನಿ, ಗಡಂಗು, ಆಸ್ಪತ್ರೆ - ಇವೆಲ್ಲವುಗಳ ವಿವರಗಳನ್ನು ಮನದಲ್ಲಿ ಇಟ್ಟುಕೊಳ್ಳಲು ಯತ್ನಿಸುತ್ತೇನೆ. ಎಲ್ಲ ಗೂಡಂಗಡಿಗಳೂ ಒಂದೇ ಥರ ಇರೋದಿಲ್ಲ. ಕೆಲವೊಂದು ಪಾನ್‌ಶಾಪುಗಳಲ್ಲಿ ಏನೋ ವಿಶೇಷ ಇರುತ್ತದೆ. ಅಂಥ specific ಲಕ್ಷಣಗಳನ್ನು ಕೊಟ್ಟಾಗ ಸೆಟ್ಟು ಹೆಚ್ಚು ಆಕರ್ಷಕವಾಗುತ್ತದೆ. ಅದಕ್ಕೊಂದು energy ಬರುತ್ತದೆ. ಇಲ್ಲವಾದರೆ ಅದಕ್ಕೆ ಮತ್ತು ನಾಟಕದಲ್ಲಿ ಬಳಸುವ ರಾಸ್ತಾ ಸೀನಿನ ಪರದೆಗೆ ಏನು ವ್ಯತ್ಯಾಸ?



ಕಲಾ ನಿರ್ದೇಶಕನ ಮುಖ್ಯ ಆಸ್ತಿ, ವಿವರಗಳು. ಕಲಾನಿರ್ದೇಶಕನ ಕಣ್ಣು ನಿತ್ಯದ ನಿಜ ಜೀವನದಲ್ಲಿ ಅಂಥ ಸಂಗತಿಗಳನ್ನು ಹುಡುಕುತ್ತಲೇ ಇರಬೇಕು. ಬಣ್ಣಗಳ ಆಯ್ಕೆಯೂ ಬಲು ಮುಖ್ಯ. ಚಿತ್ರಕಥೆಯನ್ನು ಓದಿದಾಗ-ದೃಶ್ಯವೊಂದರ ಮೂಡ್ ನಿಮಗೆ ತಿಳಿಯುತ್ತದೆ. ಅದಕ್ಕನುಗುಣವಾದ ವರ್ಣಛಾಯೆ ಬಳಸಿ ಆಯಾ ಮೂಡನ್ನು ಹೆಚ್ಚಿಸಬಹುದು. ನನ್ನ ಪತ್ನಿ ಮೀರಾ ಕಲಾವಿದೆ. ನನ್ನ ಕಲ್ಪನೆಗಳನ್ನು ಸ್ಕೆಚ್ ಹಾಕುವುದರಲ್ಲಿ ನನ್ನ ಬಲಗೈಯಾಗಿ ನೆರವಾಗುತ್ತಾಳೆ.

ನಿತ್ಯ ಬಸಿರು

ಕಲಾ ನಿರ್ದೇಶಕನಿಗೆ ನಿತ್ಯ ಬಸಿರು, ನಿತ್ಯ ಹೆರಿಗೆ. ಏಕೆಂದರೆ, ಹಠಾತ್ತನೆ ದೃಶ್ಯಗಳ ಚಿತ್ರೀಕರಣ ಹಿಂದುಮುಂದಾಗಬಹುದು. ಒಂದು ರಾತ್ರಿಯಲ್ಲಿ ಏನನ್ನೋ ನಿರ್ಮಿಸಬೇಕಾಗಬಹುದು. ಮಾಡಿದ್ದು ನೀರಿನಲ್ಲಿ ಹೋಮವಾಗಬಹುದು. ಹೀಗೆ ಒಂದು ಬಗೆಯ 'ಅಗ್ನಿಶಾಮಕ ದಳ'ದ ಸ್ಪಿರಿಟ್‌ನಲ್ಲಿ ನಾವಿರುತ್ತೇವೆ, ಯಾವ ಕರೆಗೂ ಓಗೊಡಲು ಸನ್ನದ್ಧರಾಗಿ !''

ಜಗಮಗ ಅರಮನೆಗಿಂತ, ಕೊಂಪೆಯ ಗೋಡೆ ರೂಪಿಸುವುದು ಹೆಚ್ಚು ಕಷ್ಟ

ಶಶಿಧರ ಅಡಪ

ದಕ್ಷಿಣ ಕನ್ನಡದ ಮುತ್ತೂರಿನಲ್ಲಿ ಹುಟ್ಟಿ, ಬಿಎಸ್ಸಿ ಮುಗಿಸಿ ಮಂಗಳೂರಿನ ಕಾಲೇಜೊಂದರಲ್ಲಿ ಲ್ಯಾಬ್ ಅಸಿಸ್ಟೆಂಟ್ ಆಗಿದ್ದ ಶಶಿಧರ ಅಡಪ 1976ರಲ್ಲಿ ಪ್ರಸನ್ನರ 'ಸಮುದಾಯ'ದ ಸಮಾಜಮುಖೀ ಕರೆಗೆ ಸೆಳೆಯಲ್ಪಟ್ಟು ನೇಪಥ್ಯ ಕಲೆಗಾರರಾಗಿ, ಜಾಥಾಗಳ ರೂವಾರಿಯಾಗಿ ರಂಗಭೂಮಿಗೆ ಬಂದರು. ಹಾಗೇ ಬೆಂಗಳೂರಿಗೂ ಬಂದರು 'ದಂಗೆಯ ಮುಂಚಿನ ದಿನ', 'ಮ್ಯಾಕಬೆತ್', 'ಒಡಲಾಳ'ಗಳಂಥ ನಾಟಕ ಪ್ರಯೋಗಗಳ ಕಲಾ ನಿರ್ದೇಶಕರಾದರು. ಮತ್ತು ನೋಡ ನೋಡುತ್ತಿರುವಂತೆ ಕಳೆದೆರಡು ದಶಕಗಳಲ್ಲಿ ಮಿಸ್ ಇಂಡಿಯಾ ಶೋಗಳಂಥ ವಿರಾಟ ಸಮಾರಂಭಗಳಿಂದ ಹಿಡಿದು, ಜಾಹೀರಾತು, ಟೆಲಿವಿಜನ್ ಮತ್ತು ಸಿನಿಮಾಲೋಕ (ಕಾನೂರು ಸುಬ್ಬಮ್ಮ, ದೇವೀರಿ, ನಾಗಮಂಡಲ, ಮತದಾನ)ದ ಉತ್ಕೃಷ್ಟ ಕಲಾ ನಿರ್ದೇಶಕರಾಗಿ ಬೆಳೆದು ನಿಂತಿದ್ದಾರೆ.



ಅರ್ಪಿಸುತ್ತಿದ್ದೇವೆ, ಹೊಸ ಎಂಟಿಆರ್ ಅಕ್ಕಿ ಶಾವಿಗೆ.

ಈ ವಾರಾಂತ್ಯದಲ್ಲಿ, ಇದರಿಂದ ನಿಮ್ಮ ಕುಟುಂಬಕ್ಕೆ ರಸದೌತಣ ನೀಡಿರಿ ಹಾಗೂ ಪ್ರತಿ ದಿನವನ್ನೂ ಭಾನುವಾರವಾಗಿ ಬಯಸುವಂತೆ ಮಾಡಿರಿ.



ಅರ್ಪಿಸುತ್ತಿದ್ದೇವೆ, ಎಂಟಿಆರ್ ಅಕ್ಕಿ ಶಾವಿಗೆ. ಅದು ನಿಮ್ಮ ಪ್ರೀತಿಪಾತ್ರ ತಾಯಿ ಮಾಡುವ ಹಾಗೆಯೇ ಇದೆ. ಯಾವುದೇ ತೊಂದರೆಯಿಲ್ಲದ ಎಂಟಿಆರ್ ಅಕ್ಕಿ ಶಾವಿಗೆಯು ರೆಡಿಮೇಡ್ ಆಗಿದ್ದು ಕೆಲವೇ ನಿಮಿಷಗಳಲ್ಲಿ ಸಿದ್ಧಗೊಳಿಸಬಹುದು. ಈ ಭಾನುವಾರದಂದು ನಿಮ್ಮ ಕುಟುಂಬಕ್ಕೆ ವಿಶೇಷ ಅನಿರೀಕ್ಷಿತವೆನಿಸುವಂತೆ ಅದನ್ನು ನೀಡಿರಿ. ಅಂದರೆ ಈ ರಸದೌತಣಕ್ಕೆ ನಿಮ್ಮ ಮಕ್ಕಳು ಮುಂದಿನ ವಾರಾಂತ್ಯದ ವರೆಗೂ ಕಾಯುವುದಿಲ್ಲವೆನ್ನುವುದನ್ನು ನೀವೇ ಮನಗಾಣಿರಿ.

ಎಂಟಿಆರ್ ಕಿವಿಮಾತು

ಎಳ್ಳು ಬೆಲ್ಲ ಶಾವಿಗೆ

- ***ಬೇಕಾದ ಪದಾರ್ಥಗಳು :*** *ಅಕ್ಕಿ ಶಾವಿಗೆ - 200 ಗ್ರಾಂ, ಹುರಿದು ಪುಡಿಮಾಡಿದ ಎಳ್ಳು - 100 ಗ್ರಾಂ, ಪುಡಿಮಾಡಿದ ಬೆಲ್ಲ - 100 ಗ್ರಾಂ, ತುರಿದ ಕೊಬ್ಬರಿ - 25 ಗ್ರಾಂ, ತುಪ್ಪ - 2 ಟೀ ಸ್ಪೂನ್. ಹಾಗೂ ಚಿಟಿಕೆಯಷ್ಟು ಏಲಕ್ಕಿಪುಡಿ.*
- ***ತಯಾರಿಸುವ ವಿಧಾನ :*** *ಸೂಚಿಸಿರುವಂತೆಯೇ ಅಕ್ಕಿ ಶಾವಿಗೆಯನ್ನು ಬೇಯಿಸಿ ಪಕ್ಕಕ್ಕಿಡಿ. 2 ಟೀ ಸ್ಪೂನ್ ತುಪ್ಪದೊಂದಿಗೆ, ಎಳ್ಳಿನ ಪುಡಿ, ಬೆಲ್ಲ, ಚಿಟಿಕೆಯಷ್ಟು ಏಲಕ್ಕಿಪುಡಿ ಸೇರಿಸಿ ಚೆನ್ನಾಗಿ ಮಿಶ್ರಮಾಡಿರಿ. ಇದಕ್ಕೆ ಬೇಯಿಸಿದ ಶಾವಿಗೆ ಸೇರಿಸಿ ಎರಡನ್ನೂ ಚೆನ್ನಾಗಿ ಮಿಶ್ರಮಾಡಿರಿ. ತುರಿದ ಕೊಬ್ಬರಿಯಿಂದ ಅಲಂಕರಿಸಿ ಬಡಿಸಬಹುದು.*
- *ಈ ಮೇಲಿನ ವಿಧಾನದಿಂದ ತಯಾರಿಸಿದ ಭಕ್ಷ್ಯವನ್ನು ನಾಲ್ಕು ಜನಕ್ಕೆ ಬಡಿಸಬಹುದು.*

ಎಂಟಿಆರ್ ಅಕ್ಕಿ ಶಾವಿಗೆ ಮಾಡಲು ಸೂಚನೆಗಳು



3 ಆಳತೆಯಷ್ಟು ಕುದಿಯುವ ನೀರಿಗೆ, 1 ಆಳತೆಯಷ್ಟು ಎಂಟಿಆರ್ ಅಕ್ಕಿ ಶಾವಿಗೆ ಸೇರಿಸಿರಿ. ಮಧ್ಯಮ ಜ್ವಾಲೆಯಲ್ಲಿ 3-4 ನಿಮಿಷ ಬೇಯಿಸಿರಿ.



ನೀರನ್ನು ಬಸಿದು, ಎರಡುಬಾರಿ ತಣ್ಣೀರಿನಲ್ಲಿ ಅಂಟುತನವು ಹೋಗುವವರೆಗೆ ತೊಳೆಯಿರಿ. ಹೆಚ್ಚಿನ ನೀರನ್ನು ಬಸಿದು, ಒಣಗಿಸಿ 5 ನಿಮಿಷಗಳ ಕಾಲ ಪಕ್ಕಕ್ಕಿಡಿ.



ಎಂಟಿಆರ್ ಅಡಿಗೆ ಸಲಹೆ : ಅಂಟುತನ ಹೋಗಲಾಡಿಸಲು ಎಂಟಿಆರ್ ಅಕ್ಕಿ ಶಾವಿಗೆಗೆ ಒಂದು ಅಥವಾ ಎರಡು ಹನಿ ಎಣ್ಣೆ ಸೇರಿಸಿರಿ.



ಇದೀಗ ಸವಿಯಲು, ನಿಮ್ಮ ಎಂಟಿಆರ್ ಶಾವಿಗೆಯು ಸಿದ್ಧವಾಗಿದೆ.

MTR
SINCE 1924

THE PROMISE OF PURITY

"ಹಾಗೆ ನೋಡಿದರೆ ನಾನು ಅಂಥ ಕೈ ಕಲೆಗಾರ ಅಲ್ಲ. ಒಂದಿಷ್ಟು ಪ್ರತಿಭಾವಂತರನ್ನು ಗುಡ್ಡೆಹಾಕಿ ನನ್ನ ಕಲ್ಪನೆಗೆ ತಕ್ಕಂತೆ ಒಂದು ದೃಶ್ಯವನ್ನು ನಿರ್ಮಿಸಬಲ್ಲೆ. 'ಕಲಾ ನಿರ್ದೇಶಕ' ಅಂದರೆ ನಿಮ್ಮ ಕಣ್ಣಿಗೆ ಕಾಣುವ ವಸ್ತುಪ್ರಪಂಚದ ವಿನ್ಯಾಸವನ್ನು ರೂಪಿಸುವವನು. ಹೊರತು ಅವನೇ ಕೂತು ಕಿಟಕಿಯ ಸರಳಿಗೆ- ಬಣ್ಣ ಬಳಿಯುವುದಿಲ್ಲ. ಪ್ರಸಂಗ ಬಂದರೆ ಅವನೂ ಕೂತು ಕೆಲಸ ಮಾಡಿಯಾನು. ಆದರೆ ಅವನ ಮುಖ್ಯ ಕೆಲಸ, ಸಿನಿಮಾ ಇರಲಿ, ಟೆಲಿವಿಜನ್ ಇರಲಿ, ನಾಟಕ ಇರಲಿ-ಅದರ Visual characterನ್ನು ಕಾಪಾಡುವುದು.




ಡಿ.ಸಿ. ನಾಗೇಶ್

ಬದಲಾಗುತ್ತಿರುವ ಪರಿಕಲ್ಪನೆ

ಮೊದಲು ಸ್ಟುಡಿಯೋಗಳಲ್ಲೇ ಚಿತ್ರಗಳು ತಯಾರಾಗುತ್ತಿದ್ದವು. ಮನೆ, ಅರಮನೆ, ಉಪವನ, ಹೂಮಂಟಪ, ಬೀದಿ-ಎಲ್ಲವನ್ನೂ ಸೆಟ್ ಹಾಕಲಾಗುತ್ತಿತ್ತು. ಆಗೆಲ್ಲ ಲಾಂಗ್ ಶಾಟ್‌ಗಳೇ ಮುಖ್ಯವಾಗಿರುತ್ತಿದ್ದವು. ಹೀಗಾಗಿ ಒಮ್ಮೆ ಸೆಟ್ ಹಾಕಿದ ಮೇಲೆ - ಅದನ್ನು ಬಗೆ ಬಗೆಯಲ್ಲಿ ಸೆರೆಹಿಡಿಯುವ ಜವಾಬ್ದಾರಿ ಕೇವಲ ಕ್ಯಾಮರಾಮನ್ ಮೇಲೆ ಬಿದ್ದಿರುತ್ತಿತ್ತು. ಹೀಗೆ ಕಲಾ ನಿರ್ದೇಶಕನ 'ಫ್ರೇಂ' ದೊಡ್ಡದಿತ್ತು. ಆದರೆ ಕಳೆದ ಕಾಲು ಶತಮಾನದಲ್ಲಿ ಸಿನಿಮಾದ ಭಾಷೆ ಬದಲಾಗಿದೆ. Close up ಇರಲಿ, Mid shot ಇರಲಿ, ಪ್ರತಿ ಫ್ರೇಮಿಗೂ ಈಗ ನೆಳಲು, ಬೆಳಕು, ಬಣ್ಣಗಳ ಒಂದು ಸಂಯೋಜನೆ ಅನಿವಾರ್ಯವಾಗಿದೆ. ಹೀಗಾಗಿ ಕಲಾ ನಿರ್ದೇಶಕನ ಕ್ಷೇತ್ರ ಸೂಕ್ಷ್ಮವಾಗತೊಡಗಿದೆ. ಸುಮ್ಮನೆ ದೊಡ್ಡ ದೊಡ್ಡ ಸೆಟ್ಟುಗಳನ್ನು ಹಾಕುವ ಗೋಜಿಗೆ ಹೋಗದೆ-ಒಂದು ಫ್ರೇಮಿಗೆ ಬೇಕಾದಷ್ಟೆ ಮನೆಯ ಅಥವಾ ಬೀದಿಯ ಬಿಡಿ ಭಾಗವನ್ನಷ್ಟೆ ನಿರ್ಮಿಸಿ ಕಲಾನಿರ್ದೇಶಕ ದೊಡ್ಡ ಮನೆಯ ಕಲ್ಪನೆಯನ್ನು ಮೂಡಿಸಬಲ್ಲ. ಒಂದು ಹೂಜಿ, ಒಂದು ಕ್ಯಾಲೆಂಡರು, ಒಂದು ದೀಪ... ಹೀಗೆ ಅತ್ಯಂತ ಸಮರ್ಪಕವಾದ ಒಂದೆರಡು ಸಲಕರಣೆಗಳಿಂದ ಒಂದು ವಾತಾವರಣವನ್ನು ನಿರ್ಮಿಸಬಲ್ಲ. 'ನಾಗಮಂಡಲ'ದ ಜನಪದ ನೋಟ, 'ದೇವೀರಿ'ಯ ಕೊಳೆಗೇರಿ, 'ಕಾನೂರು ಸುಬ್ಬಮ್ಮ'ದ ಮಲೆನಾಡಿನ ಮನೆ-ಇವೆಲ್ಲ ಮೂಡಿದ್ದೇ ಹೀಗೆ.

ಸಣ್ಣಪುಟ್ಟ ಸೂಕ್ಷ್ಮ ವಿವರಗಳು

ನಾನು ಬರೀ ಅಲಂಕಾರ ಮಾಡುವವನಲ್ಲ. ಒಂದು ಕಥೆಯ ಸಾಮಾಜಿಕ ಆಯಾಮಗಳನ್ನು ನಾನು ನೋಡುತ್ತೇನೆ. ಉದಾಹರಣೆಗೆ 'ನಾಗಮಂಡಲ'ದ ಹಾಡಿಗೆ ತಗೊಳ್ಳಿ. ಮೂಲತಃ ಭರಣಿಗೆ ಹೆಣ್ಣೊಂದು ವಿಧೇಯ ಭಂಗಿಯಲ್ಲಿ ದೀಪ ಹಿಡಿದಂತಿರುವ ನೀಲಾಂಜನ ಬೇಕಿತ್ತು. 'ನಾಗಮಂಡಲ'ದ ಕಥೆಯೇ ಹೆಣ್ಣಿನ ವಿಮೋಚನೆಯದು. ಆಕೆಯ ಸ್ವಾತಂತ್ರ್ಯ-ಆಗಿರೋದ್ರಿಂದ ನನಗೆ ಆ ನೀಲಾಂಜನ ಸರಿಕಾಣಲಿಲ್ಲ. ಅದರ ಬದಲಿಗೆ, ಸಾದಾ ನೀಲಾಂಜನವನ್ನು ಬಳಸಿದೆವು. ಅದೇ ರೀತಿಯಲ್ಲಿ ನಾಗಮಂಡಲದ ಗೋಡೆಗಳಿಗೆ ಬಳಿದ ಬಣ್ಣ, ಯಾವ ಪೇಂಟ್, ಡಿಸ್ಟೆಂಪರೂ ಅಲ್ಲ. ಅದು ಆಲಮಟ್ಟಿ ಮುಳಗಡೆ ಪ್ರದೇಶದ



ಮಣ್ಣು. ಅದನ್ನು ಜಾಳಿಸಿ ಡ್ರಮ್ಮು ನೀರಿನಲ್ಲಿ ಕರಡಿ ಸ್ಪ್ರೇ ಮಾಡಿದೆವು. ಆ ಮಣ್ಣಿನ ಸ್ಪ್ರೇನಿಂದ 'ಜನಪದ ಲುಕ್' ಬಂತು. ದೇವೀರಿಯ ಸ್ಲಂ ಮನೆಗಳ ದಂತೂ ದೊಡ್ಡ ಕಥೆ. ಜಗಮಗ, ಫಳಫಳ ಅರಮನೆಯ ಪಡಸಾಲೆಯನ್ನು ಮಾಡೋದು ಸುಲಭ. ಆದರೆ ಸ್ಲಂ? ಅದರಲ್ಲಿಯ ಕೊಳೆ? ಅವನ್ನು ಯಥಾವತ್ ನಿರ್ಮಿಸುವುದು ಕಷ್ಟ. ಹೊಸ ಬಾಗಿಲು, ಕಿಟಿಕಿಗಳನ್ನು ಹಳೆಯದನ್ನಾಗಿ ಮಾಡಲು ತುಂಬಾ ಒದ್ದಾಡಬೇಕಾಗುತ್ತದೆ. ಬಾಗಿಲ ಚೌಕಟ್ಟಿನಲ್ಲಿ ಯಾವಾಗಲೂ ಕೈ ತಾಗುವ ಜಾಗ ಜಾಸ್ತಿ ಮಾಸಿರುತ್ತದೆ. ಸ್ವಿಚ್ ಇರುವ ಜಾಗದಲ್ಲಿ ಗೋಡೆ ಕೈತಾಗಿ ತಾಗಿ ಕೊಳೆಯಾಗಿರುತ್ತದೆ. ಇಂಥ ಸಣ್ಣಪುಟ್ಟ ವಿವರಗಳನ್ನೂ ನೆನಪಿನಲ್ಲಿಡಬೇಕು. ಆಗಲೇ ಸೆಟ್‌ಗೊಂದು 'ಮನುಷ್ಯ ವಾಸನೆ' ಬರುತ್ತದೆ.

ವೆಚ್ಚವನ್ನು ನಿಯಂತ್ರಿಸಬಹುದು

ಒಂದು ಕಾಲದಲ್ಲಿ 'ಆರ್ಟ್‌ಫಿಲ್ಮ್'ಗಳಿಗೆ ಮಾತ್ರ 'ಆರ್ಟ್ ಡಿರೆಕ್ಟರು' ಎಂಬ ಮೂಢನಂಬಿಕೆ ಇತ್ತು. ಆದರೆ ಈಗ ಎಲ್ಲಾ ಬಗೆಯ ಚಿತ್ರಗಳಿಗೂ ಅದೊಂದು ಅನಿವಾರ್ಯ ಹೆಗ್ಗಳಿಕೆಯ ಅಂಶವಾಗಿದೆ. ಏಕೆಂದರೆ ಸುಳ್ಳು ಸೆಟ್ಟಿಂಗ್‌ಗಳ ಕಾಲ ಹೋಗಿದೆ. ಶಾಲೆ ಅಂದ ತಕ್ಷಣ 'ಗಾಂಧಿ' 'ನೆಹರೂ' ಫೋಟೋ, ವಿಲನ್ ಮನೆ ಅಂದ ತಕ್ಷಣ ನಗ್ನ ಕ್ಯಾಲೆಂಡರ್, ಹಳ್ಳಿ ಮನೆ ಅಂದ ತಕ್ಷಣ ಕಣಜ - ಇಂಥ ಕ್ಲೀಷೆಗಳೆಲ್ಲ ಈಗ ಯಾರಿಗೂ ಬೇಕಾಗಿಲ್ಲ. ಔಚಿತ್ಯ-order of the day ಆಗಿದೆ. ನಿರ್ದೇಶಕ, ಕ್ಯಾಮರಾಮನ್ ಮತ್ತು ಕಲಾ ನಿರ್ದೇಶಕರ ನಡುವಿನ ಸಂಬಂಧ ಸಂವಾದಗಳು ಹೆಚ್ಚಾಗಿವೆ.

ನಾನು ಚಿತ್ರಕಥೆಯಲ್ಲಿ ಮುಖ್ಯವಾಗಿ ಗಮನಿಸೋದು ಒಂದು 'ಶಾಟ್' ತೆರೆಯ ಮೇಲೆ ಎಷ್ಟು ಹೊತ್ತು ಇದೆ ಅನ್ನೋದನ್ನು. ಏಕೆಂದರೆ ಮೂರು ಸೆಕೆಂಡು ಬರುವ ಶಾಟ್‌ಗ-ನಾವು ಅಷ್ಟೆಲ್ಲ ಖರ್ಚು ಮಾಡಬೇಕಿಲ್ಲ. ಹೀಗಾಗಿ ಎಷ್ಟು ಬೇಕೋ ಅಷ್ಟೇ set ಅರೇಂಜ್ ಮಾಡುವುದರಿಂದ ಅನಾವಶ್ಯಕ ಸಮಯ, ಹಣದ ವೆಚ್ಚವನ್ನು ತಪ್ಪಿಸಬಹುದು.

ಚ್ಯಾಲೆಂಜ್‌ಗಳು

ನನಗೆ ಚ್ಯಾಲೆಂಜುಗಳು ಇಷ್ಟ. ಹಾಲಿವುಡ್‌ನಂತೆ ಇಲ್ಲಿ ಗ್ರಾಫಿಕ್, ತಾಂತ್ರಿಕ ಸೌಲಭ್ಯ ಅಷ್ಟಿಲ್ಲ. 'ಮತದಾನ'ದಲ್ಲಿ ಆರಂಭದ ಸೂರ್ಯೋದಯದ ಹಿನ್ನೆಲೆಯ ಗುಡಿಸಲಿನ ದೃಶ್ಯ, ಅದು 'ಮಿನಿಯೇಚರ್ (ಪುಟಾಣಿ) ಮಾಡೆಲ್' ಇಟ್ಟುಕೊಂಡು ಮಾಡಿದ್ದು. ಆ ಗುಡಿಸಲು ಪುಟ್ಟದು. ಅದೇ ರೀತಿ 'ಕಾನೂರು ಹೆಗ್ಗಡತಿ'ಯಲ್ಲಿ ಎತ್ತಿನ ಗಾಡಿಯಲ್ಲಿ ಕೂತು ಹೋಗುವ ದೃಶ್ಯ. ಅಲ್ಲಿ ಪೂರ್ಣ ಪ್ರಮಾಣದ ಎತ್ತಿನ ಗಾಡಿ ಇಲ್ಲವೇ ಇಲ್ಲ. ಅರೆಬರೆ ಭಾಗ, ಗಾಲಿ, ಕೇವಲ ಎತ್ತಿನ ಕೊಂಬು, ಬಾಲದಂತೆ ತೋರುವ ಚವರಿ... ಇವುಗಳನ್ನು ಬಳಸಿಯೇ ಆ ಪರಿಣಾಮ ಸಾಧಿಸಲಾಗಿದೆ. ಅಲ್ಲಿ ಛಾಯಾಗ್ರಾಹಕ ರಾಮಚಂದ್ರರ ನೈಪುಣ್ಯ ಅದ್ಭುತವಾಗಿದೆ. 'ಕಾನೂರಿ'ನಲ್ಲಿ ಬರೆ ಇಡುವ ದೃಶ್ಯ. ಅಲ್ಲಿ ಊದುಬತ್ತಿಯನ್ನು ಅಡಗಿಸಿಟ್ಟುಕೊಂಡು ಸುಟ್ಟ ಹೊಗೆ ಬರುವ ಪರಿಣಾಮ ಸಾಧಿಸಿದೆ. 'ಮತದಾನ'ದ ಕೆಂಡ ಹಾಯುವ ದೃಶ್ಯ. ಸಾಮಾನ್ಯವಾಗಿ ಥರ್ಮಾಕೋಲ್ ಚೂರುಗಳಡಿಗೆ ಕೆಂಪು ದೀಪ ಕೊಡುವುದು ವಾಡಿಕೆ. ನಾನು ಆ ಥರ್ಮಾಕೋಲ್ ಚೂರುಗಳಿಗೆ ಸೋನೇರಿ ಮತ್ತು ಕಪ್ಪು ಬಣ್ಣ ಬಳಿದು, ನಂತರ ಕೆಂಪು ದೀಪ ಕೊಟ್ಟು, ಅದರಡಿಯಿಂದ ಲೋಭಾನದ ಹೊಗೆ ಬಿಟ್ಟೆ. ಹೀಗಾಗಿ ನಿಗಿನಿಗಿ ಕೆಂಡದಂತೆ ಅದು ಕಂಡಿತು. ಹೀಗೆ-ಸಿನಿಮಾದಲ್ಲಿ ಬರುವ ವಿಚಿತ್ರ ಚ್ಯಾಲೆಂಜುಗಳನ್ನು ಸಮಯದ ಮತ್ತು ಬಜೆಟ್‌ನ ಇತಿಮಿತಿಯಲ್ಲಿ ನಿರ್ವಹಿಸೋದು ನನಗೆ ಖುಷಿ ಕೊಡುವ ಸಂಗತಿ."

ಶಶಿಧರ ಅಡಪ. ಬಿ.

ಮಧುರ ಶಬ್ದ ಬಳಸಬೇಕು

ಕೆ. ಕಲ್ಯಾಣ್



"ಮನೇಲಿ ನನ್ನ ಅಮ್ಮ ಮತ್ತು ಅತ್ತೆ ಸಂಗೀತ ಕಲಿತಿದ್ದರು. ಏಕಾಂತದಲ್ಲಿ, ನನ್ನ ಮನಸ್ಸಿನಲ್ಲಿ ಬಂದ ಭಾವಗಳಿಗೆ ಶಬ್ದಗಳನ್ನು, ಸ್ವರಗಳನ್ನು ಜತೆ ಜತೆಯಾಗಿಯೇ ಅರಸುತ್ತಿದ್ದೆ- ಪದ್ಯ ಮತ್ತು ಟ್ಯೂನ್ ಎರಡನ್ನೂ ಒಟ್ಟಿಗೇ ಹಿಡಿಯುತ್ತಿದ್ದೆ. ಆಗ ಶಾರದಮ್ಮ ಎಂಬ ನನ್ನ ಹಿತೈಷಿ ನನ್ನನ್ನು ಹಂಸಲೇಖಾ ಅವರ ಬಳಿ ಒಯ್ದರು. ಅವರು ನನ್ನನ್ನು ತುಂಬ ಅಕ್ಕರೆಯಿಂದಲೇ ಶಿಷ್ಯನನ್ನಾಗಿ ಬರಮಾಡಿಕೊಂಡರು. 'ಹಳ್ಳಿಮೇಷ್ಟ್ರು', 'ರಾಮಾಚಾರಿ' - ದಿನಗಳು ಅವು (1991-92).

ಮೊದಲು ಶಬ್ದವೋ, ಮೊದಲು ಸ್ವರವೋ ಎಂಬುದೇ ತಿಳಿಯದಷ್ಟು, ಏಕರೂಪವಾಗಿ ಅವರು ಹಾಡುಗಳನ್ನು ಸೃಷ್ಟಿಸುವುದನ್ನು ನೋಡಿದೆ. 10-11 ವರುಷಗಳಿಗೊಂದು ಟ್ರೆಂಡ್ ಸೆಟರ್ ಬರ್ತಾರಂತೆ. ಹಂಸಲೇಖ ಒಬ್ಬ ಟ್ರೆಂಡ್ ಸೆಟರ್.

ಕೇವಲ ಇಂಗ್ಲಿಷ್ ಶಬ್ದಗಳಿಂದ ಹಾಡು ಆಧುನಿಕವಾಗುವುದಿಲ್ಲ

ಆದಷ್ಟು ಕಲಬೆರಕೆಯಿಲ್ಲದೆ ಶುದ್ಧ ಕನ್ನಡದಲ್ಲಿ ಹಾಡು ಬರೆಯುವುದು ನನ್ನ ಆಸೆ. ಇಂಗ್ಲಿಷ್ ಶಬ್ದಗಳನ್ನು ಬಳಸಿದ ಮಾತ್ರಕ್ಕೆ ಹಾಡು ಆಧುನಿಕವಾಗುವುದಿಲ್ಲ. ಪ್ರಯೋಗಶೀಲತೆ ಇಟ್ಟುಕೊಂಡು ಅಪ್ಪಟ ಕನ್ನಡ ಶಬ್ದಗಳಲ್ಲೇ ಆಧುನಿಕವಾದ ಹಾಡು ಬರೆಯಬಹುದು. 'ಚಂದ್ರಮುಖಿ ಪ್ರಾಣಸಖಿ'ಯಲ್ಲಿ 'ಮನಸೇ ಮನಸೇ' ಹಾಡಿನಲ್ಲಿ 114 ಬಾರಿ 'ಮನಸೇ' ಶಬ್ದ ಬೇರೆ ಬೇರೆ ರೀತಿಯಲ್ಲಿ ಬರುತ್ತದೆ. ಜನ ಅದನ್ನು ಇಷ್ಟಪಟ್ಟರು. ಆದಷ್ಟು ಹೊಸ ಹೊಸ ಶಬ್ದಗಳನ್ನು ಚಲಾವಣೆಗೆ ತರಲು ಯತ್ನಿಸುತ್ತೇನೆ. ಮೊದಲ ಬಾರಿ ಕೇಳಿದ ನಿರ್ಮಾಪಕರು - 'ಇದೆಂಥ ಶಬ್ದ' ಎಂದು ಮೂಗು ಮುರಿದರು. ಅದರ ನಾದ ಗುಣದಿಂದ ಕ್ರಮೇಣ ಅವರಿಗೆ ಅದು ಇಷ್ಟವಾಗುತ್ತದೆ. ನಾನು ಸ್ವತಃ ಸಂಗೀತಗಾರನಾದುದರಿಂದ ಸ್ವರಗಳಿಗೆ ಒಗ್ಗುವಂಥ ಪದಗಳನ್ನೇ ನಾನು ಆಯುತ್ತಿರುತ್ತೇನೆ. ಯಾರನ್ನಾಗಲೀ ನೋಯಿಸುವಂಥ ಹಾಡುಗಳನ್ನು ಖಂಡಿತ ಬರೆಯಲಾರೆ. ಹೆಣ್ಣನ್ನು ಕೀಳಾಗಿ ನೋಡುವ, ದುರ್ಗುಣಗಳನ್ನು ಪ್ರಚೋದಿಸುವ ಬರವಣಿಗೆ ಖಂಡಿತ ಮಾಡಲಾರೆ.

ಒಂದು ಹಾಡು ಮೂಡುವ ಬಗೆ

ಮೊದಲು ಚಿತ್ರದ ಕಥೆ, ಸನ್ನಿವೇಶ ನೋಡಿಕೊಳ್ಳುತ್ತೇನೆ. ಮೊದಲಿಗೆ 'ಮುಖ್ಯ ಟ್ಯೂನ್'. ಇದು ಗರ್ಭಗುಡಿಯ ದೇವರಂತೆ - ಬಾಕಿ ಚಿತ್ರ, ಚಿತ್ತಾರ ಶಿಲ್ಪ ಅಲಂಕಾರ ಹೇಗೇ ಇದ್ದರೂ ಟ್ಯೂನ್ ಎಂಬ ಮೂಲ ವಿಗ್ರಹ ಇಲ್ಲದಿದ್ದರೆ ಯಾವುದಕ್ಕೂ ಅರ್ಥ ಇಲ್ಲ. ಹಳೆಯ 'ನೀರಿನಲ್ಲಿ ಅಲೆಯ ಉಂಗುರ..' ತೆಗೆದುಕೊಳ್ಳಿ. ಅದೊಂದು ನಿರಾಭರಣ ಸುಂದರಿಯಂಥ ಮಧುರ 'ಮೆಲಡಿ'. ಅದನ್ನು ನೀವು ಎಷ್ಟೇ ಆರ್ಕೆಸ್ಟ್ರೇಶನ್ ಮಾಡಿದರೂ -ಆ ಮಾಧುರ್ಯ ಹಾಳಾಗುವಂತಿಲ್ಲ. ಸಿನಿಮಾಕ್ಕೆ ಚಿತ್ರಕಥೆ ಹೇಗೆ ಮುಖ್ಯವೋ, ಹಾಗೆ ಹಾಡಿಗೆ ಈ ಮೂಲ ಟ್ಯೂನ್ ಬಲು ಮುಖ್ಯ. ನಂತರ ಒಂದು visual plan ಮನಸ್ಸಿಗೆ ಇರೋದು ಒಳ್ಳೆಯದು. ಅಂದರೆ ಹಾಡಿನ ಚಿತ್ರೀಕರಣದ ಪರಿಸರ, ಸನ್ನಿವೇಶದ ಚಿತ್ರದ ಕಲ್ಪನೆ ಇದ್ದರೆ-ಮನಸ್ಸು ಅದರ ಗುಂಗಿನಲ್ಲಿ ಹೊಸ ಹೊಸ ಸದ್ದುಗಳನ್ನು ಸಂಯೋಜಿಸುತ್ತದೆ. ಇದರ ಜೊತೆಗೆ 'ಲಯ' ಇರುತ್ತದೆ. ಈಗ ನೋಡಿ 'ತಂನಂ ತಂನಂ ನನ್ನೀ ಮನಸು ಮಿಡಿಯುತಿದೇ...'- ಈ ಟ್ಯೂನ್‌ನಲ್ಲೇ ಒಂದು ಅಂತಸ್ಥ ಲಯವಿದೆ. ಆ ಲಯವನ್ನೇ ತಬಲಾ, ಢೋಲಕ್, ಬ್ಯಾಂಗೋ... ನಿಮಗೆ ಬೇಕಾದ ಸದ್ದಿನಲ್ಲಿ ಒಂದು pattern ಆಗಿ ರೂಪಿಸುತ್ತೇವೆ. ಈ main tune ಮತ್ತು rhythm pattern ಇವೆರಡೂ ನಮ್ಮೊಳಗಿಂದ ಬರುವಂಥದ್ದು.



ಮ್ಯೂಸಿಶಿಯನ್‌ಗಳ ತಂಡ

ಒಂದು ಕಾಲದಲ್ಲಿ ನೂರಾರು ಮ್ಯೂಸಿಶಿಯನ್‌ರನ್ನು ಸಂಗೀತಗಾರ ನಿರ್ದೇಶಿಸುತ್ತಿದ್ದ. ಅಲ್ಲಿ ನೂರು ವಾಯಲಿನ್‌ಗಳಿದ್ದರೆ ಪ್ರತಿಯೊಂದರ ಹಿಂದೂ ನುಡಿಸುವವನ ಭಾವ ಇರುತ್ತದೆ. ಹೀಗೆ ಎಲ್ಲರ ತಲ್ಲೀನತೆಯಿಂದ ಉಂಟಾದ ಸಂಗೀತಕ್ಕೆ ಜೀವಂತಿಕೆ ಇರುತ್ತದೆ. ಅದೇ ಸದ್ದನ್ನು ನಾವು ಸಿಸ್ಟಮ್‌ಗಳಿಂದ ಈಗ ಸಂಯೋಜಿಸುತ್ತೇವೆ. ಎಷ್ಟೊಂದು ಬಗೆಯ ಕಾಂಬಿನೇಶನ್‌ಗಳನ್ನು-ಗುಂಡಿಯೊತ್ತಿ ಮಾಡುತ್ತೇವೆ. ಒಂದು ಕ್ಷಣಕ್ಕೆ, ಮೈ ಝುಮ್ಮೆನಿಸುತ್ತದೆ ನಿಜ. ಆದರೆ ಮತ್ತೆ ಕೇಳಿದ್ದೇ ಅದು ನಿರ್ಜೀವ ಅನಿಸುತ್ತದೆ. ನೀವೆಷ್ಟೇ ತಾಂತ್ರಿಕ ಆವಿಷ್ಕಾರ ಅಂದರೂ, ಈಗಲೂ,

ಈಗಾಗಲೇ 189 ಚಿತ್ರಗೀತೆಗಳನ್ನು ಬರೆದಿರುವ, 18 ಚಿತ್ರಕ್ಕೆ ಸಂಗೀತ ಮತ್ತು ಗೀತೆ ಎರಡನ್ನೂ ನೀಡಿರುವ, 14 ಟೆಲಿ ಸೀರಿಯಲ್‌ಗಳಿಗೆ ಸಂಗೀತ ಕೊಟ್ಟಿರುವ, 'ಅಮೃತವರ್ಷಿಣಿ', 'ನಮ್ಮೂರ ಮಂದಾರ ಹೂವೆ' ಚಿತ್ರಗಳ ಗೀತೆಗಳ ಮೂಲಕ, 'ಚಂದ್ರಮುಖಿ ಪ್ರಾಣಸಖಿ' ಚಿತ್ರದ ಗೀತ-ಸಂಗೀತದ ಮೂಲಕ ಜನಮನ ಗೆದ್ದಿರುವ ಕೆ.ಕಲ್ಯಾಣ್ 27 ವರುಷದ ಎಳೆಯ. ಪ್ರೀತಿ, ಪರವಶತೆಗಳನ್ನು ತರುಣ ತಲೆಮಾರಿಗೆ ಹಿಡಿಸುವ ಹಾಗೆ ಹೊಸ 'ಪದಗುಚ್ಛ'ಗಳಲ್ಲಿ ಹೆಣೆದು ಮತ್ತೆ 'ಮಧುರ' ಸಂಗೀತದ ಅಲೆ ಎಬ್ಬಿಸಿದವರು.



ಇಂಪಾದ ಕೊಳಲು ಬೇಕೆಂದರೆ ಅದನ್ನು ಮನುಷ್ಯನೇ ನುಡಿಸಬೇಕು! ಯಾಂತ್ರಿಕವಾದಾಗ ಮೆಲೊಡಿ ತನ್ನ ಅನುರಣನವನ್ನು ಕಳೆದುಕೊಳ್ಳುತ್ತದೆ. ಪ್ರತಿ ಸಂಗೀತ ನಿರ್ದೇಶಕನಲ್ಲೂ ಒಂದು ವೈಶಿಷ್ಟ್ಯ ಇರುತ್ತದೆ. ಪ್ರತಿ ಮಾಧ್ಯಮಕ್ಕೂ. ಉದಾಹರಣೆಗೆ ಟಿವಿ ಸಂಗೀತ mild ಆಗಿ homely ಆಗಿ ಇರಬೇಕು, ಅಲ್ಲಿ ಜಾಸ್ತಿ ಗದ್ದಲ ಸಲ್ಲದು, ಅದೇ ಸಿನಿಮಾದಲ್ಲಿ ಅದು ಬೇಕಾದಷ್ಟು wild ಆಗಬಹುದು. ಏಕೆಂದರೆ ಅದಕ್ಕೆ ತಕ್ಕ ದೃಶ್ಯ ವಿಸ್ತಾರ ಅಲ್ಲಿ ಕಲ್ಪಿಸಿಕೊಡಲಾಗುತ್ತದೆ.

ಅದೃಷ್ಟದ 'ಕೋಟಾ'

ನಾನಿನ್ನೂ ವಿದ್ಯಾರ್ಥಿ. ಪ್ರತಿದಿನ ಹೊಸ ಸಂಗತಿ ಕಲಿಯುತ್ತಿದ್ದೇನೆ. ಕನ್ನಡ ಕಾವ್ಯದ ನಿರಂತರತೆಯ ಎದುರು, ಅಗಾಧತೆಯ ಎದುರು ನಾನೊಬ್ಬ ಸಣ್ಣ ಕಲೆಗಾರ ಅಷ್ಟೆ. ನಾನು ಆಯ್ದುಕೊಂಡ ಈ ಮಾಧ್ಯಮದ ಇತಿಮಿತಿಯಲ್ಲೇ ಶಕ್ತಿಮೀರಿ ಶ್ರಮಿಸುವುದು, ಅತ್ಯಂತ ಸೂಕ್ತ ಮಧುರ ಶಬ್ದಗಳನ್ನು ಸಂಯೋಜಿಸುವುದು ನನ್ನ ಕರ್ತವ್ಯ. ನಿಸರ್ಗ ಪ್ರತಿಯೊಬ್ಬರಿಗೂ ಒಂದು ಪ್ರತಿಭೆಯನ್ನು ಕೊಟ್ಟು ಅದೃಷ್ಟದ 'ಕೋಟಾ' ಮಾತ್ರ ತನ್ನ ಕೈಲಿಟ್ಟುಕೊಂಡಿರುತ್ತದೆ. ಬಹುಶಃ ನಮ್ಮ ಪರಿಶ್ರಮವನ್ನು ಅವಲಂಬಿಸಿ ಈ 'ಕೋಟಾ' ರಿಲೀಸ್ ಆಗುತ್ತದೆ!''

ಪಲ್ಲವಿ:- ನೆನಪುಗಳ ಮಾತು ಮಧುರಾ,
ಮೌನಗಳ ಹಾಡು ಮಧುರಾ,

ಕೆ. ಕಲ್ಯಾಣ್

ಪ್ರೇಕ್ಷಕನ ಅಪೇಕ್ಷೆಗಿಂತ ಒಂದೇ ಹೆಜ್ಜೆ ಮುಂದಿರಬೇಕು

ವಿ. ಮನೋಹರ್

ಶಾಸ್ತ್ರೀಯ ಸಂಗೀತದ ಕಿಂಚಿತ್ತೂ ತರಬೇತಿ, ಹಿನ್ನೆಲೆ ಇಲ್ಲದೆ, ಕೇವಲ ರೇಡಿಯೋದಲ್ಲಿ ಹಾಡುಗಳನ್ನು ಕೇಳಿಕೊಂಡು, ಬೆಳೆದುಬಂದ ವಿ. ಮನೋಹರ್ ಇಂದಿನ ಮುಂಚೂಣಿ 'ಗೀತ-ಸಂಗೀತಕಾರ'ರಲ್ಲಿ ಒಬ್ಬರು. 'ತರ್ಲೆ ನನ್ಮಗ'ದಿಂದ 'ಜನುಮದ ಜೋಡಿ'ವರೆಗೆ 'ಗೆಜ್ಜೆನಾದ'ದಿಂದ 'ಮುನ್ನುಡಿ' 'ಮತದಾನ'ಗಳವರೆಗೆ, ಜನಪದ ಮತ್ತು ಆಧುನಿಕದ ಮಿಶ್ರ ಪ್ರಯೋಗದಲ್ಲಿ ಹೊಸ ತಲೆಮಾರನ್ನು ಗೆದ್ದಿರುವ ವಿ.ಮನೋಹರ್ ವ್ಯಂಗ್ಯಚಿತ್ರಕಾರ ಮತ್ತು ಪತ್ರಕರ್ತರಾಗಿ ವೃತ್ತಿ ಆರಂಭಿಸಿದವರು.




"ನಾನು ಸಂಗೀತ ಕಲಿತದ್ದು ಯಾವುದೇ ಸಂಗೀತ ಮೇಷ್ಟ್ರ ಪಡಸಾಲೆಯಲ್ಲಿ ಅಲ್ಲ, ನಮ್ಮೂರು ವಿಟ್ಲದ ಕೃಷ್ಣಾ ಥೇಟರಿನ ಹೊರಗೆ ನಿಂತು. ಆಗ ಲೌಡ್‌ಸ್ಪೀಕರ್‌ಗಳಲ್ಲಿ ಹಾಡು ಹಾಕುತ್ತಿದ್ದರು. 'ಪಾರಸ ಮಣಿ'ಯ 'ಓ ಜಬ ಯಾದ ಆಯೇ, ಬಹುತ ಯಾದ ಆಯೇ', ಕನ್ನಡದ 'ನಾನು ಅಂಧಳಾದೆ, ನೀನು ಮೂಗನಾದೆ' ಈ ಹಾಡುಗಳನ್ನು ನೂರು ಬಾರಿ ಒಂದೇ ಮೋಡಿಯಲ್ಲಿ ಕೇಳುತ್ತಿದ್ದೆ. ಸಿನೆಮಾದೊಳಗೆ ಹಾಡಿನ ಸನ್ನಿವೇಶ ಬಂದಾಗ 'ಹಾಡು ನೋಡಿ ಬರ್ತೀನಿ' ಎಂದು ಗೇಟ್‌ಕೀಪರುಗಳಿಗೆ ಗೋಗರೆದು ಹೋಗಿ ಬರುತ್ತಿದ್ದೆ. ಪ್ರಾಜೆಕ್ಷನ್ ರೂಮಿನ ಹಿಂದೆ ಬಿದ್ದ ಕತ್ತರಿಸಿದ ಫಿಲ್ಮು ತಂದು ರಾಹುಗನ್ನಡಿಯ ಎದುರು ಹಿಡಿದು ಗೋಡೆಯ ಮೇಲೆ ಮೂಡಿಸುತ್ತಿದ್ದ ಕಾಲ ಅದು. ಚೋ-ಅವರ ತಮಿಳು ಚಿತ್ರ 'ತುಘಲಕ್' ಮತ್ತು ರಾಜಕಪೂರ್‌ನ 'ಜೋಕರ್' ನನ್ನನ್ನು ಹಿಡಿದು ಅಲ್ಲಾಡಿಸಿದವು. ಚೋ ಚಿತ್ರಕ್ಕೆ ಕಾರ್ಟೂನ್ ಸ್ಟ್ರಿಪ್ ಗುಣ ಇತ್ತು. 'ಶಂಕರ್ ಜೈಕಿಶನ್' - ಆಗಿನ ನನ್ನ ಮಾನಸ ಗುರು. ಎಂಥ ಕಳಪೆ ಚಿತ್ರಗಳಿಗೂ ಅವರು ಕೊಡುತ್ತಿದ್ದ ಅದ್ಭುತ ಟ್ಯೂನ್‌ಗಳು, ಸರಳತೆ ಮತ್ತು ಮಾಧುರ್ಯ ಎರಡನ್ನೂ ಹೊಂದಿರುತ್ತಿದ್ದವು. 'ಲವ್ ಇನ್ ಟೋಕಿಯೊ'-ದ 'ಮುಝೆ ತುಮ್ ಮಿಲ್ ಗಯೇ ಹಮ್ ದಮ್' ನೋಡಿ. ಪಲ್ಲವಿ ಮತ್ತು ಚರಣ ಎರಡೂ ಎಷ್ಟೊಂದು ಸರಳ, ಅಷ್ಟೇ ಮಧುರ. ಅವುಗಳಲ್ಲಿ ಸರ್ಕಸ್ ಇಲ್ಲ. ಇದೇ ಹೊತ್ತಿಗೆ ಪದ್ಯ ಬರೆಯುವ ಮತ್ತು ಕಾರ್ಟೂನು ಬಿಡಿಸುವ ಹುಚ್ಚು ಶುರುವಾಯಿತು. ಅದಕ್ಕೆ ಸ್ಫೂರ್ತಿ ಸಿಕ್ಕಿದ್ದು ಆಗಷ್ಟೆ ಶುರುವಾಗಿದ್ದ 'ಸುಧಾ' ವಾರಪತ್ರಿಕೆಯಲ್ಲಿ ಬರುತ್ತಿದ್ದ ದಿನಕರ ದೇಸಾಯಿಯವರ ಚುಟುಕಗಳು, ನಾಡಿಗ್, ಕೆ.ಆರ್.ಸ್ವಾಮಿ ಅವರ ಕಾರ್ಟೂನುಗಳು.

ಆಕಾ'ಶ' - ಆಕಾ'ರ'

ನಾನು ಪತ್ರಿಕಾ ಪ್ರಪಂಚ ಸೇರಿದ್ದು (ಜನವಾಣಿ), ಅಲ್ಲಿ ಸಿನಿಮಾದವರ ಸಂಪರ್ಕ ಬರುತ್ತದೆ ಎಂಬ ಏಕಮೇವ ಆಸೆಯಿಂದ. ಬ್ಯಾನರ್ ಆರ್ಟ್ ಮಾಡಲು ಹೋಗುತ್ತಿದ್ದುದೂ ಅದೇ ಕಾರಣದಿಂದ! ನನ್ನ ಮೊದಲ ಹಾಡು ಕಾಶೀನಾಥ್‌ರ 'ಅನುಭವ'ದ 'ಹೋದೆಯಾ ದೂರ ಓ ಜತೆಗಾರ, ಸೇರಲು ಬಂದಾಗ'. (1983). ನಂತರ ಮತ್ತೆ ಬರೆದದ್ದು 1987 ರಲ್ಲಿ - ಕಾಶೀನಾಥರ 'ಅನಾಮಿಕ'ಕ್ಕೆ. ಈ ಮಧ್ಯೆ ಪತ್ರಿಕೆಗಳಲ್ಲಿ ದುಡಿಯುತ್ತಿದ್ದೆ. ಇದು ನನ್ನ ವೃತ್ತಿಜೀವನದ ಮುಖ್ಯ ಘಟ್ಟ: 1989 ರಲ್ಲಿ ಹಂಸಲೇಖರ ಕೃತಿಗಳಿಗೆ ಕಲಿಯುವ ಸುಯೋಗ ಒದಗಿತು. ರಮ್ಯ ಶಬ್ದಗಳ ಬದಲಿಗೆ ಸರಳ ಶಬ್ದ ಬಳಸುವ ಕಲೆ ಅವರಿಂದ ಕಲಿತೆ. 'ಅಂಜದ

ಗಂಡು' ಚಿತ್ರಕ್ಕೆ ನಾನು ಬರೆದ 'ಆಕಾಶದಲ್ಲಿ ಗುಲಾಬಿ ರಂಗಿದೆ, ಈ ಕಣ್ಣನಲ್ಲಿ ಶರಾಬು ಗುಂಗಿದೆ' ಸಾಲಿನಲ್ಲಿ. ಆಕಾಶದ 'ಶ'ವನ್ನು ಹಂಸಲೇಖ 'ರ' ಅಂತ ತಿದ್ದಿದರು. ಅದರಿಂದ ಇಡೀ ಸಾಲಿನ ಕಾಂಪ್ಲೆಕ್ಷನ್ ಬದಲಾಗಿಹೋಯ್ತು! 'ಬೆಳ್ಳಿ ಮುಗಿಲು' ಎಂದು ಬರೆದರೆ 'ಬಿಳಿಮೋಡ'- ಅಂತ ತಿದ್ದಿ ಸರಳತೆಯ ಪಾಠ ಕಲಿಸಿದರು.



'ಗೀತ ಸಂಗೀತ'ದ ಟ್ರೆಂಡ್ ಸೆಟರ್ ಹಂಸಲೇಖ

'ಕುಬೇರನಿಗೇನಿರಬೇಕು'

ಕಥೆ ಚೆನ್ನಾಗಿದ್ದಾಗ ಬರೆಯಲು ಹುಮ್ಮಸ್ಸು ಬರುತ್ತದೆ. ಸಾಮಾನ್ಯವಾಗಿ ನಿರ್ದೇಶಕರು 'ಲವ್ ಸಾಂಗ್' ಅಂದುಬಿಡ್ತಾರೆ. ಅದರಲ್ಲಿ ವೈವಿಧ್ಯ ಹೇಗೆ ತರಬಹುದು ಅಂತ ನಾನು ನೋಡ್ತೇನೆ. ಒಂದು ಹಾಡಲ್ಲಿ tongue twister ಶಬ್ದಗಳನ್ನು ಬಳಸಿದೀನಿ. ಒಂದು ಹಾಡಲ್ಲಿ, ತಿರುವು ಮುರುವು ಉಚ್ಚರಿಸಿದರೂ ಬದಲಾಗದ 'ಕನಕ', 'ಕಿಟಕಿ', 'ಕುಬೇರನಿಗೇನಿರ ಬೇಕು'-ಇಂಥ ಪದಗಳನ್ನೇ ಬಳಸಿದ್ದೇನೆ. ವ್ಯಂಗ್ಯಚಿತ್ರಕಾರನಾದುದರಿಂದಲೋ ಏನೋ ರಾಜಕೀಯ ವಿಡಂಬನೆ (ದಂಡಪಿಂಡಗಳು...) ನನಗೆ ಇಷ್ಟ. 'ವಿಫಲ ಪ್ರಣಯ'ದ ವಿರಹವೂ! ಕಾಲೇಜು ದಿನಗಳ 'ದುರಂತ ನಾಯಕ'ತ್ವವನ್ನು ಮರುಕಳಿಸಿಕೊಂಡು ತೇಲಿಹೋಗಿಬಿಡುತ್ತೇನೆ!




ಹಾಡಿನಲ್ಲಿ ಸನ್ನಿವೇಶ

ಹಾಡಿಗಾಗಿ ಹಾಡು ಬರಬಾರದು. ಆಗ ಪ್ರೇಕ್ಷಕ ಸಿಗರೇಟ್ ಸೇದಲು ಹೋಗ್ತಾನೆ. ಹಾಡಿನಲ್ಲಿ ಘಟನೆಗಳು ಇದ್ದು ಕಥೆ ಮುಂದುವರೆಯಬೇಕು. ಆಗ ಹಾಡು ಕಥಾನಕದ ಭಾಗವಾಗುತ್ತದೆ. ಈ ಬಗೆಯ ಪ್ರಯೋಗಗಳನ್ನು ಹಂಸಲೇಖ ಶುರುಮಾಡಿದರು. ಬಹುಶಃ ಕನ್ನಡ ಹಾಡುಗಳ ಪರಂಪರೆಯಲ್ಲೇ ಇದೊಂದು ಮುಖ್ಯ ಬದಲಾವಣೆ. ಅಂದರೆ ಈಗಿನ ಮ್ಯೂಸಿಕ್ ವಿಡಿಯೋದಲ್ಲಿ ಒಂದು, ಎರಡು ನಿಮಿಷದ ಹಾಡಲ್ಲಿ ಒಂದು ಕಥೆಯನ್ನೇ ಹೇಳಿಬಿಡ್ತಾರಲ್ಲ-ಹಾಗೆ! 'ಜನುಮದ ಜೋಡಿ'ಯಲ್ಲಿ ಬರಗೂರು ರಾಮಚಂದ್ರಪ್ಪ ಸಂಭಾಷಣೆಯಲ್ಲಿ ಬರೆದ ಒಂದು ಸುಂದರ ಸನ್ನಿವೇಶವನ್ನು ನಾನು ಹಾಡನ್ನಾಗಿ ಪರಿವರ್ತಿಸಿದೆ. (ಮಣಿ ಮಣಿ ಮಣಿ....)

'ಮೌನ' ಮುಖ್ಯ

ಒಂದು ಸನ್ನಿವೇಶಕ್ಕೆ ಸಂಗೀತವೇ ಹಿನ್ನೆಲೆಯಾಗಿರಬೇಕು ಎಂದಿಲ್ಲ. ಒಂದು ಗಾಳಿಯ 'ಸೂ' ಸದ್ದು, ದೂರದ ರೈಲಿನ ಸದ್ದು-ಇವೆಲ್ಲ ಒಳ್ಳೆ ವಾತಾವರಣವನ್ನು ನಿರ್ಮಿಸುತ್ತದೆ. ಕೆಲ ಪ್ರಾಯೋಗಿಕ ನಿರ್ದೇಶಕರು ಸಂಗೀತ, ದೃಶ್ಯವನ್ನು underline ಮಾಡಬಾರದು ಎಂದೆಲ್ಲ ಹೇಳುವುದಿದೆ. ಅವೆಲ್ಲ ಜಾಣ ಮಾತುಗಳು. ಸಂಗೀತ ಮಾಡೋದೇ ಅದನ್ನು. ಆದರೆ pause ಅಥವ ಮೌನವನ್ನು ಸಮರ್ಪಕವಾಗಿ ಬಳಸಿದಾಗ ಮಾತ್ರ-ಸಂಗೀತ ಪ್ರಭಾವಶಾಲಿ ಯಾಗುತ್ತದೆ. ದೃಶ್ಯಗಳ ಹಿನ್ನೆಲೆ ಸಂಗೀತ ಹಾಡುಗಳಷ್ಟೇ ಮುಖ್ಯ. ಅದರಲ್ಲಿಯ ಕ್ಲೀಷೆಗಳನ್ನು ಮುರಿದು ಮುಂದೆ ಹೋಗಬೇಕು. ಮದುವೆ ಸಂಬಂಧದ ರಾದ್ಧಾಂತದಲ್ಲಿ ಶಹನಾಯಿ ಬರಬೇಕೆನ್ನುವುದು ಕ್ಲೀಷೆ, ಕ್ಲೈಮ್ಯಾಕ್ಸ್‌ನಲ್ಲಿ ಫುಲ್ ಆರ್ಕೆಸ್ಟ್ರಾ ಇರಬೇಕೆನ್ನುವುದೂ ಕ್ಲೀಷೆ. ಹೊಸ ದನಿಗಳನ್ನು ಜನ ಸ್ವೀಕರಿಸುವುದಿಲ್ಲ ಎನ್ನುವುದೂ ಕ್ಲೀಷೆ! ಇಳಾ ಅರುಣ್, ಬಿ.ಜಯಶ್ರೀ ಇಂಥವರ ದನಿಯನ್ನು ಬಲು ಪ್ರೀತಿಯಿಂದ ಜನ ಸ್ವೀಕರಿಸಿದ್ದಾರೆ. ಎಸ್.ಪಿ. ಇಲ್ಲದಿದ್ದರೆ ನಡೆಯೋದೇ ಇಲ್ಲ ಎಂಬಂಥ ನಂಬಿಕೆ ಇದ್ದ ಕಾಲದಲ್ಲಿ ರೆಹಮಾನ್ ಹೊಸ ಹೊಸ ದನಿಗಳನ್ನು ಬಳಸಿ ಯಶಸ್ವಿಯಾಗಿದ್ದಾರೆ.


ಜನಕ್ಕೆ ಖಂಡಿತ ಹೊಸತು ಬೇಕು. ಹಾಗಂತ ನಾವು ಅವರ ಅಪೇಕ್ಷೆಗಿಂತ ಗಾವುದ ಮುಂದಿರಬಾರದು, ಒಂದೇ ಹೆಜ್ಜೆ ಮುಂದಿರಬೇಕು ಅಷ್ಟೇ!''



ನಾನು homework ಮಾಡಲ್ಲ

ವೇಣು

ಸಾಮಾನ್ಯವಾಗಿ ಚಲನಚಿತ್ರದ ಛಾಯಾಗ್ರಾಹಕನೊಬ್ಬ ತನ್ನ ವೃತ್ತಿ ಜೀವನವನ್ನು ಆರಂಭಿಸುವುದೇ ಅಸಿಸ್ಟೆಂಟ್ ಕ್ಯಾಮರಾಮನ್ ಆಗಿ. ಆದರೆ ಈ ಥರ ಯಾವುದೇ ನುರಿತವರ ಕೈಕೆಳಗೆ ಕೆಲಸ ಮಾಡದೇ - ದಿಢೀರ್ ಸ್ವತಂತ್ರ ಕ್ಯಾಮರಾಮನ್ ಆಗಿ ರಂಗ ಪ್ರವೇಶ ಮಾಡಿ 'A', 'ಪ್ರತ್ಯರ್ಥ' ಮತ್ತು 'ಸ್ಪರ್ಶ'ದ ಅಪ್ರತಿಮ ಕೆಲಸದ ಮೂಲಕ ವ್ಯಾಪಕ ಮನ್ನಣೆ ಪಡೆದ ಅಪರೂಪದ ಛಾಯಾಗ್ರಾಹಕ ವೇಣು ಮೂಲತಃ ಕಲೆಗಾರ.



''ನನ್ನೂರು ದೊಡ್ಡಬಳ್ಳಾಪುರದ ಸಮೀಪದ ಹಣಬೆ. ಹೈಸ್ಕೂಲ್ ಅಲ್ಲೇ ಮುಗಿಸಿ ನಾನು ಬೆಂಗಳೂರಿಗೆ ಬಂದು ಕೆನ್ ಕಲಾ ಶಾಲೆಯಲ್ಲಿ ಡ್ರಾಯಿಂಗ್, ಪೇಂಟಿಂಗ್ ಕೋರ್ಸಿಗೆ ಸೇರಿಕೊಂಡೆ. ಚಿತ್ರಗಾರಿಕೆಯಲ್ಲಿ ತುಂಬಾ ಆಸಕ್ತಿ ಇತ್ತು. ಜತೆ ಜತೆಗೇ ಬಿ.ಎ. ಕೂಡ ಮುಗಿಸಿದೆ. ನಂತರ ಪ್ರೆಸ್ ಛಾಯಾಗ್ರಾಹಕನಾಗಿ 'ಸಂಜೆವಾಣಿ'ಗೆ ಕೆಲಸ ಮಾಡಿದೆ. 'ಅರಗಿಣಿ', 'ಚಿತ್ರತಾರಾ' - ಪತ್ರಿಕೆಗಳಿಗೆ ಕಾರ್ಟೂನು, ಡ್ರಾಯಿಂಗ್ ಮಾಡ್ತಾ ಇದ್ದೆ. ಇದು ಸುಮಾರು 1985-1990 ರ ಕಾಲ. ನಂತರ 'ಉತ್ಕರ್ಷ'ದಲ್ಲಿ ಸ್ಟಿಲ್ ಫೋಟೋಗ್ರಾಫರ್ ಕೆಲಸ ಮಾಡಿದೆ. ಅದ್ಹೇಗೆ ಉಪೇಂದ್ರ ಅವರಿಗೆ ನನ್ನ ಮೇಲೆ ವಿಶ್ವಾಸ ಬಂತೋ.... 'A' ಚಿತ್ರಕ್ಕೆ ನನ್ನನ್ನು ಕ್ಯಾಮರಾಮನ್ ಆಗಿ ನೇಮಿಸಿಬಿಟ್ಟರು. ಅದರ ನಂತರ ಸುನೀಲ್‌ಕುಮಾರ್ ದೇಸಾಯಿ ಅವರ 'ಪ್ರತ್ಯರ್ಥ', 'ಸ್ಪರ್ಶ' - ಮಾಡಿದೆ. ಈಗ ಪ್ರಭುದೇವ್, ಉಪೇಂದ್ರ ಜೋಡಿಯ ಹೊಸ ಚಿತ್ರದ ಕೆಲಸ ಶುರುವಾಗಿದೆ.



ಮೂಲ ಸ್ಫೂರ್ತಿ

[illegible] ಛಾಯಾಗ್ರಹಣದ ಮೋಹ [illegible] 'ಪಲ್ಲವಿ ಅನುಪಲ್ಲವಿ' ಚಿತ್ರದ ಕಾಲದಿಂದ. ಅವರ ಛಾಯಾಗ್ರಹಣ ನೋಡಿ. ನಾನು [illegible] ಛಾಯಾಗ್ರಾಹಕ [illegible]. ನಮ್ಮ ಭೌಗೋಳಿಕ [illegible], ಬಣ್ಣ, ಬೆಳಕು, [illegible] ಅವರು ಸಾಧಿಸಿದ [illegible]. ನಾವು ವಿದೇಶಿ ಚಿತ್ರಗಳನ್ನು ನೋಡಿ 'ವಾಹ್' [illegible]. ಅಲ್ಲಿಯ ಸಮುದ್ರದ ನೀಲಿ ಬಣ್ಣ, ಅಲ್ಲಿಯ ಮರಗಳ [illegible], [illegible] ಇವೆಲ್ಲ ಅದಕ್ಕೆ ಕಾರಣ. ಈಗ ನಮ್ಮ [illegible] ವಿದೇಶಗಳಲ್ಲಿ ಚಿತ್ರೀಕರಣಗೊಳ್ಳುತ್ತಿವೆಯಲ್ಲ! ಆ ದೃಶ್ಯಗಳನ್ನು ನೋಡಿ. ನಿಮಗೆ ಬೇರೆಯೇ ಲುಕ್ ಅಲ್ಲಿ ಸಿಗುತ್ತದೆ. ಕೊನೆಗೂ ಒಂದು ಪ್ರದೇಶದ ಗಾಳಿ, ಬೆಳಕು, ಹವಾಮಾನ ಚಿತ್ರದ 'ನೋಟ'ಕ್ಕೆ ಮುಖ್ಯ ಕಾರಣವಾಗುತ್ತದೆ. ಕರಾವಳಿಯಲ್ಲಿ [illegible].

ಎಲ್ಲದೂ 'ಸ್ಪಾಟ್'ಲ್ಲಿ!

[illegible] visual harmony [illegible].

ನಾನು homework [illegible] ಬೆಳಕು, ಪರಿಸರ, ವಸ್ತು, ಪಾತ್ರ ಇರೋದೇ [illegible]! [illegible] impulsive ಆಗಿ ಒಂದು shotಗೆ [illegible] ನನಗೆ ಹೆಚ್ಚು ಚಾಲೆಂಜಿಂಗ್.

ಹೀರೋಯಿನ್ ಹೇಗೆ ಚೆಂದ?

[illegible] ಲುಕ್ ಬರುತ್ತೆ ಇತ್ಯಾದಿ. ಅದೆಲ್ಲ ಸುಳ್ಳು. ಚಿತ್ರದ ಲುಕ್ ಬರೋದು ಸರಿಯಾದ ಛಾಯಾಗ್ರಹಣದಿಂದ. ನೀವು ಹೇಗೆ ಲೈಟ್ ಅಪ್ ಮಾಡ್ತೀರೋ ಹಾಗೆ ದೃಶ್ಯ ಬರುತ್ತೆ. 'ಕ್ಯಾಮೆರಾ ಸುಳ್ಳು ಹೇಳೋಲ್ಲ'-ಎಂಬ ಗಾದೆ ಇದೆ. ಅದು ಸತ್ಯ. ಅದೇ ರೀತಿ ಹೀರೋ, ಹೀರೋಯಿನ್‌ಗಳನ್ನು ಕ್ಯಾಮೆರಾ ಮೂಲಕ ಚೆಂದ, ಕುರೂಪ ಮಾಡಬಹುದು ಎಂಬ ತಪ್ಪು ನಂಬಿಕೆ ಇದೆ. ಇಷ್ಟಕ್ಕೂ 'ಚಂದ' ಎಂದರೆ ಏನು? ಒಂದು ಪಾತ್ರದ ವರ್ತನೆ, ಪಾತ್ರದ ಸಂದರ್ಭ ಇವುಗಳನ್ನವಲಂಬಿಸಿ ಅವೆಲ್ಲ. ಚೆನ್ನಾಗಿದ್ದವರು - ಚೆನ್ನಾಗಿಯೇ ಕಾಣುತ್ತಾರೆ.

'ಹಲ್‌ಸೆಟ್ಟು'-ಮತ್ತು ಗ್ರಾಫಿಕ್ಸ್

ಈಗ ಗ್ರಾಫಿಕ್ಸು, ಅದು ಇದು ಎಲ್ಲ ಬಂದಿದೆ ನಿಜ. ಆದರೆ ಅದನ್ನು ನಾವೇ ಹೇಳಿಕೊಳ್ಳೋದು ಹಾಸ್ಯಾಸ್ಪದ. ನಮ್ಮ ಕಷ್ಟ ಕಡಿಮೆ ಮಾಡಿಕೊಳ್ಳಲು ಹೆಚ್ಚಿನ ಪರಿಣಾಮವನ್ನು ಸಾಧಿಸಲು,-ಗ್ರಾಫಿಕ್ಸ್‌ನ್ನು ಬಳಸೋಣ.. ಆದರೆ ಅದನ್ನೇ ಒಂದು ಆಕರ್ಷಣೆ ಎಂದು ಪ್ರಚಾರ ಮಾಡುವುದು ಸಿಲ್ಲಿ. 'ಅದು ನಾನು ಹಲ್ಲಿನ ಸೆಟ್ಟು ಹಾಕ್ಕೊಂಡಿದೀನಿ'-ಎಂದು ನಾನೇ ಹೇಳುತ್ತ ಹೋದಂತೆ. ಚಿತ್ರ ಅಥವಾ ದೃಶ್ಯ ಒಂದು ಪರಿಣಾಮ ಕೊಡೋದು ಮುಖ್ಯ. ಎನಾಕೊಂಡಾ ಆಗಲಿ ಡೈನಾಸರ್ ಆಗಲಿ... ನಮಗವು ಜೀವಂತ ಪಾತ್ರಗಳಾಗಿ ತೋರುತ್ತವೆ. ಅದು ಮುಖ್ಯ.

ಕೇವಲ ಛಾಯಾಗ್ರಹಣದಿಂದ ಒಂದು ಚಿತ್ರ ಯಶ ಪಡೆಯೋಲ್ಲ. ಛಾಯಾಗ್ರಹಣ ಯಾವಾಗಲೂ ಚಿತ್ರಕಥೆಯನ್ನು overtake ಮಾಡಬಾರದು. ಛಾಯಾಗ್ರಾಹಕನಿಗೆ ಕೊನೆಗೂ ನಾನು ಬೇರೊಬ್ಬನ ಬಟ್ಟೆ ಹೊಲೀತಿರೋ ಟೈಲರ್-ಎನ್ನುವ ಎಚ್ಚರ ಬೇಕು. ನಾನು shoot ಮಾಡಿದ ಪ್ರತಿ ಅಡಿಯಲ್ಲೂ ಪರಿಶ್ರಮ, ಜೀವರು ಇರುತ್ತೆ. ಹಾಗಂತ ಅದನ್ನೆಲ್ಲ ಚಿತ್ರದಲ್ಲಿ ಬಳಸಿಕೊಳ್ಳೋಕೆ ಆಗಲ್ಲ. ನಾವು ಶೂಟ್ ಮಾಡೋದು 50000 ದಿಂದ 1,00,000 ಅಡಿ. ಕೊನೆಗೂ ಚಿತ್ರದಲ್ಲಿ ಉಳಿಯೋದು ಕೇವಲ 13,000 ಅಡಿ. ಈ ತಿಳುವಳಿಕೆ ಇರಬೇಕು.

ನನ್ನೊಳಗಿನ ಕಲೆಗಾರ

ಹೌದು, ನನ್ನೊಳಗಿನ ಚಿತ್ರಕಲಾವಿದ ಖಂಡಿತ ನನ್ನ ಫ್ರೇಂ ಸಂಯೋಜನೆ ಮತ್ತು ಬಣ್ಣಗಳ ಆಯ್ಕೆಯಲ್ಲಿ ಪಾತ್ರವಹಿಸುತ್ತಾನೆ. ನನ್ನದೇ ಒಂದು ಶೈಲಿ ಎಂಬ ಭ್ರಮೆ ನನಗಿಲ್ಲ. ಕೊನೆಗೂ ಪಾತ್ರ, ಸಂದರ್ಭ, ಕಥೆ, ನಿರ್ದೇಶಕನ ಅಪೇಕ್ಷೆಯಂತೆ ನನ್ನ ಕೆಲಸ. ಶೂಟ್ ಮಾಡಿದ್ದು- ಲ್ಯಾಬಲ್ಲಿ ಪ್ರೊಸೆಸ್ ಆಗೋತನಕ ಒಂದು ಬಗೆಯ ಭಯ ಇದ್ದೇ ಇರುತ್ತೆ. ಆದ್ರೆ ಇದು positive ಭಯ. ಅಂದರೆ ಪರೀಕ್ಷೆಯಲ್ಲಿ ಚೆನ್ನಾಗಿ ಬರೆದವನಿಗೂ ರಿಸಲ್ಟ್ ಬಗ್ಗೆ ಒಂದು ಆತಂಕ ಇರುತ್ತಲ್ಲ, ಹಾಗೆ. ಹೊರತು.. ಖಾಲಿ ಪೇಪರು ಕೊಟ್ಟವನ ಭಯ ಅಲ್ಲ!''

ಎಲ್ಲ ಆಯಾಮಗಳ ಕಲ್ಪನೆ ಬೇಕು

ಎಸ್.ರಾಮಚಂದ್ರ



ಕಳೆದ ಕಾಲು ಶತಮಾನ ದಲ್ಲಿ ಯಾವುದೇ ಆಮಿಷ ಗಳಿಗೆ ಬಲಿಯಾಗದೆ ಕನ್ನಡ ಹೊಸ ಅಲೆಯ ಚಿತ್ರಗಳ ಮುಖ್ಯ ಸ್ಥೈರ್ಯವಾಗಿ, ಕನ್ನಡದ ಸ್ವೋಪಜ್ಞ ಛಾಯಾಗ್ರಾಹಕರಾಗಿ ಬೆಳೆದು ನಿಂತ ಎಸ್.ರಾಮಚಂದ್ರ, 'ಘಟಶ್ರಾದ್ಧ'ದಿಂದ- 'ಕಾನೂರು' ವರೆಗೆ ವಿವಿಧ ಬಗೆಯ ಚಿತ್ರಗಳ ಛಾಯಾ ಗ್ರಹಣ ಮಾಡಿದ್ದಾರೆ.

"ನಾನು ಪೂನಾ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಿಂದ ಹೊರ ಬಂದು 'ಸಂಕಲ್ಪ' ಮಾಡಿದಾಗ, ಎಪ್ಪತ್ತರಲ್ಲಿ ಕನ್ನಡ ಚಲನಚಿತ್ರ ಹೊಸ ಸಂವೇದನೆಗಾಗಿ ಕಾಯುತ್ತಿತ್ತು. ಗಿರೀಶ್, ಪ್ರಸಾದ್, ಜಿ.ವಿ.ಅಯ್ಯರ್, ನಾಗಾಭರಣ, ರಂಗ, ಲಂಕೇಶ್, ಕಂಬಾರ - ಹೀಗೆ ಒಂದು ರೀತಿ ಹೊಸ ಸಂವೇದನೆಯ ತಂಡವೇ ತಯಾರಿತ್ತು. ಅವರಲ್ಲಿ, ರಂಗಭೂಮಿ, ಸಾಹಿತ್ಯದಂಥ ಕ್ಷೇತ್ರಗಳಿಂದ ಬಂದ ಉತ್ಸಾಹಿಗಳಿಗೆ ಸಿನಿಮಾದ ವ್ಯಾಕರಣಗಳು ಗೊತ್ತಿರಲಿಲ್ಲ. ಆದರೆ ಸಿನಿಮಾಕ್ಕೆ ಅವರ ಸಂವೇದನೆಯ ಅಗತ್ಯ ಇತ್ತು. ಹೀಗಾಗಿ ಅವರೆಲ್ಲರ ಚಿತ್ರಗಳಿಗೆ ಛಾಯಾಗ್ರಹಣ ಮಾಡುವಾಗ ನನ್ನ ಮೇಲೆ ವಿಶೇಷ ಹೊಣೆಗಾರಿಕೆ ಇತ್ತು. ಸಾಹಿತ್ಯ ಮತ್ತು ಸಿನಿಮಾಗಳ ನಡುವಿನ 'ದೃಶ್ಯಭೇದ'ದ ಮನವರಿಕೆಯನ್ನು ಅವರಿಗೆ ಕಲಿಸುತ್ತಲೇ ನಾನು ಕೆಲಸ ಮಾಡಬೇಕಾಗಿತ್ತು. ಒಟ್ಟಾರೆ ಅದೊಂದು ರೋಚಕ ಕಾಲ. ಹಣದ ಬಗ್ಗೆ ಯೋಚನೆ ಮಾಡದೆ, ಎಲ್ಲರೂ ಮೈ ಮರೆತು ದುಡಿದ ಕಾಲ.

ಕಥೆ, 'ಚಿತ್ರಕಥೆ'ಯಾಗುವುದು

'ಚಿತ್ರಕಥೆ'ಯ ಬರವಣಿಗೆಯ ಹಂತದಿಂದಲೇ ನಾನು ಪಾಲ್ಗೊಳ್ಳಬಯಸುತ್ತೇನೆ. ಏಕೆಂದರೆ ದೃಶ್ಯಕ್ಕೆ ಬೇಕಾದ ಒಂದು ಸ್ಪಷ್ಟತೆಯನ್ನು ಚಿತ್ರಕಥೆಯಲ್ಲೇ ಖಚಿತಗೊಳಿಸಬಹುದು. 'ಇಬ್ಬರು ಮಾತಾಡುತ್ತಿದ್ದರು' - ಎಂದು ನಿರ್ದೇಶಕ ಹೇಳುತ್ತಾನೆ. ಅವನಿಗೆ ಅವರ ಮಾತು ಮುಖ್ಯ. ಆದರೆ ನನಗೆ ಅವರೆಲ್ಲಿ ಕೂತಿದ್ದಾರೆ? ಅಥವಾ ನಿಂತಿದ್ದಾರೆ? ಹೇಗೆ? ಯಾವ ಬಟ್ಟೆ ಹಾಕಿದ್ದಾರೆ. ನೆರಳಲ್ಲೊ, ಬೆಳಕಲ್ಲೊ, ಹಗಲಲ್ಲೊ, ರಾತ್ರಿಯಲ್ಲೊ, ಅವರ ಮನಸ್ಥಿತಿ ಹೇಗಿದೆ - ಇವೆಲ್ಲ ಪ್ರಶ್ನೆಗಳು ಕಾಡತೊಡಗುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಹೋದಂತೆ 'ಕಥೆ' -'ಚಿತ್ರಕಥೆ'ಯಾಗುತ್ತದೆ.

ಈ ಘಟ್ಟದಲ್ಲಿ ನಿರ್ದೇಶಕರ ಆಶಯಕ್ಕೆ ತಕ್ಕಂತೆ ವರ್ಣಛಾಯೆಗಳನ್ನು ನಿರ್ಧರಿಸುತ್ತೇವೆ. 'ಮನೆ' ಚಿತ್ರದಲ್ಲಿ ಉದ್ದಕ್ಕೂ ಹಳದಿ ಬಣ್ಣವನ್ನು, 'ಕ್ರೌರ್ಯ'ದಲ್ಲಿ 'ಝಳ'ಕ್ಕಾಗಿ visual burnನ್ನು ಬಳಸಿದ್ದರ ಹಿಂದೆ ಇಂಥ ಕಾರಣಗಳಿವೆ. ಕಾರ್ನಾಡ್, ಕಾಸರವಳ್ಳಿಯಂಥ ನಿರ್ದೇಶಕರ ಜತೆಗಿನ ಈ ಬಗೆಯ ಸಂವಾದ ತುಂಬ ಫಲಪ್ರದವಾಗಿರುತ್ತದೆ. ನಿರ್ದೇಶಕರಿಗೆ ಈ ಬಗೆಯ 'ಕೊಡುಕೊಳು'ದಲ್ಲಿ ಅಷ್ಟು ಆಸಕ್ತಿ ಇರದಿದ್ದರೆ-ನಾನು ಮೆಲ್ಲಗೆ ಹಿಂಜರಿದು ನನ್ನ camera ಕೆಲಸಕ್ಕಷ್ಟೆ ನನ್ನನ್ನು ಅಳವಡಿಸಿಕೊಳ್ಳುತ್ತೇನೆ.

ಮುಂದುವರೆದವನು ವೀಕ್ಷಕ

ಸತ್ಯಜಿತ್ ರೇ ಅವರ ಕ್ಯಾಮೆರಾಮನ್ ಆಗಿದ್ದ ಸುಬ್ರತೋ ಮಿತ್ರಾ-'ವಾಸ್ತವಿಕ ಲೈಟಿಂಗ್'ನ ಒಂದು ದಟ್ಟ ಅಲೆಯನ್ನು ಶುರುಮಾಡಿದರು. ಇವೆಲ್ಲ ಛಾಯಾಗ್ರಾಹಕನು ಆಯುವ ಖಾಸಗಿ ಶೈಲಿಗಳು. ಚಿತ್ರ ವೀಕ್ಷಕರಿಗೆ ಲೈಟಿಂಗ್ ವಾಸ್ತವಿಕವೋ, ಅವಾಸ್ತವಿಕವೋ-ಇದರ ಗೊಡವೆ ಇರೋದಿಲ್ಲ. ಅವನಿಗೆ ದೃಶ್ಯದ ಮೂಡ್ ಮುಖ್ಯ. ನಮ್ಮ ವೀಕ್ಷಕರ ದೃಶ್ಯಾಭಿರುಚಿ ಖಂಡಿತ ವಿಕಾಸಗೊಂಡಿದೆ. ಎಲ್ಲರೂ ತಾಂತ್ರಿಕ ಆವಿಷ್ಕಾರ, ಅಂತೆಲ್ಲ ಹೇಳ್ತಾರಲ್ಲ. ನಿಜಕ್ಕೂ ಅದು ವೀಕ್ಷಕನ ಸಂವೇದನೆಯಲ್ಲಾದ ಆವಿಷ್ಕಾರ. ಒಳ್ಳೆ ಕ್ಯಾಮೆರಾಗಳು, ದೀಪಗಳು ಬಂದಿವೆ ನಿಜ. ಆದರೆ ನಮ್ಮ visuals ಬದಲಾಗಿದ್ದು-ವೀಕ್ಷಕನ ಅಭಿರುಚಿಯಿಂದ. ಜಾಹೀರಾತು, MTV, 'V' ಇವುಗಳ ಕ್ಯಾಮೆರಾ ಶೈಲಿ-ಖಂಡಿತ ಸಿನಿಮಾದ ಶೈಲಿಯನ್ನೂ ಪ್ರಭಾವಿಸುತ್ತಿದೆ. ಹೊಸ ಹೊಸ ಕೋನಗಳನ್ನು ಚಲನೆಗಳನ್ನು ವೀಕ್ಷಕ ಇಷ್ಟಪಡುತ್ತಾನೆ.

Source Light ನನಗೆ ಇಷ್ಟ


ಒಂದು ಸನ್ನಿವೇಶದಲ್ಲಿರುವ ದೀಪಗಳನ್ನೇ ಬೆಳಕಿನ ಆಕರಗಳನ್ನಾಗಿ ಬಳಸುವ source light ದೃಶ್ಯಗಳು ನನಗೆ ಇಷ್ಟ. ಬರ್ಗ್‌ಮನ್ ಚಿತ್ರಗಳ ಛಾಯಾಗ್ರಾಹಕ ಸ್ವೆನ್ ನೆಕ್ವಿಸ್ಟ್ 'ಅವಾಸ್ತವಿಕ ಬೆಳಕಿನ' ಶೈಲಿಯಲ್ಲೇ ಸಾಧಿಸುವ ಪರಿಣಾಮ ನನಗೆ ಇಷ್ಟ. ಆದರೆ ಇದೆಲ್ಲ ನಿರ್ದೇಶಕ, ನಿರ್ಮಾಪಕರ ಅಭಿರುಚಿ ಆಶಯಗಳನ್ನು ಅವಲಂಬಿಸಿದ ಸಂಗತಿಗಳು. ಕೆಲವರು ಹಾರೋದೇ ಇಲ್ಲ. ಕೆಲವರು ಹಾರಿ ಸಾಯ್ತಾರೆ. ಕೆಲವರು ಹಾರಿ ಬಚಾವಾಗ್ತಾರೆ. ನನ್ನದು ಮೂರನೆಯ ಬಗೆ. ನನ್ನ ಪ್ರತಿ ಚಿತ್ರದಲ್ಲೂ ಸೂಕ್ಷ್ಮವಾಗಿ ಏನಾದರೂ ಹೊಸತನ್ನು ಸಾಧಿಸಲು ನಾನು ಯತ್ನಿಸುತ್ತಲೇ ಇರುತ್ತೇನೆ. ಕೊನೆಗೂ ಇದೊಂದು ವೃತ್ತಿ. ಛಾಯಾಗ್ರಾಹಕನಾಗಿ ನಾನು ಜೇಮ್ಸ್‌ಬಾಂಡ್ ಬಗೆಯ ದೃಶ್ಯ ಮತ್ತು ಪಥೇರ್ ಪಾಂಚಾಲಿ ಥರದ ದೃಶ್ಯ ಎರಡನ್ನೂ ಗಂಭೀರವಾಗೇ ತಗೋತೇನೆ. ಈಗ ಕವಿತಾ ಲಂಕೇಶ್‌ರ ಹೊಸ ಚಿತ್ರಕ್ಕೆ ಮರಗಳೊಂದೂ ಇಲ್ಲದ ಹೊರಾಂಗಣವನ್ನು ಯೋಜಿಸುತ್ತಿದ್ದೇನೆ. ಕಣ್ಣಿಗೆ ರಿಲೀಫ್ ಇಲ್ಲದ ಬಯಲು ಸೀಮೆಯ ಛಾಯಾಗ್ರಹಣ ಒಂದು ಬಗೆಯ ಚ್ಯಾಲೆಂಜು.



ಹತ್ತಿಕೊಳ್ಳದ ದೀಪಗಳು!

ನಾನು 'ಲೈಟಿಂಗ್' ಮಾಡುವಾಗ ಯಾವ ಲೈಟನ್ನೂ ಹೊತ್ತಿಸಿಕೊಳ್ಳುವುದಿಲ್ಲ. ನನ್ನ ಮನಸ್ಸಿನಲ್ಲಿ ದೃಶ್ಯ ಮೂಡಿದಂತೆ - 'ಇದನ್ನು ಇಲ್ಲಿಡಿ' 'ಅದನ್ನು ಅಲ್ಲಿಡಿ', 'ಇದಕ್ಕೆ ಸ್ವಲ್ಪ ಪೇಪರ್ ಕೊಡಿ' - ಹೀಗೆ ಎಲ್ಲ ದೀಪಗಳನ್ನೂ ನಿಖರವಾದ ಜಾಗದಲ್ಲಿ ಇಡುತ್ತ ಹೋಗುತ್ತೇನೆ. ನನ್ನ ಮನಸ್ಸಿನಲ್ಲಿ ಅವುಗಳ ಬೆಳಕಿನ ಸ್ಪಷ್ಟ ಚಿತ್ರ ಇರುತ್ತದೆ. ಎಲ್ಲ ಸರಿಯಾಗಿ ಇಟ್ಟಾದ ಮೇಲೇ ಎಲ್ಲವನ್ನೂ ಒಟ್ಟಿಗೇ ಹೊತ್ತಿಸುತ್ತೇನೆ. ಒಂದು ದಿನ ಜತೆಗಿದ್ದರೆ ವ್ಯಕ್ತಿಯ ಚಹರೆ, ಭಂಗಿ, ಲಕ್ಷಣಗಳನ್ನು ಹಿಡಿಯುವ ನಮಗೆ, ದೀಪವೊಂದರ ಗುಣಲಕ್ಷಣ ತಿಳಿಯುವುದು ಕಷ್ಟವೆ?


ಮಾಡಬೇಕಿರೋ ಒಂದು ಕೆಲಸವನ್ನು ಅದರ ಎಲ್ಲಾ ಆಯಾಮಗಳ ಹಿನ್ನೆಲೆಯಲ್ಲಿಟ್ಟು ನೋಡುವುದು ನನ್ನ ಹವ್ಯಾಸ. ಇದರಿಂದ ನನ್ನ ಕಲೆ ಮತ್ತು ಮನಸ್ಸು ಎರಡಕ್ಕೂ ಒಳ್ಳೆಯದಾಗಿದೆ.''



ಜಯಾ ಎಸ್. ಕುಮಟಾಕರ್

ಆಕಾಶಕ್ಕೊಂದು ಏಣಿ





ಬಾವಿ ತೋಡುವ ಕಾರ್ಯ ನಡೆದೇ ಇತ್ತು. ಸಂಜೆಯ ಚಹಾಕ್ಕೆಂದು ಕೂಲಿಯವರು ಬಂದಾಗ ಯಾವುದೇ ಆಸಕ್ತಿಯಿಟ್ಟುಕೊಳ್ಳದೇ ಕೇಳಿದೆ 'ನೀರು ಸಿಗ್ಬೋದಾ?'

ಬರೀ ಅಗೆದಿದ್ದೇ ಬಂತಮ್ಮಾ, ಒರತೆಯಿಲ್ಲದ ಬರಡು ಭೂಮಿಯಲ್ಲಿ ಎಷ್ಟು ಅಗೆದ್ರೇನುಬಂತು? ಕೂಲಿಯವ ನನ್ನತ್ತ ಮರುಕದಿಂದ ದಿಟ್ಟಿಸುತ್ತಲೆಂದ. ಚಹಾ ಮುಗಿಸಿ ಮತ್ತೆ ಅವರು ಕೆಲಸಕ್ಕೆ ನಡೆದರು.

ಹಿತ್ತಲಲ್ಲಿ ಬಾವಿ ತೋಡುತ್ತಿರುವಲ್ಲಿ ಬಂದು ಕೆಲ ಹೊತ್ತು ನಿಂತೆ. ಮಣ್ಣು ರಾಶಿರಾಶಿಯಾಗಿ ಬಿದ್ದಿತ್ತು. ಸಾಕಷ್ಟು ಆಳ ಅಗೆದಾಗಿತ್ತು. ನೀರಿನ ಸುಳಿವಿಲ್ಲ.

ಮನಸ್ಸೇಕೋ ತೀವ್ರ ನಿರಾಸೆಯಿಂದ ನರಳಿತು. ಈಚೆ ಹಾದು ಬಾಗಿಲಿಗೆ ಬರುವಾಗ ಸ್ವಲ್ಪ ದೂರದಲ್ಲಿ ಮೃದುಲಾ ನಡೆದು ಬರುತ್ತಿದ್ದದ್ದು ಕಾಣಿಸಿತು. ಬಿಸಿಲಿಗೆ ಮುಖ ಪೂರ್ತಿ ಬಾಡಿಹೋಗಿತ್ತು. ಹೊದ್ದ ಸೆರಗಿನಡಿ ಸ್ನಾನ ಮಾಡಿದವಳಂತೆ ಬೆವೆತಿದ್ದಳು.

'ರೇಷನ್ ಸಕ್ಕರೆ ತರಲು ಇವತ್ತು ಕೊನೆ ದಿವಸ ಅಲ್ಲ? ಅಬ್ಬಾ, ಎಷ್ಟೊಂದು ಜನರು!' ಮೃದುಲಾ ಸಕ್ಕರೆ ಚೀಲ ಹಿಡಿದು ಒಳ ಹೊಕ್ಕಳು. ಎಂಥ ಚುರುಕಿನ ಹುಡುಗಿ, ಹೇಗಾದಳು!

ಈ ಬಾರಿ ಅಸಹನೆಯೊಂದಿಗೆ ಅರಿಯದ ರೋಷವೂ ಸೇರಿ ಸೀದಾ ಒಳ ಕೋಣೆಯಲ್ಲಿ ಮಲಗಿದ್ದ ಅಮ್ಮನೆದುರು ನಿಂತು ಗಟ್ಟಿಯಾಗೇ ಚೀರಿದೆ- ನಿನಗೆಂಥ ಹುಚ್ಚು, ಬಂಜರು ಬಂಡೆ ಭೂಮಿಯಲ್ಲಿ ಎಷ್ಟು ಅಗೆದಾಯ್ತು, ಇನ್ನು ನಾನು, ಮೃದುಲಾ ಆ ಗುಂಡಿಯಲ್ಲಿ ಮಲಗಿ ಮಣ್ಣೆಳೆದುಕೊಳ್ಳಬೇಕಷ್ಟೇ. ತೊಟ್ಟು ನೀರು ಸಿಗಲಿಕ್ಕಿಲ್ಲ ಅಲ್ಲಿ. ಬರೀ ನಿನ್ನ ಹಠ ಅಷ್ಟೇ, ನೋಡುವಾ ಇನ್ನೆಷ್ಟು ಅಗೆಸುವುದು ಎಂದು...


ಅಮ್ಮನ ಮುಖ ಕಂದಿತು. 'ನಿಂಗೆ ಭರವಸೆ ಇಲ್ದಿದ್ರೆ, ಕೆಲ್ಸ ನಿಲ್ಲಿಸಿಬಿಡು. ಹಿತ್ತಲಲ್ಲಿ ಬಿಸಿಲಿಗೆ ಗಿಡಗಳು ಬಾಡುವುದನ್ನು ನೋಡಿ ತಾಳಲಾಗಲಿಲ್ಲ. ನಮ್ಮದೇ ಬಾವಿಯಾದ್ರೆ, ನೀರಿಗೆ ತೊಂದರೆಯಿಲ್ಲ ಅಂತ... ಭೂಮಿಯೊಡಲಲ್ಲಿ ಒರತೆ ಇದ್ದೇ ಇದೆ. ಯಾವುದಕ್ಕೂ ಸಹನೆ ಬೇಕು.' ಅಮ್ಮನ ಗೊಣಗಾಟದ ಕೊನೆಯಲ್ಲಿ ಇತ್ತೀಚೆಗೆ ಶೀಘ್ರ ಸಹನೆ ಕಳೆದುಕೊಳ್ಳುತ್ತಿರುವ ನನ್ನೆಡೆಗೆ ಒಂದು ಬೆರಳಿತ್ತು!

ನಂಗೊತ್ತು. ನನಗೆ ಬೇಸರವಾಗಬೇಕೆಂದಲ್ಲ ಆ ಮಾತು. ನನಗಿಂತ, ಮೃದುಲಾಗಿಂತ, ಗಿರಿ ಹುಟ್ಟಿದ ತಿಂಗಳಲ್ಲೇ ಮನೆ ಬಿಟ್ಟು ಹೋಗಿ ಈವರೆಗೂ ಸುಳಿವಿಲ್ಲದ ಅಪ್ಪನಿಗಿಂತ ಅಮ್ಮ ಸಾಕಷ್ಟು ಸಹಿಸಿದ್ದಾಳೆ. ಆಶ್ಚರ್ಯವಾಗುತ್ತದೆ ಒಮ್ಮೊಮ್ಮೆ. ಅಮ್ಮ ಎಲ್ಲವನ್ನೂ ಮೌನವಾಗಿ ಹೇಗೆ ಸಹಿಸಿದಳು ಎಂದು. ಅಮ್ಮ ಕತೆಯೇ ಇಲ್ಲದ ನಾಯಕಿಯಂತೆನ್ನಿಸುತ್ತಾಳೆ. ಒಂದು ಮುಕ್ತ ನಗು, ಒಂದು ಹಠ, ಇಂಥದ್ದೇ ಬೇಕೆಂಬ ಆಸೆ, ರೋಷ ಯಾವುದೂ ಇಲ್ಲದವಳಂತೆ ಬದುಕುವ ಅಮ್ಮ ಎಷ್ಟೋ ಬಾರಿ ಅಪರಿಚಿತ ಹೆಂಗಸೆನ್ನಿಸುತ್ತಾಳೆ. ಇವಳೇಕೆ ಎಲ್ಲ ಭಾವಗಳನ್ನೂ ಮುಚ್ಚಿಕೊಂಡು ನಟಿಸಬೇಕು ಎಂದು ಕಿರಿಕಿರಿಯಾಗುತ್ತದೆ. ಗಿರಿ ಬೇರೆ ಹಾದಿಯಲ್ಲಿ ಹೊರಳುತ್ತಿದ್ದಾನೆ ಎಂಬುದಕ್ಕೆ ಸ್ಪಷ್ಟ ನಿದರ್ಶನಗಳಿವೆ. ಆದರೂ ಅಮ್ಮ... ಮೌನವಾಗೇ ಇದ್ದಾಳೆ.

ಛೇ! ಗಂಡುಹುಡುಗ, ನಾಳೆ ಆಧಾರವಾದಾನೆಂಬ ಹಂಬಲದಿಂದಲ್ಲವಾದರೂ ಮೃದುಲಾ ಮತ್ತು ತನಗಿಂತ ಎಂಟ್ಹತ್ತು ವರ್ಷ ಚಿಕ್ಕವನು, ತಾವು ಎತ್ತಿ ಆಡಿಸಿ ಬೆಳೆಸಿದವನು. ಅಪ್ಪ ಏಕಾಏಕಿ ಮನೆ ಬಿಟ್ಟು ಹೋದಾಗ ಮೃದುಲಾ ಮತ್ತು ತನಗೆ ಮನೆಯಲ್ಲಿ ತುಂಬಿಕೊಂಡ ವಿಷಾದ, ಅಮ್ಮನ ಅಸಹಾಯಕ ಮೌನ, ದಿಕ್ಕು ತೋಚದ ಸಂದಿಗ್ಧತೆ ಸ್ವಲ್ಪ ಸ್ವಲ್ಪವಾದರೂ ಅರ್ಥವಾಗುವ ವಯಸ್ಸು. ನಾನು, ಮೃದುಲಾ ಕಂಡ ಕಷ್ಟಗಳನ್ನು ಗಿರಿ ಕಾಣುವುದು ಬೇಡ ಎಂದು ಅಷ್ಟು ಚಿಕ್ಕ ವಯಸ್ಸಲ್ಲೇ ನಾವು ಹುಡುಗಿಯರು ಅಮ್ಮನೊಂದಿಗೆ ನಮ್ಮಿಂದ ಸಾಧ್ಯವಿದ್ದ ಬಗೆಯಲ್ಲಿ ಹೆಣಗಿದ್ದೆವು. ಗಿರಿ ಈ ಮನೆಯ ಈ ಮೂರೂ ಜೀವಗಳ ವ್ಯಥೆ ಕಳೆಯುವ ನಿಧಿಯೆಂಬಂತೆ ಜೋಪಾನ ಮಾಡಿದ್ದೆವು. ನಾನು ಮತ್ತು ಮೃದುಲಾ ಅಪ್ಪನೊಂದಿಗೇ ಬಾಲ್ಯವನ್ನೂ ಕಳೆದುಕೊಂಡ ಕ್ರೂರ ವಾಸ್ತವದ ಅರಿವು ಅಮ್ಮನಿಗೂ ಇತ್ತು. ಆದರೆ ಯಾರನ್ನೂ ದೂಷಿಸುವ ಸ್ಥಿತಿಯಲ್ಲ. ಗಿರಿಗೆ ಮಾತ್ರ ಅಪ್ಪನಿಲ್ಲವೆಂಬ ಕೊರತೆಯೇ ತಾಗಿಸದಿರಲು ನಾವು ಮೂವರೂ ನಮ್ಮೊಳಗೇ ಮೌನ ಒಪ್ಪಂದ ಮಾಡಿಕೊಂಡಂತಿತ್ತು.

ಅಪ್ಪ ದಿಢೀರನೇ ಮನೆ ಬಿಟ್ಟು ಹೋದದ್ದಾದರೂ ಏಕೆ? ಎತ್ತ? ಈವರೆಗೆ ಉತ್ತರವೇ ಸಿಗದ ಪ್ರಶ್ನೆಗಳು. ಆದರೆ... ಅಮ್ಮ, ಯಾವನ ಜೊತೆ ಹನ್ನೊಂದು ವರ್ಷ ಸಂಸಾರ ನಡೆಸಿ, ಮೂರು ಮಕ್ಕಳನ್ನು ಹೆತ್ತಳೋ, ಅವಳಿಗಾದರೂ ಕನಿಷ್ಟ ಪಕ್ಷ ಹೀಗೆ ಮನೆಬಿಟ್ಟು ಹೊರಡುವ ಮುನ್ನ ಅಪ್ಪನ ಮಾನಸಿಕ ಸ್ಥಿತಿ, ಪೂರ್ವತಯಾರಿಗಳ ಕಿಂಚಿತ್ತೂ ಸುಳಿವು ಸಿಗಲಿಲ್ಲವೆಂದರೆ... ಈಗಲೂ ಯೋಚಿಸುವಾಗ ಆ ಸ್ಥಿತಿಯಲ್ಲಿ ಅಮ್ಮನ ಅಸಹಾಯಕತೆಗಿಂತ ಅವಳ ಸಂವೇದನಾ ಶೂನ್ಯತೆಗೆ ರೋಷವೆನ್ನಿಸುತ್ತದೆ!

ಅಪ್ಪ ಬಿಟ್ಟುಹೋದ ಬದುಕು ಆರ್ಥಿಕವಾಗಿ ತೀರಾ ಪ್ರಯಾಸದಾಯಕವಾಗಿತ್ತು. ನಾವು ಮಕ್ಕಳಿಗೆ ಅಪ್ಪನೆನಿಸಿಕೊಂಡಾತನ ಪ್ರೀತಿಯ, ವಾತ್ಸಲ್ಯದ ಯಾವ ಸೆಳೆತಗಳೂ ಆತ 'ಇಲ್ಲ'ವಾದ ನಂತರವೂ ಭಾಸವಾಗಲಿಲ್ಲ. ಆದರೆ ಅಮ್ಮನಿಗೆ ಖಂಡಿತಾ ಶೂನ್ಯ ಬಾಧಿಸುತ್ತದೆ ಎಂಬುದು ಅದ್ಹೇಗೋ ಎಳವೆಯಲ್ಲೇ ಅರಿವಾಗುತ್ತಿತ್ತು. ಅದಕ್ಕೇ ಅವಳನ್ನು ಪೀಡಿಸದೇ ಯಾವುದಕ್ಕೂ ಹಠ



ಕಟ್ಟದೇ ಆಟ-ಓಟ ಎಲ್ಲ ಕಟ್ಟಿಟ್ಟು ಬೆಳೆದವು. ಮೃದುಲಾ ನನಗಿಂತ ಹತ್ತು ಪಟ್ಟು ಸೂಕ್ಷ್ಮಗ್ರಾಹಿ, ವಿದ್ಯೆಯಲ್ಲೂ ಪ್ರತಿ ತರಗತಿಯಲ್ಲಿ ಅತ್ಯುತ್ತಮ ಫಲಿತಾಂಶ ದಾಖಲಿಸಿದಳು. 'ಮೃದುಲಾ' ಮನದಲ್ಲಿ ಅಸ್ಪಷ್ಟವಾಗುಳಿದ ಅಪ್ಪನ ನೆನಪುಗಳ ಜೀವಂತಿಕೆಯಂತೆ. ಅದೇ ರೂಪು ಅದೇ ಗಂಭೀರ ನಿಲುವು. ಅವಳು ಪ್ರಾಯಕ್ಕೆ ಬಂದಾಗ ನಾನು ತಳಮಳಿಸಿದ್ದೆ, ಇವಳನ್ಹೇಗೆ ಸಂಭಾಳಿಸುವುದು ಎಂದು. ಮೃದುಲಾಳ ರೂಪಿನಲ್ಲಿ ಅಪ್ಪನಿದ್ದ. ಯಾವ ಮೂಲೆಗೆ ಮುಖವೊತ್ತಿ ನಿಂತರೂ ಅವಳಿದ್ದಲ್ಲಿ ಬೆಳಕು ಹರಡುತ್ತಿತ್ತು. ನನಗಿಂತ ಎರಡೇ ವರ್ಷ ಕಿರಿಯವಳಾದ ಹದಿನೆಂಟರ ತಂಗಿಯನ್ನು ಜೋಪಾನ ಮಾಡುವ ಧಾವಂತ, ಅವ್ಯಕ್ತ ಅಂಜಿಕೆಯಲ್ಲಿ ತಳಮಳಿಸುತ್ತಿದ್ದೆ.

ಅಮ್ಮ ನನಗಿಂತ ಮೃದುಲಾಳನ್ನು ಜಾಸ್ತಿ ಹಚ್ಚಿಕೊಂಡಿದ್ದಾಳೆ ಎಂಬ ಅರಿವು ಏಕೋ ನನ್ನನ್ನು ತಿವಿಯುತ್ತಿತ್ತು. ಮೃದುಲಾಳನ್ನು ಆ ಮೂಲಕ ಅವಳ ರೂಪಿನ ಕಣಕಣದಲ್ಲಿರುವ ಅಪ್ಪನನ್ನು ಆಕೆ ಮೋಹಿಸುತ್ತಾಳೆಂಬ ವಿಚಿತ್ರ ಅನುಮಾನ ನನ್ನಲ್ಲಿ ತಣ್ಣಗೇ ಹೆಡೆಯೆತ್ತಿತ್ತು. ಆದರೆ ಮೃದುಲಾಳಲ್ಲಿ ಮುನಿಸು ಹೊಂದಲು ಸಾಧ್ಯವೇ ಇಲ್ಲ. ಮಾತು ಮಾತಿಗೆ, ಪ್ರತಿಯೊಂದಕ್ಕೂ ಮಾಧವಿ ದೀದೀ ಇದನ್ನು ಮಾಡಲೇ? ಹಾಗೆ ಮಾಡಲೇ? ಏನು ಮಾಡಲಿ? ಎಂದು ನನ್ನ ಬಾಯಿಯಿಂದ ಹೊರಬೀಳುವ ನಿರ್ಧಾರಕ್ಕೇ ಕಾಯುವವಳು ಮೃದುಲಾ. ನಾನೋ ಒಂದು ರೀತಿ ಕ್ಯಾಕ್ಟಸ್‌ನಂತೆ ಬೆಳೆದೆ ಅಥವಾ ಬೆಳೆಯುತ್ತ ಬಂದಂತೆ ಹಾಗೇ ಆದೆ ಎಂದು ನನಗೇ ಗೊತ್ತಿದೆ.

'ಅಪ್ಪನಂತೆ ಇವನೂ ಮನೆಗೆ ಬೆನ್ನು ತೋರಿಸುವವನೇ' ಗಿರಿಯನ್ನುದ್ದೇಶಿಸಿ ನಿರ್ವಿಕಾರವಾಗಿ ತೀರ್ಪಿತ್ತಿದ್ದಕ್ಕೆ ಪಾಪ, ಮೃದುಲಾ ರಾತ್ರಿಯಿಡೀ ಎಷ್ಟು ಬಿಕ್ಕಿದ್ದಳು. ಯಾಕೆ? ಕೇಳಿಸಿಕೊಂಡ ಗಿರಿ ಊಟ ಮಾಡಿ, ಅಂಗಳಲ್ಲಿ ಮಂಚ ಬಿಡಿಸಿ ತಣ್ಣಗೆ ಬಿದ್ದು ಗೊರಕೆ ಹೊಡೆದರೆ, ಎಂದಿನಂತೇ ಅಮ್ಮ ಏನೇನೂ ಮಾತನಾಡಲಿಲ್ಲ. ಒಂದು ಬಗೆಯಲ್ಲಿ ಹಾಗೆ ಹೇಳಿ ಅಮ್ಮನನ್ನು ಘಾಸಿಗೊಳಿಸುತ್ತಿದ್ದೇನೆ ಎಂಬ ಅರಿವೇ ಅಂತಹ ಮಾತುಗಳನ್ನು ಆಡಿಸುತ್ತದೆ. ಆದರೆ ಏಕೆ? ಅಪ್ಪನ ಪಲಾಯನದಲ್ಲಿ ಪ್ರಾಯಶಃ ಯಾವ ಪಾತ್ರವೂ ಇರದ ಅಸಹಾಯಕ ಹೆಣ್ಣನ್ನು ನಾನೇಕೆ ತಿವಿಯುತ್ತೇನೆ? ಇಲ್ಲ, ಅವಳು ಮನಸಿನ ಮೂಲೆಯಲ್ಲೆಲ್ಲಾದರೂ ಗಿರಿಯ ಬಗ್ಗೆ ಏನಾದರೂ ಆಸೆ, ಕನಸುಗಳಿಟ್ಟುಕೊಂಡಿದ್ದರೆ ಆ ಕನಸುಗಳು ಸಾಯಲಿ ಎಂದು.

ಆದರೆ ಇಂತಹ ಪ್ರಸಂಗಗಳಲ್ಲಿ ರೋದಿಸುವುದು ಮೃದುಲಾ ಮಾತ್ರ. ಅವಳನ್ಯಾರೂ ಸಮಾಧಾನಿಸುವುದೂ ಇಲ್ಲ. ಅವಳೇಕೆ, ಯಾವ ದುಃಖಕ್ಕೆ ರೋದಿಸುತ್ತಾಳೆಂಬುದು ಅರಿವಾಗುವುದಿಲ್ಲ. ಅಪ್ಪ ಹೆಣ್ಣುಮಕ್ಕಳನ್ನು ಹೀಗೆ ಕೈ ಬಿಟ್ಟು ಹೊರಟು ಹೋಗಿದ್ದಕ್ಕೆ, ತಮ್ಮ ಮೇಲೆ ಯಾವ ವಾಂಛೆಯೂ ಇರದ್ದಕ್ಕೆ, ಅಪ್ಪನ ವಾತ್ಸಲ್ಯದಿಂದ ವಂಚಿತರಾದದ್ದಕ್ಕೆ, ಅಮ್ಮನ ಮೌನ, ನಿರ್ಲಿಪ್ತತೆ ಗಾಬರಿಪಡಿಸುವುದಕ್ಕೆ, ಗಿರಿ ಹಾದಿ ತಪ್ಪುತ್ತಿರುವುದಕ್ಕೆ... ಯಾವುದಕ್ಕೆ ರೋದಿಸುತ್ತಾಳೆ ಮೃದುಲಾ? ನನಗೆಂದೂ ಈ ಸಂಗತಿಗಳು ದುಃಖ ತರಿಸದ್ದಕ್ಕೆ ಮೃದುಲಾಳನ್ನು ಸಂತೈಸಲೂ ಬರುವುದಿಲ್ಲ.

ಮೃದುಲಾಳನ್ನು ಮದುವೆಯಾಗುವುದಾಗಿ ಕೇಳಿಕೊಂಡು ಎಷ್ಟೋ ಗಂಡಸರು ಮನೆಯ ಮೆಟ್ಟಿಲು ತುಳಿದರೂ, ನಿರ್ಧಾರಕ್ಕೆ ಬರಲಾಗಲಿಲ್ಲ. ಅವಳು ಡಿಗ್ರಿಯ ನಂತರ ಮತ್ತೂ ಓದಲಿ ಅಲ್ವಾ? ಎಂದು ಅಮ್ಮನನ್ನು ಕೇಳಿದರೆ ಅವಳು ಮೃದುಲಾಳನ್ನೇ ಕೇಳೆಂದಳು. ಜೊತೆ ಜೊತೆಗೇ ಅಂದಳು: 'ಓದಿ ಆದ ಮೇಲೂ ಮದ್ವೆ ಆಗ್ಬೇಕಲ್ಲ ಅವಳು? ಈಗ ಚೆನ್ನಾಗಿರುವಾಗಲೇ ಮದ್ವೆ


ಅಂತಾದ್ರೆ, ಇಳ್ಳೆಯದೇನೋ, ಮತ್ತೆ ಅದೂ ಸಮಸ್ಯೆಯಾದ್ರೆ? ಅದ್ಕಿಂತ ಮೊದಲು ನಿನ್ನದ್ದೇನಂತ ಆಗ್ಬೇಕಲ್ಲ...'

'ಮೃದುಲಾ ಮದ್ವೆ ಸಾಲ ನಾನು ದುಡಿದು ತೀರಿಸ್ಬೇಕಾಗತ್ತೆ, ನನ್ನ ಮದ್ವೇದ್ದು? ನೀನು ಕೊಪ್ಪರಿಗೆ ಹೂತಿಟ್ಟಿದ್ದೀಯಾ? ಇಲ್ಲ, ಅಪ್ಪ ಓಡಿ ಹೋಗುವ ಮೊದಲು ನನ್ನ ಮದ್ವೇಗಂತ ಹಣ ತೆಗೆದಿರಿಸಿ ಹೋಗಿದ್ದಾನಾ? ಯಾವ್ದೂ ಅಲ್ಲದಿದ್ರೆ ಗಿರಿ ದುಡಿದು, ನನ್ನ ಮದ್ವೆ ಮಾಡೋವರೆಗೆ ಕಾದರೆ ನಂಗೂ ಆಗ್ಬೋದು ಮದುವೆ'. ನಾನೇನೂ ವಿಷಾದದಿಂದ, ಅವಳನ್ನು ನೋಯಿಸಬೇಕೆಂತ ಹೇಳಿದ್ದಲ್ಲ ಅದೆಲ್ಲ. ನಿಜಕ್ಕೂ ನನ್ನ ಮನಸ್ಸು ತಣ್ಣಗಾಗಿಬಿಟ್ಟಿತ್ತು. ಅದಕ್ಯಾವ ಚಾಲನೆಯೂ ಸಾಧ್ಯವಿರಲಿಲ್ಲ. ಅದಕ್ಕೇ ನಾ ನಿರೀಕ್ಷಿಸದ ಅಮ್ಮನ ಪ್ರತಿ ಸವಾಲಿಗೆ ನಾನು ಉತ್ತರಿಸಲಾಗಲಿಲ್ಲ. ಏನೆಂದಳು ಅವಳು?

'ನೀ ಮದ್ವೆಯಾಗ್ಲಿಕ್ಕೆ ಸಿದ್ಧವಾಗು ಮೊದಲು. ಇಷ್ಟು ಜಾಗ, ಈ ಹಿತ್ತಲು, ಅಂಗಳ ಇಟ್ಕೊಂಡು ನಂಗೇನೂ ಮಾಡ್ಲಿಕ್ಕಿಲ್ಲ. ಹಣದ ವಿಷಯದಲ್ಲಿ ನೀನು ಆ ನಿರ್ಧಾರ ತೆಗೆದುಕೊಳ್ಳೋದು ಬೇಡ. ನೀ ಯಾವಾಗ ಹೂ ಅಂತಿಯೋ ಆಗ ಎಲ್ಲ ಸಿದ್ಧತೆ ನಡೀತದೆ' ನನ್ನ ಸಂದಿಗ್ಧತೆಯ ಅರಿವಿದ್ದ ಅವಳು ನನ್ನ ವ್ಯಂಗ್ಯಕ್ಕೆ ಸರಿಯಾಗೇ ಚುಚ್ಚಿದ್ದಳು. ನನಗೆ ಬೇಡದಿರುವುದನ್ನು ಅವರ 'ದೌರ್ಬಲ್ಯ'ವಾಗಿ, ನನ್ನ 'ಅನಿವಾರ್ಯ ತ್ಯಾಗ'ವಾಗಿಸಿಕೊಳ್ಳುವ ಹುಚ್ಚು ಇಳಿದೇಹೋಗಿತ್ತು.

ಮೃದುಲಾ ಹೇಳಿದ್ದಳು: 'ಮಾಧವಿ ದೀದಿ, ನಮ್ಮ ಲೆಕ್ಚರರ್ ಕೇದಾರನಾಥ ಅಂತ, ಅವರು ನನ್ನನ್ನು ಮದ್ವೆಯಾಗ್ಲಿಕ್ಕೆ ಇಷ್ಟಪಟ್ಟಿದ್ದಾರೆ. ಬಂದು ಮಾತನಾಡಲೇ ಎಂದೂ ಕೇಳುತ್ತಿದ್ದಾರೆ.'

ಮೃದುಲಾ ಈ ವಿಷಯವನ್ನು ಸಹಜವಾಗಿ ಪ್ರಕಟಿಸಿದಾಗಿನಿಂದ ಅಪ್ಪನ ರೂಪದ ಮೃದುಲಾ ಅದ್ಯಾವುದೋ ಕೇದಾರನಾಥನೊಂದಿಗೆ ಮನೆ ಬಿಟ್ಟು ಓಡಿಯೇ ಹೋದಂತೆ ಕನಸು ಕಂಡು ಬೆಚ್ಚಿಬೀಳುತ್ತಿದ್ದೆ. ನಿಜ ಹೇಳಬೇಕೆಂದರೆ ಮೃದುಲಾ ಓಡಿಹೋದರೆ ಆಗುವ ದುಃಖಕ್ಕಿಂತ, ಅವಳು ಇನ್ನೆಂದೂ ಸಿಗದೇ ಹೋಗುವ ದುಃಖಕ್ಕಿಂತ, ಅಪ್ಪನನ್ನು ಒಳಗೊಳಗೇ ದ್ವೇಷಿಸುವ ಹಾಗೆ ಜೀವನ ದುದ್ದಕ್ಕೂ ಮೃದುಲಾಳಂತಹ ಹುಡುಗಿಯನ್ನು ದ್ವೇಷಿಸುತ್ತ ಬದುಕುವುದು ಹೆಚ್ಚು ದುರ್ಭರ ವಾಗಬಹುದು.



ಮೃದುಲಾ, ನಿನಗೆ ಕೇದಾರನಾಥನಲ್ಲಿ ಪ್ರೀತಿಯೇ? ಎಂದು ಕೇಳ ಬೇಕೆಂದು ಕೊಂಡಿದ್ದನ್ನು, ಅವಳು, 'ಹೌದು ಮಾಧವಿ ದೀದಿ' ಎಂದು ಒಪ್ಪಿ ಕೊಂಡುಬಿಟ್ಟರೆ ಎಂಬ ಭೀತಿಯಲ್ಲಿ ಕೇಳಲಿಲ್ಲ. ಅಷ್ಟಕ್ಕೂ ಭೀತಿ ಪಡುವಂತಹ ದ್ದೇನಿರಲಿಲ್ಲ. ಮದುವೆಯ ದಾರಿ ಇನ್ನೂ ಸುಗಮವಾಗುತ್ತಿತ್ತು. ಆದರೆ ಅಮ್ಮ ಕೇಳಿದ್ದಳು ಮೃದುಲಾಳಲ್ಲಿ ಇದೇ ಪ್ರಶ್ನೆಯನ್ನು. ಅದಕ್ಕೆ ಮೃದುಲಾ ಗಾಬರಿ ಪಟ್ಟಿದ್ದಳು. ನಿಜ ಸಂಗತಿಯೆಂದರೆ ಅಂತಹುದ್ದೇನೂ ಇರಲಿಲ್ಲ. ಆತನಿಗೆ ಹುಡುಗಿಯ ಜಾಣ್ಮೆಯೊಂದಿಗೇ ಅವಳ ರೂಪು ಇಷ್ಟವಾಗಿದ್ದಿರಬಹುದು.

ನೋಡಿ ನೋಡಿ, ನನಗೇಕೋ, ಜಾತಿಯ, ಅಮ್ಮನ ದೂರದ ಸಂಬಂಧಿಯೂ ಆದ ಹುಡುಗನೇ ಸೂಕ್ತವೆನ್ನಿಸಿದ. ಅಪ್ಪನ ವಿಷಯ ಎಲ್ಲ ಮೊದಲೇ ಬಲ್ಲವನಾಗಿದ್ದರಿಂದ ನಿರಾಳವೆನ್ನಿಸಿತ್ತು. ಜೊತೆಗೆ ಮೃದುಲಾಳಂತಹ ಹುಡುಗಿಯನ್ನು ಕಣ್ಣುಮುಚ್ಚಿ ಬೇರೆ ಜಾತಿ, ದೂರ ಎಂದು ಕಳಿಸುವ ಧೈರ್ಯ ನನಗೂ ಇರಲಿಲ್ಲ. ಮನಸ್ಸು ಅಮ್ಮನಿಗೂ ಇರಲಿಲ್ಲ.

ಆದರೆ ನಸೀಬ ಇಲ್ಲೂ ಖೊಟ್ಟಿಯಾಯಿತು. ಮೃದುಲಾ ಪಾಪ, ಅತ್ತು-ಅತ್ತು, ತನಗಾಗಿ, ಗಂಡನಿಗಾಗಿ, ಅಮ್ಮನಿಗಾಗಿ, ಗಿರಿಗಾಗಿ ಎಲ್ಲರಿಗಾಗಿ ಅವಳೇ ಅತ್ತು, ಅತ್ತು ಮತ್ತೂ ಅಳುತ್ತಲೇ ಇರುತ್ತಾಳೆ.

ಅಮ್ಮ ಮಾತ್ರ ವಿಷಾದದ ಇನ್ನೊಂದು ಎಳೆ ಸೇರಿಕೊಂಡಂತೆ ಆಗೀಗ ಏನೋ ಯೋಚಿಸುತ್ತ ಕೂತಲ್ಲಿ ಕೂರುತ್ತಾಳೆ. ಮೊದಲಿಗಿಂತ ಜಾಸ್ತಿ ಮೃದುಲಾಳನ್ನು ಹಚ್ಚಿಕೊಂಡಿದ್ದಾಳೆ. ಆದರೆ ಈಗ ಎಂಥ ಆಶ್ಚರ್ಯ! ಮದುವೆ ಎಂಬ ಹತ್ತು ತಿಂಗಳ ಅವಧಿಯಲ್ಲಿ ಮೃದುಲಾ ಎಷ್ಟು ಬದಲಾಗಿ ಹೋಗಿದ್ದಾಳೆ! ಅಪ್ಪನ ರೂಪ ಇಂಚು ಇಂಚೂ ಕರಗಿ ಹೋಗಿ, ಮೂಳೆ ಕಣ್ಣುಗಳೇ ಕಾಣಸುವಂತಿದ್ದಾಳೆ. ಆದರೆ ಹಿಂದೆಲ್ಲ ಅಪ್ಪನ ರೂಪ ಎಂದು ಒಳಗೊಳಗೇ ದ್ವೇಷ ಹುಟ್ಟಿಸಿದ ರೂಪ ಈಗ ಕರಗಿಹೋಗಿದ್ದು ಮನಸ್ಸಿಗೆ ನಿರಾಳವೆನ್ನಿಸುವುದಿಲ್ಲ. ಮೃದುಲಾ ನಮ್ಮ ಸೋಲಿಗೊಂದು ಸ್ಪಷ್ಟ ಚಿಹ್ನೆ ಎನ್ನಿಸುತ್ತಾಳೆ.

ಅಮ್ಮ ಮತ್ತು ಮೃದುಲಾ ಪುರಾಣ ಕಾಲದ ಸನ್ಯಾಸಿನಿಯರಂತೆ ಎನ್ನಿಸಿ ಮುಜುಗರವಾಗುತ್ತದೆ. ಎಲ್ಲಕ್ಕಿಂತ ಸೂಕ್ಷ್ಮ ಮತ್ತು ಅಸಹಜವೆನ್ನಿಸುವಂತಹ ಬೆಳವಣಿಗೆ ಎಂದರೆ ಮನೆ, ಮನೆಯಲ್ಲಿನ ಜೀವಿಗಳು ತನಗೆ ಸಂಬಂಧಿಸಿದ್ದೇ ಅಲ್ಲ ಎಂಬಂತಿರುವ ಗಿರಿ, ಇತ್ತೀಚೆಗೆ ವಿಚಿತ್ರವಾಗಿ ಬದಲಾಗುತ್ತಿರುವುದು. ಆದರೆ ಈ ಬದಲಾವಣೆ ಮೃದುಲಾ ಗಂಡನ ಮನೆಯಿಂದ ಬಂದ ನಂತರ ಎಂಬುದು ವಿಚಿತ್ರ!



ಗಿರಿಯ ಅನ್ಯಮನಸ್ಕತೆಗೆ ಬೇರೆಯೇ, ಪ್ರಾಯಶಃ ಅವನದ್ದೇ ಆದ ಖಾಸಗಿ ಕಾರಣವಿದೆ ಎನ್ನಿಸುತ್ತದೆಯಲ್ಲದೇ, ಮೃದುಲಾಳ ಪ್ರಕರಣದೊಂದಿಗೆ ಅವನ ಈ ದಿಢೀರ್ ಬದಲಾವಣೆಯನ್ನು ತಳಕು ಹಾಕುವುದು ಸಮ್ಮತವಾಗುವುದಿಲ್ಲ. ಆದರೆ... ಈ ಬದಲಾವಣೆ ಇನ್ನೂ ಹೆಚ್ಚು ಕಳವಳಕಾರಿಯಾದದ್ದೇ? ಎಂಬ ಅನುಮಾನವನ್ನು ಅಮ್ಮ ನೇರವಾಗಿ ನಮ್ಮೆದುರು ಬಿಚ್ಚಿಡುವಾಗ ಎದೆ ಹಾರುತ್ತದೆ. ಹೌದು, ವಿನಾಶ ಸನಿಹದಲ್ಲೇ ಎಲ್ಲೋ ಸುಳಿಯುತ್ತಿದೆ ಎಂದು ವ್ಯಾಕುಲವೆನ್ನಿಸುತ್ತದೆ.

ಮೃದುಲಾ ಈ ವಿನಾಶದ ಸುಳಿವಿಗೂ ತಲೆ ದಿಂಬಲ್ಲಿ ಮುಖ ಹುದುಗಿಸಿ ಬಿಕ್ಕುತ್ತಾಳೆ. ಈ ಬಾರಿಯ ರೋದನದಲ್ಲಿ ಅವಳ ಗಂಡನ ದುಃಖವೂ ಸೇರಿರಬಹುದು. 'ಮಾಧವಿ ದೀದಿ, ಆ ಮನುಷ್ಯನಿಗೆ ಹೆಂಗಸರ ಚಟವಿತ್ತು, ಮದುವೆಗೂ ಮೊದಲು. ಈ ಜೀವ ಹಿಂಡಿದರೂ ಅವನಿಗೆ ಸಮಾಧಾನವಾಗುತ್ತಿರಲಿಲ್ಲ. ನಾನೂ ಸಹಿಸಿದೆ ತುಂಬ. ನನ್ನ ಹಾಸಿಗೆಯಲ್ಲಿ ಅವ ಹೆಣ್ಣುಗಳನ್ನು ತಂದು ಅವರೊಂದಿಗೆ ನನ್ನೆದುರೇ ಮಲಗಿದಾಗಲೂ. ಈ ಮನೆಗೆ ನಾನು ಅಪ್ಪನಂತೆ ಮುಗಿಯದ ನೋವಾಗಬಾರದೆಂದು ತುಂಬ ತಾಳಿಕೊಂಡೆ. ಆದರೆ ಮಾಧವಿ ದೀದಿ, ನಾನು ಕೊನೆಗೂ ಮನೆಗೆ ಮುಗಿಯದ ಸಮಸ್ಯೆಯೇ ಆದೆ' ಮೃದುಲಾ ಬಿಕ್ಕುತ್ತಲೇ ಹೇಳಿದ್ದಳು.

ಏನು ಮಾಡುವುದು ಮೃದುಲಾಳ ವಿಷಯವನ್ನು? ಅಮ್ಮ ಪ್ರಶ್ನಿಸಿದ್ದಳು. ಪ್ರಾಯಶಃ ಅವಳಿಗೇ ಈ ಪ್ರಶ್ನೆಯ ಉತ್ತರ ಸಿಕ್ಕಿರಲಿಲ್ಲ. 'ನೀನು ಮರಳಿ ಗಂಡನ ಮನೆಗೇ ಹೊರಡು' ಎಂದರೆ 'ಸರಿ ಮಾಧವಿ ದೀದಿ' ಎಂದು ಹೊರಟಾಳು. ಆದರೆ ಮರಳಿ ಅವಳ ಮುಖ ಕಾಣಲು ಸಿಗದು ಎಂಬುದು ಖಾತ್ರಿ. ಇಲ್ಲೇ ಇದ್ದರೆ ರೋದಿಸಿಕೊಂಡು ಇರುತ್ತಾಳೆ ಜೀವಚ್ಛವದಂತೆ. ಒಟ್ಟಿನಲ್ಲಿ ಈ ಚಂದದ ಹುಡುಗಿಯ ತುಟಿಗಳಲ್ಲಿ ನಗು ಯಾವತ್ತಿಗೋ ಅಳಿಸಿಹೋಗಿದೆ.

ಹಗಲೆಲ್ಲ ದೊಡ್ಡ ಗುಂಪು ಕಟ್ಟಿಕೊಂಡು ಊರೆಲ್ಲ ತಿರುಗುವ ಗಿರಿ ರಾತ್ರಿಯೋ, ಮಧ್ಯರಾತ್ರಿಯೋ ಬಂದು ಬೀಳುತ್ತಿದ್ದದ್ದು ರೂಢಿಯಾಗಿ ಹೋದ ಸಂಗತಿ. ಆದರೆ ಥಟಕ್ಕನೇ ಇವ ಸರೀ ನಾಲ್ಕು ರಾತ್ರಿ, ಐದು ಹಗಲು ಕಾಣಸದೇ ಹೋದಾಗ ಮೃದುಲಾ ಅತ್ತೂ ಅತ್ತೂ ಸೊರಗಿದಳು. ಅಮ್ಮ ಮಂಕು ಹಿಡಿದವರಂತೆ ಕೂರುತ್ತ... ಮಲಗುತ್ತ 'ಮಾಧವೀ, ಅವನೂ ಹೊರಟು ಹೋದನಾ ಅಂತ?' ಎಂದದ್ದು ಕನವರಿಕೆಯೋ ಅಥವಾ ನಿಜಕ್ಕೂ ಪ್ರಶ್ನಿಸುತ್ತಿದ್ದಾಳೋ ಅರಿವಾಗದೇ ಕುಳಿತಿದ್ದೆ. ಎದೆಯ ಮೂಲೆಮೂಲೆಯಲ್ಲೂ ಎಂತಹದ್ದೋ ಆತಂಕ ಹಬ್ಬುತ್ತಿತ್ತು. ಅರೆ! ಗಿರಿಯ ಇಲ್ಲದಿರುವಿಕೆ ಇಷ್ಟೊಂದು ಕಾಡಿಸಬಲ್ಲದೇ? ಎನ್ನುವುದರ ಅರಿವು ಹೊಸದಾಗಿ ಆಗುತ್ತಲಿತ್ತು.

ಮೃದುಲಾ ಮತ್ತು ಅಮ್ಮ ಸೇರಿ, ಸಂಬಂಧ, ಸ್ನೇಹ ಎಂದು ಗೊತ್ತಿದ್ದ, ಅವನು ಹೋಗಿರಬಹುದೆಂದು ಅವರು ಊಹಿಸಿದ ಎಲ್ಲ ಮನೆಗಳ ಹೊಸ್ತಿಲುಗಳನ್ನೂ ತುಳಿದು ಮರಳಿ ಬಂದರು. ಅವನು ಬರುತ್ತಾನೆ ಎಂದು ನನಗೆನ್ನಿಸುತ್ತಿರಲಿಲ್ಲ. ಬರುವವನಾದರೆ ಯಾಕೆ ಹೋಗುತ್ತಾನೆ? ಮತ್ತು ಇಲ್ಲಿ ಅವನನ್ನು ಎಳೆದು ತರುವ ಪ್ರಬಲ ಸೆಳೆತ ಯಾವುದಿದೆ?

ಗಿರಿಯ ಚೀಲದಲ್ಲಿದ್ದ ಕಷಾಯ ಬಣ್ಣದ ಜೋಳಿಗೆ, ಪಂಚೆಯನ್ನು ನಾನು ಅಚ್ಚರಿಯಿಂದ ದಿಟ್ಟಿಸಿದೆ. ದಪ್ಪ ದಪ್ಪ ಮಣಿಗಳ ಸರ ಹಿಡಿದು ಮೃದುಲಾ ಗೋಡೆಗೊರಗಿ ಕುಳಿತು ಕಣ್ಮುಚ್ಚಿದ್ದಳು.

ಆ ಕ್ಷಣಕ್ಕೆ ಗಿರಿಯ ಬಗ್ಗೆ ಏನೂ ಯೋಚಿಸಲಾಗಲಿಲ್ಲ. ಯೋಚಿಸಿದರೆ... ಅವನು ಕುಡಿದು ಬರುತ್ತಿರಲಿಲ್ಲ. ಅದೇ ಆಶ್ಚರ್ಯವಾಗಿತ್ತು. ಅಮ್ಮ ಅವನು ಜಾರದಿರಲು ಬಹಳಷ್ಟು ಪ್ರಯತ್ನವನ್ನೂ ಮಾಡಿದ್ದಳು. ಮೃದುಲಾ ಪ್ರೀತಿಯಿಂದ ಅವನ ಮನಸ್ಸರಿಯಲು ಪ್ರಯತ್ನಿಸಿ ಸೋತಿದ್ದಳು.

ಹಲವಾರು ಬಾರಿ ಅಪ್ಪನ ನೆನಪಿನಿಂದ ಕ್ರುದ್ಧಳಾಗುತ್ತಲೇ ಗಿರಿಯ ಕೆನ್ನೆಗೆ ಬಿಗಿದಿದ್ದೆ. ಅವನನ್ನು ಮನೆಯೊಳಗೆ, ನಮ್ಮ ವರ್ತುಲದೊಳಗೇ ಕಟ್ಟಿ ಹಿಡಿದು ನಿಲ್ಲಿಸುವ ಪ್ರಯತ್ನಗಳೆಲ್ಲ ನಿರರ್ಥಕವಾಗಿದ್ದರೂ, ಗಿರಿ ಒಂದೇ ಒಂದು ಬಾರಿಯೂ ಮನೆಯಲ್ಲಿ ಯಾರ ಮೇಲೂ ಗಟ್ಟಿಯಾಗಿ ರೇಗಿದ್ದೂ ಇಲ್ಲ. ಬೀದಿಗಿಳಿದರೆ ಸಾಕು, ಕೇಕೆ-ಅಬ್ಬರದ ಮಧ್ಯೆ ಬದುಕುವ ಹುಡುಗ ಮನೆಯ ಒಳಗೆ, ಮನೆಯವರ ಮಟ್ಟಿಗೆ ತೀರ ತಣ್ಣಗೆ, ಹಿಮದಂತೆ.

ಹೋಗಲಿ ತನ್ನ ಪಾಡಿಗೆ ಎಂದು ಬಿಟ್ಟದ್ದನ್ನು ಸರಿಯಾಗಿ, ತನಗೆ ಸರಿಯಾಗಿ ಬಳಸಿಕೊಂಡ ಗಿರಿ. ಯಾಕೋ ವ್ಯಥೆಯಾಗುವುದಿಲ್ಲ. ಬದಲಾಗಿ ಹೆದರಿಕೆಯಾಗುತ್ತದೆ. ಅಮ್ಮ ಗುಟ್ಟಾಗಿ, ಮೃದುಲಾ ಬಹಿರಂಗವಾಗಿ ಸಾಕಷ್ಟು ಅತ್ತಿದ್ದಾರೆ, ನೊಂದಿದ್ದಾರೆ. ಗಿರಿ ನಾಪತ್ತೆಯಾಗಿ ಹದಿನೆಂಟು ದಿನಗಳ ನಂತರವೂ ಅಮ್ಮನ ಕಣ್ಣುಗಳು ಬಾತಿವೆಯೇನೋ ಎಂಬ ಅನುಮಾನದಲ್ಲಿ ದಿಟ್ಟಿಸಿದರೆ ಯಾಕೋ ಅವಳ ಕಣ್ಣುಗಳೇ ಮೊದಲಿನಿಂದ ಹಾಗೇ ದಪ್ಪ ಎನ್ನಿಸುತ್ತದೆ!

ಈ ನಡುವೆ ಇದೊಂದು ಹಾಳು ಬಾವಿಯ ಅಗೆದಾಟ! ಇಷ್ಟು ಅತ್ತರೂ ಇನ್ನೂ ಮೃದುಲಾಳ ಕಣ್ಣುಗಳಲ್ಲಿ ನೀರಿದೆ! ಆದರೆ ಇಷ್ಟು ಆಳ ತೋಡಿದ ಬಾವಿಯಲ್ಲಿ ತೊಟ್ಟೂ ನೀರಿಲ್ಲ. ಬಾವಿ 'ಅಮ್ಮ'ನಂತೆ ಅನ್ನಿಸಿ ಮತ್ತಿಷ್ಟು ಬೇಸರ ಉಕ್ಕುತ್ತದೆ.

ನಿಜಕ್ಕೂ ನನ್ನ ಮನಸ್ಸು ಬಯಸುವುದೇನು? ಗಿರಿಗಾಗಿ ಅಮ್ಮ ಇನ್ನಷ್ಟು ಅಳಬೇಕೆಂದೇ? ಅವಳು ಕೂಗಾಡಲಿ, ಚೀರಾಡಲಿ ಎಂದೇ? ಆಗ ಏನಾಗುತ್ತದೆ? ಗಿರಿ ಮರಳಿ ಬರುತ್ತಾನೆಯೇ? ಅಥವಾ ತೋಡಿದ ಬಾವಿಯಲ್ಲಿ ನೀರು ಬರುತ್ತದೆಯೇ? ನಾನೂ ಗಿರಿಗಾಗಿ ಅಳಲಿ ಅಥವಾ ಮದುವೆಗಾಗಿ ಹಂಬಲಿಸಲಿ ಎಂದು ಅಮ್ಮ ನಿರೀಕ್ಷಿಸುತ್ತಾಳೆಯೆ?

ಆದರೆ ಮನಸ್ಸು ಜಡಗೊಂಡಿದೆಯೆಂದರೂ... ವಾಸು ತನ್ನ ಮನಸ್ಸನ್ನು ಅರಳಿಸಿದ್ದ. ಅದೇ ವಾಸು ಆಫೀಸಿಗೆ ತಿಂಗಳಿಗೊಮ್ಮೆ ಭೇಟಿ ನೀಡುವಾಗ, ತನ್ನ

ಕಚೇರಿ ಕಾರ್ಯಗಳ ತುರುಸಿನಲ್ಲೂ, ಜಳಜಳನೆಂದು ಮಾತನಾಡುವ ಚಿಗುರಿನಂತಹ ಹುಡುಗ ನೇರ ಜೀವವಾಯುವನ್ನು ಹೃದಯಕ್ಕೇ ಹರಿಬಿಡುತ್ತಾನೆ. ನನ್ನಂಥ, ಮಾಧವಿ ಗೋಡ್ಸೆಯಂತಹ ಸತ್ತ ಹುಡುಗಿಯ ಬಗ್ಗೆ ಅವನಿಗೆಷ್ಟು ಆಸಕ್ತಿ! ಆ ಆಸಕ್ತಿ ತನಗೂ ಇಷ್ಟವಾಗುವುದಿಲ್ಲವೇ? ಆದರೆ ಅದಕ್ಕಿಂತ ಹೆಚ್ಚಿನದ್ದು ಪ್ರಾಯಶಃ ಮದುವೆ? ಅದು ಉಸಿರುಗಟ್ಟಿಸಲಾರದೇ? ಹಾಗೆಂದೇ ಅಲ್ಲವೇ ಅಮ್ಮ ಮದುವೆಯಾಗಲು ಸಿದ್ಧಳಾಗು ಎಂದದ್ದು ಮತ್ತು ತಾನು ಆ ಮಾತಿಗೆ ನಿರುತ್ತರಳಾಗಿದ್ದು!

'ದೀದಿ... ಕೇದಾರನಾಥ ಸರ್ ಸಿಕ್ಕಿದ್ದರು' ಮೃದುಲಾ ತಿಳಿಸುತ್ತಾಳೆ.

ಕುಡಿಯುತ್ತಿರುವ ಕಾಫಿ ಉಪ್ಪೆನ್ನಿಸುತ್ತದೆ. ಕೇದಾರನಾಥ ಇವಳ ಈ ಸ್ಥಿತಿ ಕಂಡು ಮರುಕದ ಮಾತುಗಳನ್ನಾಡಿರಬಹುದು. ಆದರೆ ಮೃದುಲಾಳ ಕಣ್ಣುಗಳಲ್ಲಿ ಅದೇ ಮುಗ್ಧ ಪ್ರಾಮಾಣಿಕತೆ. 'ನನ್ನ ವಿಷ್ಯ ಎಲ್ಲ ಗೊತ್ತಾಗಿ ನೊಂದುಕೊಂಡರು' ಮೃದುಲಾ ಒಳ ನಡೆಯುವಾಗ ನನಗೆ ಸೋತಂತೆ ಅನ್ನಿಸುತ್ತದೆ.

'ಮೃದುಲಾ...' ಏನು? ಎಂಬಂತೆ ನಿಂತವಳನ್ನು ಪ್ರಯಾಸದಿಂದ ಕೇಳುತ್ತೇನೆ: 'ಬೇರನೇನೂ ಹೇಳಲಿಲ್ಲವೇ ಅವರು?' ಮೃದುಲಾ ಸಂದಿಗ್ಧತೆಯಿಂದ ತಲೆ ಅಲ್ಲಾಡಿಸುತ್ತಾಳೆ. 'ಇಲ್ಲ ಮಾಧವಿ ದೀದಿ ಬೇರೇನೂ ಹೇಳಲಿಲ್ಲ ಅವರು'. ಅವಳ ಮುಖದಲ್ಲಿ ಪ್ರಶ್ನೆಗಳು.

'ಮಠದಲ್ಲಿ ಕೀರ್ತನೆ ಉಂಟಂತೆ ಮಾಧವಿ. ಹೋಗಿ ಬರುತ್ತೇನೆ' ಅಮ್ಮ ಮೃದುಲಾಳೊಂದಿಗೆ ಹೊರಟು ನಿಲ್ಲುತ್ತಾಳೆ.

ವಿಶೇಷವಾಗಿ ಅಮ್ಮ ಈ ದೇವಸ್ಥಾನ, ಕೀರ್ತನೆ ಎಂದು ಹಚ್ಚಿಕೊಂಡಿದ್ದು ಕಡಿಮೆಯೇ. ಇವತ್ತೇನು ಹೊರಟಿದ್ದು? ಗಿರಿ ಮರಳಿ ಬರಲೆಂದು ದೇವರಲ್ಲಿ ಕೇಳಿಕೊಳ್ಳಲೇ? ಅಥವಾ ಮೃದುಲಾಳ ಮನಸ್ಸಿಗೆ ಒಂದಿಷ್ಟು ನೆಮ್ಮದಿ ಒದಗಿಸಲು? ಗಿರಿ ಮನೆ ಬಿಟ್ಟಾಗಿನಿಂದ ಅಮ್ಮ ದೇವರು, ಆಧ್ಯಾತ್ಮಿಕದತ್ತ ವಾಲುತ್ತಿದ್ದಾಳೆಯೇ? ಯಾವುದನ್ನೂ ಸಹಜವಾಗಿ ಸ್ವೀಕರಿಸಲಾಗದು.

'ತೋಡ್ತಾ ಇರೋ ಬಾವೀಲಿ ನೀರು ಕಾಣಿಸು ಅಂತ ನಿನ್ನ ದೇವರಲ್ಲಿ ಬೇಡ್ಕೊಂಡು ಬಾ' ಎಂದು ಅಮ್ಮನ ಬಳಿ ಹೇಳಿದೆ. ಮೃದುಲಾ ಈ ಮಾತಿಗೆ ತುಸು ನಕ್ಕಳು. ನಾನಾದರೋ ಹತಾಶೆಯಿಂದಲೇ ಹೇಳಿದ್ದೆ. ಈ ಬಾವಿಯ ಕೆಲಸ ಮುಗಿದರೆ ಸಾಕಾಗಿತ್ತು.

ಮೃದುಲಾ ಮತ್ತು ಅಮ್ಮ ಹೊರಟು ಹೋದ ಮೇಲೆ, ಆಫೀಸಿಗೆ ರಜೆಯಿದ್ದ ಪ್ರಯುಕ್ತ ಇಡೀ ಮನೆಗೆ ಒಂಟಿಯಾದೆ. ಅಮ್ಮ ಮಲಗುವ ಕೋಣೆಯಿಂದ ಬಾವಿಯ ಕೆಲಸ ಸರಿಯಾಗಿ ಕಾಣುತ್ತದೆ. ಕಿಟಕಿಯ ಬಳಿ ನಿಂತೆ. ಬಾವಿ ತೋಡುವ ಕಾರ್ಯ ನಡೆದಿರುವತ್ತ ಕಣ್ಣು ಕೀಲಿಸಿದವು.

ಒರತೆಯೇ ಇಲ್ಲದ ಮೇಲೆ ನೀರೆಲ್ಲಿಂದ ಸಿಕ್ಕೀತು? ಆದರೂ ಅಮ್ಮನಿಗೆ ಭರವಸೆಯಿದೆ! ತೋಡಿರುವ ಬಾವಿಯ ಅಕ್ಕ-ಪಕ್ಕ ಇನ್ನೊಂದೆರಡು ಅಡಿ ಅಗಲ ತೋಡುವಂತೆ ತಿಳಿಸಿದ್ದಾಳೆ.

ಫಕ್ಕನೇ ನೆನಪಾಯಿತು, ಗಿರಿ ಮನೆ ಬಿಟ್ಟು ಇಂದಿಗೆ 22 ದಿನಗಳು. ಎಲ್ಲಿರಬಹುದು ಗಿರಿ? ಮೃದುಲಾ ಅವನು ಏನಾದರೂ ಬರೆದಿಟ್ಟು ಹೋಗಿರಬಹುದೆಂದು ಅವನ ಎಲ್ಲ ವಸ್ತುಗಳನ್ನೂ ತಡಕಾಡಿದ್ದಳು. ಅಪ್ಪನೂ ಮನೆ ಬಿಟ್ಟು ಹೋಗುವಾಗ ಏನೂ ಬರೆದಿಟ್ಟು, ಯಾರಿಗೂ ತಿಳಿಸಿ ಹೋಗಲಿಲ್ಲವಲ್ಲ. ಆದರೆ ಗಿರಿಯ ಚೀಲದಲ್ಲಿ ಸಿಕ್ಕ ಕಾವಿ ವಸ್ತುಗಳು, ಮಣಿ ಸರಗಳು... ಅವನ ಮಾನಸಿಕ ಸಿದ್ಧತೆಯ ಕುರುಹಾಗಿ ತೋರಿದ್ದವು.

ಉಂಡಾಡಿ ಅಲೆಯುವವನಿಗೆ ಈ ಗೀಳು ಹೇಗೆ ಹತ್ತಿತ್ತು?

ಅಮ್ಮ ಮಲಗುವ ಮಂಚದಡಿ ಪೇರಿಸಿಟ್ಟ ಕಬ್ಬಿಣದ ಪೆಟ್ಟಿಗೆಗಳು. ಅವುಗಳನ್ನೊಮ್ಮೆ ತೆರೆದು ನೋಡುವಾ ಅನ್ನಿಸಿತು. ಪ್ರಾಯಶಃ ಗಿರಿಯ ಚೀಲಗಳಿಂದ ಹೊರಬಿದ್ದ ಕಾವಿ ವಸ್ತ್ರ, ಸರಗಳನ್ನು ಅಮ್ಮ ಮೃದುಲಾಳಿಂದ ಪಡೆದು ಇದೇ ಪೆಟ್ಟಿಗೆಯಲ್ಲಿಟ್ಟಿದ್ದಾಳೆ.



ಪೆಟ್ಟಿಗೆಗಳ ತುಂಬ ಹಳೆಯ ಸಾಮಾನುಗಳು, ಅಮ್ಮನಿಗೆ ಸೇರಿದ ವಸ್ತುಗಳು, ಅಪ್ಪನ ಷರ್ಟು, ಪಂಚೆ, ಹಳೆಯ ಕನ್ನಡಿ, ಅಪ್ಪನ ನೆನಪುಗಳು... ಅಪ್ಪ-ಅಮ್ಮನ ಮದುವೆಯ ಫೋಟೋ. ಅಪ್ಪ ಫೋಟೋದಲ್ಲಿ ನಗುತ್ತಿದ್ದ. ಆ ನಗು ಅವನ ನೀಳ ನಾಸಿಕದಿಂದ ಪಸರಿಸಿ ವಿಶಾಲ ಹಣೆಯ ನರಗಳಿಂದ ಹರಡಿ ಪೆಟ್ಟಿಗೆಯ ತುಂಬ ತುಂಬಿಕೊಂಡಿತ್ತು. ಲಗುಬಗನೇ ಎಲ್ಲವನ್ನೂ ಒಪ್ಪವಾಗಿ ಜೋಡಿಸಿದೆ. ಗಿರಿಯ ವಸ್ತುಗಳೇನೂ ಸಿಗಲಿಲ್ಲ. ಪೆಟ್ಟಿಗೆಗಳನ್ನು ಮುಚ್ಚಿಟ್ಟೆ. ತೀರ ಅಡಿಯಲ್ಲಿದ್ದ ಸಾಮಾನುಗಳನ್ನು ತುಂಬಿಸಿದ್ದ ಟ್ರಂಕಿನಲ್ಲಿನ ಪುಟ್ಟ ಗಂಧದ ಪೆಟ್ಟಿಗೆಯನ್ನು ತೆರೆದು ನೋಡುವ ಆಸಕ್ತಿಯಿಲ್ಲದೇ ಅಲಕ್ಷಿಸಿದ್ದವಳು ಈಗ ಮೆಲ್ಲನೇ ಪೆಟ್ಟಿಗೆ ತೆರೆದರೆ... ಅಮ್ಮನ ಮದುವೆಯ ಎರಡು ಬಳೆ, ಒಂದು ತೆಳ್ಳಗಿನ ಸರ, ಅದರಡಿಯಲ್ಲಿ ಕಂದು ಲಕೋಟೆಯಲ್ಲಿ ಒಂದು ಹಳದಿ ಪತ್ರ. ಕಿಟಕಿಯ ಬೆಳಕಲ್ಲಿ ನಿಂತು ಓದಲೆತ್ನಿಸಿದೆ. ಜೀರ್ಣವಾದ ಪತ್ರದಲ್ಲಿ ಮಸಿ ಹರಡಿದ ಅಕ್ಷರಗಳು. ಇದನ್ನೇಕೆ ಅಮ್ಮ ಇಷ್ಟು ಜೋಪಾನ ಮಾಡಿದ್ದಾಳೆ? ಪ್ರಾಯಶಃ ಅಪ್ಪ ಹೊರಟುಹೋದ ನಂತರ ಬರೆದ ಪತ್ರ?

ಪ್ರೀತಿಯ ಉಮಾ,

ನಿನ್ನ ಪತ್ರ ತಲುಪಿದೆ. ಉಮಾ, ನನಗೆ ನಿನ್ನ ಅಸಹಾಯಕತೆ ಅರ್ಥವಾಗುತ್ತದೆ. ಆದರೆ... ನಮ್ಮ ಪ್ರೀತಿ, ನಮ್ಮ ಮೈತ್ರಿ, ಮನೆಯವರ ಕಣ್ಣು ತಪ್ಪಿಸಿ ಒಬ್ಬರನ್ನೊಬ್ಬರು ನೋಡಲು ಕಾತರಿಸುತ್ತಿದ್ದ ಆ ಭೇಟಿಗಳು... ನಾವಿಬ್ಬರೂ ಜೊತೆಯಾಗಿ ಕಂಡ ಕನಸುಗಳಿಗೆಲ್ಲ ಹೀಗೆ ಹೇಗೆ ಪೂರ್ಣವಿರಾಮ ಇಡುವುದು? ಅದು ಅಷ್ಟು ಸುಲಭವಲ್ಲ.

ಉಮಾ, ಹಿರಿಯರ ಮನಸ್ತಾಪ ನಮ್ಮ ಪ್ರೀತಿಗೆ ಕೊನೆಗೂ ಮುಳ್ಳಾಯಿತು. ಆದರೆ ಇದೆಲ್ಲ ಗೊತ್ತಿದ್ದೂ ನಾವು ಪ್ರೀತಿಸಿದೆವಲ್ಲ! ನಾನಂದು ನಿನಗೆ ಹೇಳಿದ್ದು ನೆನಪಿದೆಯೇ? ಈಗಲೂ ನೀ ಎಲ್ಲ ತೊರೆದು ಬಂದರೆ ನಾವು ಒಟ್ಟಿಗೆ ಬದುಕಬಹುದು. ಆದರೆ ನೀನು ಬರುವುದಿಲ್ಲ ಎಂದೂ ನನಗೆ ಗೊತ್ತು. ನೀ ಪತ್ರದಲ್ಲಿ ಬರೆದಿರುವಿ 'ಹಿರಿಯರ ಮನಸ್ಸು ನೋಯಿಸಿ ಅವರ ಶಾಪದಿಂದ ನಾವೆಂದೂ ಸುಖವಾಗಿ ಬದುಕುವುದಿಲ್ಲ' ಎಂದು.

ಆದರೆ ಈ ಮದುವೆಯಿಂದ ನೀನು ಸುಖಿಯಾಗಿರಬಲ್ಲೆಯಾ? ಉಮಾ, ನನ್ನ ಹೃದಯಲ್ಲಿ ಯಾವತ್ತಿಗೂ ನೀನೇ ಇರುವಿ. ನೀನು ಹೊಸ ಬದುಕಲ್ಲಿ ಸುಖವಾಗಿ ಬದುಕಿದರೆ ನಾನೂ ಸುಖಿ. ನಿನಗೆ ನನ್ನೆಲ್ಲ ಶುಭ ಹಾರೈಕೆಗಳು.

ನಿನ್ನ ಸದೂ


ಪತ್ರವನ್ನು ಅಷ್ಟೇ ನಿಧಾನವಾಗಿ ಮಡಚಿ ಲಕೋಟೆಯಲ್ಲಿರಿಸಿ ಪೆಟ್ಟಿಗೆಯಲ್ಲಿಟ್ಟೆ. ಸದೂ... ಅಮ್ಮನ ಅತ್ತೆಯ ಮಗ. ಮದುವೆಯಾಗಿ ಮಕ್ಕಳು ದೊಡ್ಡವರಾದ ನಂತರ ಇತ್ತೀಚೆಗಷ್ಟೇ ತೀರಿಕೊಂಡನಲ್ಲ. ಸದೂ ಮತ್ತು ಅಮ್ಮ ಒಬ್ಬರನ್ನೊಬ್ಬರು ಪ್ರೀತಿಸಿದ್ದರೇ?! ಈವರೆಗೆ ಅರಿಯದ ರಹಸ್ಯ.

ಅಮ್ಮನ ನಿರ್ವಿಕಾರ ಮುಖ ಕಣ್ಣೆದುರು ಬಂತು. ಮನಸ್ಸು ಸ್ಥಿಮಿತಕ್ಕೆ ಬಂದಂತಾಗುತ್ತಿತ್ತು. ಅಮ್ಮ ಯಾರನ್ನೋ ಮದುವೆಗೆ ಮುನ್ನ ಪ್ರೀತಿಸಿದ್ದಳು! ಅಮ್ಮನ ಅಂತರ್ಯದಲ್ಲಿ ಪ್ರೀತಿಸಬಲ್ಲ ಗುಪ್ತ ಭಾವಗಳಿವೆ! ವರ್ತಮಾನಕ್ಕೆ ಯಾವುದೇ ಬಗೆಯಲ್ಲೂ ಸಲ್ಲದ ಈ ಅಮುಖ್ಯವೆನ್ನಿಸುವಂತಹ ಸಂಗತಿ ನನ್ನನ್ನು ವಿಚಿತ್ರವಾಗಿ ನಿರಾಳಗೊಳಿಸುತ್ತಿತ್ತು.

ಮೃದುಲಾ ಕೀರ್ತನೆಯಿಂದ ಮರಳಿ ಬಂದ ನಂತರದಿಂದ ತುಂಬ ಮೌನಿಯಾಗಿದ್ದನ್ನು ಗಮನಿಸಿದೆ. ಒಂದಿನ 'ಮಾಧವಿ ದೀದಿ ಆ ಏರಿನವರೆಗೆ ಹೀಗೇ ಹೋಗಿಬರುವಾ?' ಎಂದು ಕೇಳಿದಳು. ಮೃದುಲಾಳಿಗೆ ಏನೋ ಮಾತನಾಡಲಿಕ್ಕಿತ್ತು. ಅದನ್ನು ಇಲ್ಲಿಯೇ ಹೇಳಬಹುದು. ಆದರೇಕೋ ಹಿಂಜರಿಯುತ್ತಿದ್ದಳು. ನಾವಿಬ್ಬರೂ ಮೆಲ್ಲನೆ ನಡೆದವು, ಮೌನವಾಗಿ. ರಸ್ತೆ ಮಧ್ಯದಲ್ಲೇ ಮೃದುಲಾ ನನ್ನೆರಡು ಕೈಗಳನ್ನು ಹಿಡಿದು ಬಿಕ್ಕಿದಳು.

'ಮಾಧವಿ ದೀದಿ... ಆ ದಿನ ಮಠದಲ್ಲಿ ಕೀರ್ತನೆ ಕೇಳಲು ಹೋದೆವಲ್ಲ, ದೀದಿ... ಆ ಸ್ವಾಮಿಗೆ ಎಡಗೆನ್ನೆಯ ಮೇಲೆ, ಕಣ್ಣಿನ ಕೆಳಗೆ ಅದೇ ಮಚ್ಚೆ... ಮತ್ತು ಅದೇ ನೀಳ ಮೂಗು...' ಮೃದುಲಾ ಉದ್ವೇಗದಿಂದ ಕಂಪಿಸುತ್ತ ಅತ್ತೇ ಬಿಟ್ಟಳು.

'ಮೃದುಲಾ ಇದೆಂಥ ಹುಚ್ಚು ನಿಂಗೆ? ಕೆನ್ನೆ ಮೇಲೆ ಮಚ್ಚೆ, ನೀಳ ಮೂಗಿರುವವರು ನಮ್ಮ ಕಚೇರಿಯಲ್ಲೂ ಇದ್ದಾರೆ. ಸುಮ್ನೇ ಭಾವಾತಿರೇಕದಿಂದ ಹೊಸ ಸಮಸ್ಯೆಗಳನ್ನು ಕಲ್ಪಿಸಿಕೊಳ್ಳಬೇಡ' ಬಿರುಸಾಗೆಂದೆ.




ಮೃದುಲಾ ಏರಿನ ತುದಿಯಲ್ಲಿನ ಅಶ್ವಥ ಮರದ ಕಟ್ಟೆಯ ಕೆಳಗಿನ ಕಲ್ಲಿನ ಮೇಲೆ ಕೂತು ತುಂಬ ಹೊತ್ತು ಬಿಕ್ಕಿದಳು. ನಾನು ಮಾತ್ರ ಅಮ್ಮ ಮತ್ತು ಸದೂ ಮದುವೆಯ ನಂತರ ಅಪರಿಚಿತರಂತೆ, ತಮ್ಮ ಪ್ರೇಮವನ್ನು ತೋರ್ಪಡಿಸದೇ ಬದುಕಿದ್ದರ ಬಗ್ಗೆ ಯೋಚಿಸುತ್ತಿದ್ದೆ.

'ಮಾಧವಿ ದೀದಿ... ಪ್ರಸಾದ ತೆಗೆದುಕೊಳ್ಳುವಾಗಲೂ ನಾನು ನೋಡಿದೆ. ಸ್ವಾಮೀಜಿಯ ಕಾಲಲ್ಲಿ ಆರು ಬೆರಳುಗಳು!' ಮೃದುಲಾ ಯಾವುದೋ ಸತ್ಯವನ್ನು ಖಚಿತಪಡಿಸಿ ಕೊಂಡಿದ್ದಾಳೆ. ತನ್ನ ಕಾಲಿನ ಆರು ಬೆರಳುಗಳನ್ನು ಸವರುತ್ತ 'ದೀದಿ, ಸ್ವಾಮೀಜಿ ನಾಡಿದ್ದು ಹೊರಟು ಹೋಗುತ್ತಾರಂತೆ. ನಾಳೆ ನೀನು ಬರುವಿಯಾದರೆ ಹೋಗೋಣವೇ?' ಕೇಳಿದಳು

'ಮೃದುಲಾ, ಅಮ್ಮ ಏನಾದ್ರೂ ಹೇಳಿದ್ಲಾ?' ನನ್ನ ಧ್ವನಿಯಲ್ಲಿ ಆತಂಕ ತುಂಬಿತ್ತು. 'ಇಲ್ಲ. ಆದರೆ ನಂಗೊತ್ತು. ಅಮ್ಮನಿಗೂ ತಿಳಿದುಹೋಗಿದೆ. ಅವಳು ನನ್ನ ಮುಂದೆ ಏನೂ ತೋರ್ಪಡಿಸಲಿಲ್ಲ. ನಾನೂ ಅಷ್ಟೇ ಗೊತ್ತಿಲ್ಲದವಳಂತೇ ಇದ್ದು ಬಿಟ್ಟೆ. ಆದರೆ ಮಾಧವಿ ದೀದಿ ನನಗೆ ಮಾತ್ರ ಇದರಲ್ಲಿ ಸಂಶಯವೇ ಇಲ್ಲ. ನನ್ನ ಹೃದಯ ಅಪ್ಪನನ್ನು ಗುರುತಿಸಿದೆ ಮಾಧವಿ ದೀದಿ' ಮೃದುಲಾ ಬಿಕ್ಕುತ್ತಲೇ ಮುಗುಳ್ನಕ್ಕಳು. ಯಾವುದೋ ಅಪೂರ್ವ ಸಂತಸವೂ ಅವಳಲ್ಲಿತ್ತು. ದೀದಿ ನೀನು ಬರುತ್ತೀಯಾ? ಇನ್ನೊಮ್ಮೆ ಪ್ರಶ್ನಿಸಿದಳು. 'ಇಲ್ಲ ಮೃದುಲಾ ನನಗೆ ಆಸಕ್ತಿಯಿಲ್ಲ' ಸ್ಪಷ್ಟವಾಗೆಂದೆ. ಬದುಕು ನಾಟಕೀಯ ತಿರುವು ಪಡೆಯುತ್ತಿದೆ ಎನ್ನಿಸಿತು. ಮೌನವಾಗಿ ಮರಳಿದೆವು. ಅಮ್ಮ ಬಾಗಿಲಲ್ಲೇ ಕಾದಿದ್ದವಳು ಸಂತಸದ ಧ್ವನಿಯಲ್ಲೆಂದಳು: 'ಮಾಧವೀ, ಬಾವಿಯಲ್ಲಿ ನೀರು ಬಂದಿದೆ!' ಮೃದುಲಾ ಹಿತ್ತಲಿತ್ತ ಓಡಿದಳು. ನಾನು ಅಮ್ಮನನ್ನೇ ದಿಟ್ಟಿಸಿದೆ. ಪ್ರಸನ್ನವಾಗಿದ್ದಳು. ಭೂಮಿಯಡಿ ಒರತೆ ಇಲ್ಲದೇ ಹೋದಿತೇ? ಅಮ್ಮನ ಭರವಸೆ ನಿಜವಾಗಿತ್ತು.

ಮೃದುಲಾ ಕಾಲೇಜಿಗೆ ಅಲೆಯುತ್ತಿದ್ದಳು. ಮಾಧವಿ ದೀದಿ... ಕಾಲೇಜಿನಲ್ಲಿ ತಾತ್ಕಾಲಿಕ ಉಪನ್ಯಾಸಕಿ ಹುದ್ದೆಯೊಂದು ತೆರವಾಗಿದೆ. ಕೇದಾರನಾಥ ಆಡಳಿತ ಮಂಡಳಿಯಲ್ಲಿ ನನ್ನ ಹೆಸರು ಶಿಫಾರಸು ಮಾಡಿದ್ದಾರೆ, ನಾನಲ್ಲಿ ಹೋಗಲೇ?

ಅವಳ ಅಂಕಪಟ್ಟಿ ಪ್ರಭಾವಶಾಲಿಯಾಗೇ ಇದೆ. ಕೇದಾರನಾಥ ಇವಳಿಗೆ ನೆಲೆ ಒದಗಿಸಲು ಶ್ರಮಿಸಿದ್ದಾನೆ. ಸಮಸ್ಯೆಗಳು ಹರಿದು ಹೋಗುವ ಕಾಲವೇ? ಎನ್ನಿಸಿ ನಗು ಬಂತು. ಗಂಡನೆಂಬಾತನಿಂದ ಪಡಬಾರದಷ್ಟು ಹಿಂಸೆ ಅನುಭವಿಸಿ ಸೋತಿದ್ದಾಳೆ. ಆ ಕಣ್ಣುಗಳಲ್ಲಿ ನೆಲೆ ಕಾಣುವ ಮುಗ್ಧ ಆಸೆ!



'ನಿನಗಿಷ್ಟವಿದ್ದರೆ ಖಂಡಿತ ಹೋಗು' ಆರ್ದ್ರವಾಗೆಂದೆ.

'ಬಾವಿಯಲ್ಲಿ ನೀರು ಬಂದ ಹೊತ್ತು ಒಳ್ಳೆಯದಿದೆ' ಅಮ್ಮ ತಟಕ್ಕನೆ ಹೇಳಿದಳು. ಅವಳ ಮುಖದಲ್ಲಿ ಸಂತಸ, ನೋವಿನ ಸಮ್ಮಿಶ್ರಭಾವ.

ಬದುಕು ತೀರ ನಾಟಕೀಯವಾಗಿ ಸುಖದ ಪರದೆಗಳನ್ನು ಇಳಿಬಿಡುತ್ತಿದೆ ಎನ್ನಿಸಿದ್ದು ಗಿರಿ ರಾತ್ರಿಯ ಸರಿ ಹೊತ್ತಲ್ಲಿ ಬಂದು ಬಾಗಿಲು ತಟ್ಟಿದಾಗ.

ಬಾಗಿಲು ತೆರೆದ ಅಮ್ಮ ಕಕ್ಕಾಬಿಕ್ಕಿಯಾಗಿ, ಕೊನೆಗೆ ಪ್ರಯಾಸದಿಂದ ಮಾಧವೀ... ಎಂದು ಕರೆದಿದ್ದಳು. ನನಗಿಂತ ಮೊದಲೇ ಎದ್ದು ಬಂದಿದ್ದ ಮೃದುಲಾ ಗಿರಿಯ ಹೆಗಲಿಗೆ ಜೋತುಬಿದ್ದು ಅಳುತ್ತಿದ್ದಳು. ಗಿರಿ ಏನೂ ಮಾತನಾಡಲಿಲ್ಲ. ಆ ರಾತ್ರಿ ನಮ್ಮ ನಿದ್ರೆ ಹಾರಿಹೋಗಿತ್ತಾದರೆ, ಗಿರಿ ತಣ್ಣಗೆ ಗಾಢ ನಿದ್ರೆಗೆ ಜಾರಿದ್ದ.

ಮತ್ತೆ ನಾಲ್ಕಾರು ದಿನಗಳು ಸರಿದವು. ಮನೆಯಲ್ಲಿ ತುಂಬಿದ ಆತಂಕ, ಉದ್ವಿಗ್ನತೆಯಲ್ಲಿ ಮೃದುಲಾಳ ಬಿಕ್ಕುಗಳ ಶಬ್ದವಿರದೇ ಹೋದರೆ ಭಯದಿಂದ ಸಾಯುವಷ್ಟು ಮೌನ. 'ಮಾಧವಿ ದೀದಿ ನನಗೆ ಹಿಮಾಲಯದ ನಿಶ್ಶಬ್ದದಲ್ಲೂ ಯಾವುದನ್ನೂ ಮರೆಯಲಾಗಲೇ ಇಲ್ಲ. ಮನಸ್ಸು ಅಲ್ಲೆಲ್ಲೂ ನಿಲ್ಲಲಿಲ್ಲ ದೀದಿ... ನಾ ಹಾಗೆ ಹೋಗಿದ್ದು ಒಳ್ಳೆಯದೇ ಆಯಿತು. ಇಲ್ಲದಿದ್ರೆ ಮತ್ತೆಂದೂ ಮರಳುತ್ತಿರಲಿಲ್ಲ...' ಗಿರಿ ತಣ್ಣಗೆ ನುಡಿದ.


'ನಾವೆಷ್ಟು ಹೆದರಿದ್ದೆವು. ನೀನೂ...' ಮೃದುಲಾ ಅರ್ಧಕ್ಕೇ ನಿಲ್ಲಿಸಿದಳು. ಅರೆ ಘಳಿಗೆ ನಂತರ 'ಅಂತೂ ಬಂದಿಯಲ್ಲ ಗಿರಿ...' ಎಂದು ಮೈಮರೆತು ನಕ್ಕಳು. ಮೃದುಲಾಳ ನಗುವಿನಲ್ಲಿ ಅಪ್ಪ ನೆನಪಾಗತೊಡಗಿದ. ಅವಳ ನಗು ಆಪ್ಯಾಯಮಾನವೆನಿಸಿತು. ಆ ನಗುವನ್ನು ಕಣ್ತುಂಬಿಕೊಳ್ಳುತ್ತ ಕುಳಿತೆ.

ಮಾಧವಿ ದೀದಿ ಸ್ವಲ್ಪ ಹಣ ಬೇಕು... ಗಿರಿ ಕೈಯೊಡ್ಡಿ ನಿಂತಿದ್ದ.

ಏಕೆ? ಶಬ್ದ ಗಂಟಲ್ಲೇ ತೂರಿತು. 'ಒಂದಿಷ್ಟು ತೆಂಗಿನ ಸಸಿ ತರಬೇಕೆಂದಿದ್ದೇನೆ. ಹಿತ್ತಲಲ್ಲಿ ನೆಡಲು. ಇನ್ನು ಬಾವಿಯಲ್ಲಿ ನೀರು ಬಂತಲ್ಲ...'

ನೋಟುಗಳನ್ನು ಗಿರಿಯ ಕೈಯಲ್ಲಿಡುವಾಗ ಉದ್ವೇಗದಿಂದ ಬೆರಳುಗಳು ಕಂಪಿಸುತ್ತಿದ್ದವು.







ಸಂಜಿ ಐದುವರೆಗಂಟೆ ಆಯಿತ್ತಂದ್ರೆ, ಸಾಕು, ಗೋಪಾಲರಾಯರು, ಕೋಟು, ಕರಿಟೊಪ್ಪಿಗೆ ಧರಿಸಿಕೊಂಡು ಪಾರ್ಕಿಗೆ ಹೊರಟೇಬಿಡುತ್ತಿದ್ದರು. ರಿಟೈರಾದ ಮೇಲೆ ಅವರ ದಿನನಿತ್ಯದ ಟಾಯಿಮ ಟೇಬಲ್ ಬದಲಾಗಿತ್ತು. ಬೆಳಗ್ಗೆ ಯಥಾ ಪ್ರಕಾರ ಆರು ಗಂಟೆಗೆ ಏಳುವುದು, ಮುಖಮಾರ್ಜನ ಮಾಡಿಕೊಂಡು ಒಂದು ಕಪ್ಪ ಟೀ ಕುಡಿಯೋದು, ಆನಂತರ 'ಸಂಯುಕ್ತ ಕರ್ನಾಟಕ'ದ ಪುಟ ತಿರುವುದು, ನಂತರ ಶೇವ ಮಾಡಿಕೊಂಡು ಜಳಕ ಮಾಡಿ ವರಾಂಡಾಕ್ಕೆ ಬಂದು ಆರಾಮ ಕುರ್ಚಿಯಲ್ಲಿ ಕೂಡ್ರುವದು. ಅಷ್ಟೊತ್ತಿಗೆ ಸೊಸೆ ಮತ್ತೊಮ್ಮೆ ಚಹಾ ತಂದು ಕೊಡುವದು, ಚಹಾ ಕುಡಿದು ಕಪ್ಪ ಕೆಳಗಿಡುವಷ್ಟರಲ್ಲಿಯೇ ಬಿಂದೂರಾವ ಬರೋದು. ಬಿಂದೂರಾವ ಅಂದರೆ ಇವರ ಗೆಳೆಯರು, ಸುಮಾರು ಗೋಪಾಲರಾಯರ ವಯಸ್ಸಿನವರೆ. ಅವರು ಕರೋಡಗಿರಿಯಲ್ಲಿ ಮುವತ್ತೆರಡು ವರ್ಷ ಕಾರಕೂನಕಿ ಮಾಡಿ ರಿಟೈರ್ ಆದವರು. ಕರೋಡಗಿರಿ, ಅಂದಮೇಲೆ ಸಾಕಲ್ಲ-ಸಾಕುಬೇಕಾದಷ್ಟು ಸಂಪಾದನೆ.

ಎಂದಿನಂತೆ ಇಂದೂ ಬಿಂದೂರಾವ ಬಂದರು. ಅವರ ದಾರಿಯನ್ನೇ ಕಾಯುತ್ತ ಕುಳಿತಿರುವ ಗೋಪಾಲರಾಯರು, ಎಂದಿನಂತೆ 'ಬರ್ರಿ' ಅಂದರು. ಬಿಂದೂರಾವ ಬಂದಿದ್ದೆ ಎದರಿದ್ದ ಪ್ಲಾಸ್ಟಿಕ್ ಕುರ್ಚಿಯ ಮೇಲೆ ಕುಳಿತುಕೊಂಡು-'ರಾಯರ ಈ ದರಿದ್ರ ಪ್ಲಾಸ್ಟಿಕ್ ಕುರ್ಚಿ, ನಿಮ್ಮ ಜಮಖಾನಿ ಬಟ್ಟೆಯ ಆರಾಮ ಕುರ್ಚಿ, ಬದಲಾಸಿ ಬಿಡ್ರೆಪ. ಭರ್ಜರಿ ಸೋಫಾ ಸೆಟ್ಟ್ ಹಾಕಿಸಿ ಬಿಡ್ರಿ' ಎಂದರು. ನಿಮ್ಮಹಾಂಗs ನಾನೂ ಕರೋಡಗಿರಿವಳ್ಗ ಇದ್ದಿದ್ನಂದ್ರ ಸೋಫಾಸೆಟ್ಟ್ ಹಾಕ್ತಿದ್ನರೆಪಾs. ಆದ್ರ ನಮ್ದು ಶಾಳಾಖಾತೆ. ಬೇಯಕಂ ಬೆಯ್ಯಾ, ಬೇದುಗ್ಲಿಚಾರರಂತೆ ಅಖಂಡ ಮುವ್ವತ್ತು ವರ್ಷ ಜಪಾ ಮಾಡಿದವರ



ಚಂದ್ರಕಾಂತ ಕುಸನೂರ

ಅಂಗೈ ಅಗಲು ಆಕಾಶ

ಹಣೆಬರದಾಗ ಸೋಫಾಗೀಫಾ ಎಲ್ಲಿಂದ ಬರಬೇಕು? ಹಾಸ್ಗಿದ್ದಷ್ಟು ಕಾಲಚಾಚ ಬೇಕ್ರೆಪಾ-

ಬಿಂದೂ ರಾವ ಒಂದಿಷ್ಟು ಖಿನ್ನರಾದವರಂತೆ ಮಾಡಿ -'ಖರೆ ಅದ, ನೀವರೆ ಏನ್ಮಾಡೀರಿ. ಭಗವಂತ ಇಟ್ಟಾಂಗ ಇರೋದ್ರೊಳ್ಗ ಸುಖಾ ಇರ್ತದ ನೋಡ್ರಿ, ಗೋಪಾಲರಾಯರ' ಎಂದರು.

ನನ್ನ ಹೆಂಣ್ತಿ ಭಾಗ್ಯದಾ ಲಕ್ಷ್ಮೀ ಬಾರಮ್ಮಾ ಅಂತ ಹಾಡಲಿಕ್ಕಿ ಸುರು ಮಾಡಿ ಏನಿಲ್ಲಂದ್ರೂ, ನಲವತ್ತೈದು ಐವತ್ತ ವರ್ಷಾ ಆಗಿರಬೇಕು ಬಿಂದುರಾಯರ, ಆದ್ರ ಈ ಲಕ್ಷ್ಮೀ ನಮ್ಮ ಮನಿಮುಂದಿದ್ದ ಹಾಯಲಿಲ್ಲ ಸುದ್ಧಾ.'

ಯಾವ ಕಾಲಕ್ಕ ಬರ್ತಾಳು ಯಾರ ಮನೀಗಿ ಬರ್ತಾಳಂತ ಹೇಳಲಿಕ್ಕ ಬರಾಣಲ್ಲ. (ತಡೆದು) ಆಂದ್ಹಾಂಗ ಬಂಡೂರಾಯರ ಮಗಾ ಕಾರ ಖರೀದಿ ಮಾಡ್ಯಾನಂತಲ್ಲ ಕೇಳೀರೇನು ಸುದ್ದಿ?' ಎಂದು ಬಿಂದೂ ರಾಯರು, ಬಂಡೂ ರಾಯರ ಕಡೆಗೆ ದನದ ಬಾಲ ತಿರುವಿದಂತೆ ಮಾತನ್ನ ತಿರುಗಿಸಿದರು. 'ಅಂವಾ ಕಮರ್ಷಿಯಲ್ ಟ್ಯಾಕ್ಸನ್ಯಾಗ ಕೆಲಸ ಮಾಡ್ತಾನ' ಎಂದರು ಗೋಪಾಲ ರಾವ.

ಖಾತೆ ಯಾವದಾದರೇನು ದುಡ್ಡ ಮಾಡೋ ಆರ್ಟ ಗೊತ್ತಿರಬೇಕು' ಬಿಂದೂರಾವ ದುಡ್ಡು ಮಾಡುವದು ಒಂದು ಕಲೆಯೆಂದು ಅಭಿಪ್ರಾಯ ಪಟ್ಟರು. ಈ ಮಾತಿನಿಂದ ಮಾಸ್ತರಕಿ ಮಾಡಿದ ಗೋಪಾಲರಾಯರಿಗೆ ತುಸು ಕೆಟ್ಟೆನಿಸಿದರೂ, ಕಾಲಮಾನಕ್ಕೆ ತಕ್ಕಂತೆ ಅವರ ಮಾತಿನಲ್ಲಿ ಸತ್ಯಾಂಶವಿದ್ದಿದ್ದು ಗೊತ್ತಾಗಿ ಬಿಂದೂರಾವ, ಇದನ್ನು ಕಲೆ ಅಂತೀರ್ಯಾ? ಅಂದರು. ಬಿಂದೂರಾವ 'ಮೂಗಿನುದ್ದಕ್ಕೂ, ಸರಳ ಕೆಲಸಾ ಮಾಡೋದ್ರೊಳ್ಗ ಶಾನೆತಾನೇನು ಬಂತು ಗೋಪಾಲರಾಯಾ? 'ಜಾಣತನದಿಂದ ಸಂಪಾದ್ನೆ ಮಾಡೋದು ಕಲೀಬೇಕಾಗ್ತದ. ಅದೊಂದು ಕಲೆನೇ' ಎಂದರು.

'ಅದಿರಲಿ, ಬಿಂದೂ, ಇವೂತ್ತು ಬಂದಿದ್ದೆ ಬಂದು ನನ್ನ ಕುರ್ಚಿ ಮ್ಯಾಲ ನಿಮ್ಮ ದೃಷ್ಟಿ ಯಾಕ ಬಿತ್ತೂ'? ಎಂದು ಗೋಪಾಲರಾವ ಕೇಳಿದರು.

ಮನ್ಯಾಗಿನ ಆಸನಗಳಂದ್ರ ಅದೊಂದು 'ಸ್ಟೇಟಸ್ ಸಿಂಬಲು'. ಅದು ಭರ್ಜರಿಯಾಗಿದ್ದರ 'ಭಾರಿ ಕುಳಾ' ಅಂತಾರ ಮಂದಿ, ಇಲ್ಲಾಂದ್ರ 'ಅವನ್ಞ ಗೋಪಾಳರಾಯ, ಸಾಲಿ ಮಾಸ್ತರ ಹೌಂದಲ್ಲೋ-' ಅಂತ ದನಿತಗೀತಾರ

'ಈ ವಯಸ್ಸಿನ್ಯಾಗ ಸ್ಟೆಟಸ್ಸೂ ಗಿಟಸ್ಸೂ ತೊಂಗೊಂಡೇನ್ಮಾಡದದ' ಎಂದು ಗೋಪಾಳರಾವ ದನಿ ಎಳೆದರು.

'ಮನುಷ್ಯಾನ ಬಟ್ಟಿ ಬರಿ, ಕುರ್ಚಿ ಟೇಬಲ್ಲೂ, ಮನ್ಯಾಗ ಗಾಡಿ ಸ್ಕೂಟರಗಳಿಂದಲೇ ಕಿಮ್ಮತ್ ಕಟ್ಟೋದು!' ಬಿಂದೂ ರಾಯರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳುವ ರೀತಿಯಲ್ಲಿ ಹೇಳಿದರು.

'ಇರಲಿ ಬಿಡ್ರಪಾ, ಇವೆಲ್ಲ ನಿಮ್ಮ ಐವತ್ತಿನ ಮಾತಿದ್ರ ವಿಚಾರ ಮಾಡಬೇಕು. ಇಲ್ಲಾಂದ್ರ ಖಾಲಿ ಫೈಜೂಟ ಮಾಡಾದ್ರೊಳ್ಗ ಏನಿರ್ತದ' ಎಂದು ಒಂದೇ ಪೆಟ್ಟಿನಲ್ಲಿ ಬಿಂದೂರಾಯರ ವಿಷಯಕ್ಕೆ ವಿದಾಯ ಹೇಳಿದರು.

ಬಿಂದೂರಾಯರು ತಮ್ಮ ಡ್ರಾಯಿಂಗ ರೂಮಿಗೆ, ರೋಜ ಉಡ್ಡಿನ ಹೊಸ ಸೋಫಾಸೆಟ್ಟೊಂದನ್ನು ಒಂದು ವಾರದ ಹಿಂದಷ್ಟೇ ಖರೀದಿಸಿದ್ದರು. ಈ ವಿಷಯವನ್ನು ಗೋಪಾಲರಾಯರಿಗೆ ಹೇಳಿ ಹಗುರಾಗಬೇಕೆಂದು ನಾಲ್ಕಾರು ದಿನಗಳಿಂದ ಚಡಪಡಿಸುತ್ತಿದ್ದರು. ಸುಮ್ಮನೆ ಬಡಿವಾರ ಹೇಳಿಕೊಂಡರೆ? ಎಂದು ಒಳೊಳಗೇ ವಿಚಾರ ಮಾಡಿ ಸುಮ್ಮನಿದ್ದರಾಯಿತೆಂದು ಎಷ್ಟು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. 'ಗೋಪಾಲರಾವ ಭಾಳ ದಿವಸಾಯ್ತು ನಮ್ಮ ಮನಿಕಡೀಗಿ ಹಾಯ್ದೇಯಿಲ್ಲ. ಇವೂತ್ತು ಸಂಜೆನ್ಯಾಗ ಚಹಾಕ್ಕ ನಮ್ಮಲ್ಲಿ ಬಂದ ಬಿಡ್ರಿ' ಎಂದು ಬಿಂದೂರಾಯರು ಆಮಂತ್ರಣ ಕೊಟ್ಟರು. ಸೋಫಾದ ಮಾತು

ಬಾಯಿಂದ ಹೊರಗೆ ಬರಲೇ ಇಲ್ಲ. ಕಳವಳಗೊಂಡರು. 'ಬಾಳ ತುಟ್ಟಿ ಕಾಲ ಬಂದದ ನೋಡ್ರಿ, ಗೋಪಾಲರಾವ್' ಎಂದು ಮಾತನ್ನು ಮುಂದೊರಿಸುತ್ತ- 'ನಲವತ್ತೆಂಟು ಸಾವಿರಂದ್ರ, ಏನ್ ಸಣ್ಣ ಅಮೌಂಟಾಯ್ತಾ'? ಎಂದು ತಮ್ಮನ್ನೇ ತಾವು ಪ್ರಶ್ನಿಸಿಕೊಂಡಂತೆ ಅಂದರು.

'ಏನ್ ಖರೀದಿ ಮಾಡಿದ್ರೆ, ನಲವತ್ತೆಂಟು?' ಎಂದು ಗೋಪಾಲರಾಯರು ಅರ್ಧಕ್ಕೆ ಮಾತು ನಿಲ್ಲಿಸಿದರು.

'ಅದೋ? ಅದೇನಂದ್ರ ರೋಜ ಉಡ್ಡಿನ ಸೋಫಾರೀ. ಛಂದ್ನ ಕಂಡ್ತೂ ಅಂತ ರೇಟ ಕೇಳ್ದೆ, ಫಾರಟಿ ಏಟ್ ಅಂದ್ರು. ನಮ್ಮ ಶ್ರೀಮತಿಗೆ ಸೆಟ್ಟು ಭಾಳ ಹಿಡಿಸ್ತು. ತೊಗೊಂಡ ಬಂದೆ ಎಂದು ಬಿಂದುರಾಯರು ಹೇಳಿ ಹಗುರಾದರು. ನೀವು ಇವೊತ್ತು ಬಂದು ನೋಡಿಬಿಡ್ರಿ,' ಎಂದು ಗೋಪಾಲರಾಯರಿಗೆ ಮತ್ತೊಮ್ಮೆ ಆಮಂತ್ರಣ ಕೊಟ್ಟು ಎದ್ದರು.

'ಯಾಕ? ಎದ್ರೆಲ್ಲ? ಚಹಾ ಕುಡ್ಡ ಹೋಗಿ' ಎಂದು ಗೋಪಾಲರಾವ ಹೇಳಿದ್ದಕ್ಕೆ ಇನ್ನೇನು ಚಪ್ಪಲಿಯನ್ನು ಸೇರಿಸಿಕೊಳ್ಳುತ್ತಿದ್ದವರು ಮತ್ತೆ ಅವುಗಳನ್ನು ಕಾಲಿನಿಂದ ಸರಿಸಿ, ಕುರ್ಚಿಯ ಮೇಲೆ ಬಂದು ಕುಳಿತರು.

ಕೃಷ್ಣವೇಣಿ, ಗೋಪಾಲರಾಯರ ಧರ್ಮಪತ್ನಿ, ಚಹಾದ ಎರಡು ಕಪ್ಪುಗಳನ್ನು ಟ್ರೇನಲ್ಲಿಟ್ಟುಕೊಂಡು ಬಂದು 'ನಮಸ್ಕಾರ ಬಿಂದೂರಾಯರಿಗೆ' ಎಂದರು.

ಚಹಾ ಕಪ್ಪನ್ನು ಕೈಗೆತ್ತಿ ಕೊಳ್ಳುತ್ತ ಬಿಂದೂರಾಯರು 'ನಮಸ್ಕಾರಮ್ಮಾ, ನಿಮ್ಮ ಯಜಮಾನರು ಇವೊತ್ತ ಸಂಜೆಗೆ ನಮ್ಮ ಮನೀಗಿ ಬರ್ತಾಯಿದ್ದಾರ. ನೀವು ಅವರ ಜೊತೆ ಬಂದುಬಿಡ್ರಿ. ಭಾಳ ದಿವಸಾಯ್ತು, ನೀವು ಆ ಕಡೆಗೆ ಬಂದೇಯಿಲ್ಲ' ಎಂದರೂ, 'ಏನ್ವಿಶೇಷ?' ಎಂಬ ಕೃಷ್ಣವೇಣಿಯ ಸಂಕ್ಷಿಪ್ತ ಪ್ರಶ್ನೆಕ್ಕೆ 'ಏನಿಲ್ಲ ನಮ್ಮ ಶ್ರೀಮತಿಯವರು ನೆನಸ್ತಾಯಿದ್ರು-ಬಂದುಬಿಡ್ರಿ,' ಎಂದು ಬಿಂದುರಾಯರು ಹೇಳಿದರು.

ಆಯ್ತು ಬರ್ತಿನಂತ, ಮನಿ ದೂರೇನಿಲ್ಲವಲ್ಲ. ಎರಡ್ಡೆಜೆ ಹಾಕದರಾಯ್ತು ಎಂದು ಕೃಷ್ಣವೇಣಿ ಅಡಿಗೆ ಮನೆಯ ಕಡೆಗೆ ನಡೆದರು. ಬಿಂದೂರಾವ್ ಎದ್ದು, ಹೊರಡಲು ಸಿದ್ಧರಾಗಿ 'ಬರ್ರಿ ಮತ್ತ, ಹಾದಿ ಕಾಯ್ತಿರ್ತೀನಿ, ತಪ್ಪಬ್ಯಾಡ್ರಿ,' ಎಂದು ಹೊರಟರು. ಬಿಂದೂರಾಯರು ಹೋದನಂತರ ಗೋಪಾಲರಾಯರು ಒಳಗೆ ಬಂದರು. ಅದ್ಯಾಕರ್ರಿ, ಅವರ ಮನೀಗಿ ಹೋಗೋದು? ಎಂದು ಕೃಷ್ಣವೇಣಿ ಕೇಳಿದರು- 'ಯಾಕಂದ್ರ, ಅವನ ಮನೀ ಹೊಸ್ತಲಿಗಿ ಬಂಗಾರದ ತಗಡಾ ಒಡಸ್ಯಾನಂತ. ನೋಡ್ಲಿಕ್ಕ ಬರ್ರೀ ಅಂದ' ಎಂದು ಗೋಪಾಲರಾಯರು ಹೇಳಿದಕ್ಕೆ 'ಅದ್ಕ ನಾವೇನು ಮಾಡಬೇಕಂತ?' ಎಂದು ಕೃಷ್ಣವೇಣಿ ಪ್ರಶ್ನಿಸಿದ್ದಕ್ಕೆ ಗೋಪಾಲರಾವ 'ನಾವು ನೋಡಿ, ಬಾಯಿ ತುಂಬ ಹೊಗಳಬೇಕು. ಅಷ್ಟೇ' ಎಂದು 'ಅದೇನೋ ಸಾಗವಾನಿನೋ, ಸೀಸಮ್‌ದೋ ಸೋಫಾಸೆಟ್ಟು ತೊಗೊಂಡಾನಂತ. ನೋಡ್ಲಿಕ್ಕ ಬರಬೇಕೂ ಅಂತ ಹೇಳಲಿಕತ್ತಿದ್ದಾ ಮಾರಾಯ' ಗೋಪಾಲರಾಯರು ಅಂದರು.

ಅವರ ಮನ್ಯಾಗ ಅಂಥ ಸೆಟ್ಟದ ಅಂತಲ್ಲರೀ, ನಮ್ಮ ಮನ್ಯಾಗ ಏನೂ ಇಲ್ಲಾಂತ ತಿಳಿಸಲಿಕ್ಕಿ ಅವರು ಕರೆದಿದ್ದು-ಕೃಷ್ಣವೇಣಿ ಬಿಂದೂರಾಯರ ಮನಸಿನಲ್ಲಿದ್ದ ವಿಷಯವನ್ನೇ ಗುರುತಿಸಿದಂತೆ ಹೇಳಿದರು.

'ನಮ್ಮ ಮನ್ಯಾಗ ಏನದ ಏನಿಲ್ಲಾ ಅಂಬೋದು ನಮ್ಗ ಗೊತ್ತೀಯಿರ್ತದ; ಅದ್ಕ ಮಂದಿ ಸಾಕ್ಷಿ ಪುರಾವೆ ಯಾಕ ಬೇಕೂ?'

'ಮಂದಿ ಮನ್ಯಾಗಿನ ಅಭೇದ, ಮಂದಿ ತಾಪತ್ರಯ, ಮಂದಿ ಸಂಕಟ ಇವೂ ಕೆಲವರ ಸಂತೋಷ ಆನಂದಗಳನ್ನು ಹೆಚ್ಚಿಸ್ತಾವ' ಕೃಷ್ಣವೇಣಿ ತಮ್ಮಷ್ಟಕ್ಕೆ ತಾವೇ ಅಂದುಕೊಂಡಂತೆ ಹೇಳಿದರು.

'ಸಂಜಿ ಹೊತ್ತಂದ್ರ, ನನ್ನ ಪಾರ್ಕಿಗೆ ಹೋಗೋ ಟೈಮು. ನನಗ ಬಿಂದೂರಾಯರ ಮನೀಗಿ ಬರಲಿಕ್ಕಾಗಾಂಗಿಲ್ಲ ನೀನೇ ಹೋಗಿ ಬಾ' ಎಂದರು ಗೋಪಾಲರಾಯರು.

'ನಾನು ಹೋಗೋದಿಲ್ಲ' ಖಟ್ಟೆಂದು ಕೃಷ್ಣವೇಣಿ ಅಂದುಬಿಟ್ಟರು.

'ಬಿಂದೂ ಅಂತಿದ್ದಾ-ಆ ಬಂಡೂನ ಮಗಾ ಕಾರ ಖರೀದಿ ಮಾಡ್ಯಾನಂತ' ಗೋಪಾಲರಾವಗೆ ಏನು ಮಾತಾಡಬೇಕೆಂದು ತಿಳಿಯದೆ ಹೀಗಂದಿದ್ದರು

'ಬಂಡೂ ಯಾರು? ಆ ಇನಾಮದಾರ ಬಂಡ್ಯಾ ಏನು?' ಕೃಷ್ಣವೇಣಿ.

'ಹೌದು'-ಗೋಪಾಲರಾವ.

'ಅವನ ತಲಿ ಕೆಟ್ಟದಂತ ಅಂದಿದ್ರೆಲ್ಲ?'

'ಹೌಂದು.'

'ಏನಾಗೇದ?'

'ಏನಾಗಬೇಕು? ತಲಿ ಕೆಟ್ಟದ'

'ಅಂದ್ರ?'

'ಮಾತ ಬಿಟ್ಟು ಮಾತಾಡ್ತಾನ.'

'ಏನಾಡ್ತಾನ? ತೋರಸ್ಯಾರಿಲ್ಲೋ?'

'ವನಹಳ್ಳಿ ಡಾಕ್ಟರ ಕಡೀನ ಇಲಾಜ ನಡಸ್ಯಾರಂತ'

'ಅಂವಾ ಏನ್ ಶಾಣ್ಯಾ ಡಾಕ್ಟರಂತ ಅವನ ಬಲ್ಲಿ ಒಯ್ದಾರ?' ಎಂದು ಕೇಳಿ. ಬೇಸರದಿಂದ 'ಥೂ ತಗೀರಿ, ಅದು ಮಿದುಳಿನ ಡಾಕ್ಟರಂತ ಯಾರಂತಾರ?'

'ಛಲೋ ಶಾಣ್ಯಾನೇ ಇದ್ದಾನಂತ ಕೇಳಿನಲ್ಲ'-ಗೋಪಾಲ ರಾವ

'ನೀವು ಕೇಳೀರ್ಯಾ? ಛಲೋ ಆಯ್ತು ಬಿಡ್ರಿ.'

'ಯಾಕ?'

'ನಿನ್ನೆ ಪ್ಯಾಟಿಗಿ ಹೋಗಿದ್ನಲ್ಲ-ಬರೋ ಮುಂದ, ಭೀಮರಾಯನ ಗುಡಿ ಕಟ್ಟಿಗಿ ನಿಮ್ಮ ದೋಸ್ತಿ ಬಂಡೂರಾವ ಕೂತಿದ್ದ. ನೋಡಿ ನೋಡಲಾರದೇನೇ ನಾ ಹೊಂಟಿದ್ದೆ. ನಿಮ್ಮ ಬಂಡೂರಾಯ 'ವೈನಿ ವೈನೀ' ಅಂತ ಕರದಾ. ನಾ ಪಾಪ ಕರೀತಾನಂತ ನಿಂತೆ. 'ಏನ್ರಿ ಭೌಜೀ ಅಂದೆ.' ಆಗ ಕಟ್ಟಿ ಮ್ಯಾಲಿಂದ ಕೆಳಗಿಳಿದು ಬಂದು-'ವೈನಿ ನನ್ನ ಬಂಡೂರಾಯನ ಮನೀಗಿ ಹೋಗಬೇಕಾಗೇದ. ಎಷ್ಟ ಹುಡುಕುದರೂ ಸಿಗೋವಲ್ಲದು. ವೈನಿ, ನೀವು ಅವನ ಮನಿ ತೋರಿಸ್ತೀರ್ಯಾ' ಅಂದ. ಅವ್ನ ಮಾತು ಕೇಳಿ ನನ್ನ ಮೈ ಝುಲಂತರೆವಾ. ಹುಚ್ಚನ ಗೂಡಾ ಮಾತೇನೂ ಅಂತ ಓಡಿ ಬಂದೆ ನೋಡ್ರಿ,' ಸ್ವಲ್ಪ ಉಸರಾಡಿ ಕೃಷ್ಣವೇಣಿ-'ಹಾಂ ಈಗ ಗೊತ್ತಾಯ್ತು ಬಿಡ್ರಿ, ತಲಕೆಟ್ಟದ್ದಿಲ್ಲಾಂದ, ಅಂವಾ ಆ ದಿನ ನನ್ನ ಹಾಂಗ್ಯಾಕ ಕೇಳ್ತಿದ್ದಾ ಖಾತ್ರಿ ಆಯ್ತು ಬಿಡ್ರಿ.'

'ಬಿಂದೂರಾಯಗ ಬಂಡೂನ ತಲಿ ಕೆಟ್ಟಿದ್ದು ಗೊತ್ತದನೋ ಇಲ್ಲೊ?' ಗೋಪಾಲರಾವ ಕೇಳಿದರು.

'ತಲಿ ಕೆಟ್ಟವನ ಮಗಾ ಕಾರ ತೊಗೊಂಡಿದ್ದು ನಿಮ್ಮ ಬಿಂದೂರಾಯರಿಗೆ ಗೊತ್ತದ. ಮಗನಪ್ಪನ ತಲಿ ಕೆಟ್ಟಿದ್ದು ಮಾತ್ರ ಗೊತ್ತಾಗಿಲ್ಲೇನೋ?' ಕೃಷ್ಣವೇಣಿಯ ದನಿಯಲ್ಲಿ ವ್ಯಂಗ್ಯ ತೇಲಾಡಿ ಹೋಯಿತು.

'ಅಪ್ಪನ ತಲಿ ಕೆಟ್ಟದ್ದಕ್ಕೂ ಮಗನ ಕಾರು ಖರೀದಿಗೂ, ಏನು ಸಂಬಂಧ?' ಎಂದು ಗೋಪಾಲರಾಯರು ಭೋಳೆ ಶಂಭುವಿನಂತೆ ಕೇಳಿದರು.


ಮಾತು ಸಾಕು. ಊಟಾ ಮಾಡಿ ಸ್ವಲ್ಪ ಹೊತ್ತು ರೆಸ್ಟು ತೊಗೋಳ್ರಿ. ಸಂಜಿ ಮುಂದ ಬೇಕಾದ್ರ ವಾಕಿಂಗಕ್ಕ ಹೋಗ್ರಿ, ಇಲಾ ಬಿಂದೂರಾಯರ ಮನೀಗಿ ಹೋಗ್ರಿ, ಎಂದು ಫೈಸಲಾ ಹೇಳಿದಂತೆ ಹೇಳಿದರು. ಗೋಪಾಲರಾಯರು ಸ್ನಾನಕೆಂದು ಬಚ್ಚಲುಮನೆ ಸೇರಿದರು. ಪೂಜೆ, ಊಟ-ಉಪಚಾರ ಮುಗಿಸಿಕೊಂಡು ವಿಶ್ರಾಂತಿಗೆಂದು ತಮ್ಮ ಕೋಣೆಗೆ ಸೇರಿದಾಗ ಮಧ್ಯಾಹ್ನದ ಎರಡುವರೆಯಾಗಿತ್ತು. ಕೃಷ್ಣವೇಣಿ ತಾನೂ ಊಟ ಇತ್ಯಾದಿಗಳನ್ನು ಮುಗಿಸಿಕೊಂಡು ನೆರೆಮನೆಯ ಕಮಲಮ್ಮನ ಬಾಗಿಲಿಗೆ ಬರುವಷ್ಟರಲ್ಲಿ ಬರೋಬರಿ ಮೂರುವರೆಯಾಗಿತ್ತು. ನೆರೆಮನೆಯ ಕಮಲಮ್ಮ, ಚುರುಮುರಿ ಚೀಲದಂತಿದ್ದಳು. ಮೈದಾಹಿಟ್ಟಿನ ಮೈಬಣ್ಣ, ಗಂಢ ಆಗರ್ಭ ಶ್ರೀಮಂತ ಸರಾಫಿ ಅಂಗಡಿಯಿಂದ ಕಮಲಮ್ಮನ ಗಂಡ ಬರುವದಕ್ಕೆ ರಾತ್ರಿ ಹನ್ನೊಂದು ಗಂಟೆ. ಕಮಲಮ್ಮಳಿಗೆ ಸಂತಾನ ಭಾಗ್ಯವಿರಲಿಲ್ಲ. ಸಾಧ್ಯವಾದ ಎಲ್ಲಾ ಔಷಧೋಪಚಾರಗಳನ್ನು ಮಾಡಿ, ತಾನೂ ಮಾಡಿಸಿಕೊಂಡರೂ ಭಗವಾನರಾವಗೆ ಮಕ್ಕಳೇ ಆಗಲಿಲ್ಲ. ಈ ಕಾರಣದಿಂದಲೇ ಕಮಲಮ್ಮನ ಕಂಪನಿಗಾಗಿ ಒಂದು ನಾಯಿಯನ್ನು ಸಾಕಿದ್ದ. ಕೃಷ್ಣವೇಣಿ ಬಾಗಿಲಿಗೆ ಬಂದಿದ್ದನ್ನು ಗಮನಿಸಿ

ನಾಯಿ ವಿಚಿತ್ರ ಧನಿಯಿಂದ ಬೊಗಳಿತು. ಕೃಷ್ಣವೇಣಿ ಬಂದರೆ ಒಂದು ರೀತಿಯ ದನಿ, ಗುರುತಿಲ್ಲದವರು ಬಂದರೆ ಇನ್ನೊಂದು ರೀತಿಯ ದನಿ ತಗೆದು ಬೊಗಳುವ, ವಿಶಿಷ್ಟವಾದ ಕಲೆಯೊಂದನ್ನು ನಾಯಿ ಕಲಿತುಕೊಂಡಿತ್ತು. ಅದು ಮೊದಲು 'ಕೂಂ ಕೂಂ ಕೂಂ ಬೌ ಕೂsss' ಎಂದರೆ ಕೃಷ್ಣವೇಣಿ ಬಂದರೆಂದು, 'ವಾವು ವಾವೂ ಊಂ' ಎಂದು ಕೂಗಿದರೆ ಅಪರಿಚಿತರು ಬಂದರೆಂದು ತಿಳಿದುಕೊಳ್ಳಬೇಕು. ಭಗವಾನರಾವ ಒಡೆಯಾ ಬಂದರೆ ಬರೀ ಬಾಲವನ್ನು ಅಲ್ಲಾಡಿಸಿ ಚೆಗರಿ, ಆಚಾರ್ಯರು ಎಂಟು ಹೋಳಿಗೆ ತಿಂದು ಡರ್ ಢುರ್ ಎಂದು ಹೂಸು ಬಿಟ್ಟಂತೆ ಒದರುತ್ತಿತ್ತು. ಕೃಷ್ಣವೇಣಿ ಬಂದಿದ್ದನ್ನು ಗಮನಿಸಿ, ನಾಯಿ ಒದರಿ ಸುಮ್ಮನಾದ ಕೂಡಲೇ 'ಬರ್ರೀ ಕೃಷ್ಣಮ್ಮ ವೇಣಿ' ಎಂದು ಕಮಲಮ್ಮ ಕರೆದರು. ಅವರು ಒಳಗೆ ಬಂದು ಧುಪ್ಪೆಂದು ಕುರ್ಚಿಯ ಮೇಲೆ ಕುಳಿತುಕೊಂಡು 'ಇಲ್ಲರೆವಾ್ಃ ಕಮಲಮ್ಮನವರೆ ಅದೇನಂದ್ರs...' ಎಂದು ಗಪ್ಪಾದರು.

ಕಮಲಮ್ಮ ತಮ್ಮ ಹತೋಟಿಯಲಿಲ್ಲದ ದೇಹವನ್ನು ಸಾವರಿಸಿಕೊಂಡು ಏಳುತ್ತ 'ಅಯ್ಯೋ ಇದೇನ್ರೀ ಬಂದು ಇನ್ನೂ ಕುಂಡಿನೇ ಊರಿಲ್ಲ-ಇಲ್ಲರೆವ್ವಾ ಅಂತೀರೆಲ್ಲ'. 'ಚಹಾಕ್ಕೇ ಹೋಗೋದದ ಅಂತ ಪುರಸೋತ್ತಿಲ್ಲಾಂದೆ' ಎಂದರು ಕೃಷ್ಣವೇಣಿ 'ಅದೇನಂದ್ರ ಸಂಜಿ ಮುಂದ invitation ಅದ. ಹೋಗಬೇಕು' ಎಂದು ಮಾತು ಪೂರ್ತಿಗೊಳಿಸಿದರು.

'ಹೌಂದರ್ಯಾ! ನಿಮ್ಗೇನ್ರವಾ. ಮ್ಯಾಲಿಂದ ಮ್ಯಾಲ invitation ಇರ್ತಾವ-ನಿಮ್ಮ ಯಜಮಾನರು ಭಾಳ ಪ್ರಸಿದ್ಧರು, ಮಂದಿ ಕರೀತಾರ. ನಮ್ದ ನೋಡ್ರಿ, ಮನ್ಯಾಗೇ ಬಿದ್ದಿರಬೇಕು. ನಾಯಿ ಸಂಗ್ತಿ ಮಾತಾಡಕೋತ' ಎಂದು ಬೇಸರದಿಂದ ಕಮಲಮ್ಮ ಅಂದರು. 'ಅಲ್ಲ ಕಮಲಮ್ಮ, ಕೇಳಿದ್ರಿಲ್ಲೋ?' ಕೃಷ್ಣವೇಣಿಯ ಮುಖದ ಮೇಲೆ ಉತ್ಸುಕತೆ ಉಕ್ಕೇರಿತ್ತು. ಕಮಲಮ್ಮ ಏನೆಂದು ಕೇಳುದರೊಳಗಾಗಿಯೇ ಕೃಷ್ಣವೇಣಿ 'ಆ ಬಂಡುರಾಯರಿಗೆ ಹುಚ್ಚು ಹಿಡಿದದರೀ' ಎಂದರು.

ಕಮಲಮ್ಮನ ಗಾತ್ರ ಕಂಟ್ರೋಲ ನಲ್ಲಿದ್ದಿದ್ದರೆ ಕೂತಲ್ಲಿಂದಲೇ ಕುಪ್ಪಳಿಸಿ ಬೀಳುತ್ತಿದ್ದರು. ಆದರೆ ದೇಹದ ಅಸಹಕಾರದಿಂದ ಹಾಗಾಗಲಿಲ್ಲ. ಕುಳಿತಲ್ಲಿಂದಲೇ ಖುಷಿಯಿಂದ 'ಯಂಥಾ ಛಂದ ಸುದ್ದೀ ತಂದ್ರೆವ್ವಾ ಕೃಷ್ಣಮ್ಮನವರೆ...' ಎಂದು ಕಮಲವ್ವಾ ಕೇಳಿದರು.



'ಇದೇನ್ರೀ ಕಮಲಮ್ಮಾ ಬಂಡು ರಾಯರಿಗೆ ಹುಚ್ಚು ಹಿಡಿದ ಸುದ್ದಿ ನಿಮ್ಗ ಛಂದ ಅನ್ಸತದಾ'? ಎಂದು ಕೃಷ್ಣವೇಣಿ ಕೇಳಿದರು.

'ಖರೇವಂದ್ರ ಮೊದಲು ಆ ಬಿಂದೂರಾಯಗೆ ಹುಚ್ಚ ಹಿಡೀಬೇಕಾಗಿತ್ತು, ಇರಲಿ. ಬಂಡೂರಾಯರಿಗೆ ಹಿಡಿದಿದ್ದು ಛಲೋ ಆಯ್ತು ಬಿಡ್ರಿ.' ಕಮಲಮ್ಮ ತನ್ನ ಗುರಿಯನ್ನು ಬಿಂದೂರಾಯರ ಕಡೆಗೆ ತಿರುಗಿಸಿದ್ದು ಕೃಷ್ಣವೇಣಿಗೆ ಅಚ್ಚರಿ ತಂದಿತ್ತು.

'ಹೀಂಗ್ಯಾಕಂತ?' ಕೇಳುವುದಕ್ಕಿಂತ ಮುಂಚೆಯೇ ಕಮಲಮ್ಮಾ ಬಿಂದೂರಾಯನ ಜಾತಕ ಬಿಚ್ಚಿದರು. 'ಯಾರ ಮುಂದೂ ಹೇಳಬ್ಯಾಡ್ರಿ. ನಿಮ್ಗಂತ ಹೇಳ್ತೀನಿ.'

'ನಮ್ಮ ಅಂಗಡ್ಯಾಗ ಬಿಂದೂರಾಯ ಒಂದು ಉಂಗರು ಮಾಡಿಸಿಗೊಂಡ ಹೋದ. ಭಾಳ ಕಾಡ್ಸಿ, ಬೇಡ್ಸಿ ದುಡ್ಡ ಕೊಟ್ಟ. ಅದೇನ ಮಹಾಯಿಲ್ಲ. ಆದ್ರ ನಾ ಹೇಳ್ತೀನಿ ಆ ಉಂಗ್ರಾ ಎಲ್ಲಿ ಹೋಯ್ತಂತ ತಿಳೀಬೇಕು?' ಎಂದು ಮಕ್ಕಳ ಉತ್ಸುಕತೆಯನ್ನು ಹೆಚ್ಚಿಸುವದಕ್ಕೆ ಸಾಲಿಮಾಸ್ತರ ಪ್ರಶ್ನ ಕೇಳಿದಂತೆ ಕೇಳಿದರು.

'ಯಾಕ? ನಂಗೊತ್ತಿಲ್ಲರೆವ್ವಾ?' ಉತ್ತರ ತಿಳಿದುಕೊಳ್ಳುವ ಆತುರದಲ್ಲಿ ಕೃಷ್ಣವೇಣಿ ಕೇಳಿದರು.

'ಹೇಣ್ತೆಗಂತ ಮಾಡಿಸಿಗೊಂಡು ಹೋಗಿದ್ರಂತ, ಆದ್ರ ಅದು ಚಂದ್ರೆ, ಅಲ್ಲ ಸುಂದರಿ ಕಯ್ಯಾಗ ಹೊಯ್ತಂತ. ಸುಂದರಿ, ನಿಮ್ಗ ಗೊತ್ತಲ್ಲ?' ಎಂದು ಕಮಲಮ್ಮಾ ಕೇಳಿದ್ದಕ್ಕೆ 'ಆ ಪಾತರದ ಸುಂದರಿ ಯಾರಿಗಿ ಗೊತ್ತಿಲ್ಲ?' ಕೃಷ್ಣವೇಣಿ ತಮ್ಮ ಸಾಮಾನ್ಯಜ್ಞಾನದ ಪರಿಚಯಕೊಟ್ಟರು. ಬಿಂದೂರಾಯರ ಅಂಥವರಂತೀರ್ರ್ಯಾ! ಎಂದೂ ಕೇಳಿದರು.

'ಕಿರುಬಟ್ಟಿಗಿ ಭಾಳ ಲೂಸ್ ಆಗಾಕತ್ಯಾಯ್ತಿ ಸಾವಕಾರರೆ, ತುಸು ಸಡ್ಲಮಾಡಿಕೊಡ್ರೀ' ಅಂತ ಖುದ್ ಸುಂದರಿನೇ ನಮ್ಮ ಅಂಗಡಿಗಿ ಬಂದು ಕೇಳ್ತಂತ. ನಮ್ಮವರೇ ಮಾಡಿಕೊಟ್ಟ ಉಂಗ್ರಾ. ನಮ್ಮವರು ಗಪಕ್ಕನ ಗುರ್ತಾ ಹಿಡಿದು, ಕೇಳೇಬಿಟ್ರಂತ, 'ಇದು ಎಲ್ಲಿಂದ ಬಂತೂ' ಅಂತ. ಸುಂದರಿ ಮೊದಲು ಮೀನಾ ಮೇಷಾ ಮಾಡಿತಂತ. ನಂತ್ರ ಹೇಳ್ತಂತ. ಬಿಂದೂರಾಯರು ಕೊಟ್ಟಾರಂತ. ಬ್ಯಾಳ್ಯಾಗಿನ ಕಪ್ಪು ಕಣ್ಣಗಿ ಕಂಡ ಮ್ಯಾಲ, ಮತ್ಯಾಕ ಹಿಚುಕಿ ನೋಡಬೇಕಂತ ನಮ್ಮವರು ಸುಮ್ಮನಾದರಂತ. ರಾತ್ರಿ ಮನೀಗಿ ಬಂದು ನನ್ನ ಮುಂದ ಅಂದ್ರು,' ಎಂದು ವಿಸ್ತಾರದಿಂದ ಕಮಲಮ್ಮಾ ಹೇಳಿದರು.

'ಛಲೋ ಆಯ್ತುರೆವ್ವಾ ಹೇಳಿದ್ದು. ನಾ invitation ಅಂದ್ನಲ್ಲ. ಆ ಬಿಂದೂರಾಯನ ಮನೀಗೇ ಹೋಗೋದಿತ್ತು. ಗೊತ್ತಾದ ಮ್ಯಾಲ ಅಂಥವರ ಮನೀಗಿ ಯಾರ ಹೋಗ್ತಾರ? ನಮ್ಮವರಂತೂ ಭೋಳೆ ಶಂಕರ. ಅವರಿಗಿ ನಡುವಿನ ಬಟ್ಯಾವದು ಕೊನಿ ಬಟ್ಯಾವದೂ ಒಂದೂ ತಿಳ್ಯಾಂಗಿಲ್ಲ' ಎಂದು ಕೃಷ್ಣವೇಣಿ ಎದ್ದರು.

'ಹೋಗಿ ಬರ್ತೀರ್ರ್ಯಾ? ಹೋಗಿಬರ್ರಿ. ಜ್ವಾಕಿರೆವ್ವಾ ಕಾಲಾಗ ನಾಯಿ ಅದ' ಎಂದು ಕಮಲಮ್ಮ ಎಚ್ಚರಿಸಿದರು.

'ಹೌಂದರವ್ವಾ. ಆದ್ರ ಏನೇ ಅನ್ರಿ, ನಿಮ್ಮ ನಾಯಿ, ಏಕದಂ ಸಭ್ಯ ಅದ. ನಿಮ್ಮ ಮನಿಯವರಿದ್ಹಾಂಗ....' ಎಂದು ಕೃಷ್ಣವೇಣಿ ಮನೆಗೆ ಹಿಂದಿರುಗುವಾಗ ಗೋಪಾಲರಾಯರು ಕೋಟು, ಟೊಪ್ಪಿಗೆಯನ್ನು ಹಾಕಿಕೊಂಡು, ಚಪ್ಪಲಿಗಳೆಲ್ಲೆಂದು ಹುಡುಕಾಡುತ್ತಿದ್ದರು. ಹೆಂಡತಿ ಬಂದದನ್ನು ನೋಡಿ 'ಏಯ್, ನನ್ನ ಚಪ್ಪಲಿ ಸಿಗೋವಲ್ಲದ್ಯ. ನೋಡು!' ಎಂದರು.

'ಎಲ್ಲಿ ಹೊಂಟ್ರಿ?' ಕೃಷ್ಣವೇಣಿ ಕೇಳಿದರು.

'ಬಿಂದೂರಾಯ ಬಾ ಅಂದಾನ ಅವ್ನ ಮನೀಗಿ ಹೋಗಿ, ಹಂಗೆ ಅವನ ಸಂಗ್ತಿ ಬಂಡೂರಾಯನ ಮನೀಗಿ ಹೋಗಿ ಬರ್ತೀನಿ' ಎಂದು ಗೋಪಾಲರಾಯರು ಹೇಳಿದರು.

'ಹೌಂದs? ಹೋಗಿಬರ್ರಿ. ಇವೂತ್ತು ಪಾರ್ಕ್‌ಗ್ಲೇನು?' ಎಂದು ಕೃಷ್ಣವೇಣಿ ಕೇಳಬೇಕೆಂದು ಕೇಳಿದರು.

'ಅದs ಯಾಕಿಲ್ಲ? ವ್ಯಾಳ್ಯಾಸಿಕ್ರೂ ಅಂದ್ರ ಹೋಗ್ತೀನಿ' ಎಂದು ಮೂಲೆಯಲ್ಲಿ ಚಾಪಿಯ ಕೆಳಗೆ ಅಡಗಿದ್ದ ಚಪ್ಪಲಿಗಳನ್ನು ಹುಡುಕಿ ಹೊರತೆಗೆದು 'ಬಾಗಿಲಾ ಹಾಯಕೋ' ಎಂದು ಹೊರಟರು.

ಕೃಷ್ಣವೇಣಿ ಬಾಗಿಲನ್ನು ಮುಚ್ಚಿಕೊಂಡು ಒಳಗೆ ಬಂದು ಟಿ.ವಿ. ಮುಂದೆ ಕುಳಿತುಕೊಂಡರು. ಗಂಡ ಇರಲಾರದಾಗ 'Fashion' ಚೆನೆಲ ಹಾಕಿಕೊಂಡು ಕೂಡುವದೆಂದರೆ ಕೃಷ್ಣವೇಣಿಯವರಿಗೆ ಎಲ್ಲಿಲ್ಲದ ಖುಷಿ.

ಗೋಪಾಲರಾಯರು ನಿಧಾನವಾಗಿ ಬಿಂದೂರಾಯರ ಮನೆಗೆ ಹೋಗುವ ಉದ್ದೇಶದಿಂದ ಬಹಳ ಸಾವಕಾಶವಾಗಿಯೇ ನಡೆದಿದ್ದರು. ಬಿಂದೂರಾಯರ ಮನೆ ದೂರೇನಿರಲಿಲ್ಲವಲ್ಲ. ಒಂದು ಲಾಂಗ್‌ಜಂಪ್ ಹೊಡೆದರ ಬಿಂದೂರಾಯರ ಬಾಗಿಲದಾಗೇ ಬೀಳಬೇಕು. ಆದ್ರ ಲಗೂನೇ ಹೋಗಿ ಬಿಂದೂರಾಯರ ಮಾತುಗಳನ್ನು ಭಾಳಹೊತ್ತು ಕೇಳುವದಕ್ಕಿಂತ ತುಸು ತಡ ಮಾಡಿ ಹೋಗುವುದೇ ಲೇಸೆಂದು ಗೋಪಾಲರಾವ. 'ಕಾಲಮ್ಯಾಲ ಬಂಡಿ ಬಿತ್ತು, ಕಾಲೇ ಮುರಿತು, ಒಂದೇ ಕಾಲ ಜೂಜನಾಡಿ ಊರೇ ಗೆದೀತು' ಅಂಬೋ ಹಾಂಗ ನಡೆದರು. ಬಿಂದೂರಾವ ಮನೆಯಲ್ಲಿಯೇ ಇದ್ದರು....

'ಹಾ... ಹಾ... ಹಾ... ನೀವು ಬರ್ತೀರಂತ ಅನ್ನಿತ್ತು. ಬರ್ರಿ, ಬರ್ರಿ, ಎಲ್ಲಿ? ನಿಮ್ಮ ಮನೆಯವರೆಲ್ಲಿ?' ಎಂದು ದೇಶಾವರಿ ನಗುನಕ್ಕು ಬಿಂದೂರಾವ ಸ್ವಾಗತಿಸಿದರು.

'ಬೆನ್ನನೋವೂ ಅಂದಳು' ಎಂದು ಗೋಪಾಲರಾವ super mini ಉತ್ತರ ಕೊಟ್ಟರು.

'ಅರೇ ಹೀಂಗs ಯಾಕ್ರಿಪಾ, ಈ ವಯಸ್ಸಿನ್ಯಾಗ ಬೆನ್ನು ನೋವು?' ಎಂದರು ಬಿಂದೂರಾವ.



‘ಮಾಧವ ಮತ್ತು ಅವ್ನ ಹೆಣ್ತಿ ಇದೀಗ ಕಾರತೊಗೊಂಡು ಪ್ಯಾಟೀಗಿ ಹೋದ್ರು. ನಮ್ಮ ಲಲಿತಾಗ ಕಾರಿಲ್ದೆ ಯಾವ ಕೆಲಸನೂ ಮಾಡ್ಲಿಕ್ಕಾಗಾಂಗಿಲ್ಲ’ ಎಂದು ಬಿಂದೂರಾವ ಮಗಾ ಮಾಧವ ಮತ್ತು ಸೊಸೆ ಲಲಿತಾರ ಸ್ವಭಾವದ ಬಗ್ಗೆ ಪರಿಚಯ ಮಾಡಿಕೊಟ್ಟರು.

‘ಪುಣ್ಯಾಕ ನಮ್ಮ ಸೋಫಾ ಸೆಟ್ಟಿಗಿ ಗಾಲಿ-ಇಂಜಿನಾ ಇದಿದ್ದರು’ ಎಂದು ಅಸಹ್ಯ ಜೋಕನ್ನು ಹೇಳಿ ತಾವೇ ಹಿ... ಹಿ... ಹಿ... ಎಂದು ನಕ್ಕರು.

‘ನಮ್ಮ ವಿಜ್ಞಾನದ ಸಂಶೋಧನೆಗಳೆಲ್ಲ ಹೊರಗೆ ಹೋಗುವ ಸಂಶೋಧನೆಗಳಾಗ್ಯಾವ ಬಿಂದೂರಾವ, ಅಗದೀ ಸೈಕಲಿನಿಂದ ಜೆಟ್ ವಿಮಾನ, ರಾಕೇಟು ತನಕ, ಮನ್ಯಿಬಿಟ್ಟು, ನೆಲಾ ಬಿಟ್ಟು ಹೊರ್ಗ ಹೋಗುವಂಥವೇ’ ಎಂದು ಗೋಪಾಲರಾಯರು ಹೇಳಿದಕ್ಕೆ ಬಿಂದುರಾವ ‘ವಾಹ್, ಇದ್ಕಂತಾರ ಮಾಸ್ತರಕಿ ತಲಿ. ನೀವೇನ್ರೆಪಾ ಏಕದಮ್ ಇಂಟಲಿಜೆಂಟು’ ಎಂದು ಗೋಪಾಲರಾಯರ ಬುದ್ಧಿಮತ್ತೆಯನ್ನು ಕೊಂಡಾಡಿದರು.


‘ಈ ಸ್ಪೀಡು ಸ್ವಲ್ಪ ಕಮ್ಮಿ ಮಾಡಬೇಕರೀ ಬಿಂದೂರಾವ. ಆದ್ರ ನಮ್ಮ ಕೈಯಾಗೇನದ?’ ಎಂದು ಗೋಪಾಲರಾವ್ ದುಃಖಿಸಿದರು. ‘ಮನೀ ಬಿಟ್ಟು ನೆಲಾ ಬಿಟ್ಟು ಓಡಿ ಹೋಗೋ ಯಂತ್ರಗಳಿಂದ ಮನುಷ್ಯ ಮನುಷ್ಯರೊಳಗಿನ ಪ್ರೀತಿ ಕಮ್ಮಿ ಆಗ್ತದ’ ಎಂದು ತಮ್ಮ ತತ್ವಜ್ಞಾನವನ್ನು ಬಿತ್ತರಿಸಿದರು.

‘ಖರೇ ಅದನೋಡ್ರಿ. ಕಾರು ಬಂದಾಗಿನಿಂದ ಮಗನ ಕಾಲ ಮನ್ಯಾಗ ನಿಂದ್ರವಲ್ಲವೂ. ಸೊಸಿನೂ ಭುರ್ರಂತ ಹಾರಿ ಹೋಗ್ತಾಳ. ಅವ್ವ-ಅಪ್ಪಾ ಅತ್ತಿ-ಮಾವನ ಸಂಪರ್ಕ ಕಡಿಮೆ ಆಗೇದ’ ಎಂದು ಬಿಂದುರಾವ ತಮ್ಮ ಅನುಭವದ ಅರಿವಿಕೆಯಿಂದ ಬೆಚ್ಚಿಬಿದ್ದರು.

‘ಸೋಫಾ ಹಾಳಾಗ್ತದ ಅದರ ಮ್ಯಾಲ ನಿಂದ್ರ ಬ್ಯಾಡ್ರಿ, ಕಾರಪೆಟ್ ಹೊಲಸಾಗ್ತದ ಅದರ ಮ್ಯಾಲ ಓಡ್ಯಾಡಬ್ಯಾಡಿ, ಹೀಂಗ ಒಂದು ಎರಡು ಆದೇಶಗಳಿಂದ ಮನ್ಯಾಗ ಆಡಕೋತ ಕುಣಕೋತಿರೋ ಮಕ್ಕಳ ಆನಂದಕ್ಕೆ ಕಡಿವಾಣ ಹಾಕ್ತೀವಿ. ಅಪ್ಪಿತಪ್ಪಿ ಮಗು ಕುರ್ಚಿಮ್ಯಾಲ ನಿಂತೂ ಅಂದ್ರ ಓಡೋಡಿ ಬಂದು ‘ಅಲ್ಯಾಕ ನಿಂತ್ಯೋ?’ ಅಂದು ರಪಾರಪಾ ಹೊಡೀತೀವಿ. ಮಗುವಿನ ಬಗ್ಗೆ ಪ್ರೀತಿನೇ ಇಲ್ಲದಂತಾಗ್ತದ. ಹೌಂದಲ್ಲೋ ಬಿಂದೂರಾವ?’ ಎಂದು ಗೋಪಾಲರಾವ ಕೇಳಿದರು.

‘ಮನ್ಯಾಗಿನ ಮಂದೀಕಿಂತ, ನಮ್ಮ ಮಕ್ಕಳಕಿಂತ ನಮ್ಮ ವಸ್ತುಗಳೇ ನಮ್ಗ ಪ್ರಿಯ ಆಗ್ತಾವ. ಯಾತಕ್ಕ ಬೇಕರೀ ಇದೆಲ್ಲ?’ ಎಂದು ಗೋಪಾಲರಾವ ತಮ್ಮ ಮಾತನ್ನು ಮುಗಿಸುವ ಮೂಡಿನಲ್ಲಿರಲಿಲ್ಲ.

‘ಇರಲಿ, ಗೋಪಾಲರಾಯರ, ನಿಮ್ಮಂಥವರ ಮಾತು, ನಮ್ಮ ತಲ್ಯಾಗ ಹೋಗಾಂಗಿಲ್ಲ. ಮಾತು, ವಿಚಾರ ತಿಳಕೊಳ್ಳಿಕ್ಕೂ ಕೇಳವರಿಗೆ ಬುದ್ಧಿ ಬೇಕಲ್ಲರಿ?’ ಎಂದು ಬಿಂದೂರಾವ ಗೋಪಾಲರಾಯರ ಮಾತಿಗೆ ಇತಿಶ್ರೀ ಹೇಳಲು ಸೂಚಿಸಿದರು. ‘ಏನೇ, ಯಾರು ಬಂದಾರು ನೋಡು, ಚಾ ಕಾಫೀ ಏನಾದರೂ ಕೊಡು’ ಎಂದು ಹೆಂಡತಿ ಸೀತಮ್ಮನಿಗೆ ಹೇಳಿದರು. ಹೆಂಡತಿ ಸೀತಮ್ಮ ಗಂಡನಿಗಿಂತ ಒಂದು ತೂಕ ಹೆಚ್ಚು ಘಾಟಿ ಹೆಂಗಸು. ಸೀತಮ್ಮ ಬಿಂದುರಾಯರ ಎರಡನೆ ಹೆಂಡತಿ. ಮಾಧವನ ಅವ್ವ ಮೊದಲನೆ ಹೆಂಡತಿ. ಭಾಗ್ಯಮ್ಮ ಸತ್ತು ಆರು ತಿಂಗಳೊಳಗೇ ಬಿಂದುರಾಯರು ಸೀತಮ್ಮನೊಂದಿಗೆ ಮದುವೆ ಮಾಡಿಕೊಂಡಿದ್ದರು. ಈ ಮಾತಿಗೂ ಬಹಳ ವರ್ಷಗಳಾಗಿದ್ದು ಎಲ್ಲರಿಗೂ ಗೊತ್ತೇ. ಬಿಂದೂರಾವ ಐವತ್ತೈದು ವಯಸ್ಸಿನಲ್ಲಿ ಭಾಗ್ಯಮ್ಮನ್ನು ಕಳೆದುಕೊಂಡಿದ್ದರು. ಇನ್ನೂ ಐದಾರು ವರ್ಷ ಸರ್ವಿಸು, ಮೇಲಾಗಿ ಮನೆಯಲ್ಲಿ ಮಾಧವ. ರೊಟ್ಟಿ ಬೇಯಿಸಿ ಹಾಕುವವರು ಯಾರಾದರೂ ಬೇಕೆಂಬ ಪವಿತ್ರ ವಿಚಾರದಿಂದಲೇ ಸೀತಮ್ಮನೊಂದಿಗೆ ಮದುವೆಯಾಗಲು ಸಮ್ಮತಿಸಿದ್ದರು. ಸೀತಮ್ಮ ಉಫಾದ ಬೆಳೆದುನಿಂತ ಹೆಂಗಸು. ಅಂಗಾಂಗದಿಂದ ಯೌವನದ ಬುಗ್ಗಿ ಪುಟಿದೇಳುವ ವಯಸ್ಸು. ನೋಡಲಿಕ್ಕೂ ಛಂದ ಪೋರಿ. ಆದರ ಹಾಳಾದ ಬಡತನ. ಎರಡನೆ ಸಂಬಂಧಕ್ಕೆ ಒಪ್ಪಿಕೊಳ್ಳುವ ಅನಿವಾರ್ಯತೆಯಿಂದ ಬಿಂದೂರಾಯರ ಮನೆ ತುಂಬಿದ್ದಳು. ಶುದ್ಧ ಬೆಳದಿಂಗಳಂಥ ಮೈಕಾಂತಿ, ಎಂಥ ಬಿಗಿಕಚ್ಚೆಯವನಿಗೂ ನಡುಕು ಹುಟ್ಟಿಸುವಂಥ ರೂಪ. ಬಿಂದೂರಾಯರ ಆದೇಶದಂತೆ ಚಹಾ ಮಾಡಿ, ಟ್ರೇನಲ್ಲಿಟ್ಟುಕೊಂಡು ಹೊರಗೆ ಬಂದಳು. ಚಹಾ ಕಪ್ಪು ಗೋಪಾಲರಾಯರ ಕೈಗೆ ಕೊಡುತ್ತ ‘ಕಾಕಿ ಯಾಕ ಬರಲಿಲ್ಲ?’ ಎಂದು ಕೇಳಿದಳು.



‘ಹುಷಾರಿರಲಿಲ್ಲ’ ಎಂದು ಗೋಪಾಲರಾವ ಸೀತಮ್ಮನ ಕಡೆಗೆ ನೋಡಿ ಬಿಂದೂರಾಯರ ನಸೀಬು ಭಾಳಂದ್ರ ಭಾಳ ಅಪರೂಪದ್ದೂ’ ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ‘ಇಂಥ ನಸೀಬವಾನ ಮನುಷ್ಯ ಸುಂದರಿಸಲುವಾಗಿ ಉಂಗುರು ಯಾಕ ಮಾಡಿಸಿದಾ’ ಎಂಬ ಪ್ರಶ್ನೆ ಗೋಪಾಲರಾಯರ ಮನಸ್ಸಿನಲ್ಲಿ ಮೂಡಬಹುದಾಗಿತ್ತು. ಆದರೆ ಈ ಸುದ್ದಿ ಇವರ ಕಿವಿಯತನಕ ಇನ್ನೂ ಬಂದು ಮುಟ್ಟಿರಲಿಲ್ಲ. ಹಾಗಂತ ಸುಮ್ಮನಿದ್ದರು.



ಬಂಡೂರಾಯನ ಹುಚ್ಚು ಯಾವ ಹಂತದಲ್ಲಿಯೆಂದು ತಿಳಿದುಕೊಳ್ಳುವ ಆಸೆ ಮನಸ್ಸಿನಲ್ಲಿದ್ದರೂ, ಸೀತಮ್ಮ ಚೂರ ಹೊತ್ತು ತಮ್ಮ ಕಣ್ಮುಂದೇ ಸುಳಿದಾಡಿದರೆ ಬಂಡೂರಾಯರ ಮನೆಗೆ ಇನ್ನೊಂದ ದಿನ ಹೋದರಾಯಿತೆಂದು ವಿಚಾರ ಮಾಡಿದರು. ಆದರೆ ತಾವು ಮಶೀನಿನ ಬಾಯಿಗೆ ಸಿಕ್ಕ ರಸ ಹಿಂಡಿದ ಕಬ್ಬಿನ ಸಿಪ್ಪೆಯಂತಿರುವುದನ್ನು ಅರ್ಥ ಮಾಡಿಕೊಂಡು, ಅಂಥದೇ ಅವಸ್ಥೆಯನ್ನು ತಲುಪಿದ ಬಿಂದೂರಾಯರ ಕಡೆಗೆ ನೋಡಿ ‘ಬಿಂದೂ, ಬಂಡುರಾವನ ಮನೀಗಿ ಹೋಗಿ ಬರೋಣೇನೂ?’ ಎಂದು ಕೇಳಿದರು.

‘ನಡೀರಿ ಹೋಗಿ ಬರೋಣ’ ಎಂದು ಬಿಂದೂರಾವ ಎದ್ದರು.

ದಾರಿ ಉದ್ದಕ್ಕೂ ಇಬ್ಬರೂ ಮಾತನಾಡುತ್ತಲೇ ನಡೆದರು. ದಾರಿಯ ಮೇಲೆ ಓಡಾಡುವ ಇತರೆ ಜನರ ಬಗ್ಗೆ, ವಾಹನ ಇತ್ಯಾದಿಗಳ ಬಗ್ಗೆ ಆಸಕ್ತಿ ಇರಲಿಲ್ಲ-ವಯಸ್ಸಲ್ಲವೆ?

‘ಬಂಡೂರಾಯ ಹೀಂಗ್ಯಾಕಾದಾ?’ ಎಂದು ಬಿಂದುರಾಯರು ಕೇಳಿದರು.

‘ಇದ್ಕ ಉತ್ರಾ ಏನು? ಪೂರ್ವಜನ್ಮದ ಕರ್ಮಾ, ಅಷ್ಟೆ’ ಎಂದು ಗೋಪಾಲರಾವ ಉತ್ತರಿಸಿದರು. ಅದು ಇದೂ ಅಂತ ಮಾತಾಡ್ತಾ ಬಂಡುರಾಯರ ಮನೆಗೆ ಬಂದೇಬಿಟ್ರು. ಬಾಗಿಲ ತೆರದೇಯಿತ್ತು. ಬಂಡುರಾಯರ ಧರ್ಮಪತ್ನಿ ವೆಂಕಮ್ಮ ಅಲ್ಲೇ ನಿಂತಿದ್ದರು. ಇವರನ್ನು ಕಂಡು ‘ಬರ್ರಿ, ಬರ್ರಿ’ ಎಂದರು.

ಬಿಂದುರಾಯರು ‘ಏನಂತಾರ ಯಾಜಮಾನ್ರೂ?’ ಎಂದು ಒಂದಿಷ್ಟು ನಗುತ್ತಲೇ ಕೇಳಿದರು.

‘ಇದ್ದಾರ ಬರ್ರಿ. ಏನ್ರೀ ರೀ, ನಿಮ್ಮ ಗೆಳೆಂದ್ರು ಬಂದಾರ ನೋಡ್ರಿ’ ಎಂದು ನಡುಮನೆಯಲ್ಲಿ ಕುಳಿತಿದ್ದ ಗಂಡನನ್ನು ಎಚ್ಚರಿಸಿದರು.

‘ಯಾರು ಬಂದಾರು’ ಎಂದು ಬಂಡೂರಾವ ಕೇಳಿದ್ದಕ್ಕೆ ಒಳಗೆ ಬಂದ ಬಿಂದೂರಾವ ‘ನಾವೇರೆಪಾ, ನಾನು ಮತ್ತು ಇವನು’ ಎಂದು ಬಂದಿದ್ದೆ ಎದರಿದ್ದ ಖಾಲಿ ಪಲಂಗಿನ ಮೇಲೆ ಇಬ್ಬರೂ ಕುಳಿತುಕೊಂಡರು.

‘ದತ್ತಪ್ಪಾ, ಶ್ಯಾಮರಾಯಾ, ನೀವು ಬಂದಿದ್ದು ಭಾಳ ಛಲೋ ಆಯ್ತು. ನಿನ್ನೆ ಜಾರಬಂಡಿ ಮ್ಯಾಲಿಂದ ಜಾರಕೊಂಡು ಬಿದ್ದೆ. ಮೊಣಕಾಲಕ್ಕ ಭಾಳ ಪೆಟ್ಟಾಗೇದ’ ಎಂದು ಉಟ್ಟ ಪಂಚೆಯನ್ನು ಮೇಲಕ್ಕೆ ಸರಿಸಿ ತೋರಿಸಿದರು.

‘ಅಯ್ಯೋ ಪಾಪ, ಜಾರಬಂಡಿ ಆಡೋ ವಯಸ್ಸೇನ್ರೀ ಬಂಡೂರಾವ. ಈ ವಯಸ್ಸಿನ್ಯಾಗ ಇಂಥಾ ಆಟ ಆಡ ಬಾರದ್ರೆಪಾ’ ಎಂದು ಗೋಪಾಲರಾವ ತಮ್ಮ ಬುದ್ಧಿವಾದವನ್ನು ಹೇಳಿದರು.

‘ಕುಂಟ್ಲಪಿ ಆಟಾ ಆಡಬೇಕಂತ ಮಾಡಿದ್ದೆ. ಆದರೆ, ನೋಡಿಕೊಂಡ್ರು ಕಾಲೇ ಇರಲಿಲ್ಲ. ಅದ್ಕಂತ ಜಾರಿಬಂಡಿಮ್ಯಾಲ ಜ್ಯಾರಿದೆ’ ಎಂದು ತುಂಬ ಗಂಭೀರವಾಗಿಯೇ ಬಂಡೂರಾವ ಹೇಳಿದರು.

ಬಿಂದೂರಾವ ಮತ್ತು ಗೋಪಾಲರಾಯರಿಗೆ ಬಂಡೂರಾಯರ ತಲೆಕೆಟ್ಟಿದರ ಬಗ್ಗೆ ಖಾತ್ರಿಯಾಯಿತು. ಹತ್ತಿರದಲ್ಲಿಯೇ ನಿಂತ ಬಂಡೂರಾಯರ ಧರ್ಮಪತ್ನಿಯನ್ನು ನೋಡಿ 'ಡಾಕ್ಟರಿಗೆ ತೋರಿಸಿದ್ದೀರ್ರ್ಯಾ?' ಎಂದು ಬಿಂದೂರಾಯರು ಕೇಳಿದರು.

'ಅವರೀಗೇನ ಧಾಡಿ ಆಗೇದಂತ ತೋರಿಸಬೇಕು? ಛಲೋ ತಿಂತಾರ, ಉಣ್ತಾರ, ನಿದ್ದೀ ಹೊಡೀತಾರ. ಇನ್ನೇನು ಹೀಂಗ ಮಾತಾಡ್ತಾರ ಅಷ್ಟೇ. ಆಡಿಕೊಳ್ಳಲಿ' ಎಂದು ಧರ್ಮಪತ್ನಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

'ಅಲ್ಲ, ಹಾಂಗ ರಾಯರೂ ಛಲೋನೇಯಿದ್ದಾರ ತಲಿಮ್ಯಾಲ ಸ್ವಲ್ಪ 'ಆಸರ್' ಆದಂತದ. ಒಮ್ಮೆ ವನಳ್ಳಿ ಡಾಕ್ಟರನ ನಜರಿಗಿ ಹಾಕ್ರಿ' ಎಂದರು ಗೋಪಾಲರಾವ.

'ಮೊನ್ನೇ ಕಾರು ತೊಗೊಂಡು ಕಂಡಾಬಟ್ಟಿ ಖರ್ಚಾಗೇದ, ಮತ್ತ ಇದರದೊಂದು ಖರ್ಚಂದ್ರ, ಹ್ಯಾಂಗ ನೀಗ ಬೇಕ್ರೀ ಭೌಜಿ' ಎಂದರು ಶ್ರೀಮತಿ ಬಂಡೂರಾವ.

'ಕಾರು ತೊಗೊಂಡ ಮ್ಯಾಲ ತಲಿ ಕೆಟ್ತೊ ಅಥವಾ ತಲಿಕೆಟ್ಟಮ್ಯಾಲ ಕಾರ ತೊಗೊಂಡ್ರ್ರೋ'? ಎಂದು ಬಿಂದುರಾವ ಒಂದು ಮಾರ್ಮಿಕ ಪ್ರಶ್ನೆ ಕೇಳಿದರು.

'ಕಾರು ತೊಗೊಂಡ ಮ್ಯಾಲ ಹಿಂಗಾಯ್ತುರೀ ಮೊದಲೇ ಆಗಿತ್ತಂದ್ರ, ಕಾರೆಲ್ಲಿಂದ ಬರ್ತಿತ್ತು?' ಶ್ರೀಮತಿ ಬಂಡೂರಾಯರ ಉತ್ತರ.

'ದೇವರ ದಯಾ ಅಂತ ತಿಳಕೋಳಿ, ಕಾರು ಬಂದ ಮ್ಯಾಲ ಹೀಗಾಯ್ತು. ಮೊದಲೇ ಆಗಿದ್ರ ಕಾರೆಲ್ಲಿಂದ ಬರ್ತಿತ್ತೂ' ಎಂದು ಬಿಂದೂರಾವ ಹೇಳಿದರು.

'ಅಷ್ಟೇರೀ ಭೌಜಿ ದೇವರು ತಲೀಮ್ಯಾಲಿದ್ದಾಂತ, ಇವರ ತಲಿ ಆಮ್ಯಾಲ ಕೆಟ್ತು ಇದ್ದಿದ್ದಿಲ್ಲಾಂದ್ರ ಈ ಮಾರುತಿ ಝೆನ್ ಎಲ್ಲಿಂದ ಬರ್ತಿತ್ತರಿ?' ಬಿಂದೂರಾಯರ ಶ್ರೀಮತಿಯ ತಕ ಬದ್ಧ ವಿಚಾರವಿದು.

'ನಮ್ಮ ಹೆಸರೂ ಮರೆತುಬಿಟ್ಟಾರ' ಎಂದು ಗೋಪಾಲರಾವ್ ಅನ್ನುವಷ್ಟರಲ್ಲಿ 'ಹೆಸರಿನ್ಯಾಗೇನ ಇರ್ತದರೋ. ಅವನ್ಯಾವನೋ ಇಂಗ್ರೇಜಾಗ What is there in a name? ಅಂತೊ ಅಂದಾನಂತ. ನೀವು ನೀವಾಗಿದ್ದರಾಯ್ತು. ನಿಮ್ಮ ಹೆಸರು, ಸಿದ್ದಪಿದ್ದರೂ ಅಷ್ಟೇ. ಗುದ್ದಪ್ಪಿದ್ದರೂ ಅಷ್ಟೇ?' ಎಂದು, ನಿಮ್ಮ ನೀಯತ್ತು ಬರೋಬರಿಯಿಲ್ಲಾಂತ ಗೊತ್ತು. So, I say get out ಎಂದು ಗದರಿಸಿದರು ಬಂಡೂರಾವ.

ಬಂಡೂರಾಯರ ಸಿಟ್ಟನ್ನು ಅನುಲಕ್ಷಿಸಿ ಅಲ್ಲಿಂದ ಹೊರಡುವುದೇ ಯೋಗ್ಯವೆಂದು ಬಿಂದೂರಾವ ಮತ್ತು ಗೋಪಾಲರಾವ ಹೊರಟರು. ದಾರಿಯಲ್ಲಿ 'ಅವನೀಗೇನಾಗೇದ ಅದು ಬರೋಬರಿನೇ ಆಗೇದರೀ ಗೋಪಾಲರಾವ' ಎಂದರು ಬಿಂದೂರಾವ.

'ಯಾಕ್ರೆಪ್ಪಾ ಪಾಪ ಹೀಂಗಾಗ ಬಾರದಿತ್ತಲ್ಲ' ಗೋಪಾಲರಾವ ತಮ್ಮ ಸ್ವಭಾವಕ್ಕೆ ತಕ್ಕಂತೆಯೇ ಮಾತಾಡಿದರು.

'ಡಾಕ್ಟರ ಗಜೇಂದ್ರ, ಸರಕಾರಿ ಡಾಕ್ಟರ ಕತಿ ಕೇಳಿರಬೇಕಲ್ಲ?' ಎಂದು ಕೇಳಿದರು ಬಿಂದೂರಾವ.

'ಖರೇ ಅಂತೀರ್ರ್ಯಾ ಆ ಕತಿ?' ಎಂದು ಗೋಪಾಲರಾವ ಪ್ರಶ್ನಿಸಿದರು.

ಡಾಕ್ಟರ ಪ್ರಚಂಡ ಲಂಚಕೋರ. ತಿಂದಿದ್ದೇ ತಿಂದಿದ್ದು. ತಿಂದ ರುಡ್ಡು ಮನ್ಯಾಗಿಟ್ಟರ ಧಾಡೀ ಬೀಳಬಹುದೆಂದು ಈ ಬಂಡ್ಯಾನ ಹತ್ತಿರ ಗಂಟ ಇಡ್ತಿದ್ದಾ. ಸುಮಾರು ಎಂಟು-ಹತ್ತು ಲಕ್ಷ ಇಟ್ಟಿದ್ನಂತ. ಮುಂದ ಬದಲಿ ಆದಾಗ ರುಡ್ಡು ಕೇಳಲಿಕ್ಕಿ ಹೋದ್ನಂತ, ಬಂಡ್ಯಾ ಅಂದ್ನಂತ. 'ಯಾಕರೀ ಡಾಕ್ಟರ ತಲಿಗಿಲಿ ಕೆಟ್ಟಿದೇನು? ಯಾರ ಮನೀ ಹೊಡೀಬೇಕಂತ ಮಾಡಿರೀ?' ಅಂತ ಹೇಳಿ ಕೈ ಎತ್ತಿ ಬಿಟ್ನಂತ. ಪಾಪ ಡಾಕ್ಟರ್ ಏನ್ಮಾಡಬೇಕು? ಪ್ಯಾಲಿಹಾಂಗ ಮುಖಾ ಮಾಡಿ ಹೋಯ್ತಂತ. ಹೀಂಗ ಈ ಬಂಡ್ಯಾ ಶ್ರೀಮಂತನಾಗಿದ್ದು. ಶಾಪ ಹತ್ತಾಣಲ್ಲೇನ್ರಿ ಪಾಪದ ಹಣ ಬಂತಂದ್ರ. ಈಗ ನೋಡ್ರಿ, ಹುಚ್ಚಾದ. ಮನಷೇರು ಸುಮ್ಮನಿದ್ದರೂ, ದೇವರು ಹಾಂಗ ಇಂಥಾ ಅನ್ಯಾಯ ಸಹನ ಮಾಡ್ಯಾನು!

ಗೋಪಾಲರಾವ ನಿಟ್ಟುಸಿರು ಬಿಟ್ಟರು. 'ಏನೋರೆಪಾ ದೇವರಾಟಾ ದೇವರೇ ಬಲ್ಲ' ಎಂದು ಅಡ್ಡಾಡುತ್ತ ಪಾರ್ಕಿಗೆ ಬಂದರು. ಬೆಂಚಿನ ಮೇಲೆ ಕುಳಿತರು. ಇನ್ನೂ ಸಂಜೆಮುಂದಿನ ಸೂರ್ಯ ಬಂಗಾರದಂತಹ ಬೆಳಕು ಚೆಲುತ್ತಿದ್ದ. ಎಲ್ಲ ಕಡೆಗೆ ಹಸಿರಿತ್ತು. ಗಿಡಮರಗಳಿದ್ದವು. ಅಲ್ಲಲ್ಲಿ ಕೆಂಪು, ಹಳದಿ, ನೀಲಿ ಹೂ ಅರಳಿದ್ದವು. ವಾತಾವರಣ ಬಹಳ ಪ್ರಸನ್ನವಾಗಿತ್ತು.

'ಒಂದಿಷ್ಟು ನಿಸರ್ಗದ ಹತ್ತಿರವಾಗಿದ್ದರೆ ಮನುಷ್ಯನ ಬದುಕಿನಲ್ಲಿ ಉತ್ಸಾಹ ಇರ್ತದಲ್ಲ' ಎಂದು ಗೋಪಾಲರಾಯರು ಹೇಳಿದರು. ಮುಂದೊರೆಸುತ್ತ ಹಕ್ಕಿಪಕ್ಷಿಗಳ ದನಿ ಕೇಳೋದಿಲ್ಲ. ಕಾರೂ, ಸ್ಕೂಟರ್, ದೊಡ್ಡ ದೊಡ್ಡ ಮಂತ್ರಗಳ ಧ್ವನಿಯಿಂದಲೇ ತುಂಬಿ ಹೋಗಿರ್ತಾವ ನಮ್ಮ ಕಿವಿ. ಮನ್ಯಾಗನೂ ಟಿ.ವಿ. ಸೌಂಡ ಸಿಸ್ಟಮ, ರೆಕಾರ್ಡ ಪ್ಲೇಯರ ಒದರ್ತಿತಾವ. ಮಕ್ಕಳ ದನಿನೂ ಕೇಳಿಸೋದಿಲ್ಲ. ಇದೆಂಥ ಕಾಲ ಬಂದು, ಮಕ್ಕಳು ನಗುವ, ಆಡುವ, ಹಾಡುವ ಅಳುವುದನ್ನು ನೋಡಿ ಆನಂದಿಸುವ ಅವಕಾಶವೇ ಕಳೆದುಕೊಂಡಿದ್ದೇವೆ. ಭಾಳ ಬ್ಯಾಸ್ರ ಆಗ್ತದರೀ ಬಿಂದೂರಾವ. ನಮ್ಮ ಸಂಬಂಧಗಳು ಬದಲಾಗ್ತಾಯಿದೆಯಲ್ಲಾ?' ಎಂದು ಗೋಪಾಲರಾವ ಕೇಳಿದರು.

'ಅಂಥಾ ಕಾಲೇ ಬಂದದ, ಅದ್ಕೇನು ಮಾಡ್ಲಿಕಾಗ್ತದ. ಕಾಲಾಯ ತಸ್ಮೈನಮಃ ಅನ್ನಬೇಕು'

'ಕಾಲ ಬಂದಿಲ್ಲ, ನಾವೇ ಬೇಡಿಕಾಡಿ ತಂದುಕೊಂಡೀವಿ' ಗೋಪಾಲ ರಾವ ಹೇಳಿದರು.

'ಇದೇ ನೋಡ್ರೆಲಾ, ನಿಮ್ಮ ಮನ್ಯಾಗೇನಿಲ್ಲಾ? ಎಲ್ಲಾ ಆದ. ಆದರೂ, ಸ್ವಲ್ಪ ಹೊತ್ತಾದರು ಗೋಪಾಲನ ಮನೀಗಿ ನಿಮ್ಗ ಬರಬೇಕನ್ಸತದ. ನನಗ, ಪಾರ್ಕಿಗಿ ಬರಬೇಕನ್ಸತದ. ನನ್ನ ಹೆಣ್ತಗೆ ಕಮಲಮ್ಮನ ಜೊತಿ ಮಾತಾಡಬೇಕಂತ ಅನ್ಸತದ. ನಿಮ್ಮ ಹೆಣ್ತಗಿ, ನನ್ನ ಹೆಣ್ತಿ ಯಾಕ ಬರಲಿಲ್ಲಾಂತ ಕೇಳಬೇಕನ್ಸತದ. ಯಾಕ ಹೀಂಗಾಗ್ತದ ಬಿಂದುರಾವ? ಯಾಕ ಹೀಂಗ ಅನ್ಸತದ? ಯಾರದೋ ಟಿ.ವಿ. ಕೆಟ್ಟರ ನಮ್ಗ ಅಷ್ಟೊಂದು ಚಿಂತಿ ಆಗಾಣಲ್ಲ. ತಲೆಕೆಟ್ತೂ ಅಂದ್ರ ಚಿಂತಿ ಆಗ್ತದ. ಯಾರಿಗೂ ಹುಷಾರಿಲ್ಲಾಂತಂದ್ರ ಚಿಂತಿ ಆಗ್ತದ. ಯಾಕಾಗಬೇಕು? ನಾವು ಇನ್ನೂ ಎಲ್ಲೋ ಒಂದಕಡೀಗಿ ಮನುಷ್ಯರಾಗಿರ್ತೀವಿ ಅಂತ ಹೌಂದಲ್ಲೋ?' ಎಂದರು ಗೋಪಾಲರಾವ.

ಬಿಂದೂರಾವ 'ಸಂಜ್ಯಾಗ್ಲಿಕತ್ತು, ನಡೀರೆಪಾ ಮನೀಗಿ ಹೋಗೋಣು' ಎಂದರು.

'ನಡೀರಿ' ಎಂದೆದ್ದರು. ಬಿಂದೂರಾವ ತಮ್ಮ ಮನೆಯ ಕಡೆಗೆ ಹೊರಟರು. ಗೋಪಾಲರಾವ ದೇವಸ್ಥಾನಕೆಂದು ತಿರುಗಿದರು. ಇವರು ಮನೆಗೆ ಬಂದು ತಲುಪುವಷ್ಟರಲ್ಲಿ ರಾತ್ರಿ ಎಂಟುವರೆಯಾಗಿತ್ತು.

'ಯಾಕ್ರೀ ತಡ ಮಾಡಿದ್ರೀ?' ಹೋಗಿದ್ರೇನು ಆ ದರಿದ್ರನ ಮನೀಗೆ?' ಎಂದು ಕೃಷ್ಣವೇಣಿ ಕೇಳಿದರು.

'ಹೋಗಿದ್ದೆ' ಎಂದು ಕೋಟನ್ನು ಬಿಚ್ಚುತ್ತ ಗೋಪಾಲರಾಯರು ಹೇಳಿದರು.

'ಅವ್ನ ಮನೀಗಿ ಹೋಗಬ್ಯಾಡ್ರಿ ಅಂವಾ ಭಾಳ ಸುಮಾರ ಮನಷ್ಯಾ ಕಾಣ್ಸತ್ತಾನ'

'ಅಲ್ಲ, ಕಮಲಮ್ಮನ ಗಂಡನ ಅಂಗಡ್ಯಾಗ ಹೆಂಣ್ತಗಿ ಉಂಗ್ರಾ ಅಂತ ಹೇಳಿ ಆ ಸುಂದರಿಯಿದ್ವಾಳಲ್ಲ ಆಕೀಗಿ ಒಯ್ದು ಕೊಟ್ಟಾನಂತ' ಎಂದು ಕೃಷ್ಣವೇಣಿ ಹೇಳಿದರು.

ಗೋಪಾಲರಾಯರು ಗಹಗಹಿಸಿ ನಕ್ಕರು.

'ಯಾಕರೀ ನಗತೀರ್ರ್ಯಾ?' ಎಂದು ಕೃಷ್ಣವೇಣಿ ಕೇಳಿದರು.

'ರಸಿಕಾ, ಬಿಂದುರಾಯ ಎಂಥಾ ರಸಿಕಾಂತ, ನಗೂ ಬಂದು ನಕ್ಕೆ' ಎಂದು ಗೋಪಾಲರಾಯ ಈ ವಿಷಯವನ್ನೇ ಹಗುರುಗೊಳಿಸಿದರು.

'ಹಾಳಾಯ್ತು, ರಸಿಕಂತ ರಸಿಕ' ಎಂದು ಕೃಷ್ಣವೇಣಿ ಮೂಗು ಮುರಿದರು.

'ಇಲ್ಲಾ ಕೃಷ್ಣವೇಣಿ. ಪ್ರತಿಯೊಬ್ಬರಿಗೂ ತಮ್ಮದೇ ಒಂದಿಷ್ಟಿಷ್ಟು ಆಕಾಶ ಇರ್ತದೆ. ಆ ಚಿಕ್ಕ ಆಕಾಶದ ತುಂಡಿನೊಳ್ಗ ಸೂರ್ಯ, ಚಂದ್ರ, ನಕ್ಷತ್ರಗಳಿರ್ತಾವೆ. ಗ್ರಹಣಗಳಾಗ್ತಾವೆ. ಆಕಾಶದ ಮ್ಯಾಲ ಮೋಡ ಮಳೆ ಇರ್ತದೆ. ಮಿಂಚೂ

ಗೂಡುಗಟ್ಟಿ ಇರ್ತಾವೆ ಕೃಷ್ಣವೇಣಿ' ಎಂದು ಗೋಪಾಲರಾಯರು ಹೇಳಿದರು.

'ಮಾತಾಡಿದಷ್ಟು ಜೀವನ ಸರಳಿರ್ತದಂತೀರ್ಯಾ?' ಕೃಷ್ಣವೇಣಿ ಹಟಕ್ಕೆ ಬಿದ್ದಂತೆ ಕೇಳಿದರು. 'ಜೀವನ ನಿಮ್ಮ ಮಾತಿನ್ಹಾಂಗ ಇರಂಗಿಲ್ಲರೀ' ಎಂದು ತನ್ನ ಮತ ತಿಳಿಸಿದರು.

'ನಾನು ಹೇಳೋದು ಅದನ್ನೇ ಕೃಷ್ಣೆ' ಟಾಯಿಮಟೇಬಲ್ ಹಾಕಿ ಜೀವನಾ ಸಾಗಿಸಲಿಕ್ಕಾಗಾಂಗಿಲ್ಲ. ಯಾರ ಜೀವನಾ ಹ್ಯಾಂಗ ಸಾಗ್ತದಂತ ಹೇಳಲಿಕ್ಕಾಗಂಗಿಲ್ಲ. ಜೀವನ ಅಂಬೋದೆ, ರಹಸ್ಯ ಗೂಢವಾದಂಥದ್ದು.' ಗೋಪಾಲರಾವ್ ಜೀವನದ ವ್ಯಾಖ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದರು. ಕೃಷ್ಣವೇಣಿಗೆ ಅವರ ಮಾತಿನ ಮತಿತಾರ್ಥ ತಿಳಿದುಕೊಳ್ಳುವುದು ಬಹಳ ಜಟಿಲವಾಯಿತು. ವಾತಾವರಣವನ್ನು ಹಗುರುಗೊಳಿಸುವ ಉದ್ದೇಶದಿಂದ 'ಕೈಕಾಲು ತೊಳ್ಕೊಳ್ರಿ. ಊಟಮಾಡ್ರಿ,' ಎಂದರು.

ಗೋಪಾಲರಾವ ಶಾಲೆಯ ಹುಡುಗನಂತೆ, ಕೃಷ್ಣವೇಣಿಯ ಆದೇಶವನ್ನು ಪಾಲಿಸಿದರು.

ರಾತ್ರಿ ಹೊತ್ತು ನಿದ್ದೇನೇ ಬರಲಿಲ್ಲ, ಗೋಪಾಲರಾಯ, ತಾವು ತಿಳಿದುಕೊಂಡಂತೆ ಬಿಂದೂರಾವ ಇಲ್ಲವಲ್ಲ ಎಂಧು ತಮ್ಮ ಜ್ಞಾನದ ಮೇಲೆಯೇ ಅನುಮಾನಪಟ್ಟುಕೊಂಡರು. ಬಿಂದೂರಾವನ ಖಾಸಗಿ ಜೀವನ ಕೃಷ್ಣವೇಣಿ ಹೇಳಿದಂತೆ ನಿಜವಾಗಲೂ ಇರಬಹುದೇ? ಎಂತೆಲ್ಲ ವಿಚಾರಮಾಡುತ್ತ ಮಗ್ಗಲು ಹೊರಳಿಸುತ್ತ ರಾತ್ರಿ ಕಳೆದರು. ಬೆಳಗ್ಗೆ ಆರು ಗಂಟೆಗೆ ಎದ್ದು ಮುಖ ಮಾರ್ಜನ ಮಾಡಿಕೊಂಡು, ಅವರಿಗಿಂತ ಮುಂಚೆನೆ ಎದ್ದ ಕೃಷ್ಣವೇಣಿ ತಂದುಕೊಟ್ಟ ಚಹಾ ಕುಡಿದು ಸಂಯುಕ್ತ ಕರ್ನಾಟಕದ ದಾರಿ ಕಾಯುತ್ತ ಕುಳಿತರು. ಒಳಗಿನಿಂದ-

'ಹಾಸೀಗೆ ಹಾಸೂತ ಕೂಸಿಗೆ ಮಲಗಿಸುತ್ತ ಕೃಷ್ಣಾ ಎಂದೆನಬಾರದೆ. ಕೃಷ್ಣ ಕೃಷ್ಣಾ ಎಂದರೆ, ಕಷ್ಟೆಲ್ಲ ಪರಿಹಾರ ಕೃಷ್ಣಾ ಎಂದೆನಬಾರದೆ' ಎಂದು ಸಣ್ಣದಾಗಿ ಹಾಡುತ್ತಿರುವ ಕೃಷ್ಣವೇಣಿಯ ದನಿ ಕೇಳಿಸುತ್ತಿತ್ತು. ಇವೂತ್ತು ಎಂದಿನಂತೆ, ಬಿಂದೂರಾಯರು ಬಾರದೆಯಿದ್ದರೆ ಒಳ್ಳೆಯದೆಂದು ಅಂದುಕೊಂಡರು. ಅದ್ಯಾಕೋ ಬಿಂದೂರಾಯರ ಬಗ್ಗೆ ಉದಾಸೀನ ಭಾವ ಮೂಡಿತು.



'ಇನ್ನೊಂದಿಷ್ಟು ಚಹಾ ಬೇಕೇನ್ರೀ?' ಎಂದು ಕೃಷ್ಣವೇಣಿ ಕೇಳಿದರು.

'ಹಾಂ ಇದ್ದರ ಕೊಡು' ಅಂದರು ಗೋಪಾಲರಾಯರು.

ಕೃಷ್ಣವೇಣಿ ಚಹಾ ತಂದುಕೊಟ್ಟರು. ಗೋಪಾಲರಾಯರು ವರಾಂಡಾದಲ್ಲಿ ಕುಳಿತು ಸುರ್ಃ ಸುರ್ ಎಂದು ಚಹಾ ಕುಡಿಯಲಾರಂಭಿಸಿದರು.

ಅಂದಕೊಂಡ ಹಾಗೆ ಬಿಂದೂರಾಯರು ಬರಲೇ ಇಲ್ಲ. 'ಅಯ್ಯೋ ನಾನು ಹಂಗೆ ಅಂದಕೊಂಡಿದ್ದೆ. ಖರೇನೇ ಬಿಂದೂರಾವ ಬರಲಿಲ್ಲವಲ್ಲ' ಕೃಷ್ಣೆ ಎಂದರು.


'ಉಂಗುರದ ಮಾತು ಅವರ ಮುಂದೆ ಅಂದರೇನು?' ಕೃಷ್ಣವೇಣಿ ಕೇಳಿದರು.

'ಇಲ್ಲಾ ರಾತ್ರಿ ನೀ ಹೇಳೋತನಕಾ ನನ್ಗ ಗೊತ್ತೆ ಇರಲಿಲ್ಲವಲ್ಲ' ಆಶ್ಚರ್ಯದಿಂದ ಅಂದರು ಗೋಪಾಲರಾವ.

'ನಿಮ್ಗ ಗೊತ್ತಾಗಿರಬೇಕಂತ ಅವರಿಗಿ ತಿಳಿದಿದ್ದರ?' ಕೃಷ್ಣವೇಣಿ ಪ್ರಶ್ನಿಸಿದರು.

'ಅದ್ಹಾಂಗ ಸಾಧ್ಯ ಗಾಳಿಗಿ ಕಿಂವಿ ಇರ್ತಾವೇನು?' ಎಂದು ಗೋಪಾಲರಾವ ನಕ್ಕರು.

ಬಿಂದೂರಾಯರು ಬರುವ ಹೊತ್ತು ಮೀರಿ ಹೋಯಿತು. ಅವರು ಬರಲಿಲ್ಲವಲ್ಲ ಎಂದು ಮನಸ್ಸಿಗೆ ಹುರಹುರವಾಯಿತು. ಕೆಟ್ಟದ್ದೋ ಒಳ್ಳೆಯದ್ದೋ



ಯಾವುದೋ ಕಾರಣಕ್ಕಾಗಿ ಯಾರೋ ಹತ್ತಿರವಾಗಿರ್ತಾರ. ಅದ್ಯಾವದೋ ಕಾರಣದಿಂದ ಅವರು ದೂರಸರಿದರೆ ಒಂದು ರೀತಿಯ ವಿಚಿತ್ರ ಕಳವಳ ಪ್ರಾರಂಭವಾಗುತ್ತದೆ. ಅವ್ಯಕ್ತ ಕಾರಣದಿಂದ ಸಡಿಲವಾಗುತ್ತಿರುವ ಸಂಬಂಧಗಳು ಮತ್ತೆ ಗಟ್ಟಿಯಾಗಬೇಕೆಂದು ಮನಸ್ಸು ಬಯಸುತ್ತದೆ.

'ನಮ್ಮಂತೆಯೇ ಬೇರೆ ಜನಾನೂ ಇರಬೇಕಂತ ನಾವು ಯಾಕ ಬಯಸ್ತೇವೆ ಕೃಷ್ಣೆ?' ಎಂದು ಹೆಂಡತಿಯನ್ನು ಕೇಳಿದರು.

'ಬಯಸೋದೆಲ್ಲಿಂದ ಬಂತು?' ಎಂದರು ಕೃಷ್ಣವೇಣಿ.

'ಬೇರೆಬೇರೆ ಸೃಜನ ಚಿತ್ರಗಳಿಗೆ ಒಂದೇ ಸೃಜನ ಚೌಕಟ್ಟು ಹಾಕಬೇಕಂತೀವಲ್ಲ. ಇದು ಸರಿಯೇ?' ಗೋಪಾಲರಾಯರ ಪ್ರಶ್ನೆ.

ಕೃಷ್ಣವೇಣಿ ಉತ್ತರಿಸಲಿಲ್ಲ.

'ಮನುಷ್ಯರೆಂದರೆ ಅಚ್ಚಿನಲ್ಲಿ ಹಾಕಿ ತಯಾರಿಸಿದ್ದ ಮೂರ್ತಿಗಳೇ?' ತಮ್ಮಷ್ಟಕ್ಕೆ ತಾವೇ ಕೇಳಿಕೊಂಡರು ಗೋಪಾಲರಾಯರು.

ಉತ್ತರ ಏನೆಂದು ಗೊತ್ತಾಗಲಿಲ್ಲ.

ಕೃಷ್ಣವೇಣಿಗೆ ಕೈತುಂಬ ಕೆಲಸ. ಒಳಗೆ ಹೋದರು.

ಚಿಕ್ಕ ಮಕ್ಕಳು ಮನೆಮುಂದಿನ ಖಾಲಿ ಪ್ಲಾಟನಲ್ಲಿ ಕ್ರಿಕೆಟ್ ಆಡುತ್ತಿದ್ದರು. ಒಂದು ಕಡೆಗೆ ಒಂದೇ ಸ್ಟಂಪ್, ಇನ್ನೊಂದು ಕಡೆಗೆ ಮೂರು ಸ್ಟಂಪ್‌ಗಳನ್ನು ನೆಟ್ಟು ಹತ್ತಿಪ್ಪತ್ತು ಹುಡುಗರು ಆಡುತ್ತಿರುವುದನ್ನು ಗೋಪಾಲರಾವ ನೋಡುತ್ತ ಕುಳಿತರು. ತಲೆಯಲ್ಲಿ ವಿಚಾರಗಳ ಗೊಂದಲ ಹಾಗೇ ಇತ್ತು. ಆ ಕಡೆಗೆ ಹೆಚ್ಚು ಲಕ್ಷ್ಯಕೊಡದೆ, ಮಕ್ಕಳಾಟವನ್ನು ನೋಡತೊಡಗಿದರು. ತಲೆಯಲ್ಲಿ ಒಮ್ಮೆ ಬಿಂದೂರಾಯನ ಹುಚ್ಚಾ, ಇನ್ನೊಮ್ಮೆ ಬಿಂದೂರಾಯನ ಉಂಗರು, ಮತ್ತೊಂದು ಕ್ಷಣ ಆ ಸುಂದರಿಯ ರೂಪ, ಇನ್ನೊಂದು ಕ್ಷಣ ಇನ್ನೇನೋ? ಗೋಪಾಲರಾಯರು ಗಲಿಬಿಲಿಗೊಂಡರು. ನಿದ್ದೆ ಮಾಡಿ ಎದ್ದ ನಾಯಿಯಂತೆ, ತಲೆ ಜಾಡಿಸಿದರೆ, ವಿಚಾರಗಳು ಉದುರಿ ಬೀಳುತ್ತಾವೇನೆಂದು ತಲೆ ಜಾಡಿಸಿದರು. ಒಂದು ಕ್ಷಣ ಗಕ್ಕನೆ ನಿಂತು ಮತ್ತೆ ಜೋರಾಗಿ ತಿರುಗುವ ಯಂತ್ರದ ಬಗುರಿಯಂತೆ ವಿಚಾರಗಳು ನಿಂತು ಮತ್ತೆ ತಿರುಗಲಾರಂಭಿಸಿದವು. ಮೆಟ್ಟಲು ಮೇಲೆ ಬಂದು ಕುಳಿತರು. ಕುಳಿತುಕೊಂಡ ಒಂದೆರಡು ನಿಮಿಷಗಳಾಗಿರಬೇಕಷ್ಟೇ. ಕ್ರಿಕೆಟ್ ಚೆಂಡು, ರುಂಯ್‌ಂತ ಬಂದು ಹಣೆಗೆ ಅಪ್ಪಳಿಸಿತು. ಗೋಪಾಲರಾವ ಬೆಚ್ಚಿದರು. ಚೆಂಡು ಕಾಲಿನ ಹತ್ತಿರ ಬಿದ್ದಿತ್ತು. ಒಬ್ಬ ಹುಡುಗ ಓಡೋಡಿ ಬಂದ. 'ಅಜ್ಜಾ, ಅಜ್ಜಾ, ಆ ಬಾಲ್‌ಕೊಡ್ರಿ ಪ್ಲೀಸ್' ಅಂದ.

'ಅಲ್ಲೋ, ನಿನ್ನ ಚೆಂಡು ನೋಡಿಲ್ಲ, ಹಣೀಗಿ ಬಡೀತು. ಚಷ್ಮಾ ಕೆಳಗೆ ಬಿತ್ತು. ಇಲ್ಲಿನೋಡು ಹಣೀಗಿ ಬುಗುಟಿ ಬಂದದ' ಎಂದು ತಮ್ಮ ಕೈಯಲ್ಲಿ ಚೆಂಡನೆತ್ತಿಕೊಂಡು

'ಹೋಗು ಕೊಡಾಂಗಿಲ್ಲ ಹೋಗು' ಎಂದು ಗದರಿಸಿದರು.

ಅಷ್ಟರಲ್ಲಿ ಇನ್ನೂ ಮೂರು ನಾಲ್ಕು ಹುಡುಗರು ಬಂದರು.

'ಸಾರಿ ಅಂಕಲ ಸಾರಿ' ಎಂದ ಒಬ್ಬ ಹುಡುಗ.

'ಏನ್ ಸಾರಿನೋ ನನ್ನ ಹಣಿ ನೋಡು' ಗೋಪಾಲರಾವ ಹುಸಿ ಸಿಟ್ಟಿನಿಂದ ಅಂದರು. 'ಸಾರಿ ಅಂದ್ವೆಲ್ಲ ಅಂಕಲ. ಕೊಟ್ಟಬಿಡಿ ಅಂಕಲ ಪ್ಲೀಸ್' ಎಂದ, ಅದೇ ಹುಡುಗ.

ಆ ಹುಡುಗನತ್ತ ಚೆಂಡನ್ನು ಎಸೆಯುತ್ತ 'God bless you ಹೋಗ್ರಿ ಹೋಗ್ರಿ' ಎಂದರು ಗೋಪಾಲರಾವ. ಹುಡುಗರು, ಕವಣೆ ಕಲ್ಲಿನ ಬುರ‍್ರೆಂದು ಬರುವ ಶಬ್ದಕ್ಕೆ ಅಂಜಿ, ಜೋಳದ ತೆನೆಗಳ ಮೇಲೆ ಕುಳಿತಕೊಂಡ ಗುಬ್ಬಿ ಹಕ್ಕಿಗಳು ಒಮ್ಮಿಂದೊಮ್ಮೆಲೇ ಒಟ್ಟಿಗೆ ಹಾರಿಹೋದಂತೆ ಹಾರಿಹೋದವು. ಆ ದೃಶ್ಯವನ್ನು ಕಣ್ತುಂಬ ನೋಡಿದ ಗೋಪಾಲರಾಯರಿಗೆ ಒಂದು ಕ್ಷಣ ತಾವೇ ಆ ಹುಡುಗರಲ್ಲಿದ್ದಂತೆ ಭಾಸವಾಯಿತು.

'ಈ ಮಕ್ಕಳಾಕಾಶ ಎಷ್ಟೊಂದು ವಿಶಾಲವಾಗಿದೆಯಲ್ಲ' ಎಂದು ಎತ್ತರದ ದನಿಯಲ್ಲಿ ನುಡಿದರು. 'ಎಂಥ ವಿಚಿತ್ರವಾಗಿದೆ ಈ ಜೀವನ' ಎಂದು ಗಟ್ಟಿಯಾಗಿ ಹೇಳುತ್ತಲೇ ಒಳಗೆ ಹೋದರು.

'ಅಡಿಗೆ ಆಗೇದ ನಿಮ್ಗ ಮನಸ್ಸು ಬಂದಾಗ ಊಟ ಮಾಡ್ರಿ' ಎಂದು ಕೃಷ್ಣವೇಣಿ ಹೇಳಿದರು. 'ಹೂಂ ಚಳಿ ಭಾಳಾಗೇದ. ಸ್ವಲ್ಪ ಹೊತ್ತು ಬಿಸಲಾಗ ಕೂಡ್ಲೇನು?' ಎಂದು ಕೇಳಿದರು.

'ಕೂಡ್ರಿ, ಯಾರ ಬ್ಯಾಡಂತಾರ' ಕೃಷ್ಣವೇಣಿ.

ಗೋಪಾಲರಾವ ಹಿತ್ತಲಲ್ಲಿ 'ಚಕ್ಕಂತ' ಬಿದ್ದ ಬಿಸಿಲಿನಲ್ಲಿ ಕುಳಿತುಕೊಂಡರು. ಕಣ್ಮುಂದೆ ಒಂದು ಬೇವಿನ ಗಿಡ ತನ್ನ ಎಲ್ಲ ಶ್ರೀಮಂತಿಕೆಯೊಂದಿಗೆ ನಿಂತಿತ್ತು. ತಂಪುಗಾಳಿ ಹಾಲ್ಗುಡಿ ಮಗುವಿನ ಉಸಿರಿನಂತೆ ಭಾಸವಾಯಿತು. ಮೇಲೆ ನೀಲಿ ಆಕಾಶ-ಹೊಳೆಯುವ ಸೂರ್ಯ. ಅಲ್ಲಲ್ಲಿ ಹಾರುವ ಹಕ್ಕಿಗಳು. ಇದೆಂಥ ಅದ್ಭುತ ಸೌಂದರ್ಯ. ಎಂಥ ಅಲೌಕಿಕ ಶಾಂತಿ. ಮೈಮರೆತು ಕೂತುಕೊಂಡರು. ಒಂದರ್ಥದಲ್ಲಿ ಸಮಾಧಿ ಸ್ಥಿತಿಯಲ್ಲಿದ್ದರು. ಸಮಾಧಿ ಭಂಗವಾದದ್ದು ಕಮಲಮ್ಮನ ದನಿ ಕೇಳಿ. 'ನೋಡ್ರಿ, ಮೌಶಿ ನಮ್ಮ ನಾಯಿ ನೋಡಿದ್ರೇನು?'

'ಯಾಕ? ಏನಾಯ್ತು? ಎಲ್ಲಿ ಹೋಗೇದ?' ಎಂದು ಕೃಷ್ಣವೇಣಿ ಕೇಳಿದರು.

ಕಮಲಮ್ಮನ ದನಿಯಲ್ಲಿ, ಭಯ, ನೋವು, ದುಃಖವಿತ್ತು.

'ಬೆಳಗ್ಗೆ ಇಲ್ಲೇ ಅಂಗಳದಾಗ ಆಡ್ತಿತ್ತು. ಒಂದು ತಾಸಾಯ್ತು, ಕಾಣಸ್ತಿಲ್ಲ. ಅಲ್ಲಿ ಇಲ್ಲಿ ಓಣಿ ತುಂಬ ಹುಡಕ್ಯಾಡ ಬಂದನ್ರಿ. ಎಲ್ಲಿ ಕಾಣಲಿಲ್ಲ. ಇನ್ನೇನ ಮಾಡಬೇಕರಿ.'

'ಮೌಶೀ' ಎಂದು, ಕುಸಿದುಬಿದ್ದಳು.

'ಅವ್ವಾ ಕಮಲಾ, ಅಳಬ್ಯಾಡ ತಾಯಿ. ದೇವರ ಜಗಲಿಮ್ಯಾಲ ಒಂದು ತುಪ್ಪದ ದೀಪ ಹಚ್ಚಿಡು. ರೇಣುಕಮ್ಮನ ಹೆಸರ ಮ್ಯಾಲ ಒಂದು ರೂಪಾಯಿ ಮುಡುಪ ಕಟ್ಟಿಡು' ಎಂದು ಕೃಷ್ಣವೇಣಿ ಏಕವಚನಕ್ಕಿಳಿದು, ಮಗಳೀಗೆ ತಿಳಿಸಿದಂತೆ ಹೇಳಿದರು.

'ನಾಯಿ ಸಿಗಲಿಲ್ಲಾಂದ್ರ, ಅವರು ಬಂದು ನನ್ನ ಕೊಂದು ಬಿಡ್ತಾರರೀ ಮೌಶಿ' ಎಂದು ಕಮಲಮ್ಮಾ ಅಳತೊಡಗಿದರು.

'ಅಮ್ಮಾ ಗಾಬರಿಯಾಗಬ್ಯಾಡ. ನಿನ್ನ ಯಜಮಾನರು ಬರ್ಲಿ. ನಾ ಹೇಳ್ತೀನಿ. ಇವರೂ ಹೇಳ್ತಾರ' ಎಂದು ಕೃಷ್ಣವೇಣಿ ಸಮಾಧಾನ ಪಡಿಸಿದರು.

'ಏನಾಗೇದ? ಯಾಕಳ್ಳಿಕತ್ತೇದ ಹುಡುಗಿ?' ಒಳಗೆ ಬಂದು ಗೋಪಾಲರಾಯರು ಕೇಳಿದರು.

'ನಾಯಿ ಕಳೆದದಂತ' ಕೃಷ್ಣವೇಣಿ ಹೇಳಿದರು.

'ಹೌಂದಾ? ಅದಕ್ಯಾಕ ಚಿಂತಿ ಮಾಡ್ತೆಮ್ಮ. ಬರ್ತದ' ಗೋಪಾಲರಾಯರು ಸಮಾಧಾನ ಹೇಳಿದರು.

'ಇಲ್ಲರೀ ಕಾಕಾ, ಅದು ಬರೋದಿಲ್ಲದ. ಬರಬೇಕಾಗಿತ್ತಂದ್ರ, ಇಷ್ಟೊತ್ತಿಗೆ ಬರ್ತಿತ್ತು' ಎಂದರು ಕಮಲಮ್ಮ.

'ಸ್ವಲ್ಪ ಇರು ನಾನೋಡ್ಕೊಂಡು ಬರ್ತಿನಿ' ಎಂದರು ಗೋಪಾಲರಾಯ.

'ಊಟಾ ಮಾಡಿ ಹೋಗ್ರಿ,' ಕೃಷ್ಣ.

'ನೋಡಿ ಬಂದು ಊಟಾ ಮಾಡ್ತೀನಿ' ಎಂದು ಗೋಪಾಲರಾವ ಹೊರಟೇಬಿಟ್ಟರು. ಹೊರಗೆ ಬಂದು ಚಾಂದಲಾ ಮಸೀದಿ ಹಿಂದಿನಿಂದ ಅತ್ತಿತ್ತ ನೋಡುತ್ತ ನಡೆದರು. ಅಷ್ಟರಲ್ಲಿ ಚಮತ್ಕಾರವೆಂಬಂತೆ ನಾಯಿ ಎದುರಿನ ಬೀದಿಯಿಂದ ಕುಂಯ್ ಕುಂಯ್ ಎಂದು ಕುಂಯ್‌ಗುಡುತ್ತ ಗೋಪಾಲರಾಯರ ಮುಂದೆ ನಿಂತು, ಮುಖ ಮೇಲೆ ಮಾಡಿನೋಡಿತು. ಗೋಪಾಲರಾಯರಿಗೆ ಖುಷಿಯೋ ಖುಷಿ. ತತ್‌ಕ್ಷಣ ಎತ್ತಿಕೊಂಡರು. 'ಮರೀ ಎಲ್ಲಿ ಹೋಗಿದ್ದಪಾ? ನೀ ಚಿಕ್ಕಂವಾ, ಹಿಂಗ ಹೋಗಬಾರದು. ಜಗತ್ತು ಭಾಳ ಕ್ರೂರ ಅದ ಮರಿ. ಒಬ್ಬನೇ ಹಿಂಗ ಹೋಗಬಾರದು. ನಡಿ ಮಗು. ಮನೀಗಿ ನಡಿ' ಎಂದು ಗೋಪಾಲರಾಯರು ನಾಯಿ ಕುನ್ನಿಯನ್ನು ತಂದು ಕಮಲಮ್ಮನ ಕೈಗೆ ಕೊಟ್ಟರು. ಕಮಲಮ್ಮಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಗೋಪಾಲರಾಯರ ಕಾಲಿಗೆ ಬಿದ್ದಳು.

'ಏಳಮ್ಮಾ ಹಾಂಗೆಲ್ಲ ಮಾಡಬಾರದು ಏಳು!' ಎಂದರು. ಕಮಲಮ್ಮ ಎದ್ದು ಮನೆಗೆ ಹೋದರು. ಸ್ನಾನ ಊಟ ಮುಗಿಸಲಿಕ್ಕೆ ಸುಮಾರು ಹೊತ್ತಾಗಿತ್ತು. ಉಂಡು ವಿಶ್ರಾಂತಿಗೆಂದು ತಮ್ಮ ರೂಮಿಗೆ ಬಂದರು. ಸಂಜೆ ಆರಕ್ಕೆ ಚಹಾ ತಂದು ಹೆಂಡತಿ ಕೃಷ್ಣವೇಣಿ ಎಬ್ಬಿಸಿದಾಗೇ ಎದ್ದರು.

'ಚಹಾ ತೊಗೋಳ್ರಿ. ಇವೊತ್ತು ಪಾರ್ಕಿಗೆ ಹೋಗುವ ವಿಚಾರಿಲ್ಲೇನು?' ಎಂದು ಕೃಷ್ಣವೇಣಿ ಕೇಳಿದರು.

'ಹೋಗಬೇಕು ಹೋಗ್ತೀನಿ' ಎಂದು ಕೋಟು ಟೊಪ್ಪಿಗೆಯನ್ನು ಧರಿಸಿಕೊಂಡು ಹೊರಟರು. ಇನ್ನೂ ರಸ್ತೆಯ ತಿರುವಿಗೆ ಬಂದೇಯಿರಲಿಲ್ಲ, ಎದುರು ನೋಡಿದರೆ ಬಿಂದೂರಾವ ಕಾಣಿಸಿದರು.

ಬಿಂದೂ, ಬಿಂದೂರಾವ ಎಂದು ಕೂಗಿದರು. ಬಿಂದೂರಾವ ನಿಂತರು. ಗೋಪಾಲರಾವ ಇವೊತ್ತು ಮುಂಜಾನೆ ಬರಲಿಲ್ಲ? ಯಾಕ? ಎಂದು ಕೇಳಿದರು.

'ಬರಲಿಲ್ಲ. ಮನ್ಯಾಗ....' ಎಂದು ಬಿಂದೂರಾವ ಮಾತು ಕಚ್ಚಿಕೊಂಡರು.

'ಏನಾಯ್ತು. ಹೇಳಂಥ ವಿಷಯವಿದ್ದರೆ ಹೇಳ್ರಿ. ರಹಸ್ಯದ ಮಾತಿತ್ತಂದ್ರ ಬ್ಯಾಡ' ಎಂದು ಗೋಪಾಲರಾಯ ಹೇಳಿದರು.

'ರಹಸ್ಯೇನ ಬಂತೂ, ಮಾಧವ ಬ್ಯಾರೆ ಮನಿ ಮಾಡ್ತಾನಂತ' ಎಂದು ಖಿನ್ನತೆಯಿಂದ ಹೇಳಿದರು.

'ಆಗ್ಲಿಬಿಡ್ರಿ, ಬಿಂದೂರಾವ. ಯಾಕಿಷ್ಟೊಂದು ಚಿಂತಿಮಾಡ್ತೀರಿ?' ಗೋಪಾಲರಾವ ಅಂದರು.

'ಇದ್ದೊಬ್ಬ ಮಗಾ' ಎಂದು ಬಿಂದೂರಾವ ಕಂಪಿಸಿದರು.

'ಎಷ್ಟೊಂದು ಹಚ್ಗೊಂಡೀರಿ, ರಾಯರ? ಎಲ್ಲಿ ಮಗಾ, ಎಲ್ಲಿ ಹೆಂತಿ, ಎಲ್ಲಿ ತಮ್ಮ ಎಲ್ಲಿ ಅಣ್ಣ. ನೀವು ಮಾಧವನ ತಂದೆಯಾಗಿದ್ದು ಒಂದು ಆಕಸ್ಮಿಕ ರಾಯರ. ಹೋಗ್ಲಿಬಿಡ್ರಿ,' ಗೋಪಾಲ ರಾಯರು ತತ್ವಜ್ಞಾನಿಯಂತೆ ಮಾತಾಡಿದರು.

'ಕಾರೂ ಒಯ್ಯತಾನಂತ'-ಬಿಂದೂರಾವ.

'ಮಗಾನೇ ದೂರಾದಾಗ, ಕಾರಿನ ಚಿಂತಿ ಯಾಕ? ತೊಗೋಂಡು ಹೋಗ್ಲಿ' ಗೋಪಾಲರಾಯರ.

'ಆ ಕಾರಿಗಿ ರೊಕ್ಕ ನಾನು ಕೊಟ್ಟೇನಿ'-ಬಿಂದೂರಾವ.

'ಮಗನಿಗಿ ಜನ್ಮಾನೂ ನೀವೇ ಕೊಟ್ಟೀರಲ್ಲಾ' ಗೋಪಾಲರಾವ.



'ಇದೆಂಥ ಪ್ರಶ್ನೆ?' ಬಿಂದೂರಾವ.

'ಬಿಂದೂರಾವ, ಬಿಟ್ಟು ನೋಡಬೇಕು, ಕೊಟ್ಟನೋಡಬೇಕು' ಎಲ್ಲಾನಂದೂ ಅನ್ನೋದು ಹೋದಮ್ಯಾಲ ನಾವು ನಾವಾಗಿ ಉಳೀತೀವಿ ಇಲ್ಲಾಂದ್ರ, ನಮ್ಮತನದ ಒಂದು ಭಾಗ ಸಂತಾನಕ್ಕೆ ಮತ್ತೊಂದು ಭಾಗ ಹೆಣ್ತಿಗೆ, ಇನ್ನೊಂದು ಗೆಳೆಯರಿಗೆ. ಉಳಿದ ಭಾಗ ಅಪ್ಪ, ಅಮ್ಮಂದರಿಗೆ, ಹೀಂಗ ಹಂಚಿಕೊಟ್ರ, ನೀವು ಹ್ಯಾಂಗ ಉಳೀತೀರಿ? ಬಿಟ್ಟುಬಿಡ್ರಿ; 'ನಿಖಾಲಸ' ಉಳ್ದಬಿಡ್ರಿ.'

'ಹೌದು ಬಿಡಬೇಕು, ಇಲ್ಲಾಂದ್ರ ಬಿಂದೂರಾಯನ್ಯಾಂಗ ಹುಚ್ಚಾಗ ಬೇಕಾಗ್ತದ' ಬಿಂದೂರಾವ ತಮ್ಮಷ್ಟಕ್ಕೆ ತಾವು ಹೇಳಿಕೊಂಡರು.

'ಎಲ್ಲಾದರು ಕೂತು ಮಾತಾಡೋಣ' ಬಿಂದೂರಾವ.

'ಪಾರ್ಕಿಗೆ ಹೋಗೋಣ' ಗೋಪಾಲರಾವ ಬಿಂದೂರಾಯರ ಜೊತೆಗೆ ಪಾರ್ಕಿಗೆ ಬಂದು ದಿನನಿತ್ಯ ತಾವು ಕೂಡ್ರುವ ಬೆಂಚಿನ ಮೇಲೆ ನಾಲ್ಕು ಮಕ್ಕಳು ಕುಳಿತ್ತಿದ್ದವು. 'ಇಲ್ಲೆ ಹುಲ್ಲಿನ ಮ್ಯಾ ಕೂತರಾಯಿತು'

'ಹೂಂ' ಎಂದು ಬಿಂದೂರಾವ ಕುಳಿತೇಬಿಟ್ಟರು.

ಗೋಪಾಲರಾವ ಹರೆರಾಮ ಹರೆರಾಮ ಎಂದು ಕುಳಿತರು.

'ಗೋಪಾಲರಾವ, ಮನುಷ್ಯರೊಳಗಿನ ಆಸಕ್ತಿನೇ ಕಮ್ಮಿ ಆಗೇದ. ಹೆಂಡ್ತಿ ಮಕ್ಕಳು, ಬಂಧುಬಾಂಧವರು ಎಲ್ಲರೂ ತಮ್ಮ ಸ್ವಾರ್ಥಕ್ಕಾಗಿಯೇ ವಿನಹ ಪ್ರೀತಿ ವಿಶ್ವಾಸದ ಸಂಬಂಧಕ್ಕಾಗಿ ಅಲ್ಲ' ಎಂದು ಬಿಂದೂರಾಯರು ಅಂದರು.

'ಹೌದು ಇಷ್ಟಿದ್ದರು, ಬಿಂದೂರಾಯರ ಎಲ್ಲ ಸಂಬಂಧಗಳನ್ನು ಸ್ವಾರ್ಥದ ಮಟ್ಟಕ್ಕಿಳಸಲಿಕ್ಕಾಗೋದಿಲ್ಲ. ನಿಮ್ಮ ಮಗಾ ಮಾಧವ ಹೀಂಗ, ಬೇರೊಬ್ಬರ ಮಗ ತಾಯಿ ತಂದೆಗೆ ವಿಧೇಯನಾಗಿರ್ತಾನ'

'ಹೌಂದಲೋ' ಎಂದು ಗೋಪಾಲರಾಯರು ಸಮಾಧಾನ ಹೇಳಿದರು.

'ಯಾವುದೇ ಮಾತಿರಲಿ. ವ್ಯರ್ಥವಾಗಿಯೇ ನಾವು ಅದನ್ನ ತತ್ವದ ಮಟ್ಟಕ್ಕೆ, ಶಾಸ್ತ್ರದ ಮಟ್ಟಕ್ಕೆ ನೀತಿ ಅನೀತಿಯ ಮಟ್ಟಕ್ಕೆ ಏರಿಸಿ ಸಂಕಟಕ್ಕೊಳಗಾಗ್ತಿವಿ. ಹಾಂಗಾಗಬಾರದು. ನಾವು ಆದ ಘಟನೆಗಳನ್ನು ಕಳೆದುಹೋದು ಪ್ರತಿಯೊಂದು ಕ್ಷಣಗಳನ್ನು ಮರೆತು ಬಿಡುವುದನ್ನು ಕಲೀಬೇಕು. ಮೇಲಿಂದ ಮೇಲೆ ನೆನೆಸಿಕೊಳ್ತಾ ಕೂತರೆ ನಮ್ಮ ಜೀವನ ನರಕಪ್ರಾಯ ಆಗ್ತದ. ಹೊಸ ಸೂರ್ಯನನ್ನು ಹೊಸ ಗಾಳಿಯನ್ನು ಹೊಸ ಕತ್ತಲೆಯನ್ನೂ ಸ್ವಾಗತಿಸಬೇಕು. ಹೋಗವಾಗ ಸಂತೋಷದಿಂದ ವಿದಾಯ ಹೇಳಬೇಕು. ಇತಿಹಾಸದ ಧೂಳು ತುಂಬಿದ ಪುಟಗಳನ್ನು ಹರಿದು ತಿಂದರೆ ನಮಗೇ ಅಪಾಯ, ಬಿಂದೂರಾವ' ಎಂದು ಗೋಪಾಲರಾವ ಸುಮ್ಮನಾದರು. ಅವರ ಮೌನ ಬಿಂದೂರಾಯರಿಗೆ ಹರಿದು ತಿನ್ನುವಂತಾಯಿತು. ಚಡಪಡಿಸಿದರು.

'ಮಾತಾಡ್ರಿ, ಗೋಪಾಲರಾವ, ಮಾತಾಡ್ರಿ. ನಿಮ್ಮ ಮೌನ ನನಗೆ ಕಚ್ಚಿದಂತಾಗ್ಲಿಕತ್ತೇದ' ಎಂದು ಬಿಂದೂರಾವ ಕಳವಳಗೊಂಡು ಹೇಳಿದರು.

ಗೋಪಾಲರಾವ ನಕ್ಕರು. ಜೋರಾಗಿ ಹಾಹಾಹಾ ಎಂದು ನಕ್ಕು ಮತ್ತೆ ಸುಮ್ಮನಾದರು. 'ಒಂದ್ಮಾತು ಹೇಳಲ್ಯಾ?' ಎಂದು ಬಿಂದೂರಾವ ಕೇಳಿದರು.

'ಹೇಳ್ರಿ' ಎಂದರು ಗೋಪಾಲರಾವ.

'ಕಳೆದ ವರ್ಷ ನನ್ನ ಹೆಂಡ್ತಿ ನನ್ನ ಜೀವನ, ನರಕಪ್ರಾಯ ಮಾಡಿದ್ದಳು' ಎಂದರು ಬಿಂದೂರಾವ. 'ಆಗ ನಾ ಸುಂದರಿಯ ಸಂಪರ್ಕದಲ್ಲಿ ಬಂದೆ.


ಅವಳಿಂದ ಮಾನಸಿಕ ಶಾಂತಿ ಪಡೆದೆ. ಸುಂದರಿ ಎಂಥವಳೆಂದು ಗೊತ್ತಿದ್ದೊ' ಎಂದು ಬಿಂದೂರಾವ ತಡವರಿಸಿದರು. ಅವಳು ಆ ಹೊತ್ತಿನಲ್ಲಿ ನನಗೆ ಕೊಟ್ಟ ಸುಖ, ಸಮಾಧಾನ ಎಂದಿಗೂ ಮರೆಯುವಂತಿಲ್ಲ. ಒಂದು ರೀತಿಯಲ್ಲಿ ನಾನು ಅವಳಿಗೆ ಕೃತಜ್ಞನಾಗಿದ್ದೇನೆ. ಅವಳ ಉಪಕಾರ ತೀರಿಸಲಿಕ್ಕೆ ಇನ್ನೂ ಸಹ ಸಹಾಯ ಮಾಡ್ತೇನೆ' ಎಂದು ಬಿಂದೂರಾಯರು ತಮ್ಮ ಗುಟ್ಟನ್ನು ಬಿಚ್ಚಿದರು.

'ಗೊತ್ತು, ತಪ್ಪೇನಿಲ್ಲ ಅದರಲ್ಲಿ... ಬಿಂದೂರಾವ, ತಪ್ಪೇನಿಲ್ಲ. ಅನಿರೀಕ್ಷಿತವಾಗಿಯೇ ವಿಚಿತ್ರ ಸಂಬಂಧಗಳು ಹುಟ್ಟಿಕೊಳ್ತಾವೆ. ಕೆಲವು ದಿವಸ ಇರ್ತಾವೆ. ಕೆಲವೊಂದು ಜೀವನವಿಡೀ ಇರ್ತಾವೆ. ಅದಕ್ಕೆ ಪರಿಹಾರ ಇಲ್ಲ. ಅವುಗಳ ಜೊತೆಗೆ ಇರೋದನ್ನು ಕಲೀಬೇಕು. ಕಲೀಲಿಲ್ಲಾಂದ್ರೆ, ಬಿಂದೂ ರಾಯನಂತೆ ಹುಚ್ಚಾಗಬೇಕಾಗ್ತದೆ' ಗೋಪಾಲರಾವ ವಿಸ್ತರಿಸಿ ಹೇಳಿದರು.

'ಹೊತ್ತಾಯ್ತು ನಡೀರಿ' ಬಿಂದೂರಾವ ಎದ್ದರು. ಬಿಂದೂರಾಯರನ್ನು ಅವರ ಮನೆಯತನಕ ತಲುಪಿಸಿ ಗೋಪಾಲರಾವ ಮನೆಗೆ ಬಂದರು.

ಕೃಷ್ಣವೇಣಿ ದಾರಿ ಕಾಯುತ್ತಿದ್ದರು. ಊಟ ಮಾಡಿ ಗೋಪಾಲರಾವ ಮಲಗಬೇಕೆಂದು ರೂಮಿಗೆ ಬಂದಾಗ ಕಿಟಕಿಯಿಂದ ಬೆಳದಿಂಗಳು ಒಳಗೆ, ಹಾಸಿಗೆಯ ಮೇಲೆ ಬಿದ್ದಿತ್ತು. ವಿಚಿತ್ರವೆನಿಸಿತು. ಗೋಪಾಲರಾಯರಿಗೆ ಟ್ರಾನ್ಸ್‌ನಲ್ಲಿ ಹೋದಂತಾಯಿತು. ತಮ್ಮಷ್ಟಕ್ಕೆ ತಾವೇ ಗಟ್ಟಿಯಾಗಿ

ಅಂಗೈ ಅಗಲು ಆಕಾಶ
ಕ್ಷಿತಿಜ ಮುಟ್ಟುವ, ಹಂಬಲದ ಆಕಾಂಕ್ಷೆ
ಕನಸುಗಳ ಭವನಗಳು
ಬಿರುಗಾಳಿ, ದಟ್ಟ ಅರಣ್ಯ
ತೇಲಿ ಬರುತ್ತಿವೆ-ಸ್ವರ್ಣಕಿರಣಗಳ ಮಾಲೆ
ಮೂಡಿಬರುತ್ತಿವೆ, ಕೋಲ್ಮಿಂಚು
ಯಾರಿಗಾಗಿ?
ಯಾರು? ಎಲ್ಲಿ ಕುಳಿತ್ತಿದ್ದಾರೆ?
ಯಾಕೆ ತೇಲಿ ಬಿಟ್ಟಿದ್ದಾರೆ ಈ ಅಂತರಿಕ್ಷದಲ್ಲೀ ನೆಲದ ಉಂಡೆ
ಈ ಅಪರಿಮಿತ ವಿಸ್ತಾರದಲ್ಲಿ-
ನಾವ್ಯಾರು?
ಬರಿ ದಾರಿ-ಗುರಿ? ಗೊತ್ತಿಲ್ಲ
ನಡೆಯಬೇಕು ತಿರುಗಿ ಮತ್ತೆ ನಡೆಯಬೇಕು
ತಲೆಯ ಮೇಲೆ ಹೊತ್ತು, ಅಂಗೈ ಅಗಲು ಆಕಾಶ.



[illegible]

ಭ್ರಷ್ಟತೆಯ ಕತ್ತಲಲ್ಲಿ ಒಂದು ಪಣತಿ



'ರೇಷನ್ ಕಾರ್ಡ್, ಅಡ್ಮಿಷನ್, ಆಸ್ಪತ್ರೆ, ಮಾಸಾಶನಗಳಂಥ ಸಭ್ಯ ಪೋಷಾಕಿನಲ್ಲಿ ಭ್ರಷ್ಟಾಚಾರದ ಕತ್ತಲು ಹಠಾತ್ತನೆ ನಿಮ್ಮೆದುರು ನಿಂತಾಗ, ಸೊಪ್ಪು ಹಾಕದೆ, ನಿಮ್ಮ ಆತ್ಮಸಾಕ್ಷಿಗನುಗುಣವಾಗಿ ವರ್ತಿಸಿ, ಒಂದು ಭ್ರಷ್ಟ ಅಂಕುರವನ್ನು ಹೇಗೆ ಚಿವುಟಿದಿರಿ?'

-ಎಂದು ನಾವು ಕೇಳಿದ ಪ್ರಶ್ನೆಗೆ ಬಂದ ಉತ್ತರಗಳು ನೂರಾರು. ಆಯ್ದ ಕೆಲ ವೈವಿಧ್ಯಮಯ ಬರಹಗಳನ್ನಿಲ್ಲಿ ಕೊಡುತ್ತಿದ್ದೇವೆ. ಸ್ಥಳಾಭಾವದ ಕಾರಣ, ಉಳಿದ ಕೆಲವು ಮೇ ಸಂಚಿಕೆಯಲ್ಲಿ ಪ್ರಕಟಗೊಳ್ಳುತ್ತವೆ. ಉತ್ಸಾಹದಿಂದ ಪ್ರತಿಕ್ರಿಯಿಸಿದ ಓದುಗರಿಗೆಲ್ಲ ಕೃತಜ್ಞತೆ.

ಹುಲಿ ಬೇಟೆ

1975ರ ಸಂಗತಿ.

ದೆಹಲಿ ವಿಶ್ವವಿದ್ಯಾಲಯದಿಂದ ಆರೋಗ್ಯ ಶಿಕ್ಷಣದಲ್ಲಿ ಸ್ನಾತಕೋತ್ತರ ಡಿಪ್ಲೋಮ ಪಡೆದು ನಾನು ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯದ ಪ್ರಸವೋತ್ತರ ಕೇಂದ್ರದಲ್ಲಿ ವಿಸ್ತೀರ್ಣಾ ಆರೋಗ್ಯ ಶಿಕ್ಷಣಾಧಿಕಾರಿಯೆಂದು ಪದೋನ್ನತಿ ಪಡೆದು ಕೆಲಸಕ್ಕೆ ಹಾಜರಾದೆ.

ದೆಹಲಿಯಿಂದ ಮುಂಬಯಿ, ಮುಂಬಯಿಯಿಂದ ಬಳ್ಳಾರಿಗೆ ಬಂದ ಬಗ್ಗೆ ಪ್ರವಾಸ ಭತ್ತೆ ಬಿಲ್ಲನ್ನು ಮಾಡಿ ಕಾರ್ಯಾಲಯದಲ್ಲಿ ಹಾಜರುಪಡಿಸಿದೆ. ಕಾಲೇಜಿನ ಕಾರ್ಯದರ್ಶಿಗಳು ಬಿಲ್ಲುಗಳನ್ನು ಪಾಸುಮಾಡಬೇಕಿತ್ತು. ಸಲ್ಲಿಸಿ ಎರಡು-ಮೂರು ತಿಂಗಳಾದರೂ ಅವರು ಅವು ಗಳನ್ನು ಕಣ್ಣೆತ್ತಿಯೂ ನೋಡಿರಲಿಲ್ಲ. ಕೊನೆಗೆ ಕಾರ್ಯದರ್ಶಿಗಳನ್ನು ಸ್ವತಃ ಕಂಡು ಬಂದೆ. ಪ್ರಯೋಜನವಾಗಲಿಲ್ಲ.



ಈ ಹಿಂದೆ ಆಪತ್ಕಾಲದಲ್ಲಿ ನೆರವಾದ ನನ್ನ ಮುಂಬಯಿ ಮಿತ್ರ, ನಾನು ಬೇಗನೆ ಸಾಲ ತೀರಿಸದ ಕಾರಣ ಕಠೋರವಾದ ಓಲೆಯೊಂದನ್ನು ಬರೆದ. ಅದನ್ನು ನಾನು ಕಾರ್ಯದರ್ಶಿಗೆ ತೋರಿಸಿದೆ. ಆಗ ನನ್ನ ಕಣ್ಣುಗಳು ತೇವವಾಗಿದ್ದವು.

"ಅಂಟನ್ನ, ಹಿಂಗ ಕಣ್ಣೊಳಗ ನೀರು ತಂದ ಹೇಳಿದರ, ನಿಮ್ಮ ಬಿಲ್ಲುಗಳು ಪಾಸಾಗತಾವಂತ ತಿಳಿದೀರೇನು ನೀವು? ಅದನ್ನು ಬಿಟ್ಟು ಸರಳ ವ್ಯವಹಾರದ ಮಾತು ಮಾತಾಡ್ರಿ. ನಿಮ್ಮ ಕೆಲಸ ಮಾಡಿಕೊಡತೇನಿ" ಅಂದರು. ನನಗೆ ಹಣದ ಅವಶ್ಯಕತೆ ತೀವ್ರವಾಗಿತ್ತು. ಅನಿವಾರ್ಯವಾಗಿ ಒಂದು ನೂರು ರೂಪಾಯಿ ಕೊಡಲು ಒಪ್ಪಿಕೊಂಡೆ.

ಒಂದು ದಿನ ಆಫೀಸಿಗೆ ಫೋನಾಯಿಸಿ, ನನ್ನ ಬಿಲ್ಲುಗಳ ಬಗ್ಗೆ ಕಾರ್ಯದರ್ಶಿಯವರಿಗೆ ಜ್ಞಾಪಿಸಿದೆ. ಆಗಲಿ, ನಾಳೆ ಬರ್ರಿ.. ಆದರ, ಬರೂಮುಂದ ಕೈಜೇಸ್ತ ಬರಿಗೈಲೆ ಬರಬ್ಯಾಡ್ರಿ.. ರೊಕ್ಕಾ ತಗೊಂಡ ಬರ್ರಿ.. ಇಲ್ಲಿದ್ರ ನಿಮ್ಮ ಬಿಲ್ಲುಗಳು ಹಂಗS ಕೂಡತಾವ ನೋಡ್ರಿ, - ಎಂದು ಆತ ನನಗೆ ಎಚ್ಚರಿಕೆ ಕೊಟ್ಟರು. ಸಾಲ ಕೊಟ್ಟ ಸಾಹುಕಾರನ ಧರತಿಯ ಆತನ ವರ್ತನೆ ನನಗೆ ವಿಪರೀತ ಕೋಪ ತರಿಸಿತು. ಈತನಿಗೆ ಶಾಶ್ವತವಾದ ಪಾಠವನ್ನು ಕಲಿಸಲೇಬೇಕೆಂದು ನೇರವಾಗಿ ವಿಜಲೆನ್ಸ್ ಆಫೀಸಿಗೆ ಹೋಗಿ ದೂರಿತ್ತೆ. ಮರುದಿನ - ಅಂದು ಎರಡನೆಯ ಶನಿವಾರ ರಜಾದಿನವಾದರೂ - ಕಾರ್ಯದರ್ಶಿ ನನ್ನ ಹಣಕ್ಕಾಗಿ ಕಾರ್ಯಾಲಯದಲ್ಲಿ ಕಾಯುತ್ತಿರುತ್ತಾರೆಂದು ಖಚಿತವಾಗಿ ನಾನು ಹೇಳಿದ್ದರಿಂದ, ವಿಜಲೆನ್ಸ್ ಕಾರ್ಯಾಲಯದವರು ರಾತ್ರೋರಾತ್ರಿ ಹೊಸಪೇಟೆಯಲ್ಲಿ ತಂಗಿದ್ದ ತಮ್ಮ ಮೇಲಾಧಿಕಾರಿ ಮತ್ತು ತಂಡದವರನ್ನು ಕರೆಯಿಸಿಕೊಂಡು ಜಾಣ್ಮೆಯಿಂದ ಜಾಲ ಬೀಸಿ ಕಾರ್ಯದರ್ಶಿಯವರನ್ನು ಬಲಿ ತೆಗೆದುಕೊಂಡರು.

ಇದರಿಂದ ನನ್ನ ಮಾನಸಿಕ ಸ್ಥಿತಿ ಎರಡು ಮೂರು ದಿನ ತಲ್ಲಣಗೊಂಡಿತ್ತು. ಆದರೆ ಇಡೀ ಇಲಾಖೆಯನ್ನೇ ಹೊತ್ತು ನಿಂತ ಕಾರ್ಯದರ್ಶಿಯನ್ನು ಬೇಟೆಯಾಡುವ ಧೈರ್ಯ ಮಾಡಿದ್ದರಿಂದ ಬಳ್ಳಾರಿ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಸಿಬ್ಬಂದಿಯವರು-ಒಂದಿಲ್ಲೊಂದು ಸಂದರ್ಭದಲ್ಲಿ ಆತನಿಂದ ತೊಂದರೆಪಟ್ಟವರು-ನನ್ನನ್ನು ಆತ್ಮೀಯವಾಗಿ ಅಭಿನಂದಿಸಿದರು. ಸುದ್ದಿ ತಿಳಿದು ಮಂಗಳೂರಿನಂಥ ದೂರದ ಊರಿನಿಂದ ಒಬ್ಬ ತಂತಿ ಸಂದೇಶವನ್ನು ಕಳುಹಿಸಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದ್ದ.

ಮುದ್ದೆ ಮಾಲು ಸಹಿತ ಸಿಕ್ಕಿಬಿದ್ದ ಕಾರ್ಯದರ್ಶಿಗೆ ಜೈಲುಶಿಕ್ಷೆ ಅನುಭವಿಸುವುದು ಅನಿವಾರ್ಯವಾಗಿತ್ತು.

ಬೆಳಗಾವಿ — ಎಂ.ಸಿ. ಅಂಟಿನ

ಮರಳಿ, ಮರಳಿ ಯತ್ನವ ಮಾಡೆ...


ನಾನು First-aid training ಮುಗಿಸಿದ್ದೆ. ಈ training ಆದ ಮೇಲೆ ಯಶವಂತಪುರದ RTO ಆಫೀಸಿನಲ್ಲಿ FCL (Fresh conductor Licence)ನ್ನು ಮಾಡಿಸಬೇಕು. ಹಾಗೆ ಮಾಡಿಸಿದಲ್ಲಿ ನಿರ್ವಾಹಕನ ಕೆಲಸಕ್ಕೆ ಅರ್ಜಿ ಹಾಕಬಹುದು. First aid training ಸರ್ಟಿಫಿಕೇಟ್ ಬಂದ ನಂತರ RTO officeಗೆ ಹೋದರೆ ಅಲ್ಲಿ ದುಡ್ಡೇ ದೊಡ್ಡಪ್ಪ ಎಂದು ತಿಳಿಯಿತು. ಹಾಗೂ ಹೀಗೂ ಮಾಡಿ FCLಗೆ ಅರ್ಜಿಯೇನೋ ಹಾಕಿದೆ. ಆದರೆ interview ನಲ್ಲಿ ನಪಾಸಾದೆ. interviewನಲ್ಲಿ ನಿರ್ವಾಹಕನಿಗೆ ಗೊತ್ತಿರಲೇಬೇಕಾದ 20 ನಿಯಮಗಳನ್ನು ಹೇಳಬೇಕು. ಆದರೆ ನಾನು 18 ನಿಯಮಗಳನ್ನು ಹೇಳಿದೆ. ಆದರೂ ಛಲ ಬಿಡದೆ ಮತ್ತೆ ಅರ್ಜಿ ಸಲ್ಲಿಸಿದೆ. 20 ನಿಯಮವನ್ನು ಹೇಳಿದೆ. ನಾನು ಆ ರೀತಿ ಹೇಳಿದ್ದನ್ನು ಕೇಳಿ ಬೇರೆ ಬೇರೆಯ ಪ್ರಶ್ನೆಯನ್ನು ಕೇಳಿ ನನ್ನನ್ನು ತಬ್ಬಿಬ್ಬುಗೊಳಿಸಿಬಿಟ್ಟರು. ನಾನು ನಪಾಸಾದೆ. ಬಹಳ ಬೇಜಾರಾಯಿತು.



ಆದರೂ ಕಡೆ ಬಾರಿ ಎಂದು ಮತ್ತೆ ಅರ್ಜಿ ಲಗಾಯಿಸಿದೆ. ಈ ಬಾರಿ ನನ್ನ ಊಹೆ ಸುಳ್ಳಾಗಲಿಲ್ಲ ನಾನು ಪಾಸಾದೆ. ಹೀಗೆ ದುಡ್ಡೇ ದೊಡ್ಡಪ್ಪನಾಗಿರುವ ಕಡೆ ನನ್ನ ಆತ್ಮಗೌರವ ಅದರಪ್ಪನಾಗಿ ಮೆರೆಯಿತು.

ದೊಡ್ಡಬಳ್ಳಾಪುರ — **ಆರ್. ಪಿ. ರಘೋತ್ತಮ ರಾವ್**

ಪ್ರತಿಭಟನೆಯಿಲ್ಲಿದ್ರೆ, ಗೂಟವೂ ದರ್ಬಾರು ನಡೆಸುತ್ತೆ



ನಮ್ಮದೊಂದು ಕುಗ್ರಾಮ. ಅಲ್ಲೊಬ್ಬ ಗ್ರಾಮಲೆಕ್ಕಾಧಿಕಾರಿ.

ಗ್ರಾಮಲೆಕ್ಕಿಗನೆಂದು ನಮ್ಮಲ್ಲಿಗೆ ನೇಮಕವಾದಾಗಿನಿಂದ ನಮ್ಮೂರಿಗೆ ಅವರು ಬಂದುದು ಎಂದೋ, ಏನೋ. ಅವರು ಬಂದರೆ, ಅಂದೇ ಹುಣ್ಣಿಮೆ. ಇಂತಹುದರಲ್ಲಿ ಆ ವ್ಯಕ್ತಿಯ ಸುಲಿಗೆ ಮಾತ್ರ ಯಾವ ಅಂಜಿಕೆ-ನಾಚಿಕೆಗಳಿಲ್ಲದೆ ಸಾಂಗವಾಗಿ ನಡೆಯುತ್ತಿತ್ತು. ಪ್ರತಿಭಟನೆ ಇಲ್ಲದಿದ್ದರೆ, ಗೋಡೆಯಲ್ಲಿನ ಗೂಟವೂ ದರಬಾರು ನಡೆಸುತ್ತದಂತೆ, ಅಂಥದುರಲ್ಲಿ ಗ್ರಾಮಲೆಕ್ಕಾಧಿಕಾರಿ ಮಹಾಶಯರು!



ನಾನು, ಇಬ್ಬರು ಯುವ ಮಿತ್ರರು ಆದಾಯ ಪತ್ರ ಪಡೆಯಬೇಕಿತ್ತು. ಬರೆದುಕೊಟ್ಟರು, ಜೊತೆಗೆ ತಲಾ ಇಪ್ಪತ್ತು ರೂಪಾಯಿ ಬೇಡಿಕೆಯಿಟ್ಟರು. 'ಯಾವುದಕ್ಕೆ ಬೇಕು ಹೇಳಿ ಕೊಡುತ್ತೇವೆ' ಎಂದೆ. 'ಅದು ನಮ್ಮ ಬಾಬತ್ತು' ಎಂದರವರು. 'ಹಾಗಂತ ಕಾನೂನೇನಾದರೂ ಇದೆಯೇ ಇದ್ದರೆ ಕೊಡುತ್ತೇವೆ' ಎಂದು ಅಣಕವಾಡಿದೆವು. 'ಅದು ನಮ್ಮ ಕಾನೂನು, ದುಡ್ಡಿದ್ದರೆ ಮಾತ್ರ ಕೆಲಸ' ಎಂದರು.

'ಸರಿ, ನಮಗಿದು ಗೊತ್ತೆ ಇರಲಿಲ್ಲ. ತಹಶೀಲದಾರರ ಹತ್ತಿರ ಇದನ್ನು ಕೇಳಿ ದೃಢಪಡಿಸಿಕೊಂಡು ಕೊಡುತ್ತೇವೆ, ನಡೆಯಿರಿ ಹೋಗೋಣ' ಎಂದು. ಮೂವರೂ ಸೇರಿ ದಫ್ತರಗಳ ಸಮೇತ ಅವರನ್ನು ಎತ್ತಿಕೊಂಡು ಹೊರಟೆವು. ಆತ ಎಂದೂ ಊಹಿಸದ ಈ ಹಟಾತ್ ಪ್ರತಿಭಟನೆಗೆ ಬೆದರಿ, ಅಲ್ಲಲ್ಲೇ ಬೆವರತೊಡಗಿದ.

ಅಲ್ಲಿ ಸೇರಿದ್ದ ಊರವರೆಲ್ಲ ಬಿಡಿಸಿ, ಕಳಗಿಳಿಸಿ, ಎಷ್ಟಾದರೂ ಕೊಟ್ಟು ತೆಗೆದುಕೊಂಡು ಹೋಗಿ, ನಾವೇ ಕಲಿಸಿದ್ದೇವೆ, ಅವರು ಕೇಳುವದರಲ್ಲಿ ತಪ್ಪೇನಿದೆ? ಎಂದರು.

ಮೂವರೂ ಸೇರಿ, ಅವರೆಲ್ಲರ ತಪ್ಪನ್ನು ಎಣಿಸಿ ಊರವರಿಗೂ, ಅಧಿಕಾರಿಗೂ ಉಗಿದು, ಛೀಮಾರಿ ಹಾಕಿ, ಲಂಚ ಕೊಡದಿರುವ ಔಚಿತ್ಯ ತಿಳಿಸಿ ಹೇಳಿದೆವು.

ಹಾವೇರಿ — ಲಿಂಗರಾಜ ಚ. ಸೊಟ್ಟಪ್ಪನವರ

ಸಮಯಕ್ಕೊದಗಿದ ಹಳೇ ಲಾಟ್ರಿ ಟಿಕೇಟು!

1988 ಸೆಪ್ಟೆಂಬರ್ ಡಿಸಿ ಜನರಲ್ ಮ್ಯಾನೇಜರ್ ಹೂಗಾರ ಸಾಹೇಬರು ತಮ್ಮ ಮೆಚೂರ್ ಆದ 'ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್'ನ ಹಣವನ್ನು ಜಿ.ಪಿ.ಓ.ದಿಂದ ತರುತ್ತಿರಾ ಎಂದು ನನ್ನನ್ನು ಕೇಳಿದರು. ಹಿಂದೆ ಸಹಿ ಮಾಡಿಕೊಟ್ಟರು. ತೆಗೆದುಕೊಂಡೆ. ಜಿ.ಪಿ.ಓ.ದ ಎದುರಿಗೇ ಕ್ಲೈಂಟ್ ವಿಸಿಟ್ ಇತ್ತು. ಜಿ.ಪಿ.ಓ.ದಲ್ಲಿ 4 ಜನರ ಕ್ಯೂ ಇತ್ತು. ಕ್ಯಾಷ್ ಕೌಂಟರಿನಲ್ಲಿ ನಾನು ನೋಡುತ್ತಿದ್ದಂತೆಯೇ ಮೊದಲಿನ ಮೂರರಲ್ಲಿ ಪ್ರತಿಯೊಬ್ಬರೂ ಯಾವುದೋ ಕವರು ಒಳಗೆ ಇಡುತ್ತಿದ್ದರು. ಆ ನಂತರವೇ ಆತ ಹಣ ನೀಡುತ್ತಿದ್ದ. ನನಗೆ ಬಹಳೇ ಆಶ್ಚರ್ಯವಾಯಿತು. ಮುಂಬೈನ ಜಿ.ಪಿ.ಓ.ದಲ್ಲೂ ಹಾಡೇ ಹಗಲು, ನಮ್ಮ ಹಣವನ್ನು ನಮಗೆ ವಾಪಸ್ಸು ಕೊಡುವದರಲ್ಲೂ ಇಂತಹ ದುರ್ದೈವವೇ ಅನಿಸಿತು.

ನನ್ನ ಮುಂದಿನವ ಅಂಥದೊಂದು ಕವರನ್ನು ಕೊಡದೇ ಇದ್ದದಕ್ಕೆ 'ಠೀಕ್ ಹೈ, ಲೇಕೇ ಆನಾ' ಎಂದು ಹೇಳಿ 'ಯುಸ್ ನೆಕ್ಸ್ಟ್' ಅಂದ. ನಾನು ಸಹಿ ವೆರಿಫೈ ಮಾಡಿಸಿದ ಸರ್ಟಿಫಿಕೇಟ್ ನೀಡಿದೆ. ಕವರು ಕೊಡದಿದ್ದರೆ ಈ ಮನುಷ್ಯ ಹಣ ಕೊಡುವುದಿಲ್ಲ. ಕೆಲಸ ಆಗದೆ ವಾಪಸ್ಸು ಹೋಗುವದು ಹೇಗೆ? ಕವರಂತೂ ನನ್ನ ಹತ್ತಿರವಿಲ್ಲ. ಹಣ ಹಾಕಿ ಕೊಡುವದಂತೂ ನನಗೆ ಸುತರಾಂ ಇಷ್ಟವಿಲ್ಲ. ಯಾವ ಮೆಹರಬಾನಿ ಅಂತ. ಪೇಚಿನಲ್ಲಿದ್ದಂತನಿಸಿತು. ಧ್ಯಾನಿಸಿದೆ, ಹೊಳೆಯಿತು. 'ಭಾಯಿ ಸಾಹಬ್, ಎಕ್ ಕವರ್ ಮಿಲೇಗಾ ಕ್ಯಾ?' ಎಂದೆ. ನಗುತ್ತಲೇ ಉಪಯೋಗಿಸಿದ ಕವರೊಂದನ್ನಿತ್ತ. ಪರ್ಸನ್ನು ತೆಗೆದರೆ ನೂರರ, ಐವತ್ತರ, ಹತ್ತರ ನೋಟುಗಳಿದ್ದವು. ಎಲ್ಲರಿಗೂ ಬೆನ್ನು ಮಾಡಿ, ಐವತ್ತರ ಹಾಗೂ ಹತ್ತರ ನಡುವಿನ ಮಡಿಕೆಯ ಹಾಗೇ ಇರುವದನ್ನು ಕವರಿನಲ್ಲಿ ತುಂಬಿ, ಅವನಿಗೆ ಕಾಣುವಂತೆ ಬಂದು ಮಾಡಿ, ಕೈತುರಿಸಿ ಕೌಂಟರಿನೊಳಗಿರಿಸಿದೆ. ಅದನ್ನು ಎಡಗೈಯಿಂದ ಬಾಜೂಗಿರಿಸುತ್ತ, ಹಣವನ್ನು ಸರಿಯಾಗೇ ಎಣಿಸಿ ಕೊಟ್ಟ. ನಾನು ಒಳಗಿಟ್ಟಿದ್ದು ಬಹುಮಾನ ಸಿಗದ ಒಂದು ಲಾಟರೀ ಟಿಕೇಟನ್ನು!



ಮುಂಬಯಿ — ಚಿಂತಾಮಣಿ ಸಭಾಹಿತ

ಊದುಬತ್ತಿ ಕೊಂಡರೇನೇ ಅಕ್ಕಿ !

ಬಹಳ ಹಿಂದಿನ ಮಾತು. ಆಗ ನನಗಿನ್ನೂ ಹದಿನೈದು-ಹದಿನಾರು ವರ್ಷ ವಯಸ್ಸು. ಕೈಯಲ್ಲಿ ಕೆಲಸವಿಲ್ಲ. ಕಿತ್ತು ತಿನ್ನುವ ಬಡತನ. ತಂದೆಯವರ ದುಡಿಮೆಯಲ್ಲೇ ಆರು ಜನರಿಗೆ ಊಟವಾಗಬೇಕಿತ್ತು. ಹೇಗೋ ಕಷ್ಟಪಟ್ಟು ರೇಷನ್ ಕಾರ್ಡ್ ಮಾಡಿಸಿದ್ದೆವು. ಸೊಸೈಟಿಯಿಂದ ಅಕ್ಕಿ ತರಲು ಬಂದಾಗ ಉದ್ದನೆಯ ಕ್ಯೂ ಇತ್ತು, ನಿಂತೆ. ನನ್ನ ಮುಂದಿದ್ದವರೆಲ್ಲಾ ಅಕ್ಕಿ ತೆಗೆದುಕೊಂಡು ನನ್ನ ಪಕ್ಕದಲ್ಲಿ ಹಿಂತಿರುಗುತ್ತಿದ್ದಾಗ ಅವರೆಲ್ಲರ ಕೈಯಲ್ಲಿ ಒಂದೊಂದು ಊದುಬತ್ತಿಯ ಪ್ಯಾಕ್ ಇತ್ತು. ನನ್ನ ಸರದಿ ಬರಲು ನನ್ನ ಮುಂದೆ ಇನ್ನೇನು ನಾಲ್ಕೈದು ಜನರಿರಬಹುದು. ಅಕ್ಕಿ ಕೊಡುವ ಆ ಸೊಸೈಟಿ ನೌಕರನ ಧ್ವನಿ ನನ್ನನ್ನು ಬೆಚ್ಚಿಸಿತು.




''ಈ ಅಕ್ಕಿ ಜೊತೆ ಒಂದು ರೂಪಾಯಿಯ ಊದುಬತ್ತಿ ಕೊಂಡುಕೊಳ್ಳಲೇಬೇಕು.'' ನನ್ನ ಮುಂದೆ ನಿಂತವರು ಎಸ್ಟೇಟ್ ಕೂಲಿಗಳು. ಅವರು ತಲೆ ತಗ್ಗಿಸಿ ಊದುಬತ್ತಿ ಸಹ ಕೊಂಡುಕೊಂಡರು. ನನ್ನ ಹತ್ತಿರ ಅಕ್ಕಿಗೆ ಮಾತ್ರ ಹಣ ಇತ್ತು. ಈ ರೀತಿಯ ಶೋಷಣೆ ಎದುರಿಸಲು ಸಿದ್ಧಳಾದೆ. ನನ್ನ ಸರತಿ ಬಂದಾಗ ನಾನು ಊದುಬತ್ತಿ ನಿರಾಕರಿಸಿದೆ. ಆಗ ಆತ ''ತೆಗೆದುಕೊಳ್ಳಲೇಬೇಕು'' ಎಂದ. ''ನಾನು ಕೇವಲ ನಾಲ್ಕಾಣೆಯ ಬತ್ತಿಯನ್ನೇ ದೇವರಿಗೆ ಹಚ್ಚೋದು, ಒಂದು ರೂಪಾಯಿದು ಬೇಡ'' ಎಂದೆ. ''ಇಲ್ಲಾ ತೆಗೆದುಕೊಳ್ಳಲೇಬೇಕು'' ಎಂದ. ''ಹಾಗಾದರೆ ಅದೇ ರೀತಿ ರೇಷನ್ ಕಾರ್ಡ್ ಮೇಲೆ ಬರೆಯಿರಿ'' ಎಂದೆ. ಕೂಡಲೇ ನನ್ನೆಡೆಗೆ ವಿಚಿತ್ರವಾಗಿ ನೋಡಿ ಸೊರಗಿದ ಧ್ವನಿಯಲ್ಲಿ ''ಹೋಗಿ'' ಎಂದ. ನಂತರ ನನ್ನ ಹಿಂದೆ ನಿಂತಿದ್ದ ಹದಿಮೂರು ಜನರೂ ಊದುಬತ್ತಿ ನಿರಾಕರಿಸಿದರು. ನನ್ನ ಮನಸ್ಸು ಹಗುರಾಗಿತ್ತು.

ಕೊಪ್ಪ — ಜಯಶೀಲಾ ಜಲಂಧರ ಎಸ್.

ಒಂದೇ ಒಂದು ಬಾರಿ ಮಾತ್ರ

ಕೇರಳದ ಕೃಷಿ ಆದಾಯ ತೆರಿಗೆ ಅಧಿಕಾರಿಯೊಬ್ಬರು ಕಛೇರಿಗೆ ಬರಮಾಡಿಕೊಂಡು ಉಪದೇಶಿಸಿದ್ದು ಹೀಗೆ: ನಾನೀಗ ನಿನಗೆ ಇಷ್ಟೊಂದು ತೆರಿಗೆ ಹಾಕಬಹುದು. ಅದು ಹೆಚ್ಚು ಎಂದು ತೋರಿದರೆ ನೀನು ಮೇಲ್ಮನವಿ ಮಾಡಬಹುದು. ನಿಜ. ಆದರೆ ಒಮ್ಮೆ ಪಾವತಿಸಲೇಬೇಕು. ಮತ್ತೆ ವಕೀಲರನ್ನಿಟ್ಟು ವ್ಯವಹರಿಸಬೇಕು. ಎಷ್ಟೆಲ್ಲಾ ಖರ್ಚಿದೆ. ಮೂರು ದಿನ ಗಡುವು ನೀಡುತ್ತೇನೆ ಅಷ್ಟರೊಳಗೆ ನೀನು ಬಂದರೆ ಸರಿ. ಯೋಚಿಸಿ ನೋಡು' ಎಂದಷ್ಟಕ್ಕೆ ಕೊಡಿಸಿದ. ಮತ್ತಾತನ ಕಚೇರಿಗೆ ಹೋಗಲೇಬೇಕಾಯ್ತು. ಮೇಲ್ಮನವಿಗೆ ವಕೀಲರು, ಓಡಾಟ ಅಂತ ವೆಚ್ಚ ಆಯ್ತು ಬಹಳಷ್ಟು. ಅದಕ್ಕಾಗಿ ಅಳಲಿಲ್ಲ. ನ್ಯಾಯ ಸಿಕ್ಕಿತ್ತು. ಭಾಷಾವಾರು ಪ್ರಾಂತ್ಯ ರಚನೆ ನಮ್ಮ ಜಿಲ್ಲೆಯ ಅವಿಭಾಜ್ಯ ಅಂಗವಾಗಿದ್ದ ಕಾಸರಗೋಡನ್ನು ಕೇರಳಕ್ಕೆ ಧಾರೆಯೆರೆದಿತ್ತು. ನಮ್ಮ ಮನೆ ಕರ್ನಾಟಕದಲ್ಲೇ ಉಳಿದರೂ ನಮ್ಮ ತೋಟದ ಬಹುಭಾಗ ಕೇರಳದ್ದಾಯ್ತು.



ಕಾಸರಗೋಡು ಕೇರಳಕ್ಕೆ ದಕ್ಕಿದ್ದೇ ತಡ ಸರಕಾರದ ಸುಲಿಗೆಯು ಕಾಮೋರ್ಡ ಕನ್ನಡಿಗ ಕೃಷಿಕರನ್ನ ಕಂಗೆಡಿಸತೊಡಗಿತ್ತು. 60ರ ದಶಕದಿಂದ ಅರ್ಧ ಎಕರೆ ಅಡಿಕೆ ತೋಟಗಾರರ ಮೇಲೆ ಕೂಡ ಕೃಷಿ ವರಮಾನ ತೆರಿಗೆಯ ಕಾಟ ಅಪಾರವಾಯ್ತು. ಕೃಷಿ ವರಮಾನ ಇಲಾಖೆಯ ಅಧಿಕಾರಿ ಬಿಡಿ ಪೇದೆಯನ್ನು ಕಂಡರೂ ಸಾಕು, ಅಡಿಕೆ ಬೆಳಗಾರನಿಗೆ ಚಳಿಜ್ವರ ಬರುತ್ತಿತ್ತು.

ತೆರಿಗೆ ತಕರಾರಿಗೆ ನಮ್ಮ ಪತ್ತೆಗೆ 5-6 ವರ್ಷಗಳೇ ಬೇಕಾಯಿತು. ಕೊನೆಗೂ ಅದು ಬಂದಾಗ ಯಮದೂತನಾಗಿ ಕಂಡಿತು. ಒಮ್ಮೆಗೇ 5-6 ವರ್ಷಗಳ ಗತ ತೆರಿಗೆ ಕೊಡಬೇಕಾಗುವ ಪರಿಸ್ಥಿತಿ. ತೋಟವನ್ನೇ ಮಾರಿದರೂ ತೆರಿಗೆ ಮೊತ್ತಕ್ಕೆ ಸಾಲದ ಸ್ಥಿತಿ. ತೆರಿಗೆ ಅಧಿಕಾರಿ ತನಿಖೆಗೆ ಬರುವ ನೋಟಿಸ್ ಬಂದೊಡನೆ ಕಾಸರಗೋಡಿಗೆ ಹೋಗಿ ಅರ್ಹ ವಕೀಲರೊಬ್ಬರನ್ನು ಕಂಡು ವಿಚಾರಿಸಿದೆ. ಅಧಿಕಾರಿ ಮಹಾ ಲಂಚಕೋರ, ಎಷ್ಟಾದರೂ ಕಬಳಿಸುತ್ತಾನೆ ಎಂದು ತಿಳಿಯಿತು. ಒಂದು ಸುಡು ಬಿಸಿಲ ಮಧ್ಯಾಹ್ನ ವಕೀಲರೇ ಅಧಿಕಾರಿಯನ್ನು ಕಾರಿನಲ್ಲಿ ಹಾಕಿಕೊಂಡು ಬಂದರು. ತೋಟ ಸುತ್ತಾಟಕ್ಕೆ ಹೋದೆವು. ಹೊರಗಿನ ಬಿಸಿಲಿಗೋ ಒಳಗಿನ ಭಯಕ್ಕೋ ಧಾರಾಕಾರ ಬೆವರಿಳಿದ ಮೋರೆಯಿಂದ ದೀನನಾಗಿ ಹೆಜ್ಜೆ ಹೆಜ್ಜೆಗೂ ಸುಟ್ಟು ಕರಕಾದ ತೋಟ ತೋರಿಸುತ್ತಾ ವಿವರಿಸುತ್ತಾ ಸತ್ಯ ಸ್ಥಿತಿ ಮತ್ತೆ ಮತ್ತೆ ತಿಳಿಸುವ ಅಸಹಾಯಕ ಪ್ರಯತ್ನ. ಮನೆಗೆ ಬಂದು ದಾಖಲೆ ನಕ್ಷೆಗಳನ್ನು ನೀಡಿ ವಿವರಣೆ. ಈ ನಡುವೆ ಕವರ್ ಕೊಡುವ ಬಗ್ಗೆ ವಕೀಲರಲ್ಲಿ ಸಮಾಲೋಚನೆ.

ಹಕ್ಕು, ಕರ್ತವ್ಯಗಳ ಅರಿವಿದ್ದರೆ...



ಇದು ನಡೆದಿದ್ದು 1992ರಲ್ಲಿ. ಸ್ವಂತಮನೆ ಕಟ್ಟಿಸಲೋಸುಗ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಜಾಗ ಖರೀದಿಸಿ, ಅದರ ಸರಕಾರಿ ನೋಂದಣಿಯನ್ನು ಮಾಡಿಸಿದೆ. ಎಲ್ಲ ದಾಖಲೆ ಪತ್ರಗಳೊಂದಿಗೆ ಗ್ರಾಮ ಲೆಕ್ಕಾಧಿಕಾರಿಯನ್ನು ಭೇಟಿ ಮಾಡಿ, ನನ್ನ ಹೆಸರಿನಲ್ಲಿ ಪಟ್ಟಾ ತಬ್ದೀಲಿ ಮಾಡಿಸಿ ಕೊಡುವಂತೆ ಶುಲ್ಕಸಹಿತ ಅರ್ಜಿ ಸಲ್ಲಿಸಿದೆ.

ಸ್ವಂತ ವಾಹನದಲ್ಲಿ ಬಂದಿದ್ದ ನನ್ನನ್ನು ಸಾಕಷ್ಟು ಶ್ರೀಮಂತ ಬಕರಾ ಎಂದು ಆತ ತಿಳಿದುಕೊಂಡರೋ ಏನೋ, ಕೆಲಸ ಮಾಡಿಕೊಡಲು ಹತ್ತುಸಾವಿರ ರೂಪ್ಯಾ ಲಂಚಕ್ಕೆ ಒತ್ತಾಯಿಸತೊಡಗಿದರು. ಲಂಚ ಕೊಡುವುದಾಗಲಿ, ಸ್ವೀಕರಿಸುವುದಾಗಲಿ ಅಪರಾಧವೆಂದು ತಿಳಿದಿದ್ದರೂ ಲಂಚವಿಲ್ಲದೆ ಸರಕಾರಿ ಕೆಲಸವಾವುದೂ ಸಾಗದು ಎಂಬ ಅರಿವಿದ್ದ ನಾನು; 10 ಸಾವಿರ ಕೇಳಿದಾಗ ಮಾತ್ರ ಬೆವೆತು ಹೋದೆ. ಆದರೂ ಸಾವರಿಸಿಕೊಂಡು ''ನೋಡಿ ಸ್ವಾಮಿ, ನೀವು ಕೇಳಿದಷ್ಟು ಕೊಡಲು ಸಾಧ್ಯವಿಲ್ಲ. ಐನೂರೊ-ಆರ್ನೂರೋ ಕೊಡಬಲ್ಲೆ, ಅದೂ ನನ್ನ ಕೆಲಸವಾದ ಮೇಲೆ ಎಂದು ನೇರ ನುಡಿದು ಹಿಂದಿರುಗಿದೆ.

ಎರಡು ತಿಂಗಳಾದರೂ ಸ್ಥಳದ ಪಟ್ಟಾ ನನ್ನ ಹೆಸರಲ್ಲಿ ಬದಲಾಗದಿದ್ದಾಗ ಕಂಗಾಲಾಗಿ ಪುನ: ಪುನ: ಅಧಿಕಾರಿ ಬಳಿ ವಿಚಾರಿಸಿದಾಗ ''ನಿಮ್ಮ ದಾಖಲೆಗಳನ್ನು ತಬ್ದೀಲು ಆಜ್ಞೆಗೋಸ್ಕರ ಕಂದಾಯ ನಿರೀಕ್ಷಕರಿಗೆ ಕಳುಹಿಸಲಾಗಿದೆ'' ಎಂದು ಮುಗುಮ್ಮಾಗಿ ಉತ್ತರ ಬಂತು. ಮತ್ತೆ 15 ದಿನ ಕಳೆದರೂ ಏನೂ ಪ್ರಯೋಜನವಾಗದಾದಾಗ ನೇರ ತಾಲೂಕು ಕಚೇರಿಗೆ ಹೋಗಿ ಹಿರಿಯ ಅಧಿಕಾರಿಗಳನ್ನು ಕಂಡು ವಿಷಯ ವಿವರಿಸಿದೆ. ಹಾಗೂ ಇನ್ನೂ ಈ ರೀತಿ ನನ್ನನ್ನು ಸತಾಯಿಸಿದಲ್ಲಿ ಯಾ ಲಂಚಕ್ಕೆ ಒತ್ತಾಯಿಸಿದಲ್ಲಿ ನಾನು ಮುಂದುವರಿಯಬೇಕಾದೀತು ಎಂದು ಪ್ರತಿಭಟಿಸಿದೆ.

ಕೂಡಲೇ ಜಾಗ್ರತರಾದ ತಾಲೂಕು ಕಚೇರಿ ಅಧಿಕಾರಿ ದಾಖಲೆಗಳನ್ನು ತರಿಸಿ ಪರಿಶೀಲಿಸಲಾಗಿ ನನ್ನ ಅರ್ಜಿಯ ಮೇಲೆ ಗ್ರಾಮ ಲೆಕ್ಕಾಧಿಕಾರಿಯು- ನಾನು ಲಂಚ ಕೊಡದ ಕೋಪದಿಂದಿರಬೇಕು- ''ವಿಪರೀತ ಉಲ್ಲೇಖ'' (Adverse Remarks) ಬರೆದದ್ದು ಕಂಡುಬಂತು.

ಈ ದಾಖಲೆಗೆ ಒಮ್ಮೆ ಸರಕಾರಿ ಅಂಕಿತ ಬಿದ್ದಲ್ಲಿ ಅದನ್ನು ಬದಲಾಯಿಸಲು ಅರ್ಜಿದಾರ ಸಾಕಷ್ಟು ಬವಣೆಪಡಬೇಕಾಗುತ್ತದೆ ಹಾಗೂ ಅಸಿಸ್ಟೆಂಟ್ ಕಮೀಷನರ್ ಮೇಲಿನ ಅಧಿಕಾರಿಗಳನ್ನೇ ಸಂಪರ್ಕಿಸಬೇಕು ಹಾಗೂ ಸಮಯವೂ ಸಾಗುತ್ತದೆ ಎಂದು ತಿಳಿಯಿತು.

ಏನೂ ಸಮಸ್ಯೆಯಿಲ್ಲದೆ, ನ್ಯಾಯವಾಗಿ ಆಗಬೇಕಿದ್ದ ಕೆಲಸಕ್ಕೆ ಕೇಳಿದಷ್ಟು ಲಂಚ ಕೊಡಲಿಲ್ಲ ಎಂದು ತೊಂದರೆ ಕೊಡುತ್ತಿರುವುದಕ್ಕೆ ಖಾರವಾಗಿಯೇ ಪ್ರತಿಭಟಿಸಿದೆ.

ಬಳಿಕ ತಾಲೂಕು ಅಧಿಕಾರಿ ಸ್ವತಃ ಮುತುವರ್ಜಿವಹಿಸಿ, ಗ್ರಾಮ ಲೆಕ್ಕಾಧಿಕಾರಿಯಿಂದ ನನ್ನ ದಾಖಲೆ ಸರಿಪಡಿಸಿ, ಪಟ್ಟಾ ತಬ್ದೀಲು ಆಜ್ಞೆಯನ್ನು ಮಾಡಿಸಿ R.T.C. ಒದಗಿಸಿ ಕೊಟ್ಟರೆನ್ನಿ.

ಈ ಪ್ರಕರಣದಿಂದಾಗಿ ನಮ್ಮ ಹಕ್ಕು ಮತ್ತು ಕರ್ತವ್ಯಗಳ ಅರಿವಿದ್ದು, ನೇರವಾಗಿ ವ್ಯವಹರಿಸಿದಲ್ಲಿ ಲಂಚವಿಲ್ಲದೆ ಸರಕಾರಿ ಕೆಲಸ ಮಾಡಿಸಲು ಸಾಧ್ಯವಿದೆ ಎಂದು ಅರಿತುಕೊಂಡೆ.

ಪಡುಬಿದ್ರಿ

ಸತೀಶ್ ಎಂ. ಭಟ್

ವಕೀಲರು ಆಚೆ ಎದ್ದು ಹೋದ ಮೇಲೆ ಅಳೆದು ಸುರಿದು ಒಂದು ಮೊತ್ತದ ನೋಟುಗಳನ್ನು ಕವರಲ್ಲಿಟ್ಟು ಮುಚ್ಚಿಕೊಂಡು ಅಧಿಕಾರಿ ಪರಿಶೀಲಿಸುತ್ತಿದ್ದ ದಾಖಲೆ ಪತ್ರಗಳ ನಡುವೆ ಇಟ್ಟೆ. ನನ್ನ ಹೃದಯವನ್ನೇ ಕಿತ್ತು ಆ ಕವರಿನೊಳಗಿಟ್ಟು ಒಪ್ಪಿಸುತ್ತಿರುವಂತಿದ್ದಿರಬೇಕು ಆಗಿನ ನನ್ನ ಮುಖಭಾವ. ನನ್ನ ಮುಖವನ್ನೇ ನೇರ ದಿಟ್ಟಿಸುತ್ತ ಕೇಳಿದ: 'ಏನದು?' 'ಏನಿಲ್ಲ ಒಂದು ಕಿರು ಕಾಣಿಕೆ ಅಷ್ಟೇ; ತೋಟ ಹೈರಾಣಾಗಿದೆ' ತಡವರಿಸುತ್ತಾ ಹೇಳಿದೆ. ಕವರನ್ನು ಆತ ಮುಟ್ಟಲೂ ಇಲ್ಲ. ಕೇಳಿದ: 'ನಿಮಗೇನಾಗಬೇಕು? ಏನಾದರೂ ಸುಳ್ಳು ವರದಿ ಮಾಡಬೇಕಿದೆಯಾ?' 'ಸುಳ್ಳಲ್ಲ ದಾಖಲೆಯಲ್ಲಿದ್ದಷ್ಟು ತೋಟ ಇಲ್ಲ. ಇದ್ದದ್ದೂ ನೀರಿಲ್ಲದೆ ಹೈರಾಣಾಗಿದೆ. ಫಸಲು ತೀರಾ ಕಡಿಮೆ ಎಂದೆಲ್ಲಾ ಗೋಗರೆಯುತ್ತಾ ನುಡಿದೆ. ಎಲ್ಲಾ ನೋಡಿದ್ದೇನೆ, ಇದ್ದುದನ್ನು ಇದ್ದ ಹಾಗೇ ವರದಿ ಮಾಡಬೇಕಾದ್ದು ತಾನೇ? ಮತ್ತೆ ಪ್ರಶ್ನೆ. 'ಸತ್ಯ ನಮೂದಿಸಿದರೆ ಸಾಕು' ಎಂದೆ. 'ಸರಿ ಅದು ಮಾಡ್ತೇನೆ. ಅದಕ್ಕೆ ಇದೆಲ್ಲಾ ಬೇಡ. ಹಿಡೀರಿ' ಎನ್ನುತ್ತಾ ಕವರನ್ನೆತ್ತಿ ನನ್ನ ಕೈಗೆ ಕೊಟ್ಟ.

ಆತ ಮುಂದೇನು ವರದಿ ಮಾಡುತ್ತಾನೆ ಎಂಬ ಆತಂಕಕ್ಕಿಂತಲೂ ನಾನೊಬ್ಬ ಲಂಚಾಪರಾಧಿ ಆಗುವುದು ತಪ್ಪಿತಲ್ಲಾ ಎಂಬ ನಿರಾಳ ಭಾವದಿಂದ ಎದೆಯುರಿ ತಣ್ಣಗಾಗಿತ್ತು. ಆ ಘಟನೆ ಮುಂದೆಂದೂ ಲಂಚ ಲಂಪಟತನಕ್ಕೆ ಶರಣಾಗದಂತಿರಲು ನನಗೆ ಶಕ್ತಿ ನೀಡಿದೆ.

ವಾಣಾಜಿ — ಶಂಪಾ ದೈತೋಟ

ದೂರು ಬರೆಯುತ್ತೇನೆಂದದ್ದೇ ಓಡಿಹೋದ ಸ್ಟೇಷನ್ ಮಾಸ್ಟರ್

ಸುಮಾರು ಆರೇಳು ವರ್ಷದ ಹಿಂದೆ ನಡೆದ ಘಟನೆ. ನಾನು ಪ್ರಖ್ಯಾತ ವಿಠೋಬಾ ರಕುಮಾಯಿ ದರ್ಶನಕ್ಕೆಂದು ಪಂಢರಪುರಕ್ಕೆ ಹೋದಾಗಿನದು. ಸೂಟ್‌ಕೇಸನ್ನು ಇಡಲೆಂದು ಕ್ಲೋಕ್ ರೂಂನತ್ತ ಹೋದೆ. ಅಲ್ಲಿ ಐದಾರು ಜನ ತಮ್ಮ ತಮ್ಮ ಲಗೇಜೊಂದಿಗೆ ನಿಂತಿದ್ದರು. ನಾನು ಕ್ಲೋಕ್ ರೂಮಿನ ಕೆಲಸದ ಸಮಯ ಫಲಕದತ್ತ ಕಣ್ಣು ಹಾಯಿಸಿದೆ ಬೆಳಗ್ಗೆ 8 ರಿಂದ ರಾತ್ರಿ 10 ಎಂದಿತ್ತು. ಆಗ ಸಮಯ ಬೆಳಗ್ಗೆ 10 ಆಗಿತ್ತು. ನಾನು ಕಾಯುತ್ತ ನಿಂತವರನ್ನು ಕೇಳಿದೆ: ಏನು ಸಮಾಚಾರ? ಬಾಗಿಲು ಏಕೆ ತೆಗೆದಿಲ್ಲ 10 ಆಯ್ತಲ್ಲ? ಸಂಬಂಧಿತ ಕ್ಲರ್ಕ್ ಬೀಗ ಜಡಿದು ಬೀಗದ ಕೈಯೊಂದಿಗೆ ಎಲ್ಲೋ ಹೋಗಿದ್ದಾನಂತೆ. ಅವನು ಬಂದು ಬಾಗಿಲು ತೆರೆವ ತನಕ ನಾವೆಲ್ಲ ಇಲ್ಲೇ ಆತನಿಗಾಗಿ ಕಾಯುತ್ತಾ ನಿಲ್ಲಬೇಕಂತೆ! ಹೀಗೆಂದು ಹೇಳಿದವರು ಸ್ಟೇಷನ್ ಮಾಸ್ತರ್ ಅಂದರು.




ಸೀದಾ ಸ್ಟೇಷನ್ ಮಾಸ್ತರರ ಕಚೇರಿಗೆ ನುಗ್ಗಿದೆ!

'ಬೆಳಗಿನ ಹತ್ತಾದರೂ ಕ್ಲೋಕ್ ರೂಂ ಏಕೆ ತೆರೆದಿಲ್ಲ ಸಾರ್?' ಎಂದು ಕೇಳಿದರೆ 'ಎಷ್ಟು ಜನರಿಗೆ ಹೇಳಬೇಕು? ಕ್ಲರ್ಕ್ ಹೊರಗೆ ಹೋಗಿದ್ದಾನೆ. ಬರುವವರೆಗೆ ತಡೆಯಬೇಕು!' ಎನ್ನುವ ಉತ್ತರ ಬಂತು.

ಕ್ಲೋಕ್ ರೂಂ ಕೆಲಸದ ವೇಳೆ ಬೆಳಿಗ್ಗೆ 8 ರಿಂದ ರಾತ್ರಿ 10 ಇದೆ. ನನಗೆ ದಯವಿಟ್ಟು ಕಂಪ್ಲೇಂಟ್ ಬುಕ್ ಕೊಡಿರಿ. ನಾನು ದೂರು ಬರೆಯುತ್ತೇನೆ. ನೀವು ಅದನ್ನು ಕೊಡದಿದ್ದರೆ ನಾನು ಇವರೆಲ್ಲರ ಸಹಿ ಪಡೆದು ನೇರವಾಗಿ ಮುಖ್ಯ ಕಛೇರಿಗೆ ಬರೆಯುವೆ. ಇಷ್ಟಂದದ್ದೇ ತಡ, ಸ್ಟೇಷನ್ ಮಾಸ್ತರ್ ಓಡುತ್ತ ಹೋಗಿ ಕ್ಲರ್ಕನ್ನು ಕರೆದುಕೊಂಡು ಬಂದದ್ದಾಯ್ತು !

ಹುಬ್ಬಳ್ಳಿ — ವಾಸುದೇವ್ ರಾ. ಕಲಘಟಗಿ



ಕೋಳಿ ಕೊರಳಿಗೆ ಗಂಟೆ ಕಟ್ಟಿದ್ದು

ಪಕ್ಕದೂರಲ್ಲಿ ಇದ್ದಕ್ಕಿದ್ದಂತೆ ವಾರಕ್ಕೆರಡು ಬಾರಿ 'ಕೋಳಿ ಅಂಕ' ಪ್ರಾರಂಭವಾದಾಗ ಅದರ ಬಿಸಿ ನಮ್ಮೂರಿಗೂ ತಟ್ಟಿತು. ಕಲ್ಯಾಣ ಮಂಟಪ ಕಟ್ಟಿಸಲು ಹಣ ಒಟ್ಟುಗೂಡಿಸಬೇಕೆಂದು, ಊರಿನ ಪುಢಾರಿ ಮುಖಂಡರು ಕೋಳಿ ಅಂಕದ ನೆಪದಲ್ಲಿ ದೊಡ್ಡ ಪ್ರಮಾಣದ ಜುಗಾರಿ ಕಟ್ಟೆ ಕಟ್ಟಿ (ಗುಡುಗುಡಿ) ಆಟ ನಡೆಸತೊಡಗಿದರು. ಹಾಡು ಹಗಲಲ್ಲೆ ನಡೆಯುವ ಜುಗಾರಿ ಆಟ ಸುತ್ತಮುತ್ತಲಲ್ಲಿ ಸುದ್ದಿಯಾಗಿ ಸಾವಿರಾರು ಜನ ಸೇರತೊಡಗಿದರು. ಲಕ್ಷಾಂತರ ರೂಪಾಯಿ ವ್ಯವಹಾರ ಆಗತೊಡಗಿತು. ನಮ್ಮೂರಿನ ಕೆಲಸದಾಳುಗಳೆಲ್ಲಾ ವಾರಪೂರ್ತಿ ದುಡಿದಿದ್ದನ್ನೆಲ್ಲ ಜುಗಾರಿಗೆ ಹಾಕತೊಡಗಿದರು. ಜುಗಾರಿಯ ಹುಚ್ಚು, ಮನೆಯಲ್ಲಿ ಅಕ್ಕಿ ಚೀಲ, ತೆಂಗಿನ ಮರದ ಕಾಯಿ ಕೀಳುವವರೆಗೂ ಬಂದುಬಿಟ್ಟಿತು. ಕೆಲವೊಂದು ಮನೆಯಲ್ಲಿ ಒಂದೊತ್ತಿನ ಊಟಕ್ಕೂ ತೊಂದರೆಯಾಯಿತು. ನೆಮ್ಮದಿಯಿಂದಿದ್ದ ಊರು ಒಂದು ರೀತಿಯಲ್ಲಿ ಅಸಹನೆಯ ಬೀಡಾಯಿತು. ಇವೆಲ್ಲವನ್ನು ನೋಡಿ ಸುಮ್ಮನಿರಲು ಆಗಲಿಲ್ಲ. ಏನಾದರೂ ಉಪಾಯ ಮಾಡಿ ಕೋಳಿ ಅಂಕವನ್ನು ನಿಲ್ಲಿಸಬೇಕೆಂದು ಯೋಚಿಸುತ್ತಿರುವಾಗಲೇ ನೆನಪಿಗೆ ಬಂದವರು ಜಿಲ್ಲಾ ಎಸ್ಪಿ. ಅವರು ಅನೇಕ ಕಡೆ ಪ್ರಮುಖ ರಾಜಕಾರಣಿಗಳ ಜುಗಾರಿ ಅಡ್ಡೆಗಳಿಗೆ ದಾಳಿ ಮಾಡಿ ಅನೇಕರನ್ನು ಬಂಧಿಸಿದ್ದುದ್ದನ್ನು ಪೇಪರಿನಲ್ಲಿ ಓದಿದ್ದೆ. ನಾವೆಲ್ಲ ಊರಿನ ಎಳೆಯರು ಸೇರಿ ಅವರಿಗೊಂದು ಪತ್ರ ಬರೆದು, ಇಲ್ಲಿ ನಡೆಯುತ್ತಿದ್ದರ ಬಗ್ಗೆ ವಿವರವಾಗಿ ತಿಳಿಸಿದೆವು. ಒಂದೇ ವಾರದಲ್ಲಿ ಕೋಳಿ ಅಂಕ ನಡೆಯುತ್ತಿದ್ದ ಸ್ಥಳದ ಮೇಲೆ ಪೊಲೀಸರಿಂದ ದಾಳಿಯಾಯಿತು. ಕೋಳಿ ಅಂಕ, ಜುಗಾರಿ ಎಲ್ಲ ನಿಂತಿತು.



ಈಗ ಮನೆಯಲ್ಲಿರುವ ಅಕ್ಕಿ ಚೀಲವಾಗಲಿ, ಮರದಲ್ಲಿನ ತೆಂಗಿನ ಕಾಯಿಯಾಗಲಿ ಕಾಣೆಯಾಗುತ್ತಿಲ್ಲ. ಕೆಲಸದಾಳುಗಳೂ ಸರಿಯಾಗಿ ಕೆಲಸಕ್ಕೆ ಹೋಗುತ್ತಿದ್ದಾರೆ. ಊರು ನೆಮ್ಮದಿಯತ್ತ ಹೊರಳತೊಡಗಿದೆ. ಕಲ್ಯಾಣ ಮಂಟಪ ಅರ್ಧಕ್ಕೇ ನಿಂತಿದೆ.

ಹಿರೇಗುತ್ತಿ — ವಿನಾಯಕ ಎಲ್. ಪಟಗಾರ

ಸುಳ್ಳು ಹೇಳಿ ಸವಲತ್ತು ಪಡೆಯಲೇಕೆ?

ಕರ್ನಾಟಕ ವಿ.ವಿ.ಯಲ್ಲಿ ಬಾಹ್ಯ ವಿದ್ಯಾರ್ಥಿಯಾಗಿ ಎಂ.ಎ. ಬರೆಯಲು ಧಾರವಾಡಕ್ಕೆ ಹೋಗಿದ್ದೆ. 10-15 ದಿನ ಉಳಿದುಕೊಳ್ಳುವ ಪ್ರಸಂಗ. ದಿನಕ್ಕೆ ಏನಿಲ್ಲವೆಂದರೂ 70-80ರೂ.ಗಳ ಖರ್ಚು. ಮುರುಘಾಮಠದಲ್ಲಿ ಹೊರಗಿನ ವಿದ್ಯಾರ್ಥಿಗಳಿಗೆ ಊಟ, ವಸತಿಯನ್ನು ಪುಕ್ಕಟೆ ಕೊಡುತ್ತಾರಂತೆ ಎಂಬ ಸುದ್ದಿ ತಿಳಿದು ಧಾವಿಸಿದೆ. ಅಲ್ಲಿ ಎಲ್ಲವೂ ಚೆನ್ನಾಗಿತ್ತು. ಎಲ್ಲರನ್ನೂ ಸೇರಿಸಿಕೊಳ್ಳುತ್ತಿದ್ದರು. ಆದರೆ ನಾನು ಅಲ್ಲಿ ಒಂದು ಸುಳ್ಳು ಹೇಳಬೇಕಾಗಿತ್ತು ಅಲ್ಲ, ಬರೆದುಕೊಡಬೇಕಾಗಿತ್ತು. ''ನಾನು ನಿರುದ್ಯೋಗಿ, ಬಡವ, ನನಗೆ ಯಾವುದೇ ವರಮಾನ ಇಲ್ಲ. ಹೀಗಾಗಿ ನನಗೆ ಊಟ ವಸತಿ ಕಲ್ಪಿಸಿಕೊಡಿ. ತಮ್ಮ



ಸಹಾಯಕ್ಕೆ ನಾನು ಋಣಿ'' ಎಂಬಂಥ ರಿಕ್ವಿಜಿಷನ್ ಕೊಟ್ಟರೆ 10-15 ದಿನಗಳ ಕಾಲ ಊಟ ವಸತಿ ಬಿಲ್‌ಕುಲ್ ಫ್ರೀ.

ಅಲ್ಲಿ ಬಂದಿದ್ದವರಲ್ಲಿ ಬಹುಪಾಲು ಸರ್ಕಾರಿ-ಅರೆಸರ್ಕಾರಿ ನೌಕರರೇ. ಒಂದು ಬಡ್ತಿಗೆ, ಇನ್‌ಕ್ರಿಮೆಂಟ್‌ಗಾಗಿ ಪರೀಕ್ಷೆ ಪಾಸು ಮಾಡಿಕೊಳ್ಳಲು ಬಂದಿದ್ದವರು. ಅವರೆಲ್ಲರೂ ಮೇಲಿನ ಪುಟ್ಟ ಸುಳ್ಳನ್ನು ಬರೆದು ಕೆಳಗೆ ಸಹಿ, ಹಾಕಿ, ಕ್ಯೂನಲ್ಲಿ ನಿಂತು ಏನನ್ನೋ ಸಾಧಿಸಿದೆವೆಂಬಂತೆ, ಹಣ ಉಳಿಸಿದೆವೆಂಬಂತೆ ಬೀಗುತ್ತಾ ನನಗೂ ಆ ರೀತಿ ಬರೆದುಕೊಡಲು ಒತ್ತಾಯಿಸಿದರು.

ನನಗೋ ತುಂಬ ಇರಿಸು-ಮುರಿಸಾಗತೊಡಗಿತು. ನಿಗದಿತ ವೇತನ ಪಡೆಯುವ ನಾನು ಈ ರೀತಿ ಸುಳ್ಳು ಹೇಳಿ ಸವಲತ್ತು ಪಡೆದರೆ ನಿಜವಾಗಿಯೂ ನಿರುದ್ಯೋಗಿ, ಬಡವನೊಬ್ಬನಿಗೆ ಅನ್ಯಾಯವಾಗುವುದಿಲ್ಲವೇ ಎನಿಸಿ ಸುಳ್ಳನ್ನು ರಾಜಾರೋಷವಾಗಿ ಬರೆಯುವ ಅಪದ್ಧ ಕೆಲಸ ಕೈಬಿಟ್ಟೆ. ನಾನು ಸುಳ್ಳು ಹೇಳಿ ಸವಲತ್ತು ಪಡೆದಿದ್ದರೆ ಯಾರಿಗೂ ತಿಳಿಯುತ್ತಿರಲಿಲ್ಲವೆನ್ನಿ. ಆದರೂ ಮನದ ಒಂದು ಸಣ್ಣ ಅಳುಕು ಹಾಗೆ ಮಾಡಗೊಡಲಿಲ್ಲ. ಸಾವಿರಕ್ಕೂ ಹೆಚ್ಚು ಹಣ ಖರ್ಚಾದರೂ (ಬೇರೆ ವ್ಯವಸ್ಥೆಗೆ) ಮನಸ್ಸು ನಿರುಮ್ಮಳವಾಗಿತ್ತು. ಪರೀಕ್ಷೆಯಲ್ಲಿ ಯಶ ಸಿಕ್ಕಿತ್ತು.

ಸಂತೇಬೆನ್ನೂರು — **ಮಳಲಕೆರೆ ಬಸವರಾಜು**

ಹಣ ಕೇಳಿದರೆ ಸರ್ಕಾರಕ್ಕೆ ತಿಳಿಸುವೆ!

ನಮ್ಮ ಮನೇಲಿ ಫೋನ್ ಇಲ್ಲ. ಇತ್ತೀಚೆಗೆ ಅದರ ಅಗತ್ಯ ಹೆಚ್ಚಾಗಿತ್ತು. ನನ್ನ ಮಗ 3000 ರೂ. ಖರ್ಚು ಮಾಡಿ ಹಾಕಿಸಿಕೊಳ್ಳೋಣ ಎಂದು ಹೇಳಿದ. ನಾನು ಫಾರಂ ತರಲು ಆಫೀಸಿಗೆ ಹೋದೆ. ಫಾರಂ ಕೊಡುವಾಗ ವಿವರ ಕೇಳಿದವ ಹೇಳಿದ, 'ತಾಯಿ ನಿಮಗೆ 65 ವರ್ಷವಾಗಿದ್ದರೆ ಬಿಟ್ಟಿಯಾಗೇ ಫೋನ್ ಹಾಕುತ್ತಾರೆ. 3-4 ತಿಂಗಳಾಗಬಹುದು. ಈಗ 10 ರೂ. ಮಾತ್ರ ಫಾರಂಗೆ ಕೊಡಿ, ತುಂಬಿಸಿಕೊಂಡು ಪಿ.ಎನ್.ಟಿ. ಆಫೀಸ್‌ಗೆ-ವಿಧಾನ ಸೌಧದ ಬಳಿ ಇದೆ- ನಾಳೆಯೇ ವಿಚಾರಿಸಿ ಕೊಡಿ. ಉಳಿದ ವಿವರ ಅವರೇ ಹೇಳುತ್ತಾರೆ' ಎಂದ. ಸರಿ, ನನಗೆ ಹಾಲು ಕುಡಿದಂತೆ ಆಯಿತು.

ಮರುದಿನವೇ ಫಾರಂ ತುಂಬಿಸಿಕೊಂಡು ಹೋದೆ. ಇತರ ದಾಖಲೆಗಳೊಂದಿಗೆ ಡಾಕ್ಟರ್ ಸರ್ಟಿಫಿಕೇಟ್ ಕೇಳಿದರು. ಅದನ್ನು ಮಾಡಿಸಲು ಹೋದೆ. ಜವಾನ ಎಲ್ಲಾ ವಿವರ ಕೇಳಿ ಡಾಕ್ಟರ್ ಬಳಿ ನನ್ನ ಕರೆದ. ನಾನು ಹೋದಾಗ ಈ ಎಲ್ಲಾ ವಿವರ ಕೇಳಿ ಸರಿ ನನ್ನದು ಒಂದು ಸರ್ಟಿಫಿಕೇಟ್ ಇರಲಿ, ಎಂದು ಸೈನು ಮಾಡಿ ಸೀಲು ಹಾಕಲು ಜವಾನನಿಗೆ ಹೇಳಿದ ನಂತರ ಅವನ ಬಳಿ ಏನೋ ಹೇಳಿದ. ಅವನು ಬಂದು ಅಮ್ಮ ಡಾಕ್ಟರಿಗೆ ಕೊಡಲು 100 ರೂ. ಕೊಡಿ, ನನಗೆ 10 ರೂ ಮಾತ್ರ ಸಾಕು ಎಂದ. ನನಗೆ ಗಾಬರಿ ಆಯಿತು. ಒಳ ಹೋದವಳೇ ಕೂಗಿ ಹೇಳಿದೆ: ಸರಕಾರದ ಸಂಬಳ ಪಡೆದು ವಯಸ್ಸಾದವರಿಗೆ ಒಂದು ಸರ್ಟಿಫಿಕೇಟ್ ಕೊಡಲೂ ಹಣ ಕೇಳುವ ನೀವೆಂಥಾ ಡಾಕ್ಟರ್! ನಾವೇಕೆ ಕೊಡಬೇಕು ಎಂದು ಹೇಳಿ, ಕಾಗದ ಟೈಪು ಮಾಡಿಸಿ ಓಡಾಡಿದ ಜವಾನನಿಗೆ 10 ರೂ. ನೀಡಿ, 'ತಿಂಡಿ, ಕಾಫಿ ಮಾಡಿಕೋ, ಡಾಕ್ಟರ ಹಣ ಕೇಳಿದರ ಸರ್ಕಾರಕ್ಕೆ ತಿಳಿಸುವೆ ನೋಡು' ಎನ್ನುತ್ತಾ ಕಾಗದ ಪಡೆದು ಭರಭರನೇ ಬಂದುಬಿಟ್ಟೆ.

ಬೆಂಗಳೂರು — **ಎಚ್. ಕೆ. ಸಾವಿತ್ರಮ್ಮ**

ಪತ್ರಕರ್ತನೆಂಬ ಬ್ರಹ್ಮಾಸ್ತ್ರ



ಎರಡು ವರ್ಷ ಹಿಂದೆ ನಡೆದ ಘಟನೆ. ನಾನು ಮಂಗಳೂರಿನ ಸಂಜೆ ಪತ್ರಿಕೆಯೊಂದರಲ್ಲಿ ಉಪಸಂಪಾದಕನಾಗಿ ದುಡಿಯುತ್ತಿದ್ದೆ. ರಾಜ್ಯ ಸರಕಾರದ ನೂರು ಬಾವಿ ಯೋಜನೆಯಡಿ ಬಾವಿ ರಿಪೇರಿಗೆಂದು ಸಹಾಯಧನ ಕೋರಿ, ನಮ್ಮ ಊರಿನ ಕೃಷಿ ಸಹಾಯಕರ ಸಲಹೆ ಮೇರೆಗೆ, ಸ್ಥಳೀಯ ಪಂಚಾಯತ್ ಕಾರ್ಯದರ್ಶಿಯವರ ಶಿಫಾರಸಿನೊಂದಿಗೆ ಕಾರ್ಕಳ ತಾಲೂಕು ಬಿ.ಡಿ.ಓ.ರವರಿಗೆ ಅರ್ಜಿ ಗುಜರಾಯಿಸಿದೆ.

ಒಂದೇ ವಾರದೊಳಗೆ ಬಿ.ಡಿ.ಓ.ರವರಿಂದ ನನಗೆ ಅಂಚೆ ಮೂಲಕ ಪತ್ರ ಬಂತು. ಬ್ಯಾಂಕಿನವರು 8000 ರೂಪಾಯಿ ಸಾಲ ಮಂಜೂರು ಮಾಡಿದ ಪಕ್ಷದಲ್ಲಿ ನಾವು ನಿಮಗೆ 2000 ರೂಪಾಯಿ ಸಬ್ಸಿಡಿ ನೀಡುತ್ತೇವೆ ಎಂಬುದಾಗಿ. ಹಣ ನನ್ನ ಕೈಗೆ ಬರಲು ಇನ್ನೇನು ಒಂದು ಗೇಣು (ಸ್ವರ್ಗಕ್ಕೆ ಒಂದೇ ಗೇಣು ಎಂಬಂತೆ) ಬಾಕಿ ಎಂಬ ಭ್ರಾಂತಿಯೊಂದಿಗೆ ಬಿ.ಡಿ.ಓ.ರವರ ಪತ್ರವನ್ನು ನಾನು ನನ್ನ ತಂದೆಯವರೊಂದಿಗೆ ಮೂಡಬಿದ್ರೆಯ ಲೀಡ್ ಬ್ಯಾಂಕ್ ಮ್ಯಾನೇಜರ್‌ರಿಗೆ ತೋರಿಸಿದೆ. ಪ್ರಾರಂಭದಲ್ಲಿ ಅವರು ಚೆನ್ನಾಗಿಯೇ ಮಾತನಾಡಿ ಈ ಬಗ್ಗೆ ಫೀಲ್ಡ್ ಡೆವಲಪ್‌ಮೆಂಟ್ ಆಫೀಸರ್‌ರವರೊಂದಿಗೆ ಮಾತನಾಡಲು ತಿಳಿಸಿದರು. ಅವರನ್ನು ಕಂಡು ಭೇಟಿಯಾದಾಗ ಈ ಬಗ್ಗೆ ಪರಿಶೀಲಿಸಿ ಶಿಫಾರಸು ಮಾಡುತ್ತೇನೆ ಎಂದರು. ನಂತರ ಈ ಅಧಿಕಾರಿ ನಾವು ಬಾವಿ ರಿಪೇರಿ ಮಾಡುತ್ತಿದ್ದ ಸ್ಥಳಕ್ಕೂ ಬಂದಾಯಿತು. ಕೆಲಸ ನಡೆಯುತ್ತಿದ್ದುದನ್ನು ನೋಡಿ ತೃಪ್ತಿಪಟ್ಟುಕೊಂಡದ್ದೂ ಆಯಿತು. ನಂತರ ಮೇನೇಜರರನ್ನು ಕಾಣಲು ಸದರಿ ಅಧಿಕಾರಿ ನಮಗೆ ತಿಳಿಸಿದರು.

ನಾನು ಹಾಗೂ ನನ್ನ ತಂದೆಯವರು ಮೇನೇಜರ್‌ರನ್ನು ಮತ್ತೆ ಕೂಡಲೇ ಭೇಟಿ ಮಾಡಿದೆವು. ಈಗಾಗಲೇ ನಾವು ಹೊಸ ಮನೆಯೊಂದನ್ನು ಕಟ್ಟಿಸಿದ್ದು ಹೆಚ್ಚಿನ ಹಣವನ್ನೆಲ್ಲಾ ಅದಕ್ಕೆ ಸುರಿದಾಗಿದೆ. ದಯವಿಟ್ಟು ಬಾವಿ ರಿಪೇರಿಗೆ ಸಾಲ ಮಂಜೂರು ಮಾಡಿ ಎಂದು ಗೋಗರೆದೆವು. ಈ ಬಗ್ಗೆ, ನನ್ನ ತಂದೆಯವರ ಪೆನ್ಷನ್ ಅಕೌಂಟ್ ನಿಮ್ಮ ಬ್ಯಾಂಕಿನಲ್ಲೇ ಇದೆ, ತಿಂಗಳು-ತಿಂಗಳಿಗೆ ಕಟ್ಟುವ ಸಾಲದ ಹಣವನ್ನು ಅವರ ಪೆನ್ಷನ್ ಅಕೌಂಟ್‌ನಲ್ಲೇ ಕಟ್ ಮಾಡಿ ನಿಮ್ಮ ಖಾತೆಗೆ ಜಮಾ ಮಾಡಿ ಎಂದೂ ವಿನಂತಿಸಿದೆ. ಅದಕ್ಕೆಲ್ಲಾ

ಇಂಥ ಕರ್ತವ್ಯನಿಷ್ಠರೂ ಇದ್ದಾರೆ!

ಈವರೆಗೆ ನಾನು ಲಂಚವನ್ನು ಕೊಡದೇ ಎಲ್ಲ ಕೆಲಸಗಳನ್ನು ಸರ್ಕಾರಿ/ಸರ್ಕಾರೇತರ ಕಚೇರಿಗಳಲ್ಲಿ ಸಾಮಾನ್ಯ ಮನುಷ್ಯನಂತೆ ಮಾಡಿಸಿಕೊಂಡು ಬಂದಿರುತ್ತೇನೆ ಎಂದರೆ ಯಾರಾದರೂ ನಂಬಬಹುದೇ? ಆದರೆ ಇದು ಸತ್ಯ. ನಾನು ಇಲ್ಲಿಯವರೆಗೆ ಸಾಧಾರಣವಾಗಿ, ಮುನಸಿಪಲ್ ಆಫೀಸಿನಲ್ಲಿ, ರಿಜಿಸ್ಟ್ರಾರ್ ಕಚೇರಿಯಲ್ಲಿ, ತಾಲೂಕು ಕಚೇರಿಯಲ್ಲಿ, ಕೋರ್ಟುಗಳಲ್ಲಿ ವ್ಯವಹಾರ ಮಾಡಿದ್ದೇನೆ. ಆದರೆ ಒಂದು ಸಲವೂ ನನ್ನಲ್ಲಿ ಯಾರೂ ಲಂಚವನ್ನು ಕೇಳಿಲ್ಲ ಹಾಗೂ ನಾನೂ ಕೊಡುವ ಪ್ರಮೇಯ ಬರಲಿಲ್ಲ. ಇದನ್ನು ಸಾಧಿಸಬೇಕಾದರೆ ಮನೋಸ್ಥೈರ್ಯದ ಜೊತೆಗೆ, ನಾಗರಿಕ ಪ್ರಜ್ಞೆ ಮತ್ತು ನಮ್ಮ ಪ್ರಾಮಾಣಿಕತೆ ಅವಶ್ಯ.



ಕೆಲವು ವರ್ಷಗಳ ಹಿಂದೆ, ಒಮ್ಮೆ ನನಗೆ ನನ್ನ ಮಗಳ ವಿವಾಹದ ಬಗ್ಗೆ ಸರ್ಟಿಫಿಕೇಟ್ ಅತೀ ಬೇಗನೆ ಬೇಕಾಗಿತ್ತು. ಇದರ ಜೊತೆಗೆ ಮನೆಯ ವ್ಯವಹಾರದ (ಆಸ್ತಿಯ) ದಾಖಲೆಯೂ ಬೇಕಾಗಿತ್ತು. ನಾನು ಸಂಬಂಧಪಟ್ಟ ಸಬ್‌ರಿಜಿಸ್ಟ್ರಾರ ಆಫೀಸಿನಲ್ಲಿಯ (ಹುಬ್ಬಳ್ಳಿ) ಮುಖ್ಯ ವಿಚಾರಕರನ್ನು ಸಂಪರ್ಕಿಸಿದೆ. ಸದರಿಯವರು ಅರ್ಜಿಯನ್ನು ನೋಡದೆ ಹಾಗೆಯೇ ಇಸಿಕೊಂಡು, ರೂಪಾಯಿ 10ರ ಪಾವತಿಯನ್ನು ಕೊಟ್ಟು ಮರುದಿನ ಸಾಯಂಕಾಲ ಬಂದು ಕಾಗದಗಳನ್ನು ತೆಗೆದುಕೊಂಡು ಹೋಗಲು ಹೇಳಿದರು. ನಾನು ಮತ್ತೆ ಅವರನ್ನು ವಿನಂತಿಸಿ ಏನಾದರೂ ಅವಶ್ಯಕತೆ ಅಥವಾ ಮಾಹಿತಿಗಳು ಬೇಕಾಗಿದೆಯೇ ಎಂಬುದನ್ನು ಕೇಳಿದೆ. ಅದಕ್ಕೆ ಅವರು "ಇಲ್ಲ. ನಾನು ಎಲ್ಲವನ್ನೂ ಪರೀಕ್ಷಿದ್ದೇನೆ, ಸರಿಯಾಗಿದೆ" ಎಂದು ತಿಳಿಸಿದರು. ನನಗೇನೋ ಅನುಮಾನ. ಮರುದಿನ ಸಾಯಂಕಾಲ ತಿಳಿಸಿದಂತೆ ನಾನು ಕಚೇರಿಗೆ ಹೋದಾಗ, ಸುಪರಿಂಟೆಂಡೆಂಟ್‌ರವರು ಇರಲಿಲ್ಲ. ಕುರ್ಚಿ ಖಾಲಿಯಾಗಿತ್ತು. ಏನು ಮಾಡುವದು ಎಂದು ಚಿಂತಿಸುತ್ತಾ ಕುಳಿತಾಗ, ಒಳಗಿನ ಕೋಣೆಯಿಂದ ಒಬ್ಬ ಅಧಿಕಾರಿಗಳು ಬಂದು (ಸಬ್-ರಿಜಿಸ್ಟ್ರಾರ್‌ರವರೇ) ಏನು ಬೇಕಾಗಿತ್ತೆಂದು ಕೇಳಿದರು. ವಿಷಯ ತಿಳಿಸಿದಾಗ ಸ್ವತಃ ಅವರ ಮೇಜಿನ ಮೇಲಿನ ಕಾಗದಗಳನ್ನು ತೆಗೆದು, ಸಿಬ್ಬಂದಿಯವರು ತಯಾರು ಮಾಡಿಟ್ಟ ಕಾಗದ ಸರ್ಟಿಫಿಕೇಟುಗಳನ್ನು ನನಗೆ ಕೊಟ್ಟು ಕಳಿಸಿದರು. ಈ ಘಟನೆ ಬಹಳ ಆಶ್ಚರ್ಯ ತಂದಿತು. ಹೀಗೂ ಆಗುವುದುಂಟೇ? ಅದೂ ಸಹಿತ ಕಂದಾಯ ಇಲಾಖೆಯಲ್ಲಿ. ಈ ಸಮಾಚಾರವನ್ನು, ಅವರ ಕರ್ತವ್ಯ ನಿಷ್ಠೆ ಮತ್ತು ಸಾರ್ವಜನಿಕರ ಜೊತೆಗೆ ಇರುವ ಒಳ್ಳೆಯ ಸಂಪರ್ಕದ ಬಗೆಗೆ ಅವರ ಮೇಲಧಿಕಾರಿಗಳ ಗಮನಕ್ಕೆ ತಂದು ಪತ್ರವನ್ನು ಬರೆದಿದ್ದೆ. ಈ ಪ್ರಕಾರವಾಗಿ ನನಗೆ ಅನೇಕ ಅನುಭವಗಳು ಆದದ್ದುಂಟು. ಹೀಗಿರುವಾಗ 'ಭ್ರಷ್ಟಾಚಾರ' ವೆಂಬ ಭೂತವನ್ನು ತಲೆಯ ಮೇಲಿಟ್ಟುಕೊಂಡು ಮೆದುಳನ್ನು ಕೊರೆಸಿಕೊಳ್ಳುವುದು ಸರಿಯೇ?

ಹುಬ್ಬಳ್ಳಿ — ಬಿ.ಡಿ. ಕರಿ



ಸೈ ಎಂಬ ಉತ್ತರವೂ ಮೇನೇಜರ್‌ರಿಂದ ಬಂತು. ಆದರೆ 2 ದಿನ ಬಿಟ್ಟು ಬನ್ನಿ, ಎಂದೂ ಹೇಳಿದರು. ನೇರವಾಗಿ ಇವರಿಬ್ಬರೂ ಪ್ರಸಾದ ಕೇಳದಿದ್ದರೂ ಇವರ ಹಾವ ಭಾವ, ಕಣ್ಣಿನ ರೆಪ್ಪೆ ಮೇಲೆ ಕೆಳಗೆ ಮಾಡುವ್ವ ರೀತಿ ಇವೆಲ್ಲದರಿಂದ ಇವರು ಏನನ್ನು ನಿರೀಕ್ಷಿಸುತ್ತಿದ್ದಾರೆ ಎಂಬುದರ ಅರ್ಥವಾಗುತ್ತಿತ್ತು. ಅಧಿಕಾರಿಯನ್ನು ಮತ್ತೊಮ್ಮೆ ಭೇಟಿಯಾಗಿ 2-3 ದಿನಗಳಿಗೊಮ್ಮೆ ಬ್ಯಾಂಕಿಗೆ ಅಲೆದಾಡಿ ಅಲೆದಾಡಿ ಕೊನೆಗೊಂದು ದಿನ ನಾನು ಹಾಗೂ ನನ್ನ ತಂದೆಯವರು ನೇರವಾಗಿ ಮೇನೇಜರರನ್ನು ಕಂಡು ನಮ್ಮ ಅರ್ಜಿ ಏನು ಮಾಡಿದಿರಿ? ಎಂದು ಪ್ರಶ್ನಿಸಿದೆವು. ಅವರು ಕೂಡ ಅಷ್ಟೇ ನೇರವಾಗಿ ಲೋನ್ ಕೊಡಲು ಆಗುವುದಿಲ್ಲ ಎಂದು ನಮ್ಮ ಮುಖಕ್ಕೆ ಹೊಡೆದ ಹಾಗೆ ನಮ್ಮ ಮುಖ ನೋಡದೆ ಉತ್ತರಿಸಿದರು.

ನನಗೆ ತಾಳ್ಮೆಯ ಕಟ್ಟೆ ಒಡೆಯಿತು. ನಾನು ಕೂಡ ಅಷ್ಟೇ ಜೋರಾಗಿ ಯಾವ ನೆಲೆಯ ಮೇಲೆ ನಮ್ಮ ಅರ್ಜಿಯನ್ನು ತಿರಸ್ಕರಿಸಿದ್ದೀರಿ ಎಂದು ಮರು ಪ್ರಶ್ನಿಸಿದೆ. ತಿರಸ್ಕರಿಸುವ ಪುರಸ್ಕರಿಸುವ ಹಕ್ಕು ನಮಗಿದೆ ಎಂಬ ದರ್ಪದ ಉತ್ತರ ನೀಡಿದರವರು. ದೊಡ್ಡ ದೊಡ್ಡ ಶ್ರೀಮಂತರಿಗೆ, ನಿಮ್ಮ ಪರಿಚಯಸ್ಥರಿಗೆ, ಬ್ಯಾಂಕನ್ನು ವಂಚಿಸುವವರಿಗೆ ಲಕ್ಷಗಟ್ಟಲೆ ಸಾಲ ನೀಡುತ್ತೀರಿ. ನಮ್ಮಂಥ ಸೆಕ್ಯೂರಿಟಿ ನೀಡುವವರಿಗೆ ಜುಜುಬಿ 8,000 ರೂಪಾಯಿ ನೀವು ಕೊಡಲು ಯಾಕೆ ಅಳುತ್ತೀರಿ? ಲೋನ್ ಕೊಡಲು ಆಗುವುದಿಲ್ಲ ಎಂದಾದರೆ ಬರೆದುಕೊಡಿ ಎಂದು ವಾದಿಸಿದೆ. ಅದಕ್ಕೂ ಅವರು ಜಗ್ಗದಿದ್ದಾಗ, ಕೊನೆಗೆ ನಾನು, ನಾನೊಬ್ಬ ಪತ್ರಕರ್ತ ಕೂಡ; ನನಗೆ ನೀವು ವಂಚಿಸಿದ ವಿಷಯದ ಬಗ್ಗೆ ಲೋಕಲ್ ಪೇಪರ್‌ನಿಂದ ಹಿಡಿದು ಎಲ್ಲಾ ಪ್ರಮುಖ ಪತ್ರಿಕೆಗಳಿಗೂ ನಿಮ್ಮ ವಿರುದ್ಧ ದೂರು ಸಲ್ಲಿಸುತ್ತೇನೆ ಎಂದು ಅವರ ಛೇಂಬರಿನಿಂದ ಹೊರಡಲನುವಾದೆ. ಈ ಬ್ರಹ್ಮಾಸ್ತ್ರ ಅವರಿಗೆ ಬಹುಶಃ ನಾಟಿತೋ ಏನೋ, ಕೂಡಲೆ ಬ್ಯಾಂಕಿನಿಂದ ಹೊರಗೆ ತೆರಳುತ್ತಿದ್ದ ನನ್ನ ತಂದೆಯವರನ್ನು ಕರೆಯಿಸಿ, ನನ್ನನ್ನು ಸಮಾಧಾನ ಪಡಿಸುವಂತೆ ಹೇಳಿ, ಈಗಲೇ ರೂ. 4000 ಹಣವನ್ನು ಬಿಡುಗಡೆ ಮಾಡುತ್ತೇನೆ ಉಳಿದ ರೂ 4000 ಹಣವನ್ನು 2 ದಿನಗಳ ನಂತರ ಸಸ್‌ಪೆನ್ಸನ್ ಅಕೌಂಟ್‌ಗೆ ಹಾಕಲು ತಿಳಿಸುತ್ತೇನೆ ಎಂದರು. ಅಂತೂ ಕೊನೆಗೂ, ಕೆಲವು ಕಷ್ಟಗಳು ಎದುರಾದರೂ ಬ್ಯಾಂಕಿನಿಂದ ಸಾಲದ ಹಣ ಮಂಜೂರಾಯಿತು. ಸಬ್ಸಿಡಿಯೂ ದೊರಕಿತು. ನಯಾ ಪೈಸೆ ಲಂಚ ಪ್ರಸಾದ ಕೊಡದೆ ಸರಕಾರದ ಯೋಜನೆ ನನಗೆ ದೊರಕಿದ ಸಂತೃಪ್ತಿ ಇದೆ.



ಎನ್.ಆರ್. ಪುರ — ಎಂ. ರಾಘವೇಂದ್ರ ಭಂಡಾರಕರ್

ಸತ್ಯಮೇವ ಜಯತೆ

ರಕ್ಷಣಾ ಇಲಾಖೆಯಲ್ಲಿದ್ದ ನಾನು ರಾಜ್ಯದ ವ್ಯವಸಾಯ ಇಲಾಖೆಗೆ ಸೇರಿಕೊಂಡದ್ದು 1984ರಲ್ಲಿ.

ಮಂಡ್ಯ-ಮೈಸೂರು ಭಾಗಕ್ಕೆ ವರ್ಗವಾಗಿ 1962ರಲ್ಲಿ ಬಂದೆ. ಆಗ ನನ್ನ ಕಾರ್ಯದ ವ್ಯಾಪ್ತಿಯಲ್ಲಿ ಯೋಜನೆಗಳ ರೂಪುರೇಷೆಗೆ, ನಂತರ ಯೋಜನೆ ಪೂರ್ಣತೆಗೆ ತಾಂತ್ರಿಕವಾಗಿ ಮಾಡಿದ ಹಣಕಾಸಿನ ಖರ್ಚು ವೆಚ್ಚ ಸರಿಯಾಗಿದೆಯೇ ಎಂಬುದನ್ನು ಪರೀಕ್ಷಿಸಿ ಮಂಜೂರು ಮಾಡುವ ಅಧಿಕಾರವಿತ್ತು. ಒಂದು ರೀತಿಯಲ್ಲಿ ಲೋಕೋಪಯೋಗಿ (ಕಾರ್ಯ) ಇಲಾಖೆಯ ಕಾಮಗಾರಿಗೆ ಸಮಾನವಾಗಿತ್ತು. ಭ್ರಷ್ಟ ನೀತಿಯಿಂದ ಹಣ ಸಂಪಾದಿಸುವುದಕ್ಕೆ ಅನೇಕ ಮಾರ್ಗಗಳಿದ್ದವು.

1966ರಲ್ಲಿ ನನ್ನ ಮೇಲಧಿಕಾರಿ ಪ್ರವಾಸ ಮಾಡದೆ ಮಾಡಿದ ಸುಳ್ಳು ಕಾಗದ ಪತ್ರ ರಚಿಸಿ ಭತ್ತೆ ಹೊಡೆಯುತ್ತಿದ್ದಾನೆಂಬ ದೂರು ಅಂದಿನ ವಿಜಿಲನ್ಸ್ ಕಮೀಶನ್ನಿಗೆ ಬಂದಿತ್ತು. ಅದು ಹೇಗೋ ಬೆಂಗಳೂರಿನ ಮುಖ್ಯ ಕಚೇರಿಯಲ್ಲಿ ಆವಕ-ಜಾವಕ, ಕಾರ್ಯ ನಿರ್ವಹಿಸುತ್ತಿದ್ದ ಓರ್ವ ಈ ಅಧಿಕಾರಿಯ ಜನಾಂಗದವನೇ ಆದ ಗುಮಾಸ್ತೆಗೆ ತಿಳಿದುಬಂದು, ಆತ ರಾತ್ರೋರಾತ್ರಿ ಮೈಸೂರಿಗೆ ಬಂದು ವಿಷಯ ತಿಳಿಸಿದ್ದುದರಿಂದ ಮಾರನೆಯ ದಿನ ಬೆಳಗೇನೆ ಆ ಅಧಿಕಾರಿಯು ಆಫೀಸಿಗೆ ಬಂದು, ಲಾಗ್‌ಬುಕ್ ಇತ್ಯಾದಿ ಸಂಬಂಧಪಟ್ಟ ಕಾಗದಪತ್ರಗಳನ್ನು ಸುಟ್ಟು ಹಾಕಿಬಿಟ್ಟ.

ಮುಂದೆ ಒಂದು ವಾರದ ನಂತರ ತನ್ನ ಆಫೀಸಿನಲ್ಲಿ ತನ್ನ ಕೆಲ ಮಹತ್ವದ ದಸ್ತಾವೇಜುಗಳು ಕಳೆದುಹೋಗಿವೆ ಎಂಬ ದೂರನ್ನು ಬೆಂಗಳೂರು ಆಫೀಸಿಗೆ ಕೊಟ್ಟ. ಆಗ ಯೋಗ್ಯರು, ದಕ್ಷ ಪ್ರಾಮಾಣಿಕ ವ್ಯಕ್ತಿ ನಿರ್ದೇಶಕರಾಗಿದ್ದರು. ಅವರು ವಿಚಾರಣಾ ಅಧಿಕಾರಿಯನ್ನು ನಿಯಮಿಸಿದರು. ಆ ವ್ಯಕ್ತಿ ಇಲ್ಲಿ ಯಾರನ್ನೂ ವಿಚಾರಿಸದೆ ನಿರ್ದೇಶಕರಿಗೆ ತನ್ನ ವರದಿಯನ್ನು ನೀಡಿ ನನ್ನನ್ನೇ ಆರೋಪಿಯೆಂದು ಸಾಧಿಸಿದ್ದರು. ಅದರನ್ವಯ ನನ್ನನ್ನು ಚಿತ್ರದುರ್ಗಕ್ಕೆ ವರ್ಗಾವಣೆ ಮಾಡಲಾಯಿತು. ಆ ವರ್ಗಾವಣೆಯಲ್ಲಿ 'ತನಿಖಾ ವರದಿಯನ್ವಯ' ಎಂಬುದನ್ನು ಗಮನಿಸಿದ ನಾನು ಪ್ರತಿಭಟಿಸಿ ವರದಿಯ ಪ್ರತಿಯನ್ನು ನೀಡಬೇಕೆಂದು ಪಟ್ಟುಹಿಡಿದೆ. ಕೆಲಸದಿಂದ ಸಸ್ಪೆಂಡ್ ಮಾಡಿದರು. ಆ ಮೇಲಧಿಕಾರಿ ಅಷ್ಟರೊಳಗಾಗಿ ವಿದೇಶ ಪ್ರವಾಸಕ್ಕೆ ತೆರಳಿದ್ದರು. ನಾನು ಧೃತಿಗೆಡದೆ ಅಂದು ವಿತ್ತ ಮಂತ್ರಿಗಳಾಗಿದ್ದ ಬ.ದಾ. ಜತ್ತಿಯವರ ಮೂಲಕ ಅಂದಿನ ವಿಜಿಲನ್ಸ್ ಕಮೀಶನರನ್ನು ಸಮಕ್ಷಮ ಕಂಡು ಮಾತನಾಡಿ ದೂರು ನೀಡಿದುದರಿಂದ ಅದರ ತನಿಖೆ ಸುಮಾರು ತಿಂಗಳುಗಳವರೆಗೂ ನಡೆಯಿತು. ನಾನು ಒಂಬತ್ತು ತಿಂಗಳವರೆಗೂ ಸಂಬಳವಿಲ್ಲದೆ ಸಾಲ ಸೋಲ ಮಾಡಿ ಜೀವಿಸಬೇಕಾಯಿತು. ಕಮೀಶನ್ ವರದಿಗೆ ವರ್ಷವೆಲ್ಲಾ ಹಿಡಿದು ಮುಂದೆ ನಾನು ತಪ್ಪಿತಸ್ಥನಲ್ಲವೆಂದೂ, ಅಧಿಕಾರಿಯು ಭ್ರಷ್ಟಾಚಾರವೆಸಗಿದ್ದುದು ಸತ್ಯವೆಂದೂ ಸಾಬೀತಾಯಿತು.

ಮೈಸೂರು

ಮಣ್ಣೂರ್ ಗುರಪ್ಪ

ಸರ್ಕಾರಿ ಡಾಕ್ಟರ್‌ಗೆ ಸೆಡ್ಡು ಹೊಡೆದು...



1991ರ ಮೇ ತಿಂಗಳು. ರಾಷ್ಟ್ರೀಕೃತ ಬ್ಯಾಂಕಿನ ಕೆಲಸದ ಆರ್ಡರ್ ನನ್ನ ಕೈ ಸೇರಿತ್ತು. ವಿದ್ಯಾಭ್ಯಾಸದ ಎಲ್ಲ ದಾಖಲಾತಿಗಳು ಹಾಗೂ ಮೆಡಿಕಲ್ ಫಿಟ್‌ನೆಸ್ ಸರ್ಟಿಫಿಕೇಟಿನೊಂದಿಗೆ ನಾನು ಕೆಲಸಕ್ಕೆ ಹಾಜರಾಗಬೇಕಿತ್ತು. ಮೆಡಿಕಲ್ ಸರ್ಟಿಫಿಕೇಟನ್ನು ಜಿಲ್ಲಾ ವೈದ್ಯಾಧಿಕಾರಿಯಿಂದಲೇ ಪಡೆಯಬೇಕು ಎಂದು ನಾನು ತಿಳಿದುಕೊಂಡಿದ್ದೆ. ತಂದೆಯವರು ಊರಿನಲ್ಲಿರದ ಕಾರಣ, ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಪಕ್ಕದ ಮನೆಯವರನ್ನು ಸಲಹೆ ಕೇಳಿದೆ. ತಕ್ಷಣ ಎಲ್ಲ ಕೆಲಸಗಳನ್ನೂ ಮಾಡಿಕೊಡುತ್ತೇನೆ. ಆದರೆ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್‌ಗೆ ಕನಿಷ್ಠ ಐದುನೂರು ರೂಪಾಯಿ ಕೊಡಬೇಕಾಗುತ್ತದೆ-ಎಂದುಬಿಟ್ಟರು. ಐದುನೂರು ರೂಪಾಯಿ ಎಲ್ಲಿಂದ ಹೊಂದಿಸುವುದು, ಇಷ್ಟಾಗಿಯೂ ಅಷ್ಟು ದುಡ್ಡು ಏಕೆ ಕೊಡಬೇಕು, ಬೇಡ ಎಂದು ಹಟ ಹಿಡಿದೆ. ಆದರೆ ಒಮ್ಮೆ ಕೇಳಿದ ಮೇಲೆ ಪಕ್ಕದ ಮನೆಯವರ ಜೊತೆ ಮುಖ ಮುರಿದುಕೊಳ್ಳುವುದು ಬೇಡ ಎಂದು ಅಮ್ಮ. ನನ್ನ ನೌಕರಿಯ ಪ್ರಶ್ನೆಯೂ ಇತ್ತಲ್ಲ!

ಮರುದಿನ, ಪಕ್ಕದ ಮನೆಯವರ ಜೊತೆ ಸಿವಿಲ್ ಹಾಸ್ಪಿಟಲ್ಲಿಗೆ ಹೋದೆವು. ಜಿಲ್ಲಾ ವೈದ್ಯಾಧಿಕಾರಿ ನನಗಾಗಲಿ, ಹಿರಿಯಳಾದ ಅಮ್ಮನಿಗಾಗಲಿ ಕುಳಿತುಕೊಳ್ಳಲು ಹೇಳಲಿಲ್ಲ. ನನ್ನನ್ನು ನೋಡಿ ''ನೀನು ಬಹಳ ಬಡಕಲು, ನಿನ್ನನ್ನು ಪ್ರಯತ್ನಪೂರ್ವಕವಾಗಿ ಫಿಟ್ ಮಾಡಬೇಕು ಅಷ್ಟೇ'' ಎಂದು ವ್ಯಂಗವಾಡಿ ನಕ್ಕ. ಆಗಲೇ ನನಗೆ ಸಿಟ್ಟು ಏರತೊಡಗಿತ್ತು. ಮುಂದೆ ರಕ್ತ ಪರೀಕ್ಷೆ ಮಾಡಿಸಿ ಅದರಲ್ಲೂ ಕೂಡಾ ''ಯಾವಯಾವುದೋ ಪ್ರಮಾಣಗಳು ನಿನ್ನಲ್ಲಿ ಕಡಿಮೆ ಇವೆ. ನಾನು ಮೆಡಿಕಲ್ ಕಾಲೇಜಿನಿಂದ ಸರಿ ಪ್ರಮಾಣಗಳ (standards) ಪಟ್ಟಿ ತರಿಸಿ, ಎಲ್ಲ ಸರಿ ಮಾಡಿ (ಅಂದರೆ ಅವನ ಭಾಷೆಯಲ್ಲಿ manipulate) ಬರೆದುಕೊಡಬೇಕು'' ಎಂದು ಸುಳ್ಳು ಬಿಡುವುದರ ಮೂಲಕ ನಮ್ಮಲ್ಲಿ ಒಂದು ರೀತಿಯ ಹೆದರಿಕೆ, ಮಾನಸಿಕ ಹಿಂಸೆ ಉಂಟುಮಾಡಿದ. ದುಡ್ಡು ಹೊಡೆಯುವುದೂ ಅಲ್ಲದೆ, ಹೀಗೆ ಮಾತಾಡಿ ಜನರಿಗೆ ಮಾನಸಿಕ ಹಿಂಸೆಯನ್ನೂ ನೀಡುವ, ಒಂದು ಜವಾಬ್ದಾರಿಯುತ ಜಾಗದಲ್ಲಿರುವ ಆ ವೈದ್ಯನನ್ನು ಕಂಡು ಎಂಥ ಹೇಸಿಗೆ ಬಂತೆಂದರೆ, ರಪ್ಪನೆ ಅವನೆಡೆಗೆ ತಿರುಗಿ ''ನಾನು ಫಿಟ್ ಇಲ್ಲದಿದ್ದ ಪಕ್ಷದಲ್ಲಿ ನೀವು manipulate ಮಾಡುವುದೂ ಬೇಡ, ನಾನು ಬ್ಯಾಂಕ್ ಸೇರಿ ಅದಕ್ಕೆ ನಷ್ಟ ಅಥವಾ ತೊಂದರೆಯುಂಟು ಮಾಡುವುದೂ ಬೇಡ. ಆ ಫಾರ್ಮನ್ನು ವಾಪಸು ಕೊಡಿ'' ಎಂದೆ.

ಆತ ಒಮ್ಮೆಲೇ ಅಪ್ರತಿಭನಾದ. ''ನಾನು ಮಾಡಿಕೊಡುತ್ತೇನೆ'' ಎಂದು ತೊದಲಲು ಪ್ರಾರಂಭಿಸಿದ. ನಾನು ಕೇಳದೇ, ಫಾರ್ಮನ್ನು ಕಸಿದುಕೊಂಡು ಈಚೆ ಬಂದೆ.

ಅವನಿಗೆ ಮಣಿಯದೇ, ಭ್ರಷ್ಟನನ್ನು ಎದುರಿಸಿದ್ದಕ್ಕೆ ಒಂದು ರೀತಿಯ ಸಮಾಧಾನ ಅಂದಿಗೂ ಇಂದಿಗೂ ಅನುಭವಿಸಿದ್ದೇನೆ. ಖಾಸಗಿ ವೈದ್ಯರ ಸರ್ಟಿಫಿಕೇಟನೊಂದಿಗೆ ಕೆಲಸಕ್ಕೆ ಸೇರಿ, ಬ್ಯಾಂಕಿನಲ್ಲೀಗ ಮ್ಯಾನೇಜರ್ ಕೂಡ ಆಗಿದ್ದೇನೆ.

ಬೆಳಗಾವಿ

ನೀತಾ ಎಸ್. ರಾವ್

ಸಾಹೇಬ್ರ ಹತ್ರ ಹೇಳ್ಬೇಡಿ



ವೈದ್ಯ ಪದವಿ ಮುಗಿಸಿದ್ದೆ. ಬೆಂಗಳೂರಿನ 'ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ'ಯಲ್ಲಿ ನನ್ನ ಹೆಸರು ಮತ್ತು ಪದವಿ ನೋಂದಾವಣೆಗಾಗಿ ಹೋಗಿದ್ದೆ.

ಅಲ್ಲಿ ವಿವಿಧ ಕಾಲೇಜುಗಳಿಂದ ವೈದ್ಯ ಪದವಿ ಪಡೆದ ಹಲವು ವೈದ್ಯಮಿತ್ರರು ಬಂದಿದ್ದರು. ಎಲ್ಲರೂ ಅರ್ಜಿ ಪಡೆದು ನಿಗದಿತ ಶುಲ್ಕ ತುಂಬಿದೆವು. ''ನೊಂದಣಿ ಪ್ರಮಾಣ ಪತ್ರ ಯಾವಾಗ ಕೊಡುತ್ತೀರಿ?'' ಎಂದು ಕೇಳಿದ್ದಕ್ಕೆ, ಸಂಬಂಧಿಸಿದ ಗುಮಾಸ್ತ ''ನಾಳೆ ಬರ್ರಿ ನಾಳೆ'' ಎಂದ.

ಇದನ್ನು ಕೇಳಿ ರಾಜ್ಯದ ದೂರದ ಜಿಲ್ಲೆಗಳಿಂದ ಬಂದ ಕೆಲವರು ಅಂದಿನ ವಸತಿಯ ಬಗ್ಗೆ ಚಿಂತಿತರಾದರು. ಅದರೊಳಗೊಬ್ಬರು, ''ನೂರು ರೂಪಾಯಿ ಕೊಟ್ರೆ ಸಾಯಂಕಾಲವೇ ಕೊಡ್ತಾನೆ'' ಎಂದು ಗುಟ್ಟು ತಿಳಿದವರಂತೆ ಹೇಳಿದರು. ಸಾಯಂಕಾಲ ವಿಚಾರಿಸಿದರಾಯ್ತೆಂದು ನಾನು ಮಿತ್ರನ ಮನೆ ಹುಡುಕಿಕೊಂಡು ಹೊರಟೆ.



ಸಂಜೆ ನಾನು ಬರುವಷ್ಟರಲ್ಲಿ ಎಲ್ಲರೂ ನೂರು ರೂಪಾಯಿ ಕೊಟ್ಟು ನೋಂದಣಿ ಪತ್ರ ಕೈಲಿ ಹಿಡಿದು ಖುಷಿಯಲ್ಲಿ ಹೊರಬರುತ್ತಿದ್ದರು. ನಾನು ಕಾರ್ಯಾಲಯದಲ್ಲಿ ಹೋಗಿ ನಿಂತೆ. ಆಗ ಗುಮಾಸ್ತ ಯಾವ ಅಳುಕಿಲ್ಲದೇ ನೇರವಾಗಿ ''ನೂರು ರೂಪಾಯಿ ಕೊಡ್ರಿ'' ಎಂದು ಅಧಿಕಾರವಾಣಿಯಿಂದ ಕೇಳಿ ಪಡೆಯುವುದನ್ನು ಕಣ್ಣಾರೆ ನೋಡಿ ನನ್ನ ಮೈ ಉರಿಯಿತು. ಇನ್ನೂ 10-15 ಜನರಿದ್ದೆವು. ನನ್ನ ಸರದಿ ಬಂದಾಗ ''ನೂರು ರೂಪಾಯಿ ಕೊಡ್ರಿ'' ಎಂದು ಕೈ ಚಾಚಿದ. ನನಗೆ ಕೋಪ ನುಗ್ಗಿ ಬಂದು, ಆದಷ್ಟು ಶಾಂತವಾಗಿ ''ನೂರು ರೂಪಾಯಿ ಯಾಕೆ?'' ಎಂದೆ. ''ಯಾಕೆಂದ್ರೆ... ನಿಮ್ಮೆದುರಿಗೇ ಎಲ್ರೂ ಕೊಡ್ತಾಯಿದ್ದಾರಲ್ವ?'' ಎಂದು ನನ್ನೆಡೆ ತಿರಸ್ಕಾರದಿಂದ ನೋಡಿದ. ''ಬೇರೆಯವರ ವಿಷಯ ನನಗೆ ಬೇಡ ಅವರು ನೂರು ಕೊಟ್ರೆ ನಾನು ಐದ್‌ನೂರು ಕೊಡ್ತಿನಿ ಆದ್ರ ಅದಕ್ಕೆ ನೀನು ರಶೀದಿ ಕೊಡು'' ಎಂದು ಖಾರವಾಗಿ. ''ಹೆ... ಹೆ... ಹೋಗ್ರೀ ನಿಮ್ಮಂಥವರಿದ್ರೆ...'' ಎಂದು ರಾಗ ಎಳೆದ. ನನ್ನ ಪ್ರಮಾಣ ಪತ್ರವನ್ನು ಟೇಬಲ್ ಮೇಲೆ ಕುಕ್ಕಿದ. ತೆಗೆದುಕೊಂಡು ತೊಲಗಾಚೆ ಎಂಬಂತೆ. ಯಾವುದೇ ತಪ್ಪಿಲ್ಲದ ನಾನು ಸೋಲಲು ಸಿದ್ಧನಿರಲಿಲ್ಲ. ಅವನಿಗೆ ಆ ಕ್ಷಣದಲ್ಲೇ ಬುದ್ಧಿ ಕಲಿಸಬೇಕೆಂದು ನಿರ್ಧರಿಸಿ, ''ಏಯ್ ಲಂಚ ಕೇಳ್ತಿಯೇನೋ? ಎಷ್ಟು ಧೈರ್ಯ ನಿನಗೆ? ಬಾ ಡೈರೆಕ್ಟರ್ ಹತ್ತಿರ ಎಂದು ಜೋರಾಗಿ ಮಾತನಾಡುತ್ತಾ ಅವನ ಕೈ ಹಿಡಿದೆಳೆಯಲು ಹೋದೆ. ಆಸಾಮಿ ಪರಿಸ್ಥಿತಿ ಕೈಮೀರುತ್ತಿದ್ದುದನ್ನು ಅರಿತು ಎಲ್ಲರೆದುರಿಗೆ ಅವಮಾನವಾದುದಕ್ಕೆ ಬೆವೆತು ''ಸರ್ ಸರ್ ಗಲಾಟೆ ಮಾಡಬೇಡಿ ಸರ್ ದಯವಿಟ್ಟು'' ಎಂದು ಗೋಗರೆಯತೊಡಗಿದ. ಅವನು ತಣ್ಣಗಾಗುತ್ತಿದ್ದಂತೆ ನನ್ನ ಬೈಗಳು ಜೋರಾದವು. ಆಫೀಸಿನಲ್ಲಿ ಎಲ್ಲರೂ ದಂಗಾಗಿ ನೋಡುತ್ತಿದ್ದರು.

ಆ ಗುಮಾಸ್ತ ಈ ಗಲಾಟೆ ಮುಗಿದರೆ ಸಾಕಪ್ಪಾ ಎಂಬಂತೆ ಹಣ ಪಡೆಯದೆ ಉಳಿದ 10-15 ಜನ ವೈದ್ಯರಿಗೆ ಬೇಗಬೇಗನೆ ನೋಂದಣಿ ಪ್ರಮಾಣಪತ್ರ ಕೊಟ್ಟು ಮುಗಿಸಿ ನನ್ನ ಹತ್ತಿರ ಬಂದು ''ಸರ್ ತಪ್ಪಾಯ್ತು ದಯವಿಟ್ಟು ಡೈರೆಕ್ಟರ್ ಸಾಹೇಬ್ರ ಹತ್ರ ಹೇಳ್ಬೇಡಿ'' ಎಂದು ಬೇಡಿಕೊಂಡ.


ರಾಯಚೂರ

ಟಿ.ಎಸ್. ಕುಪ್ಪಣ್ಣ



ನನಗೆ ವಿಕಾಸವಾದದಲ್ಲಿ ನಂಬಿಕೆಯಿಲ್ಲವೆಂದು ಯಾರು ಹೇಳಿದ್ದು? ಆದರೆ ನನ್ನ ನಂಬಿಕೆಯನ್ನು ಮತ್ತೆ ಮತ್ತೆ ಸುಳ್ಳು ಮಾಡುವಂತೆ ಮುಸುಕದ ಬಂಡೆಗಲ್ಲಿನಂತೆ ಬಿದ್ದುಕೊಂಡಿತ್ತು ಈ ಊರು. ಭೂಮಿಯ ಗುರುತ್ವಾಕರ್ಷಣೆಯ ಸೆಳೆತದಿಂದ ಜಾರಿ ಪಥಭ್ರಾಂತವಾಗಿ ಬಿದ್ದಿದೆಯೇನೋ ಎಂಬ ಭ್ರಮೆ ಹುಟ್ಟಿಸುವ ಸ್ಥಳವಿದು. ಅದೇ ಗುಂಡಿಬಿದ್ದ, ಧೂಳು ಮುಖಕ್ಕೆ ಹೊಡೆವ ರಸ್ತೆಗಳು. ಎಲ್ಲಿ ನೋಡಿದರೂ ಕಸ. ಹಸಿರಿನ ಮಾತೇ ಕೇಳರದ ರಾವು ಬಡಿದ ಬೀದಿಗಳು. ರಣರಣ ನೆತ್ತಿ ಸುಡಿಸಿ, ದಳದಳ ಬೆವರು ಬಸಿಯುವ ಕೆಟ್ಟ ಬಿಸಿಲು. ಜೋಂಯ್ ಎಂದು ರಾಗಬದ್ಧವಾಗಿ ಒಡೆದು ಕೊಡುವ ಸೋಡಾಗಳನ್ನು ಆಕಾಶಕ್ಕೆ ಮುಖಮಾಡಿ, ಒಂಟಿಗಾಲಲ್ಲಿ ನಿಂತು ಗಂಟಲಿಗಿಳಿಸುವ ಜನ. ಹಾಳುಬಿದ್ದ ಕೋಟೆ, ಸಿಕ್ಕುಸಿಕ್ಕಾದ, ಸಿಕ್ಕು ಹಾಕಿಕೊಂಡ ದಾರದ ಉಂಡೆಯಂತೆ ಎಲ್ಲೆಂದರಲ್ಲಿ ಕಲ್ಲಿನಿಂದ ಕಟ್ಟಿದ ಮನೆಗಳು. ಸರ್ಕಲ್ಲಿನಲ್ಲಿ ಕತ್ತು ಬಗ್ಗಿಸಿ ರದ್ದಿ ಮೇಯುವ ಕತ್ತೆಗಳು. ಡರ್‌ಡರ್ ಎಂದು ಬಾಲ ಅಲುಗಿಸುತ್ತ ಎಗ್ಗಿಲ್ಲದೆ ಜನರನ್ನೇ ಓಡಿಸಿಕೊಂಡು ಹೋಗುವ ಹಂದಿಗಳ ಗುಂಪು. ಜಾಲಿ ಮುಳ್ಳು ಪೊದೆ ಕಂಡಲ್ಲಿ ಸರಕ್ಕನೆ ಚೆಡ್ಡಿಯೋ, ಧೋತರವೋ ಬಿಚ್ಚಿ ಒಂದು, ಎರಡುಗಳನ್ನು ಪಾಂಗಿತವಾಗಿ ಮುಗಿಸುವ ಮಂದಿ... ಹೀಗಿತ್ತು ಊರು. ಹೀಗೆ ಇದೆ ಊರು. ಹೀಗೆಯೇ ಇರುತ್ತದೆ ಈ ಊರು.

ನಾನು ಚಿಕ್ಕವನಾಗಿದ್ದಾಗಿನಿಂದ ಬೆಳೆದು ದೊಡ್ಡವನಾಗಿ ಯಾವ ಕೆಲಸಕ್ಕೂ ಬಾರದ ರಿಕಾಮಿಯಾಗಿ ಓಡಾಡುವವರೆಗೆ ಅಂದರೆ ಸುಮಾರು ಇಪ್ಪತ್ತೈದು ವರ್ಷಗಳವರೆಗೆ ಈ ಊರಿಗೆ ಯಾವ ಬದಲಾವಣೆಯ ಗಾಳಿಯೂ ಬೀಸಲಿಲ್ಲ. ವಿಕಾಸವಾದಕ್ಕೆ ಸಡ್ಡು ಹೊಡೆದು ನಿಂತರೆ ಯಾರೇನು ಮಾಡಲು ಸಾಧ್ಯ?



ಕೇಶವ ಮಳಗಿ

ದೊರೆಸಾನಿ ಜಾಲಿಬೆಂಚಿ



ಊರಿನ ಮೆಯಿನ್ ರೋಡನಾಗ ಒಂದ್ ಕಲ್ಲು ತಂದ ಹಾಕಲೇ. ಮೂರು ವರ್ಷಾದರೂ ನಾ ಅಂಬ ಗಂಡಸು ಸೂಳೀಮಗ ಅದನ್ನೆತ್ತಿ ಬಗಲಿಟ್ಟರೆ ಕೇಳಲೆ ಎಂದು ಗೆಳೆಯನೊಬ್ಬ ಓಪನ್ ಚಾಲೆಂಜ್ ಕಟ್ಟಿದ್ದ. ಎಸ್ವಿ. ರಂಗ್ರಾವ್ ನಟಿಸಿದ್ದ ತೆಲುಗು ಚಿತ್ರವೊಂದರ ಪೋಸ್ಟರನ್ನು ಇಪ್ಪತ್ತು ವರ್ಷಗಳ ನಂತರವೂ ಜತನವಾಗಿ ಕಾಪಾಡಿಕೊಂಡು ಬಂದ ಕಟ್ಟಡವನ್ನು ನಾನು ಇತ್ತೀಚೆಗೆ ನೋಡಿ ದಂಗಾಗಿದ್ದೆ! ಊರಿನ ಐತಿಹಾಸಿಕ ಪ್ರಜ್ಞೆಗೆ ತಲೆದೂಗಿದ್ದೆ.

ಮೂವತ್ತು ವರ್ಷಗಳಿಂದ ಡಾಂಬರು ಕಾಣದ ರಸ್ತೆ ಈ ಊರಿಗೆ ಮಾಮೂಲು. ಹತ್ತು ದಿನಕ್ಕೊಮ್ಮೆ ನೀರು ಕಾಣುವ ಕೊಳಾಯಿ ತೀರ ಸಹಜ. ಪ್ರತಿ ಎಲೆಕ್ಷನ್ನಿನಲ್ಲಿ ಕಾಂಗ್ರೆಸ್ ಗೆದ್ದು ಬರುವುದು ಸಂಪ್ರದಾಯ. ಬೀರು ಕುಡಿದು ಹೊಟ್ಟೆ ಬಿಟ್ಟುಕೊಂಡು ಓಡಾಡುವ ರೆಡ್ಡಿ, ಕಮ್ಮಾಗಳು, ಕವಿಗೋಷ್ಠಿ, ನಾಟಕ ಎಂದು ಓಡಾಡುವ ಉಳ್ಳಾಗಡ್ಡಿಗಳು, ಭಾಗವತವೊ ಹರಿಕಥೆಯೊ ಕೇಳಲು ಗುಡಿಗಳಿಗೆ ಹಾರುತ್ತ ಹಾರುತ್ತ ಹೋಗುವ ಹಾರುವರು, ನಾಲ್ಕು ನಾಲ್ಕು ಜನ ಕೂತ ರಿಕ್ಷಾ ಎಳೆಯಲು ತೇಕುವ ಬಡಪಾಯಿಗಳು... ಪರವೂರಿನವರಾದರೆ ನಿಮಗೆ ವಿಚಿತ್ರವೆನ್ನಿಸಿ ಮನರಂಜನೆ ನೀಡುತ್ತವೆ.

ಇಲ್ಲಿಗೆ 'ಅಮ್ಮ' (ಇಂದಿರಮ್ಮ), ಮಹಾತ್ಮಗಾಂಧಿ ಇಬ್ಬರೂ ಬಂದು ಹೋಗಿದ್ದಾರೆ. ಮಹಾತ್ಮ ಇಲ್ಲಿಗೆ ಬಂದಾಗ ಆ ತಾತನಿಗೆ ಯಾರು ಸನ್ಮಾನಿಸಿ ಹಾರ ಹಾಕಬೇಕು ಎಂಬ ವಿಚಾರಕ್ಕೆ ಎರಡು ಗುಂಪುಗಳಿಗೆ ಜಗಳ ಹುಟ್ಟಿ ಯಾವ ಪಾರ್ಟಿಯವರೂ ರೈಲ್ವೆ ಸ್ಟೇಷನ್ನಿಗೆ ಹೋಗಲಿಲ್ಲವಂತೆ! ಕೊನೆಗೆ ಗಾಂಧಿ ಬೇರೆಲ್ಲೊ ಉಳಿದು ಎರಡೂ ಗುಂಪಿಗೆ ರಾಜಿ ಮಾಡಿಸಬೇಕಾಯಿತಂತೆ.

ಇಂಥ ನಾಲ್ಕಾರು ಊರು ನಿಮಗೆ ಸಿಕ್ಕಬಹುದು. ಬರೀ ಊರಿನ ಬಗ್ಗೆ ಹೇಳುವುದಾದರೆ ಕಥೆ ಬರೆದು ಸಂಭಾವನೆ ಗಿಟ್ಟಿಸುವ ಪ್ರಮೇಯವೂ ಇರಲಿಲ್ಲ. ಹೇಳಿದ್ನೆಲ್ಲ ಇಂಥ ಊರು ಸಿಗಬಹುದು. ಆದರೆ 'ಜಾಲಿಬೆಂಚಿ' ಸಿಗಲಾರಳು! ಹೌದು, ಇದು ಕಾಡು ಹೂವಿನಂತೆ ಚೆಲುವೆಯಾಗಿದ್ದ ಬೇಡರ ಜಾತಿಯ ಹೆಣ್ಣಿನ ಹೆಸರು. ಜಾಲಿಬೆಂಚಿ ಎಂಬ ಊರಿನವಳಾದ ಆಕೆಯ ನಿಜವಾದ ಹೆಸರು ಚಿನ್ನ ಲಕ್ಷ್ಮಮ್ಮ. ಆದರೆ ಜನ ಆ ಊರಿನ ಹೆಸರಿನಲ್ಲಿ ಏನು ಕಂಡರೊ ಅವಳನ್ನು ಜಾಲಿಬೆಂಚಿ ಅಂದರು. ಬಹುಶಃ ಆಕೆ ಆ ಊರಿನಿಂದ ಓಡಿಬಂದಿದ್ದು ಕಾರಣವಿರಬೇಕು. ಆದರೆ ಹಾಗೆ ಕರೆಯುವಾಗ ಆ ಪದಕ್ಕೆ ಅಸಾಧ್ಯ ಅಶ್ಲೀಲತೆ ಅಂಟಿದೆ ಎಂಬಂತೆ ಉಚ್ಚರಿಸುತ್ತಿದ್ದರು. ಹಾಗೆ ಉಚ್ಚರಿಸಿದಾಗಲೊಮ್ಮೆ ಅವಳೊಂದಿಗೆ ಮಲಗಿ ಸುಖಿಸಿದಷ್ಟು ಸಂತೋಷಪಡುತ್ತಿದ್ದರು.

ಆಕೆ ಭೀಮಯ್ಯ ಸರ್ಕಲ್ಲಿನ ಅನಭಿಷಿಕ್ತ ಮಹಾರಾಣಿಯಾಗಿದ್ದಳು. ಒಂದು ಚಹಾದಂಗಡಿ, ಮೂರು-ನಾಲ್ಕು ಮಟ್ಕಾ ಟೇಬಲ್ಲು, ಸರಾಯಿ ಅಡ್ಡೆ, ಚಿಟಿಕೆ ಹೊಡೆದರೆ ನಾನಾ ಅನ್ನುವ ಗಂಡಸರು ಸುಂಬಳ ಸುರಿಸುತ್ತ ಡೊಗ್ಗಾಲು ಹಾಕಿ ಕೂರುವ ವರ್ಚಸ್ಸು ಅವಳಿಗಿತ್ತು. ಇನ್ನೇನು ಬೇಕಿತ್ತು ಅವಳಿಗೆ? ಆದರೆ ಅದಕ್ಕೆ ಸವೆಸಿದ ಹಾದಿ ಭಯಾನಕವಾಗಿತ್ತು. ನೆನಸಿಕೊಂಡರೆ ಅವಳ ಮೈಗೆ ಮುಳ್ಳೇಳುತ್ತಿದ್ದವು. ಆದರೆ ಅಂಥ ದಾರಿ ಸವೆಸದಿದ್ದರೆ ತಾನು ದೊರೆಸಾನಿಯಾಗುವುದು ಅಸಾಧ್ಯವೆಂದೂ ಆಕೆಗೆ ಗೊತ್ತಿತ್ತು.

ಇಡೀ ಕುಂಟೆಗಡ್ಡಿಗೆ ಶೀಟು ಹಾಕಿದ್ದ, ಸಿಮೆಂಟು ಗೋಡೆಗಳಿದ್ದ ಮನೆಯೆಂದರೆ ಅವಳದೊಬ್ಬಳದೇ. ಉಳಿದ ನೂರಾರು ಗುಡಿಸಲುಗಳಿಗೆ ಆಪು ಹುಲ್ಲಿನ ದಂಟೇ ಗತಿಯಾಗಿತ್ತು. ರಾತ್ರಿ ಎಂಟರ ನಂತರ ನೀವು ಆ ಕುಂಟೆಗಡ್ಡೆ ಗುಂಟ ಹೋದರೆ ಬೇರೆ ಜಗತ್ತೇ ತೆರೆದುಕೊಳ್ಳುತ್ತಿತ್ತು. ನಾವು ಚಿಕ್ಕವರಾಗಿದ್ದಾಗ ಮೊಹರಂ ಸಮಯದಲ್ಲಿ ಪೀರಲುಗಳು ಕುಂಟೆಯಲ್ಲಿ ಸಾಯುವುದನ್ನು ನೋಡಲು ಹೋಗುತ್ತಿದ್ದಾಗ ಹೊರಸಿನ ಮೇಲೆ ಕೂತು ಸಿಗರೇಟು ಸೇದುತ್ತ, ಕುಡಿಯುತ್ತ ಕೂತ ಜಾಲಿಬೆಂಚಿ ಕಾಣುತ್ತಿದ್ದಳು! ಅವಳು ಹೊರಸಿನ ಮೇಲೆ ಗುಟುಕು ಹಾಕುತ್ತ ಕೂತಿದ್ದರೆ ಗಂಡಸರು ಎಂದು ತೊಡೆ ಅಲ್ಲಾಡಿಸುವ ಮುಂಡೇ ಮಕ್ಕಳು ಅವಳ ಕೆಳಗೆ ಸರಾಯಿ ಗ್ಲಾಸು ಹಿಡಿದು ನೆಲದ ಮೇಲೆ! ಅವಳನ್ನು ನೋಡುವುದೆಂದರೆ ನನಗೆ ಭಾರೀ ಖುಷಿ! ಅವಳ ಬಗೆಗಿನ ಕಥೆಗಳೆಂದರೆ ಇನ್ನೂ ಮಜ! ಆಕೆ ಗಿಚ್ಚಲು ಎನ್ನುವವನನ್ನು ಹಾರಿಸಿಕೊಂಡು ಬಂದಿದ್ದಳೆಂದು ಜನ ಹೇಳುತ್ತಿದ್ದರು. ಅವಳ ಹಿಂದೆ ಗಿಚ್ಚಲು ಏನು ಯಾರಾದರೂ ಓಡಿ ಹೋಗಬಹುದಿತ್ತು. ಹಾಗಿದ್ದಳು ಜಾಲಿಬೆಂಚಿ!

ಆದರೆ ಕುಂಟೇಗಡ್ಡೆಯತ್ತ ರಾತ್ರಿ ಇರಲಿ ಹಗಲೂ ಹೋಗಬಾರದಂಥ ಭಯಾನಕ ಕಥೆಗಳನ್ನು ದೊಡ್ಡವರು ಹೇಳುತ್ತಿದ್ದರು. ಅವು ನಿಜವೂ ಇದ್ದವೇನೊ. ರಾತ್ರಿಯೆಲ್ಲ ದಂಚಿಸಿಕೊಂಡು ಹರಿದ ತುಟಿಗಳಲ್ಲಿ ಕಾಲು ಅಗಲಿಸಿಕೊಂಡು ಓಡಾಡುವ ರಖೇಲಿಗಳು ಹಗಲೆಲ್ಲ ನೆಲ-ಆಕಾಶ ಒಂದು ಮಾಡುವಂತೆ ಬೈದಾಡುತ್ತ ಓಡಾಡುತ್ತಿದ್ದರು. ಮೂವರು-ನಾಲ್ವರು ಸೇರಿದರೆ ಒಂದು ಜಂಗೀ ಹೊಡೆದಾಟವಾಗಿ ಒಬ್ಬನ ಕಿವಿ, ಇನ್ನೊಬ್ಬನ ಬೆರಳು ಚಾಕುವಿನ ಚೂಪಿಗೆ ಕತ್ತರಿಸಿ ಉದುರುತ್ತಿದ್ದವು. ಕೆಲವರು ಹರಿದುಬಿದ್ದ ಅವಯವಗಳನ್ನೇ ರಿಕ್ಷಾದಲ್ಲಿ ಹಾಕಿಕೊಂಡು ಪೊಲೀಸ್ ಸ್ಟೇಶನ್‌ಗೆ ಲಬೊಲಬೊ ಬಡಿದುಕೊಳ್ಳುತ್ತ ಓಡುತ್ತಿದ್ದರು. ಇವನ್ನೆಲ್ಲ ನೋಡುತ್ತಲೇ ನಾನು ಬೆಳೆದಿದ್ದು.

ನನ್ನ ವಯಸ್ಸಿನ ಹುಡುಗರು ಯಾರಿಂದಲೋ ಉದ್ರಿ ಸೈಕಲ್ ಹೊಡೆದು ಜಾಲಿಬೆಂಚಿಯ ಚಹಾದಂಗಡಿಯ ಮುಂದೆ ಏ ಶಾಮ್ ಮಸತಾನಿ ಹಾಡನ್ನು ಸೀಟಿ ಹೊಡೆಯುತ್ತ ಪೆಡಲ್ ತುಳಿಯುತ್ತಿದ್ದೆವು. ಹಾಗೆ ಸಿಳ್ಳು ಹೊಡೆದು ಹಿಂದಿ ಹಾಡನ್ನು ಗುನುಗುವುದು ಆಗ ಭಾರೀ ಫ್ಯಾಷನ್ ಆಗಿತ್ತು. (ಅದಾಗಿ ಇಪ್ಪತ್ತೈದು ವರ್ಷಗಳ ಮೇಲೆ ಇದೀಗ ನನ್ನ ಕಚೇರಿಯಲ್ಲಿ ರಘುಕೃಷ್ಣನ್ ಎಂಬ ತಾಲೂಚಟ್ಟ ಪತ್ರಕರ್ತ ಅವೇ ಹಾಡುಗಳನ್ನು ಈಗಲೂ ಕಾಯ್ದುಕೊಂಡು ಬಂದು

ಬಾಲ್ಕನ್‌ನಲ್ಲಿ ಸೀಟಿ ಬಜಾಯಿಸುವುದನ್ನು ಕೇಳಿದ್ದೇನೆ. ಪಳಯುಳಿಕೆ ಶಾಸ್ತ್ರಕ್ಕೆ ಎಂದೂ ಅಳಿವಿಲ್ಲ ಎಂಬುದು ನಿಜ.) ಜಾಲಿಬೆಂಚಿ ನಮ್ಮತ್ತ ನೋಡಿದರೆ ನಮಗೆ ಸಿಕ್ಕಾಪಟ್ಟೆ ಸಂತೋಷವಾಗುತ್ತಿತ್ತು.

ಆದರೆ ಮೊನ್ನೆ ಊರಿಗೆ ಹೋದಾಗ ನನ್ನ ಎದೆ ಒಡೆಯುವ ದೃಶ್ಯವನ್ನು ನಾನು ನೋಡಬೇಕಾಯಿತು. ವಿಕಾಸಕ್ಕೆ ತುಸು ಚಾಲನೆ ಸಿಕ್ಕಂತಿತ್ತು. ನಾಲ್ಕು ವರ್ಷಗಳ ಮೇಲೆ ಊರಿಗೆ ಹೋದರೆ ಇಡೀ ಕುಂಟಿಗಡ್ಡೆ, ಭೀಮಯ್ಯ ಸರ್ಕಲ್ಲಿನ ಅನಧಿಕೃತ ಕಟ್ಟಡಗಳು ಪೂರಾ ನೆಲಸಮ! ನನ್ನ ಮನಸ್ಸಿನಲ್ಲಿ ಅಂತರಂಗದ ಮರೆಯಾಗಿಹೋಗಿದ್ದ ಜಾಲಿಬೆಂಚಿ ತಣ್ಣಗೆ ಆಕ್ರಮಿಸತೊಡಗಿದ್ದಳು. ನಾನವಳನ್ನು ಎಷ್ಟೋ ವರ್ಷ ಮರೆತೇಬಿಟ್ಟಿದ್ದೆ. ಅವಳ ಚಹಾದಂಗಡಿ ಜಾಗ, ಕುಂಟಿಗಡ್ಡೆಯ ಕುಖ್ಯಾತ ಸೂಳೆಗೇರಿ, ಸರಾಯಿ ಅಡ್ಡೆ ನಿರ್ನಾಮವಾಗಿದ್ದು ಕಂಡು ಆಕೆ ನೆನಪಿಗೆ ಬಂದಳು.

ನೆಲಸಮಗೊಳಿಸಿದ ಜಾಗದಲ್ಲಿ ದೊಡ್ಡ ಶಾಪಿಂಗ್ ಸಂಕೀರ್ಣ ತಲೆ ಎತ್ತಿತ್ತು. ಕುಂಟಿಗಡ್ಡೆಗಂತೂ ಒಂದು ಉದ್ದೋ ಉದ್ದ ಜೈಲಿನ ದರವಾಜೆಯಂಥ ಗೋಡೆ ಎಬ್ಬಿಸಿದ್ದರು. ಕಬ್ಬಿಣದ ಗೇಟು ನೆಟ್ಟು ಬೀಗಗಳನ್ನೂ ಹಾಕಿದ್ದರು. ಇಡೀ ಕೊಳಗೇರಿ ಸಮವಾಗಿ ಜಾಗ ಬಹಳ ಸ್ವಚ್ಛವಾಗಿತ್ತು. ಈ ದಿಢೀರ್ ಬದಲಾವಣೆ ಹೇಗಾಯಿತು ಎಂದು ಚಿಕಿತ್ಸೆ ಮಾಡಿದಾಗ ತಿಳಿದು ಬಂದಿದ್ದು-

ಹೊಸದಾಗಿ ಬಂದಿದ್ದ ಉತ್ತರ ಭಾರತದ ಅಧಿಕಾರಿ. ಎರಡು ವರ್ಷದ ಹಿಂದೆ ಆಯ್ಕೆಯಾಗಿದ್ದ ಐಎಎಸ್ ಅಧಿಕಾರಿ. ಗೌರಿಯೊ, ಸರಸೋತಿಯೋ ಅವಳ ಹೆಸರು. ಮೊದಲ ಪೋಸ್ಟಿಂಗ್ ಇಲ್ಲೇ. ನಮ್ಮೂರ ರಾಜಕೀಯ ನಿಮಗೆ ಗೊತ್ತಿರಲಿಕ್ಕಿಲ್ಲ. ಗುಂಡಾಗರ್ದಿ, ಖೂನಿ, ಚಪ್ಪರ್ ಬಂದ್, ತಲೆಹಿಡುಕ ಹಲಾಲುಕೋರ್, ಮಟ್ಕಾ, ಕಳ್ಳಬಟ್ಟಿ... ಇಂಥ ಹಡಬಿಟ್ಟಿ ಕೆಲಸದಲ್ಲಿ ನಿರತರಾದವರೆ ಇಲ್ಲಿನ ನಾಯಕರು. ಇಲ್ಲಿನ ಶಾಸಕನಿಗೆ ಈ ಸಕಲ ಗುಣಗಳೂ ಇವೆ. ಕುಂಟಿಗಡ್ಡೆ ಅವನ ಓಟ್‌ಬ್ಯಾಂಕ್. ಆದರೆ ಹೊಸ ಹುರುಪಿನಿಂದ ಬಂದ ಹರೆಯದ ಆ ಐಎಎಸ್ ಹುಡುಗಿಗೆ ಇಂಥವರನ್ನು ಬಗ್ಗುಬಡಿದು ಸಮಾಜಕ್ಕೆ ಒಳ್ಳೇದನ್ನು ಮಾಡೋ ಹುಮ್ಮಸ್ಸು. ಒಮ್ಮೆ ಆಕಸ್ಮಿಕವಾಗಿ ಈ ಸ್ಥಳ ಹಾದು ಹೋಗುವಾಗ ಇಲ್ಲಿರುವ ನೀರಿನ ಕುಂಟೆ ಬಹಳ ಸೊಗಸಾಗಿದೆ ಅನ್ನಿಸಿತಂತೆ. ವಿಹಾರ ಸ್ಥಳ ಮಾಡಿ, ದೋಣಿಗಳನ್ನು ಬಿಟ್ಟರೆ ಜನರಿಗೂ ಮನರಂಜನೆ ದೊರಕೀತು ಅನ್ನಿಸಿತು. ಆದರೆ ಆ ತಾಯಿ ಇಂಥ ಕುಖ್ಯಾತ ವೇಶ್ಯಾವಾಟಿಕೆ ಸ್ಥಳಕ್ಕೆ ಒಬ್ಬಳೇ ಹೋದದ್ದು ಹೇಳಿ. ಜಾಲಿಬೆಂಚಿಯಂತೆ ಮಹಾಧೈರ್ಯಸ್ಥಳು ಅಂತ ಕಾಣುತ್ತೆ. ಮನಸ್ಸಿಗೆ ಬಂದಿದ್ದೇ ಮೂರು-ನಾಲ್ಕು ದಿನ ನೋಟೀಸು ಕೊಟ್ಟು, ಒಬ್ಬರನ್ನೂ ಬಿಡದಂತೆ ಬಟ್ಟಲೆಬ್ಬಿಸಿದಳು. ರಾತ್ರೋರಾತ್ರಿ ಪೊಲೀಸರು, ಕೆಲಸಗಾರರು ಬಂದು ಈ ಕೊಳಗೇರಿ, ಅದಕ್ಕಂಟಿದಂತೇ ಇದ್ದ ಎಲ್ಲಾ ಅಂಗಡಿಗಳನ್ನು ನೆಲಸಮ ಮಾಡಿದ್ದಾಯಿತು. ನೆನಪಿಡಿ, ಇಲ್ಲಿಂದ ಒಕ್ಕಲೆಬ್ಬಿಸಿದರೂ ಊರ ಹೊರಗೆ ಅವರಿಗೆಂದೇ ವಿಶಾಲ ಸರ್ಕಾರಿ ಜಾಗದಲ್ಲಿ ಬದುಕಲು ಅವಕಾಶ ಮಾಡಿಕೊಟ್ಟಳಂತೆ. ಮನೆ ಕಟ್ಟಿಕೊಳ್ಳಲು ಸರ್ಕಾರಿ ಸಾಲವನ್ನೂ ಕೊಡಿಸಿದಳಂತೆ.

ಮಾಮೂಲಿನಂತೆ ನಮ್ಮ ಶಾಸಕನಿಗು-ಅವಳಿಗು ಜಟಾಪಟಿ ಹತ್ತಿತು. ಸರ್ಕಲ್ಲಿನಲ್ಲಿ ಕೈಗೆ ಕೈ ಮಿಲಾಯಿಸುವವರೆಗೂ ಟೆನ್ಷನ್ ಬೆಳೆದಿತ್ತಂತೆ. ಶಾಸಕ ಕೈ ಮೆತ್ತಬೇಕು ಅನ್ನೋದರಲ್ಲಿ ಆ ಅಧಿಕಾರಿ, ಮಿಸ್ಟರ್, ನಾನು ಜಿಲ್ಲಾ ದಂಡಾಧಿಕಾರಿ. ನೀನು ತಕ್ಷಣ ನಿನ್ನ ಚಮಚಾಗಳೊಂದಿಗೆ ಜಾಗ ಖಾಲಿ ಮಾಡದಿದ್ದರೆ ಅರೆಸ್ಟ್ ಮಾಡಬೇಕಾಗುತ್ತದೆ ಅಂದಳಂತೆ. ಈತ ಬಾಯಿ ಮುಚ್ಚಿಕೊಂಡು ಹೋದ. ಆದರೆ ಆರು ತಿಂಗಳು ಹಗಲು ರಾತ್ರಿ ರಾಜಕೀಯ [illegible] ಆಕೆಯನ್ನು ಬೇರೆಲ್ಲಿಗೊ ಎತ್ತಿಸಿ ಹಾಕಿದ. ಅದಿರಲಿ, ಇನ್ನೇನು ವಿಕಾಸವಾದಕ್ಕೆ ತೆರೆದುಕೊಳ್ಳಬೇಕು ಅನ್ನುತ್ತಿದ್ದ ಊರು ಮತ್ತೆ ಯಥಾಸ್ಥಿತಿಗೆ ಮರಳುವಂತಾಯಿತು. ಆದರೆ ಆದ ಚೂರು ಬದಲಾವಣೆ ನನ್ನ ನೆನಪು ಕೆದಕಿತು.

ನಾನು ಏಳುತ್ತಿದ್ದ ಸಂಕೀರ್ಣವನ್ನು ತುಸು ಹೊತ್ತು ನೋಡುತ್ತ ನಿಂತೆ. ಅಲ್ಲಿ ಚಹಾ ಹೊಡೆಯುತ್ತ ನಿಂತ ಜಾಲಿಬೆಂಚಿ ಕಂಡಳು. ತನ್ನ ಆಕರ್ಷಕ, ತುಸು ಹೆಚ್ಚು ಉಬ್ಬಿದ ಎದೆಗಳ ನಡುವೆ ಸೆರಗನ್ನು ಸಿಂಬಿಯಂತೆ ಸುತ್ತಿ, ಆ ಕೈಯಲ್ಲೊಂದು ಈ ಕೈಯಲ್ಲೊಂದು ಪಾತ್ರೆ ಹಿಡಿದು ಚಹಾ ಹೊಡೆಯುವ ದೃಶ್ಯ. ಈಗಾಕೆ ಬದುಕಿದ್ದರೆ ಅವಳಿಗೆ ಅರವತ್ತು ವರ್ಷವಾಗಿರಬಹುದು! ಹೌದು, ನಿಜ. ನನಗೆ ಕೊನೆಗೆ ತಡೆಯುವುದಾಗದೆ ಯಾರನ್ನು ಕೇಳಲಿ ಎಂದು ಹಿಂದೆ-ಮುಂದೆ ನೋಡಿದೆ. ಕೊನೆಗೆ ಮೂಲೆಯಲ್ಲಿ ಮುದಿ ಕುದುರೆಯೊಂದಿಗೆ ಬೀಡಿ ಸೇದುತ್ತ ಜಟಕಾದಲ್ಲಿ ಕೂತಿದ್ದ ಹಜರತ್ ಒಬ್ಬರು ಕಂಡರು. ಇವರೇ ಸರಿಯೆಂದು ಅಲ್ಲಿ ಹೋದೆ. ಅದು-ಇದು ಎಂದು ಒಂದೆರಡು ಮಾತನಾಡಿದೆ. ಆಟೋ ಬಂದಿರುವುದರಿಂದ ಬೇಪಾರ್ ಡಲ್ ಎಂದು ಅವರು ಕೊರಗಿದರು. ನಾನು ಮಾತುಕತೆ ಬೇರೆ ಕಡೆ ಹೊರಳುವ ಮೊದಲೇ - ಹಜರತ್, ಇಲ್ಲಿ ಜಾಲಿಬೆಂಚಿ ಅಂತ ಹೆಂಗಸಿನ ಹೋಟಲ್ಲಿತ್ತಲ್ಲ ಏನಾತು? ಅಂದೆ.

ಹಜರತ್ ಮುಖದ ಮೇಲೆ ಸ್ವಲ್ಪ ಹೊತ್ತು ನಗು ಸುಳಿಯಿತು. ಅವಳ ಚೆಲುವನ್ನು ನೆನಪಿಸಿಕೊಂಡಿರಬೇಕು! ಆದರೆ ಮರುಕ್ಷಣವೇ ವಿಷಾದದ ಛಾಯೆ ಸುಳಿಯಿತು. ಎಲ್ಲಿ ಯಜಮಾನ್. ಅವಳ ಖೂನಿಯಾಗಿ ಆರು ವರ್ಸಾತಲ್ಲ. ಆ ಹರಾಮ್, ಅವಳ ಗಂಡನೇ ಖೂನಿ ಮಾಡಿಸಿದನಲ್ಲ. ಕೈ ಕಾಲೆಲ್ಲ ಕಡದು ಬಗದಿದ್ದರಂತಪೊ. ಹ್ಯಾಂಗ ಬದುಕಿದ್ದಳು. ನನಗಂತೂ ಹೊಟಲಿರ ಮಟ ರೇ



ನಬೀ, ಚಾ ಕುಡಿ ಅಂತ ದಿನಾ ಚಾ ಕೊಡತಿದ್ದಳು. ಒಂದು ದಿನಾನೂ ರೊಕ್ಕ ತಗಂಡಿಲ್ಲ. ಅವಾ ಗಂಡಾ ಅನ್ನೋ ಧಗಡಾಂಕೆ ಇನ್ನಾ ಬದುಕೀ ಐದಾನೆ. ಅಲ್ಲಿ ಇಲ್ಲಿ ಭಿಕ್ಷಾ ಬೇಡ್ಕಂತ ತಿರಗತಾನ. ಯಂಥಾ ಹೆಣ್ಣಪೋ ಅವಳು ಎಂದು ಮೈಮರೆತರು. ನಾನು ಮೆಲ್ಲಗೆ ಜಾಗ ಖಾಲಿ ಮಾಡಿದೆ. ಹಜರತ್ ಸಾಹೇಬರಿಗೂ ಆಕೆಗೂ ಯಾವ ಜನ್ಮದ ಋಣಾನುಬಂಧವೊ, ನಾನೇಕೆ ಅಡ್ಡಿಯಾಗಲಿ?

ನನ್ನ ಮನಸ್ಸೆಲ್ಲ ಒಂದು ರೀತಿಯ ವಿಷಾದದಿಂದ ತುಂಬಿಹೋಯಿತು. ಆಕೆಯ ಎಳೆವಯಸ್ಸಿನ ಎಲ್ಲ ಚೆಲ್ಲಾಟವನ್ನೂ ಸಹಿಸಿಕೊಂಡಿದ್ದ ಗಿಚ್ಚಲು ಆಕೆಯನ್ನು ಇಳಿವಯಸ್ಸಿನಲ್ಲೇಕೆ ಖೂನಿ ಮಾಡಿಸಿದ? ಬಹುಶಃ ಆ ವೇಳೆಗೆ ಬದುಕಿನ ಸವಿಯೆಲ್ಲ ಕಳೆದುಕೊಂಡು ಬರೀ ಕಹಿಭಾವ ಅವನಲ್ಲಿ ಉಳಿದು ಹೋಗಿ, ಅದಕ್ಕೆ ಪ್ರತೀಕಾರವಾಗಿ ಆಕೆಯನ್ನು ಮುಗಿಸಿದನೆ? ತಾನೇ ಪ್ರೀತಿಸಿ ಪಡೆದ ಹೆಣ್ಣನ್ನೂ ಕತ್ತರಿಸಿ ನೆಲಕ್ಕಿಳಿಸುವ ಕಟುಕನಾಗಿದ್ದನೆ ಗಿಚ್ಚಲು? ವಿಷಾದ ಇನ್ನೂ ಒಂದು ಕಾರಣಕ್ಕೆ-ಅವಳು ಮುದಿ ವಯಸ್ಸಿನಲ್ಲಿ ಎಷ್ಟು ಸುಂದರವಾಗಿ

ಕಾಣುತ್ತಿದ್ದಳು ಎಂದು ನೋಡುವ ಭಾಗ್ಯ ಈ ಕಣ್ಣಿಗೆ ಒದಗಲಿಲ್ಲ ಎಂದು. ನಾನು ಚಿಕ್ಕಂದಿನಲ್ಲಿ ತೆಲುಗು ಚಿತ್ರಗಳಲ್ಲಿ ನಟಿಸುತ್ತಿದ್ದ ಬಿ. ಸರೋಜಮ್ಮ, ಈ ಊರಿನವಳೇ ಆಗಿದ್ದ ಬ್ರಾಂಬರ ಹುಡುಗಿ ಜಮುನಮ್ಮನವರಂಥ ಇಬ್ಬರು ಸುಂದರಿಯನ್ನು ಬಿಟ್ಟರೆ ಬಹುವಾಗಿ ಆ ಎಳೆವಯಸ್ಸನ್ನು ಮೀಟುತ್ತಿದ್ದ ಚೆಲುವೆಂದರೆ ಈ ಜಾಲಿಬೆಂಚಿಯದೇ. ಕಣ್ಣ ಪಾರಣೆಯಾಗಿದ್ದ ಮಹಾತಾಯಿ. ಆದರೆ ವಿಷಾದದ ನಡುವೆಯೂ ಒಂದು ಸಮಾಧಾನ ಕೊಟ್ಟ ಸಂಗತಿಯೆಂದರೆ ನನ್ನ ಜಾಲಿಬೆಂಚಿ ಬದುಕಿದ್ದಾಗ, ಅವಳಷ್ಟೇ ಛಲಗಾತಿಯಾದ ಆ ಐಎಎಸ್ ಕಲೆಕ್ಟರ್ ಆಯಮ್ಮ, ಅವಳ ಚಹಾದಂಗಡಿ, ಶೀಟಿನ ಮನೆ ಒಡೆದು ಹಾಕಿ ನುಚ್ಚುನೂರು ಮಾಡಲಿಲ್ಲ ಅನ್ನುವುದು. ಆ ದೊರೆಸಾನಿಯೇ ಹೋದ ಮೇಲೆ ಅವಳ ಸಾಮ್ರಾಜ್ಯ ಇದ್ದರೆಷ್ಟು ನೆಲಗಚ್ಚಿದರೆಷ್ಟು?

ಇಲ್ಲಿನ ರಪರಪಾ ಮುಖಕ್ಕೆ ಹೊಡೆದ ಬಿಸಿಲು, ರಾತ್ರಿಯೆಲ್ಲ ಮೈಯನ್ನು ಚಕ್ಕೆ ಎಬ್ಬಿಸುವ ದ್ವಾಮಿ, ಗುಂಗಾಡಿ ಕಾಟ ತಪ್ಪಿಸಿಕೊಳ್ಳಲು ಬಂದ ಎರಡನೇ ದಿನಕ್ಕೇ ಗಿಚ್ಚ ಹೊಡೆಯುವವನು ನಾನು. ಈ ಸಲ ಇನ್ನೆರಡು ದಿನ ಹೆಚ್ಚಿಗೆ ಕಳೆಯಲು ನಿರ್ಧರಿಸಿದ್ದೆ! ಆಹಾ! ಮೋಹವೇ! ಜಾಲಿಬೆಂಚಿಯ ಖಾಸಗಿ ಬದುಕಿನ ವಿವರ ಕಲೆ ಹಾಕಲು ನಿರ್ಧರಿಸಿದ್ದೆ! ಖರೆ ಅಂದರೆ ನನ್ನ ತಾಯಿಯ ವಯಸ್ಸಿನವಳು ಅವಳು. ಆದರೆ ಕಾಡಿದ್ದು ಸುಳ್ಳಲ್ಲ. ಆದರೆ ಅವಳ ಬಗ್ಗೆ ಒಂದೆರಡು ವಿವರ, ಕಥೆ, ಕೇಳಲು ನನ್ನ ಮನಸ್ಸು ಬಯಸಿತ್ತು. ಆದರಿಂದ ಖುಷಿಯಾಗಿತ್ತು. ಇನ್ನೂ ಒಂದೆಂದರೆ ಬರಹಗಾರನೆಂದುಕೊಂಡಿರುವ ನಾನು ಮುಂದೊಂದು ದಿನ ಕಥೆ ಬರೆದು ಕಾಫಿ ಕಾಸು ಗಿಟ್ಟಿಸಬಹುದೆಂಬ ಆಸೆ ಮನಸ್ಸಲ್ಲಿ ಇದ್ದರೂ ಇದ್ದೀತು!

ಈಗಾಗಲೇ ಹೇಳಿರಬೇಕು ನಿಮಗೆ. ಜಾಲಿಬೆಂಚಿ ಅನ್ನೋದು ಈ ಊರಿಂದ ಇಪ್ಪತ್ತೆರಡು ಮೈಲಿ ದೂರದ ಹಳ್ಳಿ. ಯಾವುದೇ ಬಯಲು ಸೀಮೆ ಹಳ್ಳಿಯಂತೆ ಬರಗಾಲ, ಕ್ಷಾಮ-ಡಾಮರ, ಹಸಿವು-ಬಡತನವೇ ಆಸ್ತಿಯಾಗಿದ್ದ ಹಳ್ಳಿ. ಅಲ್ಲಿನ ಬೇಡರ ಗುಂಪಿನ ಒಂದು ಮನೆಯಲ್ಲಿ ಹುಟ್ಟಿದವಳು ಈಕೆ. ಮೊದಲು ಹುಟ್ಟಿದ ಕೂಸಿಗೆ ಲಕ್ಷ್ಮಮ್ಮ ಅಂತ ಹೆಸರಿಟ್ಟರು. ಆಮೇಲೂ ಇಲ್ಲೊಂದು ಹೆಣ್ಣು ಹುಟ್ಟಿದರೆ ಹೆಸರಿಗೇನು ಮಾಡೋದು? ಮೊದಲು ಹುಟ್ಟಿದ್ದಕ್ಕೆ ಪೆದ್ದ ಲಕ್ಷ್ಮಮ್ಮ ಅಂತ ಕರೆದು ಇದಕ್ಕೆ ಚಿನ್ನ ಲಕ್ಷ್ಮಮ್ಮ ಅಂದರು. ಕಳ್ಳಬಟ್ಟಿ ಕಾಯಿಸೋದು, ಇದ್ದ ಜಾಲಿಮರಗಳನ್ನು ಕಡಿದು ಹೊರೆ ಕಟ್ಟಿ ಮಾರೋದು. ಹೀಗೆ ನಡೆಯಬೇಕು ಆ ಬೇಡರ ಬದುಕು. ಅಲ್ಲೆ ಹೇಗೋ ಈ ಕೂಸೂ ಬೆಳೆಬೆಳೆದು ದೊಡ್ಡದಾಯಿತು. ನಮ್ಮ ಪಟ್ಟಣಗಳಲ್ಲಿಯಾದರೆ ಮಕ್ಕಳನ್ನು ಬೆಳೆಸೋದೆ ಒಂದು ಕಸುಬು. ಹಳ್ಳಿಗಳಲ್ಲಿ ಅದಕ್ಕೆಲ್ಲ ಸಮಯವೆಲ್ಲಿಯದು. ಹುಟ್ಟಿದವು ಹೇಗೊ ಬದುಕಿ ಬೆಳೆದುಕೊಳ್ಳುತ್ತವೆ. ಅದೂ ಐವತ್ತು ವರ್ಷದ ಹಿಂದಿನ ಬೆಳೆಯೋ ಆಟ ಹೇಗಿತ್ತೊ ಊಹಿಸಿ. ಮೈಮೇಲೆ ಬಟ್ಟೇ ಅಂತ ಒಂದು. ಜಡೆಗಟ್ಟಿದ ಹೇನುಮಯ ತಲೆ, ಗೊಣ್ಣೆ... ಹೀಗೇ ಇದ್ದಿರಬೇಕು.

ಆದರೆ ಹರೆಯಕ್ಕೆ ಬಂದಾಗ ಬೇಡರ ಹಟ್ಟಿಯದೇ ಈ ಕೂಸು ಅಂತ ಅನ್ನೊ ಹಾಗೆ ಅದರ ಚೆಲುವು ಕಣ್ಣು, ಮೂಗು, ಆ ಸಣ್ಣಕ್ಕಿ ಹಲ್ಲು, ಅದೇನು ತುಟಿಗಳೋ. ಎಲ್ಲರ ಕಣ್ಣು ಬೀಳತೊಡಗಿತು. ಹಾಗೇ ಮೀಸೆ ಮೊಳಕೆ ಬಡೀತಿದ್ದ ಗಿಚ್ಚಲುನ ಕಣ್ಣೂ ಬಿತ್ತು. ಅವನೂ ಒಳ್ಳೇ ಎತ್ತರ, ಎತ್ತರಕ್ಕೆ ತಕ್ಕ ಮೈ, ವಯಸ್ಸಿಗೆ ತಕ್ಕ ತರುಣ ನಗೆ ಎಲ್ಲ ಸೇರಿ ಆಕೆ ಸುಂದರಾಂಗಿಯಾದರೆ ಈತ ಸುಂದರಾಂಗನೆ ಸೈ. ಒಬ್ಬರಿಗೊಬ್ಬರು ಕೆರೆದಂಡಿಯಲ್ಲಿ ನೋಡಿದರೆ ಮೈ ನವಿರೇಳುತ್ತಿತ್ತು. ಗಾಳಿ ಕ್ವಿವಿ ಹೊಕ್ಕಾಗೆ ಇಬ್ಬರೂ ಮೈಮರೆತು ನಿಲ್ಲುತ್ತಿದ್ದರು. ಗಂಟೆಗಳು ಕಳೆದಾದ ಮೇಲೆ ಆತ ಒಣಗಿದ ಬಟ್ಟೆನೆಲ್ಲ ಗಂಟುಕಟ್ಟಿ ಬೆನ್ನಿಗೆ ಹೊತ್ತುಕೊಂಡು ನಡೆಯುವವನು. ಇವಳು ಜಾಲಿ ಹೊರೆಯನ್ನು ತಲೆಗೆ ಹೆಟ್ಟಿ ನಡೆಯುವವಳು. ತಿರುತಿರುಗಿ ನೋಡುವುದಂತೂ ಸೈಯೇ ಸೈ. ಒಳ್ಳೆ ವಯಸ್ಸು. ಕಾಮದೇವನ ಆಟ.

ಆ ಹಳ್ಳಿ ಅನ್ನೋ ಹಳ್ಳಿಯಲ್ಲಿ ಮನೆ ಇದ್ದದ್ದೇ ಮೂರು ಮೂವತ್ತು. ಮೂರು ಬ್ರಾಂಬ್ರದ್ದಾದರೆ ಇಪ್ಪತ್ತು ಬೇಡರವು. ಉಳಿದಿದ್ದರಲ್ಲಿ ಸಕಲೆಂಟು ಜಾತಿಗಳೂ ಸೇರುತ್ತಿದ್ದವು. ಬೆಳಿಗ್ಗೆಯಿಂದ ಸಂಜೆವರೆಗೆ ಒಬ್ಬರ ಮುಖ ಇನ್ನೊಬ್ಬರು ನಾಲ್ಕು ಸತಿಯಾದರೂ ನೋಡುವ ಅನಿವಾರ್ಯ. ಇಂಥ ಸಣ್ಣ ಕಗ್ಗಾಡಲ್ಲಿ ಅದೂ ಹರೆಯದ, ಹಾದರದ ಸುದ್ದಿ ಕಿವಿಕಿವಿ ಮುಟ್ಟೋದು ತಡವೇ? ಹಾಗೇ ಆಯಿತು. ಬೇಡರ ಹಟ್ಟಿ ಜನ ಕುದ್ದೆದ್ದರು. ಆ ಅಗಸರ ಹುಡಗನೆಲ್ಲಿ, ಈ ಪೌರುಷದ ನಾಯಕ ಜಾತಿಯ ಹೆಣ್ಣೆಲ್ಲಿ? ನರಕಿ ಎಯ್ಯಂಡ್ರಾ (ಕಡದು ಹಾಕ್ರಲೇ) ಯಾರೋ ಕುಡಿದ ರೊಚ್ಚಿನಲ್ಲಿ ಕೂಗಿದರು. ಹೇಗಿದೆ ನೋಡಿ. ಇವರಿಗೂ ತಿನ್ನಲು ನಾಲ್ಕು ಮುಷ್ಠಿ ಜೋಳ, ನವಣೆ ಗತಿಯಿಲ್ಲ. ಪಾಪ, ಇದ್ದ ಒಂದೇ ಅಗಸರ ಕುಟುಂಬಕ್ಕೂ ಅದೇ ಗತಿ. ಆದ್ರೆ ಜಾತಿಯ ಪ್ರತಿಷ್ಠೆ ಎಲ್ಲಿ ಹೋದೀತು?



ಮನಮೇಮಿ, ಆ ಸಾಕಲೋಡು ಎಮಿ? (ನಾವೇನು, ಆ ಅಗಸರ ಹುಡಗನೇನು) ಅನ್ನುವ ಪ್ರತಿಷ್ಠೆ. ಕುಲದ ರೋಷ, ರೋಷಕ್ಕೆ ತಕ್ಕ ಆಟ ಗೊತ್ತಿದ್ದ ಚಿನ್ನ ಲಕ್ಷ್ಮಮ್ಮ ಅನಾಹುತವನ್ನು ಗ್ರಹಿಸಿದಳು. ಯಾವುದೇ ಗಳಿಗೆಯಲ್ಲೂ ಅಗಸರ ಗಿಚ್ಚಲು ಇವರ ಕುಡಗೋಲಿಗೆ ತುಂಡಾಗಿ ಮಣ್ಣು ಸೇರಬಹುದು ಎಂದು ಗೊತ್ತಾಗಿ ಹೋಯಿತು.

ಸರಿ ಹೊತ್ತಿನಲ್ಲಿ ಎದ್ದವಳೇ, ಆತನ ಮನೆಗೆ ಕದ್ದು ಹೋದವಳೇ ಮೆಲ್ಲಗೆ ಕೂಗಿ ಕರೆದಳು. ಏನೇ ಹೇಳಿ, ಹರೆಯಕ್ಕೆ ವಿಚಿತ್ರ ಸಂವೇದನೆ ಎಂದು. ಇವಳೊಂದಿಗೇ ಕನಸಿನಲ್ಲಿ ಮಾತನಾಡುತ್ತಿದ್ದ ಎಂಬಂತೆ ದನಿ ಕೇಳಿದ್ದೇ ಎದ್ದು ಬಂದ ಗಿಚ್ಚಲು. ನಿಜದಲ್ಲೂ ಅವಳನ್ನೇ ಕಂಡು ದಂಗಾದ. ಲಕ್ಷ್ಮಮ್ಮ ಒಂದೇ ಮಾತಲ್ಲಿ - ನಡೀ ಎಲ್ಲನ ಹೋಗಮ್ಮು. ಇಲ್ಲಿ ಉಳಿಗಾಲಿಲ್ಲ, ಎಂದು ಅವನನ್ನು ಎಳೆದಳು. ಆತ ಅಯಸ್ಕಾಂತಕ್ಕೆ ಮರುಳಾಗಿ ಮರುಮಾತಾಡದೆ ರಾತ್ರಿ ಸರೊತ್ತಿನಲ್ಲಿ ಅವಳ ಹಿಂದೆ ನಡೆದೇಬಿಟ್ಟ! ಈಗಿನಂತೆ ಡಾಂಬರು ರೊಡ್ಡುಗಳೇ? ಅದೊಂದು ಅಡವಿಯ ಹಾದಿ. ಕತ್ತಲೆ. ಜಾಲಿಮುಳ್ಳು ಗಿಡಗಳು. ನರಿಗಳ ಕೂಗು. ಇಡೀ ರಾತ್ರಿ ನಡೆಯುವುದೇ ನಡೆಯುವುದು. ಬಹುಶಃ ಆ ಐದಾರು ತಾಸುಗಳ ಆ ಆತಂಕದ ನಡಿಗೆಯಲ್ಲೂ ಒಂದೋ ಎರಡೋ ಬೆಚ್ಚಗಿನ ಪ್ರೀತಿ ವಿಶ್ವಾಸದ ಮಾತುಗಳನ್ನು ಅವರು ಆಡಿಕೊಂಡಿರಬೇಕು.

ನಸುಕಿಗೆ ಈ ಊರಿಗೆ ಬಂದು ಮುಟ್ಟಿದರು. ಇಲ್ಲೇನು ಬಂಧುವೆ, ಬಳಗವೆ? ಆಗಿನ್ನೂ ಬಸ್ಸುಗಳ ಕಾಲ ಅಲ್ಲ. ಜಟಕಾ ನಿಲ್ಲಿಸುತ್ತಿದ್ದ ಜಾಗದಲ್ಲಿ ಬಂದು ಕೂತರು. ಬೆಳಗಾಯಿತು. ಮಧ್ಯಾಹ್ನವೂ ಆಯಿತು. ಸಂಜೆ,ರಾತ್ರಿಗಳೂ ಬಂದವು. ಇವರ ಬಳಿ ಕಾಸುಗೀಸು ಎಂಥದ್ದು? ಹಳ್ಳಿ ಮುಕ್ಕರು. ಸರಿ ಅವತ್ತು ಉಪವಾಸ. ಅಲ್ಲೇ ಮಲಗಿದರು. ಮೇಮೇಲೆ ಬಟ್ಟೆ ಇದ್ದದ್ದೇ ಹೆಚ್ಚಿನದು. ಹಾಸಿ ಹೊದೆಯಲು ಎಲ್ಲಿಂದ ತಂದಾರು? ಎರಡನೆಯ ದಿನ ಮೈ ಚಳಿ ಬಿಟ್ಟು ಅಕ್ಕಪಕ್ಕ ಓಡಾಡಿದರು. ಅಲ್ಲೇ ಇದ್ದ ಬಾವಿಯಿಂದ ಸೇದಿ ನೀರು ಕುಡಿದರು. ಮಲಗಿದರು. ಮೂರನೇ ದಿನಕ್ಕೆ ಹಸಿವಿನಿಂದ ಕಂಗೆಟ್ಟು ಹೆಣವಾಗಿದ್ದರು. ಜಟಕಾ ಸ್ಟಾಂಡಿನ ಯುವಕನೊಬ್ಬ ಯಾವೂರು, ಎತ್ತ ಎಂದು ವಿಚಾರಿಸಿದ. ಇವರು ದೊಡ್ಡೂರಿಗೆ ಬಂದದ್ದು ಇದೇ ಮೊದಲು. ಹೆದರಿಕೆಯಲ್ಲೇ ಎಲ್ಲ ಹೇಳಿದರು.

ಆತ ತನ್ನ ಜೇಬಿನ ಆಣೆ ದುಡ್ಡಲ್ಲಿ ಚಹಾ ಕುಡಿಸಿ, ನಾಸ್ತಾ ಮಾಡಿಸಿದ. ಎರಡು ದಿನ ಕಾದು ಕಂಗೆಟ್ಟ ಹೊಟ್ಟೆಗೆ ಮಂಡಾಳು ಒಗ್ಗರಣೆ ಬಿದ್ದಾಗ ಇಬ್ಬರಿಗೂ ಕೈಕಾಲು ಆಡಿದವು. ನೀವು ಇಲ್ಲಿರದು ಛೇಷಲ್ಲ. ಭಾರೀ ಹೊಲಸು ಜಾಗ ಇದು. ಆ ತಿಂಡ್ಲೂರು ನರಸಿಮ್ಲು ಕಣ್ಣಿಗೆ ಬೀಳ ಮದ್ಲು ಫರಾರ್ ಆಗ್ರೀ ಎಂದು ಆ ಜಟಕಾ ಯುವಕ ಗಿಚ್ಚಲುಗೆ ಹೇಳಿದ. ಗಿಚ್ಚಲು ತಲೆಯಾಡಿಸುತ್ತಿರುವಾಗಲೇ ಯಾರಾತ ನರಸಿಮ್ಲು ಕೇಳಿದ್ದು ಲಕ್ಷ್ಮಮ್ಮ. ಐ ನಿನಗ್ಯಾಕ ಬ್ಯಾಡ ಬಿಡು ಬೆಹನ್. ಆತ ಹರಾಮ್ ಖೋರ್ ಸುವ್ವರೇಳು. ಭಾರಿ

ಕೆಟ್ಟೋನು. ಇಲ್ಲೆಲ್ಲ ಅವನ ಮಾತೇ ನಡೆಯೋದು ಅಂದ ಜಟಕಾ ಯುವಕ. ಎಲ್ಲಿರತಾನು? ಪ್ರಶ್ನೆಗೆ, ಬಂಡಿಮೋಟು-ಬಂತು ಉತ್ತರ. ಲಕ್ಷ್ಮಮ್ಮ, ಏಯಿ, ಗಿಚ್ಚಲು, ಇಲ್ಲೇ ಕುಂದ್ರು. ನಾ ಬರವರ್ಗೂ ಯ್ಯಲ್ಲೂ ಹ್ವಾಗಬ್ಯಾಡ ನನ್ನಾಣೆ ಐತಿ ನಿಂಗ, ಎಂದು ಎದ್ದು ನಡೆದೇಬಿಟ್ಟಳು.

ಬಂಡಿಮೋಟಿನ ಅಡ್ಡೆಯಲ್ಲಿ ತಿಂಡ್ಲೂರು ನರಸಿಮ್ಲು ತನ್ನ ಹುದ್ದರಿಗಳ ಜತೆ ಕೂತು ಬೀಡಿ ಸೇದುತ್ತಿದ್ದ. ಹರೆಯದ ಹುಡುಗಿ, ಎದೆ ನಡುಗಿಸುವ ಕುಖ್ಯಾತಿಯ ಆಸಾಮಿಯೆದುರು ನಿಲ್ಲುವುದೆಂದರೆ? ಏಯ್! ಯಾವುರಂಗೆ? ರುವಾಬು ಹಾಕಿದ. ಜಾಲಿಬೆಂಚಿ-ಉತ್ತರ. ಏನ್ ಕಥೆ? ಹೇಳಿದಳು. ಅದಕ್ಕೇನು ಮಾಡಂತಿ? ಹ್ಯಂಗನ ಬದಕತೀವಿ. ರೋಸ್ಟು ಜಾಗಾ ಕ್ವಡಸು ಜಟಕಾ ನಿಂದರತಾವಲ್ಲ, ಅಲ್ಲಿ. ಅಂದಳು. ಅದಲ್ಲಾ ಸುಮ್ನೆ ಹ್ಯಂಗ ಆಗ್ತೈತ್ಯಂಗೇ? ಮೀಸೆ ಹುರಿಮಾಡಿದ ನರಸಿಮ್ಲು. ಹುದ್ದರಿಗಳಿಗೆ ಹಿಗ್ಗು.

ಚಿನ್ನ ಲಕ್ಷ್ಮಮ್ಮನಿಗೆ ಅರ್ಥವಾಯಿತು. ಏಯಿ, ರೆಡ್ಡಿ, ನನ್ನ ಮೈ ಬೇಕೇನೊ ನಡೀ ಎಂದಳು. ಅವನೇನು ಧರ್ಮರಾಯನಲ್ಲ. ನಡೀ ಎಂದ. ಕಾಟೇಗುಡ್ಡ ಹತ್ತಿದ್ದರು. ಅವನಿಗೆ ಚೆಂದದ ಹುಡುಗಿ ಸುಖಕ್ಕೆ ಸಿಕ್ಕಳು. ಈಕೆಗೆ ಬದುಕು ಸಿಕ್ಕಿತು. ಎದ್ದುಬಂದದ್ದೇ, ತನ್ನ ಹುದ್ದರಿಯಲ್ಲೊಬ್ಬನಿಗೆ, ರೆಯ್, ಆ ಜಾಲಿಬೆಂಚಿಕಿ ಏಮಿ ಕಾವಾಲಾ ಚೂಡರಾ, ಅಂದ. ಲಕ್ಷ್ಮಮ್ಮ ಆ ಕ್ಷಣದಲ್ಲಿ ಜಾಲಿಬೆಂಚಿಯಾಗಿ ಇಲ್ಲೊಂದು ಸೂರು ಗಿಟ್ಟಿಸಿಕಂಡಳು. ಮೆಚ್ಚಿದ ಹುಡುಗನೊಂದಿಗೆ ಮದುವೆಯಾಗಿ ಬಾಳುವೆ ಮಾಡಲು ಬಂದವಳು ಕುಖ್ಯಾತನೊಬ್ಬನಿಗೆ ಮೀಸಲು ಮುರಿದಿದ್ದಳು! ಹುದ್ದರಿಯೊಂದಿಗೆ ಹೆಜ್ಜೆ ಹಾಕುವಾಗ, ಲಕ್ಷ್ಮಮ್ಮ ನರಸಿಮ್ಲುವನ್ನು ಉದ್ದೇಶಿಸಿ ಕೂಗಿ ಹೇಳಿದಳು, ಇದು ಯಾರಿಗೂ ಗೊತ್ತಾಗಬಾರದು, ನನ್ನಾಣೆ. ನರಸಿಮ್ಲು ಮೀಸೆ ಹುರಿ ಮಾಡಿಕೊಂಡು ಎಲ್ಲರನ್ನೂ ಒಳಗೊಂಡಂತೆ, ವಿನಿಪಿಚ್ಚಿಂದೆರ್ರಾ? (ಎಲ್ಲರಿಗೂ ಕೇಳಸ್ತಾ?) ಅಂದ. ಎಲ್ಲರೂ ತಲೆ ಹಾಕಿದರು. ಕಟುಕನಿಗೂ ಏನೋ ನಿಯತ್ತು!

ಲಕ್ಷ್ಮಮ್ಮನ ಜಾದೂವಿಗೆ ಗಿಚ್ಚಲು ಮರುಳಾಗಿದ್ದ. ಹಗಲು ಆರೈಕೆ ಮಾಡುತ್ತಾಳೆ. ರಾತ್ರಿ ಮನಸ್ಸು ತೃಪ್ತಿಯಾಗುವಂತೆ ರಮಿಸುತ್ತಾಳೆ. ಜತೆಗೆ ಚಹಾದಂಗಡಿಯನ್ನು ತಾನೇ ಸಂಭಾಳಿಸುತ್ತಾಳೆ. ಪುರುಷನಿಗೆ ಇನ್ನೇನು ಬೇಕು? ದೇಹಸುಖ, ಸೋಮಾರಿ ಸುಖ. ಎರಡೂ ದಕ್ಕಿದ್ದವು. ಊರವರಿಗೆಲ್ಲ ಆಕೆ ಜಾಲಿಬೆಂಚಿಯಾದರೂ ಇವನಿಗೆ ಲಚ್ಚುಮಿಯೇ. ಆಕೆ ಓಡಾಡಿ, ಮಾತಾಡಿಸಿ ಹತ್ತು ಗಿರಾಕಿಗಳು ತನ್ನ ಚಹಾದಂಗಡಿಗೆ ಬರುವಂತೆ ಮಾಡಿದಳು. ನೋಡಲು ಚೆಲುವೆ, ಜತೆಗೆ ಎಲ್ಲರೂ ಒಂದೇ ಎನ್ನುವ ರೀತಿ ಚಹಾದಂಗಡಿಯಲ್ಲಿ ಆತಿಥ್ಯ. ಅವಳ ವ್ಯಾಪಾರ ಕುದುರಿತು. ನಿಧಾನಕ್ಕೆ ಹೆಣ್ಣೆಂಗಸು ಅಂಬೋಳು ಅಂಗಡಿ ಇಡದು ಕೇಳೀರೇನಲೇ ಎಂದು ಕಿವಿಯಿಂದ ಕಿವಿಗೆ ಮಾತು ಹಬ್ಬಿ ಜನ ಹುಚ್ಚರಂತೆ ಅವಳ ಅಂಗಡಿಯ ಚಹಾ, ಸೊಂಟಿ ಕಾಪಿ, ಹರೇರಾ, ಒಗ್ಗರಣಿ ಸವಿಯಲು ಬರುವವರೇ. ನೆನಪಿಡಿ, ಆಕೆ ತಾನು ಬೆಳೆಯಲು, ಬಲಿಷ್ಠವಾಗಲು ಅಡ್ಡಪಡಿಸುವ ಕೆಲವು ಬಲಾಢ್ಯರೊಂದಿಗೆ (ಅವರೂ ಬೆರಳೆಣಿಕೆಯವರು) ಸೆರಗು ಒದರಿಕೊಂಡಳೆ ಹೊರತು ಪುಡಿ ಜನರಿಗಲ್ಲ. ಉಳಿದವರು ಅವಳಿಗೆ ಹುಳದಂತೆ!

ಆಕೆ ಬೆಳೆದಳು-ಭೀಮಪ್ಪ ಸರ್ಕಲ್, ಕುಂಟೆಗಡ್ಡೆ, ಜಟಕಾ ಸ್ಟ್ಯಾಂಡ್ ಅವಳಿಗೆ ಮುಜುರೆ ಹಾಕುವಷ್ಟು. ತನ್ನ ಕುಲಕಸುಬಾದ ಬಟ್ಟಿಯನ್ನು ಇಲ್ಲಿ ಮಾಡಿದರೆ ಹೇಗೆ ಅನ್ನಿಸಿದ್ದೇ ಅದನ್ನೂ ಸುರುಹಚ್ಚಿಕೊಂಡಳು. ಈಗ ಅವಳ ಅಮದಾನಿ, ವರ್ಚಸ್ಸು ಇನ್ನೂ ಬೆಳೆಯಿತು. ಇಲ್ಲೇ ಶುರುವಾದದ್ದು ತಿಂಡ್ಲೂರು ನರಸಿಮ್ಲುಗು ಅವಳಿಗೂ ತಿಕ್ಕಾಟ. ಅವನೂ ಅದೇ ದಂಧೆಯವನೆ. ಸಂಘರ್ಷ ಸುದೀರ್ಘಕ್ಕೆ ಹೋಯಿತು. ನರಸಿಮ್ಲು ರೇಗಿ, ರೋಷಿ ಹೋದ. ಈಗಾಗಲೇ ಪಳಗಿದ್ದ ಲಕ್ಷ್ಮಮ್ಮ ಇನ್ನೊಂದು ಪಟ್ಟು ಹಾಕಿದಳು. ರೆಡ್ಡಿಯನ್ನು ಸಂಧಾನಕ್ಕೆ ಕುಂಟೆಗಡ್ಡೆಗೆ ಮಾದಕ ಸಂಜ್ಞೆಯ ಮೂಲಕ ಆಹ್ವಾನಿಸಿದಳು. ಹೆಣ್ಣಿನ ಕಾಮತುಂಬಿದ ಕಣ್ಣುಗಳಿಗೆ ಕರಗದ ಗಂಡಸು ಅನ್ನುವ ಗಂಡಸು ಯಾವನಿದ್ದಾನು? ಈ ರೆಡ್ಡೆಪ್ಪ ಮೀಸೆ ಹುರಿಮಾಡಿಕೊಳ್ಳುತ್ತ ಹೊಸಬಟ್ಟೆ ತೊಟ್ಟು ಹೋದ. ಆಹಾ! ಎನ್ನುವ ಚೆಲುವೆ ಕಾಲು ಎತ್ತುತ್ತಾಳೆಂದರೆ ಸುಮ್ಮನೆಯೇ? ಈ ಮೊದಲು ರುಚಿ ಬೇರೆ ನೋಡಿದ್ದ!



ಆದರೆ ಆ ರಾತ್ರಿ ತಿಂಡ್ಲೂರು ನರಸಿಮ್ಲು ರೆಡ್ಡಿ ಮಚ್ಚಿನ ಹೊಡೆತದ ರುಚಿ ಕಂಡಿದ್ದ. ಕುಂಟೆಗಡ್ಡೆಯ ನೀರು ಲಕ್ಷ್ಮಮ್ಮನ ಮೊದಲ ಖೂನಿಯ ರಕ್ತದ ಕಲೆಗಳನ್ನು ತೊಳೆಯಿತು! ನರಸಿಮ್ಲು ಫನಾ ಆಗ ಸುದ್ದಿ ಊರ ಜನಕ್ಕೆಲ್ಲ ದಂಗು ಬಡಿಸಿತು. ಯಾರು ಮಾಡಿದರು, ಹೇಗೆ, ಯಾವಾಗ ಎಂದು ಕಥೆಗಳನ್ನು ಕಟ್ಟಿ ಹಬ್ಬಿಸಿದರು. ಆದರೆ ಸಾಕ್ಷಿಗಳೇ ಇರದೆ ಬರಿ ಬಾಯಿಮಾತಿನಲ್ಲಿರುವ ಕಥೆ ನಂಬುವುದು ಹೇಗೆಂದು ಪ್ರಭುತ್ವದವರೂ ಸುಮ್ಮನಾದರು! ಇಷ್ಟಕ್ಕೂ ಆತನೊಬ್ಬ ಪೀಡೆಯಾಗಿದ್ದ. ಜನರ ಹೆದರಿಕೆಯಿಂದಾಗಿ ಬೆಳೆದು ಬೃಹತ್ತಾದ ಹುಳ! ಉದುರಿ ಬಿದ್ದದ್ದೇ ಈಕೆಯ ಸರಾಯಿ ದಂಧೆ ಚಿಗುರಿತ್ತು!

ಇದು ಲಕ್ಷ್ಮಮ್ಮಳ ಬದುಕಿನ ಏರುಗಾಲ. ದುಡ್ಡು, ಬೆಂಬಲದ ಜನ, ಪ್ರೀತಿಸಿದ ಗಂಡ. ಆದರೆ ಗಿಚ್ಚಲು ಮೊದಲಿನವನಾಗಿ ಉಳಿದಿರಲಿಲ್ಲ. ಅವಳ ಪ್ರೀತಿ, ಏಕೈಕ ನಿಷ್ಠೆ ಅವನಿಗೇ ಮೀಸಲಾಗಿದ್ದರೂ ಅವನು ಆಕೆಯ ಕುಖ್ಯಾತಿಯಿಂದ ಅವಮಾನದಲ್ಲಿ ಕುದಿಯುತ್ತಿದ್ದ. ನಿನ್ನಮ್ಮನಾಡ. ನೀನು ಸೂಳೀ, ರಂಡೀ ಎಂದು ಕುಡಿದು ಒದರಾಡುತ್ತಿದ್ದ.

ಅದ್ಯಲ್ಲಾ ಸುಳ್ಳೋ ಗಿಚ್ಚಾ. ನಾ ಮಾಡಿದ್ದೆಲ್ಲಾ ನಿನ್ನ ಸುಖಕ್ಕೆ. ನನ್ನ ಸುಖಕ್ಕೆ. ನಮ್ಮ ಸಂಸಾರಕ್ಕ ಎಂದು ರಮಿಸಿ, ತೆಕ್ಕೆಗೆ ತೆಗೆದುಕೊಂಡರೆ ಆತ ಚಿಕ್ಕ ಮಕ್ಕಳಂತೆ

ಆಳಲು ಪ್ರಾರಂಭಿಸಿಬಿಡುತ್ತಿದ್ದ. ಇಲ್ಲ. ನೀನು ರಂಡೀ. ಎಲ್ಲಾರ ಜತಿಗೂ ಮಕ್ಕಂತೀದಿ. ಅದಕ್ಕೆ ನಮಗ ಮಕ್ಕಳ ಆಗವಲ್ಲವು ಎಂದು ಬಿಕ್ಕಿಬಿಕ್ಕಿ ಅಳುತ್ತಿದ್ದ. ಲಕ್ಷ್ಮಮ್ಮ ಆಗ ಸತ್ಯಕ್ಕೂ ಎದೆಯೊಡೆದು ತನ್ನ ಪಾಪದ ಬದುಕನ್ನು ಹಳಿಯುತ್ತ ಗಂಡನನ್ನು ಎದೆ ಮೇಲೆ ಹಾಕಿಕೊಂಡು ಆಗತಾವ, ಆಗತಾವ ಅನ್ನುತ್ತಿದ್ದಳು.

ಗಿಚ್ಚ, ಲಕ್ಷ್ಮಮ್ಮ ಈ ಊರಿಗೆ ಬಂದು ಈಗಾಗಲೇ ವರ್ಷ ವರ್ಷಗಳೇ ಕಳೆದಿದ್ದವು. ಅವರಿಗೆ ಮುಂದೆಯೂ ಮಕ್ಕಳಾಗಲಿಲ್ಲ. ಐಯ್! ಜಾಲಿಬೆಂಚಿ ಗಂಡ ಬಂದ. ಕುಂತ. ನಿಂತ. ಬೀಡಿ ಸೇದ್ದ ಎಂದು ಜನರಾಡುವುದು ಅವನಿಗೆ ಅಸಹ್ಯವೆನ್ನಿಸುತ್ತಿತ್ತು. ಆದರೆ ಮಾಡುವುದೇನು? ಅವಳ ಪ್ರಭಾವವೇ ಹಾಗಿತ್ತು. ಅಲ್ಲದೆ ಆತನೊಬ್ಬ ಸಾದಾ ಮನುಷ್ಯನಾಗಿದ್ದ. ಅವಳಿಗೆ ಈತನ ಮೇಲಿರುವಷ್ಟೇ ಪ್ರೀತಿ ಇವನಿಗೂ ಆಕೆ ಮೇಲೆ. ಹೀಗೆಯೇ ಸಾಗಿತ್ತು ಅವರ ಬದುಕು. ಇವಳನ್ನು ಬಿಟ್ಟು ಅವ ಎಲ್ಲಿ ಹೋಗಿ ಬದುಕಿಯಾನು?

ಕುಂಟೆಗಡ್ಡೆಯಲ್ಲಿ, ಸರ್ಕಲ್ಲಿನಲ್ಲಿ ಲಕ್ಷ್ಮಮ್ಮನ ವರ್ಚಸ್ಸು ಎದ್ದು ಕಾಣುತ್ತಿತ್ತು. ದಿನದಿನಕ್ಕೂ ಹೆಚ್ಚುವ ಪ್ರಭಾವ. ಗಡ್ಡೆಯ ಮನೆ ಮನೆಯವರು ತಮ್ಮ ಸಮಸ್ಯೆಗಳನ್ನು ಈಕೆಯ ಪಂಚಾಯ್ತಿಗೆ ತರುತ್ತಿದ್ದರು. ಇವಳ ಫೈಸಲಾ ಆದರೆ ಮುಂದೆ ತಕರಾರು ಏಳುವಂತಿರಲಿಲ್ಲ. ಇವಳ ವ್ಯಾಪಾರ ಚಹಾದಂಗಡಿಯಿಂದ ಕಳ್ಳಬಟ್ಟಿ, ಕಳ್ಳಬಟ್ಟಿಯಿಂದ ದೋ ನಂಬರ್ ಮಟ್ಕಾವರೆಗೆ ಹಬ್ಬಿತು! ಪ್ರಭುತ್ವದ ಜನ, ಅಧಿಕಾರದಲ್ಲಿರುವವರು, ನಾಯಕರು ಗುರ್ತು-ಪರಿಚಯದವರಾದರು. ಇಡೀ ಕುಂಟೆಗಡ್ಡೆಯ ರಾಜಕೀಯವನ್ನು ಈಕೆ ನಿಯಂತ್ರಿಸುತ್ತಿದ್ದುದರಿಂದ ಶಾಸಕರಿಂದ ಮೊದಲು ಮಾಡಿ ಕೌನ್ಸಲರ್‌ಗಳವರೆಗೆ ಎಲೆಕ್ಷನ್ ಬಂದರೆ ದುಡ್ಡಿನ ಗಂಟುಹಿಡಿದು ದೊರಸಾನಿ, ದೊರಸಾನಿ ಎಂದು ಕೈ ಮುಗಿಯುತ್ತಿದ್ದರು.

ಹಿಂದೆ ಆದಾಗ ಮೀಸೆ ಚಿಗುರೊಡೆದ ಪಡ್ಡೆ ಹುಡುಗರ ಮುಠಾ! ಇವಳ ಕಣ್ಸನ್ನೆಗೇ ಕಾಯುತ್ತ, ಅವಳ ರಕ್ಷಣೆಗೆಂದು ಹಿಂದೆ ಮುಂದೆ ಓಡಾಡುವರು. ಈಕೆ ಎಲಡಿಕೆ, ತಮಾಖು ನಮಲುತ್ತ ಸಿಗರೇಟು ಸೇದುತ್ತ, ತನ್ನ ಬಟ್ಟಿಯಲ್ಲೇ ಕಾಯಿಸಿದ ಸರಾಯಿ ಗುಟುಕರಿಸುತ್ತ, ತನ್ನದೇ ಹೋಟಲಿನ ಚಹಾ ಸೀಪುತ್ತ ಯೋಜನೆಗಳನ್ನು ರೂಪಿಸುವವಳು.

ರೆಯ್, ವಂಡ್ರಿ, ರೆಯಾ, ಗಾಡಿದಿ, ರೆಯ್, ಹುಂಡೆ ಎಂದು ಹುಡುಗರ ಹೆಸರು ಕರೆದರೆ ಏನೋ ಮಸಲತ್ತು ಇದೆಯೆಂದೇ! ಏಮಿ ದೊರಸಾನಿ ಅನ್ನಬೇಕು ಆ ಹುಡುಗರು. ವಾಡು, ಚಾಲಾ ಗಾಂಡ್ಲಕ್ಕರಾಲು ದೆಂಗುತ್ತುನ್ನಾಡು (ಅವನದು ಅತಿಯಾಯಿತು) ಈಕೆ ಹೇಳುತ್ತಾಳೆ. ಏಮಿ ಚೆಯ್ಯಾಲಿ... ಅವರಲ್ಲೊಬ್ಬ ಕೇಳುತ್ತಾನೆ. ವಾಡಿ ಕಾಳ್ಳು ನರಕಂಡ್ರಾ, ನಾ ಬಟ್ಟಾ ಗಾಡು (ಅವನ ಕಾಲು ಕಡೀರೊ, ಹಲ್ಕಟ್ ನನ್...) ಅಂದರೆ ಅಕ್ಷರಶಃ ಅಣತಿ ಪಾಲನೆ. ಯಾವ ಅಂಗ ಹೇಳಿದರೆ ಆ ಅಂಗ! ಎಪ್ಪುಡು (ಯಾವಾಗ?). ಬೇಸ್ತವಾರಂ ಸಾಯಂತ್ರಂ... ಅಂದು ಆಕೆ ಫರ್ಮಾನು ಹೊರಡಿಸಿದರೆ ಹುಡುಗರು ಎದೆಬಾಕು, ಮಚ್ಚು, ಕತ್ತಿಗಳ ಸಾಮುಹಚ್ಚಿ ತಯಾರಾಗಿ ಇಟ್ಟಿರುತ್ತಿದ್ದರು. ಶಿಕ್ಷೆಗೆ ಒಳಗಾಗುವವನಿಗೆ ಯಾಕೀ ಶಿಕ್ಷೆ ಎಂಬುದು ಗೊತ್ತಾಗಬೇಕು ಅಂಬುವುದು ದೊರಸಾನಿಯ ನಿಯಮ. ನಾಲ್ಕೊ ಐದೊ ಮೂಠಾದ ಹುಡುಗರು ನಿಶ್ಚಿತ ವ್ಯಕ್ತಿ ಬಳಿ, ನಿಶ್ಚಿತ ವೇಳೆಗೆ ಹೋಗುವುದು ನಮ್ಮ ದೊರಸಾನಿಗೆ ಇಂಥಾ ಅನ್ಯಾಯ ನಿನ್ನಿಂದ ಆಗಿದೆ ಎಂದು ಹೇಳಿ ತಮ್ಮ ಕೆಲಸ ಪೂರೈಸುವುದು. ಹೀಗೆ ಕನಿಷ್ಠ ಹತ್ತು ಖೂನಿ ಮಾಡಿಸಿದ ಕುಖ್ಯಾತಿ ಜಾಲಿಬೆಂಚಿಯದು!

ಆದರೆ ಒಂದು ಸಲ ಮಾತ್ರ ಆಕೆ ಭಯಾನಕ ಕುಕೃತ್ಯಗಳನ್ನು ಒಂದೇ ದಿನ ಮಾಡಬೇಕಾಯಿತು. ಹೊಸದಾಗಿ ಬಂದ ಸರ್ಕಲ್ ಇನ್ಸ್‌ಪೆಕ್ಟರ್ ಒಬ್ಬ ಇವಳ ಮಟ್ಕ ದಂಧೆಗೆ, ಕಳ್ಳಬಟ್ಟಿಗೆ ದುಸ್ವಪ್ನವಾದ. ಹಗಲು-ರಾತ್ರಿ ಕೈ ತೊಳೆದುಕೊಂಡು ಬೆನ್ನು ಹತ್ತಿ ಹಣ್ಣು ಗಾಯಿ ನೀರುಗಾಯಿ ಮಾಡತೊಡಗಿದ. ದೊರಸಾನಿ ಲಕ್ಷ್ಮಮ್ಮ ಇಸುಗು ಪಟ್ಟುಕೊಂಡಳು. ಚೀಲದಲ್ಲಿ ಹಣ್ಣುಕಾಯಿ, ರೊಕ್ಕ, ಹೆಂಡತಿಗೆ ಸೀರೆ ಅಂತೆಲ್ಲ ಕಳಸಿ ಕೊಟ್ಟು ನೋಡಿದಳು. ಆಸಾಮಿ ಕಮಕ್ ಅನ್ನಲಿಲ್ಲ. ಕೊನೆಗೆ ತಾನೇ ಎಣ್ಣೆ ನೀರು ಹಾಕಿಕೊಂಡು, ಕೊನೆಯ ಅಸ್ತ್ರವೆಂದು ಒಂದೊಳ್ಳೆ ಸೀರೆ ಉಟ್ಟುಕೊಂಡು, ಜಟಕಾದಲ್ಲಿ ಹೋಗಿ ಸ್ಟೇಶನ್ನಿನ ಬಳಿ ಇಳಿದಳು. ಒಳಗೆ ಹೋಗಿ ನಮಸ್ಕಾರ ದೊರೆ ಅಂದಳು. ಅವನೋ ಮಹಾ ಗರ್ವಿಷ್ಠ ಅಧಿಕಾರಿ. ಪ್ರಾಮಾಣಿಕತೆಯಿಂದ ಬಂದ ಆತ್ಮವಿಶ್ವಾಸ, ಗರ್ವ. ಯಾರೇ ರಂಡೆ ನೀ ಅಂದ, ಗೊತ್ತಿದ್ದರೂ. ಅಯಿ, ನಾನು ದೊರೆ, ಚಿನ್ನ ಲಕ್ಷ್ಮಮ್ಮ. ಕುಂಟೆಗಡ್ಡೆ ದೊರಸಾನಿ ಅಂದಳು ಈಕೆ. ಓಹೊ! ದೊರಸಾನಿನಾ ನೀನು. ಏನು ಈ ದೊರೆ ಹತ್ರ ಮಕ್ಕಂಮಣು ಅಂತೇಳಿ ಬಂದ್ಯಾ? ಮದ್ಲು ಇಲ್ಲಿಂದ ನಡೀ.



ಇಲ್ಲಂದ್ರಗಿನ ಬಾಯಾಗ, ಮುಗಳ್ಯಾಗ ಬೂಟು ಇಟ್ಟು ಹೊಡಿತೀನಿ ನೋಡು ಎಂದು ಕುದಿಯಲು ಆರಂಭಿಸಿದ. ಅಯಿ, ಹಂಗಲ್ಲೇಳು ದೊರೆ. ಸಿಟ್ಟಾಗ ಬ್ಯಾಡ... ಎಂದು ಹೇಳುವಷ್ಟರಲ್ಲಿ ಕುರ್ಚಿಯಿಂದ ಎದ್ದು ಕಪಾಳಕ್ಕೆ ಬಿಗಿದೇಬಿಟ್ಟ. ಸ್ಟೇಶನ್ನಿನಲ್ಲಿದ್ದ ಎರಡು-ಮೂರು ಪೇದೆಗಳು ಪರಿಸ್ಥಿತಿ ಪ್ರಮಾದಕ್ಕೆಳೆಯುತ್ತಿದೆ ಎಂದು ದೊರೆಸಾನಿಯನ್ನು ಹಿಡಿದು ಹೊರಗೆ ಬಿಟ್ಟರು. ದೊರೆಸಾನಿಯ ಸರ್ವೀಸಿನಲ್ಲಿ ಯಾರಾದರೂ ಹೊಡೆಯಲು ಎಂದು ಮೈಮುಟ್ಟಿದ್ದು ಇದೇ ಮೊದಲು. ದೊರೆ, ಸುಖಾ ಕೊಡಮ್ಮು ಅಂತ ಬಂದೆ. ಬ್ಯಾಡಂದ್ರ ಬಿಡಬೇಕಾಗಿತ್ತು. ಆದರೆ ಅವಮಾನ ಮಾಡೀದಿ. ನಿನ್ನ ಹೇಣತಿಗೆ ನಿನ್ನ ಸುಖಾ ಇನ್ನಮ್ಯಾಗ ಯಾವತ್ತೂ ಸಿಗದಂಗ ಆಗತೈತಿ ಅಂತ ಕೂಗಿ ಮತ್ತೆ ಜಟಕಾ ಹತ್ತಿದಳು.

ದೊರೆಸಾನಿ ಗರಮ್ ಆಗಿರುವುದು ಮುಖದಿಂದಲೇ ತಿಳಿಯುತ್ತಿತ್ತು. ಯಾರೂ ಮಾತಾಡಿಸಲು ಹೋಗಲಿಲ್ಲ. ಆಕೆ ಒಬ್ಬಳೇ ಬಾಗಿಲು ಹಾಕಿ ಮನೆಯಲ್ಲಿ ಕುಡಿಯುತ್ತ ಕೂತಿದ್ದಳು. ಗ್ರಹಚಾರವೆಂಬಂತೆ ಅಲ್ಲಿಗೆ ಗಿಚ್ಚಲು ಬಂದು. ಹೆಂಡತಿಯ ಸ್ನಾನ ಮಾಡಿದ ಮೈ, ಹೊಸ ಸೀರೆಯಿಂದ, ಏನೋ ನಡೆದಿದೆ ಎಂಬ ಅನುಮಾನದಿಂದ ಯಾವನತಾಗ ಮಕ್ಕಮಕ ಹೋಗಿದ್ಯ ಲಂಜ ಎಂದು ಹಿಂದು-ಮುಂದೆ ನೋಡದೆ ರಪರಪ ಬಾರಿಸತೊಡಗಿದ. ಲಕ್ಷ್ಮಮ್ಮ ಈ ಊರಿನ ದುರ್ಗಮ್ಮನ ಅಪರಾವತಾರದಂಗಾಗಿ ಬಿಟ್ಟಳು. ಅವನು ಹೊಡೆಯುವವರೆಗೂ ಹೊಡೆಯಲಿ ಎಂದು ಮೈಕೊಟ್ಟಳು. ಆತ ಚೀರಾಡಿ, ಅತ್ತು, ಒದ್ದು, ಸುಸ್ತಾಗಿ ಬಾಗಿಲು ತೆಗೆದುಕೊಂಡು ಹೋದ. ಕೆದರಿದ ಕೂದಲು, ಅಸ್ತವ್ಯಸ್ತ ಸೀರೆಯನ್ನು ಸರಿಮಾಡಿಕೊಂಡ ದೊರಸಾನಿ ಸುಧಾರಿಸಿಕೊಂಡು ಮುಠಾದ ಹುಡುಗರಿಗೆ ಫರ್ಮಾನು ಹೊರಡಿಸಿದಳು!

ಇನ್ಸ್‌ಪೆಕ್ಟರ್‌ನ ರುಂಡ ಹಾರಿಸಿ, ಗಿಚ್ಚಲುವಿನ ಎರಡೂ ಕೈ ಕತ್ತರಿಸಿ ಹಗರಿ ನದಿಗೆ ಹಾಕಿ! ಮೊದಲ ಫರ್ಮಾನಿಗೆ ತಲೆಹಾಕಿದ ಹುಡುಗರು ಎರಡನೆಯದಕ್ಕೆ ಸಣ್ಣಗೆ ಬೆವೆತರು. ಏಮ್ರಾ, ಚೆಪ್ಪಿನಟ್ಲು ಚೇಯಂಡಿ... ಅಂದವಳೆ ನಡೆದೇ ಬಿಟ್ಟಳು ದೊರಸಾನಿ! ಕಲ್ಲು, ಕಲ್ಲಾಗಿತ್ತು ಮನಸ್ಸು!

ಮುಂದೆ ಆರು ತಿಂಗಳವರೆಗೆ ಗಿಚ್ಚಲು ಘೋಷಾ ಆಸ್ಪತ್ರೆಯ ಮಂಚಕ್ಕಂಟಿದ್ದ. ಅವ ಸತ್ತಿದ್ದರೆ ಒಳ್ಳೆಯದಿತ್ತು ಎನ್ನುವಷ್ಟು ಹೀನಾಯವಾಗಿತ್ತು ಅವನ ಸ್ಥಿತಿ! ಒಂದು, ಎರಡು ಎಂದು ದೇಹದ ಎಲ್ಲ ಅಗತ್ಯಗಳನ್ನು ಹಾಸಿಗೆಯಲ್ಲೇ ಪೂರೈಸುತ್ತಿದ್ದ. ಒಂದು ಹನಿ ನೀರನ್ನೂ ಬೇರೆಯವರೇ ಬಾಯಿಗೆ ಬಿಡಬೇಕಾಗುತ್ತಿತ್ತು. ಲಕ್ಷ್ಮಮ್ಮ ಅವನಿಗೆ ತೋರಿಸಬೇಕೆಂದಿದ್ದೂ ಇದೇ! ನನ್ನ ಪ್ರೀತಿ-ವಿಶ್ವಾಸವಿಲ್ಲದಿದ್ದರೆ ನೀನು ಪರಾಧೀನ, ಕ್ರಿಮಿ ಎಂದು ಅವನಿಗೆ ಅರಿವಿಗೆ ಬರುವುದು ಅವಳಿಗೆ ಬೇಕಾಗಿತ್ತು! ಅದಕ್ಕಾಗಿ ಭಾರಿ ಬೆಲೆಯನ್ನು ತೆರಲು ಅವಳು

ಸಿದ್ಧವಾಗಿದ್ದಳು. ಪ್ರತಿದಿನ ಆಸ್ಪತ್ರೆಗೆ ಬುತ್ತಿಯನ್ನು ಅವಳೇ ಒಯ್ಯುತ್ತಿದ್ದಳು. ಅವಳೇ ಊಟ ಮಾಡಿಸಿ, ನೀರು ಕುಡಿಸುತ್ತಿದ್ದಳು. ಬಾಯಿಗೆ ಬೀಡಿ ಇಟ್ಟು ಬೆಂಕಿ ಹಚ್ಚುವಳು, ಔಷಧ ಸುರಿಯುವಳು, ಮಲಾಮು ಹಚ್ಚುವಳು...

ಬದುಕೆಲ್ಲ ತನ್ನ ಜತಿಗೆ ಕಳೀಬೇಕು. ಆದರ ಮತ್ತೆಂದೂ ಮುಟ್ಟಬಾರದು. ಎಲ್ಲದ್ದಕ್ಕೂ ನನ್ನನ್ನೇ ಕೇಳಬೇಕು, ಎನ್ನುವುದು ಲಕ್ಷ್ಮಮ್ಮನ ಗುರಿಯಾಗಿತ್ತು. ಆಕೆಗೆ ಜನ ತನಗೆ ಗೌರವಿಸಿ ದೊರಸಾನಿ ಅನ್ನುತ್ತಾರೆಂದು ಗೊತ್ತಿತ್ತು. ಜಾಲಿಬೆಂಚಿ ಲಂಜ ಅನ್ನುತ್ತಾರೆಂದೂ ತಿಳಿದಿತ್ತು. ಏನೆಲ್ಲ ಮಾಡಿ ಸಂಪಾದಿಸಿದ್ದೆಲ್ಲ ಪ್ರೀತಿಗಾಗಿಯೇ ಆಗಿತ್ತು. ಒಂದು ಗಳಾಸು ಸರಾಬು, ಒಂದು ತುಣುಕು ಕೋಳಿ ಊಟಕ್ಕೆ ಆಕೆ ಇಷ್ಟೆಲ್ಲ ಹೋರಾಡಿದ್ದಳು! ಸತ್ತವೆಂದರೆ ಇಷ್ಟೇ ಇದ್ದರೂ ಬಂಗಾರ-ಬೆಳ್ಳಿ ಎಂದು ಆಕೆ ಆಸೆ ಪಟ್ಟಿರಲಿಲ್ಲ. ಕೋಟೆಯಂಥ ಮನೆಯನ್ನು ಕಟ್ಟಿರಲಿಲ್ಲ. ಬಂದದ್ದೆಲ್ಲ ಅಲವತ್ತುಕೊಂಡು ಕೂಡಿಡದೆ ಬಗಲಿಗಿದ್ದವರಿಗೆ ಹಂಚಿಬಿಡುತ್ತಿದ್ದಳು. ಅವಳ ಮನೆ ಅಲ್ಲಿನ ಗುಡಿಸಲುಗಳಿಂದ ತುಸು ಬೇರೆಯಾಗಿತ್ತು ಅನ್ನೋದು ಬಿಟ್ಟರೆ ಐಸಿರಿ ಏನೂ ಇರಲಿಲ್ಲ. ಹೊರಸು, ಕಬ್ಬಿಣದ ಅಲಮಾರ, ಮರ್ಫಿ ರೆಡಿಯೊ, ಹಲಗೆಯ ಬಾಕು, ದೊಡ್ಡ ಕನ್ನಡಿ ಒಂದಿಷ್ಟು ಸೀರೆ ಬಿಟ್ಟರೆ ಇನ್ನ್ಯಾವ ಆಸ್ತಿಯೂ ಇಲ್ಲ. ಆದರೆ ದಿನ ಬೆಳಗಾದರೆ ಕೈ ತುಂಬ ತುಂಬುತ್ತಿದ್ದ ನೋಟುಗಳು, ಹಾಗೆ ಹಾಗೆ ಹಂಚಿಹೋಗುತ್ತಿದ್ದವು! ಅಲ್ಲಿ ಅವಳು ಕಟ್ಟಿದ್ದೆಂದರೆ ಜನರ ವಿಶ್ವಾಸದ ಅಭೇದ್ಯ ಕೋಟೆ, ಅವಳ ಐಸಿರಿ! ಏನೇ ಇದ್ದರೂ ಅಂಗಡಿಯಲ್ಲಿ ಚಹಾ ಕಾಸುವುದನ್ನು ಆಕೆ ಎಂದೂ ಬಿಟ್ಟಿರಲಿಲ್ಲ.

ಮುಂದೆ ಎರಡೂ ಕೈಗಳನ್ನು ಭುಜದವರೆಗೆ ಕಳೆದುಕೊಂಡಿದ್ದ ಗಿಚ್ಚಲು ಅಕ್ಷರಶಃ ಅವಳ ಆಸೆಯಂತೆಯೇ ಬದುಕಿದ. ಊಟ ಮಾಡಲು, ಮುಖ ತೊಳೆಯಲು, ಬೀಡಿ ಸೇದಲು, ಬಟ್ಟೆ ಹಾಕಿಕೊಳ್ಳಲು, ಸ್ನಾನ ಮಾಡಲು, ತಲೆ ಬಾಚಲು ಎಲ್ಲಕ್ಕೂ ಲಕ್ಷ್ಮಮ್ಮನೇ ಬೇಕು. ಅವಳು ಮಗುವನ್ನು ಸಲಹುವಂತೆ ಎಲ್ಲವನ್ನೂ ಶ್ರದ್ಧೆಯಿಂದಲೇ ಮಾಡುತ್ತಿದ್ದಳು. ಇಂಥ ಅಧೀನ, ಹೇಳಿದ್ದನ್ನು ಕೇಳುವ ಮಗುವಿನಂಥ ಪ್ರೀತಿ ಆತನಿಂದ ಬಯಸಿದ್ದಳು ಆಕೆ. ಆದರೆ ಆಕೆಯ ಆಡಾಟ, ಉರವಣಿಗೆ ಗಿಚ್ಚಲುಗೆ ಸಹಿಸುವುದಾಗದೆ ಬಲವಂತವಾಗಿ ಅವಳು ಬಯಸುವ ಸಹಜಸ್ಥಿತಿಗೆ ಬಂದು ತಲುಪಿದ್ದ.

ಒಂದೆಂದರೆ ಗಿಚ್ಚುಲುಗೆ ಹೀಗಾದ ಮೇಲೆ ಆಕೆ ಬದುಕಿನ ರಸ ಕಳೆದುಕೊಂಡು ಬಿಟ್ಟಳು. ನನ್ಯಾಕೆ ಅನುಮಾನಿಸಿದ್ಯಲೆ ಬಾಡಖೊ. ನಿಂಗೇನು ಕಡಿಮೆ ಮಾಡಿದ್ದೆ. ನಿಂಗ ಬೇಕಾದಾಗ ಮಕ್ಕಂತಿದ್ದೆ. ಬೇಕಾದ್ದ ಮಾಡಿ ಉಣಸತಿದ್ದೆ. ಬೇಕಂದ ಅಂಗಿ-ಚೊಣ್ಣ ತೊಡಸತಿದ್ದೆ. ನಾನು ಹಂಗ ಬದಕದು ಬ್ಯಾಡಂದ್ರ, ನೀಯಾಕ ಗಣಮಗನಂಗ ಬಾಳುವಿ ಮಾಡಲಿಲ್ಲ. ದುಡೀಲಿಲ್ಲ ಎಂದು ಅವನ ಎದೆ ಹೊಡೆಹೊಡೆದು ಕೇಳುತ್ತಿದ್ದಳು.

ಇಪ್ಪತ್ತು-ಇಪ್ಪತ್ತೈದು ವರ್ಷ ಹೀಗೆ ಬದುಕಿದ್ದು ಸಾಕಾಗಿ ಅನಾಥ ಹೆಣ್ಣುಕೂಸು ತಂದು ಸಾಕಿದಳು. ತಾಯಮ್ಮ ಎಂದು ಹೆಸರಿಟ್ಟು ತಾನು ಕಾಣದ ಸಿಂಗಾರ ಅದಕ್ಕೆ ಮಾಡಿ ಸಂತೋಷಪಟ್ಟಳು. ಆ ಕೂಸು ಬೆಳೆದಂತೆ ಸಂಭ್ರಮ ಪಟ್ಟಳು. ಗಿಚ್ಚಲು ಕೂಡ ಇಂಥ ಬದುಕಿಗೇ ಹೊಂದಿಕೊಂಡುಬಿಟ್ಟಿದ್ದ. ಚಹಾದಂಗಡಿಯ ಫಳಿಯ ಮೇಲೆ ಕೂತು ಕಾಲ ಕಳೆಯುವ ಇಲ್ಲಾ ಮನೆಯಲ್ಲಿನ ತಾಯವ್ವನೊಂದಿಗೆ ನಾಕು ಮಾತೋ-ಆಟವೊ ಆಡಿ ಕಾಲ ಕಳೆಯುವ.

ಹುಡುಗಿಗೆ ಹದಿಮೂರು-ಹದಿನಾಲ್ಕೂ ಆಗಿರಲಿಕ್ಕಿಲ್ಲ. ಒಂದು ಅಚಾತುರ್ಯ ನಡೆಯಿತು. ಅದಾಗ ಕೊಳಗೇರಿಯ ಜನರನ್ನು ಶೋಷಣೆಯಿಂದ ಮುಕ್ತಗೊಳಿಸಿ ಕಮ್ಯೂನಿಷ್ಟ್ ರಾಜ್ಯ ಸ್ಥಾಪಿಸುವ ಪುಕಾರು ಎದ್ದಿತ್ತು ನಮ್ಮೂರಲ್ಲಿ.

ಎಲ್ಲೆಲ್ಲಿ ನೋಡಿದರೂ ಜುಬ್ಬಾ ಹಾಕಿ, ಬಗಲಿಗೆ ಚೀಲ ಇಳಿಬಿಟ್ಟು, ಭಾಷಣ ಬಿಗಿಯುತ್ತ ಕುಂಟೆಗಡ್ಡೆಯಲ್ಲಿ ಜನ ಓಡಾಡೋರು. ಅಕ್ಷರ ಕಲೀರಿ-ದಂಧೆ ಬಿಡಿರಿ. ಹೊಟ್ಟೆತುಂಬ ಅನ್ನಕೆ-ಬಂದೂಕು ಕೈಯಿಗೆ ಹೀಗೆ ಏನೇನೋ ಕೂಗೋರು. ಲಕ್ಷ್ಮಮ್ಮ ಬಡವರಿಗೆ ಒಳ್ಳೆಯದು ಮಾಡುತ್ತಾರೆಂದು ಅಂಥ ಹುಡುಗರಿಗೆ ಚಹಾಪಾಣಿ ಕೊಡುವಳು. ರೊಕ್ಕಾ ಬೇಕೇನ್ರೋ ತಮ್ಮಂದ್ರ ಎಂದು ಕೇಳುವಳು.

ಇಂಥ ಕಾಮ್ರೇಡುಗಳಲ್ಲಿ ಸುವೇಗ ಇಟಗೊಂಡಿದ್ದ ಬ್ರಾಂಬರ ಹುಡುಗ ಒಬ್ಬಾತ, ದೊರಸಾನಿಯ ಮಗಳು ಅಂತ ತಿಳಿದೇ ತಾಯಮ್ಮನ ಲಂಗದೊಳಗೆ ಕೈ ಹಾಕಿದ. ಹುಡುಗಿ ಲಬೋದಿಬೋ ಎಂದು ಬಡಿದುಕೊಂಡಿದ್ದೆ ಖುದ್ದು ಲಕ್ಷ್ಮಮ್ಮನೇ ಚಹಾದಂಗಡಿ ಬಿಟ್ಟು ಓಡಿ ಬಂದಿದ್ದಳು. ವಿಷಯ ತಿಳಿದು ಲೇ, ಕಾಮರೆಡ್ಡಿ, ನಿನ್ನ ಒಟಕ್ಯಾಯಿ ಒಡೆದು ಬಾಯಾಗ ತುರುಕತೀನಿ, ಹಾಟಗಳ್ಳ, ಎಂದು ಆತನ ಪೈಜಮ ಬಿಚ್ಚಿ ಚಡ್ಡಿಯಲ್ಲಿಯೇ ಓಡಿಸಿದ್ದಳು. ಕಾಮರೆಡ್ಡಿ ಸುವೇಗ ಒಂದು ಕೈಯಲ್ಲಿ ತಳ್ಳಿ ತಳ್ಳಿ ದೂರ ಹೋಗಿ ಸ್ಟಾರ್ಟ್ ಮಾಡಿ ಪೇರಿ ಕಿತ್ತಿದ್ದ.

ತಾಯಮ್ಮ ಭಾರಿ ಗೊಂದಲ-ಗಾಬರಿಗೆ ಬಿದ್ದಿದ್ದಳು. ಗಿಚ್ಚಲು ತಲೆಕೆಟ್ಟು ಕೂತ. ಅಂದು ರಾತ್ರಿ ಕಂಡಾಬಟ್ಟೆ ಕುಡಿದು ಬಂದ. ತಾಯಮ್ಮನನ್ನು ಕೂಸು ಕೂಸು ಎಂದು ಎಬ್ಬಿಸಿದ. ಆಕೆ ದಡಬಡಿಸಿ ನಿದ್ದೆಗಣ್ಣಲ್ಲಿ ಎದ್ದು ನಿಂತಳು. ಈ ಮಿಂಡ್ರಗುಳ್ಳಿಯಿಂದನೆ ಹಿಂಗಾದ್ದು. ಆಕಿ ತಲಿಗಿ ಕಲ್ಲಹಾಕು ಹಾಕು ಎಂದು ಬಡಬಡಿಸಿ ಒದರತೊಡಗಿದ. ನಿದ್ದೆಯ ಮಬ್ಬಿನಲ್ಲಿದ್ದ ತಾಯಮ್ಮ ಹಿಂದೆ-ಮುಂದೆ ನೋಡದೆ ಮಲಗಿದ್ದ ದೊರಸಾನಿಯ ತಲೆ ಜಜ್ಜಿ, ಕುಡಗೋಲಿನಿಂದ ಕೈ ಕಡಿದಿದ್ದಳು!

ಜಾಲಿಬೆಂಚಿಯ ಚಿನ್ನ ಲಕ್ಷ್ಮಮ್ಮ ದೊರಸಾನಿ ರಕ್ತದ ಮಡುವಿನಲ್ಲಿ ಬಿದ್ದಿದ್ದಳು. ಪೊಲೀಸ್ ಕೇಸಾಯಿತು. ಗಿಚ್ಚಲು ಒಂದರೆಡು ವರ್ಷ ವಿಚಾರಣೆಗಂತ ಜೈಲಿನಲ್ಲೂ ಇದ್ದನಂತೆ. ಕೊನೆಗೆ ಎರಡೂ ಕೈಯಿಲ್ಲದವನು ಕಲ್ಲು ಎತ್ತಿ ಹಾಕಿ ಕೊಲ್ಲುವುದು ಅಸಾಧ್ಯ ಎಂದು ತೀರ್ಪು ಬಂದು ಬಾ ಇಜ್ಜತ್ ರಿಹಾ ಆದನಂತೆ. ಈಗವ ಭಿಕ್ಷೆ ಬೇಡಿ ಬದುಕುತ್ತಿದ್ದಾನೆ.


ಇದು ನನ್ನ ಎಳೆವಯಸ್ಸಿನಲ್ಲಿ ಬಹುವಾಗಿ ಕಾಡಿದ್ದ ಜಾಲಿಬೆಂಚಿಯ ಕಥೆ. ಎರಡು ದಿನ ಹೆಚ್ಚಿಗೆ ಉಳಿದು ಅಲ್ಲಿಷ್ಟು-ಇಲ್ಲಿಷ್ಟು ನಿಂತು, ಅವರಿವರಿಗೆ ಚಹಾ-ಒಗ್ಗರಣೆ ಕೊಡಿಸಿ, ಎರಡು ಮಾತಾಡಿ ಸಂಗ್ರಹಿಸಿದ್ದು. ಹಾದಿಹೋಕರು ಹಾದಿಹೋಕನಿಗೆ ಹೇಳಿದ ಸಂಗತಿಗಳಲ್ಲಿ ಎಷ್ಟು ಬದುಕಿನ ಸತ್ಯ, ಒಳನೋಟ ಅಡಗಿದ್ದಾವು?


ಕಥೆ, ಬದುಕು ಎರಡೂ ದೊಡ್ಡವೇ. ಸಣ್ಣವನು ಅಂದರೆ ಕಥೆಗಾರ. ಇದ್ದದ್ದು-ಇಲ್ಲದ್ದು ಸೇರಿ ಹೇಳೋ ಅಭ್ಯಾಸ ಬಹಳ ಹಳೆಯದು. ಬಲ್ಲವರಿಗೆ ಕರುಣೆ ಇದ್ದರೆ ಆಯಿತು.



ದೊರಸಾನಿ ಸಾವು ಆಗುವುದು ಮುಂಚಿತವಾಗಲೇ ತಿಳಿಯುತ್ತಿತ್ತು. ಯಾರೂ ಮಾತಾಡಿಸಲು ಹೋಗಲಿಲ್ಲ. ಆಕೆ ಒಬ್ಬಳೇ ಬಾಗಿಲು ಹಾಕಿ ಮನೆಯಲ್ಲಿ ಕುಡಿಯುತ್ತ ಕೂತಿದ್ದಳು. ಗ್ರಹಚಾರವೆಂಬಂತೆ ಅಲ್ಲಿಗೆ ಗಿಚ್ಚಲು ಬಂದ.

ಕೇಶವ ಮಳಗಿ





ಕುಂ. ವೀರಭದ್ರಪ್ಪ

ಭಲಾರೇ ವಿಚಿತ್ರಂ

'ಕಳ್ಳ ಮನೆ ಹೊಕ್ಕೊಡೆ ಶುಭ ಲಗ್ನವೆನ್ನಿರಯ್ಯಾ'

ಗಾಳಿಲಿಂಗನೆಂಬ ಚೋರಾಗ್ರೇಸರ ಮಾಡಿದ ಒಂದೆರಡು ಕಳ್ಳತನದ ಪ್ರಸಂಗಗಳನ್ನು ಹೇಳುವೆನು; ಕೇಳುವಂತವರಾಗಿರಿ.

ಬಳ್ಳಾರಿ ಜಿಲ್ಲೆಯ ಹಗರಿ ಸಾಲಗುಂಟ ನೀವು ಸಿಳ್ಳೆ ಹಾಕುತ್ತ ಬಂದರೆ ನಿಚ್ಚೂರು ಎಂಬೊಂದು ಶಿಲಾಯುಗ ಕಾಲದ ಹಳ್ಳಿ ಬರುತ್ತದೆ. ಕೋರಿಶೆಟ್ರು ತೋಟದ ಪಕ್ಕದಲ್ಲಿ ಒಂದು ಸಮಾಧಿಯೂ, ಅದರ ಮೇಲೊಂದು ವಿಲಕ್ಷಣಾಕೃತಿಯ ಕಲ್ಲುಗುಂಡೂ ಇವೆ. ಅದೇ ಸಿಂಧವಾಡಿ ಪ್ರಾಂತದ ವಿಖ್ಯಾತ ಚೋರ ಚಕ್ರವರ್ತಿ ಗಾಳಿಲಿಂಗನ ಸಮಾಧಿಯು. ಅದಕ್ಕೆ ಹರಕೆ ಹೊತ್ತು ನಡೆದುಕೊಳ್ಳುತ್ತಿರುವವರು ನಾನಾ ಕಾರಣಗಳಿಗಾಗಿ, ನಾನಾ ನಮೂನಿ ಮಂದಿ. ಕಳ್ಳತನಕ್ಕೀಡಾದವರು ''ಯಪ್ಪೋ ಗಾಲ್ಲಿಂಗ... ಕಳ್ರೂನ್ನ ಸಿಗೋಹಂಗ ಮಾಡು, ನಮ್ಮದು ನಮಗೆ ದೊರಕೋಹಂಗ ಮಾಡು'' ಎಂದು ಬೇಡಿಕೊಳ್ಳುತ್ತಿದ್ದರೆ, ಕಳ್ಳತನ ಮಾಡಿದವರು, ಮಾಡಲಿಕ್ಕೆ ಹೋಗುವವರು ತಮಗೆ ರಕ್ಷಣೆ ನೀಡಬೇಕೆಂದೂ, ಕಳ್ಳತನಕ್ಕೆ ಸಂಬಂಧಿಸಿದ ಟೆಕ್ನಿಕ್ಕುಗಳು ಚಕಚಕ ಅಂತ ಹೊಳೆಯುವಂತೆ ಮಾಡಬೇಕೆಂದೂ, ತಾವು ಪೊಲೀಸರ ಕೈಗೆ ಸಿಕ್ಕದಂತೆ ಕಾಪಾಡಬೇಕೆಂದೂ ಬೇಡಿಕೊಳ್ಳುತ್ತಿರುವವರು. ಪೊಲೀಸರೂ ಅಲ್ಲಿಗೆ ಬಾರದೆ ಇರರು. ಕಳ್ಳರ ಸುಳಿವು ನೀಡು, ನಮಗೆ ಪ್ರಮೋಷನ್ನು ಕೊಡಿಸು ಎಂದು ಅಂಗಲಾಚದೆ ಇರರು. ಒಮ್ಮೊಮ್ಮೆ ಕಳ್ಳತನ ಮಾಡಿಸಿಕೊಂಡವರೂ, ಕಳ್ಳರೂ, ಪೊಲೀಸರೂ ಏಕಕಾಲಕ್ಕೆ ಗಾಳಿಲಿಂಗನ ಸಮಾಧಿ ಸುತ್ತ ಪ್ರದಕ್ಷಿಣೆ ಹಾಕುತ್ತಿರುವುದನ್ನು ಅಟ್ ಎ ಟೈಂ ನೀವು ನೋಡಬಹುದು.

ಗಾಳಿಲಿಂಗ ಎಂಬುವವ ಈ ಭಾಗದ ಜಾನಪದ ಕಥೆ-ಕಾವ್ಯಗಳ ನಾಯಕನೂ ಹೌದು. ವಾಗಿಲಿಯ ಸವ್ವಾರೆವ್ವ ಎಂಬ ಮುದುಕಿಗೆ ನೀವೇನಾದರೂ ಒಂದು ಚಿಟ್ಟಿ ಎಲೆ ಒಂದು ಹಿಡಿ ಅಡಕೆ, ಒಂದು ಚಟಾಕು ನಶೆಪುಡಿ ಕೊಡಿಸಿದಿರೆಂದರೆ ಬೆಳ್ಳಂಬೆಳಗು ಗಾಳಿಲಿಂಗನ ಕಳ್ಳತನಗಳನ್ನು ಕಾವ್ಯಮಯವಾಗಿ ಸುಶ್ರಾವ್ಯವಾಗಿ ಹಾಡುತ್ತಾಳೆ, ಬಡ್ಲಡಕಿಯ ಬುಡ್ಡಪ್ಪಗೇನಾದರು ನೀವು ಒಂದರೆಡು ಗಿಳಾಸು ಸರಾಯಿ ಕುಡಿಸಿದರಂತೂ ಅವನು ಪ್ರಪಂಚದ ಎಲ್ಲಾ ಲಿಖಿತ, ಮೌಖಿಕ ಪರಂಪರೆಯ ಕಳ್ಳರಿಗೆಲ್ಲ ಗಾಳಿಲಿಂಗನನ್ನು ಚಕ್ರವರ್ತಿಯಾಗಿಸಿಬಿಡುವನು. ಅವನ ಎಪ್ಪತ್ತೂ ಕಳ್ಳತನಗಳನ್ನು ಹೇಳಲೆಂದೇ ಬದುಕಿರುವ ವಯೋವೃದ್ಧರೂ, ಜ್ಞಾನವೃದ್ಧರೂ ಹಗರಿ ಸಾಲಿನ ಪ್ರತಿಯೊಂದು ಹಳ್ಳಿಗಳಲ್ಲಿದ್ದಾರೆ.

ತನ್ನ ತೊಂಬತ್ತೆರಡನೇ ವಯಸ್ಸಿನಲ್ಲಿ ತನ್ನ ಅಸಂಖ್ಯಾತ ಅಭಿಮಾನಿಗಳನ್ನು ಅನಾಥರನ್ನಾಗಿ ಮಾಡಿದ ಈ ಚೋರಾಗ್ರೇಸರ ಆಕರ್ಷಕ ನಿಲುವನ್ನು ಹೊಂದಿದ್ದ. ಪರನಾರಿ ಸಹೋದರನಾಗಿದ್ದ. ಹೆಂಡರು ಮಕ್ಕಳಿರದಿದ್ದ ಈ ಅವಿವಾಹಿತನು, ಬ್ರಹ್ಮಚಾರಿಯು ಹೋದ ಕಡೇಲೆಲ್ಲ ಅಭೂತಪೂರ್ವ ಸ್ವಾಗತ ದೊರಕುತ್ತಿತ್ತು, ಭಾಗ್ಯದ ಪುರುಷಲಕ್ಷ್ಮಿಯೇ ಬಂದಂತೆ ಭಾವಿಸಿ ಹೊಟ್ಟೆತುಂಬ ಉಣ್ಣಲಿಡುತ್ತಿದ್ದವರೂ, ಬಟ್ಟೆ ಬರೆ ಕೊಟ್ಟು ಸತ್ಕರಿಸುತ್ತಿದ್ದವರೂ ಸದರಿ ಗ್ರಾಮದ ಪ್ರತಿಯೊಂದು ಓಣಿಯಲ್ಲಿದ್ದರು. ಕೊಡುಗೈ ದಾನಿಯಾಗಿದ್ದ ಈತನ ಜೇಬಿನಲ್ಲಿ



ಎಸ್.ಎ. ಪದ್ಮನಾಭ

ಒಂದು ದಮ್ಮಡಿ, ದುಗ್ಗಾಣಿ ಸಹ ಇರುತ್ತಿರಲಿಲ್ಲ. ಪಂಚಭೂತಗಳಿಗೆ ಗುರುವಿನೋಪಾದಿಯಲ್ಲಿದ್ದ ಈ ಮಹಾಶಯನು ನಿಂತಲ್ಲಿ ನಿಲ್ಲುತ್ತಿರಲಿಲ್ಲ, ಕುಂತಲ್ಲಿ ಕೂಡ್ರುತ್ತಿರಲಿಲ್ಲ. ಶತಪದಿ, ಚತುಷ್ಪಾದಿಗಳಂತೆ ಚಲಿಸಬಲ್ಲವನಾಗಿದ್ದ ಈತನು ಅದಾವ ಮಾಯದಲ್ಲಿ ಸಿರಿವಂತರ ಮನೆಗಳನ್ನು ಲೀಲಾಜಾಲವಾಗಿ ಪ್ರವೇಶಿಸುತ್ತಿದ್ದನೋ; ಕೇವಲ ಬೆರಳುಗಳ ಸಹಾಯದಿಂದ ಹೇಮಾಹೇಮಿ ತಿಜೋರಿಗಳನ್ನು ತೆರೆಯುತ್ತಿದ್ದನೋ ಆ ಜಗನ್ನಿಯಾಮಕನಿಗೇ ಗೊತ್ತು ಕಣ್ರೀ. ಜಾನಪದ ಹಾಡುಗಳ ತಿಜೋರಿಯಾದ ವೃದ್ಧೆ ಸವಾರೆವ್ವ, ದವುಳೇರ ತಿಜೋರಿಗಳು ಗಾಳಿಲಿಂಗನ ಹಿಂದೆ ನಡೆದು ಬಂದಾವೋ, ಕಬ್ಬಿಣದ ಪೆಟಾರಿಗಳು ಬಾಯಿ ತೆರೆದಾವೋ ಎಂದು ಮುಂತಾಗಿ ಹಾಡುವುದರಲ್ಲಿ ಸತ್ಯಾಂಶ ಇಲ್ಲದಿಲ್ಲ. ಅಂತೂ ಈತ ನಿಷ್ಣಾತ ಕಳ್ಳನಾಗಿದ್ದ ಎಂಬ ಮಾತಂತೂ ಸತ್ಯ. ಈತನಿಂದ ಕಳ್ಳತನಕ್ಕೀಡಾದವರೂ ಶಹಬ್ಬಾಷ್ ಗಾಳಿಲಿಂಗ ಎಂದು ಉದ್ಗರಿಸದೆ ಇರುತ್ತಿರಲಿಲ್ಲ. ಇಂಥದೊಂದು ಅನಿರ್ವಚನೀಯ ಆನಂದಕ್ಕೆ,

ಅನನ್ಯ ಅನುಭವಕ್ಕೆ ತುತ್ತಾಗಬೇಕೆಂದು ತುದಿಗಾಲಲ್ಲಿ ನಿಂತು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದ ಶ್ರೀಮಂತರಿಗೆ ಕೊರತೆ ಇರಲಿಲ್ಲ. ಕಾರಣ ಈತ ಕಿಟಕಿ ಬಾಗಿಲುಗಳಿಗೆ ಹಾನಿ ಮಾಡದೆ, ಒಂದು ಹನಿ ರಕ್ತಪಾತವಾಗದೆ ಕಳ್ಳತನ ಮಾಡುತ್ತಿದ್ದುದು. ಈ ವಿಷಯದಲ್ಲಿ ಆತ ಅಭಿಜಾತ ಪ್ರತಿಭೆಯ ಕಲಾವಿದನಾಗಿದ್ದ. ಆತನ ಒಂದೊಂದು ಕಳ್ಳತನವೂ ಒಂದೊಂದು ಅಸಾಮಾನ್ಯ ಕಲಾಕೃತಿಯೇ ಸರಿ. ಇದನ್ನು ಮನಗಂಡೇ ಆ ಕಾಲದ ಬ್ರಿಟಿಷ್ ಸರಕಾರದ ಪೊಲೀಸರು ಶಿಕ್ಷೆಯ ಕಾಲಕ್ಕೆ ಆತನನ್ನು ಹತ್ತಿರದ ಬಂಧುವೆಂದೇ ಪರಿಗಣಿಸುತ್ತಿದ್ದರು. ಸಜೆ ಎಂಬ ಶಾಸ್ತ್ರ ಮುಗಿದೊಡನೆ ಸನ್ಮಾನ ಸತ್ಕಾರ ಮಾಡಿ ಬೀಳ್ಕೊಡುತ್ತಿದ್ದರು.


ನಮ್ಮ ಕಾಲದಲ್ಲೇನಾದರೂ ಆ ಕುಶಲಿ ಇದ್ದಿದ್ದಲ್ಲಿ ಸರಕಾರ ಖಂಡಿತ ಅವನಿಗೊಂದು ಪ್ರಶಸ್ತಿ ನೀಡಿ ಗೌರವಿಸುತ್ತಿತ್ತು. ರಂಗೋಲಿಗೂ ಒಂದು ಪ್ರಶಸ್ತಿ ನೀಡಲು ಯೋಚಿಸುತ್ತಿರುವ ಸರಕಾರ, ಗಾಳಿಲಿಂಗಗೂ ಒಂದು ಪ್ರಶಸ್ತಿ ನೀಡಿ ಗೌರವಿಸದೆ ಇರುತ್ತಿರಲಿಲ್ಲವೇನೋ! ಈಗಿರೋರು ಯಾರು ತಾನೆ ಕಳ್ಳರಲ್ಲ ಹೇಳಿ! ಸಾಹಿತ್ಯದಲ್ಲಿ ಕಳ್ಳಸಾಗಾಣಿಕೆ ಎಂಬುದು ನಾವೆಲ್ಲರೂ ಒಪ್ಪಿಕೊಂಡಿರುವ ಸತ್ಯ. ಕಳ್ಳತನವೆಂಬುದು ಮನುಷ್ಯನ ಬೇಸಿಕ್ ಇನ್‌ಸ್ಟಿಂಕ್ಟ್‌ಗಳ ಪೈಕಿ ಒಂದು ಅಲ್ಲವೆ! ಏನಲ್ಲದಿದ್ದರೂ ಕನಿಷ್ಠ ಪಕ್ಷ ಯಾವುದೇ ಮನುಷ್ಯ, ಅವರಿವರ ಹೃದಯವನ್ನಾದರೂ ಕದಿಯುವ ಪ್ರಯತ್ನ ಮಾಡದೆ ಇರುವುದಿಲ್ಲ. ಹೃದಯಕ್ಕಿಂತ ಅತ್ಯಮೂಲ್ಯವಾದ ವಸ್ತು ಈ ಪ್ರಪಂಚದಲ್ಲಿ ಯಾವುದಿದೆ ಹೇಳಿ! ಕದಿಯುವ ಎಂಬ ಕ್ರಿಯೆ ಮುಖ್ಯ, ವಸ್ತುವಲ್ಲ. ಅಡಿಕೆ, ಆನೆ, ಹೃದಯ ಎಂಬೀ ಮೂರು ವಸ್ತುಗಳು ಒಂದೇ ಪಗಡಿಯಲ್ಲಿರಬೇಕೆಂಬುದು ನನ್ನ ಅಭಿಮತ. ಎಂದೂ ಹುಳ್ಳ ಹುಳ್ಳಗೆ ಇರದಿದ್ದ ಮನಸ್ಸಿನ ನಮ್ಮ ನಿರುಪದ್ರವಿ ಗಾಳಿಲಿಂಗನನ್ನು ಕಾಮಧೇನು, ಬಂಗಾರದ ಮೊಟ್ಟೆ ಇಡುವ ಕೋಳಿ ಹೀಗೆ ಏನಾದರೂ ಹೋಲಿಸಿಕೊಳ್ಳಿ. ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಅವನ ಚೋರ ಕಲೆಯ ಎರಡು ಉದಾಹರಣೆಗಳನ್ನು ಹೇಳಿದರೆ ನೀವೂ ಅವನ ಕಟ್ಟಾ ಅಭಿಮಾನಿಯಾಗುವುದರಲ್ಲಿ ಸಂದೇಹವಿಲ್ಲ.

ಆಭರಣಗಳಿಂದಾಲಂಕೃತ ಹೆಣವನ್ನು ದೋಚಿದ ಪ್ರಸಂಗವು

ನಮ್ಮ ಗಾಳಿಲಿಂಗನಿಗೂ, ಕರ್ಜಿಕಾಯಿ ಈರಮ್ಮಜ್ಜಿಗೂ ನಡುವೆ ಮಾತಿಗೆ ಮಾತು ಬೆಳೆಯಿತು. ತಾಯಿಯೋಪಾದಿಯಲ್ಲಿ ಆಕೆ ತನ್ನನ್ನು ಬಾಧಿಸುತ್ತಿರುವ ಕಷ್ಟಗಳನ್ನು ತೋಡಿಕೊಂಡಳು. ವಾರೊಪ್ಪತ್ತಿನಲ್ಲಿ ಆಕೆಯ ಸಂಕಟವನ್ನು ಬಗೆಹರಿಸುವುದಾಗಿ ಇವನು ಕೃತ ನಿಶ್ಚಯ ಮಾಡಿದ. ತತ್ ಕಾರ್ಯತತ್ಪರನಾದ. ತನ್ನ ದ್ವಾದಶ ಚೋರ ಶಿಷ್ಯರನ್ನು ಕರೆದು ಮಾಹಿತಿ ಸಂಗ್ರಹಿಸಿಕೊಂಡು ಬರುವಂತೆ ಹೇಳಿ ಅಷ್ಟದಿಕ್ಕುಗಳಿಗೆ ಅಟ್ಟಿದ. ಒಂದೆರಡು ದಿನಗಳಲ್ಲಿ ಅವರೆಲ್ಲ ಮಾಹಿತಿ ಸಂಗ್ರಹಿಸಿಕೊಂಡು ಬಂದು ಒಪ್ಪಿಸಿದರು. ದೊಡ್ಡಿ ಮನಸೋಬ ಸಂಗ್ರಹಿಸಿ ತಂದ ಮಾಹಿತಿ ಮಾತ್ರ ಆಸಕ್ತಿಕರವಾಗಿತ್ತು; ಸವಾಲು ಹಾಕುವಂತಿತ್ತು. ಅದರ ಆಧಾರದ ಮೇಲೆ ರಚಿಸುವುದಾದರೆ ಹೀಗಿರುವುದು.

ನಿಚ್ಚೂರಿಗೆ ಶಿರಿಬಿ ಎಂಬ ಗ್ರಾಮವು ಎರಡು ಧಮ್ ದೂರದಲ್ಲಿರುವುದು. ಅಲ್ಲಿ ಹಳೆ ಮನೆ ಸಿದ್ದನ ಗೌಡ ಎಂಜಲಗೈಲಿ ಕಾಗೆಯನ್ನು ಓಡಿಸಿದವನಲ್ಲ. ಧನಕನಕ ಹೇರಳವಾಗಿದ್ದರೂ ದಾರಿದ್ರ್ಯವನ್ನು ಆರೋಪಿಸಿಕೊಂಡು ಬದುಕುತ್ತಿರುವ ನರಮಾನವ, ಸುರಪುರದ ವೆಂಕಟಪ್ಪ ನಾಯಕನ ಅರಮನೆಯನ್ನು ಕಟ್ಟಿದ ವಡ್ಡರೇ ಸದರೀ ಹಳೆಯನ್ನು ಕಟ್ಟಿದ್ದು. ಅಂಥ ಮನೆಯಲ್ಲಿ ವಾಸಿಸುತ್ತಿರುವ ಗೌಡಗೆ ಹತ್ತಿಪ್ಪತ್ತು ಮೊಮ್ಮಕ್ಕಳಿರುವವು. ಆತಗೊಂದು ಮುತ್ತಜ್ಜಿ ಇರುವುದು. ಅದರ ಹೆಸರು ಪಾರಜ್ಜಿ. ಏಳೆಂಟು ಪ್ಲೇಗುಗಳನ್ನು ಕಂಡಿರುವ ಅದರ ವಯಸ್ಸೆಷ್ಟು ಎಂದು ಹೇಳುವುದು ದುಸ್ತರ. ಪ್ರಪಂಚದ ಸಮಸ್ತ ಜೀವಕೋಟಿಯ ಪ್ರಾಣಹಾನಿಯನ್ನು ಯಶಸ್ವಿಯಾಗಿ ಮಾಡುತ್ತಿರುವ ಶ್ರೀಮದ್ಯಮರಾಜೇಂದ್ರನು ಆಕೆಗೆ ಕೈವಲ್ಯ ಪದವಿಯನ್ನು ಒದಗಿಸುವಂಥ ಮನಸ್ಸು ಮಾಡಿಲ್ಲ. ಗುಟ್ಟಾಗಿ ಅವರಿಬ್ಬರ ನಡುವೆ ಒಪ್ಪಂದವಾಗಿರಬಹುದೇನೊ! ಜಡ್ಡು-ಜಾಪತ್ತು ಒಂದೂ ಇಲ್ಲದೆ ಅಷ್ಟೊಂದು ದಿನಮಾನ ಬದುಕಿದ್ದ ಅದಕ್ಕೆ ಸದರೀ ನಶ್ವರ ಪ್ರಪಂಚದ ಮೇಲೆ ಬರಬಾರದ ಬೇಸರ ಬಂತು. ಪರಲೋಕಗಳನ್ನು ನೋಡ ಬೇಕೆಂಬಾಸೆಯಾಯಿತು. ಕೂಡಲೆ ಗಪ್ಪಂತ ಹಾಸಿಗೆ ಹಿಡಿದುಬಿಟ್ಟಿತು, ತಾನು ಸಾಯಲಿರು ವುದಾಗಿ ಘೋಷಣಾ ಮಾಡಿತು. ಅದರಿಂದ ಸಿದ್ದನಗೌಡಾದಿಯಾಗಿ ಎಲ್ಲರಿಗೂ ಆದ ಸಂತೋಷ ಅಷ್ಟಿಷ್ಟಲ್ಲ. ದೇವರೇ ಬೇಗನೆ ಮುದುಕಿಗೆ ಸಾವು ಕರುಣಿಸು ಎಂದು ಎಲ್ಲರೂ ದೇವರನ್ನು ಬೇಡಿಕೊಳ್ಳುವವರೆ. ಲಗುಬಗೆ ಯಿಂದ ನೆಂಟರಿಷ್ಟರನ್ನು, ಬಂಧು ಬಳಗದವ ರನ್ನು ಕಲೆ ಹಾಕಿದ. ಎಲ್ಲರ ಕೈಯಿಂದ ಅದರ ಬಾಯಿಗೆ ನೀರು ಬಿಡಿಸಿದ. ಎಲ್ಲರೂ ಮುದುಕಿ ಈಗ ಸತ್ತೀತು, ಆಗ ಸತ್ತೀತು ಎಂದು ಚಾತಕಪಕ್ಷಿಗಳಂತೆ ಎದುರು ನೋಡತೊಡಗಿ ದರು. ಹುಡುಗರುಪ್ಪಡಿಯಂತೂ ಅಂಗಳದಲ್ಲಿ ನೆರೆತು, ಮುದುಕಿ ಹೇಗೆ ಪ್ರಾಣ ಬಿಡುತ್ತದೆ ಎಂಬುದನ್ನೆ ಕಥೆಮಾಡಿ ಆಡತೊಡಗಿದ್ದವು. ಆದರೆ ಮುದುಕಿ ''ದೂರ ನಿಂತ್ಕೊಳ್ಳೋ ನನ್ನಾಟಗಳ್ಳ... ನಾನು ಬಾ ಅಂತ ಕರೆಯೋವರ್ಗು ಬಂದೀಯಾ ಹುಷಾರ್'' ಎಂದು ಕೋಣೇಂದ್ರನನ್ನು ದೂರ ನಿಲ್ಲಿಸಿಬಿಟ್ಟಿತ್ತು. ಇದರಿಂದ ಬೇಸರವಾದದ್ದು ಅಪಾರ ಅಂತ್ಯಸಂಸ್ಕಾರಾಕಾಂಕ್ಷಿಗಳಿಗೆ. ಅವರೆಲ್ಲರ ಪರವಾಗಿ ಗೌಡನು ''ಬೇಮುದ್ಕಿ ಸಾಯಲಕ್ಯಾಕ ಹೀಗ ಹಿಂದೆ ಮುಂದೆ ನೋಡ್ತೀಯೋ ಏನೋ! ನೀನು ಸಾಯಂಗಿದ್ರೆ ಲಗೂನ ಸಾಯಿ, ಇಲ್ಲಾಂದ್ರ ಬಿಡು. ಮಂದಿ ಮನಿ ವದಕನ ಬಿಟ್ಟು ನಿನ್ಗೆ ಮಣ್ ಕೊಡಲಾಕಂತ ಬಂದ್ ಕುಂತೈತೆ'' ಎಂದು ತರಾಟೆ ತೆಗೆದುಕೊಂಡನು. ಅದಕ್ಕಿದ್ದು ಮುದುಕಿಯು ''ಅಯ್ಯಾ ಮಮ್ಮಗ್ನೇ, ಸಾಯ್ಲಿಕ್ಕೆ ನಂದೇನು ತಕರಾಲಿಲ್ಲ. ಆದ್ರೆ ಸತ್‌ಮ್ಯಾಕ ಒಂದು ಮಾತ್ನ ನಡೆಸಿಕೊಡೋ ಹಂಗಿದ್ರೆ ಗಪ್ಪಂತ ಪ್ರಾಣ ಬಿಟ್ಟೇನ್ನೋಡು'' ಎಂದು ಹೇಳಿತು. ಮೊಮ್ಮಗನಿಂದ ಆಣೆ ಪ್ರಮಾಣ ಮಾಡಿಸಿಕೊಂಡಿತು. ಮಾತು ತಪ್ಪಿದರೆ ದೆವ್ವ ಆಗಿ ಎಲ್ಲಾ ಸರ್ವನಾಶ ಮಾಡುವುದಾಗಿ ಗತ್ತು ಹಾಕಿತು. ಅದಕ್ಕೆಲ್ಲ ಅಂಗೀಕಾರ ಮುದ್ರೆಯೊತ್ತಿದ ಮೇಲೆ ಅದು ''ನಾನು ಸತ್ತ ಕೂಡಲೆ ನನ್ನ ಹೆಣವನ್ನು ಘಮ್ಮಂದೆಣ್ಣೆ ಸಬ್ಬುಹಚ್ಚಿ ಸಾನಾ ಮಾಡಿಸ್ಬೇಕು, ಕಬ್ಬಿಣ ಪೆಟಾರಿಲಿರೋ ಪಟ್ಟೆ





ಪಿತಾಂಬ್ರ ಸೀರ್ ಉಡಸ್ಬೇಕು. ಮನೇಲಿರೂ ಯಾವತ್ತು ಆಭರಣಗಳ್ನ ತೊಡಿಸಿ ಅಲಂಕಾರ ಮಾಡಬೇಕು. ಇಡೀ ರಾತ್ರಿ ನನ್ನ ನಾಕು ಮಂದಿಗೆ ಕಾಣೋಹಂಗ ಕುಂಡ್ರಿಸಿಟ್ಟು ಮಾರನೆ ದಿನ ಧಾಂಧೂಂ ಅಂತ ಮೆರವಣಿಗೆ ಮಾಡಿ ಮಣ್ಣಿಗ್ ಸೇರಸ್ಬೇಕು'' ಎಂದು ತನ್ನ ಆಖರಿ ಖಾಯಿಷ್ ಮಂಡಿಸಿ ಎಲ್ಲರನ್ನು ದಿಗ್ಭ್ರಾಂತಗೊಳಿಸಿತು. ನಿಟ್ಟುಸಿರು ಬಿಟ್ಟು ಗೌಡ, ಕೈಮೇಲೆ ಕೈಹಾಕಿ ಮಾತು ಕೊಟ್ಟ ಕೂಡಲೆ ಅದು ಯಮಧರ್ಮನಿಗೆ ತನ್ನ ಪ್ರಾಣ ಒಪ್ಪಿಸಿತು.

ಆಗ ಗೌಡನ ಹೊರತಾಗಿ ಎಲ್ಲರಿಗೂ ಖುಷಿಯೋ ಖುಷಿ. ಎಲ್ಲರೂ ಕೇಕೆ ಹಾಕಿ ಹರ್ಷೋದ್ಗಾರ ಮಾಡಿದರು. ಕೊಟ್ಟ ಮಾತಿಗೆ ತಪ್ಪಲಾದೀತೆ! ಜನ ಸುಮ್ಮನಿರಬೇಕೆ? ಸರಿ! ಮುದುಕಿಯ ಕಳೇಬರವನ್ನು ಘಮ್ಮಂದೆಣ್ಣೆ ಸಾಬೂನು ಪೂಸಿ ಬಿಸಿ ನೀರಿನಿಂದ ಮಜ್ಜನ ಮಾಡಿಸಿದರು, ಕಬ್ಬಿಣ ಪೆಟಾರೀನ ಓಪನ್ನು ಮಾಡಿ ಪಟ್ಟೆಪೀತಾಂಬರ ಸೀರೆ, ಇಳಕಲ್ಲು ರವಿಕೆ ಉಡಿಸಿದರು, ಮನೆಯಲ್ಲಿದ್ದ ಯಾವತ್ತೂ ಆಭರಣಗಳನ್ನು ತೊಡಿಸಿ ಅಲಂಕಾರ ಮಾಡಿದರು. ಹಾಗೆ ಸಿಂಗಾರಗೊಂಡ ಹೆಣವನ್ನು ಪಶ್ಚಿಮದ ಗೋಡೆಗೆ ಸಿದಗಿ ಬಡಿದು ಪಶ್ಚಿಮಾಭಿಮುಖವಾಗಿ ಕುಂಡ್ರಿಸಿದರು.

ಅದು ಮೊದಲೆ ಹೂಸು ಬಿಟ್ಟರೆ ಎಲ್ಲ ಕಡೆ ಪರಿಮಳ ಹರಡುವಂಥ ಪುಟ್ಟಗ್ರಾಮ. ಹೆಣವನ್ನು ಮಣಮಣ ಬಂಗಾರದಿಂದ ಸಿಂಗರಿಸಿ ಕೂಡ್ರಿಸಿರುವರೆಂಬ ಸುದ್ದಿ ಎಲ್ಲರ ಕಿವಿಯಲ್ಲಿ ತಮಟೆ ಭಾರಿಸಿದ್ದು ತಡವಾಗಲಿಲ್ಲ. ಆಡೋ ಹುಡುಗರಿಂದ ಹಿಡಿದು ಹಣ್ಣು ಹಣ್ಣು ಮುದುಕರವರೆಗೆ ಎಲ್ಲರೂ ತಂಡೋಪತಂಡವಾಗಿ ಸದರಿ ಹಳೆ ಮನೆಗೆ ಬಿಜಯಂಗೈದು ಹೆಣದ ಸೊಬಗನ್ನು ಕಣ್ತುಂಬ ಆಸ್ವಾದಿಸಿ ನೋಡಿಕೊಂಡು ಹೋಗತೊಡಗಿದರು. ಎಲ್ಲರೂ ಮುದುಕಿಯನ್ನು ಬಾಯ್ತುಂಬ ಹೊಗಳಿದ್ದೇ ಹೊಗಳಿದ್ದು, ಜೊತೆಗೆ ಸಿದ್ದನ ಗೌಡನನ್ನೂ.

ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ ಎಂಬಂತಾಗಿತ್ತು ಆತನ ಪರಿಸ್ಥಿತಿ. ಯಾವಾಗ ಬೆಳಗಾಗುವುದೋ, ಯಾವಾಗ ಆಭರಣಗಳ ಬಿಚ್ಚಿ ಹೆಣವನ್ನು ಸುಡುಗಾಡಿಗೆ ಸೇರಿಸುವೆನೋ ಎಂದಾತ ಪ್ರತಿಕ್ಷಣಗಳ ಸಂಕಲನ ಮಾಡಲಾರಂಭಿಸಿದ್ದ.

ಆದರೆ ಆ ನತದೃಷ್ಟನಿಗೇನು ಗೊತ್ತು ಗಾಳಿಲಿಂಗ ತನ್ನ ಸಂಗಡಿಗರೊಡನೆ ವೇಷ ಮರೆಸಿಕೊಂಡು ಅಲ್ಲಿರುವ ಸಂಗತಿ. ಗಾಳಿಲಿಂಗ ಎಷ್ಟು ಚುರುಕಾಗಿದ್ದನೆಂದರೆ ಅಷ್ಟು ಚುರುಕಾಗಿದ್ದ. ಅಲ್ಲಿದ್ದ ಪ್ರತಿಯೋರ್ವರ ಅಂತರಂಗ ಪ್ರವೇಶಿಸಿ ಯಾರು ಯಾವಾಗ ಹೇಗೆ ನಿದ್ದೆ ಹೋಗುವರೆಂಬ ಸಂಗತಿಯನ್ನು ಸೋಸಿದ. ಕಣ್ಣುಗಳೆಂಬ ತೋಳುಗಳಿಂದ ಅಪೂರ್ವ ಕಳೇಬರದ ವರ್ಚಸ ಪರಿಶೀಲಿಸಿದ. ಹೀಗೆ ತನ್ನ ಮನಸ್ಸಿನಲ್ಲಿ ನೀಲನಕ್ಷೆ ತಯಾರಿಸಿಕೊಂಡ.

ರಾತ್ರಿ ಎರಡನೆ ಜಾವ ಆಗತಾನೆ ಕಳೆದಿತ್ತಷ್ಟೆ. ಒಂದಿಬ್ಬರನ್ನು ಅಲ್ಲಿ ಕಣ್ಗಾವಲಿಟ್ಟು ಸೀದಾ ಪಶ್ಚಿಮ ಗೋಡೆಯ ಹಿಂಬದಿಗೆ ಹೋದ. ಅವನ ಸಂಗಡ ಪಾರಜ್ಜಿಯಷ್ಟೇ ವಯಸ್ಸಾದ ವೃದ್ಧ ಚೋರನೋರ್ವ ಸೀರೆ ಉಟ್ಟುಕೊಂಡು ಸಜ್ಜಾಗಿದ್ದನಷ್ಟೆ. ಇತ್ತ ಹೆಣದ ಮುಂದುಗಡೆ ನಿಧಾನವಾಗಿ ಜನ ಕರಗಿತು. ಮಧ್ಯರಾತ್ರಿ ದಾಟುತ್ತಿದ್ದಂತೆ ಭಜನೆ ಮಾಡುವವರು ಹಾಗೇ ತೂಕಡಿಕೆ ಹತ್ತಿ ನಿದ್ದೆ ಹೋದರು. ಮನೆ ಹೆಂಗಸರು ಮಂಡಾಳು ಒಗ್ಗರಣೆ ಹಾಕಲು, ಚಹಾ ಸೋಸಿ ತರಲು ಅಡುಗೆಮನೆ ಪ್ರವೇಶಿಸಿದರು. ಈ ಎಲ್ಲ ವಿದ್ಯಮಾನಗಳನ್ನು ಲಿಲ್ಲಿಪುಟ್ ಚೋರರು ವಿವಿಧ ಸಂಜ್ಞೆಗಳ ಮೂಲಕ ರವಾನಿಸುತ್ತಿದ್ದರಷ್ಟೆ. ಅದಕ್ಕನುಗುಣವಾಗಿ ಗಾಳಿಲಿಂಗ ಗೋಡೆಯಲ್ಲಿ ಹೆಣದ ಬೆನ್ನಗೋಡೆಯಲ್ಲಿ ಅದರಷ್ಟೆ ಗಾತ್ರದ ಕನ್ನವೆಂಬ ಚಿತ್ತಾರ ಬಿಡಿಸಿದ ಕಿಂಡಿ ಮೂಲಕ ಪಾರಜ್ಜಿಯ ಕಳೇಬರವನ್ನು ಹೊರಗೆಳೆದುಕೊಂಡ. ಡೂಪ್ಲಿಕೇಟ್ ಕಳೇಬರವನ್ನು ಒಳಗೆ ತೂರಿಸಿದ. ಅಷ್ಟೇ ಕಲಾತ್ಮಕತೆಯಿಂದ ಗೋಡೆಯ ಕಿಂಡಿಯನ್ನು ಮುಚ್ಚಿಹಾಕಿದ. ಹೆಣವನ್ನು ಹೆಗಲಮೇಲೆ ಹೊತ್ತುಕೊಂಡು ಸುಡುಗಾಡು ದಾರಿ ಎಲ್ಲೈ ಎಲ್ಲೈತೆ ಅಂತ ಹೆಜ್ಜೆ ಹಾಕಿದ.

ಇತ್ತ ಮಲಗಿದ್ದವರೆಲ್ಲರಿಗೂ ಪ್ರಜ್ಞೆ ಬಂದದ್ದು ಮಂಡಾಳು ವಗ್ಗರಣೆ, ಬಿಸಿ ಬಿಸಿ ಚಹ ಬಂದಾಗಲೇ. ತಮ್ಮ ಕಣ್ಣಲ್ಲಿ ಅಚ್ಚೊತ್ತಿದ್ದ ಹೆಣವೇ ಅಲ್ಲಿದೆ ಎಂದು ಭಾವಿಸಿದ ಅವರನ್ನು ಮೂರ್ಖರೆನ್ನಬೇಕೋ? ಮುಗ್ಧರೆನ್ನಬೇಕೋ! ಬೆಳ್ಳಂಬೆಳಗು ಆ ಡೂಪ್ಲಿಕೇಟ್ ಹೆಣದೆದುರು ಅನುಭಾವದ ಪದಗಳನ್ನು ಹಾಡುತ್ತ ಚಯ್ಯಂ ಚಯ್ ಭಜನೆ ಮಾಡಿದರು. ನಿದ್ದೆ ಮಂಪರಿನಲ್ಲಿದ್ದ ಗೌಡನೂ ಆಗೊಮ್ಮೆ ಈಗೊಮ್ಮೆ ಕಣ್ಣುಬಿಟ್ಟು ಹೆಣದ ಕಡೆ ನೋಡುತ್ತಿದ್ದ. ಚೋರವೃದ್ಧನೂ ಅಷ್ಟೆ, ಥೇಟ್ ಹೆಣದಂತೆಯೇ ಬೆಳಕು ಹರಿಯುವವರೆಗೆ ಗಂಡುಗಲಿ ಹಾಗೆ ಕೂತಿದ್ದ. ನಿಧಾನವಾಗಿ ಮೂದಿಗ್ಗೇರಿಯಿಂದ ಹಲಗೆಗಳೂ, ಛಲವಾದಿ ಗೋರಿಯಿಂದ ಮಂಗಳವಾದ್ಯಗಳೂ ಬಂದು ಮೊಳಗಲಾರಂಭಿಸಿದವು. ಪೂರ್ತಿ ಬೆಳಕು ಹರಿದ ನಂತರವೇ ಎಲ್ಲರೂ ಕಣ್ಣುಬಿಟ್ಟು ನೋಡಿದ್ದು. ಗೌಡನೆ ಹೆಣದ ಮೇಲಿರುವ ಸಮಸ್ತ ಆಭರಣಗಳನ್ನು ಬಿಚ್ಚಿ ಕಬ್ಬಿಣ ಪೆಟಾರಿಯಲ್ಲಿ ಭದ್ರಪಡಿಸಿದ್ದಿರಬಹುದೆಂದೇ ಎಲ್ಲಾ ವಾಚ್‌ಮನ್, ಗಾರ್ಡುಗಳು ಭಾವಿಸಿದ್ದರು. ಆಮೇಲೆ ಗೊತ್ತಾದದ್ದು ಯಾರೋ ಆಭರಣ ಅಪಹರಿಸಿರಬಹುದೆಂದು. ಇದ್ದ ಮೂವರ ಪೈಕಿ ಕದ್ದವರಾರು? ಪಾರಜ್ಜಿಯೇ ಆಭರಣಗಳನ್ನು ಮಂಗಮಾಯ ಮಾಡಿದ್ದಿರಬಹುದೆಂದು, ಹೀಗೆ ತಲಾ ಒಬ್ಬೊಬ್ಬರು ಕಳೇಬರವನ್ನು ಸಾಪಳಿಸುತ್ತಿರಲು ಹೆಣ ನಿಧಾನವಾಗಿ ಕಣ್ಣುಬಿಡುತ್ತದೆ, ಬಾಯಿ ತೆರೆಯುತ್ತದೆ, ಎದ್ದು ಓಡಲಾರಂಭಿಸುತ್ತದೆ, ಅಯ್ಯೋ ದೆವ್ವ ದೆವ್ವ ಎಂದರಚುತ್ತ ಎಲ್ಲರೂ ದಿಕ್ಕಾಪಾಲು.

ಮುಂದೆ ಏನೇನು ನಡೆಯಿತೆಂಬುದು ನಿಮಗೆ ಗೊತ್ತೇ ಇರುತ್ತದೆ. ಅದರ ಬಗ್ಗೆ ವಿವರಿಸಿ ತಲೆ ತಿನ್ನಲಾರೆ,

ಗಾಳಿಲಿಂಗ ಎಂಬ ಕಳ್ಳನ ತಲೆ ಅಂದರೆ ತಲೆ ಅಲ್ಲವೆ! ಅವನ ನೂರೆಂಟು ಕಳ್ಳತನಗಳ ಪೈಕಿ ಇದೊಂದು ಶಾಂಪಲ್ ಮಾತ್ರ. ಮುಂದಿನ ಸಂಚಿಕೆಯಲ್ಲಿ ಅವನ ಇನ್ನೊಂದು ಅದ್ಭುತ ಕಳ್ಳತನದ ಬಗ್ಗೆ ಹೇಳಿದರಾಯ್ತು ತಾನೆ! ■

ಸರ್ವರಿಗೂ ಯುಗಾದಿಯ ಶುಭಾಶಯಗಳು

ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ

ಹಾರುಗೇರಿ

ತಾ॥ ರಾಯಬಾಗ ಜಿ॥ ಬೆಳಗಾವಿ

ಮಾಲಕರು

ಶ್ರೀ ಪದ್ಮರಾಜ ಭೀ. ಕರ್ಣವಾಡಿ ಹಾಗೂ ಸಹೋದರರು

ಸ್ಪೇಶಾಲಿಸ್ಟ ಇನ್

• ಕ್ಯಾಲೆಂಡರ್ • ಕ್ಯಾಸೆಟ್ ಕವರ್ • ಫೋರ್ ಕಲರ್ ಪ್ರಿಂಟರ್
• ಸ್ಕ್ರೀನ್ ಪ್ರಿಂಟಿಂಗ್ • ಡಿ.ಟಿ.ಪಿ • ಜಾಬ್ ವರ್ಕ್ಸ
• ಮ್ಯಾರೇಜ ಕಾರ್ಡ್ಸ • ಬ್ಯಾಂಕಿನ ರಜಿಸ್ಟರ • ಫಾರ್ಮ್ಸ
• ಪಾಸ್ ಬುಕ್ • ಎಫ್.ಡಿ. ಕವರ • ಬುಕ್ ಬೈಂಡಿಂಗ್

ಎಲ್ಲ ಜಾಹೀರಾತುಗಳು ಹಾಗೂ ಇನ್ನುಳಿದ ಎಲ್ಲ ತರಹದ ಮತ್ತು ಅಂದವಾದ ಮುದ್ರಣ ಕೆಲಸಕ್ಕಾಗಿ ಸಂಪರ್ಕಿಸಿರಿ


ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್

ಹಾರುಗೇರಿ, ತಾ॥ ರಾಯಬಾಗ ಜಿ॥ ಬೆಳಗಾವಿ

☎: 958331(O) 57045, (R) 57108

॥ ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಸನ್ ॥

ಯುಗಾದಿಯ ಹೊಸ ವರ್ಷದ ಶುಭಾಶಯಗಳು



ಮೆ॥ ಅಪ್ಪಾಸಾಹೇಬ ಹಣಮಂತಪ್ಪಾ ಸೋನವಾಲ್ಕರ

ಹತ್ತಿ ಮತ್ತು ಬುಸಾರಿ ವ್ಯಾಪಾರಸ್ಥರು APMC ಮೂಡಲಗಿ

ಮಾಲಕರು

ವಿಜಯಕುಮಾರ ಅಪ್ಪಾಸಾಹೇಬ ಸೋನವಾಲ್ಕರ

ಮೂಡಲಗಿ

ತಾ॥ ಗೋಕಾಕ ಜಿ॥ ಬೆಳಗಾವಿ

☎: 958334, (O) 87252, (R) 87515

ಯುಗಾದಿಯ ಹಾರ್ದಿಕ ಶುಭಾಶಯಗಳೊಂದಿಗೆ



ಶ್ರೀ ಅಶೋಕ ಸಿ. ಮಣೂರ

ಅಧ್ಯಕ್ಷರು

ಗ್ರಾಮ ಪಂಚಾಯತ ಜಾಲವಾದಿ

ತಾಲೂಕ : ಸಿಂದಗಿ ಜಿಲ್ಲಾ : ವಿಜಾಪುರ

ಸಮಸ್ತ ಕನ್ನಡಿಗರಿಗೆ ಯುಗಾದಿ ಹಬ್ಬದ ಶುಭಾಶಯಗಳು

ಶ್ರೀ ರಾಮಪ್ಪಾ ದೇವೇಂದ್ರಪ್ಪಾ ಭದ್ರನವರ ಹಾಗೂ ಮನೆಯವರು

ಫರ್ಮಗಳು

1) ಮೆ॥ ಚೇತನ ಸೈಜಿಂಗ ವರ್ಕ್ಸ್
ನೂಲು ಗಂಜಿ ಮಾಡುವ ಘಟಕ

2) ಮೆ॥ ಮಲ್ಲಿಕಾರ್ಜುನ ಟ್ರೇಡಿಂಗ್ ಕಂಪನಿ
ನೂಲು, ಚಮಕಾ ಪಾಲಿಸ್ಟಾರಗಳ ಕಮೀಷನ್ ಏಜಂಟರು

3) ಮೆ॥ ಶಿವಚೇತನ ಟ್ರೆಡರ್ಸ್
ನೂಲು ಚಮಕಾ ಪಾಲಿಸ್ಟಾರ ಕಿರಕುಳ ಮಾರಾಟಗಾರರು

4) ಶ್ರೀ ಮಹಾಲಕ್ಷ್ಮೀ ಏಮಿಷನ್ ಟೆಸ್ಟಿಂಗ್ ಸೆಂಟರ್
ಪೆಟ್ರೋಲ, ಡಿಜೈಲ್ ವಾಹನಗಳ ಹೊಗೆ ಪರೀಕ್ಷಾ ಕೇಂದ್ರ

ಮು.ಪೋ. ಬನಹಟ್ಟಿ - 587311 ಜಿಲ್ಲಾ॥ ಬಾಗಲಕೋಟ

ಫೋನ : (08353) ಮನೆ-40305,

ಫ್ಯಾಕ್ಟರಿ-40210, ಅಂಗಡಿ- 40694

e-mail-chetansizing@exp1.com

ಬಹುಮಾನಿತ ಚಿತ್ರಗಳು



ತೀರ್ಪುಗಾರರ ಮಾತು

'ಮೊಗದ ಮೇಲೊಂದು ಮುಗುಳುನಗೆ ಬಿಡಿಸಿ'-ಎಂಬ ಕೋರಿಕೆಗೆ ನಾಡಿನ ಹಳೆ ಹೊಸ ವ್ಯಂಗ್ಯ ಚಿತ್ರಗಾರರಿಂದ ಬಂದ ಪ್ರತಿಸ್ಪಂದನ ನೋಡಿ ನಿಜಕ್ಕೂ 'ಭಾವನಾ'ದ ಮುಖ ಅರಳಿದೆ. ಸುಮಾರು 130ಕ್ಕೂ ಹೆಚ್ಚಿನ ವ್ಯಂಗ್ಯಚಿತ್ರಗಾರರಿಂದ 600ಕ್ಕೂ ಹೆಚ್ಚು ಚಿತ್ರಗಳು ಬಂದಿವೆ. ಇವುಗಳಲ್ಲಿ ಮಹಿಳೆಯರು, ಎಳೆಯರು, ಶಾಲಾ ವಿದ್ಯಾರ್ಥಿಗಳೂ ಪಾಲ್ಗೊಂಡಿರುವುದು ತುಂಬ ಖುಷಿಯ ಸಂಗತಿ.

ಭ್ರಷ್ಟಾಚಾರ, ಮಂತ್ರಿ, ಕಂಪ್ಯೂಟರ್, ವೀರಪ್ಪನ್, ಮನೆ ಅಳಿಯ, ಲಟ್ಟಣಗೆ-ಇಂಥ ಸವಕಲು ವಸ್ತುಗಳನ್ನು ಬಿಟ್ಟು ನಿತ್ಯಜೀವನದ ಹೊಸ ಸಂಗತಿಗಳನ್ನು ಆಯ್ದುಕೊಳ್ಳಿ ಎಂಬ ನಮ್ಮ ವಿನಂತಿಯನ್ನು ಹೆಚ್ಚಿನವರು 'ಗಂಭೀರ'ವಾಗಿ ಪರಿಗಣಿಸಿದಂತಿಲ್ಲ! (ವ್ಯಂಗ್ಯ ಚಿತ್ರಕಾರರಲ್ಲವೆ?). ಕೆಲವರು ನಗೆಹನಿಯನ್ನು ಚಿತ್ರವತ್ತಾಗಿಸಿದರೇ 'ವ್ಯಂಗ್ಯಚಿತ್ರ' ಎಂದು ಕೊಂಡಂತಿದೆ.


ಚಿತ್ರ ಮತ್ತು ಮಾತು ಪರಸ್ಪರ ಅನಿವಾರ್ಯ ವಾಗಿರಬೇಕು. ಪುನರುಕ್ತಿ ಇರಬಾರದು. ಐಡಿಯಾ ಅಥವಾ ವಿನೋದ ಚೆನ್ನಾಗಿದ್ದರೆ ಆಗಲಿಲ್ಲ, ಚಿತ್ರವೇ ವ್ಯಂಗ್ಯ'ಚಿತ್ರ'ದ ಜೀವಾಳವಾದ್ದರಿಂದ, ರೇಖೆಗಳ ಸತ್ವ ಮತ್ತು ಶೈಲಿಯಲ್ಲಿ ಸ್ವಂತಿಕೆ ಇರಬೇಕು. ಚಿತ್ರವೇ ನಮ್ಮನ್ನು ಸೆಳೆಯುವಂತಿರ ಬೇಕು. ತಕ್ಷಣ ವಿನೋದ ಹೊಳೆಯುವಂತಿರ ಬೇಕು.

ಈ ಹಿನ್ನಲೆಯಲ್ಲಿ, ವೈವಿಧ್ಯ ಮತ್ತು ಹೊಸತನಕ್ಕಾಗಿ ಪ್ರಯತ್ನ-ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹದಿನಾರು ಉತ್ತಮ ಚಿತ್ರಗಳನ್ನು ಸಮ ಬಹುಮಾನಕ್ಕಾಗಿ ಆಯ್ದಿದ್ದೇವೆ.


ಪ್ರೋತ್ಸಾಹ ನೀಡಲೆಂದು ಪರಿಗಣಿಸಿದ ಪ್ರಕಾಶ್ ಚಿಕ್ಕಪಾಳ್ಯ, ನೀರ್ನಳ್ಳಿ ಗಣಪತಿ, ವೆಂಕಟ್‌ಭಟ್ ಎಡನೀರು, ತಮ್ಮಣ್ಣ ಬೀಗಾರ, ವಿವೇಕ ಸಿದ್ದಾಪುರ, ಶರತ್‌ಕಿರಣ್, ಕೆ. ದೇವಪ್ರಸಾದ್, ದಿನೇಶ್ ಕುಕ್ಕುಜಡ್ಕ, ಶರದ ಕುಲಕರ್ಣಿ, ಕುಮುದಾ ದೇಶಪಾಂಡೆ, ಕೆ.ಜಿ. ರಾವ್, ಆರ್.ಜಿ. ಕಾಂಬಳೆ ಇವರುಗಳ ವ್ಯಂಗ್ಯಚಿತ್ರಗಳನ್ನು ನಮ್ಮ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುತ್ತೇವೆ.

ಈ ಚಿತ್ರಗಳು ನಿಮ್ಮ ಮೊಗವನ್ನು ಅರಳಿಸಲಿ. ನಗುವಿನ ಪತಂಗ ಮೊಗದಿಂದ ಮೊಗಕ್ಕೆ ಹಾರುತಿರಲಿ.

ಜಯಂತ ಕಾಯ್ಕಿಣಿ
ಎಸ್. ವಿ ಪದ್ಮನಾಭ್



ಶಶಿಧರ ಜಿ.ಎಚ್.



ಎಸ್.ಕೆ. ನಾಡಿಗ್




ಒಂದು ಪಾಪನ್ನ ಕರಕೊಂಡು ಬರೋಣ ಅಂತ ಆಸ್ಪತ್ರೆಗೆ ಹೋಗಿದ್ದೆವು. ಎರಡನೇ ಪಾಪು ಫ್ರೀ ಕೊಟ್ಟರು !



ಯತೀಶ್ ಎಲ್. ಶೆಟ್ಟಿಗಾರ್


ಪ್ಲೀಸ್ ... ವೆಸ್ಟರ್ನ್ ಮ್ಯೂಸಿಕ್ ಹಾಕು ಮಮ್ಮೀ...






ಹರಿಶ್ಚಂದ್ರ ಶೆಟ್ಟಿ





ರಾಮಕೃಷ್ಣ ಸಿದ್ರಪಾಲ






ಬಸವರಾಜ ಪಾಟೀಲ




ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳೊಂದಿಗೆ ಶಿಕ್ಷಕರು.




ಸು.ವಿ. ಮೂರ್ತಿ





ಉಮಾಪತಿ





ವಸಂತ ಹೊಸಪೆಟ್ಟು



ನೇರ ಪ್ರಸಾರ ಇನ್ನು ಮುಂದೆ ಕೆಲವೇ ಕ್ಷಣಗಳಲ್ಲಿ



ಗಂಗಾಧರ ಕೆ.ಇ.




ರೀ... ಜೋಪಾನಾ... ಫ್ಯಾನ್ ಮುರಿದ್ಹೋಗುತ್ತೆ...!



ಪಿ. ಹೇಮು

ಈ ಟೀಚರಿಗೆ ಪ್ರೇಮಪತ್ರ ಬರೀಬಾರದಿತ್ತು
ಕಾಗುಣಿತ ಸರಿಯಿಲ್ಲ ಅಂತ ವಾಪಸ್ಸು ಕಳ್ಸಿದ್ದಾಳೆ.






ಗೋವಿಂದು



ಗ.ಮ. ತುಂಬೆಮನೆ




ಮಧು ಯಕ್ಕೇರಿ



ಅಲ್ಲೋ ಪುಟ್ಟಾ. ನಿಮ್ಮ ಮನ್ಯಾಗ ಆನೆ ಏನಾರ... ಸಾಕೀರೇನು?...

ಮಂಜುನಾಥ್. ಎಚ್.ಆರ್.



ನಮ್ಮಣ್ಣನ ಮಗಳು...
ಅಮೇರಿಕದಿಂದ ಬಂದಿದ್ದಾಳೆ !




ಸತೀಶ್ ಶೃಂಗೇರಿ

ತಗಳ್ಳಿ... ಶಬ್ದಗಳನ್ನು ಒಡೆದು
ಕವನ ರಚಿಸಬೇಕು ಅಂದಿದ್ರಲ್ಲ...





ಲಕ್ಷ್ಮೀನಾರಾಯಣ ಎಸ್.ಎಚ್.



ಅಂಬಿಗ ನಾ ನಿನ್ನ ನಂಬಿದೆ...
ನನಗೀಗ ತಿಂಗಳು ತುಂಬಿದೆ... !



ಮೂರನೆಯ ಬಾರಿ ಫೋನ್ ಮಾಡಿದಾಗಲೂ ರಾಜು ಮೀಟಿಂಗ್‌ನಿಂದ ಹೊರಬಂದಿಲ್ಲ ಅಂತ ಅವನ ರಿಸೆಪ್ಷನಿಸ್ಟ್ ಹೇಳಿದ್ದಳು. ಅದಷ್ಟೇ ಸಾಲದೆಂಬಂತೆ 'ಆಗಲೇ ಎರಡು ಬಾರಿ ನೀವೇ ಅಲ್ಲವಾ ಫೋನ್ ಮಾಡಿದ್ದು' ಅಂತೆ ವಯ್ಯಾರದ ಧ್ವನಿಯಲ್ಲಿ ಉಲಿದಿದ್ದಳು. ಮೋಹನ್‌ಗೆ ಅವಮಾನವೆನ್ನಿಸಿತು. 'ಬೇಕಂತ್ಲೆ ಹಂಗೆ ಹೇಳಿಸ್ತಾ ಇದಾನೆ ಬೋಳಿಮಗ' ಅಂತ ಅನುಮಾನವಾಯ್ತು. ಬಹುಶಃ ಅವನ ಕಂಪನಿಯವರು ನನ್ನನ್ನು ಇಂಟರ್‌ವ್ಯೂಗೆ ಕರೆಯಲು ಒಪ್ಪಿರಲಿಕ್ಕಿಲ್ಲ. ಅದಕ್ಕೆ ಮುಖ ಮರೆಸ್ತಾ ಇದಾನೆ. ನೇರವಾಗಿ ಹಂಗಂತ ಹೇಳಿದ್ರೆ, ನಾನೇನು ಅವನನ್ನ ಇಕ್ಕಟ್ಟಿಗೆ ಸಿಗಿಸ್ತೀನ? ಅವನ ಕಂಪನಿಯಿಲ್ಲದಿದ್ದರೆ ಮತ್ತೊಂದು. ಈ ಬೆಂಗಳೂರಿನಲ್ಲಿ ಕಂಪ್ಯೂಟರ್ ಕಂಪನಿಗಳಿಗೇನು ಗತಿಯಿಲ್ಲವ? ಒಂದು ತಾಸಿನಿಂದ ಮೂರು ಬಾರಿ ಫೋನ್ ಮಾಡಿದರೂ ಅದೆಂತಹ ಮೀಟಿಂಗ್? ಇಲ್ಲ, ನಾನು ಮತ್ತೆ ಫೋನ್ ಮಾಡಲ್ಲ. ಬೇಕಿದ್ರೆ ಅವನೇ ಬಂದು ಹೇಳಲಿ.

ಈಗ ಆರು ತಿಂಗಳ ಕೆಳಗಾಗಿದ್ದರೆ ಇವನೇ ಆಫೀಸ್‌ಗೆ ಹೋಗಿ 'ಬಾರೋ ನನ್ನ ಮಗನೆ. ನಿನ್ನ ಗೆಳೆಯನಿಗಿಂತ ನಿನ್ನ ಆಫೀಸು ಮುಖ್ಯ ಆಯ್ತೇನೋ' ಅಂತ ಕತ್ತಿನ ಪಟ್ಟಿ ಹಿಡಿದುಕೊಂಡು ಕರೆದುಕೊಂಡು ಬರುತ್ತಿದ್ದ. ಆದರೆ ಈಗ ಆ ಧೈರ್ಯವಿಲ್ಲ. ಗೆಳೆಯನ ಮನೆ, ಕಾರು, ಮೊಬೈಲ್ ಫೋನ್, ಅವನ ಪಾಸ್‌ಪೋರ್ಟಿನಲ್ಲಿರುವ ವೀಸಾ, ಅವನ ಹೆಂಡತಿ... ಎಲ್ಲಾ ಸಣ್ಣಗೆ ನಡುಕವನ್ನು ಹುಟ್ಟಿಸಿ ಗೆಳೆತನದ ಭಾವವನ್ನು ಸದ್ದಿಲ್ಲದಂತೆ ಅಳಿಸಿ ಹಾಕಿ ಬಿಡುತ್ತವೆ. ಮಾಮೂಲಿಯಾಗಿ ಅವನೊಡನೆ ಮಾತನಾಡಲೂ ಹಿಂಸೆಯೆನ್ನಿಸುತ್ತದೆ. ಅವನು ತನ್ನ ಮಾತಿನಲ್ಲಿ ತನ್ನ ಶ್ರೀಮಂತಿಕೆಯನ್ನು ಎಲ್ಲಿಯಾದರೂ ತೋರಿಸಿಕೊಳ್ತಾ ಇದಾನಾ? ಅಂತ ಪರೀಕ್ಷೆ ಮಾಡೋದ್ರಲ್ಲಿ ಸ್ನೇಹದ ಮಾತುಗಳೇ ಸತ್ತುಹೋಗುತ್ತವೆ.

ಅಂಗಡಿಯವನಿಗೆ ಮೂರನೆಯ ಬಾರಿ ಎರಡು ರೂಪಾಯಿ ತೆತ್ತು ತನ್ನ ರೂಮಿಗೆ ಬಂದಾಗ ಹಸಿವೆಯೆನ್ನಿಸಿತು. ರೂಮಿನಲ್ಲಿ ಏನೂ ಇರಲಿಲ್ಲ. ಮತ್ತೆ ಹೋಟಲೆಂದರೆ ಒಂದು ಕಿಲೋಮೀಟರ್ ದೂರ ನಡೆಯಬೇಕು. ಸದ್ಯಕ್ಕೆ ಆ ಮನಸ್ಸಿರಲಿಲ್ಲ. 'ಸಾಯಲಿ' ಅಂದುಕೊಂಡು ಹಸಿವೆಯನ್ನು ಮರೆತು ಟಿ.ವಿ. ಹಾಕಿಕೊಂಡು ನೋಡಲಾರಂಭಿಸಿದ. ಒಂದೆರಡು ನಿಮಿಷಕ್ಕೆ ಅದೂ ಬೋರ್ ಹೊಡೆಯಿತು. ಅಥವಾ ಹಸಿವೆ ಜಾಸ್ತಿ ಆಯ್ತೋ? ಬೇಡ, ಸೀರಿಯಸ್ಸಾಗಿ ಓದೋಣ ಅನ್ನಿಸಿ ಮರುಕ್ಷಣವೇ ಕಂಪ್ಯೂಟರಿನ ದಪ್ಪ ದಪ್ಪ ಪುಸ್ತಕಗಳನ್ನು ಹಾಸಿಗೆಯ ಮೇಲೆ ಹರವಿಕೊಂಡು ಕುಳಿತುಕೊಂಡ. ಕಾಲೇಜು ಮುಗಿದು ನಾಲ್ಕು ವರ್ಷಗಳ ನಂತರ ಮತ್ತೆ ಹೀಗೆ ವಿದ್ಯಾರ್ಥಿಯಂತೆ ಪುಸ್ತಕ ಹಿಡಿದುಕೊಂಡು ಉರು ಹೊಡೆಯುವುದು ಎಂತಹ ಕರ್ಮ ಅನ್ನಿಸಲಾರಂಭಿಸಿತು. ಜೊತೆಗೆ ಹಾಸ್ಯಾಸ್ಪದವಾಗಿಯೂ ಕಾಣಲಾರಂಭಿಸಿತು.

ಒಂದೆರಡು ಪುಟ ಓದುವದರಲ್ಲಿ ಹೆಂಡತಿಯ ನೆನಪಾಯ್ತು. 'ಪಾಪ, ಒಳ್ಳೆಯವಳು. ನಾನು ಎಷ್ಟೆಲ್ಲಾ ತೊಂದರೆ ಕೊಡ್ತಾ ಇದೀನಿ' ಅನ್ನಿಸಲಿಕ್ಕೆ ಶುರುವಾಯ್ತು. ರಾತ್ರಿ ಫೋನ್ ಮಾಡಬೇಕು. ಆದರೆ ಫೋನ್ ಮಾಡಿದ ತಕ್ಷಣ 'ಕೆಲಸ ಸಿಕ್ತಾ?' ಅಂತ ಕೇಳಿಬಿಟ್ಟು ಇಕ್ಕಟ್ಟಿಗೆ ಸಿಗಿಸಿ ಬಿಡುತ್ತಾಳೆ. ಮತ್ತೆ ಮುಂದೆ ಮಾತನಾಡಬೇಕೆಂದೂ ಅನ್ನಿಸುವುದಿಲ್ಲ. 'ನೀವೇ ನಿಮ್ಮ ಕೈಯಾರೆ ಮಾಡಿಕೊಂಡಿದ್ದು' ಅಂತ ಅಳಲು ಶುರು ಮಾಡಿಬಿಡುತ್ತಾಳೆ. ಇವನಿಗೆ ತೀರಾ ರಗಳೆಯೆನ್ನಿಸಿಬಿಡುತ್ತದೆ. ಯಾವ ರೀತಿಯ ಸಮಾಧಾನದ ಮಾತುಗಳನ್ನು ಹೇಳಬೇಕೆಂಬುದೇ ತೋಚುವುದಿಲ್ಲ. ಮತ್ತೆ ಹದಿನೈದು ದಿನ ಅವಳಿಗೆ ಫೋನ್ ಮಾಡುವುದೂ ಬೇಡವೆಂದುಕೊಳ್ಳುತ್ತಾನೆ. ವಿಚಿತ್ರವೆಂದರೆ ರಾತ್ರಿಯ ಹೊತ್ತು ಅವಳ ದೇಹವೂ ತನ್ನನ್ನು ಕಾಡುವದಿಲ್ಲವಲ್ಲ ಎಂದು ಆಶ್ಚರ್ಯವಾಗುತ್ತದೆ. ಕನಸಿನಲ್ಲಿಯೂ ಅವಳಿಲ್ಲ. ಅವಳ ಬದಲು ಯಾವುದ್ಯಾವುದೋ ಕಂಪ್ಯೂಟರ್ ಪ್ರೋಗ್ರಾಂನ ಲಾಜಿಕ್ ಹೊಳೆಯದೆ ತಾನು ಕಂಗಾಲಾಗಿಬಿಟ್ಟು, ಭಯದಿಂದ ಎಚ್ಚರವಾಗಿಬಿಡುವಂತಹ ಭಯಂಕರ ಕನಸುಗಳು ಬೀಳುತ್ತವೆ.

ಒಂದರ್ಧ ಗಂಟೆಯಲ್ಲಿ ಮತ್ತೊಮ್ಮೆ ಹಸಿವೆ ಶುರುವಾಯ್ತು. ಈ ಬಾರಿ ತುಂಬಾ ಜಾಸ್ತಿಯೆನ್ನಿಸಿತು. ಗಡಿಯಾರದ ಕಡೆಗೆ ನೋಡಿದ. ಆಗಲೇ ಮಧ್ಯಾಹ್ನ ಮೂರು ಗಂಟೆಯ ಮೇಲಾಗಿತ್ತು. ಬೆಳಿಗ್ಗೆ ಒಂಬತ್ತಕ್ಕೆ ಇಡ್ಲಿ, ವಡೆ ತಿಂದಿದ್ದು. ಪ್ಯಾಂಟ್ ಏರಿಸಿಕೊಂಡು ಹೊರಟ. ದರ್ಶಿನಿಯಲ್ಲಿ ಊಟಕ್ಕೆ ಬದಲಾಗಿ ದೋಸೆ, ಮೊಸರನ್ನ ತಿಂದು ಕೈ ಒರೆಸಿಕೊಂಡ. ನಂತರ ಕಾಲು ತಾನೇತಾನಾಗಿ ಹತ್ತಿರದ ಸೈಬರ್ ಕೆಫೆಗೆ ಹೋಯ್ತು. ಈಗ ಬರೀ ಹತ್ತು ರೂಪಾಯಿಗೆ ಒಂದು ತಾಸು ಬ್ರೌಜ್ ಮಾಡಬಹುದೆಂಬ ದೊಡ್ಡ ಬೋರ್ಡ್ ಇತ್ತು. ಜೊತೆಗೆ ಯಾವುಯಾವುದೋ ಹೊಸ ಹೊಸ ಕೋರ್ಸ್‌ಗಳ ಜಾಹಿರಾತುಗಳನ್ನು ದೊಡ್ಡ ದೊಡ್ಡದಾಗಿ ನೇತುಹಾಕಿದ್ದರು. ಆ ಕೋರ್ಸ್ ಮಾಡಿದರೆ ಕೆಲಸ ಗ್ಯಾರಂಟಿ ಎಂಬ ಆಶ್ವಾಸನೆಯನ್ನೂ ಆ ಜಾಹಿರಾತಿನಲ್ಲಿ ಸೇರಿಸಿದ್ದರು. ಇವನು ಮೊನ್ನೆ ಮೊನ್ನೆ ತಾನೆ ಲಕ್ಷ ರೂಪಾಯಿ ಕೊಟ್ಟು ಮಾಡಿದ ಕೋರ್ಸ್ ಆಗಲೇ



ವಸುಧೇಂದ್ರ

ಕಣ್ತೆರೆದು ನೋಡಲ್ಲಿ ಗೆದ್ದಲು ಮರ ಕೆಡುವಲಿದೆ




ಹಳೆಯದಾಗಿರುವದರಿಂದ ಅಲ್ಲಿ ಅದರ ಬಗ್ಗೆ ಯಾವುದೇ ಮಾಹಿತಿಯಿರಲಿಲ್ಲ. ಅಲ್ಲಿ ದರ್ಶಿನಿಗಿಂತಲೂ ಹೆಚ್ಚಿಗೆ ಜನ ಮುಕ್ಕರಿದ್ದರು. ಹುಡುಗರು, ಮಕ್ಕಳು, ಹೆಂಗಸರು, ಯುವಕರು ಎಲ್ಲಾ ಸಿಂಬಳಕ್ಕೆ ಮುತ್ತಿದ ನೊಣಗಳಂತೆ ಅಲ್ಲಿ ಸೇರಿದ್ದರು. ಅದನ್ನು ಕಂಡು ಅಸಹ್ಯವೆನ್ನಿಸಿದರೂ, ತಾನೂ ಆ ಸಿಂಬಳಕ್ಕೆ ಮುತ್ತುವ ಮತ್ತೊಂದು ನೊಣದಂತೆ ಸೈಬರ್ ಕೆಫೆಯೊಳಗಡಿಯಿಟ್ಟ.


ಮೇಲ್ ಬಾಕ್ಸ್‌ಗೆ ಲಾಗಿನ್ ಆಗುವ ಮೊದಲು ಅವನಿಗರಿವಿಲ್ಲದಂತೆಯೇ ಅವನು ಮನಸ್ಸಿನಲ್ಲಿ 'ದೇವರೇ, ದೇವರೇ...' ಅಂತ ಬೇಡಿಕೊಳ್ಳಲು ಶುರು ಮಾಡಿಬಿಟ್ಟಿದ್ದ. ಈಗಾಗಲೇ ಸಂದರ್ಶನಕ್ಕೆ ಹೋಗಿ ಬಂದಿರುವ ಯಾವುದಾದರೂ ಕಂಪನಿಯಿಂದ 'ನೀವು ಆಯ್ಕೆ ಆಗಿದ್ದೀರಿ' ಎಂಬ ಈ-ಮೇಲ್ ಇದ್ದರೆ ಸಾಕು ಅಂತ ಒಂದೇ ಸಮನೆ ಮನಸ್ಸು ಹೇಳುತ್ತಿತ್ತು. ಹೃದಯ ಸ್ವಲ್ಪ ಜೋರಾಗಿಯೇ ಬಡಿದುಕೊಳ್ಳುತ್ತಿತ್ತು.

ನಿಜಕ್ಕೂ ಮೇಲ್ ಬಾಕ್ಸ್‌ನಲ್ಲಿ ಒಂದು ಈ-ಮೇಲ್ ಬಂದಿರುವ ಸುದ್ದಿಯಿತ್ತು. ಅದು ಯಾವುದೆಂದು ನೋಡುವದಕ್ಕೆ ಅವನು ಸ್ವಲ್ಪ ಹಿಂಜರಿದ. ಅವನ ಕೈ ನಡುಗುತ್ತಿತ್ತು. ಹೃದಯದ ಲಬ್‌ಢಬ್ ಸದ್ದನ್ನು ಬಚ್ಚಿಟ್ಟುಕೊಂಡು ನಿಧಾನಕ್ಕೆ ಆ ಈ-ಮೇಲನ್ನು ಓಪನ್ ಮಾಡಿದ. ಅಮೆರಿಕದ ಗೆಳೆಯನೊಬ್ಬ ಸರ್ದಾರ್ಜಿ ಜೋಕ್ಸ್ ಕಳುಹಿಸಿ, ತಾನು ತನ್ನ ಹೆಂಡತಿಯೊಡನೆ ನಯಾಗರ ಜಲಪಾತಕ್ಕೆ ಹೋದಾಗ ತೆಗೆದ ಫೋಟೋಗಳನ್ನು ಕಳುಹಿಸಿದ್ದ. ಫೋಟೋದಲ್ಲಿ ಅವಳ ಸೊಂಟದ ಸುತ್ತ ಕೈ ಹಾಕಿ ಅತ್ಯಂತ ಖುಷಿಯಲ್ಲಿ ಅವರಿಬ್ಬರೂ ಗಾಳಿಯಲ್ಲಿ ಕೈಯಾಡಿಸುತ್ತಿದ್ದ ಚಿತ್ರವಿತ್ತು. ಅವಳು ತೊಡೆ ಕಾಣಿಸುವ ಸ್ಕರ್ಟನ್ನು ತೊಟ್ಟಿದ್ದರೆ, ಅವನು ಬರೀ ಚಡ್ಡಿಯ ಮೇಲೆ ಅಂಗಿಯಿಲ್ಲದೆ ನಿಂತಿದ್ದ. ಹಿಂದೆ ಭೋರಿಕ್ಕುವ ನಯಾಗರ ಜಲಪಾತ. ಅವನಿಗೆ ಅಸೂಯೆಯಿಂದ ಸಂಕಟವಾಯ್ತು. 'ಬಾಸ್ಟರ್ಡ್ಸ್' ಅಂತ ಮನಸ್ಸಿನಲ್ಲಿಯೇ ಬೈಯ್ದುಕೊಂಡ. ಮತ್ತೆ ಮುಂದೆ ಓದಲಾಗಲಿಲ್ಲ. ಕಣ್ಣುಗಳು ತೇವಗೊಂಡವು. ತಾನು ಹೀಗೆ ಈ ದರಿದ್ರ ಗೆಳೆಯನ ಈ-ಮೇಲ್ ಓದುವಾಗಲೇ ಮತ್ತೊಂದು ಹೊಸದಾದ, ತನಗೆ ಕೆಲಸ ಸಿಕ್ಕಿರುವ ಈ-ಮೇಲ್ ಬಂದಿದೆಯೇನೋ ಎಂಬ ದೂರದ ಆಸೆಯಿಂದ ಕಂಪ್ಯೂಟರ್‌ಗೆ ಚೆಕ್ ಮಾಡಲು ಹೇಳಿದ. ಕಂಪ್ಯೂಟರ್ ಅಮಾಯಕತನದಿಂದ ಇಲ್ಲವೆಂದಿತು. ಇನ್ನು ತಾನು ಅಲ್ಲಿಯೇ ಹೆಚ್ಚು ಹೊತ್ತು ಕುಳಿತಿದ್ದರೆ ಅತ್ತುಬಿಡುತ್ತೇನೆಂಬ ಭಯದಿಂದ ಅವನು ಸೈಬರ್ ಕೆಫೆಯಲ್ಲಿ ಹತ್ತು ರೂಪಾಯಿ ತೆತ್ತು ಹೊರಬಂದ.

ರೂಮಿಗೆ ಹೋಗುವ ದಾರಿಯಲ್ಲಿಯೇ ರಾಜುವಿನ ಮನೆ. ಅವನ ಸ್ವಂತ ಮನೆ. ಮನೆಗೇನಾದರೂ ಫೋನ್ ಮಾಡಿರಬಹುದಾ ಅಂತ ಅನುಮಾನವಾಯ್ತು. ರೂಮಿನಲ್ಲಿ ಮತ್ತೆ ತಾನಾಗಿಯೇ ರಾಜುವಿಗೆ ಫೋನ್ ಮಾಡುವದಿಲ್ಲವೆಂದು ಮಾಡಿದ್ದ ನಿರ್ಧಾರ ಹಿಮದಂತೆ ಕರಗಿಹೋಗಿ, ಅವನು ಮನೆಯಂಗಳದಲ್ಲಿ ಕಾಲಿಟ್ಟ. ಕಾಲಿಂಗ್ ಬೆಲ್ ಒತ್ತುವುದಕ್ಕೆ ಮುಂಚೆ, ಮತ್ತೆ ಸುಮಳ ಮುಖವನ್ನು ನೋಡಿದರೆ ಆತ್ಮಾನುಕಂಪಕ್ಕೆ ಇಳಿದುಬಿಡುತ್ತೇನೆಂದು ಹೆದರಿಕೆಯಾಯ್ತು. ಅವಳನ್ನು ಎದುರಿಸುವುದೇ ಬೇಡ ಅನ್ನಿಸಿತು. ಹಿಂತಿರುಗಿಬಿಟ್ಟ. ಆದರೆ ಗೇಟ್ ಬಳಿ ಬರುವ ಹೊತ್ತಿಗೆ ''ಯಾರದು'' ಅಂತ ಸುಮಳೇ ಬಾಗಿಲು ತೆಗೆದು, ''ನೀವಾ? ಬನ್ನಿ, ಬನ್ನಿ, ಒಳಗೆ ಬರದೆ ಹಾಗೇ



ಹೋಗ್ತಾ ಇದೀರಲ್ಲ. ಬನ್ನಿ, ಬನ್ನಿ'' ಅಂತ ಕರೆದುಬಿಟ್ಟಳು. ಒಂದೆರಡು ವರ್ಷದ ಕೆಳಗೆ ತನ್ನನ್ನು ''ಮೋನಿ, ಮೋನಿ'' ಎಂದು ಕರೆಯುತ್ತಿದ್ದವಳು ಎಷ್ಟೊಂದು ಸಲೀಸಾಗಿ ಬಹುವಚನದಲ್ಲಿ, ಯಾರೋ ಅಪರಿಚಿತರನ್ನು ಮಾತನಾಡಿಸುವಂತೆ ಮಾತನಾಡುತ್ತಾಳಲ್ಲ ಅಂತ ಅವನಿಗೆ ಸಿಟ್ಟು ಬಂತು. ಆದರೆ ಅದನ್ನು ತೋರಿಸುವ ಶಕ್ತಿಯೇ ಇಲ್ಲದಂತೆ ''ಹೆ, ಹೆ, ಹೆ'' ಅಂತ ಪೆಕರನಂತೆ ನಕ್ಕು ''ಏನಿಲ್ಲ, ಏನಿಲ್ಲ. ಸುಮ್ಮನೆ ಈ ಕಡೆಯಿಂದ ಹೋಗ್ತಾ ಇದ್ದೆ. ಹಂಗೆ ರಾಜು ಏನಾದರೂ ಫೋನ್ ಮಾಡಿದ್ನಾ ಅಂತ ವಿಚಾರಿಸೋಣ ಅಂತ ಬಂದೆ. ಮತ್ತೆ ನೀವು ನಿದ್ದೆ ಮಾಡ್ತಾ ಇರ್ತೀರೇನೋ ಅಂತ... ಏನೂ ಅರ್ಜೆಂಟ್ ಇಲ್ಲ. ಆಮೇಲಕ್ಕೆ ಬೇಕಂದ್ರೆ ಬರ್ತೀನಿ'' ಅಂತೆಲ್ಲಾ ಅವನೂ ಅವಳನ್ನು, ತನ್ನ ಪ್ರೀತಿಯ ಸುಮಿಯನ್ನು, ಬಹುವಚನದಲ್ಲಿ ಮಾತನಾಡಿಸಿದ. ''ಒಳಗೆ ಬನ್ನಿ. ಕಾಫಿ ಕುಡಿದು ಹೋಗುವಿರಂತೆ'' ಅಂತ ಆಹ್ವಾನವಿತ್ತಳು. ''ಆಗಲೇ ನಾನು ಕುಡಿದಾಯ್ತು'' ಅಂತ ಅನಾವಶ್ಯಕವಾಗಿ ಸುಳ್ಳು ಹೇಳಿದ. ಅದು ಅವಳಿಗೆ ಗೊತ್ತಾಗಿದೆಯೆಂಬಂತೆ ''ಇರಲಿ ಬನ್ನಿ, ಇನ್ನೊಂದು ಸರ್ತಿ ಕುಡಿವಿರಂತೆ'' ಅಂತಂದು, ಅವನು ಒಳಗೆ ಬಂದೇ ಬರುತ್ತಾನೆಂಬ ಗ್ಯಾರಂಟಿಯಲ್ಲಿ ಅವನ ಕಡೆ ನೋಡದೆಯೇ ಒಳಗೆ ಹೋಗಿಬಿಟ್ಟಳು. ಅವಳ ಮಾತು ಆಜ್ಞೆಯೆನ್ನುವಂತೆ ಅವನವಳನ್ನು ಹಿಂಬಾಲಿಸಿದ.



ಸುಮ ಬೇರೆ ಯಾರೂ ಅಲ್ಲ. ಮೋಹನನ ಪಕ್ಕದ ಮನೆಯ ಹುಡುಗಿ. ಮೋಹನನೊಡನೆ ಲಂಗ ಚೋಳಿ ಹಾಕಿಕೊಂಡು ಆಟ ಆಡಿದ ಹುಡುಗಿ. ಅವನೊಡನೆ ತನ್ನ ಜಿಂಕೆಯ ಕಣ್ಣುಗಳನ್ನು ಗಳಗಳನೆ ಆಡಿಸುತ್ತ ಜಗಳವಾಡಿದ ಹುಡುಗಿ. ಅವನ ಪಿಸು ಮಾತುಗಳ ಬಿಸಿಗೆ ಕೆಂಪಗಾಗಿ, ರಾತ್ರಿಯೆಲ್ಲಾ ನಿದ್ದೆ ಕೆಡಿಸಿಕೊಂಡು, ಮರುದಿನ ಅವನೊಡನೆ ಏನೇನೋ ಅರ್ಥ ಮೂಡುವಂತಹ ಮಾತನಾಡಿ, ಅವನ ಹೃದಯಕ್ಕೆ ಕಿಚ್ಚಿಟ್ಟು, ಅವನ ರಾತ್ರಿಯ ನಿದ್ದೆಯನ್ನು ಕದ್ದುಕೊಂಡು ಹೋದ ಪೋರಿ. ಈಗಲೂ ಗಂಡಿ ನರಸಿಂಹ ಸ್ವಾಮಿಯ ಗುಡಿಯ ಬಳಿ ಹರಿಯುವ ಹಳ್ಳದ ದೊಡ್ಡ ದೊಡ್ಡ ಕಪ್ಪು ಕಲ್ಲುಗಳಿಗೆ ಕಿವಿಯಿಟ್ಟರೆ ಅವನಿಗೆ ಅವಳ ಪಿಸು ಮಾತುಗಳು ಕೇಳಿಸುತ್ತವೆ. ತಾವು ಖುಷಿಯಲ್ಲಿ ಚಪ್ಪಟೆ ಕಲ್ಲುಗಳನ್ನು ನೀರಿನಲ್ಲಿ ಒಗೆದಾಗ ಅವು ಮೂಡಿಸಿದ ಅಲೆಅಲೆಗಳು ಇನ್ನೂ ಹಾಗೇ ಇವೆಯೆಂಬ ಭಾವನೆ ಅವನಿಗೆ ಬರುತ್ತದೆ. ತಾನು ಸೆಮಿಸ್ಟರ್ ರಜೆಗಳಲ್ಲಿ ಊರಿಗೆ ಬಂದಾಗ ಕದ್ದು ಮುಚ್ಚಿ ತಂದುಕೊಟ್ಟ ಉಡುಗೊರೆಗಳನ್ನು ಅವಳು ಇನ್ನೂ ಹಾಗೆ ಬಚ್ಚಿಟ್ಟುಕೊಂಡಿದ್ದಾಳೆಯೋ? ಇರಲಿಕ್ಕಿಲ್ಲ. ತನ್ನನ್ನು ಬನ್ನಿ, ಹೋಗಿ ಎಂದು ಮಾತನಾಡಿಸುವ ಸುಮಿ ಎಂದೋ ಅವನ್ನು ತಿಪ್ಪೆಗೆ ಎಸೆದಿರಬೇಕು.

ಎಂತಹ ಸುಂದರ ದಿನಗಳು ಅವಾಗಿದ್ದವು. ಜಗತ್ತಿನ ಎಲ್ಲಾ ವಸ್ತುಗಳಲ್ಲೂ ಬಣ್ಣಗಳನ್ನು ಕಾಣುವ ವಯಸ್ಸು. ಇಂಜಿನಿಯರಿಂಗ್ ಕಡೆಯ ವರ್ಷ ಮುಗಿದ ತಕ್ಷಣ ಅವಳನ್ನು ಮದುವೆಯಾಗಬೇಕೆಂಬ ಆಸೆಯಿತ್ತು. ಆದರೆ ತಾನಾಗಿಯೇ ರಾಜುವನ್ನು ಊರಿಗೆ ಬಾರೆಂದು ಆಹ್ವಾನಿಸಿ ಎಲ್ಲಾ ಹಾಳು ಮಾಡಿಕೊಂಡುಬಿಟ್ಟೆಯೆಂದು ಮೋಹನನಿಗೆ ಸಂಕಟವಾಗುತ್ತದೆ. ಅದೇ ತಾನೆ ಯಾವುದೋ ಮಲ್ಟಿನ್ಯಾಷನಲ್‌ನಲ್ಲಿ ಕೆಲಸ ಸಿಕ್ಕ ತನ್ನ ಗೆಳೆಯ, ಅಮೆರಿಕಾಕ್ಕೂ ಹೋಗುತ್ತಿದ್ದಾನೆ ಎಂಬುದನ್ನು ಜಂಭ ಕೊಚ್ಚಿಕೊಳ್ಳುವಂತೆ ಅವನನ್ನು ತನ್ನ ಊರಿಗೆ ಆಹ್ವಾನಿಸಿ, ಎಲ್ಲರಿಗೂ ಹೆಮ್ಮೆಯಿಂದ ಪರಿಚಯ ಮಾಡಿಸಿ ಏನೋ ಸಾಧಿಸಿದವನಂತೆ ಮೆರೆಯುವಾಗಲೇ ತನಗೇ ಗೊತ್ತಾಗದಂತೆ ರಾಜು ತನ್ನ ಸುಮಳನ್ನು ಕಸಿದುಕೊಂಡುಬಿಟ್ಟಿದ್ದ. ತನಗೊಂದಿಷ್ಟು ಸುಳಿವು ಕೊಡದೆ, ನೇರವಾಗಿ ಅವಳ ಅಪ್ಪ-ಅಮ್ಮನ ಬಳಿ ಹೋಗಿ, ತಾನೇ ತನ್ನ ಇಚ್ಛೆಯನ್ನು ತಿಳಿಸಿ ಅವರನ್ನು ಒಪ್ಪಿಸಿಬಿಟ್ಟಿದ್ದ. ಮರುದಿನ ಗಂಡಿ ನರಸಿಂಹಸ್ವಾಮಿ ಬೆಟ್ಟಕ್ಕೆ ಹೋದಾಗ 'ನಿಂಗೊಂದು ಸರ್‌ಪ್ರೈಜ್ ಹೇಳ್ತೀನಿ' ಅಂತ ಶುರುಮಾಡಿ, 'ನಿಮ್ಮ ಊರಿನ ಹುಡಿಗಿ ನನ್ನ ಹೆಂಡತಿ ಆಗ್ತಾಳೋ' ಅಂತ ಖುಷಿಯಿಂದ ಕುಣಿದುಬಿಟ್ಟಿದ್ದ. ಗಲಿಬಿಲಿಗೊಂಡ ಇವನು 'ಸುಮ ಒಪ್ಪಂಗಿಲ್ಲ. ಬರೀ ಜಂಭ ಕೊಚ್ಚಬೇಡ' ಅಂತ ಕೋಪದಿಂದಲೇ ಹೇಳಿದಾಗ 'ಲೋ, ಅಮೇರಿಕಾಕ್ಕೆ ಹೋಗೋ ಗಂಡು ಕಣೋ... ಡಾಲರ್‌ನಲ್ಲಿ ಹಣ ಎಣಿಸ್ತೀನಿ... ಯಾವ ಹುಡುಗಿನಾದ್ರೂ ಒಪ್ಪಿಯೇ ಒಪ್ತಾಳೆ... ನಿನ್ನೆಯೇ ಅವಳು ಒಪ್ಪಿಯಾಯ್ತು' ಅಂತ ಹೇಳಿ ಯಕ್ಷಗಾನದ ಪಾತ್ರದಂತೆ ಖುಷಿಯಿಂದ ಕುಪ್ಪಳಿಸಿ ಕುಪ್ಪಳಿಸಿ ಕುಣಿದಿದ್ದ.

ಮುಂದೆಲ್ಲಾ ಅತ್ಯಂತ ಸರಾಗವಾಗಿ ನಡೆದುಹೋಗಿತ್ತು. ಸುಮಿಯ ಅಪ್ಪ-ಅಮ್ಮ ಇವನ ಬಳಿ ಬಂದು 'ಹುಡುಗ ಹೇಗೆಂದು' ಕೇಳಿದ್ದರು. ವರದಕ್ಷಿಣೆಯ ರಗಳೆಯಿಲ್ಲ. ಮದುವೆಯಲ್ಲಿ ಜಗಳವೆಂಬುದಿಲ್ಲ. 'ಏನು ಅದೃಷ್ಟಾರೀ... ಮದುವೆ ಆದ ತಕ್ಷಣ ಅಮೆರಿಕಾಕ್ಕೆ ಹೋಗ್ತಾಳೆ' ಅಂತ ಜನರ ಹೊಗಳಿಕೆಯ ನಡುವೆ ವಿಜೃಂಭಣೆಯಿಂದ ಮದುವೆ ನಡೆದುಹೋಗಿತ್ತು. ಸೊರಗಿದ್ದು ಇವನೇ! ತನ್ನ ಕಣ್ಣು ತಪ್ಪಿಸಿ ಓಡಾಡುತ್ತಿದ್ದ ಅವಳನ್ನು ಕಷ್ಟಪಟ್ಟು ರಾತ್ರಿ ಎಂಜಲೆಲೆಯನ್ನು ಬಿಸಾಡುವಾಗ ಸಂಧಿಸಿ 'ಹೀಗ್ಯಾಕೆ ಮಾಡಿದೆ?' ಅಂತ ಕೇಳಿದ್ದಕ್ಕೆ 'ನಾನೇನು ಮಾಡಿದೆ? ನಿನ್ನ ಮೇಲೆ ನಂಗೆ ಯಾವತ್ತೂ ಅಂತಹ ಭಾವನೆಯಿರಲಿಲ್ಲ. ನೀನೇ ಏನೇನೋ ಅಪಾರ್ಥ ಕಲ್ಪಿಸಿಕೊಂಡಿದೀಯ ಅಷ್ಟೇ. ನೀನಾಗಲೀ ಅಥವಾ ನಾನಾಗಲೀ ಯಾವತ್ತೂ ಒಬ್ಬರನ್ನೊಬ್ಬರು ಪ್ರೀತಿಸ್ತೀವಿ ಅಂತ ಹೇಳೇ ಇರಲಿಲ್ಲ' ಅಂತ ಸಲೀಸಾಗಿ ಹೇಳಿ, ಉಂಡುಬಿಟ್ಟ ಎಂಜಲೆಲೆಗಳನ್ನು ತಿಪ್ಪೆಗೆ ಎಸೆದು ಕೈ ಜಾಡಿಸಿಬಿಟ್ಟಳು. 'ಪ್ರೀತಿಯನ್ನೋದನ್ನ ಒಬ್ಬರಿಗೊಬ್ಬರು ಬಾಯಿಬಿಟ್ಟು ಹೇಳಿದಾಗಲೇ ಗೊತ್ತಾಗೋದೇನು? ವ್ಯಕ್ತಿಯ ಹಾವ-ಭಾವ, ನಡತೆ, ಮಾತಿನ ರೀತಿ, ಮುಖದಲ್ಲಿನ ನಗು, ನಡೆಯಲ್ಲಿನ ಖುಷಿ, ಆಸೆಯಿಂದ ತಂದುಕೊಟ್ಟ ಕಾಣಿಕೆಗಳು ನಿಂಗೆ ಏನೂ ಹೇಳಲಿಲ್ಲೇನು?' ಅಂತ ಭಾವೋದ್ವೇಗದಿಂದ ಮಾತನಾಡಿದಾಗ 'ನೀನು ಏನು ಮಾತನಾಡ್ತಿದೀಯೋ ನಂಗೆ ಅರ್ಥಾನೇ ಆಗವಲ್ದು. ನಂಗ್ಯಾಕೋ ಭಯ ಆಗ್ತಾ ಅದೆ' ಅಂತ ಹೇಳಿ ಸರಸರನೆ ಆ ಕತ್ತಲಿನಲ್ಲಿ ಅವನನ್ನು ಬಿಟ್ಟು ಮನೆಯ ಕಡೆ ನಡೆದುಬಿಟ್ಟಿದ್ದಳು.

ಮದುವೆಯಾದ ರಾತ್ರಿ ಅವಳನ್ನು ಆರತಿ ಬೆಳಗಿ ಶೋಭಾನದ ಕೋಣೆಗೆ ಕಳುಹಿಸಿದ ನಂತರ ತಮ್ಮ ಮನೆಗೆ ವಾಪಾಸಾದ ಮೋಹನನ ಅಮ್ಮನಿಗೆ ಕೋಣೆಯಲ್ಲಿ ಒಬ್ಬಂಟಿಯಾಗಿ ಏನೋ ಪುಸ್ತಕವನ್ನು ಕಣ್ಣ ಮುಂದೆ



ಹಿಡಿದುಕೊಂಡು ಓದುತ್ತಿದ್ದ ಮಗನನ್ನು ಕಂಡು ಸಂಕಟವಾಗಿತ್ತು. ನಿಧಾನಕ್ಕೆ ಅವನ ಬಳಿ ಹೋಗಿ, ಅವನ ತಲೆಯನ್ನು ಸವರಿ, 'ಬೇಜಾರು ಮಾಡ್ಕೊಂಡಿಯೇನೋ?' ಅಂದಾಗ ತಡೆದುಕೊಳ್ಳಲಾರದೆ ಅತ್ತುಬಿಟ್ಟಿದ್ದ. ಅವನನ್ನು ಅಪ್ಪಿಕೊಂಡು, ಬೆನ್ನನ್ನು ಸವರಿ ಸಮಾಧಾನ ಮಾಡುತ್ತಾ 'ಹೋಗ್ಲಿ ಬಿಡು. ಡಾಲರ್ ಆಸೆಗೆ ರೂಪಾಯಿನ್ನ ಕಾಲಿನಿಂದ ಒದ್ದು ಹೋಗ್ಯಾಳೆ. ಆ ಹುಚ್ಚು ಲವಡಿ ಆಸೇನ್ನ ಬಿಟ್ಟು ಬಿಡು. ಅವಳ ಅಪ್ಪನಂಥಾ ಹುಡುಗಿಯನ್ನು ತಂದು ನಿಂಗೆ ಮದುವೆ ಮಾಡ್ತೀನಿ' ಅಂತ ಹೇಳಿದ್ದಳು. ಬಣ್ಣ, ರೂಪ, ಎತ್ತರ, ದಪ್ಪ, ಚೆಲುವು - ಯಾವುದರಲ್ಲಿಯೂ ತನ್ನ ಮಗನಿಗೆ ಸರಿಸಾಟಿಯಲ್ಲದ ಆ ಬೆಂಗಳೂರಿನ ಹುಡುಗ ಅದೆಷ್ಟು ಸಲೀಸಾಗಿ ಅಮೆರಿಕಾದ ಮುದ್ರೆಯಿಂದ ಸುಂದರ ಹುಡುಗಿಯ ಮನಸ್ಸನ್ನು ಬದಲಾಯಿಸಿ ಕದ್ದುಕೊಂಡು ಹೋಗಿಬಿಟ್ಟ ಅಂತ ಆಕೆಗೆ ನೋವಾಗಿತ್ತು. 'ನಿಂಗೂ ಅಮೆರಿಕಾಕ್ಕೆ ಹೋಗ್ಲಿಕ್ಕೆ ಆಗಲ್ಲೇನೋ' ಅಂತ ಕೇಳಿದ್ದರು. 'ನಾನು ಓದಿರೋದು ಸಿವಿಲ್. ಈ ದೇಶದಲ್ಲಿ ಕೆಲಸ ಸಿಕ್ಕರೆ ಸಾಕು ಅಂತ ಅನ್ನಿಸ್ತಾ ಅದೆ. ಇಂಜಿನಿಯರಿಂಗ್ ಸೇರೋ ಹೊಸತು ಅಪ್ಪ ಬೇಡ ಅಂದರೂ ಬಲವಂತದಿಂದ ನನ್ನ ಸಿವಿಲ್‌ಗೆ ಸೇರಿಸಿಬಿಟ್ಟ. ನಾನು ಕಂಪ್ಯೂಟರ್ಸ್ ಓದಿದ್ರೆ ಹೀಗೆಲ್ಲಾ ಆಗ್ತಾನೇ ಇರಲಿಲ್ಲ. ಆಗ ನಂಗೆ ಬುದ್ಧಿ ಮಾತು ಹೇಳೋರು ಯಾರೂ ಇರಲೇ ಇಲ್ಲ' ಅಂತ ಗೋಳಾಡಿದ್ದ.

ಒಂದು ವರ್ಷ ಕಂಡ ಕಂಡ ಸಂದರ್ಶನಗಳನ್ನು ಎದುರಿಸಿ, ಯಾರ ಯಾರದೋ ಮುಲಾಜುಗಳನ್ನು ಹಚ್ಚಿ, ಯಾರು ಯಾರೋ ಸರಕಾರಿ ಅಧಿಕಾರಿಗಳ ಕೈ ಬೆಚ್ಚಗೆ ಮಾಡಿದ ನಂತರ ಒಂದು ಚಿಕ್ಕ ಕೆಲಸ ಅವನಿಗೆ ಸಿಕ್ಕಿತ್ತು. ಅಷ್ಟಕ್ಕೇ ಕಾಯುತ್ತಿದ್ದವಳಂತೆ ಅವನಮ್ಮ ಹುಡುಕಿ, ಹುಡುಕಿ ಸುಂದರ ಹುಡುಗಿಯೊಬ್ಬಳನ್ನು ಆರಿಸಿ ಮದುವೆ ಮಾಡಿದ್ದಳು.

ಅವಳ ಸಾನಿಧ್ಯದಲ್ಲಿ ಒಂದೆರಡು ವರ್ಷದಲ್ಲಿಯೇ ಸುಮಿಯನ್ನು ಸ್ವಲ್ಪ ಸ್ವಲ್ಪವಾಗಿಯೇ ಮರೆಯುತ್ತಿರುವಾಗಲೇ ಅವನು, ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಹೋದಾಗ ರಾಜುವನ್ನು ಭೇಟಿಯಾಗಿದ್ದ.

ದಂಗುಬಡಿದು ಹೋಗಿದ್ದ!


ರಾಜುವಿನ ಹದಿನೆಂಟು ಲಕ್ಷದ ಸ್ವಂತ ಮನೆ, ಕಂಪನಿ ಕೊಟ್ಟಿರುವ ಹೊಸ ಕಾರು, ಮೊಬೈಲ್ ಫೋನ್, ಝಗಝಗನೆ ಹೊಳೆಯುವ ಅವನ ಆಫೀಸು, ಆಫೀಸಿನಲ್ಲಿಯ ತಣ್ಣನೆಯ ಹವ, ಚಂದ ಚಂದದ ಹುಡುಗಿಯರು, ಮಾತಿಗೊಮ್ಮೆ ಅಮೆರಿಕ-ಇಂಗ್ಲೆಂಡ್ ಎಂದು ತಿರುಗುವ ರಾಜು, ಕೋಟಿ ರೂಪಾಯಿಯಷ್ಟು ಬೆಲೆ ಬಾಳುವ ಕಂಪನಿಯ ಶೇರುಗಳು, ಯಾವುದೇ ಎಗ್ಗಿಲ್ಲದಂತೆ ಹಣ ಖರ್ಚು ಮಾಡುವ ಗತ್ತು, ಗೆಳೆಯ ಬಂದಿದ್ದಾನೆಂಬ ಖುಷಿಗೆ ಎರಡು ಸಾವಿರ ರೂಪಾಯಿ ಬೆಲೆಯ ಫಾರಿನ್ ವಿಸ್ಕಿ, ವಾರಕ್ಕೆ ಐದೇ ದಿನದ ಕೆಲಸ, ವರ್ಷಕ್ಕೆ ಒಂದೆರಡು ಲಕ್ಷ ಇನ್‌ಕ್ರಿಮೆಂಟ್... ಮೋಹನ ಕಂಗಾಲಾಗಿದ್ದ. ಗೆಳೆಯನೊಡನೆ ಸ್ನೇಹದಿಂದಿರುವುದೂ ಅಸಾಧ್ಯವಾಗಿತ್ತು. ಬೆಂಗಳೂರು, ಹೊಸದೊಂದು ಜಗತ್ತನ್ನೇ ಅವನ ಕಣ್ಣ ಮುಂದೆ ಅನಾವರಣ ಮಾಡಿತ್ತು. ಎಲ್ಲಿ ನೋಡಿದರಲ್ಲಿ ಬರೀ ಕಂಪ್ಯೂಟರ್‌ಗೆ ಸಂಬಂಧಿಸಿದ ಮಾಹಿತಿಯೇ ಕಂಡುಬರುತ್ತಿತ್ತು. ಪ್ರತಿಯೊಬ್ಬರೂ ಬರೀ ಅದರ ವಿಷಯವಾಗಿಯೇ ಮಾತನಾಡುತ್ತಿದ್ದಾರೆಂದನಿಸಿತ್ತು. ವೃತ್ತಪತ್ರಿಕೆಗಳಲ್ಲಿ ಉದ್ಯೋಗದರ್ಶಿಯಲ್ಲಿ ಕೇವಲ ಕಂಪ್ಯೂಟರ್ ಉದ್ಯೋಗಗಳೇ ಕಣ್ಣಿಗೆ ರಾಚುವಂತಿದ್ದವು. ತನ್ನ ಅನುಭವಕ್ಕೆ ಸಲ್ಲುವಂತಹ ಒಂದೂ ಜಾಹಿರಾತು ಅದರಲ್ಲಿರುತ್ತಿರಲಿಲ್ಲ. ಯಾವ ಮೂಲೆಗೆ ಹೋದರೂ ಕಾಣುವ ಸೈಬರ್ ಕೆಫೆಗಳು, ಊರಿನ ಬೀದಿ ಬೀದಿಗಳಲ್ಲಿ ಕಂಡುಬರುವ ಡಾಟ್ ಕಾಂ ಜಾಹಿರಾತುಗಳು, ಕಂಪ್ಯೂಟರ್ ವಿದ್ಯೆಯನ್ನು ಕಲಿಸಿಕೊಡುವ ಸಂಸ್ಥೆಗಳ ಕೂಗಾಟ... ಎಲ್ಲವೂ ಮೋಹನನ್ನು ಕೀಳರಿಮೆಗೆ ತಳ್ಳಲಾರಂಭಿಸಿದವು. ವಾರಕ್ಕೆ ಆರು ದಿನ, ಆ ಬಳ್ಳಾರಿಯ ಬಿಸಿಲಿನಲ್ಲಿ ಕೂಲಿಗಳೊಡನೆ ಜಗಳವಾಡುತ್ತಾ, ಮ್ಯಾನೇಜರರಿಂದ ತೀರಾ ಹೀನಾಯಮಾನವಾಗಿ ಬೈಯಿಸಿಕೊಳ್ಳುತ್ತಾ ಜುಜುಬಿ ಎಂಟು ಸಾವಿರದ ಸಂಬಳಕ್ಕೆ ಏನೆಲ್ಲಾ ಕಷ್ಟಪಡುವ ತನ್ನ ಉದ್ಯೋಗ ಅತ್ಯಂತ ಕಳಾಹೀನವೆನ್ನಿಸಿಬಿಟ್ಟಿತು. ಯಾವುದೇ ಬಣ್ಣವಿಲ್ಲದೆ ಬರೀ ಬೆವರು, ಮಣ್ಣಿನೊಡನೆ ಗುದ್ದಾಡುವ ತನ್ನ ಕಪ್ಪು-ಬಿಳುಪು ಜೀವನ ಜುಗುಪ್ಸೆಯನ್ನು ತಂದಿತು. ಅದಿಷ್ಟೇ ಸಾಲದೆಂಬಂತೆ, ಅವನ ಮತ್ತೊಬ್ಬ ಕಾಲೇಜಿನ ಗೆಳೆಯನೊಬ್ಬ-ಸಿವಿಲ್‌ನಲ್ಲಿಯೇ ಓದಿದವನು, ಇವನಿಗಿಂತಲೂ ತುಂಬಾ ತುಂಬಾ ಕಡಿಮೆ ಅಂಕಗಳನ್ನು ತೆಗೆದು ಪಾಸಾದವನು-ಸಿಕ್ಕು, ತಾನು ಈಗ ಸಾಫ್ಟ್‌ವೇರ್ ಕೆಲಸಕ್ಕೆ ಸೇರಿರುವದಾಗಿಯೂ, ಹಲವಾರು ಕೋರ್ಸ್‌ಗಳನ್ನು ಮಾಡಿದ್ದರಿಂದ ಅದು ಸಾಧ್ಯವಾಯಿತೆಂದೂ, ಈಗ ತನ್ನ ಸಂಬಳ ಹದಿನೆಂಟು ಸಾವಿರವೆಂದೂ ಹೇಳಿ 'ತುಂಬಾ ಸುಲಭ. ಯಾರಾದ್ರೂ ಕೋರ್ಸ್ ಮಾಡಬಹುದು. ಸ್ವಲ್ಪ ಮೊದಲಿಗೆ ದುಡ್ಡು ಜೋಡಿಸಿದರೆ ಸಾಕು. ಆಮೇಲಕ್ಕೆ ಒಂದೆರಡು ವರ್ಷಕ್ಕೆಲ್ಲಾ ಡಾಲರ್ಸ್‌ನಲ್ಲಿ ತಿರುಗಿ ಬರ್ತದೆ' ಅಂತಂದು ಮೋಹನನ ನೆಮ್ಮದಿಯನ್ನು ಹಾಳುಗೆಡವಿ ಹೋಗಿದ್ದ.

ಮತ್ತೆ ಊರಿಗೆ ವಾಪಾಸ್ಸಾದಾಗ ಮೋಹನ ಮೊದಲಿನಂತಿರಲಿಲ್ಲ. ತನ್ನೆಲ್ಲ ಆಫೀಸಿನ ಸಹಕರ್ಮಿಗಳ ಜೊತೆ ಬರೀ ತನ್ನ ಗೆಳೆಯನ ಸಂಪಾದನೆ, ಅವನ ಜೀವನ ರೀತಿಗಳನ್ನು ಕುರಿತೇ ಮಾತನಾಡುತ್ತಾ 'ಲೈಫ್ ಅಂದ್ರೆ, ಅದು ರೀ' ಅಂತ ನಿಟ್ಟುಸಿರು ಬಿಡಲಾರಂಭಿಸಿದ. ತನ್ನಂತೆಯೇ ಸಿವಿಲ್ ಇಂಜಿನಿಯರಿಂಗ್ ಓದಿದ ಅತ್ಯಂತ ದಡ್ಡ ವಿದ್ಯಾರ್ಥಿಯೂ ಹದಿನೆಂಟು ಸಾವಿರ ಸಂಪಾದನೆ ಮಾಡುತ್ತಿರುವದನ್ನು ಹತ್ತಾರು ಬಾರಿ ಹೇಳಿದ. ಅವನ ಕೆಲಸದಲ್ಲೂ ಯಾವ ರೀತಿಯಿಂದಲೂ ಆಸಕ್ತಿ ಮೂಡುತ್ತಿರಲಿಲ್ಲ. ಪತ್ರಿಕೆಗಳಲ್ಲಿ ಕಂಪ್ಯೂಟರ್ ಬಗ್ಗೆ ಬಂದ ವಿಷಯಗಳನ್ನು ಕಣ್ಣು ಬಿಟ್ಟು ನೋಡಲಾರಂಭಿಸಿದ. ಚಿಕ್ಕ ಚಿಕ್ಕದ್ದಕ್ಕೆಲ್ಲಾ ಸಿಟ್ಟಾಗಲಾರಂಭಿಸಿದ. ಮನೆಯಲ್ಲಿಯೂ ನೆಮ್ಮದಿಯಿಂದಿರುತ್ತಿರಲಿಲ್ಲ. ಹೆಂಡತಿಯೊಡನೆ ಪ್ರೀತಿಯಿಂದ ಮಾತನಾಡುವದಾಗಲಿ, ಅವಳನ್ನು ಆಸೆಯಿಂದ ಕೂಡುವದಾಗಲಿ ಕಡಿಮೆಯಾಗಿಹೋಯ್ತು. ತಿಂಗಳಿಗೊಮ್ಮೆ ಸಂಬಳ ಬಂದ ದಿನ ಹೆಂಡತಿಯೊಡನೆ ಸಿನಿಮಾಕ್ಕೆ ಹೋಗುವ ಪರಿಪಾಠವೂ ನಿಂತುಹೋಯ್ತು. ತಾನು ಆಗಾಗ ಗ್ರಂಥಾಲಯದಿಂದ ತಂದು ಓದುತ್ತಿದ್ದ ಕನ್ನಡ ಸಾಹಿತ್ಯ ಪುಸ್ತಕಗಳು ಅತ್ಯಂತ ಕ್ಷುಲ್ಲಕವಾಗಿ ಕಂಡವು. ಬರೀ ಐದು ಹತ್ತು ರೂಪಾಯಿಗೆಲ್ಲ ಲೆಕ್ಕ ಇಡುವ ಅವನ ಆಫೀಸಿನ ಸಹೋದ್ಯೋಗಿಗಳು ಬಚ್ಚಲ ಮೋರೆಯಲ್ಲಿ ಗಿಜಿಗಿಜಿಗುಟ್ಟುವ ಹುಳುಗಳಂತೆ ಕಂಡರು. ಇಲ್ಲ, ಇಲ್ಲ... ನಾನು ಏನಾದರೂ ಮಾಡಲೇಬೇಕು. ಸಾಫ್ಟ್‌ವೇರ್ ಪ್ರಪಂಚದಲ್ಲಿ ನಾನೂ ಕೆಲಸ ಮಾಡಬೇಕು. ನಾನು ಬುದ್ಧಿವಂತ. ಕಾಲೇಜಿನಲ್ಲಿ ಯಾವತ್ತೂ ಒಳ್ಳೆಯ ಅಂಕಗಳನ್ನು ಪಡೆದು ಪಾಸಾದವನು. ಕೇವಲ ಕಂಪ್ಯೂಟರ್ ವಿಷಯಗಳನ್ನು ನಾನು ಓದಿಲ್ಲವೆಂಬುದಷ್ಟೇ ನನ್ನ ತಪ್ಪು. ನನಗೆ ಅನ್ಯಾಯ ಆಗಿದೆ. ನಾನಿದನ್ನ ಸಹಿಸಲ್ಲ. ನಾನೂ ಕಂಪ್ಯೂಟರ್ ಕೋರ್ಸ್ ಮಾಡ್ತೀನಿ. ನಾನೂ ಹಣ ಸಂಪಾದನೆ ಮಾಡ್ತೀನಿ.

ಮತ್ತೆ ಮತ್ತೆ ಬೆಂಗಳೂರಿಗೆ ಹೋಗಿ ಬರಲಾರಂಭಿಸಿದ. ಪ್ರತಿಯೊಮ್ಮೆ ಹೋಗಿ ಬಂದಾಗಲೂ ಅವನ ಸಂಯಮ ಮತ್ತಷ್ಟು ಕಡಿಮೆಯಾಗುತ್ತಿತ್ತು. ಹೊಸ ಹೊಸ ಕೋರ್ಸ್‌ಗಳ ಬಗ್ಗೆ ಮಾಹಿತಿಗಳನ್ನು ಶೇಖರಿಸಲಾರಂಭಿಸಿದ. ಯಾವ ಕೋರ್ಸ್‌ಗಳೂ ಕೈಗೆ ಎಟಕುವ ಬೆಲೆಯಲ್ಲಿರಲಿಲ್ಲ. ಏನಿಲ್ಲವೆಂದರೂ ಐವತ್ತು ಸಾವಿರದ ತನಕ ತೆತ್ತಬೇಕಾಗಿತ್ತು. ಜೊತೆಗೆ ಬೆಂಗಳೂರಿನಲ್ಲಿಯೇ ಇದ್ದು ಮೂರು ತಿಂಗಳಿಂದ ಆರು ತಿಂಗಳುಗಳವರೆಗೆ ಓದಬೇಕಿತ್ತು. ಅಷ್ಟೊಂದು ಹಣ ತನ್ನ ಬಳಿಯಲ್ಲಿ ಎಲ್ಲಿದೆ?

ಒಂದು ದಿನ ಆಫೀಸಿನಲ್ಲಿ ಅವನ ಸಂಯಮ ಮಿತಿ ಮೀರಿ ರಾಜಿನಾಮೆ ಕೊಟ್ಟುಬಿಟ್ಟ. ವಿಷಯ ಅತ್ಯಂತ ಕ್ಷುಲ್ಲಕವಾಗಿದ್ದಾಗಿತ್ತು. ಮೋಹನ ಕೇವಲ ಹದಿನೈದು ನಿಮಿಷ ತಡವಾಗಿ ಹೋಗಿದ್ದ. ಮ್ಯಾನೇಜರ್ ಅದಕ್ಕಾಗಿ ಕೂಗಾಡಿ, ಅರ್ಧ ದಿನದ ಸಂಬಳ ಕಟ್ ಮಾಡುವದಾಗಿ ಹೇಳಿದ್ದ. ಇವನಿಗೆ ರೇಗಿ ಹೋಗಿತ್ತು. 'ಹೋಗಯ್ಯ, ನೀನು ಕೊಡೋ ಜುಜುಬಿ ಸಂಬಳಕ್ಕೆ ಕಾದು ಕೊಂಡಿರುವ ಭಿಕ್ಷುಕ ನಾನಲ್ಲ' ಅಂತ ಹೀರೋ ತರಹ ಕೂಗಾಡಿ, ಅಲ್ಲಿಯೇ ರಾಜಿನಾಮೆ ಗೀಚಿ ಅವನ ಮುಖಕ್ಕೆ ಎಸೆದು ಮನೆಗೆ ಬಂದುಬಿಟ್ಟಿದ್ದ. ಮನೆಗೆ ಬಂದದ್ದೇ ಹೆಂಡತಿ-ತಾಯಿಗೆ ವಿಷಯ ಹೇಳುವದಕ್ಕೆ ಮುಂಚೆ ರಾಜುವಿಗೆ ಫೋನ್ ಮಾಡಿ, 'ನಾನು ಕೋರ್ಸ್ ಮಾಡಿದ್ರೆ ಒಂದು ಕೆಲಸ ಸಿಕ್ತದಲ್ಲ? ಬೆಂಗಳೂರಿನಲ್ಲಿ ಅಷ್ಟೊಂದು ಕಂಪ್ಯೂಟರ್ ಕಂಪನಿಗಳಿವೆಯಲ್ಲ, ಅಲ್ಲಿ ನನಗೊಂದು ಕೆಲಸ ಸಿಗಲ್ವಾ? ಸಂಬಳ ಸ್ವಲ್ಪ ಕಡಿಮೆ ಅದರೂನೂ ಪರವಾಯಿಲ್ಲ. ನಿಂಗೆ ಈ ಲೈನ್‌ನಲ್ಲಿ ತುಂಬಾ ಇನ್‌ಫ್ಲುಯನ್ಸ್ ಇದೆಯಲ್ವಾ? ನಾನು ಬೇಕೆಂದ್ರೆ ಕೋರ್ಸ್ ಓದಿ ಸಬ್ಜೆಕ್ಟ್ಸ್ ಎಲ್ಲಾ ಚೆನ್ನಾಗಿ ಅರ್ಥ ಮಾಡ್ಕೊಳ್ತೀನಿ. ನಿನ್ನ ಗೆಳೆಯಗೆ ಸಹಾಯ ಮಾಡ್ತೀಯಲ್ವಾ?' ಅಂತೆಲ್ಲಾ ಗದ್ಗದಿತನಾಗಿ ಮಾತನಾಡಿದ್ದ.

ಮರುದಿನಕ್ಕೆಲ್ಲಾ ಮನೆಯವರಿಗೆ ವಿಷಯ ಗೊತ್ತಾಗಿ 'ಹೋ' ಎಂದು ರಾದ್ಧಾಂತ ಮಾಡಿಬಿಟ್ಟರು. 'ನಿನಗ್ಯಾಕೆ ಇಂಥಾ ಕೆಟ್ಟ ಬುದ್ಧಿ ಬಂತೋ' ಅಂತ ಅವನಮ್ಮ ಕೂಗಾಡಿದರೆ, 'ನಮ್ಮ ಗತಿಯೇನ್ರಿ' ಅಂತ ಹೆಂಡತಿ ಮುಸಿಮುಸಿ ಅತ್ತಳು. ಪುಣ್ಯಕ್ಕೆ ಅವರಪ್ಪ ಎಂದೋ ಕಾಲವಾಗಿದ್ದ. ಅದಕ್ಕೆ ಪೂರಕವೆಂಬಂತೆ ಅವನ ಅತ್ತೆ ಮಾವ ಬಂದು, 'ನೀವು ಹೀಗೆ ನಮ್ಮ ಮಗಳನ್ನು ನಡುನೀರಿನಲ್ಲಿ ಕೈಬಿಡುವುದು ಸರಿಯಲ್ಲ' ಅಂತ ಅವನಿಗೆ ಒಂದಿಷ್ಟು ಬುದ್ಧಿ ಹೇಳಿ ನೋಡಿದರು. ಅವನು ಗಂಡಿ ನರಸಿಂಹ ಸ್ವಾಮಿಯ ಹಳ್ಳದ ಕಪ್ಪು ಕಲ್ಲಿನಂತೆಯೇ ತನ್ನ ನಿರ್ಧಾರ ಬದಲಿಸದಾದ. ಆಫೀಸಿನ ಸಹೋದ್ಯೋಗಿಗಳು ಬಂದು ಮಾತನಾಡಿದರು. ಸ್ವತಃ ಮ್ಯಾನೇಜರರು ಹೇಳಿ ಕಳುಹಿಸಿದರು. ಆದರೆ ಅವನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಅವರ ಬುದ್ಧಿ ಮಾತುಗಳಲ್ಲಿ ಅವನಿಗೆ ಯಾವ ಅರ್ಥವೂ ಕಂಡುಬರಲಿಲ್ಲ.



ವಿಷಯ ಅಲ್ಲಿಗೇ ನಿಲ್ಲಲಿಲ್ಲ. ಮೋಹನ ಮನೆಯನ್ನು ಮಾರುವ ನಿರ್ಧಾರಕ್ಕೆ ಬಂದುಬಿಟ್ಟ. ಹಳೆಯ ತಲೆಮಾರಿನಿಂದ ಬಂದ ದೊಡ್ಡ ಮನೆ, ಬಾವಿ, ತೆಂಗಿನ ಗಿಡಗಳು, ಇನ್ನೂ ಹತ್ತು ಮನೆ ಕಟ್ಟುವಷ್ಟು ಜಾಗ... ಎಲ್ಲವನ್ನೂ ಮಾರಲು ಸಿದ್ಧನಾದ. ಹೆಂಡತಿ, ತಾಯಿ ಸಿಟ್ಟಿನಿಂದ ಕೂಗಾಡಿದರೂ ಕೇಳಲಿಲ್ಲ. 'ನಾನು ಹೀಗೇ ಉಳಿದು ಬಿಟ್ರೆ ತಲೆ ಕೆಟ್ಟು ಹುಚ್ಚ ಆಗಿಬಿಡ್ತೀನಿ' ಅಂತ ಎತ್ತರದ ಧ್ವನಿಯಲ್ಲಿ ಮಾತಾಡಿ ಅವರ ಬಾಯಿ ಮುಚ್ಚಿಸಿಬಿಟ್ಟ. ಅವನಮ್ಮ ತಮ್ಮ ಬಾಯಲ್ಲಿ ಸೆರಗನ್ನು ತುರುಕಿಕೊಂಡು, ತಾನು ಹೊಸ್ತಿಲು ತುಳಿದು ಬಂದು ಬಾಳಿದ ಹಿರಿಯರ ಮನೆ ಮಂದಿಯ ಪಾಲಾಗುವದನ್ನು ಕಣ್ಣೀರಿಡುತ್ತಾ ನೋಡಿದರು. ಒಂದೂವರೆ ಲಕ್ಷಕ್ಕೆ ಮಾರಾಟವಾಯ್ತು. ಇವರು ಅದೇ ಮನೆಯಲ್ಲಿಯೇ ಇರಬಹುದೆಂದೂ, ಆದರೆ ಪ್ರತಿ ತಿಂಗಳು ಮನೆಗೆ ಬಾಡಿಗೆಗೆ ಕೊಡಬೇಕೆಂದು ಮನೆಯೊಡೆಯ ಒಪ್ಪಿಕೊಂಡ. ಅನಂತರ ಅವರಮ್ಮ, ಹೆಂಡತಿಯನ್ನು ಹತ್ತಿರ ಕೂಡಿಸಿಕೊಂಡು, 'ಏನೂ ಯೋಚನೆ ಮಾಡಬೇಡಿರಿ. ಒಂದೆರಡೇ ವರ್ಷದಲ್ಲಿ ಇವನ್ನೆಲ್ಲಾ ಸಂಪಾದಿಸಿಬಿಡ್ತೀನಿ. ನೋಡುತ್ತಾ ಇರಿ. ಮನೆ, ಕಾರು, ಮೊಬೈಲ್ ಫೋನು, ಎಲ್ಲಾ... ಎಲ್ಲಾ... ನಮ್ಮದಾಗುತ್ತೆ' ಅಂತ ಹೇಳಿದ್ದ.

ರಾಜು, 'ನೀನು ಅಷ್ಟೊಂದು ದುಡುಕಿ ನಿರ್ಧಾರ ತೊಗೋಬಾರದಿತ್ತು' ಅಂತಂದನಾದರೂ, ಸಹಾಯ ಮಾಡಿದ. ಅವನ ಮನೆಯ ಹತ್ತಿರವೇ ಒಂದು ರೂಮನ್ನು ಹುಡುಕಿಕೊಟ್ಟ. ಒಂದು ಸಾವಿರ ಬಾಡಿಗೆ, ಹತ್ತು ಸಾವಿರ ಅಡ್ವಾನ್ಸ್. ಮನೆಯಲ್ಲಿಯೇ ಇರಬಹುದಿತ್ತಲ್ಲೋ ಅಂದಿದ್ದಕ್ಕೆ ಬೆಚ್ಚಿಬಿದ್ದ ಮೋಹನ, 'ಅಂದೆಂಗೆ ಆಗ್ತದೆ. ನಿಮ್ಮಿಬ್ಬರ ಮಧ್ಯೆ ನಾನು ಶಿವಪೂಜೆ ಮುಂದೆ ಕರಡಿ ಬಿಟ್ಟಂಗೆ...' ಅಂತಂದುಬಿಟ್ಟ. ಸಾಕಷ್ಟು ಕಡೆ ವಿಚಾರ ಮಾಡಿ ಎಲ್ಲಿ ಕೋರ್ಸ್ ಮಾಡಬಹುದೆಂಬುದನ್ನು ನಿರ್ಧರಿಸಲು ಸಹಾಯವಾಗುವಂತೆ ಮಾಹಿತಿ ಸಂಗ್ರಹಿಸಿದ. ಕೋರ್ಸ್ ಮುಗಿದ ತಕ್ಷಣ ಕೆಲಸ ಗ್ಯಾರಂಟಿ ಕೊಡಿಸುವುದಾಗಿ ಆ ಇನ್ಸ್‌ಟಿಟ್ಯೂಟ್‌ನವರು ಆಶ್ವಾಸನೆ ಕೊಟ್ಟರು. ಅರವತ್ತು ಸಾವಿರ ಫೀಸು ಅಷ್ಟೇನೂ ಹೆಚ್ಚಲ್ಲ. ಆರು ತಿಂಗಳ ಕೋರ್ಸ್.

ತುಂಬಾ ಸುಲಭವಾಗಿರುತ್ತದೆಯೆಂದುಕೊಂಡು ಮೋಹನ ಶುರು ಮಾಡಿದನಾದರೂ, ಅವನಂದುಕೊಂಡಷ್ಟು ಸಲೀಸಾಗಿರಲಿಲ್ಲ. ಕೆಲವೊಂದು ವಿಚಾರಗಳು ತಲೆಗೆ ಹೋಗುವದಕ್ಕೆ ದಿನಗಳೇ ಹಿಡಿದವು. ಕೆಲವೊಮ್ಮೆ ಇದ್ದಕ್ಕಿಂತ ಆ ಬಳ್ಳಾರಿಯ ಬಿಸಿಲಿನ ಕಾರ್ಮಿಕರೊಡನೆಯ ಗುದ್ದಾಟವೇ ಚೆನ್ನಾಗಿತ್ತೇನೋ ಅಂತನ್ನಿಸಿಬಿಡುತ್ತಿತ್ತು. ಅವನ ಜೊತೆಯಲ್ಲಿ ಸಾಕಷ್ಟು ಹಿರಿಕಿರಿಯ ವಿದ್ಯಾರ್ಥಿಗಳಿದ್ದರು. ಅದೇ ತಾನೇ ಕಾಲೇಜು ಮುಗಿಸಿ ಬಂದು ಸೇರಿಕೊಂಡವರು ತನಗಿಂತಲೂ ಬೇಗನೆ ಅರ್ಥ ಮಾಡಿಕೊಂಡುಬಿಡುತ್ತಿದ್ದಾರೇನೋ ಎಂಬ ಅನುಮಾನವಾಗಿ ಸಂಕೋಚವಾಗಿಬಿಡುತ್ತಿತ್ತು. ಎಷ್ಟೇ ಪಟ್ಟು ಹಿಡಿದು ಓದಲು ಕುಳಿತರೂ ಸ್ವಲ್ಪೇ ಹೊತ್ತಿನಲ್ಲಿ ನಿದ್ದೆ ಬಂದುಬಿಡುತ್ತಿತ್ತು. ಕೆಲವೊಮ್ಮೆ ಓದಲು ಕುಳಿತ ಕೆಲವೇ ನಿಮಿಷಗಳಲ್ಲಿ ಮನಸ್ಸು ಹಗಲುಗನಸುಗಳಲ್ಲಿ ತೂರಿಹೋಗಿ, ಹೊತ್ತು ಹೋಗುವುದೇ ತಿಳಿಯುತ್ತಿರಲಿಲ್ಲ. ಬರೀ ಪುಸ್ತಕ ಓದಿದರೆ ಉಪಯೋಗವಿಲ್ಲ ಅಂತ ನಿರ್ಧರಿಸಿ ಸರಿರಾತ್ರಿಯವರೆಗೆ ಇನ್‌ಸ್ಟಿಟ್ಯೂಟ್‌ನಲ್ಲಿ ಕಂಪ್ಯೂಟರ್ ಮುಂದೆ ಕುಳಿತು ಬರಲಾರಂಭಿಸಿದ.



ಕೋರ್ಸ್ ಮುಗಿಯಲು ಬರುವ ಹೊತ್ತಿಗೆಲ್ಲಾ ಕೆಲಸ ಅಷ್ಟೊಂದು ಸುಲಭವಲ್ಲ ಎಂಬುದು ಅರಿವಾಗಲಾರಂಭಿಸಿತು. ಜೊತೆಗೆ ಅವನು ಓದಿದ ವಿಷಯಗಳು ಈಗಾಗಲೇ ಇಂಡಸ್ಟ್ರಿಯಲ್ಲಿ ಔಟ್‌ಡೇಟೆಡ್ ಎಂಬ ಮಾತುಗಳು ಕೇಳಿಬರಲಾರಂಭಿಸಿದವು. ಇದಿಷ್ಟೇ ಸಾಲದೆಂಬಂತೆ ಕೆಲಸ ಕೊಡಿಸುತ್ತೀವೆಂದು ಹೇಳಿದ್ದ ಇನ್‌ಸ್ಟಿಟ್ಯೂಟ್‌ನವರು, 'ನಾವು ಹಾಗಂತ ಹೇಳಿದ್ದಲ್ಲ. ಬೇಕಿದ್ರೆ ಬ್ರೋಶರ್ ತೆಗೆದು ನೋಡಿ. ಕೆಲಸ ಕೊಡಿಸಲು ಸಹಾಯ ಮಾಡ್ತೇವೆ ಅಂತ ಹೇಳಿದ್ದು' ಅಂತಂದು ತಾರಮ್ಯಮ್ಯ ಅಂದುಬಿಟ್ಟಿದ್ದರು. ಆದರೂ ಜಾಹಿರಾತುಗಳು 'ಲಕ್ಷಾಂತರ ಉದ್ಯೋಗಗಳು ಖಾಲಿಯಿವೆ' ಎಂದು ಸಾರಿ ಸಾರಿ ಹೇಳುವದರಿಂದ ಸ್ವಲ್ಪ ಧೈರ್ಯ ಮೂಡುತ್ತಿತ್ತು.

ಕಂಪನಿ ಕಂಪನಿಗೆ ತಿರುಗಾಡಿದ. ನಾವು ಫ್ರೆಷರ್ಸ್‌ನ ತೊಗೊಳ್ಳಲ್ಲ, ನಮಗೆ ಕಂಪ್ಯೂಟರ್ ಸೈನ್ಸ್‌ನಲ್ಲಿ ಬಿ.ಈ. ಮಾಡಿದವರೇ ಬೇಕು, ಈಗ ಸದ್ಯಕ್ಕೆ ಈ ಟೆಕ್ನಾಲಜಿಯಲ್ಲಿ ನಾವು ಕೆಲಸ ಮಾಡ್ತಾ ಇಲ್ಲ, ನೀವು ಬೇರೆ ಇನ್‌ಸ್ಟಿಟ್ಯೂಟ್‌ನವರು ನಡೆಸ್ತಾರಲ್ಲ ಆ ಕೋರ್ಸ್ ಮಾಡಿದ್ರೆ ಚೆನ್ನಾಗಿತ್ತು. ಇದೆಲ್ಲಕ್ಕೂ ಹೆಚ್ಚು ಸಂಕಟವಾಗುತ್ತಿದ್ದದ್ದೆಂದರೆ ರಿಸೆಪ್ಷನಿಸ್ಟ್ ಫೋನ್ ಮಾಡುತ್ತಲೇ, ಅಲ್ಲಿಟ್ಟಿದ್ದ ಹಳೆಯ ರಟ್ಟಿನ ಡಬ್ಬಿಯ ಕಡೆ ಕೈ ತೋರಿಸಿ ಅಲ್ಲಿ ಬಯೋಡೆಟಾ ಹಾಕಿ ಎಂದು ಸಂಜ್ಞೆ ಮಾಡುತ್ತಿದ್ದುದು. ಇನ್ನೊಮ್ಮೆ ಗೇಟಿನ ಒಳಗಡೆಯೂ ಬಿಡದಂತೆ ತಡೆದ ಗೂರ್ಖ 'ಇಲ್ಲೇ ಕೊಡಿ' ಅಂತ ತೆಗೆದುಕೊಂಡು, ಅವನ ಹಿಂದೆಯೇ 'ಇದಕ್ಕೇ ಒಬ್ಬ ಆಳನ್ನು ಇಡೋದು ಒಳ್ಳೇದು' ಅಂತ ಗೊಣಗಿದ್ದು ಅವನಿಗೆ ಕಣ್ಣಲ್ಲಿ ನೀರು ತರಿಸಿತ್ತು.

ಪ್ರತಿ ತಿಂಗಳು ಎರಡು ಕಡೆ ತಪ್ಪದೆ ಕೊಡಬೇಕಾದ ಮನೆ ಬಾಡಿಗೆ, ಮನೆಯ ತಿಂಗಳ ಖರ್ಚು, ಆಗಾಗ ಊರಿಗೆ ಹೋಗಿ ಬರಬೇಕಾದ ಖರ್ಚು ನಾಳೆಗೇನು ಎಂಬ ಆತಂಕ-ಅವನು ಸಣ್ಣಗೆ ಹೆದರಲಾರಂಭಿಸಿದ. 'ತಪ್ಪು ನಿರ್ಧಾರ ತೆಗೆದುಕೊಂಡೆನಾ?' ಅಂತ ಒಳಗೇ ಕೊರೆಯಲಾರಂಭಿಸಿತು. ಆದರೆ ಅದೇ ಸಮಯಕ್ಕೆ ಅವನ ಜೊತೆ ಕೋರ್ಸ್ ಮಾಡಿದ ಹೈದರಾಬಾದಿನ ಗೆಳೆಯನೊಬ್ಬನಿಗೆ ಕೆಲಸ ಸಿಕ್ಕಿದ್ದು ಮತ್ತೊಮ್ಮೆ ಆಸೆಯ ಗರಿ ಕೆದರಿತ್ತು. 'ಏನಯ್ಯಾ ಮೋಡಿ ಮಾಡಿದೆ?' ಅಂತ ಕೇಳಿದ್ದಕ್ಕೆ ಗೆಳೆಯ ಗುಟ್ಟಾಗಿ ಹೇಳಿದ್ದ. 'ನೀನು ಬಯೋಡೇಟಾದಲ್ಲಿ ಬರೀ ಫ್ರೆಷರ್ ಅಂತ ತೋರಿಸಿಕೊಂಡರೆ ಎಲ್ಲೂ ಕೆಲಸ ಸಿಗಂಗಿಲ್ಲ. ಸುಮ್ನೆ ಎರಡು ವರ್ಷ ಅನುಭವ ಇದೆ ಅಂತ ಬರಿ. ಯಾವುದೋ ಒಂದು ಕಂಪನಿ ಹೆಸರು ಹಾಕಿ, ಒಂದು ಎಕ್ಸ್‌ಪೀರಿಯನ್ಸ್ ಸರ್ಟಿಫಿಕೇಟ್ ಪ್ರಿಂಟ್ ಮಾಡ್ಕೋ. ಈ ಬೆಂಗಳೂರಿನಲ್ಲಿ ಎಷ್ಟೊಂದು ಕಂಪನಿಗಳಿವೆಯಂತ ಯಾರಿಗೆ ಗೊತ್ತಾಗುತ್ತೆ? ಅಷ್ಟಕ್ಕೂ ಆ ಕಂಪನಿಗಳಲ್ಲಿ ಮಾಡೋ ಕೆಲಸಕ್ಕೆ ಬೇಕಿರೋ ಸ್ಕಿಲ್, ಹತ್ತನೇ ಕ್ಲಾಸ್ ಓದಿರೋ ಹುಡುಗಂಗೂ ಇರುತ್ತೆ.'

ಗೆಳೆಯನ ಮಾತಿನ ಮೇಲೆ ನಂಬಿಕೆ ಮೂಡಿ ಹೆದರುತ್ತಲೇ ಬಯೋಡೇಟಾಕ್ಕೆ ಉಪ್ಪು-ಖಾರ ಬೆರೆಸಿದ. ಸಂದರ್ಶನಕ್ಕೆ ಕರೆ ಬಂತು. ಆ ಕಂಪನಿಯೊಳಗೆ ಕಾಲಿಟ್ಟ ಕ್ಷಣದಿಂದ ಬೆವರಲಾರಂಭಿಸಿದ. ಅವರು ಕೇಳುವ ಒಂದೂ ಪ್ರಶ್ನೆಯೂ ಅವನಿಗೆ ಸರಿಯಾಗಿ ಅರ್ಥವಾಗಲಿಲ್ಲ. ಅವರಿಗೆ ಇವನ ಸ್ಥಿತಿ ಅರ್ಥವಾಗುವದಿಲ್ಲವೆ? 'ನೋಡಿ, ನೀವು ಬಯೋಡೇಟಾದಲ್ಲಿ ಸುಳ್ಳು ಸುಳ್ಳೇ ಎಕ್ಸ್‌ಪೀರಿಯನ್ಸ್ ಅಂತ ಬರೆದುಕೊಂಡು ನಮಗೆ ಮೋಸ ಮಾಡಲಿಕ್ಕೆ ನೋಡ್ತಾ ಇದೀರಿ. ನಾವು ಬೇಕಂದ್ರೆ, ಈ ತಕ್ಷಣ ಪೊಲೀಸ್‌ಗೆ ಫೋನ್ ಮಾಡಬಹುದು. ದಯವಿಟ್ಟು ಇಲ್ಲಿಂದ ಎದ್ದು ಹೋಗಿ' ಅಂತ ಬಿರುಸಾಗಿಯೇ ಹೇಳಿದ್ದರು. ಅವನು ಹೊರಬಂದಾಗ ಗಡಗಡ ನಡುಗುತ್ತಿದ್ದ. ಸೀದಾ ದರ್ಶಿನಿಯೊಂದಕ್ಕೆ ನುಗ್ಗಿ ಕಾಫಿ ತೆಗೆದುಕೊಂಡು ಕುಡಿಯುವಾಗ ಕೈ ನಡುಗಿ ಕಾಫಿಯ ಕಪ್ಪು ಕೆಳಗೆ ಬಿದ್ದು...

''ಕಾಫಿ ಕುಡೀರಿ. ಆರಿಹೋಗ್ತಾ ಇದೆ'' ಅಂತ ಸುಮ ಜ್ಞಾಪಕ ಮಾಡಿದಳು. ಟೀಪಾಯಿಯ ಮೇಲೆ ಹಬೆಯಾಡುವ ಕಾಫಿಯಿತ್ತು. ಸುಮಳ ಕಡೆ ಕಣ್ಣು ಹಾಯಿಸಿದ. ಅವಳು ಮೊದಲಿಗಿಂತಲೂ ಈಗ ಚೆನ್ನಾಗಿದ್ದಾಳಾ? ಅಂತ ಅನುಮಾನವಾಯ್ತು. ಬಣ್ಣಕ್ಕೂ ಒಂದು ತರಹ ಹೊಳಪು ಬಂದಿದೆ. ಹೊರದೇಶದಲ್ಲಿ ಇದ್ದು ಬಂದಿದ್ದಕ್ಕಿರಬೇಕು. ಹೊಟ್ಟೆ ಸ್ವಲ್ಪ ದಪ್ಪ ಆಗಿ ಕಾಣ್ತಾ ಇದೆಯಾ? ಅವನಿಗೆ ಉಸಿರು ತಪ್ಪಿದಂತಾಯ್ತು.. ಇಷ್ಟು ಬೇಗ ಇರಲಿಕ್ಕಿಲ್ಲ ಅಂತ ಅಂದುಕೊಂಡ.

ಹೊರಗಡೆ ಕಾರು ಬಂದ ಶಬ್ದವಾಯ್ತು. ''ಇವರು ಬಂದ್ರು'' ಅಂತ ಸುಮ ಕುಲುಕುತ್ತಾ ಹೊರಗೋಡಿದಳು. ಅವನ ಬ್ರೀಫ್‌ಕೇಸನ್ನು ಹಿಡಿದುಕೊಂಡು ಅವಳೇ ಮೊದಲು ಬಂದಳು. ಮೋಹನ ಬಂದಿರುವ ವಿಷಯ ಹೇಳಿರಬೇಕು. ಅವನು ಟೈ ಬಿಚ್ಚುತ್ತಾ ಒಳಬಂದವನು ''ಏನಯ್ಯಾ ದೊರೆ'' ಅಂತ ಪ್ರೀತಿಯಿಂದ ಮಾತನಾಡಿಸಿದ. ಮೋಹನ ತಾನು ಕುಡಿಯುತ್ತಿದ್ದ ಕಾಫಿಯ ಕಪ್ಪನ್ನು ಮತ್ತೆ ಟೀಪಾಯಿಯ ಮೇಲಿಟ್ಟ. ಶೂ ಬಿಚ್ಚಿದ ರಾಜು, ಮೋಹನನ ಬಳಿ ಬಂದು, ಅವನ ಎರಡೂ ಹೆಗಲ ಮೇಲೆ ಕೈಯಿಟ್ಟು ''ಐ ಹ್ಯಾವ್ ಅ ಗುಡ್ ನ್ಯೂಸ್'' ಅಂತ ಕಣ್ಣಲ್ಲಿಯೇ ನಕ್ಕ. ''ನಾಳೆ ನಮ್ಮ ಆಫೀಸಿನಲ್ಲಿ ನಿಂಗೆ ಇಂಟರ್‌ವ್ಯೂ ಏರ್ಪಾಡು ಮಾಡಿದೀನಿ'' ಅಂತಂದ. ಮೋಹನನ ಕಣ್ಣುಗಳು ಖುಷಿಯಿಂದ ಹೊಳೆದವು. ''ನಿಜವಾಗ್ಲೂ?'' ಅಂತ ಮಗುವಿನಂತೆ ತನ್ನ ಗೆಳೆಯನನ್ನು ಕೇಳಿದ. ಹೌದೆಂದು ತಲೆಯಾಡಿಸಿದ ರಾಜು, ''ಆದರೆ ಒಂದು ಮಾತು ಮೋಹನ. ಇಂಟರ್‌ವ್ಯೂ ಪ್ಯಾನಲ್‌ನಲ್ಲಿ ನಾನೂ ಇರ್ತೀನಿ. ನೀನು ಬೇಜಾರು ಮಾಡ್ಕೊಳ್ಳಲ್ಲ ಅಲ್ಲಾ?'' ಅಂತ ಸಂಶಯದಿಂದ ಕೇಳಿದ. ಮೋಹನನಿಗೆ ಹೃದಯದಲ್ಲಿ ಯಾರೋ ಸಣ್ಣಗೆ ಚಿವುಟಿದಂತಾಯ್ತು.

ತನ್ನಲ್ಲಿರುವ ಪುಸ್ತಕಗಳು ಮೋಹನನಿಗೆ ಸಾಲವೆಂದನಿಸಿಬಿಟ್ಟಿತು. ಅವನಿಗೆ ಹೊಳೆದ ಯಾವುದೋ ಪ್ರಶ್ನೆ ಅವನಲ್ಲಿದ್ದ ಯಾವ ಪುಸ್ತಕದಲ್ಲಿಯೂ ಉತ್ತರ ಸಿಗಲಿಲ್ಲ. ಸೀದಾ ಪುಸ್ತಕದಂಗಡಿಗೆ ಓಡಿಹೋದ. ಕಂಪ್ಯೂಟರ್ ಪುಸ್ತಕಗಳ ಕಪಾಟಿನೆದುರು ಜನವೋ ಜನ. ದಪ್ಪ ದಪ್ಪ ಪುಸ್ತಕಗಳು. ಡಾಲರ್‌ನಲ್ಲಿ ಬೆಲೆ. ಆಯ್ಕೆ ಮಾಡೋದೇ ಕಷ್ಟ. ಒಂದೆರಡು ಪುಸ್ತಕಗಳನ್ನು ಖರೀದಿಸಿ ಮತ್ತೆ ರೂಮಿಗೆ ಬಂದ.

ಓದಲು ಶುರು ಮಾಡಿದ. ಒಂದು ಪುಸ್ತಕದಲ್ಲಿರುವದನ್ನು ಓದುವಾಗ ಮತ್ತೊಂದು ಪುಸ್ತಕದ ವಿಷಯವೊಂದು ನೆನಪಿಗೆ ಬಂದು, ಅದಕ್ಕೆ ತನಗೆ ಉತ್ತರವೇ ಗೊತ್ತಿಲ್ಲವೆಂದು ಭಯವಾಗಿ, ಆ ಪುಸ್ತಕವನ್ನು ಕೈಗೆತ್ತಿಕೊಳ್ಳುತ್ತಿದ್ದ. ರಾತ್ರಿಯೊಳಗೆ ಈ ಎಲ್ಲಾ ಪುಸ್ತಕಗಳನ್ನು ಓದಿ ಮುಗಿಸಲಿಕ್ಕೆ ಆಗ್ತದಾ ಅಂತ ಅನುಮಾನವಾಗತೊಡಗಿತು. ಹತ್ತು ನಿಮಿಷ ಓದಿದ ತಕ್ಷಣ ಇನ್ನೆಷ್ಟು ಪುಟಗಳು ಉಳಿದಿವೆ ಎಂದು ನೋಡುತ್ತಿದ್ದ. ಈವತ್ತು ಊಟಕ್ಕೂ ಚಕ್ಕರ್ ಅಂತ ದೃಢ ಮನಸ್ಸಿನಿಂದ ಸಂಕಲ್ಪ ಮಾಡಿಕೊಂಡ.

ಸಂಜೆಯಾಗುತ್ತಿದ್ದಂತೆಯೇ ಅವನ ಆತಂಕವೂ ಹೆಚ್ಚಾಗುತ್ತಾಹೋಯಿತು. ಈಗಾಗಲೇ ಓದಿದ ವಿಷಯಗಳೂ ಮರೆತುಹೋದಂತಾಯ್ತು. ತನಗೆ ಏನೂ ಬರುವದಿಲ್ಲವೆಂದನಿಸಲಾರಂಭಿಸಿತು. ಈ ಆರು ತಿಂಗಳಲ್ಲಿ, ತಾನು ಬರೀ ಬಲ್ಲಾರಿಗೆ ಹೋಗಿ ಬಂದು ಮಾಡುವದರಲ್ಲಿ ಸರಿಯಾಗಿ ಏನನ್ನೂ ಕಲಿತಿಲ್ಲವೆಂದು ಖೇದವಾಗಲಾರಂಭಿಸಿತು. ಇಲ್ಲ, ಇನ್ನೊಂದು ಸಲ ಓದ್ತೀನಿ ಅಂತ ಓದಿದ ಪುಟಗಳನ್ನೇ ಓದಲಾರಂಭಿಸಿದ. ಗಡಿಯಾರದ ಕಡೆ ನಿಮಿಷಕ್ಕೊಮ್ಮೆ ನೋಡಲಾರಂಭಿಸಿದ. ಯಾವ ತರಹದ ಪ್ರಶ್ನೆಗಳನ್ನು ಕೇಳಬಹುದು? ಅವನು ಏನಾದರೂ ಕೇಳಬಹುದಲ್ವಾ? ಯಾವ ಯಾವ ಕಂಪ್ಯೂಟರ್ ಮ್ಯಾಗ್‌ಝಿನ್ಸ್ ಓದ್ತೀರಿ ಅಂತಂದ್ರೆ? ನಾನು ಏನೂ ಓದೋದೇ ಇಲ್ಲ. ಅಥವಾ ಕಂಪ್ಯೂಟರ್ ಮುಂದೆ ಕೂಡಿಸಿಬಿಟ್ಟು, ಕಷ್ಟದ ಸಮಸ್ಯೆಯೊಂದನ್ನು ಪ್ರೋಗ್ರಾಂ ಮಾಡ್ಲಿಕ್ಕೆ ಹೇಳ್ತಾರ? ಇಲ್ಲ ಇದ್ಯಾವುದಕ್ಕೂ ಸಂಬಂಧವಿಲ್ಲದ ಗಣಿತದ ಪಜಲ್‌ಗಳನ್ನು ಕೇಳಿಬಿಟ್ಟರೆ?

ರಾತ್ರಿ ಹನ್ನೊಂದಾಯ್ತು.


ಈಗವನು ಕುಳಿತು ಓದುವ ಸ್ಥಿತಿಯಲ್ಲಿಯೇ ಇರಲಿಲ್ಲ. ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ರೂಮಿನ ತುಂಬಾ ಓಡಾಡಲಾರಂಭಿಸಿದ್ದ. ತನಗೆ ಗೊತ್ತಿಲ್ಲದ ಪ್ರಶ್ನೆಗಳದೇ ಒಂದು ದೊಡ್ಡ ಪಟ್ಟಿಯಾಗಿತ್ತು. ಅವಕ್ಕೆ ಉತ್ತರ ಪುಸ್ತಕಗಳಲ್ಲಿ ಎಷ್ಟೇ ಹುಡುಕಿದರೂ ಸಿಗಲಿಲ್ಲ. ಅವನಿಗೆ ಭಯವಾಗಲಾರಂಭಿಸಿತು. ನಾಳೆ ಖಂಡಿತವಾಗಿಯೂ ಅವೇ ಪ್ರಶ್ನೆಗಳನ್ನು ಕೇಳುತ್ತಾರೆಂದು ಮನಸ್ಸು ಹೇಳಲಾರಂಭಿಸಿತು. ಆ ಹೊತ್ತಿನಲ್ಲಿ ರಾಜುವಿನ ಮನೆಗೆ ಓಡಿದ.

ಆಗಲೇ ನಿದ್ರೆಗೆ ಜಾರಿದ್ದ ರಾಜು ಎದ್ದು ಬಂದವನು ಇವನ ಸ್ಥಿತಿಯನ್ನು ನೋಡಿ ಗರಬಡಿದುಹೋದ. ಆವೇಶದ ಧ್ವನಿಯಲ್ಲಿ ಇವನು ಒಂದೊಂದೇ ಪ್ರಶ್ನೆಗಳನ್ನು ಕೇಳಲಾರಂಭಿಸಿದ. ರಾಜುಗೆ ಅವನನ್ನು ಸಮಾಧಾನ ಮಾಡುವದರಲ್ಲಿ ಸಾಕುಸಾಕಾಯ್ತು. ಅವನ ಪ್ರಶ್ನೆಗಳಿಗೆ ಉತ್ತರಿಸುವದನ್ನು ನಿಲ್ಲಿಸಿ, ''ಮೋಹನ, ಒಂದು ಮಾತು ಹೇಳ್ಲಾ?'' ಅಂತ ಕೇಳಿದ. ಮೋಹನ ತಲೆ ಎತ್ತಿದ. ''ನೀನು ಇನ್ನೊಬ್ಬರ ಜೊತೆ ಯಾಕೆ ಹೋಲಿಸಿಕೊಳ್ತೀಯ? ನಾನು ನಿನಗಿಂತ ಶ್ರೀಮಂತ ಆಗಿದೀನಿ ಅನ್ನೋ ಸಂಕಟಕ್ಕೇ ನೀನು ಇಷ್ಟೆಲ್ಲಾ ಕಷ್ಟಪಡ್ತಾ ಇದೀಯಲ್ವಾ? ನನ್ನಷ್ಟು ಸಂಬಳ ನಿನಗೆ ಬರ್ತಾ ಇರಲಿಲ್ಲ ಅನ್ನೋದು ಬಿಟ್ರೆ ನೀನು ನಿನ್ನೂರಲ್ಲಿ ನನಗಿಂತಾ ಆರಾಮವಾಗಿ ಇದ್ದಿಯಲ್ಲೇನು? ಯಾಕೆ ಅನಾವಶ್ಯಕವಾಗಿ ಇಷ್ಟೆಲ್ಲಾ ಕಷ್ಟಪಡ್ತಾ ಇದೀಯ?'' ಅಂತ ಕಳಕಳಿಯಿಂದ ಕೇಳಿದ. ಮೋಹನ ಒಂದು ಕ್ಷಣ ಸುಮ್ಮನಾದ. ಅವನ ಮಾತಿನ ಆವೇಗ ಇಳಿದು ಹೋಯ್ತು. ರಾಜುವಿನ ಕಣ್ಣಲ್ಲಿ ಕಣ್ಣಿಟ್ಟು ''ರಾಜು, ಎಷ್ಟೊಂದು ಸುಲಭವಾಗಿ ವೇದಾಂತ ಹೇಳ್ತಾ ಇದೀಯಲ್ಲ? ಇಂಥಾ ಮಾತುಗಳು ತಟ್ಟುವಂಥಾ ವಯಸ್ಸೇನೋ ನಂದು? ನೀನೂ ಒಂದು ಕ್ಷಣ ನನ್ನ ಜಾಗದಲ್ಲಿ ನಿಂತು ಯೋಚನೆ ಮಾಡು?'' ಅಂತ ನಿಧಾನಕ್ಕೆ ಕೇಳಿದ.

ಮತ್ತೆ ಅವರಿಬ್ಬರೂ ಮಾತನ್ನು ಮುಂದುವರೆಸಲಿಲ್ಲ. ಮೋಹನ ''ಬರ್ತೀನಿ'' ಅಂತ ಹೇಳಿ ಹೊರಡಲು ಸಿದ್ಧನಾದ. ರಾಜು ಅವನ ಹೆಗಲ ಮೇಲೆ ಕೈಹಾಕಿ ಗೇಟಿನವರೆಗೆ ಕರೆದುಕೊಂಡು ಹೋದ. ''ಇನ್ನ ಓದಿದ್ದು ಸಾಕು. ಸೀದಾ ರೂಮಿಗೆ ಹೋಗಿ ನಿದ್ದೆ ಮಾಡು'' ಅಂತ ಹೇಳಿ ಅವನ ಬೆನ್ನನ್ನು ಮೃದುವಾಗಿ ತಟ್ಟಿದ. ಮತ್ತೆ ಹಿಂತಿರುಗಿ ನೋಡದೆ ಮೋಹನ ತನ್ನ ರೂಮಿನ ಕಡೆಗೆ ಹೊರಟು ಹೋದ. ರಾಜುವಿಗೆ ತಾನು ಆ ತರಹ ದೊಡ್ಡ ಹಿರಿಯನಂತೆ ಮಾತನಾಡಬಾರದಿತ್ತೆಂದೆನಿಸಿತು.


ರಾತ್ರಿ ಎರಡು ಗಂಟೆ. ಮೋಹನನ ರೂಮಿನಲ್ಲಿ ಸದ್ದಿಲ್ಲ. ಹೊರಗಿನಿಂದ ಚಂದ್ರನ ಬೆಳಕು ಸಣ್ಣಗೆ ಬೀಳುತ್ತಿತ್ತು. ಮೋಹನ ತನ್ನ ಕಪಾಟಿನಲ್ಲಿದ್ದ ಪುಸ್ತಕಗಳನ್ನು ಸರಿಸಿದ. ಅಲ್ಲಿ, ಆ ಕತ್ತಲಿನಲ್ಲಿಯೂ ಫಳ ಫಳನೆ ಹೊಳೆಯುವ ಚೂರಿಯಿತ್ತು! ಯಾವುದೇ ಭಾವೋದ್ವೇಗಗಳನ್ನು ಮುಖದಲ್ಲಿ ವ್ಯಕ್ತಪಡಿಸದೆ, ಆ ಚೂರಿಯನ್ನು ಕೈಗೆತ್ತಿಕೊಂಡಿದ್ದೇ ರಾಜುವಿನ ಮನೆಯ ಕಡೆ ನಡೆಯತೊಡಗಿದ. ತನ್ನ ರೂಮಿನ ಬಾಗಿಲನ್ನು ಹಾಕಲೂ ಇಲ್ಲ.


ಬೆಲ್ ಬಾರಿಸಿದ ಸ್ವಲ್ಪ ಸಮಯದ ತನಕ ಯಾವುದೇ ಉತ್ತರ ಬರಲಿಲ್ಲ. ಅವನ ಬೆಡ್‌ರೂಂನಲ್ಲಿ ಮಂಚದ ಸದ್ದು ಕೇಳುತ್ತಿತ್ತು. ಇವನಿಗೆ ಸಂಕಟವಾಯ್ತು. ಹಲ್ಲು ಕಡಿದ. ಎರಡೂ ಕೈಯನ್ನು ಹಿಂದಕ್ಕೆ ಕಟ್ಟಿಕೊಂಡು ಬಾಗಿಲು ತೆರೆಯುವದನ್ನೇ ಕಾಯುತ್ತಾ ನಿಂತ. ಅವನ ಬಲಗೈಯಲ್ಲಿ ಚೂರಿ ತನ್ನ ಕೆಲಸಕ್ಕಾಗಿ ಕಾದು ಕುಳಿತಿತ್ತು.



ರಾಜು ಬಾಗಿಲು ತೆಗೆದಾಗ, ಬರಿಯ ಲುಂಗಿಯನ್ನು ಅಡ್ಡಡ್ಡವಾಗಿ ಅವಸರದಲ್ಲಿ ಸುತ್ತಿಕೊಂಡಿದ್ದ. ''ಏನೋ...'' ಅಂತ ಅವನು ಸದ್ದು ಹೊರಡಿಸುವದರೊಳಗೆ ಮೋಹನನ ಕೈ ಚುರುಕಾಗಿ ಕೆಲಸ ಮಾಡಿತ್ತು. ರಕ್ತ ಚೆಲ್ಲನೆ ಚಿಮ್ಮಿತ್ತು. ರಾಜುವಿನ ಬಾಯಿಂದ ಕೆಟ್ಟ ಸದ್ದೊಂದು ಹೊರಬಂತು. ಮೋಹನ ಮತ್ತೆ ಮತ್ತೆ ರಾಜುವಿನ ದೇಹಕ್ಕೆ ಚೂರಿ ಹಾಕಲಾರಂಭಿಸಿದ. ಬೆಡ್‌ರೂಂನಿಂದ ಸುಮ ಓಡಿ ಬಂದಳು. ಅರ್ಧಕ್ಕರ್ಧ ಬೆತ್ತಲೆಯಾಗಿದ್ದಳು. ರಾಜುವಿನ ಸ್ಥಿತಿಯನ್ನು ಕಂಡು ಕಿರುಚಿಕೊಂಡಳು. ಅವಳ ಅರೆ ಬೆತ್ತಲೆ ದೇಹವನ್ನು ಕಂಡಿದ್ದೇ ಮೋಹನನಿಗೆ ಹುಚ್ಚು ಹಿಡಿಯಿತು. ಚೂರಿಯನ್ನು ಕೆಳ ಹಾಕಿದ್ದೇ ಅವಳ ಕೂದಲನ್ನು ಹಿಡಿದುಕೊಂಡು ಬೆಡ್‌ರೂಂಗೆ ದರದರನೆ ಎಳೆದುಕೊಂಡು ಹೋದ. ಅವಳು ನೋವಿನಿಂದ ಕಿರುಚಲಾರಂಭಿಸಿದಳು. ಮೋಹನನಿಗೆ ಸಿಟ್ಟು ಮತ್ತು ಕಾಮ ಒಟ್ಟೊಟ್ಟಿಗೆ ಕೆರಳಲಾರಂಭಿಸಿದವು. ''ಏನೆ ಬೋಸೂಡಿ, ನನ್ನ ನೀವು-ತಾವು ಅಂತ ಬಹುವಚನ ಕೊಟ್ಟು ಮಾತನಾಡಿಸ್ತೀಯೇನೆ? ನಾನು ಪ್ರೀತಿ ಮಾಡ್ತೀನಿ ಅಂತ ಹೇಳ್ಲೇ ಇಲ್ಲ ಅಂತ ಅಂತೀಯೇನೆ?'' ಎಂದೆಲ್ಲಾ ಕಿರುಚುತ್ತಾ ಅವಳನ್ನು ಅತ್ಯಂತ ಕ್ರೂರವಾಗಿ ಸಂಭೋಗಿಸಲಾರಂಭಿಸಿದ. ಅವಳು ನೋವಿನಿಂದ ಕಿರುಚಲಾರಂಭಿಸಿದಳು.

ಮೋಹನನಿಗೆ ಎಚ್ಚರವಾಯ್ತು. ಕಾಲಿನ ಹತ್ತಿರದಲ್ಲಿದ್ದ ಪುಸ್ತಕಗಳನ್ನು ಜಾಡಿಸಿ ಒದ್ದಿದ್ದ. ಕೈಯಲ್ಲಿ ಹಿಡಿದುಕೊಂಡು ಓದುತ್ತಲಿದ್ದ ಪುಸ್ತಕ ಜಾರಿ ತೊಡೆಯ ಮೇಲೆ ಬಿದ್ದಿತ್ತು. ಮೈಯೆಲ್ಲಾ ಸಣ್ಣಗೆ ಬೆವತು, ನಡುಗುತ್ತಿದ್ದ. ಗಡಿಯಾರದಲ್ಲಿ ಸಮಯ ಹನ್ನೆರಡೂವರೆಯೆಂದು ತೋರಿಸುತ್ತಿತ್ತು. ಅವನಿಗೆ ನಡೆದ ಘಟನೆ ಕನಸೆಂಬುವುದು ಅರ್ಥವಾಗಲು ಒಂದೆರಡು ಕ್ಷಣಗಳೇ ಹಿಡಿದವು. ಅಂತಹ ಭಯಂಕರ ಕನಸಿನಿಂದ ಅವನಿಗೆ ನಿಜಕ್ಕೂ ಭಯವಾಗಿತ್ತು. ತನ್ನ ಪ್ರೀತಿಯ ಗೆಳೆಯ ರಾಜುವನ್ನು ಕೊಲ್ಲುವಂತಹ ಕ್ರೂರ ಕನಸು ತನಗೇಕೆ ಬಿತ್ತೆಂದು ಅವನಿಗೆ ಬೇಸರವಾಯ್ತು. ಕುಳಿತಲ್ಲಿಂದಲೇ ''ದೇವರೇ, ರಾಜುಗೆ ಯಾವುದೇ ಕೆಡಕಾಗದಂತೆ ನೋಡ್ಕೊಳಪ್ಪ'' ಅಂತ ಪ್ರಾರ್ಥಿಸಿದ. ಮನಸ್ಸಿಗೆ ನೆಮ್ಮದಿಯೆನಿಸಿತು. ಬಚ್ಚಲು ಮನೆಗೆ ಹೋಗಿ, ಉಚ್ಚೆ ಹೊಯ್ದು ಕಾಲು ತೊಳೆದುಕೊಂಡು ಬಂದ. ಉರಿಯುತ್ತಿದ್ದ ದೀಪವನ್ನು ಆರಿಸಿದಾಗ ಯಾಕೋ ಅನುಮಾನ ಬಂದು ಕಪಾಟಿನಲ್ಲಿದ್ದ ಪುಸ್ತಕಗಳನ್ನು ಸರಿಸಿದ ಅಲ್ಲಿ ಯಾವುದೇ ಚೂರಿಯಿರಲಿಲ್ಲ. ತನ್ನ ಅನುಮಾನಕ್ಕೆ ನಗು ಬಂತು. ಮತ್ತೆ ಓದುವ ಗೊಡವೆಗೆ ಹೋಗದೆ ಹಾಸಿಗೆಯಲ್ಲಿ ಮೈ ಉರುಳಿಸಿದ.





ಪೋಲಿಶ್ ಪದ್ಯಗಳು

ಕನ್ನಡಕ್ಕೆ: ತೇಜಸ್ವಿನಿ ನಿರಂಜನ

ಎಂಥ ಸಂಗೀತಗಾರನೂ, ತನ್ನ ಧ್ವನಿಪೆಟ್ಟಿಗೆಯನ್ನು, ಸಂಗೀತ ವಾದ್ಯಗಳನ್ನು ಆಗಾಗ ಮತ್ತೆ ಶ್ರುತಿಗೊಳಿಸಲೇಬೇಕಾಗುತ್ತದೆ. ಕನ್ನಡ ಬಂಡಾಯ ಕಾವ್ಯವೂ ಈಗ ತನ್ನ ಸ್ವರೂಪವನ್ನು ಮತ್ತೆ ಶ್ರುತಿಗೊಳಿಸಿಕೊಳ್ಳಬೇಕಾದ ಘಟ್ಟದಲ್ಲಿದೆ. ಕಾಲು ಶತಮಾನದ ಹಿಂದೆ ಪಾಬ್ಲೊ ನೆರೂದನ ಕಾವ್ಯವನ್ನು 'ಮರಳಿ ಬರುವೆ' ಸಂಕಲನದ ಮೂಲಕ ಕನ್ನಡಕ್ಕೆ ತಂದು, ಬಂಡಾಯದ ಚೈತನ್ಯಕ್ಕೆ ಕಾವು ಕೊಟ್ಟ ತೇಜಸ್ವಿನಿ ನಿರಂಜನ, ಆಗಲೇ ನೂರಾರು ಪೋಲಿಶ್ ಕವನಗಳನ್ನೂ ಕನ್ನಡಕ್ಕೆ ತಂದಿದ್ದರು. ತಮ್ಮ ತಳಮಳ, ತೇಜಸ್ಸಿನಿಂದ ಈಗಷ್ಟೇ ಕೊಯ್ದ ಹೂಗಳಂತಿರುವ ಆ ಕೆಲ ಪದ್ಯಗಳನ್ನು ಆಯ್ದು ಇಲ್ಲಿ ಕೊಡುತ್ತಿದ್ದೇವೆ. ಬಂಡಾಯ ಕಾವ್ಯದ ಸಾರ್ಥಕ ಮಾದರಿಯಾಗಿರುವ ಈ ಪದ್ಯಗಳು ಹೊಸ ತಲೆಮಾರಿನ ಕವಿಗಳಿಗೆ ಸ್ಫೂರ್ತಿ ನೀಡಲಿ ಎಂದು ಆಶಿಸುತ್ತೇವೆ.



ಮುಂಜಾವ

ಟೈಮೊಟ್ಯೂಷ್ ಕಾರ್ಪೊವಿಚ್



ಮಗುಚಿ ಬಿದ್ದ ಕನಸಿನ ಮೇಲೆ
ಹುಡುಗಿ ಕುಳಿತಿದ್ದಾಳೆ:
ಒಳಕ್ಕೆ ತಿರುಚಿದ ಮರಗಳೂ
ಒಳಪದರ ಹೊರಪದರವಾಗಿರುವ ಒಂದು ಪಕ್ಷಿಯೂ
ಅವಳಿಗೆ ಕಾಣಸುತ್ತಿವೆ

ಮರಗಳನ್ನು ಸರಿದೂಗಲು
ಪಕ್ಷಿಯನ್ನು ಸ್ಥಿರಗೊಳಿಸಲು
ಹುಡುಗಿ ಜಗತ್ತನ್ನು ಹಿಮ್ಮೊಗವಾಗಿ ತಿರುಗಿಸುತ್ತಾಳೆ

ಆಗ ಸಜೀವ ಪಕ್ಷಿಗಳೂ
ನಿಜವಾದ ಮರಗಳೂ
ಅವಳ ಮೇಲೆ ಮಳೆಯಂತೆ ಸುರಿಯುತ್ತವೆ

ಉರಿಯುವ ಒಂದು ಸೂರ್ಯ
ಅವಳ ತಲೆಗೂದಲತ್ತ ಸರಿಯುತ್ತಾನೆ

ಮೈಕೆಲೇಂಜೆಲೋ

ಕಾಜಿಮಿಾರ್ಜ್ ವೀರ್‌ಜಿನ್‌ಸ್ಕಿ

ಯೂರೋಪು ಖಂಡದ ಆತ್ಮವೇ ನಡುಗಿದ ಕಾಲವದು
ಮೈಕೆಲೇಂಜೆಲೋ
ಗೋಲದ ಕೆಳಗೆ
ರೋಮಿನಲ್ಲಿ
ದೇವರ ಹತ್ತಿರ
ಗಾರೆಯವನ ತೊಟ್ಟಿಲಲ್ಲಿ ತೂಗುತ್ತ
ಆರಾಧನಾ ಮಂದಿರ, ಛತ್ತು, ಗೋಡೆಗಳ ಮೇಲೆ
ಚಿತ್ರ ಬಿಡಿಸಿದ.

ಕೆಳಗೆ ಬಗ್ಗಿ
ಆತ ನೋಡಿದ
ಜಗಳಾಡುವ ಜನರನ್ನು
ಘೋರ ಯುದ್ಧಗಳನ್ನು;
ಮೇಲಿನಿಂದ ಗಟ್ಟಿಯಾಗಿ ಹೇಳಿದ:
''ಶಾಂತಿ! ಶಾಂತಿ!
ಇಲ್ದಿದ್ರೆ ನನ್ನ ಕುಂಚವನ್ನ ಕೆಳಕ್ಕೆಸೆದು
'ಜಗತ್ತಿನ ಸೃಷ್ಟಿ'ಯನ್ನ ನಿಲ್ಲಿಸೇನು!''

ದೇವತೆಗಳು

ಕೊನ್‌ಸ್ಟಾಂಟಿ ಇಲ್ದಿಫೋನ್ಸ್ ಗಾಲ್‌ಚಿನ್‌ಸ್ಕಿ

ನಿದ್ದೆ ಬರಿಸುತ್ತೇವೆ, ಚುಂಬಿಸುತ್ತೇವೆ
ನಮಿಸುತ್ತೇವೆ, ಕಳಿಸಿಬಿಡುತ್ತೇವೆ-
ದೇವತೆಗಳು ನಾವು

ತಿದ್ದುತ್ತೇವೆ, ಸ್ವರ ಸರಿಪಡಿಸುತ್ತೇವೆ
ಜಡಿದ ಬಾಗಿಲುಗಳನ್ನು ತೆರೆಯುತ್ತೇವೆ-
ದೇವತೆಗಳು ನಾವು

ಪ್ರೀತಿಸುತ್ತೇವೆ, ಕ್ಷಮಿಸುತ್ತೇವೆ
ನಿದ್ರಿಸುತ್ತೇವೆ, ಬದುಕುತ್ತೇವೆ-
ದೇವತೆಗಳು ನಾವು

ಮಳೆಯನ್ನು ಕುಡಿಯುತ್ತೇವೆ, ತಿನ್ನದೇ ಇರುತ್ತೇವೆ
ಕನ್ನಡಿಯಲ್ಲಿನ ಹೂಗಳು, ಮೂಕ ನೀಲಮಣಿ-
ದೇವತೆಗಳು ನಾವು



ಮುತ್ತು

ಮೈ ಚೆಸ್‌ಲಾವಾ ಬುಚ್‌ಕೋವ್ನಾ

ಇದು
ಸದ್ದಿಲ್ಲದ ಮುತ್ತು
ಎಷ್ಟು ನಿಶ್ಶಬ್ದವೆಂದರೆ
ನಿನ್ನ ಕಾತರಕ್ಕೆ ಎಚ್ಚರವೇ ಆಗಲಿಲ್ಲ
-ಕರಿ ಚಿಟ್ಟೆಯಂತಿತ್ತು

ನಮ್ಮ ಮೌನದ ಹಿಮಬಿದ್ದ ಬಯಲಿನ ಮೇಲೆ
ಹಾರಿ ಹೋಗುವ ಮುತ್ತಿನ ನೆರಳಿನ ಸಪ್ಪಳ
ಇನ್ನೂ ಕೇಳಿಸುತ್ತಿದೆ



ತಪ್ಪು ತಿಳಿವಳಿಕೆ

ಈವಾ ಲಿಪ್ಸ್ಕಾ

ಬಂದೂಕಿನ ಬಾಯಿಯಲ್ಲಿ ಹೂಕೋಸುಗಳು ಮೊಳಕೆಗಳು
ಕಾಣಿಸಿಕೊಂಡಾಗ
ಶಾಂತಿ ಅವತರಿಸಿತು ಭೂಮಿಗೆ ಎಂದುಕೊಂಡರು ಎಲ್ಲರೂ.
ಅದು ಹೊಸ ಸಿಡಿಮದ್ದು ಅಷ್ಟೆ.



ವ್ಯತ್ಯಾಸ

ಹಾಲಿನ್ ಪೊನ್ವಿಯಟೋವ್‌ಸ್ಕಾ

ನಿನ್ನ ಕವಿತೆಗಳನ್ನು ಬರೆದ
ಇವತ್ತು ಮುತ್ತುಗಳ ವಿತರಣೆ-
ನನ್ನ ಮುತ್ತುಗಳ ಬೆಲೆ ಕಮ್ಮಿ
ಕವಿತೆಗಳದೇ ಹೆಚ್ಚು

ಕವಿತೆಗಳನ್ನು ನಾನು ಬರೆಯುವುದು-
ಹೂವಿನ ಬಣ್ಣ ನನಗೆ ನೋವನ್ನುಂಟುಮಾಡಿದಾಗ ಮಾತ್ರ:
ರಾತ್ರಿಯಲ್ಲಿ ಹಾರುವ ಬಾವಲಿ
ನನ್ನ ಕೆನ್ನೆಯನ್ನು ಮುಟ್ಟಿದಾಗ ಮಾತ್ರ

ವರ್ಷದ ಪ್ರತಿ ಋತುವಿನಲ್ಲೂ ಮುತ್ತು ಕೊಡುತ್ತೇನೆ ನಾನು
ಆಕಸ್ಮಿಕವಾಗಿ ಸಿಕ್ಕಿದವರಿಗೆಲ್ಲ-
ವಿದ್ಯಾರ್ಥಿಗಳು... ವೈದ್ಯರು... ಕವಿಗಳು...

ನಾನು ಮುತ್ತುಗಳನ್ನು ಹಂಚುವ ಹಾಗೆ
ಅವರು ನನ್ನ ಬಗ್ಗೆ ಕವಿತೆ ಬರೆಯುತ್ತಾರೆ
ಕೈ ತುಂಬ:
ಯೋಚಿಸದೆ:
ಅವಸರವಾಗಿ

ಪಾಪ

ಲೋಥಾರ್ ಹರ್ಬ್‌ಸ್ಟ್

ನನ್ನ ಕತೆಯಲ್ಲಿ
ಆದಿಯಲ್ಲಿ
ಮನುಷ್ಯ ನೇತಾಡುತ್ತಿದ್ದ
ಅವನನ್ನು ಕೆಳಗಿಳಿಸಿದಾಗ
ಹಗ್ಗದಿಂದ
ಅವನ ನೆರಳು ನೇತಾಡಿತು,
ಬಳಿಕ ಹಗ್ಗದ ನೆರಳು ಮರದ ಬೆನ್ನೆಲುಬಿನ ಮೇಲಿತ್ತು
ಮನುಷ್ಯರ ಕೈಗಳ ಮೇಲಿತ್ತು

ಅದು ವೃತ್ತವಾಗಿರಲಿಲ್ಲ
ಅಂತ್ಯವೂ ಆಗಿರಲಿಲ್ಲ
ಅದು ನಿರಂತರ ನೀರು
ಕೈ ತೊಳೆಯುವುದಕ್ಕೆ ಕೊನೆಯೇ ಇಲ್ಲ.

ನನ್ನದು

ಮರಿಯನ್ ಜಚಿಮೊವಿಚ್

ಬೂದಿಯನ್ನು ಹೇರಿಕೊಂಡು ನಾನು
ಹೇಳುತ್ತೇನೆ:
''ಇದು ನನ್ನ ದೇಹ''

ಪುಸ್ತಕಗಳನ್ನು, ಪದಗಳನ್ನು ನೆನೆದು
ಹೇಳುತ್ತೇನೆ;
''ಇದು ನನ್ನ ವಿಚಾರ''

ನನ್ನೊಳಗೆ ಬೀಜವಿರುವ ತನಕ
ಹೇಳಬಲ್ಲೆ:
''ಇದು ನನ್ನ ಭವಿಷ್ಯ''





ಕವಿತೆ

ಬೊಗಸ್ಲಾ ಕೀರ್ಕ್

ಕುರುಡು ಹುಡುಗ
ಕವಿತೆಯ ಪ್ರಪಾತದ ಅಂಚಿನಲ್ಲಿ ನಿಂತು
ಜಾಲಿಮರದ ಸುವಾಸನೆಯನ್ನು
ನಂಬುಗೆಯಿಂದ ಹಿಡಿದಿದ್ದಾನೆ-
ಬಿಳಿ ಕೋಲಿನಂತೆ.

ಪ್ರತೀಕ್ಷೆ

ಯಾನ್ ಗೊರೆಕ್-ರೊಸಿನ್‌ಸ್ಕಿ

ನನಗೆ ಗೊತ್ತು-
ಮನುಜರಿಲ್ಲದ ಎರಡು ಗ್ರಹಗಳು
ಜೀವಕ್ಕಾಗಿ ಕಾಯುವಂತಿವೆ
ನಿನ್ನ ಕಣ್ಣುಗಳು

ನಾನು ಬಂದಾಗ
ನೀನು ಅವುಗಳಲ್ಲಿ ತುಂಬಿಸುತ್ತೀಯಾ
ಮೊದಲ, ಕೊನೆಯ ಕಂಬನಿಯನ್ನು.

ಹಳ್ಳಿಯ ಸಿನಿಮಾ

ಸ್ಟಾನಿಸ್‌ಲಾ ಗ್ರೊಕೊವಿಯಾಕ್

ನಮ್ಮ ಸಿನಿಮಾದಲ್ಲಿ 'ಹ್ಯಾಮ್‌ಲೆಟ್' ತೋರಿಸಿದರು.

ರೈತರು
ಸೇಬಿನ ಮರದ ಭಾರೀ ಕೊಂಬೆಯ ಕೆಳಗೆ
ಸಂಕಟದ ಆಳದಲ್ಲಿ ದೃಷ್ಟಿ ನೆಟ್ಟರು.

ಅನಂತರ ಕಳ್ಳ ಹೆಜ್ಜೆಯಿಂದ ಹೊಲಗಳನ್ನು ಹಾದು
ತೊರೆಗಳನ್ನು ದಾಟಿ
ಗುಡಿಸಲು ಸೇರಿ
ಮೊಟ್ಟಮೊದಲ ಬಾರಿ
ತಮ್ಮ ಹೆಂಗಸರ ಪಾದಗಳನ್ನು ಚುಂಬಿಸಿದರು-
ಆ ಮಹಿಳೆಯರು ಬೆರಗಾದರು.

ಸಂಜೆಯ ವೇಳೆ ನದಿಯ ದಂಡೆಯಲ್ಲಿ
ಹುಡುಗರು ನೀರಿನ ಮೇಲೆ ಮುಖವಿಟ್ಟು ಮಲಗಿ-
ವಿಚಿತ್ರ ರೀತಿಯಲ್ಲಿ, ಸರಾಗವಾಗಿ
ಮೂರ್ಖ ಒಫೀಲಿಯಾಳ ನೀಳ ಕೂದಲು
ಹೇಗೆ ಹರಿದು ಹೋಗುತ್ತಿದೆ
ಎಂದು ನೋಡುತ್ತಲಿದ್ದರು.

ಪೈಲ್ವಾನ್ ವೈ.ಎಂ.ಎನ್. ವಸಂತರಾವ್

ಹಂಗಿತ್ತು ಆ ಜಮಾನ!

ನಿರೂಪಣೆ: ಟಿ.ಆರ್. ರಾಧಾಕೃಷ್ಣ

ಈಗ ಐವತ್ತು-ಅರವತ್ತು ವರ್ಷಗಳ ಹಿಂದೆ ನಮ್ಮೂರು ಗರಡಿಗಳು ಹೆಂಗಿದ್ದವು? ಪೈಲ್ವಾನರು ಹೆಂಗಿರ್ತ ಇದ್ದರು? ಉಸ್ತಾದೆಗಳು-ಅವರ ಶಿಷ್ಯರು ಎಂಥ ಸಂಬಂಧ ಇಟ್ಟುಕೊಂಡಿರ್ತ ಇದ್ದರು, ಗರಡಿ ಮೇಲಿನ ಪ್ರೇಮ ಎಂಥದ್ದು? ಇವನ್ನೆಲ್ಲಾ ಯೋಚನೆ ಮಾಡ್ತಾ ಹೋದರೆ - ನನಗೆ ನಮ್ಮ ದುರ್ಗದ ಗರಡಿಗಳು, ಜನ ಎಲ್ಲಾ ನೆನಪಾಗ್ತಾಹೋಗ್ತಾರೆ.

ನಮ್ಮೂರಿನಲ್ಲಿ ಎಂಟು ಗರಡಿಗಳಿದ್ದರೂ, ಹೆಚ್ಚು ಹೆಸರು ಮಾಡಿದ ಗರಡಿಗಳು ಅಂದ್ರೆ, ದೊಡ್ಡ ಗರಡಿ, ಸಣ್ಣ ಗರಡಿ, ಬುರುಜನಹಟ್ಟಿ ಗರಡಿ, ಹಗಲು ದೀವಟಿಗೆ ಗರಡಿ ಮೊದಲಾದವು. ಎಂಟು ಗರಡಿಗಳು ಊರೊಳಗೆ ಇದಾವೆ ಅಂದ್ರೆ, ಎಷ್ಟು ಜನ ಪೈಲ್ವಾನರುಗಳು ಗರಡಿಗೆ ಬಂದು ಸಾಧನೆ ಮಾಡ್ತಾ ಇದ್ದರು ಎನ್ನುವುದನ್ನು ನಾವು ಯೋಚ್ನೆ ಮಾಡಿ ತಿಳ್ಕಬೇಕು. ಪ್ರತಿಯೊಂದು ಗರಡಿಗೂ ಊರಿನವರು, ಊರಿನವರಿಗಿಂತ ಗರಡಿಯ ಸುತ್ತ-ಮುತ್ತ ಇದ್ದ ದೊಡ್ಡ ಮನುಷ್ಯರು, ಯಜಮಾನರು, ಅಭಿಮಾನಿಗಳು ಯಾವಾಗಲೂ ಪ್ರೋತ್ಸಾಹ ಕೊಡೋರು. ಗರಡಿಯಲ್ಲಿ ಸಾಧನೆ ಮಾಡೋ ಸಣ್ಣ ಪೈಲ್ವಾನರು-ದೊಡ್ಡ ಪೈಲ್ವಾನರು ಇವರುಗಳಿಗೆಲ್ಲಾ ನಿಜವಾದ ಸ್ಫೂರ್ತಿ ಅಂದ್ರೆ ಹಿಂದೆ ನಮ್ಮ ದುರ್ಗಾನ ಆಳಿದ ಪಾಳೆಯಗಾರರೇ ಅನ್ನಬೇಕು. ಮದಕರಿನಾಯಕ ಬರೀ ಸಿಂಹಾಸನದ ಮೇಲ್ಕೆ ಕುತ್ಕಂಡು ಅಧಿಕಾರ ಚಲಾಯಿಸ ಪೈಕಿಯಲ್ಲ. ಗರಡಿಯಲ್ಲಿ ಸಾಮು ತೆಗೆದು ಗಟ್ಟುಮುಟ್ಟಾಗಿದ್ದ ಜಟ್ಟಿಗಳವರು. ಅವರಂತೆಯೇ ಧಿಮಾಕಿನಿಂದ, ದರ್ಪದಿಂದ, ಗಂಡಸ್ತನದಿಂದ ಬದುಕಬೇಕು ಅಂತ ಇಲ್ಲಿನ ಜನಗಳ ಮನಸ್ಸಿನಲ್ಲಿ ಇರುತ್ತದೆ. ಹಂಗಾಗಿ ಜನ, ಮತ್ತೆ ಯಜಮಾನರುಗಳು-ನಮ್ಮ ಗರಡಿ ಹುಡುಗರು ಹಿಂಗೇ ಬೆಳೀಬೇಕು, ಊರಿಗೆ ಹೆಸರು ತರಬೇಕು ಅಂತ ಇಷ್ಟ ಪಡೋರು.

ಗರಡಿಗೆ ಬರುತ್ತಿದ್ದ ಪೈಲ್ವಾನರಾದರೂ ಅಷ್ಟೆ. ಅವರು ಓಡಾಡೋ ರೀತಿ ನೋಡಿದರೆ ದೂರದಿಂದ ಜನ ತಿಳಕಳ್ಳದೇ ಬೇರೆ. ಅವರನ್ನು ಹತ್ತಿರದಿಂದ ನೋಡಿ ತಿಳಕಳ್ಳದೇ ಬೇರೆ. ಅವನ ಎತ್ತರ, ಗಾತ್ರ,, ದಪ್ಪ-ಗಿಪ್ಪ, ಓಡಾಡೋ ರೀತಿಯಿಂದ ಕೆಲವು ಜನ ಪೈಲ್ವಾನನ ಬಗ್ಗೆ ಕೆಟ್ಟ ಅಭಿಪ್ರಾಯ ತಾಳಿಬಿಟ್ಟಿರುತ್ತಾರೆ. ಗರಡಿಯಲ್ಲಿ ಸಾಧನೆ ಮಾಡಿದ, ಮಟ್ಟಿಯಲ್ಲಿ ಲಡತ್ ಮಾಡಿದ ಮೈ ಅಂದ್ರೆ, ಮೈ! ಪೈಲ್ವಾನ್ ದೇಹ ಅಂದ್ರೆ, ಹೈಕ್ಲಾಸ್ ದೇಹ ಅದು. ಕಲ್ಲಿನಲ್ಲಿ ಬೇಕಾದರೆ 'ಮಿಸ್ಟೇಕ್' ಬರಬಹುದು. ಆದರೆ ಸರಿಯಾದ ಪೈಲ್ವಾನ್ ದೇಹದಲ್ಲಿ 'ಮಿಸ್ಟೇಕ್' ಬರುವುದಿಲ್ಲ! ಅವನು ಒಂದು ಕೊಬ್ಬಿದ ಗೂಳಿ ಕಂಡಂಗೆ ಕಾಣಿಸ್ತಾನೆ. ಗೂಳಿ ನೋಡ್ತಿದ್ದಂಗೆ ಜನ ಹೆದರುತ್ತಾರೆ. ಭಯಪಡ್ತಾರೆ. ಆದರೆ ಅದರ ಕಾಲಡಿ ಒಂದು ಮಗು ತೂರಿ ಬಂದರೂ ಇರಿಯುವುದಿಲ್ಲ. ಅದು ಸಾಧು ಪ್ರಾಣಿ। ಈ ಪೈಲ್ವಾನ್ ಅನ್ನೋನೂ ಕೂಡಾ ಸಾಧು ಮನುಷ್ಯ-ಗೂಳಿಯಂತೆ ಕಂಡರೂ, ಹತ್ತಿರ ಬಂದು ನಮ್ಮನ್ನು ನೋಡಿದರೆ, ಮಾತಾಡಿದ್ರೆ ಇದು ಗೊತ್ತಾಗುತ್ತೆ.



ಪೈಲ್ವಾನರುಗಳ ಗುರು-ಶಿಷ್ಯ ಸಂಬಂಧ ಕೂಡಾ ಅಂಥದ್ದೆ. ಅನುಭವಿಸಿ ಅರ್ಥಮಾಡಿಕೊಳ್ಳೋ ಅಂಥಾದ್ದು. ಉಸ್ತಾದ್ ಕಣ್ಣು ಯಾವಾಗಲೂ ತನ್ನ ಶಿಷ್ಯನ ಮೇಲೇ ಇರುತ್ತೆ. ಅವನ ಮೈ ಕಟ್ಟು, ಅವನು ಕಲಿತಿರೋ ಪಟ್ಟು-ಇವನ್ನು ಉಸ್ತಾದ್ ಎಚ್ಚರಿಕೆಯಿಂದ ನೋಡ್ತಾ ಇರ್ತಾನೆ. ಗಬ್ಬದ ಕುರಿ ಹಿಂಡಿನಲ್ಲಿದ್ದಾಗ ಕುರುಬ ಹೆಂಗೆ ಅದನ್ನು ಕಣ್ಣಿಟ್ಟು ಕಾಯ್ತಾ ಇರ್ತಾನೋ, ಹಂಗೇನೆ ಶಿಷ್ಯನನ್ನು ಉಸ್ತಾದ್ ಯಾವಾಗಲೂ ಗಮನಿಸುತ್ತಿರುತ್ತಾನೆ. ಗುರುವಿಗೆ ತನ್ನ ಶಿಷ್ಯ ಗೆಲ್ಲಬೇಕು, ಹೆಸರು ಮಾಡ್ಬೇಕು ಅನ್ನೋದೆ ಬಾಳಾ ದೊಡ್ಡ ಚಿಂತೆ. ಶಿಷ್ಯ ಏನಾದರೂ ಅಖಾಡದಲ್ಲಿ ಬಿದ್ದ ಅಂದ್ರೆ, ಅವನ ತಳಮಳ, ಚಿಂತೆ, ಆತುಕೊಳ್ಳೋ ಗುಣ ಇವು ನಾನು ಆಗ್ಲೆ ತಿಳಿಸಿದಂತೆ ಅನುಭವಿಸಿ ಅರ್ಥಮಾಡಿಕೊಳ್ಳೋ ವಿಷಯಗಳು. ಇವು ನಿಮಗೆ ಅರ್ಥವಾಗಬೇಕಾದರೆ ಗರಡಿ ಹೊರಗೆ ನಿಂತ್ಕಬಾರದು. ಗರಡಿ ಒಳಕ್ಕೆ ಬರ್ಬೇಕು. ಉಸ್ತಾದ್-ಪೈಲ್ವಾನರುಗಳನ್ನು ನೋಡ್ಬೇಕು. ಆಗ ಮಾತ್ರ ಇವೆಲ್ಲಾ ತಿಳಿಯುತ್ತೆ.

ನಮ್ಮ ದೊಡ್ಡ ಗರಡಿಯಲ್ಲಿ ಬಹಳ ಹಿಂದಿನಿಂದಲೂ ಅರಬ್ಬರು, ಜಟ್ಟಿಗಳು ಅನ್ನೋ ಜನಾಂಗದವರು ಬಂದು ಸಾಧನೆ ಮಾಡ್ತಾ ಇದ್ದರು ಅನ್ನುವುದನ್ನು ಕೇಳಿದ್ದೀನಿ. ನನಗೆ



ಗೊತ್ತಿರುವ ದೊಡ್ಡ ಗರಡಿ ವಿಷಯ ಅಂದ್ರೆ, ಪ್ರಖ್ಯಾತ ಪೈಲ್ವಾನ್ ನಂಜಪ್ಪನವರ ಕಾಲದಿಂದ. ಆಗ ನಮ್ಮ ತಂದೆ ನಾರಾಣಪ್ಪರು ಅಲ್ಲಿ ಉಸ್ತಾದ್ ಆಗಿದ್ದರು. ಅದೇ ಸಮಯದಲ್ಲಿ ಕಾಲುಂಗರದ ಬುಡ್ಡಣ್ಣ ಅನ್ನೋರು ಕೂಡಾ ದೊಡ್ಡ ಗರಡಿಯಲ್ಲಿ ಉಸ್ತಾದ್ ಆಗಿದ್ದರು. ನಮ್ಮ ತಂದೆ ನಾರಾಣಪ್ಪರಿಗೂ ಕಾಲುಂಗರದ ಬುಡ್ಡಣ್ಣವರಿಗೂ ಏನೋ ಮಾತಿಗೆ ಮಾತು ಬೆಳೆದು ಮನಸ್ತಾಪ ಆಯ್ತು. ಅದೇ ಸಮಯದಲ್ಲಿ ಸಣ್ಣ ಗರಡಿಯಲ್ಲಿ ಉಸ್ತಾದ್ ಬೇಕಿತ್ತು. ಅಲ್ಲಿನ ದೊಡ್ಡ ಮನುಷ್ಯರುಗಳು ನಮ್ಮ ತಂದೆಗೆ ಕೇಳಿಕೊಂಡಿದ್ದರಿಂದ, ಅವರು ಸಣ್ಣ ಗರಡಿಗೆ ಉಸ್ತಾದ್ ಆಗಿ ಹೋದರು. ಆದರೆ ನಾನು ನಂಜಪ್ಪರ ಶಿಷ್ಯನಾಗಿ ದೊಡ್ಡ ಗರಡಿಯಲ್ಲೆ ಸಾಧನೆ ಮಾಡ್ಕೊಂಡು ಹೋದೆ. ನಾನು ದೊಡ್ಡ ಗರಡಿಯಲ್ಲಿ ಸಾಧನೆ ಮಾಡ್ತಾ ಇದ್ದ ಕಾಲದಲ್ಲಿ ಬೇಕುಬೇಕಾದಂಥ ಭಾರೀ ಪೈಲ್ವಾನರುಗಳು ಇದ್ದರು. ಅವರಲ್ಲಿ ಬಾಳಾ ಅಂದ್ರೆ, ಬಾಳಾ ಹೆಸರು ಮಾಡಿದ ಪೈಲ್ವಾನರುಗಳು ಎಂದರೆ ನಂಜಪ್ಪರು ಮತ್ತು ರಾಮಪ್ಪರು. ಆಗಿನ ಕಾಲದಲ್ಲಿ ಅವರಿಬ್ಬರ ಬಹಳಷ್ಟು ಕುಸ್ತಿ ನೋಡಿದ ಕುಸ್ತಿ ಪ್ರೇಮಿಗಳು 'ನಂಜಪ್ಪಂದು ಯುಕ್ತಿ; ರಾಮಪ್ಪಂದು ಶಕ್ತಿ' ಅಂತ ಮಾತಾಡಿಕೊಳ್ಳೋರು. ದೊಡ್ಡ ಗರಡಿಯಲ್ಲಿ ಪೈಲ್ವಾನ್ ನಂಜಪ್ಪ, ಪೈಲ್ವಾನ್ ರಾಮಪ್ಪ ಇವರುಗಳ ಜೊತೆ ಬಷೀರ್, ಬಸವರಾಜ್, ಕುಂಟುರಾಮಪ್ಪ, ಮರಾಟಿ ಹನುಮಂತಿ, ವೀರಪ್ಪ, ವೀರಭದ್ರಪ್ಪ, ಆಶಿಕ್ ಹುಸೇ಼ ಮೊದಲಾದ ಒಳ್ಳೆ ಪೈಲ್ವಾನರುಗಳೇ ಇದ್ದರು.

ಈ ಎಲ್ಲಾ ಪೈಲ್ವಾನರುಗಳ ಮೇಲೆ, ಗರಡಿಯ ಮೇಲೆ ಅನೇಕ ಯಜಮಾನರುಗಳು ಸದಾ ಕಣ್ಣಿಟ್ಟು ನೋಡಿಕೊಳ್ಳೋದರ ಜೊತೆಗೆ, ಗರಡಿ ನಮ್ಮದೆ, ಈ ಪೈಲ್ವಾನರುಗಳು ನಮ್ಮ ಹುಡುಗರೇ ಎಂಬ ಅಭಿಮಾನವಿಟ್ಟುಕೊಂಡು ಪ್ರೋತ್ಸಾಹ ಕೊಡೋರು. ಆಗ ನನ್ನ ಗುರುಗಳಾದ ನಂಜಪ್ಪರು ಮೇಲಕ್ಕೆ ಬರ್ತಿದ್ದ ಕಾಲ. ಬೇರೆ ಪೈಲ್ವಾನರುಗಳೂ ಮೇಲಕ್ಕೆ ಬರ್ತಿದ್ದ ಕಾಲ. ಇಂಥವರಿಗೆಲ್ಲಾ ಚೆನ್ನಾಗಿ ಕುಸ್ತಿ ಮರ್ಮ ತಿಳಿಸೋ ಅಂತ ಒಬ್ಬ ಉಸ್ತಾದ್ ಬೇಕಾಗಿದ್ದರು ಅಂತ ಗರಡಿಯ ಅಭಿಮಾನಿಗಳು, ಯಜಮಾನರುಗಳು ಅಂದ್ಕೊಳ್ತಿದ್ದರೇನೋ. ಅಂತಹ ಅಭಿಮಾನಿಗಳಲ್ಲಿ ಸಿ.ಬಿ. ಮಲ್ಲಪ್ಪರು ಒಬ್ಬರು.

ಸಿ.ಬಿ. ಮಲ್ಲಪ್ಪರು ಇಲ್ಲಿ ಕೌನ್ಸಿಲರ್ ಆಗಿದ್ದರು. ಅವರು ಈರುಳ್ಳಿ ವ್ಯಾಪಾರ ಮಾಡ್ತಾ ಇದ್ದರು. ಅವರು ದೊಡ್ಡ ಗರಡಿಯ ಹಿತೈಷಿಗಳು. ಬಾಳಾ ಕುಸ್ತಿ ಪ್ರೇಮಿ. ಈರುಳ್ಳಿ ವ್ಯಾಪಾರ ಮಾಡ್ತಾ ಇದ್ರಲ್ಲ.. ಆಗ ಒಂದ್ಸಾರಿ ಈರುಳ್ಳಿ ವ್ಯಾಪಾರಕ್ಕಾಗಿ ಮೈಸೂರಿಗೆ ಹೋಗಿದ್ದರು. ಆಗ ಮೈಸೂರಲ್ಲಿ ಕೆಲವು ಕಾಡಾಕಾಡಿ ಕುಸ್ತಿಗಳು ನಡೀತಿದ್ದವು. ಆ ಕುಸ್ತಿಗಳಲ್ಲಿ ಪಾಲ್ಗೊಳ್ಳೋಕೆ ಅಲ್ಲಿಗೆ ಪಂಜಾಬಿನಿಂದ ಆ ಕಾಲದಲ್ಲಿ ಭಾರೀ ದೊಡ್ಡ ಹೆಸರು ಮಾಡಿದ ಪರಿಪೈಗರ್ ಅವರು ಬಂದಿದ್ದರು. ಸಿ.ಬಿ. ಮಲ್ಲಪ್ಪರಿಗೆ ಪರಿಪೈಗರ್ ಅವರನ್ನು ನೋಡಿದೇಟಿಗೆ ನೆನಪಿಗೆ ಬಂದಿದ್ದು ದೊಡ್ಡ ಗರಡಿ. ಪರಿಪೈಗರ್ ಅವರನ್ನು ನಾನೇಕೆ ದುರ್ಗಕ್ಕೆ ಕರ್‍ಕೊಂಡು ಹೋಗಬಾರ್ದು? ಈತನ ಕೈಯಲ್ಲಿ ಪೈಲ್ವಾನ್ ನಂಜಪ್ಪ, ರಾಮಪ್ಪ, ಬಷೀರು, ಹನುಮಂತಿ, ಕುಂಟುರಾಮಪ್ಪ ಇವರಿಗೆಲ್ಲಾ ಟ್ರೈನಿಂಗ್ ಯಾಕೆ ಕೊಡಬಾರ್ದು? ಈತನ ಕೈಯಲ್ಲಿ ನಮ್ಮ ಪೈಲ್ವಾನರುಗಳು ನುರಿತರೆ, ಅವರಿಗ್ಗೂ ಹೆಸರು, ಗರಡಿಗೂ ಹೆಸರು ಅಂತ ಯೋಚ್ನೆ ಬಂತು ಅವರಿಗೆ. ಹಂಗೆ ಅನ್ನಿಸಿದ್ದೇ ತಡ ಪರಿಪೈಗರ್ ಅವರನ್ನು ಒಪ್ಪಿಸಿ, ಸ್ವಂತ ಖರ್ಚಿನಲ್ಲಿ ದುರ್ಗಕ್ಕೆ ಕರ್‍ಕೊಂಡು ಬಂದರು. ದೊಡ್ಡಗರಡಿಗೆ ಪರಿಪೈಗರ್ನ ಪರಿಚಯ ಮಾಡಿಸಿದರು. ಹಿಂಗೆ ಸಿ.ಬಿ. ಮಲ್ಲಪ್ಪನವರಿಂದ ಪರಿಪೈಗರ್ ದುರ್ಗದ ನೆಲಕ್ಕೆ ಕಾಲಿಟ್ಟರು.

ಪರಿಪೈಗರ್ ಅಂದ್ರೆ ಆರು-ಆರೂವರೆ ಅಡಿಯ ಎತ್ತರದ ಆಳು. ಗಿರಿಜಾಮೀಸೆ ಬಿಟ್ಟಿದ್ರು. ಗಟ್ಟಿಮುಟ್ಟಾದ ಬಲಶಾಲಿಯಾದ ಆಳು. ಆಗ ಪೈಲ್ವಾನ್ ನಂಜಪ್ಪ ಮತ್ತು ಪೈಲ್ವಾನ್ ರಾಮಪ್ಪ ಅವರು ಇಪ್ಪತ್ತೈದರಿಂದ ಇಪ್ಪತ್ತೆಂಟು ವಯಸ್ಸಿನವರಿರಬಹುದು. ಪರಿಪೈಗರ್ ಅವರು ಮಟ್ಟಿಯಲ್ಲಿಳಿದು ನಂಜಪ್ಪ, ರಾಮಪ್ಪ ಅವರಿಗೆ ಕೆಲಸ ಕಲಿಸುವಾಗ ಅವರ ಮೈಯಲ್ಲಿದ್ದ ಕಸುವು ನೋಡಬೇಕು! ಅವರು ಇಬ್ಬರು ಸೇರಿಕೊಂಡರೂ ಪರಿಪೈಗರ್ ಒಬ್ಬರನ್ನು ಬಗ್ಗಿಸಲು ಆಗುತ್ತಿರಲಿಲ್ಲ! ಅಂಥ ಆಳು ಆತ!

ಆತ ದುರ್ಗಕ್ಕೆ ಬಂದು ದುರ್ಗದವರೇ ಆದರು. ಜನಗಳ ಪ್ರೀತಿನೂ ಗಳಿಸಿದರು. ಅವರು ಬೀದಿಯಲ್ಲಿ ಓಡಾಡುತ್ತಿದ್ದರೆ ಸಣ್ಣಪುಟ್ಟ ಹುಡುಗರೆಲ್ಲಾ ಅವರಿಗೆ 'ಸಲಾಂ ಉಸ್ತಾದ್' ಎನ್ನೋರು. ಅವರು ನಕ್ಕೊಳ್ತಾ 'ಸಲಾಂ' ಎಂದ್ಕೊಂಡು ಮುಂದಕ್ಕೆ ಹೋಗೋರು. ಯಾರ್‍ಯಾರ ಮಣ್ಣಿನ ಋಣ ಎಲ್ಲಿರುತ್ತೋ ಗೊತ್ತಾಗಲ್ಲ. ಪರಿಪೈಗರ್ ಉಸ್ತಾದರು ಉಳಿದ ಜೀವನವನ್ನೆಲ್ಲಾ ದುರ್ಗದಲ್ಲೆ ಕಳೆದರು. ಇಲ್ಲಿಯೇ ಕೊನೆಯಲ್ಲಿ ಮಣ್ಣಾದರು; ಸಮಾಧಿಯಾದರು. ಪರಿಪೈಗರ್ ಅವರು ಬರಬೇಕಾದರೆ ಜೊತೆಗೆ ತಮ್ಮ ಮಗ ಆಶಿಕ್ ಹುಸೇ಼ ಅವರನ್ನು ಕರ್‍ಕೊಂಡು ಬಂದಿದ್ದರು. ಅವರೂ ಅಷ್ಟೇನೆ. ದೊಡ್ಡಗರಡಿ ಪೈಲ್ವಾನಾಗಿ ಇಲ್ಲಿಯೇ ಉಳಿದರು. ಅವರು ಮೊನ್ನೆ ಮೊನ್ನೆ ಕೆಲವು ವರ್ಷಗಳ ಹಿಂದೆ ತೀರಿಕೊಂಡರು.

ಆಗ ನಮ್ಮೂರಿಗೆ ಕುಸ್ತಿಗಾಗಿ ದಾವಣಗೆರೆಯಿಂದ ಭರ್ಜರಿ ಚಾಲೆಂಜಿಂಗ್ ಪೈಲ್ವಾನರುಗಳು ಬರ್ತಾ ಇದ್ದರು. ಹಂಗೆ ದಾವಣಗೆರೆಯಿಂದ ಬರ್ತಾ ಇದ್ದ ಪೈಲ್ವಾನರುಗಳ ಪೈಕಿ ಕೆಂಪು ಸಿದ್ದಪ್ಪ ಅನ್ನೋನು ಒಬ್ಬ. ಆತನ ಹೆಸರು ಕೇಳಿದರೆ ಅವನ ಜೊತೆ ಹಾಕ್ಕೊಂಡು ಕುಸ್ತಿ ಆಡೋಕೆ ಬೇರೆ ಪೈಲ್ವಾನರುಗಳು ನಡುಗುತ್ತಿದ್ದರು. ಅವನು ಅಖಾಡದಲ್ಲಿ ಎಂದೂ ಬಿದ್ದ ಪೈಲ್ವಾನೇ ಅಲ್ಲ.

ಆ ಕೆಂಪು ಸಿದ್ದಪ್ಪನ ಮೇಲೆ ನಮ್ಮ ತಂದೆಯವರ ಶಿಷ್ಯ ಈರಣ್ಣನ ಕುಸ್ತಿ ಆಯ್ತು ಒಂದು ಸರ್ತಿ. ಅರ್ಧ, ಮುಕ್ಕಾಲುಗಂಟೆ ಆಡಿದ ಭಾರೀ ಕುಸ್ತಿ ಅದು. ನಮ್ಮ ಗರಡಿಯ ಈರಣ್ಣ ಆ ಕುಸ್ತೀಲಿ ಗೆದ್ದು ಬಿಟ್ಟ. ಕುಸ್ತಿ ನೋಡಿದ ದುರ್ಗದ ಜನಕ್ಕೇನೋ ಖುಷಿಯಾಯ್ತು. ಆದರೆ ಕೆಂಪು ಸಿದ್ದಪ್ಪನ ಗುರು ಸಣ್ಣ ನೀಲಪ್ಪ ಅಂತ. ಆತ ಶಿಷ್ಯನ ಸೋಲು ನೋಡಿಕೊಂಡು ಬಾಳಾ ಬೇಜಾರು ಮಾಡಿಕೊಂಡುಬಿಟ್ಟ. ಅವನೇನು ಮಾಡಿದ.. ಅಖಾಡಕ್ಕೆ ನುಗ್ಗಿ ಬಂದು ನಿಂತ್ಕೊಂಡು ಗೆದ್ದ ಈರಣ್ಣನ ಮೇಲೆ ಸವಾಲು ಹಾಕಲಿಲ್ಲ. ''ನಿನ್ನ ಗುರುವಿನ ಮೇಲೆ ನನ್ನ ಸವಾಲ್!'' ಎಂದು ಆರ್ಭಟಿಸಿಬಿಟ್ಟ! ಆಗ ನಮ್ಮ ತಂದೆ ನಾರಾಣಪ್ಪನವರು ರೇಗುವುದರ ಬದಲು ''ನಾನ್ಯಾಕಪ್ಪ ನಿನ್ನ ಸವಾಲ್ ಸ್ವೀಕರಿಸಬೇಕು. ನಿನ್ನ ಸವಾಲಿಗೆ ನನ್ನ ಶಿಷ್ಯನೇ ಸಾಕು'' ಎಂದರು. ಆದರೆ ಕುಸ್ತಿ ವ್ಯವಸ್ಥಾಪಕರು ಅನ್ನಿಸಿಕೊಂಡವರು, ದೊಡ್ಡವರು ಅನ್ನಿಸಿಕೊಂಡವರು ಅಡ್ಡಬಂದು, ಆ ಕುಸ್ತಿ, ಸವಾಲು ಜಟಾಪಟಿಗೆ ಹೋಗದಂತೆ ನೋಡಿಕೊಂಡರು. ಇಬ್ಬರನ್ನೂ ಸಮಾಧಾನಪಡಿಸಿದರು.



ಪ್ಯಾರ್

ನಮ್ಮ ದೊಡ್ಡ ಗರಡಿಯಲ್ಲಿ ಒಬ್ಬ ಸಾಬರ ಹುಡುಗ ಸಾಧನೆ ಮಾಡ್ತಾ ಇದ್ದ. ಅವನು ಕುಸ್ತಿಯೊಳಗೆ ಮೇಲಕ್ಕೆ ಬರೋ ಅಂತ ಲಕ್ಷಣಗಳಿದ್ದವು. ನಮ್ಮ ಗುರುಗಳಾದ ನಂಜಪ್ಪರು ನಮಗೆಲ್ಲಾ ಒಂದು ಮಾತು ಹೇಳೋರು- 'ಒಂದು ಕುಸ್ತೀಲಿ ಒಬ್ಬ ಪೈಲ್ವಾನ್ ಗೆಲ್ಲೋ ತನಕ ನಾವು ಅವಿಗೆ'ಪುಶ್' ಮಾಡ್ಬೇಕು. ಒಂದ್ಸಾರಿ ಅವನು ಕುಸ್ತಿ ಗೆದ್ದ ಅಂದ್ರೆ ಅವನು ಸಾಲುಗಟ್ಟಿ ಕುಸ್ತೀನಾ ಹೊಡಿತಾನೇ ಹೋಗ್ತಾನೆ. ಅಲ್ಲೀತನಕ ಅವನಿಗೆ ದಾರಿ ತೋರಿಸ್ಬೇಕು; ಪ್ರೋತ್ಸಾಹ ಕೊಡಬೇಕು' ಅದಕ್ಕಾಗಿ ನಾವು ನಮ್ಮ ಗರಡಿಯ ಈ ಮುಸ್ಲಿಂ ಪೈಲ್ವಾನ್ ದಸ್ತಗೀರ್ ಸಾಬ್‌ನನ್ನು ಸರಿಯಾದ ಸಮಯ ನೋಡಿ ಅಖಾಡಕ್ಕಿಳಿಸಿ ಗೆಲ್ಲಿಸಬೇಕು ಅಂತ ಕಾಯ್ತಾ ಇದ್ದಿವಿ.

ಅದೇ ಸಮಯದಲ್ಲಿ ಭರಮ ಸಾಗರದಲ್ಲಿ ಜಾತ್ರೆ ನಡೀತಿತ್ತು. ಇಂಥ ಜಾತ್ರೆ ಸಮಯದಲ್ಲಿ ಕುಸ್ತಿಗಳ ವ್ಯವಸ್ಥೆ ಮಾಡ್ತಾ ಇದ್ದರು. ಭರಮಸಾಗರದ ಜಾತ್ರೆ ಕುಸ್ತಿಯಲ್ಲಿ ನಮ್ಮ ಗರಡಿ ಹುಡುಗ ದಸ್ತಗೀರ್ ಸಾಬ್‌ನನ್ನು ಆಡಿಸಲು ಏರ್ಪಾಡು ಮಾಡಿದ್ದೆವು. ಒಳ್ಳೇ ಕಟ್ಟುಮಸ್ತಾದ ಆಳು ದಸ್ತಗೀರ್. ನಂಜಪ್ಪರು ಹೇಳ್ದಂಗೆ ಒಂದ್ಸಾರಿ ಗೆಲ್ಲಿಸಿ ಕರ್ಕೊಂಡು ಬರೋದು ಅಂತ ನಮ್ಮ ಗರಡಿ ಹುಡುಗರೆಲ್ಲಾ ಅವನ ಜೊತೆಗೆ ಭರಮಸಾಗರಕ್ಕೆ ಹೋಗಿಬಿಟ್ಟಿದ್ದರು.

ನಾನು ಆ ದಿವ್ಸ ಚಿಕ್ಕಪೇಟೆಯಿಂದ ನನ್ನ ಟೈಲರಿಂಗ್ ಷಾಪಿಗೆ ಬೀಗ ಹಾಕಿ ಊಟಕ್ಕೆ ಅಂತ ಮನೆಗೆ ಬರ್ತಾ ಇದ್ದೆ. ದೊಡ್ಡಪೇಟೆಯಲ್ಲಿ ಮಿಶಿನ್ ರಾಜಣ್ಣನ ಅಂಗಡಿ ಮುಂದೆ ನಮ್ಮ ಕೌನ್ಸಿಲರ್ ನಾಗರಾಜು, ಇನ್ನೂ ಯಾರ್‍ಯಾರೋ ನಿಂತಿದ್ದರು. ಭರಮಸಾಗರದಲ್ಲಿ ನಡೀತಿದ್ದ ಕುಸ್ತಿ ವಿಷಯ ತಿಳಿಸಿ 'ನಡಿಯಣ್ಣ.. ಹೋಗಿ ಬರಾಣ' ಎಂದರು. ನಾನು ಕುಸ್ತಿ ಮೇಲಿನ ಆಸೆಯಿಂದ ಮನೆಗೆ ಊಟಕ್ಕೇ ಹೋಗಲಿಲ್ಲ. ನಾವೊಂದು ನಾಲ್ಕೈದು ಜನ ಕುಸ್ತಿ ನೋಡಿಕೊಂಡು ಬರೋಣ ಅಂದ್ಕೊಂಡು ಭರಮಸಾಗರಕ್ಕೆ ಹಂಗೆ ಹೊರಟೇಬಿಟ್ಟೆವು.

ನಮ್ಮ ಗರಡಿ ಪೈಲ್ವಾನ್ ದಸ್ತಗೀರ್ ಜೊತೆಗೆ ಮಾಯಕೊಂಡದ ಒಬ್ಬ ಪೈಲ್ವಾನ್ ಜೊತೆ ಮಾಡಿದ್ದರು. ದಸ್ತಗೀರ್‌ನನ್ನು ಗೆಲ್ಲಿಸಿಕೊಂಡು ಕರ್ಕೊಂಡು ಬರಬೇಕು ಅಂತ ನಮ್ಮ ಯೋಚನೆ ಇತ್ತಲ್ಲ. ಅದೇ ತಲೆಕೆಳಗಾಯ್ತು. ಆ ಮಾಯಕೊಂಡದ ಪೈಲ್ವಾನ್ ಒಂದೇ ಏಟಿಗೆ ದಸ್ತಗೀರ್ ಸಾಬ್‌ನನ್ನು ಚಿತ್ತುಮಾಡಿಬಿಟ್ಟ. ಆಮೇಲೆ ಅದೇ ಮಾಯಕೊಂಡದ ಪೈಲ್ವಾನ್ ಜೊತೆ ನಮ್ಮ ದೊಡ್ಡ ಗರಡಿ ಹುಡುಗರು-ಒಳ್ಳೇ ಬಲಶಾಲಿಗಳು. ಒಬ್ಬೊಬ್ಬರೆ, ಒಬ್ಬೊಬ್ಬರೆ ಅಂತ ಐದಾರು ಜನ ಅಖಾಡದಲ್ಲಿ ಹೋಗಿ ಸೋತು ಬಂದರು. ಅವರಲ್ಲಿ ಕಂಟ್ರ್ಯಾಕ್ಟರ್ ತಿಮ್ಮಣ್ಣರ ಮಗ ತಿಪ್ಪೇಸ್ವಾಮೀನೂ ಇದ್ದ. ಅವನೂ ಸೋತುಬಿಟ್ಟ.

''ಸಾಕು ನಡಿಯಪ್ಪ.... ಇನ್ನೇನು ಕುಸ್ತಿ ನೋಡೋಣ'' ಅಂತ ನಾವೆಲ್ಲಾ ಮಾತಾಡಿಕೊಂಡು ಕೊಡವಿಕೊಂಡು ಎದ್ದೇಳಬೇಕು... ಅಷ್ಟರಲ್ಲಿ ಕುಸ್ತಿ ವ್ಯವಸ್ಥಾಪಕರು ನಮ್ಮನ್ನು ತಡೆದು, ''ಇನ್ನೂ ಬೇಕಾದಷ್ಟು ಕುಸ್ತಿಗಳು ಇದಾವೆ.. ಪೈಲ್ವಾನರೆ ನೀವ್ಯಾಕೆ ಬೇಜಾರು ಮಾಡ್ಕೊಳ್ಳಬೇಕು... ಹೋಗಬ್ಯಾಡ್ರಿ... ಇರ್ರಿ'' ಎಂದರು. ಮತ್ತೆ ಕುಂತ್ಕೊಂಡ್ವಿ.

ಆದರೆ ಹಂಗೆ-ಹಿಂಗೆ ಅನ್ನೋದರೊಳಗೆ ಒಂದಾದ ಮೇಲೊಂದು ಕುಸ್ತಿ ಬಿದ್ದು, ಕೊನೆಯಲ್ಲಿ ಕುಸ್ತಿ ವ್ಯವಸ್ಥಾಪಕರು 'ಸಾರು ಬಳೆ' ಹಿಡಿದುಬಿಟ್ಟರು. 'ಸಾರು ಬಳೆ' ಅಂದರೆ ಇಂಥ ಪೈಲ್ವಾನರ ಜೊತೆಯಲ್ಲಿ ಯಾರಾದರೂ ಕುಸ್ತಿ ಆಡಲು ತಯಾರಿದ್ದಾರಾ? ಅಂಥ ಅಖಾಡದಲ್ಲಿ ಕೂಗ್ತಾರೆ. ಆಡೋಕೆ ಯಾವ ಪೈಲ್ವಾನನೂ ಮುಂದೆ ಬರದಿದ್ರೆ ಆ ಬಳೆಯನ್ನು ಆ ಪೈಲ್ವಾನನಿಗೆ ತೊಡಿಸಿಬಿಡುತ್ತಾರೆ. ಅದು ಆ ಪೈಲ್ವಾನನಿಗೆ ಆ ಕಾಲದಲ್ಲಿ ಸಿಕ್ಕುತ್ತಿದ್ದ ದೊಡ್ಡ ಗೌರವ. ಯಾವಾಗ ಅಖಾಡದಲ್ಲಿ ಸಾರುಬಳೆ ಹಿಡಿದು ಕೂಗಿಬಿಟ್ಟರೋ, ನಮ್ಮ ಗರಡಿ ಹುಡುಗರೆಲ್ಲಾ ಮುಖಮುಖ ನೋಡಿಕೊಂಡರು. ಸೋಲೊಪ್ಪಿಕೊಂಡು ಊರಿಗೆ ವಾಪಸ್ಸು ಹೋಗೋಕೆ ಮನಸ್ಸಿಲ್ಲ. ಕುಸ್ತಿಗೆ ಬಿಡೋಕೆ ಪೈಲ್ವಾನರಿಲ್ಲ! ಹಿಂಗಾಗೋಯ್ತು ಪರಿಸ್ಥಿತಿ. ಕೊನೆಗೆ ನಮ್ಮ ಗರಡಿ ಹುಡುಗರು ನನ್ನ ಕಡೆಗೆ ತಿರುಗಿ ''ಅಣ್ಣ... ನೀನೇ ಆ ಸಾರುಬಳೆ ಹಿಡಿದು ಬಿಡಣ್ಣ... ಇದು ನಮ್ಮ ಗರಡಿ ಮರ್ಯಾದೆ ಪ್ರಶ್ನೆ ಐತೆ'' ಎಂದರು.

ಆಗ ನಾನು ಆರುಮಕ್ಕಳ ತಂದೆ! ಕುಸ್ತಿ ಬಿಟ್ಟೇ ಅದೆಷ್ಟೋ ವರ್ಷ ಆಗಿತ್ತು. ಒಂದೇ ಸಮನೆ ಕುಸ್ತಿ ನೋಡಿದ್ದಕ್ಕೊ, ನಮ್ಮ ಹುಡುಗರು ಬಲವಂತ ಮಾಡಿದ್ದಕ್ಕೋ-ಅದೊಂದು ಥರಾ ಟೆನ್ಷನ್ ಆಗಿ-ಅಖಾಡದಲ್ಲಿ ಹೋಗಿ ಸಾರು ಬಳೆ ಹಿಡಿದುಬಿಟ್ಟೆ. ಕುಸ್ತಿ ನೋಡ್ಕೊಂಡ್

ಹೋಗೋದಿಕ್ಕೆ ಬಂದಿದ್ದವನು ನಾನು! ಆದ್ದರಿಂದ ಕುಸ್ತಿ ಆಡೋದಿಕ್ಕೆ ಲಂಗೋಟೀನೆ ತಂದಿರಲಿಲ್ಲ! ನಮ್ಮ ಹುಡುಗರ್ದೆ ಒಬ್ಬರದು ಲಂಗೋಟಿ ಕಟ್ಕೊಂಡು ಅಖಾಡದಲ್ಲಿ ಇಳಿದೆ. ಆ ವಯಸ್ಸಿನಲ್ಲಿ ಕುಸ್ತಿ ಆಡೋದಿಕ್ಕೆ ಅಂತ ಅಖಾಡಕ್ಕಿಳಿದಿದ್ದರೂ, ನಮ್ಮ ಹುಡುಗರಿಗೆ ನಿರಾಶೆ ಮಾಡಲಿಲ್ಲ. ಮಾಯಕೊಂಡದ ಆ ಪೈಲ್ವಾನನ್ನು ಸೋಲಿಸಿದೆ.

ನಾಟಕ, ಸಂಗೀತದ ಖಾಯಶ್ ಯಾರಿಗಿರುತ್ತೋ ಅವರು ಅದನ್ನು ಹುಡುಕಿಕೊಂಡು ಎಲ್ಲಿಗೆ ಬೇಕಾದರೂ ಹೋಗ್ತಾರೆ. ಕುಸ್ತಿಯೂ ಕೂಡಾ ಅಂಥದ್ದೆ ಒಂದು ಮನುಷ್ಯನ ಖಾಯಶ್, ಖಯಾಲಿ. ಅಂಥ ಮನುಷ್ಯರಿದ್ರೇನೆ ಕುಸ್ತಿ ಕಲೆ ಉಳಿದು ಬೆಳೆಯೋದು. ಪೈಲ್ವಾನರಿಗೂ ಗೌರವ ಸಿಕ್ಕೋದು. ಪೈಲ್ವಾನರೂ ಕೂಡಾ ಕುಸ್ತಿ ಬಗ್ಗೆ ಆಸಕ್ತಿ ಉಳಿಸಿಕೊಳ್ಳೋದು. ಈಗ ಅರವತ್ತು ವರ್ಷಗಳ ಹಿಂದೆ ಹಿಂಗೆ ಕುಸ್ತಿಗೆ ಉತ್ತೇಜನ ಕೊಡೋರು, ಕುಸ್ತಿ ನೋಡಿ ಖುಷಿ ಪಡೋರು ಬಾಳಾ ಜನ ಇದ್ದರು. ಈ ಕುಸ್ತಿ ಖಯಾಲಿ ಒಮ್ಮೆ ಒಬ್ಬರಿಗೆ ಬಂತು ಅಂದ್ರೆ, ಅದು ಅವರ ಜೀವಮಾನದಲ್ಲೆ ಅಳಿಸುವುದಕ್ಕೆ ಆಗುವುದಿಲ್ಲ.

ದಾವಣಗೆರೆಯಲ್ಲಿ ಮಾನಿ ಉಜ್ಜಪ್ಪ ಅಂತ ಆಗಿನ ದಿನಗಳಲ್ಲಿ ಒಬ್ಬರಿದ್ದರು. ಆತನಿಗೆ ಈ ಥರದ್ದು ಕುಸ್ತಿ ಖಯಾಲಿ ಜಾಸ್ತಿ. ಅದರಲ್ಲೆ ಆತ ತನ್ನ ಆಸ್ತಿ-ಪಾಸ್ತಿನೆಲ್ಲಾ ಕರಗಿಸಿಬಿಟ್ಟ. ದೊಡ್ಡ ದೊಡ್ಡ ಪೈಲ್ವಾನರನ್ನೆಲ್ಲಾ ದಾವಣಗೆರೆಗೆ ಕರೆಸಬೇಕು ಅಂದರೆ ಆತನಿಗೆ ಬಾಳಾ ಇಷ್ಟ, ಆಸಕ್ತಿ. ಹೇಳ್ಬೇಕು ಅಂದರೆ ಆಗ ಭಾರೀ ಪ್ರಖ್ಯಾತಿಯಾಗಿದ್ದ ಪಂಜಾಬಿನ ಗಾಮಾ ಪೈಲ್ವಾನನನ್ನು ದಾವಣಗೆರೆಗೆ ಕರೆಸಿದ್ದ. ಅಂಥ ಪ್ರಪಂಚದಲ್ಲೇ ಪ್ರಖ್ಯಾತಿಯಾದ ಗಾಮಾ ಪೈಲ್ವಾನ್ ಜೊತೆಯಲ್ಲಿ ಕುಸ್ತಿ ಆಡೋಕೆ ಯಾರಿಗೆ ಗುಂಡಿಗೆ ಇರುತ್ತದೆ! ಯಾರು ಮುಂದು ಬರ್ತಾರೆ! ಆಗ ಮಾನಿ ಉಜ್ಜಪ್ಪ ಗಾಮಾ ಪೈಲ್ವಾನ್ ಮತ್ತು ಆತನ ಜೊತೆಗೆ ಬಂದಿದ್ದ ಅವನ ಮಗನನ್ನು ಲಂಗೋಟಿ ಹಾಕಿಸಿ ಖಾಲಿ ಅಖಾಡದಲ್ಲಿ ನಾಲ್ಕು ಸುತ್ತು ಓಡಾಡಿಸಿದ! ಅವರಿಬ್ಬರ ಲಡತ್ ಮಾಡಿದ ಮೈ ನೋಡಿ ಖುಷಿಪಟ್ಟ. ಅವರಿಗೆ ಕರೆಸಿದ್ದಕ್ಕಾಗಿ ಕೊಡಬೇಕಾದುದನ್ನು ಕೊಟ್ಟು ಕಳುಹಿಸಿದ. ಹಿಂಗೆ ಕುಸ್ತಿ ಆಡಿಸಿ, ಆಡಿಸಿ ಮೆತ್ತಗಾಗಿದ್ದರೂ ಮಾನಿ ಉಜ್ಜಪ್ಪನ ನೇತೃತ್ವದಲ್ಲಿ, ಉಸ್ತುವಾರಿಯಲ್ಲಿ ಕುಸ್ತಿಗಳು ನಡೆಯುತ್ತಲೇ ಇದ್ದವು.

ಅವು ಕಾಂಟ್ರ್ಯಾಕ್ಟ್ ಕುಸ್ತಿಗಳು. ಜೋಡಿ ಮೇಲೆ ಹಣ ನಿಗದಿಪಡಿಸಿ ಗೆದ್ದೋರಿಗೆ ಇಷ್ಟು, ಬಿದ್ದೋರಿಗಿಷ್ಟು ಅಂತ ಕೊಡೋರು. ಮಾನಿ ಉಜ್ಜಪ್ಪ ಕುಸ್ತಿಗೆ ಒಪ್ಪಿಸಿದ ಮೇಲೆ ಹೇಳಿದಷ್ಟು, ನಿಗದಿಪಡಿಸಿದಷ್ಟು ಹಣವನ್ನು ಪೈಲ್ವಾನರಿಗೆ ಕೊಡ್ತಾ ಇರಲಿಲ್ಲ. ಐನೂರು ರೂಪಾಯಿ ಮಾತಾಡಿದರೆ ಉಜ್ಜಪ್ಪ ಕೊಡ್ತಾ ಇದ್ದುದು ಮುನ್ನೂರು ರೂಪಾಯಿ. ಹಿಂಗೆ ಆತ ಚೌಕಾಸಿ ಮಾಡಿದರೂ ಪೈಲ್ವಾನರುಗಳು -''ಹೋಗ್ಲಿ ಬಿಡು ಅಜ್ಜ... ಅವನು ಯಾವಾಗಲೂ ಹಿಂಗೆ'' ಎಂದು ಸುಧಾರಿಸಿಕೊಂಡು ಬಿಡುವರು.


ಒಂದ್ಸಾರಿ ಏನಾಯ್ತು ಅಂದ್ರೆ, ದುರ್ಗದ ನಂಜಪ್ಪರು ಬೆಳಗಾಂ ಕಡೆಯ ಒಬ್ಬ ಪೈಲ್ವಾನ್ ಮೇಲೆ ಕುಸ್ತಿ ಆಡೋಕೆ ಜೊತೆ ಹಾಕ್ಕೊಂಡ್ರು. ಉಜ್ಜಪ್ಪನ ಚೌಕಾಸಿ ಎಲ್ಲರಿಗೂ ಗೊತ್ತಿದ್ದದ್ದೆ. ನಂಜಪ್ಪರೇನೋ ಕುಸ್ತಿಗೆ ಒಪ್ಪಿಕೊಂಡುಬಿಟ್ಟರು. ನಂಜಪ್ಪರು ಕುಸ್ತಿ ಆಡ್ತಾರೆ ಅಂತ ಗೊತ್ತಾಗಿ ಜನ ಅಂದ್ರೆ ಜನ ಸೇರ್ಕೊಂಡು ಬಿಟ್ಟರು. ಬೆಳಗಾಂ ಪೈಲ್ವಾನ್ ಏನ್ ಮಾಡಿದ. ಬಟ್ಟೆ ಬಿಚ್ಚಲಿಲ್ಲ. ಲಂಗೋಟಿ ಕಟ್ಟಲಿಲ್ಲ. ಅಖಾಡಕ್ಕಿಳಿಯಲಿಲ್ಲ. ಉಜ್ಜಪ್ಪ ಎಷ್ಟು ಬಲವಂತ ಮಾಡಿದರೂ ಬೆಳಗಾಂ ಪೈಲ್ವಾನ್ ''ಪೂರ್ತಿ ಹಣ ಮುಂದಕ್ಕಿಡು ಆಡ್ತೀನಿ'' ಎಂದು ಮೊಂಡುಹಿಡಿದುಬಿಟ್ಟ. ''ಕೊಡ್ತೀನಿ ತಗಳಲೇ ತಮ್ಮಾ'' ಎಂದು ಉಜ್ಜಪ್ಪ ಎಷ್ಟು ಪುಸಲಾಯಿಸಿದರೂ, ಹಿಂಗೆ ನಂಬಿಸಿ ಕೊಡಲ್ಲ.... ಕಡಿಮೆ ಕೊಡ್ತಾನೆ ಎಂದು ತಿಳ್ಕಂಡಿದ್ದ ಬೆಳಗಾಂ ಪೈಲ್ವಾನ್ ಈತನ ಮಾತನ್ನು ಕಿವಿಮೇಲೆ ಹಾಕ್ಕೊಳ್ಳಲಿಲ್ಲ. ಪೂರ್ತಿ ಹಣ ಎದುರಿಗಿಟ್ಟ ಮೇಲೇನೇ ಆತ ಅಖಾಡಕ್ಕಿಳಿದಿದ್ದು!

ಮಾನಿ ಉಜ್ಜಪ್ಪನಿಗೆ ದಾವಣಗೆರೆ-ದುರ್ಗದವರೆಲ್ಲಾ ಒಂದೆ. ಅವನಿಗೆ ಈ ರೀತಿ ಹಟಮಾಡಿ ಹಣ ಕಕ್ಕಿಸಿದ ಬೆಳಗಾಂ ಪೈಲ್ವಾನ್ ಕಂಡು ಹೊಟ್ಟೆ ತುಂಬಾ ಸಿಟ್ಟು ಬಂದರೂ ತೋರಿಸಿಕೊಳ್ಳದೆ, ನಗೆಯಾಡ್ತಾ ನಂಜಪ್ಪನ ಬಳಿಗೆ ಬಂದು -

''ನಂಜಪ್ಪ... ನೋಡು ಅವನು ಹೆಂಗೆ ಹಟ ಮಾಡಿದ.... ನೀನು ಅವನನ್ನು ಒಂದೇ ಏಟಿಗೆ ಚಿತ್ತುಮಾಡಿ ನನ್ನ ಮನಸ್ಸಿಗೆ ಖುಷಿ ಪಡಿಸಬೇಕು'' ಎಂದ.

ನಿಜಕ್ಕೂ ನಂಜಪ್ಪ ಮಾನಿ ಉಜ್ಜಪ್ಪನಿಗೆ ಕೊಟ್ಟ ಮಾತ್ನ ನಡೆಸಿಕೊಡೋ ರೀತಿಯಲ್ಲೇ ಬೆಳಗಾಂ ಪೈಲ್ವಾನ್ ಜೊತೆಯಲ್ಲಿ ಕುಸ್ತಿ ಮಾಡಿದ. ಕುಸ್ತಿಪಟುವಾಗಿ ದೊಡ್ಡ ಹೆಸರು ಮಾಡಿದ್ದ ನಂಜಪ್ಪ 'ದೋಬಿಚಾಟ್' ಪಟ್ಟಲ್ಲಿ ಪ್ರಖ್ಯಾತಿ. ಹೇಳಬೇಕು ಅಂದ್ರೆ, 'ದೋಬಿಚಾಟ್', 'ದೋಬಿಚಾಟ್' ಅಂದ್ರೆ ನಂಜಪ್ಪ ಅನ್ನೋ ರೀತಿಯಲ್ಲಿ ಆ ಕಾಲದಲ್ಲಿ ಪ್ರಸಿದ್ಧಿಯಾಗಿ ಬಿಟ್ಟಿತ್ತು. ಹೆಚ್ಚಿಗೆ ಮಾತ್ಯಾಕೆ ಆಡಬೇಕು.... ದೊಡ್ಡ ಗರಡಿ ಪೈಲ್ವಾನರೆಂದರೆ 'ದೋಬಿಚಾಟ್'ಗೆ ಹೆಸರಾಗಿಬಿಟ್ಟಿದ್ದರು. ನಂಜಪ್ಪ 'ದೋಬಿಚಾಟ್' ಪಟ್ಟಿನಲ್ಲಿಯೇ ಎಂಟು ಹತ್ತು ನಿಮಿಷಗಳಲ್ಲಿ ಎದುರಾಳಿಯನ್ನು 'ಸಾಫ್‌ಚಿತ್ತು' ಮಾಡಿದ. ಜನಾನೂ ಕೇಕೆ ಹಾಕಿ ಖುಷಿಪಟ್ಟರು. ಮಾನಿ ಉಜ್ಜಪ್ಪನಿಗೂ ಖುಷಿಯಾಯ್ತು.


ಈ ಮನುಷ್ಯ ಉಜ್ಜಪ್ಪ ಕುಸ್ತಿ ಆಡಿಸಿ, ಆಡಿಸಿ ಮೆತ್ತಗಾಗಿದ್ದ. ಕೊನೆಕೊನೆಯಲ್ಲಿ ಹರಿದು ಜುಂಗೆದ್ದು ಹೋಗಿದ್ದ ಜುಬ್ಬ ಹಾಕ್ಕೊಂಡು ಓಡಾಡುತ್ತಿದ್ದ. ಆತ ಅದನ್ನೇ ತೋರಿಸುತ್ತ ''ನೋಡಲೆ ಹೆಂಗ್ ಹರಿದೈತಿ ಜುಬ್ಬಾ... ಆದರೂ ಕುಸ್ತಿ ಮಾತ್ರ ನಿಲ್ಲಿಸಂಗಿಲ್ಲ... ನಡೀರಲೇ ಕುಸ್ತಿ ಆಡಿಸ್ತೀನಿ'' ಎನ್ನುತ್ತಿದ್ದ. ಐದಾರು ದಶಕಗಳ ಹಿಂದೆ ಚಿತ್ರದುರ್ಗದಲ್ಲಿ ಈ ರೀತಿ ಕುಸ್ತಿ ಪ್ರೇಮಿಗಳಿದ್ದರು. ಪ್ರೋತ್ಸಾಹ ಕೊಡೋರಿದ್ದರು. ಅದಕ್ಕಾಗಿ ಬೇಕಾದಷ್ಟು ಪೈಲ್ವಾನರು ಕುಸ್ತಿ ಆಡುತ್ತಿದ್ದರು. ಖುಷಿ ಪಡುತ್ತಿದ್ದರು. ಖುಷಿ ಪಡಿಸುತ್ತಿದ್ದರು.



(ಪ್ರಕಟವಾಗಬೇಕಾಗಿರುವ ವೈ.ಎಂ.ಎನ್. ವಸಂತರಾವ್ ಅವರ ಆತ್ಮಚರಿತ್ರೆಯ ಪುಟಗಳಿಂದ)

ನಾಡಿನ ಜನತೆಗೆ ಮತ್ತು ಕರ್ನಾಟಕ ರಾಜ್ಯ ಸರಕಾರಿ ನೌಕರರ
ಸಂಘದ ಹಾಗೂ ಕಲಬುರ್ಗಿ ಜಿಲ್ಲಾ ಶಾಖೆಯ ಪದಾಧಿಕಾರಿಗಳಿಗೆ
ಮತ್ತು ಸರ್ವ ಸದಸ್ಯರುಗಳಿಗೆ ಯುಗಾದಿ ಹಬ್ಬವು
ಸುಖ, ಶಾಂತಿ, ಸಮೃದ್ಧಿ ತರಲೆಂದು ಶುಭ ಹಾರೈಸುವೆ.

ಸರ್ವರಿಗೂ ಯುಗಾದಿಯ ಶುಭಾಶಯಗಳು



ಶ್ರೀ ಸೂರ್ಯಕಾಂತ ಕದಮ್

ಅಧ್ಯಕ್ಷರು

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ, ಜಿಲ್ಲಾ ಶಾಖೆ: ಕಲಬುರ್ಗಿ
ಹಾಗೂ
ಸದಸ್ಯರು, ಕರ್ನಾಟಕ ರಾಜ್ಯ ನೌಕರರ ಸಂಘದ ಜಂಟಿ ಸಲಹಾ ಸಮಿತಿ, ಬೆಂಗಳೂರು.
ದೂರವಾಣಿ: 08472-27964 ಕಚೇರಿ-21141 ನಿವಾಸ-46620

ವೀಣಾ ಬನ್ನಂಜೆ


ರಾಮ ಉಗಿದ ಬೀಜ

ನನ್ನೊಳಗೊಬ್ಬಳು ಶಬರಿ
ಅವಳೀಗ ಹಣ್ಣು ಹಣ್ಣಾಗಿದ್ದಾಳೆ
ಅವಳಿಗೊಂದು ಬಾಲ್ಯವಿತ್ತು
ಎಲ್ಲರಂಥಲ್ಲ ಅವಳ ಬಾಲ್ಯ
ಪುಕ್ಕವೊಂದಿರಲಿಲ್ಲ, ಉಳಿದದ್ದೆಲ್ಲ ಹಕ್ಕಿಯ ಬದುಕು
ಅವಳು ಹಾರಿದೆತ್ತರ, ಇಳಿದಾಳ ಬಲ್ಲವರೇ ಬಲ್ಲರು
ಯಾವ ಬಂಧನದ ಕಟ್ಟೂ ಅವಳನ್ನು ಕಟ್ಟಲಿಲ್ಲ
ಅವಳು ಕಟ್ಟಿಸಿಕೊಂಡವಳೇ ಅಲ್ಲ
ಚಡ್ಡಿತೊಡಿಸಲು ಬಂದ ತಾಯಿಯ ಕೈಗೆ ಸಿಗದೆ ಪುರ್ರಂತ ಓಡಿದವಳು
ಬಾಲ್ಯದಿಂದಲೇ ಬಟ್ಟೆಗೆಟ್ಟವಳು
ಕಂಡವರ ಹೊಟ್ಟೆ ಸುಟ್ಟವಳು
ಮುಟ್ಟಾಟ ಆಡುತ್ತಲೇ ಎಲ್ಲರನ್ನು ಮುಟ್ಟಿದವಳು
ಕುಂಟಾಬಿಲ್ಲೆಯ ಪಟ್ಟೆಯನ್ನು ಕಾಲಿನಿಂದಲೇ ಮೆಟ್ಟಿ ಎಲ್ಲರ ಮನೆ ದಾಟಿದವಳು
ಅಜ್ಜಿಯ ಮನೆಯಲಿ ವಿಶ್ರಾಂತಿಗೂ ನಿಲ್ಲದವಳು
ಮರವೇರಿ ಮರಕೋತಿ ಆಟವಾಡಿದವಳು
ಇವಳನು ಎತ್ತಿ ಆಡಿಸಿದವರಿಲ್ಲ, ಎತ್ತಿರೆಂದು ಇವಳು ಯಾರನ್ನೂ ಕಾಡಿದವಳಲ್ಲ.
ಎತ್ತಿದವರನ್ನು ಇವಳು ಎದೆಯಿಂದ ಇಳಿಸಲಿಲ್ಲ
ತಾಯಿಯ ಹಾಲು ಸಾಲದೆ ಎಲ್ಲ ಮನೆಯ ಹಾಲುಂಡವಳು
ಕಂಡಮನೆಯಲಿ ಇವಳಿಗೆ ಅನ್ನ ಭಿಕ್ಷೆ
ಇವಳು ಊರಿಗೆಲ್ಲ ಹೆಸರು, ಇವಳಿಗೆ ಹೆಸರಿರಲಿಲ್ಲ
ಹೆಸರಿಗಾಗಿ ಇವಳು ಹೆದರಿದವಳೂ ಅಲ್ಲ
ಊರು ಇವಳಿಗೆ ಹೆಸರಿಡದೆ ಬಿಡಲಿಲ್ಲ.

ಇವಳಗೊಂದು ಯೌವ್ವನವಿತ್ತು
ಇದು ದೇಹಕ್ಕೆ ಒದಗಿದ ಅವಸ್ಥೆಯಲ್ಲ.
ಅವಳ ಒಳಗೆ ನಿಜಕ್ಕೂ ಮದವಿತ್ತು
ಆ ಮದ ಘನವಿತ್ತು.
ಘನಕ್ಕೆ ಕರಗುವ ಹಸಿವಿತ್ತು
ಇವಳದು ಬೆಳೆದ ದೇಹವಲ್ಲ, ನಿಜದ ಬೆಳವಣಿಗೆ.
ಇವಳನು ಮುಟ್ಟದವರಿಲ್ಲ
ಮುಟ್ಟಿದ ಯಾರೂ ಇವಳನು ತಟ್ಟಲಿಲ್ಲ.
ಇವಳು ಮುಟ್ಟಿದವರಿಗೆ ಎಚ್ಚರ ತಪ್ಪಲಿಲ್ಲ
ಕಂಡವರಿಗೆ ಇವಳು ಕೊಟ್ಟುಕೊಂಡವಳೂ ಅಲ್ಲ
ಇವಳ ಸುತ್ತಮುತ್ತ ನೂರುಮಂದಿ.
ಇವಳು ಎಲ್ಲರನು ಸುತ್ತಿಯೂ ಒಳಗೆ ಒಬ್ಬಂಟಿ.
ಯಾರಕಾಲಿಗೂ ಬಾಗಿದವಳಲ್ಲ
ತನ್ನ ಕಾಲಿಗೆ ಯಾರನೂ ಬಾಗಿಸಿದವಳಲ್ಲ
ಇವಳ ನಗುವಿಗೆ ಹೊರಗಿನ ದುಃಖ ನಿಲ್ಲುತ್ತಿತ್ತು
ಇವಳು ದುಃಖ ಮುಚ್ಚಿಕೊಂಡೇ ಹೊರಗೆ ನಕ್ಕವಳು
ಇವಳ ದುಃಖಕ್ಕೆ ಹೊರಲೋಕದ ನಂಟು ಇರಲಿಲ್ಲ
ನೂರು ಕಣ್ಣುಗಳ ನಡುವೆ·ಎದೆಯಾವುದೋ ಒಂದನ್ನು ಹುಡುಕುತ್ತಿತ್ತು.
ಇವಳು ಎಲ್ಲದರೊಳಗೆ ಮುಳುಗಿದರೂ ಯಾವುದೋ ಒಂದು ಸೆಳೆಯುತ್ತಿತ್ತು
ಒಂದರ ಗುಂಗುಂಗಾನ ಬೆಳೆಯುತ್ತಿತ್ತು
ಅದು ತಾರಕಕ್ಕೇರಿತ್ತು
ಏರಿದ್ದು ಮೇಲಿರುವ ಒಂದನ್ನು ಮುಟ್ಟಿತು
ಒಂದು ಇನ್ನೊಂದನ್ನು ಬೆಸೆಯಿತು.

ಒಂದು ದಿನ ದೇವ ಬಂದ
ಸಾವಿರ ಬಂದವರಿದ್ದರು
ಸಾವಿರದವ ಒಬ್ಬ ಬಂದ
ಇವಳನ್ನು ಮುಟ್ಟಿದವರು ಗೊತ್ತು
ಎಚ್ಚರಿಸಿದವರು ಗೊತ್ತಿರಲಿಲ್ಲ
ಇಂದು ಬಂದವ ಹೊಸಬ
ಅವನ ಚುಂಬಕ ಶಕ್ತಿಗೆ ಘನ ಸೆಳೆಯಿತು
ಕರಗಿತು.
ಇವಳು ಎಲ್ಲರನ್ನು ಬಿಟ್ಟಳು
ಅವನನ್ನು ಬಿಡಲಿಲ್ಲ
ಅವನು ತೋಳ ಒಳಗೆ ಇಟ್ಟು ಜೋಗುಳದ ಹಾಡು ಹಾಡಿದ
ಇವಳಿಗೆ ಗಾಢನಿದ್ರೆ
ಮನೆ ಹರಿಯಿತು. ಮನ ಮುರಿಯಿತು.
ಹಳೆಯ ಬಂಧ ಸಡಿಲಾಯಿತು.
ಹೊಸ ಬಂಧ ಬಿಗಿಯಿತು.
ಹತ್ತಿರವೆಂದದ್ದು ದೂರವಾಯಿತು.
ದೂರವಿದ್ದದ್ದು ಒಳಸೇರಿತು.
ಅವಳು ಮೈಮರೆತಳು.
ಕಾಲಕಳೆದದ್ದು ತಿಳಿಯಲಿಲ್ಲ.
ದೇಶವಿಲ್ಲದೆ ಪರದೇಶಿಯಾದಳು.
ಅವಳಿಗೆ ಜಗತ್ತು ಒಳಗೆ ಕಾಣಿಸಿತು.
ಅವನ ಸೆರೆಯೊಳಗೆ ಅವಳು ಸುಖಿ.

ಇವಳಿಗೆ ಎಚ್ಚರಾಯಿತು.
ಬಂದವನು ಬಂದಷ್ಟೇ ಬೇಗ ನಡೆದುಬಿಟ್ಟಿದ್ದ.
ಹೊರಗಿದ್ದದ್ದನ್ನು ಒಳಗೆ ತಂದವ.
ಒಳಗಿದ್ದದ್ದನ್ನು ನೋಡು ಎಂದವ.
ಹೊರಗಿಲ್ಲದೆ ಒಳಗಾದವ.
ಒಳಗನ್ನು ಬೆಳಗಿದವ.
ಬಂದವನು ದೇವನೆಂದು ಅವಳಿಗೆ ತಿಳಿಯಿತು.
ಮತ್ತೆ ನೋಡುವ ಹಸಿವು ಉಳಿಯಿತು.
ಅವನನ್ನು ಕಾಯುವ ತಪವು ಬೆಳೆಯಿತು.



ಅವಳಿಗೆ ಆಸೆ ಹಾರಿತು.
ಜೀವಕ್ಕೆ ಅವನನ್ನು ಕಾಣುವ ಹಸಿವೊಂದೇ ಹೆಚ್ಚಿತು.
ಅವಳು ನಾಡು ಬಿಟ್ಟಳು.
ಕಾಡು ಸೇರಿದಳು.
ಒಂದು ಎಲೆಮನೆ.
ಸುತ್ತ ಕುಣಿವ ಜಿಂಕೆ, ನಲಿವ ನವಿಲು, ಹಾಡುವ ಹಕ್ಕಿ, ಹರಿವ ನದಿ.
ಇವು ಅವಳ ಬಾಳ ಸಂಗಾತಿ.
ಅವಳಿಗೆ ಜಗದ ಜಂಜಾಟ ಕಾಣಿಸಲಿಲ್ಲ.
ಹೊರಗೆಳೆವ ಕೂಗು ಕೇಳಿಸಲಿಲ್ಲ.
ಒಳಜಗವ ಬಿಟ್ಟು ಬರಲಿಲ್ಲ.
ಕಣ್ಣು ಮುಚ್ಚಿದರೆ ಎಲೆಮನೆಯ ಒಳಗೆ.
ತೆರೆದರೆ ನವಿಲಮುಂದೆ, ಜಿಂಕೆಯ ಹಿಂದೆ.
ಮೈತೊಳೆವ ನದಿ ಅವಳ ತಾಯಿ.
ಹಣ್ಣಿತ್ತು ಸಲಹುವ ಮರ ಅವಳ ತಂದೆ.
ನೆಲ ಅವಳನ್ನು ಎದೆಯಲ್ಲಿಟ್ಟು ಕಾಯುವ ಸಖಿ.
ಅವಳು ಒಳಗಾದಳು, ಒಳಗೊಳಗೆ ಅವನಿಗಾಗಿ ಕುದಿದಳು.

ಅವಳೀಗ ಹಣ್ಣು ಹಣ್ಣು ಮುದುಕಿ.
ಅವಳ ಕೈಗೊಂದು ಕಟ್ಟಿಗೆ.
ಕಿವಿಯಲಿ ಪಿಸುಗುಟ್ಟಿದ್ದ ನೆರೆ ಈಗ ಕೆನ್ನೆಗೆ ಬಂದಿದೆ.
ಬೊಚ್ಚು ಬಾಯಿಯ ಮುದುಕಿ ನಗುತ್ತಾಳೆ.
ಒಳಗೆ, ಎದೆಯ ಹಸಿವಿಗೆ, ಚಿರಯೌವ್ವನ!
ದೇವನನ್ನು ಕಾಣಬೇಕು. ಕಂಡು ಮುಕ್ತಳಾಗಬೇಕು.
ಮುದುಕಿ ಶಬರಿಗೆ ಮುಕ್ತಿಯ ಆಸೆ.
ಬದುಕಿನ ಕೊನೆಯ ಕನಸು.
ಸತ್ಯದ ಕನಸು.
ಮುದಿ ಶಬರಿಯ ಕೈಯಲೊಂದು ಬೋರೆಯ ಹಣ್ಣು.
ದೇವನಿಗೆ ಹಣ್ಣು ತಿನ್ನಿಸಬೇಕು, ತನ್ನನ್ನು.
ಅವಳ ಕಾಯುವಿಕೆಗೆ ಈಗ ತೊಂಬತ್ತು ವರುಷ.
ಹಣ್ಣಿಗೆ ಹಣ್ಣು ಹಣ್ಣಾಗುವ ಸಮಯ.
ಅವಳಿಗೆ ಅದು ಮರದಲಿ ಹುಟ್ಟಿದ ಸಾಮಾನ್ಯ ಹಣ್ಣಲ್ಲ.
ಅದರಲ್ಲಿ ಅವಳು ತನ್ನ ಕಣ್ಣನೊತ್ತಿ ಕಣ್ಣ ಬೆಳಕನ್ನು ನೂಕಿದ್ದಾಳೆ.
ಬಾಯಿಯಲಿಟ್ಟು ಕಚ್ಚಿ ತನ್ನ ಅಪೇಕ್ಷೆಗಳನ್ನು ತುಂಬಿದ್ದಾಳೆ.
ಎದೆಯಲಿಟ್ಟು ಅದರೊಳಗೆ ತನ್ನ ಜೀವ ಬತ್ತಿದ್ದಾಳೆ.
ದೇವ ಬರಬೇಕು, ಹಣ್ಣು ತಿನ್ನಬೇಕು.
ಅದು ಅವನ ಎದೆ ಸೇರಬೇಕು, ರಕ್ತವಾಗಬೇಕು.
ತಾನು ಅಳಿಯಬೇಕು. ಅವನು ಬೆಳೆಯಬೇಕು.
ಅವನೊಳಗೆ ತಾನು ಅರಳಬೇಕು.
ಇದು ಅವಳ ಕೊನೆಯ ಆಸೆ.
ಇದಲ್ಲದೆ ಶಬರಿ ಎಲ್ಲವನ್ನು ಬಿಟ್ಟವಳು.

ಆ ದೇವ ಸಮಯ ಬಂತು.
ಶಬರಿಯ ತಪಸ್ಸು ಫಲಿಸಿತು.
ಅಂದಿನ ಬೆಳಕು ಬರಿಯ ಬೆಳಕಲ್ಲ, ಹೊಸ ಹೊಳಪು.
ಜಿಂಕೆಯ ಕಾಲಿಗೆ ಮುಗಿಲಿಗೆ ನೆಗೆವ ಶಕ್ತಿ.
ತುಂಬಿಗಳು ಅರಳಿದ ಹೂವನ್ನು ಮೂಸಿ ನೋಡಲಿಲ್ಲ.
ಕಮಲ ಸೂರ್ಯನೆಡೆಗೆ ಮುಖಮಾಡದು.
ಇಷ್ಟೊಬ್ಬರ ಮೈತೊಳೆವ ನದಿ ಇಂದು ತನ್ನನ್ನೇ ತೊಳೆದುಕೊಂಡಿದ್ದಳು.
ಹಕ್ಕಿ ಶಬರಿಯ ಕಿವಿಯಲಿ ಹಾಡುತಿತ್ತು.
ಶಬರಿಗೆ ಹೊಸ ಜವ್ವನ.
ಹುಬ್ಬಿಗೆ ಹಚ್ಚಿದ ಕೈ ನಲಿಯಿತು.
ಕೈಯ ಕಟ್ಟಿಗೆ ನೆಲದಲ್ಲಿ.
ಈ ಮುದುಕಿ ನೆಲದಲ್ಲಿಲ್ಲ.

ನೆಲ ನಿಂತಿದ್ದರಲ್ಲ ಈ ಕುಣಿತ ನಿಲ್ಲುವುದು?
ದೇವ ಬಂದ!
ಶಬರಿ ಹಣ್ಣು ಕಣ್ಣುಗಳಲ್ಲಿ ಬೊಚ್ಚು ಬಾಯಿಬಿಟ್ಟು ನೋಡುತ್ತಿದ್ದಳು.
ಅವನು ಹಾಗೇ ಇದ್ದ.
ಶಬರಿ ಮೊದಲು ನೋಡಿದಾಗ ಇದ್ದ ಹಾಗೆ!
ತುಂಬುಜವ್ವನದ ಹೊಸಮೈಯ ಹುಡುಗ.
ಅವನ ಅಡಿಯಿಂದ ಮುಡಿಯವರೆಗೆ ಇವಳ ಕಣ್ಣು.
ಧನ್ಯಭಾವ!
ಕೈಯೊಳಗಿನ ಹಣ್ಣು ಕಾಯ್ದಿತ್ತು, ಇವಳೂ.
ಅದನ್ನು ಕಣ್ಣಿಗೆ ಮುಟ್ಟಿಸಿಕೊಂಡಳು.
ಎದೆಗೊತ್ತಿಕೊಂಡಳು, ತುಟಿಗಿಟ್ಟಳು.
ಕೈಜೋಡಿಸಿ ಅವನ ಪದತಲದ ಮೇಲೆ ಕುಸಿದಳು.
ಹಣ್ಣು ಹಣ್ಣು ಮುದುಕಿಯನ್ನು ದೇವ ಭುಜ ಹಿಡಿದು ಎಬ್ಬಿಸಿದ, ಹಣ್ಣನ್ನು.
ಕೈಯಲ್ಲಿರುವ ಹಣ್ಣಿನೊಳಗೆ ತನ್ನನ್ನು ತುಂಬಿದಳು.
ಮುಗಿದ ಕೈಗಳನ್ನು ಅವಳೆಡೆಗೆ ಚಾಚಿದಳು.
'ನನ್ನ ದೇವರೆ, ಸ್ವೀಕರಿಸು'
ದೇವ ಬೊಗಸೆ ತೆರೆದ.
ಶಬರಿ ಹಣ್ಣನ್ನು ಅವನ ಕೈಯಲ್ಲಿಟ್ಟಳು, ಪ್ರಾಣವನ್ನು.
ದೇವ ನಗುತ್ತಾ ಹಣ್ಣನೆತ್ತಿದ.
ಶಬರಿ ಹಿಗ್ಗಿದ ಕಣ್ಣುಗಳಲ್ಲಿ ನೋಡುತ್ತಾಳೆ.
ಹಣ್ಣು ದೇವ ಬಾಯಿಯೊಳಗೆ.
ಇವಳ ಎದೆಯೊಳಗೆ ಅರ್ಪಣೆಯ ಮಂತ್ರನಾಟ್ಯ.
ದೇವ ತಿನ್ನುತ್ತಿದ್ದ, ಇವಳು ಕರಗುತ್ತಿದ್ದಳು.
ದೇವ ನುಂಗುತ್ತಿದ್ದ. ಇವಳು ಲಯವಾದಳು.
ಕ್ಷಣ ಕಳೆದಿರಬೇಕು.
ದೇವ ತಡೆದ.
'ಓಹ್! ಇದು ತುಂಬ ಬಿರುಸು'
ಧನ್ಯಭಾವ ತುಂಬಿದ್ದ ಶಬರಿಯ ಕಣ್ಣುಗಳಲ್ಲಿ ಆತಂಕದ ಸುಕ್ಕು.
'ಏನು ದೇವಾ?' ಶಬರಿಯ ನಡುಗುವ ದನಿ.
ಅವನು ಬಾಯಿಯೆಡೆಗೆ ಕೈ ಒಯ್ದ.
ಶಬರಿ ಕಣ್ಣಲ್ಲಿ ಪ್ರಾಣವಿಟ್ಟು ನೋಡುತ್ತಾಳೆ.
'ಥೂ!' ಉಗುಳಿದ.
ಬೋರೆ ಹಣ್ಣಿನ ಬೀಜ ಅವನ ಕೈಯಲ್ಲಿ.
ದೇವ ಹಣ್ಣು ತಿಂದ, ಬೀಜ ಬಿಟ್ಟ.
ಶಬರಿಯ ಎದೆಯಲಿ ವಿಲವಿಲ ಒದ್ದಾಟ.
ದೇವ ಕೈ ಎತ್ತಿದ, ನಡೆದೇಬಿಟ್ಟ.
ಬೀಜ ನೆಲದ ಮೇಲೆ, ಶಬರಿಯೂ
ಶಬರಿ ಕುಸಿದಳು, ಬೀಜವೂ.
ಶಬರಿ ನೆಲಸೇರಿದಳು, ಬೀಜವೂ.
ಶಬರಿ ಮಣ್ಣಾದಳು. ಬೀಜ ಮೊಳಕೆ ಒಡೆಯಿತು.
ಜಿಂಕೆ ಮೊಣಕಾಲೂರಿ ಶಬರಿಯ ದೇಹ ನೆಕ್ಕುತ್ತಿತ್ತು.
ಬೀಜಕ್ಕೆ ಮುಗಿಲಿನ ಮಳೆಯ ಹನಿ.
ಹಣ್ಣಾದ ಬೀಜಕ್ಕೆ ಹೊಸ ಮೊಳಕೆ!
ಮಣ್ಣಾದ ಶಬರಿಗೆ ಹೊಸಹುಟ್ಟು!




ಹೊರಗಿದ್ದದ್ದನ್ನ ಒಳಗೆ ತಂದೆನೆ.
ಒಳಗಿದ್ದದ್ದನ್ನ ನೋಡದೆ ಎಂದೆನೆ.




ಜೇಮ್ಸ್ ಥರ್‌ಬರ್


ಕೈದೋಟದಲ್ಲಿ ಕೈಲಾಸದ ನಂದಿ

ಕನ್ನಡಕ್ಕೆ : ಎ. ಎನ್. ಲಕ್ಷ್ಮೀನಾರಾಯಣ



ಇಕ್ಬಾಲ್





ಅಮೆರಿಕಾದ ಖ್ಯಾತ ವಿಷಣ್ಣ ವಿನೋದಿ ಸಾಹಿತಿ/ಚಿತ್ರಕಾರ ಜೇಮ್ಸ್ ಥರ್‌ಬರ್‌ನ ಜಗತ್ತಿನಲ್ಲಿ ಪ್ರಾಣಿಗಳಿಗೆ ವಿಶೇಷ ಸ್ಥಾನ. Unicorn in the Garden ಕಥೆಯಲ್ಲಿ 'ಪಾಪದ ಗಂಡ'ನೊಬ್ಬ ಗಯ್ಯಾಳಿ ಹೆಂಡತಿಯನ್ನು ಬೇಸ್ತುಬೀಳಿಸುವ ಪ್ರಸಂಗವಿದೆ. ವಿಡಂಬನೆ, ಹಾಸ್ಯ ಹಾಸುಹೊಕ್ಕಾಗಿರುವ ಈ ಕಥೆಯ ಭಾವಾನುವಾದವನ್ನು ಮಾಡಿರುವ ಎ.ಎನ್. ಲಕ್ಷ್ಮೀನಾರಾಯಣ ಇಂಗ್ಲಿಷ್ ಪ್ರಾಧ್ಯಾಪಕರು.

ಚುಮುಚುಮು ಬಿಸಿಲಿನ ಬೆಚ್ಚನೆಯ ಬೆಳಗಿನ ಒಂದು ದಿನ ಒಬ್ಬಾತ ಮನೆಯ ಅಂಗಳದ ಮೂಲೆಯಲ್ಲಿ ಕುಳಿತು ಒಬ್ಬನೆ ಮೊಟ್ಟೆ ಉಪ್ಪಿಟ್ಟು ತಿನ್ನುತ್ತಿದ್ದ. ತಲೆ ಎತ್ತಿ ನೋಡಿದರೆ ಕೈದೋಟದಲ್ಲಿ ಸ್ವರ್ಣಕೊಂಬಿನ, ಶ್ವೇತ ಮೈಯಿನ ಕೈಲಾಸದ ನಂದಿ ತೋಟದಲ್ಲಿನ ಗುಲಾಬಿಗಳನ್ನು ಆನಂದದಿಂದ ಮೇಯುತ್ತಿದ್ದುದು ಕಾಣಿಸಿತು. ಆತ ಮಲಗುವ ಕೋಣೆಗೆ ಓಡಿ, ಇನ್ನೂ ಹಾಸಿಗೆಯ ಮೇಲೇ ಇದ್ದ ಹೆಂಡತಿಯನ್ನು ಎಬ್ಬಿಸಿದ.

'ಲೇ... ಏಳೇ! ನಮ್ಮ ತೋಟಕ್ಕೆ ಕೈಲಾಸದ ನಂದಿ ಬಂದಿದೆ. ಗುಲಾಬಿಗಳನ್ನು ತಿಂತಾ ಇದೆ!' ಎಂದ.

ಆಕೆ ಒಕ್ಕಣ್ಣು ತೆರೆದು, ಬೇಸರದಿಂದ ಗಂಡನ ಕಡೆ ನೋಡಿ,

'ಕೈಲಾಸದ ನಂದಿ ಬರೋದು ಪುರಾಣದಲ್ಲಿ ಮಾತ್ರ' ಎಂದಳು.

ಆತ ಪೆಚ್ಚಾಗಿ ಮತ್ತೆ, ನಿಧಾನವಾಗಿ ತೋಟಕ್ಕೆ ಬಂದ. ಕೈಲಾಸದ ನಂದಿ ಇನ್ನೂ ಅಲ್ಲೇ ಮೇಯುತ್ತಿತ್ತು.

'ಇಗೋ, ನಂದೀ ತಗೋ' ಎಂದು ನೈದಿಲೆಯೊಂದನ್ನು ಕಿತ್ತು ಅದಕ್ಕೆ ಕೊಟ್ಟ. ನಂದಿ ಸಾವಧಾನವಾಗಿ ನೈದಿಲೆಯನ್ನು ತಿಂತು. ಆತ 'ತನ್ನ ಕೈದೋಟಕ್ಕೆ

ಕೈಲಾಸದ ನಂದಿ 'ಬಂದಿರುವುದು ಎಂಥಾ ಪುಣ್ಯ!' ಎಂದು ಅತ್ಯಂತ ಹರ್ಷಿತನಾಗಿ ಒಳಹೋಗಿ ಮತ್ತೆ ಹೆಂಡತಿಯನ್ನು ಎಬ್ಬಿಸಿದ.

'ಲೇ, ನೋಡಿದ್ಯೇನೇ, ಕೈಲಾಸದ ನಂದಿ ನಾ ಕೊಟ್ಟ ನೈದಿಲೇನ ತಿಂದ್ ಬಿಡ್ತು' ಎಂದ.

ಹೆಂಡತಿ ಹಾಸಿಗೆಯಿಂದ ಧಡಕ್ಕನೆದ್ದುಕುಳಿತು ಗಂಡನ ಮುಖ ನೋಡಿದಳು.

'ನೀನೊಬ್ಬ ಪೆಕರ. ನಿನ್ನನ್ನು ಹುಚ್ಚಾಸ್ಪತ್ರೆಗೆ ಸೇರಿಸ್ಬೇಕು' ಎಂದುಬಿಟ್ಟಳು. ಆತನಿಗೆ, 'ಪೆಕರ', 'ಹುಚ್ಚಾಸ್ಪತ್ರೆ,' ಇಂಥಾದ್ದಲ್ಲಾ ಕೇಳಿದ್ರೇನೇ ಮೈಯುರಿ. ಒಂದು ಕ್ಷಣ ಯೋಚಿಸಿದ. 'ಸರಿ ನೋಡೋಣ' ಎಂದು ಬಾಗಿಲ ಹತ್ತಿರ ಹೋದವನು ತಿರುಗಿ,

'ನಂದಿಗೆ ಹಣೆ ಮೇಲೆ ಸ್ವರ್ಣ ಕೊಂಬಿದೆ ಕಣೇ' ಎಂದ. ಮತ್ತೆ ತೋಟಕ್ಕೆ ಹಿಂದಿರುಗಿದ.

ನಂದಿ ಮಾಯವಾಗಿತ್ತು.

ಆಕೆ ಹಾಸಿಗೆಯಿಂದೆದ್ದು, ಬೇಗ ಬೇಗ ಸ್ನಾನಮಾಡಿ ಡ್ರೆಸ್ ಮಾಡಿಕೊಂಡಳು. ಅವಳಿಗೆ ಯಾಕೋ ರೋಮಾಂಚನ. ಕಣ್ಣಲ್ಲಿ ಸಂತೋಷ ಉಕ್ಕುತ್ತಿತ್ತು. ಪೊಲೀಸರಿಗೆ, ಹುಚ್ಚಾಸ್ಪತ್ರೆಗೆ ಫೋನ್ ಮಾಡಿ ಬೇಗ ಬರುವಂತೆ ತಿಳಿಸಿದಳು. 'ಹಾಗೇ ನೂಲಿನ ಹಗ್ಗ ತರೋದು ಮರೀಬೇಡಿ' ಎಂದಳು.

ಸ್ವಲ್ಪ ಹೊತ್ತಿನಲ್ಲೇ ಪೊಲೀಸ್ ಇನ್ಸ್‌ಪೆಕ್ಟರ್, ಹುಚ್ಚಾಸ್ಪತ್ರೆಯ ಡಾಕ್ಟರ್ ಇಬ್ಬರೂ ಬಂದರು. ಆಕೆಯೆದುರು ಕುಳಿತು ಅವಳ ಮುಖ ನೋಡಿದರು.

'ನನ್ನ ಗಂಡ ಇವತ್ತು ಬೆಳಿಗ್ಗೆ ಕೈಲಾಸದ ನಂದಿಯನ್ನು ನೋಡಿದರು' ಎಂದಳು ಆಕೆ.


ಇನ್ಸ್‌ಪೆಕ್ಟರ್ ಡಾಕ್ಟರ್ ಮುಖ ನೋಡಿದರು. ಡಾಕ್ಟರು ಇನ್ಸ್‌ಪೆಕ್ಟರ್ ಮುಖ ನೋಡಿದರು.

'ಕೈಲಾಸದ ನಂದಿಗೆ ನೈದಿಲೆ ಕೊಟ್ಟೆ, ತಿಂತು ಅಂತ ನನಗೆ ಹೇಳಿದರು.'

ಇನ್ಸ್‌ಪೆಕ್ಟರ್ ಡಾಕ್ಟರ್ ಮುಖ ನೋಡಿದರು. ಡಾಕ್ಟರ್ ಇನ್ಸ್‌ಪೆಕ್ಟರ್‌ರ ಮುಖ ನೋಡಿದರು.

'ಕೈಲಾಸದ ನಂದಿ ಹಣೆ ಮೇಲೆ ಚಿನ್ನದ ಕೊಂಬಿದೆ ಅಂತ ನನ್ನ ಗಂಡ ಹೇಳಿದರು' ಎಂದಳು ಆಕೆ.

ಡಾಕ್ಟರ್ ಗಂಭೀರ ಮುಖಮಾಡಿ ಇನ್ಸ್‌ಪೆಕ್ಟರ್‌ಗೆ ಸನ್ನೆ ಮಾಡಿದರು. ಇಬ್ಬರೂ ಒಟ್ಟಿಗೆ ಆಕೆಯ ಮೇಲೆರಗಿದರು. ಆಕೆ ಎಷ್ಟೆಷ್ಟೋ ಒದ್ದಾಡಿದಳು. ಊಹುಂ. ಡಾಕ್ಟರ್, ಇನ್ಸ್‌ಪೆಕ್ಟರ್ ಇಬ್ಬರೂ ಸೇರಿ ನೂಲಿನ ಹಗ್ಗದಿಂದ ಆಕೆಯ ಕೈಕಾಲು ಬಿಗಿದರು.



ಅಷ್ಟು ಹೊತ್ತಿಗೆ ಗಂಡ ವಾಪಸ್ಸು ಬಂದ.

'ಕೈಲಾಸದ ನಂದಿಯನ್ನು ನೋಡಿದೆ ಎಂದು ನೀವು ನಿಮ್ಮ ಹೆಂಡತಿಗೆ ಹೇಳಿದಿರಾ?' ಇನ್ಸ್‌ಪೆಕ್ಟರ್ ಕೇಳಿದರು.

'ಇಲ್ವಲ್ಲಾ' ಎಂದ ಗಂಡ.

'ಕೈಲಾಸದ ನಂದಿ ಬರೋದು ಪುರಾಣದಲ್ಲಿ ಮಾತ್ರ ಅಲ್ವೇ?'

'ಅಷ್ಟೇ ನಮಗೆ ಬೇಕಾದ್ದು' ಎಂದರು ಡಾಕ್ಟರ್.


'ಇನ್ಸ್‌ಪೆಕ್ಟ್ರೇ ಈಕೇನಾ ವ್ಯಾನಿಗೆ ಹಾಕ್ಕೊಂಡ್ ಹೋಗಿ... ಸಾರಿ ಇವರೇ... ನಿಮ್ಮ ಹೆಂಡತಿಗೆ ತಲೆ ಸರಿ ಇಲ್ಲ. ಬಾಯಿಗೆ ಬಂದಿದ್ ಮಾತಾಡ್ತಾರೆ'

ಅವರು ಆಕೆಯನ್ನು ಹೊತ್ತೊಯ್ದರು. ಕೂಗಿ, ಕಿರುಚಿ, ಬೊಬ್ಬೆ ಹಾಕುತ್ತಿದ್ದ ಅವಳನ್ನು ಹುಚ್ಚಾಸ್ಪತ್ರೆಗೆ ಸೇರಿಸಿದರು.

ಗಂಡ ಆಮೇಲೆ ಸುಖವಾಗಿದ್ದ.

ನೀತಿ: ಮೊಟ್ಟೆ ಒಡೆಯೋಕೆ ಮುಂಚೇನೇ ಮರಿ ಎಣಸ್ಬಾರ್ದು.





ಜಾತ್ರೆಯಲ್ಲಿ ಶಿವ

ಸವಿತಾ ನಾಗಭೂಷಣ

ಅದೇ ಆ ಶಿವನ ವೇಷಧಾರಿ
ನಾನಿದ್ದ ಬಸ್ಸಿನಲ್ಲಿಯೇ ಇದ್ದ
ನನ್ನೊಂದಿಗೇ ಬಸ್ಸಿನಿಂದಿಳಿದ.

ತೇಗದ ಮರದ ಹಾಗೆ
ಉದ್ದಕೆ ಸಪೂರ
ಮೋಡದ ಮೈಬಣ್ಣ, ಮಿಂಚಿನ ನಗು
ಮುಡಿಗೆ ತಗಡಿನ ಚಂದ್ರನನು ಮುಡಿದಿದ್ದ.
ತೋಳಿಗೆ ಕಣಗಿಲೆಯ ಹೂವು
ಕೊರಳಿಗೆ ಪ್ಲಾಸ್ಟಿಕ್ ಹಾವು
ಹುಲಿ ಚರ್ಮದ ಚಿತ್ರವಿರುವ
ಮಾಸಿದ ಹಳದಿ ಬಣ್ಣದ ಅರ್ಧ ಲುಂಗಿ
ಹವಾಯಿ ಚಪ್ಪಲಿ ಧರಿಸಿದ್ದ...

ನನ್ನ ಬೆರಗಿಗೆ ಉತ್ತರ
ನೀಡುವವನಂತೆ
ಡಮರುಗ ನುಡಿಸಿ
ತ್ರಿಶೂಲ ಆಡಿಸಿ
ಕಾಲ್ಗೆಜ್ಜೆ ಗಲಗಲ ಕುಣಿಸಿ
ನಾ... ಶಿವ ಅಂದ.

-2-

ನಾ... ಮುಂದೆ ಅವ... ಹಿಂದೆ
ಜಾತ್ರೆಯ ಕೌಂಟರಿನಲ್ಲಿ
ಟಿಕೇಟು ಕೊಳ್ಳುವಾಗಲೂ
ಬೆನ್ನ ಹಿಂದೆಯೆ ಇದ್ದ
ಗಿಲೀಟು ಒಡವೆಯಂಗಡಿಯಲ್ಲಿ
ಕಣ್ಣ ಮುಂದೆಯೆ ಬಂದ.
ಫಳ ಫಳ ಹೊಳೆಯುವ
ಮೂಗುತಿಯನು ಅಂಗೈಯೊಳಗೆ
ಹೊರಳಾಡಿಸಿ
ಈ ವಜ್ರಕ್ಕೆಷ್ಟಪ್ಪಾ ಬೆಲೆ
ಎಂದು ಅಂಗಡಿಯಾತನ ಛೇಡಿಸಿದ.

ಪುಗ್ಗೆಯಂಗಡಿಯಲ್ಲಿ ಒಂದೊಂದು
ಪುಗ್ಗೆಯ ಮೇಲೂ ಮೃದುವಾಗಿ ಕೈಯಾಡಿಸಿ
ಪರಪರ ಶಬ್ದಕ್ಕೆ ಕಿವಿಯಾನಿಸಿ
ಬಾಗಿಲು ದಾಟುವುದರೊಳಗೆ
ಠುಸ್ಸೆನ್ನುವದೀ ಪುಗ್ಗೆ, ಜೊತೆಗೆ
ಪಿಗ್ಗಿನ ಬುಗ್ಗೆ ಎಂದು ಅಲ್ಲೇ ಪದ ಕಟ್ಟಿ ಹಾಡಿ
ಒಂದು ಪೀಪಿ, ಒಂದು ವಾಚು ಪುಕ್ಕಟೆ ಪಡೆದ.

ಬಣ್ಣ ಬಣ್ಣದ ಪರಕಾರಗಳ ತೆಗೆಸಿ
ಪೂರ ಅಂಗಡಿಯನೆ ಎಳೆದಾಡಿಸಿ
ಚೌಕಾಸಿ ಬೆಲೆಯಲ್ಲೇ
ಒಂದು ಗಜ ರವಿಕೆಯ ಬಟ್ಟೆ ಕೊಂಡ.

ಕೆಂಪು ನೀರಿನ ಶರಬತ್ತಿನಂಗಡಿಯಲ್ಲಿ
ಗಿಣಿಶಾಸ್ತ್ರದವನೊಡನೆ ಹರಕು
ಛತ್ರಿಯ ಅಡಿಯಲ್ಲಿ...
ಕರಡಿ ಮಜಲು ಕುಣಿತದ
ಕರಡಿಯಾಸದವನೊಡನೆ
ಅಲ್ಲಿ... ಇಲ್ಲಿ... ಇಲ್ಲಿ... ಅಲ್ಲಿ...
ಜಾತ್ರೆಯ ಉದ್ದಗಲ ಹಬ್ಬಿ ನಿಂತವನು
ಮೋಟು ಬೀಡಿಯ ಸೇದುತ್ತಾ
ಕಡಲೆಯ-ಪುರಿಯ
ಗುಡ್ಡವ ದಾಟಿ ಹೋದ.

-3-

ಹೋದ ಎನ್ನುವಷ್ಟರಲ್ಲಿಯೇ
ಬತ್ತಾಸಿನ ಅಂಗಡಿಯಲ್ಲಿ
ಪರಿಚಿತ ನಗೆಯೊಡನೆ ಪ್ರತ್ಯಕ್ಷ!

ಮೆಲ್ಲನೆ ಬಳಿಸಾರಿ, ಗೋಣ ಬಗ್ಗಿಸಿ
ಮಗ ಹಸಿದಿದ್ದಾನೆ-
ಹೆಂಡತಿಗೆ ಕಾಯಿಲೆ ಅಂದ
ಬಾಡಿದ ಮುಖ, ಬಸಿದಿತ್ತು ದುಃಖ.


ಗಣಪ ಹಸಿದಿದ್ದಾನೆ
ಗಿರಿಜೆಗೆ ಕಾಯಿಲೆ...
ಹೆಂಡತಿ-ಮಕ್ಕಳಿಗಾಗಿ
ಶಿವನಲ್ಲದೆ ಭವಿ ಅಳುವನೆ?!

ಪುಟ್ಟ ಪರ್ಸಿನ ಮೂಲೆ ಮೂಲೆಯನೂ ತಡವಿ
ರುದ್ರನೊಡ್ಡಿದ ಬೊಗಸೆಗೆ
ಐದರ ನೋಟಿರಿಸಿ ಇಷ್ಟೇ ಅಂದೆ!

ಮಿಂಚಂತೆ ಹೊಳೆದು
ತಳಾಂಗು ತದಿಗಿಣ ತೋಂ ಎಂದು
ನಾಟ್ಯದ ಮಟ್ಟಿನಲಿ ಕುಣಿದು
ಅರ್ಧ ನಿಮೀಲಿತ ನೇತ್ರನಾಗಿ
ನಟರಾಜನ ಭಂಗಿಯಲ್ಲಿ ನಿಂತುಬಿಟ್ಟ!

ಬಿಟ್ಟ ಬಾಯಿ ಬಿಟ್ಟಂತೆಯೇ
ನೆಟ್ಟ ಕಣ್ಣು ನೆಟ್ಟಂತೆಯೇ
ಎರಡೂ ಕೈ ಜೋಡಿಸಿ
ಮೈದುಂಬಿ ನುಡಿದುಬಿಟ್ಟೆ...

ಸಾಕ್ಷಾತ್ ಶಿವ!!



ಹೂ ಚಿತ್ರಗಳು: ಬಿ. ಸುಮಾ

ಗಾಳಿ ಪಟ

ಸತೀಶ ಕುಲಕರ್ಣಿ

ಬೆಳಕ ಬೆಟ್ಟ ಹತ್ತಿದ
ಗಾಳಿ ತಲೆಯ ಕಿರೀಟ,
ಕೈ ಜಾರಿದ ಕೂಸ-ಕುಲಾಯಿ
ನೀ ಗಾಳಿಪಟ

ಕನಸು ಪರ್ವತ
ತುತ್ತುದಿಯ ತುರಾಯಿ,
ನೆಲ-ಆಕಾಶದ
ನಿಚ್ಚಣಿಕೆ ನೀ

ಇಲ್ಲಿಂದ ಅಲ್ಲಿಗೆ
ಹಾರಿ ಬಿಟ್ಟಿರುವೆ
ಆಕಾಶವೇ ನಿನ್ನ ಸೊತ್ತು,
ನೀ
ಬಾನಿಗೆ ನಾ ಕೊಟ್ಟ
ಪುಷ್ಪ ಮುತ್ತು

ಮೌನ

ಸಂದೀಪ ನಾಯಕ

ತೇವಗೊಂಡ ಗಾಳಿಗೆ
ತಮ್ಮ ಒಡ್ಡಿಕೊಂಡಿವೆ ಮರಗಳು.
ಭೂಮಿ ತನ್ನೆಲ್ಲ ಬೇರುಗಳೊಂದಿಗೆ
ಭೂಮಿ ತನ್ನೆಲ್ಲ ಎಲೆಗಳೊಂದಿಗೆ
ನಿರಂತರವಾಗಿ ಉಸಿರಾಡುವುದು
ನಮ್ಮವರೆಗೂ ಕೇಳುವುದು

ದೂರದ ಕಾಡಿನಲ್ಲಿ ಮರಗಳು
ಉರುಳಿದ ಸದ್ದು.
ಬಿದ್ದ ಮರದಿಂದ ಎದ್ದ
ಹಕ್ಕಿಗಳು ರಾತ್ರಿ ಜಾವಗಳ
ಸೀಳಿ ಎರಡು ಮಾಡುವಂತೆ
ಕೂಗುವವು

ಈ ಮನೆ

ಜ್ಯೋತಿ ಗುರುಪ್ರಸಾದ್

ಇಂದು ಈ ಮನೆಯನ್ನು
ನಾವು ಬಿಡುತ್ತಿದ್ದೇವೆ

ಇಲ್ಲಿಯ ಟೇಬಲ್-ಕುರ್ಚಿ
ಬೀರು-ಮಂಚ-ಫೋಟೋ
ವಗೈರೆಗಳನ್ನು
ಲಾರಿಯಲ್ಲಿ ತುಂಬಿಕೊಳ್ಳುತ್ತಾ
ಬರೀ ಮನೆಯನ್ನು
ಬಿಡುತ್ತಿದ್ದೇವೆ.

ಮತ್ಯಾರೋ ಇಲ್ಲಿ
ಮತ್ತೆ ಬರುತ್ತಾರೆ.

ಆದರೆ ಇಲ್ಲಿ
ಈ ಕೋಣೆಗಳಲ್ಲಿ
ನಾವೆಲ್ಲ ಕೂಡಿದ್ದು
ನಿಂತದ್ದು-ಕುಳಿತದ್ದು-ನಕ್ಕಿದ್ದು
ಎಲ್ಲಾ ದಾಖಲಾಗಿವೆ;
ಮನದ ಕೋಣೆಗಳಾಗಿವೆ

ಮಂಚದಂತೆ-ಕುರ್ಚಿಯಂತೆ
ಬಿಟ್ಟ ಕಣ್ಣಿಗೆ ಕಂಡುಬರದ ನಾವು
ಇಲ್ಲಿಯ ದೇವ-ದೇವಿಯರು
ಈ ಖಾಲಿಯಲ್ಲಿ-ಶೂನ್ಯದಲ್ಲಿ
ಬಂಧನದಲ್ಲಿ
ಆಗಿರುವ ಐಕ್ಯ; ಇತಿಹಾಸ.

ಮುಡಿಯಲ್ಲಿ ಅರಳಿದ ಹೂ
ದಳಗಳಾಗಿ
ನೆಲದ ಮೇಲೆಲ್ಲಾ ಉದುರಿದರೂ
ಪರಿಮಳ ತುಂಬಿ ಕೊಟ್ಟ
ಸ್ಮಾರಕ.

ಬೆಚ್ಚನೆಯ ಭಾವನೆಗಳು
ಚೆದುರಿ ಹೋಗದ ಹಾಗೆ
ಬಿಗಿದಪ್ಪಿ ಸೆರೆ ಹಿಡಿದು
ಆಸರೆ ನೀಡಿ ಕಾಪಾಡಿದ
ಈ ಸುಂದರ ಸ್ಥಳ
''ಈಗ ಬರೀ ಬಿಟ್ಟ ಮನೆ''
ಎನ್ನದಿರಿ-
ತೀರ್ಥಸ್ಥಳ!

ಗುಹೆಯ ಬಾಗಿಲಿನಲ್ಲಿ

ಸುಮತೀಂದ್ರ ನಾಡಿಗ

ಗುಹೆಯ ಬಾಗಿಲಿನಲ್ಲಿ ನಿಂತು ಕರೆದಳು ಒಳಗೆ
ನಾನು ಬಂಡೆಯ ಹಾಗೆ ನಿಂತೆ ಇದ್ದೆ
ಹೊರಟೆ ಹೋದಳು ಒಳಗೆ ಕೈಬೀಸಿ ಕರೆಯುತ್ತ
ಬಂಡೆ ನಾನಲ್ಲವೆಂದರಿತು ಎದ್ದೆ.

ಕೊಳೆತ ಎಲೆಗಳ ದಾರಿ ಇಳಿಜಾರು ಇಕ್ಕಟ್ಟು
ಹೇಗೋ ಸರೋವರದ ದಡ ಸೇರಿದೆ
ಅವಳು ಆ ಕಡೆಯಲ್ಲಿ ನಾನು ಈ ಕಡೆಯಲ್ಲಿ
ಜಲದ ವಿಸ್ತಾರಕ್ಕೆ ಕಣ್ಣುನೆಟ್ಟೆ.

'ಬಾ'ಯೆಂದು ಧುಮುಕಿದಳು ಆ ಸರೋವರದಲ್ಲಿ
ಧುಮುಕಿ ಈಜಿದೆ ನಾನು ಅವಳ ಬಳಿಗೆ
ಕಾಲೆರಡು ಕೈಯಾಗಿ ಮೈಯೆಲ್ಲ ಬಾಯಾಗಿ
ಬೆಂಕಿನಾಲಗೆ ನಾವು ನೀರಿನೊಳಗೆ.

ಎಷ್ಟು ಹೊತ್ತಿದ್ದೆನೋ ಮತ್ತೆ ಮೈ ತಿಳಿದಾಗ
ಗುಹೆಯಾಚೆ ಕುಳಿತಿದ್ದೆ ಬಂಡೆ ಮೇಲೆ
ಗುಹೆಯ ಬಾಗಿಲಿನಲ್ಲಿ ನಿಂತ ಆಕೃತಿ ಕರಗಿ
ಹೊಂಗಿರಣ ಬೆಳಗಿದ್ದ ಅಲೆಯ ಮಾಲೆ.

ಶಬ್ದ ಶರೀರವ ಕೊಟ್ಟೆ ಅಮೃತಕ್ಕೆ
ಸಿಕ್ಕದ್ದು ಅನುಭವದ ನೆರಳು ಮಾತ್ರ
ಆತ್ಮದ ಗುಹೆಯ ಬಾಗಿಲಿನಲ್ಲಿ ನಾಲಗೆಯಾಗಿ ನಿಂತವಳೆ
ನಿನಗಿಲ್ಲ ಮಾನವರ ರೂಪ ಗಾತ್ರ.

ಮುಖವಿಲ್ಲದ ಕನಸು

ವಿಠಲಗಟ್ಟಿ ಉಳಿಯ

ಬೇಸರದ ರಾತ್ರಿಯ ಬೆನ್ನಿಗೇ
ಹಂಬಲದ ಬೆಳಕು ಬಂತೇ ಬಂತು.
ಆಷಾಢ ಮಾಸದಲ್ಲಿ ಅಡ್ಡಾದಿಡ್ಡಿಯಾಗಿ
ಧೂಳಿನ ಅಂಗಿ ಕೊಡೆವ ಗಾಳಿಯ ಹಾಗೆ

ಕಡಲಿನ ಕರೆಯ ಕುಳಿರ್ಗಾಳಿಯಾದರೂ
ಗರ್ಭದಲ್ಲಿ ಕುದಿವ ಲಾವಾರಸ ಮಾತ್ರ
ನೈರಾಶ್ಯದ ಜವುಗಿನಲ್ಲಿ
ಹಿಡಿದಿಟ್ಟು ನಲುಗಿಸಿದಾಗ
ಹೊಕ್ಕುಳ ಬಳ್ಳಿ ಹಿಡಿದು ಬದುಕಿದೆ.

ಕುಸೆಬಿದ್ದ ನೆನಪಿನ ಬಂಗಲೆಯ
ಸೋಪಾನಗಳಡಿಯಲ್ಲಿ
ಮೃತ್ಯು ದೇವತೆಯ ಮಡಿಲಲ್ಲಿ,
ಮುಖ ಮುಚ್ಚಿಕೊಂಡು ಬೋರಲಾಗಿ
ಬಿದ್ದಿರುವ ಅನಾಥ ಶವಗಳಲ್ಲಿ

ದೃಷ್ಟಿ ಬೀರದೆ ಕಿರುನಗೆ ಬೀರಿ
ಹೊರಟು ಹೋದೆಯಲ್ಲ ನೀನು,
ಅಂಬೆಗಾಲಿಕ್ಕುವ ಶಿಶುವಾಗಿ
ಬೆಚ್ಚಿ ನಿಂತೆ ನಾನು:
ಮುಖವಿಲ್ಲದೆ ಬಂದು ಹೋದ
ನಿನ್ನನ್ನು ಎಂದೆಂದೂ ಗುರುತಿಸದ ಹಾಗೆ.

ಕಣ್ಮರೆ


ಎಂ.ಆರ್. ಭಗವತಿ


ತಂತಿಯ ಕೆಳಗೆ ಬಿದ್ದ
ಕಾಗೆ ಮರಿ...
ಹೋಗಿ ಬರುವಾಗೆಲ್ಲಾ ಮಗು
ಕೇಳಿದ್ದೇ ಕೇಳಿದ್ದು
ಯಾಕೆ ಸತ್ತಿತು ಕಾಗೆ?


ಸಂಜೆ ನೋಡಿದರಲ್ಲಿ
ತಗ್ಗುದಿಣ್ಣೆಯ ಅದೇ ಖಾಲಿ ದಾರಿ
ಎಲ್ಲಿ ಹೋಯಿತು ಕಾಗೆ?
ಯಾಕೆ ಸತ್ತಿತು ಮಗುವೇ
ಯಾವ ಗಾಳಿ ಸೆಳೆದು


ದಿನಾ ಅದೇ ದಾರಿಯಲ್ಲಿ
ಅದೇ ಪ್ರಶ್ನೆ
'ಕಾಗೆಯೆಲ್ಲಿ ಅಮ್ಮಾ?'


''ವಿದ್ಯುದಾಲಿಂಗನಕೆ
ಸಿಕ್ಕಿ ಸತ್ತಿದೆ ಕಾಗೆ''
ಬಂದು ನೋಡಿದರಲ್ಲಿ
ಕಾಣೆಯಾಗಿದೆ!











ಅಂಕ-ಲಿಪಿ

ಟಿ.ಜಿ. ಭಟ್ಟ ಹಾಸಣಗಿ

ಹಣ್ಣಾದಂತೆ ತಲೆಗೂದಲು
ಉದುರುತ್ತಿರುವಂತೆ ಒಂದೊಂದಾಗಿ ಹಲ್ಲು
ಹೆಚ್ಚುತ್ತಿದೆ
ಅಂಕ ಲಿಪಿ ಓದುವ
ಹುಚ್ಚು

ಗೊತ್ತಾಗುವದಿಲ್ಲ ಕೆಲವು ಸಲ
ಇದು ಎಷ್ಟನೆ ಅಂಕ?
ಅಂಕಗಳ ಅನುಕ್ರಮಣಿಕೆ
ಆದಂತೆ ಹೆಚ್ಚು ಕಮ್ಮಿ

ನಾಲ್ಕನೆ ಅಂಕದ ನಂತರ ಮೂರನೆ
ಅಂಕ; ತದನಂತರ ಎರಡನೆ
ಅಂಕ ಇರಬೇಕೆನಿಸಿ,
ಐದನೆ ಅಂಕಕ್ಕೆ ಯಾರೊ
ದೂಡಿ ತಳ್ಳುತ್ತಿರುವ ಅನುಭವ

ಈ ಅಂಕಗಳ ಸಂಖ್ಯಾತೀತ
ಜ್ಯೋತಿಯಲೆ
ಮೈ ತಟ್ಟಿ
ಜುಮ್ಮೆನ್ನುತ್ತದೆ ಬೆಚ್ಚಗೆ
ಬಿಚ್ಚಿಕೊಳ್ಳುತ್ತ ಜೀವಗೊಳದಲ್ಲಿ
ವಿವಿಧ ವರ್ಣ

ರಂಜಿತ ಕಮಲ -
ಕೆಂಪು, ಹಳದಿ, ನೀಲಿ, ಗುಲಾಬಿ

ಇದೇನಿದು ದಳದಳ
ಅರಳಿ ಮೂಡಿತಲ್ಲ ಹೊಸ
ವರ್ಣಮಾಲೆ.




ಕಡಲು

ಉದಯಕುಮಾರ್ ಹಬ್ಬು

ಉದ್ದಕ್ಕೆ ಮೈ ಬಿಚ್ಚಿ ಮಲಗಿದ ತೀರ
ತೆರೆಗಳ ಕೈಗಳ ಚಾಚಿ ಚಾಚಿ ಅಪ್ಪಿಕೊಳ್ಳಲು
ಮುಂದಾದ ಕಡಲು

ತೆರೆಗಳ ಹಿಂದಕ್ಕೆ ದೂಡಿದ, ತಳಿದ ಬಂಗಾರದ ಒಡಲು
ಪಾದ ಪೂಜೆ ಮಾಡಿತು ತೊಳೆದು ನನ್ನ ಎಂದು ತಿಳಿದೆ;

ಉದ್ದಕ್ಕೆ ಚಾಚಿ ಅನಂತದ ಸೂಜಿ ಮೊನೆಯಷ್ಟು
ಆವರಿಸಿದ ತೀರ
ದಿಗ್ದಿಗಂತ ಹರಡಿ ನಿಂತ ನಿಶಾಂತ
ಸೂಜಿ ಚುಚ್ಚಿದ ಉಬ್ಬಿಕೊಂಡ ಬಲೂನು.
ನಾನು ಮಳೆ ಸುರಿಸುವದಿಲ್ಲ; ಪ್ರತಿಫಲಿಸುವದಿಲ್ಲ
ಬೆಳೆಯಾಗುವದಿಲ್ಲ. ಓ ಭಾನು! ವ್ಯೋಮ!
ನಾನು ನೀವಾಗುವದೆಂದು?
ಅನಂತ ಕಾವಾಗುವದೆಂದು?



ಕುಂಡ

ಎಸ್. ಮಾಲತಿ

ನಗು ಮಾತು ಚರ್ಚೆ
ಗೇಲಿ ಹಾಸ್ಯ ಕಟಕಿ
ಬಣ್ಣ ಬಣ್ಣದ ಆಟ
ಎಷ್ಟು ಕಣ್ಸನ್ನೆಯ ನೋಟ!

ಮತ್ತದೇ
ಮಾತಿಗೆ ಮಾತು
ನಗೆಗೆ ನಗೆ
ಪ್ರಶ್ನೆಗೆ ಉತ್ತರ
ಉತ್ತರಕ್ಕೆ ಪ್ರತ್ಯುತ್ತರ

ಚುಂಬನ ಬಾಹುಬಂಧನ
ಅಪ್ಪಿ ಮುದ್ದಾಡಿ
ಕಚ್ಚಿ ಕೊಸರಾಡಿದರೂ
ಒಳಗಿಳಿದು ತಳಕಂಡು
ಜೀವಜಲ ಸಂಗಮವಾದರೂ
ನಿಶ್ಚಲ ನಿಂತಿದೆ ಒಳಗೊಂದು
ಪರೆ ಹರಿಯಲಾರದಂಥ
ಕಲಕಿ ಹೋಗಲಾರದಂಥ
ಸಣ್ಣ ಬೆಳಕಿನ ಕುಂಡ!

ಚರ್ಚೆಗೊಂದು ಮುಕ್ತಾಯ ಹೇಳುವ
ಹಾಸ್ಯಕೊಂದು ಕೊನೆಯ ತರುವ
ದೇಹದಾಹದ ಮಿತಿಯ ತಿಳಿಸುವ
ಕತ್ತಲಿನಲ್ಲೂ ಒಬ್ಬಂಟಿ ನಡೆಸುವ
ಆರದ ಒಳಗಿನ ಅಗ್ನಿ ಕುಂಡ!



ಗೂಗಲ್ ಎಂಬ ಸರ್ಚ್ ಎಂಜಿನ್

ಬೇಲೂರು ಸುದರ್ಶನ

ಯಾವ ಊರಿನ ಯಾವ ದಾರಿ
0.17658 ಸೆಕೆಂಡುಗಳಲ್ಲಿ
ಯಾವ ಅಳತೆಯ ಮೊಳೆ
2.65789 ಸೆಕೆಂಡುಗಳಲ್ಲಿ
ಯಾವ ಬೆಡಗಿಯ ನಗ್ನ ಭಂಗಿಗಳು
4.398765 ಸೆಕೆಂಡುಗಳಲ್ಲಿ
ಹೊಸ ಫ್ಯಾಶನ್ ಅಂಗಿಗಳು
.0023463 ಸೆಕೆಂಡುಗಳಲ್ಲಿ
ಮೊನೆ ಸಂಶೋಧಿಸಿದ ಜಿನೋಮ್
1.8749 ಸೆಕೆಂಡುಗಳಲ್ಲಿ
ನಿನ್ನೆ ಬರೆದ ಕಲಾಕೃತಿ
.198634 ಸೆಕೆಂಡುಗಳಲ್ಲಿ
ಇವತ್ತು ನಡೆದ ಟೊಮ್ಯಾಟೋ ಮೇಳ
ಒಂದು ಗಂಟೆಯ ಹಿಂದೆ ತಾನೇ ಕ್ಲಿಂಟನ್
ಉದುರಿಸಿದ ಅಣಿಮುತ್ತುಗಳು

ಹುಡುಕಿ, ಜಾಲಾಡಿ
ಗೂಗಲ್ ಯಂತ್ರದ ಮೂಲಕ ಸಿಕ್ಕಿಬಿಡುತ್ತವೆ.
ಇವುಗಳನ್ನು ತಿಳಿದುಕೊಳ್ಳುವುದು ಈಗ
ಸೆಕೆಂಡುಗಳ ಕೆಲಸವೂ ಅಲ್ಲ ಎಂದ ಮೇಲೆ
ಬದುಕುವುದು ಎಷ್ಟು ಮಜಾ

ಮಾತ್ರ
ಕಳೆದುಹೋದ ಗೆಳೆಯನನ್ನು
ಮರೆತುಹೋದ ಪದ್ಯವನ್ನು
ಮತ್ತೆ ಬರದ ಮಳೆಗಳನ್ನು
ಹುಡುಕುವುದು ಕೊಂಚ ಕಷ್ಟ

ಯಾಕೆಂದರೆ ಗೂಗಲ್ ಒಂದು ಸರ್ಚ್ ಎಂಜಿನ್.

ಯಾಕೆಂದರೆ ಗೂಗಲ್ ಒಂದು ಹುಡುಕುವ ಯಂತ್ರ
ಮನುಷ್ಯ ಎಂದು ಹೋಲಿಸಿದರೆ, ಹೌದು ಅವ
ಭ್ರಮಾಧೀನ ಜಗತ್ತಿನ ಹೊಸ ತಳವಾರ.

ಕಾಯುತ್ತಾನೆ, ಹುಡುಕುತ್ತಾನೆ
ಅವನ ಕಣ್ಣುಗಳಲ್ಲಿ ಕಾಣಿಸೋದು ಕೆಲಸದ ಪ್ರಜ್ಞೆ
ಯಾಕೆ ಸುಮ್ಮನೇ ಹುಡುಕುತ್ತೀರಾ ಅವನಲ್ಲಿ
ಯಾವುದೋ ಹನಿ?

ಸಂಜೆಗೆ ಸದ್ದಿಲ್ಲದೇ...

ವಿಜಯ ವಾಮನ

ಸತ್ತರೆ ಉಡುಪನ ಹಾಗೆ ಸಾಯಬೇಕು.
ಕಂದಲಿಲ್ಲ... ಕೃಶನಾಗಲಿಲ್ಲ... ತಿಂಗಳ ಚಂದ್ರ
ಅಚಾನಕ ಕಳಚಿ ಕಣ್ಮರೆಯಾಗಿ ಹೋದನಲ್ಲ!

ನೋಡಿದ್ದೇನೆ ನಾನೂ
ಆರಡಿಯಿದ್ದ ನನ್ನ ದೊಡ್ಡಮ್ಮ
ಮುರುಟಿ ಮೂರಡಿ
ಬೋಳು ಮಂಡೆ ತೊಲ ಬಾವಲಿಯಾಗಿ
ಗಂಡೋ ಹೆಣ್ಣೊ ಗೊತ್ತಾಗದ
ಸೋಮಾಲಿಯ ಚಕ್ಕಳವಾಗಿದ್ದು.
ನೀರುಣಿಸಿದರೆ ಹಾಸಿಗೆಯಲ್ಲೇ ಉಚ್ಚೆ
ಎಂದು ಸಿಂಡರಿಸಿದ ಸುಕುಮಾರ.
ಮನೆಗೆ ಒಯ್ದರೆ ಕೆಟ್ಟ ನಕ್ಷತ್ರದಲ್ಲಿ
ಸತ್ತಾಳೆಂದು ತತ್ತರಿಸಿದ ಸುಕುಮಾರಿ
ಅಹಹಾ... ಜೀವ ಕಾರುಣ್ಯವೇ!

ನನ್ನಾಲದ ವ್ಯಥೆ ಕೇಳಿ...
ಬಿಳಲುಗಳು ಬೆಂಡಾಗಿ
ನವದ್ವಾರಕ್ಕೂ ನಳಿಕೆ ಪೋಣಿಸಿಕೊಂಡ
ಅತ್ತ ಸಾಯದ ಇತ್ತ ಬದುಕದ
ಶ್ಮನಃಶೇಷ ಜೀವ.
ಸರ್ಕಾರಿ ವೈದ್ಯರನ್ನೇ ''ಪರಿಮಳ''ದವರೆಂದು
ಭ್ರಮಿಸಿ. ಹೊಳ್ಳೆ ಹಿಗ್ಗಿಸಿ. ಕಣ್ಣು ಅರೆಮುಚ್ಚಿ
ಬಚ್ಚಬಾಯಿ ಮುಚ್ಚಲಾಗದೇ ಬಿಕ್ಕಳಿಸಿ
ಕಟಬಾಯಲ್ಲಿ ಬಿಳಿ ಬುರುಗು ಸುರಿದು
ಪುತ್ರ ಪೌತ್ರ ಪ್ರಪೌತ್ರಾದಿಗಳು ದಿಕ್ಕೆಟ್ಟಾಗ... ಹೋ...
ತೆರೆಯಿತು ವೈಕುಂಠದ ಬಾಗಿಲು.
ಎಲೆಲಾ ನಿತ್ಯ ನಾರಕಿಗಳೇ!


ಸತ್ತರೆ ಉಡುಪನ ಹಾಗೆ...
ಕಂದದೇ ಕೃಶನಾಗದೇ
ಮನೆಯಂಗಳದ ಪುಟ್ಟ ನೀಲಿ ಹೂ
ದಿನವಿಡೀ ಖುಷಿ ಆಲಾಪಿಸಿ
ಸಂಜೆಗೆ ಸದ್ದಿಲ್ಲದೇ ಇಲ್ಲವಾಗುವ
ಹಾಗೆ...



ಬ್ರಹ್ಮ

ಎಂ. ವ್ಯಾಸ









ಬಾ ಮುಖ ಕೊಡು ತುಟಿ ಕೊಡು
ನೆಲ ಕೊಡು ಬೆಟ್ಟ ಕೊಡು ನದಿ ಕೊಡು ಸೆಳೆತ ಕೊಡು
ಕೊಡು ಒರತೆ
ಹಬ್ಬು ಹೂಬಳ್ಳಿಯಾಗಿ ಮೈ ಕೊಡುತ್ತೇನೆ ಮರ ಕೊಡುತ್ತೇನೆ
ಬೇರುಗಳಿಗೆ ಉಂಗುರ ತೊಡಿಸು
ಬೆರಳುಗಳಿಗೆ ಗಗ್ಗರ ತೊಡಿಸು
ಎಲೆ ಎಲೆಗಳ ಕಂಪನಗಳಿಗೆ
ಗಾಳಿಕೊಡು
ಚಲಿಸಲು ಗಾಲಿ ಕೊಡು
ನಕ್ಷತ್ರ ಕೊಡು ಆಕಾಶಕ್ಕೆ
ತಿರುಗಿಸು ನಕ್ಷತ್ರಗಳನ್ನು
ಈ ಸರೋವರದ ನೆರಳುಗಳಾಗಿ
ಕಂಪಿಸುತ್ತಿರು ಆಕಾಶದಲ್ಲಿ
ಮೈಯಲ್ಲಿ ನವಿರುಗಳಾಗಿ

ರತ್ನಗರ್ಭದಲ್ಲಿ ಲಕಲಕಿಸು
ಅಗೆಯುತ್ತೇನೆ ಬಿಸಿಯಾಗಿ
ಸಿಡಿಯುತ್ತೇನೆ ಸ್ಫೋಟವಾಗಿ
ತೇಲುತ್ತೇನೆ ಮೇಘ ಶಿಲ್ಪವಾಗಿ
ಸುರಿಯುತ್ತೇನೆ ಸುಖ ವರ್ಷವಾಗಿ

ಚಿಮ್ಮು ಒರತೆಯಾಗಿ
ದ್ರವಿಸಿ ನಿಲ್ಲು ಚಿಗುರಾಗಿ ವಸಂತವಾಗಿ ಪ್ರಕೃತಿಯಾಗಿ
ಜ್ವಲಿಸಿ ನಿಲ್ಲುತ್ತೇನೆ ಸೂರ್ಯನಾಗಿ ಬೆಂಕಿಯಾಗಿ ಬೆಳಕಾಗಿ
ಬೆಳದಿಂಗಳಾಗಿ
ಮತ್ತೆ
ಬ್ರಹ್ಮನಾಗಿ



ನದಿಯ ನಡೆ

ದೊಡ್ಡರಂಗೇಗೌಡ

''ಸಾಧಿಸಿದ್ದೇನೆ ಏನೇನೋ'' ಎಂದು ಬಾಗಿ ಬೀಗಿದ ಮನಸ್ಸಿಗೆ
ಕನ್ನಡಿ ಹಿಡಿದೆ - ವಕ್ರವಿರಲಿಲ್ಲ ಕನ್ನಡಿ ಗಾಜು
ವಕ್ರವಾಗಿತ್ತು ನನ್ನದೇ ರೀತಿ-ರಿವಾಜು;
ಕಡಿದು ಕಟ್ಟಿ ಹಾಕಿದ್ದು ಅಷ್ಟರಲ್ಲೇ ಇತ್ತು!
ಕಡ ತಂದದ್ದು ಸಾವಿರ; ತೇಪೆ ಹಾಕಿದ್ದು ನೂರಾರು...
ದಾರಿಗರ ಪದ ಪೋಣಿಸಿದ್ದು ಹತ್ತಾರು
ಸ್ವಂತದ್ದು ಎಲ್ಲೋ ಅಲ್ಲೊಂದಿಷ್ಟು... ಇಲ್ಲೊಂದಿಷ್ಟು...ಚೂರು-ಪಾರು!
ಮುಳುಗಿದ ಸೂರ್ಯ ಮಲಗುವುದಿಲ್ಲ ಏಳುತ್ತಾನೆ
ಬರೆದ ಕವಿತೆ ಹರಿಯುವುದಿಲ್ಲ ತೆರೆಯುತ್ತದೆ ನನ್ನದೇ ಕಥೆ
ಬಿರಿದ ಮೊಗ್ಗು ಸ್ಥಿರವಾಗುವುದಿಲ್ಲ... ನರಳುತ್ತದೆ ಕಾಲಗರ್ಭದಲ್ಲಿ
ಖಾಲೀ ಜನ ಸದ್ದು ಮಾಡುತ್ತಾರೆ ಸಭೆಯಲ್ಲಿ ಬೀದಿಯಲ್ಲಿ ಆಫೀಸಿನಲ್ಲಿ
ತುಂಬಿ ಹರಿವ ನದಿಗಳು ನಡೆದಾಡುತ್ತಿವೆ
ಅಲ್ಲೊಂದು ಇಲ್ಲೊಂದು ಬೆಂಗಳೂರಲ್ಲಿ

ವೃಶ್ಚಿಕ

ಟೀನಾ ಸೆಹ್‌ಲಾ




ಗುಡುಗು ನಿಂತಿತು
ಕಿಟಕಿ ತೆರೆದೆ
ನೋಡಿದೆ...
ಬೇಲಿ ಬದಿಯಲ್ಲಿ
ಅಲ್ಲಲ್ಲಿ ಕೇಸರಿ ಹೂ ಬಿಟ್ಟು ನಿಂತ
ದಾಳಿಂಬೇ ಗಿಡ
ಮಳೆಯೊರೆಸಲು ಬಂದ ಬಿಸಿಲಿಗೆ
ಫಳ್ಳನೆ ಮಿರುಗಿತು.
ಹಾಗೆ ಮಿನುಗುತ್ತಲೇ ಇತ್ತು.
ಅಲ್ಲೇ ಬುಡಕ್ಕೊಂದು ಚೇಳು.
ಕಪ್ಪಗೆ, ದಪ್ಪ
ಮೆಟ್ಟಿದ ಹಾಗೆ
ಸಳಸಳನೆ ಅಡ್ಡಾದಿಡ್ಡಿ
ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ

ಹತಾಶಳಾದಾಗೆಲ್ಲ
ಕ್ರೂರಳಾಗುತ್ತ ಹೋಗುತ್ತೇನೆ...
ಅಳುವುದಿಲ್ಲ
ನಗಬೇಕೆನಿಸುತ್ತದೆ...

ನಿದ್ದೆಯ ತುಂಬ
ಹೆಡೆಯೆತ್ತಿ ನಿಂತ ಹಾವುಗಳು
ಅವನ್ನು ಕತ್ತರಿಸಿ ಕತ್ತರಿಸಿ
ಒಟ್ಟುತ್ತಿರುವ ನಾನು...

ಹೊಡೆವ ಸಿಡಿಲಿಗೆ ಬಯಲಾಗುತ್ತಿದ್ದೇನೆ
ಯಾವ ಚಂಡೆಮದ್ದಳೆಯ
ಮೊರೆಹೊಕ್ಕಾನು ಅವ
ನನ್ನ ವಿಷವೇರಿದ ಮೇಲೆ?

ಚೇಳು ನಾನು
ವೃಶ್ಚಿಕ
ಬಡಪೆಟ್ಟಿಗೆ ಹೋಗಲಾರೆ.
ಬಡಿಬಡಿದೇ ಸಾಯಿಸಬೇಕು
ನನ್ನನ್ನು...

ಹಣೆಬರಾ

ಆನಂದ ಭೋವಿ

ಶೆಟಿಗೆವ್ವಾ ನೀ ಸೆಟಗೋ ಬ್ಯಾಡ
ಸಿಟ್ಟಿದ್ರ ಸಿಕ್ಕಂಗ ಬರದ ಹೋಗ ಹಣೆಮ್ಯಾಲ
ಮರುಕಿಲ್ಲ ನಿನ್ನ ಮ್ಯಾಲ ನನಗ
ನಾ ಯಾಕ ಬೆದರಬೇಕ ನಿನಗ

ಗುಗ್ಗಳ ಗದರಿ ನಿಂತಾವ ಹಪ್ಪಳ ಚಡಪಡಿಸತಾವ
ಚರ್ಮ ಸುಡಾಕ್ಹತ್ತೈತಿ ಹಣೆ ಅಗಲ ಆಗ್ಯೆತಿ
ಕತ್ತಲ ಗುರ್ ಅಂತ ಗುರ್‌ಗುಡ್‌ತೈತಿ
ನೀ ಹೆಂಗಾರ್ ಗೀಚ ಗದರುವದಿಲ್ಲ ನಾ

ನೀ ಬರದ ಮ್ಯಾಲ ಅಪ್ಪ-ಮಗಳು ಸಂಬಂಧ ಬೆಳಸಿದ್ರಂತ
ಅಣ್ಣ ತಂಗಿ ಕೂಡ ಓಡಿಹೋದ, ಮದುವೆಯಿಲ್ಲದ ಮಕ್ಕ ಹುಟ್ಟಿದ್ರ
ತಾಯಿ ಮಗನ ಕೊಂದಾಳ ಮಗ ತಾಯಿ ವರಿಸ್ಯಾನ
ಎಂಥಾ ಆಟ ನಿನ್ನದ ಮುದಕಿ ಬಾಳ ಕಥಿ ಹೇಳತಾಳ ನಿನ್ನ ಮ್ಯಾಗ

ನೀ ಬರದ ಮ್ಯಾಲ ನಾ ಬದಕಬೇಕ
ತಡಯಾಕ ಮಾಡತಿ ದೌಡ ಬಾ
ಹಣೆಬರಾ ಬರಬ್ಬರಿ ಬರೀ ಅಂತ ನಾ ಹೇಳಲ್ಲ
ನೀ ಹೇಂಗ ಬರೀತಿ ಹಂಗ ಇರತೇನಿ



ನಾ ನಿನಗ ಸೆಡ್ಡು ಹೊಡೆಯುವದಿಲ್ಲ
ಸಿಕ್ಕ ಸಿಕ್ಕಲೇ ನಿನಗ ಕೈ ಮುಗಿಯುವದಿಲ್ಲ
ಸೊರಗಿದರ ನಿನ್ನ ಶಪಿಸುವದಿಲ್ಲ ಗೆದ್ದರ
ನಿನ್ನ ಹೊಗಳುವದಿಲ್ಲ ನೀ ಆಡಿಸದಂಗ ಆಡತಿನೀ

ಆದ್ರ
ಸತ್ತಮ್ಯಾಲ ನಾ ನೆಟ್ಟಗ ಸ್ವರ್ಗಕ್ಕ ಹೊಕ್ಕೇನಿ
ಆ ಗಂಗೀಗೆಣ್ಯಾ ಶಿವನ ಸೆಡ್ಡು ಹೊಡದ ಕೇಳ್ತೇನಿ
ಶೆಟಿಗೆವ್ವಾ ಹೇಂಗ ಬರದಾಳ ಹಂಗ ಬಾಳೇನಿ
ಆದರಾಗ ನಂದೇನ ತಪ್ಪೈತಿ ಅದಕ್ಕ ನಾ ಇಲ್ಲೆ ಇರ್ತೇನಿ

ಮಾಧವಾಲಾಪ

ಅರವಿಂದ ನಾಡಕರ್ಣಿ

ಏ ರಾಧೆ ನೀ ತೋರಿಸಿದೆಯಾ ಗದೆ?
ಯಾರು ತುಂಬಿದರೀ ಅಪಲಾಪ
ನಿನ್ನ ಸುಂದರ ತಲೆಯಲ್ಲಿ? ಅವ
ಬಂದರೆ ಅವನೆದೆ ಮೇಲೆ ಕುಣಿವೆ
ಅಂಗಾಂಗ ವಿಷವೆಲ್ಲ ಚೆಲ್ಲುವಂತೆ
ಹಲ್ಮುರಿವೆ ಎಂದೂ ಕಡಿಯದಂತೆ.
ಸುಗಮ ಸಾಗಿತ್ತು ಸಿಹಿಸಲ್ಲಾಪ. ನಿನ್ನ
ಸಾನಿಧ್ಯ ವಸಂತದಲ್ಲಿ ಅರಳಿತ್ತು ನನ್ನ ಜೀವ.
ನಿನ್ನ ಕಣ್ಣ ಬಿಸಿಲಲ್ಲಿ ಮಾಗುವದು ನನ್ನಾತ್ಮ.
ಹೀಗಿರುವಾಗ ಹೋಗಬೇಕೇ ನೀ ಝುಂಕಿಸಿ
ಏ ರಾಧೆ ಏನು ನಿನ್ನ ಪ್ರಿಯ ಇರಾದೆ?
ನಿಜ. ನಿನ್ನಪ್ಪನ ದಪ್ಪಮೀಸೆಯೆದುರು
ನಿಲ್ಲುವ ಛಾತಿಯಿಲ್ಲೀಗ. ಬ್ಯಾಂಕಿನಲಿ
ಖಾತೆ ತುಂಬಲು ಆಯುಷ್ಯ ಇದೆಯಲ್ಲ?
ಪ್ರೇಮಕ್ಕೆ ಇಂಥ ಚಿಲ್ಲರೆ ಕಿರಿಕಿರಿ ಸಲ್ಲ.
ಅದು ಬದುಕಿನ ಮೂಲಮಹಾಶಕ್ತಿ
ಮರೆಯಾಗುವ ಗಿಲೀಟು ಅಲ್ಲ, ಜೋಡಿಸುವ
ಫೆವಿಕೋಲು ಅಂಟು. ಭುಗಿಲೆದ್ದು ಥಂಡಾಗು
ಉರಿಯಲ್ಲ, ಅದು ಆರದ ಜ್ಯೋತಿ.
ಈ ಪದವಿ ವೈಜಯಂತಿಗೆ ಜಾದು ಅನಂತ.
ಕಿರಿಬೆರಳಲಿ ಎತ್ತುವೆ ಸಂಸಾರಗಿರಿ ಇಂದೂ.
ಸೂರೆಮಾಡು ಈ ಪ್ರೇಮಖಜಾನೆ
ನಿನಗಾಗಿ ತುಂಬುವೆ ಪ್ರತಿದಿನ ಮುಂಜಾನೆ
ಏ ರಾಧೆ ಹೀಗೆ ಬಾ ಹಾಡಿ ಸೋಭಾನೆ...

ಪುಸ್ತಕ ಬಿಚ್ಚಿದರೆ...

ಗಣಪತಿ ಬಾಳೆಗದ್ದೆ

ಪುಸ್ತಕ ಬಿಚ್ಚಿದರೆ,
ಕಾಣುವುದು ಅಕ್ಷರಗಳಲ್ಲ

ಉದ್ದಾನುದ್ದ ಗದ್ದೆ ಬಯಲು
ನೀಲಿ ಆಕಾಶದ ತುಂಬ ಬೆಳ್ಳಕ್ಕಿ ಹಿಂಡು
ದಿಬ್ಬದ ಮೇಲೊಂದು ಪುಟ್ಟ ಗುಡಿಸಲು
ತೆರೆದಿಟ್ಟ ಬಾಗಿಲು...

ಒಳಗೆ ಅಂಬೆಗಾಲಿಕ್ಕಿದರೆ
ಮೈ ಮುಟ್ಟಿ ನೇವರಿಸುವ ಮಮತೆ
ಮರವಾಗುವ ಹುರುಪು


ಚಿಕ್ಕ ಚೀಲದ ತುಂಬ
ಚಿಗುರೊಡೆಯದ ನವಿಲುಗರಿ
ಹಾಳಾದ ಬಣ್ಣದ ಬಿರಡೆ, ಬಳೆ ಚೂರು
ಉದುರಿ ಬಿದ್ದ ಪಾತರಗಿತ್ತಿ ರೆಕ್ಕೆ
ಹಕ್ಕಿಪುಕ್ಕ...

ಮುಚ್ಚಳ ತೆರೆದ ಅತ್ತರು ಬಾಟಲಿ
ಘಮಘಮ ತೊಟ್ಟಿಕ್ಕುವ ಯೌವನ
ಮಿಣುಕು ಮಾಯಾಲಾಂದ್ರ...
ಅಲ್ಲಲ್ಲಿ ಹೆಪ್ಪುಗಟ್ಟಿದ ಕಣ್ಣೀರಕಲೆ

ಮುಸ್ಸಂಜೆಯಂತ ಕಟ್ಟ ಕಡೆಯ
ಬೀಳ್ಕೊಡುಗೆಯ ನೋಟ...
ಪುಸ್ತಕ ಬಿಚ್ಚಿದರೆ,
ಒಡೆದು ಬಿದ್ದ ಕನ್ನಡಿ.

ಚಿಟ್ಟೆ

ಗೋವಿಂದ ಹೆಗಡೆ



ಮೋಟರ್ ಬೈಕಿನಲ್ಲಿ ಭರ್ರನೆ ಓಡುವಾಗ
ಚಿಟ್ಟೆ ಬಂದು ಎದೆಗೆ ಢಿಕ್ಕಿ ಹೊಡೆಯಿತು

ಗಂಡೋ ಹೆಣ್ಣೋ ಚಿಟ್ಟೆಗಳಲ್ಲಿ ಅದು
ಯಾವ ಜಾತಿ ಎಂದೆಲ್ಲ ನಾನು ಕೇಳಲಿಲ್ಲ

ಎದೆಗೆ ಅಲ್ಲ ಶರ್ಟಿಗೆ ಅಂಟಿದ್ದ ಇಷ್ಟು ಬಣ್ಣ
ನೋಡಿಕೊಳ್ಳುತ್ತ ಗಾಡಿ ಬಿಟ್ಟೆ
ಇದಿರಿನಿಂದ ಬಸ್ಸು ಹಾದು ಹೋಯಿತು

ಏನೋ ನೆನಪಾಗಿ ಹಿಂದೆ ಬಂದರೆ
ಚಪ್ಪಟೆಯಾಗಿ ಬಿದ್ದ ಚಿಟ್ಟೆ
ರೆಕ್ಕೆಗಳಿಗೆ ಮೆತ್ತಿದ ಬಣ್ಣವಿಲ್ಲದ ರಕ್ತ

ಢಿಕ್ಕಿ ಹೊಡೆದಾಗ ತಲೆಸುತ್ತಿ ಬಿದ್ದಿರಬೇಕು
ಚಕ್ರದ ಗಿಲೋಟಿನ್‌ಗೆ ಕೊರಳೊಡ್ಡಿ

ಅದರ ಹಿಂದು ಮುಂದು ಏನಿತ್ತು ಏನಿರಲಿಲ್ಲ
ಮಧು ಮಾಸದಲ್ಲಿ ಹಸಿದಾಗ ಹೊಟ್ಟೆ
ತುಂಬಿದಾಗ ಹಾಡುತ್ತಿತ್ತೆ
ಅದು ನನಗೆ ತಿಳಿಯಲಿಲ್ಲ

ಕನಸುಗಳು ಬಣ್ಣದ ಪಕ್ಕ ತೊಟ್ಟು
ಹಾರುವಾಗ ಹೀಗೆ ಚಿತ್ತಾರವಾಗಿ
ಬಣ್ಣವಿರದ ರಕ್ತವಾಗಷ್ಟೇ ಉಳಿದಾವೆ

ಆ ರೆಕ್ಕೆಗಳಿಗೆ ನಮ್ಮ ಹೆಸರಿನ ಚೀಟಿ ಅಂಟಿಸಿ ಬಿಟ್ಟರೆ..

ಮಿಂಚು

ಪಿ. ಚಂದ್ರಿಕಾ



ಅಮ್ಮ ರಾತ್ರಿಯಾದರೆ
ಆರಿ ಹಾಕಿದ ಬಟ್ಟೆಗಳನ್ನು
ಬೇಗ ತೆಗೆಯುವಂತೆ ಹೇಳುತ್ತಿದ್ದಳು
ತಡ ಮಾಡಿದರೆ
ಮಿಂಚುಹುಳುಗಳು
ಬಟ್ಟೆಯ ಮೇಲೆ ಕೂತು
ತೂತು ಮಾಡಿಬಿಡುತ್ತದೆಂದು
ಗಿಡಗಳ ಮೇಲೆ ಮೂಡಿದ್ದ ಚುಕ್ಕಿ
ತೂತುಗಳೆಲ್ಲಾ
ಆ ಮಿಂಚುಹುಳುಗಳೇ ಮಾಡಿದ್ದವೆಂದು
ಗಾಬರಿಯಾಗುತ್ತಿದ್ದೆ.

ಅವಘಡ
ಶೂದ್ರ ಶ್ರೀನಿವಾಸ್

ದಿನನಿತ್ಯ ಬಂದು ಹೋಗುವ
ಈ ಅವಘಡದ ರೂಪ ಹುಡುಕುತ್ತಿದ್ದೇನೆ
ಮನದಲ್ಲಿ, ದೇಹದಲ್ಲಿ, ಚಿಂತನೆಯ
ಸುಳಿಯೊಳಗೆ ಮೆಲ್ಲನೆ ಬೆಕ್ಕಿನಂತೆ
ಹೊಕ್ಕು ಏನೇನೋ ದಾಂದಲೆ ಮಾಡುವ
ಇದು ಕಾರ್ಮೋಡದಂತಿರಬಹುದೇ
ಭೋರ್ಗರೆಯುವ ಜಲಪಾತದಂತಿರಬಹುದೇ
ಅಥವಾ ಬೇಟೆನಾಯಿಯಂತಿರಬಹುದೇ
ಎಂದು ತಲೆಕೆಡಿಸಿ ಹೋಗುತ್ತದೆ.
ಮೊನ್ನೆ ಯಾರೋ ಮನೆಗೆ ಬಂದವರು
ಅದು ಇದು ಮಾತಾಡುತ್ತ
ನಮ್ಮ ಮನೆಗೆ ಅವಘಡ ಬಂದಿತ್ತು
ಮನೆಯಲ್ಲೆಲ್ಲ ಗಬ್ಬೆಬ್ಬಿಸಿ ಹೋಯ್ತು
ನಿಮ್ಮ ಮನೆಯ ಕಡೆ ಏನಾದರು
ಬಂತೆ, ಕೇಳಿ ಹೋಗೋಣವೆಂದು
ಬಂದಿರುವೆ, ಅನ್ಯಥಾ ಭಾವಿಸಬಾರದು
ಎಂದು ಪೀಠಿಕೆ ಹಾಕುತ್ತ
ಒಂದೊಂದೇ ಮಾತು ಬಿಚ್ಚುತ್ತ
ವಿಷಾದ, ಗಾಬರಿಯ ಮಧ್ಯೆ ಮಿಕಿಮಿಕಿ
ನನ್ನ ಮೋರೆ ನೋಡುತ್ತ
ಉತ್ತರಕ್ಕಾಗಿ ಕಾಯುತ್ತ
ದಿಡೀರನೆ ಎದ್ದು ಹೊರಟೇಬಿಟ್ಟರು.

'ಉಪ್ಪು ತಿಂದ ಮೇಲೆ ನೀರು ಕುಡಿಯಬೇಕು'
ಎಂದು ಗೊಣಗಾಡುತ್ತ
ಪಕ್ಕದ ಮನೆಯ
ಬಾಗಿಲು ಬಡಿಯುತ್ತಿದ್ದರು.

ತಂಟೆ
ಕಮಲಾಕರ ಕಡವೆ

ನಿನ್ನ ಈ ನಗು ಭಿನ್ನ ಬಣ್ಣ ನಿನ್ನದೆ

ಕೇಳಬಲ್ಲೆ ಕೆದಕಿ ಕೊರೆಯಬಲ್ಲೆ ನನ್ನ ಕಣ್ಣ
ಭಾಷೆಯಲ್ಲದ ಅರ್ಥವನ್ನು
ಹುಡುಕಬಲ್ಲೆ ಮರಳಿ ತೋರಬಲ್ಲೆ ನನ್ನ ಮಾತು
ಧರಿಸಲಾರದ ಉಡುಗೆಯನ್ನು


ಕಂಡು ಕೇಳದ ಬಣ್ಣದಲ್ಲಿ ಅದ್ದಿಅಳೆದು ಬಿಟ್ಟೆ ನೋಟವನ್ನು
ಏನು ಹೇಳದು? ಏನು ಹೇಳದು? ನೀನು ಅರಸ ಹೊರಟಿದ್ದು?


ತೊಟ್ಟರಾಯಿತೆ ಮೊಗ್ಗು ಹೂವು ಅರಳಲು
ಬಾಡಬಹುದು ಯಾವ ಕ್ಷಣದಲ್ಲೂ
ಕರೆದರಷ್ಟೇ ಸಾಕೆ ಹೆಸರು ಹಿಡಿದು
ಕಳೆಯಬಹುದು ಯಾವ ತಿರುವಲ್ಲೂ.

ದುಡುಕಿ ನೀನು ಹುಡುಕಿ ಬಿಟ್ಟೆ ತಡಬಡಿಸಿ ಎಲ್ಲವನು
ಏನು ಹೇಳದು? ಏನು ಹೇಳದು?
ನೀನು ಕಂಡುಕೊಂಡದ್ದು.

ಹಗುರ ಹಗಲಲಿ ದೊರೆವ ಬಾನ ಸುಮ್ಮಾನ
ಒಯ್ಯಲಾರೆವು ಸಂತೆಗೆ
ತಿಳಿನಗೆಯು ತೆರೆದಿಟ್ಟ ಹುಚ್ಚು ತನನ
ಬಾರದೆಯ ಈ ನೆಲದ ತಂಟೆಗೆ

ಮರೆತುಬಿಟ್ಟೆ ತಳ್ಳಿ ತೊಳೆದುಬಿಟ್ಟೆ ಭೀತಿಯನ್ನು
ಹೇಗೆ ಹೇಳದು? ಹೇಗೆ ಹೇಳದು? ನೀನು ಗೆದ್ದು ನಕ್ಕಿದ್ದು.


ಶ್ರೀನಿವಾಸ್


ಡಿ.ವಿ. ಪ್ರಹ್ಲಾದ್


ಕಮಲಾಕರ.


ಸುಬ್ಬು ಹೊಳೆಯಾರ್

ಲಿಫ್ಟಿನೊಳಗಿನ ಕನ್ನಡಿ
ಡಿ.ವಿ. ಪ್ರಹ್ಲಾದ್

ಮೂರು ಹೊತ್ತೂ ನಿರಂತರ
ಮೇಲೇರುವ ಮತ್ತೆ ನೆಲ ಕಾಣಿಸುವ
ಆ ಪುಟ್ಟ ಲೋಕದೊಳಕ್ಕೆ
ಒಂದು ಹಿಡಿ ಕನ್ನಡಿ

ಹಬೆಮೈಯ್ಯ ಪೌಡರು ಹೂ
ಸುವಾಸನೆಗಳ ಅಡರು
ಸಿಹಿಯಂಗಡಿಯ ಷೋಕೇಸಿನೊಳಗೆ
ಸಿಕ್ಕ ನೊಣಗಳ ಹಾಗೆ ಈ ಲಿಫ್ಟಿನೊಳಗೆ

ಗಣಿತದ ಈ ದಡದಿಂದ
ಅಗಣಿತದ ಆ ದಡಕ್ಕೆ
ಹೊಸ ದಿನ ಹೊತ್ತ ಹರಿಗೋಲು

ಹೇಳು ಕನ್ನಡಿಯೆ ಕಾಣುವುದೆಲ್ಲ ನಿಜವೆ?
ಏರು ಹೊತ್ತಿಗೆ ಏರತೊಡಗುವುದೆಲ್ಲ

ಬೆಳಕು ಚಿಗುರುವ ಭ್ರಮೆಗಳೊಳಗೆ
ಕಂತುವ ದಟ್ಟ ಕತ್ತಲುಗಳು

ಕನ್ನಡಿಯ ಕೆಲಸ ಕಾಣಿಸುವುದು
ಇದ್ದ ಹಾಗೆ ಇರಬೇಕಿದ್ದ ಹಾಗೆ
ಅವನ ಮುಖದಷ್ಟೇ ನಿಜ ಇವಳದ್ದೂ

ಕರೆಂಟು ತಪ್ಪಿದ ಸ್ತಬ್ಧ ಎದೆಯೊಳಗೆ
ಎಲ್ಲಿಂದಲೋ ಒಂದು ಕೋಲಿನಂಥಾ ಬೆಳಕು
ಮೀಟಿಬಿಡುತ್ತದೆ ದಿನದ ತೇರಿನ ದಿಕ್ಕು

ಮಾತು ಕೂಡ ಸಂಕೋಚವೇ
ಸುಬ್ಬು ಹೊಲೆಯಾರ್

ಸೂಜಿ ಗಾತ್ರದ ಹೊಗೆ ನನ್ನೆದೆಯಲ್ಲಿ
ಆವಿಯಾಗುತ್ತಿದೆ.
ಬೆಂಕಿ ಇಟ್ಟವರ ಕೈ ಬೆರಳು ಇಷ್ಟು ಮೃದು
ಮತ್ತು ತಣ್ಣಗಿತ್ತು ಎಂದರೆ ಸಾವಿನಲ್ಲಿ
ಅದ್ದಿ ತೆಗೆದ ಅವರದ್ದೆ ಬಟ್ಟೆಯಂತೆ.


ಮುಖ ಒರಿಸಿಕೊಂಡ ಗುರುತಿಗೆ
ಮುಖ ಏಕೆ ನೋಡುತ್ತೀರಿ ಇತಿಹಾಸದ
ಕನ್ನಡಿ ಕೈಯಲ್ಲಿದೆ.
ಬೆನ್ನ ಮೇಲೆ ಕೈ ಅಚ್ಚು ಮಾತ್ರ ನನ್ನ ಗಳಿಕೆ.

ಉಸಿರುಗಟ್ಟಿಸುವ ದಿನಗಳಲ್ಲಿ
ನೀಲಿ ಕಣ್ಣುಗಳನ್ನು
ಸ್ವಚ್ಛ ಕೈಗಳನ್ನು ಬಿಡಿಸಿ ನೋಡುವ
ಕುತೂಹಲ ಗುಮಾನಿಗಳಿಲ್ಲ ಬಿಡಿ
ಸಭ್ಯಸ್ಥರೆ ಎಲ್ಲಾ, ಇಸ್ತ್ರಿಯಾದ ಬಟ್ಟೆ ಹಾಗೇ

ಪಾದಗಳು, ಕೂದಲು, ಕತ್ತರಿಸಿದ
ಉಗುರು ನಿಮ್ಮ ಶ್ರೇಷ್ಠತೆಯನ್ನು ಸೂಚಿಸುತ್ತದೆ.
ಅನೇಕ ಕಾರಣಗಳಿಗೆ ಒಳ್ಳೆಯವರಂತೆ ಕಾಣುತ್ತೀರಿ
ಬಣ್ಣದಿಂದಲೂ ಕಟ್ಟಾ ವಿಮರ್ಶಕರಂತೆ
ಗೋಚರಿಸುವುದು, ಗೋಸುಂಬೆಯನ್ನು ಹಂಗಿಸುವಂತೆ
ಕೈಸನ್ನೆ, ಚಿಟಕಿ ಹೊಡೆಯುವ ಶೈಲಿ,
ಎತ್ತರದ ಸ್ಥಾನದಿಂದ ಇಣುಕಿ ನೋಡುವ
ಆತ್ಮ ಕೊಳೆತ ಕೊಳ
ಅಷ್ಟು ಸರಿಯಾದ ಊಹೆ ಅಲ್ಲದಿರಬಹುದೆ

ಶುಭ್ರ ಎದೆಯ ಮೇಲೆ ಸುಗಂಧ ಚೆಲ್ಲಿದೆ
ಹೂಗಳಷ್ಟೆ
ಯಾರನ್ನಾದರೂ ಅಣಕಿಸುವ ಕುಹಕ
ನನ್ನ ಬೆಚ್ಚಿಸುವುದಿಲ್ಲ ಮಾನ್ಯರೇ

ಎಳಸಿರಬಹುದು ವಾಚ್ಯ ಅನಗತ್ಯ
ಏನೂ ಅಲ್ಲದಿರುವ
ಕೊನೆಯ ಮಾತೇ ಮೌನವಾಗಿ ಬಿಟ್ಟಿದೆ
ಸಂಕೋಚ ಕೂಡ ಕೊಟ್ಟಿದೆ.





ಹಿಮ ಹರಳು

ಬಿದರಹಳ್ಳಿ ನರಸಿಂಹಮೂರ್ತಿ

1

ಎಡ ಪಕ್ಕ
ತಲೆ ಒಡೆಯಲು ಬಾಗಿರುವ
ಕಲ್ಲು ಕೊಡಲಿ ಬೆಟ್ಟ
ಬಲ ಪಕ್ಕ
ಪಾತಾಳ ಪ್ರಪಾತ
ಬಾಯ್ತೆರೆದು ಮಲಗಿರುವ ಸಾವು
ಕಿರುದಾರಿ ನಡುವೆ
ಕೀ ಕೊಟ್ಟ ಆಟಿಗೆಯಂತೆ
ಸಾಗುತ್ತಿರುವ ಮೂಗಿಲಿ ಬಸ್ಸು.

2

ವೆಲ್-ವೆಟ್ ಶಿಖರದ
ಜಾರುಗುಪ್ಪೆ ಜರ್ರನೆ ಜಾರಿ
ಕಣಿವೆ ತುಟ್ಟತುದಿ ತಲುಪಿ
ಒಂಟಿ ತೂಕವ
ಬಡ ಗುಡಿಸಲಿಗೆ
ಮುಡಿಸಿದೆ
ಸಂಜೆ ಬಿಸಿಲು
ಮುಗಿಲ ಮಲ್ಲಿಗೆ.

3

ಪರ್ವತಗಳು
ಹಗಲನ್ನು ಹೀರಿ ಮುಗಿಸುವ ಹೊತ್ತು
ಕಣಿವೆ ಕಡಾಯಿ ತುಂಬ
ನಿಸರ್ಗವೆ ಇಳಿಸಿದ
ನೊರೆ ನೊರೆ ಸಾರಾಯಿ
ಅರಿವಿನಾಚೆಯ ನಿರಾಳಕ್ಕೆ-
ತುಂಬಿ ತುಳುಕುವ ಮಂಜು.

4

ಸಂಜೆ ಮಂಜಲ್ಲಿ
ದಾರಿ ತಿರುವಲ್ಲಿ
ದಟ್ಟನೆ ಕಾಡ ಶಿಖರದಲ್ಲಿ
ಬೆಳ್ಳಗಿರುವ [illegible] ಬಲೆ
ಬೆಟ್ಟದ ಕಿವಿಗಿಟ್ಟ ಬೆಂಡೋಲೆ

5

ಬೆಳಕಿಗೆ ಬೆಳೆಯುತ್ತ
ಕತ್ತಲಿಗೆ ಕರಗುತ್ತ
ಕಾಲ ಅಳೆವ ಕಾಲಾತೀತ ಬಂಗಿ
ಹತ್ತಿರ ಹೋದರೆ ಹಿಮಲಿಂಗ
ದೂರ ನಿಂತರೆ ಅಲಾಜಿ ಹಸ್ತ

ಗುಡ್ಡದ ಕೆಳಗಿನ ಗುಡಿಗೆ ಬಂದು...

ಬಿ.ಆರ್. ಪೋಲೀಸ್ ಪಾಟೀಲ

ಗುಡ್ಡದ ಕೆಳಗಿನ ಗುಡಿಗೆ ನೀ ಬಂದು
ಏನ ಕಲಿತೆ ಜೀವ?
ಗುಡ್ಡವ ದಾಟಿ ಸಾಗಲೆ ಬೇಕು
ಗೆಲ್ಲಾಕ ನೀ ಸಾವ.
ನಿತ್ಯ ತುತ್ತಿನ ಚೀಲ ತುಂಬಿಸಲಾಕ
ಎಷ್ಟು ಕೋಲಾಹಲ!
ಅಧಿಕಾರ, ಐಶ್ವರ್ಯ ಶಾಶ್ವತವಲ್ಲ
ತಿಳಿದಾಗ ನಿರುಮ್ಮಳ.

ಮಣ್ಣಲ್ಲ, ನೀರಿಲ್ಲ, ಗೊಬ್ಬರ ಮೊದಲಿಲ್ಲ
ಅಬ್ಬರದಿ ಬೆಳೆದ ಕಸವ
ಬೇರಿನ ಮೂಲ ಹುಡುಕಾಡಿ ಕಿತ್ತಾಕ
ಇದ ಬದುಕಿನ ಕಸುವ.

ಒಳಗ ಬೆಂಕಿಯ ಬ್ಯಾನಿ, ಹೊರಗೆ ಕರ್ಣದಾನಿ
ಏನಿದು ನಾಟಕ!
ಬೆಂಕಿ ಹಚ್ಚಿದವರ ರಸಬಳ್ಳಿ ಹಬ್ಬಿಲಿ
ಕರ್ಣನ ಸಲುವಾಕ
ಮ್ಯಾಲ ಗೆಲ್ಲದ ಗುಡ್ಡ ಕೆಳಗ ಸೋಲದ ಹುತ್ತ
ಹುತ್ತಿನ ಕಸರತ್ತು
ಹುತ್ತವ ಬಡಿದರ ಹಾವು ಸಾಯುವುದಿಲ್ಲ
ಎಚ್ಚರ ಸರು ಹೊತ್ತ.
ಕೆಳಗ ಹನಿ ನೀರಿಲ್ಲ, ಮ್ಯಾಗ ಸೆಲಿ ಬತ್ತಿಲ್ಲ
ನೆಲಿ ಯಾರಿಗು ಹತ್ತಿಲ್ಲ
ತಿಳಿಯಾಕ ಬದುಕು, ಬದುಕಿನ ಮರ್ಮ
ಉಳಿಯುವೆ ನೀ ಜೀವ.

ಕಲಿಯಾಕ ಬಂದು ಕಲಿಯದಿದ್ದರ
ಏನಿದ್ದೇನ ಜೀವ!
ನಿನ್ನ ನೀ ತಿಳಿದರ ನೀನೇ ದೇವ
ಮ್ಯಾಲಿನ ಮಾದೇವ.

ಮಂಜಿನರಮನೆಯೆಡೆಗೆ

ಎಚ್.ಎಲ್. ಪುಷ್ಪ

ಮಂಜಿನರಮನೆ ಮೈಮೇಲೆ
ತೆಳು ಹಿಮದ ವರದ
ಹಾರಾಡುತಿವೆ ಮುಟ್ಟಿದರೆ ಬಣ್ಣ ಹತ್ತುವ ಚಿಟ್ಟೆ
ತೆಳು ನಿದ್ದೆಯಲಿ ಕಣ್ಣುಜ್ಜುವ ಹಗಲು ಇರುಳು
ಬಚ್ಚಿಟ್ಟ ಕಾಮನೆಗಳು ಅಲ್ಲಲ್ಲಿ ತೋರಿ
ಜೋಗಿ ನೀನಿದ್ದ ಅಲ್ಲಿ ಆ ಎತ್ತರದ ಮನೆಯಲ್ಲಿ
ಮಿನುಗುಬಣ್ಣ ಸುಗಂಧದ ಹೂಗಳ ನಡುವೆ
ಜನ ಕೇಳುತ್ತಾರೆ ನಿನ್ನ ಮನೆಯ ಬಗ್ಗೆ
ನಿನ್ನ ಕೌತುಕದ ವಿಲಾಸದ ಬಗ್ಗೆ.

ನೀ ಬರುವ ಮೊದಲು ನಿನ್ನ ನೆರಳಿರಲಿಲ್ಲ
ಬಂದೆ ನಾನಿದ್ದೆ, ಸರಸರ ಹರಿವ ವೇಗವಿತ್ತು
ನೀರಿಗೆ ಕೊರಕಲೋ, ಬಯಲೋ, ಇಳಿಜಾರೋ
ಸಳಸಳ ಹರಿವ ಹುಮ್ಮಸ್ಸು.
ನೀನಿಲ್ಲದ ಬೆಟ್ಟದಲ್ಲಿ ಹಾರಾಡಿ ದಣಿದಿವೆ
ವಿವಿಧಲೋಕದ ಚಿಟ್ಟೆಗಳು.

ಇಲ್ಲಿ ಕೆಳಗೆ ಈ ನಾನು
ಹಲವು ಬೆಟ್ಟ, ಗುಡ್ಡಗಳಲ್ಲಿ ಅಲೆದ
ಬರಿದು ಕಂಗೆಟ್ಟ ಕೊಳಲು ಕೈಯಲ್ಲಿತ್ತು
ಬರುವವರು ಬಂದರು, ಹೋದವರು ಹೋದರು
ಒಳಗಿನ ಶಾಂತನದಿ ಮಾತ್ರ
ಮೇಲೆ ಸಾಗದೆ ಪಿಸುಗುಡುತಿದೆ
ಅಲ್ಲಿದೆ ಬೆಟ್ಟ, ಮಂಜಿನರಮನೆಯ ಬೆಟ್ಟ
ಹರಿವ ನದಿಗೆ ಹಾದಿ ತೋರುವ ಬೆಟ್ಟ.

ಎಷ್ಟೊಂದು ಉಂಗುರಗಳು
ನೀರ ಚಿತ್ತಲ ಮೈಮೇಲೆ
ಧರಿಸಲು ಬಾರದ ಎಷ್ಟೊಂದು ಒಡವೆಗಳು
ಒಳಗೊಳಗೇ ಮುದ್ರೆ ಉಳಿಸಿದ
ಕೆಂಪು, ಹಸಿರು, ನೀಲಿ ವರ್ಣಗಳು
ಹೌದು, ನೆನಪಾಗುತ್ತಿಲ್ಲ ನನಗೆ
ನಾನು ಸೋತಿದ್ದು ಯಾವ ಮುತ್ತಿನುಂಗುರಕ್ಕೆ.

ಮಂಜಿನರಮನೆಯ ಹಿಮದ ವರದೆಯ
ತೂರಿಬಿಡುತ್ತೇನೆ ನಿನ್ನೆಡೆಗೆ, ಜೋಪಾನ ಹಿಡಿದುಕೋ
ಸಾಧ್ಯವಾದರೆ ಹಿಂತಿರುಗಿಸು ಅದು ಇದ್ದ ಹಾಗೆ
ಪಾತ್ರದಗುಂಟ ಸಾಗುವ ನೀರಿಗೆ
ಬೆಟ್ಟ ಹತ್ತುವುದು ಸುಲಭವಲ್ಲ
ಒಳಗೊಳಗೆ ಪಿಸುಗುಡುತಿದೆ ಮೆತ್ತಗೆ

''ಎಲ್ಲೋ ಜೋಗಪ್ಪ ನಿನ್ನರಮನೆ
ಎಲ್ಲೋ ಜೋಗಪ್ಪ ನಿನ್ನರಮನೆ''.

ಎದ್ದಿದ್ದು ಬಿದ್ದಿದ್ದು



ದೇಶ ಕುಲಕರ್ಣಿ

ಬುದ್ಧ, ಬುದ್ಧ
ಜಗವು ಮಲಗಿರಲಿಲ್ಲ, ಜನವು ಮಲಗಿರಲಿಲ್ಲ
ನಿದ್ದೆ ಬಾರದ ಜನ
ಪಿಳಿ ಪಿಳಿ ಕಣ್ಣಲ್ಲಿ
ದೂಲ ಎಣಿಸುವಾಗ
ಇವನೆದ್ದು, ಮಡದಿ-ಮಗು ತೊರೆದು, ಚೆನ್ನನ ಕರೆದು
ಹೊರಟು ಬಿಟ್ಟ

ಬುದ್ಧ ನಡೆದ
ಸುತ್ತ ಕತ್ತಲ ದಾರಿ, ಬೆಳಕಿನ್ನು ಹರಿದಿಲ್ಲ
ಬಿದ್ದ ಹಕ್ಕಿ ಎತ್ತಿ
ಬಲಿ ಕುರಿಮರಿ ಹಿಡಿದು
ನೀರ ತಣಿಸುವಾಗ
ಹಿಂತಿರುಗಿ ನೋಡಿದರೆ, ಕಡೆದು ನಿಲಿಸಿದ್ದಾರೆ
ತನ್ನ ಮೂರ್ತಿ

ಬರೀ ಬಯಲು
ಗುಂಪು ಸೇರಿದ್ದಾರೆ ನಿದ್ದೆ ಬಾರದ ಜನರು
ಒಳಗೆ ಏನೋ ಗುಡುಗು
ಹೆಜ್ಜೆ ಹೆಜ್ಜೆಯ ಬಿರುಕು
ಕಾಲು ತಡವಿದಾಗ
ಕಣ್ಣು ಕತ್ತಲೆ ಕಟ್ಟಿ, ನೆಲದ ಬಾಂಬೆ ಸಿಡಿದು
ಬುದ್ಧ ನಕ್ಕ

ಕ್ರುದ್ಧ, ಕ್ರುದ್ಧ
ಕೋಪ ಯಾಕೋ ಪಾಪ, ಎಲ್ಲರು ಖಡ್ಗಬದ್ಧ
ಜಗವೆಲ್ಲ ಮಲಗದೆ
ಹಾಡು ಹಗಲಲ್ಲಿಯೇ
ನೋಡುತಿರುವಾಗಲೇ
ತಲೆಯೊಬ್ಬ ತೊಡೆಯೊಬ್ಬ ತರಿದು, ಕೈಕಾಲು ಮುರಿದು
ಬುದ್ಧ ಬಿದ್ದ



ಕಣ್ಣು

ಪ್ರತಿಭಾ ನಂದಕುಮಾರ್

ನಾನೀಗ ನಲವತ್ತರ ಹೆಣ್ಣು
ಅವರು ಹೇಳುತ್ತಾರೆ
ಪ್ರೀತಿಗಿದು ಕಾಲವಲ್ಲ

ಇದುವರೆಗಿನ ನನ್ನ ಪ್ರಣಯ
ಸಾಹಸ, ಮದುವೆ, ಮಕ್ಕಳು
ಅಡಿಗೆ ಕೆಲಸ ಬೊಗಸೆ ಬರಹ
ಎಲ್ಲಕ್ಕೂ ಒಂದು ಅರ್ಥವಿತ್ತು

ನನಗೆ ತಿಳಿದ ಸಂಗತಿ ಎಂದರೆ
ನೋವಿನ ಜನ್ಮ, ನಾಭಿಯಲ್ಲಿ.
ಅಲ್ಲಿಂದ ಮೇಲಕ್ಕೇರಿ ನನ್ನ
ಸೋತ ಮೊಲೆ ಸವರಿ ಅದು
ನನ್ನ ಸೊಕ್ಕು ಮುಖ ತಲುಪಿ
ಕಣ್ಣೊಳಗೆ ಕೂತು ಬಿಟ್ಟಿದೆ

ಅದಕ್ಕೇ ನೀನು ನನ್ನ
ಕಣ್ಣೊಳಗೆ ಕಣ್ಣಿಟ್ಟು ನೋಡುವುದಿಲ್ಲ

ಚಿಗುರು, ಪಕಳೆ, ಪರಾಗ...

ಎಸ್. ಮಂಜುನಾಥ

ಕೊಲ್ಲಲು ಬಿಟ್ಟ ಬಾಣದ ತುದಿಗೆ
ಚೆಂದಳಿರು ಚಿಗಿತು
ಹೃದಯಗಳ ಭೇದಿಸಿತ್ತು

★

ಗೂಡಿಗೆಂದು ಬಂದ ಹಕ್ಕಿ
ಗೂಡಿಗೆ ಬದಲು ನಿಗೂಢ ಅರಳಿ
ತೂಗಾಡಿರುವುದ ಕಂಡು ಆ
ಹೂವಿಗೇ ಗುಟುಕುಣಿಸಿತು

★

ಹಬ್ಬಿ ಬಾಹುಬಲಿಯ ನೆತ್ತಿ
ಮುಟ್ಟಿದ ಬಳ್ಳಿಯ ಹೂವಿನ
ಪಕಳೆಯೊಳಗಿನ ನಿಬಿಡ ಕಾನನದಲ್ಲಿ
ಕುಳಿತು ಅಸಂಖ್ಯ ಮುನಿಗಳು
ಮುಕ್ತಿಗಾಗಿ


★

ಕಂಗಳು ಕುಕ್ಕಿದ ಬಳಿಕ
ನೋಡದಾದೆ:
ಅರಳಿದೆದೆ ಹೊಟ್ಟೆ ಮತ್ತು ತಳಗೆ
ಆತ್ಮವೇದಕ ಯೋನಿ

★

ಧೀರೋದಾತ್ತ ಚುಂಬನ
ಪೈಪೋಟಿ ಬಿಂಕ
ರಹಸ್ಯ ಸಂಭೋಗ-ಎಲ್ಲ
ಹೂವಿನೊಳಗಣ ಒಂದು
ಪರಾಗ ಸಾಮ್ರಾಜ್ಯ.











ಚಪ್ಪಲಿ

ಮೂಡ್ನಾಕೂಡು ಚಿನ್ನಸ್ವಾಮಿ

ನಾನು ದೇವಸ್ಥಾನಕ್ಕೆ ಹೋದಾಗ
ಚಪ್ಪಲಿಯನ್ನು ಹೊರಗೆ ಬಿಡುವುದಿಲ್ಲ
ನಾನೇ ಹೊರಗಿರುತ್ತೇನೆ

ಚಮ್ಮಾರನ ಕಾಲುಗಳಲ್ಲಿ ಕಂಡ ಚಪ್ಪಲಿ
ಮನುಷ್ಯ ನಾಯಿಯನ್ನು ಕಚ್ಚಿದಾಗ ಆಗುವಂತೆ
ಸುದ್ದಿಯಾಗುತ್ತದೆ

ಚಪ್ಪಲಿಗಳನ್ನು ಬಿಚ್ಚಿ ಹರಡುವ
ಎಲ್ಲರ ಕಾಲುಗಳು
ನನ್ನ ಮೇಲೆ ಹರಿದಾಡುತ್ತವೆ

ಬತ್ತಿದ ಕೆರೆಯ ನೀರುಗುಣಗೆ
ಗೋಣ ಆನಿಸುವ ಕೊಕ್ಕರೆಯಂತೆ
ನಾನು ಮುಂಗಾಲ
ತುದಿ ಬೆರಳುಗಳ ಮೇಲೆ
ನಿಂತು ಇಣುಕಿ ದೇವರ ರೂಪವನ್ನು
ಕಂಡಷ್ಟು ಕದಿಯುತ್ತೇನೆ


ದೇವರ ಬಳಿ ಸುಳಿದು
ದಕ್ಷಿಣೆ ಪ್ರದಕ್ಷಿಣೆ ಹಾಕುವವರು
ರಪ್ಪೆ ಮುಚ್ಚದೆ ಆಗಾಗ ನನ್ನತ್ತ ನೋಡುವರು
ನನ್ನ ಚಿತ್ತ ಮಾತ್ರ ದೇವರತ್ತ


ಗರ್ಭಗುಡಿಯಲ್ಲಿ
ಹೂವು ಗಂಧ ಪಡೆದುಕೊಳ್ಳುವವರ ಆತ್ಮ
ಕಳಚಿಟ್ಟ ಚಪ್ಪಲಿಗಳ ಬಳಿ
ಹೊರಗೆ

ನಿತ್ಯ ಹಜಾರದಲ್ಲಿ ನಿಂತು
ಗೋಣ ಆನಿಸಿ ಇಣುಕಿ
ಪುನೀತವಾಗುವ ನನ್ನ ಆತ್ಮ
ದೇವರ ಬಳಿ ಒಳಗೆ



ಜಿಲ್ಲೆಯಲ್ಲೇ ಅತ್ಯಂತ ನಿಬಿಡವಾದ ಅರಣ್ಯಪ್ರದೇಶವೆಂದು ಪರಿಗಣಿಸಿದ ಯಲ್ಲಾಪುರ ವಿಭಾಗಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ವರ್ಗವಾಗಿ ಬಂದ ಸದಾಶಿವನನ್ನು ಪದಗ್ರಹಣದ ಆರಂಭದಲ್ಲಿಯೇ ಹಲವು ಆತಂಕಗಳು ಬಾಲಗ್ರಹದಂತೆ ಕಾಡತೊಡಗಿದವು. ಸ್ವಂತ ತಾಲೂಕಿನ ಪರಿಚಿತ ಆಪ್ತರ ನಿರೀಕ್ಷೆ ಮತ್ತು ಒತ್ತಾಯಕ್ಕೂ ತಂತಿಯ ಮೇಲೆ ಅತ್ಯಂತ ಸಂಯಮದಿಂದಲೂ ದಕ್ಷತೆಯಿಂದಲೂ ನಡೆಯುವ ಎಚ್ಚರವನ್ನು ಕಾಪಾಡಿಕೊಳ್ಳಲು ಸಂಕಲ್ಪವೇನೊ ಕೈಗೊಂಡ. ಆದರೆ, ಸರಕಾರಿ ಕಾರು, ಪೇಟೆಯಿಂದ ತುಸು ಎತ್ತರಕ್ಕೆ ಬ್ರಿಟಿಷ್ ಕಾಲದಲ್ಲಿ ಕಟ್ಟಿಸಿದ ವಿಶಾಲವಾದ ಭವ್ಯ ಮನೆ, ಮನೆಯನ್ನು ಕಾಯಲು, ತನಗೆ ಸಹಾಯ ಮಾಡಲು ಸದಾ ಸಿದ್ಧನಾಗಿರುವ ಖಾಕಿ ಸಮವಸ್ತ್ರಧಾರಿ ಕಾವಲುಗಾರ ಎಲ್ಲವೂ ಬಡಕುಟುಂಬದಿಂದ ಬಂದ ಸದಾಶಿವನಿಗೆ ಪಚನವಾಗದ ಘನತೆಯ ಸಂಕೇತಗಳಂತೆ ಕಂಡವು. ವರ್ಷಗಳಿಂದ ಅಖಂಡ ನಿಶ್ಶಬ್ದವನ್ನು ತುಂಬಿಕೊಂಡು ನಿಂತುಬಿಟ್ಟ ದೊಡ್ಡದಾದ ಬಂಗ್ಲೆ ಮನೆಯೊಳಗಿನ ಮರದ ಅಲಂಕೃತ ಪೀಠೋಪಕರಣಗಳು, ಗೋಡೆ ಮೇಲಿನ ಕ್ರೂರ ಮೃಗಗಳ ಧೀಮಂತ ಸುಂದರ ನೋಟದ ತೈಲಚಿತ್ರಗಳು ಅವನ ಏಕಾಂತಕ್ಕೆ ಭಂಗ





ಶ್ರೀಧರ ಬಳಗಾರ

ಸುದಾಮ

ಉಂಟುಮಾಡಿ ನಿದ್ದೆಗೆಡಿಸಿದವು. ನಸುಕು ಮತ್ತು ಮುಸ್ಸಂಜೆಯ ಮೊಗ್ಗಿನಂಥ ಹೊತ್ತಿನಲ್ಲಿ ಮನೆಯ ಸುತ್ತಲಿನ ಹೂ ಹುಲ್ಲಿನ ಕಾಂಪೌಂಡಿನೊಳಗೆ ತಿರುಗಾಡುವುದನ್ನು ರೂಢಿಸಿಕೊಂಡ. ಹತ್ತಿರದ ಅವನೂರಿನ ದಟ್ಟ ಕಾಡನ್ನು ನೆನೆಪಿಸಿಕೊಂಡವ ಎತ್ತರದ ಹಳೆಯ ಮರಗಳು ಪೂರ್ವಸೂರಿಗಳಂತೆ ಭಾಸವಾಗುತ್ತಿದ್ದವು. ಶಾಲಾ ದಿನಗಳಲ್ಲಿ ನೋಡಿದ, ಕೇಳಿದ ಹಕ್ಕಿಗಳ ಸಂಕುಲವೇ ಅಲ್ಲಿರುತ್ತಿದ್ದವು. ಅಂಗಳದ ಲಾನಿನ ದಂಡೆಯ ಮೇಲೆ ನೆಟ್ಟ ಬಣ್ಣದ ಗಿಡಗಳನ್ನು ಕಾವಲುಗಾರ ಆನೆ, ಜಿರಾಫೆ, ಗಿಳಿಗಳ ಆಕಾರದಲ್ಲಿ ಕತ್ತರಿಸುತ್ತಿದ್ದ. ಸದಾಶಿವ ಆ ಕೆಲಸಕ್ಕೆ ತಡೆ ತಂದ. ತಗ್ಗಿನಲ್ಲಿ ಕಾಣುವ ಪೇಟೆ ಹಲವು ದನಿಗಳಲ್ಲಿ ಚೂರಾಗಿ ಆಕಾಶಕ್ಕೆ ಪುಟಿಯುತ್ತಿತ್ತು. ಬಂಗ್ಲೆಯ ಹಿಂದೆ ಬೃಹದಾಕಾರದ ದೇವ್‌ದಾರ ಮರವಿದೆ. ಅದರ ಮೇರು ವ್ಯಕ್ತಿತ್ವ ತನ್ನ ವಂಶದ ಹಿರಿಯ ಜೀವದಂತೆ ಅವನಿಗೆ ಭಾಸವಾಗುತ್ತಿತ್ತು. ಅಸಂಖ್ಯ ಜೀರುಂಡೆಗಳು ಮರವನ್ನು ಮನೆಯಾಗಿಸಿಕೊಂಡಿದ್ದವು. ಮಳೆಗಾಲವಿಡೀ ನಿರಂತರ ಚೀರುವ ಈ ಕೀಟಗಳು ಸಂಜೆ - ಮುಂಜಾನೆ ತಪ್ಪದೆ ಪ್ರಾರ್ಥನೆ ಮಾಡುತ್ತಿದ್ದವು. ಮಂದಗತಿಯಲ್ಲಿ ಆರಂಭವಾಗಿ ನಿಧಾನವಾಗಿ ತೀವ್ರತೆಯನ್ನು ಗಳಿಸಿಕೊಂಡು ಮುಂದೊರಿಯುವ ಅವುಗಳ ಹಾಡು ಜಾಗಟೆ ಬಾರಿಸಿದಂತೆ ಕೇಳುತ್ತಿತ್ತು. ಅವುಗಳ ಹಾಡಿನ ಲಯದಲ್ಲಿ ಎಷ್ಟೊಂದು ಏಕರೂಪತೆ ಇರುತ್ತದೆಯೆಂದರೆ ಒಂದೇ ಒಂದು ಕೀಟ ಹಲವು ಸಲ ಹಾಡಿದಂತೆ ಅಥವಾ ಅನೇಕ ಸಲ ಪ್ರತಿಧ್ವನಿಸಿದಂತೆ ಕೇಳುತ್ತಿತ್ತು. ಅವು ಸೃಷ್ಟಿಸುವ ವಾದದಲ್ಲಿ ಕಾಡಿಗೇ ಕಾಡೇ ಲೀಲೆಯಾಗಿ ನರ್ತಿಸುವಂತೆ ಅನಿಸುತ್ತಿತ್ತು. ಅವು ಸಾಯುವುದಕ್ಕಾಗಿಯೇ ಹಾಡುತ್ತವೆಯೆಂದೂ, ಕೊನೆಯಲ್ಲಿ ಹಾಡೇ ಅವುಗಳ ಹೊಟ್ಟೆ ಒಡೆದುಕೊಂಡು ಹೋಗುತ್ತದೆಯೆಂದೂ ಸುದಾಮ ಹೇಳುತ್ತಿದ್ದ. ಕಾಡು ಮತ್ತು ಮಳೆಯ ಮಿಥುನಕ್ಕೆ ಹುಟ್ಟಿದ ಕೀಟಗಳ ರಹಸ್ಯ ಜಗತ್ತಿನಲ್ಲಿ ಸುದಾಮ ವಿಹರಿಸುವುದು ಸದಾಶಿವನಿಗೆ ಕುತೂಹಲಕರ ವಿಷಯವಾಗಿತ್ತು.



ಊರಿನ ಗಣ್ಯರು ಬಂಗ್ಲೆಗೆ ಬಂದು ಸದಾಶಿವನನ್ನು ಅಭಿನಂದಿಸತೊಡಗಿದರು. ಅವರು ಹೆಮ್ಮೆ-ಅಭಿಮಾನ ಪಡುವುದಕ್ಕಿಂತ ಹೆಚ್ಚಾಗಿ ಸಲಿಗೆ-ಉತ್ಸಾಹ ತೋರಿ ಸದಾಶಿವನನ್ನು ಹೆದರಿಸಿದರು. ತಮ್ಮವನೆಂಬ ಆತ್ಮೀಯತೆ ಅತಿಯಾಗಿ ಕಾಡಿಗೆ ಕೈಹಚ್ಚುವ ಧೂರ್ತ ಸ್ವಾತಂತ್ರ್ಯ ತೆಗೆದುಕೊಂಡಾರೆಂದು ಯೋಚಿಸಿ, 'ನೀವೆಲ್ಲ ನನಗೆ ನನ್ನ ಕರ್ತವ್ಯಕ್ಕೆ ಚ್ಯುತಿ ಬಾರದ ರೀತಿಯಲ್ಲಿ ಸಹಕರಿಸಬೇಕು' ಎಂದು ಸೂಚ್ಯವಾಗಿ ಎಚ್ಚರಿಕೆ ನೀಡಿದ. ಮಾಲ್ಕಿ ಮರಗಳ ಗುತ್ತಿಗೆದಾರರು, ಕಟ್ಟಿಗೆ ಸರಣಿಯ ಮಾಲಿಕರು ಒಬ್ಬೊಬ್ಬರಾಗಿ ಬಂದು ಸದಾಶಿವನ ಗುಣಗಾನ ನಡೆಸಿ, ಗಂಧದ ಗಣೇಶ ವಿಗ್ರಹ, ಬೆಳ್ಳಿಯಲ್ಲಿ ಕಟ್ಟಿಸಿದ ಜಿಂಕೆಯ ಜೋಡು ಕೋಡು, ಜೇನು ತುಪ್ಪದ ಬಾಟಲಿ, ಹಾರ್ಮೋನಿಯಂ ಪೆಟ್ಟಿಗೆ ಮುಂತಾದ ಉಡುಗೊರೆಗಳನ್ನು ಮುಂದಿಟ್ಟರು. ಈ ಎಲ್ಲ ವಿಪತ್ತಿನ ಮುನ್ಸೂಚನೆಗಳನ್ನು ಸದಾಶಿವ ವಿನಯದಿಂದ ನಿರಾಕರಿಸಿದ. ಕಚೇರಿಯ ಅಧಿಕಾರಿಗಳನ್ನು, ವಿಭಾಗದ ಹಲವು ಉಪಶಾಖೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಮಿತವಾದ ಮೃದು ಮಾತು ಮತ್ತು ಬಹುವಚನದ ಗೌರವ ಸಂಬೋಧನೆಯಿಂದ ಕರ್ತವ್ಯ ಪರಿಪಾಲನೆಯ ಮಹತ್ವವನ್ನು ಜಾಗೃತಗೊಳಿಸಲು ನೋಡಿದ. ಅರಣ್ಯ ಸುಲಿಗೆಯ ಯಾವುದೇ ಬಗೆಯ ವಾಮಾಚಾರದ ರಾಜಕೀಯ ಡೋಂಗಿ ತಂತ್ರ ತನ್ನ ಬಳಿ ಸುಳಿಯದಂತೆ ಗಂಭೀರ ಮೌನವೆಂಬ ತನ್ನ ಮೂರನೇ ಕಣ್ಣನ್ನು ತೆಗೆದು ಆಡಳಿತದ ಫೈಲುಗಳನ್ನು ಪಾರದರ್ಶಕಗೊಳಿಸಿಕೊಂಡು ವಿಲೇವಾರಿ ಮಾಡಿಸಿದ. ರತ್ನಗಂಬಳಿ ಹಾಸಿದ. ಪುಸ್ತಕ ಹಿಡಿದು ನಗುವ ಗಾಂಧೀಜಿಯ ಫೋಟೋವಿರುವ ತನ್ನ ಆಫೀಸ್ ರೂಮಿನ ಗೋಡೆಯ ಮೇಲೆ ಬಣ್ಣದಲ್ಲಿ ಬಿಡಿಸಿದ ಅರಣ್ಯ ವಿಭಾಗದ ಕ್ಷೇತ್ರ ವಿಸ್ತಾರವನ್ನು ಗುರುತಿಸಿದ ನಕಾಶೆಯನ್ನು ಅಧ್ಯಯನ ಮಾಡಿದ. ಹಲವು ಗೆರೆಗಳ ವಿನ್ಯಾಸದಲ್ಲಿ ಒಡೆದುಕೊಂಡ ಊರುಗಳು, ಹಳ್ಳಗಳು, ಮಾರ್ಗಗಳು, ಅಭಯಾರಣ್ಯಗಳು ಅವನನ್ನು ಕಾಗದ ಪತ್ರಗಳಿಗೆ ಸಹಿ ಹಾಕುವಾಗ ಸರಕ್ಕನೆ ಸೆಳೆದು ಬಿಡುತ್ತಿದ್ದವು. ಸ್ವಂತ ಊರಾದರೂ ಬೃಹತ್

ವಿಸ್ತಾರದಲ್ಲಿ ಚದುರಿಕೊಂಡ ಭೂಭಾಗಗಳು ಸದಾಶಿವನಿಗೆ ಅಪರಿಚಿತವಾಗಿದ್ದವು. ಜಿಲ್ಲೆಯ ಅರಣ್ಯ ಕೈಪಿಡಿ ತರಿಸಿಕೊಂಡು ವಿವಿಧ ಜಾತಿಯ ಮರಗಳ ಬಗ್ಗೆ, ಮಳೆ-ಪ್ರಾಣಿ, ಗುಡ್ಡಗಾಡು ಜನಾಂಗಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ. ಕಚೇರಿಯ ಹೊರ ಆವರಣದಲ್ಲಿ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ್ದಾಗ ಜಪ್ತಿ ಮಾಡಿದ್ದ ಲಾರಿ, ಕಾರು, ಜೀಪುಗಳು ದಿಮ್ಮಿಗಳ ಭಾರ ಹೊತ್ತು ಮಳೆ ಬಿಸಿಲಿಗೆ ಲಡ್ಡಾಗಿ ಹೋಗಿದ್ದವು. 'ಗಂಧದ ಗುಡಿ', 'ಸಂಪತ್ತಿಗೆ ಸವಾಲು' ಎಂದು ತಮ್ಮ ಹಣೆಯ ಮೇಲೆ ಹೆಸರು ಬರೆಯಿಸಿಕೊಂಡು ಅನಾಥವಾಗಿ ಬಿದ್ದ ಅಪರಾಧಿ ಯಂತ್ರಗಳು ಮಾರ್ಗಮೋಕ್ಷ ಪಡೆಯುವ ಮುನ್ನವೇ ಜೀರ್ಣವಾಗುತ್ತ ನಾಮಾವಶೇಷಗೊಳ್ಳಲು ತೊಡಗಿದ್ದವು. ಅಲ್ಲಲ್ಲಿ ಮರಗಳ ಸುತ್ತ ಸಿಮೆಂಟಿನ ಕಟ್ಟೆ ಕಟ್ಟಿ ಅಂಥಾ ಮರಗಳ ಹೆಸರು ಬರೆದ ಫಲಕವನ್ನು ಅಂಟಿಸಿದ್ದರು. ವಿಶ್ರಾಂತಿ ಗೃಹದ ರಸ್ತೆಯ ತಿರುವಿನಲ್ಲಿ 'ಹಸಿರೆ ಉಸಿರು', 'ಕಾಡಿದ್ದರೆ ನಾಡು' ಇತ್ಯಾದಿ ಘೋಷಣೆಗಳನ್ನು ಬರೆದ ನೀಲಿ ಚೌಕಟ್ಟುಗಳನ್ನು ಮರಗಳಿಗೆ ತೂಗುಹಾಕಿದ್ದರು. ಇಂಥ ಸುಂದರ ಅಕ್ಷರಗಳಲ್ಲಿ, ಆಫೀಸಿನ ಗುಮಾಸ್ತರು ಗುಟ್ಟೆಂಬಂತೆ ಕಪಾಟಿನಿಂದ ತೆರೆಯುವ ದಾಖಲೆಗಳ ಅಂಕೆ-ಸಂಖ್ಯೆಗಳಲ್ಲಿ, ಹಸಿದ ಬಾಯಿಗಳಲ್ಲಿ ನೂರಾರು ಬಗೆಯ ಕಾನೂನಿನ ಒಕ್ಕಣಿಕೆಯ ಕರ್ಕಶ ಸ್ವರಗಳಲ್ಲಿ ಕಾಡಿನ ಪರಿಪಾಲನೆ ಸಾಧ್ಯವಿಲ್ಲವೆಂದು ಅವನಿಗನಿಸುತ್ತಿತ್ತು. ಕಚೇರಿಯ ವಿಚಿತ್ರ ಗುಪ್ತರು ಸದಾಶಿವ ಲಂಚಕ್ಕೆ ಪ್ರಾಣ ಬಿಡುವ ಪ್ರಾಣಿಯೆ, ಹೊಗಳಿಕೆಗೆ ಉಬ್ಬುವ ಬಲೂನು ತಲೆಯವನೆ ಎಂದು ಅವನ ನಡಿಗೆಯ ನಾಡಿ ಹಿಡಿದು ಪರೀಕ್ಷಿಸತೊಡಗಿದರು. ಮೊದಮೊದಲು ಎಲ್ಲರೂ ಹೀಗೆಯೇ. ಆಮೇಲೆ ಎಲ್ಲ ರೂಢಿಯಾಗುತ್ತದೆ ಎಂದು ಮಾತಾಡಿಕೊಂಡರು. 'ಸಾಹೇಬರು ಬಹಳ ಸ್ಟ್ರಿಕ್ಟು! ಅದಕ್ಕೆ ಯಾವ ಮದ್ದು ಎಂದು ಎಲ್ಲರಿಗೂ ಗೊತ್ತು ಎಂದು ಗುಮಾನಿಯ ವದಂತಿಯನ್ನು ಹಬ್ಬಿಸಿದರು. ಊರವರಂತು, 'ನಮ್ಮೂರ ಪೋರ ನಮಗೆ ಸಹಾಯ ಮಾಡದೆ ಮತ್ಯಾರಿಗೆ ಮಾಡ್ತಾನಂತೆ' ಎಂದುಕೊಂಡರು. ಸದಾಶಿವ ಮಧ್ಯಾಹ್ನ ಆಫೀಸಿಗೆ ಊಟ ತರಿಸಿಕೊಳ್ಳುತ್ತಿದ್ದ. ಸಂಜೆ ಮನೆಬಿಟ್ಟು ಹೊರಗೆಲ್ಲೂ ಹೋಗುತ್ತಿರಲಿಲ್ಲ. ಹೀಗೆ ಒಂದು ಬಗೆಯ ಧ್ಯಾನವೋ, ಚಿಂತೆಯೋ, ಕನಸೋ ಅವನನ್ನು ಜನರಿಂದ ದೂರವಿಡತೊಡಗಿತು. ಆಗೆಲ್ಲ ದೇವದಾರ್ ಮರದಡಿಯಲ್ಲಿ ಕೂತು ಜೀರುಂಡೆಗಳ ಸಂಗೀತವನ್ನು ಆಲಿಸುತ್ತಿದ್ದ. ಆ ಸಂಗೀತದ ಮಧ್ಯ ಸುದಾಮ ಪ್ರತ್ಯಕ್ಷನಾಗುತ್ತಿದ್ದ.

ಅರಣ್ಯಾಧಿಕಾರಿಗಳ ಕಚೇರಿಯ ಎದುರಿನಲ್ಲಿ ಪೇಟೆಯ ಮಧ್ಯದಿಂದ ಜೋಡು ಕೆರೆಯತ್ತ ಸಾಗಿದ ರಸ್ತೆಯುದ್ದಕ್ಕೆ ವಾರದ ಸಂತೆ ಸೇರುತ್ತಿತ್ತು. ಸದಾಶಿವ ಶಾಲೆಗೆ ಹೋಗುವಾಗ ಊರಿನ ಜನರಿಗೆ ಸಂತೆಯಿರಲಿ, ಅದರ ಹೆಸರೂ ತಿಳಿದಿರಲಿಲ್ಲ. ಮೂರು ವರ್ಷಕೊಮ್ಮೆ ನಡೆಯುವ ಗ್ರಾಮದೇವಿ ಜಾತ್ರೆಯಲ್ಲಿ ಮಾತ್ರ ಪೇಟೆಯಲ್ಲಿ ಹಳ್ಳಿಯ ಮುಖಗಳ ದಟ್ಟಣೆ ಕಾಣಬಹುದಿತ್ತು. ಪೇಟೆಯ ಹೊರ ಚಹರೆಯಲ್ಲಿ ಗಮನಾರ್ಹ ಬದಲಾವಣೆಗಳಾಗದಿದ್ದರೂ ಕಾಲದ ಹರಿವು ಮಾಡಿದ ಗುರುತನ್ನು ನೋಡಬಹುದಿತ್ತು. ಹೆದ್ದಾರಿಯಲ್ಲಿ ಹಗಲಿರುಳು ಮ್ಯಾಂಗನೀಸ್ ಕಲ್ಲುಗಳನ್ನು ತುಂಬಿಕೊಂಡು ಓಡಾಡುತ್ತಿದ್ದ ಹಳದಿ ಬಣ್ಣದ ಟಿಪ್ಪರ್ ಲಾರಿಗಳು ಈಗಿರಲಿಲ್ಲ. ನಾಲ್ಕು ರಸ್ತೆಗಳು ಕೂಡುವಲ್ಲಿದ್ದ ಉಡುಪಿ ಹೋಟೇಲು ದಾಯಾದಿ ಕಲಹದಿಂದ ಮುಚ್ಚಿಹೋಗಿ ಅವಶೇಷದಂತೆ ಹಾಳು ಸುರಿಯುತ್ತಿತ್ತು. ಆಲದ ಮರದಡಿಯಲ್ಲಿದ್ದ ತಾಲೂಕು ಕಚೇರಿ ಸ್ಥಳಾಂತರಗೊಂಡಿತ್ತು. ಕಾಲಿನಿಂದ ಒತ್ತಿ ಕಪ್ಪನೆಯ ದೋಸೆ ಬಂಡಿಯಂಥ ಚಕ್ರವನ್ನು ತಿರುಗಿಸಿ ಅಚ್ಚು ಹಾಕುವ ಮುದ್ರಣಾಲಯದ ಗಣಪಯ್ಯ ತೀರಿಕೊಂಡಿದ್ದ. ಅಂಗಡಿಯ ಮುಂಗಟ್ಟಿನ ಮೇಲೆ ಕುಳಿತು ಭರದಿಂದ ವ್ಯಾಪಾರ ಮಾಡುತ್ತಿದ್ದ ಮುದುಕರೆಲ್ಲ ಒಂದಿನ ಇದ್ದಕ್ಕಿದ್ದಂತೆ ಇಹಲೋಕ ತ್ಯಜಿಸಿ ಚೌಕಟ್ಟಿನೊಳಗೆ ನೆನಪಿನ ಭಾವಚಿತ್ರವಾಗಿ ಹೋಗಿದ್ದರು. ಆಧುನೀಕರಿಸಿಕೊಂಡ ಹಳೇ ಅಂಗಡಿಗಳಲ್ಲಿ ಹೊಸ ತಲೆಮಾರು ಹಾಜರಾಗಿತ್ತು. ಇಂಥ ಒಂದು ಪೇಟೆಯಲ್ಲಿ, ಸಂತೆಯ ವೇಳೆಯಲ್ಲಿ ಸುದಾಮನ ದರ್ಶನವಾಗಬಹುದೆಂದು ಆಸೆಯಿಂದ ಸದಾಶಿವ ಆಫೀಸಿನ ಕಿಟಕಿಯಿಂದ ಆಗಾಗ ನೋಡುತ್ತಿದ್ದ. ಅವನ ದೃಷ್ಟಿ ಕಿರಾಣಿ ಅಂಗಡಿಗಳ ಸಾಲು ದಾಟಿ, ಕೊಡೆ ನೆರಳಿನಲ್ಲಿ ತರಕಾರಿ ಮಾರುವವರ ಪಂಕ್ತಿ ಬಳಸಿಕೊಂಡು ಅದರಾಚೆಯ ತಾವರೆ ಹೂಗಳ ಜೋಡು ಕೆರೆಗಳ ದಂಡೆಯ ಮೇಲಿನ ಮಾರುತಿ ದೇವಸ್ಥಾನದವರೆಗೂ ಶೋಧನಾ ಕಾರ್ಯ ನಡೆಸುತ್ತಿತ್ತು. ಸಂತೆಯ ದಿನ ಸುತ್ತಮುತ್ತಲಿನ ಹಳ್ಳಿಗಳಿಂದ ಆದಿವಾಸಿಗಳು ಬಂದು ಕಾಡನ್ನೇ ಮಾರಾಟಕ್ಕಿಡುತ್ತಿದ್ದರು. ಹಾಲು, ಕಳಲೆ, ನೆಲ್ಲಿಕಾಯಿ, ಬಕುಳದ ಹೂಪಿನ ದಂಡೆ, ಬಿದಿರಿನ ಚೊಚ್ಚಿ, ಬೆತ್ತದ ಬುಟ್ಟಿ ಎಲ್ಲವು ರಸ್ತೆಯುದ್ದಕ್ಕೆ ಹರಡಿಕೊಂಡಿರುತ್ತಿದ್ದವು. ವೃಕ್ಷಗಳ ಅಂತಃಪುರದಿಂದ ಬಂದ ಅಕ್ಷರಹೀನ ಈ ಕಪ್ಪು ಅರೆಬೆತ್ತಲು ದೇವತೆಗಳ ಹಸ್ತಗಳಲ್ಲಿ ಕಾಡು ಹಾಡಾಗಿ, ಕಲೆಯಾಗಿ, ಕಸೂತಿಯಾಗಿ, ಹಬ್ಬವಾಗಿ ಮೆರೆಯುತ್ತಿತ್ತು. ಸಂಜೆಯಾಗುತ್ತಲೇ ಈ ಜನಪದ ರಂಗಭೂಮಿಯ ಕಥೆಯೇ ಬೇರೆ ತೆರನಾಗಿರುತ್ತಿತ್ತು. ಸಂತೆಯ ವಾಣಿಜ್ಯ ವ್ಯವಹಾರ ಮುಗಿಯುತ್ತಲೆ ವನವಾಸಿಗಳ ನಾಟಕ ಶುರುವಾಗುತ್ತಿತ್ತು. ಸಿನೆಮಾ ಟಾಕೀಸಿನ ಬಳಿ ಪ್ರೇಮಿಗಳ ಮಿಲನ, ಮೀನು ಮಾರ್ಕೆಟ್ಟಿನಲ್ಲಿ ಹಾದರದ ಕುರಿತಾದ ಹೊಡೆದಾಟ, ಅರಳಿಕಟ್ಟೆಯ ನೆರಳಲ್ಲಿ ಹಣಕಾಸಿನ ಪಂಚಾಯಿತಿ, ದೇವಸ್ಥಾನದ ಕಟ್ಟೆಯ ಮೇಲೆ ಮದುವೆಯ ಮಾತುಕತೆ, ರಸ್ತೆಯ ಮೇಲೆ ಕುಡಿದುಬೀಳುವ ಗಂಡಸರನ್ನು ಎಬ್ಬಿಸಲು ಯತ್ನಿಸುವ ವೀರಗಚ್ಚೆಯ ಹಟಮಾರಿ ಹೆಂಗಸರ ಬೈಗುಳ... ಹೀಗೆ ಹಲವು ಅಂಕಗಳು ತೆರೆದುಕೊಳ್ಳುತ್ತಿದ್ದವು. ಈ ನಡುವೆ ಕುರುಡು ಕಾಂಚಾಣ ಗಾರ್ಡ ಮತ್ತು ಪೋಲೀಸರ ವೇಷದಲ್ಲಿ ಕುಣಿಯಲು



ತೊಡಗುತ್ತಿತ್ತು. ಆಸೆ, ಹಿಂಸೆಗಳು ಪೀಡೆಯಲ್ಲಿ ಕಿರಾತ ನರ್ತನಗೈಯಲು ತೊಡಗುತ್ತಿದ್ದವು. ಹೀಗಿದ್ದೂ ವನವಾಸಿಗಳ ಕರಕುಶಲ ಕಸುಬಿನಲ್ಲಿ ಕಾಡಿನ ಜೀವ ಸುರಕ್ಷಿತವಾಗಿದೆ ಎಂದೇ ಸದಾಶಿವನ ಭಾವನೆ. 'ಅರಣ್ಯ ಹಾಳುಗೆಡವಿದವರೇ ಇವರು ಸರ್' ಎಂದು ಬಾಗಿಲು ಕಾಯುವ ಪ್ಯೂನ್ ಚಾಡಿ ಹೇಳಲು ಮುಂದಾದ. ಬಂಗ್ಲೆಯ ಕಾವಲುಗಾರ, ದೇವದಾರ್ ಮರದ ಮೇಲೆ ಕೂತು ಚೀರುವ ಜೀರುಂಡೆಗಳ ಉಪಟಳ ಹೆಚ್ಚಾಯಿತು ಎಂದು ಅವುಗಳನ್ನು ನಾಶಗೊಳಿಸುವ ಮಾರ್ಗೋಪಾಯಗಳನ್ನು ಹೇಳಿ ಸದಾಶಿವನಿಂದ ಬೈಯಿಸಿಕೊಂಡು ಸುಮ್ಮನಾದ. ಸಾವಿರಾರು ವರ್ಷಗಳಿಂದ ಅಜ್ಞಾತವಾಗಿ ಹರಿದು ಬರುತ್ತಿರುವ ವನವಾಸಿಗಳ ಕಲಾಕಸುಬಿನಿಂದ ಇವತ್ತಿನವರೆಗೆ ನಾವೆಲ್ಲ ಕಾಡು ನೋಡಲು ಸಾಧ್ಯವಾಯಿತು ಎಂದು ಒಂದೆರಡು ಸಮಾರಂಭಗಳಲ್ಲಿ ಸದಾಶಿವ ಮಾತಾಡಿದ. ಇದು ಅರಣ್ಯಾಧಿಕಾರಿಗಳ ಕರ್ತವ್ಯದ ವ್ಯಾಪ್ತಿಗೆ ಮೀರಿದ್ದೆಂದು ಜನರು ಗೊಣಗಿದರು.

ಒಂದಿನ ಸದಾಶಿವ ಗಾರ್ಡನೊಬ್ಬನನ್ನು ಕರೆದು ಸುದಾಮನ ಪರಿಚಯ ನೀಡಿ ಪೇಟೆಯಲ್ಲಿ ಎಲ್ಲಾದರೂ ಕಂಡರೆ ಕರೆದುಕೊಂಡು ಬರಲು ಸೂಚಿಸಿದ. ಹಿಂದಿನ ಅಭ್ಯಾಸದ ಬಲದಿಂದ ಗಾರ್ಡ ಸುದಾಮನನ್ನು ಮುಂದಿನ ವಿಚಾರಣೆಗೆ ಒಳಪಡಿಸಲೆಂದೇ ಸಾಹೇಬರು ತನಗೆ ಪರಮಾಧಿಕಾರವನ್ನು ನೀಡಿದ್ದಾರೆಂದು ಬಗೆದು 'ಅವನೇನು ಕಡಿಮೆ ಆಸಾಮಿ ಅಲ್ಲ ಸಾರ್, ಹುಲಿ ಶಿಕಾರಿ ಮಾಡ್ತಾನಂತೆ. ಹಿಂದಿನ ಸಾಹೇಬರು ವರ್ಗವಾಗಿ ಹೋಗುವ ಮುಂಚೆ ಸುದಾಮನನ್ನು ಗಡಿಪಾರು ಮಾಡಿಹೋದರು' ಎಂದು ವಿವರಿಸಿದ. ಸುದಾಮನನ್ನು ಕೊಲೆಗಡುಕನಂತೆ ನೋಡುತ್ತಿರುವುದು ಸದಾಶಿವನಿಗೆ ಖೇದವಾಯಿತು. ಗಡಿಪಾರಿನ ಕಥೆಯನ್ನು ಕೇಳುವ ಆಸೆ ಹುಟ್ಟಿತು.

ಸುದಾಮನು ಸದಾಶಿವನ ಧ್ಯಾನದ ಕೇಂದ್ರದಲ್ಲಿ ಆರಾಧ್ಯದೈವದಂತೆ ಕೂತಿದ್ದ. ತಾಯಿ ಅಂಬಕ್ಕ ಮಗನ ಕುರಿತಾಗಿ ಕಂಡ ಕನಸುಗಳು ಸಾಕಾರಗೊಳ್ಳಲು ಸುದಾಮನ ಯೋಜನೆಯೂ ಕಾರಣವಾಗಿತ್ತು. ಆಗ ಇಡೀ ಊರಲ್ಲೇ ಕಲಿಯಲು ಉತ್ತೇಜನವೇ ಇಲ್ಲದ ಕಾಲವಿತ್ತು. ಹತ್ತು ಪಾಸು ಮಾಡಿದ ಒಬ್ಬನೊಬ್ಬನೂ ಊರಲ್ಲಿರಲ್ಲಿಲ್ಲ. ಒಕ್ಕಲುತನ ಸರಳ ಸುಂದರ ಕಾಯಕವಾಗಿ ಸದಾಶಿವನಿಗೆ ಬಲೆ ಬೀಸಿತ್ತು. ಒಂದು ವರ್ಷ ತುಂಬುತ್ತಲೇ ತಂದೆಯನ್ನು ಕಳೆದುಕೊಂಡು ಒದಗಿದ ಸ್ವಾತಂತ್ರ್ಯ ಭಯಾನಕವಾಗಿತ್ತು. ತಾಯಿಯ ಪುಟ್ಟದಾದ ಸುರಕ್ಷಿತ ಜೀವನದಾಚೆಯ ಜಗತ್ತು ಅವನಿಗೆ ಬೇಕಾಗಿರಲಿಲ್ಲ. ಏಳು ತುಂಬಿದರೂ ಸದಾಶಿವ ಶಾಲೆಗೆ ಹೋಗದೆ ಹಟ ಮಾಡಿದ. ಅಂಬಕ್ಕ ಸೋತಳು. ಶಾಲೆ ಮತ್ತು ಮನೆಯ ನಡುವೆ ಕಾಡಿದೆ. ದಾರಿಯಲ್ಲಿ ಜತೆಗಾರರಿಲ್ಲದೆ ಹೆದರಿಕೊಂಡಿದ್ದಾನೆಂದು ಅಂಬಕ್ಕ ತಿಳಿದದ್ದೇ ತಪ್ಪಾಗಿತ್ತು. ಏಕೆಂದರೆ, ಅವನನ್ನು ಭಯಪಡಿಸುತ್ತಿದ್ದದ್ದು ಸಭಾಕಂಪನ ಉಂಟುಮಾಡುವ ವರ್ಗದ ಅಪರಿಚಿತ ಮುಖಗಳ ಸಭೆ ಮತ್ತು ಆ ಬಾಲಕರ ಸಭೆಯನ್ನು ಕಣ್ಸನ್ನೆಯಲ್ಲಿ ನಿಯಂತ್ರಿಸುವ ಮಾಸ್ತರಾಗಿದ್ದರು. ಅಂಬಕ್ಕ ಶಾಲೆಗೆ ಹೋಗಿ ಸದಾಶಿವನ ಹೆಸರು ದಾಖಲು ಮಾಡಿಬಂದಳು. ಮಾಸ್ತರನ್ನು ಮನೆಗೆ ಕರೆದು ಉಪಚರಿಸಿ ಸದಾಶಿವನ ರಾವು ಬಿಡಿಸಲು ನೋಡಿದಳು. ಸದಾಶಿವ ಬಾಗಿಲ ಮೂಲೆ ಬಿಟ್ಟು ಕದಲಲಿಲ್ಲ. ಬೈದಳು, ಪೆಟ್ಟುಕೊಟ್ಟಳು, ಅತ್ತು ಉಪವಾಸ ಮಾಡಿದಳು, ಉರುಳು ಹಾಕಿಕೊಂಡು ಸಾಯುತ್ತೇನೆಂದು ಹೆದರಿಸಿದಳು. ಸದಾಶಿವ ಯಾವುದಕ್ಕೂ ಬಗ್ಗುವಂತೆ ಕಾಣಲಿಲ್ಲ. ಅವನ ಮನಸ್ಸನ್ನು ಹಳ್ಳದಂಚಿನ ಸುದಾಮನ ಮನೆ, ಗದ್ದೆಯಲ್ಲಿ ಊಳುವಾಗ ಹಾಡುವ ಪದ, ಕೊಟ್ಟಿಗೆಯ ದನಕರುಗಳ ಕುಸ್ತಿ ಸಂಪೂರ್ಣ ಸೆಳೆದಿದ್ದವು. ಶಾಲೆಯ ಯಾಂತ್ರಿಕತೆಯ ವಿರುದ್ಧ ಸದಾಶಿವ ಬಂಡಾಯ ಹೂಡಿದಂತಿತ್ತು. ಅಂಬಕ್ಕ 'ಯಾಕಾದ್ರೂ ನನ್ನ ಹೊಟ್ಟೇಲಿ ಹುಟ್ಟಿದಿಯೋ ಪೋರಾ' ಎಂದು ಗೋಳು ಹೊಯ್ದುಕೊಂಡಳು.

ಶಾಲೆಯ ಕುರಿತಾಗಿ ಸದಾಶಿವನನ್ನು ಆವರಿಸಿದ ಆತಂಕ ಭಯಗಳನ್ನು ನಿವಾರಿಸುವ ಉಪಾಯಗಳು ಸುದಾಮನಿಗೆ ತಿಳಿದಿತ್ತು. ಈಗಾಗಲೇ ಶಾಲೆಯಲ್ಲಿ




ಹೆಸರು ದಾಖಲಾದ್ದರಿಂದ ಶಾಲೆಗೆ ಗೈರಾಗಿ ಮನೆಯಲ್ಲಿರುವುದು, ಅದರಲ್ಲೂ ಅಂಬಕ್ಕನ ಮೂದಲಿಕೆಯನ್ನು ಮೌನವಾಗಿ ಎದುರಿಸಿ ಹಿಂಸೆಯನ್ನು ಅನುಭವಿಸುವುದು ಅವನಿಗೆ ಸುಲಭದ್ದಾಗಿರಲಿಲ್ಲ. ಅವನು ಅಪರಾಧಿಯಂತೆ ಓಡಾಡುವುದನ್ನು ಸುದಾಮನಿಂದ ನೋಡಲಾಗಲಿಲ್ಲ. 'ಶಾಲೆ ಕಾಣುವ ತನಕ ಹೋಗಿ ಬರುವಾ, ಮುಂದಕ್ಕೆ ಹೋಗೋದು ಬೇಡ' ಸುದಾಮನ ಮೊದಲ ದಿನದ ಯೋಜನೆ ಸಿದ್ಧವಾಯಿತು. ಸದಾಶಿವನ ಒಂದನೆ ಎತ್ತೆ ಸವಾರಿ ಸುದಾಮನ ಹೆಗಲ ಮೇಲೆ ಸಾಗಿತು. ಆಚೀಚೆ ಕಾಲುಗಳನ್ನು ಬಿಟ್ಟು ಭುಜದ ಮೇಲೆ ಕೂರುತ್ತಿದ್ದ ಸದಾಶಿವನಿಗೆ ದಾರಿಯ ಕೆಳಬದಿಯ ನಿರ್ಜನ ಗದ್ದೆಯ ಬಯಲು, ಘಟ್ಟದ ನಡುವೆ ದಾರಿಗಡ್ಡ ಹರಿದ ಅಬ್ಬಿಯ ನೀರಿನ ಕಾಲುವೆ, ಘಟ್ಟದ ಕೊನೆಗೆ ತಿರುವಿನಲ್ಲಿರುವ ಮುಳ್ಳುಕ್ಕಿ ಜಾರು, ಹಳ್ಳದ ದಂಡೆಗೆ ನಿಶ್ಶಬ್ದ ನಿಂತಿರುವ ಕರಿಕಾನು, ಅದನ್ನು ದಾಟಿದೊಡನೆಯೇ ಸಿಗುವ ಬಯಲಲ್ಲಿ ಕಿಣಕಿಣ ಗಂಟೆ ತೂಗಿಕೊಳ್ಳುತ್ತ ಮೇಯುವ ಎರಡೂ ಕೇರಿಗಳ ದನಗಳ ಹಿಂಡು ಯಾಕೋ ವ್ಯಥೆಯ ಚಿತ್ರವಾಗಿ ವೇಗದಿಂದ ಕಾಡುತ್ತಿದ್ದವು. ಮರಗಳ ಸಂದಿಯಿಂದ ಕಾಣುವ ಶಾಲೆಯ ಸುಣ್ಣದ ಗೋಡೆ ನೋಡಿದೊಡನೆಯೆ ಸದಾಶಿವ ಹೆಗಲನ್ನು ಸರ್ರನೆ ಜಾರಿ ಇಳಿಯುತ್ತಿದ್ದ. ಅಲ್ಲೆ ತುಸು ಹೊತ್ತು ನಿಂತು, ಶಾಲೆಯ ಮಕ್ಕಳ ಸಾಮೂಹಿಕ ಓದಿನ ಝೇಂಕಾರ ಆಲಿಸಲು ಅನುವು ಮಾಡಿಕೊಡುತ್ತಿದ್ದ. ಮಕ್ಕಳ ಏಕತಾನದ ಪಾಠ ಕೇಳಿಸಿಕೊಂಡು ಸದಾಶಿವ ಚಡಪಡಿಸಲು ತೊಡಗುತ್ತಿದ್ದ. ಮದುವೆ, ಮುಂಜಿ, ದೇವಸ್ಥಾನದ ಪೂಜಾ ಸಂದರ್ಭಗಳಲ್ಲಿ ಭೇಟಿಯಾಗುತ್ತಿದ್ದ ಗೆಳೆಯರನ್ನು ನೋಡಿ ಶಾಲೆಗೆ ಹೋಗದೆ ತಾನು ನೀತಿ ಬಾಹಿರನಾದೆ ಎಂದು ವೇದನೆಯಾಗತೊಡಗುತ್ತಿತ್ತು. ಆ ದಿನ ಸುದಾಮ ಅವನನ್ನು ಒತ್ತಾಯಿಸಲಿಲ್ಲ. ಶಾಲೆಯ ಗೆಳೆಯರೊಂದಿಗೆ ಹೋಲಿಸಿ, ಹೀಯಾಳಿಸಿ ಅವನ ಆತ್ಮ ಮರುಕವನ್ನು ಹೆಚ್ಚಿಸಲಿಲ್ಲ. ಶಾಲೆಯೆಂಬ ಅಪರಿಚಿತ ಸದ್ದು ಸದಾಶಿವನ ಎದೆಯ ಸನಿಹ ಬರಲಿ ಎಂದು ಅವನ ಪಾಡಿಗೆ ಅವನನ್ನು ಬಿಟ್ಟುಬಿಟ್ಟ. ಮರುದಿನ ತುಸು ಮುಂದೆ ನಡೆದು ಗುಡ್ಡದ ಬುಡಕ್ಕೆ ಬಂದರು. ಈಗ ಶಾಲೆಯ ತೆರೆದ ಕಿಟಕಿಗಳು, ಹಂಚಿನ ಮಾಡು, ಆಟದ ಮೈದಾನದ ಕೋಕೋ ಕಂಬಗಳು ಕಾಣುತ್ತಿದ್ದವು. ಹಿಂದಿನ ದಿವಸ ಕೇಳಿದ್ದ ಸಮೂಹ ಸದ್ದು ಒಡೆದು ಎಳೆಯರ ಪ್ರತ್ಯೇಕ ದನಿಯಾಗಿ ಹತ್ತಿರ ಬಂತು. ಇಳಿಜಾರು ಗುಡ್ಡದ ಮೇಲೆ ಮಕ್ಕಳು ಜಾರುಬಂಡೆ ಆಟ ಆಡಿ ನೆಲ ನುಣುಪುಗೊಳಿಸಿದ್ದರು. ಒಂದಕ್ಕೆ ಬಿಟ್ಟಾಗ ಮಕ್ಕಳು ಮರಕೋತಿ ಆಡುವ ಗೇರುಮರವನ್ನು ಸುತ್ತಿ ಬರಲು ಆಹ್ವಾನ ನೀಡಿದ. ಶಾಲೆಯೊಳಗೆ ಪಾಠ ಗಂಭೀರವಾಗಿ ನಡೆದಿತ್ತು. ಆಟದ ಬಯಲು ಸ್ತಬ್ಧವಾಗಿತ್ತು. ಸದಾಶಿವ ತನ್ನೆಲ್ಲ ಆತಂಕ ಮೀರಿ ಕ್ಷಣಾರ್ಧದಲ್ಲಿ ಗೇರು ಮರವನ್ನು ಸುತ್ತಿಕೊಂಡು ಬಂದು ದಾರಿಯ ಇಳಿಜಾರಿನಲ್ಲಿ ಓಡಿದ. ಮತ್ತೊಂದು ದಿನ ಸದಾಶಿವನನ್ನು ಸುದಾಮ ತನ್ನ ಮನೆಗೆ ಕರೆದೊಯ್ದ. ಅಂದು ಅಲ್ಲಿಗೆ ಮಾಸ್ತರು ಬಂದಿದ್ದರು. ಅವರು ಸುದಾಮನ ಜತೆಗೆ ಹಳ್ಳಕ್ಕೆ ಹೋಗಿ ಗಾಳ ಹಾಕಿ ಮೀನು ಹಿಡಿದು, ಈಜಿ ಸ್ನಾನ ಮಾಡಿದ್ದನ್ನು ನೋಡಿದ ಮೇಲೆ ಅವರ ಕುರಿತಾಗಿದ್ದ ಅಸಾಮಾನ್ಯ ಕಲ್ಪನೆಗಳು ಮಾಯವಾದವು. ಮರುದಿನದಿಂದ ಸುದಾಮನ ಸಾರಥ್ಯವಿಲ್ಲದೆ ಸದಾಶಿವ ಶಾಲೆಗೆ ಹೋಗಿ ಬರತೊಡಗಿದ.

ಈ ಪರಿಯ ಸಾಲು ಸಾಲು ಚಿತ್ರವನ್ನು ತನ್ನ ನೆನಪಿನ ಉತ್ಸವ ತೇರಿನಲ್ಲಿಟ್ಟು ಎಳೆಯುವುದನ್ನೇ ಕಾಯಕ ಮಾಡಿಕೊಂಡಿರುವ ಸದಾಶಿವ, ಸುದಾಮನನ್ನು ಹುಡುಕಿಕೊಂಡು ಊರಿಗೆ ಬಂದ. ಮನೆಯಲ್ಲಿ ಸಂಸಾರಸ್ಥನಾದ ಅಣ್ಣನೊಂದಿಗೆ ಮುದಿತನವನ್ನು ಜೋಪಾನ ರಕ್ಷಿಸಿಕೊಂಡ ಅಂಬಕ್ಕ ಅಧಿಕಾರಿಯಾದ ಮಗನ ಸಂಬಳ ಕೇಳಿ ತಿಳಿದು ಹೆಮ್ಮೆ ಪಟ್ಟಳು. 'ದುಡ್ಡು ಎಲ್ಲ ಖರ್ಚು ಮಾಡ್ಬೇಡ. ನಾಳೆ ಮದ್ವೆ ಗಿದ್ವೆ ಆದ್ಮೇಲೆ ಬೇಕಾಗ್ತದೆ. ಸ್ವಲ್ಪ ಸ್ವಲ್ಪ ಬ್ಯಾಂಕಿನಲ್ಲಿ ದುಡ್ಡು ಕಟ್ಟಿಡು' ತನಗೆ ಗೊತ್ತಿದ್ದ ಗುಟ್ಟನ್ನು ಬೋಧಿಸಿದಳು. ಈಗ 'ಅವರು' ಬದುಕಿರಬೇಕಾಗಿತ್ತು ಎಂದು ಗಂಡನನ್ನು ನೆನಪಿಸಿಕೊಂಡು ಕಂಬನಿಗರೆದಳು. ಸುದಾಮನನ್ನು ವಿಚಾರಿಸಲು ಭೇಟಿಯಾಗುವ ತನ್ನ ಉದ್ದೇಶವನ್ನು ಪ್ರಕಟಿಸಿದ.

'ಅಯ್ಯೊಯ್ಯೋ ಅಂಥ ಮಳ್ಳ ಕೆಲ್ಸಕ್ಕೆ ಹೋಗೋದು ಚಲೋದಲ್ಲ. ಸುದಾಮ ಮೊದಲಿನಾಂಗೆ ಇಲ್ಲ. ಅವನ ಮೇಲೆ ಕೇಸು ಹಾಕಿದ್ದಾರೆ. ಜೈಲಿಗೂ ಹಾಕಿದ್ದರು' ಅಂಬಕ್ಕ ನಡೆದ, ಕೇಳಿದ ಸಂಗತಿಗಳನ್ನು ವಿವರಿಸತೊಡಗಿದಳು.

ಅಂಬಕ್ಕ ಉಲ್ಲೇಖಿಸಿದ ಮೊದಲನೆಯ ಅವತಾರದಲ್ಲಿ ಸುದಾಮ ಪ್ರಕೃತಿಯೇ ಆಡಿಸಿದ ಪಾತ್ರದಂತಿದ್ದ. ಅವನ ಲೋಕಪ್ರಿಯತೆಗೆ ನಿಷ್ಕಾಮ ಸೇವೆಯೊಂದೇ ಕಾರಣವಾಗಿರದೆ ಅವನಲ್ಲಿದೆ ಎಂದು ನಂಬಲಾದ ಅತೀಂದ್ರಿಯ ಶಕ್ತಿಯೂ ಕಾರಣವಾಗಿತ್ತು. ಆಗಿನ್ನೂ ಸದಾಶಿವ ಶಾಲಾ ಬಾಲಕ. ಸದಾಶಿವನ ಅಪ್ಪ ರತ್ನಾಗಿರಿಯಿಂದ ತಂದು ನೆಟ್ಟ ಅಪರೂಪದ ಮಾವಿನಗಿಡ ಋತುಮಾನಕ್ಕೆ ಒಡಲೊಪ್ಪಿಸಿಯೂ ಬಂಜೆಯಾಗಿ ಶಪಿತ ಹೆಣ್ಣಂತೆ ನಿಂತುಕೊಂಡಿತು. ಯಾವ ಉಪಚಾರಕ್ಕೂ ಅದು ಫಲವತಿಯಾಗುವ ಸೂಚನೆ ಕಂಡುಬಾರದೆ ಸುದಾಮ ಗಿಡದ ಶುಶ್ರೂಷೆಯನ್ನು ವಹಿಸಿಕೊಂಡ. ಹೂವಿನ ಸೂಲಗಿತ್ತಿ ಪಾತರಗಿತ್ತಿಯಂತೆ ಸುದಾಮ ಗಿಡದ ಬಳಿ ದೀರ್ಘಾವಧಿಯವರೆಗೆ ಚಂಚಲ ಚಲನೆಯಲ್ಲಿ ತೊಡಗುತ್ತಿದ್ದ. ಕೆಲವೊಮ್ಮೆ ಮೌನ ಮುನಿಯಂತೆ ಧ್ಯಾನದಲ್ಲಿ ನಿಲ್ಲುತ್ತಿದ್ದ. ತನ್ನ ಸ್ಪರ್ಶಕ್ಕೆ ಗಿಡದ ಸೂಕ್ಷ್ಮ ಕೋಶಗಳು ಸ್ಪಂದಿಸುತ್ತವೆ ಎಂಬಂತೆ ಮೃದುವಾಗಿ ಅದರ ಜೀವನಾಡಿಯನ್ನು ಮಿಡಿಯುತ್ತಿದ್ದ. ಆ ವರ್ಷ ಅವನ ಮಾಂತ್ರಿಕ ಸ್ಪರ್ಶದ ಪರಿಣಾಮವೆಂಬಂತೆ ಬಯಕೆಯ ಹೂಗಳು ಹೊರಬಂದವು. ಮನೆಯ ಅಟ್ಟದ ಮೇಲಿನ ಬಿಳಿಹುಲ್ಲಿನ ಬುಟ್ಟಿಯೊಳಗೆ



ಪರಿಮಳದ ರಾಶಿ ರಾಶಿ ಮಾವಿನ ಹಣ್ಣುಗಳು ತುಂಬಿಹೋದವು. ತಿಂಗಳಿಡೀ ಕೇರಿಯ ಜನರಿಗೆ, ನೆಂಟರಿಗೆ ರಸದೂಟ ಹಾಕಿದರು. ಇದರಿಂದಾಗಿ ಸುದಾಮನನ್ನು ಸಸ್ಯ ಸಂಜೀವಿನಿ ವಿದ್ಯೆ ಬಲ್ಲ ಮಾಂತ್ರಿಕನಂತೆ ಜನ ಗುರುತಿಸಿ, ಅವನಿಂದ ಬಂಜೆ ಗಿಡಗಳಿಗೆ ಜೀವಫಲ ದಾನ ಮಾಡಿಸಲು ವ್ರತವನ್ನು ಮಾಡಿಸಿದರು. ಕಸಿ ಕಟ್ಟುವ ವಿಜ್ಞಾನಿಗಳು, 'ಇವನು ಮುಟ್ಟಿದ ಕೂಡಲೇ ಮರಗಳು ಹೂಬಿಡುವುದಕ್ಕೆ ಅವು ಏನು ಬಸಿರಾಗುವ ಹೆಂಗಸರೇನು' ಎಂದು ಅಪಹಾಸ್ಯ ಮಾಡಿದರು. ಈ ವಂಶಪರಂಪರಾಗತ ವಿದ್ಯೆಯನ್ನು ತಾನು ಹಣಕ್ಕಾಗಲಿ, ಕೀರ್ತಿಗಾಗಲಿ, ವಂಚನೆಗಾಗಲಿ ಉಪಯೋಗಿಸದಿದ್ದರೂ ಜನ ಆಡಿಕೊಳ್ಳುವುದು ಅವನಿಗೆ ನೋವುಂಟುಮಾಡುತ್ತಿತ್ತು. ಈ ವಿದ್ಯೆ ನಿಜವಾದ ಪಕ್ಷದಲ್ಲಿ ಅದು ನಂಬಿಕೆಗೆ ಸಂಬಂಧಿಸಿದ ವಿಷಯವಾಗಿತ್ತೆ ವಿನಃ ಹಟದಿಂದ ಸಮರ್ಥಿಸುವ ಸಿದ್ಧಾಂತವಾಗಿರಲಿಲ್ಲ ಎಂದ ಸುದಾಮ ತನ್ನೊಳಗೆ ಯೋಚಿಸಿದ. ಇದೊಂದು ನಿಸರ್ಗದತ್ತ ವಿದ್ಯೆಯೆಂದು ನಂಬಿದವರು ಹೊಸ ಬಗೆಯ ವಾದಗಳನ್ನು ಮಂಡಿಸಿ ಸುದಾಮನ ಪವಾಡ ಸದೃಶ ವಿದ್ಯೆಗೆ ಕಾರಣ ಅವನು ಅನುದಿನವೂ ಚಳಿಮಳೆ ಲೆಕ್ಕಿಸದೆ; ಮನೆಯ ಪಕ್ಕದಲ್ಲಿ ಬತ್ತದೆ ಹರಿಯುವ ನದಿಯ ನೀರಿನಲ್ಲಿ ಮಾಡುವ ಸ್ನಾನವೇ ಆಗಿತ್ತು. ಸುದಾಮ ಸ್ನಾನ ಮಾಡುವ ನದಿಯ ನೀರಿನಲ್ಲಿ ಅದು ಬಳಸಿಕೊಂಡು ಬರುವ ವಿವಿಧ ಜಾತಿಯ ಔಷಧೀಯ ಸಸ್ಯಗಳ ಎಲೆ, ಬೇರು, ಹೂಗಳು, ಖನಿಜಗಳು ಕರಗಿ ಅಮೃತವಾಹಿನಿಯಾಗಿತ್ತು. ಸುದಾಮನ ಅಖಂಡ ಆರೋಗ್ಯಕ್ಕೂ ಅವನ ಮಾಂತ್ರಿಕ ವಿದ್ಯೆಗೂ ಈ ತೀರ್ಥದಲ್ಲಿ ನಡೆಸುವ ಅಭ್ಯಂಜನವೇ ಕಾರಣವೆಂದು ಕೆಲವರು ಬಣ್ಣಿಸಿದರು. ಇನ್ನು ಕೆಲವರು ಮಳೆಗಾಲದಲ್ಲಿ ಉಕ್ಕಿ ಹರಿಯುವ ನದಿಯನ್ನು ದಾಟಿ ಹೋಗಲು ಪರ ಊರಿಂದ ಬರುತ್ತಿದ್ದ ಆಗಂತುಕರಿಗೆ ಸಹಾಯ ಸಲ್ಲಿಸಿದ ಪುಣ್ಯವೂ ಸುದಾಮನ ಪಾಲಾಗಿದೆಯೆಂದು ತರ್ಕಿಸಿದರು. ಇವುಗಳಿಂದಾಗಿ ಸದಾಶಿವನ ಕಲ್ಪನೆಯಲ್ಲಿ ಸುದಾಮ ಅಸಾಧಾರಣ ಮನುಷ್ಯನಾಗಿದ್ದ. ಇದೊಂದೇ ವಿದ್ಯೆಯಲ್ಲಿ ಪಾರಂಗತನಾಗಿ ಮುಂದೊರೆದಿದ್ದರೆ ವೃಕ್ಷಗಳ ಅನುಗ್ರಹದಿಂದ ಸುದಾಮ ಸುಖದಿಂದಿರಬಹುದಿತ್ತೇನೋ. ಆದರೆ ಅವನು ಪ್ರಕೃತಿಯ ರಹಸ್ಯವನ್ನು ಶೋಧಿಸಿ, ಕಾಲದ ಮಹಿಮೆಯನ್ನು ಭವಿಷ್ಯ ನುಡಿಯುವ ಸಾಹಸಕ್ಕೆ ಹೋಗಿ ಅಪಾಯ ದಲ್ಲಿ ಸಿಕ್ಕಿಹಾಕಿಕೊಂಡ ಎಂಬುದನ್ನು ಅಂಬಕ್ಕ ತನ್ನ ಮಾತಿನ ಮುಂದಿನ ಭಾಗ ದಲ್ಲಿ ವಿವರಿಸಿದಳು.

ಕಳೆದ ಮೂರ್ನಾಲ್ಕು ವರ್ಷಗಳಿಂದ ಸುದಾಮ ಅದೇನೋ ಅನುಭೂತಿ ಪಡೆದವನಂತೆ ವಿಚಿತ್ರ ತೆರನಾಗಿ ಮಾತಾಡುವುದು, ವರ್ತಿಸಲು ತೊಡಗಿದನಂತೆ. ಆಯಾ ವರ್ಷ ಬೀಳುವ ಮಳೆಯ ಪ್ರಮಾಣದ ಕುರಿತು ಪೂರ್ವ ಮಾಹಿತಿ ನೀಡುವುದಕ್ಕೆ ಆರಂಭಿಸಿದ. ಪಂಚಾಂಗ ನೋಡುವ, ದೃಗ್‌ಗಣಿತ ಬಿಡಿಸುವ ಶೈಕ್ಷಣಿಕ ಹಿನ್ನೆಲೆ ಏನೂ ಇರದ ಸುದಾಮ ದೇವತೆಗಳನ್ನು ಆರಾಧಿಸಿ ತನ್ನಂಕೆಯಲ್ಲಿಟ್ಟುಕೊಳ್ಳುವ ವಾಮಾಚಾರಿಯಾಗಿರಲಿಲ್ಲ. ಕಣಿ ಹೇಳುವ ಮುನ್ನ ಸುದಾಮ ಕೆಲದಿನ ಕಾಡಿನಲ್ಲಿ ಮಾಯವಾಗುತ್ತಿದ್ದ. ಅವನು ಕಾಡಿನಲ್ಲಿ ರಹಸ್ಯವಾಗಿ ಅಂತರ್ಧಾನವಾಗಿ ಏನು ಮಾಡುತ್ತಿರಬಹುದು ಎಂದು ಜನರಿಗೆ ಕುತೂಹಲವಿತ್ತು. ತನ್ನ ಅರಣ್ಯಪ್ರದೇಶದ ಕುರಿತು ಅವನು ಯಾರಿಗೂ ಏನೂ ಹೇಳುತ್ತಿರಲಿಲ್ಲ. ಅವನ ಸುತ್ತ ಕಥೆಗಳ ಪುರಾಣಗಳ ಹುತ್ತಗಳು ಹುಟ್ಟಿಕೊಂಡವು. ಆ ಕಥೆಗಳು ನಿಜವೋ, ಸುಳ್ಳೋ ಎಂದು ಯಾರಿಗೂ ತಿಳಿಯಲು ಸಾಧ್ಯವಿರಲಿಲ್ಲ. ಕಾಡಿನಲ್ಲಿ ವಾಸವಾಗಿರುತ್ತಿದ್ದ ಹುಲಿಗಳ ಸಂಖ್ಯೆಯನ್ನು ಎಣಿಸಿ, ಏನೇನೋ ಗುಣಿಸಿ, ರಾತ್ರಿಯಿಡೀ ಆಕಾಶ ನೋಡುತ್ತ ನಕ್ಷತ್ರಗಳಿಗೆ ತಾಳೆ ಹಾಕುತ್ತಾನೆ ಎಂಬುದು ಸುದಾಮನ ಕುರಿತು ಜನರಾಡಿಕೊಳ್ಳುತ್ತಿದ್ದ ದಂತ ಕಥೆಯಾಗಿತ್ತು. ಗಣಿತದ ವಿನ್ಯಾಸವಿರುವ ಈ ವಿಚಿತ್ರ ಗ್ರಹಿಕೆಯ ಆಧಾರದ ಮೇಲೆ ಸುದಾಮ ಶಕುನ ಹೇಳತೊಡಗಿದ. ಮನೆಯ ಎದುರಿನ ಗದ್ದೆಯ ಬಯಲಿನ ಆಲದ ಕಟ್ಟೆಯ ಮೇಲೆ ಪ್ರತಿ ಮಂಗಳವಾರ ಕುಳಿತು ಮಳೆ-ಬೆಳೆಯ ಕುರಿತು ತೀರ್ಮಾನವನ್ನು ಹೇಳುತ್ತಿದ್ದ. ಅನೇಕರಿಗೆ ಅವನ ಶಕುನ ಹವಾಮಾನ ವೀಕ್ಷಕರ ವರದಿಗಿಂತ ಹೆಚ್ಚು ಖಚಿತವಾಗಿರುತ್ತಿದ್ದವಂತೆ. ಕಾಡಿನಿಂದ ಹುಲಿಗಳೂ, ಹುಲಿಗಳಿಂದ ಕಾಡೂ ಪರಸ್ಪರ ಅಸ್ತಿತ್ವದ ಅವಲಂಬನ ಪಡೆದು ರೂಪುಗೊಂಡ ಇಡೀ ಋತುಮಾನದ ವಿನ್ಯಾಸವನ್ನು ಸುದಾಮ ತನ್ನ ಅತೀಂದ್ರಿಯ ಶಕ್ತಿಯಿಂದ ಗ್ರಹಿಸುತ್ತಾನೆಂದು ಜನರು ಭಕುತಿಯಿಂದ ನಮಿಸುತ್ತಿದ್ದರು. ಬಯಲು ಸೀಮೆಯ ಕಡೆಯಿಂದಲೂ ಜನರು ಸುದಾಮನ ದರ್ಶನಕ್ಕೆ ಬರತೊಡಗಿದರು. ಕಾಡಿನಲ್ಲಿ ನಡೆಯುತ್ತಿದ್ದ ಹುಲಿಗಳ ಆಗಮನ-ನಿರ್ಗಮನಗಳ ವಿದ್ಯಮಾನಕ್ಕೂ, ಬೀಳಲಿರುವ ಮಳೆಯ ಪ್ರಮಾಣಕ್ಕೂ ನಡುವೆ ಎಂಥ ಸಂಬಂಧವಿರಲು ಸಾಧ್ಯವೆಂದು ತರ್ಕಿಸಲು ತೊಡಗಿದವರು ಇದು ಸುದಾಮನ ಹೊಸ ವೇಷವೆಂದೂ, ಈ ನಾಟಕದ ಹಿಂದೆ ಕಾಡಿನ ಸಂಪತ್ತನ್ನು ದೋಚುವ ಕೇಡಿಗಳ ಕೈವಾಡವಿದೆ ಎಂದೂ ಚರ್ಚಿಸಿದರು. ಇದು ವದಂತಿಯ ರೂಪದಲ್ಲಿ ಎಲ್ಲೆಲ್ಲೂ ಹರಡಿ ಅರಣ್ಯ ಇಲಾಖೆಯವರ ಕಿವಿಯನ್ನು ತಲುಪಿತು. ಯಾರೋ ದುಷ್ಕರ್ಮಿಗಳು ಕಾಡಿನಲ್ಲಿ ಪಟ್ಟೆ ಹುಲಿಯೊಂದನ್ನು ಬೇಟೆಯಾಡಿ ಸಾಯಿಸಿದ ಘಟನೆ ನಡೆಯಿತು. ಇದಕ್ಕೆ ಸುದಾಮನ ಶಾಮೀಲಿದೆಯೆಂದು ಶಂಕಿಸಿ ಮೊದಲು ಅರಣ್ಯ ಇಲಾಖೆಯವರು, ಆಮೇಲೆ ಪೊಲೀಸಿನವರು ವಿಚಾರಣೆ ನಡೆಸಿದರು. ಹುಲಿ ಶಿಕಾರಿ ಮಾಡಿದ ಧೂರ್ತ ಕಣ್ಮರೆಯಾಗಿ ಪೊಲೀಸಿನವರು ಸುದಾಮನನ್ನು ಬಂಧಿಸಿ ಕಸ್ಟಡಿಯಲ್ಲಿಟ್ಟರು. ಅಂಬಕ್ಕನ ಮನೆಯಲ್ಲಿದ್ದ ಬಂದೂಕನ್ನು ಸುದಾಮ ಶಿಕಾರಿಗೆ ಉಪಯೋಗಿಸಿರಬಹುದೆಂಬ ಗುಮಾನಿಯಿಂದ ಬಂದೂಕನ್ನು ತಮ್ಮ ವಶದಲ್ಲಿರಿಸಿಕೊಂಡರು. 'ಸುದಾಮ ನಿಮ್ಮ ಮನೆ ಕೆಲಸದಾಳು. ನಿಮ್ಮ ಬಂದೂಕನ್ನು ಅವನು ಉಪಯೋಗಿಸಿದ್ದನ್ನು ನೋಡಿದವರಿದ್ದಾರೆ. ಅವನಿಗೆ ನಿಮ್ಮ ಸಪೋರ್ಟ್ ಇದೆ ಅಂತ ಆಯ್ತಲ್ಲ' ಎಂದು ಪೊಲೀಸಿನವರು ಪ್ರಕರಣ ದಾಖಲು ಮಾಡಿ, ಅಂಬಕ್ಕನನ್ನು ಸ್ಟೇಷನ್ನಿಗೆ ಓಡಾಡಿಸಿದರು. ಸುದಾಮ ಕಾಡಿನೊಂದಿಗಿಟ್ಟುಕೊಂಡ ಸಂಬಂಧದ ಫಲವಾಗಿ ಅವನ ಸಹವಾಸ ಅದೆಷ್ಟು ಅಪಾಯಕಾರಿ ಎಂದು ಮನಗಂಡು ಅಂಬಕ್ಕ ಸದಾಶಿವನ ಸದ್ಯದ ಭೇಟಿಯನ್ನು ವಿರೋಧಿಸಿದ್ದಳು. 'ಸುದಾಮನ ಸುದ್ದಿ ಬಿಟ್ಟು ಬಂದೂಕ ಬಿಡಿಸಿಕೊಂಡು ಬರೋದರ ಬಗ್ಗೆ ಯೋಚನೆ ಮಾಡು' ಎಂದು ಅಂಬಕ್ಕ ಹಿತೋಪದೇಶ ಮಾಡಿದಳು. ಸುದಾಮನ ವಿಚಿತ್ರ ಕಸಬೇ ಎಲ್ಲರ ಸಂಶಯಕ್ಕೆ ವಸ್ತುವಾಗಿತ್ತು. ವಾಮಾಚಾರದಂತೆ ಕಾಣುವ ಕಾಡಿನಲ್ಲಿ ನಡೆಸುವ ನಿಗೂಢ ಪ್ರಯೋಗಗಳು, ಹುಲಿ-ನಕ್ಷತ್ರಗಳ ಗಣತಿಶಾಸ್ತ್ರದಿಂದ ಮಳೆ ಕುರಿತು ನುಡಿಯುವ ಕಣಿ, ಅರಣ್ಯ ಇಲಾಖೆಯ ನಿರ್ಬಂಧನೆಗಳು, ಜಪ್ತಿಯಾದ ಬಂದೂಕಿನ ಪ್ರಕರಣ ಎಲ್ಲ ಒಂದಕ್ಕೊಂದು ಜಟಿಲವಾಗಿ ಹೆಣೆದುಕೊಂಡು ಇಡೀ ವಿದ್ಯಮಾನವೇ ರಾಜಕೀಯ ಸ್ವರೂಪ ಪಡೆದು ಬೆಳೆಯುತ್ತಿರುವಂತೆ ಕಾಣತೊಡಗಿತು.





ಸುದಾಮನ ಮನೆಗೆ ಕರೆದೊಯ್ಯುವ, ಕೇರಿಯ ಗುಂಟ ಸಾಗುವ ದಾರಿಯ ಪ್ರಯಾಣ ಸದಾಶಿವನಿಗೆ ತುಂಬಾ ಪ್ರಿಯವಾದದ್ದು. ತೋಟದ ಜಾಲರಿ ನೆರಳಿನ ಮಂಟಪದಡಿಯಲ್ಲಿ ತಣ್ಣನೆಯ ನೀರಿನ ನಿನಾದದ ಹಳ್ಳದ ದಂಡೆಗುಂಟ ಆಚೀಚೆಗೆ ಇಣಕುವ ಮನೆಗಳನ್ನು ಹಿಂದೆ ಬಿಟ್ಟು ಸಾಗುವ ಯಾತ್ರೆಗೆ ಸುಖವಾದ ನೆನಪಿನ ಇತಿಹಾಸವಿದೆ. ವರ್ಷಕ್ಕೆ ಎರಡು ಸಲವಾದರೂ ಸದಾಶಿವ ಸುದಾಮನೊಂದಿಗೆ ಅವನ ಮನೆಗೆ ಹೋಗಿ ಬರುತ್ತಿದ್ದ. ಮುಸ್ಸಂಜೆಯ ಮಬ್ಬಿನ ಮಾರ್ದವ ವ್ಯಥೆಯಂಥ ಆಪ್ತ ಕ್ಷಣಗಳು ಅವು. ಇದೇ ಜೀವ ಜಲವಾಹಿನಿ ಸುದಾಮನ ಮನೆಯ ಪಕ್ಕದ ಗುಡ್ಡದ ಸನಿಹ ಪುಟ್ಟ ಜಲಪಾತವಾಗಿ ಧುಮುಕಿ ಗದ್ದೆಯ ಬಯಲನ್ನು ಘೋಷದಿಂದ ತುಂಬುವಂತೆ ಮಾಡುತ್ತಿತ್ತು. ಜಲಪಾತದ ಸದ್ದು ಸದಾಶಿವನ ಮನೆಯ ಹಿಂದಿನ ಗುಡ್ಡದ ಮೇಲೆ ನಿಂತು ಆಲಿಸಿದರೆ ಅನಂತ ದೂರದ ಸಪ್ತ ಸಮುದ್ರದ ಮೊರೆತದಂತೆ ಭಾಸವಾಗುತ್ತಿತ್ತು. ಸುದಾಮ ಹೋದಲ್ಲೆಲ್ಲ ಜಲಪಾತದ ಸದ್ದು ಸದಾಶಿವನಿಗೆ ಕೇಳಿಸುತ್ತಿತ್ತು. ಪ್ರತಿನಿತ್ಯ ವ್ರತದಂತೆ ಈಜಿ ಸ್ನಾನ ಮಾಡುವ ಸುದಾಮನ ಜೀವಗಂಗೆ ಪುಟ್ಟ ಸರೋವರ ರೂಪ ತಾಳಿ ನಿಂತಿತ್ತು. ಸುದಾಮನ ಮನೆಯ ಹಿನ್ನೆಲೆಯಲ್ಲಿ ಬುಗುರಿಯಂಥ ಎತ್ತರದ ಕರಡಿನ ಗುಡ್ಡವಿತ್ತು. ಎತ್ತರದ ಗುಡ್ಡ, ಎದುರಿನ ಪುಟ್ಟ ನದಿ, ಬಾಳೆಯ ಹಸಿರು ಮತ್ತು ಹೂವಿನ ಗಿಡಗಳ ನಡುವೆ ತಪ್ಪಲಲ್ಲಿ ನಿಂತ ಮನೆ, ಒಂದು ಅಲೌಕಿಕ ವಾತಾವರಣವನ್ನು ಕಟ್ಟಿಕೊಂಡು ಆ ಜಾಗಕ್ಕೆ ತೀರ್ಥಕ್ಷೇತ್ರದ ರೂಪವನ್ನು ದಯಪಾಲಿಸಿದ್ದವು. ನಿರ್ಜನವಾದ ಮನೆಯ ಅಂಗಳದಲ್ಲಿ ಹಳದಿ ಬಿಸಿಲಿನ ಸಂಜೆ ಧ್ಯಾನಿಸುತ್ತಿತ್ತು. ಧ್ಯಾನವನ್ನು ಕೊಟ್ಟಿಗೆ ಹಿಂದಿನ ಹಲಸಿನ ಮರದ ಮೇಲಿನ ಜೀರುಂಡೆ ಭಂಗಗೊಳಿಸುವಂತೆ ಚೀರಿತು. ಗುಡ್ಡದಿಂದಿಳಿದ ಅಬ್ಬಿಯ ನೀರು ಬಚ್ಚಲ ಕಲ್ಲಮೇಲೆ ಸರಪಳಿ ಧಾರೆಯಾಗಿ ಸುರಿಯುತ್ತಿರುವುದು, ಮೇಟಿ ಗುಟ್ಟಕ್ಕೆ ಕಟ್ಟಿದ ಮುದ್ದು ಕರು ಬೆರಗಿನಿಂದ ನೋಡುವುದು ಕಾಲದ ನಿರಂತರ ಚಲನೆಯನ್ನು ಸಾರುವ ಪ್ರತಿಮೆಗಳಂತೆ ಕಂಡಿತು. ಸದಾಶಿವ 'ಸುದಾಮ' ಎಂದು ಎರಡು ಸಲ ಕರೆದ. ಜಲಪಾತದ ಸದ್ದಿನಲ್ಲಿ ಅವನ ದನಿ ಕೆಪ್ಪಾಗಿ ಹೋಯಿತು. ಸದಾಶಿವ ಮೌನದೊಳಗಿನ ಶೂನ್ಯವಾಗಿ ಕುಳಿತು ಸುದಾಮನ ಪ್ರೀತಿಯ ಕಾಡನ್ನು ನೋಡತೊಡಗಿದ. ಸ್ವಲ್ಪ ಸಮಯದ ಬಳಿಕ ಕೂದಲು ನೆರೆತ, ಹಲ್ಲುಬಿದ್ದ, ತೊಡೆಯವರೆಗೆ ಸೀರೆ ಎತ್ತಿ ಕಟ್ಟಿದ ಸುದಾಮನ ಹೆಂಡತಿ ಕುಂಟುತ್ತ ಬಂದಳು. ಸದಾಶಿವನ ಪರಿಚಯ ಹಿಡಿದು ಹಿಗ್ಗುತ್ತ, 'ಎಷ್ಟು ದೊಡ್ಡಾಗೀರಿ! ದೊಡ್ಡ ಆಫೀಸರ ಆಗೀರಂತೆ. ದೇವ್ರ ಒಳ್ಳೇದ ಮಾಡಲಿ', ಮುದುಕಿ ಹರಸಿದಳು. ಸುಣ್ಣ ಬಣ್ಣವಿಲ್ಲದ, ಅಗಲ ಗೋಡೆಯ ಮನೆ ಪ್ರಾಚೀನ ಎನ್ನಿಸಿತು. ಹಸಿವಿಗೆ ಹೂವು ತಿನ್ನುತ್ತ ನಾಗೊಂದಿಗೆಯ ಮೇಲೆ ತೆಪ್ಪಗೆ ಕೂತ ಮರದ ಗಣಪತಿ ವಿಗ್ರಹ ನೋಡುತ್ತಲೇ ಸದಾಶಿವನಿಗೆ ಸುನಾಮಳ ನೆನಪಾಯಿತು. ಗದ್ದೆಯ ಬಯಲಲ್ಲಿ ವಿಮಾನಿನಂತೆ ಹಾರುವ ಬಣ್ಣದ ಬಿಂಬಿಗಳನ್ನು ಕೊಂದ ಪಾಪದ ಪಾಲುದಾರಳಾದ ಸುನಾಮಳನ್ನು ಕಳೆದ ವರ್ಷ ಮದುವೆ ಮಾಡಿಕೊಟ್ಟಿದ್ದರು. ಶಾಲೆಗೆ ಹೋಗಲು ಹಟ ಹಿಡಿದಾಗ ಸುದಾಮ ತನ್ನ ಮಗಳನ್ನು ತೋರಿಸಿ 'ಅಳಿಯನಾಗಿ ಮಾಡಿಕೊಂಡು ಬಿಡುವೆ' ಎಂದು ಸದಾಶಿವನನ್ನು ರೇಗಿಸುತ್ತಿದ್ದ. 'ಸುದಾಮ ಎಲ್ಲಿ'? ಸದಾಶಿವ ವಿಚಾರಿಸಿದ.

'ತಾನಾಗಿ ಮನೆ ಬಿಟ್ಟು ಹೋಗುವ ಮನಸ್ರಾ ಅವರು. ಪಾರೆಸ್ಟರ ಕಾಟಕ್ಕೆ ಮನೆ ಬಿಟ್ಟು ಮಗಳ ಮನೆಗೆ ಹೋದ್ರು. ಊರಿಗೆ ಬರದಾಂಗೆ ತಡೆ ಹಾಕಿದ್ದಾರಂತೆ. ಅದೇನೋ ಗಡಿಪಾರು ಸಿಕ್ಷೆಯಂತೆ. ಸಕನಾ ಹೇಳಿದ್ದೇ ತಪ್ಪಾತು. ಬೆಟ್ಟದಲ್ಲಿ ಯಾರೇ ಮರ ಕಡೀಲಿ, ಬಂದೂಕಿನ ಪೆಟ್ಟು ಕೇಳಲಿ, ಅದೆಲ್ಲ ಅವರ ತಲೆಗೆ ಬರೋದೇ. ನಮ್ಮ ಅವಸ್ಥೆ ಕುನ್ನಿಗೆ ಕೊಟ್ಟರೂ ಬೇಡ. ನಾನೂ ಅವರ ಸಂಗ್ತಿಗೆ ದೇಸಾಂತರ ಹೋಗ್ತಿದ್ದೆ. ಇದ್ದ ನಾನೊಬ್ಬಳೂ ಹೋದ್ರೆ ದೇವ್ರಿಗೆ ದೀಪ ಹಚ್ಚವರು ಯಾರು. ದನಕರು ನೋಡಿಕೊಳ್ಳವ್ರು ಯಾರು. ಎಲ್ಲ ತನ್ನ ಕರ್ಮ. ದೇವ್ರೆ, ಮೂರು ಜನ್ಮಕ್ಕೂ ಈ ನರಕ ಬೇಡಪ್ಪ' ಮುದುಕಿ ಅಳತೊಡಗಿದಳು.

'ಸುನಾಮ ಎಲ್ಲಿದ್ದಾಳೆ?'

'ಕಲ್ಲಘಟಗೆಯಲ್ಲಿ. ಬಯಲು ಸೀಮೆ. ಅವರಿದ್ದ ಓಣಿ ಹೆಸರು ನೆನಪಾಗೋದಿಲ್ಲಾ. ಅವಳ ಗಂಡ ಕಂಡಕ್ಟರು. ಪಾಪ ಒಳ್ಳೆ ಮನಶ್ಯಾ. ಜಾತಿ ಬೇರೆ. ಸಂತೆಗೆ ಹೋಗಿದ್ದ ಸುನಾಮಳ ಕಂಡು ಮದ್ವೆ ಮಾಡಿಸಿಕೊಂಡು ಹೋದ. ಯಜಮಾನರನ್ನು ಕರ್‍ಕೊಂಡು ಹೋದವನೂ ಅವನೇ. ಪಾಪ, ಯಾರ್‍ಯಾರ ಋಣ ಎಲ್ಲೆಲ್ಲಿ ಅದೆ ಅಂಬೂದ ಹೇಳೂಕೆ ಬರೂದಾ'

ಸುನಾಮಳ ವಿಳಾಸ ಕೇಳಿದ. ಮುದುಕಿ ಕುಂಟುತ್ತ ಒಳಗೆ ಹೋಗಿ ವಾಯರ್ ಕೈಚೀಲದೊಳಗೆ ಹುಡುಕಾಡಿ ಅಸಂಖ್ಯ ಮಡಿಕೆಗಳ ಚೀಟಿ ತೆಗೆದು ತಂದುಕೊಟ್ಟಳು. ಸುನಾಮಳ ಕೈಬರಹದಲ್ಲಿ ಸೊಟ್ಟಾಗಿ ಮೂಡಿದ ವಿಳಾಸವನ್ನು ಸದಾಶಿವ ತನ್ನ ಡೈರಿಯಲ್ಲಿ ಬರೆದುಕೊಂಡ. ನೊಂದ ಮುದುಕಿಗೆ ಆಶ್ವಾಸನೆ ನೀಡಲು ಸದಾಶಿವನಿಗೆ ಧೈರ್ಯವಾಗಲಿಲ್ಲ. ಅವಳು ಹೊರಗೆ ಬರುವಷ್ಟರಲ್ಲಿ ಸದಾಶಿವ ಗದ್ದೆಯ ದಾರಿ ಹಿಡಿದಿದ್ದ. ಒಂಟಿ ಮುದುಕಿ ಅಂಗಳದ ಅಂಚಿನಲ್ಲಿ ನಿಂತು ಏನೇನೋ ಪ್ರಾರ್ಥಿಸತೊಡಗಿದ್ದಳು. ಜಲಪಾತದ ಸದ್ದಿನಲ್ಲಿ ಅವಳ ಆರ್ತ ದನಿ ಕೇಳಿಸಲಿಲ್ಲ. ಸದಾಶಿವ ಖಿನ್ನನಾಗಿ ಕೈಬೀಸಿ ನಡೆಯತೊಡಗಿದ.

ಮರುದಿನವೇ ಕಿರವತ್ತಿಯ ಕಟ್ಟಿಗೆ ಡಿಪೋದಲ್ಲಿ ಬರೆದ ಟೆಂಡರ್ ಒಡೆದು, ಸಾಗವಾನಿ ದಿಮ್ಮಿಗಳನ್ನು ಮಾರಾಟ ಮಾಡಲು ಹರಾಜು ಕರೆಯುವ ಕಾರ್ಯಕ್ರಮವಿತ್ತು. ಬೆಳಗ್ಗೆ ಹರಾಜಿನ ಕೆಲಸ ಮುಗಿಸಿ, ಮಧ್ಯಾಹ್ನ ಊಟ ಮಾಡಿ, ಡ್ರೈವರನಿಗೆ ಸುನಾಮಳ ವಿಳಾಸದ ಚೀಟಿ ಕೊಟ್ಟು ಕಾರು ಬಿಡಲು ಸೂಚಿಸಿದ. ಡ್ರೈವರನಿಗೆ ಅಚ್ಚರಿಯಾದರೂ ಯೋಚನಾಮಗ್ನನಾಗಿ ಕುಳಿತ



ಸಾಹೇಬರನ್ನು ಮಾತಾಡಿಸುವ ಧೈರ್ಯ ಬರಲಿಲ್ಲ. ಕಾರನ್ನು ಚಲಿಸುತ್ತ ಯೋಚನೆಗೆ ತೊಡಗಿದ. ಡ್ರೈವರ್ ಕೊನೆಯಲ್ಲಿ, 'ಸುದಾಮನಿದ್ದಲ್ಲಿಗೆ ಹೋಗಬೇಕು ನಿಮಗೆ ಸಾರ್?' ಎಂದ. ಸದಾಶಿವನ ಲಕ್ಷ್ಯ ಜೀರುಂಡೆ ಚೀರುವ ಕಿರವತ್ತಿಯ ಕಾಡಿನಲ್ಲಿ ಐಕ್ಯವಾಗಿತ್ತು. 'ಹಿಂದಿನ ಸಾಹೇಬ್ರು ಸುದಾಮನನ್ನು ಗಡಿಪಾರು ಮಾಡಿದ್ದರು. ಅವನ ಮೇಲೆ ಚಾಪ್ಟರ್ ಕೇಸು ಇದೆ. ಕಾಯ್ದೆ ಸೂಕ್ಷ್ಮ ನಿಮಗೆ ತಿಳಿಯೋದಿಲ್ಲಾಂತ ನಾನು ಹೇಳೋದು. ನಿಮ್ಮ ವಯಸ್ಸು ಸಣ್ಣದು ಅಂತ ಹೇಳ್ತಿದ್ದೇನೆ. ಅವನು ನಿಮಗೆ ಮೊದಲಿನಿಂದಲೂ ಪರಿಚಯವಂತೆ' ಡ್ರೈವರ್ ನುಡಿದ.

ಸುಮ್ಮನೆ ಆಲಿಸುತ್ತ ಕೂತಿದ್ದ ಸದಾಶಿವನಿಗೆ ಡ್ರೈವರನ ಮಾತಿನಲ್ಲಿ ಕೆಲ ನಿಜ ಸಂಗತಿಗಳಿವೆ ಎಂದನ್ನಿಸಿತು. ಸುದಾಮನನ್ನು ಮರಳಿ ಮನೆಗೆ ಕರೆದು ತರುವ ತನ್ನ ತೀರ್ಮಾನದ ಹಿಂದೆ ಏನಿದೆ? ಸುದಾಮನಂಥ ವನವಾಸಿ ಜನಪದವನ್ನು ಅವರು ನೆಚ್ಚಿಕೊಂಡ ಕರಕುಶಲ ಕಸುಬುಗಳನ್ನು ರಕ್ಷಿಸುವುದರ ಮೂಲಕ ಅರಣ್ಯವನ್ನು ಉಳಿಸಿಕೊಳ್ಳಬಹುದೆಂಬ ತನ್ನ ತತ್ವ ಎಷ್ಟು ಸಾಚಾ? ಬಾಲ್ಯದ ಬಂಟ ಸುದಾಮನ ಋಣದ ಹಂಗಿನಿಂದ ಬಿಡುಗಡೆ ಪಡೆಯಲು ಸಹಾಯವೆಂಬ ಸೋಗಿನ ವೇಷ ಹಾಕಿಕೊಂಡಿದ್ದೇನೆಯೇ? ಸದಾಶಿವನ ಯೋಚನಾ ಲಹರಿ ಕಾರಿನ ವೇಗದ ಜತೆ ಓಡುತ್ತಿತ್ತು.

ದಿಗಂತದಲ್ಲಿ ಐಕ್ಯವಾದಂತಿರುವ ಗದ್ದೆಯ ವಿಶಾಲ ಬಯಲು ಕಾರಿನಲ್ಲಿ ಕುಳಿತವರ ಕಣ್ಣಲ್ಲಿ ಜಾರಿ ಹೋಯಿತು. ತೇರಿನಂಥ ಮಾವಿನ ಮರಗಳ ಗುಂಪು ನಿಂತಲ್ಲೇ ಪ್ರದಕ್ಷಿಣೆ ಹಾಕಿ ಆಟವಾಡುತ್ತಿದ್ದಂತೆ ಕಾಣುತ್ತಿತ್ತು. ಕಲಘಟಗಿ ಹೆಸರಿನೊಂದಿಗೆ ಸುದಾಮ ಬರುತ್ತಿದ್ದ ಸಂತೆಯ ನೆನಪು ಸೇರಿಕೊಂಡಿತು. ಬಯಲು ಪ್ರದೇಶದ ಭಾಷೆ ಮತ್ತು ಭೂಗೋಲ ಸದಾಶಿವನ ತಲೆಯಲ್ಲಿ ಹೊಸ ಬಗೆಯಲ್ಲಿ ಅಪರಿಚಿತ ಭಯವನ್ನು ಹುಟ್ಟಿಸಿದವು. ಬೋಳು ಬೋಳಾದ ನಾಡಹಂಚಿನ ಮಣ್ಣು ಮನೆಗಳ ಪೇಟಿ ಉತ್ಖನನದಲ್ಲಿ ದೊರಕಿದ ಅವಶೇಷದಂತೆ ಕಾಣುತ್ತಿತ್ತು. ಡ್ರೈವರ್ ಕಾರು ನಿಲ್ಲಿಸಿ, ಪಕ್ಕದ ಪಾನಂಗಡಿಗೆ ಹೋಗಿ, ವಿಳಾಸದ ಚೀಟಿ ತೋರಿಸಿದ. ಮಾರ್ಗ ದರ್ಶನ ಪಡೆದು ಬಂದ. ಕುಸಿಯುತ್ತಿರುವಂತೆ ಭಾಸವಾಗುವ ನಾಡಹಂಚಿನ ಮನೆಗಳ ನಡುವೆ ಬಂಡಿಗಾಡಿಯ ಇಕ್ಕಟ್ಟಾದ ಮಣ್ಣು ರಸ್ತೆ ಮೇಲೆ ಕಾರು ಏರುಪೇರಾಗುತ್ತ ಚಲಿಸಿತು. ಹಠಾತ್ತನೆ ರಸ್ತೆ ಮುಗಿದ ಜಾಗದಾಚೆ ಹಳ್ಳಿಯೊಂದು ಎದ್ದುನಿಂತಿತ್ತು. ಕುಂಬಳಬಳ್ಳಿ ಹಬ್ಬಿದ ಹೊಗೆ ಹಾಡುತ್ತಿರುವ ಹಂಚಿನ ಮನೆಯ ಎದುರು ಕಾರು ನಿಲ್ಲಿಸಿ ಇಳಿದರು.



ಮಳೆ ಸುರಿಯುವ ಸಿದ್ಧತೆ ಆಕಾಶದಲ್ಲಿ ನಡೆದಿತ್ತು. ಈಗ ಮೋಡ ಮತ್ತಷ್ಟು ದಟ್ಟಯಿಸಿ, ಗಾಳಿ ತಂಪಾಗಿ, ಗುಡುಗತೊಡಗಿ ಡ್ರೈವರ್ ಆತಂಕಗೊಂಡ. ಓಣಿ ಓಣಿಗಳಲ್ಲಿ ಧೂಳಿನ ಗಾಳಿ ಚಂಡಿ ಹಿಡಿದು ಓಡತೊಡಗಿತು. ಗದ್ದೆಯ ಬಯಲಿನಲ್ಲಿ ಮುಗಿಲೆತ್ತರಕ್ಕೆ ಎಲೆ, ಕಸ ಧೂಳನ್ನೆತ್ತಿಕೊಂಡು ಸುಂಟರಗಾಳಿ ನರ್ತಿಸತೊಡಗಿತು. ಸೊಂಟದ ಮೇಲೆ ನೀರ ಕೊಡವಿಟ್ಟು ಧಾವಿಸಿ ಬಂದ ಸುನಾಮ ಅವಾಕ್ಕಾಗಿ ನಿಂತುಬಿಟ್ಟಳು. ಸದಾಶಿವನನ್ನು ಗುರುತಿಸಿ ಸಂತಸದಲ್ಲಿ ಉಕ್ಕಿ, ಕೊಡವಿಟ್ಟು ಬಂದು ಕ್ಷಣಾರ್ಧದಲ್ಲಿ ಜಗುಲಿಯನ್ನು ಓರಣವಾಗಿರಿಸಿದಳು. 'ನಂಬೋದಕ್ಕೆ ಆಗಲಿಲ್ಲ', ತನ್ನ ರೋಮಾಂಚನವನ್ನು ತೋಡಿಕೊಂಡಳು. ಪ್ಲಾಸ್ಟಿಕ್ ಕುರ್ಚಿ ಕೊಟ್ಟು ಕೂರಲು ಆಗ್ರಹಿಸಿದಳು. ಅವಳೂ ಉದ್ವೇಗದಲ್ಲಿ ಕಂಪಿಸುತ್ತಿದ್ದಳು. ಅವಳ ಗಂಡನ ಕುರಿತು ವಿಚಾರಿಸಿದ. 'ಬೆಂಗಳೂರು ಲೈನ್ ಮೇಲೆ ಡ್ಯೂಟಿಗೆ ಹೋಗಿದ್ದಾರೆ' ಎಂದಳು. ನಾಟಕದ ಹ್ಯಾಂಡ್‌ಬಿಲ್ಲಿನಲ್ಲಿ ಮೀಸೆ ತಿರುವುತ್ತ ಪೋಸ್ ಕೊಟ್ಟು ನಿಂತ ಪಾತ್ರಧಾರಿಯಂತೆ ಕಾಣುವ ವ್ಯಕ್ತಿಯೊಬ್ಬನ ಫೋಟೋ

ತೋರಿಸಿ ಅವರೇ ತನ್ನ ಯಜಮಾನರು ಎಂದಳು. ಜಾತ್ರೆಯ ಹಂಗಾಮಿ ಸ್ಟೂಡಿಯೋದ ಸೀನರಿ ಎದುರು ನಿಂತು ತೆಗೆಯಿಸಿದ ಕಪ್ಪು-ಬಿಳುಪಿನ ಕುಟುಂಬದ ಫೋಟೋದ ಸಾಲು ಗೋಡೆಯ ಮೇಲಿತ್ತು. ಮಳೆಹನಿಗಳೂ ಹಂಚಿನ ಮೇಲೆ ಚಂಡೆ ಬಡಿಯತೊಡಗಿದವು. ಮನೆಯೊಳಗೆ ಸೃಷ್ಟಿಯಾದ ಸಣ್ಣ ಆವೇಶದಲ್ಲಿ ಅಕಾಲ ಮಳೆಯ ಪಾತ್ರವೆಷ್ಟು? ತನ್ನ ಆಕಸ್ಮಿಕ ಆಗಮನದ ತಲ್ಲಣದ ಪಾಲೆಷ್ಟು? ಎಂದು ಸದಾಶಿವ ಯೋಚಿಸಿದ. 'ಸುದಾಮ ಎಲ್ಲಿ?' ವಿಚಾರಿಸಿದ. 'ನಮ್ಮನೆ ನೋಡಿದ್ರೆ ನಗ್ತೀರಿ. ಬಾಗಿಲ ಪಟ್ಟಿಗೆ ತಲೆ ಬಡಿತದೆ' ಎನ್ನುತ್ತ ಸುನಾಮ ಅವನನ್ನು ಒಳಗೆ ಕರೆದೊಯ್ದಳು.

ಸಣ್ಣ ಕೋಣೆಯೊಂದರ ಹುಲ್ಲಿನ ಚಾಪೆಯ ಮೇಲೆ ಅತ್ಯಂತ ಅರಾಜಕ ಭಂಗಿಯಲ್ಲಿ ವೈರಾಗ್ಯ ತಾಳಿ ಸುದಾಮ ಕುಳಿತಿದ್ದ. ಕಾಡಿನಲ್ಲಿ ತಪಸ್ಸಿಗೆ ಕುಳಿತು ಜೀವರಸವನ್ನು ಒಣಗಿಸಿಕೊಂಡ ಗಡ್ಡಧಾರಿ ಋಷಿಯಂತೆ ಕಾಣುತ್ತಿದ್ದ. ಸುದಾಮ ಅದೆಷ್ಟು ಬೇಗ ವೃದ್ಧನಾಗಿಬಿಟ್ಟ ಎಂದು ಅಚ್ಚರಿಯಾಯಿತು. ಕೋಣೆಯೊಳಗಿಳಿದ ಮಂದ ಹೊಳಪಿನಲ್ಲಿ ಮುಸ್ಸಂಜೆಯ ನಸುಗಂಪಿತ್ತು.

'ಇಲ್ಲಿಗೆ ಬಂದಾಗಿನಿಂದ ಅಪ್ಪಯ್ಯ ಒಂದು ನಮೂನೆ ಗುಂಗು ಹಿಡಿದು ಕೂತ್ಕಂಡಿರ್‍ತಾನೆ. ಯಾರನ್ನೂ ಗುರ್ತಿಸೋದಿಲ್ಲ. ಮಾತಿನಲ್ಲಿ ನೆನಪಾಗೋದಿಲ್ಲ. ಡಾಕ್ಟರ್ ಶಾಕ್ ಆಗದೆ ಅಂದರು. ಅಷ್ಟಷ್ಟು ಹೊತ್ತಿಗೆ ಹೋಗ್ತೆ ಹೋಗ್ತೆ ಅಂತ ಬಡಬಡಿಸ್ತಾನೆ. ಮಲಗಿ ಬಿಡ್ತಾನೆ. ಹ್ಯಾಂಗಿದ್ದ ಅಪ್ಪಯ್ಯ ಹ್ಯಾಂಗೆ ಆಗಿಬಿಟ್ಟ' ಸುನಾಮ ಅಳತೊಡಗಿದಳು.

ಹೊರಗೆ ಮಳೆ ರಭಸದಿಂದ ಸುರಿಯತೊಡಗಿತ್ತು. ಮಳೆಯ ಸಪ್ಪಳ, ಪರಿಮಳ ಮತ್ತು ತಂಪಿನ ಸ್ಪರ್ಶ ಸುದಾಮನನ್ನು ತಾಕಿದಂತೆ ಕಾಣಲಿಲ್ಲ. ಕೋಣೆಯ ತೆರೆದ ಕಿಟಕಿಯಿಂದ ಒದ್ದೆಯಾದ ಜಗತ್ತು ಮಬ್ಬಾದ ಅಪಾರದರ್ಶಕ ಗಾಜಿನಂತಾಗಿಹೋಯಿತು. ಸುದಾಮನೆದುರು ಕುಳಿತು ಅವನ ಕಣ್ಣಲ್ಲಿ ದೃಷ್ಟಿ ನೆಟ್ಟು ನೋಡಿದ. ಆಗ ತಾನೆ ಜನಿಸಿದ ಮಗುವಿನಂತೆ ಕಂಡ. ಅವನೊಳಗಿನ ಕಾಡು ಸತ್ತು ಹೋಗಿತ್ತು. 'ನಾನು ಸದಾಶಿವ. ನಿನ್ನನ್ನು ಕರೆದೊಯ್ಯಲು ಬಂದಿದ್ದೇನೆ' ಎಂದ. ಸದಾಶಿವನ ದನಿಯನ್ನು ಬರಿ ಸದ್ದಿನಂತೆ ಆಲಿಸಿದ. ನಿರಾಕಾರ ಬಯಲೊಳಗಿನ ನಿರ್ಜೀವ ವಸ್ತುವಿನಂತೆ ಎಲ್ಲರನ್ನು ಅವನು ನೋಡಿದ. ಸದಾಶಿವ ಅವನ ಕೃಶವಾದ ಹಸ್ತಗಳನ್ನು ಹಿಡಿದುಕೊಂಡ. ಬೆಚ್ಚಗಿರಲಿಲ್ಲ. 'ಅಪ್ಪಯ್ಯ ಯಾರು ಗೊತ್ತಾತಾ?' ಸುನಾಮ ಚೀರಿದಳು. 'ಜಂಗಲ್ಲಿನ ದೊಡ್ಡ ಸಾಹೇಬ ಎಂದು ಕೇಳಿದ್ದೆ' ಸುದಾಮ ಬಾಯಿಬಿಟ್ಟ. ಅವನು ಸ್ಪಂದಿಸಿದ್ದು ಸದಾಶಿವನಿಗೆ ಭರವಸೆಯ ಲಕ್ಷಣವಾಗಿ ಕಂಡಿತು.

ಹೊರಗೆ ಹಠಾತ್ತಾನೆ ಮಳೆ ನಿಂತು, ಆಗಷ್ಟೇ ಬೆಳಗಾದಂತೆ ಕಾಣುತ್ತಿತ್ತು. ಹಿತ್ತಲಲ್ಲಿ ನೀರು ನಿಂತು ಹೊಂಡವಾಗಿ ಕಪ್ಪೆಯೊಂದು ಸುಖವಾಗಿ ಹಾಡುತ್ತಿತ್ತು. ಗದ್ದೆಯಲ್ಲಿ ಮೇಯುತ್ತಿದ್ದ ಹಳ್ಳಿಯ ಹಸು ಮಳೆಗೆ ಹೆದರಿ ಮನೆಯ ಮಾಡಿನಡಿ ಆಶ್ರಯ ಪಡೆದು ಕೊರಳ ಗಂಟೆ ತೂಗುತ್ತ ನಿಂತಿತ್ತು. ಮಳೆಯ ಹಿನ್ನೆಲೆಯಲ್ಲಿ ಕಪ್ಪೆ ಮತ್ತು ಹಸುವಿನ ಗಂಟೆಯ ಜಂಟಿ ದನಿಯಲ್ಲಿ ಸುದಾಮ ಬಿಟ್ಟು ಬಂದ ಹಳ್ಳಿ, ಕಾಡು, ನದಿ, ಪಶು-ಪಕ್ಷಿಗಳ ಜೀವ ಸಮುಚ್ಚಯ ಮೂಡಿ ಬಂತು.


ತೆರೆದ ಕಿಟಕಿಯ ಮೂಲಕ ಸ್ವಲ್ಪ ದೂರದಲ್ಲಿ ಕಾಣುವ ತೊಟ್ಟಿಕ್ಕುವ ಮಾವಿನ ಮರದ ಕಡೆಯಿಂದ ಜೀರುಂಡೆಯೊಂದು ಕೂಗುತ್ತಿತ್ತು. ಅತ್ಯಂತ ಹೆಚ್ಚು ಮಳೆ ಸುರಿಯುವ ದಟ್ಟ ಕಾನನದಲ್ಲಿ ಮುಸ್ಸಂಜೆಯನ್ನು ಕರೆಯುತ್ತ ಚೀರುವ ಈ ಕೀಟ ಬಯಲು ನಾಡಿಗೆ ಹೇಗೆ ಬಂತೆಂದು ಸದಾಶಿವ ಯೋಚಿಸತೊಡಗಿದ. ಜೀರುಂಡೆ ತನ್ನ ಭಜನೆಯನ್ನು ಆರಂಭಿಸಿತ್ತು. ಪಕ್ಕದಲ್ಲೇ ಹಾದುಹೋದ ಹೆದ್ದಾರಿಯ ಮೇಲೆ ನಾಟಾ ಹೇರಿಕೊಂಡ ಲಾರಿಯೊಂದು ಒದ್ದೆ ತೊಪ್ಪೆಯಾಗಿ ಹಬೆ ಸೂಸುತ್ತ ನಿಂತದ್ದನ್ನು ನೋಡಿದೊಡನೆಯೇ ಸದಾಶಿವನ ತಲೆಯಲ್ಲಿ ಒಂದು ತರ್ಕ ಸೂತ್ರ ಹುಟ್ಟಿತು. ಕಾಡಿನಿಂದ ಬಂದ ಲಾರಿಯ ಮೇಲಿನ ನಾಟಾದ ನಡುವೆ ಈ ಪಾಪದ ಜೀರುಂಡೆ ಹೇಗೋ ಸೇರಿಕೊಂಡು ಪ್ರಯಾಣಿಸಿ ಬಂದಿರಬೇಕು. ಮಳೆ ಸುರಿಯುತ್ತಲೇ ತನ್ನ ಪೂರ್ವಾಶ್ರಮದ ನೆನಪಾಗಿ ಸವಾರಿ ಮಾಡಿದ ಲಾರಿ ಬಿಟ್ಟು ಹತ್ತಿರದಲ್ಲಿದ್ದ ಮಾವಿನ ಮರವನ್ನು ಆಶ್ರಯಿಸಿ ಚೀರತೊಡಗಿತು. ತನ್ನ ಹಾಡನ್ನು ಎರಡು ಸಲ ಹಾಡಿ, ಬಳಗದವರ ಗೀತಗೋಷ್ಠಿಗಾಗಿ ಆಲಿಸಿ, ಬಯಲಲ್ಲಿ ತಾನು ಒಂಟಿ ಎಂದನ್ನಿಸಿ ಸುಮ್ಮನಾಯಿತು. ಜೀರುಂಡೆಯ ಹಾಡನ್ನು ಕೇಳಿದೊಡನೆಯೆ ನಂದಿಹೋಗಿದ್ದ ದೀಪ ಸುದಾಮನೊಳಗೆ ಪುನಃ ಹೊತ್ತಿಕೊಂಡಿತು. ಹೊರಗೆ ಬಂದು 'ಎಲ್ಲಿ ಹೋಯ್ತು ಮರಹಕ್ಕಿ?' ಎಂದು ಹುಡುಕತೊಡಗಿದ. ತಣ್ಣನೆಯ ಮಣ್ಣು ಕಂಪು ಅವನನ್ನು ಹಿತವಾಗಿ ಆವರಿಸಿತು. ಆದಾಗಲೆ ಜೀರುಂಡೆ ತಾನೇರಿದ ಮೊದಲ ಮರವನ್ನು ಬದಲಾಯಿಸಿ ಬೇಲಿಯ ಪಕ್ಕದ ಗಿಡಕ್ಕೆ ಹಾರಿಹೋಯಿತೆಂದು ಕಾಣುತ್ತದೆ. ಎರಡು ಸಲ ಕ್ಷೀಣವಾಗಿ ಚೀರಿ ಹಾಡಲು ಪ್ರಚೋದನೆ ದೊರೆಯದೆ ಸೋತು ಸುಮ್ಮನಾಯಿತು. ಸುದಾಮ ಬಯಲಾಟದ ನಿದ್ದೆಯಿಂದ ಆಗಷ್ಟೇ ಎದ್ದವನಂತೆ ಎದ್ದು, ಕೆಸರನ್ನು ಲೆಕ್ಕಿಸದೆ ಮಣ್ಣು ರಸ್ತೆ ದಾಟಿ, ಹಾಡಿನಲ್ಲೇ ಕಾಡನ್ನು ಕಟ್ಟುವ ಕೀಟವನ್ನು ಹಿಂಬಾಲಿಸಿ ಬಸವಳಿದ ಗದ್ದೆಯ ಬಯಲಿನತ್ತ ಏಕಾಂಗಿಯಾಗಿ ಹೊರಟ. ಅದು ಅವನ ಚೈತನ್ಯದ ಮೂಲಕ್ಕೆ ಹೊರಟ ಜೀವಯಾನವಾಗಿತ್ತು. ಮಳೆ ತೊಳೆದ ಜಗದ ಶುಭ್ರತೆಯಲ್ಲಿ ಕನಸಿನ ಕೈಹಿಡಿದು ನಡೆಯತೊಡಗಿದ. ಅನಂತದಲ್ಲಿ ಜೀರುಂಡೆಯ ನಾದ ಲಯವಾಗುವ ಮುನ್ನ ಅದನ್ನು ತನ್ನ ಮೈಮನದೊಳಗೆ ತುಂಬಿಕೊಂಡೇನು ಎಂಬ ಸಂಕಲ್ಪದಲ್ಲಿ ದಾಪುಗಾಲು ಹಾಕಿ ನಡೆಯತೊಡಗಿದ. ಸುನಾಮ ತನ್ನ ನಗುವಿನಲ್ಲೇ ಆಕಾಶದಲ್ಲಿದ್ದ ಮಳೆಯ ಮಹಾವೈಭವವನ್ನು ತುಂಬಿಕೊಂಡು ಮಗುವಿನಂತೆ ಕುಣಿಯತೊಡಗಿದಳು. ಚಳಿಗೆ ಮೈ ಮುದುರಿಸಿಕೊಂಡು ನಿಂತ ಡ್ರೈವರ್, 'ಸರ್, ಮತ್ತೆ ಮಳೆ ಬರಬೌದು. ಕಾರು ಕೆಸರಲ್ಲಿ ಸಿಕ್ಕಿ ಬೀಳಬೌದು, ಸುದಾಮನ ಕರೆದುಕೊಂಡು ಹೋಗೋದಾದ್ರೆ ತಡಮಾಡೋದು ಬೇಡ' ಎಂದು ಚಡಪಡಿಸಿದ. ಸುದಾಮನನ್ನು ಬಿಡಿಸಿಕೊಂಡು ಹೋಗಲು ಇರುವ ಕಾನೂನಿನ ಅಡೆತಡೆಗಳನ್ನು ಪಟ್ಟಿ ಮಾಡುತ್ತ ನಿಂತ ಸದಾಶಿವನ ಕಿವಿಯಲ್ಲಿ ಜೀರುಂಡೆಯ ಹಾಡು ನೂರಾರು ಸಲ ಪ್ರತಿಧ್ವನಿಸತೊಡಗಿತು. 'ನಾವ್ಯಾಕೆ ಸುದಾಮನನ್ನು ಕರೆಯೋದು. ಜೀರುಂಡೆಯೇ ಅವನನ್ನು ಮೂಲ ಜಾಗಕ್ಕೆ ಕರೆದುಕೊಂಡು ಹೋಗುತ್ತದೆ' ಸದಾಶಿವ ಬಯಲು ನೋಡುತ್ತ ಹೇಳಿದ. ಸಾಹೇಬರು ಹೀಗೇಕೆ ಅಸಂಬದ್ಧವಾಗಿ ಮಾತಾಡಲು ತೊಡಗಿದ್ದಾರೆ ಎಂದು ಅರ್ಥವಾಗದೆ ಡ್ರೈವರ್ ಸದಾಶಿವನನ್ನು ಅನುಕಂಪದಿಂದ ನೋಡಿ ಕಾರಿನತ್ತ ನಡೆದ.



ಮಗಳು ಸ್ವಾತಿಯೊಂದಿಗೆ ಲೇಖಕ.


ಹೂವಿನ ಸುತ್ತ ಪಾತರಗಿತ್ತಿಯಂತೆ ಮುಗ್ಧವಾ ನಾದದ ಬೆ
ಚಿತ್ರಗಳ ಧ್ವನಿಯ ಬೆಂಕಿ ಬೆಳಕಿನಲ್ಲಿ ತೇಲಿ ಬರುತ್ತಿವೆ.
ಕೆಲ ಕ್ಷಣ ಮನ ಮಗುವಿನಂತೆ ಧ್ಯಾನದಲ್ಲಿ ನಿಲ್ಲುತ್ತಿದೆ.

ಶ್ರೀಧರ. ಬಳಗಾರ.




ವಿವೇಕ ಶಾನಭಾಗ

ಕಥನ ಕುತೂಹಲ



ತಿರುಮಲೇಶರ ಕಾವ್ಯ

ತಿರುಮಲೇಶರ ಕಾವ್ಯವನ್ನು ಇಡಿಯಾಗಿ ಓದುವುದೆಂದರೆ ಅವರ ಜೊತೆ ಓಡಿಯಾಡಿದ ಹಾಗೆ. ಮಾತಿಗೆ ಗೆಳೆಯ ಸಿಕ್ಕಿದ ಹಾಗೆ; ಒಂದಕ್ಕೊಂದು ಬೆನ್ನುಹತ್ತಿ ಹೊಸದೇನೋ ಹೊಳೆದ ಹಾಗೆ. ಯಾವುದೇ ಲಹರಿಯಲ್ಲಿ ಪುಟಗಳನ್ನು ತೆರೆದು ಓದಬಹುದು. ಸ್ನೇಹಿತನ ಸಂಗದ ಹಾಗೆ ಇವರ ಕಾವ್ಯವನ್ನು ಖುಷಿಗೆ, ತಿಳುವಳಿಕೆಗೆ, ಹಂಚಿಕೊಳ್ಳುವ ಹಂಬಲಕ್ಕೆ ಅಥವಾ ಸುಮ್ಮನೆ ಓದಬಹುದು. ಗಾಢವಾದ ಕಾವ್ಯಾನುಭವ ಅಂದರೆ ಮರಳಿ ಮರಳಿ ಕವಿತೆಗೆ ನಮ್ಮನ್ನು ಸೆಳೆಯುವ ಚುಂಬಕ. ಎಲ್ಲ ಹೇಳಿಯೂ ಮುಂದಿನ ಭೇಟಿಯಲ್ಲಿ ಉಳಿಯುವ ತವಕ. ಒಬ್ಬ ಕವಿಯ ಕಾವ್ಯವೆಂದರೆ ಅವನ ಅನುಭವ, ಲೀಲೆ, ತೀವ್ರತೆ, ದುಃಖದುಮ್ಮಾನಗಳು, ವಿಡಂಬನೆ, ಪ್ರೀತಿ ಎಲ್ಲವೂ. ತಿರುಮಲೇಶರ ಯಾವುದೋ ಒಂದು ಕವಿತೆಯನ್ನು ಅಥವಾ ಕೆಲವು ಕವಿತೆಗಳನ್ನು ಅವರ ಮುಖ್ಯ ಕವಿತೆಗಳೆಂದು ಹೆಸರಿಸುವುದು ನನಗೆ ಕಷ್ಟ. ಅವರ ಎಲ್ಲ ಕವಿತೆಗಳೂ ಸೇರಿ ಒಂದು ಕವಿತೆಯಂತೆ, ಎಲ್ಲವೂ ಒಂದೇ ಮರದ ಬೇರೆ ಬೇರೆ ಟೊಂಗೆಗಳಂತೆ ಅನಿಸುತ್ತದೆ.

ನಮ್ಮ ನಡುವಿನ ಮುಖ್ಯ ಕವಿಗಳು ಕಂಬಾರ ಮತ್ತು ತಿರುಮಲೇಶ್. ಇಬ್ಬರೂ ನವ್ಯಕಾಲದಲ್ಲಿಯೇ ಕಾವ್ಯರಚನೆಗೆ ತೊಡಗಿದ್ದರೂ ಅದರಿಂದ ಸ್ಪಷ್ಟವಾಗಿ ಭಿನ್ನಮಾರ್ಗದಲ್ಲಿ ಬರೆದರು. ಜಾನಪದದ ಸೊಗಡು, ಕಂಪು ಎಂದೆಲ್ಲ ಸರಳ ವಿಭಾಗೀಕರಣ ಮಾಡುವ ಜನರಿಂದ ಕಂಬಾರರ ಅನನ್ಯ ಪ್ರತಿಭೆಗೆ ತುಸು ಅನ್ಯಾಯವಾದಂತೆ, ತಿರುಮಲೇಶರ ಕಾವ್ಯವನ್ನು ಭಾಷೆಯ ಹೊಸ ಪ್ರಯೋಗ ಎಂದು ಸೀಮಿತಗೊಳಿಸುವುದರಿಂದಲೂ ಆಗಿದೆ. ಅವರ ಬಹುಚರ್ಚಿತ 'ಮುಖಾಮುಖಿ' ಕವಿತೆಯ ಭಿನ್ನತೆ ಮತ್ತು ಹೊಸತನಗಳು, ಸಿದ್ಧ ಉಪಕರಣಗಳ ಮೂಲಕ ಚರ್ಚಿಸಲು ಸಾಧ್ಯ ಎಂಬ ಕಾರಣಕ್ಕಾಗಿಯೇ ಚರ್ಚಿಸಲ್ಪಟ್ಟಿದೆ ಎಂದು ಅನಿಸುವುದಕ್ಕೆ ಕಾರಣ, ನಂತರದ ಕವಿತೆಗಳ ಬಗ್ಗೆ ಹೆಚ್ಚು ಚರ್ಚೆ ನಡೆದಿಲ್ಲದಿರುವುದು. ಅವರು ಒಂದೇ ಕವಿತೆಯ ಮೂಲಕ ಅಷ್ಟು ಸುಲಭದಲ್ಲಿ ಹಿಡಿಯಲು ಸಾಧ್ಯವಾಗುವ ಕವಿಯಲ್ಲ. ಅವರ ಕಾವ್ಯಸೃಷ್ಟಿಯ ಹಿಂದಿನ ತತ್ವವೇ ಸಣ್ಣ ಸಣ್ಣ ಸಂಗತಿಗಳ ಮೂಲಕ ಇಡಿಯ ಚಿತ್ರ ಒದಗಿಸುವುದಾದ್ದರಿಂದ, ಒಂದು ಇನ್ನೊಂದರ ಭಾಗದಂತೆ, ಮರುಕಳಿಕೆಯಂತೆ, ಇನ್ನೊಂದು ಮುಖದಂತೆ ಅನಿಸುವುದರಿಂದ, ಯಾವುದೋ ಒಂದನ್ನೇ ನೋಡಿದರೆ ಚಿತ್ರದ ಪೂರ್ಣತೆ ಸಿಗದೇ ಹೋಗುತ್ತದೆ. ಒಮ್ಮೆ ಅವರ ಪ್ರಪಂಚದಲ್ಲಿ ಹೊಕ್ಕರೆಂದರೆ, ಅದು ಮರಳಿ ಮರಳಿ ನಿಮ್ಮನ್ನು ತನ್ನತ್ತ ಸೆಳೆಯತೊಡಗುತ್ತದೆ. ತಿರುಮಲೇಶರ 'ಮುಖಾಮುಖಿ' ಸಂಕಲನ ಓದಿದಾಗ ನನಗೆ ಅದರ ಗುಂಗು ಹಿಡಿದುಬಿಟ್ಟಿತ್ತು. ಮತ್ತೆ ಮತ್ತೆ ಆ ಕವಿತೆಗಳಿಗೆ ಹಿಂತಿರುಗುವಂತೆ ಮಾಡಿರುವುದು ಯಾವುದು ಎಂದು ಕೇಳಿಕೊಳ್ಳುತ್ತ ಅವುಗಳ ಮಾಂತ್ರಿಕ ಶಕ್ತಿಯ ಬಗ್ಗೆ ಈಗಲೂ ಬೆರಗಾಗುತ್ತೇನೆ.



ಕ್ಯಾಂಟೀನಿಗೆ ಊಟಕ್ಕೆ ಬರುವ ನಟ ಸುಂತಣಕರ, ಕುಂಡೆಯಲ್ಲಿ ಕುರುವೆದ್ದು ಲಾಸ್ಯದಲ್ಲಿ ನಡೆಯುವ ನಾಯಕಿ, ಇದ್ದಿಲಂಗಡಿ ಪಂಟಯ್ಯ, ರವಿವರ್ಮನ ಹೆಂಗಸರು, ಚಾದಂಗಡಿಯ ಕಾಮತರು, ಇಲ್ಲಿಗೂ ಡೆಲ್ಲಿಗೂ ಸಂಪರ್ಕ ಕಲ್ಪಿಸುವ ಪೋಸ್ಟಾಫೀಸಿನ ದೇವದಾರು ಪೆಟ್ಟಿಗೆ, ಗುರುತು ಬಿಟ್ಟು ನಡೆಯುವ ಬಸವನ ಹುಳ, ಹಿತ್ತಿಲ ಮನೆಯ ಕಾಪಿ ಪುಸ್ತಕದ ಅಟ್ಟಳಿಕೆ, ಭಕ್ಷಿಗಳು, ಬಫೂನರು, ಯಾರೂ ಇಲ್ಲದ ಮಧ್ಯಾಹ್ನ ಮುಖಾಮುಖಿಯಾದ ಬೆಕ್ಕು, ಸಂತೆಯ ಜನರು, ಕೇರಳದ ಸದಾ ಶೋಡಶಿಯರು, ರುಗ್ಣ ಯಾಕೂಬನೂ, ಅಖಿಟೋಪನೂ, ಇಮಾಮರೂ, ಸುಲೇಮಾನನೂ, ಹುಚ್ಚಮುಲ್ಲನೂ ಇವರ ಕವಿತೆಗಳನ್ನು ತುಳಿದ ಹಾದಿಗಳಿಂದ ಬಿಡಿಸಿ ಹೊಸ ಸೀಮೆಗಳಿಗೆ ಒಯ್ಯುವವರು. ಹೆದ್ದಾರಿಯ ಅನಿವಾರ್ಯತೆಯಲ್ಲೂ ಒಳಮಾರ್ಗಗಳಿಗೆ ಮನಸ್ಸು ಕೊಟ್ಟವರು. ಮುಖಾಮುಖಿ ಪದ್ಯದಿಂದ ನುಸುಳಿ ಬಂದ ಬೆಕ್ಕು ಆಗಾಗ ಕಾಣಿಸಿಕೊಳ್ಳುತ್ತಲೇ ಇರುತ್ತದೆ.

ಕೋರಿತು ಬೆಕ್ಕು: 'ಸಾಕ್ಕೊಳ್ಳಿ ಸಾರ್ ನನ್ನ
ನನಗೆ ಬೇಕಾದ್ದು ಬರೀ ಅನ್ನ
ಕವಿತೆ ಮತ್ತು ವಾಸ್ತವತೆಗಿರೋ ಅಂತರ
ದಾಟಿಬಿಡಿ ನನ್ನ ಮುಖಾಂತರ'

ಕನ್ನಡ ಕಾವ್ಯದಲ್ಲಿ ಹೊಸ ಸಾಧ್ಯತೆಗಳನ್ನು ಕಂಡುಹಿಡಿಯುವುದು ಅಡಿಗೋತ್ತರರ ಕರ್ತವ್ಯವೆಂದು 'ಮಹಾಪ್ರಸ್ಥಾನ'ದ ಮುನ್ನುಡಿಯಲ್ಲಿ ಹೇಳಿದ ತಿರುಮಲೇಶರು ಅದನ್ನು ಮುಂದಿನ ಸಂಕಲನಗಳಲ್ಲಿ ಅಕ್ಷರಶಃ ಮಾಡಿ ತೋರಿಸಿದರು. ಅಡಿಗರ ಕಾವ್ಯದ ತಿರುಳನ್ನು ಅರ್ಥೈಸಿಕೊಂಡವರ ಹಾಗೆ ಕಾವ್ಯದ ಸ್ವರೂಪ ಮತ್ತು ಪ್ರತಿಮೆಗಳ ಬಳಕೆಯಲ್ಲಿ ಸ್ಪಷ್ಟವಾಗಿ ಭಿನ್ನವಾದರು. ಅಡಿಗರ ಹಾಗೆ ಕಟ್ಟುವ, ಶಿಖರಕ್ಕೊಯ್ಯುವ ಸಂಯೋಜನೆಯನ್ನು ಬಿಟ್ಟು,

ಚೆಲ್ಲಿಬಿದ್ದ ಚಿತ್ರಗಳಂಥ ಸ್ವರೂಪವನ್ನು ಆಯ್ದುಕೊಂಡರು. ಅಡಿಗರ ಕಾವ್ಯದ ಪ್ರತಿಮೆಗಳು ಪುರಾಣದ ತೇಜಸ್ಸಿನಿಂದ ಕೂಡಿದ್ದರೆ, ಇವರ ಕಾವ್ಯದಲ್ಲಿ ನಿತ್ಯದ ಕ್ಷುಲ್ಲಕ ಸಂಗತಿಗಳು ಜೀವಸ್ಪರ್ಶದಿಂದ ಹೊಳೆಯುತ್ತವೆ. ಅಡಿಗರಿಂದ ಭಿನ್ನವಾಗಲು ಬಯಸುತ್ತಿದ್ದ ಇತರರು ಮೂಲಭೂತವಾಗಿ ಬದಲಾಗದೇ ಇದ್ದುದರಿಂದ ಲಘುವಾಗುತ್ತ ಹೋಗುತ್ತಿರುವಾಗ, ತಿರುಮಲೇಶ್ ಹೊಸ ಪರಿಭಾಷೆಯ ಮೂಲಕ, ಅನಿಸಿಯೂ ಸ್ಪರ್ಶಕ್ಕೆ ಸಿಗದ ನಿತ್ಯದ ಸಂಗತಿಗಳನ್ನು ಆರಿಸಿಕೊಂಡು ಭಿನ್ನವಾದ ಹೆಜ್ಜೆಗಳನ್ನು ಮೂಡಿಸಿದರು. 'ಮುಖಾಮುಖಿ' ಮತ್ತು ಅವರ ನಂತರದ ಎಲ್ಲ ಸಂಕಲನಗಳಲ್ಲಿ ಇದನ್ನು ಹೆಚ್ಚು ಸ್ಪಷ್ಟವಾಗಿ, ದಿಟ್ಟವಾಗಿ ಕಾಣಬಹುದು. ಕಾವ್ಯ ಮಾಧ್ಯಮವನ್ನು ತಮ್ಮ ಎಲ್ಲ ಅಭಿವ್ಯಕ್ತಿಗೆ, ಅಷ್ಟೇ ಅಲ್ಲ ತತ್‌ಕ್ಷಣದ ಪ್ರತಿಕ್ರಿಯೆಗೆ ಕೂಡ ಬಳಸಿಕೊಳ್ಳಲು ಸಾಧ್ಯವಾಗಬೇಕು ಅನ್ನುವ ಅವರ ಆಶಯ, ಅವರು ಕವಿತೆಗಳಿಗೆ ಎತ್ತಿಕೊಂಡ ವಸ್ತುಗಳಲ್ಲೇ ಕಾಣುತ್ತದೆ. ಹೀಗೆ ಒಂದೇ ಹಾದಿ ಹಿಡಿದಂತೆ ತೋರುತ್ತಿದ್ದ ಅಡಿಗೋತ್ತರ ಕಾವ್ಯಕ್ಕೆ ಅವರ ಪ್ರಯೋಗಗಳಿಂದಾಗಿ ಹೊಸ ತಿರುವು ಬಂತೆನ್ನಬಹುದು. ಅವರ ಕವಿತೆಗಳ ಮುಖಾಂತರ ಖಂಡಾಂತರಗಳನ್ನು ದಾಟ ರೆಡಿಂಗ್‌ನ ಸಂತೆಯಲ್ಲಿ ಮುತ್ತಿಡುತ್ತ ಕೂತವರನ್ನು ಕಾಣಬಹುದು, ಶತಮಾನಗಳನ್ನು ದಾಟಿ ಯಾಕೂಬನ ಕ್ರೌರ್ಯಕ್ಕೆ ಸಾಕ್ಷಿಯಾಗಬಹುದು, ಮಾಳಿಗೆಯ ಮೆಟ್ಟಿಲಲ್ಲಿ ಮೇಲೆ ಹೋಗಲೋ ಕೆಳಗೋ ಎಂಬ ದ್ವಂದ್ವದಲ್ಲಿ ನಿಂತ ಬೆಕ್ಕಿನ ಆತಂಕವನ್ನು ಅನುಭವಿಸಬಹುದು.

ಬೆಕ್ಕು ಕಿವಿ ನಿಮಿರಿ ಆಲಿಸುವುದು
ಇಂಥ ನೀರವ ನಿಮಿಷಗಳಲ್ಲಿ ಸ್ವಂತ
ಯೋಚನೆಗಳು ಸಹ ಮಾಡುವುವು ಸದ್ದು

ಒಂದು ಯೋಜನ ದೂರ ಗೊಂಡಾರಣ್ಯ
ಅಲ್ಲಿ ಸಂಚರಿಸುವುದು ಇನ್ನೊಂದು ಮೃಗ-
ಇನ್ನೊಂದು ಯುಗದ ನಿರ್ಭೀತ ಪುಣ್ಯ

ಅಥವಾ ಅಬೀಡ್ಸಿನ ರಸ್ತೆಗಳನ್ನು ದಾಟಬಹುದು, ಟುಲ್‌ಚಂದನ ಬೆಳಕುಗಳು ತುಂಡರಿಸಿ ಹೋಗುವುದನ್ನು ನೋಡುತ್ತ.

.... ಅಂತೂ ದಾಟಿದ ಮೇಲೆ ಹೇಗನ್ನಿಸುತ್ತಿದೆ
ನಿಮಗೆ? ನಿರಂತರವಾದ ಈ ರಸ್ತೆಯನ್ನು ತುಂಡರಿಸಿಬಿಟ್ಟೆವು
ಎಂದೆ? ಆದರೆ ಎಷ್ಟು ಬೇಗ ಅದು ಮತ್ತೆ
ಒಂದಾಯಿತು ನೋಡಿ - ನಾವು ದಾಟಿ ಬಂದದ್ದೇ ಇಲ್ಲ
ಎಂಬಂತೆ. ಅಬೀಡ್ಸಿನ ರಸ್ತೆಗಳೇ ಹಾಗೆ.

ಅಡಿಗರನ್ನೂ ಒಳಗೊಂಡಂತೆ, ನವ್ಯದ ಕಾವ್ಯ ಸ್ವರೂಪ ಧ್ಯಾನಸ್ಥ ಮನಃಸ್ಥಿತಿಯನ್ನು, ಹುತ್ತುಗಟ್ಟಿ ಸಿಗುವ ಅರಿವಿನ ಸ್ಫೋಟವನ್ನು ಪ್ರತಿಫಲಿಸಿದ್ದರೆ, ತಿರುಮಲೇಶರ ಕಾವ್ಯ ಆಗಾಗ ಹೊಳೆಯುವ ಒಳನೋಟದ ಮಿಂಚುಗಳ ಮೂಲಕ, ಅವುಗಳನ್ನು ಒಟ್ಟುಗೂಡಿಸಿ ಒಂದು ಚೌಕಟ್ಟಿನಲ್ಲಿ ಕಾಣಿಸುವ ಮುಖಾಂತರ ವ್ಯಕ್ತವಾಗಲು ಬಯಸುತ್ತದೆ. ಆಧುನಿಕತೆ, ಅನುಭವ ಗ್ರಹಿಕೆಯ ವಿಘಟನೆ, ಆಯ್ಕೆಯ ಸ್ವಾತಂತ್ರ್ಯದ ಕಲ್ಪನೆ ಮುಂತಾದವು ಇತ್ತೀಚಿನ ದಶಕಗಳಲ್ಲಿ ನಮ್ಮ ಜೀವನಕ್ರಮದ ಮೇಲೆ ಮಾಡಿದ ಪ್ರಭಾವವನ್ನು ತನ್ನ ಸ್ವರೂಪದ ಮೂಲಕ ಒಟ್ಟಾರೆಯಾಗಿ ಪ್ರತಿಫಲಿಸಲು ಹವಣಿಸುತ್ತದೆ.

ಇತಿಹಾಸದ ಈ ಕ್ಷಣದಲ್ಲಿ ನಿಂತ ಜೀವವೊಂದು ತನಗೆ ಬೇಕಾಗಿಯೋ ಬೇಡವಾಗಿಯೋ ಈ ನಿರಂತರ ಚಲನೆಯ ಒಂದು ಕೊಂಡಿಯಾಗಿದೆ, ಮತ್ತು ತನ್ನ ಪಾತ್ರವನ್ನು ನಿರ್ವಹಿಸುತ್ತಲೇ ಇರುತ್ತದೆ ಅನ್ನುವುದು ಅವರ ಕವಿತೆಗಳಲ್ಲಿ ಪದೇ ಪದೇ ಮರುಕಳಿಸುವ ಸಂಗತಿ. ದಿನನಿತ್ಯದ ಕ್ಷುಲ್ಲಕವೆನ್ನಿಸುವ ಸಂಗತಿಗಳ ಮೂಲಕ ನಾವೆಲ್ಲ ಇದನ್ನು ಮುಂದುವರಿಸುತ್ತಲೇ ಇರುತ್ತೇವೆ. ಈ ಕೋನದಿಂದ ನೋಡಿದಾಗ ಇತಿಹಾಸದ ವ್ಯಕ್ತಿಗಳೂ, ತಲ್ಲಣಗಳೂ, ವಿಜೃಂಭಣೆಗಳೂ, ಅಟ್ಟಹಾಸಗಳೂ, ದುರಂತಗಳೂ ಸಮಕಾಲೀನವೆಂದೇ ಅವರು ಭಾವಿಸುತ್ತಾರೆ. ಇತಿಹಾಸ ಅವರಿಗೆ ಸಂದುಹೋದ ಕಾಲದ ದಾಖಲೆಯಾಗಿ ಮಾತ್ರ ಕಾಣುವುದಿಲ್ಲ. ಬದಲು ಚಲಿಸುತ್ತಲೇ ಇರುವ, ಹಾಗಾಗುವುದರ ಮೂಲಕವೇ ಹಿಂದಿನದನ್ನು ಪುನಃ ವ್ಯಾಖ್ಯಿಸುವಂತೆ ಅನಿಸುತ್ತದೆ. 'ಮಹಾಪ್ರಸ್ಥಾನ' ಸಂಕಲನದ ನಂತರ ಪುರಾಣ ಪ್ರತಿಮೆಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟ ತಿರುಮಲೇಶರಿಗೆ, ಇತಿಹಾಸದತ್ತ ಮುಖಮಾಡುವ ಅವಶ್ಯಕತೆ ಕಂಡುಬಂದುದು, ಕವಿಯ ಉಪಾಯಗಳ ಕುರಿತ, ಮುಂದೆ ಹೋದಂತೆ ಸ್ವತಃ ಕವಿಗೇ ಸಾಲದೇಹೋಗುವ ಉಪಕರಣಗಳ ಕುರಿತ ಚಿಂತನೆಗೆ ಆಸಕ್ತಿಯ ವಿಷಯವಾಗಬಹುದು.

ಅನುಕರಿಸಲು ಸುಲಭವೆಂಬಂತೆ ತೋರುವ ಅವರ ಕಾವ್ಯದ ಅನುಕರಣೆ ಕನ್ನಡದಲ್ಲಿ ಧಾರಾಳವಾಗಿ ಆಯಿತು. ಆದರೆ ಸ್ಪಷ್ಟವಾದ ಜೀವನದೃಷ್ಟಿಯಿಲ್ಲದ ಇವೆಲ್ಲ ಜೊಳ್ಳಾದವು. ಆಡುಭಾಷೆ ಮತ್ತು ಶಿಷ್ಟಭಾಷೆಯ ನಡುವಿನ ಜಗತ್ತು ಒಂದು ಇನ್ನೊಂದಾಗುವಾಗಿನ ಕಳವಳ, ಬೆಳವಣಿಗೆಯ ನೋವು, ಕಳಕೊಳ್ಳುವ ನೋವುಗಳ ಬಗ್ಗೆ ಇರುವ ಆಸಕ್ತಿ ಅವರ ಕಾವ್ಯಭಾಷೆಯ ಮೇಲೆ ಪ್ರಭಾವ ಬೀರಿದೆ ಅನಿಸುತ್ತದೆ. ಒಳಹೊರ ಜಗತ್ತುಗಳ ಮುಖಾಮುಖಿಯನ್ನು, ಸ್ಥಿತ್ಯಂತರಗಳನ್ನು ಅವರು ಈ ಮೂಲಕ ಹೇಳಲು ಪ್ರಯತ್ನಪಡುವಂತೆ ಅನಿಸುತ್ತದೆ.

ನಿಜವೇಷದಲಿ ನಮ್ಮ ನಾಯಕ ನಟ
ದಪ್ಪ ನಡುವಿನ ಮಧ್ಯವಯಸ್ಕ
ಭೀಮಸೇನನೂ ಹಾಕಿರುವನು
ಎಷ್ಟೋ ಮಂದಿಗೆ ಮಸ್ಕ

ಯೋಗವಿದ್ದರೆ ಸಂಧಿಸುವೆವು ನಾವು
ಇನ್ನೊಂದು ಕಡೆ ಇನ್ನೊಂದು ದಿವಸ
ಅಲ್ಲಿಯತನಕ ಎಲ್ಲರಿಗೂ ಇದ್ದದ್ದೆ
ಅವರವರ ಅಜ್ಞಾತವಾಸ

'ಮಹಾಪ್ರಸ್ಥಾನ'ದ ನಂತರದ ಅವರ ಕಾವ್ಯದಲ್ಲಿ ವೈಯಕ್ತಿಕ ಅನುಭವದ ಭಾವತೀವ್ರತೆ, ಒಳತೋಟಿಗಳಿಲ್ಲ ಎಂದು ಕೆಲವೊಮ್ಮೆ ನನಗೆ ಅನಿಸಿದೆ. ಎಲ್ಲವೂ ಹೊರ ಪ್ರತಿಮೆಯ, ಹೊರ ರೂಪಕದ ಮೂಲಕ ಅಭಿವ್ಯಕ್ತವಾದ ಹಾಗೆ ಅನಿಸುತ್ತದೆ. ಕಲಾಕೃತಿಯಾಗಲು ತವಕಿಸುವ, ಆ ಅರಿವಿನಿಂದ ಹುಟ್ಟಿದ ಕವಿತೆಗಳು ಅನಿಸುತ್ತದೆ. ಮುಖ್ಯ ಮಾರ್ಗದಿಂದ ಭಿನ್ನವಾಗುವ ಕಠಿಣ ಹಾದಿಯಲ್ಲಿ ನಡೆದ ಅವರ ಹಠ ಅರ್ಥವಾಗುವಂಥದ್ದೇ. ಆದರೂ ಕೆಲವೊಮ್ಮೆ, ಅವರ ಪ್ರಖ್ಯಾತ ಕವಿತೆಯ ಬೆಕ್ಕಿನ ಹಾಗೆ ಬಿಟ್ಟುಕೊಡುವುದರಿಂದಲೂ ಗೆಲ್ಲಬಹುದಿತ್ತು ಅನಿಸುತ್ತದೆ.

ಇತ್ತೀಚಿಗೆ ಕೆ.ಎಚ್.ಶ್ರೀನಿವಾಸರ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ವೆಂಕಟೇಶಮೂರ್ತಿಯವರು 'ಪ್ರೀತಿಯಿಲ್ಲದ ಓದು ಕಾವ್ಯದ ಅಂತರಂಗವನ್ನು ಕಾಣಲಾರದು. ಶುದ್ಧಾಂಗ ಕಾವ್ಯಪ್ರೀತಿಯೆಂಬುದು ಆದರ್ಶದ ಪದಾರ್ಥ. ಯಾಕೆಂದರೆ ಕೇವಲ ಕಾವ್ಯವೆಂಬುದು ಇಲ್ಲ. ಇರುವುದು ಪಂಪನ ಕಾವ್ಯ, ಕುಮಾರವ್ಯಾಸನ ಕಾವ್ಯ, ಬೇಂದ್ರೆ ಕಾವ್ಯ, ಅಡಿಗರ ಕಾವ್ಯ' ಎಂದು ಹೇಳಿದ್ದಾರೆ. ಇದು ಮಹತ್ವದ ಮಾತು. ಸತತ ಹಿಂಬಾಲಿಸದೇ ಒಬ್ಬ ಕವಿಯ ಕಾವ್ಯದ ಪೂರ್ಣ ಆಸ್ವಾದನೆ ಕಷ್ಟ. ಅದಕ್ಕೆ ಅಗತ್ಯವಾದ ಪರಿಕರಗಳು ಆ ಕಾವ್ಯದ ಬಗ್ಗೆ ಪ್ರೀತಿಯಿಲ್ಲದಲ್ಲಿ ಲಭ್ಯವಾಗುವುದಿಲ್ಲ. ತಿರುಮಲೇಶರ ಕವಿತೆಗಳು, ಅಲ್ಲಿಯ ಸಾಲುಗಳು ನನ್ನನ್ನು ಬೆನ್ನಟ್ಟಿದಾಗ, ಅನೇಕ ಬಾರಿ ಅವುಗಳ ಹೆಜ್ಜೆ ಸಪ್ಪಳವನ್ನು ಕೇಳಿಸಿಕೊಂಡಿದ್ದೇನೆ. ಆ ಉತ್ಸಾಹವನ್ನು ಇನ್ನೊಬ್ಬರ ಜೊತೆ ಹಂಚಿಕೊಳ್ಳಲು, ಇಷ್ಟವಾದ ಕವಿತೆಗಳನ್ನು ಹೆಕ್ಕಿ ಹೆಕ್ಕಿ ಮತ್ತೆ ಮತ್ತೆ ಓದಬೇಕು. ಅಂಥ ಸೌಕರ್ಯವಿಲ್ಲದೇ, ಹೀಗೊಂದು ಚಿಕ್ಕ ಲೇಖನದ ಮೂಲಕ ಅದನ್ನು ಮಾಡುವ ಪ್ರಯತ್ನದ ಮಿತಿಗಳನ್ನು ಓದುಗರು ಗಮನಿಸಬೇಕೆಂದು ಕೋರುತ್ತೇನೆ. ■

ವಿಚಾರ ಸಂಗಮ

ನಮ್ಮ ರಾಜಕೀಯ ಪ್ರಜ್ಞೆ

ಸರ್ಕಾರದ ಧ್ಯೇಯ/ಧೋರಣೆ/ಕಲಾಪಗಳಲ್ಲಿ 'ಎಚ್ಚರದ ಆಸಕ್ತಿ' ಬೆಳೆಯುವ ಯುವ ಮನಸ್ಸಿನ ಅಂಗವಾಗಿ ಯಾಕೆ ಉಳಿದಿಲ್ಲ? 'ಕಂಗೆಟ್ಟ ಚೈತನ್ಯ'ದ ಯುವ ಜನಾಂಗಕ್ಕೆ ಮತ್ತು ಇದರದೇ ನಂತರದ ದಣಿದ ರೂಪವಾದ 'ದುಡಿಯುವ ಮಧ್ಯಮ ವರ್ಗ'ಕ್ಕೆ political orientation ಯಾಕಿಲ್ಲ? ರಾಜಕೀಯ ಪ್ರಜ್ಞೆ ಕೇವಲ ವೃತ್ತಿಪರ, ಸಕ್ರಿಯ ರಾಜಕಾರಣಿಗಳಿಗೆ ಮಾತ್ರ ಎಂಬ ಧೋರಣೆ ಯಾಕೆ ತಳವೂರಿದೆ?
ಇದು ನಮ್ಮ ಸಾಮಾಜಿಕ, ನೈತಿಕ ಅಧಃಪತನಕ್ಕೆ ಇಂಬು ಕೊಡುತ್ತಿದೆಯೆ? ಸ್ವಾರ್ಥ, ಭ್ರಷ್ಟ ಮುಂದಾಳುಗಳು ಪರೋಕ್ಷವಾಗಿ ಈ ಸ್ಥಿತಿಯನ್ನೇ ಪೋಷಿಸಿಕೊಂಡು ಬಂದಿದ್ದಾರೆಯೆ?
ಇದನ್ನು ಬದಲಾಯಿಸಬೇಕಾದ ಅಗತ್ಯವಿದೆಯೆ? ಹಾಗಿದ್ದಲ್ಲಿ, ಈ ದಿಶೆಯಲ್ಲಿ ಮೊದಲ ಹೆಜ್ಜೆಗಳು ಯಾವವು?

ನಾವು ಕೇಳಿದ ಪ್ರಶ್ನೆಗಳಿಗೆ ನಾಡಿನ ರಾಜಕೀಯ ಧುರೀಣರು, ವಿಷಯತಜ್ಞರು, ಚಿಂತಕರು ನೀಡಿದ ಚಕಮಕಿ ಉತ್ತರಗಳು ಇಲ್ಲಿವೆ.

ಬನ್ನಿ, ಚಿಂತನೆಯಲ್ಲಿ ನೀವೂ ಪಾಲ್ಗೊಳ್ಳಿ.

ಬಿ.ವಿ. ನಾಯಕ

ಸಾಯುವುದು ಹುಡುಗರು, ರಾಜಕಾರಣಿಗಳಲ್ಲ

ಹುಂಬ ಮೇಳ : ಸ್ಟೀಫನ್ ಹಾಕಿಂಗ್ಸ್ ಲೆಕ್ಚರ್ ಕೇಳಿದವರಲ್ಲಿ ಎಷ್ಟು ಮಂದಿಗೆ ಅವರ ಏಂಟೀ ಡಿಟರ್‌ಮಿನಿಸ್ಟ್ ವಿಚಾರಧಾರೆ ಹಿಡಿಸಿತೋ ತಿಳಿಯದು. ಆದರೆ, ಆನಂತರದಲ್ಲಿ ಬಂದ ಅವರ ಸಿಬ್ಬಂದಿಗಳ ಉದ್ಗಾರ ಮಾತ್ರ ಅತ್ಯಂತ ಅರ್ಥಭರಿತವಾಗಿದೆ. ಪತ್ರಕರ್ತನೊಬ್ಬ ಹಾಕಿಂಗ್ಸ್‌ರಿಗೆ, 'ತಾವು ಕುಂಭಮೇಳದಲ್ಲಿ ಗಂಗಾ ಸ್ನಾನ ಮಾಡುವಿರಾ?' ಎಂದು ಕೇಳಿದನಂತೆ. ಇದು ಜಗತ್ತಿನ ಅತಿ ತೀಕ್ಷ್ಣ ಬುದ್ಧಿಯವನಿಗೆ ಹಾಕಿದ ಅತಿ ಮಂಕು ಪ್ರಶ್ನೆ ಎಂದು ಅವರ ವಕ್ತಾರ ತಿಳಿಸಿದರಂತೆ. ಆದರೆ ಸ್ಟೀಫನ್ ಉತ್ತರಿಸಿದಂತೆ ಕಾಣುವದಿಲ್ಲ. ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್-ರಾಜಕೀಯ ಚೌಕಟ್ಟಿಗೆ ಒಳಪಟ್ಟು ಸ್ಟೀಫ್‌ನ್‌ರು ಏನಾದರೂ ನುಡಿದಿದ್ದರೆ, ಅದು ಫಿಝಿಕ್ಸ್ ಪ್ರೊಫೆಸರ್ ಮುರಲೀ ಮನೋಹರ ಜೋಷಿ (ಕೇಂದ್ರ ಶಿಕ್ಷಣ ಮಂತ್ರಿ)ಗೆ, ಕಾರ್ಯಕ್ರಮ ಏರ್ಪಡಿಸಿದವರಿಗೆ ಅವಮಾನವಾಗುತ್ತಿತ್ತು.

ಇದಕ್ಕೆ ಕಾರಣ ಧರ್ಮ ಮತ್ತು ವಿಜ್ಞಾನದಲ್ಲಿರುವ ಮೂಲಭೂತ ವಿರೋಧಾಭಾಸ. ಒಕ್ಕಲುತನದ ವಿಜ್ಞಾನಿ ಮನೆಯಲ್ಲಿ ತುಳಸೀಗಿಡಕ್ಕೆ ಉಚ್ಚಿ ಹೊಯ್ಯುತ್ತಾನೆ. ಇದು ರಾಯಿಟೋ? ರಾಂಗೋ? ವಿಜ್ಞಾನಿ ಏನೇ ಮಾಡಿದರೂ, ರಾಜಕಾರಣಿ ಮಾತ್ರ ಬಹಿರಂಗವಾಗಿ ಉಚ್ಚಿ ಹೊಯ್ಯುವುದಿಲ್ಲ. ರಾತ್ರಿ ಹೊಯ್ಯುತ್ತಾನೆ.



ಮಾಜಿ ಸಂಸದ, ಪತ್ರಕರ್ತ, ರಾಜಕೀಯ ಚಿಂತಕ ಬಿ.ವಿ. ನಾಯಕ ಉತ್ತರ ಕನ್ನಡ ಜಿಲ್ಲೆಯ ಮಾದನಗೇರಿಯಲ್ಲಿದ್ದಾರೆ.

'ಯುಥ್ ಮೂವ್ಹ್‌ಮೆಂಟ್' ಮೂಲಭೂತವಾಗಿ ಫ್ಯಾಸಿಸ್ಟು. ಹಿಟ್ಲರನಿಗೆ ಅಧಿಕಾರಕ್ಕೆ ಬರಲು ನಿರುದ್ಯೋಗಿ ಯುವಕರ ಅವಶ್ಯಕತೆಯಿತ್ತು. ಆತ ಜರ್ಮನಿಯಲ್ಲಿ ಅಂದು ಬೃಹತ್ ಸಂಖ್ಯೆಯಲ್ಲಿದ್ದ ಯುವಕರನ್ನು ಬಳಸಿಕೊಂಡ ನಂತರ, ಇದೇ ಯುವಕರು ದ್ವಿತೀಯ ಮಹಾಯುದ್ಧದಲ್ಲಿ ದುಡಿದರು. ಆದ್ದರಿಂದ, ರಾಜಕಾರಣಿಗಳು ಫ್ಯಾಸಿಸ್ಟರೇ ಇರಲಿ ಕಮ್ಯುನಿಸ್ಟರೇ ಇರಲಿ ಯುವಕರನ್ನು ಎತ್ತಿಕಟ್ಟುತ್ತಾರೆ, ಯಾಕೆ? ಮುಂದೆ ಸಾಯಲಿಕ್ಕೆ. ಜೀವಿಸಲಿಕ್ಕಲ್ಲ. ಕಾರ್ಗಿಲ್ ಯುದ್ಧವೇ ಇರಲಿ, ಕಾಶ್ಮೀರ ಕಲಹವೇ ಇರಲಿ ಸಾಯುವವರು ಹುಡುಗರು, ರಾಜಕಾರಣಿಗಳಲ್ಲ (ಫರ್ನಾಂಡೀಸ ಇತ್ಯಾದಿ).

ಇಂದು ಹುಂಬ ಮೇಳಕ್ಕೂ, ಕರಸೇವೆಗೂ, ಸ್ವಾತಂತ್ರ್ಯ ದಿನೋತ್ಸವಕ್ಕೂ ಗಣರಾಜ್ಯ ದಿನಕ್ಕೂ ಪಗಾರಿಲ್ಲದ ಯುವಕ-ಯುವತಿಯರನ್ನು ಬಳಸಿಕೊಳ್ಳಲಾಗುತ್ತಿದೆ. ಯುವ ಆಂದೋಲನ ತನ್ನ ಪಾಶವೀ ಫ್ಯಾಸಿಸ್ಟ್ ಚರಿತ್ರೆಯಿಂದ ಹಿಂದೆ ಸರಿಯಬೇಕಾಗಿದೆ. ಅಲ್ಲಿಯವರೆಗೂ ಹುಂಬ ಮೇಳವನ್ನು ಕುಂಭ ಮೇಳವೆಂದು ಕರೆಯಲೇಬೇಕು.



ಹಾಲಿ ಸಂಸದ ವಿಜಯ ಸಂಕೇಶ್ವರ, ವಿಆರ್‌ಎಲ್ ಬಳಗ ಮತ್ತು ಆನಂದ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಸಂಚಾಲಕರಾಗಿದ್ದಾರೆ.

ವಿಜಯ ಸಂಕೇಶ್ವರ

ಬ್ಯೂರೋಕ್ರಸಿಯ ನೆರಳು

ಭ್ರಷ್ಟ ಬ್ಯೂರೋಕ್ರಸಿ ಮತ್ತು ಭ್ರಷ್ಟ ರಾಜಕಾರಣ ಎರಡೂ ಇದಕ್ಕೆ ಕಾರಣ. ರಾಜಕಾರಣಿಯನ್ನು ಎಲ್ಲಕ್ಕೂ ಹೊಣೆಗಾರರನ್ನಾಗಿಸುವ ನಾಗರಿಕ, ಅವಶ್ಯಕತೆ ಬಿದ್ದಾಗ ಬ್ಯೂರೋಕ್ರಸಿಯ ಭ್ರಷ್ಟತೆಯನ್ನು ಕಣ್ಮುಚ್ಚಿ ಪೋಷಿಸುತ್ತಾನೆ ಮತ್ತು ಈತ ಮತದಾನವೆಂಬ ತನ್ನ ಅಮೂಲ್ಯ ಹಕ್ಕನ್ನು ಚಲಾಯಿಸಲೂ ಆಸ್ಥೆ ತೋರುವುದಿಲ್ಲ.

ನಾಗರಿಕ, ಮತವನ್ನು ಹಾಕಲೇಬೇಕು. ಇಲ್ಲವಾದರೆ ಭ್ರಷ್ಟತೆಯನ್ನು ದೂರುವ, ಎದುರಿಸುವ ನೈತಿಕ ಹಕ್ಕು ಅವನಿಗೆ ಶಕ್ಯವಾಗುವುದಿಲ್ಲ. ಜಾತಿ, ಹಣ ಇವುಗಳಿಂದ ನಮ್ಮ ಚುನಾವಣೆಯ ಆಯ್ಕೆಗಳು ವಿಕೃತಗೊಂಡಿವೆ. ಹೀಗಾಗಿ ಸುಶಿಕ್ಷಿತ ಹೊಸ ತಲೆಮಾರು ಅದರ ಉಸಾಬರಿಯೇ ಬೇಡ ಎಂದು ಹಿಂಜರಿಯುತ್ತಿದೆ.

ಒಳ್ಳೆಯ ಚಾರಿತ್ರ್ಯವುಳ್ಳ ಹುರಿಯಾಳುಗಳು, ಭ್ರಷ್ಟ ಬ್ಯೂರೋಕ್ರಸಿಯ ವಿರುದ್ಧ ಕಠಿಣ ಕ್ರಮ ಮತ್ತು ಎಚ್ಚರದ ಮತದಾನ-ಇವುಗಳೇ... ಶುದ್ಧ ರಾಜಕೀಯ ವಾತಾವರಣ ಕಲ್ಪಿಸುವ ಮುಖ್ಯ ಮಾರ್ಗಗಳಾಗಿವೆ.

ರಾ.ಲ.ಮು. ಪಾಟೀಲ

'ಚಲ್ತಾ ಹೈ' ಧೋರಣೆ ಹೋಗಬೇಕು

ಒಂದೇ ಮಾತಿನ ಉತ್ತರ ನೀಡಬೇಕೆಂದರೆ: 'ಆದರ್ಶಹೀನತೆ'

ಆದರ್ಶವನ್ನು ಮಾನವ ಜೀವಿಗಳು ಮಾತ್ರ ಹೊಂದಬಲ್ಲರು. 'ಎಲ್ಲಿ ಆದರ್ಶಗಳೇ ಇಲ್ಲವೋ ಅಲ್ಲಿ ಜನರು ಅಧಃಪತನ ಹೊಂದುತ್ತಾರೆ' (Where there is no vision, people perish) ಎಂಬ ಮಾತು ಎಂದಿಗೂ ಸತ್ಯ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಆದರ್ಶಗಳನ್ನು ಕಾಣುತ್ತೇವೆ. ಗೋಖಲೆ, ಟಿಳಕ, ಫುಲೆ, ನಾರಾಯಣ ಗುರು, ಪೆರಿಯಾರ, ಸಾವರಕರ, ಭಗತಸಿಂಹ, ಗಾಂಧಿ ಮುಂತಾದವರು ಸಮಾಜದಲ್ಲೂ ಹೊಸ ಪ್ರಜ್ಞೆ ಮೂಡಿಸಿದರು. ಸ್ವಾತಂತ್ರ್ಯ ಕಾಲಿಡುತ್ತಲೇ ನಮ್ಮ ಮುಖಂಡರಲ್ಲಿ ಆದರ್ಶಗಳು ಮಾಯವಾಗತೊಡಗಿದವು. 50 ವರ್ಷಗಳ ಅವಧಿಯಲ್ಲಿ ಅವೆಲ್ಲವೂ ವಿಕೃತಗೊಂಡಿವೆಯೆಂದರೆ ತಪ್ಪಾಗಲಾರದು. ಭ್ರಷ್ಟಾಚಾರ, ಅಜ್ಞಾನಿಗಳ ಶಾಸನ, ಚೈತನ್ಯಹೀನ ಜನತೆ ಹಾಗೂ ವೈಚಾರಿಕ ದಾರಿದ್ರ್ಯ ಇವೆಲ್ಲ ಇಂದು ತಾಂಡವವಾಡುತ್ತಿವೆ.

ಇಂತಹ ಬೆಳವಣಿಗೆಗೆ ಜನರನ್ನೇ ದೂಷಿಸುವುದು ಸಲ್ಲದ ಅಪರಾಧ. ನಮ್ಮ ಇಂದಿನ ಸಾಮಾಜಿಕ ಸ್ಥಿತಿ-ಗತಿಯಲ್ಲಿ, ಜನರ ದೋಷಕ್ಕಿಂತ ನಾಯಕರ ದೋಷವು ಹೆಚ್ಚಾಗಿ ಕಾಣುತ್ತದೆ.

ಆದರ್ಶಗಳು ಬಲು ಎತ್ತರವಾದುದಾಗಿರಬೇಕು. ಅವನ್ನು ಧ್ಯೇಯವಾಗಿಟ್ಟುಕೊಂಡು ಜೀವನಪರ್ಯಂತ ಸಾಧನೆ ಗೈಯುವಂತಿರಬೇಕು. ಅವನ್ನೇ ಸತ್ಯ ಹಾಗೂ ಶಾಶ್ವತವೆಂದು ತಿಳಿದು ತನ್ನ ಪ್ರಾಣವನ್ನೂ ಸಹ ತ್ಯಾಗ ಮಾಡುವಂತೆ ಜನರಿಗೆ ಅವು ಪ್ರೇರೇಪಿಸಬೇಕು. ಅವು ಎಷ್ಟೊಂದು ಶಕ್ತಿಶಾಲಿಯಾಗಿರಬೇಕೆಂದರೆ ಅವುಗಳ ಮಾರ್ಗದಲ್ಲಿ ಕ್ರಮಿಸುವ ಸಾಧಾರಣ ಜೀವಿಗಳಿಗೂ ಹೊಸ ಶಕ್ತಿಯೊಂದು ತಮ್ಮಲ್ಲಿ ಸಂಚರಿಸುತ್ತಿದೆಯೆಂಬ ಭಾವನೆ ಮೂಡಿಬರಬೇಕು.

ಸ್ವಾತಂತ್ರ್ಯವೆಂಬ ಅಂದಿನ ಶಕ್ತಿಶಾಲಿ ಮಂತ್ರಕ್ಕೆ ಇಂದು ಇನ್ನೊಂದು ಸಮಬಲ ಮಂತ್ರವಿಲ್ಲದಾಗಿದೆ. ಅಭಿವೃದ್ಧಿ, ಸಮಾನತೆ ಎಂಬ ಮಾತುಗಳು ಬರಿ ಗಾಳಿಯಾಗಿ ಸತ್ವಹೀನವಾಗಿವೆ. ಚುನಾವಣೆಯ ಕಾಲದಲ್ಲಿ ಮತಗಳನ್ನು ಆಕರ್ಷಿಸುವ ಸಾಧನಗಳು ಬಲಿಷ್ಠವಾಗಿವೆ. ತ್ಯಾಗ, ಶ್ರಮಗಳನ್ನು ಬಯಸುವ ಆದರ್ಶಗಳಿಗೆ ಇಂದು



ದೆಹಲಿ, ಮದ್ರಾಸ್‌ಗಳಲ್ಲಿ ಪ್ರಾಧ್ಯಾಪನ ಮಾಡಿ ಈಗ ಬೆಂಗಳೂರು ವಿಶ್ವವಿದ್ಯಾಲಯ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುವ ರಾ.ಲ.ಮು. ಪಾಟೀಲ, ರಾಜಕೀಯ ಜಿಜ್ಞಾಸು.

ಸ್ಥಾನ-ಮಾನಗಳಿಲ್ಲವಾಗಿದೆ. ಅಶೋಕ ಮೆಹ್ತಾ ಪ್ರಧಾನಿ ನೆಹ್ರೂರ ಬಗ್ಗೆ ಆಡಿದ (ಬರೆದ) ಮಾತೊಂದು ಹೀಗಿದೆ: ಅವರಿಗೆ ಸಮಾಜವಾದವೆಂಬುದು ಘೋಷಣೆಯಾಗಿತ್ತಲ್ಲದೇ (slogan) ಆದರ್ಶವಾಗಿರಲಿಲ್ಲ (not a doctrine). ಟೊಳ್ಳು ಸಮಾಜವಾದದ ಜೊತೆ ಜೊತೆಗೆ ಪೊಳ್ಳು secularismನ್ನೂ ಅರಸುತ್ತ ನಮ್ಮ ದೇಶ 50 ವರ್ಷಗಳನ್ನು ವ್ಯಯಿಸಿದೆ. Parliamentary democracy ಹಾಗೂ ಅಂತಾರಾಷ್ಟ್ರೀಯ ಕ್ಷೇತ್ರದಲ್ಲೂ ಅಲಿಪ್ತ-ನೀತಿಯನ್ನು ಪಾಲಿಸುವುದರ ಮೂಲಕ ಭವ್ಯ ಭಾರತ ಕಟ್ಟುವ ಕನಸಿಗೆ ಹುಸಿ ಕಂಬಗಳ ತಳಪಾಯ ಹಾಕಿದ್ದೇವೆ.

ವ್ಯಕ್ತಿಪೂಜೆಯ ರಾಜಕಾರಣ ಹೋಗಿ, ವಿಚಾರ-ನಿಷ್ಠ ರಾಜಕಾರಣ ಬರಬೇಕು. ನಮ್ಮ ಸಮಾಜದಲ್ಲಿ, ಜನಜೀವನದಲ್ಲಿ ಸುಪ್ತವಾದ ಚೇತನವನ್ನು ಬಡಿದೇಳಿಸಬೇಕು. ಲಂಡನ್, ನ್ಯೂಯಾರ್ಕ್, ಮಾಸ್ಕೋ, ಬೀಜಿಂಗ್‌ಳಿಂದಲ್ಲ, ನಮ್ಮ ನೆಲದಿಂದ ಜನಿಸಿ ಬಂದಂತಹ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಕಲ್ಪನೆಗಳು ಮಾತ್ರ ನಮ್ಮನ್ನು ಪೋಷಿಸಬಹುದು. ವೈಚಾರಿಕ orientation (ನೆಲೆ) ತಪ್ಪಾಗಿ ನಿಂತಿದ್ದು, ಅದನ್ನು ಮೊದಲು ಸರಿಪಡಿಸಬೇಕಾಗಿದೆ.

ಈ ದಿಶೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳು? ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಪರಿವರ್ತನೆ, ಸಂವಿಧಾನದಲ್ಲೂ ಮಾರ್ಪಾಡು, ಆಡಳಿತದಲ್ಲಿ ಸುಧಾರಣೆ ಹಾಗೂ ಸಾಮಾಜಿಕ ಜೀವನದಲ್ಲಿ 'who cares?', 'ಸಬ್ ಚಲ್ತಾ ಹೈ' ಎಂಬ ಧೋರಣೆಯಲ್ಲೂ ಬದಲಾವಣೆ. ಇವು ಚಿಕ್ಕ ಕ್ರಮಗಳಲ್ಲ; ಆದರೆ ಅಸಾಧ್ಯವೂ ಅಲ್ಲ.

ಎರಡೇ ಮುಖ್ಯ ರಾಜಕೀಯ ಪಕ್ಷ

ಹೇಮಲತಾ ಮಹಿಷಿ

ನಮ್ಮ ದೇಶದಲ್ಲಿ 'ರಾಜಕೀಯ', 'ರಾಜಕಾರಣ', 'ರಾಜಕಾರಣಿ' ಪದಗಳು ಕೆಟ್ಟ ಅರ್ಥವನ್ನು ಪಡೆದುಕೊಂಡು, ಜನಸಾಮಾನ್ಯರು ರಾಜಕೀಯ ಪ್ರಜ್ಞೆ, ಎಚ್ಚರ, ಆಸಕ್ತಿ ಬೆಳೆಸಿಕೊಂಡು ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯ ಪಾತ್ರ ವಹಿಸದಂತೆ ಮಾಡಿವೆ. 'ರಾಜಕೀಯ'ವೆಂದರೆ ಲೋಭ-ದುರಾಸೆ-ಸ್ವಾರ್ಥದಿಂದ ಕೂಡಿದ ಜನರನ್ನು ಗುಂಪು ಗೂಡಿಸಿಕೊಂಡು ನಾಯಕತ್ವದ ಪಟ್ಟಕ್ಕೇರಿ ಅಧಿಕಾರ, ಪ್ರಭಾವ ಗಳಿಸುವುದು, ನಂತರ ಹಿಂಬಾಲಕರನ್ನು ತೃಪ್ತಿಪಡಿಸುತ್ತಾ, ನಾಯಕತ್ವ ಉಳಿಸಿಕೊಳ್ಳಲು ಪ್ರಯತ್ನಿಸುವುದು. 'ರಾಜಕಾರಣ' ವೆಂದರೆ ತಮ್ಮಂತೆ ಅಥವಾ ಬೇರೆ ಉತ್ತಮ ಮಾರ್ಗದಲ್ಲಿ ಬೆಳೆಯಲು ಪ್ರಯತ್ನಿಸುವವರ ಕಾಲು ಹಿಡಿದು ಕೆಳಕ್ಕೆ ಜಗ್ಗುವುದು, ತಲೆ ಎತ್ತದಂತೆ ಮಾಡುವುದು. ಇಂತಹುದನ್ನೆಲ್ಲಾ ಯಶಸ್ವಿಯಾಗಿ ಮಾಡುತ್ತ, ಬಹುಕಾಲ ಅಧಿಕಾರ ಸ್ಥಾನದಲ್ಲಿ ಇದ್ದು ಪ್ರಭಾವವನ್ನು ಉಳಿಸಿಕೊಳ್ಳುವವನೇ ನಮ್ಮ ದೇಶದ ಯಶಸ್ವಿ ರಾಜಕಾರಣಿ. ಸ್ವಾತಂತ್ರ್ಯ ಪೂರ್ವದ ರಾಜಕಾರಣಿಗಳನ್ನು ಇಂದಿನ ರಾಜಕಾರಣಿಗಳೊಂದಿಗೆ ಹೋಲಿಸಿದಾಗ, ರಾಜಕೀಯ ಕ್ಷೇತ್ರದಲ್ಲಿನ ಅಧಃಪತನ ಸ್ಪಷ್ಟವಾಗುತ್ತದೆ. ಯುವ ಜನಾಂಗಕ್ಕಾಗಲೀ, ದುಡಿಯುವ ಮಧ್ಯಮ ವರ್ಗಕ್ಕಾಗಲೀ ಕಣ್ಮುಂದೆ ಯಾವುದೇ ಅನುರೂಪ ಮಾದರಿಗಳಿಲ್ಲದೇ, ಎಲ್ಲರಲ್ಲಿ ಒಂದು ರೀತಿಯ ಸಿನಿಕತೆ ತಲೆದೋರಿದೆ, ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವೇ ಇಲ್ಲ ಎನ್ನುವ ಮಾನಸಿಕ ಸ್ಥಿತಿ ಉಂಟಾಗಿದೆ.

ವಿ.ಎಸ್. ಶ್ರೀಧರ

ರಾಜಕೀಯದ ಒಳಗೆ, ಹೊರಗೆ

ಬಹಳ ಜನರಿಗೆ, ಅದರಲ್ಲೂ ವಿದ್ಯಾವಂತ ಮಧ್ಯಮ ವರ್ಗಕ್ಕೆ, ರಾಜಕೀಯ ಎಂದರೆ ಒಂದು ಬೊಗಸೆ ಟೈಮ್‌ಪಾಸ್ ಕಡ್ಲೆಕಾಯಿಯಿದ್ದಂತೆ. ರಾಜಕಾರಣಿಗಳನ್ನು, ಅವರ ಹೊಲಸು ಕೃತ್ಯಗಳನ್ನು, ಒಂದು ಸುತ್ತು ಬೈದು ಮುಗಿಸಿದ ಮೇಲೆ, 'ನೀವು ಏನೇ ಹೇಳಿ ಸಾರ್, ಇಡೀ ಸಿಸ್ಟಮ್ಮೇ ಬದಲಾಗಬೇಕು' ಎಂಬ ಠರಾವನ್ನು ಇನ್ಯಾರಾದರೂ ಮುಂದಿಡುತ್ತಾರೆ. ಕಡೆಗೆ ಮತ್ತೊಬ್ಬರು, ಧರ್ಮಭೀರು ಪ್ರವಾದಿಯಂತೆ, 'ನಾವೇ ಅಲ್ವೇನ್ರಿ ಸಿಸ್ಟಮ್ ಅಂದರೆ? ಎಲ್ಲಾ ನಮ್ಮದೇ ಮಿಸ್ಟೇಕ್ ಕಣ್ರೀ' ಎಂದು, ಆ ಹೊತ್ತಿನ ರಾಜಕೀಯ ಚರ್ಚೆಗೆ ಮುಕ್ತಾಯ ಹಾಡುತ್ತಾರೆ. ಮತ್ತೊಮ್ಮೆ ಇಂಥದೇ ಚರ್ಚೆ ಯಾಗುವವರೆಗೆ ಎಲ್ಲರೂ ತಮ್ಮ ವರಾತಗಳಲ್ಲಿ ಮುಳುಗಿ ಹೋಗುತ್ತಾರೆ. ಈ ಮಾತುಗಳನ್ನೇನಾದರೂ ಕೇಳಿಸಿಕೊಂಡರೆ, ನಾಳೆಯೇ ಈ ದೇಶದಲ್ಲಿ ಕ್ರಾಂತಿಯಾಗಿಬಿಡಬಹುದೇನೋ ಎನಿಸಿಬಿಡುತ್ತದೆ. ಆದರೆ ಅಂಥದ್ದೇನೂ ಆಗಲಾರದು ಎಂಬ ಭರವಸೆ ಕೂಡ.

ಆದರೆ ಇನ್ನೊಂದು ತುದಿಯಲ್ಲಿ, ಎಲ್ಲದಕ್ಕೂ



ಸ್ಪಷ್ಟವಾದ ಧ್ಯೇಯ, ಧೋರಣೆಗಳನ್ನು ಹೊಂದಿದ ಎರಡೇ ಮುಖ್ಯ ರಾಜಕೀಯ ಪಕ್ಷಗಳು ಇದ್ದು, ಅವುಗಳನ್ನು ಜಾರಿಗೆ ತರುವ ದೃಢ ನಿರ್ಧಾರ ಆ ಪಕ್ಷಗಳಿಗೆ ಇದ್ದಲ್ಲಿ, ಜನಸಾಮಾನ್ಯರಿಗೂ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಇಂದಿನ ನಮ್ಮ ರಾಜಕೀಯ ಪಕ್ಷಗಳು, ಧ್ಯೇಯ ಧೋರಣೆಗಳನ್ನು ಎತ್ತಿಹಿಡಿಯುವುದರ ಬದಲು ವ್ಯಕ್ತಿಬದ್ಧವಾಗಿವೆ. ಆ ವ್ಯಕ್ತಿಗಳು ಅಧಿಕಾರ ಸ್ಥಾನ ಪಡೆಯಲು ಯಾವುದೇ ರೀತಿಯ ಹೊಂದಾಣಿಕೆ ಮಾಡಿಕೊಳ್ಳಲು ಸದಾ ಸಿದ್ಧರಿರುತ್ತಾರೆ. ತಮ್ಮ ಪಕ್ಷವನ್ನು ಒಡೆಯುತ್ತಾರೆ, ಹೊಸ ಪಕ್ಷ ಕಟ್ಟುತ್ತಾರೆ, ಪಕ್ಷ ಬದಲಾಯಿಸುತ್ತಾರೆ. ಇಂತಹ ರಾಜಕಾರಣದಲ್ಲಿ ವೃತ್ತಿಪರ ರಾಜಕಾರಣಿಗಳನ್ನು ಹೊರತುಪಡಿಸಿ ಮತ್ತಾರಿಗೆ ಆಸಕ್ತಿ ಇರಲು ಸಾಧ್ಯ? ಮಧ್ಯಮ ವರ್ಗದವರಂತೂ ತಮ್ಮ ದುಡಿಮೆ, ಕೌಟುಂಬಿಕ ಜವಾಬ್ದಾರಿ, ತಮ್ಮ ಸಣ್ಣಪುಟ್ಟ ಕನಸುಗಳಲ್ಲಿ ಮಗ್ನರಾಗಿರುತ್ತಾರೆ. ರಾಜಕೀಯ ಪ್ರಜ್ಞೆ ಪತ್ರಿಕೆ ಓದುವುದಕ್ಕೆ, ಮಧ್ಯಾಹ್ನದ ಊಟದ ಬಿಡುವಿನಲ್ಲಿ ಸ್ನೇಹಿತರೊಂದಿಗೆ ಚರ್ಚಿಸುವುದಕ್ಕೆ, ರಾಜಕಾರಣಿಗಳನ್ನು ಬಯ್ಯುವುದಕ್ಕಷ್ಟೇ ಸೀಮಿತ.

ಯುವ ಜನಾಂಗವಂತೂ ಓದು, ನಂತರ ಒಂದು ಒಳ್ಳೆಯ ನೌಕರಿ ಹಿಡಿದು ನೆಮ್ಮದಿಯ ಜೀವನ ನಡೆಸುವುದನ್ನು ಮುಖ್ಯಲಕ್ಷ್ಯವಾಗಿ ಇಟ್ಟುಕೊಂಡಿರುತ್ತದೆ. ರಾಜಕಾರಣವನ್ನು ಮುಂದೆ ವೃತ್ತಿಯಾಗಿ ಸ್ವೀಕರಿಸಲು ವಿಚಾರ ಮಾಡುವ ಯುವಕರು ಮಾತ್ರ ವಿದ್ಯಾರ್ಥಿ ಸಂಘಗಳ ಚುನಾವಣೆಗೆ ನಿಲ್ಲುತ್ತಾರೆ. ಈಗಾಗಲೇ ಅಧಿಕಾರ ಸ್ಥಾನದಲ್ಲಿರುವ ರಾಜಕಾರಣಿಗಳ ಸುತ್ತ-ಮುತ್ತ ಸುಳಿದಾಡುತ್ತಿರುತ್ತಾರೆ. ಅಲ್ಲಿಗೇ ಅವರ ರಾಜಕೀಯ ಪ್ರಜ್ಞೆ ಸೀಮಿತ ಇನ್ನು ಬಡಪಾಯಿ ಮಹಿಳೆಯನ್ನು ಕೇಳಬೇಕೆ? ರಾಜಕೀಯ ಕ್ಷೇತ್ರ ಅವರಿಗೆ ವರ್ಜ್ಯ. ರಾಜಕಾರಣಿಗಳಿಗೂ ಮಹಿಳೆಯರು ಅಲ್ಲಿ ಬರುವುದು ಬೇಡ- ಮಗಳು, ಹೆಂಡತಿ, ಸೊಸೆಯನ್ನು ಹೊರತುಪಡಿಸಿ. ಅವರಿಗೆ, ಕಲುಷಿತ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ ನೀವೂ ಕಲುಷಿತರಾಗಬೇಡಿ ಎನ್ನುವ ಬುದ್ಧಿವಾದ ಬೇರೆ! ಜನತೆಯ ಈ ಮಾನಸಿಕ ಜಡತೆಯಿಂದಾಗಿ ರಾಜಕೀಯ ಕ್ಷೇತ್ರ, ಸ್ವಾರ್ಥಿಗಳ, ಲೋಭಿಗಳ, ಕ್ರಿಮಿನಲ್‌ಗಳ ಆಶ್ರಯತಾಣವಾಗಿದೆ.

ನಾನು ಆಶಾವಾದಿ. ಎಲ್ಲವೂ ಇನ್ನೂ ಕಳೆದು ಹೋಗಿಲ್ಲ, ಪ್ರಳಯ ಕಾಲ ಸನ್ನಿಹಿತವಾಗಿಲ್ಲ. ಕೆಲವರಾದರೂ ಒಳ್ಳೆಯ ರಾಜಕಾರಣಿಗಳು ಇನ್ನೂ ಉಳಿದಿದ್ದಾರೆ. ಕೆಟ್ಟ ರಾಜಕಾರಣವನ್ನು ಖಂಡಿಸಬೇಕು, ಬಯಲಿಗೆಳೆಯಬೇಕು. ಆಗು-ಹೋಗುಗಳನ್ನು



ನ್ಯಾಯವಾದಿ, ಸಮಾಜ ಕಾರ್ಯಕರ್ತೆ ಮತ್ತು ಲೇಖಕಿ ಹೇಮಲತಾ ಮಹಿಷಿ ಬೆಂಗಳೂರಿನಲ್ಲಿದ್ದಾರೆ.

ಎಚ್ಚರದಿಂದ ಗಮನಿಸುತ್ತಿರಬೇಕು, ಎರಡು ಸಾಲುಗಳ ಮಧ್ಯೆ ಓದುವುದನ್ನು ಕಲಿಯಬೇಕು. ಸಂಘ-ಸಂಸ್ಥೆಗಳ ಮೂಲಕ ಸಕ್ರಿಯರಾಗಬೇಕು, ಪತ್ರಿಕೆಗಳ ಮೂಲಕ, ಬಹಿರಂಗ ಸಭೆಗಳ ಮೂಲಕ ಅಭಿಪ್ರಾಯ ರೂಪಿಸುವ ಕೆಲಸವಾಗಬೇಕು. ನಮ್ಮೊಡನಿರುವ ಸಮರ್ಥ ವ್ಯಕ್ತಿಗಳನ್ನು ಬೆಳೆಸಿ ನಾಯಕರನ್ನು ರೂಪಿಸಬೇಕು. ಚುನಾವಣೆಯ ಸಮಯದಲ್ಲಿ ಮತದಾನ ಮಾಡುವುದಲ್ಲದೇ ಒಳ್ಳೆಯ, ಸಮರ್ಥ ಅಭ್ಯರ್ಥಿಗಳ ಪರ ಪ್ರಚಾರ ಮಾಡಬೇಕು. ಉತ್ತಮ ಅಭ್ಯರ್ಥಿಗಳನ್ನು ನಿಲ್ಲಿಸುವಂತೆ ಪಕ್ಷಗಳನ್ನು ಒತ್ತಾಯಿಸಬೇಕು. ಸರ್ಕಾರದ ಜನಪರವಲ್ಲದ ಕಾರ್ಯಗಳನ್ನು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ಮೂಲಕ ನ್ಯಾಯಾಲಯದಲ್ಲಿ ಪ್ರಶ್ನಿಸಬೇಕು. ಜನತೆ ಇದ್ದಂತೆ ಅವರ ಪ್ರತಿನಿಧಿಗಳಿರುತ್ತಾರೆ. ಸರ್ಕಾರವಿರುತ್ತದೆ. ರಾಜಕೀಯ ಪ್ರಜ್ಞೆ-ಎಚ್ಚರವೇ ನಮ್ಮ ದೇಶದ ಭವಿಷ್ಯವನ್ನು ನಿರ್ಧರಿಸುತ್ತವೆ.

ಬಂದೂಕಿನ ನಳಿಕೆಯೇ ಉತ್ತರವೆಂಬಂತೆ, ಕ್ರಾಂತಿ ಕಾಳಗಕ್ಕೆ ತಯಾರಾದ ಯುವ ಪಡೆಯೂ ಇದೆ ಎನ್ನುವುದನ್ನು ಮರೆಯದಿರೋಣ. ಇವರನ್ನು, 'ದಾರಿ ತಪ್ಪಿದ ಮಕ್ಕಳು' ಎಂದು ಕರೆಯುವುದರ ಹಿಂದೆಯೂ, ಹತಾಶ ಮಧ್ಯಮ ವರ್ಗದ ದಣಿವನ್ನು, 'ಕಂಗೆಟ್ಟ ಚೈತನ್ಯ' ಎಂದುಕೊಳ್ಳುವುದರ ಹಿಂದೆಯೂ, ಒಂದೇ ರಾಜಕೀಯ ಧೋರಣೆ ಕೆಲಸ ಮಾಡುತ್ತಿರಬಹುದೇ? ಎಲ್ಲಾ ಹೋರಾಟಗಳನ್ನೂ, ಪ್ರತಿಭಟನೆಗಳನ್ನೂ, ಕೇವಲ ಕಾನೂನು-ವ್ಯವಸ್ಥೆಯ



ರಾಜಕಾರಣ, ಸಂಸ್ಕೃತಿ ಕುರಿತು ತೀವ್ರವಾಗಿ ಸ್ಪಂದಿಸುವ ವಿ.ಎಸ್. ಶ್ರೀಧರ ವೃತ್ತಿಯಿಂದ ಪ್ರಾಧ್ಯಾಪಕ, ಪ್ರವೃತ್ತಿಯಿಂದ ಲೇಖಕ.

ಸಮಸ್ಯೆಯನ್ನಾಗಿ ಮಾತ್ರ ನೋಡುವ ಸರ್ಕಾರದ ನೀತಿಯಿಂದಾಗಿ, ಕಂಗೆಟ್ಟ ಜನಸಾಮಾನ್ಯರನ್ನು ಇದರ ಹೊರಗೂ, ಸುಸ್ತಾದ ಮಧ್ಯಮ ವರ್ಗವನ್ನು ಇದರ ಒಳಗೂ ಕೂರಿಸಿ, ತನ್ನ ಆಳುವ ವರ್ಗದ ಹಿತಾಸಕ್ತಿಯನ್ನು ಮಾತ್ರ ಯಥಾಶಕ್ತಿ ಮುಂದುವರೆಸಿಕೊಂಡೇ ಬಂದಿರುವ ಪ್ರಭುತ್ವದ ರಾಜಕಾರಣ ಯಾರಿಗೂ ಅರಿವಾಗದಷ್ಟು ಸಂಕೀರ್ಣವಾಗಿಬಿಟ್ಟಿದೆಯೆ?

'ರಾಜಕೀಯ' ಎಂದರೆ ಏನು ಎನ್ನುವುದರ ವ್ಯಾಖ್ಯೆಯಲ್ಲಿರುವ, ಒಂದು ರೀತಿಯ ಉದ್ದೇಶಪೂರ್ವಕ ಗೊಂದಲವೇ, ಯುವ ಜನಾಂಗದ ಮತ್ತು ಮಧ್ಯಮ ವರ್ಗದ ಪೊಲಿಟಿಕಲ್ ಒರಿಯೆಂಟೇಷನ್ ಅನ್ನು ನಿರ್ದೇಶಿಸುತ್ತದೆ ಎಂದು ನನ್ನ ಅನಿಸಿಕೆ.

ರಾಜಕೀಯ ಎಂದರೆ ಏನು ಎಂದು ಕೇಳಿದರೆ ಸಿಗುವ ಸಾಮಾನ್ಯ ಉತ್ತರ: ಅದು ವೃತ್ತಿಪರ ರಾಜಕಾರಣಿಗಳ ಧೂರ್ತ ಕಾಯಕ; ಪಕ್ಷ ರಾಜಕೀಯದ ಅನಾಚಾರದ ದಂಧೆ ಅಥವಾ ದಿನನಿತ್ಯದ ವಹಿವಾಟಿನಲ್ಲಿರುವ ಸ್ವಾರ್ಥ... ಇತ್ಯಾದಿ. 'ರಾಜಕೀಯ' ಎಂದರೆ, ಬದುಕಿನ ಎಲ್ಲಾ ಸಮಸ್ಯೆಗಳನ್ನೂ ವಿಶ್ಲೇಷಿಸಲು ಬೇಕಾದ ಒಂದು ಪರಿಕಲ್ಪನೆ, ಚಿಂತನಾ ಕ್ರಮ ಅಥವಾ ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮ ಯೋಚನಾ ವಿಧಾನಗಳನ್ನೂ, ಸ್ವರೂಪವನ್ನೂ, ಪ್ರಜ್ಞೆಯನ್ನೂ ನಿಯಂತ್ರಿಸುವ ಒಂದು ಶಕ್ತಿ ಕೂಡ ಎನ್ನುವ ಪ್ರಜ್ಞೆ ಬೆಳೆಯಬೇಕು.


ಇದಕ್ಕೆ ಅತ್ಯಂತ ಸರಳ ಉದಾಹರಣೆ ಎಂದರೆ, ಈಗ ಎಲ್ಲೆಡೆ ರಾಚುತ್ತಿರುವ ಕೋಮುವಾದ. ಮಧ್ಯಮವರ್ಗದ ವಿದ್ಯಾವಂತ ಜನ, ನೇರವಾಗಿ ಕೋಮುವಾದಿಗಳಲ್ಲ. ಇವರ ದೈನಂದಿನ ಜೀವನದಲ್ಲಿ ಎಲ್ಲ ಜಾತಿಯವರೂ ಒಟ್ಟಿಗೇ ವ್ಯವಹರಿಸುತ್ತಿರುತ್ತಾರೆ, ಪರಸ್ಪರ ವೈಯಕ್ತಿಕ ನೆಲೆಯ ಪ್ರೀತಿ ಸಂಬಂಧಗಳೂ ಇರುತ್ತವೆ. ಆದರೂ ಬೇರೆ ಕೋಮಿನವರ ಬಗ್ಗೆ ಅಸಹನೆ, ಅಪನಂಬಿಕೆ ಇವರಲ್ಲಿ ಎಷ್ಟು ಆಳವಾಗಿ ಬೇರೂರಿರುತ್ತದೆ ಎಂದರೆ, ಸ್ವಲ್ಪ ಒಳ ಪದರವನ್ನು ಮೀಟಿದರೆ ಸಾಕು, ಯಾವ ಎಗ್ಗೂ ಇಲ್ಲದೆ, 'ಈ ಎಸ್ಸಿ, ಎಸ್ಟಿ, ಮುಸ್ಲಿಂರಿಂದಾಗಿಯೇ ಸಾರ್, ದೇಶ ಹಾಳಾಗುತ್ತಿರುವುದು' ಎಂಬ ತೀರ್ಪು ಹೊರಬೀಳುತ್ತದೆ. ನೀವು ಈ ಧೋರಣೆಯನ್ನು ಪ್ರಶ್ನಿಸಿದ ಕೂಡಲೇ, ಅವರಲ್ಲಿ ಉತ್ತರವಾಗಿ ಸಾವಿರ ಉದಾಹರಣೆಗಳು ತಯಾರಾಗಿರುತ್ತವೆ. ಕಣ್ಣೆದುರು ಕಂಡರೂ ನೋಡುವುದಕ್ಕೆ ಸಿದ್ಧರಿಲ್ಲದ ಕುರುಡರು ನೀವೇ ಎಂಬುದು ಅವರ ನಂಬಿಕೆಯಾಗಿ ಉಳಿದುಬಿಡುತ್ತದೆ. ಹೀಗೆ ಅವರನ್ನು ನಿಯಂತ್ರಿಸುತ್ತಿರುವ ಅನೇಕ ಪೂರ್ವಾಗ್ರಹಗಳ ಹಿಂದೆ ಅಗೋಚರವಾಗಿ ಕೆಲಸಮಾಡುತ್ತಿರುವ

ರಾಜಕೀಯ ಪ್ರೇರೇಪಣೆಗೆ ಹೇಗೆ ಅವರು ಪಕ್ಕಾಗಿದ್ದಾರೆಂದು ನೀವು ಏಷ್ಟೇ ವಿವರಿಸಿದರೂ, ಸುಲಭಕ್ಕೆ ಅವರಿಗೆ ಅದು ತಾಕುವುದೇ ಇಲ್ಲ. ಆಳುವ ವರ್ಗದ, ರಾಜಕಾರಣದ ಶಕ್ತಿ ಸಂಚಯದ ಗೆಲುವಿರುವುದೇ ಇಲ್ಲಿ. ರಾಜಕೀಯ ಎಲ್ಲ ಪೂರ್ವಾಗ್ರಹಗಳನ್ನೂ, ಐಡಿಯಾಲಜಿಗಳನ್ನೂ, ಸಾಮಾನ್ಯ ಜ್ಞಾನವಾಗಿಸಿ ಎಲ್ಲರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಹೀಗೆ.

ಈ ಅರ್ಥದಲ್ಲಿ, ಯಾರೂ, ಯಾವುದೂ 'ರಾಜಕೀಯ'ವೆಂಬ ವಲಯದ ಹೊರಗಿರಲು ಅಸಾಧ್ಯ. ನಿಜವಾದ ಆಯ್ಕೆಯ ಸ್ವಾತಂತ್ರ್ಯವೇ ಇಲ್ಲದ ಬದುಕನ್ನು ಬದುಕುತ್ತಿದ್ದೇನೆ ಎಂಬುದರ ಸುಪ್ತ, ಅಗೋಚರ, ಅಸ್ಪಷ್ಟ ಅರಿವೇ ಮಧ್ಯಮವರ್ಗದ ದಣಿವು, ಚೈತನ್ಯರಹಿತ ನಿರಾಸಕ್ತಿ, ಮತ್ತು ರಾಜಕೀಯದ ನಿಜವಾದ ಅರ್ಥದಿಂದ ಪಲಾಯನ ಮಾಡುವುದಕ್ಕೆ ಕಾರಣವಿರಬಹುದೆ?

ಯಾವುದೇ ಜನಪರ ಹೋರಾಟವನ್ನು ಗಮನಿಸಿದರೆ, ರಾಜಕೀಯ ಪ್ರಜ್ಞೆ, ಒಂದು ವಿಶಾಲ ಅರ್ಥದಲ್ಲಿ, ವಿದ್ಯಾವಂತ ಮಧ್ಯಮವರ್ಗಕ್ಕಿಂತಲೂ 'ಅಶಿಕ್ಷಿತ' ಜನಸಮುದಾಯದಲ್ಲೇ ಹೆಚ್ಚಾಗಿರುವುದನ್ನು ಕಾಣಬಹುದು. ಜನಸಾಮಾನ್ಯರನ್ನು ರೊಮ್ಯಾಂಟಿಸೈಜ್ ಮಾಡದೆಯೇ, ಈ ಸರಳ ಸತ್ಯವನ್ನು ಚರಿತ್ರೆಯಲ್ಲೂ, ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಹೋರಾಟಗಳಲ್ಲೂ ನೋಡಬಹುದಾಗಿದೆ. ಆದ್ದರಿಂದಲೇ, ಆಳುವ ವರ್ಗದವರಿಗೆ ರೈತ, ಕೂಲಿ ಕಾರ್ಮಿಕರ, ವಿದ್ಯಾರ್ಥಿಗಳ ರಾಜಕೀಯ ಪ್ರಜ್ಞೆಯ ಬಗ್ಗೆ ಅನುಮಾನ, ಆತಂಕ, ಭಯಗಳು ಯಾವಾಗಲೂ ಇರುತ್ತವೆ. ಕ್ವಿಟ್ ಇಂಡಿಯಾ ಕರೆಗೆ ಓಗೊಟ್ಟು ಚಳವಳಿಗೆ ಧುಮುಕಿದ ಅಸಂಖ್ಯಾತ ವಿದ್ಯಾರ್ಥಿಗಳು, ರೈತ-ಕೂಲಿ ಕಾರ್ಮಿಕರಿಗೆ ಬೇಕಾಗಿದ್ದ ವಿಮೋಚನೆಗೂ, ರಾಷ್ಟ್ರ ನಾಯಕರುಗಳಿಗಿದ್ದ ಸ್ವಾತಂತ್ರ್ಯದ ಪರಿಕಲ್ಪನೆಗಳಿಗೂ ಎಷ್ಟು ಅಜಗಜಾಂತರ ವ್ಯತ್ಯಾಸವಿತ್ತೆಂದರೆ, ಚಳವಳಿಯ ನೇತಾರರಿಗೆ, ಹೀಗೆ ಧ್ವನಿತವಾದ ಜನಸಾಮಾನ್ಯರ ರಾಜಕೀಯ ಪ್ರಜ್ಞೆಯನ್ನು, ಅವರ ಹೋರಾಟದ ದಾರಿಗಳನ್ನೂ ಮಣಿಸುವುದೇ ಪ್ರಮುಖ ಕಾಳಜಿಯಾಗಿಹೋಯಿತು. ನಲವತ್ತೆರಡರ ಚಳವಳಿಯಲ್ಲಿ ಜನಸಾಮಾನ್ಯರು ತೊಡಗಿಸಿಕೊಂಡ ರೀತಿಯ ಬಗ್ಗೆ ವ್ಯಾಖ್ಯಾನ ಮಾಡುತ್ತಾ, ಗಾಂಧೀಜಿಯವರೂ ಒಳಗೊಂಡಂತೆ, ನೆಹರು ಮತ್ತು ಪಟ್ಟಾಭಿ ಸೀತಾರಾಮಯ್ಯ ಇತ್ಯಾದಿ ನಾಯಕರು, 'ಕೋಪದಿಂದ ಹುಚ್ಚಾದ, ಬುದ್ಧಿ ಸ್ಥಿಮಿತತೆಯನ್ನು ಕಳೆದುಕೊಂಡ ಗುಂಪುಗಾರಿಕೆ, ಬಂಡುಕೋರುತನ' ಎಂದೇ ವರ್ಣಿಸಿದ್ದಾರೆ. ಇಲ್ಲಿ ಉಪಯೋಗಿಸಲಾಗಿರುವ ಉಪಮಾನ, ವರ್ಣನೆಗಳಿಗೂ ವಸಾಹತುಶಾಹಿಯ ದಮನಕಾರಿ ಆಡಳಿತದ ಭಾಷೆಗೂ ಇರುವ ಸಾಮ್ಯತೆ ಕಾಕತಾಳೀಯವೂ ಅಲ್ಲ, ಆಶ್ಚರ್ಯಕಾರಿಯೂ ಅಲ್ಲ ಎನ್ನುವುದನ್ನು ಮರೆಯಬಾರದು. ಜನತೆ ತನ್ನ ಬದುಕಿನ ವಿಮೋಚನೆಗೆ ಹೋರಾಟ ಮಾಡಿದಾಗಲೆಲ್ಲಾ, ಪ್ರಭುತ್ವ ಮತ್ತು ಅದರ ಇತರೆ ಅಂಗಗಳು ಎಚ್ಚತ್ತುಕೊಳ್ಳುತ್ತಿರುವ ಜನರ ರಾಜಕೀಯ ಪ್ರಜ್ಞೆಯನ್ನು ತಮ್ಮ ಮರಣಶಾಸನವೆಂದೇ ಅನುಮಾನಿಸುತ್ತವೆ.

ವಿಪರ್ಯಾಸವೆಂದರೆ ರಾಜಕೀಯ ಪ್ರಜ್ಞೆ, ಒಳನೋಟ, ಪ್ರತಿಭಟನೆಯ ಕಾವು ಅಲ್ಪ ಸಂಖ್ಯೆಯ ವಿದ್ಯಾರ್ಥಿ ಸಮೂಹ ಮತ್ತು ಮಧ್ಯಮ ವರ್ಗದಿಂದಲೇ ಮೂಡಿಬರುತ್ತದೆ ಎನ್ನುವುದು. 1968ರ ಪ್ರಾಗ್ ವಸಂತದಲ್ಲಿ ನಡೆದ ವಿದ್ಯಾರ್ಥಿ ಚಳವಳಿ, ಇಡೀ ಯೂರೋಪಿನ ತತ್ವಚಿಂತನೆ, ರಾಜಕೀಯ ಪ್ರಜ್ಞೆಯ ಮೇಲೆ ಎಂಥಹ ಪ್ರಭಾವ ಬೀರಿತೆಂಬುದು ಐತಿಹಾಸಿಕ ಸತ್ಯ. ಪ್ರತಿಭಟನೆ, ಹೊಸ ಚಿಂತನೆ, ರಾಜಕೀಯ ಪ್ರಜ್ಞೆಯನ್ನು ನಿಗ್ರಹಿಸುವ ಸಲಕರಣೆಯಾಗಿ ಶಿಕ್ಷಣ ವ್ಯವಸ್ಥೆ ಕೆಲಸ ಮಾಡುತ್ತದೆಯಾದರೂ, ಅದೇ ಶಿಕ್ಷಣವೇ ಇವುಗಳಿಗೆ ಪ್ರೇರೇಪಣೆಯ ಚಾಲನಾಶಕ್ತಿಯಾಗಿಯೂ ಕೆಲಸ ಮಾಡಬಲ್ಲದು. ಸದ್ಯಕ್ಕೆ ಇದು ಶಾಲಾ ಕಾಲೇಜುಗಳ ಹೊರಗಡೆಯೇ ನಡೆಯಬೇಕಾಗಿದೆ. ಈಗಿನ ಪಠ್ಯಕ್ರಮ, ಬೋಧನಾ ರೀತಿ ಮತ್ತು ಶಿಷ್ಟ ಶಿಕ್ಷಣ ಪದ್ಧತಿಗಳು, ಐನ್‌ಸ್ಟೈನ್ (1936ರಲ್ಲೇ) ಹೇಳಿರುವ ಹಾಗೆ, ಕೇವಲ 'submissive subject' ಗಳನ್ನು ತಯಾರು ಮಾಡುವ ಜಡ್ಡುಗಟ್ಟಿದ ಸಂಸ್ಥೆಗಳಾಗಿಬಿಟ್ಟಿವೆ. ಈ ಕುತಂತ್ರದ ರಾಜಕೀಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದೇ ಬಿಡುಗಡೆಯ ಮೊದಲ ಹೆಜ್ಜೆ.



ಉದಾಹರಣೆಗೆ, ಈಗ ನಮ್ಮ ರಾಜ್ಯದ ಪಠ್ಯಪುಸ್ತಕಗಳಲ್ಲಿ ಒಂದನೇ ತರಗತಿಯಿಂದ ಹಿಡಿದು, ಪದವಿ ತರಗತಿಗಳವರೆಗೆ ಎಲ್ಲಾ ಭಾಷೆಯಲ್ಲೂ ಡಾ॥ ಅಂಬೇಡ್ಕರ್ ಅವರ ಬಗ್ಗೆ ಒಂದಲ್ಲಾ ಒಂದು ಪಾಠವಿದೆ. ಆದರೆ ಎಲ್ಲೂ ಅಂಬೇಡ್ಕರ ಅವರ ಕ್ರಾಂತಿಕಾರಕ ರಾಜಕೀಯ ನಿಲುವಿನ ಬಗ್ಗೆಯಾಗಲೀ, ಇವತ್ತಿಗೂ ಅತ್ಯಂತ ಮುಖ್ಯವಾದ ಅಂಬೇಡ್ಕರ್-ಗಾಂಧಿ ನಡುವೆ ನಡೆದ ಚರ್ಚೆ, ವಾದ-ವಿವಾದ ಕುರಿತಾಗಲೀ ಅಪರೋಕ್ಷ ಸೂಚನೆಯೂ ಇಲ್ಲ. ಹೀಗಾಗಿ ಅಂಬೇಡ್ಕರ್ ಬಗ್ಗೆ ಪಾಠವಿದ್ದೂ, ಅವರ ವಿಚಾರಗಳಿಂದ ವಿದ್ಯಾರ್ಥಿಗಳನ್ನು ಹೊರಗಿಡುವ ಹುನ್ನಾರವೊಂದು ಇಲ್ಲಿ ಕೆಲಸಮಾಡುತ್ತಿದೆ. ಇದರ ಒಟ್ಟಾರೆ ಫಲಿತಾಂಶವೆಂದರೆ ಮಕ್ಕಳಿಗೆ ಡಾ॥ ಅಂಬೇಡ್ಕರ್ ಎಂದರೆ ಒಂದು ರೀತಿಯ ಅನಾಸಕ್ತಿ, ಮೂಡಿರುವುದು. ಹಿಂದೆ ಗಾಂಧಿ ವಾದಕ್ಕೆ ಮಾಡಿದ್ದನ್ನೇ ಶಿಕ್ಷಣ ಇಲಾಖೆ, ಈಗ ಅಂಬೇಡ್ಕರ್ ಅವರಿಗೆ ಮಾಡಹೊರಟಿದೆ. (ಮಾನ್ಯ ಅದ್ವಾನಿಯವರಿಗೂ ಇದನ್ನೇ ಮಾಡುವುದರಿಂದ, ಕೋಮು ಸೌಹಾರ್ದ ಕೊಂಚವಾದರೂ ಸುಧಾರಿಸಬಹುದೇನೋ!)

ನಮ್ಮ ಸುರಕ್ಷಿತ ಮಧ್ಯಮ ವರ್ಗಕ್ಕೆ ಈಗ ಇರುವ ದಲಿತ ವಿರೋಧಿ ಭಾವನೆಗಳಿಗೆ, ಹೀಗೆ ಅಂಬೇಡ್ಕರ್ ಪಾಠವೇ ಕಾರಣವಾಗಿಬಿಡುವುದು ನಮ್ಮ ಶಿಕ್ಷಣ ಪದ್ಧತಿಯ ದೊಡ್ಡ ವ್ಯಂಗ್ಯ ಹಾಗೂ ದುರಂತ.

ಇದು ಸ್ವಲ್ಪ ಮಟ್ಟಿಗಾದರೂ ತಪ್ಪಬೇಕಾದರೆ, ಪಠ್ಯಕ್ರಮದ ಕಾಯಕಲ್ಪವಾಗಬೇಕು. ಇಡೀ ಪಠ್ಯಕ್ರಮದಲ್ಲಿ, ನಿಜವಾದ ಅರ್ಥದಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಬಹುದಾದ ಭಾಷಾ ಪಠ್ಯಗಳು ಕೇವಲ ಭಾಷೆಯ ಕೌಶಲಕ್ಕಷ್ಟೇ ಸೀಮಿತವಾಗದೇ, ಸಂಸ್ಕೃತಿ ಪಠ್ಯಗಳೂ ಆಗಬೇಕು. ಇದು ಭಾಷಾ ಪಠ್ಯಕ್ರಮದ ಜವಾಬ್ದಾರಿ ಕೂಡ.

ಗಂಗಾಧರ ಹಿರೇಗುತ್ತಿ

ಸರ್ಕಾರ-ಮತದಾರರ ಶಿಥಿಲ ಸಂಬಂಧ

ಯಾವುದಾದರೊಂದು ಆಸಕ್ತಿ ಬೆಳೆಸಿಕೊಳ್ಳಲು ನಿರೀಕ್ಷಿತ ಪರಿಣಾಮ, ಫಲಿತಾಂಶ ಹಾಗೂ ಪ್ರಗತಿ ಕಾರಣವಾಗಬಲ್ಲದು. ಆದರೆ ಇಂದು ಜನತೆಗೆ ಯಾವುದೇ ಫಲ ನೀಡದ ರಾಜಕೀಯ ಜನರ ನಿರಾಸಕ್ತಿಗೆ ಕಾರಣವಾಗಿದೆ. ಜನರಿಂದ ಚುನಾಯಿಸಲ್ಪಟ್ಟ ಸರ್ಕಾರ, ಕೇವಲ ಪ್ರತಿನಿಧಿಗಳ ವೈಯಕ್ತಿಕ ಹಿತಾಸಕ್ತಿಗೆ ಮಾರ್ಪಡಿಸಿಕೊಳ್ಳುವ ವ್ಯವಸ್ಥೆಯಾಗಿ ಬಿಟ್ಟಿದೆ.

ಈ ಸರ್ಕಾರ ಒಂದು ಸಾಮೂಹಿಕ ಅಭಿಪ್ರಾಯದಿಂದ ರೂಪಿಸಿದ್ದು ಎಂದು ಚುನಾವಣಾ ವ್ಯವಸ್ಥೆ ಮೂಲಕ ಕಂಡುಬಂದರೂ, ಒಳನೋಟದಲ್ಲಿ ಈ ಉದ್ದೇಶ ಈಡೇರಿರುವುದಿಲ್ಲ. ಇದು ಚುನಾವಣಾ ಸಂದರ್ಭದಲ್ಲಿ, ಬಹು ಸಂಖ್ಯಾತ ಅಭ್ಯರ್ಥಿ, ತನ್ನ ಕರಾಮತ್ತುಗಳ ಮೂಲಕ ಗೆದ್ದು, ಒಟ್ಟಾಗಿ ನಿರ್ಮಿಸಿಕೊಂಡ ಒಂದು ಪಕ್ಷದ ಸರ್ಕಾರ.

ಇಂದು ಅಭ್ಯರ್ಥಿಗೆ ತಾನು ತನ್ನ ತಾತ್ವಿಕ ರಾಜಕಾರಣದ ಮೂಲಕ ಗೆದ್ದ ಹೆಮ್ಮೆ ಇಲ್ಲ. ಒಂದು ಉತ್ತಮ ಅಭ್ಯರ್ಥಿಯನ್ನು ಗೆಲ್ಲಿಸಿರುವ ಜವಾಬ್ದಾರಿ ಮತದಾರನಿಗೆ ಇಲ್ಲ. ಹೀಗಾಗಿ ಈ ಎರಡು ಸಂಬಂಧಗಳ ಮಧ್ಯೆ ಇರುವ ಸದುದ್ದೇಶ ಇಂದು ಚುನಾವಣೆಯಲ್ಲಿ ಇಲ್ಲವಾಗಿದೆ.

ಈಗೀಗ ಅಭ್ಯರ್ಥಿ ಮತ್ತು ಮತದಾರರ ಸಂಪರ್ಕ ಬರುವುದು ಕೇವಲ ಚುನಾವಣೆ ಸಂದರ್ಭದಲ್ಲಿ ಮಾತ್ರ. ಚುನಾವಣೆ ಎನ್ನುವುದು ಜವಾಬ್ದಾರಿ

ಶಮಂತ

ಭ್ರಷ್ಟಮುಂದಾಳುಗಳು ಮಾತ್ರವೇ ಕಾರಣರೇ?

''ಎಚ್ಚರದ ಆಸಕ್ತಿ, political orientation ಮತ್ತು ರಾಜಕೀಯ ಪ್ರಜ್ಞೆ ಕೇವಲ ವೃತ್ತಿಪರ, ಸಕ್ರಿಯ ರಾಜಕಾರಣಿಗಳಿಗೆ ಮಾತ್ರವೇ?'' ಎಂದು ಕೇಳಿದ್ದೀರಿ. ಖಂಡಿತ, ಅಕ್ಷರಶಃ ಹೌದು.

ಯಾಕೆ ಎನ್ನುವಿರಾ? ಸ್ವತಂತ್ರ ಪೂರ್ವದ ಯುವಕರು ಬದುಕಿನತ್ತ ರೂಪಿಸಿಕೊಂಡಿದ್ದ ಧೋರಣೆ ಭಿನ್ನವಾಗಿತ್ತು. ಅಲ್ಲದೆ, ಆಗಿನ ಸಾಮಾಜಿಕ ಮತ್ತು ರಾಜಕೀಯ ಪರಿಸರ ಸಹ transitional ಸ್ಥಿತಿಯಲ್ಲಿತ್ತು. ಇವೆಲ್ಲವೂ ಶೈಕ್ಷಣಿಕ, ಸಾಂಸ್ಕೃತಿಕ ಪರಿಸರದ ಮೇಲೆ ಗಾಢ ಪ್ರಭಾವ ಬೀರಿ, ವಿವಿಧ ರೂಪಗಳಲ್ಲಿ ಹೊಸ ಆಲೋಚನೆ, ಚಳವಳಿಗಳಿಗೆ ಎಡೆ ಮಾಡಿಕೊಟ್ಟಿತು.


ಈಗ policy makersಗಾಗಲಿ, ಟ್ರೆಂಡ್ ಹುಟ್ಟು ಹಾಕುವವರಿಗಾಗಲಿ ಇಂತಹ ಜವಾಬ್ದಾರಿ, ಕಾಳಜಿ ಅಗತ್ಯವಿಲ್ಲ. ಮುಕ್ತ ಮಾರುಕಟ್ಟೆ ಹೆಸರಲ್ಲಿ 1991ರಲ್ಲಿ ಇಂಡಿಯಾ ಗೇಟ್ ದೊಡ್ಡದಾಗಿ ತೆರೆದುಕೊಂಡು, ಮಧ್ಯಮ, ಸುಶಿಕ್ಷಿತ, ಬುದ್ಧಿವಂತ ಜನರು ಕನ್ಸ್ಯೂಮರಿಸಮ್ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದಾರೆ. ಅಲ್ಲದೆ, ಇತ್ತೀಚಿನ ನಗರವಾಸಿಗಳಲ್ಲಿ ಉದ್ಯೋಗದ ಬಗೆಗಿನ ಕಲ್ಪನೆಯೂ ಬದಲಾಗಿದೆ. ಇಂತಹ ಬದಲಾದ ಆರ್ಥಿಕ ಸ್ಥಿತಿಯಲ್ಲಿ, ಸಹಜವಾಗಿಯೇ ಎಲ್ಲರೂ, ಬದುಕೆಂದರೆ ಬರಿ ಕಾಂಚನ ಎಂದು ಭಾವಿಸುತ್ತಾರೆ. ಇದು ತಪ್ಪೇ? ಎನ್ನುವ ಪ್ರಶ್ನೆ ಹುಟ್ಟುತ್ತದೆ.




ಸಮಾಜಮುಖಿ ಚಿಂತನೆ ಮತ್ತು ಚಟುವಟಿಕೆಗಳಲ್ಲಿ ಆಸಕ್ತಿಯುಳ್ಳ ಶಮಂತ, ಲೇಖಕಿ ಕೂಡ.

ಯಾವ ಹಿಪೊಕ್ರೆಸಿ ಇಲ್ಲದೆ ಉತ್ತರಿಸುವುದಾದರೆ, ಖಂಡಿತ ತಪ್ಪಲ್ಲ. ನೆಮ್ಮದಿಯ ಬದುಕಿಗೆ ಹಣ ಮುಖ್ಯ. ಆದರೆ ಹಣವೇ ಬದುಕಾಗಬಾರದು. ಇವೆಲ್ಲದರ ಜೊತೆ, ಯುವ ಜನರಲ್ಲಿ ಮೌಲ್ಯಪ್ರಜ್ಞೆ, ಚಿಂತನೆ, ಆಲೋಚನೆ ಇರಬೇಕು ಎಂದೆಲ್ಲ ಹೇಳುವ ಮಂದಿ, ಐಷಾರಾಮದ ಜೀವನ ನಡೆಸುತ್ತಾ, double personality project ಮಾಡಿಕೊಳ್ಳುತ್ತಿರುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ, ಬೆಂಗಳೂರಿನಲ್ಲಿ ಅಪರಾಧಗಳು ಶ್ರೀಮಂತ ಯುವಕರಿಂದಲೇ ಹೆಚ್ಚು ನಡೆಯುತ್ತಿವೆ. ಇವೆಲ್ಲ ಸೆಲ್ಯುಲಾರ್ ಕ್ರೈಮ್‌ಗಳು. ಇವರೆಲ್ಲ habitual offenders ಆಗಿಲ್ಲವಾದ್ದರಿಂದ, ಪೊಲೀಸರಿಗೂ ಇವರನ್ನು ಪತ್ತೆ ಹಚ್ಚಲು ಅಸಾಧ್ಯ. ಒಂದು ಪಕ್ಷ ಪತ್ತೆ ಹಚ್ಚಿದರೆನ್ನಿ, ಎಷ್ಟರ ಮಟ್ಟಿಗೆ ಈ ರಾಜಕಾರಣಿ, ಉದ್ಯೋಗಪತಿ, ಬ್ಯೂರೋಕ್ರ್ಯಾಟ್ಸ್‌ರ ಮಕ್ಕಳನ್ನು ಒಳಗೆ ತಳ್ಳುವ ಧೈರ್ಯ ಒಬ್ಬ ಬಡ ಸಬ್ ಇನ್ಸ್‌ಪೆಕ್ಟರ್‌ಗೆ ಇದೆ?




ವ್ಯಕ್ತಿತ್ವಹೀನ ವ್ಯಕ್ತಿಗಳಿಂದ ಸಮಾಜಕ್ಕೆಷ್ಟೇ ಹಾನಿಯಾಗುತ್ತಿದ್ದರೂ ಅದನ್ನು ಒಪ್ಪಿಕೊಳ್ಳುವಂತಹ ಪರಿಸ್ಥಿತಿ ತಲುಪಿಬಿಟ್ಟಿದ್ದೇವೆ. ಬುದ್ಧಿಜೀವಿಗಳ ಸೋಗಿನಲ್ಲಿ ಮನಸ್ಸನ್ನು ಹಾಳು ಮಾಡುವ ಗುಂಪು ಒಂದೆಡೆ, ಗೂಂಡಾಗಿರಿಯ ಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಲು ಯತ್ನಿಸುವ ಗುಂಪು ಮತ್ತೊಂದೆಡೆ. ನಡುವೆ 'ನಮ್ಮ ಯುವ ಜನಾಂಗ' ಗೊಂದಲಕ್ಕೀಡಾಗಿದೆ.



ಯುತ ಹೊಣೆಗಾರಿಕೆಯುಳ್ಳ ಆಯ್ಕೆಯ ಪ್ರಕ್ರಿಯೆಯಾಗಿಲ್ಲ. ಹಣದ ಹೊಳೆ ಹರಿಸುವ ಒಂದು ಮೋಜಿನ ಪ್ರಸಂಗವಾಗಿ ಪರಿಣಮಿಸಿದೆ. ಒಬ್ಬ ಸಮರ್ಥ ಅಭ್ಯರ್ಥಿಯ ಕಲ್ಪನೆಗಿಂತ ಹಣ, ಹೆಂಡ ಈ ಆಯ್ಕೆ ಮಾಡುತ್ತದೆ.

ದುಡಿಯುವ ಮಧ್ಯಮ ವರ್ಗದವರ ವರ್ತನೆಯೂ ಹೊರತಾಗಿಲ್ಲ. ಇದಕ್ಕಿಂತ ಉತ್ತಮ ಸರ್ಕಾರ ಬರಬೇಕೆನ್ನುವ ಪ್ರಜ್ಞೆ ಈ ಉದ್ಯೋಗ ನಿರತರಿಗೂ ಇರುವುದಿಲ್ಲ. ಜಾತಿ, ಧರ್ಮ, ನಮ್ಮವ ಎಂಬುದೇ ಒಂದು quality ಆಗುತ್ತದೆ ವಿನಃ ಪ್ರತಿನಿಧಿಯ qualification ಬಗ್ಗೆ ಯೋಚಿಸುವುದಿಲ್ಲ.



ಪತ್ರಕರ್ತರಾಗಿದ್ದ ಗಂಗಾಧರ ಹಿರೇಗುತ್ತಿ ಈಗ ಕಾರವಾರದಲ್ಲಿ ಜಿಲ್ಲಾ ಕೇಂದ್ರಿತ ಪತ್ರಿಕೆಯೊಂದರ ಸಂಸ್ಥಾಪಕ ಸಂಪಾದಕರಾಗಿದ್ದಾರೆ.

ನಮಗಾಗಿ ಅಲ್ಲದಿದ್ದರೂ, ನಮ್ಮ ಭವಿಷ್ಯದ ಪೀಳಿಗೆಗಾಗಿಯಾದರೂ ಈಗಲೇ ಉತ್ತಮ ಸರ್ಕಾರದ ಬುನಾದಿ ಹಾಕಬೇಕು. ಉತ್ತಮರನ್ನು ಆರಿಸಿ ಕಳುಹಿಸಬೇಕು ಎಂಬ ಪ್ರಜ್ಞೆ ಅವರಿಗೆ ಕಾಡುವುದಿಲ್ಲ.

ರಾಜಕೀಯವೆಂದರೆ, ನಮ್ಮ ಶ್ರಮದಿಂದ, ನಮ್ಮ ಬೆವರಿನಿಗೆಗೆ ಕಟ್ಟಿಕೊಳ್ಳಬೇಕಾದ ಒಂದು ಸಾಮೂಹಿಕ ವ್ಯವಸ್ಥೆ, ಒಂದು ಸರ್ಕಾರವೆಂದರೆ ನಮ್ಮ ಶ್ರಮವೆಂಬುದೇ ನಮ್ಮ ಯುವ ಜನಾಂಗಕ್ಕಾಗಲೀ ಅಥವಾ ದುಡಿಯುವ ವರ್ಗದ ಹೆಚ್ಚಿನವರಿಗಾಗಲೀ ತಿಳಿದಿಲ್ಲ. ಒಬ್ಬ ಶಾಸಕನ ಅಥವಾ ಸಂಸದನ ಸಂಬಳ ಏರಿಕೆ, ಸಾಮಾನ್ಯ ನಾಗರಿಕನ ತಲಾ ಆದಾಯದ ಜೊತೆ ಏರಿಕೆಯಾಗುತ್ತಿದೆಯೇ ಎಂದು ನಾವು ಪ್ರಶ್ನಿಸುತ್ತಿಲ್ಲ.

ನಮ್ಮ ಜನಪ್ರತಿನಿಧಿ ಎಂದರೆ, ಆತ ನಮ್ಮಿಂದ ಆರಿಸಿಹೋದವ ಎಂಬ ಮೇಲರಿಮೆ ನಮ್ಮಲ್ಲಿರಬೇಕು. ಯಾಕೆಂದರೆ ನಮ್ಮಲ್ಲಿರುವ ಕೀಳರಿಮೆ ನಮ್ಮ ಪ್ರತಿನಿಧಿಗಳ ರಾಜಕೀಯ ದುಷ್ಟತನದ ಹುರುಪು ಸಹ ಆಗಿರುತ್ತದೆ. ನಮ್ಮ ಊರಿನ ಸಮಸ್ಯೆ ಬಗ್ಗೆ ಅವರಿಗೆ ತಿಳಿಸಿ, ಅದರ ನಿವಾರಣೆಗೆ ಗಡುವು ಹಾಕುವುದರ ಮೂಲಕ ನಾವು ರಾಜಕೀಯದಲ್ಲಿ ಸರ್ಕಾರದೊಡನೆ ಸಂಬಂಧ ಹೊಂದುವುದಕ್ಕೆ, ಒಂದು ಜೀವಂತ ಸಮಾಜದ ಸೃಷ್ಟಿಗೆ ಕಾರಣವಾಗಲು ಸಾಧ್ಯವಾಗುತ್ತದೆ.


ಸಮಾಜ ವಿರೋಧಿ ಚಟುವಟಿಕೆಗಳಿಂದ ದೂರಾಗಲು, ಧಾರ್ಮಿಕ ಮತ್ತು ಜಾತಿಯ ಭ್ರಾಂತಿಯಿಂದ ದೂರಾಗಲು, ನಾವು ನಮ್ಮದೇ ಆದ ಸಾಂಸ್ಕೃತಿಕ ಒಳ ಹಂದರವನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ಉತ್ತಮ ಪುಸ್ತಕಗಳ ಓದುವಿಕೆ, ಊರಲ್ಲಿ ನಾಟಕ, ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯಿಂದ ನಮ್ಮ ಚೈತನ್ಯ ಎಂದಿಗೂ ಜೀವಂತವಾಗಿರುತ್ತದೆ. ಇದರಿಂದ ಈ ದೇಶಕ್ಕೆ ಧೈರ್ಯಶಾಲಿಗಳು, ಪ್ರಜ್ಞಾವಂತರು, ಪ್ರಗತಿಪರ ಕ್ರಿಯಾಶೀಲರ ಸಂಖ್ಯೆ ಹೆಚ್ಚಾದಂತೆ, ನಮ್ಮ ರಾಜಕೀಯ, ನಮ್ಮ ಸರ್ಕಾರ ಬದಲಾವಣೆಗೊಳ್ಳುತ್ತದೆ. ಯಥಾ ರಾಜಾ ತಥಾ ಪ್ರಜಾ ಅಲ್ಲ, ಈಗ ತಥಾ ಪ್ರಜಾ ಯಥಾ ರಾಜಾ!



ಗೀತಾ ಸಾಳುಂಕೆ

ನಿನ್ನೆ ಅವನಿಗೊಂದು ಅನಿರೀಕ್ಷಿತ ಫೋನು ಕರೆ ಇತ್ತು. ಅವಳದ್ದು. ಹಾಗೆ ನೋಡಿದರೆ ತಿಂಗಳ ಹಿಂದೆಯೇ ಅವಳ ಕರೆ ಯಾವ ಗಳಿಗೆಯಲ್ಲಾದರೂ ಬರಬಹುದೆಂಬ ನಿರೀಕ್ಷೆಯಲ್ಲಿದ್ದ. ಕಾಯುತ್ತಿರುವಾಗ ಆ ದುಗುಡದ ತೀವ್ರತೆ ನಿಧಾನ ಕಡಿಮೆಯಾಗುತ್ತಾ, ಉದಾಸೀನಕ್ಕೆ ತಿರುಗಿತ್ತು. ಒಂದು ತರಹದ ಸ್ವಸ್ಥತೆಯಿಂದ ಹೊಸ ವಹಿಯನ್ನು ಬರೆಯತೊಡಗಿದವನಂತೆ ದಿನಚರಿಯನ್ನು ಹೊಂದಿಸಿಕೊಂಡಿದ್ದ. ಆಕೆಗೆ ಹಲೊ ಹೇಳುವಾಗ ಧ್ವನಿ, ಮನಸ್ಸು ಎರಡೂ ಕಂಪರಿಸಲ್ಲಿತ್ತು. ಆಕೆಗೆ ಅದು ಹಿಡಿಸಲಿಲ್ಲವೆನ್ನುವುದು ಅಲಗಿನಂತಹ ಮಾತುಗಳಿಂದಲೇ ಗೊತ್ತಾಗಿ ಹೋಯಿತು. ''ನಾಳೆ ಸಂಜೆ ಐದೂವರೆಗೆ ಮನೆಗೆ ಬರುತ್ತೇನೆ. ನನ್ನ ಬಟ್ಟೆಬರೆ ಒಯ್ಯಲಿಕ್ಕೆ. ಮತ್ತೆ, ಮನೆಯ ಸಾಮಾನುಗಳಲ್ಲೂ ನನ್ನ ಪಾಲು ಕೊಂಡು ಹೋಗಲಿದ್ದೇನೆ''. ಕಂಪರು ಕಳೆಯಿತು. ಮೈಮೇಲೆ ತಣ್ಣೀರೆರಚಿದಂತೆ ಸಣ್ಣಗೆ ಕಂಪಿಸಿ, ಮಾತನಾಡಲಾರದಂತಹ, ಕೇಳಿಸಿಕೊಳ್ಳಲಾರದಂತಹ ಸ್ಥಿತಿಯಲ್ಲಿ ಮೌನ ಕುಳಿತಿದ್ದ. ಮತ್ತೆ ಆ ಕಡೆಯಿಂದ ಅವಸರದ, ಅಸಹನೆಯ 'ಹಲೋ'ಗಳು. ''ಸರಿ, ಕೀ ಪಕ್ಕದ ಮನೆಯವರಲ್ಲಿದೆ'' ಎಂದಷ್ಟು ಹೇಳಿ ರಿಸೀವರ್ ಇಟ್ಟು ಬಿಟ್ಟಿದ್ದ. ಅವಳು ಒಂದು ದಿನ ಈ ರೀತಿ ಆಘಾತ ಕೊಡಲಿದ್ದಾಳೆನ್ನುವುದು ಹಿಂದೆಯೇ ತಿಳಿದಿತ್ತು. ಆದರೆ ತಾನು ಪೂರ್ತಿ ಚೇತರಿಸಿಕೊಳ್ಳಲೂ ಆಕೆ ಬಿಡಲಿಲ್ಲ.

ಕಡಲ ತೀರದ ಮರಳಲ್ಲಿ ಎಷ್ಟೊಂದು ಚಂದದ ಮನೆ ಕಟ್ಟಿದ್ದ. ಅದಕ್ಕೆ ನೆಲಮಾಳಿಗೆಯೊಂದನ್ನೂ ಕೊರೆದಿದ್ದ ಮತ್ತು ಬೆರಗಿನಿಂದ, ಕೆಂಪು ಲೋಲಾಕುಗಳನ್ನು ಅಲುಗಿಸುತ್ತಾ ನೋಡುತ್ತಿದ್ದ ಗೆಳತಿಯ ಕಣ್ಣಲ್ಲಿ ಸಂಜೆಯ ಸೂರ್ಯನಿದ್ದ. ತನ್ನ ಪುಟ್ಟ ಅರಮನೆಯ ಮೇಲೆ ಇನ್ನೇನು ಆಕೆಯ ಹೆಸರು ಬರೆಯಬೇಕು. ಅಷ್ಟರಲ್ಲಿ ಒಡನಾಡಿ ಹುಡುಗ ಹೇಗೆ ಅದನ್ನು ತುಳಿದು ಧ್ವಂಸ ಮಾಡಿದ್ದ. ಎಲ್ಲರೂ ತಮಾಷೆ ನಗುತ್ತಿದ್ದರು. ಆಗ ಉಕ್ಕಿದ್ದ ಅಳುವಾದರೂ ಎಂತಹದ್ದು. ವರ್ಷಗಳು ಸರಿದ ಹಾಗೆ, ತನ್ನ ಗಂಡನ ಚಂದದ ಮನೆಯಲ್ಲಿ ಮಗುವನ್ನಾಡಿಸುವ ಗೆಳತಿ, ದಪ್ಪ ಮೀಸೆ ಬೆಳೆಯಿಸಿಕೊಂಡರೂ ಇನ್ನೂ ಅಸಾಧ್ಯ ತುಂಟನಾಗಿಯೇ ಕಾಣುತ್ತಿರುವ ಒಡನಾಡಿ ಹುಡುಗನ ನೆನಪುಗಳು ತಂಪಾಗಿ, ಸಣ್ಣಗೆ ನಗು ಅರಳಿಸುತ್ತಿದ್ದವು. ಇದೀಗಷ್ಟೇ ಅರಿವಾದದ್ದು, ಆ ಬಿಕ್ಕಳಿಕೆಯೂ ಅಲ್ಲೇ ಎಲ್ಲೋ ಇತ್ತೆಂದು.



ತುಳಸಿ ವೇಣುಗೋಪಾಲ್

ಕಳಚಿಟ್ಟ ಉಯ್ಯಾಲೆ ಯಾರದು?



ಮನೆಯ ಎಲ್ಲಾ ವಸ್ತುಗಳಲ್ಲಿ ತನಗೆ ಸಮಪಾಲು ಬೇಕೆಂದು ಅವಳ ತಗಾದೆ. ಅವನ ವಿರೋಧಕ್ಕೆ ನಕ್ಕು ಕೆಣಕಿದ್ದಳು: ಇದೆಲ್ಲಾ ನನಗಾಗಿ, ನನ್ನ ಸೌಕರ್ಯಕ್ಕಾಗಿ ಕಷ್ಟಪಟ್ಟು ದುಡಿದು ತಂದೆ ಎಂದು ಗೋಗೆರೆಯುತ್ತಿದ್ದಿಯಲ್ಲ. ನನ್ನ ವಸ್ತುಗಳನ್ನು ಒಯ್ದರೆ ನಿನ್ನದೇನಡ್ಡಿ?'' ಅವಳೊಂದಿಗೆ ವಾದಿಸಿ ಪ್ರಯೋಜನವಿಲ್ಲವೆನಿಸಿ ''ಅವುಗಳಿಗೆ ಬೆಲೆ ಕಟ್ಟಿ ಹಣ ತೆಗೆದುಕೊ'' ಎಂದೂ ಆತ ನಯವಾಗಿ ವಿನಂತಿಸಿದ್ದ. ''ಪ್ರೀತಿ, ಮಮತೆ ನಿನ್ನೊಬ್ಬನ ಗುತ್ತಿಗೆ ಅಲ್ಲ. ಹಣ ಚೆಲ್ಲಲ್ಲಿಕ್ಕೆ ನೀನು ತಯಾರಿದ್ದರೆ ಹೊಸತನ್ನು ಕೊಂಡು ತಾ ಅಲ್ಲಾ'' ಎಂದು ಕೆಣಕಿದಳು. ಅಲ್ಲಿರುವ ಪ್ರತಿಯೊಂದು ವಸ್ತು ಅವರಿಬ್ಬರ ಎದೆಯ ಮೇಲೆ ವಿಶ್ರಮಿಸುತ್ತಲೇ ಒಳಬಂದದ್ದು. ಅನಂತರ ಅವಳು ಮನೆ ಬಿಟ್ಟು ನಡೆದಳು. ವಿಚ್ಛೇದನದ ಕಾಗದಗಳನ್ನು ಕಳುಹಿಸಿಕೊಟ್ಟಳು. ಅವರೆಗೆ ಇದ್ದ ತಳಮಳ, ದ್ವೇಷ ಕಾಗದಗಳಿಗೆ ಸಹಿ ಮಾಡಿದ್ದೇ ಕರಗಿ ಹೋಗಿ ನಿರಾಳವಾಗಿಬಿಟ್ಟಂತೆ ಅವನಿಗೆ ಅನಿಸಿತ್ತು. ನಿಷ್ಕಾರಣವಾದ ಪ್ರೀತಿಯನ್ನು ತಮ್ಮದಾಗಿಸಿಕೊಳ್ಳಲಿಲ್ಲ; ತಮ್ಮ ದ್ವೇಷವೂ ಸಕಾರಣದ್ದಾಗಿರಲಿಲ್ಲ. ಕಾರಣವಿಟ್ಟುಕೊಂಡು ಪ್ರೀತಿಸಿದೆವು, ಕಾರಣವಿಲ್ಲದೆ ದ್ವೇಷಿಸಿದೆವು. ಈ ಸತ್ಯ ಹೊಳೆದದ್ದೇ, ಆತನಿಗೆ ಕೋಪ ಮಾಡಿಕೊಳ್ಳಬೇಕೆಂದರೂ ಕೋಪ ಬರುತ್ತಿರಲಿಲ್ಲ. ನಗಬೇಕೆಂದರೂ ನಗು ಬರುತ್ತಿರಲಿಲ್ಲ. ದುಃಖ ಕೂಡಾ ಗಂಟಲು ಕಟ್ಟಿಸುತ್ತಿರಲಿಲ್ಲ. ಆದರೆ ಈ ಫೋನು ಕರೆಯ ನಂತರ ನಿರ್ಭಾವದಿಂದ ಕೆಲಸ ಮಾಡಲು ಮಾತ್ರ ಆಗಲೇ ಇಲ್ಲ.

ಇವತ್ತು ಬೆಳಿಗ್ಗೆ ಆಫೀಸಿಗೆ ಹೊರಡುವ ಮೊದಲು ಬಾಗಿಲ ಬಳಿ ನಿಂತು ಡ್ರಾಯಿಂಗ್‌ರೂಮಿನ ಉದ್ದಕ್ಕೆ ಹೀಗೆ ಸಹಜ ದೃಷ್ಟಿ ಹರಿಸಿದ್ದ. ಸುಂದರವಾಗಿ, ಮುಗ್ಧತೆಯಿಂದ ಕುಳಿತಿದ್ದ ಅವುಗಳೆಲ್ಲ ಆತನನ್ನು ಎದೆ ಒಡೆಯುವಂತೆ ನೋಡುತ್ತಿದ್ದವು. ಸೋಫಾಸೆಟ್‌ನ ಸಮೀಪ ಹೋಗಿ ಧೂಳು ಝಾಡಿಸುವವನಂತೆ ಮೆತ್ತಗೆ ತಟ್ಟಿದ್ದ. ಬಾಲ್ಕನಿ ಬದಿಯ ತೂಗುಯ್ಯಾಲೆಯ ಮೇಲೆ ಬೆರಳಾಡಿಸಿದಷ್ಟಕ್ಕೇ ಅದು ಅತ್ತಿತ್ತ ತೂಗಿತು. ಜತೆಯಲ್ಲೇ ಪುಟ್ಟ ಗಂಟೆಗಳೆಲ್ಲ ದೂರು ಹೇಳುವಂತೆ ಕಿಣಿಕಿಣಿ ಸದ್ದು ಹೊರಡಿಸಿದವು. ಟರಕೋಟದ ಕುದುರೆಗಳು, ಸಿರಾಮಿಕ್‌ಗಳು, ಕಂಚಿನ ಪ್ರತಿಮೆ, ದೀಪಗಳು, ಎಲ್ಲವೂ ಮೆಲ್ಲ ಉಸಿರೆಳೆಯುತ್ತಾ ಆತನನ್ನೇ ಮಿಕಿಮಿಕಿ ನೋಡುತ್ತಿದ್ದವು. ಪ್ರತಿ ಕೊಠಡಿಯೊಳಗೆ ಹೊಕ್ಕು ಬಂದಾಗ ಮನಸ್ಸು ಭಾರವಾಗಿ ಬಿಟ್ಟಿತ್ತು. ಕನಸಿನ ಮನೆಯ ಈ ಸುಂದರ ವಸ್ತುಗಳನ್ನೆಲ್ಲ ತನ್ನ ರಾಜಕುಮಾರಿಗಾಗಿ ಆತ ಒಂದೇ ರಾತ್ರಿಯೊಳಗೆ ಮಂತ್ರದಂಡ ಬೀಸಿ ಸೃಷ್ಟಿಸಿದ್ದಾಗಿರಲಿಲ್ಲ. ಮದುವೆಯ ನಂತರದ ಹದಿನೈದು ವರ್ಷ ರಕ್ತ, ಬೆವರು ಬಸಿದು ಒಂದೊಂದಾಗಿ ಕೂಡಿಸಿದ್ದು. ಇವತ್ತು ಸಂಜೆ ತಾನು ಹಿಂದಿರುಗಲಿರುವುದು, ಇವನ್ನೆಲ್ಲ ಕಳೆದ ವಿದ್ರೂಪಗೊಂಡ ಒಂದು ಗೂಡಿಗೆ ಎನ್ನುವ ಯೋಚನೆಗೆ ಆತ ತತ್ತರಿಸಿ ಹೋದ.

ಮಧ್ಯಾಹ್ನದ ನಂತರ ಎಷ್ಟು ಬಾರಿ ಆತ ಸಮಯ ನೋಡಿಕೊಂಡನೊ, ನಾಲ್ಕೂವರೆ. ಇನ್ನೊಂದು ತಾಸಿನಲ್ಲಿ ಆಕೆ ಅಲ್ಲಿ ಪಾಲಿನ ಕೆಲಸಕ್ಕೆ ತೊಡಗುತ್ತಾಳೆ. ಕ್ಷೀರಮಥನದ ವೇಳೆ ಎದ್ದುಬಂದ ಮೋಹಿನಿಯಂತೆ. ತಾನೂ ಅಲ್ಲಿರಬೇಕೆಂದು ಸೂಚಿಸಲೇ ಸಮಯವನ್ನು ಹೇಳಿದಳೆ, ಅಥವಾ ಆ ಹೊತ್ತಿನಲ್ಲಿ ನಿನ್ನ ಕೆಟ್ಟಮುಖ ತೋರಿಸಬೇಡ ಎನ್ನುವ ಬೇತಾವನಿ ಕೊಟ್ಟಳೆ? ಅವಳ ಒಳ್ಳೆಯತನ, ಕೆಟ್ಟತನ ಯಾವುದಕ್ಕೂ ಪ್ರತಿಸ್ಪಂದಿಸುವುದಕ್ಕೇ ಆಗುತ್ತಿಲ್ಲವೆಂದ ಮೇಲೆ ತಾನು ಯಾಕೆ ವ್ಯರ್ಥದ ಊಹೆಗೆ ತೊಡಗಬೇಕು ಎಂದು ಹೊಳೆದು, ಅತ್ಯಗತ್ಯ ಕೆಲಸವಿರುವವನಂತೆ ಎದುರಿಗಿದ್ದ ಫೈಲನ್ನು ತಿರುವಿಹಾಕಲು ತೊಡಗಿದ. ನನಗೆ, ನನ್ನದು ಎನ್ನುವ ಪಾಲುಗಾರಿಕೆಯ ಕೆಲಸವನ್ನು ತಾನೇ ಆರಂಭಿಸಿದ್ದನೊ ಎನ್ನುವುದು ಹೀಗೇ ಹೊಳೆದು ಇನ್ನಷ್ಟು ಚಡಪಡಿಕೆ. ಹನಿಗೂಡಿದ ಕಣ್ಣುಗಳೊಂದಿಗೆ ತಾನು ಸ್ಪರ್ಶಿಸಿ ಬಂದವುಗಳೆಲ್ಲ ತನ್ನ ಪ್ರತೀಕ್ಷೆಯಲ್ಲಿರಬಹುದು ಎಂದನಿಸಿದ್ದೇ, ತಡೆಯಲಾಗದೆ ಕಾರಿನ ಕೀಯೆತ್ತಿಕೊಂಡು ಕ್ಯಾಬಿನ್‌ನಿಂದ ಹೊರಬಿದ್ದ.

ಯಾವ ವೇಗದಲ್ಲಿ ಹೋದರೆ ಆರರ ಒಳಗೆ ಮನೆ ತಲುಪಬಹುದು ಎನ್ನುವ ಲೆಕ್ಕಾಚಾರದಲ್ಲಿಯೇ ಅವನು ವಾಹನಗಳ ದಟ್ಟಣೆಯಲ್ಲಿ ಸೇರಿಕೊಂಡ. ಪವಾಯಿ ರಸ್ತೆಯಲ್ಲಿ ದುರಸ್ತಿ ಕೆಲಸ ಸಾಗಿರುವುದರಿಂದ ವಾಹನಗಳು ನಿಧಾನ ಸಾಗುತ್ತಿದ್ದವು. ಶಿಸ್ತಿನ ಇರುವೆಯ ಸಾಲಿನಂತೆ, ಕೆಲವೆಡೆ ಇದ್ದಕ್ಕಿದ್ದಂತೆ ಅಡ್ಡಾದಿಡ್ಡಿಯಾಗಿ, ಗಟ್ಟಿಗಂಟಲಿನ ಬೈಗಳ ವಿನಿಮಯದ ನಂತರ ಮತ್ತೆ ನೇರವಾಗಿ, ಆತನ ಸಹನೆ ಮೀರುತ್ತಿತ್ತು. ನಿರ್ದಿಷ್ಟವಾಗಿ ಯಾರನ್ನೂ ಉದ್ದೇಶಿಸದೆ ಕೆಳ ಉಸಿರಿನಲ್ಲಿ ಬೈಯತೊಡಗಿದ. ''ಧೈರ್ಯ ಇದ್ದರೆ ನನ್ನ ಮುಖಕ್ಕೆ ಹೇಳು, ನನ್ನ ಮುಖಕ್ಕೆ ಹೇಳು. ಹೀಗೆ ಗೊಣಗುಟ್ಟುವ ನಿನ್ನ ಬುದ್ಧಿ ಇದೆಯಲ್ಲಾ...'' ನಯನಾಜೂಕಿನ, ಸಿಹಿ ಮಾತಿನ ಹುಡುಗಿ, ಕರುಳು ಇರಿಯುವಂತೆ ಮಾತನಾಡುವುದನ್ನು ಕಲಿತಿದ್ದಳು. ಎಷ್ಟು ನಾಜೂಕೆಂದರೆ, ಎರಡು ಬಾರಿ ಗರ್ಭ ಕಳೆದುಕೊಂಡಾಗ, ಮಕ್ಕಳೇ ಬೇಡ ಎಂದು ನಿರ್ಧರಿಸಿದವನು ತಾನೇ. ಅವಳು ಮಡಿಲಲ್ಲಿ ಮುಖವಿರಿಸಿ ಎಷ್ಟೊಂದು ಅತ್ತಿದ್ದಳು. ನೋವನ್ನು, ನಲಿವನ್ನು ಹಂಚಿಕೊಂಡ ಆ ದಿನಗಳು ಮತ್ತು ವಸ್ತುಗಳನ್ನು ಹಂಚಿಕೊಳ್ಳುವ ಇವತ್ತಿನ ದಿನಕ್ಕೂ ಮಧ್ಯ ಅದೆಂಥ ಅಂತರ.



ಹೆದ್ದಾರಿಗೆ ಸೇರಿಕೊಳ್ಳುವ ಸಿಗ್ನಲ್ ತಲುಪಿದ್ದೇ, ಅರೆ ಎಂದು ಬೆರಗಿನಿಂದ ಅತ್ತಿತ್ತ ನೋಡಿದ. ಯೂನಿಫಾರಂನ ಮಕ್ಕಳ ಗುಂಪೊಂದು ಕಿಲಕಿಲ ಮಾಡುತ್ತಾ ದಾಟಿ ಹೋದವು. ಶಾಲೆ ಬೇಗ ಬಿಟ್ಟಿತೇನೋ ಎಂದು ಕೈ ಗಡಿಯಾರ ನೋಡಿಕೊಂಡರೆ ಎದೆ ಧಕ್ಕೆಂದಿತು. ಅವಳು ಕೀ ಪಡೆದುಕೊಂಡು ಬಾಗಿಲು ತೆರೆದು ಒಳ ಹೊಕ್ಕಾಗಿದೆ. ಮುಂದಿದ್ದ ವಾಹನಗಳು ಚಲಿಸಲು ತೊಡಗಿದವು. ಹೆದ್ದಾರಿ ಸೇರಿದ್ದೇ ಆತ ವೇಗ ಹೆಚ್ಚಿಸಿದ.

ಪರದೆ ಸರಕ್ಕನೆ ಸರಿಯಿತು. ತೆರೆದ ಕಿಟಕಿಯ ಮೂಲಕ ಒಳಬಂದ ಸಂಜೆ ಬಿಸಿಲಿಗೆ ಕಣ್ಣು ತಿಕ್ಕಿಕೊಳ್ಳುತ್ತಾ ಅವು ಒಡತಿಯನ್ನು ಪ್ರೀತಿಯಿಂದ ನೋಡಿದವೇನೊ. ಮೊದಲು ಆಕೆ ಪುಟ್ಟ ತೊಟ್ಟಿಲಿನಂತಹ ತೂಗುಯ್ಯಾಲೆಯ ಬಳಿಗೇ ಹೋಗಿರಬೇಕು. ಕುಳಿತುಕೊಂಡಳೆ? ಕುಳಿತು ಕಣ್ಣು ಮುಚ್ಚಿದಾಗ ಅದನ್ನು ತೂಗುತ್ತಿದ್ದ ಕೈಗಳ, ಕೊರಳನ್ನು ಸ್ಪರ್ಶಿಸುತ್ತಿದ್ದ ಬಿಸಿಯುಸಿರಿನ ನೆನಪು ಬಂತೆ? ಅದೊಂದು ಅಲ್ಲೇ ಇರಲಿ ಮಾರಾಯತಿ. ತಣ್ಣಗಿನ ನೋಟ ಬೀರುತ್ತಿದೆ. ಕಳಕ್ಕೆಂದು ಉಯ್ಯಾಲೆ ಕಳಚಿ ಬಿತ್ತು. ಪುಟ್ಟ ಗಂಟೆಗಳು ಇನ್ನೆಂದೂ ಕಬ್ಬನಾರೆವೆನ್ನುವಂತೆ ಕಿಣಿಗುಟ್ಟಿರಬೇಕು. ಅಲ್ಲಿಂದ ಬಾಲ್ಕನಿಗೆ, ಪೂರ್ತಿ ಹರಡಿ ಕುಳಿತಿರುವ ಕ್ಯಾಕ್ಟಸ್‌ಗಳು ಅವಳ ಹೆಜ್ಜೆಯ ಸಪ್ಪಳಕ್ಕೇ ಕಣ್ಣು ಅರಳಿಸಿದುವಲ್ಲ. ಬೆಳಗೆ ತಾನು ನೀರು ಹನಿಸುತ್ತಿದ್ದಾಗ ಎದ್ದ ಮಣ್ಣಿನ ಗಂಧ ಈಗಲೂ ಅಲ್ಲೇ ತೇಲುತ್ತಿರಬಹುದೇ? ಆಕೆ ಉಸಿರೆಳೆದು ಅದನ್ನು ಆಘ್ರಾಣಿಸಿರಬಹುದೆ? ಕೆಂಪು ನಕ್ಷತ್ರಗಳಂತಹ ಹೂ ಬಿಟ್ಟಿರುವ ಪುಟ್ಟ ಕ್ಯಾಕ್ಟಸ್ ಗಿಡವನ್ನು ತನ್ನ ಪಾಲಿಗೆ ಬಿಡಲು ಅವಳನ್ನು ಒತ್ತಾಯಿಸಬೇಕು ಎಂದುಕೊಂಡ ಆತ.


ತಮ್ಮ ಮಧ್ಯೆ ಪಾಲಿನ ಆಟ ಯಾವಾಗ ಆರಂಭವಾಯಿತೆನ್ನುವುದು ಎಷ್ಟು ಯೋಚಿಸಿದರೂ ಅವನಿಗೆ ಹೊಳೆಯುವುದೇ ಇಲ್ಲ. 'ನಾವು' 'ನಮ್ಮದು' 'ನಮಗಾಗಿ' ಪದಗಳನ್ನು ಎಲ್ಲಿ ಬಚ್ಚಿಟ್ಟರೊ, ಎಲ್ಲಿ ಹುಗಿದಿಟ್ಟರೊ? ಎಷ್ಟೆಂದು ಹುಡುಕುವುದು, ಎಲ್ಲೆಂದು ಅಗೆಯುವುದು. ಕಳೆದುಕೊಂಡದ್ದಕ್ಕೆ ಪರಸ್ಪರರನ್ನು ಆರೋಪಿಸಿದ್ದೇ ಆಯಿತು. ಕಳೆದುಕೊಂಡೆವೊ ಅಥವಾ ಕಳೆದುಹೋದೆವೊ ಎನ್ನುವ ಸಂಶಯ ಈಗ.

ಹೊರಗಿನ ಮಂದಿ ತನ್ನ ಕನಸಿನ ಮನೆಯ ಅಮೃತಶಿಲೆಯ ಹೊಳೆಯುವ ನೆಲದ ಮೇಲೆ ಹೆಜ್ಜೆಯ ಪ್ರತಿ ಮೂಡಿಸುವುದಷ್ಟೇ ಅಲ್ಲ, ತೂಗುಯ್ಯಾಲೆಯಲ್ಲಿ ಹಂಸದಂತೆ ತೇಲುವ ಅವಳ ಚೆಲುವನ್ನು ಎವೆ ಫಳುಕಿಸದೆ ನೋಡುವಾಗ

ಅವನಿಗೆ ಸಂಕಟ ಆಗುತ್ತಿತ್ತು. ಬಂದವರು ಪ್ರತಿಯೊಂದು ವಸ್ತುವನ್ನು ಸ್ಪರ್ಶಿಸಿ, ಅವಳನ್ನು ಅಭಿನಂದಿಸುವಾಗ ಕುಣಿಯುತ್ತಿದ್ದಳು. ಅವಳಿಗೆ ಎಷ್ಟೆಂದು ತಿಳಿ ಹೇಳುವುದು. ಆ ಸ್ಪರ್ಶಗಳಲ್ಲಿ, ಆ ಹೊಗಳುವಿಕೆಯಲ್ಲಿ ದುರಾಶೆಯ ಮೈಲಿಗೆ ಇರುತ್ತಿತ್ತೆಂದು. 'ನೀನು ಅದೃಷ್ಟವಂತ' ಎಂದು ತನ್ನ ಕೈ ಕುಲುಕುವಾಗ ಅಪಹಾಸ್ಯದ ಕೊಂಕು ಅಡಗಿದೆಯೆಂದು. ನಂತರ ತನ್ನ ಗೊಣಗಾಟ ಕೇಳಿದರೆ ತಲೆ ಕೆಟ್ಟವನನ್ನು ಸಮಾಧಾನಿಸುವಂತೆ ತಲೆ ಸವರುತ್ತಿದ್ದಳು. ನಂತರ ಏನೊ ಸಂಶಯ. ಇಬ್ಬರಿಗೂ.

ಮನೆಗೆ ಅತಿಥಿಗಳು ಬರುವುದು ನಿಲ್ಲಲೇ ಇಲ್ಲ. ಬಾಲ್ಕನಿಗೆ ಚಾಚಿ ನಿಂತಿರುವ ತಾಳೆ ಮರದ ಪೊಟರೆಯಲ್ಲಿದ್ದ ಅವನ ಪ್ರಿಯ ಗಿಳಿಯ ಕುಟುಂಬ ಹೌಹಾರುವಂತೆ ಬಂದವರು ಅಟ್ಟಹಾಸ ಮಾಡುತ್ತಿದ್ದರೆ, ಅವಳೂ ಧ್ವನಿ ಕೂಡಿಸುತ್ತಿದ್ದಳು. ಹಾಗಾಗಿ ಮುಂದೆ ಕರೆಗಂಟೆಯ ಸದ್ದಿಗೆ ಅವನು ಬಾಗಿಲು ತೆರೆಯುವುದನ್ನೇ ನಿಲ್ಲಿಸಿಬಿಟ್ಟ. ತಾನು ತುಸು ತೆರೆದ ಬಾಗಿಲಿನೆಡೆಯಿಂದ ನುಸುಳಿ ಆಫೀಸಿಗೆ ಹೋಗಿ ಬರುತ್ತಿದ್ದ. ತಾನು ಮುಚ್ಚಿ ಹೋದ ಬಾಗಿಲಿನೊಳಗಡೆ ಆಕೆ ಕ್ಷೇಮವಾಗಿ ಇರುತ್ತಾಳೆಂದುಕೊಂಡದ್ದು ಸುಳ್ಳಾಗಿತ್ತು. ಅವಳು ಆ ಮುಚ್ಚಿದ ಬಾಗಿಲಿನ ಮೂಲಕವೇ ಬೇಕಾದಾಗ ಹೊರಗೆ ಹೋಗುತ್ತಿದ್ದಳು, ಬರುತ್ತಿದ್ದಳು. ಅವಳನ್ನು ಹುಡುಕುತ್ತಾ ಅವಳ ತಾಯಿಯ ಮನೆ, ಅಕ್ಕನ ಮನೆ, ಸ್ನೇಹಿತರ ಮನೆ ಎಂದು ಅವನಿಗೆ ಅಲೆಯಬೇಕಾಗಿಬರುತ್ತಿತ್ತು. ಹಾಗೆ ಕರೆತಂದವಳನ್ನು ತೂಗುಯ್ಯಾಲೆಯಲ್ಲಿ ಕುಳ್ಳಿರಿಸಿ ತೂಗುತ್ತಿದ್ದ. ಅಡುಗೆಯ ಕಷ್ಟ ಬೇಡ ಎಂದು ಆಕೆಗೆ ಇಷ್ಟವೆನಿಸುವ ಚೈನೀಸ್ ತಿನಿಸುಗಳನ್ನು ತರಿಸಿ ಪ್ರೀತಿಯಿಂದ ತಿನ್ನಿಸುತ್ತಿದ್ದ. ಪಗಾರದಿಂದ ದೊಡ್ಡ ಮೊತ್ತವನ್ನು ಅವಳ ಖಾತೆಗೆ ಜಮಾ ಮಾಡುತ್ತಿದ್ದ. ಬ್ಯೂಟಿ ಕೋರ್ಸ್, ಕಂಪ್ಯೂಟರ್ ಕೋರ್ಸ್ ಎಂದು ತಿರುಗಾಡುತ್ತಿದ್ದವಳು, ಒಂದು ದಿನ, ನೌಕರಿ ಸಿಕ್ಕಿದೆ ಎಂದು ಕಣ್ಣು ಮಿನುಗಿಸುತ್ತಾ ಹೇಳಿದ್ದಳು. ಇಷ್ಟೆಲ್ಲಾ ವರ್ಷ ತಾನು ಹೊರಗೆ ದುಡಿಯುತ್ತಿದ್ದೆ ಮತ್ತು ಅವಳು ಮನೆಯೊಳಗೆ. ಪ್ರಶ್ನೆಗಳೇ ಇಲ್ಲದೆ ಸುಲಲಿತ ಸಾಗುತ್ತಿದ್ದ ಬದುಕಿಗೆ ಒಂದು ಚಿನ್ಹೆಯ ಅವಶ್ಯಕತೆ ಇತ್ತೆ?

ಮನೆ ಹಿಂದಿನಂತೆಯೆ ಶುಭ್ರ ಹೊಳೆಯುತ್ತಾ ಇತ್ತು, ಕಣ್ಣು ಕುಕ್ಕುವ ಹಾಗೆ. ಈಗ ಯಾರೂ ಅತಿಥಿಗಳು ಬರುತ್ತಿರಲಿಲ್ಲ. ಮುಚ್ಚಿದ ಬಾಗಿಲಿನೊಳಗೆ ಇಬ್ಬರೂ ಅಸಹನೀಯ ದಿನಗಳನ್ನು, ರಾತ್ರಿಗಳನ್ನು ಕಳೆದರು. ಪರಸ್ಪರ ಹಿಂಸಿಸುತ್ತಾ, ಆರೋಪಿಸುತ್ತಾ, ತಮ್ಮ ಪಾಲಿನ ತ್ಯಾಗಗಳ, ಹೃದಯ ವೈಶಾಲ್ಯಗಳ ಪಟ್ಟಿ ಒಪ್ಪಿಸುತ್ತಾ. ಒಂದೊಂದು ನೆನಪೂ ಈ ಗಳಿಗೆಯಲ್ಲಿ ಅವನ ಮೈಯಲ್ಲಿ ಮುಳ್ಳೆಬ್ಬಿಸುವಂತಿತ್ತು. ಸಿಗ್ನಲ್ ಬಳಿ ನಿಂತಾಗಲೆಲ್ಲಾ ಕಡಿದುಕೊಳ್ಳುತ್ತಿದ್ದ ದೃಶ್ಯಗಳು ದಾರಿ ಸಾಗಿದಂತೆ ಮತ್ತೆ ಮನಸ್ಸಿನ ಪರದೆಯಲ್ಲಿ ಮೂಡಿಬಿಡುತ್ತಿದ್ದವು. ಈ ಮನಸ್ಥಿತಿಯಲ್ಲಿಯೇ ಕಾಂದಿವಲಿಯ ಹೊಸ ಓವರ್‌ಬ್ರಿಡ್ಜ್ ಹಾದು ಹೋದದ್ದೂ ಅವನ ಗಮನಕ್ಕೆ ಬರಲಿಲ್ಲ. ಸಾಮಾನ್ಯವಾಗಿ ಅಲ್ಲಿಂದಲೇ ಪಶ್ಚಿಮಕ್ಕೆ ತಿರುವು ತೆಗೆದುಕೊಳ್ಳುವುದು. ನ್ಯಾಶನಲ್ ಪಾರ್ಕ್ ಸಮೀಪವಾಗುತ್ತಿರುವಾಗಷ್ಟೇ ಆದ ಪ್ರಮಾದ ಅರಿವಿಗೆ ಬಂದದ್ದು. ಇನ್ನು ರೈಲ್ವೇ ಕ್ರಾಸಿಂಗ್ ಬಳಿ ಎಷ್ಟು ಹೊತ್ತು ಕಾಯಬೇಕೊ ಎಂದು ಚಿಂತಿಸುತ್ತಾ ಗಡಿಯಾರ ನೋಡಿದರೆ ಆರು ಕಳೆದಿತ್ತು.



ನಿರುತ್ಸಾಹದಿಂದ ವಾಹನಗಳ ಸಾಲಲ್ಲಿ ಕಾಯುತ್ತಾ ನಿಂತವ ಈಗ ಎರಡು ಭಾಗಗಳಾಗಿ; ಬರೀ ಸಾಮಾನುಗಳ ರಾಶಿಯಾಗಿ ಬಿದ್ದವುಗಳ ಕುರಿತು ಯೋಚಿಸಿದ. ತಾನು ಇಷ್ಟಪಟ್ಟು ಖರೀದಿಸಿದ್ದ ದೊಡ್ಡ ಕಲಂಕಾರಿಯನ್ನು ಆಕೆ ನಾಜೂಕಾಗಿ ಎರಡಾಗಿ ಕತ್ತರಿಸಿ ಪಾಲು ಮಾಡಿರಬಹುದೆ? ಜೋಡಿ ಮಂಚಕ್ಕೆ ಒಂದಿಷ್ಟೂ ಅರಿವಾಗದಂತೆ ಚಾಣಾಕ್ಷತನದಿಂದ ಅದನ್ನು ಬೇರ್ಪಡಿಸಿರಬೇಕು. ರಾಕಿಂಗ್ ಚೇರನ್ನು ಯಾರ ಪಾಲಿಗೆ ಹಾಕಿರಬಹುದು. ಹೂಕುಂಡದ ಗಿಡಗಳು ತಮ್ಮ ಸಂಗಾತಿಗಳಿಗೆ ವಿದಾಯ ಹೇಳುವಷ್ಟು ಪುರುಸೊತ್ತು ಕೊಟ್ಟಳೊ ಇಲ್ಲವೊ. ರೈಲ್ವೇ ಕ್ರಾಸಿಂಗ್ ದಾಟಿ ಐ.ಸಿ. ಕಾಲನಿಯ ದಾರಿ ಹಿಡಿದಾಗ ಹಿಂದಿನ ಅವಸರ ಅವನಲ್ಲಿ ಇರಲಿಲ್ಲ.


ಅವಳು, ಹೇಳಿದಂತೆ, ತನ್ನ ಪಾಲಿನದ್ದು ತೆಗೆದುಕೊಂಡು ಈಗಾಗಲೇ ಹೋಗಿಯಾಗಿರಬೇಕು ಅಥವಾ ತನ್ನ ಪಾಲುಗಾರಿಕೆಯ ಪ್ರಾಮಾಣಿಕತೆಯನ್ನು ವಿವರಿಸಿ ತೋರಿಸಲು ಕಾದಿರಬಹುದು. ಇಂತಹದ್ದೇ ಎಂದು ಹೇಳಲಾಗದಂತಹ ಉಮ್ಮಳ ಎದೆಯೊತ್ತಿಬರುತ್ತಿತ್ತು. ಇನ್ನೂ ಏನೋ ಉಳಿಸಿಕೊಳ್ಳುವ, ಆಸೆ ಬೊಗಸೆ ಬಿಗಿ ಹಿಡಿದು ಒಡ್ಡಿಕೊಂಡಂತೆ.

ಹೋಲಿಕ್ರಾಸ್ ತಲುಪಿದೊಡನೆ ನೇರ ರಸ್ತೆ ಹಿಡಿಯುವ ಬದಲು ಗಕ್ಕನೆ ಎಡಕ್ಕೆ ತಿರುಗಿ ರಿಶಿ ಕಾಂಪ್ಲೆಕ್ಸ್‌ನ ಹಾದಿ ಹಿಡಿದ. ಸೂರ್ಯ ಖಾಡಿಯ ಹಿಂಬದಿಯ ಗುಡ್ಡದ ತುದಿಯಲ್ಲಿ ಇಳಿಯುತ್ತಿರುವುದನ್ನೇ ನೋಡುತ್ತಾ ಮಧ್ಯದ ರಸ್ತೆಯಲ್ಲಿ ವೇಗವಾಗಿ ಸಾಗಿದ. ಖಾಡಿಯ ಅಂಚಿನ ಕಿರಣಗಳು ಆಕಾಶದಲ್ಲಿ, ಖಾಡಿಯ ನೀರಿನಲ್ಲಿ ಹಸಿರು ಎಲೆಗಳಲ್ಲಿ ಕುಣಿಯುತ್ತಿದ್ದವು. ಸಂಜೆಯ ಗಾಳಿ ಮೈ ಪುಳಕಗೊಳ್ಳುವಂತೆ ತೀಡುತ್ತಿತ್ತು. ಪೊದೆಗಳಲ್ಲಿ ರಾಶಿ ರಾಶಿ ಹಕ್ಕಿಗಳ ಸಂಭ್ರಮದ ಹಾಡು. ಇಂತಹದ್ದೇ ಅಗಣಿತ ಸಂಜೆಗಳನ್ನು ಅವರಿಬ್ಬರು ಜತೆಯಲ್ಲಿ ಕಳೆದಿದ್ದರು. ತನಗಾಗಿಯೇ ಕಾಯುತ್ತಾ ಕುಳಿತಿರುತ್ತಿದ್ದಳು ಆಕೆ. ತಮ್ಮ ಮನೆಯ ಬಾಲ್ಕನಿಗೆ ಸಂಜೆಯ ಪರಿಮಳವಿರುತ್ತಿತ್ತು. ಅಲ್ಲಿ ಇಬ್ಬರೂ ಬಿಸಿ ಚಹಾ ಹೀರುತ್ತಾ, ತನ್ಮಯರಾಗಿ ಬೆರಳು ಬೆಸೆದು ಮೌನ ಕುಳಿತಿರುತ್ತಿದ್ದ ಕ್ಷಣಗಳಿದ್ದವು. ಚಹ ಹೀರುವ ಚಿಕ್ಕ ಸದ್ದಿಗೂ ಅರ್ಥವಿತ್ತು. ಸದ್ಯ, ಆ ಕ್ಷಣಗಳು ಮಾತ್ರ ಅಖಂಡ. ಅವುಗಳನ್ನು ಕತ್ತರಿಸಿ ಹಂಚಿಕೊಳ್ಳುವ ಪ್ರಮೇಯ ನನಗಿಲ್ಲ. ಅವಳಿಗೂ ಇಲ್ಲ. ಆ ದಿನ ಖಂಡಿತ ಬಾರದಿರಲಿ ಎಂದು ಮನಃಪೂರ್ವಕ ಹಾರೈಸಿಕೊಳ್ಳುತ್ತ ಕಾರಿನತ್ತ ನಡೆದ.



ತಮ್ಮ ಮಧ್ಯೆ ಪಾಲಿನ ಆಟ ಯಾವಾಗ ಆರಂಭವಾಯಿತೆನ್ನುವುದು ಎಷ್ಟು ಯೋಚಿಸಿದರೂ ಅವನಿಗೆ ಹೊಳೆಯುವುದೇ ಇಲ್ಲ. 'ನಾವು' 'ನಮ್ಮದು' 'ನಮಗಾಗಿ' ಪದಗಳನ್ನು ಎಲ್ಲಿ ಬಚ್ಚಿಟ್ಟಿವೆ, ಎಲ್ಲಿ ಹುಗಿದಿಟ್ಟಿವೆ? ಎಲ್ಲೆಂದು ಹುಡುಕುವುದು, ಎಲ್ಲಿಂದ ಅಗೆಯುವುದು.

ತುಳಸಿ ವೇಣುಗೋಪಾಲ್



ಹತ್ತೆಂಟು ತಿಂಗಳಿಗೊಮ್ಮೆ ತೌರೂರಿನಿಂದ ನಮ್ಮ ಪೇಟೆ ಮನೆಗೆ ಹಾಜರಿ ಹಾಕುತ್ತಿದ್ದ ತಮ್ಮನ ಎರಡೂ ಕೈಗಳಲ್ಲಿ ಡೊಳ್ಳು ಬಿರಿಯುವಂತೆ ತುಂಬಿಕೊಂಡಿರುತ್ತಿದ್ದ ಕೈಚೀಲಗಳ ತುಂಬಾ ಹಲಸಿನಕಾಯಿ ಬುರುಬುರಿ, ಹಪ್ಪಳ, ತುಪ್ಪ, ಉಪ್ಪಿನಕಾಯಿ, ಅಲುಅಡಿಕೆಯ ಗಂಟುಗಳು. ಕುಪ್ಪಸದ ಖಣದಂತೆ ಮಡಿಸಿರುತ್ತಿದ್ದ ಹಲಸಿನ ಹಣ್ಣಿನ ಹಪ್ಪಳ. ನಮ್ಮ ತೋಟದ್ದೇ ಲಿಂಬೆಹಣ್ಣುಗಳು, ಮೆಣಸಿನಕಾಳು, ಏಲಕ್ಕಿ ಪತ್ರೊಡೆಗೆ ಕೆಸುವಿನೆಲೆ, ತಂಬುಳಿಗೆ ಕಾಕಿಕುಡಿ, ಪಲ್ಯಕ್ಕೆ ಕಳಲೆ, ಇತ್ಯಾದಿ ಇತ್ಯಾದಿಗಳು. ಕೂತ ಜಾಗದ ಸುತ್ತಾ ಅವನು ಒಂದೊಂದೇ ಗಂಟು ತೆಗೆದಿಟ್ಟ ಎಂದರೆ ಜಾತ್ರೆಯಲ್ಲಿ ಅಂಗಡಿ ಹರಡಿಕೊಂಡಂತೆ. ಚಳ್ಳೆಹುರಿಯಿಂದ ಬಿಗಿದು ಕಟ್ಟಿದ ಒಂದೊಂದರದೂ ಗಂಟು ಬಿಚ್ಚುತ್ತಾ, ಬಿಚ್ಚುತ್ತಾ, ತೌರೂರಿನ ಪುರಾಣವೂ ತೆರೆದುಕೊಳ್ಳುತ್ತಿತ್ತು. ಹೆತ್ತವರು, ಸತ್ತವರು, ಮದುವೆ ಗೊತ್ತಾದವರು, ಮದುವೆ ಆದವರು, ಸುತ್ತಮುತ್ತಲ ಹತ್ತು ಮನೆಗಳ ಕಥೆ ಅವನು ಹೇಳಬೇಕು, ನಾನು ಕೇಳಬೇಕು. ಅವತ್ತೂ ಹಾಗೇ. ಮಾತಾಡುತ್ತಾ, ಆಡುತ್ತಾ, ಫಕ್ಕನೆ ನೆನಪಾದವರಂತೆ ಹೇಳಿದ,


'ಪದ್ದಕ್ಕಂಗೆ ಚೀಟಿ ಬಂತು. ಇನ್ನೇನು ಭಾಳ ದಿನ ಇಲ್ಲ...'

'ಹೌದನೋ? ಎಂತಾಗಿದೆ?' ಎನ್ನುವಾಗ ದನಿಯಲ್ಲಿ ಸಣ್ಣಗೆ ನಡುಕ. ಪದ್ದಕ್ಕನ ಬಗ್ಗೆ ನನಗಿರುವ ಮೃದು ಭಾವನೆ ತಮ್ಮನಿಗೆ ಗೊತ್ತು. ಅವಳ ಬಗೆಗಿನ ಇಂತಾ ಸುದ್ದಿ ನನಗೆ ಬೇಜಾರು ಮಾಡುತ್ತದೆ ಎಂದೂ ಗೊತ್ತು.

'ಮಾರಾಯ್ತೀ, ನೀನೇನು ತಲೆ ಕೆಡಿಸ್ಗಂಬೇಡ. ಸದ್ಯ ಹಾಸಿಗೆ ಹಿಡ್ದು ನಬೀದೆ ದಾಟ್ಕಂಡ್ರೆ ಅವ್ರಿಗೂ ಸುಖ, ನಮ್ಗೂ ಸುಖ...' ಅಂದ ತಮ್ಮ. ಮೊದ ಮೊದ್ಲು ಹೊಟ್ಟೆಹುಣ್ಣು ಅಂತ್ಲೇ ಡಾಕ್ಟ್ರು ಅಂದಾಜು ಮಾಡಿದ್ದು, ಔಸ್ತಿ ಕೊಟ್ಟಿದ್ದು. ತಿಂದಿದ್ದು ದಕ್ಕದೆ, ಕುಡಿದದ್ದು ದಕ್ಕದೆ, ನಿತ್ರಾಣ ಹೆಚ್ಚಾಗ್ತಾನೇ ಹೋಯ್ತು. ಈಗ ಹೊಟ್ಟೆಯೊಳಗೆ ಆಗಿದ್ದು ಕ್ಯಾನ್ಸರ್‌ಹುಣ್ಣು ಅಂತಿದಾರಂತೆ.

'ಎಂತದೋ ಒಂದು. ಸಾಯ್ಯೋಕೆ ಒಂದು ನೆಪ...' ಅಂದಿದ್ದ ತಮ್ಮ. ಆಮೇಲೆ ಮತ್ತೊಂದೇನೋ ಸುದ್ದಿ ಪ್ರಸ್ತಾಪಕ್ಕೆ ಬಂದಿತ್ತು. ನನಗೆ ಮಾತ್ರ ಮೇಲೆ ಮೇಲೆ ಏನೇ ಪಟ್ಟಾಂಗ ಹೊಡೆದರೂ ಮನಸ್ಸಿನೊಳಗೆ ಪದ್ದಕ್ಕ ಗಿರಿಗಿಟ್ಟೆ ಸುತ್ತುತ್ತಲೇ ಇದ್ದಳು. ಹೊಟ್ಟೆಯೊಳಗೆ ಒಂದು ನಮೂನಿ ಸಂಕಟ. ಏನಾಗಬೇಕು ಪದ್ದಕ್ಕ ನನಗೆ? ಏನೂ ಅಲ್ಲ, ಮತ್ತು ಎಲ್ಲವೂ ಹೌದು. ನಮ್ಮಿಬ್ಬರ ಸಂಬಂಧ ಅಣ್ಣ ತಮ್ಮಂದಿರಿಗೆ ಚಾಷ್ಟೆ ಮಾತಿನ ವಸ್ತು. ಅಮ್ಮನಿಗೆ ಒಂದಲ್ಪ ಅಸಮಾಧಾನ.

ಮನುವನ



ವಸುಮತಿ ಉಡುಪ

ಋಣ


ಹಿನ್ನೆಲೆಯ ಕಥೆ ನನ್ನ ಬಾಲ್ಯದ ಹಾಗೂ ಯೌವನದ ಆರಂಭದ ದಿನಗಳೊಂದಿಗೆ ತಳುಕು ಹಾಕಿಕೊಂಡಂತಾದ್ದು. ಅದೊಂದು ಅಪರೂಪದ ಹಾಗೂ ಯೋಗಾಯೋಗದ ಸಂಬಂಧ ಕೂಡಾ.

ಹರಕೆ ಹೇಳಿಕೊಂಡಂತೆ ನಮ್ಮಮ್ಮನಿಗೆ ಎರಡು ವರ್ಷಕ್ಕೆ ಒಂದು ಫಲ. ಎಂಟು ಬಾಣಂತನಗಳಲ್ಲಿ ಒಂದು ಸಲ ಮಾತ್ರಾ, ಪರಾಮೋಶಿಯಾಯ್ತು. ನಾಲ್ಕನೆಯ ನನಗೂ, ಐದನೆಯವನಿಗೂ, ಬರೀ ವರ್ಷದ ವ್ಯತ್ಯಾಸ. ಇನ್ನೂ ನಡೆಯಲು ಕಲಿತಿರದ ರೋತೆ ಮಗು. ಅಮ್ಮನ ಮಗ್ಗುಲೇ ಬೇಕೆಂದು ಹಟ. ಎರೆದು ಮೊರದಲ್ಲಿ ಮಲಗಿಸಿದ್ದ ತಮ್ಮನನ್ನು ಎಳೆದು ದೂರ ಹಾಕಬೇಕೆಂದು ರಗಳೆ. ಅಪ್ಪನ ತಪರಾಕಿಯ ಹೆದರಿಕೆಯೂ ಇಲ್ಲದ ಚಂಡಿತನ. ಬಾಣಂತಿಗೆ ತಲೆ ಕೆಡುವಂತಾಯ್ತು.

'ಇಕಾ ಪದ್ದಕ್ಕ, ಇದನ್ನ ತಗೊಂಡ್ಹೋಗಿ ಗೊಬ್ರದ ಗುಂಡಿಗೆ ಬಿಸಾಕು. ಕುಕ್ಕ ಹೊತ್ಕೊಂಡ್ಹೋಗ್ಲಿ...' ಎಂದು ಅರ್ಧ ಸಿಟ್ಟಿನಲ್ಲಿ, ಅರ್ಧ ಅಸಹಾಯಕತೆಯಲ್ಲಿ, ಪದ್ದಕ್ಕನ ಶರಣು ಹೋದಳಂತೆ. ಕೈಕಾಲು ಕೊಸರುತ್ತಿದ್ದ ಮಗುವನ್ನು ಪದ್ದಕ್ಕ ಬಾಚಿ ಎತ್ತಿಕೊಂಡು ತನ್ನ ಮನೆಗೆ ಕರೆದುಕೊಂಡು ಹೋದಳಂತೆ. ಉಪ್ಪು, ತುಪ್ಪದನ್ನ ಕಲೆಸಿ, ತುದಿ ಬೆರಳಲ್ಲಿ ಮಿದ್ದು, ಸಣ್ಣ ಸಣ್ಣ ಉಂಡೆ ಮಾಡಿ, 'ಇದು ಪದ್ದಕ್ಕನ ತುತ್ತು, ಇದು ಅಪ್ಪನ ತುತ್ತು, ಇದು ಅಮ್ಮನ ತುತ್ತು...' ಎಂದು ಓಲೈಸಿ, ಗುಳುಕ್ಕನೆ ನುಂಗಿಸಿ, ನಡುನಡುವೆ ಸುತ್ತಿ ಕಾದಿರುತ್ತಿದ್ದ ಕಾಕ ಸಮೂಹಕ್ಕೆ ನೈವೇದ್ಯ ತೋರಿಸಿ, ಹೊಟ್ಟೆ ತುಂಬಿದ ಮೇಲೆ ಕಣ್ಣು ಬಾಡಿತು. ಮಗ್ಗುಲಲ್ಲಿ ಮಲಗಿಸಿಕೊಂಡು ಹಗೂರಕ್ಕೆ ತಟ್ಟುತ್ತಾ ಪದ್ದಕ್ಕ ಸಣ್ಣದನಿಯಲ್ಲಿ ಕತೆ ಹೇಳತೊಡಗಿದಳು. ಅರ್ಥ ಆಗಿದ್ದೆಷ್ಟೋ, ಬಿಟ್ಟಿದ್ದೆಷ್ಟೋ, ಪದ್ದಕ್ಕನ ಕೈತುತ್ತು ರುಚಿಸಿತು. ಕತೆ ಹಿಡಿಸಿತು. ನಿಧಾನಕ್ಕೆ ಮಗು ಪದ್ದಕ್ಕನಿಗೆ ಹೊಂದಿಕೊಂಡಿತು. ಆದರೆ ಹೊಂದಿಕೊಳ್ಳುವವರೆಗಿನ ಈ ಅವಧಿಯಲ್ಲಿ ಪದ್ದಕ್ಕ ಅನುಭವಿಸಿದ ಕಷ್ಟ, ತೋರಿಸಿದ ತಾಳ್ಮೆ, ಸುಮಾರಿಗಿದ್ದೋರ ಕೈಲಿ ಸಾಧ್ಯವಿಲ್ಲದ್ದು ಎನ್ನುವುದನ್ನು ಅಮ್ಮ ಬಣ್ಣಿಸಿ ಹೇಳುತ್ತಿದ್ದಳು. ತುಡು ತಿನ್ನುವುದನ್ನು ಇನ್ನೂ ಬಿಟ್ಟಿರದಿದ್ದ ಮಗು ಎಣ್ಣೆ ಎಣ್ಣೆ ರಾತ್ರಿ ರಾಗ ತೆಗೆಯುವುದು, ಯಾವ ಸಮಾಧಾನಕ್ಕೂ ಜಗ್ಗದೆ ತಲೆ ಚಿಟ್ಟು ಹಿಡಿಸುವಂತೆ ಅಳುವುದು, ಹಗಲಿಡೀ ಕತ್ತೆ ಕೆಲಸ ಮಾಡಿ ದಣಿದಿರುತ್ತಿದ್ದ ಪದ್ದಕ್ಕನಿಗೆ ರಾತ್ರಿ ಕಣ್ಮುಚ್ಚಿ ನಿಶ್ಚಿಂತೆಯಿಂದ ನಿದ್ದೆ ಮಾಡುವ ಸುಖವೂ ಇಲ್ಲ. ಅಪರಾತ್ರಿಯಲ್ಲಿ ಹೆಗಲಮೇಲೆ ಮಲಗಿಸಿಕೊಂಡು ತಟ್ಟುತ್ತಾ, ದೆವ್ವದ ಹಾಗೆ ಮನೆ ಸುತ್ತಾ ಓಡಾಡುತ್ತಾ ರಮಿಸಿದ ದಿನಗಳು ಎಷ್ಟೋ. ತಮಾಷೆ ಅಂದರೆ ಅಮ್ಮನ ಬಾಣಂತನದ ಅವಧಿ ಮುಗಿದು, ಬಾಲೆ, ಬಾಣಂತಿ ದೇವಸ್ಥಾನಕ್ಕೆ ಹೋಗಿ ಬಂದ ಶಾಸ್ತ್ರ ಪೂರೈಸಿ, ಅಮ್ಮ ಮನೆಕೆಲಸಕ್ಕೆ ಎದ್ದ ಮೇಲೂ ಮಗು ಪದ್ದಕ್ಕನಿಗೆ ಅಂಟುಪುರಲೆಯಂತೆ ಅಂಟಿಕೊಂಡಿದ್ದು. ಅಮ್ಮನಿಗೆ ಇದೇನು ಅಷ್ಟು ಚಂದ ಕಾಣಲಿಲ್ಲವಂತೆ. ''ಮೂರು ಹೊತ್ತೂ ಪದ್ದಕ್ಕನ ಸೆರಗು ಹಿಡ್ಕೊಂಡು ಸುತ್ತೋಕೆ ನಿಂಗೇನು ಮನೆ ಮಠ ಇಲ್ವಾ?' ಎನ್ನುತ್ತಾ ಆ ಚಾಳಿ ಬಿಡಿಸಲು ಆಗ, ಈಗ ಬೆನ್ನಿಗೆ ಕಡುಬು ಬೀಳುತ್ತಿತ್ತಂತೆ. ವಿಧಿ ಇಲ್ಲದೆ ಮೂರ್‍ನಾಕು ತಿಂಗಳು ಪದ್ದಕ್ಕನ ಕಾಲು ಹಿಡಿದದ್ದು ಹೌದು. ಆಮೇಲೂ ಸುಕಾಸುಮ್ಮನೆ ಯಾಕೆ ಹಂಗು? ಏನಾದರೂ ಪದ್ದಕ್ಕನನ್ನು ಸಂಪೂರ್ಣ ತೊರೆಸಲು ಯಾರಿಗೂ ಆಗಲಿಲ್ಲ. ನೆನೆಸಿಕೊಂಡಾಗೊಮ್ಮೆ ಪದ್ದಕ್ಕನ ಮನೆ ಹೊಕ್ಕು ಬಂದಿದ್ದರೆ ನನಗೆ ತಿಂದಿದ್ದು ಅರಗುತ್ತಿರಲಿಲ್ಲ.

ಪದ್ದಕ್ಕನ ಮನೆ ಅಂದರೆ ಅದೊಂದು ಅಡಿಕೆಸೋಗೆ ಹೊಚ್ಚಿದ ಗುಡಿಸಲು. ಮಧ್ಯೆ ಒಂದು ಅಡ್ಡಗೋಡೆ ಎಬ್ಬಿಸಿ ಎರಡಾಗಿ ವಿಭಾಗಿಸಿದ ದೊಡ್ಡದೊಂದು ಕೋಣೆ. ಹೊರ ಭಾಗದಲ್ಲಿ ಕಾಲು ಇಳಿಬಿಟ್ಟು ಕೂತುಕೊಳ್ಳುವಂತೆ ಸಣ್ಣದೊಂದು ಜಗುಲಿ. ಕರಿ ಬೆರೆಸಿದ ಸಗಣಿಯಿಂದ ಕಪ್ಪಗೆ ಸಾರಿಸಿದ ಮಣ್ಣು ನೆಲ. ಕೆಮ್ಮಣ್ಣು ಒರೆದು ನಯಸ್ಸು ಮಾಡಿದ ಮಣ್ಣಿನದೇ ಗೋಡೆ. ಮನೆಯ ಹಿಂದೆ, ಮುಂದೆ, ಒಂದಿಷ್ಟು ಜಾಗ. ಮುಂದಿದ್ದದ್ದು ಹೂ ತೋಟ. ಹಿಂದಿದ್ದದ್ದು ತರಕಾರಿ ಹಿತ್ತಿಲು. ನಮ್ಮ ಮನೆ ತಗ್ಗಿನ ಹೊಂಡದಲ್ಲಿದ್ದಂತಿದ್ದರೆ ಪದ್ದಕ್ಕನ ಮನೆ ದರೆಯ ಮೇಲೆ ನಮ್ಮ ಮನೆಯ ಹಿತ್ತಲ ಬದಿಯಿಂದ ದರೆಯಲ್ಲಿ ಕಡಿದು ಮಾಡಿದ ಹದಿನೈದಿಪ್ಪತ್ತು ಮೆಟ್ಟಿಲು ಹತ್ತಿ ಮೇಲೆ. ಹೋದರೆ ಪದ್ದಕ್ಕನ ಮನೆಯ


ಮುಂದಿನ ಅಂಗಳ.....ಅಸಲಿಗೆ.....ಅದು.....ನಮ್ಮದೇ.....ಜಾಗ.....ಅಪ್ಪ ಮುಂದಾಲೋಚನೆಯಿಂದ 'ಸಮಯ ಸಂದರ್ಭ ಅಂದ್ರೆ ಹತ್ತಿರ ಒಂದು ಜನ ಇರಲಿ' ಎಂದು ಬಿಟ್ಟುಕೊಟ್ಟದ್ದು. ಬಿಡಾರ ಹಾಕಿಸಿಕೊಟ್ಟದ್ದೂ ಅಪ್ಪನೇ. ಪದ್ದಕ್ಕ ತನ್ನ ತಾಯಿ ಪುಟ್ಟಮ್ಮನ ಜೊತೆ ನಿಮ್ಮ ನೆರಳು ಬೇಡಿ ಬಂದಾಗ ಅವಳಿಗೆ ಇನ್ನೂ ಪ್ರಾಯಕಾಲ. ಅಪ್ಪನ ವಾರಿಗೆ ಇರಬಹುದೆಂದು ಅಮ್ಮನ ಅಂದಾಜು. ಅಷ್ಟು ಹೊತ್ತಿಗಾಗಲೇ ಗಂಡನನ್ನು ಕಳೆದುಕೊಂಡು, ಮಡಿ ಹೆಂಗಸಾಗಿ, ಕೆಂಪು ಸೀರೆ ಉಡುತ್ತಿದ್ದ ಪದ್ದಕ್ಕ ತನ್ನಂತದೇ ವೇಷದ ತನ್ನಮ್ಮನ ಜೊತೆ ಯಾವುದೋ ಬಾದರಾಯಣ ಸಂಬಂಧದ ಸುಳು ಹಿಡಿದು ಮನೆ ಮೆಟ್ಟಲು ಹತ್ತಿದಾಗ ಅಮ್ಮನಿಗೆ ಇಂತಾ ಪರ್ದೇಶಿಗಳನ್ನು ಮನೆ ಹೊಗ್ಗಿಸಿಕೊಳ್ಳಲು ಚೂರೆಂದರೆ ಚೂರೂ ಇಷ್ಟವಿರಲಿಲ್ಲವಂತೆ. ಆದರೆ ಜೋರಾಗಿ ಹೇಳುವ ಗಂಟಲೂ ಇಲ್ಲ. ಚೊಚ್ಚಲು ಬಸುರಿ. ಮನೆಯಲ್ಲಿ ಬೇರೆ ಹೆಣ್ಣು ದಿಕ್ಕಿಲ್ಲ. 'ಇದ್ದಂಡ್ಹೋಗ್ಲಿ, ಒಂತುತ್ತು ಅನ್ನ ಹಾಕಿದ್ರೆ ನಮ್ಗೇನು ಬಡಸ್ತಿಕೆ ಬರಲ್ಲ' ಎಂದು ಅಪ್ಪ ಔದಾರ್ಯ ತೋರಿಸಿದ.



'ಬೇರೆ ಒಂದು ಜಾಗ ಮಾಡಿ ಕೂರ್ಸಿದ್ರಾಗ್ತಿತ್ತು. ಹೆಂಗಿದ್ದೋವೋ, ಎಂತಾ ಕತೆಯೋ? ಮೂರ್ಹೊತ್ತೂ ಕೈ, ಬಾಯಿ ಕಾದ್ಕೊಂಡು ಕೂತಿರೋಕಾಗುತ್ತಾ?' ಎಂದು ಅಮ್ಮ ಕುಂಯ್ಗುಟ್ಟಿದಕ್ಕೆ ಸಮನಾಗಿ ಪದ್ದಕ್ಕನೂ ಬೇರೆ ಕೂರುವ ಬಗ್ಗೆ ಒಲವು ತೋರಿಸಿದ್ದರಿಂದ, ಅಪ್ಪನಿಗೂ, 'ತೀರಾ ಒಳಗೇ ಬಿಟ್ಕೊಳ್ಳೋದು ಬ್ಯಾಡ' ಎಂದು ಸ್ವತಾ ಅನಿಸಿದ್ದರಿಂದ, ಆ ಸಂಸಾರಕ್ಕೆ ಒಂದು ಹೊಸಾ ಬಿಡಾರ ತಯಾರಾಗಿ ಮನೆ ಒಕ್ಕಲೂ ಆಯ್ತು. ನಮ್ಮಮ್ಮನಿಗೆ ಸುಲುಭಕ್ಕೆ ಯಾರ ಸಾವಾಸವೂ ಪಥ್ಯವಾಗುತ್ತಿರಲಿಲ್ಲ. 'ದಿನಗಟ್ಲೇಲಿ ಮನೆ ಕೆಲಸ ಎಷ್ಟಿರುತ್ತೆ? ಎಂತಿರುತ್ತೆ? ನಾ ಮಾಡ್ಕಂತೀನಿ...' ಎಂದು ಬಿಟ್ಟಳು. ಪದ್ದಕ್ಕನಿಗೆ ತುತ್ತು ಗಂಜಿಗೆ ಕಣ್ಣು ಕಣ್ಣು ಬಿಡಬೇಕಾದಷ್ಟು ದುರವಸ್ಥೆ ಇರಲಿಲ್ಲ. ಮೊದಲು, 'ವರ್ಷಕ್ಕೆಂತಿಷ್ಟು...' ಎಂದು ಒಂದು ಸಣ್ಣ ಮೊತ್ತದ ಹಣ ಗಂಡನ ಮನೆಯಿಂದ ಅಶನಾರ್ಥವಾಗಿ ಬರುವ ವ್ಯವಸ್ಥೆ ಇತ್ತು. ಅದನ್ನೂ ಸುಸೂತ್ರವಾಗಿ ಅವರು ಕೊಡುತ್ತಿರಲಿಲ್ಲವಂತೆ. 'ಆಗ ಬಾ, ಈಗ ಬಾ...' ಎಂದು ಹತ್ತು ಸಲ ಅಲೆಸಿ, ಕೊನೆಯಲ್ಲಿ ಹೆಬ್ಬೆಟ್ಟು ಒತ್ತಿಸಿಕೊಂಡು ಭಿಕ್ಷೆ ಹಾಕಿದ ಹಾಗೆ ಬಿಸಾಕುತ್ತಿದ್ದರಂತೆ. ಪದ್ದಕ್ಕ ತಮ್ಮಲ್ಲೇ ಗೇದುಕೊಂಡು ಬಿದ್ದಿರಬೇಕು ಎಂದು ಅವರ ಮಸಲತ್ತು. ಕೆಲವು ವರ್ಷ ಹಾಗೆ ಗೆಯ್ದೂ ಗೆಯ್ದಳು. ಆಮೇಲಾಮೇಲೆ ಅಲ್ಲಿ ಮತ್ತೇನದೋ ಕಿತಾಪತಿ ಶುರುವಾಯ್ತಂತೆ. 'ಏನು?' ಎಂದು ಪದ್ದಕ್ಕ ಗುಟ್ಟು ಒಡೆಯದಿದ್ದರೂ ಅಮ್ಮ ಅವರ ಅಂದಾಜು ಮಾಡಿಬಿಟ್ಟಳಂತೆ. 'ಗಣುಸ್ರ ಹಣೇಬರ ನಂಗೊತ್ತಿಲ್ವಾ? ಓತಿ ಮಕ್ಳ ಗೋತ್ರ, ಎಲ್ಲಾ ಒಂದೇ...' ಎಂದು ಅವಳು ಸಲೀಸಾಗಿ ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗಿದರೂ ಅಪ್ಪನ ಬಗ್ಗೆ ಮಾತ್ರಾ ವಿನಾಯಿತಿ. ನಂಬುಗೆ. ಪದ್ದಕ್ಕ ಗಂಡನ ಮನೆ ತೊರೆದು ಎಡವಿಬಿದ್ದರೆ ಮುಟ್ಟುವಷ್ಟು ಹತ್ತಿರದಲ್ಲಿದ್ದ ತೌರುಮನೆ ಸೇರಿಕೊಂಡಳು. ಅಶನಾರ್ಥದ ಒಂದು ಒಪ್ಪಂದ ಆಯ್ತು. ಗ್ರಾಚಾರ ಅಲ್ಲೂ ನೆಟ್ಟಗಿರಲು ಬಿಡಲಿಲ್ಲ. ಪುರೋಹಿತಿಕೆ ಮಾಡಿ ಹೊಟ್ಟೆ ಹೊರೆಯುತ್ತಿದ್ದ ಅವಳ ಅಪ್ಪ ಪೆಟ್ಟಿಗೆ ಕಟ್ಟಿದರು. ಅತ್ತ ಗಂಡನ ಮನೆಯಿಂದ ದಿವಸಾ ಅನ್ನುವ ಹಂಗೆ ಒಂದು ಮಾಣಿ ವಸಗೆ ತಗೊಂಡು ಬರುತ್ತಿತ್ತು. ಬಾಣಂತನ, ವೈದೀಕ, ಹಬ್ಬ ಹುಣ್ಣಿಮೆ, ತುಂಬಿದ ಮನೆಯಲ್ಲಿ ಮುನ್ನೂರರವತ್ತೈದು ದಿನಾನೂ ಕೆಲಸಕ್ಕೆ ಬರ ಇಲ್ಲ. ಪದ್ದಕ್ಕ ಕರೆ ಬಂದ ಕೂಡಲೆ ಹೋಗಬೇಕು. ಚೂರು ಹೆಚ್ಚು ಕಮ್ಮಿ ಆದರೂ ಕೊಂಕಿನ ಮಾತು. ಹೋದರೆ ಸಸಾರ, ಹೋಗದಿದ್ರೆ ನಿಷ್ಠುರ ಅನ್ನೋ ಪರಿಸ್ಥಿತಿ. ಅಮ್ಮ, ಮಗಳು ಮಾತಾಡಿಕೊಂಡು ಊರು ಬಿಡಲು ನಿಶ್ಚೈಸಿದರು. ನಾಲ್ಕು ಜನ ದೊಡ್ಡ ಮನುಷ್ರ ಕಾಲು ಕಟ್ಟಿಕೊಂಡು ವರ್ಷಕ್ಕೊಮ್ಮೆಯ ಅಶನಾರ್ಥದ ಬದಲು ಒಟ್ಟುಗಟ್ಲೆಯಾಗಿ ಒಂದಿಷ್ಟು ದುಡ್ಡು ಕೊಡಿಸಬೇಕೆಂದು ಬೇಡಿಕೊಂಡರು. ಸಣ್ಣದೊಂದು ಪಂಚಾಯ್ತಿ ಆಗಿ ಕೊನೆಗೂ ಅರೆ ಮನಸ್ಸಿನಿಂದ ಪದ್ದಕ್ಕನ ಕೈಗೆ ಐದುಸಾವಿರದ ಗಂಟು ಬಂತು. ಬದಲಿಗೆ, 'ತನಗೆ ಗಂಡನ ಮನೆ ಆಸ್ತಿಯಲ್ಲಿ ಇನ್ನು ಮುಂದೆ ಯಾವ ಹಕ್ಕೂ ಇಲ್ಲ. ಆಸ್ತಿಯ ಬದಲಿಗೆ ನಗದು ಸಂದಾಯವಾಗಿದೆ' ಎನ್ನುವ ಪತ್ರಕ್ಕೆ ಪದ್ದಕ್ಕ ಹೆಬ್ಬೆಟ್ಟು ಒತ್ತಿ ಅಲ್ಲಿನ ಋಣ ಕಡಿದುಕೊಂಡಳು. ಆ ಕಾಲದಲ್ಲಿ ಐದು ಸಾವಿರ ಅಂದರೆ ತೀರಾ ಸಣ್ಣ ಮೊತ್ತ ಏನಲ್ಲ. 'ದಾರಿಯಲ್ಲಿ ಯಾರಾದರೂ ತಲೆ ಒಡೆದು ದೋಚಿದರೆ...' ಎನ್ನುವ ಪುಕ್ಕಲಿನಲ್ಲೇ ಅಮ್ಮ, ಮಗಳು, ಜೀವ ಕೈಲಿ ಹಿಡಿದು ನಮ್ಮಲ್ಲಿಯವರೆಗೆ ಬಂದದ್ದಂತೆ. ಅದೂ ಇಲ್ಲಿಗೇ ಬರಬೇಕು, ಇಲ್ಲೇ ಇರಬೇಕು ಎನ್ನುವ ಉದ್ದಿಶ್ಯ ಕೂಡಾ ಇರಲಿಲ್ಲ. 'ದಾಯಾದಿಗಳು ಫಕ್ಕನೆ ಬರುವುದಕ್ಕೆ ಆಗದಿದ್ದಷ್ಟು ದೂರ...' ಎಂದು ಪದ್ದಕ್ಕ ಅಂದಾಜು ಮಾಡಿಕೊಂಡಿದ್ದು. ಅವಳೇ ಹೇಳುವ ಹಾಗೆ, 'ಯಾರ್‍ಯಾರ ಅನ್ನದ ಋಣ, ನೀರಿನ ಋಣ, ಎಲ್ಲೆಲ್ಲಿರುತ್ತೋ ಅಲ್ಲಿಗೆ ವಿಧಿ ಎಳಕೊಂಡು ಹೋಗುತ್ತೆ'. 'ವರ್ಷಕ್ಕಿಷ್ಟು' ಎಂದು ಬಡ್ಡಿ ಕೊಡುವ ಒಪ್ಪಂದದ ಮೇಲೆ ದುಡ್ಡಿನ ಗಂಟು ಅಪ್ಪನ ಟ್ರೆಝುರಿ ಸೇರಿತು. ಅಮ್ಮನ ಪ್ರಕಾರ ಪದ್ದಕ್ಕ ಕಾಣಲಿಕ್ಕೆ ಮಿಣ್ಣಗಿದ್ದರೂ ಹೆಡ್ಡಿ ಏನಲ್ಲ. ನಮ್ಮಲ್ಲಿಗೆ ಬಂದು, ಮೂರ್‍ನಾಲ್ಕು ವರ್ಷ ಕಳೆದು, ಅಪ್ಪನ ರೀತಿ ನೀತಿಯ ಮೇಲೆ ನಂಬುಗೆ ಹುಟ್ಟಿದ ಮೇಲೇ ದುಡ್ಡಿನ ಗಂಟು ಹೊರಗೆ ಬಂದದ್ದಂತೆ. ಅದರಲ್ಲಿ ತುರ್ತಿಗೆ ಎಂದು ನೂರೈವತ್ತರಷ್ಟು ಹುಡಿಯಾಗಿತ್ತಂತೆ. ಉಳಿದದ್ದನ್ನು ಪದ್ದಕ್ಕ ಅಪ್ಪನ ಕೈಗೆ ಒಪ್ಪಿಸಿದಳು. ಅಪ್ಪನೂ ನ್ಯಾಯ ಬಿಟ್ಟು ನಡೆಯಲಿಲ್ಲ. ವರ್ಷಾವಧಿಯ ಮನೆ ಖರ್ಚಿಗೆ ಪದ್ದಕ್ಕ ಹತ್ತು ದಾರಿ ಹುಡುಕಿಕೊಂಡಿದ್ದಳು. ನಮ್ಮ ಮನೆಯಲ್ಲಿ ಏನೇ ಅನುವು, ಆಪತ್ತು, ವಿಶೇಷ ಕಟ್ಲೆಯಾದರೂ ಪದ್ದಕ್ಕ ಬೆಳಗಾ ಮುಂಚೆ ಕಾಗೆ 'ಕರ್‍ರ್...' ಅನ್ನುವುದರೊಳಗೆ ಎದ್ದು, ಮೈ ತೊಳೆದುಕೊಂಡು, ಬಂದುಬಿಡುತ್ತಿದ್ದಳು. 'ತೊಳಿ, ಬಳಿ'ಯಿಂದ ಶುರುವಾಗಿ ಯಾವ ಕೆಲಸ ಮಾಡಬೇಕು, ಯಾವುದು ಮಾಡಬಾರದು ಎನ್ನುವ ಪಕ್ಷಪಾತ ಇಲ್ಲ. ಪದ್ದಕ್ಕ ಬಂದಳು ಅಂದರೆ ಅಮ್ಮನಿಗೆ ಸಲೀಸು. ಯಾವ ತಲೆಬಿಸಿಯೂ ಇಲ್ಲ. ಬೇರೆ ದಿನಗಳಲ್ಲಿ ಸ್ವಲ್ಪ ಮುಗುಮ್ಮಾಗಿ ವ್ಯವಹರಿಸುವ ಠೇಂಕಾರದ ಅಮ್ಮ ಇಂಥಾ ದಿನಗಳಲ್ಲಿ ಪದ್ದಕ್ಕನನ್ನು ಎಷ್ಟು ಬೇಕಾದರೂ ಓಲೈಸುತ್ತಿದ್ದಳು. 'ಪದ್ದಕ್ಕಾ, ಕಾಫಿ ಕುಡ್ಕಾ, ತಿಂಡಿ ತಿಂದ್ಕಾ...' ಎಂದು ಉಪಚಾರ ಹೇಳುತ್ತಿದ್ದಳು. ಪದ್ದಕ್ಕನಿಗೂ ಅಮ್ಮನ ಈ ಸ್ವಭಾವ ಅಭ್ಯಾಸ ಆಗಿದ್ದರಿಂದ ಅವಳು ಕೆಲಸ ಇಲ್ಲದೆ ಸುಮ್ಮ ಸುಮ್ಮನೆ ಮನೆಗೆ ಬಂದು ಕೂರುತ್ತಿರಲಿಲ್ಲ. ಮದುವೆ, ಮುಂಜಿಯಂತಾ ದೊಡ್ಡ ಸಂತರ್ಪಣೆಗಳಾದರೆ ಅಡಿಗೆಭಟ್ಟರು ಬಂದರೂ ಪದ್ದಕ್ಕನಿಗೆ ಸೊಂಟಮುರೀಗೆಯ್ತು

ಕಮ್ಮಿಯಾಗುತ್ತಿರಲಿಲ್ಲ. ವಾರಗಟ್ಟಲೆ ಮುಂಚೆಯಿಂದ ಅಟ್ಟದ ಮೇಲಿನ ದೊಡ್ಡ ದೊಡ್ಡ ಡಬರಿ, ಕಡಾಯಿ ಇಳಿಸಿ, ಹುಳಿ, ಬೂದಿ, ಹಚ್ಚಿ ಬೆಳಗಿಡುವುದರಿಂದ ಶುರುವಾದರೆ ಮತ್ತೆ ಅವನ್ನು ಅಟ್ಟಕ್ಕೆ ಸೇರಿಸುವವರೆಗೆ ಪದ್ದಕ್ಕನ ಹೆಣ ಬಿದ್ದುಹೋಗುತ್ತಿತ್ತು. ಅಕ್ಕಿ, ಬೇಳೆ, ವೈನ ಮಾಡುವುದು, ಹಿಟ್ಟು ಸಾಣಿಸಿಡುವುದು, ಮನೆಯ ಹಸರಣೆ ಸೇರಿಸಿಟ್ಟು ಚೊಕ್ಕ ಮಾಡುವುದು ಎಂದು ಮೊದಲಿಗೆ ನೂರೆಂಟು ಕೆಲಸ. ಸಂತರ್ಪಣೆ ಮನೆ ಮುಗಿದ ಮೇಲೆ ಅಡಿಗೆ ಭಟ್ಟರು ಗೆರಚಿ ಹೋಗಿದ್ದನ್ನು ಒಪ್ಪ ಮಾಡುವುದು ಮತ್ತೊಂದು ರಾಮಾಯಣ. ಅವರಿಗೇನಂತೆ, ಹೆಂಗಿದ್ದದ್ದನ್ನ ಹಂಗೇ ಬಿಟ್ಟು ಪಾಣಿಪಂಚೆ ಕೊಡಕಿ ಹೆಗಲ ಮೇಲೆ ಹಾಕಿಕೊಂಡು ಎದ್ದುಬಿಡುತ್ತಾರೆ. ಎಲ್ಲಾ ಒಂದು ಹದಕ್ಕೆ ತರಬೇಕಾದರೆ ವಾರಗಟ್ಟಲೆ ಬೇಕು. ಪದ್ದಕ್ಕ ಅನಿವಾರ್ಯ. ಮನೆಯ ಯಾವ ಯಾವ ವಸ್ತುವನ್ನು ಎಲ್ಲೆಲ್ಲಿ ಸೇರಿಸಿಡಬೇಕೆಂದು ರೂಢಿ ಅವಳಿಗೆ ಚೆನ್ನಾಗಿ ಕಲಿಸಿಕೊಟ್ಟಿದೆ.


'ಈಗಾದ್ರೆ ರಗಳೆ ಇಲ್ಲ ಮಾರಾಯ್ತೀ, ದುಡ್ಡೊಂದಿದ್ರೆ ಯಾವ ಊರಿಗೆ ಬೇಕಾರೂ ಕೈ ಬೀಸ್ಕಂಡು ಹೋಗಿ ಮದುವೇನೋ, ಮುಂಜೇನೋ ಮಾಡ್ಕಂಬರಬಹ್ದು' ಎಂದು ಅಮ್ಮ ಇವತ್ತಿನ ದಿನಮಾನಗಳ ಬಗ್ಗೆ ಮೆಚ್ಚಿಕೆಯ ಮಾತಾಡುತ್ತಾಳೆ. ಪದ್ದಕ್ಕನ ಹತ್ತಿರ ದುಡಿಸಿಕೊಂಡಿದ್ದಕ್ಕೆ ಪ್ರತಿಯಾಗಿ ಅಮ್ಮ ಕೈಬಿಚ್ಚಿ ಧಾರಾಳವಾಗಿ ಕೊಡಿಸುತ್ತಿದ್ದಳು. 'ಸುಮ್ನೆ ಅದರ ಋಣ ಎಂತಕ್ಕೆ? ನಾಕು ಕಾಸು ಜಾಸ್ತೀನೇ ಕೊಟ್ಟಿಡಿ. ಅದಕ್ಕೂ ಒಂದು ಆಸೇಂತ ಇರುತ್ತೆ. ಕರೆದ ಕೂಡ್ಲೆ ಓಡೋಡಿ ಬರುತ್ತೆ ಎಂದು ಅಮ್ಮ ಮಾತು ಹಾಕಿದ ಮೇಲೆ ಆಯ್ತು. ನನಗೆ ಬುದ್ಧಿ ತಿಳಿದ ಮೇಲೆ ನಾನು ಅಂದಾಜು ಮಾಡಿದಂತೆ ಪದ್ದಕ್ಕನಿಗೆ ಯಾರು ಎಷ್ಟು ಕೊಡುತ್ತಾರೆ, ಬಿಡುತ್ತಾರೆ ಎನ್ನುವುದು ಮುಖ್ಯವಲ್ಲ. ಊರಲ್ಲಿರುವ ನಾಲ್ಕಾರು ಬ್ರಾಂಬರ ಮನೆಗಳಲ್ಲಿ ಯಾರು ಯಾವ ಸಂದರ್ಭಕ್ಕೆ ಕರೆದರೂ ಪದ್ದಕ್ಕ ಹೋಗುತ್ತಾಳೆ. ಕೈಲಾದ ಕೆಲಸ ಮಾಡುತ್ತಾಳೆ. ತಾಂಬೂಲದ ಪಟ್ಟಿಯ ಜೊತೆ



ಇಟ್ಟುಕೊಟ್ಟ ದುಡ್ಡನ್ನು 'ಎಷ್ಟು?' ಎಂದು ವಾರೆಗಣ್ಣಲ್ಲೂ ಗಮನಿಸದೆ ಸೀರೆಯ ಬಾಳೆಕಾಯಿಗಂಟಿಗೆ ಸಿಕ್ಕಿಸಿಕೊಳ್ಳುತ್ತಾಳೆ. ಇಂತಹ ನಿರ್ಲಿಪ್ತ ಸ್ವಭಾವದ ಹೆಂಗಸಿಗೆ ಗಂಡನ ಮನೆ ಬಳಗ ಸೊಗಸದೆ ಊರು ತೊರೆಸುವಂತೆ ಮಾಡಲು ಅಮ್ಮ ಹೇಳುವಂತೆ ಬಲವಾದ ಕಾರಣವೇ ಇದ್ದೀತು. ಅಂತೂ ಪದ್ದಕ್ಕನನ್ನು ನಮ್ಮೂರು ಬಿಟ್ಟು ಹಾಕಲಿಲ್ಲ. ಯಾರ ಮನೆ ಬಾಗಿಲಿಗೆ ಹೋದರೂ ಪದ್ದಕ್ಕ, 'ಹಚ... ಹಚಾ...' ಅನ್ನಿಸಿಕೊಳ್ಳಲಿಲ್ಲ. 'ಬಾ, ಪದ್ದಕ್ಕಾ...' ಎಂದು ಎಲ್ಲರೂ ಅಡಿಗೆ ಮನೆಗೆ ಕರೆದು ಮಣೆ ಹಾಕಿ ಕೂರಿಸುವವರೇ ಹೊರತು, 'ಯಾಕೆ ಬಂದಿ?' ಎಂದು ಯಾರೂ ಅಡ್ಡನಿಂತು ಕೇಳಿದ್ದಿಲ್ಲ. 'ಕ್ಷಣ ಚಿತ್ತ, ಕ್ಷಣ ಪಿತ್ಥ' ಸ್ವಭಾವದ ನಮ್ಮಮ್ಮನೇ ಬೇಕಾದಾಗ ಒಂದು ಥರ, ಬೇಡವಾದಾಗ ಒಂದು ಥರ ನಡೆಸಿಕೊಂಡಿದ್ದಿರಬಹುದು. ಬಹುಶಃ ಅದು ಸಾಮಿಪ್ಯದಿಂದುಂಟಾದ ಅವಗಣನೆ ಕೂಡಾ ಇರಬಹುದು.

ಅಡಿಕೆ ಕೊಯ್ಲಿನ ಕಾಲದಲ್ಲಿ ಪದ್ದಕ್ಕ ಸುಮಾರು ದುಡ್ಡು ಮಾಡಿಕೊಳ್ಳುತ್ತಿದ್ದಳು. ಮನೆಕೆಲಸದ ಆಳುಗಳು ದಿನದ ಕೂಲಿ ಕೆಲಸ ಮುಗಿಸಿ ಸಂಜೆಯ ಹೊತ್ತಿಗೆ ಅಡಿಕೆ ಸುಲಿಯಲು ಮೆಟ್ಟುಗತ್ತಿ ಹೂಡಿದರೆ ಪದ್ದಕ್ಕ ಬೆಳಗಿಂದ ನಡುರಾತ್ರಿಯವರೆಗೂ ಅಡಿಕೆ ಸುಲಿತ ಮಾಡುತ್ತಿದ್ದಳು. ಆ ಹೊತ್ತಿಗೆ ಹೆಚ್ಚು ಕಡಿಮೆ ಎರಡೂವರೆ, ಮೂರು ತಿಂಗಳು ಅವಳ ಹೊಟ್ಟೆ ಪಾಡು ನಮ್ಮಲ್ಲೇ. ಅತ್ಯಗತ್ಯಕ್ಕಷ್ಟೇ ಕತ್ತಿ ಮಡಿಸಿಟ್ಟು ಮೇಲೇಳುತ್ತಿದ್ದ ಪದ್ದಕ್ಕ ಉಳಿದಂತೆ ಗೊಂದು ಹಾಕಿ ಅಂಟಿಸಿದಂತೆ ಮೆಟ್ಟುಗತ್ತಿಯ ಮೇಲೆ ಸ್ಥಾಪನೆಯಾಗಿರುತ್ತಿದ್ದಳು. ಕೊಳಗಗಟ್ಟಲೆ ಅಡಿಕೆ ಸುಲಿದು ಬುಟ್ಟಿ ತುಂಬಿಸುತ್ತಿದ್ದ ಅಂತಾ ಒಂದು ಗಟ್ಟಿ ಜನ ಇಲ್ಲದಿದ್ದರೆ ಹಂಡೆ ತುಂಬದೆ ಬೆಳಗ್ಗೆ ಅಡಿಕೆ ಬೇಯಿಸಲು ಚೊಟ್ಟೆಯಾಗುತ್ತದೆ ಎಂದು ಅಪ್ಪ, ಅಮ್ಮನಿಗೆ ಗೊತ್ತು. ಹಾಗಾಗಿ ಅವಳಿಗೆ ಜೋರು ಉಪಚಾರ. ಕುಟ್ಟಿ ಬಾರಿಸುವ ಚಳಿಗೆ, ಅಡಿಕೆ ರಸದ ಚೊಗರಿಗೆ, ಒಡೆದು ಸೀಳಿದ ಅಂಗೈ, ಅಂಗಾಲುಗಳಿಗೆ ವ್ಯಾಸಲೀನು. ಅಣ್ಣನ ಜೂಲುಜೂಲಾಗಿ ಕಂಡಿ ಬಿಟ್ಟುಕೊಂಡ ಒಂದು ಹಳೆ ಸ್ವೆಟರನ್ನು ರಾತ್ರಿಯ ಚಳಿ ತಡೆಯಲಾರದೆ ಪದ್ದಕ್ಕ ಧರಿಸುತ್ತಿದ್ದುದು ಇತ್ತಾದರೂ ಅದನ್ನು ಬೇರೆ ಯಾರಾದರೂ ಕಂಡರೆ ಅವಳಿಗೆ ಎಂತದೋ ನಾಚಿಕೆ. ತಲೆಮೇಲಿಂದ ಇಳಿದ ಕೆಂಪು ಸೀರೆಯ ಸೆರಗನ್ನು ಸ್ವೆಟರು ಕಾಣದಂತೆ ಬಿಗಿಯಾಗಿ ಹೊದ್ದುಕೊಂಡಿರುತ್ತಿದ್ದಳು. ಯಾರ್ಯಾರು ಎಷ್ಟೆಷ್ಟು ಕೊಳಗ ಅಡಿಕೆ ಸುಲಿದರು ಎಂದು ಅಳತೆ ಮಾಡಿಸಿ ಅಪ್ಪ ಲೆಕ್ಕ ಬರೆದುಕೊಂಡು ಮೇಲೆ ಜುಮ್ಮುಗಟ್ಟಿದ ಕಾಲು, ನೋಯುವ ಬೆನ್ನುಕೋಲುಗಳನ್ನು ನೆಟ್ಟಗಾಗಿಸಿಕೊಂಡು ಪದ್ದಕ್ಕ. ಮಿಣಿ ಮಿಣಿ ಎನ್ನುವ ಸೆಲ್ಲು ಮುಗಿಯುತ್ತಾ ಬಂದ ಬ್ಯಾಟರಿ ಬೆಳಕು ಬಿಟ್ಟುಕೊಂಡು ಮನೆ ಸೇರಿಕೊಳ್ಳುತ್ತಿದ್ದಳು. ವಾಸ್ತವವಾಗಿ ಪದ್ದಕ್ಕನ ಅಮ್ಮನ ಬಗ್ಗೆ ನಾನು ಕೇಳಿ ತಿಳಿದದ್ದೇ ಹೊರತು ನೋಡಿ ಗೊತ್ತಿಲ್ಲ. ನಾನು ಹುಟ್ಟುವ ಮೊದಲೇ ಅವರಿಗೆ ಕರೆ ಬಂದು ಹೋಗಿಯಾಗಿತ್ತು. ಆಮೇಲೆ ಮನೆಯಲ್ಲಿ ಪದ್ದಕ್ಕ ಒಬ್ಬಳೇ. ಹಸಿಬಿಸಿ ವಯಸ್ಸಿನ ನನಗೆ ಒಂದು ಮನೆಯಲ್ಲಿ ಪದ್ದಕ್ಕ ಒಬ್ಬಳೇ ಮಲಗುವ ಕಲ್ಪನೆಯೇ ಮೈ ಚುಂಗರಿಸುತ್ತಿತ್ತು. ಆಳುಕಾಳುಗಳ ಬಾಯಿಂದ ಆಗೀಗ ಕೇಳುತ್ತಿದ್ದ ಚೌಡಿ, ಕಲ್ಲುಕುಟಿಗ, ಭೂತ ಪ್ರೇತಗಳ ಕತೆಗಳು ನಮ್ಮ ನೆರಳಿಗೇ ನಾವು ಹೆದರುವಷ್ಟು ಪುಕ್ಕಲರನ್ನಾಗಿ ಮಾಡಿಬಿಟ್ಟಿದ್ದುವು. ರಾತ್ರಿ ಒಂದು ಹೊತ್ತಿನಲ್ಲಿ ಎಚ್ಚರವಾದರೆ ಸಣ್ಣಕ್ಕೆ ಕುಗುರುವಂತ್ತಿರುತ್ತಿದ್ದ ಲ್ಯಾಂಪಿನ ಮಬ್ಬು ಬೆಳಕಿನಲ್ಲಿ ಯಾವ್ಯಾವುದೋ ಆಕೃತಿಗಳು ಕಣ್ಣಮುಂದೆ ಕುಣಿದಾಡಿದಂತಾಗಿ ಚೀರುವ ಹಾಗಾಗುತ್ತಿತ್ತು.


ಬಚ್ಚಲುಮನೆಗೆ ಎದ್ದು ಹೋಗಬೇಕಾದ ಅನಿವಾರ್ಯ ಬಂದರಂತೂ ಬೆನ್ನ ಹಿಂದೆ ಬಾಲ ಇರಲೇಬೇಕು. ಹಾಗಿದ್ದರೂ ನನ್ನ ಎದೆಯ ದಡಬಡ ನನ್ನ ಕಿವಿಗೇ ಕೇಳುವ ನಾನು ಧೈರ್ಯಸ್ಥೆ. ಇಂತಾ ನನಗೆ ಪದ್ದಕ್ಕನ ಯಮಗುಂಡಿಗೆಯ ಬಗ್ಗೆ ಸಹಜವಾಗಿ ಮಚ್ಚಿಕೆ, ಆದರ. ಈ ಮೆಚ್ಚುಗೆ ಅಪ್ರಬುದ್ಧ ವಯಸ್ಸಿನ ಹಳ್ಳಿಹುಡುಗಿಯೊಬ್ಬಳ ಕುರುಡು ನಂಬಿಕೆ ಮಾತ್ರವಲ್ಲ ಎನ್ನುವುದನ್ನು ಮನದಟ್ಟು ಮಾಡಲು ಒಂದು ಉಪಕತೆ. ಒಂದು ಅಡಿಕೆಕೊಯ್ಲಿನ ಕಾಲದಲ್ಲಿ ಪದ್ದಕ್ಕ ಅಡಿಕೆ ಸುಲಿತ ಮುಗಿಸಿ ಯಥಾಪ್ರಕಾರ ನಡುರಾತ್ರಿಯ ಹೊತ್ತಿಗೆ ಮನೆಗೆ ಹೋದಳು. ಹೊಟ್ಟೆ ಕರುಳೆಲ್ಲಾ ಗಡಗಡ ನಡುಗುವಷ್ಟು ಚಳಿ. ಚರ್ಮ ಇರಿಯು, ಮೂಳೆ



ಕೊರೆಯುವ ಥಂಡಿ. ಇಂಥಾ ಹೊತ್ತಿನಲ್ಲಿ ಚೊಗರು ಕೂತು ಕಪ್ಪಾಗಿ ಕೂದಲೆಳೆಯಂತೆ ಸೀಳು ಬಿಟ್ಟುಕೊಂಡಿರುವ ಕೈಗಳನ್ನು ತಣ್ಣೀರಿನಲ್ಲಿ ತೊಳೆಯುವುದು ಎಂದರೆ ಒಂದು ಯಮಶಿಕ್ಷೆ. ಕಣ್ಣಲ್ಲಿ ಅಪ್ರಯತ್ನವಾಗಿ ದಳಕ್ಕನೆ ನೀರಿಳಿದರೂ ಆಶ್ಚರ್ಯ ಇಲ್ಲ. ಅರ್ಧಂಬರ್ಧ ತೊಳೆದು ಚೊಗರು ಹಾಗೇ ಉಳಿಸಿಕೊಂಡರೆ ಮತ್ತಷ್ಟು ಸೀಳಿಕೊಳ್ಳುವ ಭಯ. ಪದ್ದಕ್ಕ ಬಟ್ಟೆ ಒಗೆಯುವ ಕಲ್ಲಿನ ಹತ್ತಿರ ನಿಂತು ಸುರಿಯುವ ನೀರಿಗೆ ಕೈ ಒಡ್ಡಿ ಕಲ್ಲಿಗೆ ಕೈ ತಿಕ್ಕಿ ತಿಕ್ಕಿ ಕೈ ತೊಳೆದಳಂತೆ. ಕೈ ವರೆಸುವುದಕ್ಕೆಂದೇ ತಲೆದಸಿಯಲ್ಲಿ ಇಬ್ಬುಕೊಂಡಿದ್ದ ಚಪ್ಪುಬಟ್ಟೆಗೆ ಒದ್ದೆ ಕೈ ವರೆಸಿ, ಕೈಕಾಲಿಗೆ ವ್ಯಾಸಲೀನು ಬಳಿದುಕೊಂಡು, 'ರಾಮಾ, ಕೃಷ್ಣಾ...' ಎಂದು ನಾಮಸ್ಮರಣೆ ಮಾಡಿ ಮಲಗಿದಳಂತೆ. ಹಾಸಿಗೆಗೆ ಬೆನ್ನು ಕೊಟ್ಟರೆ ಸ್ವರ್ಗ ಬೇರೆ ಇಲ್ಲ ಎನ್ನುವಷ್ಟು ಪರಮಸುಖ. ಹಳೇಸೀರೆ ಜೋಡಿಸಿ ಹೊದ್ದ ಜೋಡಿ ಕಂಬಳಿ ಮುಸುಕಿನೊಳಗೆ ಶಾಖ ಹುಟ್ಟಿಕೊಳ್ಳುವುದರೊಳಗೆ ಹೊಡೆದು ಹಾಕಿದಂತೆ ಗಡದ್ದು ನಿದ್ದೆ.

ಬೆಳಗಿನ ಜಾವದ ಹೊತ್ತಿಗೆ ಹೌದೋ, ಅಲ್ಲವೋ ಅನ್ನುವಷ್ಟು ಚೂರು ಎಚ್ಚರ. ಆ ಅರೆ ಎಚ್ಚರದಲ್ಲಿ ಗೋಡೆ ಒತ್ತಿಗೆ ಹಾಸಿಕೊಂಡು ಮಲಗಿದ್ದವಳಿಗೆ ತಣ್ಣ ತಣ್ಣಗೆ ಗೋಡೆ ಬದಿಯಲ್ಲೇನೋ ಕೊರೆಯುತ್ತಿರುವ ಅನುಭವ. ಹೊದಿಕೆ ಜಾರಿ ಥಂಡಿ ಹತ್ತಿಕೊಂಡಿದೆ ಎಂದೇ ಮೊದಲು ಅಂದುಕೊಂಡಿದ್ದು. ಹೊದಿಕೆ ಸವರಿಸಿಕೊಳ್ಳಲು ಹೋದರೆ ಕೈಗೆ ಸಿಕ್ಕಿದ್ದು ನುಲಿದಾಡುತ್ತಿದೆ. ಪದ್ದಕ್ಕನಿಗೆ ಅಂದಾಜಾಗಿಹೋಯ್ತು. ಮಂಪರು ಹಾರಿತು. ದಡಕ್ಕನೆ ಎದ್ದು ಹೋಗಿ ಮುಂದಿನ ಬಾಗಿಲು ತೆಗೆದಳು. ನಸುಕಿನ ಮಸುಕು ಬೆಳಕು ಮನೆಯೊಳಗೆ ನುಗ್ಗಿತು. ಅಂಗಳದ ಬದಿಯಲ್ಲಿದ್ದ ಕಟ್ಟಿಗೆ ರಾಶಿಯಿಂದ ಉದ್ದದ ಒಂದು ಬಡಿಗೆ ಹುಡುಕಿ ತಂದು, 'ಹುಶ್...ಹುಶ್...' ಎನ್ನುತ್ತಾ ಹಾಸಿಗೆ ಬಂದಿಯಲ್ಲಿ ಬಡಿದು ಶಬ್ದಮಾಡಿ, ಹಾಸಿಗೆಯಲ್ಲಿ ಸೇರಿಕೊಂಡಿದ್ದು ಮುಂದಿನಬಾಗಿಲಿಂದ ಹರಿದುಕೊಂಡು ಹೊರಹೋದ ಮೇಲೆ ಬಾಗಿಲು ಮುಚ್ಚಿ ಆ ಚಳಿಯಲ್ಲೂ ಬೆವರಿದ್ದ ಮುಖ ವರೆಸಿಕೊಂಡಳು. 'ಅದೇನು ಸಣ್ಣ ಪುಟ್ಟದ್ದಲ್ಲ ಈಷ್ಟುದ್ದ ಇತ್ತು...' ಎಂದು ಪದ್ದಕ್ಕ ಎರಡೂ ಕೈಯನ್ನು ಆಚೀಚೆ ನೀಡಿ ತೋರಿಸಿದಾಗ ನಮಗೆ ದಿಗಿಲು, ಕುತೂಹಲ.

'ಕೇರೇ ಹಾವಿರ್ಬೇಕು. ಅದೆಂತಾ ಮಾಡುತ್ತೆ ಹೆದರುಪುಕ್ಕ? ಇಲಿ, ಗಿಲಿ ಹುಡುಕ್ಕೊಂಡು ಯಾವುದೋ ದೊಗರಿಂದ ಒಳಗೆ ಹೊಕ್ಕಿದೆ' ಎಂದು ಅಮ್ಮ ಅದು ಅಷ್ಟೇನೂ ಮಹತ್ವ ಕೊಡುವಂತಾ ವಿಷಯವಲ್ಲ ಎನ್ನುವ ಹಾಗೆ ಉಡಾಫೆ ಮಾತಾಡಿದಳು. 'ರಾತ್ರೀನೇ ಹಾಸಿಗೇಲಿ ಸೇರ್ಕೊಂಡಿತ್ತೇನೋ, ನೀನು ನೋಡ್ಲೇ ಇಲ್ವಾ ಪದ್ದಕ್ಕಾ? ಸರ್ಪನ ಹಾಂವೇ ಇರ್ಬೋದು, ನಿಂಗೊತ್ತಾಗ್ಲಿಲ್ವಾ ಪದ್ದಕ್ಕಾ?' 'ಬಾಲ ಚೂಪುಗಿತ್ತಾ?' 'ಬಣ್ಣ ಹೆಂಗಿತ್ತು?' ಎಂದು ನಾವು ತಲೆಗೊಂದು ಪ್ರಶ್ನೆ ಹಾಕಿ ಪದ್ದಕ್ಕನ ತಲೆ ತಿಂದೆವು.



'ಪದ್ದಕ್ಕನ ಹಾಸಿಗೇಲಿ ಹಾಂವು ಹೊಕ್ಕಂಡಿತ್ತಂತಾ'? ಎನ್ನುತ್ತಾ ಅಪ್ಪ ಅದೊಂಥರಾ ನಕ್ಕಿದ್ದರ ಅರ್ಥ ಆಗಂತೂ ಖಂಡಿತಕ್ಕೂ ಆಗಿರಲಿಲ್ಲ. ಅದು ಕೇರೇ ಹಾಂವೇ ಇರಲಿ, ಸರ್ಪನ ಹಾಂವೇ ಇರಲಿ, ನಮ್ಮ ಈ ಪೇಟೆಯಲ್ಲಿ ಅಪ್ಪಿತಪ್ಪಿ ಹರಿದಾಡುವ ಮಾರುದ್ದದ ಒಂದು ಜಂತು ನರಮನುಷ್ಯ ಕಣ್ಣಿಗೆ ಬಿತ್ತು ಅಂದರೆ ದೊಡ್ಡ ಸುದ್ದಿಯಾಗಿ ಜನ ಮುಕುರಿ ಬಿಡುತ್ತಾರೆ. 'ಹತ್ರಗಿತ್ರ ಹೋಗ್ಬೇಡ್ರೋ...' 'ಅಯ್ಯೋ, ಇತ್ಲಾ ಕಡೆಗೇ ಬರ್ತಿದೆ...' ಎಂದು ಕೂಗು, ಗೌಜು, ಪಾಪದ ನೀರೊಳ್ಳೆ ಹಾವೇ ಆಗಿದ್ದರೂ ಕಲ್ಲಿನಿಂದಲೋ, ಕೋಲಿನಿಂದಲೋ ಜಪ್ಪಿ ಹೊಡೆದು ಹಾಕಿದ ಮೇಲೇ ತೃಪ್ತಿ. ಹಾವು ಹೊಕ್ಕ ಮನೆಯಲ್ಲಿ ಒಬ್ಬಳೇ ಇರಲು ಪದ್ದಕ್ಕ ಹೆದರುತ್ತಾಳೆ ಎಂದು ನಾವು ಮಕ್ಕಳು ಲೆಕ್ಕ ಹಾಕಿದ್ದೇ ತಪ್ಪಾಯ್ತು.


'ಅದೆಂತ ಮಾಡುತ್ತೆ? ಮನುಷ್ರಿಗಿಂತಾ ವಿಷಾನಾ?' ಎನ್ನುವ ಮಾತಾಡಿ ತಾನು ಹರಿದಾಡುವ ಜಂತುಗಳಿಗೆ ಹೆದರುವವಳಲ್ಲವೆಂದು ಪದ್ದಕ್ಕ ಸಾಬೀತು ಪಡಿಸಿದಳು.

ಅಡಿಕೆ ಕೊಯ್ಲು ಮುಗಿದ ಮೇಲೆ ಪದ್ದಕ್ಕನಿಗೆ ಬೇರೆಯದೇ ಉದ್ಯೋಗ. ಅಡಿಕೆ ಒಣಗಿಸಲು ಮನೆ ಎದುರು ಹಾಕಿದ ದೊಡ್ಡ ಚಪ್ಪರ ಹಿರಿಯುವುದರೊಳಗೆ ಹಪ್ಪಳ, ಸಂಡಿಗೆ, ಮಾಡಿ ತುಂಬಿಸಿಟ್ಟುಕೊಳ್ಳಬೇಕು. ಪದ್ದಕ್ಕ ಇಲ್ಲದಿದ್ದರೆ ಪಥ ನಡೆಯುವದೇ ಇಲ್ಲ. ಹೆಮ್ಮಕ್ಕಳು ಮದುವೆಯಾಗಿ ಹೊರಗೆ ಹೊರಟಮೇಲಂತೂ ಅವರಿಗೆ ಕಟ್ಟಿಕೊಂಡು ಹೋಗಲು ಎಷ್ಟು ಹಪ್ಪಳ ಮಾಡಿದರೂ ಸಾಲದು. ಹಲಸಿನಕಾಯಿಗೆ ಬರ ಇಲ್ಲ. ಪದ್ದಕ್ಕನಿಗೆ ಬೇಜಾರಿಲ್ಲ. ನಮ್ಮೂರ ಹಲಸಿನ ಹಪ್ಪಳದ ರುಚಿ ಹತ್ತಿದ ಪೇಟೆಯ ಆಪ್ತೇಷ್ಟರು, 'ದುಡ್ಡಿಗೆ ಸಿಗುತ್ತಾ?' ಎಂದು ವಿಚಾರಿಸಿ ನಿರಾಶರಾದದ್ದುಂಟು. ಹಿಟ್ಟಿಗೆ ಉಪ್ಪುಖಾರ ಹಾಕುವ, ಕಾಗದದ ಹಾಗೆ ನಾಜೂಕಾಗಿ ಲಟ್ಟಿಸುವ, ಪದ್ದಕ್ಕನ ಕೈ ಹದ ಅಂತಾದ್ದು.

ಒಂದು ಕಡೆ ಹಪ್ಪಳದ ಕಾರ್ಖಾನೆಯ ಕೆಲಸ ನಡೆಯುತ್ತಿದ್ದಂತೆಯೇ ನಡುವೆ ಪುರುಸೊತ್ತು ಮಾಡಿಕೊಂಡು ಮಾವಿನಮಿಡಿ ಉಪ್ಪಿನಕಾಯಿ ಹಾಕುವ ಸಂಭ್ರಮ. ಎರಡೆರಡು ವರ್ಷದ ಹಳೆ ಉಪ್ಪಿನಕಾಯಿಯ ಜಾಲಿಗಳು ಬಾಯಿಗೆ ಬಟ್ಟೆ ಕಟ್ಟಿಸಿಕೊಂಡು ಕತ್ತಲೆ ಕೋಣೆಯ ಮಣೆಯ ಮೇಲೆ ಸಾಲಾಗಿ ಕೂತಿರುತ್ತಿದ್ದುದು ಮಾಮೂಲು. ಮಳೆಗಾಲದಲ್ಲಿ ಕೆಲಸ ಇಲ್ಲ ಎಂದು ಪದ್ದಕ್ಕ ಬಿಡುಭೀಸಾಗಿ ಕೂತು ಮೈ ಬೆಳೆಸಿಕೊಳ್ಳುತ್ತಿರಲಿಲ್ಲ. ಅಸಲಿಗೆ ಸೋಮಾರಿತನ ಅವಳಿಗೆ ಗೊತ್ತೇ ಇಲ್ಲ. ಭಾದ್ರಪದದಲ್ಲಿ ಬರುವ ಗೌರಿ ತದಿಗೆಗೆ, ಗಣೇಶನ ಹಬ್ಬಕ್ಕೆ, ಹತ್ತಿ ತೊಳೆ ಬಿಡಿಸಿ ಶುಭ್ರ ಮಾಡಿ ಗೆಜ್ಜೆಸ್ತ್ರ ಮಾಡಲು ಶುರುಮಾಡಿಕೊಳ್ಳುತ್ತಿದ್ದಳು. ಮದುವೆಯಾದ ಹೆಣ್ಣುಮಕ್ಕಳಿಗೆ ಗೌರಿ ಬಾಗಿನದ ಜೊತೆ ಗೆಜ್ಜೆಸ್ತ್ರ ಇಟ್ಟು ಕಳಿಸಿಕೊಡುವುದು ಪದ್ಧತಿ. ಥರಥರದ ಗೆಜ್ಜೆಸ್ತ್ರ ಮಾಡಿ, ಹೊಳೆಯುವ ಬಣ್ಣಬಣ್ಣದ ಸಂತದತಗಡನ್ನು ಕತ್ತರಿಸಿ ಅಂಟಿಸಿ, ಕುಸುರಿ ಕೆಲಸ ಮಾಡುವುದೆಂದರೆ ಪದ್ದಕ್ಕನಿಗೆ ಭಾಳ ಉಮೇದು. ಗೌರಿಗೆ ಏರಿಸಿ ಹಬ್ಬ ಕಳೆದ ಮೇಲೂ ಅಷ್ಟು ಚಂದದ ಅವನ್ನು ಬಿಸಾಕಲು ಕೈ ಬರದೆ ದೇವರ ಪಟಕ್ಕೆ, ಮನೆಯ ಮುಂಬಾಗಿಲಿಗೆ, ಕಮಾನಾಗಿ ನೇತಾಡುವಂತೆ ಮುಡಿಸಿ ನಾವು ಕಾಪಿಟ್ಟುಕೊಳ್ಳುತ್ತಿದ್ದೆವು. ಮನೆಗೆ ಬಂದವರು ಯಾರಾದರೂ, 'ಎಷ್ಟು ಲಾಯ್ಕುಂಟು. ನೀವೇ ಮಾಡಿದ್ದಾ?' ಎಂದರೆ ಪದ್ದಕ್ಕನ ಕುರಿತು ಒಂದು ಸಣ್ಣ

ಗುಣಗಾನ. ಇದನ್ನೆಲ್ಲಾ ಪದ್ದಕ್ಕನಿಗೆ ಹೇಳಿದರೆ ಅವಳಿಗೆ ಎಷ್ಟು ಖುಷಿಯಾಗುತ್ತಿತ್ತು ಅಂದರೆ ಮರುವರ್ಷ ಇನ್ನೊಂದು ನಮೂನಿ ತಯಾರಾಗುತ್ತಿತ್ತು. ಎಲ್ಲಿ ಯಾರ ಮನೆಗೆ ಹೋದರೂ ಪದ್ದಕ್ಕ ಆ ಮನೆಯವರು ಮಾಡಿದ ಗೆಜ್ಜೆಸ್ತ್ರದ ವೈವಿಧ್ಯ ಗಮನಿಸಿ, ಹೊಸದೇನಾದರೂ ಕಂಡರೆ ಕಿರೀನೋಡಿ ಜ್ಞಾಪಕ ಇಟ್ಟುಕೊಂಡು, ತಾನೂ ಅಂತಾದ್ದೇ ಮಾಡಿ ಸೈ ಅನ್ನಿಸಿಕೊಳ್ಳುತ್ತಿದ್ದಳು. ಒಟ್ಟಿನಲ್ಲಿ ಪದ್ದಕ್ಕ ಎಂದರೆ ಜೀವನೋತ್ಸಾಹಕ್ಕೆ ಮತ್ತೊಂದು ಹೆಸರು. ಸುಖಾಸುಮ್ಮನೆ 'ಬೋರು...' ಎಂದು ರಾಗ ತೆಗೆಯುವವರು ಅವಳನ್ನು ನೋಡಿ ಕಲಿಯುವುದು ಭಾಳ ಭಾಳ ಉಂಟು ಎಂದು ನನ್ನ ಅಭಿಪ್ರಾಯ.

ಪದ್ದಕ್ಕನಿಗೂ, ನಮ್ಮ ಮನೆಗೂ ಅಂಟಿದ್ದ ನಂಟಿನ ಬಗ್ಗೆ ನೆನಪಿಸಿಕೊಳ್ಳುವಾಗ ವೈಯಕ್ತಿಕವಾಗಿ ಅವಳೊಡನೆ ನಾನು ಬೆಳೆಸಿಕೊಂಡಿದ್ದ ಅಂತಃಕರಣದ ಬಗ್ಗೆ ಮನಸ್ಸು ಆರ್ದ್ರವಾಗದೆ ಇರಲು ಸಾಧ್ಯವೇ ಇಲ್ಲ. ಪದ್ದಕ್ಕನ ಮನೆ ಅಂದರೆ ಶಬರಿಯ ಆಶ್ರಮದಂತೆ. ತಂಪು ತಂಪು ಸುರಿಯುವ ವಾತಾವರಣ. ನೊಣಗಳ ಗುಂಯ್ಗುಡುವಿಕೆ ಬಿಟ್ಟರೆ ಮತ್ತೊಂದೂ ಸದ್ದಿರದ ಶಾಂತತೆ. ಮಕ್ಕಳ ದಂಡು ತುಂಬಿ ಗಿಜಿಗಿಜಿ ಅನ್ನುವ ನಮ್ಮ ಮನೆಯಿಂದ ತಪ್ಪಿಸಿಕೊಂಡು ಮೆಟ್ಟಿಲು ಏರಿ ಮೇಲೆ ಪದ್ದಕ್ಕನ ಮನೆಗೆ ಹೋದರೆ ಅದು ಮತ್ತೊಂದೇ ಲೋಕ. ಹುಡುಕಿದರೂ ಒಂದು ಕಸದ ಚೂರು ಕಾಣದ ಶುಭ್ರತೆ. ಮೆಟ್ಟಿಲೆದುರು ಸಾರಿಸಿದ ಅಂಗಳದಲ್ಲಿ ಬಿಳಿಯ ಚುಕ್ಕಿರಂಗೋಲಿ. ಹೊಸಿಲಿಗೆ ರಂಗೋಲಿ. ಅಡುಗೆಗೆ ವಿಭಾಗಿಸಿಕೊಂಡ ಜಾಗದಲ್ಲಿ ಒಂದು ದೊಡ್ಡ ಮನೆಯ ಮೇಲೆ ಪದ್ದಕ್ಕ ನಂಬಿದ ದೇವರ ಪಟ, ವಿಗ್ರಹಗಳೆದುರು ರಂಗೋಲಿ. ಮತ್ತೆಲ್ಲಾ ಹೋಗಲಿ ಅಂದರೆ ದಿನಾ ರಾತ್ರಿ ಅಡುಗೆ ಒಲೆಯ ಬೂದಿ ತೆಗೆದು ಸಗಣಿ ಸಾರಿಸಿದ ಮೇಲೆ ಪದ್ದಕ್ಕ ಒಲೆಗೆ, ಕೋಡೊಲೆಗೆ, ರಂಗೋಲಿ ಎಳೆ ಹಾಕಿ ಅದಕ್ಕೂ ಪಾವಿತ್ರ್ಯದ ಒಂದು ಕಳೆ ತಂದು ಕೊಡುತ್ತಿದ್ದಳು. ಹೆಬ್ಬೆರಳು, ತೋರುಬೆರಳುಗಳ ನಡುವೆ ಬಿಗಿಯಾಗಿ ರಂಗೋಲಿ ಪುಡಿ ಹಿಡಿದು ಎಳೆ ಹಾಕಲು ನಾನು ಕಲಿತದ್ದೇ ಪದ್ದಕ್ಕನಿಂದ. ಅನಕ್ಷರಸ್ಥೆಯಾಗಿದ್ದರೂ ಯಾರಿಂದಲೋ, 'ಶ್ರೀರಾಮ, ಜಯರಾಮ, ಜಯಜಯ ರಾಮ' ಎಂದು ದೇವನಾಗರಿ ಲಿಪಿಯಲ್ಲಿ ಬರೆಯುವುದನ್ನು ಚುಕ್ಕೆ ರಂಗೋಲಿಯಂತೆಯೇ ಕಲಿತುಕೊಂಡಿದ್ದಳು. ದೇವರ ಮಣೆಯ ಮೇಲೆ ಸದಾ ಈ ಅಕ್ಷರಗಳು ರಾರಾಜಿಸುತ್ತಿದ್ದುವು. ಚಿನ್ನದ್ದೆಂಬಂತೆ ಹೊಳೆಯುವ ಹಿತ್ತಾಳೆಯ ಸಣ್ಣ ಸೊಡರಿನಲ್ಲಿ ದೇವರೆದುರು ಸಣ್ಣಗೆ ಉರಿಯುತ್ತಿದ್ದ ದೀಪ. ಒಂದು ಕ್ರಮ ಹಿಡಿದು ಏರಿಸುತ್ತಿದ್ದ ನಾನಾ ಬಣ್ಣದ ಹೂಗಳು. ದಿನಾ ಪದ್ದಕ್ಕನ ದೇವರಿಗೆ ಕಲ್ಲುಸಕ್ಕರೆ ಹೊಳಕುಗಳ ನೈವೇದ್ಯ. ಡಬ್ಬಿ ಖಾಲಿಯಾಗಿ ತರಿಸುವುದು ಎರಡು ದಿನ ತಡವಾದರೆ ಬೆಲ್ಲದ ಚೂರು. ಅದಕ್ಕೆ ನನ್ನದೇ ಹಕ್ಕುದಾರಿಕೆ. ಇದು ಎಷ್ಟೋ ವರ್ಷಗಳಿಂದ ನಡೆದುಬಂದಿದ್ದ ಪದ್ಧತಿ. ನಾನು ಹೋದಾಗ ಪದ್ದಕ್ಕ ಕಾಫಿ ಮಾಡುತ್ತಿದ್ದರೆ ನನಗೆ ತೊಟ್ಟು ಕಾಫಿ. ಊಟದ ತಯಾರಿ ನಡೆಸುತ್ತಿದ್ದರೆ 'ಕೈ ತುತ್ತು ಬೇಕಾ?' ಎಂದು ಗೊಜ್ಜಲ್ಲೋ, ಪಳದ್ಯದಲ್ಲೋ ಎರಡು ತುತ್ತು ಕಲಿಸಿ ಅಂಗೈ ಮೇಲೆ ಹಾಕುತ್ತಿದ್ದಳು ಪದ್ದಕ್ಕ. ಅವಳ ಅಡುಗೆಗೊಂದು ವಿಶಿಷ್ಟ ರುಚಿ. ಅಥವಾ ಚೂರೇ ತಿನ್ನುತ್ತಿದ್ದುದರಿಂದ ಆ ರುಚಿ. ಪದ್ದಕ್ಕನ ಮನೆಯಲ್ಲಿ ಕರಾವು ಇಲ್ಲ. ಬೆಳಗ್ಗೆ ಅಮ್ಮ ಕೃಪೆ ಮಾಡಿ ಕೊಡುತ್ತಿದ್ದ ಒಂದು ಲೋಟ ಹಾಲು. ಮಧ್ಯಾಹ್ನಕ್ಕೆ ಒಂದು ಲೋಟ ಮಜ್ಜಿಗೆ. ದುಡ್ಡಿಗೆ ಹಾಲು, ಮೊಸರು ಮಾರುವ ಪದ್ಧತಿ ಇರದಿದ್ದ ಕಾಲ. ಕೊಟ್ಟಿಗೆ ತುಂಬಾ ಎಮ್ಮೆ, ದನಗಳು ತುಂಬಿ ತುಳುಕುತ್ತಿದ್ದ ನಮ್ಮ ಮನೆಯಲ್ಲಿ ಕಡೆದ ಮಜ್ಜಿಗೆ ಹೆಚ್ಚಾಗಿ ಮರುದಿನಕ್ಕೂ ಮಿಕ್ಕರೆ, 'ಹುಳಿ ಮಜ್ಜಿಗೆ ಉಂಟು. ಬೇಕಾರೆ ತಗೊಂಡ್ಹೋಗು' ಎಂದು ಪದ್ದಕ್ಕನನ್ನು ಕರೆದುಕೊಡುತ್ತಿದ್ದಳು ಅಮ್ಮ. ಪದ್ದಕ್ಕ ಹುಳಿ ಮಜ್ಜಿಗೆಗೆ ಇಂಗು, ಉಪ್ಪು ಬೆರೆಸಿ, ಅವಳ ಹಿತ್ತಲಲ್ಲೇ, ಬೆಳೆದಿರುತ್ತಿದ್ದ ಮೆಣಸಿನಕಾಯಿಗಳಿಗೆ ಮೆಟ್ಟುಗತ್ತಿಯಿಂದ ಗೀರು ಮಾಡಿ ಅದರಲ್ಲಿ ಮುಳುಗಿಸಿ, ಬಿಸಿಲಲ್ಲಿ ಒಣಗಿಸಿ, ಬಾಳಕ ಮಾಡಿ ಶೇಖರಿಸಿಟ್ಟುಕೊಳ್ಳುತ್ತಿದ್ದಳು. ನಾಲಿಗೆ ಚುರುಗುಟ್ಟಿಸುತ್ತಿದ್ದ ಉಪ್ಪು, ಹುಳಿ ಕುಡಿದ ಮೆಣಸಿನಕಾಯಿಗಳನ್ನು ಒಣಗುವ ಹಂತದಲ್ಲೇ ತಿನ್ನುವುದು ನನ್ನ ಚಪಲ. ಖಾರಕ್ಕೆ ಸುಂಯ್ಗುಟ್ಟುತ್ತಾ, 'ಪದ್ದಕ್ಕಾ, ಬೆಲ್ಲ... ಪದ್ದಕ್ಕಾ, ನೀರು...' ಎಂದು ಥಕಪಕಗುಟ್ಟುತ್ತಾ ಕೈ ಕೊಡಕಲು ಶುರುಮಾಡಿದರೆ, 'ಆ ನಮೂನಿ ಖಾರ ತಿಂದ್ರೆ ಎಂತಕ್ಕಾಗುತ್ತೇ ಮಗೂ, ಥೋ...' ಎಂದು ಗಡಬಡಿಸಿ ಪದ್ದಕ್ಕ ಬೆಲ್ಲ, ನೀರಿನ ಉಪಚಾರ ಮಾಡುತ್ತಿದ್ದಳು. ಅವಳ ಹಿತ್ತಲಿನ ಸೌತೆಮಿಡಿಗೆ ನಾನೊಬ್ಬಳೇ ಹಕ್ಕುದಾರಳಾಗುವುದು ನಮ್ಮ ಮನೆಯ ವಾನರ ಸೇನೆಗೆ ಹಿತವಾಗುತ್ತಿರಲಿಲ್ಲ. ಮನೆಯಲ್ಲಿ 'ಮಾಡಬಾರದು' ಎಂದು ನಿಷೇಧ ಹಾಕಿದ ಎಲ್ಲಾ ಕೆಲಸಕ್ಕೂ ನಮಗೆ ಪದ್ದಕ್ಕನ ಮನೆ ಆಶ್ರಯತಾಣ. ಜೀರಿಗೆ ಮೆಣಸಿಕಾಯಿ, ಉಪ್ಪು, ಜಜ್ಜಿ ಸೌತೆ ಮಿಡಿಯ ಜೊತೆ ಕರುಂ ಕುರುಂ ಎಂದು ತಿನ್ನುವಾಗ ನೆಟ್ಟು ಬೆಳೆಸಿ ಕಾಯಾಗುವ ಹಂತದಲ್ಲಿ ಉಂಟಾಗುವ ಈ ಕಿರುಕುಳಕ್ಕೆ ಒಂದಿಷ್ಟೂ ಬೇಜಾರು ಮಾಡಿಕೊಳ್ಳದೆ ಪದ್ದಕ್ಕ, 'ಚೂರು ಲಿಂಬೆರಸ ಹಿಂಡ್ಕಂಡ್ರೆ ಇನ್ನೂ ವೈನಾಗುತ್ತೆ' ಎನ್ನುತ್ತಾ ಲಿಂಬೆಹಣ್ಣು ಕತ್ತರಿಸಿ ಕೊಡುತ್ತಿದ್ದವಳು. ಕುಟ್ಟುಂಡೆಯ ಹದ ನಮಗಿಂತಾ ಅವಳಿಗೇ ಚೆನ್ನಾಗಿ ಗೊತ್ತಿತ್ತು. ಹುಣಸೆಹಣ್ಣು, ಬೆಲ್ಲ, ಉಪ್ಪು, ಮೆಣಸಿನಕಾಯಿ ಸೇರಿಸಿ, ಒರಳಿನಲ್ಲಿ ನುಣ್ಣಗೆ ಕುಟ್ಟಿ, ಗೋಲಿಗಾತ್ರದ ಉಂಡೆ ಮಾಡಿಕೊಂಡು, ಅದನ್ನು ಹಿಡಿಕಡ್ಡಿಯ ತುದಿಗೆ ಸಿಕ್ಕಿಸಿ ಈಗಿನ ಲಾಲಿಪಪ್‌ನಂತೆ ಚೀಪುವುದು ಎಂದರೆ ಹುಡುಗಪಾಳ್ಯಕ್ಕೆ ಪರಮಾನಂದ. ಅಮ್ಮನ ಕಣ್ಣಲ್ಲಿ ಗಂಟೆಗಟ್ಟಳೆ ಹೀಗೆ ಚೀಪುತ್ತಿರುವುದು ಅಸಯ್ಯ. ಅದಕ್ಕಿಂತಾ ಹೆಚ್ಚಾಗಿ ಎಂಜಲು. ಹಿಡಿಕಡ್ಡಿಯ ತುದಿಗೆ ಸಿಕ್ಕಿಸಿಕೊಳ್ಳುವುದಂತೂ ಮಹಾಪರಾಧ. ಹೀಗಾಗಿ ಪದ್ದಕ್ಕನಿಗೆ ಶರಣು ಹೋಗುವುದು ಅನಿವಾರ್ಯ. ಮಕ್ಕಳ ಯಾವ ದಾಂಧಲೆಗೂ ಪದ್ದಕ್ಕನಿಗೆ ಬೇಜಾರಿಲ್ಲ. ಬೈಗುಳ ಅವಳಿಗೆ ಗೊತ್ತೇ ಇಲ್ಲ. 'ಹುಡುಗುರ್ರಾ, ಗಿಡ ಮುರೀಬೇಡ್ರೋ, ನೀರು ಸುರೀಬೇಡ್ರೋ...' ಎಂದು ಪದ್ದಕ್ಕ ಎಷ್ಟು ಶಾಂತ ಸ್ವರದಲ್ಲಿ ಹೇಳುತ್ತಿದ್ದಳೆಂದರೆ ಅದಕ್ಕೆ ಬೆಲೆ ಕೊಡಬೇಕೆಂದು ಯಾರಿಗೂ ಅನ್ನಿಸುತ್ತಿರಲಿಲ್ಲ. ಉಳಿದವರೆಲ್ಲಾ ಪದ್ದಕ್ಕನ ಮನೆಗೆ 'ಲಗ್ಗೆ' ಹಾಕುವುದು 'ಅಲ್ಲದ್ದು' ಏನಾದರೂ ಮಾಡಬೇಕೆಂಬ ಸಂದರ್ಭದಲ್ಲಿ ಮಾತ್ರವಾಗಿದ್ದರಿಂದ ದಿನಾ ಅವರು ಅವಳ ಮನೆಗೆ ತುಕ್ಕುತ್ತಿರಲಿಲ್ಲ. ಆದರೆ ನನಗೆ ಮಾತ್ರ, ಬೆಳಗ್ಗೆ ಸ್ಕೂಲಿಗೆ ಹೋಗುವ ಮೊದಲು, ಬಂದ ಮೇಲೆ, ಹರಕೆ ಹೇಳಿಕೊಂಡಂತೆ ಎರಡು ಭೇಟಿ ಆಗಬೇಕು. ರಜಾಕಾಲದಲ್ಲಾದರೆ ಎಷ್ಟು ಹೊತ್ತಿಗೆ ಹೋಗಬೇಕೆಂಬ, ಎಷ್ಟು ಸಲ ಹೋಗಬೇಕೆಂಬ, ಯಾವ ನಿಯಮವೂ



ಇಲ್ಲ. ಯಾರ ಹತ್ತಿರವಾದರೂ ಜಗಳವಾಗಿ ಸಿಟ್ಟು ಬಂತು, ಪದ್ದಕ್ಕನ ಮನೆ. 'ಚಾಡಿ ಚುಚ್ಚೋಕೆ ಹೋಗ್ತಿದಾಳೆ' ಎಂದು ಎಲ್ಲರಿಗೂ ಗೊತ್ತು. 'ನೋಡೇ ಪದ್ದಕ್ಕಾ, ಹೆಂಗ್ಮಾಡ್ತಾರೆ...' ಎಂದು ವರದಿ ಒಪ್ಪಿಸಿ ಅವಳು ಎರಡು ಸಾಂತ್ವನದ ಮಾತಾಡಿದರೆ ಎಳೆಮನಸ್ಸಿಗೆ ಏನೋ ಸಮಾಧಾನ. ಯಾರ ಮನೆಯಿಂದ ಯಾವ ವಿಶೇಷದ ತಿಂಡಿ ಪದ್ದಕ್ಕನಿಗೆ ದೊರಕಿದ್ದರೂ ಅದರಲ್ಲಿ ನನಗೊಂದು ಪಾಲು. ಪದ್ದಕ್ಕ ಯಾವ ಯಾವ ರೀತಿಯಲ್ಲಿ ತನ್ನ ಅಂತರಂಗದ ಪ್ರೀತಿ ತೋರಿಸಿಕೊಳ್ಳುತ್ತಿದ್ದಳು ಅಂದರೆ ಲೆಕ್ಕಕ್ಕೆ ದಕ್ಕುವುದಿಲ್ಲ. ಹಾಡ್ಯದಿಂದ ರಂಜದ ಹೂ ಹೆರಕಿಕೊಂಡು ಬಂದು ನೀರಲ್ಲಿ ನೆನೆಸಿ ತೆಳ್ಳಗೆ ಸಿಗಿದ ಬಾಳೆ ನಾರಿನಲ್ಲಿ ಸುರಿದು ಮಾಲೆ ಮಾಡಿ ಮುಡಿಸುವುದು, ಅಮ್ಮನ ಹಳೇ ಸೀರೆಯನ್ನು ನೆರಿಗೆ, ಸೆರಗು ಹಾಕಿ ಅಚ್ಚುಕಟ್ಟಾಗಿ ಉಡಿಸಿ ನನ್ನೊಂದಿಗೆ ಸಂಭ್ರಮಿಸುವುದು, ಕೂದಲು ಕೆದರಿದ್ದರೆ ಕೊಬ್ಬರಿ ಎಣ್ಣೆ ಸವರಿ, ಬಿಗಿದು ಜಡೆ ಹೆಣೆದು, ಕೊನೆಯಲ್ಲಿ, ಮುಂದಲೆ ಚಾಚದಿದ್ರೆ, ಮುದಿಗಂಡ ಬರ್ತಾನೆ' ಎಂದು ಎದುರಿಗೆ ತಿರುಗಿಸಿಕೊಂಡು ಮುಂದಲೆ ಬಾಚುವುದು, ಯಾವತ್ತೊ ಕೇಳಿದ ಕತೆಗಳನ್ನು ನೆನಪು ಮಾಡಿಕೊಂಡು ಹೇಳುವುದು, ಹೀಗೆ ಇನ್ನೂ ಎಷ್ಟೆಷ್ಟೋ. ಬಿರುಬೇಸಿಗೆಯ ರಜಾದಿನಗಳಲ್ಲಿ ಮಧ್ಯಾಹ್ನ ಉಂಡ ಮೇಲೆ ಸವಾರಿ ಪದ್ದಕ್ಕನ ಮನೆಗೆ ಹೊರಟರೆ, 'ಒಂದು ಗಳಿಗೆ ಬಿದ್ಗೋಬಾರ್ದಾ? ನಿಂಗೇನು ಅಲ್ಲಿ ಮೆರವಣಿಗೆ ಮೆರೆಸುತ್ತಾ?' ಎಂದು ಅಮ್ಮ ಕೆಂಗಣ್ಣು ಬಿಟ್ಟು ಹೆದರಿಸಿದರೆ ಅವಳು ಮಲಗಿದ ಮೇಲೆ ಪದ್ದಕ್ಕನ ಮನೆಗೆ ಕಣ್ಣುತಪ್ಪಿಸಿ ಹೋಗುತ್ತಿದ್ದೆ. ನೀರವವಾದ ಮನೆಯಲ್ಲಿ ಪದ್ದಕ್ಕ ತಲೆ ಮೇಲಿನ ಕೆಂಪು ಸೀರೆಯ ಸೆರಗನ್ನು ಸರಿಸಿಕೊಂಡು, ಮುಳ್ಳುಮುಳ್ಳಾಗಿ ಚಿಗಿತ ಕೂದಲನ್ನು ಗಾಳಿಗೆ ಒಡ್ಡಿಕೊಂಡು, ಕಾಲು ನೀಡಿಕೊಂಡು, ಹೂಬತ್ತಿ ಹೊಸೆಯುತ್ತಾ ಕೂತಿರುತ್ತಿದ್ದಳು. ನನ್ನನ್ನು ಕಂಡಕೂಡಲೆ, 'ಇಷ್ಹೊತ್ನಲ್ಲಿ ಎಂತಕ್ಬಂದ್ಯೇ ಮಗೂ, ಅಮ್ಮಂಗೆ ಗೊತ್ತಾದ್ರೆ ಬಡಿಗೆ ತಗಂತಾಳೆ' ಎಂದು ಬಾಯಲ್ಲಿ ಹೇಳುತ್ತಿದ್ದರೂ, ಮುಖದಲ್ಲಿ ಒಂಟಿತನ ನೀಗಿದ ಸಂತೋಷ ತುಳುಕಿಸುತ್ತಾ ಅವಳ ಒಂದು ಹಳೆ ಸೀರೆಯ ತುಂಡನ್ನು ನೆಲದ ಮೇಲೆ ಹಾಸಿ, 'ಮಲಕ್ಕೋ...' ಎನ್ನುತ್ತಿದ್ದಳು. ಪದ್ದಕ್ಕ ಎದುರಿನ ಮಣೆಯ ಮೇಲೆ ವಿಭೂತಿ ಮುಟ್ಟಿಸಿಕೊಂಡು ಬತ್ತಿ ಹೊಸೆಯುವುದನ್ನು ನೋಡುತ್ತಾ, ನೋಡುತ್ತಾ, ನನ್ನ ಕಣ್ಣುಗಳು ಮೆಲ್ಲಗೆ ಬಾಡುತ್ತಿದ್ದವು. ನೊಣ ಕೂತು ನಿದ್ರಾಭಂಗವಾಗದಂತೆ ಅವಳು ಆಗೀಗ ಮುಖದ ಬಳಿ ಕೈ ಬೀಸುತ್ತಿದ್ದುದು ನೆನಪಿನಿಂದ ನಿಧಾನವಾಗಿ ಮರೆಯಾಗುತ್ತಿತ್ತು. ಎದ್ದ ಮೇಲೆ ಪದ್ದಕ್ಕನ ಜೊತೆ ಕಾಫಿಯಲ್ಲಿ ಪಾಲು.


ಮನೆಗೆ ಬಂದರೆ, 'ಬೆನ್ನಿಗೆ ಹಾಳೆ ಕಟ್ಗಂಬಾ. ಉಂಟು ಹಬ್ಬ...' ಎಂದು ಹೆದರಿಸುತ್ತಿದ್ದ ಒಡಹುಟ್ಟಿದವರು. ಅಮ್ಮ ಬೈಯುವುದು, ಬಿಡುವುದು ಅವಳ ಆ ಕ್ಷಣದ ಮನೋಸ್ಥಿತಿಗೆ ಸಂಬಂಧಪಟ್ಟಿದ್ದು. ಅಂತೂ ಒಟ್ಟಿನಲ್ಲಿ ನಾನು ಪದ್ದಕ್ಕನನ್ನು ಹಚ್ಚಿಕೊಂಡಿರುವುದು ಅಮ್ಮನಿಗೆ ಹಿತವಾಗಿರಲಿಲ್ಲ. ಬಹುಶಃ ತಮ್ಮನ್ನುಳಿದು ಮಕ್ಕಳು ಉಳಿದ ಯಾರನ್ನು ಹೆಚ್ಚು ಹಚ್ಚಿಕೊಂಡರೂ ಹೆತ್ತವರಿಗೆ ಹೀಗೇ ಅನಿಸುತ್ತದೆಯೇನೋ, ಯಾರು ಬಲ್ಲರು? ಒಡಹುಟ್ಟಿದವರಂತೂ ಪದ್ದಕ್ಕನ 'ಸಾಕುಮಗಳು' ಎಂದೇ ನನ್ನನ್ನು ಕೆಣಕುತ್ತಿದ್ದದ್ದು. ಪಣತದ ಕೊಟ್ಟಿಗೆಯ ಮೂಲೆಯಲ್ಲಿ ಕ್ಷೌರದವನೆದುರು ಕೂತು ಬಂದಮೇಲೆ ಹಂಡೆ ಮುಟ್ಟಿಸಿಕೊಳ್ಳದ ಪದ್ದಕ್ಕನಿಗೆ ತಲೆಯ ಮೇಲೆ ನಾಲ್ಕು ಚೊಂಬು ನೀರು ಹಾಕಲು ನನ್ನನ್ನು ಮಾತ್ರಾ ಕರೆಯುವ ಸಲುಗೆ. 'ಹೋಗ್ ಹೋಗು...' ಎನ್ನುವ ಎರಡೇ ಪದಗಳಲ್ಲಿ ಅಮ್ಮ ವ್ಯಂಗ್ಯ ತುಂಬಿಬಿಡುತ್ತಿದ್ದಳು. ಪದ್ದಕ್ಕನ ಹರಿದ ಸೀರೆ ಹೊಲಿದುಕೊಳ್ಳಲು ಸೂಜಿಗೆ ದಾರ ಪೋಣಿಸಿಕೊಟ್ಟರೆ, ಪದ್ದಕ್ಕನ ಮನೆಯ ನೆಲ ಸಾರಿಸಲು ಕೊಟ್ಟಿಗೆಯಿಂದ ಸಗಣಿ ಮುದ್ದೆ ಎತ್ತಿಕೊಂಡು ಹೋದರೆ, ಅವಳು ಅಡಿಕೆ ಸುಲಿಯುವಾಗ ಕೊನೆಯ ಕಾಯಿಗಳನ್ನು ಉದುರು ಮಾಡಿಕೊಟ್ಟರೆ, ಮನೆಗೆ ಬಂದ ಪದ್ದಕ್ಕನೊಡನೆ ಅವಶ್ಯಕತೆಗಿಂತಾ ಹೆಚ್ಚು ಸಲ್ಲಾಪಿಸಿದರೆ, ಅಮ್ಮನಿಗೆ ಪಥ್ಯವಾಗುವುದಿಲ್ಲ ಎಂದು ಗೊತ್ತಾಗುತ್ತಿದ್ದಂತೆ ಬೆಳೆಯುತ್ತಿದ್ದ ನನ್ನಲ್ಲಿ ಶುರುವಾದ ಒಂದು ದ್ವಂದ್ವ ನನ್ನೊಂದಿಗೇ ಬೆಳೆಯುತ್ತಾ ಬಂತು. ಅಮ್ಮನೆದುರಿನಲ್ಲಿ ಪದ್ದಕ್ಕನೊಡನೆ ಹೆಚ್ಚು ಮಾತಾಡದೆ ಮುಖ ತಪ್ಪಿಸತೊಡಗಿದೆ. ಅವಳ ಮನೆಗೆ ದಿನಕ್ಕೊಮ್ಮೆ ಹೋಗಿ ಬರುವ ಪದ್ಧತಿ ಉಳಿದುಕೊಂಡಿತ್ತಾದರೂ ಅಲ್ಲಿ ಹೆಚ್ಚು ಹೊತ್ತು ಕಾಲು ನಿಲ್ಲುತ್ತಿರಲಿಲ್ಲ. ಉಳಿದವರೆದುರು ನಾನು ಅವರಂತೆಯೇ ಪದ್ದಕ್ಕನೊಡನೆ ಅಂತರ ಇಟ್ಟುಕೊಂಡಿದ್ದೇನೆಂದು ತೋರಿಸಿಕೊಳ್ಳಲು ಪ್ರಜ್ಞಾಪೂರ್ವಕವಾಗಿ ಹೆಣಗಬೇಕಾದ ಯಾವ ಅವಶ್ಯಕತೆ ಇಲ್ಲದಿದ್ದರೂ ಹಾಗೆ ವರ್ತಿಸತೊಡಗಿದ್ದು ಸತ್ಯ. ಆದರೂ ಪದ್ದಕ್ಕ ನನಗೆ ಹಿತವಾಗಿ ಉಳಿದುಕೊಂಡಿದ್ದಾಳೆ ಎಂಬುದರ ಗುಟ್ಟು ಒಡೆಯುವಂತಹ ಒಂದು ಸಂದರ್ಭ ನನಗೇ ಅರಿವಿಲ್ಲದೆ ನಡೆದುಹೋಯ್ತು. ಅಮ್ಮನಿಗೆ ಮುಖ ದಪ್ಪ ಆಯ್ತು. ನಾನು ದೊಡ್ಡವಳಾದ ಸೂಚನೆ ಕಂಡುಬಂದ ಆ ಮೊದಲ ದಿನ ಗಾಬರಿ, ಲಜ್ಜೆ, ಸಂಕೋಚಗಳನ್ನು ಹಂಚಿಕೊಳ್ಳಲು ಪದ್ದಕ್ಕನನ್ನೇ ಆಯ್ದುಕೊಂಡದ್ದು ಉದ್ದೇಶಪೂರ್ವಕವೇನಲ್ಲ. ಅದೊಂದು ತಕ್ಷಣದ ಪ್ರತಿಕ್ರಿಯೆ 'ಪದ್ದಕ್ಕಾ...' ಎಂದು ಒಡಕು ಗಂಟಲಲ್ಲಿ ನಾನು ಹೊರ ಹೊರಗೇ ನಿಂತು ಕರೆದ ಧಾಟಿಯಲ್ಲೇ ಪದ್ದಕ್ಕನಿಗೆ ಸುಳು ಹತ್ತಿತು. 'ಅಯ್ಯೋ ಮಗುವೇ, ಇಲ್ಲಿಗೆ ಬಂದು ಹೇಳ್ತಿದೀಯಲ್ಲೆ...' ಎನ್ನುತ್ತಾ ಅವಸರಿಸಿ ವಸಗೆ ಮುಟ್ಟಿಸಲು ಅವಳು ಮೆಟ್ಟಿಲು ಇಳಿದು ಹೋದಳು.



'ಮನೇಲಿ ಇಷ್ಟು ಜನ ಇದ್ರೂ, ನಿಂಗೆ ಕಂಯ್ಯಿ ಆಯ್ತಿಲ್ವಾ? ಪದ್ದಕ್ಕನೇ ಹೆಚ್ಚಾದ್ಲಲ್ವಾ?' ಎಂದು ಅಮ್ಮ ಕೇಳದೆ ಇರಲಿಲ್ಲ. ಆದರೆ ಅದಕ್ಕೆ ಉತ್ತರ ನನಗೆ ಗೊತ್ತಿರಲಿಲ್ಲ. ಪದ್ದಕ್ಕ ಎಷ್ಟು ಶಾಂತ ಸ್ವಭಾವದ ಸಾಧು ಹೆಂಗಸು ಅಂದರೆ ಅಮ್ಮನ ಸಿಡಸಿಡಕ್ಕೆ ಯಾವ ವಿಶೇಷಾರ್ಥವನ್ನೂ ಕಲ್ಪಿಸುತ್ತಿರಲಿಲ್ಲ. ಲೋಕ ಇರುವುದೇ,

ಇರಬೇಕಾದದ್ದೇ ಹೀಗೆ ಎನ್ನುವಂತೆ ತಣ್ಣಗಿರುತ್ತಿದ್ದಳು. ಒಂದು ಸಲ, 'ಪಾಪ, ನಿನ್ನಮ್ಮಂಗೆ ಕೈಲಿ ಕೂಡಲ್ಲ. ಅದಕ್ಕೇ ಸಿಟ್ಟೊಂದು ಬೇಗ ಬಂದ್ಬಿಡುತ್ತೆ' ಎಂದು ಅವಳು ಹೇಳಿದ್ದನ್ನು ನಾನು ಕೇಳಿದವಳು. ಗಂಡ, ಮಕ್ಕಳು ಇದ್ದು ಲಕ್ಷಣವಾಗಿ ಸಂಸಾರ ಮಾಡಿಕೊಂಡಿದ್ದರೆ ಈ ಪದ್ದಕ್ಕ ಎಷ್ಟೊಳ್ಳೆಯ ಗೃಹಿಣಿ ಆಗಿರುತ್ತಿದ್ದಳೋ ಯಾರು ಬಲ್ಲರು? ಹಾಗೆಂದು ಪದ್ದಕ್ಕ ಸಿನಿಕಳಾಗಲಿಲ್ಲ. ಮುಚ್ಚಟೆಯಾಗಿ ಸಂಸಾರ ಮಾಡುವವರನ್ನು ಕಂಡು ಕರುಬಲಿಲ್ಲ. ಅವಳಿಗೆ ಎಲ್ಲರೂ ಆಯ್ತು. ಯಾರ ಕಷ್ಟ ಕಂಡರೂ ಕೈಲಾದ ಸಹಾಯಕ್ಕೆ ಮುಂದಾಗುತ್ತಿದ್ದಳು. ನಮ್ಮೂರಿನಲ್ಲಿ ಮಾತ್ರವಲ್ಲ-ಸುತ್ತಮುತ್ತಲ ಹಳ್ಳಿಗಳಲ್ಲೂ ಅವಳ ಒಳ್ಳೆಯತನದ ಉಪಯೋಗ ಪಡೆದುಕೊಂಡವರು ಹಲವಾರು ಜನ. ಪದ್ದಕ್ಕನಿಗೆ ದಿನಬಳಕೆಯ ಸೀರೆ ಕೊಳ್ಳಬೇಕಾದ ಅವಶ್ಯಕತೆ ಯಾವತ್ತೂ ಬರಲಿಲ್ಲ. ದುಡಿಸಿಕೊಂಡವರು ಯಾರಾದರಾಗಲಿ, ಮನೆ ಮಂದಿಗೆ ಜವಳಿ ತೆಗೆದಂತೆ ಅವಳಿಗೂ ಒಂದು ಸೀರೆ ತೆಗೆಸಿಕೊಡುತ್ತಿದ್ದರು. ಕೆಂಪು, ಕಗ್ಗುಕೆಂಪು ಅಥವಾ ಕೆಂಪಿಗೆ ವಾಲುವ ಬಣ್ಣದ ಸೀರೆಗಳನ್ನಷ್ಟೇ ಉಡುತ್ತಿದ್ದ ಪದ್ದಕ್ಕ ಒಂದು ಸಲ ಯಾರೋ ಕೇಸರಿ ಬಣ್ಣದ ಪಟ್ಟೆ ಮಿಡಿಯಂತಿರುವ ಸೀರೆ ಕೊಟ್ಟಾಗ, 'ಮಗುವೇ, ನಿಂಗೆ ಆಯ್ತಾದ್ರೆ ಉಟ್ಕಾ. ನಂಗೆ ಹಂಗಿದ್ದ ಬಣ್ಣ ಉಡೋಕೆ ಒಂದು ನಮೂನಿ ಆಗುತ್ತೆ' ಎಂದು ಅದನ್ನು ನನಗೆ ಕೊಡಮಾಡಿದ್ದಳು. ಸ್ಪನ್‌ಸಿಲ್ಕಿನ ಫಳಗುಟ್ಟುವ ಸೀರೆ ಆಗಿನ್ನೂ ಸೀರೆ ಉಡಲು ಕಲಿಯುತ್ತಿದ್ದ ನನಗೆ ಪ್ರಿಯವಾಗಿತ್ತು. ಉಟ್ಟುಕೊಂಡು ಕನ್ನಡಿ ಎದುರು ನಿಂತು ಚಂದ ನೋಡಿಕೊಳ್ಳುತ್ತಿದ್ದರೆ ಅಮ್ಮ ಸಿಡಿದುಬಿದ್ದಳು. 'ಮೊದ್ಲು ಅದನ್ನ ಬಿಚ್ಚಿ ಬಿಸಾಕು. ಒಳ್ಳೇ ಮಾರಮ್ಮನ ಥರ ಕಾಣುತ್ತೆ. ನಿಂಗೇನು ಸೀರೆಗೆ ಬರಗಾಲ ಬಂದಿದ್ಯಾ?' ಎಂದು ಅವಳು ಬಾಯಿ ಮಾಡಿದ್ದೇ ಸೀರೆ ಬಿಚ್ಚಿ, ಮಡಿಕೆ ಮಾಡಿ, ತೆಗೆದುಕೊಂಡು ಹೋಗಿ ಪದ್ದಕ್ಕನಿಗೆ ವಾಪಸು ಕೊಟ್ಟಿದ್ದೆ. ನಾ ಹೇಳದೆಯೇ ಪದ್ದಕ್ಕ ಕಾರಣ ಊಹಿಸಿಕೊಂಡಿರಬೇಕು. 'ಯಾಕೆ?' ಎಂದು ಅವಳು ಒಂದು ಮಾತು ಕೇಳಿರಲಿಲ್ಲ. ನನಗೇ ಒಂದು ಥರದ ವ್ಯಥಿತ ಭಾವ ಅಂತರ್ಯದಲ್ಲಿ. ಹತ್ತಿರವಾಗಿದ್ದರೂ ಪದ್ದಕ್ಕನನ್ನು ದೂರ ಇಟ್ಟಿದ್ದೇನೆಂದು ನಟಿಸುತ್ತಾ, 'ಸಾಕುಮಗಳು' ಎಂದು ಸಂದರ್ಭ ಸಿಕ್ಕಾಗಲೊಮ್ಮೆ ಚಾಷ್ಟೆ ಮಾತಾಡುವವರ ಬಾಯಿಗೆ ಬೀಳದೆ ತಪ್ಪಿಸಿಕೊಳ್ಳುತ್ತಾ, ಕೇವಲ 'ನಮ್ಮ ಮನೆಯವಳು' ಮಾತ್ರ ಆಗಿ ಗುರ್ತಿಸಲ್ಪಡಬೇಕೆಂಬ ಆ ಕಾಲದಲ್ಲಿನ ಆಂತರಿಕ ತುಮುಲಗಳು ವ್ಯಕ್ತಪಡಿಸಲು ಅಸಾಧ್ಯವಾದಂತವು. ಅಂತಹ ಒಂದು ಸನ್ನಿವೇಶವನ್ನು ದಾಟಿ ಬಂದವರಿಗಷ್ಟೇ ಅರ್ಥವಾಗುವಂತವು. ಮದುವೆಯಾಗಿ ಗಂಡನ ಮನೆಗೆ





ಹೊರಟು ನಿಂತವಳನ್ನು ಪದ್ದಕ್ಕ ಮನೆಗೆ ಆಹ್ವಾನಿಸಿ, ದೇವರೆದುರು ಹಚ್ಚಿಟ್ಟ ತುಪ್ಪದ ದೀಪದೆದುರು ಮಣೆಯ ಮೇಲೆ ಕೂರಿಸಿ, ತಾನು ಮಡಿ ಹೆಂಗಸಾದ್ದರಿಂದ ಅರಿಶಿನ, ಕುಂಕುಮ ಕೈಯಾರೆ ಕೊಡುವ ಸೌಭಾಗ್ಯ ಇಲ್ಲದೆ, ಅವನ್ನು ನಾನೇ ಹಚ್ಚಿಕೊಳ್ಳಲು ಸೂಚಿಸಿದ್ದಳು. ಆಮೇಲಿನದು ಮಾತ್ರಾ ನನ್ನ ಊಹೆಗೆ ನಿಲುಕದ್ದು. ಪದ್ದಕ್ಕ ಕೆಂಪುಹರಳು ಕೂರಿಸಿದ ಉಂಗರವೊಂದನ್ನು ಎದುರಿಗಿಟ್ಟು, 'ಬೆರಳಿಗೆ ಆಗುತ್ತಾ, ನೋಡು...' ಎಂದು ಬಿಗಿದ ಕಂಠದಲ್ಲಿ ಆದೇಶಿಸಿದ್ದಳು. ಖಂಡಿತಾ ಪದ್ದಕ್ಕ ಯಾರಿಗಾದರೂ ಚಿನ್ನದ ಉಂಗುರ ಉಡುಗೊರೆ ಮಾಡುವಷ್ಟು ದೊಡ್ಡ ಮನುಸ್ಸಿ ಅಲ್ಲ. ಬಹುಶಃ ಅವಳ ಆಪದ್ಧನದ ಸೀಮಿತ ಸರಕಿನಲ್ಲಿ ಕಾದಿಟ್ಟಿರಬಹುದಾದ ಒಂದನ್ನು ಪದ್ದಕ್ಕ ಹೃತ್ಪೂರ್ವಕವಾಗಿ ನನಗೆ ನೀಡುತ್ತಿದ್ದಾಳೆ. ನನಗೂ ಗಂಟಲ ಸೆರೆ ಉಬ್ಬಿತ್ತು. 'ಇದೆಲ್ಲಾ ಎಂತಕ್ಕೆ?' ಎಂದು ನಿರಾಕರಿಸಲು ನೋಡಿದೆ. 'ತಗಾ, ಯಾವತ್ತಿಂದ್ಲೋ ನಿಂಗೆ ಕೊಡ್ಬೇಕು ಅಂದ್ಕಂಡಿದ್ದೆ...' ಎಂದು ಅರ್ಧೋಕ್ತಿಯಲ್ಲಿ ನಿಲ್ಲಿಸಿದಳು. ಉಂಗುರ ಬೆರಳಿನಲ್ಲಿ ಮೊದಲಿದ್ದದ್ದನ್ನು ತೆಗೆದು ಇದನ್ನು ಧರಿಸಿದರೆ ಹೇಳಿ ಮಾಡಿಸಿದಂತೆ ಅಚ್ಚುಕಟ್ಟಾಗಿ ಹೊಂದಿತು. ಪದ್ದಕ್ಕನಿಗೂ ಸಂತೋಷ. ಪದ್ದಕ್ಕನ ಕಾಲುಮುಟ್ಟಿ ಆಶೀರ್ವಾದ ಬೇಡುವಾಗ ಆ ವರ್ತನೆಯಲ್ಲಿ ಲೋಕಾರೂಢಿಯ ತೋರುಗಾಣಿಕೆಗಿಂತಲೂ ಹೃದಯ ತುಂಬಿ ಬಂದ ಪ್ರಾಮಾಣಿಕತನವಿತ್ತು. ಬಹುಶಃ ಅಲ್ಲಿ ನಮ್ಮಿಬ್ಬರ ನಡುವಿನ ಆತ್ಮೀಯ ಅನುಬಂಧವನ್ನು ನಾವಿಬ್ಬರೇ ಹಂಚಿಕೊಳ್ಳುತ್ತಾ ಮೂರನೆಯವರೊಬ್ಬರಿಲ್ಲದಿದ್ದುದೂ ಕೂಡಾ ಸೌಹಾರ್ದ ಸಂವಹನಕ್ಕೆ ಇಂಬುಕೊಟ್ಟಿತ್ತು. 'ದೇವ್ರು ಒಳ್ಳೇದು ಮಾಡ್ಲಿ' ಎಂದು ಪದ್ದಕ್ಕ ಹರಸಿದಳು. ಅದನ್ನು ಮುಡಿಯಲ್ಲಿ ಹೊತ್ತು ನಾನು ಮೆಟ್ಟಿಲಿಳಿದು ಮನೆಗೆ ಬಂದೆ. ಪದ್ದಕ್ಕ ಉಂಗುರ ಕೊಟ್ಟಿದ್ದನ್ನು ಯಾರಿಗೂ ನಾನು ಹೇಳಹೋಗಲಿಲ್ಲ. ಮಗಳನ್ನು ಗಂಡನ ಮನೆಗೆ ಕಳಿಸಿಕೊಡುವ ಸಂಭ್ರಮ, ವಿಷಾದಗಳ ಸಮ್ಮಿಶ್ರ ಭಾವನೆಯಲ್ಲಿ ಮುಳುಗೇಳುತ್ತಿದ್ದ ಅಮ್ಮನ ಕಣ್ಣಿಗೆ ಇದು ಬೀಳಲಿಲ್ಲ. ಬಿದ್ದಿದ್ದರೂ ಬಹುಶಃ ಅವಳು ಆ ಸಮಯದಲ್ಲಿ ಅದರ ಬಗ್ಗೆ ಕೊಂಕು ನುಡಿಯುತ್ತಿರಲಿಲ್ಲ. ಪದ್ದಕ್ಕ ಕೊಟ್ಟ ಆ ಆಭರಣ ಅವತ್ತಿನಿಂದ ಇವತ್ತಿನವರೆಗೆ ವಿಶೇಷ ಸಂದರ್ಭಗಳಲ್ಲಿ ನನ್ನ ಬೆರಳನ್ನು ಅಲಂಕರಿಸುತ್ತಾ ಅವಳ ಬೆಚ್ಚನೆಯ ನೆನಪಿಗೆ ಸಾಕ್ಷಿಯಾಗಿ ನನ್ನ ಆಭರಣಗಳ ಗಂಧದ ಕರಂಡದಲ್ಲಿ ಸ್ಥಾನ ಗಿಟ್ಟಿಸಿಕೊಂಡಿದೆ.

ಪದ್ದಕ್ಕನ ಅಡಿಗೆ ಮನೆ ಹೊಕ್ಕರೆ ಕಚಕುಳಿ ಕೊಟ್ಟ ಹಾಗೆ. ಮಕ್ಕಳ ಆಟದ ಸಾಮಗ್ರಿಗಳಂತಾ ಪುಟ್ಟ ಪುಟ್ಟ ಪಾತ್ರೆಗಳು. ಅಂಗೈ ಮುಷ್ಟಿಯಲ್ಲಿ ಹಿಡಿಸುವಂತಾ ಕಾಳು ಕಡಿಯ ಡಬ್ಬಿಗಳು. ಅಕ್ಕಿ, ಬೇಳೆಗಳಿಗೆಂದು ಎರಡು ಸುಮಾರಿನ ದೊಡ್ಡ ಡಬ್ಬ ಬಿಟ್ಟರೆ ಮತ್ತೆಲ್ಲಾ ಸಣ್ಣವುಗಳೇ. ತನಗೆ ಅಗತ್ಯವಾದಂಷ್ಟಿದ್ದನ್ನು ಮಾತ್ರ ಜೋಡಿಸಿಟ್ಟುಕೊಂಡು ಉಳಿದದ್ದನ್ನು ಮೂಟೆ ಕಟ್ಟಿ ತೆಗೆದಿಟ್ಟು ಬಿಟ್ಟಿದ್ದಳು ಪದ್ದಕ್ಕ. ಕಾಫಿ ಕುಡಿಯಲು ಎರಡು ಹಿತ್ತಾಳೆ ಲೋಟ. ತೌರೂರಿಗೆ ಬರುವಾಗ ಪದ್ದಕ್ಕನಿಗೆ ಸ್ಟೀಲಿನ ಸಣ್ಣಪುಟ್ಟ ಕೊಡುಗೆ ತರುವುದೆಂದರೆ ನನಗೆ ಖುಷಿ. ಕಾಫಿ ಕುಡಿಯುವ ಲೋಟಗಳು, ತಿಂಡಿ ತಿನ್ನುವ ತಟ್ಟೆಗಳು, ಪದ್ದಕ್ಕನ ದೊಗಲೆಯಾಗಿ ಹೊಲಿಸಿಕೊಳ್ಳುವ ಕುಪ್ಪಸಕ್ಕೆಂದು ಥಾನಿನಿಂದ ಹರಿಸಿ ತಂದ ಕೆಂಪು ಖಣಗಳು, 'ಮಗುವೇ, ನಿಂಗೆ ದುಡ್ಡು ಹೆಚ್ಚಾಗಿದ್ದು ಹೌದು' ಎನ್ನುತ್ತಿದ್ದಳು ಪದ್ದಕ್ಕ. ಅಮ್ಮನಿಗೆ ಅಸಮಾಧಾನವಾಗದಂತೆ, ಪದ್ದಕ್ಕನನ್ನು ನಾನು ಬಿಟ್ಟುಕೊಡದಂತೆ, ಹೊಂದಾಣಿ

ಕೆಯ ಒಂದು ಕಸರತ್ತು ಮಾಡುವುದನ್ನು ನಾನು ಅಭ್ಯಾಸ ಮಾಡಿಕೊಂಡಿದ್ದೆನಾದರೂ ಒಮ್ಮೊಮ್ಮೆ ಎಲ್ಲೋ ಸಮತೋಲನ ತಪ್ಪುತ್ತಿತ್ತು. ವೃಥಾ ಅಮ್ಮನಿಗೆ ಕಿರಿಕಿರಿ ಮಾಡಿದೆ ಎಂದು ನನಗೆ ಮುಜುಗರ. ನನ್ನ ಮೊದಲ ಬಾಣಂತನದಲ್ಲಿ ಥರಥರದ ಲೇಹ್ಯ ಮಗುಚಿದ, ಮಗುವಿಗೆ ಎರೆದುಕೊಟ್ಟ, ಪದ್ದಕ್ಕನಿಗೆಂದು ಕಡ್ಡಿಯಂಚಿನ ಒಂದು ರೇಷ್ಮೆ ಸೀರೆಯನ್ನು ನಾನು ಯಜಮಾನರ ಮೂಲಕ ತರಿಸಿಕೊಟ್ಟಿದ್ದು ಅಮ್ಮನಿಗೆ ಹೆಚ್ಚಾಯ್ತು. 'ಅವಳು ಕೆಲ್ಸ ಮಾಡಿದ್ದಕ್ಕೆ ಏನು ಕೊಡಬೇಕೋ ನಾವು ಕೊಟ್ಕಂತಿದ್ವಿ. ನೀ ಎಂತಕ್ಕೆ ಪಾರುಪತ್ಯ ಮಾಡೋಕೆ ಹೋದಿ?' ಎಂದಳು ಅಮ್ಮ. ಪದ್ದಕ್ಕನಿಗೆ ಉತ್ತಮವಾದುದನ್ನೇನಾದರೂ ಕೊಡಬೇಕೆಂಬ ನನ್ನಲ್ಲಿನ ಉತ್ಸುಕತೆ ಅಮ್ಮನಿಗೆ ಅಪ್ರಿಯವಾಗಿದ್ದರೆ ಆಶ್ಚರ್ಯವೇನಿಲ್ಲ. ಉಳಿದವರಿಗೂ ಇದೆಲ್ಲಾ ಅತಿ ಅನಿಸುತ್ತದೆ. ಸಾಕುಮಗಳ ಪಟ್ಟ ಇವತ್ತಿಗೂ ಉಳಿದುಕೊಂಡಿದೆ. ನನ್ನ ಮದುವೆಯಾಗಿ ಹದಿನೈದು ವರ್ಷ. ಅಪರೂಪಕ್ಕೆ ತೌರಿಗೆ ಹೋದಾಗ ಪದ್ದಕ್ಕನಲ್ಲಿ ಆಗಿರುವ ಬದಲಾವಣೆ ಎದ್ದು ಕಾಣುತ್ತದೆ. ಪದ್ದಕ್ಕ ಮುದುಕಿಯಾಗಿದ್ದಾಳೆ. ಬೆನ್ನು ಬಗ್ಗಿದೆ. ಬಹಳಷ್ಟು ಹಲ್ಲುಗಳು ಕಳಚಿ ಬಿದ್ದುಹೋಗಿವೆ. 'ದೇವ್ರು ಯಾರ ಕಾಲಬುಡಕ್ಕೂ ಹಾಕ್ದೆ ಕರೆಸ್ಕೊಂಡ ಅಂದ್ರೆ, ಗೆದ್ದುಹೊಡೆದೆ' ಎನ್ನುವ ಮಾತಾಡಿ ಪದ್ದಕ್ಕ ಅಂತಃಕರಣ ಮಿಡಿಯುತ್ತಾಳೆ.

ದೇವರು ಅಂದರೆ ಅವಳಿಗೆ ವಿಪರೀತ ಭಕ್ತಿ. ಅವಳಿದ್ದ ಆರ್ಥಿಕ ಪರಿಸ್ಥಿತಿಯಲ್ಲೂ ವರ್ಷಕ್ಕೊಂದು ಸಲ ಕಾರ್ತೀಕದಲ್ಲಿ ಊರಿನ ಈಶ್ವರ ದೇವಸ್ಥಾನದಲ್ಲಿ ಅವಳ ಹೆಸರಲ್ಲಿ ಒಂದು ದೀಪೋತ್ಸವ ನಡೆಯಬೇಕು. ಪುಟಾಣಿಹಿಟ್ಟು, ಹೆಸರುಬೇಳೆ ಕೋಸುಂಬರಿಯ ಪನಿವಾರ. ಉರಿಯುತ್ತಿದ್ದ ನೂರಾರು ಅಡಿಕೆಸಿಪ್ಪೆಯ ದೀಪಗಳ ಬೆಳಕಲ್ಲಿ ನಸುಬಾಗಿ ಕೈಮುಗಿದುಕೊಂಡು ದೇವರನ್ನೇ ನೋಡುತ್ತಾ ಮೈಮರೆತಂತೆ ನಿಂತಿರುತ್ತಿದ್ದ ಪದ್ದಕ್ಕನ ಆಕೃತಿ ಕಣ್ಣಿಗೆ ಕಟ್ಟಿದಂತಿದೆ. ಪದ್ದಕ್ಕ ಮಡಿಹುಡಿ, ದೇವರು ಧರ್ಮ ಎಂದು ಹಳೆಯದಕ್ಕೆ ಜೋತುಬಿದ್ದ ಒಂದು ಹಳೆಗಾಲದ ಮುದುಕಿ ಎನ್ನುವ ನನ್ನ ನಂಬಿಕೆ ಒಂದು ಸಲ ತಿರುಗಾಮುರುಗಾ ಆಯ್ತು. ನಮ್ಮ ಸಂಬಂಧದ ಒಂದು ಹುಡುಗಿಗೆ ಮದುವೆಯಾಗಿ, ಮದುವೆಯಾದ ಮೇಲೆ ಆ ಗಂಡ ಸುಭಗನಲ್ಲ ಎನ್ನುವ ಸತ್ಯ ಗೊತ್ತಾಗಿ, ಅವನ ಜೊತೆ ಬಾಳಲಾರದೆ ಹುಡುಗಿ ವಿಚ್ಛೇದನ ಮಾಡಿಕೊಂಡಳು. ಆಮೇಲೆ ಅವಳನ್ನು ಆದರ್ಶವಾದಿಯೊಬ್ಬ ಮರುಮದುವೆ ಮಾಡಿಕೊಂಡ. ಇದರ ಸರಿತಪ್ಪುಗಳ ಬಗ್ಗೆ ಮನೆಯಲ್ಲಿ ವಾದ ನಡೆಯುತ್ತಿದ್ದಾಗ ಅಲ್ಲೇ ಇದ್ದ ಪದ್ದಕ್ಕ, 'ಆ ಪುಣ್ಯಾತ್ಮನ ಹೊಟ್ಟೆ ತಣ್ಣಗಿರ್ಲಿ. ಒಂದು ಮದುವೆ ಆಗಿದ್ದೋಳನ್ನ ಮತ್ತೆ ಮದುವೆ ಆಗೋಕೆ ದೇವ್ರು ಬುದ್ಧಿ ಕೊಟ್ನಲ್ಲ...' ಅನ್ನುವ ಮಾತಾಡಿ ಎಲ್ಲರ ಹುಬ್ಬು ಮೇಲೇರುವಂತೆ ಮಾಡಿದ್ದಳು.

'ಇನ್ನೊಬ್ಬ ಸಿಕ್ಕಿದ್ರೆ, ನೀನೂ ಮತ್ತೆ ಮದ್ವೆ ಮಾಡ್ಕಂತಿದ್ಯಾ ಪದ್ದಕ್ಕ?' ಎಂದು ತಮ್ಮನೊಬ್ಬ ತಲೆಹರಟೆ ಮಾತಾಡಿ ಪದ್ದಕ್ಕನನ್ನು ಕೆಣಕಲು ನೋಡಿದ್ದ. ಅವಳು ಉತ್ತರ ಕೊಟ್ಟಿರಲಿಲ್ಲ.

ಪದ್ದಕ್ಕ ಇವತ್ತು ಹಾಸಿಗೆ ಹಿಡಿದಿದ್ದಾಳೆ. ಅವಳನ್ನು ಒಳ್ಳೆಯ ವೈದ್ಯರೊಬ್ಬರಲ್ಲಿ ತೋರಿಸಿ ಕೊನೆಗಾಲದ ನೋವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದಾದ ಒಂದು ಅವಕಾಶ ನನ್ನ ಮುಂದಿದೆ. ಪದ್ದಕ್ಕನಿಗೋಸ್ಕರ ಒಂದಿಷ್ಟು ಹಣ ಖರ್ಚು ಮಾಡಲಾಗದ ಬಡತನವೂ ನಮಗಿಲ್ಲ. ಆದರೆ, 'ಹಾಗೆ ಮಾಡಬೇಕೆ?' ಎನ್ನುವ ಪ್ರಶ್ನೆ ಬಂದರೆ, ಬಂದರೆ ಏನು ಬಂದೇ ಬರುತ್ತದೆ, ಉತ್ತರಿಸಲು ನಾನು ತಡವರಿಸಬೇಕಾಗುತ್ತದೆ. ಒಬ್ಬರ ಮೇಲೆ ಇನ್ನೊಬ್ಬರಿಗಿರುವ ಮೃದುಭಾವನೆಗಳನ್ನು ಮೂರನೆಯವರೊಬ್ಬರಿಗೆ ಬರಿಯ ಮಾತುಗಳಿಂದ ಮನವರಿಕೆ ಮಾಡಿಕೊಡುವುದು ಕಷ್ಟಸಾಧ್ಯ. ಪದ್ದಕ್ಕನನ್ನು ಯಾವತ್ತಿನಿಂದಲೋ ನೋಡುತ್ತಾ ಬಂದಿರುವ ತೌರುಮನೆಯವರಿಗೇ ಪದ್ದಕ್ಕ ಹೊಟ್ಟೆ ಹೊರೆದುಕೊಳ್ಳಲು ತಮ್ಮ ಮನೆಯಲ್ಲಿ ಗೆಯ್ಯುತ್ತಿದ್ದ ಒಂದು ಪರದೇಶಿ ಹೆಂಗಸು ಎನ್ನುವ ಭಾವನೆ ಇದ್ದುದಾದಲ್ಲಿ ನನ್ನ ಯಜಮಾನರಿಗೆ ಅವಳ ಕುರಿತು ಯಾವ ವಿಶ್ವಾಸ ಇದ್ದಿರಲು ಸಾಧ್ಯ? ಅವಳನ್ನು ಅವರು ನೋಡಿದ್ದಾದರೂ ಎಷ್ಟು ಸಲ? 'ನಿಂಗೆ ಬೇರೆ ಕಸುಬಿಲ್ಲ' ಎಂದು ಪ್ರತಿಯೊಬ್ಬರೂ ನನ್ನ ಮಾತನ್ನು ತಟ್ಟಿ ಹಾರಿಸಬಹುದಾದ ಸಾಧ್ಯತೆಯ ಸಂಶಯದಿಂದಲೇ ಒಂದು ಪ್ರಯತ್ನ ಮಾಡಿನೋಡಬೇಕೆಂಬ ತುಡಿತ. ನಿದ್ದೆ ಬಂದಿರುವವರನ್ನು ಎಬ್ಬಿಸಿ ಕೇಳುವುದಕ್ಕಿಂತಾ ಬೆಳಿಗ್ಗೆ ಸಮಯ ನೋಡಿ ಕೇಳಿದರಾಯ್ತೆಂಬ ಹಿಂಜರಿತ. ಆಗ ತಮ್ಮನೂ ಎದುರಿಗಿರುತ್ತಾನಲ್ಲವೇ ಎನ್ನುವ ಎದೆಗುದಿ. 'ಇವ್ಳದ್ದು ಅತೀ ಅತೀ ಆಯ್ತು' ಎನ್ನುವ ಮಾತಿಗೆ ಸಿದ್ಧವಿದ್ದಾಗ್ಯೂ ನನ್ನೊಳಗೇ ಏನೋ ದ್ವಂದ್ವ. ಪದ್ದಕ್ಕ ಬದುಕಿದ್ದಷ್ಟು ಕಾಲ ಮಾಡಬೇಕಾದಷ್ಟು ಸೇವೆಗೆ, ಉಪಚಾರಕ್ಕೆ, ವ್ಯಯಕ್ಕೆ, ನಾನು ಮನಃಪೂರ್ವಕವಾಗಿ ಸಿದ್ಧಳಾಗಿದ್ದೇನೆಯೇ ಅಥವಾ ಇದು ತಾತ್ಕಾಲಿಕವಾದ ಒಂದು ಭಾವುಕತೆಯೇ ಎನ್ನುವ ಪ್ರಶ್ನೆಗೆ ನಿಸ್ಸಂಶಯದ ಉತ್ತರ ನನ್ನಲ್ಲಿಲ್ಲ. ಹೊಣೆ ಹೊರುವ ಮೊದಲೇ ಯೋಚಿಸಬೇಕೇ ಹೊರತು ಆಮೇಲೆ ಕೊಡವಿಕೊಳ್ಳಲು ಕಷ್ಟ. ವೃಥಾ ನಗೆಪಾಟಲು. ಸುಲಭದ ದಾರಿ ಅಂದರೆ ನಾಲ್ಕು ಮುಸುಂಬಿ ಕೊಂಡು, ತಮ್ಮನ ಜೊತೆ ಊರಿಗೆ ಹೋಗಿ, ಪದ್ದಕ್ಕನನ್ನು ಕಂಡು, ಎರಡು ಹನಿ ಕಣ್ಣೀರು ಮಿಡಿದು, 'ಮಾಡಬೇಕಾದ್ದು ಮಾಡಿದೆ' ಎಂದು ನಂಬಿಸಿಕೊಳ್ಳುವಂತಾದ್ದು. ಮನುಷ್ಯ ಮನುಷ್ಯರ ನಡುವಿನ ಸಂಬಂಧ ಎನ್ನುವುದು ಇಷ್ಟು ತೆಳುವಾದುದೇ? ಪ್ರೀತಿ ಅನ್ನುವುದೆಲ್ಲಾ ಒಂದು ತೋರುಗಾಣಿಕೆಯೇ? ಒಬ್ಬರನ್ನೊಬ್ಬರು ನಂಬಿಸುವುದು, ನಂಬಿಸುತ್ತಲೇ ಆತ್ಮವಂಚನೆ ಮಾಡಿಕೊಳ್ಳುವುದು, ಜೀವನ ಅನ್ನುವುದು ಒಂದು ನಟನೆ ಮಾತ್ರವಾಗಿದ್ದರೆ ಅದಕ್ಕಿಂತಾ ದುರಂತ ಮತ್ತೇನುಂಟು?



ನಮ್ಮ ಮನೆಗೆ ಕರೆದುಕೊಂಡು ಬಂದ ಮೇಲೆ ಪದ್ದಕ್ಕ ಲೆಕ್ಕ ಮಾಡಿದಂತೆ ಮೂರೇ ದಿನ ಬದುಕಿದ್ದು. ಅವಳಿಗೆ ಕೊನೆಯ ಉದ್ಧರಣೆ ನೀರು ಬಾಯಿಗೆ ಬಿಟ್ಟ ತೃಪ್ತಿ ನನ್ನದು ಮತ್ತು ಗುಟುಕರಿಸಿದ ತೃಪ್ತಿ ಅವಳದು, ಬಹುಶಃ ...



ಈ ಪದ್ದಕ್ಕ ಎಷ್ಟೋ ಕಡೆಯ ಗೃಹಿಣಿ ಆಗಿರುತ್ತಿದ್ದಳೋ ಯಾರು ಬಲ್ಲರು?
ನಾನೆಂದು ಪದ್ದಕ್ಕನ ಮರೆಯಲಾಗಲಿಲ್ಲ. ಮುಖ್ಯವಾಗಿ ಸಂದರ ಮಾಡಿದವರನ್ನು ಕಂಡು ಕರುಬಲಿಲ್ಲ.
ವಸುಮತಿ ಉಡುಪ.




ಹರ್ಷ

ಅನುಗ್ರಹ ಸಾಫ್ಟ್‌ವೇರ್ ಕಂಪೆನಿ ಇಂದು ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಒಂದು ಬೃಹತ್ ಕಂಪೆನಿಯಾಗಿ ಬೆಳೆದು ನಿಂತಿದೆ. ಮೂರು ವರ್ಷಗಳ ಹಿಂದೆ ಈ ಕಂಪೆನಿ ಪ್ರಾರಂಭವಾದಾಗ ಇದು ಇಷ್ಟು ಬೇಗ ಈ ಎತ್ತರ ತಲುಪಬಹುದು ಎಂದು ನಾವ್ಯಾರೂ ನಿರೀಕ್ಷಿಸಿರಲಿಲ್ಲ. ನಮ್ಮ ಇ.ಎಂ. ಶಶಿಧರ ಅವರ ಕಾರ್ಯಕ್ಷಮತೆಯಿಂದ ಇದು ಇಷ್ಟು ಬೇಗ ಈ ಎತ್ತರಕ್ಕೆ ಏರಲು ಸಾಧ್ಯವಾಗಿದೆ. ನೌಕರರೊಂದಿಗಿನ ಅವರ ಆತ್ಮೀಯತೆ ಈ ಕಂಪನಿಯು ನಮ್ಮದೆ ಎನ್ನುವ ಭಾವನೆಯನ್ನು ಎಲ್ಲರಲ್ಲೂ ಬೆಳೆಸಿದೆ. ಅದಕ್ಕಾಗಿ ಇಲ್ಲಿ ಸಿಗುವ ಸಂಬಳಕ್ಕಿಂತ ಹೆಚ್ಚು ಸಂಬಳ ಸಿಗುವ ಕೆಲಸ ಬೇರೆ ಕಂಪನಿಯಲ್ಲಿ ಸಿಕ್ಕಾಗಲೂ ನಾನೂ ಹಾಗೂ ಸುಮ ಅಲ್ಲಿಗೆ ಹೋಗಲಿಲ್ಲ. ನಾನು, ಸುಮಾ, ಉಮೇಶ, ರಾಹುಲ್ ಹಾಗೂ ಜಿ.ಎಂ. ಎಷ್ಟು ಸ್ನೇಹ-ವಿಶ್ವಾಸದಿಂದ ಇದ್ದೇವೆ. ಉಳಿದ ಕಂಪನಿಗಳಲ್ಲಿರುವ ಅನಾರೋಗ್ಯಕರ ಪೈಪೋಟಿ, ಒಳಜಗಳ, ಬಾಸಿಸಮ್, ಗುಂಪುಗಾರಿಕೆ ಯಾವುದೂ ಸದ್ಯಕ್ಕೆ ಇಲ್ಲಿಲ್ಲ. ವಾಚ್‌ಮನ್‌ನಿಂದ ಹಿಡಿದು ಜಿ.ಎಂ.ವರೆಗೆ ಎಲ್ಲರೂ ಕಂಪನಿಯ ಶೇರುದಾರರು. ಹಾಗಾಗಿ ಒಂದೇ ಕುಟುಂಬವೆಂಬ ವಾತಾವರಣ ನಿರ್ಮಾಣವಾಗಲು ಸಾಧ್ಯವಾಗಿದೆ. ಮನೆಗಿಂತ ಹಿತವಾದ ವಾತಾವರಣ ಇಲ್ಲಿದೆ ಎಂದು ಸುಮಾ ಆಗಾಗ ಹೇಳುವುದರಲ್ಲಿ ಅತಿಶಯವೇನಿಲ್ಲ.

ಸುಮಾಗಂತೂ ಕೆಲಸ ಮುಗಿಸಿಕೊಂಡು ಸಂಜೆ ಇಲ್ಲಿಂದ ಮನೆಯ ಕಡೆ ಹೊರಡುವುದೆಂದರೆ ದುಃಖವೇ ಬರುತ್ತದೆ. ಹೊಸದಾಗಿ ಮದುವೆಯಾಗಿರುವ ಉಮೇಶ ಹೆಂಡತಿ ಕೋಪಿಸಿಕೊಳ್ಳುತ್ತಾಳೆಂದು ಮನೆಗೆ ಹೊರಡುತ್ತಾನೆ. ಇನ್ನೂ ಮದುವೆಯಾಗಿರದ ರಾಹುಲ್ ರಾತ್ರಿಯವರೆಗೆ ಕೂತು ವೆಬ್‌ಸೈಟ್‌ಗಳನ್ನು ಜಾಲಾಡುತ್ತ, ಗೇಮ್ಸ್ ಆಡುತ್ತ ಕಾಲಕಳೆಯುವುದರ ಜೊತೆಗೆ ನಾಳಿನ ಕೆಲಸದ ಎಲ್ಲ ಸಿದ್ಧತೆಗಳನ್ನು ಮುಗಿಸಿಕೊಂಡು ಹೋಗುತ್ತಾನೆ. ನಮಗೆಲ್ಲರಿಗೆ ನೀಡಿರುವ ಪ್ರಾಜೆಕ್ಟ್‌ಗಳಲ್ಲಿ ಅವನಷ್ಟು ಬೇಗ ಅದರ ಡೆಡ್‌ಲೈನ್ ಒಳಗಡೆ ಕೆಲಸ ಮಾಡುವವ ಅವನೊಬ್ಬನೆ. ಇನ್ನು, ನಾನು ನನಗಾಗಿ ಕಾಯುತ್ತಿರುವ ಪುಟ್ಟ ಮಗು, ಅವನನ್ನು ನನಗಿಂತ ಮೊದಲು ಬಂದು ರಮಿಸುವ, ಆಡಿಸುವ ನನ್ನವಳಿಗಾಗಿ ಮನೆಗೆ ಬೇಗ ಹೋಗುತ್ತೇನೆ. ಹೀಗಿದೆ ಅನುಗ್ರಹ ಕುಟುಂಬದ ನಮ್ಮೆಲ್ಲರ ಬದುಕು. ಹೊರಗಡೆಯಿಂದ ನೋಡುವವರಿಗೆ ನಾವೆಲ್ಲ ತಿಂಗಳಿಗೆ 25ರಿಂದ 35 ಸಾವಿರ ಸಂಬಳ ತೆಗೆದುಕೊಂಡು, ಕಾರಿನಲ್ಲಿ ಓಡಾಡುತ್ತ ನೇಬರ್ಸ್ ಎನ್ವಿ ಆಗಿರುವವರು.



ಎರಡು ದಿನಗಳಿಗೊಮ್ಮೆ ಸುಮ ಕಣ್ಣು ಊದಿಸಿಕೊಂಡು ಬರುವುದು ಇತ್ತೀಚೆಗೆ ಸಾಮಾನ್ಯವಾಗಿದೆ. ಸುಮ ಸಂತೋಷವಾಗಿಲ್ಲ. ಆಕೆಯ ಖಾಸಗಿ ಬದುಕು ದುರಂತವಾಗುತ್ತಿದೆ ಎನ್ನುವ ಸತ್ಯ ನಮಗೆಲ್ಲರಿಗೂ ಗೊತ್ತಿದೆ. ಆದರೆ ಸಭ್ಯತೆಯ ಎಲ್ಲೆಯನ್ನು ಮೀರದ ಈ ಆಫೀಸಿನಲ್ಲಿ



ನೂತನ ಶ್ಯಾಂ

ಮುತ್ತೆ ಮಣ್ಣಾಗಬೇಡ



ಅವಳ ದುಃಖದ ಬದುಕು ಹೊಲಸು ಬಾಯಿಗಳಿಗೆ ಆಹಾರವಾಗಿಲ್ಲ. ಗುಸು-ಗುಸು ವಸ್ತುವಾಗಿಲ್ಲ. ಆಕೆಯ ಬಗ್ಗೆ ಎಲ್ಲರಿಗೂ ಆದರ ಹಾಗೂ ಕಳಕಳಿ ಇದೆ. ತಮ್ಮ ಸಹೋದ್ಯೋಗಿಯೊಬ್ಬಳ ಬದುಕು ಹೀಗಿದ್ದರೆ ಅದನ್ನು ಆಡಿಕೊಂಡು ಸಂತೋಷಪಡುವ ವಿಘ್ನಸಂತೋಷಿಗಳು ಇಲ್ಲಿಲ್ಲ. ನಿಜಕ್ಕೂ ಅದೊಂದು ಸಮಾಧಾನ. ಇಲ್ಲವಾದರೆ ಮನೆಯಿಂದ ನೊಂದು ಆಫೀಸಿಗೆ ಬರುವ ಸುಮಾಗೆ ಇಲ್ಲೂ ಇನ್ನೊಂದು ನರಕವೇ ಎದುರಾಗಿ ಬದುಕು ತೀರ ಅಸಹನೀಯವಾಗುತ್ತಿತ್ತು. ಆಕೆ ಆತ್ಮಹತ್ಯೆಯನ್ನು ಮಾಡಿಕೊಂಡುಬಿಡುತ್ತಿದ್ದಳೇನೊ. ಆದರೆ ಮನೆಯ ದುಃಖವನ್ನೆಲ್ಲ ಮರೆತು ಆಕೆ ಅಲ್ಲಿ ಕಳೆದುಕೊಳ್ಳುತ್ತಿರುವ ಬದುಕನ್ನು ಇಲ್ಲಿ ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ. ತನ್ನ ಮಗನಿಗಾಗಿ ಆಕೆ ಬದುಕಲು ಬಯಸಿದ್ದಾಳೆ. ಅವನ ಜೀವನದ ಮೇಲೆ ತಮ್ಮ ಕರಾಳ ಬದುಕಿನ ನೆರಳೂ ಬೀಳದಂತೆ ಜಾಗ್ರತೆ ವಹಿಸಿದ್ದಾಳೆ. ಎಂತಹ ತಾಯಿ! ಆಕೆಯ ಗಂಡನೆಂಬುವವನಿಗಿರದ ಜವಾಬ್ದಾರಿಯನ್ನು ಆಕೆ ಒಂಟಿಯಾಗಿ ತನ್ನ ಹೆಗಲ ಮೇಲೆ ಹೊತ್ತಿದ್ದಾಳೆ. ಅವನಿಗಾಗಿ ತನ್ನೆಲ್ಲ ಸುಖಗಳನ್ನು ತ್ಯಾಗ ಮಾಡಿ, ದುಃಖವನ್ನು ಸೆರಗಿನಲ್ಲಿ ಕಟ್ಟಿಕೊಂಡು ಬದುಕುತ್ತಿದ್ದಾಳೆ.



ಸುಮಾಳದು ಚಂದದ ಸಂಸಾರವಾಗಿತ್ತು. ಗಂಡ-ಹೆಂಡತಿ ಇಬ್ಬರೂ ಹೊರಗೆ ಕೆಲಸ ಮಾಡಲು ಹೋಗಬೇಕಾದರೆ ಅವರಿಬ್ಬರಲ್ಲಿ ಇರಲೇಬೇಕಾದ ಎಲ್ಲ ಹೊಂದಾಣಿಕೆಗಳನ್ನು ಮಾಡಿಕೊಂಡು ಸುಖಿಯಾಗಿದ್ದರು. ಸಣ್ಣ-ಪುಟ್ಟ ಕಿರಿಕಿರಿಗಳನ್ನು ದೊಡ್ಡದಾಗಿ ಮಾಡುತ್ತಿರಲಿಲ್ಲ. ಎಲ್ಲ ದುಡಿಯುವ ಸಂಸಾರಗಳು ಹೀಗೆ ಇದ್ದರೆ ಎಂದು ನಾನೂ ಎಷ್ಟೋ ಬಾರಿ ಆಸೆಪಟ್ಟಿದ್ದಿದೆ. ಅಂತಹ ಹಾಲಿನಂತಹ ಸಂಸಾರ ಹೀಗೇಕೆ ಆಯಿತು ಎನ್ನುವುದರ ಬಗ್ಗೆ ಯೋಚಿಸಿದಷ್ಟೂ ನನಗೆ ಸೋಜಿಗವಾಗುತ್ತದೆ.

ಸುಮಾ ಹೇಳುವ ಹಾಗೆ ಅವರ ಗಳಿಕೆಯೆ ಅವರ ಜೀವನಕ್ಕೆ ಮುಳ್ಳಾಯಿತು. ಇಬ್ಬರ ಗಳಿಕೆಯೂ ತನ್ನ ಕೈ ಸೇರಬೇಕು ಎಂದು ಆಕೆಯ ಗಂಡ ಯಾವುದೋ ವಿಷಘಳಿಗೆಯಲ್ಲಿ ಯೋಚನೆ ಮಾಡಿಬಿಟ್ಟ. ಆ ಒಂದು ಯೋಚನೆಗೆ ಅವರ ಜೀವನವನ್ನೇ ಅಲುಗಾಡಿಸುವಷ್ಟು ಶಕ್ತಿಯಾದರೂ ಹೇಗೆ ಬಂತು? ಅವನು ಇಷ್ಟಪಟ್ಟಂತೆ ತನ್ನ ಗಳಿಕೆಯನ್ನು ಅವನ ಕೈಲಿಟ್ಟು ಮನೆಯ ನಿರ್ವಹಣೆಯನ್ನು ಅವನಿಗೆ ಬಿಟ್ಟು ಸುಮಾ ಆರಾಂ ಆಗಿದ್ದಳು. ತನ್ನ ದಿನನಿತ್ಯದ ಅಗತ್ಯಗಳಿಗೆ ಬೇಕಾಗುವಷ್ಟು ಹಣವನ್ನು ಮಾತ್ರ ತಾನಿಟ್ಟುಕೊಳ್ಳುತ್ತಿದ್ದಳು. ಗಡಿಬಿಡಿಯ ದಿನಗಳ ನಡುವೆ ಅವಳಿಗೆ ತನ್ನ ಗಂಡನಲ್ಲಾಗುತ್ತಿರುವ ಬದಲಾವಣೆಗಳನ್ನು ಗಮನಿಸಲಾಗಲಿಲ್ಲ. ಆಕೆ ಅದನ್ನು ಗುರುತಿಸುವಷ್ಟರಲ್ಲಿ ಅವನಲ್ಲಿ ಆಸೆ ಬೆಟ್ಟದಷ್ಟು ಬೆಳೆದುಬಿಟ್ಟಿತ್ತು. ಬರುಬರುತ್ತಾ ತನಗೆ ಒಂದು ಹೊಸ ಸೀರೆಯನ್ನು ಕೊಳ್ಳುವುದೂ ಆಕೆಗೆ ಕಷ್ಟವಾಯಿತು. ಸೀರೆಯ ಮಾತು ಬಂದಾಗೆಲ್ಲ ಏಕೆ ಹೊಸ ಸೀರೆ, ನಿನ್ನ ಬಳಿ ಅಷ್ಟೊಂದಿವೆಯಲ್ಲಾ, ಹೊಸದರ ಅಗತ್ಯವೇನು? ಎಂದು ಅವನು ಕೇಳುತ್ತಿದ್ದ. ಆದರೆ ಈ ಮಾತು ಅವನಿಗೆ ಅನ್ವಯವಾಗುತ್ತಿರಲಿಲ್ಲ. ತನಗೆ ಬೇಕಾದಂತೆ ಬಟ್ಟೆ-ಬರೆಗಳನ್ನು ತೆಗೆದುಕೊಳ್ಳುವುದು, ತನ್ನ ಮಿತ್ರರಿಗೆ ಕಾಣಿಕೆಗಳನ್ನು ಕೊಡುವುದು ಪ್ರಾರಂಭವಾಯಿತು. ಈ ನಡುವೆ ಪುಟ್ಟ ಮಗುವಿಗೂ ಸಹ ಅವನೇನೂ ತಂದುಕೊಡುತ್ತಿರಲಿಲ್ಲ. ಆಗ ಸುಮಾ ಎಚ್ಚೆತ್ತುಕೊಂಡಳು. ನಾನೇನು ಇತರರಂತೆ ಗಂಡನ ಸಂಪಾದನೆಯನ್ನು ತಮ್ಮ ಬಟ್ಟೆ-ಬರೆ, ಒಡವೆಗಳಿಗೆ ಸೂರೆ ಮಾಡುವವಳಲ್ಲ. ನನ್ನ ಸಂಪಾದನೆಯ ಸಣ್ಣ ಭಾಗವನ್ನು ಎಂದಾದರೊಮ್ಮೆ ನಾನು ಕೇಳಿದರೂ ಇವನು ಹೀಗೆ ಮಾಡುತ್ತಾನಲ್ಲ ಎಂದು ಮೊದಮೊದಲು ಆಕೆ ನೊಂದುಕೊಂಡಳು. ಆದರೆ ಕಾಲವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ನಿರ್ಧಾರವನ್ನು ಮಾಡಿದಳು. ಮುಂದಿನ ತಿಂಗಳು ಸಂಬಳ ಕೈಗೆ ಬಂದು ಎರಡು-ಮೂರು ದಿನಗಳಾದರೂ ಅದಿನ್ನೂ ಕೈಗೆ ಬರಲಿಲ್ಲ ಎಂದು ಚಡಪಡಿಸಿದ ಆಕೆಯ ಗಂಡ ಒಂದು ದಿನ ಅವಳನ್ನು ಕೇಳಿದ. ಅದಕ್ಕೆ ಅವಳು ನನ್ನ ಬಳಿ ಇಟ್ಟುಕೊಳ್ಳುತ್ತೇನೆ. ನನಗೂ ನನ್ನದೇ ಅಗತ್ಯಗಳಿವೆ. ನಾಳೆ ನನ್ನ ಮಗನಿಗೆ ಒಂದು ಒಳ್ಳೆಯ ಭವಿಷ್ಯವನ್ನು ನೀಡುವ ಹೊಣೆಯೂ ನಮ್ಮ ಮೇಲಿದೆ ಎಂಬುದನ್ನು ನೀನು ಮರೆತಂತಿದೆ ಎಂದು ಅವನಿಗೆ ಹೇಳಿದಳು. ಅವಳ ಈ ಸ್ಪಷ್ಟ ನುಡಿಗಳು ಅವರ ನಡುವೆ ಮೊದಲ ಬಿರುಕನ್ನು ತಂದುಬಿಟ್ಟಿತು. ಹಾಗೆ ನೋಡಿದರೆ ಸುಮಾ ಹೇಳಿದ್ದೆಲ್ಲವೂ ಸರಿಯಾಗಿತ್ತು. ವಸ್ತುನಿಷ್ಠವಾಗಿ ಯೋಚಿಸುವ ಬೇರೆ ಯಾರಾದರೂ ಆಗಿದ್ದರೆ ಆಕೆ ಹೇಳಿದ್ದನ್ನು ಒಪ್ಪಿ

ಕೊಳ್ಳುತ್ತಿದ್ದರು. ಆದರೆ ಆಕೆಯ ಗಂಡ ಹಾಗೆ ಮಾಡಲಿಲ್ಲ. ಆಕೆಯ ಮಾತನ್ನು ತನಗೆ ಆಕೆ ನೀಡಿದ ಪಂಥಾಹ್ವಾನವೆಂದು ಪರಿಗಣಿಸಿದ.



ಮೊದಮೊದಲು ಆಕೆಯ ಜೊತೆಗೆ ಕೋಪದಿಂದ ವರ್ತಿಸಿದ. ಮಾತು ಮಾತಿಗೂ ಸಿಡಿಮಿಡಿಗೊಳ್ಳುವುದು, ಕೈಗೆ ಸಿಕ್ಕಿದ್ದನ್ನು ಎಸೆಯುವುದು, ಸಣ್ಣ ಸಣ್ಣ ವಿಷಯಗಳಿಗೂ ಜಗಳಾಡುವುದು ಮಾಡಿದರೂ ಆಕೆ ಶಾಂತಿಯಿಂದ ಇದ್ದಳು. ಸುಮಾಗೆ ಇದು ಅವನ ಹುನ್ನಾರವೆಂದು ತಿಳಿದಿತ್ತು. ಆದರೆ ದಿನಗಳೆದಂತೆ ಅವನ ನಡೆ-ನುಡಿ ಬದಲಾಗಹತ್ತಿತು. ಅವನ ಅಸಹನೆಗೆ ತಿರಸ್ಕಾರವೂ ಬೆರೆಯಿತು. ಮೊದಲು ಮನೆಗೆಲಸದಲ್ಲಿ ಅವಳಿಗೆ ನೆರವಾಗುತ್ತಿದ್ದವನು ಒಂದೊಂದನ್ನೆ ಬಿಡುತ್ತ ಬಂದ. ಆಕೆ ಮೌನವಾಗಿ ಎಲ್ಲವನ್ನೂ ಸಹಿಸಿಕೊಂಡಳು. ಕೆಲವೊಮ್ಮೆ ಆಕೆಯ ಸಹನೆಯೂ ಕಟ್ಟೆಯೊಡೆದು ಮನೆ ರಣರಂಗವಾಗುತ್ತಿತ್ತು. ಆತನ ಆವೇಶ, ಕೋಪದಲ್ಲಿ ಏನು ಬೇಕಾದರೂ ಘಟಿಸಬಹುದಾದಂತಹ ಸುಡುಸುಡು ಬಿಸಿ ವಾತಾವರಣವಿರುತ್ತಿತ್ತು. ಕೊನೆಗೆ ಆಕೆಯೇ ದುಃಖಿಸಿ ಕೊರಗುವಂತೆ ಆಗುತ್ತಿತ್ತು. ಸುಸಂಸ್ಕೃತ, ವಿದ್ಯಾವಂತನಾದ ಅವನ ಬಾಯಿಂದ ಎಂತಹ ಮಾತುಗಳೂ ಉದುರಿಬಿಡುತ್ತಿದ್ದವು. ಆ ಮಾತುಗಳು ಅವಳನ್ನು ಹೇಗೆ ಘಾಸಿಗೊಳಿಸಬಹುದು ಎನ್ನುವುದನ್ನು ಅವನು ವಿಚಾರ ಮಾಡುತ್ತಿರಲಿಲ್ಲ. ಇತ್ತೀಚೆಗೆ ಮನೆಗೆ ಅಷ್ಟೊ ಇಷ್ಟೊ ಖರ್ಚಿಗಾಗಿ ದುಡ್ಡು ಕೊಡುತ್ತಾನೆ. ತನ್ನ ಐದಂಕಿಯ ಸಂಬಳವನ್ನೆಲ್ಲ ತಾನೊಬ್ಬನೆ ಭೋಗಿಸುತ್ತಾನೆ. ಮನೆಯ, ಮಗುವಿನ ಖರ್ಚನ್ನೆಲ್ಲ ಆಕೆ ತಾನೆ ನೋಡಿಕೊಳ್ಳುತ್ತಾಳೆ. ಅವಳ ಆರ್ಥಿಕ ಸಬಲತೆ ಅವನಿಗೆ ನುಂಗಲಾರದ ತುತ್ತಾಗಿದೆ. ತನಗೆ ಕೈಯಲ್ಲಿ ಸಿಗುವ ಐದಂಕಿ ಸಂಬಳ, ಇತರ ಅನುಕೂಲಗಳು, ಆಫೀಸಿನ ವಾಹನ ಎಲ್ಲಾ ಇದ್ದರೂ ಇವನೇಕೆ ಹೀಗಾಡುತ್ತಾನೆ ಎಂಬುದೆ ಸುಮಾಗೆ ತಿಳಿಯುತ್ತಿರಲಿಲ್ಲ.

ಈಗೀಗ ಆಕೆ ಮನೆಯಲ್ಲಿ ತೀರಾ ಮೌನಿ. ಏಕೆಂದರೆ ಮಗುವಿನೆದುರಿಗೆ ಅವನು ಅವಳಿಗೆ ಹೊಡೆಯಲು, ಒದೆಯಲು ಬರುತ್ತಾನೆ. ನಾಲ್ಕು ವರ್ಷದ ಮಗುವಿಗೆ ಈಗೀಗ ಎಲ್ಲ ತಿಳಿಯುತ್ತದೆ. ಅಪ್ಪ-ಅಮ್ಮ ಜಗಳಾಡುವಾಗ, ಏರುದನಿಯಲ್ಲಿ ಮಾತಾಡುವಾಗ ಮಗು ಮುದುಡಿ ಮೂಲೆಯಲ್ಲಿ ಕುಳಿತುಕೊಳ್ಳುತ್ತದೆ. ಎಲ್ಲ ಶಾಂತವಾದ ಮೇಲೆ ಅಳುತ್ತ ಕೂತಿರುವ ಅಮ್ಮನ ಮಡಿಲಲ್ಲಿ ತಲೆಯಿಟ್ಟು ಮೌನವಾಗಿಬಿಡುತ್ತದೆ. ಸುಮಾನೆ ಹೇಳುವಂತೆ ಅವಳಿಗೆ ಅಳಲೂ ಭಯ. ಅತ್ತರೆ ಮತ್ತೇನಾಗುವುದೊ ಎಂಬ ಹೆದರಿಕೆ. ಇತ್ತೀಚಿನವರೆಗೂ ಮಗುವನ್ನು ಸ್ವಲ್ಪ ಗದರಿಸಿದರೂ ಸುಮಾಳ ಮೇಲೆ ರೇಗುತ್ತಿದ್ದ ಇವನು ಇಂದು ಸುಮಾಗೆ ಹೊಡೆಯುವುದು, ಮಗುವನ್ನು ಕಡೆಗಣಿಸುವುದು ಹೇಗೆ ಸಾಧ್ಯ? ತಮ್ಮಿಬ್ಬರ ನಡುವೆ ಮಗುವಿನ ಭವಿಷ್ಯ ಎಲ್ಲಿ ಹಾಳಾಗುವುದೊ ಎಂದು ಸುಮಾ ಹೆದರುತ್ತಾಳೆ. ಅವನಿಗಾಗಿ ಎಲ್ಲವನ್ನೂ ಸಹಿಸಿಕೊಳ್ಳುತ್ತಾಳೆ. ಅವನಿಂದ ವಿಚ್ಛೇದನ ಪಡೆಯುವುದು ಅವಳಿಗೆ ಇಷ್ಟವಿಲ್ಲ. ಇದರಿಂದ ಮಗುವಿನ ಭವಿಷ್ಯಕ್ಕೆ ಹಾನಿಯಾಗುತ್ತದೆ ಎಂಬ ಕಠೋರ ಸತ್ಯದ ಅರಿವು ಅವಳಿಗಿತ್ತು. ತನ್ನ ಗಂಡ ಹೀಗೆ ಮಾಡುತ್ತಾನೆ ಎಂದು ಇತರರ ಎದುರಿಗೆ ಹೇಳಿಕೊಳ್ಳಲೂ ಆಗದ ಮರ್ಯಾದಸ್ತೆ ಆಕೆ. ಆಕೆಯ ಜೀವನ ಹೀಗಾಗಬಾರದಿತ್ತು.

ನಾವ್ಯಾರಾದರೂ ಹೋಗಿ ಅವನಿಗೆ ಬುದ್ಧಿ ಹೇಳೋಣವೆಂದು ನಾನೆಷ್ಟು ಬಾರಿ ಅಂದುಕೊಂಡಿದ್ದೇನೆ. ಆದರೆ ಪ್ರತಿಬಾರಿಯೂ ಸುಮಾ ''ನೀವು ಅವನಿಗೆ ಬುದ್ಧಿ ಹೇಳಲು ಹೋದರೆ ಇನ್ನೊಂದು ರಾದ್ಧಾಂತವಾದೀತು. ಹೇಗೂ ಸುಧಾರಿಸಿಕೊಳ್ಳುತ್ತೇನೆ. ಅವನು ಎಂದಾದರೊಂದು ದಿನ ತನ್ನ ತಪ್ಪಿನ ಅರಿವಾಗಿ ಬದಲಾಗಬಹುದು. ಆ ದಿನಗಳಿಗಾಗಿ ಕಾಯುತ್ತೇನೆ. ಅಲ್ಲಿಯವರೆಗೆ ನೀವೆಲ್ಲಾ ಹೀಗೆ ನನಗೆ ನೈತಿಕ ಬೆಂಬಲವನ್ನು ನೀಡುತ್ತಿರಿ'' ಎಂದು ಹೇಳುವಾಗ ನಮ್ಮ ಕಣ್ಣುಗಳಲ್ಲೂ ನೀರಾಡುತ್ತದೆ. ಸುಮಾಗಾಗಿ ಮನ ಮಿಡಿಯುತ್ತದೆ.

ಈಕೆ ಸಾಫ್ಟ್‌ವೇರ್ ಎಂಜಿನಿಯರ್. ಅವನು ಮಾರ್ಕೆಟಿಂಗ್ ಮ್ಯಾನೇಜರ್. ಅವನ ಕಂಪೆನಿಯ ಬೆನ್ನೆಲುಬು. ಕಂಪೆನಿಯನ್ನು ಸೇರಿದ ಒಂದೇ ವರ್ಷದಲ್ಲಿ ಮೂರು ಇನ್‌ಕ್ರಿಮೆಂಟ್‌ಗಳನ್ನು ತೆಗೆದುಕೊಂಡವನು. ತನ್ನ ಹೊಸ ಮಾರ್ಕೆಟಿಂಗ್ ತಂತ್ರದಿಂದ ಮಾರಾಟವನ್ನು ದ್ವಿಗುಣಗೊಳಿಸಿ ಇತರ ಕಂಪೆನಿಗಳಿಗೆ ನಡುಕ ಹುಟ್ಟಿಸಿದವನು. ಹೀಗೆ ತಮ್ಮ ವೃತ್ತಿಯಲ್ಲಿ ಕೌಶಲ್ಯವನ್ನು ಮೆರೆಯುವ ಇವರು ವೈಯಕ್ತಿಕ ಬದುಕಿನಲ್ಲಿ ಸೋತುದಾದರೂ ಏಕೆ? ಇಂತಹವರ ಪಾಡೇ ಹೀಗಾದರೆ ಬಸ್‌ಛಾರ್ಜನ್ನು ದಿನವೂ ಕೈಲಿಟ್ಟು ಕಳಿಸುವ ಗಂಡನೊಡನೆ ಜೀವನ ಸಾಗಿಸುವ ಹೆಣ್ಣು ಹೇಗೆ ಬವಣೆಪಡುತ್ತಿರಬಹುದು!

''ಏನಮ್ಮಾ, ಯೋಚಿಸ್ತಾ ಕೂತುಬಿಟ್ಟೆ'' ಎಂದು ಉಮೇಶ ಬಂದು ಜೋರಾಗಿ ಕಿವಿಯ ಹತ್ತಿರ ಕೇಳಿದಾಗಲೆ ವಾಸ್ತವಕ್ಕೆ ಬಂದೆ. ''ಇಲ್ಲಾ ಕಣೋ, ಸುಮಾ ಇವತ್ತೂ ಅತ್ತು ಬಂದಿದ್ದಾಳೆ. ಬಹಳ ಬೇಸರವಾಯ್ತು. ಅವಳ ಬಗ್ಗೇನೆ ಯೋಚನೆ ಮಾಡ್ತಾ ಇದ್ದೆ. ನನಗೆ ಅಂತಹ ಗಂಡ ಸಿಗಲಿಲ್ಲಾ ಎಂದು ನಾನು ದುಃಖಿಸುವುದಿಲ್ಲ. ನನಗೆ ಸುಮಾಳ, ಅವಳಂತಹವರ ಬದುಕನ್ನು ನೆನೆಸಿಕೊಂಡರೆ ಭಯವಾಗುತ್ತದೆ. ಉಮೇಶ, ಹೇಗಿದ್ದವಳು ಹೇಗಾಗಿಬಿಟ್ಟಿದ್ದಾಳೆ. ಅವಳು ಒಳಗೇ ನೋಯುವುದನ್ನು ಕಂಡು ನನಗೆ ಕರುಳು ಕಿವುಚಿದ ಹಾಗೆ ಆಗುತ್ತದೆ. ಹೇಗಾದ್ರೂ ಮಾಡಿ ಅವಳ ಬದುಕನ್ನು ಸರಿ ಮಾಡಬೇಕು. ಏನಾದ್ರೂ ಮಾಡು ಉಮೇಶ. ಅವನು ನಿನ್ನ ಸ್ನೇಹಿತ ಅಲ್ವಾ. ಅವನೊಂದಿಗೆ ಮಾತಾಡು. ನಿನಗೆ ಪುಣ್ಯ ಬರುತ್ತೆ'' ಎಂದು ಹೇಳುವಾಗ ನನಗೆ ಅಳು ಬಂದುಬಿಟ್ಟಿತು.

ಉಮೇಶ ನನ್ನನ್ನು ಸಮಾಧಾನ ಮಾಡುತ್ತಿದ್ದರೂ ''ಇಲ್ಲ ಉಮೇಶ, ಹೀಗೇ ಆದರೆ ನಾವು ಅವಳನ್ನು ಕಳೆದುಕೊಂಡುಬಿಡುತ್ತೇವೆ. ನನಗೆ ಅದೇ ಭಯ. ಅಷ್ಟು ಸುಂದರವಾದ ಜೀವನ. ನಾನೂ ಅಸೂಯೆಪಡ್ತಾ ಇದ್ದೆ. ಅಂತಹ ಜೀವನ ಇವತ್ತು ಹೀಗಾಗಿರೋದು ನನ್ನ ಹತ್ರ ಸಹಿಸೋಕೆ ಆಗ್ತಾ ಇಲ್ಲ'' ಎಂದು ಅಳುತ್ತಲೇ ಇದ್ದೆ.

ನನ್ನ ಅಂತರಂಗದ ನೋವು ಉಮೇಶನಿಗೆ ಅರಿವಾಗಿತ್ತು. ಅವನು ನನಗೆ ಸಮಾಧಾನವಾಗುವವರೆಗೂ ಮೌನವಾಗಿಯೇ ಇದ್ದ. ''ಬಾ, ಸ್ವಲ್ಪ ಬ್ರೇಕ್ ತೆಗೆದುಕೊಳ್ಳೋಣ'' ಎಂದು ಕಾಫಿಗೆ ಕರೆದುಕೊಂಡು ಹೋದ. ನಮ್ಮ ಛೇಂಬರ್‌ನ ಪಕ್ಕದಲ್ಲೇ ಕಾಫಿ ಕ್ಯಾಬಿನ್ ಇದೆ. ದುಡ್ಡು ಹಾಕಿ ನಲ್ಲಿಯ ಕೆಳಗೆ ಕಪ್ ಇಟ್ಟರೆ ನಾವು ಹಾಕಿದ ಮೊತ್ತದ ಬಿಸಿ ಅಥವಾ ತಂಪಾದ ಕಾಫಿ ಬರುತ್ತದೆ.

ಆಯ್ಕೆ ನಮ್ಮದೆ. ಇಂದು ನಮ್ಮ ಆಯ್ಕೆ ಬಿಸಿ ಕಾಫಿಯಾಗಿತ್ತು.

''ನೋಡು, ನಮಗೆ ದಕ್ಕಿದ ಬದುಕನ್ನು ನಾವು ಬದುಕಲೇಬೇಕು. ಸುಮಳ ಗಂಡ ನನ್ನ ಸ್ನೇಹಿತನೆ ಆದ್ರೂ ಸದ್ಯದ ಪರಿಸ್ಥಿತಿಯಲ್ಲಿ ಅವನು ನನ್ನ ಮಾತನ್ನು ಕೇಳುವುದಿಲ್ಲ. ಇದರಿಂದ ಅವನ ಅಹಂ ಕೆರಳಲೂಬಹುದು. ಅವನನ್ನು, ಬದುಕನ್ನು ಎರಡನ್ನೂ ಕಳೆದುಕೊಳ್ಳಲಿಚ್ಛಿಸದ ಸುಮಾ ಸ್ವಲ್ಪ ದಿವಸ ಹೀಗೆ ಸಹನೆಯಿಂದ ಇರುವುದು ಒಳ್ಳೆಯದು. ಆಕೆ ಸರಿಯಾದ ಮಾರ್ಗದಲ್ಲೇ ಇದ್ದಾಳೆ. ಅವನು ಬದಲಾಗಿಯೇ ಆಗುತ್ತಾನೆ. ಆಕೆಯ ಸಹನೆ ಅವನನ್ನು ಬದಲಾಯಿಸುತ್ತದೆ ಎಂಬ ನಂಬಿಕೆ ನನಗಿದೆ. ಸ್ವಲ್ಪ ದಿನ ಕಳೆಯಲಿ. ಅವನಲ್ಲಿ ಕೊಂಚ ಬದಲಾವಣೆ ಕಂಡರೂ ನಾನು ಮಾತನಾಡುತ್ತೇನೆ ಎನ್ನುವ ಭರವಸೆಯನ್ನು ನಿನಗೆ ಕೊಡುತ್ತೇನೆ. ಈಗ ಸದ್ಯಕ್ಕೆ ಅದು ಸಾಧ್ಯವಿಲ್ಲ.'' ಎಂದು ಮತ್ತೆ ಮೌನಿಯಾದ.

ಕಾಫಿಯ ಸಿಪ್‌ನ್ನು ದೀರ್ಘವಾಗಿ ಹೀರಿ ''ಈಗ ನನ್ನನ್ನು ತೆಗೆದುಕೊ'' ಎಂದು ಸುಡುಕಾಫಿಯನ್ನು ನುಂಗಿದ. ಅದರೊಂದಿಗೆ ಇದುವರೆಗೆ ಅದುಮಿಟ್ಟ ದುಃಖವನ್ನೂ ಅವನು ಒಳನುಂಗಿದಂತೆ ಆ ಕ್ಷಣಕ್ಕೆ ನನಗೆ ಅನ್ನಿಸಿತು. ''ನಾನು ಇನ್ನೂ 6 ತಿಂಗಳಾಗಿದೆ ಮದುವೆಯಾಗಿ. ನೀವೆಲ್ಲಾ ಹೆಂಡತಿಯ ಸಲುವಾಗಿ ಬೇಗ ಮನೆಗೆ ಹೋಗುತ್ತಾನೆ ಎಂದು ಚುಡಾಯಿಸಿದರೂ ನಾನು ಸುಮ್ಮನೆ ಇರುತ್ತೇನೆ. ಆದರೆ ನಿಜಸ್ಥಿತಿ ಹಾಗಿಲ್ಲ. ಆಕೆಗೆ ವಿಪರೀತ ಕೋಪ. ತಾನು ಹೇಳಿದ್ದೆಲ್ಲಾ ಕೇಳಬೇಕು ಎಂಬ ಹಠ. ಪ್ರತಿ ತಿಂಗಳೂ ನಾನೊಂದು ಹೊಸಬಟ್ಟೆಯನ್ನು ತೆಗೆದುಕೊಡಲೇಬೇಕು. ನಾನು ಆಫೀಸಿನಿಂದ ಮನೆಗೆ ಹೋದಮೇಲೆ ರಾತ್ರಿ ಅಡಿಗೆಯನ್ನು ಮಾಡಬೇಕು. ಇಲ್ಲವಾದರೆ ಇಡೀ ದಿವಸ ನಾನೇ ಮನೆಗೆಲಸ ಮಾಡ್ತೀನಿ. ನೀವು ಆರಾಂ ಆಗಿ ಆಫೀಸಿಲ್ಲಿರ್ತೀರಿ ಎಂದು ಜಗಳಾಡುತ್ತಾಳೆ. ಎಲ್ಲಿ, ಹೇಗೆ ಖರ್ಚುಮಾಡಲಿ ಎಂದು ಹೊಂಚು ಹಾಕುತ್ತಿರುತ್ತಾಳೆ. ನಾವು ಆಫೀಸಿನಲ್ಲಿ ದುಡಿಯುವವರಿಗೂ ಬಿಡುವಿರುವುದಿಲ್ಲ. ನಾನು ಇಡೀ ದಿನ ಕಂಪ್ಯೂಟರ್ ಎದುರಿಗೆ ಕೂತು ಪ್ರಾಜೆಕ್ಟ್‌ಗಳಿಗೆ ತಲೆಕೆಡಿಸಿಕೊಂಡು ಮಾನಸಿಕವಾಗಿ ದಣಿದಿರುತ್ತೇನೆ ಎಂದು ಅವಳಿಗೆ ಅನ್ನಿಸುವುದಿಲ್ಲ. ನನ್ನನ್ನು ಆತ್ಮೀಯತೆಯಿಂದ ಬರಮಾಡಿಕೊಳ್ಳುವುದಿಲ್ಲ. ನನ್ನ ಕೈಲೇನಿದೆ ಎಂದು ನೋಡುತ್ತಿರುತ್ತಾಳೆ. ಅತಿ ಆಸೆಬುರುಕಿ. ನನ್ನಿಂದ ತುಂಬಾ expect ಮಾಡ್ತಾಳೆ. ಹಾಗೆ ನಾನೂ ಅವಳಿಂದ expect ಮಾಡಬಹುದು ಎಂದು ಅವಳಿಗೆ ಹೊಳೆಯುವುದಿಲ್ಲ. ಶಿ ಇಸ್ ಸೋ ಸೆಲ್ಫ್ ಸೆಂಟರ್ಡ್. ಇಷ್ಟೆ ಅಲ್ಲ. ನಮ್ಮ ಮನೆಯವರೊಂದಿಗೆ ನಾನು ಹೆಚ್ಚು ಬಾರಿ ಫೋನಿನಲ್ಲಿ ಮಾತಾಡಬಾರದು. ಅವರನ್ನು ನನ್ನಿಂದ ದೂರ ಇಡಲು ನೋಡುತ್ತಾಳೆ. ಅವರಿಗೆ ಅಪರೂಪಕ್ಕೆ ನಾನೇನಾದರೂ ಕೊಂಡುಕೊಂಡರೆ ಊಟ-ತಿಂಡಿ ಬಿಟ್ಟು ಮುನಿಸಿಕೊಂಡು ಮಲಗಿಬಿಡುತ್ತಾಳೆ. ಸುಮಾಳ ಬದುಕನ್ನು ನೋಡಿ, ಉದ್ಯೋಗದಲ್ಲಿರುವ ಹುಡುಗಿಯನ್ನು ಮದುವೆಯಾದರೆ ನನಗೂ ಈ ಗತಿ ಬರಬಹುದೇನೊ ಎಂದು ಹೆದರಿ, ಸಾಮಾನ್ಯ ಡಿಗ್ರಿ ಮಾಡಿದ, ಕೆಲಸ ಮಾಡಲು ಆಸಕ್ತಿಯಿಲ್ಲದ ಇವಳನ್ನು ಮದುವೆಯಾಗಿ ನಾನು ಏನು ಪಡೆದುಕೊಂಡೆ ಎನ್ನುವುದು ನನಗೆ ಪ್ರಶ್ನೆಯಾಗಿದೆ. ಇನ್ನೂ ಆರು ತಿಂಗಳಲ್ಲೆ ಈ ರೀತಿಯಾದರೆ ಜೀವನಪೂರ್ತಿ ಅವಳೊಂದಿಗೆ ಹೇಗೆ ಬದುಕುವುದು ಹೇಳು? ನಾನೀಗ ದ್ವಂದ್ವದಲ್ಲಿದ್ದೇನೆ. ಎಲ್ಲವನ್ನೂ ಸಹಿಸಿಕೊಂಡರೆ ಆಕೆ ತನ್ನ ಹಠವನ್ನು ಹೆಚ್ಚು ಮಾಡ್ತಾಳೆ. ಸಹಿಸಿಕೊಳ್ಳದಿದ್ದರೆ ಸುಮಾಳ ಗಂಡನಂತೆ ನಾನೂ ಆಗಿಬಿಟ್ಟರೆ ಎಂದು ಭಯವಾಗುತ್ತದೆ. ನಾನು ಡಿಪ್ರೆಶನ್‌ಗೆ ಹೋಗಬಾರದೆಂದು ಬಹಳ ಎಚ್ಚರಿಕೆ ವಹಿಸುತ್ತಿದ್ದೇನೆ. ಆದರೆ ಎಷ್ಟು ದಿನ ಹೀಗೆ ಸಾಧ್ಯ? ನನ್ನ ಸಹನೆಗೂ



ಮಿತಿಯಿಲ್ಲವೆ? ರಿಯಲಿ, ಐ ಆಮ್ ವರೀಡ್ ಅಬೌಟ್ ಮೈ ಲೈಫ್. ಐ ಲವ್ ಇಟ್. ಐ ಡೊಂಟ್ ವಾಂಟ್ ಟು ಲೂಸ್ ಇಟ್ ಫಾರ್ ದಿಸ್ ಸಿಲ್ಲಿ ವೂಮನ್ ಇನ್ ಮೈ ಲೈಫ್.''

ಉಮೇಶ ದುಃಖವನ್ನು ಗಂಟಲಲ್ಲಿ ಹಿಡಿದುಕೊಂಡು ಇಷ್ಟನ್ನೂ ನಿಧಾನವಾಗಿ ಹೇಳಿ ತಲೆತಗ್ಗಿಸಿ ಸುಮ್ಮನೆ ಕೂತ. ನಾನು ತಣ್ಣಗಾಗಿಬಿಟ್ಟೆ. ಉಮೇಶನೊಡನೆ ಮಾತಾಡಲು ನನ್ನಲ್ಲಿ ಶಬ್ದಗಳಿರಲಿಲ್ಲ. ಸುಮಾಳ ಬದುಕನ್ನು ಸರಿ ಮಾಡು ಎಂದು ನಾನು ಅವನ ಹತ್ತಿರ ಅಂಗಲಾಚುತ್ತಿದ್ದೆ. ಆದರೆ ಅವನ ಬದುಕನ್ನು ಉಳಿಸಿಕೊಳ್ಳಲು ಅವನು ಹೆಣಗಾಡುತ್ತಿದ್ದ.

ಸುಡುತ್ತಿದ್ದ ಕಾಫಿ ತಣ್ಣಗಾಗಿತ್ತು. ಮತ್ತೆ ಕುಡಿಯಲು ಮನಸ್ಸು ಬಾರದೆ ಅಲ್ಲೆ ಇದ್ದ ಸಿಂಕಲ್ಲಿ ಚೆಲ್ಲಿ ಕಪ್ ತೊಳೆದಿಟ್ಟೆ. ಅಷ್ಟು ಹೊತ್ತಿಗೆ ಅಲ್ಲಿಗೆ ಬಂದ ರಾಹುಲ್ ''ಓ, ಕಾಫಿ ಚೆಲ್ತಾ ಇದ್ದೀರಾ? ಯಾಕೆ ಕುಡಿಯೋದಕ್ಕೆ ಮನಸ್ಸಿಲ್ವಾ? ಇಬ್ಬರೂ ಇಷ್ಟು ಹೊತ್ತು ಏನು ಪರಸನಲ್ಲಾಗಿ ಮಾತಾಡ್ತಾ ಇದ್ರಿ? ಎನಿ ಫ್ಯಾಮಿಲಿ ಪ್ರಾಬ್ಲಮ್ಸ್? ಬಟ್ ಐ ಹ್ಯಾವ್ ನೋ ಆನ್ಸರ್, ಸೊಲ್ಯುಷನ್ಸ್ ಫಾರ್ ಯೂ. ಬಿಕಾಜ್ ಐ ಆಮ್ ಬ್ಯಾಚುಲರ್ ಯು ನೋ.'' ಎಂದು ನಾಟಕೀಯವಾಗಿ ಭುಜ ಕುಣಿಸಿದಾಗ ನೋವಿನಿಂದ ಕುಗ್ಗಿದ್ದ ಉಮೇಶ, ಜೋರಾಗಿ ಅವನ ಬೆನ್ನ ಮೇಲೆ ಗುದ್ದಿ ಲಕ್ಕಿ ಗೈ ಎಂದು ನಕ್ಕ. ನಾನು ಅವರಿಬ್ಬರನ್ನು ನೋಡುತ್ತ ಸುಮ್ಮನೆ ನಿಂತೆ.

ಅಲ್ಲಿಂದ ಬಂದು ನನ್ನ ಛೇಂಬರ್‌ನಲ್ಲಿ ಕಂಪ್ಯೂಟರ್ ಎದುರಿಗೆ ಕುಳಿತು ಕೆಲಸ ಮಾಡಲು ಪ್ರಯತ್ನಿಸುತ್ತಿದ್ದೆ. ಆದರೆ ಶೂನ್ಯವೇ ನನ್ನನ್ನು ಆವರಿಸಿಕೊಂಡಂತಿತ್ತು. ಉಮೇಶ ಎರಡು ಬಾರಿ ಬಂದು, ''ನನ್ನ ಕತೆಯನ್ನು ಕೇಳಿ ಬೇಜಾರಾಯ್ತಾ? ನಾನು ನಿನಗೆ ಹೇಳಲೇಬಾರದಿತ್ತು. ಬೇರೆಯವರಿಗೆ ಬುದ್ಧಿ ಹೇಳುವ ಸ್ಥಿತಿಯಲ್ಲಿ ನಾನಿಲ್ಲ ಎಂದು ತೋರಿಸಲು ಹೋಗಿ ನನ್ನ ಬದುಕನ್ನು ನಿನ್ನೆದುರಿಗೆ ಬಿಚ್ಚಿಟ್ಟೆ. ಯು ಆರ್ ಆ ಸೆಂಟಿಮೆಂಟಲ್ ಫೂಲ್. ಚಿಯರ್ ಅಪ್. ನಿನಗೆ ಒಳ್ಳೆಯ ಸಂಸಾರವಿದೆ. ನಿನ್ನನ್ನು ಅರ್ಥಮಾಡಿಕೊಳ್ಳುವ ಪತಿ, ಮುದ್ದಿನ ಮಗು, ಪ್ರೀತಿಸುವ ಬಂಧುಗಳು ಎಲ್ಲ ಇದ್ದಾರೆ. ಆದರೂ ನೀನು ಆಗಾಗ ಗೊಣಗುತ್ತಿ. ಇನ್ನು ಮೇಲೆ ಹಾಗೆ ಮಾಡಬೇಡ. ನಮ್ಮನ್ನು ನೋಡಿ ಬದುಕಲು ಕಲಿತುಕೊ. ಎಂಜಾಯ್ ಯುವರ್ ಲೈಫ್'' ಎಂದು ಮೃದುವಾಗಿ ಕೈ ತಟ್ಟಿದ.

ಹೌದು. ನನಗೇನಾದರೂ ಹಾಗಾಗಿದ್ದರೆ! ಯೋಚನೆಯಿಂದಲೇ ಭಯವಾಯಿತು. ಗಡಬಡಿಸಿ ಬ್ಯಾಗೆತ್ತಿಕೊಂಡು ಉಮೇಶ ಹಾಗೂ ಸುಮಾಗೆ ನನ್ನ ಛೇಂಬರ್‌ನಿಂದಲೇ ಬಾಯ್ ಹೇಳಿ ಮನೆಗೆ ಹೊರಟೇಬಿಟ್ಟೆ. ನನ್ನ ನಡಿಗೆಯಲ್ಲಿ ಧಾವಂತವಿತ್ತು. ಬೇಗ ಮನೆಗೆ ಹೋಗಬೇಕೆನ್ನುವ ಆತುರವಿತ್ತು. ವಾಚ್‌ಮನ್ ನನ್ನನ್ನೇ ಗಮನಿಸುತ್ತಿದ್ದ. ಕಾರ್ ಸ್ಟ್ಯಾಂಡಿನತ್ತ ಹೋಗಿ, ಎರಡು ತಿಂಗಳ ಹಿಂದೆ ಕೊಂಡ ನನ್ನ ಹೊಸ ಮಾರುತಿ ಕಾರಿನ ಬಾಗಿಲು ತೆಗೆದು, ಕಾರು ಚಾಲೂ ಮಾಡಿ, ರಿವರ್ಸ್ ಗೇರ್ ಹಾಕಿ ಹಿಂದೆ ಬಂದು, ಎಕ್ಸಲೇಟರ್ ಒತ್ತಿ, ಬಲಕ್ಕೆ ತಿರುಗಿ, ರೊಯ್ಯನೆ ಹೊರಟಾಗ ಕನ್ನಡಿಯಲ್ಲಿ ವಾಚ್‌ಮನ್‌ನ ಅಚ್ಚರಿಯ ಮುಖ ಕಾಣಿಸಿತು. ಹೌದು, ಈ ಕಾರು ನಾನು ಬೇಕೆಂದು ಕೊಂಡದ್ದಲ್ಲ ಇವರೆ, ''ನೀನೂ ಐದಂಕಿಯ ಸಂಬಳ ತೆಗೆದುಕೊಂಡು ಆ ಹಳೆ ಸ್ಕೂಟರ್‌ನಲ್ಲಿ ಹೋಗಬೇಕೇಕೆ? ನನ್ನ, ನಿನ್ನ ಸಂಬಳ, ಹುದ್ದೆ ಎಲ್ಲವೂ ಸಮಾನವಾಗಿವೆ. ಹಾಗಿದ್ದಾಗ ನಾನು ಕಾರಲ್ಲಿ ಓಡಾಡಿ ನೀನು ಬವಣೆಪಡಬೇಕೆಂದು ಬಯಸುವ ಗಂಡ ನಾನಲ್ಲ. ನೀನೂ ಒಂದು ಕಾರನ್ನು ತೆಗೆದುಕೊ. ಯು ಅರ್ನ್ ಯುವರ್ ಬ್ರೆಡ್. ಸೊ ಹ್ಯಾವ್ ಇಟ್ ಟೂ'' ಎಂದು ಈ ಕಾರನ್ನು ನನಗೆ ಬುಕ್ ಮಾಡಿಸಿದ್ದರು. ಅವರ ಮೇಲೆ ಇದ್ದ ಪ್ರೀತಿ ಇಂದು ನನಗೆ ದ್ವಿಗುಣವಾಯಿತು. ಕಂಪಾಟಿಬಿಲಿಟಿ ಎಂದು ಸುಮಾ ಸದಾ ಹಲುಬುತ್ತಿರುತ್ತಾಳೆ. ಇದಕ್ಕಿಂತ ಕಂಪಾಟಿಬಿಲಿಟಿ ಬೇಕೆ? ಎಂದು ನನಗೆ ಮೊದಲ ಬಾರಿಗೆ ಅನ್ನಿಸಿತು. ಎಕ್ಸಲೇಟರ್ ಮೇಲಿದ್ದ ಕಾಲಿನ ಒತ್ತಡ ನಿಧಾನವಾಗಿ ಕಡಿಮೆಯಾಗಿ ಕಾರನ್ನು ಎಡಕ್ಕೆ ತಿರುಗಿಸಿ, ಅಲ್ಲಿಂದ ಎರಡನೆ ಮನೆಯ ತೆರೆದ ಗೇಟೊಳಗೆ ಕಾರನ್ನು ನುಗ್ಗಿಸಿ ಗಕ್ ಎಂದು ಬ್ರೇಕ್ ಹಾಕಿ ನಿಲ್ಲಿಸಿದೆ. ವರಾಂಡದಲ್ಲಿ ಪೇಪರ್ ಓದುತ್ತ ಕುಳಿತಿದ್ದ ಇವರು ಹೊರಗೆದ್ದು ಬಂದರು. ಯಾಕೆ ಹೀಗೆ ಬ್ರೇಕ್ ಹಾಕಿದೆ ಎಂಬ ಪ್ರಶ್ನೆ ಅವರ ಮುಖದ ಮೇಲಿತ್ತು. ಅವರನ್ನು ಕಂಡಾಕ್ಷಣ ನನ್ನೊಳಗಿನ ಎಲ್ಲ ದುಗುಡವನ್ನು, ಪ್ರೀತಿಯನ್ನು ಒಟ್ಟಿಗೆ ಸೇರಿಸಿ ಅವರ ಕೈಯನ್ನು ಹಿಡಿದುಕೊಂಡು ಒಳಗೆ ಬಂದು ಹಾಲಿನಲ್ಲಿದ್ದ ಸೋಫಾದ ಮೇಲೆ ಸುಮ್ಮನೆ ಕುಳಿತೆ. ನನ್ನ ಇಂದಿನ ವ್ಯತಿರಿಕ್ತವಾದ ನಡವಳಿಕೆ ಅವರಿಗೆ ಸೋಜಿಗವಾಗಿತ್ತು. ಇನ್ನೂ ಪ್ರಶ್ನಾರ್ಥಕವಾಗಿ ನನ್ನನ್ನು ನೋಡುತ್ತಿದ್ದರು. ''ನೀವು ತುಂಬಾ ಒಳ್ಳೆಯವರು'' ಎಂದು ಭಾವುಕಳಾಗಿ ಹೇಳಿದೆ. ಅವರು ನಗುತ್ತ ''ಥ್ಯಾಂಕ್ಯು ಫಾರ್ ಯುವರ್ ಕಾಂಪ್ಲಿಮೆಂಟ್'' ಎಂದರು. ನನ್ನನ್ನು ಏನೂ ಕೇಳದಿದ್ದರೂ ನಮ್ಮ ಸುಮಾಳ ಕತೆಯೆ ಇದಕ್ಕೆ ಪ್ರೇರಣೆ ಎಂದು ಅವರಿಗೆ ಅರ್ಥವಾದಂತಿತ್ತು.

ದಿನವೂ ರಾತ್ರಿ ಊಟವಾದ ಮೇಲೆ ಕಂಪ್ಯೂಟರ್ ಮುಂದೆ ಸ್ವಲ್ಪ ಹೊತ್ತು ಹೋಗಿ ಕುಳಿತುಕೊಳ್ಳುವ ಅಭ್ಯಾಸ ನನ್ನದು. ಹೇಗೂ ಮಗು ಮಲಗಿರುತ್ತಿತ್ತು. ಕೆಲಸದವಳು ಎಲ್ಲ ಕೆಲಸ ಪೂರೈಸುತ್ತಿದ್ದಳು. ಇವರಿಗೆ ಅವರ ಆಫೀಸಿನ ಫೈಲ್‌ಗಳಿರುತ್ತಿದ್ದವು. ನಾನು ಮಲಗಲು ಬರುವಷ್ಟರಲ್ಲಿ ಎಲ್ಲರೂ ಗಾಢ ನಿದ್ದೆಯಲ್ಲಿರುತ್ತಿದ್ದರು. ಆದರೆ ಇಂದು ನನ್ನ ಕಾಲುಗಳು ಸೀದಾ ಮಲಗುವ ಕೋಣೆಗೆ ನಡೆದವು. ಹೊಸದನ್ನು ನೋಡುವಂತೆ ಮಲಗಿದ್ದ ನನ್ನ ಮಗುವನ್ನು ನೋಡಿದೆ. ಫೈಲ್‌ಗಳನ್ನು ಕೈಯಲ್ಲಿ ಹಿಡಿದಿದ್ದ ಇವರೂ ಆಶ್ಚರ್ಯದಿಂದ ನನ್ನತ್ತ ನೋಡಿದರು. ಒಂದು ಕ್ಷಣದ ನಂತರ ''ಇಲ್ಲಿ ಬಾ, ಕುಳಿತುಕೊ'' ಎಂದು ತಮ್ಮ ಪಕ್ಕದ ಖುರ್ಚಿಯನ್ನು ತೋರಿಸಿದರು. ಹೋಗಿ ಕುಳಿತೆ. ಹಿಡಿದಿದ್ದ ಫೈಲನ್ನು ಮುಚ್ಚಿ ಬದಿಗಿಟ್ಟು ಹರಡಿಕೊಂಡಿದ್ದ ಇತರ ಫೈಲ್‌ಗಳನ್ನು ಜೋಡಿಸಿ ತೆಗೆದಿಟ್ಟರು.

''ನೀನು ಬುದ್ಧಿವಂತೆ. ನೀನು ನಿನ್ನ ಕ್ಷೇತ್ರದಲ್ಲಿ ಸಾಧಿಸುತ್ತಿದ್ದೀಯಾ. ಇದರ ಬಗ್ಗೆ ನನಗೆ ತುಂಬಾ ಸಂತೋಷವಿದೆ. ಆದರೆ ನೀನು ಕೆಲಸಕ್ಕೆ ಹೆಚ್ಚು ಒತ್ತು ಕೊಟ್ಟು ಮನೆಯನ್ನು ಕಡೆಗಾಣಿಸಬಾರದು. ಇಷ್ಟು ದಿವಸ ಮಗು ಕೆಲಸದವಳ ಕೈಯಲ್ಲಿ ಮಲಗುತ್ತದೆ. ಅವನ ಎಲ್ಲ ಬೇಕು-ಬೇಡಗಳನ್ನು ಅವಳೇ ನೋಡಿಕೊಳ್ಳುತ್ತಾಳೆ. ಅವಳ ಮೇಲೆ ಎಲ್ಲವನ್ನು ಬಿಡದೆ ನಿನ್ನ ಕರ್ತವ್ಯವನ್ನು ನೀನು ಮಾಡಬೇಕು. ಮಗೂಗೆ, ನನಗೆ ನಿನ್ನ ಅವಶ್ಯಕತೆ ಅನೇಕ ಸಂದರ್ಭಗಳಲ್ಲಿ ಇರುತ್ತದೆ. ಆಗೆಲ್ಲ ನೀನು ಕಂಪ್ಯೂಟರ್ ಎದುರಿಗಿರುತ್ತಿ. ಇದುವರೆಗೂ ನಾನಾಗಲಿ, ಈ ಪುಟ್ಟ ಮಗುವಾಗಲಿ ನಿನಗೆ ತೊಂದರೆ ಮಾಡಿದ್ದಿಲ್ಲ. ಇದನ್ನು ನೀನೆ ಅರಿತುಕೊಳ್ಳಬೇಕು ಎನ್ನುವುದು ನನ್ನ ಆಸೆಯಾಗಿತ್ತು. ಇವತ್ತಿಗೆ ಅದು ಈಡೇರಿತು. ಆದರೆ ಇದನ್ನು ನಾನಾಗಿ ನಿನಗೆ ಹೇಳಿದ್ದರೆ ಯಾವುದೋ ಕೆಟ್ಟ ಘಳಿಗೆಯಲ್ಲಿ ನಮ್ಮ ಸಂಸಾರವೂ ಸುಮಾಳ ಸಂಸಾರದಂತೆ ಅಥವಾ ನಿನ್ನ ಬಾಸ್ ಶಶಿಧರ ಅವರ ಸಂಸಾರದಂತೆ ಆಗಿಬಿಡುತ್ತಿತ್ತೇನೊ'' ಎಂದರು. ನಾನು ಶಶಿಧರ ಹೆಸರು ಕೇಳಿ ಥಟ್ಟನೆ ತಲೆಯೆತ್ತಿ ಅವರನ್ನು ನೋಡಿದೆ.

''ಹೌದು, ಶಶಿಧರ ಈಗ ತನ್ನ ಕುಟುಂಬದೊಂದಿಗೆ ವಾಸಿಸುತ್ತಿಲ್ಲ. ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಇಪ್ಪತ್ತು ವರ್ಷಗಳಿಂದ ಹೆಸರು ಮಾಡಿರುವ ಸಾಫ್ಟೆಕ್ ಕಂಪನಿಯಲ್ಲಿ ಮೊದಲು ಅವರಿದ್ದರು. ಅಲ್ಲಿಯೆ ಅವರ ಸಹೋದ್ಯೋಗಿಯನ್ನು ಮದುವೆಯಾದರು. ಆದರೆ ಬೌದ್ಧಿಕ ಹೆಚ್ಚುಗಾರಿಕೆಯ ಮೇಲೆ ನಿಂತಿರುವ ಹಾಗೂ ಬೆಳೆಯುತ್ತಿರುವ ಈ ಕ್ಷೇತ್ರದಲ್ಲಿ ಅವರು ಒಂದೇ ಕಂಪನಿಯಲ್ಲಿ ಪೈಪೋಟಗಿಳಿದರು. ತಮ್ಮ ಬಾಸ್‌ನ್ನು ಮೆಚ್ಚಿಸಲು ಸತತ ಪರಿಶ್ರಮಪಟ್ಟರು. ಮೊದಲು ಬೌದ್ಧಿಕ ಪೈಪೋಟಿಯ ಮಟ್ಟದಲ್ಲೇ ಇದ್ದ ಅವರ ಸ್ಪರ್ಧೆ ಬರುಬರುತ್ತಾ ಅನ್ಯ ಮಾರ್ಗವನ್ನೂ ಹಿಡಿಯಿತು. ಅವರ ಹೆಂಡತಿ ಬಾಸ್‌ಗೆ ಹತ್ತಿರವಾದಳು. ಗಳಿಕೆಯ ವಿಷಯದಲ್ಲಿ ಅವಳು ಇವನಿಗಿಂತ ಮೇಲೇರಿದಳು. ಹಣಗಳಿಕೆ ಅವಳ ಗುರಿಯಾಯಿತು. ಅದಕ್ಕಾಗಿ ಅವಳು ಏನೆಲ್ಲಾ ಮಾಡಿದಳು. ಅವಳ ಬುದ್ಧಿ ಹಾಗೂ ಬದುಕು ಎರಡೂ ವ್ಯಾಪಾರದ ಸರಕಾದವು. ಅವಳು ಬೇಕಾದಷ್ಟು ದುಡಿದಳು. ಆದರೆ ಒಲಿದು ಬಂದವಳಿಂದ ಇಂತಹದ್ದನ್ನು ನಿರೀಕ್ಷಿಸಿರದ ಶಶಿಧರ ಕೊನೆಗೆ ಬೇಸತ್ತು ಆ ಕಂಪನಿಯನ್ನೆ ತೊರೆದು ವಿದೇಶಕ್ಕೆ ಹೋದರು. ಅಲ್ಲಿ ಸಾಕಷ್ಟು ದುಡಿದು, ಪರಿಶ್ರಮಪಟ್ಟು ತಾಯ್ನಾಡಿಗೆ ಮರಳಿದರು. ಅವರಿಗೆ ಉದ್ಯೋಗಕ್ಕಿಂತ ಒಂದು ಕುಟುಂಬದ ಅವಶ್ಯಕತೆ

ಅತಿಯಾಗಿತ್ತು. ಬದುಕು ಅವರಿಗೆ ಏನೆಲ್ಲ ಕಲಿಸಿತ್ತು. ಪೈಪೋಟಿಗಿಂತ ಹೊಂದಾಣಿಕೆಯಲ್ಲಿ ಹೆಚ್ಚು ಸುಖವಿದೆ ಎಂದು ಅರಿತ ಅವರು ಅನುಗ್ರಹ ಕಂಪನಿಯನ್ನು ಹುಟ್ಟು ಹಾಕಿದರು. ನಿಮಗೆಲ್ಲ ಅನ್ನದಾತರಷ್ಟೆ ಅಲ್ಲ. ಉದ್ಯೋಗದಲ್ಲಿ ಒಂದಾಗಿ ಬಾಳುವುದು ಹೇಗೆ ಎಂಬುದನ್ನು ಕಲಿಸಿಕೊಟ್ಟರು. ಅವರ ಈ ಹೆಜ್ಜೆ ಇಂದು ಎಲ್ಲ ಔದ್ಯಮಿಕ ವಲಯಗಳಲ್ಲಿ ಮಾದರಿಯಾಗಿ ಪರಿಗಣಿಸಲ್ಪಟ್ಟಿದೆ. ಪರಸ್ಪರ ಅನಾರೋಗ್ಯಕರ ಪೈಪೋಟಿಗಿಂತ ಒಂದಾಗಿ ದುಡಿದರೆ ಒಂದು ಸಂಸ್ಥೆ ಬಹುಬೇಗ ಯಾವ ಎತ್ತರವನ್ನು ಏರಬಲ್ಲುದು ಎಂಬುದಕ್ಕೆ ನಿಮ್ಮ ಕಂಪನಿಯು ನಿದರ್ಶನವಾಗಿದೆ. ಇದನ್ನೆಲ್ಲ ಕಾಲ ಬಂದಾಗ ನಿನಗೆ ಹೇಳಬೇಕೆಂದು ನಾನು ಸುಮ್ಮನಿದ್ದೆ. ಇಂದು ಆ ಕಾಲ ಒದಗಿಬಂತು. ನಮ್ಮ ಕಂಪನಿಯ ನಲವತ್ತು ಜನ ಯಾವ ಗೊಂದಲ, ಒಳಜಗಳಗಳಿಲ್ಲದೆ ಬದುಕಲು ಸಾಧ್ಯವಾದರೆ ನಾವು ನಾಲ್ಕು ಜನ ಬದುಕಲೂ ಸಾಧ್ಯ ಅಲ್ಲವೆ? ಇಷ್ಟು ಸರಳವಾದ್ದನ್ನು ಸುಮ, ಅವಳ ಗಂಡ, ಶಶಿಧರನ ಹೆಂಡತಿ, ನೀನು ಯಾರೂ ಅರ್ಥ ಮಾಡಿಕೊಳ್ಳುವುದಿಲ್ಲ. ಯಾವುಯಾವುದಕ್ಕೊ ಯಾವಾಗಲೂ ಗೊಣಗುತ್ತಿರುತ್ತೀರಿ'' ಎಂದು ಸಮಾಧಾನದಿಂದ ಎಲ್ಲವನ್ನೂ ಹೇಳಿ ಮುಗಿಸಿದರು.

ನಾನು ದಂಗುಬಡಿದವಳಂತೆ ಕುಳಿತಿದ್ದೆ. ಬಾಸ್ ಶಶಿಧರ ಅವರ ವ್ಯಕ್ತಿತ್ವದ ಪರಿಚಯವಿದ್ದ ನನ್ನೆದುರು ಅವರ ಬದುಕಿನ ಇನ್ನೊಂದು ಮುಖ ತೆರೆದುಕೊಂಡಿತು. ಕರಿಯರ್, ಮನೆ-ಆಫೀಸ್, ಇದೇ ಜೀವನ ಎಂದುಕೊಂಡಿರುವ ನನ್ನಂತಹವರ ನಡುವೆ ಬಾಸ್, ಉಮೇಶ್ ಹಾಗೂ ನನ್ನವರು ಭಿನ್ನವಾಗಿ ಕಾಣಿಸಿದರು. ಅವರು ಬದುಕಿನ ಅರ್ಥವನ್ನು ತಿಳಿದವರು. ಅದನ್ನು ಜೋಪಾನವಾಗಿ ಉಳಿಸಿಕೊಳ್ಳಲು ಪ್ರಯತ್ನಿಸುವವರು.

ಮಗುವಿನ ಪಕ್ಕಕ್ಕೆ ಹೋಗಿ ಮಲಗಿದೆ. ನಿದ್ದೆಯಲ್ಲಿ ಮಗು ನನ್ನ ಮೇಲೆ ಕೈಹಾಕಿ ಗಟ್ಟಿಯಾಗಿ ಹಿಡಿದುಕೊಂಡು ಮಲಗಿತು. ಆ ಪುಟ್ಟ ಕೈಯ ಹಿಡಿತ ನಮಗೆ ಬೇಕಾಗಿರುವುದು ಭದ್ರತೆಯೆ ಹೊರತು ಭ್ರಮೆಯಲ್ಲ ಎಂದು ನನಗೆ ತಿಳಿಹೇಳಿತು.





[illegible]

ನೂತನ ಶ್ಯಾಂ



ಕಂಡಾಗ ನನಗೆ ಮೊದಲ ಬಾರಿ ಸ್ಮೃತಿಯ ರಹಸ್ಯದ ಪತ್ತೆ ಹತ್ತಿತು. ಗ್ರೆಡ್ ಬ್ಯಾಟರಿ ಹಚ್ಚಿದ. ಆಗ ಬೆಳಕಿನ ಬೆರಗಿನಲ್ಲಿ ಬುದ್ಧನ ಮುಖ ಕಂಡಿತು-ಸ್ಥಿರ, ತಲ್ಲೀನ... ಕಾಲದ ಸುಖ ಮತ್ತು ವಿಷಾದಗಳಿಂದ ಸಂಪೂರ್ಣ ಮುಕ್ತ ಮುಖ. ಒಂದು ಕ್ಷಣ... ಒಂದೇ ಕ್ಷಣ ಅವರ ಮುಖ ಕಾಣಿಸಿತು. ಬ್ಯಾಟರಿ ಆರಿದೊಡನೆಯೇ ಕತ್ತಲೆಯಲ್ಲಿ ಅವರು ಅದೃಶ್ಯರಾದರು. ಅದೃಶ್ಯ ನನಗೆ. ಆದರೆ ಅವರು ಯಾವಾಗಲೂ ಅಲ್ಲೇ ಇದ್ದರು.

ನಮಗೆ ನೆನಪಿರುವದು ಮೃತ ಭೂತಕಾಲದಿಂದ ಅಗೆದು ಹೊರಬಂದ ಭಿತ್ತಿ ಚಿತ್ರದ ತರಹವಲ್ಲ. ಸದಾ ಅದು ಅಲ್ಲೇ ಇರುವದು. ಒಂದು ಪೋಟ್ರೇಟ್ ಗ್ಯಾಲರಿಯ ತರಹ-ಭೂತಕಾಲದ್ದಾದರೂ ಭೂತಕಾಲದ್ದಲ್ಲ. ಅದು ಪ್ರತಿ ಕ್ಷಣ ವಿಲೀನವಾಗಿ ಇತಿಹಾಸವಾಗುವ ವರ್ತಮಾನ ಕಾಲಕ್ಕೂ ಸಂಬಂಧಪಟ್ಟದ್ದಲ್ಲ. ನಿಜವಾಗಿ ಹೇಳಬೇಕೆಂದರೆ 'ಕಾಲ'ದ ಯಾವ ಚೌಕಟ್ಟೂ ಅದಕ್ಕೆ ಸರಿ ಹೊಂದಾಣಿಕೆಯಾಗುವಂತಿಲ್ಲ. ನಾನೀಗ ನನ್ನೀ ಕೋಣೆಯಲ್ಲಿ ಕುಳಿತಿದ್ದೇನೆ. ಆದರೆ ಯಾರಾದರೂ ಹೇಳಬಹುದೇ?... ಇದೀಗ ಇಲ್ಲೇ ಇದ್ದ ನಾನು ಇನ್ನಾವುದೋ ಕೋಣೆಯನ್ನು ಅನಾಯಾಸವಾಗಿ ಸೇರಬಹುದೆಂದು... ಅಲ್ಲಿಂದ ಗುಪ್ತ ರಹದಾರಿಗಳನ್ನು ತುಳಿಯುತ್ತ ಎರಡನೆಯ, ಮೂರನೆಯ ಕೋಣೆಯನ್ನು ಹೊಕ್ಕಬಹುದೆಂದು... ಅಲ್ಲಿಂದ ಬಾಲ್ಯ ಕಾಲದಲ್ಲಿ ಕಂಡವರನ್ನು ನಾನು ನೋಡಬಹುದು. ಶಿಮ್ಲಾದ ನನ್ನ ಮನೆಯನ್ನು, ಅಂಗಳದ ಮುಕ್ತ ಹವೆಯನ್ನು, ತಂಗಿಯ ಜೋಕಾಲಿಯನ್ನು... ಅಪ್ಪನ ಎದುರು ಚಾದರ ಹೊದ್ದುಕೊಂಡು ಕುಳಿತ ನನ್ನನ್ನು.

ಅವರ್ಯಾರು? ಏನು ಮಾಡುತ್ತಿದ್ದಾರೆ ಅಲ್ಲಿ? ಇಷ್ಟೊಂದು ಬಿಳಿ ಕೂದಲುಗಳು. ರುಕ್ಷ ಪರ್ವತದಂತಹ ಮುಖ. ಬಾಗಿದ ಶರೀರ. ಹೊಲಸು ಚಾದರು... ಮತ್ತು ಅಪ್ಪ. ಅವರಿಗೆ ಏನೋ ಹೇಳುತ್ತಿದ್ದಾಳೆ. ಅದನ್ನೆಲ್ಲಾ ನಾನು ಐವತ್ತು ವರ್ಷಗಳ ನಂತರ ನನ್ನ ಟೇಬಲ ಬಳಿ ಕುಳಿತು ನೋಡುತ್ತಿದ್ದೇನೆ.

ಅವರು ಮುದುಕರು ಎಂದು ಹೇಳುವದು ಕಠಿಣ. ವೃದ್ಧಾಪ್ಯ ವಯಸ್ಸಿನ ಜೊತೆಗೆ ಸಂಬಂಧಿಸಿದ್ದು. ಆದರೆ ನಾನವರನ್ನು ಬಾಲ್ಯದಲ್ಲಿ ಕಂಡದ್ದು. ಅಲ್ಲಿ ಜನ ದೊಡ್ಡವರು, ಮುದುಕರು ಆಗುತ್ತಿರಲಿಲ್ಲ. ಅವರು ಕೇವಲ ಇರುತ್ತಿದ್ದರು. ತಮ್ಮ ವಿಶಿಷ್ಟ ಛಾಪಿನಿಂದ-ಸ್ನೇಹ, ಆತ್ಮೀಯತೆ, ಕ್ರೌರ್ಯ, ಭಯ ಇವೆಲ್ಲ ಅವರ ಮುಖದ ವಿಚಿತ್ರ ಭಾವ-ಭಂಗಿಗಳಿಂದ, ಹಾವ-ಭಾವಗಳಿಂದ... ತುಟಿಯ ನಗೆಯಿಂದ, ಕಣ್ಣಿನ ಹೊಳಪಿನಿಂದ ಹಾಸು ಹೊಕ್ಕಾಗಿರುತ್ತಿದ್ದವು. ಬಾಲ್ಯದ ರಂಗಮಂಚದ ಮೇಲೆ ಸಂಪೂರ್ಣ ಜೀವನ... ಜಗತ್ತು ತಿರುಗಾಟದ ಥಿಯೇಟರಿನಂತೆ, ಜನಿಸುತ್ತದೆ. ಅಲ್ಲಿ ಪ್ರತಿಯೊಬ್ಬ ನಟನಂತೆ ರಹಸ್ಯ ತುಂಬಿದ ಜಗತ್ತಿನ ಜೊತೆ ಪ್ರಕಟವಾಗುತ್ತಾನೆ. ಇಂಥ ಅದ್ಭುತ ವ್ಯಕ್ತಿಗಳ ರೆಪರ್ಟರಿಯಲ್ಲಿ ಅವರಿಗೆ ಒಂದು ವೇಳೆ ಎಲ್ಲರಿಗಿಂತ ವಿಶಿಷ್ಟ ಸ್ಥಾನವಿದ್ದರೆ ಅದಕ್ಕೆ ಕಾರಣ ನನ್ನ ನೆನಪಿನ ಎರಡು ವಿಲಕ್ಷಣ ವಸ್ತುಗಳ ಜೊತೆ ಅವರು ಒಂದಾಗಿ ಹೊಂದಿಕೊಂಡಿದ್ದರು. ಒಂದು ಪರ್ವತ. ಇನ್ನೊಂದು ನನ್ನ ಅಪ್ಪ. ಒಂದು ಬಹಳ ದೂರ. ಇನ್ನೊಂದು ಬಹಳ ಹತ್ತಿರ. ಇವುಗಳನ್ನು ಬಿಟ್ಟರೆ ನನ್ನ ಬಾಲ್ಯ ಕಲ್ಪನೀಯ. ಅವರು ಯಾವಾಗಲೂ ದೂರದ ಬೆಟ್ಟಗಳಿಂದ ಇಳಿದು ಅಪ್ಪನ ಬಳಿ ಕುಳಿತಂತೆ ನಮಗೆ ಕಾಣುತ್ತಿತ್ತು. ಅವರು ಬಹಳ ಎತ್ತರದಿಂದ ಇಳಿದು ನಮ್ಮ ಮನೆಗೆ ಬಂದಿದ್ದಾರೆಂದು ಅನಿಸುತ್ತಿತ್ತು. ಅವರ ಮುಖದ ಮೇಲೆ ವಯಸ್ಸಿನ ಸುಕ್ಕುಗಳ ಕಾಲ ಚಿನ್ಹೆ ನಮಗೆ ಕಾಣುತ್ತಿರಲಿಲ್ಲ. ಬೆಟ್ಟದ ಕಾಲುದಾರಿಗಳ ಮುದ್ರೆ ಕಾಣುತ್ತಿತ್ತು.

ವಿಶ್ವ ಭಾರತಿ - 28



ನಿರ್ಮಲ್ ವರ್ಮಾ

ರಿಕ್ತ ಸ್ಥಾನದಿಂದ...

ಕನ್ನಡಕ್ಕೆ: ಮುಕುಂದ ಜೋಷಿ

ಅವರನ್ನು ನೋಡುತ್ತಲೇ ನಾವು ಅಣ್ಣ, ತಮ್ಮ ಅಕ್ಕ ತಂಗಿಯರೆ ಓಡುತ್ತ ಅವ್ವನ ಬಳಿ ಬಂದು ಒಂದೇ ಸ್ವರದಲ್ಲಿ ಅನ್ನುತಿದ್ದೆವು: 'ಅವರು... ಆ ಶೋಗಿಯ ಬಾಬಾ ಬಂದಿದ್ದಾರೆ'. ಶೋಗಿಯ ಬಾಬಾ-ಈ ಹೆಸರನ್ನು ನಾವೇ ಇಟ್ಟದ್ದು. ನಮ್ಮ ಬಳಗದ ಬಹುತೇಕ ಜನರ ಹೆಸರುಗಳು ಅವರ ಊರಿನ ಹೆಸರಿನಿಂದ ಪರಿಚಿತವಾಗಿದ್ದವು. ಕೆಲವು ವರ್ಷಗಳ ಹಿಂದೆ ಬಿಹಾರದ ಯಾತ್ರೆ ಮಾಡುವಾಗ ನಮ್ಮ ಟ್ರೇನು ಅಚಾನಕಾಗಿ ಒಂದು ಸ್ಟೇಶನ್‌ದಲ್ಲಿ ನಿಂತಾಗ ನೋಡಿದರೆ ಅದು ದಾನಾಪೂರ ಸ್ಟೇಶನ್. ಆಗ ನನಗೆ ನೆನಪಾಯಿತು. ಅಲ್ಲಿ ನಮ್ಮ ದೂರದ ತಾಯಿಯೊಬ್ಬಳು ಇರುತ್ತಿದ್ದಳು. ಅವಳಿಗೆ ನಾವು 'ದಾನಾಪೂರದವಳು' ಅನ್ನುತ್ತಿದ್ದೆವು. ನಮ್ಮ ಅಕ್ಕನ ಮದುವೆಯ ಬಹಳ ವರ್ಷಗಳ ನಂತರವೂ ಅತ್ತೆಯ ಮನೆಯವರು ಅವಳನ್ನು 'ಶಿಮ್ಲಾದವಳೆಂದು' ಮತ್ತು ಅತ್ತಿಗೆಯನ್ನು 'ಝಾಂಸಿಯವಳೆಂದು' ಕರೆಯುತ್ತಿದ್ದರು. ಇದಕ್ಕಾಗಿಯೇ ನಾವರನ್ನು ಶೋಗಿಯ ಬಾಬಾ ಅನ್ನುವದರಲ್ಲಿ ಅಂಥ ಯಾವ ಆಶ್ಚರ್ಯವೂ ಇರಲಿಲ್ಲ. ಒಮ್ಮೊಮ್ಮೆ ನಾವು ಅವ್ವನನ್ನು ಈ ಶೋಗಿ ಎಲ್ಲಿದೆ ಎಂದು ಕೇಳುತ್ತಿದ್ದೆವು. ಆಗವಳು ಬಹಳ ಮಸಕಾದ ರೀತಿಯಲ್ಲಿ ಬೆಟ್ಟಗಳ ಕಡೆಗೆ ಸನ್ನೆ ಮಾಡುತ್ತಿದ್ದಳು.


ಅವರು ಬೆಟ್ಟಗಳ ಥರ ಶಾಂತ... ವಿಶಾಲ... ಚಿರಂತನರಾಗಿ ಕಾಣು ತ್ತಿದ್ದರು. ಅದಕ್ಕಾಗಿ ಅವರ ಜೊತೆ ಯಾವುದೇ ಕ್ರಿಯಾಪದ ಹಚ್ಚುವದು ತಪ್ಪು ಎಂದು ಅನಿಸುತ್ತಿತ್ತು. ಅವರು ಎಲ್ಲಿಂದಲೋ ಇಳಿಯುತ್ತ ಬರುತ್ತಿರುವಂತೆ ಕಾಣುತ್ತಿದ್ದರು. ಅದೂ ಮನೆಯಲ್ಲಲ್ಲ. ಮನೆಯ ಮುಕ್ತ ಅಂಗಳದಲ್ಲಿ-ಅವನ ಎದುರು. ಭೂತಕಾಲದ ಚಲನಚಿತ್ರವಾಗದೆ ಸ್ಮೃತಿಯ ಸ್ಥಿರ ಚಿತ್ರ ಸ್ಟಿಲ್ ಲಾಯಿಫ್.

ಅವ್ವ ಅವರಿಗೆ 'ಭಿಕ್ಷೆ' ನೀಡುತ್ತಿದ್ದಳು. ಅವರು ತಮ್ಮದೇ ಆದ ವಿಶಿಷ್ಟ ಕ್ರಮದಿಂದ ಜೋಳಿಗೆಯ ಬೇರೆ ಬೇರೆ ಖಾನೆಗಳಲ್ಲಿ ಅವುಗಳನ್ನು ನೀಟಾಗಿ ಕಟ್ಟುತ್ತಿದ್ದರು. ಅಕ್ಕಿ... ಗೋಧಿ... ಬೇಳೆ... ಮಸಾಲೆ ಇತ್ಯಾದಿ. ನಾನು ಒಮ್ಮೊಮ್ಮೆ 'ಕಲ್ಯಾಣ'ದ ಸಂಚಿಕೆಯಲ್ಲಿ ತಮ್ಮ ಧೋತರದಲ್ಲಿ ಅವಲಕ್ಕಿಯನ್ನು ಕಟ್ಟುತ್ತಿದ್ದ ಸುಧಾಮರ ಚಿತ್ರವನ್ನು ನೋಡುತ್ತಿದ್ದಾಗ ನನಗೆ ಯಾವಾಗಲೂ ಸುದಾಮರ ಸ್ಥಳದಲ್ಲಿ ಶೋಗಿಯ ಬಾಬರ ಮುಖ ನೆನಪಾಗುತ್ತಿತ್ತು. ಅವ್ವನ ಅದೃಶ್ಯ ನೆರಳು... ಅವರು... ಮತ್ತು ಯಾವುದೋ ಮಸಕಾದ ಮೂಲೆಯಲ್ಲಿ ಕುಳಿತ ನಾನು. ಅವರನ್ನು ಮಂತ್ರಮುಗ್ಧನಾಗಿ ನೋಡುತ್ತಿದ್ದೆ-ಒಂದು ಕ್ಷಣಾರ್ಧದಲ್ಲಿ ಕಂಡು ಮಾಯವಾಗುವ ಸಿನೇಮಾದ ದೃಶ್ಯದಂತಲ್ಲ. ಆದರೆ... ಒಂದು ನಿಂತಲ್ಲೇ ನಿಂತ ಕ್ಷಣ. ಅನಾದಿ ಅನಂತ ಕಾಲದ ಬಿಂಬದಂತೆ. ಯಾವಾಗಲೂ ಸ್ಮೃತಿಪಟಲದ ಮೇಲೆ ಅಚ್ಚೊತ್ತಿ ಉಳಿಯುವಂತೆ.

ಈ ಬಿಂಬದ ಒಂದು ಆಯಾಮ ಅದರ ಸ್ಥಿರತೆಯಾಗಿದ್ದರೆ ಇನ್ನೊಂದು ಆಯಾಮ ಅದರ ಮೌನದಲ್ಲಿನ ನಿಶ್ಚಲತೆ ಮತ್ತು ನೀರವತೆಯ ಜೊತೆ ತಳುಕು ಹಾಕಿದ್ದು. ಎಲ್ಲ ಬಿಂಬಗಳ ಜೊತೆ ಇದೇ ರೀತಿ ಸಂಭವಿಸುತ್ತದೆ ಅನ್ನುವದು ಅನಿವಾರ್ಯವಲ್ಲ. ರಮಣ ಮಹರ್ಷಿ ಯಾವುದೇ ಚಿತ್ರದಲ್ಲಿ ಮಾತನಾಡುತ್ತಿರುವಾಗಲೂ ಸುಮ್ಮನಿದ್ದಂತೆ ಕಾಣುತ್ತಾರೆ. ರಾಮಕೃಷ್ಣ ಪರಮಹಂಸರದು ಇದಕ್ಕೆ ಬಿಲ್‌ಕುಲ್ ತದ್ವಿರುದ್ಧ. ಅವರು ಮೌನರಾಗಿದ್ದರೂ ಯಾವಾಗಲೂ ಮಾತನಾಡುತ್ತಿರುವಂತೆ ಕಾಣುತ್ತಾರೆ. ಇದೂ ಹೆಚ್ಚೂ ಕಡಿಮೆ ಗಾಂಧೀಜಿಯ ಥರ. ಗಾಂಧೀಜಿ 'ಸ್ಥಿರ' ಕಂಡರೂ ಯಾವಾಗಲೂ ಓಡಾಡುತ್ತಿರುವಂತೆ ಭಾಸವಾಗುತ್ತಾರೆ. ಆದರೆ ಶ್ರೀ ಅರವಿಂದ ಯಾವಾಗಲೂ ಸ್ಥಿರಾಸೀನ. ನನ್ನ ಸ್ಮೃತಿಚಿತ್ರದಲ್ಲಿ ಅವ್ವ ಮತ್ತು ಅವರ ಅತಿಥಿ ಶೋಗಿ ಬಾಬಾ ಇಬ್ಬರೂ ಅಂಗಳದ ಮುಕ್ತ ಹವೆಯಲ್ಲಿ ಕೇವಲ ನಿಶ್ಚಲರಲ್ಲ... ನಿತಾಂತ ನಿಸ್ತಬ್ಧರಾಗಿ ಕಾಣುತ್ತಿದ್ದರು.



2000ನೇ ಸಾಲಿನ ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ನಿರ್ಮಲ್ ವರ್ಮಾ, ನಾಟಕ, ಕತೆ, ಕಾದಂಬರಿ, ಯಾತ್ರಾವೃತ್ತಾಂತ ಹೀಗೆ 50ಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿದ್ದಾರೆ. ಎಲ್ಲ ಪ್ರಕಾರದ ಬರವಣಿಗೆಯಲ್ಲಿ ಅವರ ಕವಿ ಹೃದಯದ ಮಿಡಿತ ಸುಸ್ಪಷ್ಟವಾಗಿದೆ. ಅವರ ಜನ್ಮ 1929, ಶಿಮ್ಲಾದಲ್ಲಿ. ಬಾಲ್ಯ ಬೆಟ್ಟಗಳಲ್ಲಿ ಕಳೆದದ್ದು, ದಿಲ್ಲಿಯ ಸೇಟ್ ಸ್ಟೀಫನ್ಸ್ ಕಾಲೇಜ್‌ನಲ್ಲಿ ಇತಿಹಾಸದಲ್ಲಿ ಎಂ.ಎ. ಪದವಿ. ಕೆಲವು ವರ್ಷ ಅಧ್ಯಾಪನ. 1977ರಲ್ಲಿ ಅವರ 'ಮಾಯಾದರ್ಪಣ' ಕಥೆ ಆಧಾರಿತ ಕುಮಾರ ಸಾಹನಿ ಅವರ ಚಿತ್ರ ಹೆಸರು ಪಡೆಯಿತು. ''ಕಚ್ಚೆ ಜೇಲ್ ಕಾಲಾಪಾನಿ' ಕಥಾ ಸಂಗ್ರಹಕ್ಕಾಗಿ 1985ರಲ್ಲಿ ಸಾಹಿತ್ಯ ಅಕಾಡೆಮಿ ಪುರಸ್ಕಾರ. ಸಂಪೂರ್ಣ ಸಾಹಿತ್ಯಕ್ಕಾಗಿ 1993ರಲ್ಲಿ ಸಾಧನಾ ಸನ್ಮಾನ. ಉತ್ತರ ಪ್ರದೇಶದ ಸರ್ವೋಚ್ಚ ರಾಮಮನೋಹರ ಲೋಹಿಯಾ ಸನ್ಮಾನ 1995ರಲ್ಲಿ.



ನಿರ್ಮಲ್ ವರ್ಮಾರ ಈ ಕತೆಯನ್ನು ಕನ್ನಡಕ್ಕೆ ತಂದಿರುವ ಮುಕುಂದ ಜೋಷಿ, ಮುಂಬಯಿಯಲ್ಲಿರುವ ಕನ್ನಡ ಕತೆಗಾರ.

ಇವೆಲ್ಲ ಯಾಕೆ ಇಷ್ಟೊಂದು ಆಶ್ಚರ್ಯ ಅನಿಸುತ್ತದೆ ಅಂದರೆ ವಾಸ್ತವ ಜೀವನದಲ್ಲಿ , ಅವ್ವ ಯಾವಾಗಲೂ ನಡೆದಾಡುತ್ತಿರುವಂತೆ... ಓಡಾಡುತ್ತಿರುವಂತೆ ಕಾಣಸುತ್ತಾಳೆ. ಮಲಗಿರುವಾಗಲೂ ಆಕೆ ಕನಸಿನ ಸವಾರಿ ಮಾಡುತ್ತ ಯಾವುದೋ ಯಾತ್ರೆಗೆ ಹೊರಟಂತೆ ಅನಿಸುತ್ತಾಳೆ. ಮಧುರೆಯ ಗುಡಿಗಳ ಪ್ರದಕ್ಷಿಣೆ ಹಾಕುತ್ತಿರುವಂತೆ ಇಲ್ಲಾ ವೃಂದಾವನದ ಓಣಿಗಳಲ್ಲಿ ಓಡಾಡುತ್ತಿರುವಂತೆ. ಆಕೆ ಯಾವಾಗಲೂ ಎಲ್ಲಿಂದಲೋ ಬಂದವಳಂತೆ ಅಥವಾ ಎಲ್ಲೋ ಹೊರಟಂತೆ ಕಾಣಸುತ್ತಾಳೆ. ಹಾಗಿದ್ದರೆ ಯಾಕವಳು ಶೋಗಿ ಬಾಬಾರ ಜೊತೆ ಇಷ್ಟೊಂದು ಸ್ಥಿರಳಾಗಿ ಕಾಣಸಬೇಕು? ಸ್ಮೃತಿಯ ಕಥಾಚಿತ್ರ ಒಂದು ದಿಕ್ಕಿಗೆ ನಡೆದರೆ ಬದುಕಿನ ಕಥೆ ಇನ್ನೊಂದೇ ಬೇರೆ ದಿಕ್ಕಿಗೆ ಸಾಗುತ್ತಿರುತ್ತದೆಯೇ? ಬಹುಶಃ ಇದು ಕೂಡ ಸಾಧ್ಯವಿರಬೇಕು. ಅಂದರೆ ಯಾವುದಕ್ಕೆ 'ಬದುಕು' ಅನುತ್ತೇವೆಯೋ ಅದರ ನೈಜತೆ ಅದರ ಪ್ರತ್ಯಕ್ಷ ವಾಸ್ತವವಲ್ಲಲ್ಲ. ಅದರ ಪ್ರಚ್ಛನ್ನ ಆಕಾಂಕ್ಷೆಯಲ್ಲಿ ಅಡಗಿರಬೇಕು.

ದಿಲ್ಲಿಯ ತುಂಬಿ ತುಳುಕುವ ಕುಟುಂಬದಿಂದ ಬಂದ ಅವ್ವನಿಗೆ ಶಿಮ್ಲಾದ ಏಕಾಕಿತನ ಕಾಡುತ್ತಿರಬಹುದು. ಬಿಟ್ಟುಬಂದ ಬಳಗದ ಜನರಿಂದ ಎಷ್ಟೊಂದು ವಿರಹಿಣಿಯಾಗಿ... ಅದೆಲ್ಲದರಿಂದ ವಂಚಿತಳಾಗಿ ತನ್ನನ್ನು ಕಂಡಿರಬಹುದು? ಅದಕ್ಕಾಗೇ ಈ ನಿರ್ಜನ... ಶ್ರೀ ಹೀನ ವಾತಾವರಣದಲ್ಲಿ ಅವಳು ಹೊರಗಿನ ಜಗತ್ತಿನ ಜೊತೆಗೆ, ಅಂದರೆ ಬೆಟ್ಟದ ಹಿಂಬದಿಯಿಂದ ಬಂದ ಸಾಧು-ಸನ್ಯಾಸಿಗಳ ಜೊತೆಗೆ, ಯಾವುದೋ ಟಿಬೇಟಿನ ಲಾಮಾನ ಜೊತೆಗೆ, ಇಲ್ಲಾ ಯಾವುದೋ ಭಿಕ್ಷುಕ, ಭಿಕಾರಿಯ ಜೊತೆಗೆ ಯಾವುದೇ ಸಂಕೋಚವಿಲ್ಲದೆ ತನ್ನ ಏಕಾಕಿತನವನ್ನು ಹಂಚಿಕೊಳ್ಳುತ್ತ ಕುಳಿತಿರುತ್ತಿದ್ದಳು. ಹೊರಗೆ ಹೋಗುವ ಆಕಾಂಕ್ಷೆ ಬಹುಶಃ ಹೊರಗಿನಿಂದ ಬಂದವರಲ್ಲಿ ತನ್ನ ಪರಿಪೂರ್ಣತೆ ಪಡೆಯುತ್ತಿರಬೇಕು.

ಅವ್ವ ಹಿತ್ತಾಳೆಯ ವಾಟಗಾದಲ್ಲಿ ಅವರಿಗೆ ಚಹಾ ಕೊಡುವದನ್ನು ಪ್ರಾರಂಭಿಸಿದಾಗ ನಾವು ಅಂದುಕೊಳ್ಳುತ್ತಿದ್ದೆವು-ಇನ್ನಿದು ಅವರು ಹೊರಡುವ ಘಳಿಗೆ ಎಂದು. ಅವರು ಸುರ್ ಸುರ್ ಎಂದು ಸಪ್ಪಳ ಮಾಡುತ್ತ ಚಹಾ ಕುಡಿಯುತ್ತಿದ್ದರು. ವಾಟಗಾ ಖಾಲಿಯಾದ ಮೇಲೆ ಕೊರಳಿಗೆ ಹಾಕಿದ ಎಳೆಯ ಚಾದರಿನಂಥ ಶಾಲದಿಂದ ಮುಖ ಒರೆಸಿಕೊಳ್ಳುತ್ತಿದ್ದರು. ಅವ್ವ ಅವರ ಕೈಯಲ್ಲಿ ಬೆಳ್ಳಿಯ ರೂಪಾಯಿ ಇಡುತ್ತಿದ್ದಳು. ಅದನ್ನವರು ತಮ್ಮ ಧೋತರದಲ್ಲಿ ಗಂಟುಹಾಕಿಕೊಳ್ಳುತ್ತಿದ್ದರು. ಜೋಳಿಗೆಯನ್ನು ಹೆಗಲ ಮೇಲೆ ಲಟಕಾಯಿಸಿ ನಡೆದು ನಡೆದು ಸವೆದು ಹೋದ, ಧೂಳಿನಿಂದ ಆವೃತ್ತ ಬೂಟಿನಿಂದ ಮೆಟ್ಟಲುಗಳನ್ನು ಇಳಿಯುತ್ತಿರುವಾಗ ನಾನು ಓಡಿ ಹೋಗಿ ಅಂಗಳದ ಗಿಡಗಳ ನಡುವೆ ನಿಲ್ಲುತ್ತಿದ್ದೆ ಅವರನ್ನು ನೋಡುವದಕ್ಕಾಗಿ.

ನಂತರ ಅವರು ಮೆಟ್ಟಲುಗಳನ್ನು ಏರುತ್ತ ಹೋಗುತ್ತಿದ್ದರು. ಮೊದಲಿನ ಘಟ್ಟ ಪ್ರೈಮರಿ ಸ್ಕೂಲಿನ ಹತ್ತಿರದ್ದು. ನಂತರ ನೀರಿನ ಟಾಕಿಯದು. ಅಲ್ಲಿಂದ ಅವರ ಬೆನ್ನು ಕಾಣುತ್ತಿತ್ತು. ಆಮೇಲೆ ಅವರು ಮುಂದೆ ಮುಂದೆ ಹೋದಂತೆ ಅವರ ಗಾತ್ರ ಕಡಿಮೆಯಾದಂತೆ ಗೋಚರಿಸುತ್ತಿತ್ತು. ಈ ಮಧ್ಯೆ ಕಣ್ಮರೆ ಆದಂತೆ ಅನಿಸಿದ ಅವರು ಸರಕಾರಿ ಆಸ್ಪತ್ರೆಯ ಹತ್ತಿರ ಕಾಣುತ್ತಿದ್ದರು-ಗಿಡಗಳ ಹಿಂದೆ-ಒಂದು ತಲೆಯಂತೆ. ನಂತರ ಒಂದು ಬಿಂದು. ಅಲೆದಾಡುವ ಕಣ. ಒಂದು ಆದಿಮ ಅಣು. ಆಮೇಲೆ ಒಂದಿಷ್ಟೂ ಇಲ್ಲ.

ಕೇವಲ ಹವೆ... ಗಿಡ... ಬೆಟ್ಟ.

ನಾನು ಹೊರಳಿ ನೋಡಿದರೆ ಅವ್ವ ಕಾಣುತ್ತಿದ್ದಳು. ಅವರು ಬಿಟ್ಟು ಹೋದಾಗ ಕಂಡಂತೆ... ಅದೇ ಥರ-ನಿಶ್ಚಲ.

ನಂತರ ಬಂದ ಒಂದು ದಿನ ಅಂದರೆ-ಅವರು ಬರದೇ ಇದ್ದ ದಿನ.

ವರ್ಷಗಳು ಕಳೆದವು. ಕಳೆದು ಹೋದವು. ನಾವು ಶಿಮ್ಲಾಕ್ಕೆ ಬರುವದೂ ನಿಂತುಹೋಯಿತು... ನಂತರ ಒಂದು ದಿನ ನಾನು ಅವರನ್ನು ಮರೆತುಬಿಟ್ಟೆ.

ರೋಲಾಂ ಬಖ್ತ ಒಂದು ದಿನ ತನ್ನ ಮೇಜಿನ ಡ್ರಾವರಿನಲ್ಲಿ ಕೈಯಾಡಿಸುತ್ತಿದ್ದಾಗ ಅವನಿಗೆ ಅಕಸ್ಮಾತ್ತಾಗಿ ತಾಯಿ ತಾರುಣ್ಯದಲ್ಲಿದ್ದಾಗಿನ ಮತ್ತು ತಾನು ಮಗುವಾಗಿದ್ದಾಗಿನ ಫೋಟೋ ಕಂಡಿದ್ದ. ತಾಯಿಯ ಸಾವಿನ ನಂತರ



ಅವರು ಮೊದಲ ಬಾರಿ ಆ ಫೋಟೋದಲ್ಲಿ ಕ್ಯಾಮರಾದ ಕಣ್ಣುಗಳಿಂದ ತಮ್ಮ ಮತ್ತು ತಾಯಿಯ ಬದುಕನ್ನು ಪರಿಗಣಿಸಿದ್ದರು. ನಮ್ಮ ಸ್ಮೃತಿ ಕೂಡ ಇದೇ ರೀತಿ ಯಾವುದೋ ಡ್ರಾವರಿನಿಂದ ಸ್ಪಷ್ಟವಾಗಿ ಪ್ರಕಟವಾಗುತ್ತದೆಯೋ? ಬಹಳ ಸಲ ಜನ ಹಿಂದಿನ ಪ್ರಸಂಗವನ್ನು ನೆನಪಿಸುತ್ತ ಹೇಳುತ್ತಾರೆ: 'ಒಂದು ವೇಳೆ ನನ್ನ ನೆನಪು ಕೈ ಕೊಡದಿದ್ದರೆ...' ಎಂದು. ಪಾಪ... ಅವರಿಗೇನು ಗೊತ್ತು? ಸ್ಮೃತಿ ಯಾವಾಗಲೂ ಕೈ ಕೊಡುತ್ತದೆ ಎಂದು. ಇದರಲ್ಲಿಯೇ ಅದರ ಲೀಲೆ ಮತ್ತು ಶೋಕ ಅಡಗಿದೆ. ಪ್ರೂಸ್ತ ಯಾವ ಭೂತಕಾಲವನ್ನು ತನ್ನ ಏಳು ಕಾದಂಬರಿಗಳಲ್ಲಿ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದನೋ ಅದು ಅವನ ಭೂತಕಾಲವಾಗಿರಲಿಲ್ಲ. ಮಾರ್ಸೆಲನ ಬದುಕಿತ್ತು- ಕಳೆದು ಹೋದ ಕ್ಷಣಗಳನ್ನು ಜೀವಂತ ಶಬ್ದಗಳಲ್ಲಿ ಪುನರ್ಜೀವಿತ ಮಾಡುತ್ತ. ನನ್ನ ಜೊತೆಗೆ ಆದದ್ದು ಇದರ ವಿಪರೀತ... ವಿರುದ್ಧ.

ಕೆಲವು ವರ್ಷಗಳ ಹಿಂದೆ ಕಾಲಕಾದಿಂದ ಶಿಮ್ಲಾಕ್ಕೆ ಹೋಗುವಾಗ ಮಧ್ಯದ ಯಾವುದೋ ಸ್ಟೇಶನದಲ್ಲಿ ನಮ್ಮ ಗಾಡಿ ನಿಂತಿತು. ನಾನು ಕಿಟಕಿಯಿಂದ ಹಣಿಕೆ ಹಾಕಿದೆ. ಒಂದು ಹಸಿರು ಶೆಡ್ಡಿನ ಕೆಳಗೊಂದು ಬೆಂಚು. ಒಂದು ವೇಳೆ ನನ್ನ ನೆನಪು ಕೈ ಕೊಡದಿದ್ದರೆ ಹೇಳಬಹುದು. ಬೆಂಚಿನ ಬೆನ್ನಿನ ಮೇಲೆ ಹಿಂದಿಯಲ್ಲಿ ಒಂದೇ ಒಂದು ಶಬ್ದ ಬರೆದಿತ್ತು-'ಶೋಗಿ'. ಆಗ ನಿಂತ ಟ್ರೇನಿನ ಕಿಟಕಿಯಿಂದ ಕಂಡ ಆ ಶಬ್ದ ಪ್ರೂಸ್ತನ ಮೆಡಲಿನ ಮತ್ತು ಬಾಖ್ತನ ಫೋಟೋದ ತರಹ ಸತ್ತ ಭೂತಕಾಲವನ್ನು ಯಾವುದೋ ಕಳೆದು ಹೋದ ಡ್ರಾವರಿನಿಂದ ಹೊರಗೆ ತೆಗೆಯಿತು. ನಾನು ಮತ್ತೆ ಅಲ್ಲೇ ಮರಳಿದ್ದೆ. ಅಲ್ಲಿ ನನ್ನ ಬಾಲ್ಯಕಾಲವಿತ್ತು... ತಂಗಿಯ ಜೋಕಾಲಿ... ಅದರೆದುರು ಕುಳಿತ ಬಾಬಾ... ಮತ್ತು ಅವ್ವ? ಅವಳಿನ್ನೂ ಅವರ ಜೋಳಿಗೆಯಲ್ಲಿ ಭಿಕ್ಷೆ ನೀಡುತ್ತಿದ್ದಳು.

ಅವರೆಲ್ಲ ಇನ್ನೂ ಅಲ್ಲೇ ಇದ್ದರು. ಕೇವಲ ಒಂದು ಸ್ಥಾನ ರಿಕ್ತವಾಗಿತ್ತು-ನಾನು ಕುಳಿತು ನೋಡುವ ಆ ಸ್ಥಳ. ಕಾಲದ ಲೀಲೆಯೋ ಇಲ್ಲಾ ನೆನಪಿನ ಚಮತ್ಕಾರವೋ ಯಾರಿಗೆ ಗೊತ್ತು? ಎಷ್ಟೋ ಸಮಯದ ಹಿಂದೆ ಈ ಜಗತ್ತನ್ನು ಬಿಟ್ಟು ಹೋದವರು ಅದೇ ಆ ಅಂಗಳದಲ್ಲಿ ಕುಳಿತಿದ್ದರು. ಮತ್ತು ಟ್ರೇನಿನ ಕಿಟಕಿಯಿಂದ ಅವರನ್ನು ನೋಡುವವ ಎಂದೋ ಸತ್ತಿದ್ದ.



ಎಷ್ಟೆಲ್ಲ ಸಿನಿಮಾ ಹಾಡುಗಳು ಬರುತ್ತವೆ, ಹೋಗುತ್ತವೆ. ಆದರೆ ಯಾವುದೋ ಒಂದೆರಡು ಹಾಡುಗಳ ಜತೆ ಯಾವುದೋ ಘಟನೆಯ ನೆನಪು, ವಾತಾವರಣ, ಪರಿಮಳ ಆವರಿಸಿಕೊಂಡಿರುತ್ತದೆ.

ಹಾಡಿನ ನೆಪ

ಹೀಗೆ ಇದ್ದಲ್ಲೆ ನಿಮ್ಮನ್ನು ಆವರಿಸಿ, ವಿಶಿಷ್ಟ ಹಳೆಯ ಅನುಭವಕ್ಕೆ ಒಯ್ಯುವ ಒಂದು ಹಾಡು (ಯಾವ ಭಾಷೆಯದೂ ಆದೀತು), ಮತ್ತು ಅದು ನಿಮ್ಮಲ್ಲಿ ಎಬ್ಬಿಸುವ ಅಲೆಗಳ ಬಗ್ಗೆ ಚುಟುಕಾಗಿ ಬರೆಯಿರಿ ಎಂದು ನಾವು ಕೆಲ 'ಹಾಡುಪ್ರಿಯ'ರನ್ನು 'ಟ್ಯೂನ್' ಮಾಡಿದ್ದಕ್ಕೆ ಹರಿದು ಬಂದ 'ಗಾನಲಹರಿ' ಇಲ್ಲಿದೆ. ಇದಕ್ಕೆ ನಿಮ್ಮದನ್ನೂ ಸೇರಿಸಿ, ಸವಿಯಲು ಯಾವ ನೆಪವೂ ಬೇಡ ಅಲ್ಲವೇ?



ಚೆಲುವಾದ ಮುದ್ದಾದ ...

ಸುಧಾ ಶರ್ಮಾ

''ಚೆಲುವಾದ ಮುದ್ದಾದ ನಿನ್ನಂತೆ ಇರುವ ಮಗುವಾಗಲೀ, ಆ ಮಗುವಿಂದ ಮನೆಯೆಲ್ಲ ಬೆಳಕಾಗಲೀ''

ಈ ಹಾಡಿನೊಂದಿಗೆ ಹಳ್ಳಿಯ ಸಂಕಷ್ಟದ ದಿನಗಳ ಅನಾಥ ಭಾವದ ನೆನಪು ನುಗ್ಗುತ್ತದೆ. ಒಂದು ಸಿನೆಮಾ ತೋರಿಸುವುದಕ್ಕಾಗಿ ಮನೆಯವರು ಪಟ್ಟ ಪಡಿಪಾಟಲು ಎದುರಿಗೆ ಬರುತ್ತದೆ. ಸಿನೆಮಾ ನೋಡುವುದಕ್ಕಾಗಿ ಯಾರೂ ಶಿರಸಿಗೆ ಕರೆದುಕೊಂಡು ಬರುತ್ತಿರಲಿಲ್ಲ. ದೊಡ್ಡಮ್ಮನ ಮಗನ ಉಪನಯನಕ್ಕೆ ಬಂದವರು ಈ ಸಿನೆಮಾ ನೋಡಿದ್ವಿ, ಅದು ನಾನು ನೋಡಿದ ಮೊದಲ ಸಿನೆಮಾ. ಹೂಬೇಹೂಬು ಪಾತ್ರಗಳು ಬಂದು ಹೋಗುವ ರೀತಿ ಬೆರಗು, ಭಯ ಹುಟ್ಟಿಸಿತು. ಸಿನೆಮಾ ಮುಗಿದ ಮೇಲೆ ರಾತ್ರಿ ಊರಿಗೆ ಹೋಗಲು ಬಸ್ ಇಲ್ಲ. ಯಾರದ್ದೋ ಮನೆಯಲ್ಲಿ ಉಳಕೊಂಡ್ವಿ. ಇದೆಲ್ಲ ಯಾವುದೋ ಅರ್ಥವಾಗದ ನೋವಿನ ನೆನಪಿನ ಚಿತ್ರಣ. ಹಾಗಾಗಿಯೇ ಈ ಹಾಡು ಬಂದರೆ mute ಮಾಡುತ್ತೇನೆ. ಇಲ್ಲವೆ channel change ಮಾಡುತ್ತೇನೆ.

ಮೇರಾ ಜೂತಾ ಹೈ ಜಪಾನಿ

ಜೆ.ಎಸ್. ಸದಾಶಿವ



ನಾನು ಸಿನಿಮಾಗಳನ್ನು ನೋಡಲು ಶುರು ಮಾಡಿದ್ದು ಹೈಸ್ಕೂಲಿಗೆ ಸೇರಿದ ಮೇಲೆಯೇ. ಸಿನಿಮಾಗಳ ಬಗ್ಗೆ ಅಂಥ ಹುಚ್ಚೇನೂ ಇರಲಿಲ್ಲವಾದರೂ ತಿಂಗಳಲ್ಲಿ ಒಂದೋ ಎರಡೋ ಸಿನಿಮಾ ನೋಡುತ್ತಿದ್ದ ಅಂತ ನೆನಪು. ವಿಚಿತ್ರವೆಂದರೆ ನನಗೆ ಅರ್ಥವಾಗುತ್ತಿದ್ದ ಒಂದೇ ಒಂದು ಭಾಷೆಯಾದ ಕನ್ನಡಕ್ಕಿಂತಲೂ 'ತೋಡಾ ತೋಡಾ' ಅರ್ಥವಾಗುತ್ತಿದ್ದ ಹಿಂದಿ ಸಿನಿಮಾಗಳು ಇಷ್ಟವಾಗುತ್ತಿದ್ದವು. ಐವತ್ತರ ದಶಕದಲ್ಲಿ ಸಾಗರವೆಂಬ ಮಹಾಪಟ್ಟಣಕ್ಕೆ ಕನ್ನಡ ಸಿನಿಮಾಗಳೂ ಅಪರೂಪವೇ ಆಗಿದ್ದವು. ತಮಿಳು, ಹಿಂದಿ ಸಮ ಸಮ ಬರುತ್ತಿದ್ದವು. ಶಿವಾಜಿ ಗಣೇಶನ್ ಕಿಲೋಗಟ್ಟಲೆಯ ಭಾಷಣಗಳಾಗಲಿ, ಏಕಾಂಗಿಯಾಗಿ 40 ಮಂದಿಯನ್ನು ಸದೆ ಬಡಿಯುತ್ತಿದ್ದ ಎಂ.ಜಿ.ಆರ್. ಚಿತ್ರವಾಗಲೀ ನಮ್ಮನ್ನು ದೂರದಲ್ಲೇ ಇರಿಸುತ್ತಿದ್ದವು. ಮೈಲುಗಟ್ಟಲೆ ಉದ್ದದ ತಮಿಳು ಚಿತ್ರಗಳ ಶೀರ್ಷಿಕೆಗಳಂತೂ ಗೆಳೆಯರ ನಡುವಣ ಗೇಲಿಗೇ ವಸ್ತುವಾಗುತ್ತಿದ್ದವು. ರಾಜ್‌ಕಪೂರ, ದೇವಾನಂದ್, ದಿಲೀಪ್ ಕುಮಾರ್ (ಸ್ವಲ್ಪ ಅಳುಬುರುಕ ಎಂದು ಆಗ ಅನಿಸುತ್ತಿತ್ತು.) ಚಿತ್ರಗಳೆಂದರೆ 'ವಾಹ್'. ಇವರಲ್ಲಿ ರಾಜ್ ಕಪೂರ್ ಅವರ 'ಶ್ರೀ 420' ಚಿತ್ರದ ಒಂದು ಹಾಡು ನಮ್ಮ ಸದ್ಯದ ಕಥಾನಕಕ್ಕೆ ಸಂಬಂಧಿಸಿದ್ದು.

ನಾನೇನೂ ಅಂಥ ಹಾಡುಗಾರನೂ ಆಗಿರಲಿಲ್ಲ (ಈಗಲೂ ಅಲ್ಲ). ಬಾತ್‌ರೂಮಿನಲ್ಲೂ ಕೂಡಾ. ಬಾತ್ ರೂಮಿನಲ್ಲಿ 'ಚಿಂತಕ'ನಾಗಿ ಬಿಡುತ್ತಿದ್ದೆ ಎನಿಸುತ್ತದೆ. ಇನ್ನೂ ಕೊಂಚ ಹೆಚ್ಚು ಚಿಂತನೆ ನಡೆಸಿದ್ದರೆ 'ಆರ್ಕಿಮಿಡೀಸ್' ಆಗಿಬಿಡುತ್ತಿದ್ದೆನೋ ಏನೋ. ಹಾಗೆ ಆಗದೆ ಒಬ್ಬ 'ಸಣ್ಣ' ಕತೆಗಾರನಾದೆ. ಆದರೂ ನನ್ನ ಗೆಳೆಯ ಮಂಜುನಾಥ (ನಮಗೆಲ್ಲ ಮಂಜು...) 'ಶ್ರೀ 420'ಯ-

ಮೇರಾ ಜೂತಾ ಹೈ ಜಪಾನಿ
ಹೈ ಪತ್ಲೂನ್ ಇಂಗ್ಲಿಷ್‌ತಾನಿ
ಸರ್ಪೆ ಲಾಲ್‌ಟೋಪಿ ರೂಸಿ
ಫಿರ್ ಭಿ ದಿಲ್ ಹೈ ಹಿಂದೂಸ್ತಾನಿ



ಎಂಬ ಹಾಡನ್ನು ನಿರಂತರ ಗುನುಗುತ್ತಿದ್ದ ಅವನಿಗೆ ಆ ಹಾಡು ಎಷ್ಟು ಅಚ್ಚುಮೆಚ್ಚಿನದಾಗಿತ್ತೆಂದರೆ ಸ್ಕೂಲ್‌ಡೇ ದಿನ ಯಾರಿಂದಲೋ ಒಂದು ಪ್ಯಾಂಟು, (ನಮಗೆ ಅವೆಲ್ಲ ನಿಕ್ಕರಿನ ದಿನಗಳು) ಒಂದು ಹ್ಯಾಟು ಕಡ ಪಡೆದು ಹಾಕಿಕೊಂಡು, ವೇದಿಕೆಯ ಮೇಲೆ ಸವಿನಯವಾಗಿ ಹಾಡಿಯೇಬಿಟ್ಟ.

ಅವನಿಗಿರುವ ಧೈರ್ಯ ನನಗೆ ಯಾಕೆ ಬರಲಿಲ್ಲ ಎಂದು ಹಳಹಳಿಸಿಕೊಳ್ಳುತ್ತಿದ್ದೆ.

ಈ ಅಧ್ಯಾಯ ಇಲ್ಲಿಗೇ ಮುಗಿಯಿತು.

ನಂತರ, ಬ್ರಹ್ಮಚರ್ಯಾಶ್ರಮದಿಂದ (ಖರೇ ಬ್ರಹ್ಮಚಾರಿ-ಅನುಮಾನ ಬೇಡ) ಗೃಹಸ್ಥಾಶ್ರಮಕ್ಕೆ ಅಡಿ ಇಟ್ಟಾಯಿತು. ಬೆಂಗಳೂರಿನ ಗೂಡಿನಂಥ ಒಂದು 'ಮನೆ'ಯಲ್ಲಿ ಚಿಕ್ಕನೆಯ ಸಂಸಾರ ಶುರುವಾಗಿ ಹನ್ನೊಂದು ತಿಂಗಳಿಗೇ ಒಬ್ಬ ಮಗಳು ಸಂಸಾರದಲ್ಲಿ ಅರಳಿದಳು.

ಎಲ್ಲಾ ಸರಿಯೆ. ಚಿಕ್ಕವಳಿದ್ದಾಗ ಅವಳ ಒಂದೇ ಒಂದು ಸಮಸ್ಯೆ ಎಂದರೆ (ನಮಗೆ ಸಮಸ್ಯೆ ಎಂದಿಟ್ಟುಕೊಳ್ಳಿ) ಇನ್ನೇನು ನಾವು ಮಲಗಬೇಕು ಎಂದಿರುವಾಗ ಆಕೆ ಎದ್ದಿರುತ್ತಿದ್ದಳು. ಸುಮ್ಮನೆ ಎದ್ದಿರುತ್ತಿರಲಿಲ್ಲ. ವಿವಿಧ ರಾಗಗಳಲ್ಲಿ ಅವಳ ಅಳುವೆಂಬ ಹಾಡು ಹರಿದು ಬರುತ್ತಿತ್ತು. ನನ್ನ ಹೆಂಡತಿಗೆ ಆ ಹಾಡು ಜೋಗುಳವಾಗುತ್ತಿತ್ತೋ, ದಿನದ ದುಡಿಮೆಯ ಆಯಾಸವೋ ದಿಂಬಿಗೆ ತಲೆ ಹಾಕಿದೊಡನೆ ನಿದ್ದೆ ಮಾಡುತ್ತಿದ್ದಳು. I am left with the baby, literally.

ಮಗಳನ್ನ ಹೆಗಲ ಮೇಲೆ ಹಾಕಿಕೊಂಡು ಅತ್ತಿತ್ತ ಅಡ್ಡಾಡುತ್ತಾ (ಮೂರು ಹೆಜ್ಜೆ ಹಾಕಿದರೆ ಮತ್ತೆ ರೈಟ್ ಎಬೌಟ್ ಟರ್ನ್) ಅವಳಿಗೆ ನಿದ್ದೆ ಮಾಡಿಸುವ ಶತ ಪ್ರಯತ್ನದಲ್ಲಿ ಒಂದು ದಿನ ಥಕ್ಕನೆ ಹೊಳೆದದ್ದು 'ಮೇರಾ ಜೂತಾ ಹೈ ಜಪಾನಿ' ಎಂಬ ಮಂಜು-ರಾಜ್‌ಕಪೂರ್ ಸಿನಿಮಾದ ಹಾಡು.

ಮಗಳ ರಾಗಮಾಲಿಕೆಯ ಶೃತಿ ಇದ್ದೇ ಇತ್ತು. 'ಸುತ್ತ ಮುತ್ತ ಯಾರು ಇಲ್ಲ' ಎಂಬ ಖಾತ್ರಿ ಇತ್ತು. ಧರ್ಮ ಪತ್ನಿ (ಅಧರ್ಮ ಪತ್ನಿಯರಿಲ್ಲ-ಅದನ್ನೂ ನಂಬಿ) ಗಾಢ ನಿದ್ರೆಯಲ್ಲಿ

ಇನ್ನೇಕೆ ಸಂಕೋಚ.

ಮಗಳ ಮೈಯನ್ನು ಮೆಲ್ಲನೆ ತಟ್ಟುತ್ತ ಬಾಯಲ್ಲಿ ''ಜೂತಾ ಜಪಾನಿ'' ಹಾಡು ಹೇಳುತ್ತ ಕಾಲುಗಳನ್ನು ಎತ್ತಿ ಎತ್ತಿ ಇಡುತ್ತಾ...

ನನ್ನ ಶ್ರಮ ಆರೇಳು ತಿಂಗಳ ಕೂಸಿಗೆ ಅರ್ಥವಾಯಿತೋ ಏನೋ ಅದು ನಿದ್ದೆಗೆ ಹೋಗುತ್ತಿತ್ತು.

ಈಗಲೂ ಆ ಹಾಡನ್ನು ಮಂಜು ಚೆನ್ನಾಗಿ ಹೇಳುತ್ತಿದ್ದನೋ, ನಾನು ಚೆನ್ನಾಗಿ ಹೇಳಿತ್ತಿದ್ದೆನೋ ಎಂಬುದು ತಿಳಿಯದಾಗಿದೆ. ಅದೊಂದು ಮೃದುವಾದ ಬೆಚ್ಚನೆ ಜೋಗುಳವಾಗಿ ಮನವನ್ನು ಸೆಳೆದೊಯ್ಯುತ್ತದೆ.

ಜೋ ವಾದಾ ಕಿಯಾ

ಬೊಳುವಾರು ಮಹಮ್ಮದ್ ಕುಂಞ

ಸುಮಾರು 40 ವರ್ಷಗಳ ಹಿಂದಿನ ಸುದ್ದಿ. ಯಾವುದೋ ಲಾಯರ್ ಹತ್ತಿರ ಕೆಲಸಕ್ಕಿದ್ದೆ. ಅಲ್ಲೊಂದು ಹಳೇ ಕನ್ನಡಕದ ಪೆಟ್ಟಿಗೆ. ಅದರಲ್ಲೊಂದು ಥಳಥಳ ಬಂಗಾರದ ಕಟ್ಟಿನ ಕನ್ನಡಕ ಇತ್ತು. ಅದರ ಬಗ್ಗೆ ನನಗೆ ವಿಚಿತ್ರ ಸೆಳೆತ. ಒಂದು ದಿನ ಧೈರ್ಯ ಮಾಡಿ, ಅದನ್ನು



ಮುಟ್ಟಿ, ತೆಗೆದು ನೋಡಿಯೇಬಿಟ್ಟೆ. ಅದು ಕೈಯಲ್ಲಿದ್ದಾಗ ವಿಚಿತ್ರ ಭಯ ಆವರಿಸಿತು. ಮರಳಿ ಇಟ್ಟು ಬಿಟ್ಟೆ. ಆಗ ಕೆಳಗಡೆಯ ಜ್ಯುವೆಲರಿ ಅಂಗಡಿಯಿಂದ 'ತಾಜ್‌ಮಹಲ್' ಚಿತ್ರದ-

ಜೋ ವಾದಾ ಕಿಯಾ ಓ

ನಿಭಾನಾ ಪಡೇಗಾ...

ಈ ಹಾಡು ಕೇಳಿ ಬರುತ್ತಿತ್ತು. ಇದೊಂದು ವಿರಹ ಗೀತೆಯಾಗಿದ್ದರೂ ಈಗಲೂ ಹಾಡು ಕೇಳಿದಾಗೆಲ್ಲ ನನಗೆ ನಾನು ಆ ಅಂಗಡಿಯಲ್ಲಿ ಕೂತಿದ್ದು; ಆ ಕನ್ನಡಕದ ಪೆಟ್ಟಿಗೆ, ಆ ಹೊಳೆವ ಆಕರ್ಷಣೆ, ತಣ್ಣನೆ ಅಂಗೈ, ಭಯ ಎಲ್ಲ ಮತ್ತೆ ಆವರಿಸುತ್ತದೆ.

ಮನಿದನ್ ಮಾರಿವಿಟ್ಟಾನ್...

ಎಚ್. ಎಸ್. ರಾಘವೇಂದ್ರ ರಾವ್



ಮೂವತ್ತೊಂದು ವರ್ಷಗಳ ಹಿಂದೆ ಕೇಳಿದ ಹಾಡು. ನನ್ನ ಸಹೋದ್ಯೋಗಿ ಗೆಳೆಯ ಹಾಡಿದ್ದು. ''ಮನಿದನ್ ಮಾರಿವಿಟ್ಟಾನ್, ಮದತ್ತಿಲ್ ಏರಿವಿಟ್ಟಾನ್...'' ಚಿತ್ರ ''ಪಾವ ಮನಿಪ್ಪ''. ಬೀದಿಯಲ್ಲಿ ಸಿಕ್ಕ ಮಗುವನ್ನು ಸಾಕಲೆಂದು ತೆಗೆದುಕೊಂಡ ಶಿವಾಜಿ ಗಣೇಶನ್, ಅದನ್ನು ಸೈಕಲ್ ಮುಂದಿನ ಬುಟ್ಟಿಯಲ್ಲಿ ಇಟ್ಟುಕೊಂಡು ಹೋಗುವಾಗ ಹಾಡುವುದಂತೆ. ಅಂದು ನನಗೆ ಸಿನಿಮಾದ ವಿವರಗಳು ತಿಳಿಯವು. ಹಾಡಿನ ಅರ್ಥ ಸರಿಯಾಗಿ ತಿಳಿಯದು. ಆದರೆ ಆಗತಾನೇ ಕಾಲೇಜು ಅಧ್ಯಾಪಕರಾಗಿ, ಕಲಿಯುವ, ಕಲಿಸುವ ವಿದ್ಯಾರ್ಥಿಗಳಿಗೆ ಸರಿದಾರಿ ತೋರಿಸುವ ಕನಸು ಕಾಣುತ್ತಿದ್ದ ನಮ್ಮೆಲ್ಲರಿಗೆ ಹಿಡಿದ ಕನ್ನಡಿಯಂತೆ ಆ ಹಾಡು ನನ್ನೊಳಗೆ ಇಳಿದಿತ್ತು. ಕಾಲು ಅರ್ಥ ಅಲ್ಲಿನದು, ಮುಕ್ಕಾಲು ನನ್ನ ತಪ್ಪು ತಪ್ಪು ಊಹೆ. ''ಕಾದಲ್'' (ಪ್ರೀತಿ) ಮತ್ತು ''ಇಂಬಂ'' (ಸಂತೋಷ)ಗಳನ್ನು ಕೈತುಂಬ ನೀಡುತ್ತಿದ್ದ ಮಾನವ ಮದದಿಂದ, ಅಹಂಕಾರದಿಂದ ಬದಲಾದನಂತೆ. ನದಿ, ಅಲೆ, ಕಡಲು, ಕಾಡು ಎಲ್ಲ ಎಲ್ಲ ಹಾಗೆಯೇ ಇವೆ. ಇವನು ಮಾತ್ರ ಹೀಗೆ. ನಾವು ಅಂತಹವರಲ್ಲ ಎಂಬ ನಂಬಿಕೆ ನಮ್ಮದು.



ದಶಕಗಳು ಕಳೆದಿವೆ. ಆ ಹಾಡು ಕೇಳಿದಾಗ ಈಗಲೂ ಅಲ್ಲಿನ ವಿಷಾದದ ಬದಲು, ಉತ್ಸಾಹದ ಮೂಡು. ಆದರೆ, ಈಗ ಇರುವುದು ಕಲಿಸಲಾರದ ನಾವು. ಕಲಿಯಲಾರದ ಅವರು. ಯಾರು ಯಾರಿಗೆ ಕಾರಣ? ನಾವೆಲ್ಲರೂ ನಮ್ಮಲ್ಲಿ ಮುಳುಗಿ ಉಳಿದವರನ್ನು ಮರೆತವರೇ? ನಿಜ. ಮನಿದನ್ ಮಾರಿವಿಟ್ಟಾನ್. ಆ ಮನಿದನ್ ಯಾರು? ಅವನು, ನೀನು ಮತ್ತು ನಾನು.

ಅಕ್ಕ ಕೇಳವ್ವ...

ಮಹಾಬಲೇಶ್ವರ ಕಾಟ್ರಹಳ್ಳಿ



ಒಂದು ಕಡೆ ಓದು, ಇನ್ನೊಂದು ಕಡೆ ಮೈಮನಗಳಲ್ಲಿ ಬಿಸಿ ಏರಿಸುವ ಅನುಭವ. ಈ ಇಬ್ಬಂದಿತನದಲ್ಲಿ ಸಿಲುಕಿದ ದಿನಗಳಲ್ಲಿ 'ಎರಡು ಕನಸು' ಓಡುತ್ತಿತ್ತು. 'ಬೇಡರ ಕಣ್ಣಪ್ಪ' ಮತ್ತೊಮ್ಮೆ ಬಂದಿದ್ದಾಗ (ಹೊಸಪೇಟೆ) ಭಕ್ತಿ ಭಾವದೆಡೆ ಎಳೆದಿತ್ತು. Mystical ಆಗಿದ್ದ ನವ ಕಲ್ಯಾಣ ಮಠದ ಸ್ವಾಮಿಗಳ ಬಗ್ಗೆ ಬಿಡದ ಕುತೂಹಲವಿತ್ತು. ರಾತ್ರೋರಾತ್ರಿ, ಧಾರವಾಡಕ್ಕೆ ಹೋಗಿ ಬಂದದ್ದುಂಟು. ಆಮೇಲೆ ಧಾರವಾಡದಲ್ಲಿದ್ದಾಗ ಎಲ್ಲವೂ ತಿರುವು ಮುರುವು. ಹಾಗೆ ಅವರು ಕಾಡಲಿಲ್ಲ. ಆದರೆ ಕಾಡಿದ್ದು ಡಾ. ಮನಸೂರ ಅವರ ''ಅಕ್ಕ ಕೇಳವ್ವ ನಾನೊಂದು ಕನಸು ಕಂಡೆ! ಅಕ್ಕಿ ಅಡಕಿ ಟೆಂಗಿನಕಾಯಿ'' ಅಕ್ಕಿ-ಊಟದ ಸಮಸ್ಯೆ, ಅಡಕಿ-ಚಪಲದ ಸಮಸ್ಯೆ-ಟೆಂಗಿನಕಾಯಿ-ಸಮರ್ಪಣೆ. ಅದನ್ನು ಕೇಳುತ್ತ ಗುನುಗುತ್ತ ಸಿತಾರ ಕಲಿತದ್ದುಂಟು. ಪೇಟಿ ಹಿಡಿದು ಗೆಳೆಯರ ಮುಂದೆ ದನಿಗೂಡಿಸುತ್ತ 'ಅಕ್ಕ ಕೇಳವ್ವ' ಎಂದು ಕನಸಿನ ಬಗ್ಗೆ, ಕಾಣುತ್ತಿರುವ ಬಗ್ಗೆ, ಇನ್ನೊಂದು (ಮನದಲ್ಲೇ ಇರುವ) ಮನಕ್ಕೆ ಸಮಾಧಾನಿಸಿದ್ದುಂಟು. ಕೇಳುವಂಥ ಅಕ್ಕ ನನಗಿಲ್ಲ. ಈಗಲೂ ಈ ಹಾಡು ಮನಸೂರೆಗೊಳ್ಳುತ್ತಲೇ ಇದೆ. ಯಾಕೆಂದರೆ 'ಉಡಾಫೆಯಾಗಿ' ಅರ್ಥ ನೀಡಿರುವಂಥ ಕನಸು ಇನ್ನೂ ಉಳಿದಿವೆ. ಇದೇ ಬದುಕು ತಾನೆ!



ಎಲ್ಲೋ ಜೋಗಪ್ಪ ನಿನ್ನರಮನೆ

ಪಿ.ಎಲ್. ಇಂದ್ರಜಿತ್

ನಾನು ಅಪ್ಪನೊಂದಿಗೆ ಹೆಚ್ಚು ಸಮಯ ಕಳೆಯುತ್ತಿದ್ದ ದಿನಗಳು ಎಂದರೆ 1993ರಲ್ಲಿ ಅವರಿಗೆ ಲಕ್ವ ಹೊಡೆದಿದ್ದಾಗ. ಕಾಲುಗಳಿಗೆ ಒಳ್ಳೆಯ ಮಸಾಜ್ ಮಾಡಬೇಕು ಎಂದು ಡಾಕ್ಟರ್ ಅಡ್ವೈಸ್ ಮಾಡಿದ್ದರಿಂದ ಗುಪ್ತ ಗಾರ್ಲ ಎಂಬ ಪರಿಣತನನ್ನು ಇದಕ್ಕೆ ನೇಮಿಸಿಕೊಂಡೆವು. ಮಸಾಜ್ ಕೆಲಸ ಒಂದೆರಡು ದಿನ ಯಾಂತ್ರಿಕವಾಗಿ ನಡೆದಿತ್ತು. 'ನೀವು ಸಂಗೀತ ಕೇಳ್ತಾ ಮಸಾಜ್ ಮಾಡಿಸಿಕೊಳ್ಳಿ ಸಾರ್ ಮಜಾ ಇರ್ರೈತೆ' ಎಂದು ಗಾರ್ಲ ಹೇಳಿದ್ದೇ ಅಪ್ಪನಿಗೂ ಬೇಕಾಗಿತ್ತು. ಒಂದಷ್ಟು ಕ್ಯಾಸೆಟ್ ತರುವಂತೆ ನನ್ನನ್ನು ಕಳಿಸಿದರು. ನಾನು ಕೆಲವು ರಾಜ್‌ಕುಮಾರ್ ಸಿನಿಮಾ ಹಾಡುಗಳು, ಸಿ. ಅಶ್ವತ್ಥರ ಕ್ಯಾಸೆಟ್ ಜೊತೆಗೆ ನನ್ನ ಮೆಚ್ಚಿನ ಪ್ರೇಮಲೋಕ ಕ್ಯಾಸೆಟ್ ಒಯ್ದಿದ್ದೆ. ಅಪ್ಪ ಮೊದಲು ಹಾಕಲು ಆಯ್ದುಕೊಂಡಿದ್ದು 'ಪ್ರೇಮಲೋಕ'. 'ಈ ನಿಂಬೆಹಣ್ಣಿನಂಥ ಹುಡುಗಿ''. ನಾನೊಮ್ಮೆ ಖುಷಿಯಿಂದ ಅಪ್ಪನ ಮುಖ ನೋಡಿದೆ. ಆದರೆ ಅಪ್ಪನ ಕಣ್ಣಲ್ಲಿ ಕೋಪ ಕಂಡು ಅಲ್ಲಿಂದ ಮೆಲ್ಲಗೆ ಜಾರಿಕೊಂಡೆ.



ಮಸಾಜ್, ಸ್ನಾನ ಮುಗಿದ ಕೂಡಲೇ ಅಪ್ಪ ನನ್ನನ್ನು ಕಾರಿನಲ್ಲಿ ಹಾಕಿಕೊಂಡು ಸೀದಾ ಹೊರಟರು. ಎಲ್ಲಿಗೆ ಹೋಗುತ್ತಿರಬಹುದು ಎಂದು ನಾನು ಊಹಿಸುತ್ತಿರುವಾಗಲೇ ಕ್ಯಾಸೆಟ್ ಅಂಗಡಿ ಮುಂದೆ ಕಾರು ನಿಲ್ಲಿಸುವಂತೆ ಡ್ರೈವರ್‌ಗೆ ಸೂಚಿಸಿದರು. ಅಪ್ಪ ಆಯ್ದುಕೊಂಡ ಕ್ಯಾಸೆಟ್‌ಗಳನ್ನು ನೋಡಿ, 'ಜನರೇಷನ್ ಗ್ಯಾಪ್' ಎಂದು ಗೊಣಗಿಕೊಂಡು ಸುಮ್ಮನಾದೆ. ಅಪ್ಪ ಮಸಾಜ್ ಮಾಡಿಸಿಕೊಳ್ಳುವಾಗಲೆಲ್ಲ ಒಂದಷ್ಟು ದಿನ 'ಪಟ್ಟ ಪುಟ್ಟ ಬೆರಳಾವಲೆ ಜಂಗಮ', 'ವಿವಾಹ ಭೋಜನವಿದು...' ಇಂಥವೇ ಕೇಳುತ್ತಿದ್ದವು. ಈ ಹಾಡುಗಳಲ್ಲೆಲ್ಲ ಅಪ್ಪ ಆಗಾಗ್ಗೆ ಕೇಳುತ್ತಿದ್ದುದು ಮತ್ತು ನನಗೂ ಬಹಳ ಇಷ್ಟವಾದುದು

'ಚುಕ್ಕಿಯುಂಗ್ರಕ್ಕೆ ನಾರಿ ಮನಸೋತಲೋ
ಬೆಳ್ಳಿಯುಂಗ್ರಕ್ಕೆ ನಾರಿ ಮನಸೋತಲೋ
ಎಲ್ಲೋ ಜೋಗಪ್ಪ ನಿನ್ನರಮನೆ
ಎಲ್ಲೋ ಜೋಗಪ್ಪ ನಿನ್ನ ತಳಮನೆ'

ನನ್ನ ಸ್ನೇಹಿತರು ಮತ್ತು ನಾನು ಕಳೆದ ಶನಿವಾರ ಹೊಸೂರು ಡಾಬಾಕ್ಕೆ ಹೋದೆವು. ಎಂದಿನಂತೆ ನಮ್ಮ ಮಾತುಗಳು, ರಾಜಕೀಯ, ಕ್ರೀಡೆಗಳ ಸುತ್ತ ಸುತ್ತುತ್ತಿತ್ತು. ಎಲ್ಲಾ ಬೋರ್ ಆದಮೇಲೆ ಒಂದಷ್ಟು ಸಂಗೀತನಾರೂ ಕೇಳವ ಅಂತ ಒಬ್ಬ ಸ್ನೇಹಿತ ಹೇಳಿ, ಪಕ್ಕದಲ್ಲೇ ನಿಲ್ಲಿಸಿದ್ದ ನನ್ನ ಕಾರಿಗೆ ಹೋಗಿ ಕ್ಯಾಸೆಟ್‌ಗಳ ರಾಶಿಯಿಂದ ಒಂದನ್ನು ತೆಗೆದು ಹಾಕಿದ. ಆತ ಯಾವುದು, ಏನು ನೋಡದೆ ಡೆಕ್ ಆನ್ ಮಾಡಿದ. ಅರೆ,

'ನಿನ್ನ ಕಂಡಾಗಲೆಲ್ಲಾ ಕಣ್ಣುರಿ
ಕಾಣೋ ಜೋಗಿ
ಜೋಗಿ
ನಿನ್ನ ಬಿಟ್ಟು ನಾನಿರಲಾರೆ
ಎಲ್ಲೋ ಜೋಗಪ್ಪ ನಿನ್ನರಮನೆ
ಎಲ್ಲೋ ಜೋಗಪ್ಪ ನಿನ್ನ ತಳಮನೆ'

ಬೆಳಗಿನ ಕೆಂಪು ಕ್ಷೀಣವಾಗಿ ಮೂಡುವ ತನಕ ಈ ಕ್ಯಾಸೆಟ್ ಅದೆಷ್ಟು ಸಾರಿ ರೀವೈಂಡ್ ಆಯಿತೋ? ಸ್ನೇಹಿತರ ತಾಳ ಹೆಚ್ಚಿದಂತೆಲ್ಲಾ ಅಪ್ಪನ ನೆನಪು ನನ್ನನ್ನು ಅಪ್ಪಳಿಸುತ್ತಲೇ ಇತ್ತು.



'...ಝುಮ್ಮೆಂದಿತು ತನುವೂ ಬೆಚ್ಚಿತೂ ಮನವೂ....'

ಎಂ.ಎಚ್. ನಾಯಕ ಬಾಡ

ಅದು ಸುಮಾರು ಮೂವತ್ತೆಂಟು ವರ್ಷಗಳ ಹಿಂದೆ ಜರುಗಿದ ಸಂಗತಿ. ನಾನಾಗ ಸಿದ್ದಾಪುರ ತಾಲೂಕಿನ ಒಂದು ಹಳ್ಳಿಯಲ್ಲಿ ಸ್ಕೂಲು ಮಾಸ್ತರನಾಗಿ ಕೆಲಸ ಮಾಡುತ್ತಿದ್ದೆ. ಊರಿನಲ್ಲಿ ಸಾಕಷ್ಟು ಶ್ರೀಮಂತರೆಂದೇ ಖ್ಯಾತರಾಗಿದ್ದ ಒಬ್ಬರ ಮನೆಯ ಒಂದು ಬದಿಯ ಓರಿಯಲ್ಲಿ ಬಾಡಿಗೆಗೆ ಉಳಿದುಕೊಂಡಿದ್ದೆ.




ಆ ದಿನಗಳಲ್ಲಿ ನಮ್ಮಂಥ ಹುಡುಗರಿಗೆ ವಿಶೇಷ ಆಕರ್ಷಣೆ ಯೆಂದರೆ ರೇಡಿಯೋದಲ್ಲಿ ಪ್ರಸಾರವಾಗುತ್ತಿದ್ದ ಸಿನಿಮಾ ಗೀತೆಗಳು. ನಾನುಳಿದುಕೊಂಡ ಆ ದೊಡ್ಡ ಮನೆಯಲ್ಲಿ ದೊಡ್ಡದೊಂದು ರೇಡಿಯೋ ಇತ್ತು. ಹಳ್ಳಿಗಳಿಗೆ ಕರೆಂಟು ಕಾಲಿಡದಿದ್ದ ಆ ದಿನಗಳಲ್ಲಿ ದೊಡ್ಡ ಬ್ಯಾಟರಿಯಿಂದ ನಡೆಯುತ್ತಿದ್ದ ದೊಡ್ಡ ರೇಡಿಯೋ. ನಡುಮನೆಯಲ್ಲಿ ಮಕ್ಕಳ ಕೈಗೆ ಎಟುಕದಷ್ಟು ಎತ್ತರದಲ್ಲಿ ಗೋಡೆಯಲ್ಲಿ ಪ್ರತಿಷ್ಠಾಪಿತವಾದ ಆ ರೇಡಿಯೋ ದಿನದ ಬಹುಕಾಲ ಸದ್ದು ಮಾಡದೆ ತಣ್ಣಗೇ ಇರುತ್ತಿತ್ತು. ಪ್ರೈಮರಿಯ ಎಲ್ಲಾ ತರಗತಿಗಳಲ್ಲಿ ಓದುವ ಮಕ್ಕಳನ್ನು ಹೊಂದಿದ್ದ ಆ ಮನೆಯಲ್ಲಿ ನಡುಮನೆಯವರೆಗೆ ಹೋಗಿ ರೇಡಿಯೋ ಹಚ್ಚುವ, ಆರಿಸುವ ಸ್ವಾತಂತ್ರ್ಯ ಮಾಸ್ತರನಾದ ನನಗೆ ಇದ್ದಿತಾದರೂ ನಾನು ಆ ಸ್ವಾತಂತ್ರ್ಯವನ್ನು ಬಳಸಿಕೊಳ್ಳದಿದ್ದುದಕ್ಕೆ ಕಾರಣ ಯಜಮಾನರ ತಂದೆಯೆಂದು ಕರೆಸಿಕೊಳ್ಳುವ ಐವತ್ತರ ಆಸುಪಾಸಿನ ಅಜಾನುಬಾಹು ದೇಹಿಯೂ, ಮಾನಸಿಕವಾಗಿ ಅಸ್ವಸ್ಥರೂ ಆದ ಆ ವೃದ್ಧರು ಯಾವಾಗಲೂ ನಡುಮನೆಯಲ್ಲೇ ಕಾಣಿಸಿಕೊಳ್ಳುತ್ತಿದ್ದುದಾಗಿತ್ತು. ಅವರು ನಿರುಪದ್ರವಿಯೆಂದು ಹೇಳುತ್ತಿದ್ದರೂ ನಾನು ಮಾತ್ರ ಅದನ್ನು ಪರೀಕ್ಷಿಸುವ ಗೋಜಿಗೆ ಹೋಗಿರಲಿಲ್ಲ.

ಆ ದಿನಗಳಲ್ಲಿ ಒಂದು ಸಿನಿಮಾ ಯುಗಳ ಗೀತೆ - ಅಮರಶಿಲ್ಪಿ ಜಕ್ಕಣಾಚಾರಿ ಚಿತ್ರದ 'ಏನೋ ಎಂತೋ ಝುಮ್ಮೆಂದಿತು ತನುವೂ... ಬೆಚ್ಚಿತು ಮನವೂ' ಎಂಬುದು ತನ್ನ ಸಾಹಿತ್ಯ, ಸಂಗೀತ ಹಾಗೂ ಮಾಧುರ್ಯದಿಂದಾಗಿ ನನ್ನನ್ನು ಇನ್ನಿಲ್ಲದಂತೆ ಮೋಡಿಗೊಳಪಡಿಸಿ ಆ ಹಾಡು ಎಲ್ಲಿಯಾದರೂ ಕಿವಿಗೆ ಬಿದ್ದರೆ ಸಾಕು ಮಾಡುತ್ತಿದ್ದ ಕೆಲಸವನ್ನೆಲ್ಲ ಅಷ್ಟಕ್ಕೇ ಬಿಟ್ಟು ರೇಡಿಯೋದತ್ತ ಧಾವಿಸುವಂತೆ ಮಾಡುತ್ತಿತ್ತು.

ಅದೊಂದು ಭಾನುವಾರದ ಸಂಜೆ ರೂಂನಲ್ಲಿ ಸುಮ್ಮನೇ ಬಿದ್ದುಕೊಂಡಿದ್ದವನಿಗೆ ಇದ್ದಕ್ಕಿದ್ದಂತೆ ಆ ಹಾಡು ಕಿವಿಗೆ ಬಿದ್ದು ಅದು ನಡುಮನೆಯಲ್ಲಿದ್ದ ರೇಡಿಯೋದಿಂದಲೇ ಎಂಬುದೂ ಖಾತ್ರಿಯಾಗಿ ನಾನು ಒಮ್ಮೆಲೇ ಎದ್ದು ಅತ್ತ ಧಾವಿಸಿದೆ. ಜಗಲಿ ದಾಟಿದವ ಇನ್ನೇನು ನಡುಮನೆಗೆ ತೆರೆದುಕೊಂಡ ಬಾಗಿಲು ದಾಟಬೇಕು ಎನ್ನುತ್ತಿದ್ದಾಗ ಎದುರುಗಡೆ ಕಣ್ಣಿಗೆ ಬಿದ್ದ ಒಂದು ದೃಶ್ಯ ನನ್ನನ್ನು ಅಲ್ಲೇ ಕಲ್ಲಾಗಿಸಿಬಿಟ್ಟಿತು. ತಲೆಯ ಮೇಲಿನ ಗಾಂಧಿ ಟೋಪಿ ಬಿಟ್ಟರೆ ಇಡೀ ದೇಹದ ಮೇಲೆ ಚೂರೂ ಬಟ್ಟೆಯಿಲ್ಲದೆ ನಟರಾಜ ಭಂಗಿಯಲ್ಲಿ ಆ ವೃದ್ಧರು ರೇಡಿಯೋದ ಎದುರೇ ನಿಂತಿದ್ದರು.

ಈಗಲೂ ಮೆಚ್ಚಿನ ಚಿತ್ರಗೀತೆ, ಶ್ರೋತೃ ಬೃಂದಾವನ, ಹಳೆಯ ಚಿತ್ರಗೀತೆಗಳ ಶೀರ್ಷಿಕೆಯಡಿಯಲ್ಲಿ ಯಾವಾಗಲಾದರೊಮ್ಮೆ ಪ್ರಸಾರವಾಗುವ ಆ ಹಾಡು ಕಿವಿಗೆ ಬಿದ್ದರೆ ಸಾಕು ಒಂದು ಪ್ರತಿಮೆ ಫಕ್ಕನೆ ಕಣ್ಣೆದುರು ಮೂಡಿ ಮಾಯವಾಗುತ್ತದೆ - ಗಾಂಧಿ ಟೋಪಿ ಧರಿಸಿದ ಒಂದು ದಿಗಂಬರ ಮೂರ್ತಿ!






ರಂಗ ಕವಿತೆ

'ಪಯಣ' ನಾಟಕದ ಮುದುಕನ ಹಾಡುಗಳು - ಆಹಾ!

ಗುರುರಾಜ ಮಾರ್ಪಳ್ಳಿ



1
ಓ ಏಂಜಲ್ ಸಿಟಿ
ನೀನು ಮಹಾರಾಕ್ಷಸಿ ಕಣೇ-ಆಹಾ!
ಆ ಹಳೆಯ ಕಾಲುಸಂಕ
ಕೆಳಗೆ ಹರಿಯುತ್ತಿದ್ದ
ಮಹಾನದಿಯ ನಿರಂತರ ಹೊಯ್ಲು
ಅವರ ದಂಡೆಯ ಗೊಂಡಾರಣ್ಯ
ಕಾಂಡಗಳ ತೂರಿ ಬೆಳಗುತ್ತಿದ್ದ
ನಿತ್ಯ ಹೊಸ ಸೂರ್ಯನ ಕಿರಣ
ಎಲ್ಲವನ್ನೂ ನೀನು ಹೆಬ್ಬಾವಿನಂತೆ
ನಿಶ್ಯಬ್ದ ನುಂಗುತ್ತಿರುವೆ, ಮಹಾರಾಕ್ಷಸಿ ಕಣೇ-ಆಹಾ!

2
ಸಂಜೆಯ ವೇಳೆ-ಅವಳು ಮಹಾ
ನದಿಯ ಕಾಲುಸಂಕದಲ್ಲಿ ಒಬ್ಬಳೇ
ನಿಂತು ತದೇಕ ಹರಿವ ನೀರನ್ನೆ
ನೋಡುತ್ತಿದ್ದಳು. ಗ್ರಾಮೀಣ ಸೊಬಗು
ತುಂಬಿದ ಅವಳ ಚೆಲುವು ಒಂದು
ಗಂಭೀರ ರಾಗದ ತುಂಬಿದ ಆಲಾಪನೆ-ಆಹಾ!


ಒಂದು ದಿನ, ಕಾಲುಸಂಕದಲ್ಲಿ
ಅವಳ ದಿಬ್ಬಣ ಸಾಗಿದ ಮುಂಜಾನೆ
ಆ ಗಂಭೀರ ರಾಗ ನನ್ನನ್ನು ಬಿಟ್ಟು
ಹೊರಟು ಹೋದಂತೆ ಶೂನ್ಯವಾಗಿ ಕಳೆದು
ಹೋದಂತೆ... ಆಹಾ!

3
ಎಲ್ಲ ಮನುಷ್ಯರ ಹೃದಯದಲ್ಲೂ
ಇರುವ ಬೆಳಕು ಯಾಕೆ ಕ್ರಮೇಣ
ಕ್ಷೀಣಿಸುತ್ತಿದೆ. ನಕ್ಷತ್ರಗಳು ಮಾತ್ರ
ಅನಂತ ದೂರದಲ್ಲಿದ್ದರೂ
ಮಹಾನದಿಯ ನೀರಿನಲ್ಲಿ ಬಿದ್ದು
ತೊಯ್ದರೂ ಆರಿಹೋಗದೆ
ಮಿನುಗಿವೆ!... ಆಹಾ !

4
ಆ ರೈಲಿನಲ್ಲಿ ನಾನು ಬಹುದೂರ
ಹೋಗಬೇಕಿತ್ತು - ಆಹಾ !
ಬಹಳ ಹಿಂದಕ್ಕೆ ನೈಲ್ ನದಿಯ
ದಡಕ್ಕೆ,
ಆದರೆ ಕಾಲದ ಹಕ್ಕಿ
ಹಿಂದಕ್ಕೆ ಚಲಿಸುವುದಿಲ್ಲ,
ಅದು ನನ್ನ ಮಾತು
ಕೇಳುವುದೆ ಇಲ್ಲ - ಆಹಾ!

5
ಓ ಹುಣ್ಣಿಮೆಯ ಚಂದ್ರ
ವಿಜ್ಞಾನಿಗಳು ನಿನ್ನ ಮಣ್ಣ ಮುಕ್ಕಿಸಿದರೂ
ನೀನು ಏಂಜಲ್ ಸಿಟಿಗಳ
ಮೇಲೆ ಕರುಣೆದೋರುತ್ತಿರುವೆ - ಆಹಾ !
ಮಹಾನದಿಯ ಅಲೆಗಳಲ್ಲಿ
ಚೂರು ಚೂರಾಗಿ ಕನ್ನಡಿಗೆ ಇದಿರಾದ
ಬೆಳಕಿನಂತೆ ಫಲಿಸುತ್ತಿರುವೆ.
ನಿನ್ನ ದಂತಕತೆಗಳ ಗೂಢ
ವಿಜ್ಞಾನಕ್ಕೆ ತಿಳಿದಿಲ್ಲ - ಆಹಾ !

6
ನಾನು ಸೈಬರ್ ಯುಗದ
ಮನುಷ್ಯ ಕವಿ. ರಫ್ಟೆಂಡ್ ಟಫ್ಫಾಗಿ
ಚಿನ್ನದ ಲೇಸಿನ ಬೂಟ್ಸು ತೊಟ್ಟು
ಇಂದು ಆಫ್ರಿಕಾ,
ನಾಳೆ ಆಸ್ಟ್ರೇಲಿಯಾ
ಸುತ್ತುತ್ತ ಇರುವೆ, ಆದರೊಂದು
ಜುಜುಬಿ ಇರುವೆಯೇ ಭೀಕರ
ಚಳಿಯಾದರೂ ನಿನಗಿಲ್ಲ ಒಂದೇ
ಒಂದು ಪುಟ್ಟ ಹಾಫ್ ಪ್ಯಾಂಟ್.
ಇದೆಂಥ ಮಿಲೇನಿಯಮ್
ಟು ಥೌಸಂಡ್?




ಮಹಾನದಿಯ ದಂಡೆಯಲ್ಲಿ
ಕಾಳನ್ನು ಹೊತ್ತು ಸಾಗುವ
ಜುಜುಬಿಯೇ ನೀನು ನನ್ನ
ಬೂಟಿನಡಿ ಬಿದ್ದು ಸತ್ತರೆ
ನನಗೇನು ಶಿಕ್ಷೆ?
ನೀನು ನಿನ್ನಷ್ಟಕ್ಕೆ ಸತ್ತದಷ್ಟೇ? - ಆಹಾ!

7
ಈ ಏಂಜಲ್ ಸಿಟಿಯನ್ನು
ಒಂದು ಗಾಢ ಮೌನ ರಾತ್ರಿ ಆವರಿಸಿಕೊಳ್ಳುತ್ತದೆ -
ಆಹಾ !
ಧೋ ಎಂದು ಜಂಗಲಿಗೆ
ಸುರಿಯುತ್ತಿದ್ದ ಮಳೆ ಈಗ
ಟೆರೇಸಿನ ಮೇಲೆ ಸುರಿದು
ತುಟಿ ಮುರುಟಿಸಿ ಒಣಗಿಸುತ್ತದೆ - ಆಹಾ!

ಒಬ್ಬ ಕವಿ ಇದ್ದರೆ ನಿಜವಾಗಿ
ಅವನು ಹುಚ್ಚ - ಆಹಾ !

8
ಹೂವೇ ನೀ
ಅರಳುವ ನಿಶ್ಯಬ್ದ - ಆಲಿಸುವೆ
ಕಣ್ಣ ಎವೆ ಲಾಲಿಸಿವೆ
ಪಕಳೆಯ ನಸುನಗುವಿದು
ಎದೆಯಲಿ ಮಿಸುಕಾಡುತಿದೆ
ದೇದೀಪ್ಯ ಮೌನ - ಆಹಾ !





ರಾಮಕೃಷ್ಣ

ಎಷ್ಟೊತ್ತಿಗೆ ಹತ್ತಿತೋ ಇಂಥ ಗಾಢ ನಿದ್ರೆ. ಕಣ್ಣು ಬಿಡಬೇಕೆಂದರೆ ರೆಪ್ಪೆ ಅಲುಗಾಡುತ್ತಿಲ್ಲ. ಕೈಕಾಲು ಕೊರಡಾಗಿದೆ. ಒಳಲೋಕದಲ್ಲೆಲ್ಲೋ ಸಣ್ಣಗಿನ ಮಾತುಗಳು ಕೇಳಿದಂತೆ. ತಣ್ಣಗಿನ ಅನುಭವವಾದಂತೆ. ಭವಂತಿ ಒಳದೊಳಗೆ ದಪ್ಪ ತೊಲೆಗಳ ಕೆಳಗೆ ಒಂದೂ ಬೆಳಕಿನ ಕಿರಣ ನುಸುಳದಂಥ ದಟ್ಟ ಕತ್ತಲೆಯಲ್ಲಿ ಸೀರೆ ಹೊದ್ದು ತಣ್ಣಗೆ ಮಲಗಿರುವಂತೆ... ದೊಡ್ಡ ಬೋಗುಣಿಯಲ್ಲಿ ಮಜ್ಜಿಗೆ ಕಡಿಯುತ್ತಾ ಕುಳಿತ ಆಯಿ, ಅಜ್ಜನ ಮನೆ ಅಂಗಳ ಅಲ್ಲಿ ಸುಕನ್ಯ ಚಿಕ್ಕಿ, ಸುಭದ್ರ ಚಿಕ್ಕಿ, ಅಹಲ್ಯತ್ತೆ, ಸಂಕದ ಮನೆ ಅಮ್ಮ ಏನೇನೋ ಅಸ್ಪಷ್ಟ ತುಂಡುತುಂಡು ಚಿತ್ರಗಳು. ಕಣ್ಣುಬಿಟ್ಟಾಗ ಎಲ್ಲಿದ್ದೇನೆಂದೇ ಗೊತ್ತಾಗಲಿಲ್ಲ. ಏಕಾಏಕಿ ವಿಪರೀತ ಸೆಖೆ ಅನಿಸತೊಡಗಿತು. ಯಾಂತ್ರಿಕವಾಗಿ ಕೈ ಫ್ಯಾನಿನ ಸ್ವಿಚ್ಚು ಅದುಮಿತು. ಹಾಳು ಕರೆಂಟಿಲ್ಲ. ನಿಧಾನವಾಗಿ ಎದುರಿನ ವಸ್ತುಗಳೆಲ್ಲ ಸ್ಪಷ್ಟವಾಗುತ್ತ ನಾನಿರುವದು ಬೆಂಗಳೂರು ಮನೆಯಲ್ಲಿ, ಒಬ್ಬಳೇ ಅಂತ ನಿಧಾನವಾಗಿ ತಿಳಿಯಿತು.

'ರಾಶಿ ಶೆಖೆ ಆತೂ ಅಂದ್ರೆ, ಮಳೆ ಬತ್ತೂ ಹೇಳೆ ಅರ್ಥ' ಎಂಬ ಮಾತು ನೆನಪಾಗಿ ಆ ಮಾತಿನ ಹಿಂದೇ ಅಹಲ್ಯತ್ತೆ ನೆನಪಾದಳು. ನೆನೆದವರ ಮನದಲ್ಲಿ ಎಂಬಂತೆ ಮಳೆ ಸುರಿಯಲಾರಂಭಿಸಿತು. ಬೆಂಗಳೂರಿಗೆ ಬಂದು ತಿಂಗಳಿಂದಲೂ ಹೀಗೇ. ದೀಪಕ್ ಆಫೀಸಿಗೆ ಹೋದಮೇಲೆ ಬೆಳಗಿನಿಂದ ಒಬ್ಬಳೇ ಇದ್ದು ಇದ್ದು ಸಂಜೆ ಅಯ್ತು ಅಂದ್ರೆ, ಎಲ್ಲಾದ್ರೂ, ಓಡಿಹೋಗಿ ಬಿಡೋಣ ಎನ್ನೋ ಚಡಪಡಿಕೆ. ಓಡಿಹೋಗುವುದಾದರೂ ಎಲ್ಲಿಗೆ? ಮನಸ್ಸಿಗೆ ಕಿರಿಕಿರಿಯಾದ ಕೂಡಲೇ ತೋಟ ದಾಟಿ, ಸಂಕ ಇಳಿದು ಹೊಳೆಯಲ್ಲಿ ಕಾಲುಚೆಲ್ಲಿ ಕುಳಿತುಬಿಡಲು, ಅಥವಾ ಧುಮು ಧುಮು ದೊಡ್ಡೂರಗುಡ್ಡ ಹತ್ತಿ ತುತ್ತ ತುದಿಯಲ್ಲಿ ತಣ್ಣನೆ ಗಾಳಿಗೊಡ್ಡಿಕೊಂಡು ಜಗತ್ತು ಮರೆತುಬಿಡಲು ಇದೇನು ನನ್ನಪ್ಪನ ಮನೆಯಾ? ಆಗಲಿ ಈ ಅಸಹನೀಯ ಖಾಲಿತನ ನೀಗಿಸಲು ಮಳೆಯಾದರೂ ಬಂತಲ್ಲಾ ಎಂದೆನಿಸುತ್ತಿರುವಂತೆ ಮಳೆಯ ಮಾಂತ್ರಿಕಲೋಕ ನನ್ನ ಆವರಿಸಿಕೊಂಡುಬಿಟ್ಟಿತು. ಮಳೆಯೆಂದರೆ ಮೊಳೆಯುವಿಕೆ... ಜೀವಂತಿಕೆ. ನಿಶ್ಯಬ್ದಲೋಕದೊಳಗೊಂದು ಮಿಂಚಿನ ಹೊಳಪು. ಗುಡುಗಿನ ಗುದುಮರಿಗೆ. ಯಾವದೋ ಶೃತಿ ಮೀಟಿದಂತೆ ನೆನಪು, ನೋವು. ಹರ್ಷ, ಪುಳಕ... ಅರಿವಿಲ್ಲದೆ ತುಟಿಯಲ್ಲರಳುವ ಮೆಲುನಗೆ, ಕಣ್ಣಂಚಿಗೊಂದಿಷ್ಟು ಹನಿ!

'ಮಳೆ ಬಂತ್ರೋ ಮಾರಾಯ ಕೊಡೆಸೂಡೋ ಸುಬ್ರಾಯಾ' ಎಂದು ವದರುತ್ತ ಕುಣಿಯುವ ಚೋಟುದ್ದದ ನಾನು, ನನ್ನ ಪಿಳ್ಳೆ ತಮ್ಮನ ಚಿತ್ರ ಕಣ್ಮುಂದೆ





ಗೀತಾ ವಸಂತ

ಮಳೆ ಬಂತೋ ಮಾರಾಯಾ...

ಬಂತು. ಎಣ್ಣೆ ಹಚ್ಚಿ ಅಲುಗಾಡದಂತೆ ಬಿಗಿಯಾಗಿ ಹೆಣೆದ ಚೋಟುಜಡೆ. ಅತ್ತ ಫ್ರಾಕೂ ಅಲ್ಲ ಇತ್ತ ಲಂಗವೂ ಅಲ್ಲದ ದೊಡ್ಡ ಹೂವಿನ ಅರೆಗಿಡ್ಡ ಅಂಗಿ, ಅದೇ ನಮೂನೆಯ ಪಲಕ ಹಾಕಿಕೊಂಡು ಮೋಲೊಂದು ಪ್ಲಾಸ್ಟಿಕ್ ತೊಪ್ಪೆ ಸೂಡಿ ಪಡಪಡ ನೀರಾಡುತ್ತ ಶಾಲೆಗೆ ಹೋಗುವ ನಾನು, ಅಚ್ಚೆಮನೆ ಪಂಕಜಾ, ಗಿರಿ ಎಲ್ಲ ಚಿತ್ರದಂತೆ ಸರಿದುಹೋದರು.

ಊರಲ್ಲೂ ಇಷ್ಟೊತ್ತಿಗೆ ದಪದಪ ಮಳೆ ಬೀಳುತ್ತಿರಬಹುದು. ದನಗಳೆಲ್ಲ ಬಾಲ ಮೇಲೆತ್ತಿ ಪೆಂಗಾಗಿ ಓಡಿಬಂದು ಕೊಟ್ಟಿಗೆ ಬಾಗಿಲಲ್ಲಿ ಬಡೀಮಕ ಹೊತ್ತು ನಿಂತಿರಬಹುದು. ಆಯಿ ಬಾಗಿಲು ತೆರೆಯುತ್ತಾ 'ಅಯ್ಯೋ ನೆಂದುಹೋದ್ರನೇ, ಬನ್ನಿ ಒಳಗ್ಬನ್ನಿ' ಎಂದು ಅವುಗಳೊಟ್ಟಿಗೆ ಸಹಜವಾಗಿ ಸಂಭಾಷಿಸುತ್ತಾ, ಮೈ ಸವರುತ್ತಾ ಅವುಗಳ ಕುತ್ತಿಗೆಯನ್ನು ಕಣ್ಣಿಯೊಳಕ್ಕೆ ತೂರಿಸುತ್ತಾಳೆ. ಗದ್ದೆಯಿಂದ ಬಂದ ಅಪ್ಪಯ್ಯ ನೀರು ಸುರಿಯುತ್ತಿರುವ ಕಂಬಳಿಕೊಪ್ಪೆಯನ್ನು ಗಳಕ್ಕೆ ನೇತುಹಾಕಿ, ಒದ್ದೆ ಅಂಗಿ ಬದಲಿಸುತ್ತಾ, ಬಿಸೀ ಚಾ ಜೊತೆಗೇನಾದರೂ ತಿನ್ನಲು ಮಾಡಲು ಹೇಳುತ್ತಾನೆ. 'ನೀರು ಹೋಪಲೆ ಸರೀ ಕಾಲ್ಗೆ ಮಾಡಿಕೊಟ್ಟಿದ್ರಿಲ್ಲೆ. ಮೇಲೊಂದು ಹಂಚು ಒಡೆದು ಹೋಗಿ ಯಾ ಕಾಲಾತು. ಬ್ಯಾಗ್ಗಿಂದಾ ಬಡಕಂಡ್ರೂ ಬ್ಯಾರೆ ಹಾಕಲೆ ನಿಂಗಳ ಕೈಲಾಜಿಲ್ಲೆ. ಈಗ ಉದ್ದಿ ಉದ್ದಿ ಯನ್ನ ಸೊಂಟ ಬಿದ್ದೋತು. ಯಂಗೇನು ಮತ್ತೆ ಪ್ರಾಯ ಬತ್ತಿಲ್ಲೆ' ಆಯಿ ವಟಗುಡುತ್ತಲೇ ಅಗಳವಲಕ್ಕಿ ಹಪ್ಪಳ ತಂದಿರಿಸುತ್ತಾಳೆ. ಅಪ್ಪಯ್ಯ ಏನೂ ಕೇಳಿಸದವರ ಹಾಗೆ ದಿಕ್ಕು ನೋಡುತ್ತ ಹಪ್ಪಳ ಮುರಿಯುತ್ತಾರೆ. ಹಿತ್ತಲಕಡೆ ತಮ್ಮ ಢಮಢಮ ಹಲಸಿನ ಬೇಳೆ ಮಾಡೂಕಾತ್ತಿಲ್ಲೆ ಸುಟ್ಮಳೆ. ಪಾತ್ರ ಇದ್ರೆ ಕೊಡೀನಿ ತೊಳೆದ್ದಾಕಿ ಹೋಗ್ತೆ. ಮನೇಲಿ ಕಟ್ಗೆ ಎಲ್ಲ ಹಸೀ ಆಗಿರೂದು. ಊದಿಊದಿ ಸಾಯ್ಕು ನಮ್ಮ ಹಣೆಬರಾ. ಅಂವಾ ಬೇರೆ ಎಲ್ಲಿ ಕುಡಿದು ಸತ್ನೊ'' ಎಂದು ಸಿಡಿಮಿಡಿಗುಟ್ಟುತ್ತ ಹಿಂದೆಮುಂದೆ ಓಡಾಡುತ್ತಿರಬಹುದು.

ಜಗುಲಿ ಕಿಟಕಿಯಿಂದ ನೋಡಿದರೆ ದೊಡ್ಡೂರಗುಡ್ಡ ಮಂಜುಮಂಜಾಗಿ ಕಾಣಿಸಬಹುದು. ಹೊಳೆನೀರೆಲ್ಲ ಕೆಂಪಾಗಿ ದಾರಿಯಲ್ಲೆಲ್ಲ ಉಂಬಳ ಗಿಜಿಗುಟ್ಟುತ್ತಿರಬಹುದು. ಗದ್ದೆಯಿಂದ ನೋಡಿದರೆ ಪ್ರಳಯವಾದಂತೆ ಧಾರಾಕಾರ ಸುರಿವ ಮಳೆಯ ಮಧ್ಯೆ ಇರುವ ಒಂಟಿ ಮನೆ ದ್ವೀಪದಂತೆ ತೋರಬಹುದು. ಗದ್ದೆಯಲ್ಲಿದ್ದವರು ಗದ್ದೆಯಲ್ಲೇ, ಮನೆಯಲ್ಲಿದ್ದವರು ಮನೆಯಲ್ಲೇ. ಕರೆದರೆ ಕೇಳಿಸದು, ಆಕೃತಿ ಕಾಣಿಸದು.

ರಜೆಯಲ್ಲಿ ಅಹಲ್ಯತ್ತೆ ಮನೆಗೆ ಹೋಗೋದೇ ಒಂದು ಮಜಾ. ಮಕ್ಕಳಿರದ ಆಕೆ ನಮ್ಮನ್ನ ಎಷ್ಟು ಪ್ರೀತಿ ಮಾಡುತ್ತಿದ್ದಳು. ಅಹಲ್ಯತ್ತೆ ಎಂದರೆ ಎಷ್ಟು ಉದ್ದಕ್ಕೆ ಹಾಲುಕೆನೆ ಬಣ್ಣದಲ್ಲಿದ್ದವಳು. ತುಂಬಾ ಚಂದ. ಅವಳ ಬಣ್ಣವೋ 'ಅಹಲ್ಯನ ಬಣ್ಣ' ಎಂದೇ ಪ್ರಸಿದ್ಧವಾಗಿತ್ತು. ಆಕೆಯ ಮಾತೂ ಅಷ್ಟೇ ಚಂದ. ಮಾರ್ದವತೆ



ತುಂಬಿರುತ್ತಿತ್ತು. ಕೊಟ್ಟಿಗೆ ತುಂಬ ದನಕರು, ಮನೆ ಸುತ್ತ ಆಳುಕಾಳು. ಇಡೀ ದಿನ 'ಅಮ್ಮ ಆಸ್ರಿಗೆ ಕೊಡಿ, ಕವಳಕ್ಕೆ ಕೊಡಿ, ಊಟ ಬಡಿಸಿ...' ಅಷ್ಟೆಲ್ಲ ಕೆಲಸವನ್ನು ನಗುನಗುತ್ತ ನಿಭಾಯಿಸುವ ಆಕೆ ಚೂರೂ ಸಿಡಿಮಿಡಿಗುಟ್ಟಿದ್ದಿಲ್ಲ. ಮಾವನೋ ಸಪೂರಕ್ಕೆ ಹ್ಯಾಪನ ಹಾಗೆ ಇದ್ದ. ಅಲ್ಲದೇ ಸಿಕ್ಕಾಪಟ್ಟೆ ಮುಂಗೋಪಿ. 'ಅವನಿಗೆ ಯಾಕೆ, ಹೇಗೆ, ಯಾವಾಗ ಸಿಟ್ಟು ಬರ್‍ತದೆಂತ ಅಂದಾಜು ಮಾಡಲೇ ಸಾಧ್ಯವಿಲ್ಲ ಸ್ವಲ್ಪ ಡಿರ್ಕೀಸು' ಎಂದು ವಾಸು ಚಿಕ್ಕಪ್ಪ ಹೇಳುತ್ತಿದ್ದರು. ಆದರೆ ಸಿಟ್ಟಿಲ್ಲದಿದ್ದಾಗ ತುಂಬ ಒಳ್ಳೆಯವರು. ನೆಲ್ಲಿಕಾಯಿ, ಗುಡ್ಡೆಗೇರಣ್ಣು, ಕವಳೀ ಹಣ್ಣು ಎಲ್ಲ ತಂದು ನಮ್ಮ ಮಡಿಲಿಗೆ ತುಂಬುತ್ತಿದ್ದರು. ಬಹಳ ಪ್ರೀತಿಸುತ್ತಿದ್ದರು ನಮ್ಮನ್ನು. ಅಹಲ್ಯತ್ತೆಯನ್ನೂ.

ದೊಡ್ಡವರಮನೆ ಎಂದು ಅಹಲ್ಯತ್ತೆಯನ್ನು ಮಾವನಿಗೆ ಕೊಟ್ಟರಂತೆ. ಸುತ್ತಲಿನ ಪ್ರಾಂತ್ಯದಲ್ಲೇ ಅವಳಷ್ಟು ಚಂದ ಯಾರೂ ಇರಲಿಲ್ಲವಂತೆ. ಸಿಟ್ಟುಬಂದಾಗ ಮಾವ ಆಕೆಯನ್ನು ಬಾಯಿಗೆ ಬಂದಂತೆ ಅನ್ನುತ್ತ ದನ ಬಡಿದಂತೆ ಬಡಿಯುತ್ತಿದ್ದ. ಅಷ್ಟೆತ್ತರದ ಗಟ್ಟಿಮುಟ್ಟಾದ ಅಹಲ್ಯತ್ತೆ, ಹೊಡೆದರೆ ಯಾಕೆ ಚೊಬ್ಬೆ ಹೊಡೆಯಬೇಕು? ತಿರುಗಿ ನಾಲ್ಕು ಬಿಗಿದರೆ ಆ ಮಾವ ಯಾವ ಲೆಕ್ಕಕ್ಕೆ ಅನಿಸುತ್ತಿತ್ತು ಆಗ. ಅಂಗಳದ ತುದಿಯಲ್ಲಿ, ಯಾರ ಹತ್ತಿರವೋ ನಂಬ್ರಮಾಡಿಕೊಂಡು ವದರಾಡುತ್ತಿದ್ದ ಮಾವನನ್ನು ಒಳಗಿನಿಂದ ತಣ್ಣಗೆ ನೋಡುತ್ತ ಅಹಲ್ಯತ್ತೆ ಅವಡುಗಚ್ಚಿ ಹೇಳುತ್ತಿದ್ದಳು, 'ಇದೊಂದಕ್ಕೆ ಅಡ್ಡಿಲ್ಲೆ. ಮರದ ಬಾಯಾಗಿದ್ರೆ ಒಡೆದು ಹೋಗ್ತಿತ್ತು. ಮತ್ತೆಂತಾ ಹರೀತು ಇವರ ಹತ್ರೆ...ಥೂ...' ಮೆತ್ತನ್ನ ಅಹಲ್ಯತ್ತೆಯ ದನಿಗೆ ಹೇಗೆ ಬಂತೋ ಆ ಕಾಠಿಣ್ಯ ಎನಿಸಿ ಅಚ್ಚರಿಯಾಗಿತ್ತು.

ಗದ್ದೆ ತೋಟದ ತುಂಬೆಲ್ಲ ತಿರುಗಾಡುತ್ತ, ಕೆಲಸ ಮಾಡುತ್ತ, ಮಾಡಿಸುತ್ತ ಯಾವ ಗಂಡಸಿಗೂ ಕಡಿಮೆಯಿರದ ಅಹಲ್ಯತ್ತೆಯನ್ನು ಮಾವ ವಿನಾಕಾರಣ ಬಯ್ಯುತ್ತಲೇ ಇರುತ್ತಿದ್ದ. 'ಹಡಬೆ ರಂಡೆ ಸುಮ್ನೆ ಒಳಗೆ ನಡಿ. ಕೂಳು ಬೆಯ್ಸಿ ಹಾಕ್ಕಂಡು ಬಿದ್ದಿರು ಸಾಕು' ಎಂದೆಲ್ಲ. ಎಂದೂ ಎದುರಾಡದ ಅಹಲ್ಯತ್ತೆ ತನ್ನ ಆಕ್ರೋಶವನ್ನೆಲ್ಲ ಮೈಮುರಿದು ದುಡಿದು ತಣಿಸಿಕೊಂಡಳು. ಉದ್ದು, ಹೆಸರು, ತರಕಾರಿ, ಹೂವಿನ ಗಿಡಗಳನ್ನು ಬೆಳೆಸಿದಳು. ದನಕರುಗಳ ಹತ್ತಿರ ಸುಖ ದುಃಖ ಹೇಳಿಕೊಂಡಳು. ಹಾಲು, ತುಪ್ಪ, ಕಡುಬು-ಕಜ್ಜಾಯಗಳನ್ನು ಎಲ್ಲರಿಗೆ ಒತ್ತಾಯ ಮಾಡಿಮಾಡಿ ಬಡಿಸಿದಳು. ಮಾವ ಬಯ್ದರೆಂದು ಗದ್ದೆ, ತೋಟ ಯಾವುದನ್ನೂ ಬಿಡಲಿಲ್ಲ. ಅಹಲ್ಯತ್ತೆ ಗಟ್ಟಿಯಾದ ಹಾಗೆ ಮಾವ ದುರ್ಬಲರಾಗುತ್ತ ಹೋದಂತೆ ಕಂಡರು.

ಅಂದು ರಾತ್ರಿಯೆಲ್ಲ ಏನೇನೋ ಕನಸು. ನೆನಪಿನ ಮುಂದುವರಿಕೆಯಂತೆ ಅಜ್ಜನ ಮನೆಯ ಅಂಕುಡೊಂಕಾದ ಹಾದಿ ಒಂದಕ್ಕೊಂದು ಹೊಂದಿ ಕೊಂಡಿರುವ, ರೇಲ್ವೆಡಬ್ಬಿಯ ಹಾಗೆ ತೋರುವ ಉದ್ದನೆ ಸಾಲು ಮನೆಗಳು. ಆ ಮನೆಗಳಿಗೆ ದಪ್ಪನೆಯ ಕರೀ ತೊಲೆಗಳು. ಅಲುಗಾಡಿಸಲೂ ಆಗದಂತೆ ಭರ್ಜರಿ ಬಾಗಿಲುಗಳು. ಕಂಬದ ಮೇಲೆಲ್ಲ ಗಿಳಿ, ಆನೆ, ಹೂಬಳ್ಳಿಗಳ ಕೆತ್ತನೆ. ಕರೀಮರದ ಕಪಾಟುಗಳ ಒಳಗೆಲ್ಲ ಯಾವದೋ ಕಾಲದ ವಸ್ತುಗಳು. ಅವುಗಳದೇ ಆದ ಪರಿಚಿತ ವಾಸನೆ. ಮೆಟ್ಟಲಿಳಿದು ಕೆಳಗ ಹೋದರೆ ತೋಟದಲ್ಲಿ ಬಚ್ಚಲು. ಅದರ ಸುತ್ತ ಅರೆಬರೆ ಹೊದೆಸಿದ ಬಿದಿರುತಟ್ಟಿ. ಅಲ್ಲೇ ಸ್ವಲ್ಪ ಮುಂದೆ ಹೋದರೆ ದಾರಿಪಕ್ಕದಲ್ಲೇ ನೀರಿನ ಹೊಂಡ. ಅದಕ್ಕೆ 'ಮುಟ್ಟಾದ ಹೆಂಗಸರು ಮೀಯುವ ಹೊಂಡ' ಎಂದೇ ಹೆಸರು. ಯಾರ್‍ಯಾರು ಯಾವಾಗ ಮುಟ್ಟಾಗುತ್ತಾರೆ, ಹೊಸದಾಗಿ ಈ ಲಿಸ್ಟಿಗೆ ಯಾರ್‍ಯಾರು ಸೇರಿದರು ಎಂದೆಲ್ಲಾ ಜಗಜ್ಜಾಹೀರಾಗುತ್ತಿತ್ತು. ಇದರ ಬಗ್ಗೆ ಅವರಿಗೆಲ್ಲ ಎಳ್ಳಷ್ಟೂ ಬೇಸರವಿರಲಿಲ್ಲ. ತುಂಡು ಪಂಚೆ ಸುತ್ತಿಕೊಂಡು ಒಬ್ಬರಲ್ಲಾ ಒಬ್ಬರು ಅಲ್ಲಿ ಬಟ್ಟೆ ಒಗೆಯುತ್ತಲೋ, ಸ್ನಾನ ಮಾಡುತ್ತಲೋ ಇರುವದು ಸಾಮಾನ್ಯ ದೃಶ್ಯವಾಗಿತ್ತು. ಹಾಗೇ ಹೊಂಡದ ಬದಿ ಹಾದಿಯಲ್ಲಿ ಮುದುಕರು, ಯುವಕರಾದಿಯಾಗಿ ಎಲ್ಲರೂ ಓಡಾಡು ತ್ತಿರುವದೂ ಕೂಡ. ಅಲ್ಲಿನ ವೈಶಿಷ್ಟ್ಯವೆಂದರೆ ಯಾರಿಗೂ ಯಾರ ಬಗ್ಗೂ ಅಂಥ ಕುತೂಹಲವೇನೂ ಇರಲಿಲ್ಲ. ಆ ದಿನಗಳಲ್ಲಿ ಹೊಂಡಕ್ಕೆ ಬರದೇ ಮನೆಯಲ್ಲೆ ಸ್ನಾನ ಮಾಡಿ ಮೈಲಿಗೆ ಮಾಡುವ ರತ್ನ ಮಾತ್ರ ಸ್ವಲ್ಪ ಧಿಮಾಕಿನ ಹುಡುಗಿ ಎನಿಸಿಕೊಂಡಿದ್ದಳು.

ಸುಭದ್ರ ಚಿಕ್ಕಿ, ಸುಕನ್ಯ ಚಿಕ್ಕಿ ಎಂದರೆ ಅಂಥ ವಯಸ್ಸಾದವರೇನೂ ಅಲ್ಲ. ಆಯಿಯ ಮದುವೆಯಲ್ಲಿ ಸುಭದ್ರ ಚಿಕ್ಕಿ ಇನ್ನೂ ಬೆರಳು ಚೀಪುವ ಮಗು. ಸುಕನ್ಯ ಚಿಕ್ಕಿ ಮತ್ತೆರಡು ವರ್ಷ ದೊಡ್ಡವಳು. ವಾರಿಗೆಯವರಾದ್ದರಿಂದ ನನಗೂ ಸುಭದ್ರ ಚಿಕ್ಕಿಗೂ ಜಗಳ ಜಾಸ್ತಿ. ನಾನವಳನ್ನು ಸುಬ್ಬಿ ಎಂದೇ ಕರೆಯುತ್ತಿದ್ದೆ. ಆಕೆಯ ಕಣ್ಣು ಕಿವಿ ಮೂಗು ಎಲ್ಲ ಬಹಳೇ ಚುರುಕು. ವಾಸನೆಯ ಮೇಲೆ 'ಯಾರ ಮನೆಯಲ್ಲೋ ಗೇರುಬೀಜ ಸುಟ್ಟ' ಎಂದೋ, 'ಅಲ್ನೋಡು ಆ ಮರದ ತುದಿಗೆ ಎಲೆಯ ಮರೆಯಲ್ಲಿ ಒಂದು ಮಾವಿನಕಾಯಿ ಇದ್ದು' ಎಂದೋ ಥಟ್ಟನೇ ಗುರುತಿಸುತ್ತಿದ್ದಳು. ಮರ ಹತ್ತುವದರಲ್ಲಂತೂ ಬಹಳ ಶೂರಳು ಆಕೆ. ಎಂತೆಂಥಾ ಮರವನ್ನು ಅಬ್ಬಾ ಎನಿಸುವಂತೆ ಸರಸರನೆ ಏರಿಬಿಡುತ್ತಿದ್ದಳು. ಮೇಲೆ ಕುಳಿತು ಪೇರಲಹಣ್ಣು ಕಚ್ಚಿಕಚ್ಚಿ ತಿನ್ನುತ್ತಾ ಕೆಳಗೆ ನಿಂತವರಿಗೆ ಚೊಮ್ಮೆ ಎಂದು ಕೈ ಮಾಡಿ ಕುಲುಕುಲು ನಗುತ್ತಿದ್ದಳು. ಕೆಳಗೆ ನಿಂತ ಅವಳದೇ ವಯಸ್ಸಿನ ಗಂಡು ಹುಡುಗರಾದಿಯಾಗಿ 'ಒಂದು ಹೊತಾಕೇ' ಎಂದು ಪೀಡಿಸುತ್ತಿದ್ದರು. ದೇವರ ಪೂಜೆಗೆ ಒಂದು ಬೊಗಸೆ ಹೂವಿನ ಸಲುವಾಗಿ ದರೆಯ ಅಂಚಿಗಿರುವ ಕರವೀರ ಮರಹತ್ತಿ ತುತ್ತ ತುದಿಗಿರುವ ಹೂವು ಕೊಯ್ಯುವದಂತೂ ನನ್ನ ಮೈ ನವಿರೇಳಿಸುತ್ತಿತ್ತು. ಆಗೆಲ್ಲ ನನ್ನ ಕಣ್ಣಲ್ಲಿ



ಆಕೆ ಕಿತ್ತೂರ ಚೆನ್ನಮ್ಮನೇ. ಸವತೆಕಾಯಿ, ಮಾವಿನಕಾಯಿ ಕದ್ದು ತರುವವಳು ಸುಬ್ಬಿಯಾದರೆ, ನಾನು, ಅವಳು ಜಗಳಾಡದಂತೆ ಪಾಲುಹಂಚುವವಳು ಮಾತ್ರ ಸುಕನ್ಯ ಚಿಕ್ಕಿಯೇ.

ಅಜ್ಜನ ಮನೆ ಊರಲ್ಲಿ ಚಂಬು ಹಿಡಿದು ಗುಡ್ಡಕ್ಕೆ ಹೋಗುವದೂ ಒಂದು ಖುಷಿಕೊಡುವ ಕಾರ್ಯಕ್ರಮವೇ ಆಗಿತ್ತು. ಸಂಜೆ ಹೊತ್ತಿಗೆ ಎಲ್ಲ ಪ್ರಾಯದ, ಪ್ರಾಯ ಬರುತ್ತಿರುವ ಹುಡುಗಿಯರೆಲ್ಲಾ ಸೇರಿ ಚಂಬು ಹಿಡಿದು ಸಾಲಾಗಿ ಹೊರಬಂದರೆ ಎಷ್ಟೆಲ್ಲ ವಿಷಯಗಳ ವಿಸ್ಮಯ ಪ್ರಪಂಚ ತೆರೆದುಕೊಳ್ಳುತ್ತಿತ್ತು. ನಾನು ಸಣ್ಣವಳೆಂದು ನನಗೆ ಗೊತ್ತಾಗದಂತೆ ಉಲ್ಟಾಪಲ್ಟಾ ಭಾಷೆಯಲ್ಲಿ ಮಾತಾಡುತ್ತಿದ್ದರು ಕೆಲವೊಮ್ಮೆ. ಸುಕನ್ಯ ಚಿಕ್ಕಿಯನ್ನು ಸೇರಿಸಿಕೊಂಡ ಹಾಗೆ ನನ್ನನ್ನೂ ಸುಬ್ಬಿಯನ್ನೂ ಅಷ್ಟಾಗಿ ಸೇರಿಸಿಕೊಳ್ಳುತ್ತಿರಲಿಲ್ಲ. ಅವರೆಲ್ಲ ಒಟ್ಟಿಗೇ ಗುಡ್ಡಕ್ಕೆ ಹೋದರೂ ಒಳಗೊಳಗೇ ಎರಡು ಗುಂಪು ಬೇರೆ ಇತ್ತು. ಆ ಗುಂಪಿನವರ ಹಿಂದುಬಿಟ್ಟು ಈ ಗುಂಪಿನವರು ಮಾತನಾಡಿಕೊಳ್ಳುತ್ತಿದ್ದರು. 'ಅವಳ ಕುಂಡೆ ನೋಡಿದ್ಯ ಹ್ಯಾಂಗೆ ಹಂಡ್ಯದ ಹಾಗೆ ಇದ್ದು. ಇವಳ ಕುಂಡೆಯಂತೂ ಮಶೀಕೆಂಡಾ' ಹೀಗೆ ಏನೇನೂ ವಿಮರ್ಶೆ ಮಾಡಿ ಪರಸ್ಪರರ ಮೇಲಿನ ಸಿಟ್ಟು ತೀರಿಸಿಕೊಳ್ಳುತ್ತಿದ್ದರು. ಎರಡೂ ಗುಂಪಿಗೂ ರತ್ನಳೇ ನಾಯಕಿ. ರತ್ನ ಮೊಟ್ಟಮೊದಲು ಚೂಡಿದಾರ ಹಾಕಿಕೊಂಡು ಊರವರೆಲ್ಲ ದಂಗುಬಡಿಯುವಂತೆ ಮಾಡಿದ್ದಳು. ರತ್ನ ಚೂಡಿದಾರ ಹಾಕ್ಯತ್ತು, ರತ್ನ ಲಿಪ್‌ಸ್ಟಿಕ್ ಹಚ್ಚ್ಯತ್ತು. ರತ್ನ ಕಾಲೇಜಿಗೆ ಹೋಗ್ತು, ರತ್ನ... ಅಬ್ಬಾ! ರತ್ನಾ ಎಂದರೆ ಮಹಾನ್ ಕ್ರಾಂತಿಕಾರಿಯಾಗಿ ಕಂಡಿದ್ದಳು. 'ಚೂಡಿದಾರ ಹಾಕ್ಕಳದು ಬೆಂಗಳೂರು ಬದಿಗೆಲ್ಲಾ ಕ್ವಾಮನ್ನಡಾ. ಅಲ್ಲಿ ಹುಡುಗೀರೂ ಪ್ಯಾಂಟು ಷರಟು ಹಾಕ್ಯಂಡು ಅರಾಮು ತಿರುದ್ವ್ಡಾ. ಬೆಂಗಳೂರಲ್ಲಿ ರಸ್ತೆ ಎಷ್ಟು ದೊಡ್ಡ ಇರ್ತು. ಯಾವ್‌ನಮ್ಮಿ ರಶ್ಶೇಃ ನಿಂಗ್ಯಂತವ್ರ ಹತ್ಯವೆಲಾ ರಸ್ತೆ ದಾಟಲೇ ಆಕ್ತಿಲ್ಲೆ...' ಬೆಂಗಳೂರೆಂದರೆ ಯಾವುದೋ ಹೊಸ ಲೋಕ ಎಂಬಂತೆ ರತ್ನ ಕೈಬಾಯಿ ಕುಣಿಸುತ್ತಾ ವಿವರಿಸಿದ್ದಳು. ಅವಳ ಸಪೂರಗೆ ಕೆತ್ತಿದ ಹುಬ್ಬು, ದಪ್ಪ ಕಾಡಿಗೆ, ಲಿಪ್‌ಸ್ಟಿಕ್ಕು ನೋಡಿ ಆಟದ ಹೆಣ್ಣುಪಾತ್ರ ನೆನಪಾಗಿ ನಾನು ಸುಬ್ಬಿ ಕಿಸಕ್ಕನೆ ನಕ್ಕೆವು. ಪರವಶರಾಗಿ ಕೇಳುತ್ತಿದ್ದ ಉಳಿದವರ ಹತ್ತಿರ ಬಯ್ಸಿಕೊಂಡೆವು. ಆದರೂ ಉಳಿದ ವರಿಗೆ ಚೂಡಿದಾರ ಹಾಕುವ ಧೈರ್ಯ ಬರಲೇ ಇಲ್ಲ. 'ಅದೆಲ್ಲ ಹುಶಾರಿದ್ದವರು ಹಾಕುವದು' ಎಂದು ಎಸ್ಸೆಸ್ಸೆಲ್ಸಿಯಲ್ಲಿ ಢುಮ್ಕಿ ಹೊಡೆದ ಉಳಿದ ಹುಡುಗಿಯರು ನಿರ್ಧರಿಸಿದರು.

ಅಜ್ಜನ ಮನೆ ನೆನಪಿನ ಜೊತೆಗೇ ತಳಕು ಹಾಕಿಕೊಂಡಿರುವವಳೆಂದರೆ ಸಂಕದ ಮನೆ ಅಮ್ಮ. ದೂರದ ಸಂಬಂಧಿಕಳಾದರೂ ಆಯಿ, ಚಿಕ್ಕಿಯರನ್ನೆಲ್ಲ ದೊಡ್ಡ ಮಾಡಿದವಳಂತೆ. ಅವಳು ಕರೀ ಬ್ಯಾಗು ಹಿಡಿದು ಬಂದಳೆಂದರೆ ನಮಗೆಲ್ಲ ಸಂಭ್ರಮವೋ ಸಂಭ್ರಮ. ಅವಳ ಬ್ಯಾಗೆಂದರೆ ಅಕ್ಷಯ ಪಾತ್ರೆಯೇ ಸರಿ. ಹಲಸಿನ ಹಣ್ಣಿನ ಹಪ್ಪಳ, ಬಾಳೆ ಹಣ್ಣಿನ ಸುಕೇಲಿ ಎಂತೆಂಥದೋ ಉಂಡೆ ಇನ್ನೂ ಏನೇನೋ ಇರುತ್ತಿದ್ದವು. ನಾವೆಲ್ಲ ಅವಳ ಸುತ್ತ, ಅವಳ ಬ್ಯಾಗಿನ ಸುತ್ತ ಮುತ್ತುತ್ತಿದ್ದಂತೆ ಆಕೆ ಕೆನ್ನೆ ಸವರಿ 'ಇಕಾ' ಎಂದು ತೆಗೆತೆಗೆದು ಕೊಡುತ್ತಿದ್ದಳು. ಮೀಯಲೆಂದು ಬಚ್ಚಲು ಮನೆಗೆ ಹೋದರೆ ಸಂಕದ ಮನೆ ಅಮ್ಮ ಹಿಂದೆಯೇ ಹಾಜರು. ಮತ್ತಿಸೊಪ್ಪು ತಂಜಿ ತಲೆಮೀಸ್ಲ? ಅಯ್ಯ ಕೂಸೆ ಯನ್ನತ್ರ ಎಂತಾ ನಾಚ್ಕೆ? ಎಲ್ಲ ಕಂಡಿದ್ದಿ ಆನು. ಬಾ ಸಂದಿಸಂದಿ ಎಲ್ಲ ಹೀಗೆ ತೊಳಕಳವು ಎಂದು ವಿವರಿಸುತ್ತಿದ್ದಳು. ಇಶ್ಶೀ ಈ ಸಂಕದ ಮನೆ ಅಮ್ಮಗಂತೂ ಚೂರೂ ನಾಚ್ಗೆನೇ ಇಲ್ಲೆ ಅನಿಸ್ತಿತ್ತು. ಅವಳು ಮಾತಿಗೆ ಕುಳಿತರೆ ದೊಡ್ಡ ವಾಲ್ಯುಮೇ ಸರಿ. ಸಣ್ಣದಾಗೇ ಶುರುವಾದ ಧ್ವನಿ ಹೋಗ ಹೋಗುತ್ತ ಏರುತ್ತಾ, ಕೊನೆ ಕೊನೆಗೆ ಅದು ಅಳುವಿನಲ್ಲಿ ಮುಕ್ತಾಯವಾಗುತ್ತಿತ್ತು. ಬಿಕ್ಕುತ್ತ, ಅಭಿನಯಿಸುತ್ತ ಏನೇನೋ ಹೇಳುತ್ತಿದ್ದ ಅವಳ ಮಾತಿನ ವಿಷಯ ಆಗ ತಲೆಯೊಳಗೆ ಹೋಗಿರದಿದ್ದರೂ ಕರುಳು ಕಿತ್ತು ಬರುವಂಥ ಬಿಕ್ಕು, ಆಕೆಯ ದೀನ ಮುಖ, ಉಳಿದವರೆಲ್ಲ ಮುಖ ಸಣ್ಣದು ಮಾಡಿ ಬೊಂಬೆಗಳಂತೆ ಅವಳನ್ನೇ ನೋಡುತ್ತ ಕುಳಿತುಕೊಳ್ಳುವ ರೀತಿ ಇವನ್ನೆಲ್ಲ ನೋಡಿ ನನಗೂ ಅಳು ಬಂದಂತಾಗುತ್ತಿತ್ತು. ಈಗಷ್ಟೇ ನಗುತ್ತ ಬೆಲ್ಲದುಂಡೆ ಕೊಟ್ಟ ಅಮ್ಮ ಈಗೇಕೆ ಬಿಕ್ಕುತ್ತಿರಬಹುದು?

ಮದುವೆಯಾದ ವರ್ಷಕ್ಕೇ ಗಂಡನನ್ನು ಕಳೆದುಕೊಂಡ ಸಂಕದಮನೆ ಅಮ್ಮ ಗಂಡನ ಮನೆಯವರ ಜೊತೆಯೇ ಉಳಿದಳು. ತುಂಬಿದ ಕುಟುಂಬ. ಹೇಗೂ ಒಂದು ಪುಕ್ಕಟೆ ಆಳಾಯಿತಲ್ಲ? ಹಾಗಂತ ಅಮ್ಮನೇನೂ ಕೆಲಸಕ್ಕೆ ಬೇಜಾರು ಮಾಡಿಕೊಳ್ಳುವ ಪೈಕಿ ಅಲ್ಲ. ಆದರೆ ಅಪಾರ ಸ್ವಾಭಿಮಾನಿ ಆಕೆ. ಉಳಿದವರ ಬಿರುನುಡಿ, ಆಸಡ್ಡೆಗಳನ್ನು ಸಹಿಸುವುದಾಗಲಿಲ್ಲ ಅವಳಿಗೆ. ಉಂಡದ್ದಕ್ಕೆ ತಿಂದದ್ದಕ್ಕೆ, ಕೂತದ್ದಕ್ಕೆ ನಿಂತದ್ದಕ್ಕೆ ಆಡಿಕೊಂಡರೆ ಹಾಗೆಲ್ಲ ಸಹಿಸಿಕಂಡು ಬಿದ್ದಿರುವ ಅನಿವಾರ್ಯತೆಯಾದರೂ ಏನಿದೆ ಅವಳಿಗೆ? ಆಕೆಗೇನು ಸಮಾ ಅರ್ಧ ಹಿಸೆಯಿಲ್ಲವೇ ಆ ಮನೆಯಲ್ಲಿ? ಹಾಗಂತ ಬಾಯಿಬಿಟ್ಟು ಕೇಳಿಯೂ ಬಿಟ್ಟಳು. ಕೊಡದಿದ್ದಾಗ ಕೋರ್ಟು ಕಛೇರಿ ಎಂದು ಒಬ್ಬಂಟಿಯಾಗಿ ಅಲೆದಳು. ಅವರಿವರ ಸಹಾಯ ಯಾಚಿಸಿದಳು. ಶಾಲೆ ಕಲಿತವರಿಂದ ಕಾಗದಪತ್ರ ಓದಿಸಿ ತಿಳಿದುಕೊಂಡಳು. ಇದರಿಂದ ಮನೆಯಲ್ಲಿ ಅವಳ ಬದುಕು ಇನ್ನಷ್ಟು ದುಸ್ತರವಾಯ್ತು. ಇವೆಲ್ಲದರ ಮಧ್ಯೆಯೇ ಆಕೆ ಮೈದುನರ ಮಕ್ಕಳನ್ನು ಪ್ರೀತಿಸಿದಳು. ತಲೆ ಮೀಸಿದಳು, ಮಂಡೆ ಬಾಚಿದಳು, ಮೂಲೆ ಮೂಲೆ ತಿಕ್ಕಿ ಮೀಯುವುದ ಕಲಿಸಿದಳು! ಒಂಟಿಯೆಂಬುದನ್ನೇ ಮರೆತಳು. ಆ ಮಕ್ಕಳು ಮದುವೆಯಾಗಿ ಬೇರೆ ಮನೆಗೆ ಹೊರಟಾಗ ತಬ್ಬಿಕೊಂಡು ಗಳಗಳನೆ ಅತ್ತಳು. ಆದರೆ ಉಳಿದವರು 'ಹಡಬೆ ಹೆಂಗಸು ಎಲ್ಲಾ ನಾಟ್ಕ' ಎಂದಾಗ, 'ಹೊಟ್ಟೇಲಿ

ಬೆಂಕಿ ಬೀಳ್ತಲ್ಲ ಆಂ' ಎಂದು ಸಂಕದಮನೆ ಅಮ್ಮ ಬಿಕ್ಕುವಾಗ ಆಯಿಯೂ ಅಳುತ್ತಿದ್ದ ನೆನಪಿದೆ.

ಸಣ್ಣವಳಿದ್ದಾಗ ನಾನು, ಸುಬ್ಬಿ ಒಮ್ಮೆ ಸಂಕದಮನೆ ಅಮ್ಮನ ಮನೆಗೆ ಹೋಗಿದ್ದೆವು. ಭಾರೀ ಶ್ರೀಮಂತರ ಮನೆ ಅದು. ದೊಡ್ಡ ಮೆತ್ತಿನ ತುಂಬಾ ಮಾವಿನಹಣ್ಣು ಕೊಳೆತುಹೋಗುತ್ತಿದೆ. ಅಮ್ಮನಿಗೋ ನಮಗೆ ಕೊಡಬೇಕಂತ ಆಸೆ. ಆದರೆ ಕೈಯೆತ್ತಿಕೊಡಲು ಏನೋ ಹೆದರಿಕೆ. 'ಅವಾಗೇ ಕೊಡ್ನು ನೋಡವ ತಡಿ' ಎಂದು ಕಾದಳು. ಅವರು ಆ ಮಾತೇ ಎತ್ತದಿದ್ದಾಗ ಎರಡೆರಡು ಮಾವಿನಹಣ್ಣು ತೆಗೆದು ಸೆರಗಲ್ಲಿ ಮುಚ್ಚಿಕೊಂಡು ಕೈಹಿಡಿದು ಹೆಚ್ಚು ಕಡಿಮೆ ಎಳೆದುಕೊಂಡೇ ಸಂಕದ ಹತ್ತಿರ ಕರೆದುಕೊಂಡು ಬಂದಳು. ಯಾರಾದರೂ ಬರುವ ಮುನ್ನ ಲಗೂಲಗೂ ತಿನ್ನಿ ಎಂದು ಗಡಿಬಿಡಿ ಮಾಡಿದಳು. ಇದೆಂತಾ ಕಳ್ಳರಹಾಗೆ ತಿನ್ನುವುದು! ಎಂದು ಪೆಚ್ಚುಪೆಚ್ಚಾಗಿ ನಾನು ಅವಳ ಕಡೆ ನೋಡಿದಾಗ 'ಎಂತಾ ಮಕಾ ನೋಡ್ತೆ, ಬೇಗ ತಿನ್ನು, ಇದೊಂದು ಪೆದ್ದಗೂಬೆ' ಎಂದು ಗದರಿದಳು. ಹೆದರುತ್ತ ತಿಂದ ಹಣ್ಣಿನ ರುಚಿ ತಿಳಿಯಲೇ ಇಲ್ಲ. ಸಂಕದ ಮನೆ ಅಮ್ಮನ ಅಸಹಾಯಕ ಮುಖ ಮಾತ್ರ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಮುಖ ಇಷ್ಟಗಲ ಮಾಡಿ ತೆಗೆತೆಗೆದು ತಿನ್ನಲು ಕೊಡುವ ಅಮ್ಮನನ್ನು ಈ ಸ್ಥಿತಿಯಲ್ಲಿ ನೋಡಲು ಬಹಳ ಸಂಕಟವಾಯ್ತು. ಆಗಲೇ ಬಹಳ ತೀವ್ರವಾಗಿ ಅನಿಸಿತು. ನಾನು ಮಾತ್ರ ದೊಡ್ಡವಳಾದ ಮೇಲೆ ಈ ಸಂಕದಮನೆ ಅಮ್ಮನ ಹಾಗೆ, ಅಹಲ್ಯತ್ತೆಯ ಹಾಗೆ ಆಪ್ಪಲಾಗ. ರತ್ನ ಹೇಳಿದ ಹಾಗೆ ಬೆಂಗಳೂರಿನಲ್ಲಿ ಪ್ಯಾಂಟು ಹಾಕ್ಯಂಡು ಆರಾಮು ಓಡಾಡವು. ಬೇಕು ಬೇಕಾಗಿದ್ದ ಧಾರಾಳವಾಗಿ ತಗಳವು. ಅದಕಾಗಿ ಒಂದು ನೌಕರಿ ಮಾಡಿ ಯಾರಿಗೂ ಹೆದರದೆ 'ಝುಂ' ಅಂತ ಬದುಕವು... ಹೀಗೇ.


ಮರುದಿನ ಬೆಳಿಗ್ಗೆ ಎದ್ದಾಗ ಊರಿಗೆ ಹೋಗಲೇಬೇಕಂತ ತೀವ್ರವಾಗಿ ಅನಿಸತೊಡಗಿತು. ಕಾಕತಾಳಿಯವೋ ಎಂಬಂತೆ ಮಾರನೇ ದಿನ ಪೋಸ್ಟಿಗೆ ಕೇಶುಕಾಕನ ಲಗ್ನ ಪತ್ರ ಬಂತು. ದೀಪಕನನ್ನ ಹೊರಡಿಸಿಕೊಂಡು ಊರಿಗೆ ಹೋಗಲು ಗಟ್ಟಿ ನೆಪವೇ ಸಿಕ್ಕಂತಾಯ್ತು ಎಂದು ಖುಷಿಯಾಯಿತು. ಅಲ್ದೇ ಮದುವೆ ಮನೇಲಿ ಸುಭದ್ರ ಚಿಕ್ಕಿ, ಸುಕನ್ಯ ಚಿಕ್ಕಿ, ಅಹಲ್ಯತ್ತೆ, ಸಂಕದ ಮನೆ ಅಮ್ಮ ಎಲ್ಲರನ್ನ ಒಟ್ಟಿಗೆ ಕಾಣಬಹುದಲ್ಲ ಎಂಬ ಯೋಚನೆಯಿಂದ ಎದೆ ನವಿಲಾಯ್ತು. ಎರಡು ದಿನದ ರಜೆಯಲ್ಲಿ ಮೊದಲ ದಿನ ಅಪ್ಪಯ್ಯ, ಆಯಿಯೊಡನೆ ಇದ್ದು ಮಾರನೆದಿನ ಮದುವೆ ಮುಗಿಸಿ ಹೊರಟು ಬಂದುಬಿಡೋದೆಂದು ದೀಪಕ ನಿರ್ಧರಿಸಿದ.



ಬೆಳಿಗ್ಗೆ ಮನೆ ತಲುಪಿದಾಗ ಆಯಿ ಬಾಯಿ ತುಂಬಾ, ಕಣ್ಣ ತುಂಬಾ ನಗೆ ಸೂಸಿ ಸ್ವಾಗತಿಸಿದಳು. ಬರದ್ದೆ ಎಷ್ಟು ದಿನ ಆತೇ ಎದಳು. ಅವಳ ಮುದ್ದೆಯಾದ ಸೀರೆಗೆ ಸ್ವಲ್ಪ ಸಗಣಿ ವಾಸನೆಯಿತ್ತು. ಒಂದೆಳೆಯೂ ಬಿಳಿಯಾಗಿರದ ಕಡುಗಪ್ಪ ಗುಂಗುರು ಕೂದಲು ಎಷ್ಟು ಚಂದ ಎನಿಸಿತು. ಒಂದು ಕ್ಷಣ, ಇಲ್ಲಿನ ಇಸ್ತ್ರಿ ನಲುಗದ ಸೀರೆಯುಟ್ಟು, ಡೈ ಮಾಡಿದ ಬಾಬ್‌ಕೂದಲ ಮೇಲೆ ಕೈಯಾಡಿಸುತ್ತಾ ಒಣನಗೆಯಾಡುವ ಅವಳದೇ ವಯಸ್ಸಿನ ಹೆಂಗಸರ ಜೊತೆ ಆಯಿಯನ್ನು ಕಲ್ಪಿಸಿಕೊಂಡು ನಗುಬಂತು. ಆಯಿ ಹೀಗಿದ್ದರೇ ಆಯಿ ಎಂದು ಮನಸ್ಸಲ್ಲೇ ಅಂದುಕೊಳ್ಳುತ್ತಿರುವಾಗ ಅಪ್ಪಯ್ಯ ಬಂದ. ಬಂದವನೇ ''ಬಟ್ಟೆ ಬದಲು ಮಾಡಿ ಕಾಲು ತೊಳೆದು ಆಸ್ರಿಗೆ ಕುಡೀರಿ. ಹಂಡ್ಯದ ತುಂಬ ಬಿಸಿ ನೀರಿದ್ದು. ಬೇಕಷ್ಟು ಮೀಯಲಡ್ಡಿಲ್ಲೆ. ಇದೇನು ಬೆಂಗಳೂರಲ್ಲಾ ಎಂದು ನಕ್ಕ. ಸ್ನಾನ ಮಾಡಿ ಅಡಿಗೆ ಮನೆಯಲ್ಲಿ ಕಡಗಲು ಕಂಬಕ್ಕೆ ಬೆನ್ನುಚಾಚಿ ಕುಳಿತೆ. ಆಯಿಯ ಬಾಯಿಗೆ ಪುರಸೊತ್ತೆಲ್ಲಿ? '' ಹಿಡಿ ತಂಪಾಗ್ತು ಮಜ್ಗೆ ಕುಡಿಯೆ. ಅಂತೂ ತೋಟಕ್ಕೆ ಮದ್ದು ಹೊಡದು ಮುಗ್ತು ಮಾರಾಯ್ತಿ. ದೊಡ್ಡೆಮ್ಮೆ ಕರ ಹಾಕಿದ್ದು. ಎರಡ್ದಿನ ಮುಂಚೆ ಬಂದಿದ್ರೆ ಗಿಣ್ಣ ಸಿಕ್ತಿತ್ತಲೆ ಥೋ'' ಅಂತೆಲ್ಲ ಹೇಳಿದಳು. ''ಈ ಸಲ ಸ್ವಾಡಿಗೆ ಬೆಂಡೆ ರಾಶಿ ನೆಟ್ಟಿದ್ದಿ. ಇನ್ನೊಂದು ತಿಂಗ್ಳಿಗೆ ಊರಿಗೆಲ್ಲಾ ಸಾಕಾಪಷ್ಟು ಬಿಡ್ತು. ಹಿಂದೆ ಶಾವಂತಿಗೆ ಗಿಡ ನೋಡಿದ್ಯ? ಯಾನಮ್ಮಿ ಹೂ ಬಿಟ್ಟಿದ್ದು ದೃಷ್ಟಿ ಆಪ್ಪಾಂಗೆ! ಸುಮ್ನೆ ಬುಡ ಊರಿದಿದಿ ಅಷ್ಟೆಯಾ?'' ಎನ್ನುತ್ತ ನನ್ನಅನಾಸಕ್ತಿ ಕಂಡು 'ಯಂತಾ ಕೂಸೆ ನೀನು' ಹೇಳಿ ನಗೆ ಆಡಿದಳು. ಆಯಿಯ ಜೀವನೋತ್ಸಾಹದ ಮುಂದೆ ನಾನೆಷ್ಟು ಮಂಕುಮಂಕಾಗಿ ಕಾಣುತ್ತಿದ್ದೇನಲ್ಲ ಎನಿಸಿ ಗಾಬರಿಯಾಯ್ತು. ಬೆಂಗಳೂರಿಗೆ ಹೋದ ಮೇಲೆ ಏನಾದರೂ ಅರ್ಥಪೂರ್ಣವಾದದ್ದು ಮಾಡಬೇಕು ಎನಿಸಿತು.

ಮರುದಿನ ತುಂಬಾ ಸಂಭ್ರಮದಿಂದ ಮದುವೆ ಮನೆಗೆ ಕಾಲಿಟ್ಟರೆ ಯಾಕೋ ಎಲ್ಲ ಬಿನ್ನ ಬಿನ್ನಗೆ. ಯಾರಿಗೂ ಅಂತಾ ಉಮೇದೇ ಇಲ್ಲ. ಮಳೆಗಾಲದಲ್ಲಿ ಮದುವೆ ಇಟ್ಟಿದ್ದರಿಂದಲೋ ಏನೋ ಜನವೂ ಕಡಿಮೆಯೇ. ಒಂದು ಹಾಡೂ ಕಿವಿಗೆ ಬೀಳಲಿಲ್ಲ. ಯಾವುದೋ ಮುದುಕಿ ಸಣ್ಣಗೆ ಪಿರಿಪಿರಿ ಹಾಡುವದು ಟೇಪ್‌ರಿಕಾರ್ಡರ್ ಗದ್ದಲದಲ್ಲಿ ಕೇಳಿಸುತ್ತಲೂ ಇರಲಿಲ್ಲ. ಏನೇನೋ ಹೇಳುವ, ಕೇಳುವ ಉತ್ಸಾಹದಲ್ಲಿ ಸುಕನ್ಯ ಚಿಕ್ಕಿ, ಸುಭದ್ರ ಚಿಕ್ಕಿಯರನ್ನು ಹುಡುಕಿದೆ. ಸುಕನ್ಯ ಚಿಕ್ಕಿ ಕಂಡವಳು 'ಯಾವಾಗ ಬಂದ್ಯೆ' ಎಂದು ನಗುತ್ತ ಹತ್ತಿರ ಬಂದಳು. ಭರ್ಜರಿ ರೇಶ್ಮೆ ಸೀರೆಯುಟ್ಟು ಘಮಘಮಿಸುತ್ತಿದ್ದಳು. ಮುಂಬೈಯಲ್ಲಿ ಇರುವವಳು. ಅಲ್ಲೇ ಕಂಬಳಿ ಮೇಲೆ ಕುಳಿತು, ಮಗನ ಕಾನ್ವೆಂಟ್ ಬಾರೀ ಚೊಲೋ ಇದ್ದದ್ದು, ಅಲ್ಲೆಲ್ಲ ಒಂದು ಸ್ಟ್ಯಾಂಡರ್ಡ್‌ನವರೇ ಬರುವದು, ಅವನ ಬರ್ತ್‌ಡೇ ಈ ಸಲ ಬಹಳ ಗ್ರ್ಯಾಂಡ್ ಆಗಿ ಮಾಡಿದ್ದು ಎಲ್ಲ ಹೇಳಿದಳು. ಅವಳನ್ನೇ ಪಿಳಿಪಿಳಿ ನೋಡುತ್ತ ಹೂ ಗುಟ್ಟಿದೆ. ಉದ್ದ ಕೂದಲ ಸುಕನ್ಯ ಚಿಕ್ಕಿ ಕೂದಲನ್ನು ಚಿಕ್ಕದಾಗಿ ಕತ್ತರಿಸಿಕೊಂಡಿದ್ದಳು. ಹುಬ್ಬು ಸಪೂರವಾಗಿತ್ತು. ತಾಸಿಗೊಂದೊಂದರಂತೆ ಸೀರೆ ಉಟ್ಟು, ಜಿಜ್ಜಿ ಎಲ್ಲರ ಕೇಂದ್ರಬಿಂದುವಾದಳು.

ಸುಭದ್ರ ಚಿಕ್ಕಿಯನ್ನು ಹಳ್ಳಿಗೇ ಕೊಟ್ಟಿದ್ದು. ಅವಳ ಆ ಕಸುವು, ಜೀವಂತಿಕೆ-ಹಳ್ಳಿಯ ಬದುಕಿಗೇ ಬಹಳ ಮ್ಯಾಚ್ ಆಗ್ತಿದ್ದಳಲ್ಲ ಅವಳು! ಅಲ್ಲೇ ಸರಬರ ಓಡಾಡುತ್ತಿದ್ದವಳನ್ನು 'ಹ್ಯಾಂಗಿದ್ಯೇ ಸುಬ್ಬೀ' ಎಂದು ಹೊಡೆದೇ ಮಾತಾಡಿಸಿದೆ. ಇವಳ ಹತ್ತಿರವಾದ್ರೂ, ಗೇರುಗುಡ್ಡದ ಸುದ್ದಿ, ಮಾವಿನಕಾಯಿ ಕದ್ದ ಸುದ್ದಿ ಎಲ್ಲಾ ಹೇಳಿ ಮಜಾಮಾಡುವಾ ಎಂದು. ಕೂತಲ್ಲಿ ಕೂರಲಾಗದ ಅವಳನ್ನು ಎಳೆದು ಒಂದೆಡೆ ಕುಳ್ಳಿರಿಸಿ ಮಾತಿಗೆ ಶುರು ಹಚ್ಚಿದೆ. ನನ್ನ ಮಾತಿಗೆ ಮುಖ ಕಿವಿಚಿಕೊಂಡಳು. ''ಎಂಥದೇ ಹಳ್ಳೀಲಿ ಸುಖಾ ಇಲ್ಲೆ, ನಿಂಗಳದ್ದೇ ಲಕ್ಕು. ಇಲ್ಲಿ ತಿಥಿ, ದೇವಕಾರ್ಯ ಹಬ್ಬ ಹುಣ್ಮೆ ಮುಗ್ಯದೇ ಅಲ್ಲಾ'' ಎಂದಳು. ಕೊಟ್ಟಿಗೆಗೂ ಆನೇ ಹೋಕ್ಯಳವು. ಗಂಡಸ್ರಂತೂ ಆ ಬದಿಗೆ ಕಾಲ್ ಹಾಕ್ತಿಲ್ಲೆ. ಕಾಲು ನೋಡು ಹ್ಯಾಂಗೆ ಬಿರುಕ ಬಿಟ್ಟಿದ್ದು ಎಂದು ತೋರಿಸಿದಳು. ಅಡಿಕೆ ಸೊಲ್ಲುಸೊಲ್ಲು ಕೆರೆಯಲ್ಲಿ ಕಪ್ಪಾಗೋಜು ಎನ್ನುತ್ತ ಕೈಚಾಚಿ ವಿಷಣ್ಣ ನಗೆನಕ್ಕಳು. ಏನು ಹೇಳಲೂ ತೋಚದೇ ಬೆಂಗಳೂರಿಗೆ ಬಂದು ನಾಲ್ಕುದಿನ ಹಾಯಾಗಿ ಉಳ್ದುಹೋಗೇ ಎಂದೆ. ಹಾಂ ಆನು ಬಂದ್ರೆ ಆಗೋತು ಎಲ್ಲರ ಮಕನೂ ಗಡಿಗೇನೇಯಾ ಎಂದು ಕೆನ್ನೆಯುಬ್ಬಿಸಿ ಅಭಿನಯಿಸಿ ತೋರಿಸಿದಳು. ಬಿದ್ದುಬಿದ್ದು






ನಕ್ಕೆವು. ನಗೆಯ ಕೊನೆಯಲೆಲ್ಲೋ ವಿಷಾದದ ಮುಳ್ಳು ಚುಚ್ಚಿದಂತೆನಿಸಿ ಇಬ್ಬರಿಗೂ ಪೆಚ್ಚೆನಿಸಿತು. ಸ್ವಲ್ಪ ಹೊತ್ತು ದಿಕ್ಕು ನೋಡುತ್ತ ಕುಳಿತೆವು ಕೊನೆಗೆ ಅವಳೇ 'ಈಗ ಎಂತಾ ಅಂದ್ರೂ, ಮೊದಲಿನ ಹಾಂಗೆ ಇಪ್ಪಲಾಕ್ತಿಲ್ಲೆ ಅಲ್ವ?' ಅಂದಳು. ಆ ಪ್ರಶ್ನೆಯಲ್ಲಿ ಏನೇನೋ ಅರ್ಥಗಳು ಇದ್ದಂತೆ ಕಂಡಿತು.

ಊಟಕ್ಕೆ ಅಹಲ್ಯತ್ತೆಯ ಪಕ್ಕವೇ ಜಾಗ ಸಿಕ್ಕಿತು. ಅವಳ ಕಂದಿದ ಮುಖ, ಬೋಳು ಹಣೆ, ಖಾಲಿ ಕತ್ತು ನೋಡಿ ದಿಗ್ಭ್ರಮೆಯಾಯ್ತು. ಬಹಳ ವಯಸ್ಸಾದವಳಂತೆ ಕಂಡಳು. ಅವರು ಹೋಗ್‌ಬುಟ್ರು. ಬಯ್ಕೋತ್ನ, ವಟಗುಡ್ತ ಅಹಲ್ಯ ಅಹಲ್ಯ ಹೇಳಿ ಹಿಂದೆ ಮುಂದೆ ಸುತ್‌ತಾ ಇರ್ತಿದ್ರು. 'ಇದ್ದಾಗ ವಾಕರಿಕೆ ಇಲ್ಲದಾಗ ಬೇಸರಿಕೆ' ಹೇಳಿ ಗಾದೆ ಹೇಳ್ತ್ವಲೆ ಮನೆ ಎಲ್ಲ ಬಿನ್ನ ಬಿನ್ನಗೆ. ಹೊಟ್ಟೆಲೆಲ್ಲ ಒನ್ನಮ್ನಿ ಸಂಕ್ಟ ಸಂಕ್ಟ. ಆ ದೇವ್ರು ಯನ್ನೂ ಲಗೂ ಕರೆಸಿಗ್ಯಳಲಾಗಿತ್ತು ಎಂದು ಅಹಲ್ಯತ್ತೆ ಅಲವತ್ತುಕೊಂಡಳು. ಆಮೇಲೆ ಊಟ ಗಂಟಲೊಳಗೆ ಇಳಿಯಲೇ ಇಲ್ಲ. ಮಾತಿಲ್ಲದೇ ಊಟ ಮುಗಿಸಿ ಕೈ ತೊಳೆಯಲು ಹೋದಾಗ ಅಹಲ್ಯತ್ತೆ ಥಟ್ಟನೇ ''ನೀನೀಗ ಯಮ್ಮನಿಗೆ ಬರವು. ಈ ಸಲ ನಿಂಗೆ ಒಂದು ಕಡುಬೂ? ಸಿಕ್ಕಿದ್ದಿಲ್ಯನ ಹಲಸಿನಣ್ಣು ಕಡುಬು ಮಾಡ್ತಿ. ಜೊರಾಜೊರಾ ಮಳೆ ಹೊಯ್ಯಕಾದ್ರೆ, ತಿಂಬಲೆ ಲಾಯ್ಕ್ ಆಗ್ತು. ಕಡುಬು ಅಂದ್ರೆ ಅವ್ರಿಗೂ ಪ್ರೀತಿಯಾಗಿತ್ತು ಅಂದಳು. ಅವ್ರಿಗೆ ರಜೆ ಇಲ್ಯೆ ಎಂದೆಲ್ಲ ಸಮಝಾಯಿಶಿಕೊಡುವಾಗ ನನ್ನ ಶಬ್ದಗಳೆಲ್ಲ ತೀರ ಜೊಳ್ಳುಜೊಳ್ಳಾಗಿ ತೇಲಿ ಹೋದಂತೆ ಅನಿಸತೊಡಗಿತು.

ಮದುವೆಗೆ ಸಂಕದಮನೆ ಅಮ್ಮ ಬಂದಿರಲಿಲ್ಲ. 'ಅವಳಿಗೆ ಹುಷಾರೇ ಇರ್ತಿಲ್ಲೆ ಈ ಮಳೆಗಾಲ ಕಳ್ಯದು ಎಂತನ' ಎಂದಳು ಸುಭದ್ರ ಚಿಕ್ಕಿ. ಕಡೇ ಕಾಲದಲ್ಲಿ ಕಾಲುಬುಡಕೆ ಯಾರೂ ಇಲ್ಲದಾಂಗೆ ಮಾಡಿಕ್ಯಂಡ್ತು ಎಂದಳು ಸುಕನ್ಯ ಚಿಕ್ಕಿ. ''ಯಾವ್ದೋ ಮಾಣಿಯ ಮನೇಲಿಟ್ಗಂಡು ಕಾಲೇಜ ಕಲಿಸ್ತದಾ. ಆಸ್ತಿ ಎಲ್ಲ ಅವಂಗೇ ಬರೀತದಾ. ನಾವೆಲ್ಲ ಲೆಕ್ಕಕ್ಕೇ ಇಲ್ಲೆ ಹೇಳಾದ್ಮೇಲೆ ಎಂತಕ್ಕೆ ಅವಳ ಉಸಾಬರಿ'' ಅಂತೆಲ್ಲ ಅವಳ ತಮ್ಮ ತಂಬಾಕಿನ ಚೂರು ಬಾಯಲ್ಲಿ ಒಗೆಯುತ್ತಾ ಅಲವತ್ತುಕೊಂಡ. ಆ ಕ್ಷಣ ಒಂಥರಾ ದಿಗಿಲಾಗತೊಡಗಿತು. ಅಯ್ಯೋ ಸಂಕದಮನೆ ಅಮ್ಮ ಯಾರ್‍ಯಾರೂ ಇಲ್ಲದೇ ನರಳಿ ನರಳಿ, ಒಂಟಿ ಹೆಣವಾಗಿ, ಕೊಳೆತು... ರಾಮರಾಮಾ! ಎದೆ ಡವಗುಟ್ಟತೊಡಗಿತು. ಅವಳನ್ನೊಮ್ಮೆ ನೋಡಿಬರೋಣ ಎಂಬ ಅನಿಸಿಕೆ ತೀವ್ರವಾಯ್ತು. 'ನಿಂಗೆಂತಾ ಮಳ್ಳಾ, ರಜೆಯಂತೂ ಇಲ್ವೇ ಇಲ್ಲ ನಿಂಗೆ ಇಂಟರ್‌ವ್ಯೂ ಬೇರೆ ಬರೋದಿದೆ. ಆಮೇಲೆ ಪಾತ್ರೆ ತೊಳಿತಾ ಹಾಯಾಗಿರೋದಾದ್ರೆ, ಆರಾಮು ಉಳಿದು ಬಾ ನಾನಂತೂ ಹೊರಟೆ' ಎಂದು ದೀಪಕ ಸಣ್ಣಗೆ ಗದರಿದ.

ಸಂಕದ ಮನೆ ಅಮ್ಮ, ಇಂಟರ್‌ವ್ಯೂ, ಸುಭದ್ರ ಚಿಕ್ಕಿ ಏನೇನೋ ಗೊಂದಲ. ಅಷ್ಟರಲ್ಲಿ ಪಟಪಟ ಮಳೆ ಹನಿಯತೊಡಗಿತು. 'ಮಳೆ, ಮಳೆ, ಪ್ಲಾಸ್ಟಿಕ್ ಮುಚ್ಚಿ, ಅರಸಿನೆಣ್ಣೆ ಬೇಗಬೇಗ ಮುಗಿಸಿ'-ಗದ್ದಲ ಶುರುವಾಯ್ತು. ಗುಡುಗು, ಮಿಂಚು, ಮಳೆ ಧಾರಾಕಾರವಾಗಿ ಸುರಿಯತೊಡಗಿತು. ಒಬ್ಬರ ಮಾತು ಮತ್ತೊಬ್ಬರಿಗೆ ಕೇಳಿಸದಾಯ್ತು. ತಮ್ಮತಮ್ಮ ಮನೆಗೆ ವಾಪಸ್ಸಾಗುವ ಗಡಿಬಿಡಿಯಲ್ಲಿ ಯಾರ್‍ಯಾರನ್ನೋ ಕೂಗಿ ಕರೆಯುತ್ತಾ, ಹುಡುಕುತ್ತಾ ಮದುವೆಮನೆ ಗಿಜಿಗುಟ್ಟತೊಡಗಿತು. ಯಾರ್‍ಯಾರೋ ಪರಿಚಯದವರೆಲ್ಲ ಕೈ ಸನ್ನೆ, ಬಾಯ್ಸನ್ನೆ ಮಾಡಿ ಏನೇನೋ ಹೇಳುತ್ತಾ ಚೆದುರತೊಡಗಿದರು. ಕನಸಿನಲ್ಲಿ ಕಂಡಂತೆ... ಎಲ್ಲ ಮಸುಕುಮಸುಕು. ಗೌಜಿಯಲ್ಲಿ ಏನೂ ತಿಳಿಯದೇ ಮಳೆ ನೋಡುತ್ತ ನಿಂತುಬಿಟ್ಟೆ.



ಕಥೆಯೆಂದರೆ ಮುಗಿಲು
ಮುಗಿದಂತೆ ಕಂಡರೂ ಮುಗಿಯುವುದೇ ಇಲ್ಲ.

— ಗೀತಾ ವಸಂತ.



ಶಬ್ದ ತೀರ

ಜಯಂತ ಕಾಯ್ಕಿಣಿ

ದೇವರ ಹೊಸ್ತಿಲಲ್ಲಿ

ಗೋಕರ್ಣದ ದೇವಸ್ಥಾನದ ಬಾಗಿಲಲ್ಲಿ, ಶಾಲೆಗೆ ಹೋಗದ ಪುಟಾಣಿ ಪೋರಿಯರು, ಪುಟ್ಟ ಪುಟ್ಟ ಬುಟ್ಟಿ ತುಂಬ ಹೂಗಳನ್ನು ಇಟ್ಟುಕೊಂಡು ನಿಂತಿದ್ದಾರೆ. ಅವರು ನಸುಕಿಗೇ ಎದ್ದು ಹಿತ್ತಲು, ಬೆಟ್ಟ ಅಂತ ನಿದ್ದೆಗಣ್ಣಲ್ಲಿ ಕೊಕ್ಕೆ ಹಿಡಿದು ಅಲೆದಾಡಿ, ನೂರಾರು ಬಗೆಯ ಕರವೀರ, ಶಂಖಪುಷ್ಪ, ದಾಸಾಳ, ದೂರ್ವೆ, ಬಿಲ್ಪತ್ರೆ, ತುಳಸಿ ಹೀಗೆ ತಮ್ಮ ಬುಟ್ಟಿಯಲ್ಲೊಂದು ವರ್ಣರಸ ಪರಿಮಳದ ಪುಟ್ಟ ಸಾಮ್ರಾಜ್ಯವನ್ನೇ ಹೊತ್ತುತಂದಿದ್ದಾರೆ. ಕರವೀರದ ಕೊಂಬೆಯಲ್ಲಿ ಕೂತು ಕಂಡ ಅರುಣೋದಯದ ಬಣ್ಣಗಳನ್ನೇ ಲಂಗದಲ್ಲಿ ಕಟ್ಟಿ ತಂದಂತೆ.

ಕಾರೊಂದು ನಿಂತ ರೀತಿ, ಅದರಿಂದ ಭಕ್ತಾದಿಗಳು ಇಳಿಯುವ ರೀತಿ, ಅವರೆಲ್ಲರ ನಡಿಗೆಯಲ್ಲೇ ತೂಗಾಡುವ ಭಕ್ತಿಯ ಗತ್ತು... ಇವನ್ನು ನೋಡಿಯೇ ಈ ಪುಟಾಣಿ ಮಕ್ಕಳಿಗೆ ಗೊತ್ತಾಗುತ್ತದೆ.. ಇವರು ಹೂ ಕೊಳ್ಳುತ್ತಾರೋ ಇಲ್ಲವೋ ಎಂದು. ಮಾಸಿದ ಲಂಗದ ಪುಟ್ಟಿಯರು ಹಸಿರೆಲೆಯ ಖೊಟ್ಟೆಯಲ್ಲಿ ಹೂಗಳನ್ನು ಹಿಡಿದು ಅವರ ಮುಂದೆ ಚಾಚುತ್ತಾರೆ. ಕೆಲವರು ಬಗ್ಗಿ ಚೌಕಾಶಿ ಮಾಡುತ್ತ ನಿಂತರೆ, ಉಳಿದವರು ಮಹತ್ತರ ರಾಜಕಾರ್ಯ ಇದ್ದವರಂತೆ ನೇರವಾಗಿ ದೇವಳದೊಳಗೆ ನುಗ್ಗಿದ್ದಾರೆ. ಮೊದಲಬಾರಿಗೆ ಪಂಚೆ ಉಟ್ಟವರು ಮೂಲವ್ಯಾಧಿ ಇದ್ದವರಂತೆ ನಡೆದಿದ್ದಾರೆ.

ಈ 'ಹೂ ಪುಟ್ಟಿ'ಯರಲ್ಲಿ ಅತಿ ಪುಟ್ಟವಳು 'ದೇವಿ.' ಅವಳ ಕೈಗಳಲ್ಲಿ ಶಿವರಾತ್ರಿಗೆ ತಗೊಂಡಿದ್ದ ಹಸಿರು ಪ್ಲಾಸ್ಟಿಕ್ ಬಳೆಗಳಿವೆ. ಅವಳ ಮುದ್ದು ಸೊಂಟದ ಪುಟ್ಟ ಕಿರಗಣೆಯಲ್ಲಿ - ಚಿಲ್ಲರೆಯ 'ಚಂಚಿ' ಇದೆ. ಅದು ಅವಳಜ್ಜನ ಹಳೆ ಕವಳದ ಚಂಚಿ. ಅದರಲ್ಲಿ ಅಡಿಕೆಯ ಹೋಳುಗಳೂ ಇವೆ. ಈ ದೇವಿ ಜಾಣೆ. ಅವಳಿಗೆ ಗೊತ್ತು ಈ ಯಾತ್ರಿಕರು ಹಾಗೆಲ್ಲ ಬಡಪಟ್ಟಿಗೆ ತನ್ನೆಡೆ ನೋಡುವುದಿಲ್ಲ. ಅದಕ್ಕವಳು ಒಂದು ದಿನ, ಒಂದು ಸುಮುಹೂರ್ತದಲ್ಲಿ ತನ್ನ ಎಳೆಕಂಠದಲ್ಲಿ ತನ್ನ ವಾರಿಗೆಯವರನ್ನು ಬೆಚ್ಚಿಬೀಳಿಸುವಂತೆ ಚೀರಲಾರಂಭಿಸುತ್ತಾಳೆ... ''ಬೂಟೂ, ಚಪ್ಪಲ್ಲು ಇಲ್ಲಿಡೀ...! ನೀವು ಆರಾಮಾಗಿ ದೇವ್ರನ್ನ ನೋಡಿ... ಬೂಟೂ ಚಪ್ಪಲ್ಲೂ ಇಲ್ಲಿಡೀ... ಆರಾಮಾಗಿ ದೇವ್ರನ್ನ ನೋಡಿ.'' ಯಾತ್ರಿಕರು ಈಗ ಅವಳ ಪುಟ್ಟ ಕೈಗಳಿಂದ ಹೂಗಳನ್ನು ಕೊಂಡು, ಅವಳ ಬುಟ್ಟಿಯ ಬದಿಯಲ್ಲೇ ತಮ್ಮ ಚಪ್ಪಲಿಗಳ ಬಿಟ್ಟು ನಿಶ್ಚಿಂತೆಯಿಂದ ಒಳಹೋಗುತ್ತಿದ್ದಾರೆ. ಹೀಗೆ ಈ ದೇವಿಯ ಐಡಿಯಾದಿಂದ ಹೊಸದೊಂದು 'ಮಾರ್ಕೆಟಿಂಗ್ ಸ್ಟ್ರೆಟಜೀ' ಇಲ್ಲಿ ಆರಂಭವಾಗಿದೆ. ಮೆಲ್ಲಗೆ ಎಲ್ಲ ಹೂ ಪುಟ್ಟಿಯರೂ ಇದನ್ನು ಒಬ್ಬೊಬ್ಬರಾಗಿ ಅನುಸರಿಸಿದ್ದಾರೆ.

ದೇವಸ್ಥಾನದ ತೊಟ್ಟಿಯಲ್ಲಿ ಕೊಳೆಯುತ್ತಿರುವ ಬಾಳೆಹಣ್ಣು, ಹೂವು, ದೂರ್ವೆ, ಬಿಲ್ಪತ್ರೆಗಳಿಗೆ ಬಾಯಿಹಾಕಿರುವ ಹಸುಗಳು ಒಮ್ಮೆಲೇ ರುಚಿಗೆ ಅಂತ ಈ ಚಪ್ಪಲಿಗಳ ಕಡೆ ಬರುವುದುಂಟು. ಮಿಲಿಟರಿಯ ಮಿಗ್ ವಿಮಾನಗಳಂತೆ, ಹಠಾತ್ತನೆ, ತೊಟ್ಟಿ ಬಿಟ್ಟು ಘೂಬುಟ್ಟಿಗಳತ್ತ ರೊಂಯ್‌ಗುಡುತ್ತ ನುಗ್ಗುತ್ತವೆ ಅವು. ಆಗ ಹೂಪುಟ್ಟಿಯರೆಲ್ಲ, ಕೆಂಪು ದಾಸವಾಳದ ಗುಚ್ಛ ಹಿಡಿದು, 'ಹಚಾ ಹಚಾ' ಎಂದು ಕೈಯಾಡಿಸುತ್ತ ಹುಯಿಲೆಬ್ಬಿಸುತ್ತಾರೆ. ಚಪ್ಪಲಿಗಳ ಮೇಲೆ ನಿಂತು ಅವುಗಳನ್ನೂ ಕಾಪಾಡುತ್ತಾರೆ. ಇದೆಲ್ಲ ಒಳಗೆ ಪಂಚಾಮೃತ, ಕುಂಕುಮಾಭಿಷೇಕದಲ್ಲಿ ಧಳ ಧಳ ಬೆವೆತು ಕಣ್ಣಿಗೆ ಕತ್ತಲಾವರಿಸುತ್ತಿರುವ ಅವರಿಗೆ ಗೊತ್ತಿಲ್ಲ. ಏಕೆಂದರೆ ಅವರು ಹೂಗಳ ಜತೆ ನಿಶ್ಚಿಂತೆಯನ್ನು ಕೊಂಡವರು. ಅವರಿಗೀಗ ಕೇವಲ ಪುಣ್ಯದ ಚಿಂತೆ!

ಎಂಥ ವಹಿವಾಟೂ ಕೆಲಕಾಲದ ನಂತರ ಬೇಸರ ಬರಿಸುತ್ತದೆ ಅಲ್ಲವೆ? ಹೂಗಳಿಗೂ ಬೇಸರ, ಬುಟ್ಟಿಗಳಿಗೂ ಬೇಸರ. ಚಪ್ಪಲಿಗಳಿಗೂ ಬೇಸರ. ಪುಣ್ಯಕೋಟಿಗೂ ಬೇಸರ. ಪುಟ್ಟ 'ದೇವಿ'ಗೂ ಬೇಸರ.

ಆಗವಳು ತನ್ನ ಸುಪರ್ದಿಗೆ ಬಂದ ಎಲ್ಲ ಚಪ್ಪಲಿಗಳನ್ನೂ ಮಿಕಿ ಮಿಕಿ ನೋಡುತ್ತಾಳೆ. ಐದಾರು ಜೋಡಿ ಚಪ್ಪಲಿಗಳಿವೆ. ಕೆಲವು ಹೊಸ ಚಪ್ಪಲಿಗಳು. ಕೆಲವು ಹಿಮ್ಮಡಿ ಸವೆದಿರುವ, ಒಂದು ಬದಿಗೆ ಡೊಂಕಾಗಿರುವ ಚಪ್ಪಲಿಗಳು. ಗಂಡಸರ ಚಪ್ಪಲಿಗಳಿಗೋ ಗಂಡಸರದೇ ಮೂರ್ಖ ದರ್ಪ. ಹೆಂಗಸರ ಚಪ್ಪಲಿಗಳಿಗೆ ಅವುಗಳದೇ ಮೂರ್ಖ ಲಾವಣ್ಯ. ಈ ಜಗತ್ತಿನಲ್ಲೀಗ, ದೇವಿಯ ಮೈಮರೆಸುವ ಏಕಮೇವ ಆಕರ್ಷಕ ವಸ್ತುವೆಂದರೆ-ಹೈಹೀಲ್ಡ್-ಎತ್ತರದ ಹಿಮ್ಮಡಿಯ ಚಪ್ಪಲಿಗಳು. ಸ್ವತಃ ಒಂದು ಸುಂದರಿಯಂತೆ ಕಾಣುವ ಈ ಚಪ್ಪಲಿಗಳಿಗೆ ಬಂಗಾರದ ಅಂಚು. ಈ ಎತ್ತರ ಹಿಮ್ಮಡಿಯ ಸ್ಯಾಂಡಲ್‌ಗಳ ಗತ್ತು ಉಳಿದೆಲ್ಲ ಚಪ್ಪಲಿಗಿಂತ ತೀರ ಬೇರೆ. ಆ ಹಿಮ್ಮಡದಲ್ಲಿ ಏನು ಅವಿತಿದೆ? ಹಿಮ್ಮಡ ಊರುವ ಜಾಗದಲ್ಲೇ ಇರುವ ಕಂಪನಿಯ ಹೆಸರಿನ ಮುದ್ರೆ, ಚಿತ್ರ ಎಲ್ಲವೂ ಅರೆಬರೆ ಅಳಿಸಿ ಒಂದು ಬಗೆಯ ನುಣುಪು ಬಂದಿದೆ. ಅನಾಥವಾಗಿ ಅಡ್ಡಬಿದ್ದರೆ ತುಂಬ ದಾರುಣವಾಗಿ ಕಾಣುವ ಇವುಗಳನ್ನು ದೇವಿ - ಸರಿಯಾಗಿ ನೇರವಾಗಿ ನಿಲ್ಲಿಸುತ್ತಾಳೆ. ತನ್ನೆಲ್ಲ ಆತ್ಮವನ್ನು ಅದರಲ್ಲಿಟ್ಟು ನೋಡುತ್ತಾಳೆ. ಮತ್ತೀಗ ಅವಳು ಒಂದು ಹೊಸ ಆಟಕ್ಕೆ ರೆಡೀ..

ಒಡತಿ ಒಳಗಿಂದ ಹೊರಬೀಳುವುದರೊಳಗೆ, ಎರಡೂ ಕೈಗಳಿಂದ ತನ್ನ ಲಂಗವನ್ನು ತುಸುವೇ ಎತ್ತಿ, ಪುಟ್ಟ ಅಂಗಾಲನ್ನು 'ಹೈಹೀಲ್ಡ್'ಲ್ಲಿಡುತ್ತಾಳೆ. ಅದೊಂದು ಹೊಸ ಸ್ಪರ್ಶ. ಮೆಲ್ಲಗೆ ತನ್ನ ಹೂಭಾರ ಅದರ ಮೇಲಿಟ್ಟು ಇನ್ನೊಂದರಲ್ಲೂ ಕಾಲು ತೂರಿಸುತ್ತಾಳೆ. 'ಏ ಏ ಏ ಏ ಏ ನೋಡೇ'- ಎಂದು ಉಳಿದ ಹುಡುಗಿಯರ ನಿಟ್ಟುಸಿರು ಕೇಕೆಯಾಗಿ ಮಾರ್ಪಟ್ಟು, ಭಯದ ನಗೆಯಾಗಿ ಚಿಮ್ಮಿ ವಾತಾವರಣ ತುಂಬುತ್ತಿರುವಂತೆ, ಟಕ್ ಟಕ್ ಎಂದು ಸದ್ದು ಮಾಡುತ್ತ ಅಲ್ಲೇ ಒಂದು ರೌಂಡು ಹಾಕಿ ತಿರುಗಿ ಬಂದು ಸ್ವಸ್ಥಾನದಲ್ಲಿಟ್ಟು, ತುಟಿಗೆ ಬೆರಳಿಟ್ಟು ಎಲ್ಲರಿಗೂ 'ಗಪ್‌ಚುಪ್' ಎಂಬಂತೆ ಸನ್ನೆ ಮಾಡಿ, ತೆಪ್ಪಗೆ ಏನೂ ಆಗದಿರುವಂತೆ ಕೂತುಬಿಡುತ್ತಾಳೆ!

ಮಂಗಳಾರತಿ ಮುಗಿಸಿದವರು ಹೊಸ್ತಿಲ ಹೊರಗೆ ಬಂದು ಗಂಭೀರವಾಗಿ ತಮ್ಮ ತಮ್ಮ ಚಪ್ಪಲಿ ಹುಡುಕಿ ಹಾಕಿಕೊಳ್ಳುವಾಗ ಹೂಗಳೆಲ್ಲ ಬಿದ್ದು ಬಿದ್ದು ನಕ್ಕಿದ್ದು ಪುಟ್ಟಿಯರಿಗೆ ಮಾತ್ರ ಕೇಳುತ್ತಿದೆ! ■






ಸನಿಹ

ಬಾಗೇಶ್ರೀ

ಒಂದು 'ಫಾರಿನ್' ಟೂರ್



ಜೆ.ಪಿ.ನಗರದ ನನ್ನ ಮನೆಯ ಬಾಲ್ಕನಿಯಲ್ಲಿ ಕುಳಿತು ಒಂದು ಕಡೆ ಕಣ್ಣು ಹಾಯಿಸಿದರೆ ಕಾಣುವುದು ಜಾಗಿಂಗ್ ಟ್ರ್ಯಾಕ್ ಇರುವ ಪ್ಲಾಸ್ಟಿಕ್‌ಮಯ ಸಣ್ಣ ಮೈದಾನ, ಬೇಜ್ ಕಲರ್ ಕೋಟು ತೊಟ್ಟ ಮ್ಯಾನೇಜ್‌ಮೆಂಟ್ ಕಾಲೇಜಿನ ಹುಡುಗರು, ಅವರ ಬೈಕುಗಳು, ಸೈಬರ್ ಸ್ಟೇಷನ್ನುಗಳು ಇತ್ಯಾದಿ. ಇನ್ನೊಂದು ಕಡೆ ಸಣ್ಣದೊಂದು ಗಲ್ಲಿ, ಒಂದಷ್ಟು ಕಸದ ರಾಶಿ, ಒಂದೆರಡು ಸೀಮೆ ಹಸುಗಳು. ಅಲ್ಲೇ ಎಲ್ಲೋ ಬಟ್ಟೆ ನೇಯುವ ಸದ್ದು - ಕಚಕ್... ಕಚಕ್...ಕಚ್.

ಜೆ.ಪಿ. ನಗರದಲ್ಲಿ ಪವರ್‌ಲೂಮಿನ ಸದ್ದು ಎಷ್ಟು 'ಫಾರಿನ್' ಅನಿಸುತ್ತದಲ್ಲ ಅಂತ ಅಂದುಕೊಂಡದ್ದುಂಟು. ಆದರೆ ಆ ಗಲ್ಲಿಯ, ಗಲ್ಲಿಯ ಆಚೆಯ ಪ್ರಪಂಚದ ಬಗ್ಗೆ ನಿಜವಾಗಿಯೂ ಕುತೂಹಲ ಹುಟ್ಟಿದ್ದು ಒಂದು ವಾರದ ಹಿಂದಷ್ಟೆ. ಊರೆಲ್ಲ ಅಲೆದರೂ ಒಂದರ್ಧ ಲೀಟರ್ ನಂದಿನಿ ಹಾಲು ಸಿಕ್ಕದೆ ಹೋದಾಗ, ನಮ್ಮ ಮನೆಯಲ್ಲಿ ಕೆಲಸ ಮಾಡುವ ಹುಡುಗಿ ಆ ಗಲ್ಲಿಯ ಕಡೆ ಬೊಟ್ಟು ಮಾಡಿ 'ಆ ಕಡೆ ಖಂಡಿತ ಸಿಗತ್ತೆ. ಆದರೆ ಅದು ನೀವು ಹೋಗೋ ಜಾಗ ಅಲ್ಲ. ನಾನೇ ಬೇಕಾದರೆ ತಂದು ಕೊಡ್ತೀನಿ' ಅಂದಳು. ಅವಳ ಮಾತು ವಿಚಿತ್ರ ಅನ್ನಿಸಿ ನೋಡೇಬಿಡುವ ಅಂತ ಅವಳ ಜೊತೆಗೆ ಹೊರಟೆ.

ಸಣ್ಣ ಸಣ್ಣ ಕಾಕಾ ಅಂಗಡಿಗಳು. ಆಟೋ ಡ್ರೈವರ್‍ರುಗಳ ಒಂದು ರೂಮಿನ ಮನೆಗಳು, ಮನೆಯೊಳಗೆ ಉದಯ ಚಾನಲ್ಲಿನ ಹಾಡು, ನಾಲ್ಕು ಜನ ಒಟ್ಟೊಟ್ಟಿಗೆ ನಡೆಯಲಾರದಷ್ಟು ಸಣ್ಣ ರೋಡುಗಳು, ಗಂಜಲದ ವಾಸನೆ, ಸೀರೆಯ ಪೆಟ್ಟಿಕೋಟಿನ ಮೇಲೆ ಚೂಡಿದಾರ್ ಟಾಪ್ ಹಾಕಿಕೊಂಡು ಮನೆ ಬಾಗಿಲ ಮುಂದೆ 501 ಬಾರ್‌ಸೋಪಿನಿಂದ ಗಸಗಸ ಬಟ್ಟೆ ಉಜ್ಜುವ ಹುಡುಗಿಯರು. ಈ ಜಾಗದ 'ಹಳ್ಳಿ ಹಿಸ್ಟರಿ' ಹೇಳುವ ಅರಳಿಕಟ್ಟೆ, ಪಕ್ಕದಲ್ಲೊಂದು ಹಳೆ ದೇವಸ್ಥಾನ... ಇವೆಲ್ಲದರ ನಡುವೆ ಅಲ್ಲೊಂದು ಇಲ್ಲೊಂದು ಎಲ್ಲಿಂದಲೋ ಕಿತ್ತು ತಂದಿಟ್ಟುಬಿಟ್ಟಂತೆ ಕಾಣುವ, ಮುಂದೆ ಸ್ಕೂಟರ್ ನಿಂತ ಟಿಪಿಕಲ್ ಮಿಡಲ್‌ಕ್ಲಾಸ್ ಮನೆ, ಯಾರೋ ಜಾಣ ಬಿಲ್ಡರ್ ತೀರ ಕಮ್ಮಿ ಬೆಲೆಗೆ ಸೈಟು ಕೊಂಡು ಕಟ್ಟಿರಬಹುದಾದ ನಾಲ್ಕು ಮಹಡಿ ಕಟ್ಟಡದ ಬಾಲ್ಕನಿಯಲ್ಲಿ ಸಾಲು ಸಾಲು ಬಟ್ಟೆಗಳು.



ನನ್ನ ಬಲಗಡೆಯ ಪ್ರಪಂಚದ 'ಫುಡ್‌ವರ್ಲ್ಡ್'ನಲ್ಲಿ ಅಂದವಾಗಿ ಪೇರಿಸಿಟ್ಟ ತರಾವರಿ ಸೋಪುಗಳು. 'ಮಯೂರ' ಬೇಕರಿಯ 15 ರೂಪಾಯಿ ಪಿಜ್ಜಾ, ಕೊನೆಗೆ ಅರಬಿಂದೋ ಆಶ್ರಮದ ಎತ್ತರದ ಗೇಟು ಎಲ್ಲ ನನಗೆ ಚಿರಪರಿಚಿತ. ಆದರೆ ಈ ಎಡ ಪ್ರಪಂಚದ ದೃಶ್ಯ, ವಾಸನೆ, ಭಾಷೆ, ಜನರ ಇರುವಿಕೆಯ ಅರಿವೂ ನನಗೆ ನೆಟ್ಟಗಿಲ್ಲವಲ್ಲ ಅನ್ನಿಸಿತು.

ಹಾಲು ತೆಗೆದುಕೊಂಡು 'ಜೋಪ್ಡಿ' ಅಂತ ಕರೆಯುವ ಸಣ್ಣ ಸ್ಲಮ್ಮೊಂದನ್ನು ಬಳಸಿಕೊಂಡು ವಾಪಾಸು ಬರುವಾಗ ನನ್ನ ಜೊತೆಗಿದ್ದ ಹುಡುಗಿ, "ನಿಮ್ಮ ಕೆಳಗಡೆ ಮನೆಯವರು ಅಲ್ಲಿಂದೆಲ್ಲ ಸಾಮಾನು ತರಬೇಡ ಅಂತ ಬೈತಾರೆ" ಅಂದಳು.

ಮಹಾನಗರಗಳ ವಿರೋಧಾಭಾಸಗಳ ಬಗ್ಗೆ ಮಾತನಾಡುವುದು ಹೈ ಸೀರಿಯಸ್ ಅಕಾಡೆಮಿಕ್ ಮಂದಿಗಿರಲಿ, ದಿನಬೆಳಗಾದರೆ BCC ಕೊಳವೆಯ ಆ್ಯಂಗಲ್ಲಿನಿಂದ ಅದರೊಳಗಿನ ಸಂಸಾರ ಹಾಗೂ ಪಕ್ಕದ ಫೈವ್‌ಸ್ಟಾರ್ ಹೋಟೆಲ್ ಎರಡನ್ನೂ ಒಂದೇ ಫ್ರೇಮಿನಲ್ಲಿ ಕ್ಲಿಕ್ಕಿಸುವ ಫೋಟೋ ಜರ್ನಲಿಸ್ಟ್‌ಗಳಿಗೂ 'ಓಲ್ಡ್ ಹ್ಯಾಟ್' ಅನ್ನಿಸೀತು! ನಿಸಾರ್ 'ಕಾಯಿ ದೇವಿಯೆ' ಪದ್ಯ ಬರೆದು 20 ವರ್ಷಗಳ ಮೇಲಾಗಿರಬಹುದು.

ಆದರೂ, ಜಗತ್ತಿನ ಯಾವ ಪಟ್ಟಣಕ್ಕೆ ನಾನು ಕಡಿಮೆ ಇಲ್ಲ ಎಂಬ ಹುಂಬ ಧೈರ್ಯದಿಂದ ಕೆಂಟಕಿಯ ಚಿಕನ್ನು, ಇಟಲಿಯ ಶರ್ಟು, ಚೀನಾದ ಗೊಂಬೆ, ಜಪಾನಿ ಕಂಪ್ಯೂಟರ್‍ರು, ಕವರಿನಲ್ಲಿ ಅರೆದು ರೆಡಿಯಾದ ದೋಸೆಹಿಟ್ಟು ಎಲ್ಲವನ್ನೂ ಮನೆ ಬಾಗಿಲಿಗೆ ತಂದಿಡುವ ಬೆಂಗಳೂರೆಂಬ ಮಾಯಾನಗರಿಯಲ್ಲಿ ಧುತ್ತನೆ ಪ್ರತ್ಯಕ್ಷವಾಗಿಬಿಡುವ ಈ ಎಲ್ಲ ಸೌಕರ್ಯ-ಶ್ರೀಮಂತಿಕೆಗಳ ಆ್ಯಂಟಿಥೀಸಿಸ್ ಒಂದು ಕ್ಷಣ ತಬ್ಬಿಬ್ಬು ಮಾಡಿಬಿಡುತ್ತದೆ. ಕಮರ್ಷಿಯಲ್ ಸ್ಟ್ರೀಟಿನ ಥಳುಕು ಬಳುಕು, ಕ್ರೆಡಿಟ್ ಕಾರ್ಡು, ಇಂಗ್ಲಿಷುಗಳ ಎರಡೇ ಗಲ್ಲಿಯಾಚೆಯಲ್ಲಿ ತಮಿಳು, ಉರ್ದು, ಬಡತನ, ಕೊಳಚೆ ಇದೆ. ಹಡ್ಸನ್ ಸರ್ಕಲ್ಲಿನಿಂದ ಸ್ವಲ್ಪ ಒಳಗೆ ನುಗ್ಗಿ ಕಬ್ಬನ್ ಪೇಟೆ ಹೊಕ್ಕರೆ ಬೇರೆಯೇ ವಿಶ್ವ! ನಮ್ಮ ಖಾಸಾ ಸಿಲಿಕಾನ್ ವ್ಯಾಲಿಯ ಐಟಿ ನೀತಿ ಬರೆಯುವ ಪಂಡಿತರಿಗೆ, ಬೆಂಗಳೂರು ನಗರ ಜೀವನದ ಬಗ್ಗೆಯೇ ವಿಶೇಷ ಸಪ್ಲಿಮೆಂಟುಗಳನ್ನು ತರುವ ಪತ್ರಿಕೆಗಳಿಗೆ, ಈ 'ಬೇರೆ' ಪ್ರಪಂಚಗಳು ಬೆಂಗಳೂರಿನ ಭಾಗಗಳೇ ಅಲ್ಲ.

ಹೀಗೆಲ್ಲ ಯೋಚಿಸುತ್ತಾ, ಜೋಪ್ಡಿ, ಅರಳಿಮರ, ರಿಕ್ಷಾ ಡ್ರೈವರ್ ಮನೆಯೊಳಗಿನ 'ಪಾರ್ವತಿ' ಸೀರಿಯಲ್ಲು ಎಲ್ಲದರ ಮೇಲೆ ಒಂದು ಟೂರಿಸ್ಟ್ ದೃಷ್ಟಿ ಹಾಯಿಸಿ ಬಂದು, ನನ್ನ ಎರಡನೆ ಮಹಡಿಯ ಫ್ಲಾಟಿನ ಬಾಲ್ಕನಿಯಲ್ಲಿ ಬರೆಯಲು ಕೂರುತ್ತೇನೆ.

ಪಾರ್ಕಿನ ಜಾಗಿಂಗ್ ಮಂದಿಯೆಲ್ಲ ಮನೆ ಸೇರಿದ್ದಾರೆ. ಅಲ್ಲಿ ಒಬ್ಬ ಪಟಾಪಟಿ ಚಡ್ಡಿಯ ಮುದುಕಪ್ಪ, ಅವನ ಕುರಿಮಂದೆ ಮಾತ್ರ ಇವೆ. ಹುಲ್ಲೇ ಕಾಣದ ಈ ಮೈದಾನದಲ್ಲಿ ಕುರಿಗಳೇನು ಪ್ಲಾಸ್ಟಿಕ್ ತಿನ್ನಲಿಕ್ಕೆ ಕಲಿತುಬಿಟ್ಟವೆಯೊ? ನನ್ನ ಫ್ಲಾಟಿರುವ ಜಾಗದಲ್ಲಿ ಒಂದಾನೊಂದು ಕಾಲದಲ್ಲಿ ಈ ಮುದುಕಪ್ಪನ ಕಡಲೆಕಾಯಿ ಹೊಲ ಇದ್ದಿರಬಹುದಾ? ಹೀಗೆ ಒಂದೆರಡು ಪ್ರಶ್ನೆಗಳು ತಲೆಯಲ್ಲಿ ಮಿಂಚಿ ಮಾಯವಾಗುತ್ತವೆ.

■

ಹೊಸ ತಲೆಮಾರಿನ ಸೂಕ್ಷ್ಮ ದೃಷ್ಟಿ, ಸರ್ವಗ್ರಾಹಿ ಸಂವೇದನೆ, ಸಹಜ ಅನುಕಂಪದ ಬಾಗೇಶ್ರೀ ಸಾಹಿತ್ಯದ ವಿದ್ಯಾರ್ಥಿ. ಸಂಗೀತಜ್ಞೆ, ಪತ್ರಕರ್ತೆ. ಆಗಾಗ 'ಸನಿಹ'ದಲ್ಲಿ 'ಝೂಮ್ ಇನ್' ಆಗಲಿದ್ದಾರೆ.

ಲೇಖಕನೇ ವಿಮರ್ಶಕನಾದಾಗ...

ಕನ್ನಡದಲ್ಲಿ ಕತೆ, ಕವಿತೆ, ನಾಟಕಗಳನ್ನು ಬರೆದು, ಕ್ರಮೇಣ ಅದನ್ನು ನಿಲ್ಲಿಸಿ ಪೂರ್ಣ ಪ್ರಮಾಣದ ವಿಮರ್ಶಕರಾದವರಿದ್ದಾರೆ. ಕೀರ್ತಿನಾಥ ಕುರ್ತಕೋಟಿ, ಎಲ್.ಎಸ್. ಶೇಷಗಿರಿ ರಾವ್, ಜಿ.ಎಸ್. ಆಮೂರ, ಓ.ಎಲ್. ನಾಗಭೂಷಣ ಸ್ವಾಮಿ, ಗಿರಡ್ಡಿ ಗೋವಿಂದರಾಜ... ಹೀಗೆ. ಇವರೆಲ್ಲ ಮನಸ್ಸು ಮಾಡಿದ್ದರೆ ಸೃಜನಶೀಲ ಲೇಖಕರಾಗಿಯೂ ಬೆಳೆದು ನಿಲ್ಲಬಹುದಿತ್ತು. ಯಾಕೋ ಇವರು ವಿಮರ್ಶೆಯನ್ನೆ ನೆಚ್ಚಿಕೊಂಡರು. ರಾಜೇಂದ್ರ ಚೆನ್ನಿಯಂಥವರು ವಿಮರ್ಶೆಯನ್ನು ಕಡಿಮೆ ಮಾಡಿ ಕಥನ ಕ್ಷೇತ್ರಕ್ಕೆ ಹೊರಳಿದರು.

ನಮ್ಮ ಕುತೂಹಲ ಇಷ್ಟೆ, ವಿಮರ್ಶಕನೊಳಗಿನ ಸುಪ್ತ ಸೃಜನಶೀಲ ಬರಹಗಾರ-ವಿಮರ್ಶೆಯಲ್ಲಿ ಯಾವ ಪಾತ್ರವಹಿಸುತ್ತಾನೆ?

ಇದಕ್ಕೆ ಈ ಐವರು 'ವಿಮರ್ಶಕ-ಲೇಖಕ'ರು ಇಲ್ಲಿ ಪ್ರತಿಸ್ಪಂದಿಸಿದ್ದಾರೆ.

ಸಹ-ಮತ

ಕೀರ್ತಿನಾಥ ಕುರ್ತಕೋಟಿ

ವಿಮರ್ಶೆಯೇ ಸಾಹಿತ್ಯವಾಗುವ ಹವಣಿಕೆಯಲ್ಲಿ...



'ಆ ಮನಿ' ನಾಟಕ ಬರೆದಿದ್ದ ಕೀರ್ತಿನಾಥ ಕುರ್ತಕೋಟಿ ಕನ್ನಡದ ರಸಗ್ರಾಹಿ ವಿಮರ್ಶಕ.

ಯಾವ ಲೇಖಕನೂ ತನ್ನ ಬರವಣಿಗೆಯನ್ನು ವಿಮರ್ಶೆಯಿಂದ ಪ್ರಾರಂಭಿಸುವದಿಲ್ಲ. ಈ ಮಾತಿಗೆ ನಾನೂ ಅಪವಾದವಲ್ಲ. ಎಲ್ಲರಂತೆ ನಾನೂ ಕವಿತೆಗಳನ್ನು ಬರೆಯುವದರಿಂದ ಪ್ರಾರಂಭಿಸಿದೆ. ಕಾಲೇಜಿನಲ್ಲಿದ್ದಾಗಲೇ ನಾವು ಮೂವರು ಕಪಿಗಳು ಕೂಡಿಕೊಂಡು 'ಗಾನಕೇಳಿ' ಎಂಬ ಒಂದು ಸಂಗ್ರಹವನ್ನೂ ಪ್ರಕಟಿಸಿದೆವು. ಒಂದು ಹೊಸ ಉಪಮಾನ ಹೊಳೆದರೆ ನಿಧಿ ಸಿಕ್ಕ ಅನುಭವವಾಗುವಂಥ ವಯಸ್ಸು ನಮ್ಮದು. ಕಾವ್ಯವಲ್ಲದೆ ಕತೆಗಳನ್ನೂ ಬರೆದೆ. ನನ್ನ ಮೊದಲ ನಾಟಕ 'ಆ ಮನಿ' ಬರೆದಾಗ ನನಗೆ ಇನ್ನೂ ಇಪ್ಪತ್ತೆಂಟು ವರ್ಷಗಳಾಗಿದ್ದವು. ಗಂಗಾಧರ ಚಿತ್ತಾಲರ ಎದುರು ಒಂದು ಕಥನಕವನವನ್ನು ಓದಿದಾಗ ''You must come out of this charmed circle'' ಎಂದು ಅವರು ಹೇಳಿದ್ದರು. ಅದನ್ನು ನಾನು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ ನಿಜ. ಆದರೆ ಅವರು ಹೇಳಿದಂತೆ ನಾನು ವಿಮರ್ಶೆಯ ಕ್ಷೇತ್ರದಲ್ಲಿ ಆಕಸ್ಮಿಕವಾಗಿ ಪ್ರವೇಶಿಸಿದೆ.

ಮನೋಹರ ಗ್ರಂಥಮಾಲೆಯ ಬೆಳ್ಳಿಹಬ್ಬದ ನೆನಪಿಗಾಗಿ 'ನಡೆದು ಬಂದ ದಾರಿ'ಯ ಸಂಪುಟಗಳನ್ನು ಸಂಪಾದಿಸಬೇಕಾಗಿ ಬಂತು. ಆಧುನಿಕ ಕನ್ನಡ ಸಾಹಿತ್ಯದ ನನ್ನ ಇತಿಹಾಸ ಪ್ರಬಂಧಗಳು ಈ ಸಂಪುಟಗಳಲ್ಲಿ ಪ್ರಕಟವಾದಾಗಲೇ ನಾನು ವಿಮರ್ಶಕನಾಗಿ ಹೊರಬಂದೆ. ಬರೆದದ್ದೆಲ್ಲ ಕನಸಿನಲ್ಲಿ, ಆದರೂ ಎಚ್ಚತ್ತದ್ದು ವಿಮರ್ಶೆಯಲ್ಲಿ.

ವಿಮರ್ಶೆಯನ್ನು ಸೃಜನಶೀಲವಾದ ತನ್ಮಯತೆಯಲ್ಲಿಯೇ ನಾನು ಬರೆದದ್ದು. ಬರೆದಾಗ ನಾನು ಗುಜರಾತದಲ್ಲಿ ಕೆಲಸ ಮಾಡುತ್ತಿದ್ದೆ. ಒಂದೇ ಒಂದು ಗ್ರಂಥ ಕೂಡ ನನ್ನ ಬಳಿ ಇರಲಿಲ್ಲ. ಬರೆದದ್ದೆಲ್ಲ ನೆನಪಿನ ಆಧಾರದಿಂದ. ಇದು ಅತ್ಯಂತ ಸೃಜನಶೀಲವಾದ ವ್ಯಾಪಾರವಾಗಿತ್ತು. ವಿಮರ್ಶೆಯ ಶಿಸ್ತನ್ನು ನಾನು ಕಲಿತಿರಲಿಲ್ಲ. ಮುಂದೆ ಕೂಡ ಕಲಿತೆನೆಂದು ನಿಶ್ಚಿತವಾಗಿ ಹೇಳಲಾರೆ. ನನ್ನ ವಿಮರ್ಶೆಯ ರೀತಿ ಯಾವದು, ನನ್ನ ಮೇಲೆ ಪ್ರಭಾವ ಬೀರಿದ ವಿಮರ್ಶಕ ಯಾರು, ಸಾಹಿತ್ಯದಲ್ಲಿ ನಾನು ಏನು ಹುಡುಕುತ್ತಿದ್ದೇನೆ-ಈ ಮೊದಲಾದ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿಲ್ಲ. ಸಾಹಿತ್ಯದ ಬಗ್ಗೆ ನನಗಿದ್ದ ಪ್ರೀತಿಯಲ್ಲಿ ಈಗ ಕೂಡ ಎಳ್ಳಷ್ಟೂ ಕಡಿಮೆಯಾಗಿಲ್ಲವೆಂದು ಮಾತ್ರ ಹೇಳಬಲ್ಲೆ. ಕೃತಿನಿಷ್ಠತೆಯೇ ಬಹುಶಃ ನನ್ನ ವಿಮರ್ಶೆಯ ಲಕ್ಷಣವಾಗಿರಬಹುದು. ಈ ವಯಸ್ಸಿನಲ್ಲಿ ಕೂಡ ಒಬ್ಬ ಹುಡುಗವಯಸ್ಸಿನ ಕವಿ ಒಳ್ಳೆಯ ಕವಿತೆಯನ್ನು ತೋರಿಸಿದರೆ ನಾನು ಮುಗ್ಧನಾಗುತ್ತೇನೆ.



ವಿಮರ್ಶೆ ಇಂದು ಪ್ರಕಟವಾಗುವದು ಒಂದು ಪ್ರಬಂಧದ ರೂಪದಲ್ಲಿ. ಹಿಂದಿನ ಕಾಲದಲ್ಲಿಯಂತೆ ಶ್ರೇಷ್ಠ ಗ್ರಂಥಗಳಿಗೆ ಭಾಷ್ಯವನ್ನು ಯಾರೂ ಬರೆಯುವುದಿಲ್ಲ. ಭಾಷ್ಯ ಎಂದರೆ ಕೃತಿಯ ಪಠ್ಯದಲ್ಲಿ ಸೇರಿ ಹೋಗುತ್ತದೆ. ಆದರೆ ವಿಮರ್ಶೆ ತಾನೇ ಒಂದು ಪ್ರತ್ಯೇಕವಾದ, ಸ್ವತಂತ್ರವಾದ ಪಠ್ಯವಾಗಿ ನಿಲ್ಲುತ್ತದೆ. ಇದರಿಂದಾಗಿ ಸೃಜನಶೀಲ ಸಾಹಿತ್ಯ ಮತ್ತು ವಿಮರ್ಶೆ ಇವುಗಳ ನಡುವಿನ ಸಂಬಂಧ ಹೆಚ್ಚು ಸೂಕ್ಷ್ಮವಾಗಿ, ಗಹನವಾಗುತ್ತದೆ. ವಿಮರ್ಶೆ ಸೃಜನಶೀಲ ಬರವಣಿಗೆಯ ತಾಂತ್ರಿಕ ಸಾಮಗ್ರಿಯನ್ನು ಬಳಸಿಕೊಳ್ಳುವುದಿಲ್ಲ. ಆದರೆ ಸೃಜನಶೀಲವಾದ ಕೃತಿಯ ನೆನಪು ವಿಮರ್ಶೆಯನ್ನೂ ಸೃಜನಶೀಲವಾಗಿಸುತ್ತದೆ. ತಾನು ವಿಮರ್ಶಿಸುವ ಕೃತಿಯನ್ನು ತಾನು ಹೀಗೆ ಬರೆಯಬಹುದಾಗಿತ್ತು ಎಂದು ವಿಮರ್ಶಕ ಯೋಚಿಸುತ್ತಲೇ ಆ ಕೃತಿಯನ್ನು ವಿಶ್ಲೇಷಿಸುತ್ತಾನೆ. ಇದೊಂದು ವೈಯಕ್ತಿಕವಾದ ಕೊಡುಕೊಳು ನಡೆಯುತ್ತದೆ. ಅಲ್ಲದೆ ತನ್ನ ವಿಮರ್ಶೆಯನ್ನು ಇನ್ನೊಬ್ಬರು ಓದಬೇಕು ಎಂಬ ತವಕ ವಿಮರ್ಶಕನಿಗೂ ಇರುತ್ತದೆ. ಇದ್ದರೆ ತಪ್ಪೇನಿಲ್ಲ. ವಿಮರ್ಶೆಯ ಕರ್ತವ್ಯವೆಂದು ಅವನು ಕೃತಿಯನ್ನು ವಿಶ್ಲೇಷಿಸಬಹುದು, ಬೆಲೆಗಟ್ಟಬಹುದು. ಆದರೆ ಇವುಗಳನ್ನು ಮೀರಿ ಅವನು ಕೃತಿಯೊಡನೆ ಒಂದಾಗುತ್ತಾನೆ, ಒಂದು ರೀತಿಯಲ್ಲಿ ಕೃತಿಯನ್ನು ಪುನಃ ಸೃಷ್ಟಿಸುತ್ತಾನೆ.

ಅಲ್ಲದೆ ಈಗ ವಿಮರ್ಶೆಯ ಗುರಿಗಳೂ ಬದಲಾಗಿವೆ. ವಿಶ್ಲೇಷಣೆ ಮತ್ತು ಮೌಲ್ಯಮಾಪನವನ್ನು ಮೀರಿ ಹೋಗಿ ಸಾಹಿತ್ಯದ ಸಾಂಸ್ಕೃತಿಕ ಮಹತ್ವದ ಕಡೆಗೆ ವಿಮರ್ಶಕ ಲಕ್ಷ್ಯ ವಹಿಸುತ್ತಿದ್ದಾನೆ. ಹಳೆಯದು ಹೊಸದು, ಜನಪರ, ವ್ಯಕ್ತಿನಿಷ್ಠ, ಪ್ರಗತಿಶೀಲ ಪ್ರತಿಗಾಮಿ ಮೊದಲಾದ ದ್ವಂದ್ವಗಳು ಈಗ ವಿಮರ್ಶೆಯನ್ನು ಕಾಡುತ್ತಿವೆ. ಸಾಹಿತ್ಯದಲ್ಲಿ ಪ್ರಸ್ತುತತೆಯನ್ನು ಹುಡುಕುವದೆಂದರೆ ತತ್ವಜ್ಞಾನಿಗಳು ಆತ್ಮವನ್ನು ಹುಡುಕಿದಂತೆ. ವಿಮರ್ಶೆ ಈ ವಿಫಲ ವ್ಯಾಪಾರಗಳಿಂದ ಮುಕ್ತವಾಗಿ ಸಾಹಿತ್ಯದ ಜೊತೆಗೆ ಪ್ರೀತಿಯ ನಂಟನ್ನು ಬೆಳೆಸಿಕೊಳ್ಳಬೇಕಾಗಿದೆ. ಸಾಹಿತ್ಯ ಸೃಷ್ಟಿಯಲ್ಲಿ ಯಾವ ಒಂದು ಅಂಗವೂ ಮುಖ್ಯ ಅಥವಾ ಅಮುಖ್ಯವಲ್ಲ, ಅಲ್ಲಿ ಅಂತರಂಗ ಬಹಿರಂಗಗಳಿಲ್ಲ. ಅದರ ಆಸ್ವಾದ್ಯತೆ ಅಖಂಡವಾದದ್ದು. ವಿಮರ್ಶೆಯ ಈ ಹವ್ಯಾಸಗಳೆಲ್ಲ ಸಾಹಿತ್ಯದಿಂದ ಬಳುವಳಿಯಾಗಿ ಬಂದಿವೆ. ಅಥವಾ ವಿಮರ್ಶೆಯೇ ಸಾಹಿತ್ಯವಾಗುವ ಹವಣಿಕೆಯಲ್ಲಿರುತ್ತದೆ.



ಕವಿತೆಗಳನ್ನು ಬರೆದಿದ್ದ ಓ.ಎಲ್. ನಾಗಭೂಷಣ ಸ್ವಾಮಿ ಹೊಸ ಸಂವೇದನೆಯ ವಿಮರ್ಶಕ.

ಓ.ಎಲ್. ನಾಗಭೂಷಣಸ್ವಾಮಿ

ಬರವಣಿಗೆ, ಮಾತು ಎಲ್ಲ ಉಲಿಯ ವಕ್ಷದ ಎಲೆಗಳು

ಕವಿತೆ, ಕತೆ ಬರೆಯುವುದು-ವಿಮರ್ಶೆ ಬರೆಯುವುದು ಎರಡೂ ಬೇರೆ ಬೇರೆ ತರಹದ್ದು ಹೌದೋ? ವಾದಕ್ಕೆಂದು ಹೌದು ಅನ್ನಬಹುದು, ಅಲ್ಲ ಅಂತಲೂ ಅನ್ನಬಹುದು. ವಾದ ಬೇಡ. ಬರವಣಿಗೆ ಅನ್ನುವುದೇ ಕೃತಕ, ಅಸಹಜ. ಅಂದರೂ ಎರಡೂ ಥರದ ಬರವಣಿಗೆ ಇದೆ. ಒಂದು ನನ್ನ ಪಾಡಿಗೆ ಬರೆದುಕೊಂಡದ್ದು, ಇನ್ನೊಂದು ಬೇರೆಯವರು ಹೇಳಿದರೆಂದು, ಬೇರೆಯವರಿಗೆಂದು ಬರೆದದ್ದು. ನನ್ನ ಪಾಡಿಗೆ ಬರೆದುಕೊಂಡದ್ದು ಖುಷಿ, ಇನ್ನೊಬ್ಬರಿಗೆಂದು ಬರೆದದ್ದು ಜವಾಬ್ದಾರಿ, ಹೊಣೆ, ಭಾರ. ಒಂದು ರೀತಿಯ ಬರವಣಿಗೆಯಲ್ಲಿ ಬಿಡುಗಡೆ, ಇನ್ನೊಂದರಲ್ಲಿ ಯಾರು ಯಾರೋ ನಿರ್ದೇಶಕರು ಕೊಟ್ಟ ಪಾತ್ರದ ನಿರ್ವಹಣೆ. ಬೇರೆಯವರಿಗಾಗಿಯೇ ಬರೆಯುವಾಗ ಅವರನ್ನು ಒಪ್ಪಿಸಬೇಕೆಂಬ ಹಟ, ಸಮರ್ಥಿಸಿಕೊಳ್ಳುವ ಆಸೆ, ನಾನು ಬರೆಯುವ ರೀತಿ ಅವರಿಗೆ ಇಷ್ಟವಾಗದಿದ್ದರೆ ಎಂಬ ಆತಂಕ ಇವೆಲ್ಲವೂ ಇರುತ್ತವೆ. ನನ್ನ ಪಾಡಿಗೆ ಬರೆದುಕೊಂಡಾಗ ಇದನ್ನು ಓದಲು ನನ್ನಂಥವರೇ ಸಿಗಲಿ ಎಂಬ ಆಸೆ, ಇತರ ಓದುಗರಿಗೆ ನನ್ನ ಬರವಣಿಗೆ ಸಮರ್ಪಕವಾಗಿ ಅರ್ಥವಾಗದಿದ್ದರೆ ಎಂಬ ಅಳುಕು ಇರುತ್ತವೆ.

ನಾನು ಓದಿದ ಕತೆ-ಕವಿತೆಗಳೆಲ್ಲ ನನ್ನವೇ ಅನ್ನಿಸತೊಡಗಿದಾಗ ಕತೆ ಕವಿತೆಗಳನ್ನು ಬರೆಯುವುದು ಕಡಿಮೆಯಾಯಿತು. ಓದಿಕೊಂಡದ್ದೂ ನನ್ನ ಮನಸ್ಸಿನಲ್ಲಿ ನಾನು ನನ್ನ ಇಷ್ಟದ ಹಾಗೆ ಬರೆದುಕೊಂಡದ್ದೇ ಅಲ್ಲವೆ? ನನ್ನ ಇಷ್ಟಾರ್ಥವನ್ನು ಕೊಂಚಮಟ್ಟಿಗಾದರೂ ಬರೆದು ತಿಳಿಸುವುದಕ್ಕೆ ಸಾಧ್ಯವಾದರೆ ಅಂಥ ಬರವಣಿಗೆಗೆ ಕವಿತೆ ಅಂತ ಕರೆದರೇನು, ಕತೆ ಅಂತ ಹೆಸರಿಟ್ಟರೇನು? ವಿಮರ್ಶೆ ಎಂಬ ಲೇಬಲ್ಲು ಹಚ್ಚಿದರೇನು, ಇದು ಅನುವಾದ ಎಂದು ಹೇಳಿದರೇನು? ಹೀಗೆಂದುಕೊಂಡಾಗ ನಾನು ಬರೆಯುತ್ತಿದ್ದೇನೆ ಅಷ್ಟೆ ಅಂತ ಮಾತ್ರ ಹೇಳಬಹುದು.

‘ನನಗೆ ಗೊತ್ತಿದೆ, ಗೊತ್ತಿರುವುದನ್ನು ಬೇರೆಯವರಿಗೆ ಹೇಳಬೇಕು’ ಅಂದುಕೊಂಡು ಬರೆದದ್ದು ಯಾವುದೂ ಚೆನ್ನಾಗಿ ಆಗಿಲ್ಲ. ನನಗೆ ಗೊತ್ತಿಲ್ಲ, ಗೊತ್ತುಮಾಡಿಕೊಳ್ಳಲೆಂದು ಬರೆಯುತ್ತೇನೆ, ಮಾತಾಡುತ್ತೇನೆ. ಭಾಷೆ, ಊರು, ಜನ ಯಾವುದೂ ಗೊತ್ತಿಲ್ಲದ ಇರುವ ಹೊಸ ಎಡೆಗೆ ಹೋಗಿ ಬದುಕುವ ಸಂದರ್ಭ ಬಂದಾಗ ನಮ್ಮಲ್ಲಿ ಇಡಿಯಾಗಿ ಎಚ್ಚರ, ಇಡಿಯಾಗಿ

ಕಾತರ, ಇಡಿಯಾಗಿ ಮುಂದಿನ ಕ್ಷಣದ ಬಗ್ಗೆ ನಿರೀಕ್ಷೆ ಇರುತ್ತದಲ್ಲ ಅಂಥದು, ಬರೆಯುವಾಗ, ಮಾತಾಡುವಾಗ ಕೆಲವೊಮ್ಮೆ ಇರುತ್ತವೆ. ಹೊಸ ಮನೆಯಲ್ಲಿ ಓಡಾಡುವ ಬೆಕ್ಕು, ಹೊಸತಾಗಿ ಹೆಜ್ಜೆ ಇಡಲು ಕಲಿತ ಮಗು-ಹಾಗೆ ಒಂದೊಂದು ಭಾವಕ್ಕೂ ಒಂದೊಂದು ನೋಟಕ್ಕೂ ಒಂದೊಂದು ಪದ ಕಂಡುಕೊಳ್ಳುತ್ತ ಬರೆಯುತ್ತ ಹೋಗುವುದು ಬಹು ದೊಡ್ಡ ಬಿಡುಗಡೆಯ ಸಂಗತಿ. 'ನನ್ನ ಹಿಮಾಲಯ' ಬರೆಯುವಾಗ ಹಾಗೆ ಬರೆದೆ, ಕತೆ ಬರೆದಾಗ ಹಾಗೆಯೇ ಬರೆದೆ. ಬೇಂದ್ರೆಯವರ ಕವಿತೆಗಳನ್ನು ಕುರಿತು ಬರೆಯುವಾಗ, ವಚನಗಳನ್ನು ಕುರಿತು ಬರೆಯುವಾಗ ಹಾಗೆಯೇ ಬರೆದೆ, 'ಕನ್ನಡಕ್ಕೆ ಬಂದ ಕವಿತೆ' ಅನುವಾದವೂ ಹಾಗೆಯೇ ಅನ್ನಿಸಿದ್ದು.

ಸಂವಾದ ಎಂಬ ಮಾತಿದೆಯಲ್ಲವೆ. ನನಗೆ ಇಷ್ಟವಾಗಿರುವ ನನ್ನ ಬರವಣಿಗೆ ಅಂಥ ಸಂವಾದದ್ದು. ಒಪ್ಪಿಸಬೇಕೆಂಬ ಹಟ ಇಲ್ಲದೆ, ಇದು ನಾನು ಕಂಡದ್ದು ಎಂಬ ಅಹಂಕಾರ ಇಲ್ಲದೆ, ಯಾವುದೇ ಆತಂಕ ಇಲ್ಲದೆ ಇಬ್ಬರ ಮನಸ್ಸು ಕೃತಿಯಾಗಿ ಸುಮ್ಮನೆ ಆಡಿಕೊಳ್ಳುವ ಮಾತುಗಳಿಂದ ಪರಸ್ಪರ ಮತ್ತು ಸ್ವತಃ ತಿಳಿದುಕೊಳ್ಳುತ್ತೇವಲ್ಲ, ಅದು ಸಂವಾದ. ನಾನು ಬರೆದ 'ಉಲಿಯ ಉಯ್ಯಾಲೆ' ಎಂಬ ವಚನ ಮತ್ತು ಕಾವ್ಯ ಮೀಮಾಂಸೆಯನ್ನು ಕುರಿತ ಲೇಖನ, 'ಇಂದಿನ ಹೆಜ್ಜೆ'ಯ ಬಹುಪಾಲು ಲೇಖನ, ಹಾಗೆ ಗೆಳೆಯರೊಡನೆ ನಡೆಸಿದ ಸಂವಾದಗಳಿಂದ ಬರವಣಿಗೆಗೆ ಇಳಿದುಬಂದವು. ಇನ್ನೊಂದು ನನ್ನೊಡನೆ ನಾನೇ ನಡೆಸುವ ಸಂವಾದಗಳಿವೆ. ಅವು ಕವಿತೆಗಳಾಗುತ್ತವೆ. ಮತ್ತೊಂದು ಬಗೆಯ ಸಂವಾದವಿದೆ. ಅದು ಎರಡು ಭಾಷೆಗಳ ನಡುವಿನ ಸಂವಾದ. ಅವು ಅನುವಾದವಾಗುತ್ತವೆ. 'ಬೇರೆಯವರ' ಬರವಣಿಗೆಗಳೊಡನೆ ಶಿಷ್ಟಾಚಾರಕ್ಕೆ ಮಾತ್ರ ನಡೆಸಿದ ಮಾತುಕತೆ ಅನೇಕ ಬಾರಿ ಅಪಾರ್ಥಕ್ಕೆ ಎಡೆಗೊಡುವ ರೆಪ್ಪುಗಳಾಗುತ್ತವೆ. ಇದೂ ನನ್ನದೇ ಬರವಣಿಗೆ ಎಂದುಕೊಂಡು ಓದಿದ ಬರವಣಿಗೆಗಳ ಬಗ್ಗೆ ವಿಮರ್ಶೆ ಬರೆಯುವುದಕ್ಕಿಂತ ಸುಮ್ಮನೆ ಅದನ್ನು ಮೆಚ್ಚಿಕೊಳ್ಳುತ್ತಾ, ಮೆಚ್ಚಿಗೆಯನ್ನು ಇತರ ಗೆಳೆಯರೊಡನೆ ಹಂಚಿಕೊಳ್ಳುತ್ತ ಇರುವುದು ಆಗುತ್ತದೆ. ನಾನು ದೂರ ನಿಂತು, ಬೇರೆ ನಿಂತು ನೋಡುತ್ತಾ ತಿಳಿದುಕೊಳ್ಳುತ್ತಾ ಬರೆದದ್ದು 'ವಿಮರ್ಶೆಯ ಪರಿಭಾಷೆ'ಯಂಥ ಹಟದ ಸಾಧನೆಯಾಗುತ್ತದೆ.

ಬರವಣಿಗೆ, ಮಾತು ಎಲ್ಲ ಉಲಿಯ ವೃಕ್ಷದಿಂದ ಉದುರಿದ ಎಲೆಗಳು. ಮರ ಯಾಕೆ ಸುಮ್ಮನೆ ಉದುರಿದ ಎಲೆಗಳ ನೆನಪನ್ನು ಹೊತ್ತುಕೊಂಡಿರಬೇಕು. ಬೇಡ. ಆದರೂ ನಾನು ಮರವಲ್ಲವಾದ್ದರಿಂದಲೇ ಬರೆದದ್ದರ ಬಗ್ಗೆ ಮೋಹ, ಬರೆಯಲು ಆಯಿತಲ್ಲ ಎಂಬ ಅಹಂಕಾರ ಎರಡೂ ಇವೆ. ನನ್ನ ಎಲ್ಲ ಬರವಣಿಗೆಯ ಹಿಂದೆಯೂ ಈ ಮೋಹ, ಈ ಅಹಂಕಾರ ಇವೆ. ಅವು ಇಲ್ಲವಾದಾಗ ಶಬ್ದಮುಗ್ಧನಾದೇನು. ಆ ಸ್ಥಿತಿ ಹೇಗಿರುತ್ತದೆ ಎಂದು ಗೊತ್ತಿಲ್ಲ. ಹಟ, ಆಸೆ, ಅಳುಕು ಮತ್ತು ಆತಂಕಗಳಿಲ್ಲದೆ ನಿರಾಳವಾಗಿ ಬರೆಯಬೇಕೆಂಬ, ಅಪಾರ್ಥಕ್ಕೆ ಒಳಗಾದೇನೆಂಬ ಭೀತಿಯನ್ನು ಮೀರಿದ ಬರವಣಿಗೆ ಸಾಧ್ಯವಾಗಬೇಕೆಂಬ ಅಪೇಕ್ಷೆ ಮಾತ್ರ ಇನ್ನೂ ಇದೆ.



'ಮುಯ್ಯಿ' ಕಥಾಸಂಗ್ರಹ ಪ್ರಕಟಿಸಿದ ಎಲ್.ಎಸ್. ಶೇಷಗಿರಿರಾವ್ ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ.

ಎಲ್.ಎಸ್. ಶೇಷಗಿರಿ ರಾವ್

ಕೃತಿ ಬದುಕಿಗೇನು ಕೊಡುತ್ತದೆ ಎಂಬುದು ಮುಖ್ಯ

ನಾನು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ಕಥೆಗಾರನಾಗಿ. ವಾಸ್ತವವಾಗಿ 14-15ನೆ ವಯಸ್ಸಿನಲ್ಲಿ ಬರೆದ ಬಾಲಿಶ ಕಥೆಗಳು ನನ್ನ ತಂದೆಯವರ ಸ್ನೇಹಿತರ ಪ್ರೀತಿಯಿಂದಾಗಿ ಪತ್ರಿಕೆಗಳಲ್ಲಿ ಪ್ರಕಟವಾದರೂ, ವಾಸ್ತವವಾಗಿ ಕಥೆ ಎಂದು ಕರೆಯಬಹುದಾದ ನನ್ನ ಬರಹ ಮೊದಲು ಪ್ರಕಟವಾದದ್ದು 'ಕತೆಗಾರ' ಮಾಸಪತ್ರಿಕೆಯಲ್ಲಿ. ನನ್ನ ಮೊದಲ ಪ್ರಕಟವಾದ ಪುಸ್ತಕ 'ಇದು ಜೀವನ' (1948), ಸಣ್ಣ ಕಥೆಗಳ ಸಂಗ್ರಹ. ಇದೇ ದಿನಗಳಲ್ಲಿ ಆಗ ಜನಪ್ರಿಯವಾಗಿದ್ದ 'ಕತೆಗಾರ' ಮಾಸಪತ್ರಿಕೆ, 'ಕನ್ನಡ ನುಡಿ' ಮೊದಲಾದ ಪತ್ರಿಕೆಗಳಿಂದ ಕೃತಿ ವಿಮರ್ಶೆ ಮಾಡುವ ಆಹ್ವಾನ ಬಂದದ್ದು ಹಲವು ಸಂದರ್ಭಗಳಲ್ಲಿ ಉಪನ್ಯಾಸ ಮಾಡುವುದಕ್ಕಾಗಿ ಸಮಕಾಲೀನ ಕನ್ನಡ ಸಾಹಿತ್ಯದ ಅಧ್ಯಯನ, ಪ್ರಗತಿಶೀಲ ಚಳವಳಿಯೂ ಅ.ನ.ಕೃ., ತ.ರಾ.ಸು., ಬಸವರಾಜ ಕಟ್ಟಿಮನಿ, ನಿರಂಜನ ಎಲ್ಲರೂ ನನಗೆ ಹತ್ತಿರದವರು. ಅದೊಂದು ಜೀವಂತ ಚಳವಳಿಯಾದ್ದರಿಂದ ಸಾಹಿತ್ಯದ ಮೂಲಭೂತ ಪ್ರಶ್ನೆಗಳನ್ನು, ಸಮಕಾಲೀನ ಕೃತಿಗಳನ್ನು ಅಧ್ಯಯನ ಮಾಡುವ ಅಗತ್ಯ ಉದ್ಭವಿಸಿ ನಾನು ವಿಮರ್ಶೆಯಲ್ಲಿ ಹೆಚ್ಚಾಗಿ ತೊಡಗಿಕೊಳ್ಳಬೇಕಾಯಿತು. ಕತೆ ಕ್ರಮೇಣ ಹಿಂದಕ್ಕೆ ಸರಿದು ವಿಮರ್ಶೆ ಆಕ್ರಮಣಶೀಲವಾಯಿತು!

ಕಥೆಗಾರನಾಗಿ ನಾನು ಸಾಹಿತ್ಯ ರಚನೆ ಪ್ರಾರಂಭಮಾಡಿದ್ದೂ ನನ್ನ ವಿಮರ್ಶೆಯ ಮೇಲೆ ಪ್ರಭಾವ ಬೀರಿದೆ ಎಂದು ನಾನು ಭಾವಿಸಿದ್ದೇನೆ. ಕಥೆಯ ಅಂಶವಿರುವ ಯಾವ ಪ್ರಕಾರದ- ಕಥನಕಾವ್ಯ, ಸಣ್ಣ ಕಥೆ, ಕಾದಂಬರಿ, ನಾಟಕ ಯಾವುದರ- ಕೃತಿಯಾಗಲಿ, ನನಗೆ ಅದರ ತಿರುಳಿನತ್ತ ಗಮನ ಹೋಗುತ್ತದೆ. ನವ್ಯ ವಿಮರ್ಶೆಯ ಪ್ರಭಾವದಲ್ಲಿ ಸ್ವಲ್ಪ ಕಾಲ ನಾನು ಕೃತಿಗಳ ತಂತ್ರಕ್ಕೆ ಹೆಚ್ಚು ಗಮನ ಕೊಟ್ಟದ್ದುಂಟು. ಆದರೆ, ಬಹು ವಿಶಾಲವಾದ, ಸಾರ್ಥಕವಾದ ಅರ್ಥದಲ್ಲಿ, ಕೃತಿಯ ನೈತಿಕತೆಯಲ್ಲಿ, ಎಂದರೆ, ಬದುಕಿನ ವಿಷಯ ಕೃತಿ ಏನು ಹೇಳುತ್ತದೆ ಎಂಬುದರಲ್ಲಿ, ಮುಖ್ಯವಾಗಿ ನನ್ನ ಆಸಕ್ತಿ. ಕೆಲವು ವರ್ಷಗಳ ಹಿಂದೆ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು ಒಂದು ಸಭೆಯಲ್ಲಿ 'ಎಲ್.ಎಸ್.ಎಸ್. ಅವರ ವಿಮರ್ಶೆ ಹೆಚ್ಚು ಹೆಚ್ಚಾಗಿ ಮಾನವೀಯ ಸಂಬಂಧ, ಮಾನವೀಯತೆಗಳ ಕಡೆಗೆ ವಾಲುತ್ತಿದೆ' ಎಂದರು; ಅದು ನಿಜವಾದ ಮಾತು ಎನ್ನಿಸುತ್ತದೆ. ಹೊರ ಜಗತ್ತಿನ ಆಗುಹೋಗುಗಳು ಮತ್ತು ವ್ಯಕ್ತಿ ಸಂಬಂಧಗಳು ವ್ಯಕ್ತಿತ್ವದ ಮೇಲೆ ಮಾಡುವ ಪರಿಣಾಮ ಮತ್ತು ಆಯ್ಕೆಯಲ್ಲಿ ವ್ಯಕ್ತಿತ್ವ ತೊಡಗಿಕೊಳ್ಳುವ ರೀತಿ, ದುಷ್ಟತನ, ಜಿಪುಣತೆ ಇವುಗಳತ್ತ ನನ್ನ ಗಮನ ಹೋಗುತ್ತದೆ. (ನನ್ನ 'ಆಸ್ತಿ'

ಕಥೆಯಲ್ಲಿ ನಿಷ್ಠ ಬ್ರಾಹ್ಮಣ ವೃದ್ಧನ ಮುಂದೆ ತೀರಿಕೊಂಡ ಮಗನ ಹೆಂಡತಿಯ ಶೀಲ, ಮೊಮ್ಮಗನ ಹುಟ್ಟು ಇವುಗಳ ಬಗ್ಗೆ ಶಂಕೆ ಮೂಡುತ್ತದೆ. ಸೊಸೆ ಮಗನಿಗಾಗಿ ಸಹಾಯ ಬೇಡುತ್ತಾಳೆ. ಈ ಸನ್ನಿವೇಶವನ್ನು ವೃದ್ಧ ಎದುರಿಸಬೇಕಾಗುತ್ತದೆ.) ಎರಡನೆಯದಾಗಿ, ಕಥೆಯ ಕೇಂದ್ರ ಅಂಶವು ಮನಸ್ಸಿನಲ್ಲಿ ಅಸ್ಪಷ್ಟವಾಗಿ ಮೂಡಿ, ನನ್ನನ್ನು ಕಾಡಿ, ಕ್ರಮೇಣ ಬೆಳೆಯುತ್ತದೆ. ಪ್ರಾರಂಭದಲ್ಲಿ ಮೂಡಿದ್ದ ಅಂಶಗಳು ಮರೆಯಾಗುತ್ತವೆ, ಮಾರ್ಪಾಡಾಗುತ್ತವೆ, ಹೊಸ ಅಂಶಗಳು ಸೇರಿಕೊಳ್ಳುತ್ತವೆ. ತಂತ್ರ ತಾನೇ ರೂಪುಗೊಳ್ಳುತ್ತದೆ. ಕಥೆಯನ್ನು ಬರೆಯಲು ಪ್ರಾರಂಭಿಸಿದ ಮೇಲೆ ಮುಗಿಸುವ ಹೊತ್ತಿಗೆ ಮಾರ್ಪಾಡುಗಳಾಗುತ್ತವೆ. ಈಚೆಗೆ ಬರೆದ 'ಜಬಾಲ ಬಂದಳು' ಅಂಥ ಕಥೆ ರೂಪ ಪಡೆದ ರೀತಿ ನನಗೇ ಬೆರಗನ್ನುಂಟುಮಾಡಿತು. ಆದುದರಿಂದ ಕಥನದ ಅಂಶವಿರುವ ಕೃತಿಯಲ್ಲಿ ಅದರ ತಂತ್ರ, ರಚನೆ, ತಂತ್ರದ ಸಾರ್ಥಕ್ಯ- ಇವೂ ಗಮನ ಸೆಳೆಯುತ್ತವೆ. ನಾನು ಬರೆದಿದ್ದರೆ ಹೇಗೆ ಬರೆಯುತ್ತಿದ್ದೆ ಎಂದು ಕೆಲವೊಮ್ಮೆ ಕೇಳಿಕೊಳ್ಳುತ್ತೇನೆ. ಟಾಲ್‌ಸ್ಟಾಯಿಯ 'ಒಬ್ಬನಿಗೆಷ್ಟು ನೆಲ ಬೇಕು?' ಕಥೆಯನ್ನು ಸುಮಾರು 65 ವರ್ಷಗಳ ಕೆಳಗೆ ಓದಿದ್ದೆ. ಇತ್ತೀಚೆಗೆ ಓದಿದಾಗ ಅದರ ರಚನೆ ನನ್ನ ಗಮನವನ್ನು ಸೆಳೆಯಿತು. ಆದರೆ, ರಚನೆ-ತಂತ್ರಗಳನ್ನು ಕುರಿತು ವಿಮರ್ಶಕನಾಗಿ ಬರೆಯುವಾಗಲೂ ಅವು ಪ್ರಮುಖವಾಗುವುದಿಲ್ಲ, ಕೃತಿ ಬದುಕಿಗೆ ಏನು ಕೊಡುತ್ತದೆ. ಪಾತ್ರದ ಸ್ವಭಾವ-ಆಯ್ಕೆಯ ಪ್ರಕ್ರಿಯೆ ಇವುಗಳ ಸಂಬಂಧವೇನು ಇವುಗಳತ್ತ ಗಮನ ಹರಿಯುತ್ತದೆ. ತಂತ್ರ, ರಚನೆ ಇವುಗಳ ವಿಶ್ಲೇಷಣೆ, ಕಥೆಯು ಓದುಗನ ಮನಸ್ಸಿನ ಮೇಲೆ ಒತ್ತುವ ಮುದ್ರೆಯ ನೈತಿಕ, ಜೀವನಪರ ಘನತೆಯೇ ಮುಖ್ಯವಾಗುತ್ತದೆ.





ಕತೆಗಾರ, ಕವಿ ಆಗಿದ್ದ ಜಿ.ಎಸ್. ಆಮೂರ ಕನ್ನಡ ಇಂಗ್ಲಿಷ್‌ಗಳೆರಡರಲ್ಲೂ ಸೂಕ್ಷ್ಮ ತಿಳಿವಿನ ವಿಮರ್ಶಕರು. ಈಗಲೂ ಕವಿತೆಗಳನ್ನು ಬರೆಯುತ್ತಾರೆ.

ಜಿ.ಎಸ್. ಆಮೂರ

ಒಬ್ಬ ವಿಮರ್ಶಕನ ಕರ್ಮಕತೆ

ಕನ್ನಡದಲ್ಲಾಗಲಿ ಇಂಗ್ಲಿಷಿನ್ನಾಗಲಿ ನಾನು ಬರೆದ ವಿಮರ್ಶೆಯ ಬಗ್ಗೆ ನನಗೆ ಅಭಿಮಾನವಿದೆ. ಆದರೆ ವಿಮರ್ಶಕರದೇ ಒಂದು ಜಾತಿ ಎನ್ನುವ ಹಾಗೆ ನನ್ನನ್ನು ವಿಮರ್ಶಕನೆಂದೇ ಜನ ಕರೆದಾಗ ನನಗೆ ಒಂದು ರೀತಿಯ ಅಸಮಾಧಾನವಾಗುವುದನ್ನು ನಾನು ಹಲವಾರು ಸಲ ಗುರುತಿಸಿದ್ದೇನೆ. ನಾನು ಆಯ್ದುಕೊಂಡು ಮೂವತ್ತಾರು ವರ್ಷಗಳಷ್ಟು ದೀರ್ಘಕಾಲ ನಡೆಯಿಸಿದ ವೃತ್ತಿ ಶಿಕ್ಷಕನದು. ಹಲವಾರು ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ನಾನು ಇಂಗ್ಲಿಷ್, ಅಮೆರಿಕನ್, ಕಾಮನ್‌ವೆಲ್ತ್ ಸಾಹಿತ್ಯಗಳನ್ನು ಬೋಧಿಸಿದ್ದುಂಟು. ಈ ವೃತ್ತಿಯಲ್ಲಿ ನನಗೆ ತಕ್ಕ ಮಟ್ಟಿಗಿನ ಯಶಸ್ಸು, ಖ್ಯಾತಿ ದೊರಕಿವೆ. ನನ್ನ ಹಳೆಯ ವಿದ್ಯಾರ್ಥಿಗಳು ಬೇರೆ ಬೇರೆ ಕ್ಷೇತ್ರಗಳಲ್ಲಿ ಹೆಸರು ದೊರಕಿಸಿದಾಗ ನಾನು ಸಂತೋಷಪಟ್ಟಿದ್ದೇನೆ. ನನ್ನ ವಿಮರ್ಶೆಯ ಮೂಲ ಕೂಡ ನನ್ನ ಶಿಕ್ಷಕ ವ್ಯವಸಾಯದಲ್ಲಿಯೇ ಇದ್ದಿರಬಹುದು ಎಂಬ ಅನುಮಾನ ನನ್ನಲ್ಲಿದೆ.

ಹಿನ್ನೋಟದಲ್ಲಿ ನಮ್ಮ ಬದುಕಿನಲ್ಲಿ ಒಂದು ಕ್ರಮ ಕಂಡುಬರಬಹುದು. ಆದರೆ ಈ ಕ್ರಮವನ್ನನುಸರಿಸಿ ನಾವು ಬದುಕುವುದಿಲ್ಲ. ಬದುಕಿನ ರಹಸ್ಯಮಯತೆಯೇ ಅದರ ಮೂಲಗುಣ ಎಂದು ಹೇಳಬಹುದು. ಉದಾಹರಣೆಗೆ ನಾನು ಶಿಕ್ಷಕನಾಗಬೇಕೆಂದು ಬಯಸಿದವನಲ್ಲ. ಒಂದೆರಡು ವರ್ಷ ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸಿದುದರ ಪರಿಣಾಮವಾಗಿಯೇ ಏನೋ ನನಗೆ ಪತ್ರಿಕಾ ವ್ಯವಸಾಯದತ್ತ ಒಲವಿದ್ದಿತು. ನನ್ನ ಶಿಕ್ಷಕರೊಬ್ಬರು ನನ್ನನ್ನು ಪ್ರಭಾವಿಸದಿದ್ದರೆ ಇಂದು ನಾನೊಬ್ಬ ಪತ್ರಕಾರನಾಗಿಯೇ ಬೆಳೆದಿರಬಹುದಾಗಿದ್ದಿತು. ಹಾಗೆಯೇ ನನ್ನ ಕಾಲೇಜು ಜೀವನದ ಪ್ರಾರಂಭದಲ್ಲಿಯೇ ವಿಮರ್ಶೆಯ ಲೇಖನಗಳನ್ನು ಬರೆದರೂ ('ಇವುಗಳಲ್ಲಿ ಕೆಲವು 'ಜಯಂತಿ'ಯಲ್ಲಿ ಪ್ರಕಟವಾಗಿವೆ.) ನನ್ನ ನಿಜವಾದ ಒಲವು ಇದ್ದದ್ದು ಕವಿತೆ, ಕಥೆ, ಕಾದಂಬರಿಗಳತ್ತ. ನಾನು ಇಂಗ್ಲಿಷಿನಲ್ಲಿ ಬರೆದ ನಾಲ್ಕೆಂಟು ಕತೆಗಳು MysIndiaದಲ್ಲಿ ಪ್ರಕಟವಾದಾಗ, ಬಸವರಾಜ ಕಟ್ಟಿಮನಿಯವರು 'ಮದುವೆಯೋಲೆ' ಎಂಬ ಹೆಸರಿನ ನನ್ನ ಕತೆಯನ್ನು 'ಉಷಾ'ದಲ್ಲಿ ಪ್ರಕಟಿಸಿದಾಗ ನನ್ನನ್ನು ಕತೆಗಾರನೆಂದೇ ನಾನು ಗುರುತಿಸಿಕೊಂಡಿದ್ದೆ. 1949ರಷ್ಟು ಮೊದಲೇ 'ಉನ್ಮೀಲಿತ' ಎಂಬ ಕಾದಂಬರಿಯನ್ನೂ ನಾನು ಬರೆದೆ. ಅದು ಪ್ರಕಟವಾಗಿದ್ದರೆ ಬಹುಶಃ ಪ್ರಥಮ ನವ್ಯ ಕಾದಂಬರಿಯೆಂದೇ ಅದಕ್ಕೆ ಹೆಸರು ಬರಬಹುದಾಗಿದ್ದಿತು. ಆದರೆ, ಎರಡು ತೀರ ಕ್ಷುಲ್ಲಕ ಕಾರಣಗಳಿಗಾಗಿ ನಾನು ಕತೆ, ಕಾದಂಬರಿ ಬರೆಯುವುದನ್ನು ಬಿಟ್ಟುಬಿಟ್ಟೆ. ನಾನು Mysindiaಕ್ಕೆ ಕಳಿಸಿದ ಒಂದು ಕತೆ ಅನಿರೀಕ್ಷಿತವಾಗಿ ಮರಳಿ ಬಂದಾಗ ಆದ ಆಘಾತದಿಂದಾಗಿ ಕತೆ ಬರೆಯುವುದರಲ್ಲಿದ್ದ ನನ್ನ ಆಸೆ ಕಳೆದುಹೋಯಿತು. ಈ rejection ಒಂದು ಆಕಸ್ಮಿಕವಾಗಿತ್ತೆನ್ನುವುದು ನನಗೆ ಒಂದೆರಡು ವರ್ಷಗಳ ನಂತರ ಗೊತ್ತಾಯಿತು. MysIndiaದ ಎಡಿಟರ್ ಫಿಲಿಪ್ ಸ್ಪ್ರಾಟ್ ರಜೆಗೆಂದು ಇಂಗ್ಲೆಂಡಿಗೆ ಹೋದಾಗ ಯಾರೋ ಒಬ್ಬರು ನನ್ನ ಕತೆಯನ್ನು ಮರಳಿಸಿದ್ದರು. ನನ್ನ ಕಾದಂಬರಿಗೆ ಇಂಥದೇ ಒಂದು ಕತೆಯಿದೆ. ಅದನ್ನು ಓದಿದ ಒಬ್ಬ ಪ್ರಸಿದ್ಧ ಕಾದಂಬರಿಕಾರರು (ಅವರ ಆತ್ಮಕ್ಕೆ ಶಾಂತಿ ದೊರೆಯಲಿ;) ಅದನ್ನು ನನಗೆ ಮರಳಿ ಕೊಡಲೇ ಇಲ್ಲ! ಅದರ ಇನ್ನೊಂದು ಪ್ರತಿಯೂ ನನ್ನಲ್ಲಿರಲಿಲ್ಲ. ಆಗ ನನ್ನ 'ನವ್ಯ' ಕಾದಂಬರಿ ಪ್ರಕಾಶಿತವಾಗುವ ಸಾಧ್ಯತೆಗಳೂ ಇರಲಿಲ್ಲ.

ಒಬ್ಬ ವಿಮರ್ಶಕನಾಗಿ ನಾನು ಈ ಘಟನೆಗಳತ್ತ ಇಂದು ನೋಡಿದಾಗ ನನ್ನ ವಿವರಣೆಯ ಬಗ್ಗೆ ನನಗೇ ಸಂಶಯಗಳು ಹುಟ್ಟಿಕೊಳ್ಳುತ್ತವೆ. ನನ್ನ ಪಿಂಡ ಒಬ್ಬ ಕತೆಗಾರ ಅಥವಾ ಕಾದಂಬರಿಕಾರನದಾಗಿದ್ದರೆ ಈ ಕ್ಷುಲ್ಲಕ ಘಟನೆಗಳಿಂದಾಗಿ ನಾನು ಕತೆ, ಕಾದಂಬರಿಗಳನ್ನು ಬರೆಯುವುದನ್ನು ನಿಲ್ಲಿಸುತ್ತಿರಲಿಲ್ಲ, ಉದಾಹರಣೆಗೆ ಬಹುಶಃ ಜಿ.ಬಿ.ಯವರು ಕಾದಂಬರಿ ಬರೆದುಕೊಂಡು ಎಂದು ಬೆನ್ನುಹತ್ತಿದಾಗ ನಾನೊಂದು ಕಾದಂಬರಿಯನ್ನು ಬರೆಯಬಹುದಿತ್ತಲ್ಲ; ಒಂದಾನೊಂದು ಕಾಲದಲ್ಲಿ ನನಗೆ ತೀರ ಹತ್ತಿರದವರಾಗಿದ್ದ ನೆಮಾಡೇಯವರು ನನ್ನ ಕಥನದ ರೀತಿಯನ್ನು ಮೆಚ್ಚಿ ಪ್ರೋತ್ಸಾಹಿಸಿದಾಗಲೂ ನಾನು ಕತೆ,




ಕಾದಂಬರಿಗಳನ್ನು ಯಾಕೆ ಬರೆಯಲಿಲ್ಲ. ಇತ್ತೀಚೆಗೆ ಕವಿತೆಗಳನ್ನು ಬರೆದಂತೇ ಕಾದಂಬರಿಗೂ ಮತ್ತೆ ಮರಳಬಹುದಾದ ಸಾಧ್ಯತೆಯಿದೆಯಾದರೂ ಬರೆದೇ ತೀರಬೇಕು ಎನ್ನುವ ಹಟವಿಲ್ಲ. ಕವಿಯಾಗಬೇಕೆಂದಿದ್ದ ಗಿರೀಶ ನಾಟಕಕಾರರಾದರು. ಕಾದಂಬರಿಕಾರನಾಗಬೇಕೆನ್ನುವ ಹುಮ್ಮಸ್ಸಿದ್ದ ನಾನು ವಿಮರ್ಶಕನಾದೆ. ಆದರೂ ಸಮಾಧಾನದ ಸಂಗತಿಯೆಂದರೆ ಕವಿ ಕೆಟ್ಟು ವಿಮರ್ಶಕನಾಗುತ್ತಾನೆ ಎನ್ನುವ ಮಾತಂತೂ ನನಗೆ ಅನ್ವಯಿಸುವುದಿಲ್ಲ. ನಾನು ಬರೆದಷ್ಟು ದಿನ ಒಳ್ಳೆಯ ಕತೆಗಳನ್ನೇ, ಒಳ್ಳೆಯ ಕವಿತೆಗಳನ್ನೇ ಬರೆದೆ. ನನ್ನ ಗುರುಗಳಾದ ಆರ್ಮಾಂಡೋ ಮೆನೆಜಿಸ್‌ರಿಗೆ (ಸ್ವತಃ ಒಳ್ಳೆಯ ಕವಿ) ನನ್ನ ಇಂಗ್ಲಿಷ್ ಕವಿತೆಗಳ ಸಂಗ್ರಹವನ್ನು ಪ್ರಕಟಿಸಬೇಕೆನ್ನುವ ವಿಚಾರವಿತ್ತು. ನನ್ನ ಕತೆಗಳ ಬಗೆಗೂ- ಇವು ಪ್ರಕಟವಾದಾಗ ಆರ್. ಕೆ. ಲಕ್ಷ್ಮಣರವರು ಅವುಗಳಿಗೆ ಚಿತ್ರ ಬರೆದಿದ್ದರು-ನನಗೆ ಇನ್ನೂ ಅಭಿಮಾನವಿದೆ.

ಈಗ ಕತೆ, ಕಾದಂಬರಿಗಳನ್ನು ಬರೆಯುವುದನ್ನು ನಿಲ್ಲಿಸಿದ್ದರೂ ನಾನು ನನ್ನ ಸೃಜನಶೀಲತೆಯನ್ನು ಕಳೆದುಕೊಂಡಿದ್ದೇನೆ ಎಂದು ನನಗೆ ಎನಿಸುವುದಿಲ್ಲ. ವಿಮರ್ಶೆಯನ್ನು ಸೃಜನೇತರ ಎಂದು ಕರೆಯುವುದು ಮೂರ್ಖತನ. ಅದನ್ನು ಬರೆಯುವುದಕ್ಕೂ ಒಂದು ಮೂಡು, ಪ್ರಚೋದನೆ ಬೇಕು. ಸಿದ್ಧ ಭಾಷೆಯಾಗಲಿ, ಸಿದ್ಧ ಆಕೃತಿಗಳಾಗಲಿ ನಿಜವಾದ ವಿಮರ್ಶಕನಿಗೆ ಪ್ರಯೋಜಕವಾಗುವುದಿಲ್ಲ. ಉದಾಹರಣೆಗೆ ನಾನು ಬೇಂದ್ರೆಯವರನ್ನು ಕುರಿತು ಬರೆಯುವಾಗ ಹುಡುಕಿಕೊಂಡ (ಸೃಷ್ಟಿಸಿದ) ಆಕೃತಿ ನನಗೆ ಶ್ರೀರಂಗರನ್ನು ಕುರಿತು ಬರೆಯುವಾಗ ಉಪಯುಕ್ತವೆನಿಸಲಿಲ್ಲ. ಒಬ್ಬ ಲೇಖಕನ ಅಥವಾ ಒಂದು ಕೃತಿಯ ಅಂತರಂಗವನ್ನು ಹೊಕ್ಕು ಆ ಅನುಭವಕ್ಕೆ ಆಕಾರ ಕೊಡುವಾಗ ದೊರಕುವ ಸಂತೋಷ ಒಂದು ಕವಿತೆಯನ್ನು ರಚಿಸುವಾಗ ದೊರಕುವ ಸಂತೋಷದಷ್ಟೇ ಮೌಲಿಕವಾದುದು ಎನ್ನುವುದು ನಾನು ನನ್ನ ಅನುಭವದಿಂದ ಕಂಡುಕೊಂಡ ಸತ್ಯ.

ರಾಜೇಂದ್ರ ಚೆನ್ನಿ

ಸೃಜನ, ಸೃಜನೇತರ ಬರವಣಿಗೆ ಮಧ್ಯೆ ಅಗಾಧ ಕಂದರ



ಖಚಿತ, ಸ್ಪಷ್ಟ ಒಳನೋಟಗಳ ವಿಮರ್ಶಕರಾಗಿರುವ ರಾಜೇಂದ್ರ ಚೆನ್ನಿ ಒಳ್ಳೆಯ ಕತೆಗಾರರೂ ಹೌದು.

ನೀವು ಕೇಳಿದ ಪ್ರಶ್ನೆಗಳಿಗೆ ಉತ್ತರಕೊಡುವುದು ಇಷ್ಟೊಂದು ಕಷ್ಟವಾಗುತ್ತದೆಯೆಂದು ಗೊತ್ತಿರಲಿಲ್ಲ! ನಾನು ಯಾಕೆ ಬರೆಯಲು ಶುರುಮಾಡಿದೆ, ಹೇಗೆ, ಇವೇ ಮುಂತಾದ ಮೂಲ ಪ್ರಶ್ನೆಗಳನ್ನು ಎದುರಿಸದೇ ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಲಾಗುವುದಿಲ್ಲ ಅನ್ನಿಸಿತು. ಆದರೆ ಇಷ್ಟು ವರ್ಷಗಳ ನಂತರ ನಮ್ಮ ಬರವಣಿಗೆಯ ಮೂಲವನ್ನು ಹುಡುಕಿಕೊಂಡು ಹೋಗುವುದರಲ್ಲಿ ಆ ಬಗ್ಗೆ ನಾವು ಕಟ್ಟಿಕೊಂಡಿರುವ ಪುರಾಣ, ಐತಿಹ್ಯಗಳೇ ನಿಜವೆಂದು ಭಾವಿಸಿಬಿಡಬಹುದು.

ಒಂದು ಮಾತು ನಿಜ. ನಾನಾಗಲೀ ಯಾರೇ ಆಗಲಿ ವಿಮರ್ಶಕನಾಗಬೇಕೆಂದು ಅಥವಾ ಕತೆಗಾರನಾಗಬೇಕೆಂದು pragmatic ಆಗಿ ಹೊರಡುವುದಿಲ್ಲ. ಬರೆಯಬೇಕೆನ್ನುವ ಹಂಬಲ, ಉತ್ಸಾಹ ಇವುಗಳು ಮಾತ್ರ ಖಚಿತವಾಗಿರುತ್ತವೆ. ಅದು ಯಾವ ಪ್ರಕಾರದ ಬರಹವಾಗುತ್ತದೆ ಎನ್ನುವುದು ಎಷ್ಟೋ ಸಾರಿ ಅನಿರೀಕ್ಷಿತ ಅಥವಾ ಸಾಂದರ್ಭಿಕ ಮಾತ್ರವಾಗಿರಬಹುದು. ನನಗೂ ಹಾಗೇ ಆಯಿತು. ಬಡ ಮಧ್ಯಮವರ್ಗದ ತೀರಾ ಸಂಕೋಚದ ಸ್ವಭಾವದ ಹುಡುಗನಾಗಿದ್ದ ನಾನು, ನನ್ನ ಒಂಟಿತನ, ನಿರಾಸೆ, ಅಸಹ್ಯಗಳ ಬಗ್ಗೆ ಪದ್ಯಗಳನ್ನು ಬರೆದೆ-ಇಂಗ್ಲಿಷ್‌ನಲ್ಲಿ. ಅದು ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ. ಅನಂತರ ಬಹಳ ವರ್ಷಗಳವರೆಗೆ ಏನನ್ನೂ ಬರೆಯಲಿಲ್ಲ. ವಿಚಾರಸಂಕಿರಣಗಳಲ್ಲಿ ಭಾಷಣ ಮಾಡುವುದು, ಚರ್ಚೆಮಾಡುವುದು ಇವು ಇಷ್ಟವಾಗತೊಡಗಿದ ಮೇಲೆ ನನಗೆ ಗೊತ್ತಿಲ್ಲದಂತೆಯೇ ವಿಮರ್ಶಕನಾಗಿಬಿಟ್ಟೆ. ಆದರೆ ಆಗಲೂ ವಿಮರ್ಶೆಯನ್ನು 'ಬರೆಯ'ಬೇಕು ಎಂದು ಅನ್ನಿಸಿರಲಿಲ್ಲ. ಶಿವಮೊಗ್ಗೆಯಲ್ಲಿ ಕನ್ನಡದಲ್ಲಿ ಬರೆಯುವುದಕ್ಕೆ ಅನುಕೂಲಕರವಾದ ವಾತಾವರಣವಿದ್ದರಿಂದ 83ರಿಂದ 88ರವರೆಗೆ, ಐದು ವರ್ಷಗಳ ಕಾಲ, ಪಂಪನಿಂದ 'ಕುಸುಮಬಾಲೆ'ಯವರೆಗೆ, ನನಗೇ ಈಗ ಆಶ್ಚರ್ಯವೆನಿಸುವಂಥ ಹುಚ್ಚಿನಿಂದ, passionನಿಂದ ಕನ್ನಡ ಸಂಪ್ರದಾಯದ ಕೃತಿಗಳನ್ನು ಓದಿದೆ. ಬರೆಯುವ ಶಿಸ್ತನ್ನು ರೂಢಿಸಿಕೊಂಡು ಬರೆದೆ. ಆ ಕಾಲದಲ್ಲಿ ಬಹಳ ನಿಷ್ಠುರವಾಗಿ, ವ್ರತ ಹಿಡಿದವನಂತೆ ವಿಮರ್ಶೆಯ ಬರಹಕ್ಕೆ ಇರಬೇಕಾದ (ಅಂದರೆ ನಾನು ಅಂದುಕೊಂಡ) ನಿರಪೇಕ್ಷತೆ, ದೂರ, ವಸ್ತುನಿಷ್ಠತೆ ಇವುಗಳನ್ನು ಸಾಧಿಸುವ ಎಚ್ಚರವಿಟ್ಟುಕೊಂಡು ಬರೆದೆ. 'ವೈಯಕ್ತಿಕ' ಅನ್ನಬಹುದಾದ ಅಂಶಗಳನ್ನು ಹೊರಗಿಟ್ಟು ಬರೆದೆ. ಬರಹ ತುಂಬಾ ತಾರ್ಕಿಕವಾಗಿದೆ, ಶುಷ್ಕವಾಗಿದೆ ಎಂದು ಗೆಳೆಯರು ಹೇಳಿದಾಗಲೂ ಭಿನ್ನವಾಗಿ ಬರೆಯಕೂಡದು ಅನ್ನಿಸಿತು. ವಿಮರ್ಶೆಯ ಬರಹಕ್ಕೆ ಅದರದೇ ಸಂಪ್ರದಾಯ ಶೈಲಿ, ಪಾರಿಭಾಷಿಕಗಳು ಇರಲೇಬೇಕು ಎಂದು ನಂಬಿದ್ದೆ. ಆದರೆ ಕನ್ನಡ ಸಂಪ್ರದಾಯದ ಮುಖ್ಯ ಕೃತಿಗಳ ಮೂಲಕ ನಾನು ಮಾಡುತ್ತಿದ್ದುದು ನನ್ನ ಸ್ವಂತದ ಹುಡುಕಾಟವೇ ಆಗಿತ್ತು ಎಂದು ಈಗ ಅರ್ಥವಾಗಿದೆ. ಬರಹದಲ್ಲಿ ಸಮುದಾಯದ ಬದುಕಿನಲ್ಲಿ ಸಾತತ್ಯತೆಯನ್ನು, ಆರೋಗ್ಯದ ಮೂಲ ನೆಲೆಗಳನ್ನು ಹುಡುಕುವುದೇ ನನ್ನ ವಿಮರ್ಶೆಯ ಕೆಲಸವಾಗಿತ್ತು. ಸದ್ಯದ ಹಂಗಿನಲ್ಲಿರುವ ನಮ್ಮ ಕಾಲದ ಬರಹಗಾರರು ಈ ಸಾತತ್ಯತೆಗೆ ಏನನ್ನು ಸೇರಿಸುತ್ತಾರೆ ಎನ್ನುವ ಕುತೂಹಲದ ಕೆಲಸ ಇದಾಗಿತ್ತು. ನನ್ನ ಬದುಕು ನನ್ನನ್ನು ಮೀರಿದೆ ಎನ್ನುವುದನ್ನು ಅರ್ಥಮಾಡಿಕೊಂಡು ಬರೆದಾಗ ನನ್ನ ವಿಮರ್ಶೆಯಲ್ಲಿ ಮಹಾದೇವಿಯಕ್ಕ, ಪಂಪ, ಮಹಾದೇವ, ತೇಜಸ್ವಿ ಎಲ್ಲರೂ ಸಮಕಾಲೀನರಾಗಿ, ಎಲ್ಲರೂ ಸಂಪ್ರದಾಯದವರಾಗಿ ಕಾಣುತ್ತಿದ್ದರು.

ವಿಮರ್ಶೆಯ ವ್ಯಕ್ತಿನಿರಪೇಕ್ಷತೆಯ ಹಿಂದೆ ಇರುವ ತುಡಿತ ಹೀಗೆ ಬಹಳ ವೈಯಕ್ತಿಕವಾದದ್ದೇ. ಕತೆ ಬರೆಯುವಾಗ ಅನ್ನಿಸುವ ಅಚ್ಚರಿ, ನೋವು, ಉದ್ವೇಗ-ಇವೆಲ್ಲವೂ ವಿಮರ್ಶೆ ಬರೆಯುವಾಗಲೂ ಅನ್ನಿಸುತ್ತದೆ. ವ್ಯತ್ಯಾಸವಿಷ್ಟೇ-ಅವೆಲ್ಲವೂ ಇನ್ನೊಬ್ಬರ ಕೃತಿಯ ಮಾಧ್ಯಮದ ಮೂಲಕ ವ್ಯಕ್ತವಾಗಬೇಕಾಗುವ ಅನಿವಾರ್ಯತೆ ಇರುತ್ತದೆ. ಇದು ಬಹಳ ಇಕ್ಕಟ್ಟಿನ ಸ್ಥಿತಿ. ಇನ್ನೊಬ್ಬರ ಕೃತಿಯನ್ನು 'ಬಳಸಿ'ಕೊಂಡು ನಿಮ್ಮ ಸ್ವಂತದ ಬಗ್ಗೆ ಬರೆಯುತ್ತಾ ಹೋದರೆ ಅದು ವಿಮರ್ಶೆಯಾಗುವುದಿಲ್ಲ. ಸ್ವಗತವಾಗುತ್ತದೆ. ಸ್ವಂತದ ನೆಲೆಯನ್ನೇ ಬಿಟ್ಟು ನಿರಾಯಾಸವಾಗಿ ಬರೆಯತೊಡಗಿದರೆ ಅದು ಪಾಂಡಿತ್ಯವಾಗುತ್ತದೆ; ವಿಮರ್ಶೆಯಾಗುವುದಿಲ್ಲ. ಸ್ವಂತದ ನೋವು ತಹತಹ, ಹುಡುಕಾಟ ಇವುಗಳಲ್ಲೇ ವಿಮರ್ಶೆ ಹುಟ್ಟಿಕೊಳ್ಳುತ್ತದೆ. ಆದರೆ ಇವು ಸಾಹಿತ್ಯ ಕೃತಿಗಳ ಮೇಲೆ ಸವಾರಿ ಮಾಡದಂತೆ ಸಂಯಮ ಹಾಗೂ ಎಚ್ಚರ ಇರಬೇಕಾಗುತ್ತದೆ.

ವಿಮರ್ಶೆ ಬರೆದೆ. ಪ್ರಕಟಿಸಿದೆ. ಬಹುಮಾನಗಳೂ ಬಂದವು. ಆದರೆ ವಿಮರ್ಶೆ ಬರೆಯುವವರಿಗೆ ಉತ್ಸಾಹ ಹುಟ್ಟಿಸುವಂಥ ಚರ್ಚೆಗಳು ನಡೆಯಲಿಲ್ಲ. ಬರೆದದ್ದು 'ಉತ್ತಮ ವಿಮರ್ಶೆ'ಯೆನ್ನುವ ತಣ್ಣಗಿನ ಗೋರಿಯೊಳಗೆ ಸಮಾಧಿಯಾಯಿತು. ಜೊತೆಗೆ ನನ್ನೊಳಗೇ ಒಂದು ಅತೃಪ್ತಿ ಶುರುವಾಗಿತ್ತು. ಇನ್ನೊಬ್ಬರ ಕೃತಿಗಳ ಮೂಲಃ ಮಾತನಾಡುವ ಇಕ್ಕಟ್ಟಿನಲ್ಲಿ ನಾನು ಅನುಭವಿಸಿದ್ದು ಅದೆಷ್ಟೋ ಹೀಗೇ ಕಳೆದುಹೋಗುತ್ತಿದೆಯನ್ನುವ ಕಳವಳ ಶುರುವಾಯಿತು. ಅಂಥ ಒಂದು ಗಳಿಗೆಯಲ್ಲಿ ಕತೆ ಬರೆಯತೊಡಗಿದೆ.

ವಿಮರ್ಶೆ, ಕತೆ ಬರೆಯುವಾಗ ನಾನು ಇಬ್ಬರು ಬೇರೆ ವ್ಯಕ್ತಿಗಳ ಹಾಗೆ ಬರೆಯುತ್ತೇನೆಯೆ? ಅಥವಾ ನನ್ನ ವ್ಯಕ್ತಿತ್ವದ ಒಂದು ಭಾಗವನ್ನು ಅದುಮಿಟ್ಟು ಬರೆಯುತ್ತೇನೆಯೆ? ಇಲ್ಲ, ಹಾಗೇನೂ ಆಗುವುದಿಲ್ಲ. ವ್ಯಕ್ತಿಯಾಗಿ ನನಗಿರುವ ಕಾಳಜಿಗಳು, ಗೀಳುಗಳು ಯಾವಾಗಲೂ ಒಂದೇ ಆಗಿರುತ್ತದೆ. ಆದರೆ ವಿಭಿನ್ನ ಪ್ರಕಾರ ಹಾಗೂ ಅಭಿವ್ಯಕ್ತಿ ಮಾಧ್ಯಮಗಳನ್ನು ಬಳಸುವಾಗ ಕೆಲವು ಅನುಭವಗಳು ರೂಪಾಂತರ ಹೊಂದಿ ಹೊರಬರುತ್ತವೆ. ಇದು ಒಂದು ರೀತಿಯಲ್ಲಿ 'ಔಚಿತ್ಯಪ್ರಜ್ಞೆ' ಮಾತ್ರವೆಂದುಕೊಂಡಿದ್ದೇನೆ.

ಕನ್ನಡ ಸಾಹಿತ್ಯ ಪರಿಸರದಲ್ಲಿ ಸೃಜನಶೀಲ ಮತ್ತು ಸೃಜನೇತರ ಬರಹಗಳ ಮಧ್ಯ ನಾವೇ ಮಾಡಿರುವ ಕಂದರಗಳು ಅಗಾಧವಾಗಿವೆ. ಇದರಿಂದಾಗಿ ಎರಡೂ ಪ್ರಕಾರಗಳು ಊನಗೊಂಡಿವೆ. ಲಂಕೇಶ್‌ರ 'ಪತ್ರಿಕೆ'ಯ ಬರವಣಿಗೆಯ ನಂತರ ಮತ್ತು ಇಂಗ್ಲಿಷ್ ಮೂಲಕ ನಮಗೆ ಗೊತ್ತಿರುವ ನವ್ಯೋತ್ತರ ವಿಮರ್ಶೆ ಹಾಗೂ ಬರಹದ ಮಾದರಿಯಿಂದಾಗಿ ಈಗ ಈ ಕಂದರಗಳನ್ನು ಮರೆತು ಬರೆಯುವುದು ಸಾಧ್ಯವಾಗುತ್ತಿದೆ. ನಾನು ಇತ್ತೀಚೆಗೆ ಇಂಗ್ಲಿಷಿನಲ್ಲಿ ಬರೆದ ಲೇಖನಗಳಲ್ಲಿ ಇತಿಹಾಸ, ರಾಜಕೀಯ ಕತೆಗಾರಿಕೆ ಎಲ್ಲವನ್ನು ಸೇರಿಸಿಕೊಂಡು ಬರೆಯಲು ಸಾಧ್ಯವಾಗಿದೆ. ಇದು ಬಹುಶಃ ಈಗ ಬರೆಯುತ್ತಿರುವ ಎಲ್ಲರಿಗೂ ನಿಜವಾಗುತ್ತಿದೆಯೆಂದು ಭಾವಿಸುತ್ತೇನೆ. ಈ ದಾರಿಯಲ್ಲಿಯೇ ಮುಂದುವರೆದರೆ ನೀವು ಕೇಳಿರುವ ಪ್ರಶ್ನೆಗಳು ಅಪ್ರಸ್ತುತವಾಗುವ ಕಾಲ ಬರಬಹುದಲ್ಲವೆ?



ನನಗೆ ಅವನನ್ನು ಕೊಂದಿದ್ದು ಈ ಎಂಟು ವರ್ಷಗಳಲ್ಲಿ ಅಷ್ಟು ಕಾಡಿಲ್ಲ. ಆದರೆ ಅವನ ತಲೆ ಹೋಳಾಗುವಾಗ ಚೀರಿದ ಚೀತ್ಕಾರ ಮಾತ್ರ ನನ್ನ ಕಿವಿಯಲ್ಲಿ ಸದಾ ಗುನುಗುಡುತ್ತಲೇ ಇದೆ. ಈಗ ನಾವು ಕೂತಿರುವ ಜಾಗದಿಂದ ಸ್ವಲ್ಪ ದೂರದಲ್ಲೇ ಅಕ್ಬರ್ ರಸ್ತೆಗೆ ಫಿರೋಜಷಾ ರಸ್ತೆ ಕೂಡುತ್ತಲ್ಲವೇ - ಅಲ್ಲಿಯೇ ನಾನು ಅವನನ್ನು ಸಾಯಿಸಿದ್ದು. ಅವನಿಗೋಸ್ಕರ ನಾಲ್ಕು ತಿಂಗಳಿಂದ ಹುಡುಕುತ್ತಲೇ ಇದ್ದೆ. ಏಕೆಂದರೆ ನಾನು ಐಎಎಸ್ ಅಲ್ಲವೆ. ನನಗೆ ಇನ್‌ಫ್ಲೂಯನ್ಸ್ ಇರುತ್ತೆ. ಹಾಗಾಗಿ ಜನರನ್ನು ಹುಡುಕುವುದು ಸುಲಭ. ಅಂದು ಹೀಗೆಯೇ ಒಂಟಿಯಾಗಿ ಕುಡಿದು ಒಂಟಿಯಾಗಿ ಹೋಟೆಲಿನ ಕಡೆ ಹೊರಟೆ. ಅಂದರೆ ಆಗ ನಾನು ಕನಾಟ್‌ಪ್ಲೇಸ್‌ನಲ್ಲಿ ಹೋಟೆಲ್ಲಿನಲ್ಲಿದ್ದೆ. ಡಿಸೆಂಬರ್‌ನ ದಿಲ್ಲಿಯ ರಾತ್ರಿ. ನಡೆದು ಬರುತ್ತಿರಬೇಕಾದರೆ ಯಾರೋ ಕನ್ನಡದಲ್ಲಿ ಮಾತಾಡುತ್ತಿರುವಂತೆ ಕೇಳಿಸಿತು. ಅರೇ... ಆ ಧ್ವನಿಯನ್ನು ನಾನೆಲ್ಲೋ ಕೇಳಿದ್ದೇನೆ ಅನ್ನಿಸಿ ಗಕ್ಕನೆ ನಿಂತುಕೊಂಡೆ. ಅವನು ಕುಷ್ಠರೋಗದ ಗಾಡಿ ತಳ್ಳುವವನೊಡನೆ ಮಾತಾಡ್ತಾ ನಿಂತಿದ್ದ. ರೋಜಾ ಮತ್ತು ಕಮಲಳನ್ನು ನೀನು ನೋಡಿಯೇ ಇರುತ್ತೀಯಾ? ಎಲ್ಲಿದ್ದಾರೆಂದು ಹೇಳು. ಅಕಸ್ಮಾತ್ ನೋಡಿಲ್ಲಾ ಅಂತಿಟ್ಕೊ... ನೋಡಿದರೆ ಅವರು ಯಾರ ಜೊತೆ ಓಡಾಡುತ್ತಾರೆಂದು ನಂಗೆ ಹೇಳಬೇಕು ಎನ್ನುತ್ತಿದ್ದ. ಆ ಕುಷ್ಠರೋಗದವನು ಚಿಂದಿ ಬಟ್ಟೆಯಲ್ಲಿಯೇ ನಂಗೆ ಗೊತ್ತಿರೋ ಪ್ರಕಾರ ಅವರೀಗ ಕೇರಳದ ಟೀಸಿಷ್ಟು ಮನೆಯಲ್ಲಿದ್ದಾರೆ ಎಂದು ಹೇಳಿದ. ಅವನು ಸರಿ, ಸುಳ್ಳು ಏನಾದರೂ ಹೇಳಿದೆಯೋ...ನಾಳೆ ನಿನ್ನನ್ನು ಬಿಟ್ಟಲ್ಲ ಅನ್ನಿಸಿಬಿಡ್ತೇನೆ ಎಂದು ನಿಧಾನಕ್ಕೆ ನಡೆಯತೊಡಗಿದ. ಬೀದಿ ಬೆಳಕಲ್ಲಿ ಕಂಡ ಅವನ ಮುಖ ಅವನೇ ಅವನೇ... ಅದರಲ್ಲಿ ಅನುಮಾನವೇ ಇರಲಿಲ್ಲ. ತಕ್ಷಣಕ್ಕೆ ನನಗೆ ಏನು ಮಾಡಬೇಕೆಂದು ತೋಚಲಿಲ್ಲ. ಅವನು ಸ್ವಲ್ಪ ದೂರದಲ್ಲಿದ್ದ ಕಾರಿನ ಕಡೆ ನಡೆದುಹೊರಟಿದ್ದ. ಇನ್ನೇನು ಸ್ವಲ್ಪ ಹೊತ್ತಿಗೆಲ್ಲಾ ಕಾರನ್ನು ಹತ್ತಿ ಹೋಗಿಬಿಡಬಹುದಾದ ಭಯ ಕಾಡಿ, ತಕ್ಷಣಕ್ಕೆ ರಸ್ತೆಗೆ ಹಾಕಿದ ಅಥವಾ ಹಾಕಲು ಇಟ್ಟ ಚಪ್ಪಡಿ ಕಲ್ಲು ಸಿಕ್ಕಿತು. ಎತ್ತಿಕೊಂಡು ಹಿಂದಿನಿಂದಲೇ ಅವನ ಕಾರಿನ ಹತ್ತಿರದವರೆಗೆ ಹೋಗಿ ಹಿಂದಿನಿಂದಲೇ ಅವನ ತಲೆಗೆ ರಪ್ಪೆಂದು ಕಲ್ಲಿನಿಂದ ಬೀಸಿದೆ. ಒಂದೇ ಏಟಿಗೆ ಅವನ ತಲೆಯ ಬುರುಡೆ ಚಟ್ ಎಂದು ಒಡೆದು ಚಿಲ್ಲೆಂದು ರಕ್ತ ನನ್ನ ಕೋಟಿಗೆ, ಪ್ಯಾಂಟಿಗೆ, ಮುಖ-ಕೈಕಾಲುಗಳಿಗೆ ತಪ್ ಎಂದು ಸಿಡಿಯಿತು. ತಲೆಬುರುಡೆ ಎರಡು ಹೋಳಾಗಿಹೋಯಿತು. ಅವನ ದೇಹ ಗಿಮಗಿಮ ತಿರುಗುತ್ತಾ ತಿರುಗುತ್ತಾ ಅವನ ಕಾರಿನ ಬುಡದ ಬಳಿ ದೊಪ್ಪೆಂದು ಬಿದ್ದಿತು. ಬಿದ್ದ ಮೇಲೆ ಹಲವು ನಿಮಿಷ ವಿಲವಿಲ ಒದ್ದಾಡಿ






ಕೃಷ್ಣ ಮಾಸಡಿ

ದಿಲ್ಲಿಯ ಬಾರೊಂದರಲ್ಲಿ ದಿಳ್ಳ್ಯಪ್ಪಾರ ದಿಳ್ಳಿ ಹೇಳಿದ ಕತೆ





ಸ್ತಬ್ಧವಾಯಿತು. ಅವನದು ಬಿಸಿರಕ್ತವಲ್ಲ. ತಣ್ಣನೆಯ ರಕ್ತ. ಏಕೆಂದರೆ ಬುರುಡೆ ಬಿಚ್ಚಿಕೊಂಡಾಗ ನನ್ನ ಮುಖಕ್ಕೆ ಸಿಡಿದ ರಕ್ತ ಚಳಿಯಲ್ಲಿ ಇನ್ನೂ ತಣ್ಣಗೆ ಎಂಬಂತೆ ನನಗೆ ರಾಚಿತ್ತು. ಅಲ್ಲಿಂದ ಬೇಗ ಬೇಗನೇ ಕೋಟನ್ನು ಬಿಚ್ಚಿ ಕೈಯಲ್ಲಿ ಹಿಡಿದುಕೊಂಡು ಹೋಟೆಲ್ಲಿನ ಕಡೆ ಹೊರಟೆ. ಅವನು ರಾಜಕಾರಣಿಯಾಗಿ ಮೇಲೇರುವವನಿದ್ದನೆಂದು, ಅವನಿಗಾಗದವರು ಅವನನ್ನು ಮುಗಿಸಿದ್ದಾರೆಂದು ಪೊಲೀಸರು ಹೇಳಿ ಕೈತೊಳೆದುಕೊಂಡರು. ಈಗಲೂ ನಂಗೆ ಒಂದು ಖುಷಿ ಇದೆ. ಮುಂದಿನ ಒಬ್ಬ ಮಂತ್ರಿಯಾಗುವವನನ್ನು ಅಂದು ನಾನು ಮುಗಿಸಿದೆನೆಲ್ಲಾ ಎಂಟ ಸಮಾಧಾನ ನನಗಿದೆ. ಆದರೆ ಅವನು ಬುರುಡೆಗೆ ಕಲ್ಲು ಬಿದ್ದ ತಕ್ಷಣ ಚೀರಿದನಲ್ಲಾ.... ಆ ಶಬ್ದ ಮಾತ್ರ ನನಗೆ ಮತ್ತೆ ಮತ್ತೆ ಕೇಳಿ ಬರುತ್ತಲೇ ಇದೆ.

ಇದೇನಯ್ಯ ಏನೂ ಗೊತ್ತಿಲ್ಲದವರ ತರಹ ಕೇಳ್ತಾ ಇದ್ದೀಯಾ....ತಗೋ ಇನ್ನೊಂದು ಲಾರ್ಜ್, ಅವನನ್ನು ಮುಗಿಸಲಿಕ್ಕೆ ಅದೇ ಪೂಜಾಮಾಲಿನಿ ಕಾರಣ. ಅದೇ ಅವಳೇ...ಅವಳೇ...ಈಗ ರಾಷ್ಟ್ರೀಯ ಪಕ್ಷದ ಪ್ರಧಾನ ಕಾರ್ಯದರ್ಶಿ ಆಗಿದ್ದಾಳಲ್ಲಾ ಅವಳೇ ಕಾರಣ. ಆಗ ಅವಳು ಹೈಸೊಸೈಟಿ ಸೂಳೆ. ಅವನು ಅವಳ ಪ್ರೇಮಿ. ಬೆಂಗಳೂರಲ್ಲಿ, ಮದ್ರಾಸ್‌ನಲ್ಲಿ ಸಿನಿಮಾಗಳಲ್ಲಿ ಹಿರೋಯಿನ್ ಆಗಿ ನಟಿಸುತ್ತಾ ಇದ್ದವಳನ್ನು ದಿಲ್ಲಿಗೆ ಕರೆದುಕೊಂಡು ಬಂದವನು ಅವನೇ. ನಮ್ಮಂಥ ಬ್ಯೂರಾಕ್ರಾಟ್‌ಗಳಿಗೆ, ಮಂತ್ರಿಗಳಿಗೆ ಅವಳನ್ನು ಅವಳಂಥವರನ್ನು ಅವನೇ ಸರಬರಾಜು ಮಾಡುತ್ತಿದ್ದ. ನಿಧಾನಕ್ಕೆ ಇಬ್ಬರೂ ಪ್ರೇಮಿಗಳಾದರು. ನಂತರ ಅವಳು ಅವನ ಕಣ್ಣು ತಪ್ಪಿಸಿ ದಂಧೆ ಇಟ್ಟುಕೊಂಡಳು. ನಾನು ಸಹ ಆದೇತಾನೆ ದಿಲ್ಲಿಗೆ ಬಂದಿದ್ದೆ. ಈ ಪಾರ್ಲಿಮೆಂಟ್, ಈ ಫೈಲುಗಳು, ಇವುಗಳಿಂದ ಬರುವ ಅಪಾರ ಹಣ-ಅಂತಸ್ತು, ಎಲ್ಲಕ್ಕಿಂತ ಮಿಗಿಲಾಗಿ power-ಅದ್ರಿಂದ ಥ್ರಿಲ್ ಆಗಿದ್ದೆ. ಅವಳು ನಾನು ಹೀಗೆ ಒಂದು ಹೋಟೆಲ್ಲಿನಲ್ಲಿ ಊಟಕ್ಕೆಂದು ಒಳಗೆ ಹೋಗುವಾಗ ಅವನು ಹೊರಗೆ ಹೊರಟವನು ನಮ್ಮನ್ನು ನೋಡಿದ. ಅವಳು ಭಯಪಟ್ಟಿದ್ದಳು. ಇಬ್ಬರೂ ಹೊರಗೆ ಬರುವಾಗ ಅವಳು ಅವನ ಬಳಿ ಜೋರಾಗಿ ಓಡಿಹೋಗಿ 'ಡಾರ್ಲಿಂಗ್ ಈ ನನ್‌ಮಗನೇ... ನಾನು ಹೇಳ್ತಾ ಇದ್ದದ್ದು... ಕರ್‍ಕೊಂಡು ಹೋಗಿ...' ಅಂದುಬಿಟ್ಟಳು. ಅವನು ಅವಳನ್ನು ಅಪ್ಪಿಕೊಂಡು ಕಾಯುತ್ತಿದ್ದ ಕಾರನ್ನು ಹತ್ತಿದರು. ನಾನು ಟ್ಯಾಕ್ಸಿಗಾಗಿ ಕಾಯುತ್ತಿರುವಾಗಲೇ ನಾಲ್ಕೈದು ಜನ ನನ್ನನ್ನು ಅನಾಮತ್ತು ಎತ್ತಿಕೊಂಡು ಕಾರಲ್ಲಿ ಕರೆದುಕೊಂಡು ಹೋದರು. ಅದೊಂದು ಹರಿಯಾಣದ ಗಡಿಪ್ರದೇಶದ ಹೊಲದಲ್ಲಿಯ ಗುಡಿಸಲು. ನನ್ನನ್ನು ಬಲವಂತವಾಗಿ ಎಲ್ಲರೂ ಸೇರಿ ಬಟ್ಟೆ ಬಿಚ್ಚಿ ಬೆತ್ತಲೆಗೊಳಿಸಿದರು. ಬೆತ್ತಲೆಗೊಳಿಸಿದ ನನ್ನ ಕೈಕಾಲುಗಳನ್ನು ಅವರು ಬಿಗಿಯಾಗಿ ಹಿಡಿದುಕೊಂಡಿರುವಾಗ ಅವನು ಕೈಯಲ್ಲಿ ಉದ್ದನೆಯ ಚಾಕು ಹಿಡಿದುಕೊಂಡು ಬಂದ. ಬಂದವನೇ '...ಏನೋ ಮಾದರ್‌ಚೋದ್ ನನ್‌ಮಗನೇ ಪೂಜಾಮಾಲಿನಿಗೆ ವಿಕೃತ ಸೆಕ್ಸ್ ಮಾಡಲು ಹೋಗಿದ್ಯೇನು...ನೋಡೀಗ' ಎಂದು ನನ್ನ ಮರ್ಮಾಂಗದ ಮುಕ್ಕಾಲು ಭಾಗವನ್ನು ಚಕ್ಕೆಂದು ಕತ್ತಿಯಿಂದ ಕತ್ತರಿಸಿಹಾಕಿಬಿಟ್ಟ. ನನಗೆ ತಕ್ಷಣಕ್ಕೆ ಗಾಬರಿಯಾಗಿ ಏನೆಂದು ಕ್ಷಣ ತೋಚಲಿಲ್ಲ. ಚರ್‌ರ್... ಎಂದು ರಕ್ತ ಬರುತ್ತಿದ್ದಂತೆ 'ಅಯ್ಯೊಯ್ಯೋ' ಎಂದು ಚೀರಾಡಲಿಕ್ಕೆ ತೊಡಗಿದೆ. ಅವರುಗಳು ಅಲ್ಲಿಂದ ಕಾರುಗಳಲ್ಲಿ ಹೊರಟುಹೋದರು ಅಂತ ಕಾಣುತ್ತದೆ. ನಾನು ಬೆತ್ತಲೆ ರಸ್ತೆಗೆ ಬಂದು ನಿಂತೆ. ಟ್ರಕ್‌ನವರು ನನ್ನನ್ನು ದಿಲ್ಲಿಯ ಆಸ್ಪತ್ರೆ ಮುಟ್ಟಿಸಿದರು. ಅದಾದ ನಾಲ್ಕು ತಿಂಗಳಲ್ಲಿ ಅವನನ್ನು ನಾನು ಕಲ್ಲಿನಿಂದ ಕೊಲೆ ಮಾಡಿದ್ದು.



ಊಟಕ್ಕೇನು ಇಷ್ಟು ಅವಸರ, ಇನ್ನೊಂದು ಲಾರ್ಜ್... ಪೂಜಾಮಾಲಿನಿ ನಾನು ಎಂ.ಡಿ. ಆಗಿರುವಾಗ ಕೆಲಸಕ್ಕೆ ಬಂದಿದ್ದಳು. ಆ ಕೆಲಸಕ್ಕೆಂದೇ ಐದು ಕೋಟಿ ನಂಗೆ ತಲುಪಿಸಿದ್ದಳು. ಎದುರಿಗೆ ಬಂದು, ಅಂದಿನ ನನ್ನ ಸ್ಥಿತಿ ಹಾಗಿತ್ತು. ನಾನು ಸುಳ್ಳು ಹೇಳದಿದ್ದರೆ ನನ್ನನ್ನು ಅವನು ಕೊಂದು ಹಾಕುತ್ತಿದ್ದ. ಅವನ ಹೆಣ ಸಿಕ್ಕಾಗ ಇದನ್ನು ನೀನೇ ಮಾಡಿದ್ದೀಯಾ ಅಂದ್ಕೊಂಡೆ. ಈ ಕೆಲಸ ಒಂದು ಮಾಡಿಕೊಡಬೇಕಿದ್ದರೆ ನಿನ್ನೊಂದಿಗೆ ಮಲಗಲು ತಯಾರಿದ್ದೇನೆ. ಸದ್ಯದಲ್ಲೆ ಕ್ಯಾಬಿನೆಟ್ ಮಂತ್ರಿ ಆಗುತ್ತೇನೆ. ಆಗ ನೀನೇ ನನ್ನ ಕಾರ್ಯದರ್ಶಿ ಆಗುವಂತೆ ಇತ್ಯಾದಿ ಹೇಳಿದಳು. ಅವಳಿಗೆ ಇನ್ನೊಂದು ಆಗ ಗೊತ್ತಿರಲಿಲ್ಲ. ನಾನು ಆ ಘಟನೆ ನಂತರ ಹುಡುಗಿಯರೊಂದಿಗೆ ಹೋಗುವುದನ್ನು ನಿಲ್ಲಿಸಿದ್ದೇನೆ. ಅಥವಾ ಆಗೆಲ್ಲಾ, ಈಗೆಲ್ಲಾ ಕೇವಲ ಹುಡುಗರನ್ನು ಹುಡುಕಿಕೊಂಡು ಹೋಗುವವನಾಗಿದ್ದೇನೆ. ಅದೂ ಗಟ್ಟಿಮುಟ್ಟಾದ ಹುಡುಗರನ್ನು ಕಂಡರೆ ನಂಗೆ ಇಷ್ಟ. ಆಸ್ಕರ್ ವೈಲ್ಡ್ ... ಹೇಗಿದ್ದ ಗೊತ್ತಾ ... ನಾನೀಗ 'ಜೇ' ಚಳವಳಿಗೆಂದು ಹತ್ತು ಕೋಟಿ ಕೊಟ್ಟಿದ್ದೇನೆ, ಗೊತ್ತಾ. ನಮ್ಮದು ಎಲ್ಲ ಕಡೆ ಬ್ರಾಂಚ್‌ಗಳಿವೆ. ನಿಮ್ಮ ಬೆಂಗಳೂರಲ್ಲಿ ಬರೀ ಲೆಕ್ಚರರ್ಸ್, ಪತ್ರಿಕಾದವರೇ ಹೆಚ್ಚೆಂದು ತಿಳಿದಿರೋದು ನಿಮ್ಮ ತಪ್ಪು. ಯಾಕೆ ನಿಮ್ಮ ಲಾಯರ್‌ಗಳಲ್ಲಿ, ಮಿನಿಸ್ಟರ್‌ಗಳಲ್ಲಿ ಎಲ್ಲರಲ್ಲೂ ಇದ್ದಾರೆ...ಇರಲಿ ಬಿಡು... ಈಗೇನು ಹೇಳ್ತಾ ಇದ್ದೆ.. ಅದೇ ಪೂಜಾಮಾಲಿನಿ... ಈಗ ನಾವಿಬ್ರೂ ಫ್ರೆಂಡ್ಸ್. ಒಳ್ಳೆ ಹುಡುಗರನ್ನು ಅವಳೇ ಆಗೀಗ ಕಳಿಸ್ತಾ ಇರ್ತಾಳೆ.

ನಿನಗೊಬ್ಬನಿಗೆ ಅಲ್ಲಾಪ್ಪಾ ಅವಸರ... ನನಗೂ ಇದೆ. ಪಂಜಾಬ್‌ನಿಂದ ನನ್ನ ಫ್ರೆಂಡ್ ಒಬ್ಬನಿಗೆ ರಾತ್ರಿ ಹನ್ನೆರಡಕ್ಕೆ ಬರ್ತೇನೆಂದು ಹೇಳಿದ್ದೇನೆ. ನಿನಗೆ ಬೆಳಿಗ್ಗೆ 8 ಗಂಟೆಗೆ ತಾನೆ ಬೆಂಗಳೂರಿಗೆ ವಿಮಾನ... ನನ್ನ ಡ್ರೈವರ್ ಬಂದು ಬಿಡ್ತಾನೆ ಬಿಡು. ಅಲ್ಲಪ್ಪಾ... ಈ ಕೊಲೆ ವಿಷಯ ಕೇಳಿ ನೀನ್ಯಾಕೆ ಅಷ್ಟು upset ಆಗಬೇಕೋ ನಂಗೆ ಗೊತ್ತಾಗ್ತಿಲ್ಲ. ಅಲ್ಲಾ ಲಾಯರ್ ಆಗದೇ ನೀನು ಇಂಥ ಎಷ್ಟು ಕೇಸುಗಳನ್ನು ನೋಡ್ತಿರ್ತೀಯಾ..... ಅದೇ ಆ ಇಬ್ಬರು ಪತ್ರಿಕಾಕರ್ತರ ಕೊಲೆಗಳಿಷ್ಟು ಭೀಭತ್ಸ ಅಂತ ನೀನೇ ಕತೆ ಹೇಳ್ತಿದ್ದೆ. ಅಷ್ಟಕ್ಕೂ ನಾನು ಮಾಡಿರೋದು ಇದೇನು ಮೊದಲನೆ ಕೊಲೆ ಅಲ್ಲವಲ್ಲಾ... ಅದೇ ಬೆಂಗಳೂರಲ್ಲಿ ನಮ್ಮ ರೂಂ ಮೇಟ್ ಅದೇ ಕನ್ನಡ ಚಳವಳಿಗಾರ ಚಂದ್ರಪ್ಪನನ್ನು ನಿನ್ನ ಎದುರಿಗೆ ಕೊಂದಿದ್ದು ಮರೆತು ಬಿಟ್ಟೆಯೇನು. ನಾನು, ನೀನು, ಚಂದ್ರಪ್ಪ IAS ಪರೀಕ್ಷೆ ಕಟ್ಟಲು ಮಾಡಿದ್ದ ರೂಂನಲ್ಲಿ ಅಲ್ಲಲ್ಲ ರೂಂನಲ್ಲಿ ಅಲ್ಲ ಕಬ್ಬನ್ ಪಾರ್ಕ್‌ನಲ್ಲಿ...ಅವನನ್ನು ಕೊಲ್ಲಬೇಕೆಂದೇ ಶಿವಾಜಿನಗರದಿಂದ ಹಳೇ ಕತ್ತಿ ತೆಗೆದುಕೊಂಡು ಬಂದಿದ್ದೆ. ಅವನನ್ನು ಕೊಲ್ಲಲು ನಾನು ಹೇಳ್ತಾ ಇದ್ದದ್ದು, 'ಅವನು ಕೇವಲ ಕನ್ನಡ ಚಳವಳಿಗಾರ ಮಾತ್ರ ಆಗಿದ್ದರೆ ಸುಮ್ಮನಿರುತ್ತಿದ್ದೆ. ಆದರೆ ಎಲ್ಲಾ ಚಳವಳಿಗಳೂ ಅದೂ ನಮ್ಮ ರಾಜ್ಯ, ದೇಶ, ವಿದೇಶಗಳ ಚಳವಳಿಗಳ ಬಗ್ಗೆ ಮಾತನಾಡುತ್ತಿದ್ದರಿಂದ ಅವನನ್ನು ಕೊಂದೆ' ಎಂದು. ಅದು ಅಷ್ಟು ಸತ್ಯ ಅಲ್ಲ. ನಾನು ಪ್ರೀತಿ ಮಾಡ್ಬೇಕು ಅಂದ್ಕೊಂಡ ಹುಡುಗಿ ಅದೇ ಈಗ ಒರಿಸ್ಸಾದಲ್ಲಿ IAS ಆಗಿದ್ದಾಳಲ್ಲಾ ಅವಳೊಂದಿಗೆ ಚಂದ್ರಪ್ಪ ಸಂಬಂಧ ಶುರುಮಾಡಿದ್ದು ಹೊಟ್ಟೆಕಿಚ್ಚು ತರಿಸಿದ್ದು ಮೂಲ ಕಾರಣ. ನನ್ನನ್ನು ನಾಮರ್ದ್ ನನ್‌ಮಗ ಅಂತಾ ಯಾವಾಗ್ಲೂ ಹೀಯ್ಯಾಳಿಸುತ್ತಿದ್ದರಿಂದಲೇ, ನಿನಗೂ ಸುಳಿವು ಕೊಡದಂತೆ, ಕತ್ತಿಯಿಂದ ಕಬ್ಬನ್‌ಪಾರ್ಕ್ ಬೆಂಚ್ ಮೇಲೆ, ನಿನ್ನೆದುರಿಗೆ ಹೊಟ್ಟೆಗೆ ಈಚೆಯಿಂದ ಆಚೆ ಕಡೆ ಬರೋ ಹಾಗೆ ತಿವಿದೆ. ಅವನು ಅಲ್ಲಿಯೇ ಸತ್ತ. ನೀನು ಹೆದರಿಕೊಂಡು IAS ಗೆ ಕೂರಲೇ ಇಲ್ಲ. ನಾನು ಅವನಿಲ್ಲದೆ ನಿರಾಳವಾಗಿ ಪರೀಕ್ಷೆ ಪಾಸಾಗಿ ನಮ್ಮ ಈ ಭಾರತ ದೇಶದಲ್ಲಿ ಅನಭಿಷಿಕ್ತ ದೊರೆಗಿಂತಲೂ ಹೆಚ್ಚಿನ ಸಮಾನತೆ ಹೊಂದಿರುವ IAS ಆದೆ. ನನ್ನ ಕೈಗೆ power ಬಂತು. of course ನೀನೂ ಸಹ ಅಂದು ಚಂದ್ರಪ್ಪನ ಮರ್ಡರನ್ನು ಹತ್ತಿರದಿಂದ ನೋಡಿದ್ದರಿಂದ ಕೊಲೆ ಇತ್ಯಾದಿ ಕೇಸುಗಳನ್ನು ನಿಭಾಯಿಸುವ ಲಾಯರ್ ಆದೆ. ಅದಕ್ಕೇ ಅಲ್ಲವೇ ತಿಂಗಳಿಗೊಮ್ಮೆ ದಿಲ್ಲಿಗೆ ಬಂದು ಹೋಗುವುದು.

ಸರಿ, ಸರಿನಪ್ಪಾ... ಈಗ ಬಾರ್‌ನಿಂದ ಹೊರಗೆ ಹೊರಡೋ ಮುಂಚೆ ಮತ್ತೆ ಇವನ ಸಹವಾಸವೇಕಪ್ಪಾ ಅಂತ ದಿಲ್ಲಿಗೆ ಬಂದವನು ಹಾಗೇ ಹೆದರಿಕೊಂಡು ಹೋಗಿ ಬಿಡಬೇಡ. ಬರುವ ಮುಂಚೆ ಫೋನ್ ಮಾಡು. ಅದೇ ಕೇಂದ್ರ ಮಂತ್ರಿಯಿಂದ ಅದೇನೊ ಸಾವಿರ ಎಕರೆ ಪ್ಲಾಂಟೂ ಏನೋ ಹೇಳ್ತಾ ಇದ್ದೆಯಲ್ಲಾ... ಅದೆಲ್ಲಾ ರಾಜಕೀಯದ ಈ ನಾಮರ್ದ್ ನಾಯಿ ಸೂಳೆಮಕ್ಕಳಿಂದ ಆಗುತ್ತೆ ಅಂತ ತಿಳ್ಕಂಡಿದಿಯಾ... ಅವರು ಲಿಟರರಿ ನಾಯಿಗಳು ಕಣೊ... ಹಂಗಾದ್ರೆ ಆ ಕನ್ನಡ ದೇಶಭಕ್ತ ಮಂತ್ರಿ ಆದಾಗಲೇ ಶಿಕ್ಷಣ ಕನ್ನಡದಲ್ಲಿ ಆಗಬೇಕಿತ್ತಲ್ಲಾ... ಈ ದೇಶ ಆಳ್ತಿರೋದು ನಾವು ಕಣೋ... ನಾವು. ಅವರಿಗೆ ನಾಯಿಗೆ ಹಾಕಿದಂಗೆ ಅದೇ ...ಕಟ್ಟಿಕೊಂಡು ಚೀಪಲಿಕ್ಕೆ ಎಲುಬು ಹಾಕಿದ್ರೆ ಆತು. ಇದೂ ನಿನಗೇನು ಗೊತ್ತಿಲ್ಲದ್ದು ಅಲ್ಲ... ನೀನು ನನ್ನ ಬಾಲ್ಯ ಸ್ನೇಹಿತ... ಪ್ರಾಣ ಸ್ನೇಹಿತ... ನಿನಗೆ ನಾನು ಪುಗಸಟ್ಟೆ ಸಹಾಯ ಮಾಡಿಕೊಡ್ತೇನೆ... ಆಯ್ತಾ....ಏಳು.... ಅರೇ.... ಅದೇನಯ್ಯ ನನ್ನ ತೊಡೆ ಸಂದಿ ಕಡೆ ನಿನ್ನ ನೋಟ.... ಈಗ ಈ ಅಶೋಕ್ ಹೋಟಲ್ ಬಾರ್‌ನಿಂದ ನೀನಿರುವ ಕರ್ನಾಟಕ ಭವನಕ್ಕೆ ಅಷ್ಟೇನೂ ದೂರವಿಲ್ಲ. ಹೀಗೆ ಪಾರ್ಲಿಮೆಂಟ್ ಭವನ ಸುತ್ತಾಡಿ ನಿನ್ನನ್ನ ಕರ್ನಾಟಕ ಭವನದ ಹತ್ತಿರ ಇಳಿಸುತ್ತೇನೆ... ಆಯ್ತಾ.....



ಪುಸ್ತಕ ಪ್ರಕಾಶನದ ಕತ್ತಲು-ಬೆಳಕು

ಪ್ರತಿ ವರ್ಷ ಹೊಸ ಓದುಗರು ಹುಟ್ಟುತ್ತಾರೆ. ಪ್ರತಿ ಊರಲ್ಲೂ ಓದುಗರು ಇದ್ದಾರೆ. 'ಪುಸ್ತಕ'ದ ಲಕ್ಷಣಗಳನ್ನು ಹೊಂದಿರುವ ಮಾಸಪತ್ರಿಕೆಗಳು, ಕನಿಷ್ಠ 25.000 ಪ್ರತಿಗಳು, ಪ್ರತಿ ತಿಂಗಳು ಮಾರಾಟವಾಗುತ್ತಿವೆ. ಹೀಗಿದ್ದಾಗ, ಸರಾಸರಿ ಕನ್ನಡ ಪುಸ್ತಕವೊಂದರ 1000 ಪ್ರತಿ ಮಾರಾಟಗೊಳ್ಳುವುದು ದುಸ್ಸಾಧ್ಯವಾದ ಪರಿಸ್ಥಿತಿ ಏಕೆ ಉಂಟಾಗಿದೆ? ಕೇವಲ 'ಪ್ರಾಧಿಕಾರ' ಅಥವಾ ಇನ್ನಿತರ ಯೋಜನೆಗಳನ್ನು ನೆಚ್ಚಿಕೊಂಡು, ಅಲ್ಲಿಗಲ್ಲಿಗೆ 'ಗಿಟ್ಟು'ವಂತೆ ಇಡಲಾದ ಪುಸ್ತಕಗಳ ದುಬಾರಿ ಬೆಲೆ ಇದಕ್ಕೆ ಕಾರಣವೆ? ಅಥವಾ ವಿತರಣೆಯ ಅವ್ಯವಸ್ಥೆಯೆ?

ಸದ್ಯಕ್ಕೆ ಕಾಣಸಿಗುವ ಪರಿಸ್ಥಿತಿ ಎಂದರೆ, ಕೈ ಬೆರಳೆಣಿಕೆಯ ನಾಮಾಂಕಿತ ಪ್ರಕಾಶನ ಸಂಸ್ಥೆಗಳನ್ನು ಹೊರತು ಪಡಿಸಿದರೆ, ಉಳಿದೆಲ್ಲ ಪುಸ್ತಕ ಪ್ರಕಾಶನಗಳ ಕಾರ್ಯಾಸಕ್ತಿ ಕೇವಲ 300-400 ಪ್ರತಿಗಳನ್ನು 'ಸರ್ಕಾರಿ ಸ್ಕೀಮು'ಗಳಿಗೆ ಮಾರುವಷ್ಟಕ್ಕೆ ನಿಂತುಬಿಡುತ್ತದೆ. ಪ್ರಕಾಶಕನಿಗೆ ಹಣ (?!) ಮತ್ತು ಲೇಖಕನಿಗೆ ಭ್ರಮೆ ಹುಟ್ಟಿಸುವಲ್ಲಿ ಮಾತ್ರ ಇವು ಯಶಸ್ವಿಯಾಗುತ್ತವೆ. ಓದಿ ಸವಿಯಬಲ್ಲ ಸಹೃದಯರಿಗೆ ತಲುಪದೇ, ಬರಿದೇ 'ನಾಮ್‌ಕೆ ವಾಸ್ತೆ' ನಡೆಯುವ ಇಂಥ ಪೊಳ್ಳು ಪ್ರಕಾಶನಗಳ ಪುರುಷಾರ್ಥವೇನು?

'ಸರ್ಕಾರಿ ಯೋಜನೆ'ಗಳ ಹಂಗಿನರಮನೆಯ ಹೊರಗೆ, ಓದುಗರಿಗೆ ಎಟುಕುವಂತೆ ಕಡಿಮೆ ಬೆಲೆಯಲ್ಲಿ ಪುಸ್ತಕ ಪ್ರಕಟಗೊಂಡು, ತಾಲೂಕು/ಜಿಲ್ಲಾ ಕೇಂದ್ರಗಳಲ್ಲಾದರೂ ಆಸಕ್ತರಿಗೆ ಸಿಗುವಂತಾದರೆ, ನಾಡಿನುದ್ದ ಪುಸ್ತಕಗಳು ತಲುಪಿ, ಪ್ರಕಾಶಕ, ಲೇಖಕ, ಓದುಗ-ಈ ಮೂವರ ಮೊಗದಲ್ಲೂ ಮುಗುಳುನಗು ಅರಳಬಹುದಲ್ಲವೆ?

ಈ ದಿಸೆಯಲ್ಲಿ ಮಾಡಬೇಕಾದುದೇನು?

ನಾಡಿನ ಹೆಸರಾಂತ ಪ್ರಕಾಶಕರು ಇಲ್ಲಿ ಚರ್ಚಿಸಿದ್ದಾರೆ.



ಬೆನ್ನೆಲುಬು ಮುರಿದ ಬಹುರಂಗಿ ಪುಸ್ತಕೋದ್ಯಮ !

ಜಿ.ಎನ್. ಅಶೋಕವರ್ಧನ
ಅತ್ರಿ ಬುಕ್‌ಸೆಂಟರ್, ಮಂಗಳೂರು


ಇಂದಿನ ಪುಸ್ತಕೋದ್ಯಮದ ದೊಡ್ಡ ವಿಪತ್ತು ಸರಕಾರೀಕರಣ. ಇಲಾಖಾ ಪ್ರಕಟಣೆಗಳು, ವಿಶ್ವವಿದ್ಯಾನಿಲಯದ ಪ್ರಸಾರಾಂಗಗಳು, ಅಕಾಡೆಮಿಗಳು ಎಂಬಿತ್ಯಾದಿ ಶುದ್ಧಾಂಗ ಸರಕಾರೀ ವ್ಯವಸ್ಥೆ ಒಂದು ಕಡೆ. ಪರಿಷತ್ತು, ಸಂಘ ಎಂಬಿತ್ಯಾದಿ ನೋಂದಾಯಿತ, ಪ್ರಜಾಸತ್ತಾತ್ಮಕ ಭ್ರಮೆ ಮೂಡಿಸುವ ಆದರೆ ಪ್ರಕಾಶನ ಸೇರಿದಂತೆ ತನ್ನೆಲ್ಲ ಚಟುವಟಿಕೆಗಳಲ್ಲೂ ಸಾರ್ವಜನಿಕರಿಗೆ ಜವಾಬ್ದಾರನಾಗದ, ಸ್ವಾವಲಂಬನೆಯಿಂದ ಸದಾ ದೂರವಿರುವ ಸರಕಾರೀ ಹಣ, ಗುಣಗಳನ್ನು ಪೂರ್ಣ ರೂಢಿಸಿಕೊಂಡಿರುವ ವ್ಯವಸ್ಥೆ ಇನ್ನೊಂದು ಕಡೆ. ಲೇಖಕ ಮತ್ತು ವಿಷಯಗಳ ಆಯ್ಕೆ, ಪ್ರಕಟಣೆಯ ಸ್ವರೂಪಗಳಲ್ಲಿ ಪೂರ್ಣ ಖಾಸಗಿತನವನ್ನು ಉಳಿಸಿಕೊಂಡರೂ, ಹಣ ಹೂಡಿ ಮರಳಿ ಪಡೆಯುವ ಪ್ರತಿ ಹಂತದಲ್ಲೂ (ಕಾಗದ, ಮುದ್ರಣ, ಖರೀದಿ, ಬಹುಮಾನ ಇತ್ಯಾದಿ) ಸರಕಾರವನ್ನೇ ನೆಚ್ಚಿರುವ ಬಳಗ ಮೂರನೆಯದು.

ವ್ಯತಿರಿಕ್ತವಾಗಿ, ನಿಯತಕಾಲಿಕಗಳು ಬಿಡಿ ಓದುಗರನ್ನೇ ನೆಚ್ಚುತ್ತವೆ. (ಒಂದೆರಡು ಅಪವಾದಗಳನ್ನು ಬಿಟ್ಟು) ಜಾಹಿರಾತುದಾರ ಪತ್ರಿಕೆಗಳ ನಿಜ ಆರ್ಥಿಕ ಆಧಾರ ಇರಬಹುದು. ಆದರೆ ಅವರನ್ನೊಲಿಸಲು, ಉಳಿಸಿಕೊಳ್ಳಲು ಅಂತಿಮವಾಗಿ ಪತ್ರಿಕೆಯ ಪ್ರಸಾರ ಸಂಖ್ಯೆಯೇ ಅಂದರೆ ಓದುಗರ ಲೆಕ್ಕವೇ ಮುಖ್ಯವಾಗುತ್ತದೆ. ಪರಿಣಾಮವಾಗಿ, ಇಂದು ಯಾವುದೇ ಹಳ್ಳಿಮೂಲೆಯಲ್ಲಿ, ಎರಡು ತಟ್ಟಿ ನೆರಳಿನ ಗೂಡಂಗಡಿಯೇ ಇರಲಿ, ಎರಡು ಪತ್ರಿಕೆ, ನಾಲ್ಕು ನಿಯತಕಾಲಿಕ ನೇತು ಬಿದ್ದಿರುವುದು ನಿಶ್ಚಯ.

ಪುಸ್ತಕೋದ್ಯಮದ ಮೊದಲ ದಿನಗಳಲ್ಲಿ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳು ಪ್ರಕಾಶನ, ವಿತರಣೆ ನಡೆಸಿದ್ದನ್ನು ಕೇಳುತ್ತೇವೆ. ಅವರಿಗೆ ಕೊಡುವ ವಿಷಯವಿತ್ತು, ದಾಟಿಸುವ ಭಾಷೆ ಇತ್ತು, ಸ್ವತಃ ಹೊತ್ತು ತಿರುಗಿಯಾದರೂ ಊರೂರಿನ ಜನರಿಗೆ ಮುಟ್ಟಿಸುವ ಛಲವಿತ್ತು. ಸಾಲದ್ದಕ್ಕೆ ಈಗ ಪತ್ರಿಕಾರಂಗಕ್ಕಿರುವಂತೇ ಸಣ್ಣ ಊರುಗಳಲ್ಲೂ ನಾಲ್ಕು ಜನ ಸೇರುವ ಸಂತೆ-ಜಾತ್ರೆಗಳಲ್ಲೂ, ಹತ್ತು ವಿಷಯಗಳ ಪುಸ್ತಕ ತರಿಸಿ, ಪ್ರದರ್ಶಿಸಿ ಮಾರುವವರಿದ್ದರು. ಮುದ್ರಣ ಕ್ರಾಂತಿ, ಕೊಳ್ಳುಗ ವಲಯದ ರೂಪ, ವ್ಯಾಪ್ತಿ (ಗ್ರಂಥಾಲಯ, ವಿದ್ಯಾ ಸಂಸ್ಥೆಗಳ ಅಗತ್ಯಗಳು ಇತ್ಯಾದಿ) ವಿಸ್ತರಿಸುತ್ತ ಹೋದಂತೆ, ಮೊದಲಿಗರ ಅಂತಃಪ್ರೇರಣೆಗಳು ಇಂದಿನವರಿಗೆ ಕೇವಲ ಘೋಷಣಾ ವಾಕ್ಯಗಳಾಗಿದ್ದಾವೆ. ಈಗ ಪುಸ್ತಕೋದ್ಯಮ ಬರಿಯ ಲೇವಾದೇವಿ. ಅದು ಓದುಗರನ್ನು ಅವಗಣಿಸಿ, ಕೊಳ್ಳುಗರ ಬೆನ್ನು ಹಿಡಿದಿದೆ.

ಸರಕಾರೀ ಪುಸ್ತಕ ವ್ಯವಸ್ಥೆ ಹಲವು ಮಹತ್ತುಗಳನ್ನು ಸಾಧಿಸಿರುವುದು ನಿಜ. ಆದರೆ ಅವೇನಿದ್ದರೂ ವ್ಯಕ್ತಿ-ಕಾಲ ಸಂಯೋಗದ ಆಕಸ್ಮಿಕ. ಅದನ್ನು ಬಂಡವಾಳವಾಗಿಟ್ಟುಕೊಂಡು ಅದೇ ವ್ಯವಸ್ಥೆ ಖಾಯಂ ಆಗುತ್ತಿರುವುದು ಸರಿಯಲ್ಲ.

ದಾರಿಬದಿಯ ವೈದ್ಯ ಸಾರಿ ಹೇಳುತ್ತಾನೆ, 'ಜಗತ್ತಿನ ಎಲ್ಲಾ ನೋವುಗಳಿಗೂ ಈ ಓತಿಯ ಎಣ್ಣೆ ರಾಮಬಾಣ'. ಬೆನ್ನಹುರಿ ಮುರಿಸಿಕೊಂಡು ಜೀವಚ್ಛವವಾಗಿರುವ ಉಡಗಳನ್ನು ನೋಡಿದ ವಿಚಾರವಂತ ಕೇಳಬೇಕು, 'ಮುರಿದ ಬೆನ್ನೆಲುಬಗೂ?'



ಕನ್ನಡ ಗ್ರಂಥ ಪ್ರಕಾಶನ - ಮಾರಾಟ

ರಮಾಕಾಂತ ಜೋಶಿ
ಮನೋಹರ ಗ್ರಂಥಮಾಲೆ, ಧಾರವಾಡ

ಕನ್ನಡ ಗ್ರಂಥ ಪ್ರಕಾಶನವು ಒಂದು ವ್ಯವಸ್ಥಿತ ರೀತಿಯಲ್ಲಿ ಬೆಳೆಯದಿರುವ ದಕ್ಕೆ ಈ ಕೆಳಗಿನವು ಕೆಲವು ಮುಖ್ಯ ಕಾರಣಗಳು

1) ಕನ್ನಡ ಗ್ರಂಥ ಪ್ರಕಾಶನ ಇನ್ನೂ ತನಕ ಕೇವಲ ಹವ್ಯಾಸೀ ವೃತ್ತಿಯಾಗಿಯೇ ಉಳಿದುಕೊಂಡಿರುವದು. ಬೆರಳೆಣಿಕೆಯ ಪ್ರಕಾಶಕರನ್ನು ಹೊರತುಪಡಿಸಿದರೆ, ಉಳಿದವರೆಲ್ಲ ಲೇಖಕ-ಪ್ರಕಾಶಕರು ಅಥವಾ ಹವ್ಯಾಸೀ ಪ್ರಕಾಶಕರು. ಇವರಿಗೆ ಪುಸ್ತಕ ಪ್ರಕಟಿಸಿ, ಲೈಬ್ರರಿಗೋ ಅಥವಾ ಸಗಟು ಖರೀದಿಗೋ ದಾಟಿಸಿ ತಮ್ಮ ಬಂಡವಾಳವನ್ನು ತಿರುಗಿ ಪಡೆಗುಕೊಳ್ಳುವ ಅಭಿಲಾಷೆ.

2) ಕರ್ನಾಟಕದಲ್ಲಿ ಕನ್ನಡ ಪುಸ್ತಕ ಮಾರಾಟ ಪೂರ್ತಿ ನಿರ್ಲಕ್ಷಿತವಾದ ವ್ಯಾಪಾರವಾಗಿದೆ. ಇಡೀ ಕನ್ನಡ ನಾಡಿನಲ್ಲಿ ಕೇವಲ ಹತ್ತಕ್ಕಿಂತ ಕಡಿಮೆ ಪೂರ್ಣ ಪ್ರಮಾಣದ ಕನ್ನಡ ಪುಸ್ತಕ ಮಾರಾಟದ ಅಂಗಡಿಗಳು ಇವೆ. (ಪ್ರತಿ ಜಿಲ್ಲೆಗೆ ಒಂದರಂತೆ ಕೂಡ ಇಲ್ಲ.)

3) ಕನ್ನಡ ಪ್ರಕಾಶನ ಪ್ರಕಟನೆಯಲ್ಲಿ ಹಿಂದೆ ಬಿದ್ದಿಲ್ಲ. 'ಕನ್ನಡ ಪುಸ್ತಕ ಪ್ರಾಧಿಕಾರ'ದ ಅಂದಾಜು ಅಂಕಿ-ಸಂಖ್ಯೆಗಳ ವಿವರಗಳಿಂದ ಅಳೆಯುವದಾದರೆ, ಪ್ರತಿ ವರ್ಷ 1500ಕ್ಕೂ ಮಿಕ್ಕಿ ಕನ್ನಡ ಪುಸ್ತಕಗಳು ಪ್ರಥಮ ಆವೃತ್ತಿಯಾಗಿ ಪ್ರಕಟಗೊಳ್ಳುತ್ತಿವೆ. ಆದರೆ ಈ ಪುಸ್ತಕಗಳ ವಿವರಗಳು ಓದುಗರಿಗೆ ಆಗಿಂದಾಗ ದೊರೆಯದಿರುವದು ಇನ್ನೊಂದು ಕೊರತೆ.

4) ಪ್ರಕಟಗೊಂಡ ಪುಸ್ತಕಗಳನ್ನು ಓದುಗರಿಗೆ ಪರಿಚಯಿಸುವಲ್ಲಿ ಕನ್ನಡ ದಿನಪತ್ರಿಕೆಗಳ ಪಾತ್ರ ಬಹಳ ಮುಖ್ಯವಾದದ್ದು. ಆದರೆ, ದುರ್ದೈವವಶಾತ್ ಕನ್ನಡ ದಿನಪತ್ರಿಕೆಗಳು ಈ ವಿಚಾರದಲ್ಲಿ ಆಸ್ಥೆ ವಹಿಸಿಲ್ಲ. ಎಷ್ಟೋ ಸಲ, ಒಂದು ವರ್ಷದ ನಂತರ ಪುಸ್ತಕ-ವಿಮರ್ಶೆಗಳು ಬಂದ ಉದಾಹರಣೆಗಳೇ ಜಾಸ್ತಿ. ಒಳ್ಳೆಯ ಅಭಿರುಚಿಯ ಪುಸ್ತಕಗಳನ್ನು ಆಯಾ ಪ್ರಕಾರಗಳಲ್ಲಿ ವಿಂಗಡಿಸಿ, ಪರಿಚಯಿಸಿದರೆ ಓದುಗನಿಗೆ ತಕ್ಷಣ ಮಾಹಿತಿ ದೊರೆತು, ಪುಸ್ತಕ ಕೊಳ್ಳುವಲ್ಲಿ ಆಸಕ್ತಿಯನ್ನು ಮೂಡಿಸಿದಂತಾಗುತ್ತದೆ.

5) ಕನ್ನಡ ಪುಸ್ತಕ ಪ್ರಕಟನೆ-ಮಾರಾಟ ಸ್ವತಂತ್ರವಾಗಿ ಬೆಳೆಯಬೇಕಾದರೆ ಸರಕಾರದ ಮೇಲೆ ಅವಲಂಬಿತಗೊಳ್ಳಬಾರದು. ತಮ್ಮವೇ ಆದ ವಿವಿಧ ರೀತಿಯ ಯೋಜನೆಗಳನ್ನು ಹಾಕಿಕೊಳ್ಳಬೇಕು. ಸರಕಾರ ಅಪ್ರತ್ಯಕ್ಷವಾಗಿ ಸಹಕಾರ ಸಲ್ಲಿಸುವಂತಿರಬೇಕು.

6) ಕರ್ನಾಟಕ ರಾಜ್ಯ ಸರಕಾರ, 'ಕನ್ನಡ ಪುಸ್ತಕ ಪ್ರಾಧಿಕಾರ'ವನ್ನು ಸ್ಥಾಪಿಸಿ, ಕನ್ನಡ ಪುಸ್ತಕ ಪ್ರಕಟನೆಯ ಅಭಿವೃದ್ಧಿಗೋಸ್ಕರ ಸ್ವಾಯತ್ತ ಸಮಿತಿ ನಿರ್ಮಿಸಿದರೂ ಅದು ಫಲಕಾರಿಯಾಗಲಿಲ್ಲ. ಅದು ಕೇವಲ ಇನ್ನೊಂದು ಪ್ರಕಟನಾ ಸಂಸ್ಥೆಯಾಗಿ, ಸಗಟು ಖರೀದಿಯ ಒಂದು ಅಂಗಸಂಸ್ಥೆಯಾಗಿ ಉಳಿಯಿತು.

7) ರಾಜ್ಯದಲ್ಲಿಯ ಪ್ರತಿಯೊಂದು ವಿಶ್ವವಿದ್ಯಾಲಯವೂ ತನ್ನ ಪ್ರಕಟನೆಯ ವಿಭಾಗ ಹೊಂದಿದೆ. ಅನೇಕ ಸಲ ಈ ವಿಶ್ವವಿದ್ಯಾಲಯಗಳಲ್ಲಿಯ ಯೋಜನೆಗಳು ಪುನರುಕ್ತಿಯಾಗುತ್ತಿವೆ. ಅವುಗಳಲ್ಲಿ ಹೊಂದಾಣಿಕೆ ಇಲ್ಲ. ಪ್ರಕಟನಾ ನಂತರದ ಮಾರಾಟ ವ್ಯವಸ್ಥೆಯ ಕಡೆಗೆ ಗಮನವೇ ಇಲ್ಲ.

8) ರಾಜ್ಯ ಸರಕಾರದ 'ಕನ್ನಡ ಮತ್ತು ಸಂಸ್ಕೃತಿ' ಇಲಾಖೆಯ ಅಡಿಯಲ್ಲಿ ಬರುವ ಎಲ್ಲ ಅಕಾಡೆಮಿಗಳೂ ಪ್ರಕಟನಾ ಸಂಸ್ಥೆಗಳಾಗಿವೆ. ಆದರೆ ಎಲ್ಲಿಯೂ ಮಾರಾಟದ-ವಿತರಣೆಯ ವ್ಯವಸ್ಥೆಯ ಬಗ್ಗೆ ಯೋಚಿಸಿಲ್ಲ. ಜಿಲ್ಲಾ

ಬಿಂಬಗಳು

ಮನೆಯಂಗಳದಲ್ಲಿ ಒಣಗುತ್ತಿರುವ ಬಟ್ಟೆಗಳು,
ಶಾಲೆಗೆ ಹೊರಟ ಮಕ್ಕಳು,
ಗುಡಿಸಲಲ್ಲಿ ಉರಿಯುತ್ತಿರುವ ಒಲೆ
... ಹೀಗೆ ಕೆಲವು ಸಂಗತಿಗಳು
ಮನಸ್ಸಿಗೆ ಮುದವನ್ನು ಕೊಡುತ್ತವೆ-
ಹಸಿರು ಸಿಗ್ನಲ್‌ಗಳಂತೆ.


ಪಾರ್ಕ್‌ನಲ್ಲಿ ಹಾಡೇಹಗಲು ಕೂತಿರುವ ನಿರುದ್ಯೋಗಿ ಯುವಕ,
ಬರೇ ಗಂಡಸರೇ ತುಂಬಿರುವ ಅಂಬಾಸಿಡರ್ ಕಾರು,
ಟೇಬಲ್ ಬಾಚುವ ಎಳೆ ಪೋರ...
ಹೀಗೆ ಕೆಲವು ಸಂಗತಿಗಳು
ಮನಸ್ಸನ್ನು ಕಳವಳಗೊಳಿಸುತ್ತವೆ-
ಕೆಂಪು ಸಿಗ್ನಲ್‌ಗಳಂತೆ.

'ಹೀಗೆ ಕಾಡುವ ಬಿಂಬಗಳ ಬಗ್ಗೆ ಬರೆಯಿರಿ' ಎಂದು ನಿಮ್ಮನ್ನು ಕೇಳಿಕೊಂಡಾಗ ಬಂದ ಪ್ರತಿಕ್ರಿಯೆ ಹೃದ್ಯವಾಗಿದೆ. ಅತ್ಯಂತ ಚುಟುಕಾಗಿ, ಚಿತ್ರಕ ಶಕ್ತಿಯಿಂದ ಕಂಗೊಳಿಸುವ ನಿರಾಡಂಬರ ಸಾಲುಗಳು-ಎಷ್ಟೆಲ್ಲ ಕಥೆಯನ್ನು ಹೇಳಬಲ್ಲವು. ಇಪ್ಪತ್ತು ಸಾಲಿನ ಪದ್ಯಗಳಿಗಿಂತ ಹೆಚ್ಚಿನ ಪರಿಣಾಮ ಸಾಧಿಸಬಲ್ಲವು.

ಇಂಥ ಆಯ್ದ ಬಿಂಬಗಳನ್ನು ಮುಂದಿನ ಕೆಲ ಪುಟಗಳಲ್ಲಿ ಕೊಡುತ್ತಿದ್ದೇವೆ. ತಮ್ಮೊಳಗೆ ಖಂಡಿತ ಒಬ್ಬ ಕವಿ ಅಥವಾ ಕತೆಗಾರನನ್ನು ಹುದುಗಿಸಿಕೊಂಡಿರುವ-ಈ ಓದುಗರಿಗೆ ಅಭಿನಂದನೆಗಳು.

ಜನವರಿ 26ರ ಬೆಳಿಗ್ಗೆ, ಇಲ್ಲಿ ಬೆಂಗಳೂರಿನ ಸಾರಕ್ಕಿಯಲ್ಲಿ ನನ್ನ ಹಾಸ್ಟೆಲ್ ರೂಂ ಮೇಟ್ ದೀಪಕ್ ಹತಾಶನಾಗಿದ್ದಾನೆ. ಅವನ ಊರು ಅಹಮ್ಮದಾಬಾದ್ ಅಲ್ಲಿ ಉಧ್ವಸ್ಥಗೊಂಡಿದೆ. ಅವನ ಬಂಧು-ಬಳಗ ಎಲ್ಲ ಅಲ್ಲಿದೆ. ಟೆಲಿಫೋನ್ ಲೈನ್ ಸಿಕ್ತಾ ಇಲ್ಲ. ಏನಾಗಿದೆ ಅಂತ ಗೊತ್ತಾಗ್ತಾ ಇಲ್ಲ. ಇಲ್ಲಿ ಟಿವಿಯೆದುರು Star Plus ನಲ್ಲಿ ಪದೇ ಪದೇ ಪ್ರಸಾರಗೊಳ್ಳುತ್ತಿರುವ Live ವರದಿಯನ್ನು ಎವೆಯಿಕ್ಕದೇ ನೋಡುತ್ತಿದ್ದಾನೆ. ತಾನು ಓಡಾಡಿದ ಗಲ್ಲಿ, ಶಾಲೆ, ಅಂಗಡಿಗಳು ಎಲ್ಲ ಕುಸಿದುಬಿದ್ದಿವೆ.

'ಅದೋ.... ಅದು ನನ್ನ ವಾಚ್ ಅಂಗಡಿ' ಎಂದು ತೊದಲುತ್ತಿರುವಂತೆ ಕ್ಯಾಮೆರಾ ಮತ್ತೆಲ್ಲೋ ಹೊರಳಿದೆ. ಅಲ್ಲಿ ಬಚಾವಾಗಿ ಉಳಿದವರು ಅವಶೇಷಗಳಲ್ಲಿ ತಮ್ಮವರನ್ನು ಅರಸಿದರೆ-ಒಬ್ಬಂಟಿ ದೀಪಕ್ ಇಲ್ಲಿ ಬೆಂಗಳೂರಿನ ಟೀವಿ ಸೆಟ್‌ನಲ್ಲಿ ತನ್ನವರಿಗಾಗಿ, ತನ್ನ ಮನೆಯವರ ಕುರುಹಿಗಾಗಿ ಬೆದಕುತ್ತಿದ್ದಾನೆ. ಅವನಿಗದು ಸುದ್ದಿ ಅಲ್ಲ.. ಅವನಿಗದು ಸರ್ವಸ್ವ... ಪ್ರತ್ಯಕ್ಷ...



ಶಶಿಧರ್ ಆರ್., ಬೆಂಗಳೂರು

ಗಿಡವೇ ಇಲ್ಲದ ಟ್ರೀಗಾರ್ಡ್‌ಗಳು

ಕೆ. ನರಸಿಂಹ ಮೂರ್ತಿ, ಬೆಂಗಳೂರು



● ನಮ್ಮ ಪ್ರೀತಿಯ ಆಕಳು ಗರ್ಭಧರಿಸಿದಾಗ ಮನೆಯವರೆಲ್ಲ ಗರ್ಭಿಣಿ ಹೆಂಗಸಿಗೆ ನೋಡಿಕೊಳ್ಳುವ ರೀತಿಯಲ್ಲಿ ಉಪಚರಿಸುತ್ತಿದ್ದೆವು. ದಿನಗಳು ತುಂಬಿದ ನಂತರ ಒಂದು ಮಂಗಳವಾರ ಹೆಣ್ಣುಕರುವಿಗೆ ನಾರ್ಮಲ್ ಆಗಿ ಜನ್ಮ ನೀಡಿತು.

ಜಿ.ವಿ.ಸುಬ್ಬರಾವ್, ಮರಿಯಮ್ಮನಹಳ್ಳಿ

ಕಚೇರಿಗಳಿಂದ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ) ಪುಸ್ತಕಗಳನ್ನು ಖರೀದಿಸಬೇಕೆಂದರೆ ಪುಸ್ತಕದ ಬೆಲೆಯಷ್ಟೇ-ಕೆಲವು ಸಲ ಅದಕ್ಕೂ ಹೆಚ್ಚು ಹಣವನ್ನು ಪುಸ್ತಕವನ್ನು ದೊರಕಿಸುವಲ್ಲಿ ಖರ್ಚು ಮಾಡಬೇಕಾಗುತ್ತದೆ.

ಆಸಕ್ತರಿಗೆ ಪುಸ್ತಕಗಳು ನಾಡಿನುದ್ದಕ್ಕೂ ತಲುಪಬೇಕಾದರೆ, ಕನ್ನಡ ಪುಸ್ತಕಗಳನ್ನು ಮಾರುವ ಅಂಗಡಿಗಳು ಹುಟ್ಟಿಕೊಳ್ಳಬೇಕು. ಈಗಿದ್ದ ವ್ಯವಸ್ಥೆಯಲ್ಲಿಯೇ ತಾತ್ಪೂರ್ತಿಕವಾಗಿ ಸಾಧ್ಯವಾಗಬಲ್ಲ ಸುಧಾರಣೆಯೆಂದರೆ 'ಕನ್ನಡ ಪುಸ್ತಕ ಪ್ರಾಧಿಕಾರ'ವು ತನ್ನ ಪ್ರಕಟನಾ ಕಾರ್ಯವನ್ನು ಸಂಪೂರ್ಣವಾಗಿ ನಿಲ್ಲಿಸಿ, ಅಪ್ರತ್ಯಕ್ಷವಾಗಿ ಕನ್ನಡ ಪ್ರಕಟನೆಯ ಅಭಿವೃದ್ಧಿಗೆ ನೆರವಾಗಬೇಕು. ಕನ್ನಡ ನಾಡಿನಲ್ಲಿ ಪ್ರಕಟಗೊಂಡ ಪುಸ್ತಕಗಳೆಲ್ಲ ಓದುಗರ ಕಣ್ಣಿಗೆ ಬೀಳುವಂತೆ ಮಾಡುವ ವ್ಯವಸ್ಥೆಯಲ್ಲಿ ಅದು ತೊಡಗಬೇಕು. ಕನ್ನಡದಲ್ಲಿ ಪ್ರಕಟಕೊಂಡ ಪುಸ್ತಕಗಳೆಲ್ಲ 5 ವಿಭಾಗ ಕೇಂದ್ರಗಳಲ್ಲಿ ಅಂದರೆ ಗುಲ್ಬರ್ಗಾ, ಧಾರವಾಡ, ಶಿವಮೊಗ್ಗ, ಮೈಸೂರು, ಬೆಂಗಳೂರು ನಗರಗಳಲ್ಲಿ ಒಂದೆಡೆ ಮಾರಾಟಕ್ಕೆ ಲಭ್ಯವಾಗಬೇಕು.

ಈಗಿರುವ 'ಸಗಟು ಖರೀದಿ'ಯ ವಿಧಾನದಲ್ಲೇ ಸ್ವಲ್ಪ ಬದಲಾಯಿಸಿ ಅದನ್ನು ಓದುಗರ ಆಂದೋಲನವನ್ನಾಗಿ ಪರಿವರ್ತಿಸಬೇಕು. ಪ್ರತಿ 3 ತಿಂಗಳಿಗೊಮ್ಮೆ ಆಯಾ ತಿಂಗಳುಗಳಲ್ಲಿ ಪ್ರಕಟಗೊಂಡ ಪುಸ್ತಕಗಳ 100 ಪ್ರತಿಗಳನ್ನು ಖರೀದಿಸಿ, ಅವನ್ನು ಪ್ರತಿ ವಿಭಾಗಕ್ಕೆ 20 ಪ್ರತಿಗಳಂತೆ ಮಾರಾಟಕ್ಕೆ ಕಳಿಸಬೇಕು. ಹೀಗೆ 1 ವರ್ಷದವರೆಗೆ ಪುಸ್ತಕಗಳನ್ನು ಕನ್ನಡ ಓದುಗರ ಕಣ್ಣಿಗೆ ಹಾಕಿ, ನಂತರ ಮಾರಾಟವಾಗದೇ ಉಳಿದ ಪುಸ್ತಕಗಳನ್ನು ಲೈಬ್ರರಿಗೆ ಕಳಿಸಬೇಕು. ಮಾರಾಟವಾದ ಪುಸ್ತಕಗಳಷ್ಟು ಪ್ರತಿಗಳನ್ನು ಮತ್ತೆ ಸೇರಿಸಿ, ಲೈಬ್ರರಿಗೆ ವಿತರಿಸಬೇಕು. ಮಾರಾಟವಾದ ಹಾಗೆ, ಆಯಾ ವಿಭಾಗಕ್ಕೆ ಮತ್ತೆ ಪ್ರತಿಗಳನ್ನು ಸಲ್ಲಿಸುತ್ತಿರಬೇಕು.



ನಾಮ್‌ಕೆ ವಾಸ್ತೆ ಪ್ರಕಾಶಕರ ಹಾವಳಿ

ಮನೋಹರ ಘಾಣೇಕರ
ಸಮಾಜ ಪುಸ್ತಕಾಲಯ, ಧಾರವಾಡ

ಮುಂಚಿನಿಂದಲೂ ಕನ್ನಡಿಗರಲ್ಲಿ ಪುಸ್ತಕ ಕೊಂಡೋದುವ ಚಟ-ಹವ್ಯಾಸ ಅತಿ ಕಡಿಮೆ! ವ್ಯಾಸಂಗ ವೃತ್ತಿಯೂ ವಿರಳ! (ನಮ್ಮ ನೆರೆ ರಾಜ್ಯಗಳಾದ ಕೇರಳ, ಮಹಾರಾಷ್ಟ್ರ, ತಮಿಳುನಾಡುಗಳ ಸಾಕ್ಷರ ಜನತೆಯ ಜೊತೆ ಹೋಲಿಸಿದಾಗ) ಆದರೂ, ಕಳೆದ ಶತಮಾನದ ಐವತ್ತರ ದಶಕದಲ್ಲಿ ಪ್ರಾರಂಭವಾಗಿದ್ದ ಕಿರು ಹೊತ್ತಿಗೆ (Pocket Books) ಪ್ರಕಾಶನದ ಸಕಾಲದಲ್ಲಿ, ಕನ್ನಡ ಪುಸ್ತಕಗಳು, ಅದೂ ಹೆಚ್ಚಾಗಿ ಕಾದಂಬರಿ ಸಾಹಿತ್ಯ, ಒಂದೆರಡು ವರ್ಷಗಳಲ್ಲಿ ಎರಡರಿಂದ ಐದು ಸಾವಿರ ಪ್ರತಿಗಳವರೆಗೆ, ಕೇವಲ ಬಿಡಿ ಓದುಗರಲ್ಲಿ ಮಾರಾಟವಾಗಿ ಹೋಗುವ ಸುವರ್ಣ ಕಾಲವು ಪ್ರಾಪ್ತವಾಗಿತ್ತು.

ನಂತರ, ಕಾಗದ ಹಾಗೂ ಮುದ್ರಣದ ಬೆಲೆಗಳ ಸತತ ಬೆಲೆಯೇರಿಕೆಯಿಂದಾಗಿ, ದಿನೇ ದಿನೇ ಪುಸ್ತಕಗಳ ಬೆಲೆಯೂ ಏರುತ್ತ ನಡೆಯಿತು. (ಪ್ರತಿ ವರ್ಷ ಕಾಗದದ ಮೇಲೆ ಸರಕಾರ ಕರಭಾರವನ್ನು ಹೇರುತ್ತಲೆ ಹೋಯಿತು!) ಈ ಪರಿಸ್ಥಿತಿಯಿಂದಾಗಿ, ಜನ ಪುಸ್ತಕ ಕೊಳ್ಳುವುದನ್ನು ಕ್ರಮೇಣ ಕಡಿಮೆ ಮಾಡತೊಡಗಿದರು. ಕಥೆ, ಧಾರಾವಾಹಿ, ಕಾದಂಬರಿ, ಹರಟೆ, ಚುಟುಕ, ರಾಜಕೀಯ ವಿದ್ಯಮಾನ, ಪ್ರವಾಸ ಇತ್ಯಾದಿ ವೈವಿಧ್ಯಮಯ ವಿಷಯಗಳ ವರ್ಣಮಯ, ಚಿತ್ರಮಯ ಪತ್ರಿಕೆಗಳತ್ತ ಜನ ವಾಲತೊಡಗಿದರು. ಆಗ, ಕೇವಲ ರೂ. 3-4ಕ್ಕೆ ಒಂದರಂತೆ ಈ ಪತ್ರಿಕೆಗಳು, ತಮ್ಮ ಬೃಹತ್ ಮಾರಾಟ ಜಾಲದ ಮುಖಾಂತರ ಎಲ್ಲೆಡೆ ಲಭ್ಯವಾಗ ತೊಡಗಿದ್ದವು. ಉದ್ದಿಮೆ, ವ್ಯಾಪಾರ, ಕೈಗಾರಿಕೆಗಳು ದಾಪುಗಾಲಿಟ್ಟು ಭರದಿಂದ ಬೆಳೆಯುತ್ತಿದ್ದಂತೆ, ಕೆಲಸಕ್ಕಾಗಿ ದೂರದೂರ ಹೋಗಿ ಬರುವ ನಗರವಾಸಿಗಳಿಗೆ, ಪುಸ್ತಕ ವಾಚನಕ್ಕೆ ಹೆಚ್ಚು ಸಮಯ ಸಿಕ್ಕದಂತಾಗಿತ್ತು. ಏನೋ, ಮನೆಯಲ್ಲಿರುವ ಮಧ್ಯಮ ವರ್ಗದ ಮಹಿಳೆಯರು ಮಾತ್ರ, ಸಾಧಾರಣ ಒಂದು ದಶಕದ ಪರ್ಯಂತ, ತಮ್ಮ ಮನರಂಜನೆಗೋಸ್ಕರ ಕಥೆ, ಕಾದಂಬರಿ ಪುಸ್ತಕಗಳನ್ನೇ ನೆಚ್ಚಿಕೊಂಡಿದ್ದರು. ಮುಂದೆ ದಿಢೀರನೆ ಟಿ.ವಿ. ಯುಗ ಪ್ರಾರಂಭವಾಗಿ, ಅದುವೇ ಸರ್ವರ ಮನೋರಂಜನೆಯ ಪ್ರಮುಖ ಸಾಧನವಾಗಿ ಮಾರ್ಪಟ್ಟಿತು. ಈ ಶ್ರವಣ-ದೃಶ್ಯ ಮಾಧ್ಯಮದ ಏರಾಟದಿಂದಾಗಿ, ಪುಸ್ತಕ ವಾಚನಕ್ಕೆ ಬಲವಾದ ಕೊಡಲಿಯೇಟು ಬಿದ್ದಿತು.

ಪತ್ರಿಕೆಗಳಿಗೆ, ಕಡಿಮೆ ಬೆಲೆಗೂ ಮಾರಲು ಶಕ್ಯವಾಗುವ ಹಲವು ಸೌಕರ್ಯ ಸೌಲಭ್ಯಗಳಿವೆ. ಅವೆಂದರೆ, ರಿಯಾಯ್ತಿ ಬೆಲೆಗೆ ದೊರೆಯುವ ನ್ಯೂಜ್‌ಪ್ರಿಂಟ್ ಕಾಗದ, ಹೇರಳವಾಗಿ ಬರುವ ಜಾಹಿರಾತಿನ ಧನರಾಶಿ, ದೀರ್ಘ ಸಂಖ್ಯೆಯ ಮುದ್ರಣದಿಂದಾಗಿ ಮಿತವಾದ ಮುದ್ರಣ ವೆಚ್ಚ. ಜೊತೆಗೆ ರಾಜ್ಯಾದ್ಯಂತ ಇರುವ ನ್ಯೂಜ್ ಏಜಂಟರ ಸುಲಭ ಲಭ್ಯತೆಯಿಂದಾಗಿ ಸುವ್ಯವಸ್ಥಿತ ಮಾರಾಟ ಜಾಲ. (ಪುಸ್ತಕಗಳ ಅರ್ಧಾಂಶ ಬೆಲೆಗಿಂತ ಪತ್ರಿಕೆಗಳ ಬೆಲೆ ಅಗ್ಗ) ಈ ಯಾವ ಸೌಲಭ್ಯವೂ ಕನ್ನಡ ಪುಸ್ತಕಗಳ ಹಣೆಯ ಬರಹದಲ್ಲಿಲ್ಲದುದು ದುರಾದೃಷ್ಟ.

ಕೊಂಡೋದುವ ಗಿರಾಕಿಗಳೂ ಇಲ್ಲ, ಬಜೆಟ್ ಇಲ್ಲದುದರಿಂದ ಸರಕಾರದಿಂದಲೂ ಪುಸ್ತಕ ಖರೀದಿಯಿಲ್ಲ, ವಾಚನಾಲಯಗಳ ಖರೀದಿಗೂ ನಿರ್ಬಂಧ-ಹೀಗೆ ತಾಪತ್ರಯಗಳು ಗಂಟುಬಿದ್ದರೆ, ಕನ್ನಡ ಪುಸ್ತಕ ಪ್ರಕಾಶಕ ಹಾಗೂ ಮಾರಾಟಗಾರರ ಗತಿಯೇನು? ಸಾವಿರ ಪ್ರತಿಗಳ ಒಂದು ಆವೃತ್ತಿಯ ಮಾರಾಟಕ್ಕೆ ಆರೆಂಟು ವರ್ಷ ಕಾಯಬೇಕಾದ ಪರಿಸ್ಥಿತಿಯಿರುವಾಗಲೇ ಮೀಡಿಯಾಗಳ ಭರಾಟೆ ವೆಬ್‌ಸೈಟ್ ಮಾಹಿತಿ ತಂತ್ರಜ್ಞಾನಗಳ ವೇಗದ ಬೆಳವಣಿಗೆ ಶೀಘ್ರಗತಿಯಿಂದ ನಡೆದಿರುವುದರಿಂದ, ಎಲ್ಲಿ ಇವೆಲ್ಲ ಸೇರಿ, ನಮ್ಮ ಪುಸ್ತಕ ಸಂಸ್ಕೃತಿಯನ್ನೇ ಹಾಳುಗೆಡಹಿಬಿಡುವವೋ ಎಂಬ ಭೀತಿ ಅಧಿಕವಾಗುತ್ತಿದೆ.

ಮೊದಲೇ ಎಡವಿಬಿದ್ದಿರುವ ಕನ್ನಡ ಪುಸ್ತಕ ಪ್ರಕಾಶನದಂಥ ಉದ್ಯೋಗಕ್ಕೆ,

● ಕಣ್ಣಿನಲ್ಲಿ ನೀರು ಹನಿಸುತ್ತಾ ಗಾಡಿ ಎಳೆಯುತ್ತಿದ್ದ ಎತ್ತು.

● ಅಪರಿಚಿತರಾದರೂ ಪರಿಚಿತರಂತೆ ಕಂಡ ಕಣ್ಣುಗಳು.

ನಳಿನಿ ವಿಜಯಕುಮಾರ್, ಹಾಸನ

ವ್ಯರ್ಥವಾಗಿ ಸರಕಾರವೂ ಕೈಹಾಕುವುದರ ಬದಲು (ಪ್ರಾಧಿಕಾರ, ಅಕಾಡೆಮಿ, ಸಂಸ್ಕೃತಿ ಇಲಾಖೆ ಇ.-ಇ.) ಅದೇ ಹಣವನ್ನುಪಯೋಗಿಸಿ, ಪ್ರತಿಯೊಂದು ತಾಲೂಕಿಗೂ ಒಂದೆರಡು ಜನರಲ್ ಪುಸ್ತಕಗಳ ಅಂಗಡಿಗಳನ್ನು ತೆರೆಯಲು ಸಬ್ಸಿಡಿ ಸಹಾಯ ಒದಗಿಸಿ ಏರ್ಪಾಡು ಮಾಡಿದ್ದರೆ ವಿದ್ಯಾವಂತ ಯುವಕರಿಗೆ ಒಂದು ಉದ್ಯೋಗ-ಜೀವನಕ್ಕೊಂದು ಆಧಾರ ಲಭಿಸುವುದರೊಂದಿಗೆ, ರಾಜ್ಯದಲ್ಲಿ ಪುಸ್ತಕ ಮಾರಾಟ ಕೇಂದ್ರಗಳ ಜಾಲವೂ ವಿಸ್ತೃತಗೊಂಡು, ಕನ್ನಡದಲ್ಲಿ ಪ್ರಕಟವಾಗುವ ಪ್ರತಿಯೊಂದು ಪುಸ್ತಕದ ಸಾವಿರಾರು ಪ್ರತಿಗಳು ಏಕಕಾಲಕ್ಕೆ ಈ ಎಲ್ಲ ಮಳಿಗೆಗಳಲ್ಲಿ ಬಿಡುಗಡೆಯಾಗಿ, ಮಾರಾಟವಾಗಿ, ಯಾವ ಪ್ರಕಾಶಕನೂ ಸರಕಾರೀ ಸಗಟು ಖರೀದಿಯಂಥ (Bulk purchase) ಸಹಾಯಹಸ್ತಕ್ಕಾಗಿ ಬಾಯ್ಬಿಡದೆ, ತನ್ನ ಕಾಲಮೇಲೆ ತಾನು, ಯಾರ ಹಂಗೂ ಇಲ್ಲದೆ ನಿಲ್ಲುವಂತಾಗುತ್ತಿತ್ತು. ಪುಸ್ತಕಗಳ ಬೆಲೆಯೂ ತಹಬಂದಿಗೆ ಬರಬಹುದಿತ್ತು. ವಿವಿಧ ಸ್ಕೀಮುಗಳನ್ನು ನೋಡಿಕೊಂಡು ಇಮ್ಮಡಿ-ಮೂರ್ಮಡಿ ಬೆಲೆಯಿರಿಸಿ ಪುಸ್ತಕ ಪ್ರಕಾಶನ ಮಾಡುವ ಹವ್ಯಾಸೀ ನಾಮ್‌ಕೆವಾಸ್ತೆ ಪ್ರಕಾಶಕರ ಹಾವಳಿಯೂ ತಪ್ಪಬಹುದಿತ್ತು.

ಪಾರ್ಲರ್‌ನಲ್ಲಿ ಬಾಬ್‌ಕಟ್ ಮಾಡುವ
ಉದ್ದ ಕೂದಲಿನ ಹುಡುಗಿ.
ಮಗನ ವಯಸ್ಸಿನ ಹುಡುಗನಿಗೆ
ಅಪಘಾತವಾದ ಸುದ್ದಿ.

ಒಗ್ಗರಣೆಯ ಶಬ್ದಸಹಿತ ಪರಿಮಳ
ಪಿರಿಯಡ್ ಮುಗಿದ ಸೂಚನೆಯ ಬೆಲ್ಲು

ಭ.ರಾ. ವಿಜಯಕುಮಾರ್, ಹಾಸನ



ಸಣ್ಣ ಪ್ರಕಾಶಕರ ಎದುರಿಗಿರುವ ಬಿಕ್ಕಟ್ಟು ಸಣ್ಣದಲ್ಲ

ವಿಷ್ಣು ನಾಯ್ಕ
ರಾಘವೇಂದ್ರ ಪ್ರಕಾಶನ, ಅಂಕೋಲ

ನಿಜ, ಪುಸ್ತಕದ ಲಕ್ಷಣಗಳನ್ನು ಹೊಂದಿರುವ ಮಾಸಪತ್ರಿಕೆಗಳ ಕನಿಷ್ಠ 25,000 ಪ್ರತಿಗಳು ಮಾರಿಹೋಗುತ್ತಿರುವಾಗ, ಕನ್ನಡ ಪುಸ್ತಕವೊಂದರ 1,000 ಪ್ರತಿ ಮಾರಾಟಗೊಳ್ಳದಿರುವ ಬಗ್ಗೆ, ಸಂಬಂಧಪಟ್ಟ ಎಲ್ಲರೂ ಗಂಭೀರವಾಗಿ ಯೋಚಿಸಬೇಕಾದದ್ದಿದೆ. ಇದಕ್ಕೆ ಮುಖ್ಯ ಕಾರಣ ಪುಸ್ತಕಗಳ ದುಬಾರಿ ಮುಖಬೆಲೆ. ಒಂದು ಮಾಸಿಕದ ಮಾಲಿಕನಿಗೆ 100ಪುಟಗಳ 25,000 ಪ್ರತಿಗಳನ್ನು ಹೊರತರುವಾಗ ಕೇವಲ 5.00 ರೂ ಮುಖಬೆಲೆ ಇಡಲು ಸಾಧ್ಯವಾಗುತ್ತದೆ. ಅದೇ 100 ಪುಟಗಳ ಒಂದು ಪುಸ್ತಕದ 1,000 ಪ್ರತಿಗೆ ಒಬ್ಬ ಪ್ರಕಾಶಕ ಅಥವಾ ಲೇಖಕ ಕನಿಷ್ಠ 50.00 ರೂ. ಮುಖಬೆಲೆ ಇಡಬೇಕಾಗುತ್ತದೆ. ಒಂದು ಮಸಾಲಾ ದೋಸೆಯ ಬೆಲೆಗೆ ನೂರು ಪುಟಗಳ ಸಾಹಿತ್ಯ ಸಿಗುವುದಾದರೆ ಅದು ಯಾರಿಗೆ ಬೇಡ? 50.00 ರೂ. ಅಂದೊಡನೆ ಯಾರೇ ಆಗಲಿ ಸ್ವಲ್ಪ ಯೋಚನೆಗೆ ಬೀಳುತ್ತಾನೆ.

ಈ ಸಮಸ್ಯೆಗೆ ಇನ್ನೊಂದು ಮುಖವಿದೆ. ನಮ್ಮ ನಾಡಿನಲ್ಲಿ ಪುಸ್ತಕಗಳ ಮಾರಾಟಕ್ಕೆ ಖಾಸಗಿ ಕ್ಷೇತ್ರದಲ್ಲಿ ವ್ಯವಸ್ಥಿತ ಜಾಲವಿಲ್ಲ. ಒಂದು ಪುಸ್ತಕ ಹೊರಬಂದಾಕ್ಷಣ ಆ ಪುಸ್ತಕದ ಬಗ್ಗೆ ಇಡೀ ನಾಡು ತಿಳಿದುಕೊಳ್ಳುವಂತೆ ಮಾಡುವ ಪ್ರಚಾರ ಕ್ರಮವೂ ಇಲ್ಲ. ಅಂಕೋಲೆಯಲ್ಲಿ ಬಿಡುಗಡೆಯಾದ ಪುಸ್ತಕ ಬೆಂಗಳೂರಿನ ಜನಕ್ಕೆ ಗೊತ್ತಾಗುವುದು ರಾಜ್ಯ ವ್ಯಾಪ್ತಿಯ ಪತ್ರಿಕೆಗಳಲ್ಲಿ ಅದರ ಬಗ್ಗೆ ಯಾರಾದರೂ ಬರೆದಾಗ ಮಾತ್ರ.

ಪುಸ್ತಕ ಪ್ರಕಟಣೆ ಮತ್ತು ಮಾರಾಟವನ್ನು ಒಂದು ಉದ್ಯಮವಾಗಿ ಪರಿಗಣಿಸಿ ಆ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಪ್ರಕಾಶಕರು, ಇಂದು ನಮ್ಮ ನಾಡಿನಲ್ಲಿ ಒಂದು ಕೈಬೆರಳೆಣಿಕೆಗೆ ಹಿಡಿಸುವಷ್ಟೂ ಇಲ್ಲ. ಪಕ್ಕದ ಕೇರಳದಲ್ಲಿರುವಂತೆ ನಮ್ಮಲ್ಲಿ, ಗ್ರಂಥ ಪ್ರಕಟಣೆಯ ಸಹಕಾರಿ ಸಂಘಟನೆಯೂ ಇಲ್ಲ.

ಸರಕಾರೀ ಸ್ಕೀಮುಗಳಿಗೆ ಮಾರುವ ಪ್ರತಿಗಳ ಹೊರತಾಗಿ ಇಂದು ಸಣ್ಣ ಸಣ್ಣ ಪ್ರಕಾಶಕರಿಗೆ ಬೇರೆ ದಾರಿಯೇ ತೆರೆದಿಲ್ಲ ಎಂಬಂಥ ಬಿಕ್ಕಟ್ಟು ಸೃಷ್ಟಿಯಾಗಿದೆ. ಅದನ್ನು ಹೀಗೆ ನಾನು ಪಟ್ಟಿ ಮಾಡಬಲ್ಲೆ.

1) ನಮ್ಮ ಲೇಖಕರೂ ಸೇರಿದಂತೆ ಅನೇಕ ಓದುಗರಲ್ಲಿ, ಕೆಲವು ನಿರ್ದಿಷ್ಟ ಪ್ರಕಾಶನ ಸಂಸ್ಥೆಗಳ ಮೂಲಕ ಹೊರಬಂದ ಗ್ರಂಥಗಳು ಮಾತ್ರ ಅಧ್ಯಯನ ಯೋಗ್ಯ ಎಂಬ ವಿಚಿತ್ರ ಭಾವನೆ ಮನೆಮಾಡಿಕೊಂಡಿದೆ. ಸಣ್ಣ ಪುಟ್ಟ ಪ್ರಕಾಶನಗಳು ಅಥವಾ ಲೇಖಕರೇ ಸ್ವತಃ ಪ್ರಕಟಿಸಿದ ಗ್ರಂಥಗಳ ಬಗ್ಗೆ ಬಹಳಷ್ಟು ಓದುಗರು ಪೂರ್ವಾಗ್ರಹ ಪೀಡಿತರಾದಂತಿದೆ.

2) ದೊಡ್ಡ ದೊಡ್ಡ ಪುಸ್ತಕ ವ್ಯಾಪಾರಿಗಳು ಇಂದು ನಾಮಾಂಕಿತರ ಕೃತಿಗಳನಷ್ಟೇ ಕೊಂಡು ಹೊಸಬರ ಪುಸ್ತಕಗಳನ್ನು ಅಸಡ್ಡೆಯಿಂದ ಕಾಣುತ್ತಿದ್ದಾರೆ.

3) ನಮ್ಮ ರಾಜ್ಯದಲ್ಲಿ 6,000ಕ್ಕಿಂತ ಹೆಚ್ಚು ಗ್ರಂಥಾಲಯಗಳಿವೆಯೆಂದು ಕೇಳಿದ್ದೇನೆ (ಗ್ರಾಮ ಮತ್ತು ಮಂಡಲ ಗ್ರಂಥಾಲಯಗಳೂ ಸೇರಿ). ಆದರೆ ಪುಸ್ತಕ ಪ್ರಕಾಶಕನಿಂದ ಆ ಗ್ರಂಥಾಲಯಗಳು ನೇರವಾಗಿ ಗ್ರಂಥ ಖರೀದಿ ಮಾಡುವ ಅವಕಾಶವೇ ಇಲ್ಲ. ಅವಕ್ಕೆಲ್ಲ ರಾಜ್ಯದ ಅಥವಾ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಂದಲೇ ಪುಸ್ತಕಗಳು ಪೂರೈಕೆಯಾಗಬೇಕು. ಅಂದಾಗ, ಸಣ್ಣ ದೊಡ್ಡ ಎಲ್ಲ ಪ್ರಕಾಶಕರು, ಸರಕಾರದ ಸ್ಕೀಮುಗಳನ್ನೇ ಅವಲಂಬಿಸಿದೆ ಬೇರೆ ದಾರಿಯೇ ಇಲ್ಲ. ಒಂದು ವೇಳೆ ಪ್ರತಿಯೊಂದು ಗ್ರಾಮ, ಮಂಡಲ ಗ್ರಂಥಾಲಯಗಳಿಗೆ ತಮ್ಮದೇ ಆದ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡು ನೇರ ಖರೀದಿ ಮಾಡುವ ಅವಕಾಶ ಇದ್ದಿದ್ದರೆ 6,000 ಮೀರಿ ಗ್ರಂಥಾಲಯಗಳಿರುವ ಈ ರಾಜ್ಯದಲ್ಲಿ, ಒಂದು ಪುಸ್ತಕದ ಒಂದು ಸಾವಿರ ಪ್ರತಿ ಮಾರಾಟ ಮಾಡುವುದು ದುಸ್ಸಾಧ್ಯದ ಮಾತೇನೂ ಆಗಿರಲಿಲ್ಲ.

4) ನಮ್ಮ ಪ್ರಕಾಶಕರಲ್ಲಿ ಪರಸ್ಪರ ವಿನಿಮಯ ಪ್ರವೃತ್ತಿ ಕಡಿಮೆ. ಒಂದು ಭಾಗದಲ್ಲಿ ಪ್ರಕಟವಾದ ಪುಸ್ತಕಗಳನ್ನು ಇನ್ನೊಂದು ಭಾಗದ ಪ್ರಕಾಶಕರು ಗ್ರಂಥ ವಿನಿಮಯ ಆಧಾರದ ಮೇಲೆ ಕೊಡಕೊಳ್ಳುವ ಪ್ರವೃತ್ತಿ ಬೆಳೆದಲ್ಲಿ, 5 ಕೋಟಿ ಜನರಿರುವ ನಾಡಿನಲ್ಲಿ 5,000 ಪ್ರತಿಗಳಾದರೂ ಸುಲಭದಲ್ಲಿ ಮಾರಾಟವಾಗಬೇಕು.

ಕೊನೆಯದಾಗಿ ನಮ್ಮ ಓದುಗ ಬಂಧುಗಳ ಬಗ್ಗೆ:

ನಮ್ಮ ಮನೆಯ ಕಪಾಟಿನ ಅಲಂಕಾರಕ್ಕಾಗಿ ಒಂದು ವಸ್ತು ಕೊಳ್ಳುವಾಗ ಹಿಗ್ಗುವ ಮನಸ್ಸು ಒಂದು ಹೊಸ ಪುಸ್ತಕ ಕೊಳ್ಳುವುದಕ್ಕೆ ಒಗ್ಗದೇ ಇರುವುದು ಸುಸಂಸ್ಕೃತ ಮಿದುಳಿನ ಲಕ್ಷಣ ಅಲ್ಲ. ಒಂದು ಪುಸ್ತಕ ಒಂದು ಅಸಾಧಾರಣ ಮೆದುಳಿನ ಫಲ. ಅದನ್ನು ಅರಿಯುವ ಕುತೂಹಲ ನಮ್ಮ ಓದುಗರಲ್ಲಿ ಹೆಚ್ಚಿದಷ್ಟೂ, ಗ್ರಂಥೋದ್ಯಮ ಸಶಕ್ತವಾಗಿ, ತನ್ನ ಕಾಲ ಮೇಲೆ ತಾನು ನಿಲ್ಲಬಹುದು.

ಭ್ರೂಣದಲ್ಲೇ ಕರಗಿಹೋದ ನನ್ನದೇ
ಜೀವಭಾವದ ಪ್ರತಿರೂಪ.


ಕಾರ್ಯದೊತ್ತಡದಲ್ಲಿ
ಗಮನಹರಿಸಲಾಗದಿದ್ದಾಗ,
ನೂರು ಪ್ರಶ್ನೆಗಳ ಹೊತ್ತುನಿಲ್ಲುವ
ಮಗನ ಸಪ್ಪೆ ಮುಖ.

ರೂಪ, ಹಾಸನ

ವೇಗವಾಗಿ ನಡೆಯುವ ವೃದ್ಧರು.

ಸ್ನಾನದ ಕೊಠಡಿಯಿಂದ
ಹೊರಬರುತ್ತಿರುವ ಹಾಡು.

ಸಿ.ಎಚ್.ಮಧುಕುಮಾರ್, ಮದ್ದೂರು



ಖಾಸಗಿ ಮಿತ್ರನನ್ನು ಮರೆತಂತೆ

ಬಾಕಿನ
ಲಿಪಿ ಪ್ರಕಾಶನ, ಬೆಂಗಳೂರು

ಈಗ ಒಂದು ಪುಸ್ತಕವನ್ನು ಮುದ್ರಣ ಮಾಡುವುದು ಸುಲಭ ಸಾಧ್ಯವಾದ ಕೆಲಸವಾಗಿದೆ. ಡಿಟಿಪಿ ಅಕ್ಷರ ಜೋಡಣೆ, ಆಫ್‌ಸೆಟ್ ಮುದ್ರಣ, ಬಣ್ಣದ [illegible] ಅಲಂಕಾರ, ಇವೆಲ್ಲ ಪುಸ್ತಕದ ಬಾಹ್ಯ ಸ್ವರೂಪವನ್ನು ಬದಲಿಸಿವೆ. ಪುಸ್ತಕ ಸುಂದರವಾಗಿ, ಅಚ್ಚುಕಟ್ಟಾಗಿ ಪ್ರಕಟವಾಗುತ್ತಿದೆ.

ಯಾವ ಪುಸ್ತಕವೂ ಸಾಧಾರಣವಾಗಿ 50 ರೂಪಾಯಿಗಿಂತ ಕಡಿಮೆ ಇಲ್ಲ. ಕೆಲವು ವಿಶೇಷ ಪುಸ್ತಕಗಳು 150,200,300 ರೂ.ಗಳ ಮೊತ್ತವನ್ನು ಹೊತ್ತುಕೊಂಡು ಓದುವವನಿಗೆ ಭಾರವಾಗಿರುತ್ತವೆ. ಆ ಕೃತಿ ಬೇಕೇ ಬೇಕು ಎನ್ನುವ ಬೆರಳೆಣಿಕೆಯ ಮಂದಿ ಅವನ್ನು ಹೇಗೋ ಕೊಂಡು ಕೊಳ್ಳುತ್ತಾರೆ.

ಈ ಕನ್ನಡ ನಾಡಿನಲ್ಲಿ ಪುಸ್ತಕದ ಅಂಗಡಿಗಳು ಬೆರಳೆಣಿಕೆಯಷ್ಟೆ! ಪುಸ್ತಕದ ಅಂಗಡಿಯೆಂದರೆ ಅದು ಸರಸ್ವತಿ ಭಂಡಾರ. ಆ ಅಂಗಡಿಗೆ ಅದರದ್ದೇ ಆದ ಒಂದು ವಿಶಿಷ್ಟತೆಯಿರಬೇಕು. ಅಂಗಡಿಗೆ ಬರುವ ಹೊಸ ಪುಸ್ತಕಗಳ ಬಗ್ಗೆ ಆಗಿಂದಾಗ್ಗೆ ಓದುಗ-ಗ್ರಾಹಕನಿಗೆ ಮಾಹಿತಿ ನೀಡಬೇಕು. ಅವನ ಅಭಿರುಚಿಯನ್ನು ತಿಳಿದು ಅವನಿಗೆ ಬೇಕಾದ 'ಆಹಾರ'ವನ್ನು ಕೊಡಬೇಕು. ಇಂಥಾ ಪುಸ್ತಕದ ಅಂಗಡಿ ನಮ್ಮಲ್ಲಿ ಎಷ್ಟಿವೆ?

ನಮ್ಮ ಪುಸ್ತಕ ಪ್ರಕಟಣೆಗಳಲ್ಲಿ ಕವಿತಾ ಸಂಗ್ರಹಕ್ಕೆ ಮೊದಲ ಸ್ಥಾನ. ಹತ್ತಾರು ಕವನಗಳನ್ನು ಬರೆದ ಕವಿ ಮಹಾಶಯ, ತಾನೇ ತನ್ನ ಕೃತಿಯನ್ನು ಅಚ್ಚು ಮಾಡುತ್ತಾನೆ. ತಾನು ಹಣ ಕಳಕೊಂಡರೂ 'ಕವಿ'ಯಾದೆನೆಂಬ ಹಿಗ್ಗಿನಿಂದ ಪ್ರಕಟಣೆ ವ್ಯವಸ್ಥೆಗೆ ಕೊಡಲಿಯೇಟು ಕೊಡುತ್ತಾನೆ. ಈ ಲೇಖಕ ತನ್ನ ಪುಸ್ತಕಗಳನ್ನು ಸ್ನೇಹಿತರಿಗೆ ಹಂಚುತ್ತಾನೆ. ಉಳಿದುದನ್ನು ಶೇಕಡಾ 50ರಿಂದ 60ರ ತನಕ ಸಗಟು ಮಾರಾಟಗಾರರಿಗೆ ಕೊಟ್ಟು ಕೈ ತೊಳೆದುಕೊಳ್ಳುತ್ತಾನೆ.

ಈ ರೀತಿ ಮಾಡುವುದರಿಂದ ಪುಸ್ತಕ ಪ್ರಕಾಶನ ವ್ಯವಸ್ಥಿತವಾಗಿ ಬೆಳೆದು ಬರಲು ತೊಂದರೆಯಾಗಿದೆ. ಮಾರಾಟದಲ್ಲಿ ಬೆಲೆ ಸೋಡಿ ಇವೆಲ್ಲ ಅಸಮಾನ ಅಂಶಗಳಾಗಿವೆ. ನಮ್ಮಲ್ಲಿ ಸಾಹಿತ್ಯ ಅಕಾಡೆಮಿ, ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು, ಕಾಲೇಜಿನ ಕನ್ನಡ ಸಂಘಗಳು-ಎಲ್ಲ ಪುಸ್ತಕ ಪ್ರಕಟಣೆ ಮಾಡುತ್ತವೆ. ಆದರೆ ಅದರ ವಿತರಣೆಗೆ ಯಾರೂ ಗಮನ ಕೊಡುವುದಿಲ್ಲ. ವರ್ಷದಲ್ಲಿ ಅಲ್ಲಲ್ಲಿ ಒಂದೆರಡು ಪುಸ್ತಕ ಮೇಳವಾದರೆ ಅಲ್ಲಿ ಒಳ್ಳೆ ವ್ಯಾಪಾರ ನಡೆಯುತ್ತದೆ. ಓದುಗರು ಬೇಕಾದ ಪುಸ್ತಕಗಳನ್ನು ಆರಿಸಿಕೊಳ್ಳುತ್ತಾರೆ. ಬೇಕಾದವರಿಗೆ, ಪುಸ್ತಕ ಎಲ್ಲ ಕಡೆ ದೊರಕುವಂತಾದರೆ ಪ್ರಕಾಶನ ಒಂದು ಉದ್ಯಮವಾಗಿ ಬೆಳೆಯುತ್ತದೆ. ಇಪ್ಪತ್ತೈದು ವರ್ಷಗಳ ಹಿಂದೆ ಒಂದು ಸಾವಿರ ಪ್ರತಿಗಳನ್ನು ಅಚ್ಚು ಮಾಡುತ್ತಿದ್ದರೆ, ಈಗಲೂ ನಾವು ಸಾವಿರ ಪ್ರತಿಗಳನ್ನೇ ಮುದ್ರಿಸಿ, ಮಾರಲು ತಿಣುಕಾಡುತ್ತೇವೆ.

ಕನ್ನಡದಲ್ಲಿ ಕಾದಂಬರಿ, ಕಥಾ ಸಂಕಲನಗಳು ಪ್ರಕಟವಾಗುತ್ತಿದ್ದರೂ, ಕೊಂಡು ಓದುವ ಜನ ಕಡಿಮೆಯಾಗಿದ್ದಾರೆ. ಕಾರಣ ಇಂದು ಕನ್ನಡದಲ್ಲಿ ಮಾಸಿಕಗಳು, ವಾರಪತ್ರಿಕೆಗಳು, ದಿನಪತ್ರಿಕೆಗಳು-ಕಥೆಗಳನ್ನು, ಧಾರಾವಾಹಿಗಳನ್ನು ಪ್ರಕಟಮಾಡುತ್ತಿವೆ. ಅವನ್ನೇ ಪುಸ್ತಕ ರೂಪದಲ್ಲಿ ಪ್ರಕಟಿಸಿದರೆ ಓದುಗ ಕಣ್ಣೆತ್ತಿ ನೋಡುವುದಿಲ್ಲ. ಮನೆಮಂದಿಯೆಲ್ಲ, ಟಿ.ವಿ. ಲೋಕದಲ್ಲಿ ಬರುವ ದೃಶ್ಯಾವಳಿಗಳನ್ನು ನೋಡುತ್ತ ಓದುವ ಹಸಿವನ್ನು ಮರೆತಿದ್ದಾರೆ.

ನಮ್ಮಲ್ಲಿ ಕೆಲವು ಪ್ರಕಾಶಕರು ದಿಢೀರನೆ ಹುಟ್ಟಿಕೊಳ್ಳುತ್ತಾರೆ. ಅವರು ಅಧಿಕಾರಿಗಳ ಸ್ನೇಹಿತರೋ, ಮಕ್ಕಳೋ, ಬಂಧುಗಳೋ ಆಗಿರಬಹುದು. ಅಂಥವರು ದೊಡ್ಡ ದೊಡ್ಡ (ಪುಟ ಸಂಖ್ಯೆಗಳ) ಪುಸ್ತಕಗಳನ್ನು ಪ್ರಕಟ ಮಾಡುತ್ತಾರೆ. ಅವರಿಗೆ ಇದೊಂದು ಹಣ ಮಾಡುವ ದಾರಿ. ಈ ಪುಸ್ತಕಗಳು ಸರಕಾರದ ಲೈಬ್ರರಿಯಲ್ಲಿ ಕೊಳೆಯುತ್ತ ಬಿದ್ದಿರುತ್ತವೆ. ಕೊನೆಗೆ ಗೆದ್ದಲಿಗೋ ಇಲಿಗೋ ಆಹಾರವಾಗಿ, ಪುಸ್ತಕ ಮಾಯವಾಗುತ್ತದೆ.

ಸರಕಾರದ ಸಗಟು ಖರೀದಿಯನ್ನೇ ನಂಬಿ ಪ್ರಕಟಿಸುವ ಪ್ರಕಾಶಕರು ಅಥವಾ ಲೇಖಕರು ಇಂದು ಚಿಂತೆಗೊಳಗಾಗಿದ್ದಾರೆ. ಕಾರಣ ಸರಕಾರದ ಬಳಿ ಪುಸ್ತಕ ಕೊಳ್ಳಲು ಹಣವಿಲ್ಲ. ಕನ್ನಡ ಪುಸ್ತಕ ಪ್ರಾಧಿಕಾರ, ಸಾರ್ವಜನಿಕ ಗ್ರಂಥಾಲಯ ಇವರೆಲ್ಲ ವರ್ಷಕ್ಕೊಮ್ಮೆ ಖರೀದಿ ನಾಟಕವನ್ನು ಯಶಸ್ವಿಯಾಗಿ ಮಾಡುತ್ತ 'ಮಹತ್ಕಾರ್ಯ' ಮಾಡಿದ್ದೇವೆಂದು ಹೇಳಿಕೆ ಕೊಡುತ್ತಾರೆ. ಇವರಲ್ಲಿ 'ಸಿಕ್ಕಿದವನಿಗೆ, ಸಿಕ್ಕಿದಷ್ಟು' ದಕ್ಕುತ್ತದೆ. ಇದು ಆದಿಕಾಲದಿಂದಲೂ ನಡೆದು ಬಂದ ದಾರಿ.


ಪುಸ್ತಕಕ್ಕೆ ಕರ್ನಾಟಕಾದ್ಯಂತ ಮಾರಾಟದ ಜಾಲ ಸೃಷ್ಟಿಯಾದರೆ, ಸಾವಿರ ಪುಸ್ತಕ ಮಾರಾಟವಾಗುವುದು ಪವಾಡವೇನಲ್ಲ. ನಮ್ಮ ನಿರುದ್ಯೋಗಿ ಸಾಕ್ಷರ ಜನರು ನಾಡಿನ ಪ್ರತೀ ಜಿಲ್ಲೆ ಮತ್ತು ತಾಲೂಕುಗಳಲ್ಲಿ ಪುಸ್ತಕ ಮಾರಾಟದ ಪುಟ್ಟ ಅಂಗಡಿಗಳನ್ನು ತೆರೆದು ಈ ಕಾರ್ಯವನ್ನು ಸಾಧಿಸಬಹುದು. ಸರಕಾರ ಇದನ್ನು ಮಾಡಲಿ ಅಥವಾ ಪ್ರಾಧಿಕಾರ ಮಾಡಲಿ ಎಂದು ಕೈಕಟ್ಟಿಕೂತರೆ, ನಾವು 'ಪುಸ್ತಕ ಪ್ರೀತಿ'ಯಿಂದ ವಂಚಿತರಾಗಿ, ನಮ್ಮ ಭಾವಲೋಕವನ್ನು ಕಳೆದುಕೊಳ್ಳುತ್ತೇವೆ. ಈ ಗಣಕಯಂತ್ರದ ಮಾಧ್ಯಮಗಳ ಭರಾಟೆಯಲ್ಲೂ ಪುಸ್ತಕ ನಮ್ಮ ಅತ್ಯಂತ ಖಾಸಗೀ ಮಿತ್ರ ಎಂಬುದನ್ನು ಮರೆಯಬಾರದು.

- ಟೆರೇಸಿನ ಮೇಲೆ ಕಿವಿಕಟ್ಟಿಕೊಂಡು ಓದುತ್ತಿರುವ ವಿದ್ಯಾರ್ಥಿ.
- ಹೃತಿಕ ರೋಷನ್ ಕಾರ್ಡುಗಳ ಮಧ್ಯದಲ್ಲೊಬ್ಬ ಪುಟ್ಟಕೃಷ್ಣ

ಅಂಜನಾ ಹೆಗಡೆ, ಶಿರಸಿ

- ಅಕ್ಷತೆಕಟ್ಟಿ ಸುತ್ತುತ್ತಿರುವ ಕನ್ಯೆಯರು.

ಸಂದರ್ಶನದಲ್ಲಿ ತಮ್ಮ ಸರದಿಗಾಗಿ ಕಾದುನಿಂತ ಅಭ್ಯರ್ಥಿಗಳು.




- ಮನೆಯ ಮುಂದೆ ನಗುತ್ತಿರುವ ರಂಗೋಲಿ.


ನಿದ್ದೆಯಲ್ಲಿ ನಗುತ್ತಿರುವ ಮಗು.

ಎಸ್. ರೇಖಾ ಭಟ್, ಮೈಸೂರು

- ಅಂದು ನಾನು ವಾಕಿಂಗ್ ಹೋದಾಗ ಅಲ್ಲೊಂದು ಕಸದ ತೊಟ್ಟಿಯನ್ನು ಅಪಾರ ಜನಸ್ತೋಮ ಸುತ್ತುವರೆದಿತ್ತು. ಏನಿರಬಹುದೆಂದು ಸಹಜವಾಗಿಯೇ ಕುತೂಹಲಗೊಂಡ ನಾನು ಅಲ್ಲಿ ಹೆಜ್ಜೆಯಿಡುವಷ್ಟರಲ್ಲಿ, ತೊಟ್ಟಿಲಲ್ಲಿ ಹಾಯಾಗಿ ಮಲಗಿರಬೇಕಾದ ಕೂಸು ಬಿದ್ದಿತ್ತು, ಕಸದ ತೊಟ್ಟಿಯಲ್ಲಿ ಅನಾಥವಾಗಿ. ಅದರ ಮೈತುಂಬ ಇರುವೆಗಳು ಮೆತ್ತಿದ್ದವು.



ನಿರ್ಮಲಾ ಮೃತ್ಯುಂಜಯಸ್ವಾಮಿ, ಧಾರವಾಡ



ಹೊರನಾಡಿನಲ್ಲಿ ಕನ್ನಡ ಪ್ರಕಾಶಕರು

ಜಿ. ಡಿ. ಜೋಶಿ
ಹವ್ಯಾಸಿ ಪ್ರಕಾಶಕರು, ಮುಂಬಯಿ

ಕರ್ನಾಟಕದ ಒಳನಾಡಿನಲ್ಲಿರುವುದಕ್ಕಿಂತ ನಾಲ್ಕಾರು ಹೆಚ್ಚು ವಿಶಿಷ್ಟ ಸಮಸ್ಯೆಗಳನ್ನು ಹೊರನಾಡಿನಲ್ಲಿರುವ ಪ್ರಕಾಶಕರು ಅನುಭವಿಸಬೇಕಾಗುತ್ತದೆ.

ಒಳನಾಡಿನಂತೆ ಸುವ್ಯವಸ್ಥಿತವಾಗಿ ಕನ್ನಡ ಪುಸ್ತಕ ಪ್ರಕಟನಾಲಯಗಳನ್ನು ನಡೆಸುವದು ಹೊರನಾಡಿನಲ್ಲಿ ಸಾಧ್ಯವಿಲ್ಲ. ಪ್ರಕಾಶನಕ್ಕೆ ಆರ್ಥಿಕ ಸ್ಥಿರತೆ ಕೊಡಬಲ್ಲ ಶಾಲಾ ಕಾಲೇಜು ಪಠ್ಯಪುಸ್ತಕ ಇಲ್ಲವೆ ಅವುಗಳ ಗೈಡು, ನೋಟ್ಸು ಮಾರಾಟದ ಅವಕಾಶ ಇಲ್ಲಿಲ್ಲ.

ಹೊರನಾಡಿನಲ್ಲಿಯ ಹವ್ಯಾಸೀ ಸಾಹಿತ್ಯ ಪ್ರಕಾಶಕರ ಮುಖ್ಯ ಸಮಸ್ಯೆ, ಅವರಿಗೆ ಅಂಗಡಿಗಳಿರುವುದಿಲ್ಲ. ಮನೆಗಳೇ ಪ್ರಕಾಶ ಕಾರ್ಯದ ಆಫೀಸು ಆಗಿರುವುದು ಸ್ವಾಭಾವಿಕ. ಇಂಥ ಹವ್ಯಾಸೀ ಪ್ರಕಾಶಕರು ಸಾಮಾನ್ಯವಾಗಿ ಲೇಖಕರೇ ಆಗಿರುತ್ತಾರೆ.

ಒಳನಾಡಿನಂತೆ, ಹೊರನಾಡಿನಲ್ಲಿ ಪ್ರಕಾಶಕರು ಉತ್ತಮ ಲೇಖಕರನ್ನು ಗುರುತಿಸುವುದು ಕಷ್ಟ. ಸಾಹಿತ್ಯ ಪ್ರೇಮಿಗಳು ಒಂದೆಡೆ ಸೇರಿ ಸಾಹಿತ್ಯಿಕ ಚರ್ಚೆ ನಡೆಸುವಂಥ, ಮಾಧ್ಯಮಗಳ ಮುಖಾಂತರ ಪರಿಚಯ ಪಡೆಯುವಂಥ ಅವಕಾಶಗಳು ತೀರ ವಿರಳ. ಇಂಥದರಲ್ಲಿ ಒಬ್ಬ ಉತ್ತಮ ಲೇಖಕನನ್ನು (ಉದಾ: ಕವಿ, ಕಾದಂಬರಿಕಾರ) ಗುರುತಿಸಿದರೆ, ಅವನು ತನ್ನ ಅಲ್ಲಲ್ಲಿ ಪ್ರಕಟಿತ ಕವನ ಇಲ್ಲವೆ ಧಾರಾವಾಹಿ ಕಾದಂಬರಿಯನ್ನು ಒಟ್ಟುಗೂಡಿಸಿ, ಪ್ರಕಟಿಸಿದ ಮೇಲೆ ಗ್ರಂಥದ ಬಗ್ಗೆ ಪರಿಚಯ, ಪತ್ರಿಕೆಗಳಲ್ಲಿ ಪ್ರಚಾರ, ಬಿಡುಗಡೆಯ ದಿನ ಕೆಲವು ಗ್ರಂಥಗಳ ಮಾರಾಟ ಹಾಗೂ ಹಲವು ಗ್ರಂಥಗಳ ಗೌರವ ಪ್ರತಿ ವಿತರಣೆ ಹೊರನಾಡಿನಲ್ಲಿ ಮಾಡಲೇಬೇಕಾದ ಕೆಲಸ.

ಹೊರನಾಡ ಪ್ರಕಾಶಕರು ಪ್ರಕಟಿಸಿದ ಸಾಹಸ ಕಾರ್ಯವನ್ನು ಮೆಚ್ಚಿ, ಅವರ ಕೃತಿಗಳನ್ನು ಪಡೆದು, ಮಾರಾಟ ಮಾಡಿ, ಹಣ ಕಳಿಸಿ ಸಹಕರಿಸುವಂಥ ವ್ಯವಸ್ಥೆಯೊಂದು ಆಗಬೇಕಾಗಿದೆ. ಸರಕಾರದಿಂದ ಇಂಥ ಕಾರ್ಯ ಅಪೇಕ್ಷಿಸಬಾರದು. ಹಾಗೆ ನೋಡಿದರೆ ಸಗಟು ಖರೀದಿ ಸರಕಾರ ಮಾಡಬಾರದು. ಸರಕಾರೀ ತಾಲೂಕು, ಜಿಲ್ಲಾ, ರಾಜ್ಯ ಗ್ರಂಥಾಲಯಗಳು ಮಾಡಬೇಕು, ನೇರವಾಗಿ ಮಾರಾಟಗಾರರಿಂದ.

ಕರ್ನಾಟಕದ ಪ್ರಕಾಶಕರ ಸಂಘಟನೆಗಳು ಸೇರಿ ಒಂದು ದೊಡ್ಡ ಪ್ರಮಾಣದ ಸಹಕಾರೀ ವಿತರಣ ವ್ಯವಸ್ಥೆ ರಚನೆಯಾಗಬೇಕು. ಅದಕ್ಕೆ ಹೊರನಾಡ ಹವ್ಯಾಸೀ ಪ್ರಕಾಶಕರಿಗೂ ಸದಸ್ಯತ್ವದ ಸ್ಥಾನ-ಮಾನಗಳಿರಬೇಕು. ಆ ಸಂಸ್ಥೆಯು ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿ ತನ್ನ ಶಾಖೆಯನ್ನು ಸ್ಥಾಪಿಸಿ, ಅದರ ಮುಖಾಂತರ ಸ್ಥಳೀಯ ಮಾರಾಟಗಾರರಿಗೆ, ಸಂಸ್ಥೆಗಳಿಗೆ, ಶಾಲಾ-ಕಾಲೇಜುಗಳಿಗೆ, ವಾಚನಾಲಯಗಳಿಗೆ ಪುಸ್ತಕ ಮಾರಾಟ ಮಾಡಬೇಕು.

ಪುಸ್ತಕಗಳಿಗೆ ಓದುಗರು ಬೇಕು. ಓದುಗರಿಗೆ ಒಳ್ಳೆಯ ಪುಸ್ತಕಗಳು ಬೇಕು. ಇವು ದೊರೆಯಲು ಪ್ರತಿಭಾವಂತ ಸಾಹಿತಿ, ಆದರ್ಶ ಪ್ರಕಾಶಕ, ಜನಪರ ಧೋರಣೆಯ ಮಾರಾಟ ವ್ಯವಸ್ಥೆ ಇರಬೇಕು. ಇದರಿಂದ ಮಾತ್ರ, ಉತ್ತಮ ಪ್ರಕಟಿತ ಸಾಹಿತ್ಯ ಕೃತಿ, ಸದಭಿರುಚಿಯುಳ್ಳ ವಾಚಕನಿಗೆ ದೊರೆಯಲು ಸಾಧ್ಯ.



ಕನ್ನಡಿಗರು ಪುಸ್ತಕ ಕೊಂಡು ಓದುವುದಿಲ್ಲ ಎನ್ನುವುದು ಅಕ್ಷಮ್ಯ!

ಸಂಡೂರು ವೆಂಕಟೇಶ
ಕುಸುಮಾ ಪ್ರಕಾಶನ, ಬೆಂಗಳೂರು

ನಾನು ಅತ್ಯಂತ ಕಡಿಮೆ ವೆಚ್ಚದಲ್ಲಿ ಪುಸ್ತಕ ಪ್ರಕಟಿಸಿ, ಕಡಿಮೆ ದರದಲ್ಲಿ ಮಾರುವ ಕೆಲಸವನ್ನು ಕಳೆದ ಕೆಲ ತಿಂಗಳುಗಳಿಂದ ಕೈಕೊಂಡಿದೀನಿ. ಕೇವಲ ಎರಡು ತಿಂಗಳಲ್ಲಿ 43,000/- ಹೆಚ್ಚಿನ ಮೌಲ್ಯದ ಪುಸ್ತಕ ಮಾರಿದ್ದೇನೆ. ಸಾಮಾನ್ಯವಾಗಿ ಪುಸ್ತಕ ಮೇಳ, ಸಾಹಿತ್ಯ ಸಮ್ಮೇಳನಗಳಂಥ ಕಡೆಯಲ್ಲಿ - 'ಇಂತಿಷ್ಟು ಲಕ್ಷ ಮೌಲ್ಯದ' ಪುಸ್ತಕ ಮಾರಾಟವಾಯಿತು ಎಂದು ಬೊಬ್ಬೆ ಹೊಡೆಯುತ್ತಾರಲ್ಲ, ಅವೆಲ್ಲ ಇಂಥ 10 ರೂ. ಯಿಂದ 30 ರೂಪಾಯಿ ರೇಂಜಿನ ಪುಸ್ತಕಗಳೇ ಹೊರತು, ಗ್ರೀಟಿಂಗ್ ಕಾರ್ಡುಗಳ ಥರ ಅಚ್ಚುಹಾಕಿದ 100 ರೂ. ಬೆಲೆಯ, 60 ಪುಟದ ಪುಸ್ತಕಗಳಲ್ಲ.

ನಾನು ಕೇವಲ ಓದುಗರ ದೃಷ್ಟಿಯಿಂದ ಪುಸ್ತಕ ಪ್ರಕಟಣೆ ಮಾಡಿ ಯಶಸ್ವಿಯಾಗಿದ್ದೇನೆ. ಕನ್ನಡ ಓದುಗ 'ಕೊಂಡು ಓದುವವನಲ್ಲ' - ಎಂದು ಹೇಳುವುದು ಅಕ್ಷಮ್ಯ. ಅವನ ಕೈಗೆಟುಕುವಂತೆ ಪುಸ್ತಕ ಇಡುವುದು ನಮ್ಮ ಜವಾಬ್ದಾರಿ.

- ಬಯಲ ಹೊಲದಲ್ಲಿ ಬತ್ತಿದಾಲದ
ತುತ್ತ ತುದಿಯಲ್ಲಿ ಕುಳಿತ ಒಂಟಿ ಕಾಗೆ.

ಪ್ರಿಯದರ್ಶಿನಿ ಎಂ. ಭಟ್, ಕುಮಟ

- ದೀಪಾಲಂಕೃತ ಅರಮನೆಯಂಗಳದಲ್ಲಿ,
ಯಾರ ಲಕ್ಷ್ಯಕ್ಕೂ ಬಾರದೆ
ಕಡಲೆ ಮಾರಲು ಕೂತಿರುವ ಮುದುಕಿ.

ಟಿ. ಗೋವಿಂದರಾಜು, ಬೆಂಗಳೂರು

- ಅಪರೂಪಕ್ಕೆ ನಮ್ಮೂರ ಆಗಸದಲ್ಲಿ
ಹಾರುವ ವಿಮಾನ
ಕೇಬಲ್ ಮೇಲೆ ಸರ್ಕಸ್ ಮಾಡುವ ಅಳಿಲು.

- ಬೀಡಿ ಸೇದುವ ಪುಟ್ಟ ಪುಟ್ಟ
ಕೂಲಿ ಹುಡುಗರು.

ರೇಖಾ ರಾಮಕೃಷ್ಣ, ಬಿರೂರು

- 'ಅಷ್ಟೊಂದು ಲಂಚ ಸಿಗೋ ಕೆಲಸಕ್ಕೆ
ರಾಜೀನಾಮೆ ಕೊಟ್ಟು ಈ ಮೇಷ್ಟ್ರ
ಕೆಲಸಕ್ಕೇಕೆ ಬಂದಿರಿ' ಎನ್ನುತ್ತಾ ನನ್ನನ್ನು
ವಿಚಿತ್ರ ಪ್ರಾಣಿಯಂತೆ ನೋಡುವ ನನ್ನ
ಸುತ್ತಲಿನವರು.

ಮಳಲಿಕೆರೆ ಬಸವರಾಜು, ಸಂತೆಬೆನ್ನೂರು



ಕನ್ನಡ ಲೇಖಕರ ಮನೆಯಲ್ಲೂ ಪುಸ್ತಕಗಳು ಅನಾಥ

ಚಿ. ಶ್ರೀನಿವಾಸರಾಜು
ಪುಸ್ತಕ ಆಯ್ಕೆ ಸಮಿತಿ,
ಕ್ರೈಸ್ಟ್ ಕಾಲೇಜು ಕನ್ನಡ ಸಂಘ, ಬೆಂಗಳೂರು

ಹಿಂದೆ ಒಂದು ಸಾವಿರ ಕನ್ನಡ ಪುಸ್ತಕದ ಪ್ರತಿಗಳು ಮಾರಾಟವಾಗಬೇಕಾಗಿದ್ದರೆ ಸಾಮಾನ್ಯವಾಗಿ ಐದಾರು ವರ್ಷಗಳಾಗುತ್ತಿತ್ತು. ಈಗ ಒಂದು ಸಾವಿರ ಪ್ರತಿಗಳನ್ನು ಒಂದು ವರ್ಷದಲ್ಲಿ ಮಾರಾಟ ಮಾಡಬಹುದು. ಆದರೆ ಹಿಂದೆ ಪ್ರಕಟಿಸಿದ ಸಾವಿರ ಪ್ರತಿಗಳಿಗೆ, ಎಂಟು ನೂರು ಜನ ಗಟ್ಟಿ ಓದುಗರು ಸಿಕ್ಕುತ್ತಿದ್ದರು. ಈಗ ಇನ್ನೂರು ಜನ ಓದುಗರು ಸಿಕ್ಕಿದರೆ ಅದೃಷ್ಟ. ಈಗ ಕನ್ನಡ ಪುಸ್ತಕಗಳು ಸುಂದರವಾಗಿ, ಆಕರ್ಷಕವಾಗಿ, ವೇಗವಾಗಿ ಪ್ರಕಟಗೊಳ್ಳುತ್ತಿವೆ. ಸರಕಾರದ ಅಂಕಿ-ಅಂಶಗಳ ಪ್ರಕಾರ, ಕನ್ನಡ ಪುಸ್ತಕಗಳ ಮಾರಾಟ ವಿತರಣೆ ಹೆಚ್ಚಾಗಿದೆ. ಆದರೆ ಕೊಂಡ ಪುಸ್ತಕಗಳನ್ನು ಜನ ಓದುತ್ತಿದ್ದಾರೆ ಎಂಬುದು ಕೇವಲ ಭ್ರಾಂತಿ. ಜನಸಂಖ್ಯೆ ಹೆಚ್ಚಿದ ಹಾಗೆ, ಅಕ್ಷರಸ್ಥರು ಹೆಚ್ಚಿದ ಹಾಗೆ, ಕನ್ನಡ ಪುಸ್ತಕಗಳ ಓದುಗರ ಸಂಖ್ಯೆ ಬೆಳೆಯುತ್ತಿಲ್ಲ. ವಾಸ್ತವವಾಗಿ, ವಿತರಣೆಗೊಂಡ ಬಹುಪಾಲು ಪುಸ್ತಕಗಳು, ಕಪಾಟುಗಳಲ್ಲಿ ಶಾಶ್ವತ ಸಾಹಿತ್ಯವಾಗಿದ್ದುಬಿಡುತ್ತಿವೆ.

ಹಿಂದಿಗಿಂತ ಇಂದು, ಸರಕಾರದ ಸಂದುಗೊಂದುಗಳಲ್ಲಿ ಕನ್ನಡ ಪುಸ್ತಕಗಳನ್ನು ಕೊಳ್ಳುವ ನೂರಾರು ಯೋಜನೆಗಳಿವೆ. ಆ ಯೋಜನೆಗಳಿಗೆ ತಕ್ಕಂತೆ ಪುಸ್ತಕಗಳನ್ನು ಸಿದ್ಧಪಡಿಸಿ, ಅಲ್ಲಿನ ಒಳಸುಳಿಗಳನ್ನೂ ಬಲ್ಲ ಚತುರರಿದ್ದಾರೆ. ಇವರು, ಸಂಬಂಧಪಟ್ಟವರನ್ನು ಅವರವರ ಇಚ್ಛೆಯಂತೆ ತೃಪ್ತಿಪಡಿಸಿ, ಒಂದು ಪುಸ್ತಕದ ಹತ್ತು ಸಾವಿರ ಪ್ರತಿಗಳನ್ನು ತಳ್ಳಿ ಹಣವನ್ನು ಲೂಟಿಮಾಡುವ ಚಾಕಚಕ್ಯತೆಯುಳ್ಳವರು. ಇನ್ನೂ ಕೆಲವು ಪ್ರಕಾಶಕರು ಆರಕ್ಕೆ ಏರದೆ ಮೂರಕ್ಕೆ ಇಳಿಯದೆ ಒಂದು ಸಾವಿರ ಪ್ರತಿಗಳನ್ನು ಪ್ರಕಟಿಸಿ, ಆದಷ್ಟು ಬೇಗ ವಿತರಣೆ ಮಾಡಿ ಸುಮ್ಮನಾಗುತ್ತಾರೆ. ಹೊಸ ಹುರುಪಿನಿಂದ ಪ್ರಕಾಶನ ಲೋಕಕ್ಕೆ ಜಿಗಿದ ಇನ್ನೂ ಕೆಲವರು ಕಕ್ಕಾಬಿಕ್ಕಿಯಾಗಿ ಐನೂರು ಪ್ರತಿಗಳನ್ನು ಮಾರುವಲ್ಲಿ ಸುಸ್ತಾಗುತ್ತಾರೆ.

ಸರ್ಕಾರದ ಸಂಘ ಸಂಸ್ಥೆಗಳು ಮತ್ತು ಕೆಲವು ಖಾಸಗಿ ಸಂಘ ಸಂಸ್ಥೆಗಳು ಕನ್ನಡ ಪುಸ್ತಕಗಳನ್ನು ಸರಿಯಾಗಿ ಆಯ್ಕೆ ಮಾಡದೆ ಪ್ರಕಟಿಸಿ ರಾಶಿರಾಶಿ ಹಾಕುತ್ತಿವೆ. ಆ ಪುಸ್ತಕಗಳಿಗೆ ತಕ್ಕ ಓದುಗರನ್ನು ನಿರ್ಮಿಸುತ್ತಿಲ್ಲ. ಕನ್ನಡ ಪುಸ್ತಕಗಳನ್ನು ಪ್ರಕಟಿಸುವುದರ ಜೊತೆಗೆ, ಆ ಪುಸ್ತಕಗಳಿಗೆ ತಕ್ಕಂತೆ ಓದುಗರ ಅಭಿರುಚಿಯನ್ನು ಬೆಳೆಸುವುದು ಜವಾಬ್ದಾರಿಯುತ ಕೆಲಸ.

ಇಂದು ಜಾಗತೀಕರಣದಿಂದ, ಆರ್ಥಿಕ ಉದಾರೀಕರಣದಿಂದ, ಬಹುರಾಷ್ಟ್ರೀಯ ಕಂಪನಿಗಳ ಆಗಮನದ ಒತ್ತಡದಿಂದ, ಮಾಹಿತಿ ತಂತ್ರಜ್ಞಾನದ ಮಾಯಾಜಾಲದಿಂದ ಭಾಷೆಯ ಮೇಲೆ ಸರ್ಕಾರದ ಹಿಡಿತ ಸಡಿಲವಾಗುತ್ತಿದೆ. ಕನ್ನಡವನ್ನು ಪ್ರೀತಿಯಿಂದ, ಅಭಿಮಾನದಿಂದ, ಅವಶ್ಯಕತೆಯಿಂದ ಕಲಿಯುವ ಹೊಸ ಪೀಳಿಗೆ ಕ್ಷೀಣಿಸುತ್ತಿದೆ. ಇಂದಿನ ವೃತ್ತಿಪರ ತೀವ್ರ ಪೈಪೋಟಿಯಲ್ಲಿ, ಇಂಗ್ಲಿಷ್ ಬಗ್ಗೆ ಹೆಚ್ಚಿದ ವ್ಯಾಮೋಹದಲ್ಲಿ, ಹೊಟ್ಟೆಪಾಡಿಗಾಗಿ ಒದ್ದಾಡುವ ಒತ್ತಡದಲ್ಲಿ ಕನ್ನಡಕ್ಕೆ ಹೊಸ ಓದುಗರು ಬರುತ್ತಿಲ್ಲ.

ಈಗ ನಮ್ಮ ಮುಂದಿರುವುದು ಒಳ್ಳೆಯ ಪುಸ್ತಕಗಳ ಪ್ರಕಟಣೆಯ ಜೊತೆಗೆ ಹೊಸ ಓದುಗರನ್ನು ನಿರಂತರವಾಗಿ ಸೃಷ್ಟಿಮಾಡುವ ಸಾಹಿತ್ಯ ಪರಿಚಾರಿಕೆಯ ಕೆಲಸ. ಸರಕಾರದ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳು ಕುರುಡು ಲೋಕದ ವ್ಯವಹಾರದಿಂದ ಹೊರಬಂದು, ಒಟ್ಟಿಗೆ ಚಿಂತಿಸಿ, ಕಾರ್ಯತಂತ್ರ ರೂಪಿಸಬೇಕು. ಸರಕಾರ ಈ ದೃಷ್ಟಿಯಿಂದ ತನ್ನ 'ರಾಜಕೀಯ ಇಚ್ಛಾಶಕ್ತಿ'ಯನ್ನು ಆದಷ್ಟು ಬೇಗ ಸ್ಪಷ್ಟಗೊಳಿಸಬೇಕು. ಕಾರ್ಯಪ್ರವೃತ್ತವಾಗಬೇಕು. ಕನ್ನಡ ಪುಸ್ತಕ ಮತ್ತು ಓದುಗನ ಮಧ್ಯೆ ಕಂದರ ಹೆಚ್ಚಿದಷ್ಟೂ ಕನ್ನಡಕ್ಕೇ ಒಳ್ಳೆಯದಲ್ಲ.

ಇರುಳ ನೀರವತೆ ಸೀಳುವ ಬಾವಲಿಗಳ ಕೀರಲು. ದೂರದಲ್ಲೆಲ್ಲೋ ಗೂಂಗುಡುವ ಗುಮ್ಮ. ಉದ್ಘೋಷಕಿಯಿಂದ ಜೈಹಿಂದ್ ಉಲಿಸಿಕೊಂಡು ಸ್ಸ... ಸದ್ದು ಮಾಡುತ್ತಿರುವ ಬ್ಯಾಟರಿ ರೇಡಿಯೊ. ಬೀಡಿ ಸೂಪಿನಲ್ಲಿ ಉರಿವ ಬೆಡ್ ಲ್ಯಾಂಪ್.
ಬೆಡ್‌ಲ್ಯಾಂಪಿನಿಂದ ಹೊರಡುವ ಬಿಸಿಗೆ ತಾಗಿದ ಅರೆಬರೆ ಬೆಳ್ಳಿ ಕೂದಲು ಚರ್‌ಚರ್ ಅಂತ ಕರಕಲಾಗುತ್ತಲೇ ಆಕೆಗೆ ಎಚ್ಚರ. ಮತ್ತೆ ಒಂದು ಕೈಯ್ಯ ಎರಡು ಒರಟು ಬೆರಳುಗಳ ನಡುವೆ ಬೀಡಿ. ಇನ್ನೊಂದು ಕೈಯಲ್ಲಿ ನೂಲು. ಬೀಡಿ ಕಟ್ಟಿ ಕಟ್ಟಿ ರಾಶಿ ಇಡುತ್ತಾಳೆ-ರೇಡಿಯೋ ಆಫ್ ಮಾಡುವುದನ್ನು ಮರೆತು.
ಮರುದಿನ ಬೆಳಿಗ್ಗೆ -



ಬೀಡಿ ಬ್ರಾಂಚ್‌ನ ಒರಟು ಮೇಜಿನ ಹಿಂದೆ ಬೀಡಿ ಆಯ್ದು ತೆಗೆಯುವವ. ಅವನ ಕೈಯಲ್ಲಿ ಲಟಲಟನೆ ಮುರಿಯುವ ಬೀಡಿಗಳು. ರೊಯ್ಯನೆ ಮೇಲೆಸೆದಾಗ ತಲೆ ತಗ್ಗಿಸಿಕೊಂಡು ನಿಂತು ಮುರಿದು ಹೋದ ಒಂದೊಂದು ಬೀಡಿಯನ್ನೂ ಆಯ್ದು ಮಸುಕು ಸಂಗೀಸಿನ ಚೀಲಕ್ಕೆ ಹಾಕಿಕೊಳ್ಳುವ ಹೆಂಗಸು. ನೆಲ ನೋಡುತ್ತವೆ ಸಿಟ್ಟು ಸತ್ತ ನಿದ್ದೆಯಿಲ್ಲದ ಕೆಂಗಣ್ಣು. ಕೂದಲು ನೇವರಿಸಿಕೊಂಡ ಒರಟು ಕೈತುಂಬಾ ಬೆಡ್ ಲ್ಯಾಂಪ್ ಉಗುಳಿದ ಇಂಗಾಲದ ಕಪ್ಪು.

ಕೆ. ರಾಜಲಕ್ಷ್ಮಿ ರಾವ್, ಕೋಡಿಬೆಟ್ಟು



ಪುಸ್ತಕದ ಅಶ್ವಮೇಧ

ಕೆ. ಎಸ್. ಉಮಾಪತಿ
ರಾಮಕ್ಕ ಪದ್ಮಕ್ಕ ಸೇವಾನಿಧಿ, ಬೆಂಗಳೂರು

ಕಳೆದ ಐದು ವರ್ಷಗಳಿಂದ 'ರಾಮಕ್ಕ ಪದ್ಮಕ್ಕ ಸೇವಾನಿಧಿ'ಯ ಪುಸ್ತಕ ಕೊಡುಗೆ ಯೋಜನೆಗಾಗಿ ಕನ್ನಡ ಪುಸ್ತಕಗಳನ್ನು ಕೊಳ್ಳುವ 'ಅಶ್ವಮೇಧ'ಯಾಗ ಮಾಡಿ, ಕೈಕಾಲುಗಳನ್ನೇ ಆಹುತಿ ಕೊಡುವ ಕೆಲಸ ಪ್ರತಿ ವರ್ಷ ಮಾಡುತ್ತಿದ್ದೇನೆ. ಖ್ಯಾತ ಲೇಖಕರ ಕೃತಿಗಳ (ಮಾಸ್ತಿ, ಡಿ.ವಿ.ಜಿ, ಕಾರಂತ, ಭೈರಪ್ಪ, ಅನಕೃ, ಪು.ತಿ.ನ. ಅನುಪಮಾ ನಿರಂಜನ, ಕುವೆಂಪು, ಮೂರ್ತಿರಾವ್ ಇತ್ಯಾದಿ)ನ್ನು ಕೊಳ್ಳಲು ಸಾಧ್ಯ ಆಗುತ್ತಿಲ್ಲ. ಬೆಂಗಳೂರಿನ ಯಾವುದೇ ಒಂದು ಪುಸ್ತಕದ ಅಂಗಡಿಯಲ್ಲಿ ಹೆಚ್ಚಿನವು ಸಿಕ್ಕುವುದಿಲ್ಲ. ಒಂದೊಂದೂ ಹತ್ತಿಪ್ಪತ್ತು ಪ್ರತಿ ಕೊಳ್ಳಹೋದರಂತೂ ಮುಖಭಂಗ ಕಾದಿಟ್ಟದ್ದು.

ಮಾರಾಟಗಾರರು 'ತಮ್ಮ' ಪ್ರಕಾಶನದ ಪುಸ್ತಕಗಳನ್ನು ಬಿಟ್ಟು ಇತರ ಪುಸ್ತಕಗಳ ಮಾರಾಟದಿಂದ ಸಾಕಷ್ಟು ಲಾಭ ಇದ್ದರೂ ಅನಾಸಕ್ತರಾಗಿರುತ್ತಾರೆ.

ಅನೇಕ ಪುಸ್ತಕ ಮಾರಾಟಗಾರರು-ಪ್ರಕಾಶಕರಲ್ಲೂ ಇಡೀ ಸಮಾಜದಲ್ಲಿರುವಂತೆ ಜಾತೀಯತೆ ತುಂಬಿ ತುಳುಕುತ್ತಿದೆ.

ಇದು ಈಗೀಗಿನ ಅನುಭವ. ಆದರೆ ಇಪ್ಪತ್ತು ವರ್ಷಗಳ ಹಿಂದೆ ನಾನೇ ಪ್ರಕಟಿಸಿದ ನನ್ನ ಪುಸ್ತಕಗಳನ್ನು ನಾನೇ ಮಾರಲು ಹರಸಾಹಸ ಮಾಡಬೇಕಾಯಿತು. ಕೆಲವೊಮ್ಮೆ 'ಒಳ್ಳೆಯ' ಪುಸ್ತಕಗಳನ್ನು ಪುಸ್ತಕ ಮಾರಾಟಗಾರರು ರದ್ದಿ ಕಾಗದದಂತೆ ತೂಕಕ್ಕೆ ಕೊಂಡದ್ದು ಉಂಟು! ಅಷ್ಟೇ ಅಲ್ಲ ನಾನೇ 'ಇಂಥ ಪುಸ್ತಕ ಕೊಂಡು ತನ್ನಿ' ಎಂದು ಪುಸ್ತಕದ ಹೆಸರು ಬರೆದು ಮೈಸೂರು, ಬೆಂಗಳೂರಿನ ಹೆಸರಾಂತ ಪುಸ್ತಕ ಮಾರಾಟಗಾರರ ಅಂಗಡಿಗೆ ಹಣ ಸಮೇತ ಗಿರಾಕಿಗಳನ್ನು ಕಳುಹಿಸಿದಾಗ, 'ಆ ಪುಸ್ತಕ ಎಲ್ಲೂ ದೊರೆಯುವುದಿಲ್ಲ' ಎಂದು ನಿರಾಳವಾಗಿ ಅಂಗಡಿಯವರು ಹೇಳಿದ್ದು ಉಂಟು. ಸ್ವಾರಸ್ಯ ಎಂದರೆ ಅದೇ ಅಂಗಡಿಗೆ, ಮಾರಾಟಕ್ಕೆಂದು ಅದೇ ಪುಸ್ತಕದ ಹತ್ತು ಪ್ರತಿ ಸ್ವತಃ ನಾನೇ ಕೊಟ್ಟಿದ್ದರೂ-ನಾಟಕ ಮುಕ್ತಾಯ ಆಗುವುದು ಹೀಗೆ.

ಪರಿಸ್ಥಿತಿ ಸುಧಾರಿಸಬೇಕಾದರೆ ಎಲ್ಲ ಸಣ್ಣ-ಪುಟ್ಟ-ದೊಡ್ಡ ಊರುಗಳಲ್ಲೂ ಪುಸ್ತಕದ ಅಂಗಡಿಗಳಾಗಬೇಕು. ಸಾಕಷ್ಟು ಪುಸ್ತಕಗಳ ಪ್ರದರ್ಶನಗಳಾಗಬೇಕು. ಸಗಟು ಖರೀದಿಯನ್ನು ನಿಲ್ಲಿಸಬೇಕು.

ಓದುವವರಿದ್ದಾರೆ, ಕೊಳ್ಳುವವರೂ ಇದ್ದಾರೆ, ವಿತರಣೆಗೆ ಒಂದು ವ್ಯವಸ್ಥೆ ಇಲ್ಲ. ಪತ್ರಿಕೆಗಳು ಪರಿಚಯ-ವಿಮರ್ಶೆಗಳನ್ನು ಪುಸ್ತಕ ತಮ್ಮ ಕೈ ಸೇರಿದ ಒಂದೆರಡು ವರ್ಷವಾದ ನಂತರ ಪ್ರಕಟಿಸಿದರೆ ಯಾವ ಉಪಕಾರವನ್ನೂ ಮಾಡಿದಂತಾಗಲಿಲ್ಲ.

ದಟ್ಟ ಗುಂಗುರು ಕೂದಲಿನ ಎರಡು ಜಡೆ. ಬೆಳಕಿನ ಕಂಗಳು, ದುಂಡು ಮುಖ ಕಡುಕಪ್ಪಿನ ಪುಟ್ಟ-ಆರನೇ ಕ್ಲಾಸಿನ ಸ್ಮೃತಿ. ಬರೆವ ಪೆನ್ನಿನ ಹಿಂಭಾಗವನ್ನು ಮುಂದಿನ ನಾಲ್ಕು ಹಲ್ಲಿನಿಂದ ಚಿಕಣ ಹಾರಿಸಿ, ಗುರುತು ಮಾಡುವಂತೆ ತಿನ್ನುತ್ತಾ, ಪಾಠವನ್ನು ನುಂಗುವಂತೆ ಕೇಳುತ್ತಿದ್ದ ಮುಂಬೆಂಚಿನ ಸ್ಮೃತಿ.

ಎಂಭತ್ತೂರರ ಸಂಜೆಯಲ್ಲಿಯೂ, ಪತ್ರಿಕೆಯೊಂದರಲ್ಲಿ ಪ್ರಿಂಟಾಗಿದ್ದ 'ದುಂಡು ಮಲ್ಲಿಗೆ ಬೆಳೆವ ಬಗೆ' ಕಟಿಂಗ್‌ನ್ನು ಡೈರಿಯಲ್ಲಿಟ್ಟುಕೊಂಡು ಕನಸು ಕಾಣುತ್ತಲೇ ಮರೆಯಾದ ಅಜ್ಜ.

ವಾಸುದೇವ ನಾಡಿಗ್, ರಾಯಪುರ



ಎಂದೂ ಕಂಡಿರದ ಪ್ರತಿಸ್ಪರ್ಧೆ

ಜರಗನಹಳ್ಳಿ ಶಿವಶಂಕರ್
ಶುಭದ ಪ್ರಕಾಶನ, ಬೆಂಗಳೂರು

ಪುಸ್ತಕ ತನ್ನ ಆಕರ್ಷಣೆ ಮತ್ತು ಅಗತ್ಯವನ್ನು ಕಳೆದುಕೊಳ್ಳುತ್ತಿರುವ ಆತಂಕದ ಬಗ್ಗೆ ಒಂದು ನಿಯತಕಾಲಿಕ ಯೋಚಿಸುತ್ತಿರುವುದೇ ಒಂದು ವಿಶೇಷ.

ಪುಸ್ತಕವೆಂದರೆ ಕಾಗದದ ಹಾಳೆಗಳ ಸಂಪುಟವೆಂಬ ನಂಬಿಕೆ ಈಗ ಹುಸಿಯಾಗಿದೆ. ಕಾಲ ಬದಲಾದಂತೆ, ಕಾಗದದ ಹಾಳೆಗಳು ಹಳಸಿ, ಕೆಸೆಟ್, ಸೀಡಿಗಳಾಗಿ ಬದಲಾಗಿವೆ. ಅಂದರೆ ಪುಸ್ತಕದ ಜೊತೆಗೆ ಅನೇಕ ವಿವಿಧ ಪೈಪೋಟಿಗಳು ಪ್ರಾರಂಭವಾಗಿವೆ. ಕಾಗದದ ಅನ್ವೇಷಣೆಯ ನಂತರದ ಸುದೀರ್ಘ ಕಾಲಮಾನದಲ್ಲಿ, ಇಷ್ಟು ಪ್ರತಿಸ್ಪರ್ಧಿಗಳನ್ನು ಕಾಗದ ಎಂದೂ ಕಂಡೇ ಇರಲಿಲ್ಲ. ಅದು ಮುಖ್ಯವಾಗಿ ಟಿ.ವಿ. ಇರಬಹುದು ಇಲ್ಲವೆ ಕಂಪ್ಯೂಟರ್ ಆಗಿರಲೇಬೇಕು. ಪುಸ್ತಕದಿಂದ ಒಬ್ಬ ಓದುಗ ನಿರೀಕ್ಷಿಸುವ ಮೂಲಧಾತು, ಬೇರೆ ಬೇರೆ ಮಾರ್ಗಗಳಲ್ಲಿ ಸುಲಭವಾಗಿ ಸಿಗುವಾಗ, ಓದುಗನಿಗೆ ಪುಸ್ತಕದ ನಿರಾಶೆ ಅಷ್ಟಾಗಿ ಎದುರಾಗುವುದಿಲ್ಲ.

ಅಂದರೆ ಪುಸ್ತಕದ ಗತಿಯಾದರೂ ಏನು?

ಇಂದಿಗೂ ವಚನ, ದಾಸ ಸಾಹಿತ್ಯ, ರಾಮಾಯಣ, ಮಹಾಭಾರತದ ಪುಸ್ತಕಗಳು ಮರು ಮುದ್ರಣಗಳನ್ನು ಕಾಣುತ್ತಲೇ ಇರುತ್ತವೆ. ನಿರಂತರವಾಗಿ ಜನಮನ್ನಣೆಗೆ ಒಳಗಾಗಿವೆ. ಹಾಗೆಯೇ ಅನೇಕ ಆಧುನಿಕ ಶ್ರೇಷ್ಠ ಪುಸ್ತಕಗಳನ್ನು ಓದುಗ ಸಮುದಾಯ ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದೆ. ಮುಖ್ಯವಾಗಿ ಪುಸ್ತಕದ ಹೂರಣದ ಮೇಲೆ ಪುಸ್ತಕದ ಬದುಕು ನಿಂತಿರುತ್ತದೆ.

ಉತ್ತಮ ಪುಸ್ತಕಗಳ ಪರಿಚಯ ಕಾರ್ಯವನ್ನು ಮಾಧ್ಯಮಗಳು ಉದಾರವಾಗಿ ನಡೆಸಬೇಕಾಗಿದೆ. ಪುಸ್ತಕಗಳನ್ನು ತೌಲನಿಕ ವಿಮರ್ಶೆಗೆ ಹಚ್ಚಬೇಕಿದೆ.

'' ಯಾರೋ ಸೃಷ್ಟಿಸಿದ ಅಕ್ಷರಗಳು
ಯಾರದೋ ಭಾವನೆಗಳ ಜೊತೆ
ಕೂಡಿ ಬದುಕು
ಭಾವನೆಗಳ ಆರೋಗ್ಯ, ಅಕ್ಷರಗಳ ಭಾಗ್ಯ''

ಅವಶೇಷದಡಿಯಿಂದ ಹೊರಚಾಚಿದ ಒಂಟಿ ಕೈ.

ಮಧ್ಯಾಹ್ನ, ಮರದ ನೆರಳಲ್ಲಿ ಮೆಲುಕು ಹಾಕುತ್ತಾ ಕಣ್ಮುಚ್ಚಿದ ದನಕರುಗಳು.



ಮಲ್ಲಿಕಾರ್ಜುನ ಕುಬಸದ್, ಶಿರಸಿ



ಓದುಗರಿಗಾಗಿ ಪುಸ್ತಕ ಪ್ರಕಟಿಸುವವರು ಕಡಿಮೆ

ಪ್ರಕಾಶ್ ಕಂಬತ್ತಳ್ಳಿ
ಅಂಕಿತ ಪುಸ್ತಕ, ಬೆಂಗಳೂರು


★ ನಗರಗಳಲ್ಲಿ ಕಲಿಯುವಿಕೆಯ ಮಾಧ್ಯಮ ಇಂಗ್ಲಿಷ್. ಹೀಗಾಗಿ 25-30 ವಯಸ್ಸಿನ ಯುವಕರು ಕನ್ನಡ ಪುಸ್ತಕ ಮಳಿಗೆಗಳಿಗೆ ಭೇಟಿ ನೀಡುವುದೇ ಇಲ್ಲ. ಕನ್ನಡ ಪುಸ್ತಕಗಳಿಗೆ ಶೇ 70ರಷ್ಟು ಓದುಗರು ಇರುವುದು ಪಟ್ಟಣ ಮತ್ತು ಗ್ರಾಮಗಳಲ್ಲಿ. ಅವರಿಗೆ ಪುಸ್ತಕಗಳು ದೊರೆಯುವಂತೆ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಪ್ರಮುಖ ಸ್ಥಳಗಳಲ್ಲಿ 'ಪುಸ್ತಕ ಮೇಳ'ಗಳನ್ನು ನಡೆಸಬೇಕು.

★ ಒಂದು ಅಂದಾಜಿನಂತೆ, ವರ್ಷಕ್ಕೆ ನಮ್ಮಲ್ಲಿ, ಕನಿಷ್ಠ 2000 ಹೊಸ ಪುಸ್ತಕಗಳು ಪ್ರಕಟವಾಗುತ್ತವೆ. ಮರು ಮುದ್ರಣಗಳೂ ಸೇರಿದರೆ ಈ ಸಂಖ್ಯೆ 3000 ದಾಟುತ್ತದೆ. ಇದರಲ್ಲಿ ಅರ್ಧದಷ್ಟು ಪುಸ್ತಕಗಳು ಮಾರುಕಟ್ಟೆಗೇ ಬರುವುದಿಲ್ಲ. ದುಬಾರಿ ಬೆಲೆಯ ಈ ಪುಸ್ತಕಗಳು ಕೇವಲ ಗ್ರಂಥಾಲಯ ಮತ್ತು ಪುಸ್ತಕ ಪ್ರಾಧಿಕಾರಗಳ ಸಗಟು ಖರೀದಿಗೇ ಮೀಸಲಾಗಿಬಿಡುತ್ತವೆ. ಈ ಪ್ರವೃತ್ತಿ ನಿಲ್ಲಬೇಕು. ಓದುಗರನ್ನು ಗಮನದಲ್ಲಿಟ್ಟುಕೊಂಡು ಪುಸ್ತಕಗಳು ಪ್ರಕಟವಾಗಬೇಕು.

★ ನಾಡಿನಾದ್ಯಂತ ಚದುರಿರುವ ಓದುಗರಿಗೆ, ನಮ್ಮ ಪ್ರಕಟಣೆಗಳ ಪರಿಚಯ ಸಿಗುವುದು ಪತ್ರಿಕೆಗಳ ಮೂಲಕ ಮಾತ್ರ. ಆದರೆ ಕನ್ನಡ ಪತ್ರಿಕೆಗಳು (ಒಂದೆರಡು ಹೊರತುಪಡಿಸಿ) ಪ್ರಕಾಶನೋದ್ಯಮದ ಬಗ್ಗೆ ಆಸಕ್ತಿ ತೋರುತ್ತಿಲ್ಲ.

ಒಂದು ಪುಸ್ತಕ ಪ್ರಕಟವಾದ ತಿಂಗಳೊಳಗೆ, ಅದರ ವಿಮರ್ಶೆ ಬೇಡ, ಕನಿಷ್ಠ ಪರಿಚಯ ಪ್ರಕಟವಾದರೂ ಸಾಕು. ಈ ನಿಟ್ಟಿನಲ್ಲಿ ಪತ್ರಿಕೆಗಳು ಪುಸ್ತಕೋದ್ಯಮಕ್ಕೆ ನೆರವಾಗಬೇಕು.

★ ಪುಸ್ತಕ ಸಂಸ್ಕೃತಿ ಪ್ರಸಾರಕ್ಕೆ-ಪುಸ್ತಕ ಮಾರಾಟಕ್ಕೆ ಚಿಕ್ಕಪುಟ್ಟ ಪಟ್ಟಣಗಳಲ್ಲಿ, ಏಕಕಾಲಕ್ಕೆ, ಕನಿಷ್ಠ 7ರಿಂದ 8 ಸ್ಥಳಗಳಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಮಾಡುವುದು ಆಸಕ್ತರಿಗೆ ಪುಸ್ತಕ ತಲುಪಿಸಬೇಕಾದ ಕ್ರಮಗಳಲ್ಲಿ ಉತ್ತಮವಾದದ್ದು.



ಸಾಹಿತ್ಯಿಕ ಜ್ಞಾನವೂ ಅಗತ್ಯ

ನ. ರವಿಕುಮಾರ್
ಅಭಿನವ, ಬೆಂಗಳೂರು


ಪುಸ್ತಕ ಪ್ರಕಾಶಕನಾಗಿ ನನ್ನ ದಶಕದ ಅನುಭವವೆಂದರೆ, ಚಳ್ಳಕೆರೆಯಂತಹ ಅಪ್ಪಟ ವ್ಯಾಪಾರ ವಹಿವಾಟಿನ ಪುಟ್ಟ ತಾಲೂಕಿನಲ್ಲೂ 7500 ಬೆಲೆಯ ಪುಸ್ತಕಗಳು ಮಾರಾಟವಾಗಿವೆ. ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮ (ವಿಚಾರ ಸಂಕಿರಣ, ನಾಟಕ, ಸಂಗೀತ)ಗಳಲ್ಲಿ ಪ್ರದರ್ಶಿಸಲ್ಪಟ್ಟ ಸುಮಾರು 15 ಸಾವಿರ ಪುಸ್ತಕಗಳನ್ನು ತಿಂಗಳೊಂದಕ್ಕೆ ಹಾಗೆಯೇ ಯೂನಿವರ್ಸಿಟಿ ಕಾರ್ಯಕ್ರಮದಲ್ಲಿ ದಿನಕ್ಕೆ ಆರೂವರೆ ಸಾವಿರದಷ್ಟು ಬೆಲೆಯ ಪುಸ್ತಕ ಮಾರಾಟ ಮಾಡಿದ್ದಿದೆ. ಅಂದರೆ ಏನಾಯಿತು? ಜನ ಪುಸ್ತಕ ಕೊಳ್ಳುತ್ತಿಲ್ಲವೆಂದೇ? ಬೆಲೆ ಹೆಚ್ಚಾಯಿತೆಂದೇ? ಅಲ್ಲಿ ಮುಖ್ಯವಾಗಿ ಜನಕ್ಕೆ ಪುಸ್ತಕ ತಲುಪುತ್ತಿಲ್ಲ ಎನ್ನುವುದೇ ಆಗಿದೆ.

ನಮ್ಮಲ್ಲಿ ಆಧುನಿಕ ತಂತ್ರಜ್ಞಾನವನ್ನು adapt ಮಾಡಿಕೊಂಡೆವು. ಪುಸ್ತಕ ಮುದ್ರಣ, ವಿನ್ಯಾಸ ಮುಂತಾದುವಕ್ಕೆ, ಅದರ ಥಿಯರಿ ಪ್ರಕಾರ, ಹೆಚ್ಚು ಪುಸ್ತಕ ಅಚ್ಚು ಹಾಕಿದರೆ ಕಡಿಮೆ ವೆಚ್ಚ ಬೀಳುತ್ತದೆ. ಆಗ ತಂತಾನೇ ಬೆಲೆ ಕಡಿಮೆಯಾಗಬೇಕು. ಆದರೆ ನಮ್ಮ ಬಹುಪಾಲು ಲೇಖಕರು, ಪ್ರಕಾಶಕರು ಪುಸ್ತಕ ಮುದ್ರಿಸುವ, ಪ್ರಕಾಶಿಸುವಲ್ಲಿ ತೋರುವಷ್ಟು ಆಸಕ್ತಿ, ಉತ್ಸಾಹವನ್ನು ಮಾರಾಟಕ್ಕೆ ತೋರಿಸುವುದಿಲ್ಲ.

ಪುಸ್ತಕ ಪ್ರಕಾಶನ ಮಾರಾಟ ಕಿಂಚಿತ್ತಾದರೂ ಸಾಹಿತ್ಯ ಜ್ಞಾನ ಮತ್ತು ಸುಸಂಸ್ಕೃತತೆಯನ್ನು ಬೇಡುವಂಥದ್ದು. ಹಿಂದೆ ಪ್ರಕಾಶಕರಾದವರು ಕೂಡ ಸಾಹಿತಿಗಳಾಗಿರುತ್ತಿದ್ದರು. ಈಗ ಪ್ರಕಾಶಕನಿಗಾಗಲೀ ಮಾರಾಟಗಾರನಿಗಾಗಲಿ ಸಾಹಿತ್ಯದ ಗಂಧಗಾಳಿಯೂ ಇರುವುದಿಲ್ಲ. ಅವರಿಗೆ ಸರಿಕಂಡ, ತೋಚಿದ, ಹಣ ಬರಬಹುದಾದ ಪುಸ್ತಕಗಳನ್ನು ಪ್ರಕಟಿಸುತ್ತಾರೆ, ಮಾರಾಟಕ್ಕಿಡುತ್ತಾರೆ. ತುಂಬಾ ಒಳ್ಳೆಯ ಪುಸ್ತಕಗಳು ಮತ್ತು ಸಾಮಾನ್ಯ ಪುಸ್ತಕಗಳ ನಡುವಿನ ವ್ಯತ್ಯಾಸ ಅವರಿಗೆ ಗೊತ್ತೇ ಆಗುವುದಿಲ್ಲ. ಈ ಕಾರಣದಿಂದಾಗಿ ತುಂಬಾ ಮೌಲಿಕವಾದ ಪುಸ್ತಕಗಳು ಕೆಲ ಅಂಗಡಿಗಳನ್ನು ಬಿಟ್ಟರೆ ಉಳಿದ ಅಂಗಡಿಗಳಿಗೆ ಬರುವುದೇ ಇಲ್ಲ.

ಹಂಪಿ ವಿಶ್ವವಿದ್ಯಾಲಯ, ಸಾಹಿತ್ಯ ಅಕಾಡೆಮಿಯಂತಹ ಸಂಸ್ಥೆಗಳು ಓದುಗರಿಗೆ 50% ರಿಯಾಯಿತಿಯ ರುಚಿ ತೋರಿಸಿಬಿಟ್ಟಿವೆ. ಸಂಸ್ಕೃತಿ ಇಲಾಖೆ, ಪ್ರಾಧಿಕಾರಗಳು ಸರಕಾರದ ನೆರವಿನಿಂದ ಬೆಲೆ ಕಡಿಮೆ ಇಟ್ಟು ಮಾರುತ್ತವೆ. ಜನ ಕೂಡ ಅದೇ ಬೆಲೆ, ಅದೇ ರಿಯಾಯಿತಿಯನ್ನು ಖಾಸಗಿ ಪ್ರಕಾಶ ಸಂಸ್ಥೆಗಳಿಂದಲೂ ನಿರೀಕ್ಷಿಸುತ್ತಾರೆ. ದುರದೃಷ್ಟವೆಂದರೆ ನಾವು ಆ ರಿಯಾಯಿತಿ ಕೊಟ್ಟರೆ ನಮ್ಮ ಜೇಬಿನಿಂದ ಹಣ ಹೋಗುತ್ತದೆ. ಅಲ್ಲಿಯಾದರೆ ಸರಕಾರದ ದುಡ್ಡಲ್ಲವೇ? ಯಾರದೋ ಜಾತ್ರೆ, ಯಾರದೋ ದುಡ್ಡು. ಪುಸ್ತಕ ಖರ್ಚಾದರೆ ಸಾಕು ಅವರಿಗೆ.

ಗದ್ದೆಯ ಬದಿಯಲ್ಲಿ ಗೂಟಕ್ಕೆ ಹಗ್ಗ ಜಗಿದು ಕಟ್ಟಿರುವ ಪುಟ್ಟದಾದ ಕರುವಿನ ಕಿವಿಯಲ್ಲಿ ಗಾಳಿ ತೂರಿ, ಅದು ಅತ್ತಿಂದಿತ್ತ ಜಿಂಕೆಯಂತೆ ಚಂಗನೆ ಜಿಗಿಯುತ್ತಾ ಓಡಾಡುವ ಮನಮೋಹಕ ದೃಶ್ಯ. ನೀಲಾಕಾಶದಲ್ಲಿ ಕಣ್ರೆಪ್ಪೆ ಮುಚ್ಚಿ ತೆರೆವಷ್ಟರಲ್ಲಿ ಸಾಲಾಗಿ ಪುರ್ರನೆ ಹಾರಿಹೋಗುವ ಹಕ್ಕಿಗಳ ಹಿಂಡು; ಸಂಜೆಯಾಗುತ್ತಲೇ ಎಟುಕದ ಕಿತ್ತಳೆ ಹಣ್ಣಿನಂತೆ ಕಾಣುವ ಬಾನ ಭಾಸ್ಕರ...



ತಂದೆ, ತನ್ನ ಮಗಳ ಕೈಹಿಡಿದು ಕರೆದೊಯ್ಯುವ ದೃಶ್ಯ! ಮೂರು ವರ್ಷಗಳ ಹಿಂದೆ ನನ್ನ ತಂದೆಯವರು ಅಗಲಿದ್ದರೂ ಯಾವ ತಂದೆಯೇ ತನ್ನ ಮಗಳನ್ನು ಕರೆದೊಯ್ಯುವ ದೃಶ್ಯ ನನ್ನ ಕಣ್ಣಿಗೆ ಬಿದ್ದಲ್ಲಿ, ಆ ತಂದೆಯ ಸ್ಥಾನದಲ್ಲಿ ನನ್ನ ತಂದೆ, ಆ ಮಗಳ ಜಾಗದಲ್ಲಿ ನನ್ನನ್ನು ಕಲ್ಪಿಸಿಕೊಂಡು ಸುಖಿಸಿದ್ದು ಎಷ್ಟೋ ಬಾರಿ.

ಕಟಪಾಡಿಬೀಡು ಸ್ಮಿತಾ ಬಲ್ಲಾಳ್, ಕೊಡಿಯಾಲ್‌ಬೈಲ್

ರಂಗ ಸಾಲೆ

ನರ್ತಕಿ, ಕವಯತ್ರಿ, ಎಂ.ಆರ್. ಕಮಲ ಅವರ 'ನೃತ್ಯಾನುಭೂತಿ'ಯ ಟಿಪ್ಪಣಿಯನ್ನಿಲ್ಲಿ ಕೊಡುತ್ತಿದ್ದೇವೆ; ಅವರ ಎರಡು ನೃತ್ಯಪ್ರೇರಿತ ಕವಿತೆಗಳೊಂದಿಗೆ...



ಮಾಧವಿಯ ರಂಗಪ್ರವೇಶ

ಮಣಿ ಮೇಖಲೆ-
ದಿಕ್ಕೂಚಿ ದೇವತೆಯೇ.
ನಡೆಸು ಈ ಹಡಗನ್ನು
ಬಿರುಗಾಳಿಗೆ ಎದೆಯೊಡ್ಡಿದವಳನ್ನು
ದಿಕ್ಕುಗಳು ಕಳೆದು ಕಳವಳಿಸಿದರೂ
ದೂರದಲ್ಲೆಲ್ಲೋ ತೀರವಿರಲೇಬೇಕೆಂದು
ಪಯಣದ ಪಣಕ್ಕಣಿಯಾದವಳನ್ನು.
ತತ್ತರಿಸದಿರು-ನುಡಿವ ಹೆಜ್ಜೆಗಳ
ಬೆಸ್ತರ ಹಾಡು ನಾಲಗೆಯ
ನಂದಿಸದಿರು-ಹಾಯಿ ದೋಣಿಯ
ಮಿಣುಕು ದೀಪಗಳ
ಬತ್ತಿಸದಿರು ಬಯಕೆಗಳ
ಬದುಕಿನೋಲಗಕೆ ಸಿದ್ಧವಾದವಳ!

ಬೀಸಿ ಕರೆಯುತ್ತಿದೆ ರಂಗಮಂದಿರದ ರಂಗು
ಮದ್ದಳೆ, ಕೊಳಲು, ಅಮರಾವತಿಯ ಕೊಳಲು
ನಿಟ್ಟುಸಿರು, ನಿರೀಕ್ಷೆ, ಆತಂಕದ ಕಡಲು-ಒಡಲು
ಮಥಿಸಿದರೆ ವಿಷವೊ-ಪೀಯೂಷವೋ?!

ಚಿತ್ರಪತಿಯ ಚಿತ್ತಾರದ ಛತ್ರಿಯಡಿ ನಡೆದವಳಿಗೆ
ನಾಟ್ಯ, ಕಾವ್ಯ, ಗಾನ ಮೇಳ ಮೇಳೈಸಿದ ಮಾಧವಿಗೆ
ಕನಸಷ್ಟೆ ಹಾದಿ. ಕಡಲೆಲ್ಲ ಮುತ್ತು
ಇರುಳೆಲ್ಲ ಚಂದ್ರ!

2

ಲೇಪಿಸಿದ್ದೇನೆ ಮೈಗೆ ಶ್ರೀಗಂಧ
ಕಾಲ ಕಾಲಂದುಗೆ ಕಟಿಗೆ ಕಟಿಬಂಧ
ಜಡೆಗೆ ಜಡೆಬಂಗಾರ
ಕಾಡಿಗೆಯ ಕಣ್ಣು ಹಣೆಯುದ್ದಕ್ಕೂ ತಿಲಕ,
ಮಣಿ ಮೇಖಲೆ
ಅಡವು ತಪ್ಪಿ ಎಡವಿ ಬೀಳಿಸಬೇಡ
ಮುಳುಗಿಸಬೇಡ ಕನಸು ಹಾಯಿಗಳನು
ದೋಣಿಕಾರಳನ್ನು
ಬಿರುಗಾಳಿಗೆ ಎದೆಯೊಡ್ಡಿದವಳನ್ನು.
ದಿಕ್ಕುಗಳು ಕಳೆದು ಕಳವಳಿಸಿದರೂ
ದೂರದಲ್ಲೆಲ್ಲೋ ತೀರವಿರಲೇಬೇಕೆಂದು
ಪಯಣದ ಪಣಕ್ಕಣಿಯಾದವಳನ್ನು.



ನಾಟ್ಯ ಅಂದರೆ ತನ್ಮಯತೆ. ಅದೇ ಮೊದಲ ಮಂತ್ರ. ಸಾಹಿತ್ಯ, ಸಂಗೀತ, ಭಾವಕ್ಕೆ ಜೀವ ತುಂಬುವುದು ಇಲ್ಲಿನ ಕಲಾವಿದನ ಕಾಯಕ. ಕವಿತೆ ಬರೆದಾದ ಮೇಲೆ ಕವಿ ಅದನ್ನು ತನಗೆ ತಾನೇ ಓದಿಕೊಂಡು ಖುಷಿಪಡಬಹುದು. ಆದರೆ ಯಾವುದೇ ಪ್ರದರ್ಶನ ಕಲೆಯ ಕಲಾವಿದ ತಾನು ಅಭಿನಯಿಸುವುದನ್ನು ನೋಡಿಕೊಳ್ಳಲಾರ. ಕಲಾವಿದನೊಬ್ಬ ಮೈಮರೆತು, ಯಾವುದೋ ಲೋಕದಲ್ಲಿ ಲೀನವಾಗಿ ಮ್ಯಾಕ್‌ಬೆತ್ ಪಾತ್ರ ಅಭಿನಯಿಸುತ್ತಿದ್ದರೆ ಸಭಾಂಗಣದ ಕತ್ತಲೆಯಲ್ಲಿ ಮೂಲೆಯಲ್ಲಿ ಕೂತ ಪ್ರೇಕ್ಷಕ ಬಿಕ್ಕುತ್ತಿರುತ್ತಾನೆ! ಯಕ್ಷಗಾನದ ಕುಣಿತವನ್ನು ಆನಂದಿಸುತ್ತಿರುವ ನೋಡುಗನ ಮನಸ್ಸು ಜಗರೆಯಂತೆ ಕುಣಿಯುತ್ತದೆ. ಒಬ್ಬನ ಅಭಿನಯ ನೂರು ಜನರಿಗೆ ಸಂತಸ, ದುಃಖ, ಖುಷಿ ಎಲ್ಲವನ್ನು ನೀಡಬಲ್ಲಷ್ಟು ಬೆಳೆದು ಹಬ್ಬಿರುತ್ತದೆ. ನೋಡುವವರನ್ನೆಲ್ಲ ಪಾತ್ರಧಾರಿಗಳನ್ನಾಗಿಸುವ ಶಕ್ತಿ ನಟನಿಗೆ.

ಅಕ್ಷರದಲ್ಲಿ ವ್ಯಕ್ತಗೊಂಡ ಪ್ರತಿ ಅರ್ಥಕ್ಕೆ ನವರಸಗಳ ಲೇಪ ನೀಡುವುದೇ ನಾಟ್ಯದ ಗುಣ. 'ಅಧರದಿ ನಸುನಗೆ ಕರದಲಿ ಕೊಳಲು; ತನು ಕಾಂತಿಗೆ ಜಗ ಅಚ್ಚರಿಗೊಳಲು' ಎನ್ನುವ ಎರಡು ಸಾಲಿನ ಸಾಹಿತ್ಯಕ್ಕೆ ಸಂಗೀತ, ಜತೆ ಸೇರಿದಾಗ ಹತ್ತಾರು ಅಭಿವ್ಯಕ್ತಿ ಹುಟ್ಟಬಲ್ಲವು. ಆ ಎರಡು ಸಾಲನ್ನೇ ಹತ್ತಾರು ರೀತಿಯಲ್ಲಿ ಅಭಿನಯಿಸಿ, ನೋಡುಗನಲ್ಲಿ ರಸೋತ್ಪಾದನೆ ಮಾಡಬಹುದು.

ಸುಮಾರು 10 ವರ್ಷ ನಾನು ಕಲಿತ, ನೃತ್ಯ ಕಲಿಸಿದ ಮೊದಲ ಪಾಠವೆಂದರೆ ಸಮರ್ಪಣಾ ಭಾವ, ಸಹನೆ. 'ಶಿಕ್ಷೆ'ಯನ್ನು ಹೊಗಳಿಕೆಯೆಂದು ಸ್ವೀಕರಿಸಿ ಮತ್ತೆ ಮತ್ತೆ ಕಲಿಯಬೇಕು ಎನ್ನುವ ವಿನಯ ಮೀರಿ ಅಹಂಕಾರ ತುಸುವೇ ತಲೆಯೆತ್ತಿದರೂ ತಾಳ ಕೈಕೊಟ್ಟು, ಕಾಲೂ ಅಲುಗದು ರಂಗಸ್ಥಳದ ಮೇಲೆ!

ನಾಟ್ಯ ಕಲಿಯುವುದು ಗಣಿತ ಕಲಿತಷ್ಟೇ ಕಷ್ಟಸಾಧ್ಯ. ಗಣಿತದ ಸೂತ್ರ ತಲೆಗೆ ಹೋದರೆ ಅದು ಬಲು ಸುಲಭ. ತಿಳಿಯದಿದ್ದರೆ ಅನುತ್ತೀರ್ಣತೆ ಕೈ ಚಾಚಿ ನಿಂತಿರುತ್ತದೆ. ಒಂದು ಸೂತ್ರಕ್ಕೆ ಅನುಗುಣವಾಗಿ ಸಂಯೋಜಿಸಿದ ನೃತ್ಯ ನೋಡುಗರಿಗೆ ಸಲೀಸು, ಸುಂದರವಾಗಿ ಕಂಡರೆ ಅದರಲ್ಲಿ ಲೀನವಾದ ವ್ಯಕ್ತಿ ಗಣಿತದ ಸೂತ್ರದೊಂದಿಗೇ ತಲ್ಲೀನನಾಗುವ ಪರಿಣತಿ ಪಡೆದಿರಬೇಕು.

ನರ್ತಿಸುವಾಗ ಕಿವಿಯಲ್ಲಿ ತಾಳದ ಸದ್ದು ತುಂಬಿರುತ್ತದೆ. ಸಾಹಿತ್ಯ ಸಂಗೀತದ ಜಾಡು ಹಿಡಿದು ಅದರಲ್ಲೇ ಲೀನವಾಗಿ ಅಭಿನಯಿಸುತ್ತ ಹೋಗುವುದಷ್ಟೇ ನೃತ್ಯಗಾತಿಯ ಶ್ರದ್ಧೆಯ ಕೆಲಸ. ಅವಳ ಒಳಗಿನ ಕಣ್ಣು ಲಯ-ಗತಿಗಳನ್ನು ಕಾಣುತ್ತಿದ್ದರೆ ಹೊರಗಿನ ಅಭಿನಯವನ್ನು ರಸಿಕ ಪ್ರೇಕ್ಷಕ ಅನುಭವಿಸಬೇಕು. ನರ್ತಕಿಗೆ ನಾಟ್ಯವೆಂದರೆ ತಾಳಬದ್ಧವಾದ ಕುಣಿತವಾಗಬಾರದು. ತಾನು ಅತ್ತಾಗ ಅಳುವ, ನಕ್ಕಾಗ ನಗುವ, ಸೋತುಹೋದಾಗ ಸೋತುಹೋದೆ ಎನಿಸುವಂತೆ ಪ್ರೇಕ್ಷಕನಿಗೆ ಭಾವ ಮೂಡಿಸುವುದೇ ಸಮರ್ಥ ನರ್ತನ. ಅದ್ಭುತ ರಸವನ್ನು ಪ್ರಕಟಿಸುವಾಗ ಅಗಲ ಕಣ್ಣು ತೆರೆದರೆ ಸಾಲದು. ಇಡೀ ದೇಹದಲ್ಲಿ ಅಂಥ ರೋಮಾಂಚನ ಮೂಡಿದಾಗ ಮಾತ್ರ ರಸೋತ್ಪತ್ತಿ ಸಾಧ್ಯ.

ಬೇರೆ ಪ್ರದರ್ಶನ ಕಲೆಗಳಂತೆ ನೃತ್ಯ ಕೂಡ ರಂಗಸ್ಥಳದಲ್ಲಿ ಆ ಕ್ಷಣಕ್ಕೇ ಅಭಿನಯಿಸಿ ಪಡೆವ ಕಾಣ್ಕೆ. ಇದಕ್ಕಿರುವ ಇನ್ನೊಂದು ಅಪಾರ ಸಾಧ್ಯತೆಯೆಂದರೆ ಏಕಪಾತ್ರಾಭಿನಯದ ನಟ ಎಲ್ಲವನ್ನೂ ತಾನೇ ನಟಿಸಿ ತೋರಿಸುವಂತೆ ಒಬ್ಬಳೇ ನರ್ತಕಿ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ, ವಿರಹಿಣಿಯಾಗಿ, ಸರಸವಾಡುವ

ಎಂ.ಆರ್. ಕಮಲ

ನಲ್ಲೆಯಾಗಿ, ರೌದ್ರಿಣಿಯಾಗಿ ಸಕಲವನ್ನೂ ತೋರಿಸ ಬಲ್ಲಳು. ಒಬ್ಬ ನಟ ಒಂದು ಉದ್ದೇಶಿತ ಪಾತ್ರವನ್ನಷ್ಟೇ ಆ ಗಳಿಗೆಯಲ್ಲಿ ನಟಿಸಬಲ್ಲ. ನರ್ತಕಿ ಇಪ್ಪತ್ತು ನಿಮಿಷಗಳ ನೃತ್ಯ ಸಂಯೋಜನೆಯಲ್ಲಿ ಕ್ಷಣ ಕ್ಷಣಕ್ಕೂ ಭಾವಕ್ಕೆ ತಕ್ಕಂತೆ ಪಾದಗಳನ್ನು ಸಜ್ಜುಗೊಳಿಸಬೇಕು. ಪದ, ಜಾವಳಿ, ಅಭಿನಯ ಪ್ರಧಾನವಾಗಿದ್ದರೆ, ರಸಿಕ ಪ್ರೇಕ್ಷಕನಿಗೆ ಗೆಜ್ಜೆ-ಹೆಜ್ಜೆಗಳ ಸದ್ದಿನ ಮೂಲಕ ಮೈಮರೆವಂತೆ ಮಾಡಬಲ್ಲ ತಿಲ್ಲಾನಕ್ಕೆ ಏಕಾಗ್ರತೆಯಷ್ಟೇ ಅಲ್ಲ, ಜಿಂಕೆಯ ಚುರುಕುತನ, ಅದಮ್ಯ ಉತ್ಸಾಹ ಬೇಕು.

ಸಾಹಿತಿಗಳು ತಮ್ಮ ಪರಿಣತಿಯನ್ನು ಮೊದಲ ಕತೆ, ಕವಿತಾ ಸಂಗ್ರಹ ಪ್ರಕಟಿಸಿ ಅಳೆದು ನೋಡಿಕೊಳ್ಳುವಂತೆ ನೃತ್ಯದಲ್ಲಿ 'ರಂಗ ಪ್ರವೇಶ'ದ ಮೂಲಕ ಕಲಿಕೆಯನ್ನು ಒರೆ ಹಚ್ಚಲಾಗುತ್ತದೆ. ಬಿಡಿಬಿಡಿ ಕವಿತೆಗಳಂತೆ ವಿವಿಧ ಬಗೆಯ (ಸ್ವರ ಜತಿ, ವರ್ಣ, ಪದಂ...) ಕನಿಷ್ಠ 10-12 ಸಂಯೋಜನೆಗಳ ಮೂಲಕ ಒಂದು ರಂಗ ಪ್ರವೇಶದ ವೇದಿಕೆ ಸಿದ್ಧವಾಗುತ್ತದೆ. ಇಪ್ಪತ್ತು ಕವಿತೆಗಳ ಒಂದು ಸಂಕಲದ ಓದಿ ಮುಗಿಸಿದಾಗ ಕವಿಯ ಅನುಭವ, ಭಾಷಾ ಪರಿಣತಿ, ಕಾವ್ಯವಾಗಿಸುವ ಅವನ ಯತ್ನದ ಬಗ್ಗೆ ಹೇಗೆ ಸ್ಪಷ್ಟ ರೂಪ ಸಿಗಬಲ್ಲದೋ ಹಾಗೆ ರಂಗ ಪ್ರವೇಶದ 10-12 ಸಂಯೋಜನೆ ನೋಡಿ ಕಾರ್ಯಕ್ರಮ ಮುಗಿಸಿದ ಮೇಲೆ ಒಬ್ಬ ಪರಿಣತ ನೃತ್ಯಗಾತಿ ಆ ಕಲಾವಿದೆಯಲ್ಲಿ ಇದ್ದಾಳೋ ಇಲ್ಲವೋ ಎಂದು ಅರಿವಾಗುತ್ತದೆ.

ಅಚ್ಚಾದ ಕವಿತೆ ಹೊರಗಣ್ಣಿನ ಮೂಲಕ ಮನಸ್ಸಿಗಿಳಿದು ಸಂಕೇತವಾಗುತ್ತದೆ. ನಾಟ್ಯ ಒಳಗಣ್ಣಿನ ಸಭಾಂಗಣದಲ್ಲಿ, ತನ್ಮಯತೆಯಲ್ಲಿ ಅರಳಿ ಹೊರಗೆ ಪ್ರೇಕ್ಷಕನಿಗೆ ಸಾಕಾರವಾಗುತ್ತದೆ. ■



ದೇವಯಾನಿ: ಆಷಾಢದ ಒಂದು ದಿನ

1

ಆಷಾಢದ ಮೋಡಗಳು
ಕಾದ ಕಾದಲೆಯ ಕಪ್ಪಿಟ್ಟ ಒಡಲು
ಭೂತಾಕಾರಗಳು
ನಟ್ಟನಡು ಹಗಲೆ ಕವಿಸಿ ಕಾರ್ಗತ್ತಲು
ಎದೆ ನಡುಗಿಸುತ್ತವೆ
ಆಶ್ರಮದ ಕಟ್ಟು ಕಡಿವ ರಾಜಕುವರರ ಅಶ್ವಗಳು
ಗುಡುಗುಡುಗುಗಳು.

ಆಗಸಕ್ಕೆ ಎದೆಯೊಡ್ಡಿದವಳಿಗೆ, ಆಷಾಢಕ್ಕೆ
ಯಾಕೆ ಈ ತಲ್ಲಣ, ಗಾಳಿಗೀಳು!
ಸ್ವರ್ಗಲೋಕದ ಮಿಂಚು ಸೀಳಿ ಕಾರ್ಮುಗಿಲು
ಸುರಿಸೀತು ವರ್ಷಧಾರೆ ಎಂಬ ಹುಂಬ ಹಂಬಲು

2

ಯಾವ ಕನ್ನಡಿಯಲ್ಲಿ ಮುಖ ಕಳೆದು ಹೋಯಿತು
ಅದ್ಯಾವ ರಂಗಶಾಲೆಯಲ್ಲಿ ಉದುರಿ ಗೆಜ್ಜೆ
ಪಾಪ ಕೂಪಕ್ಕೆ ನಡೆಯಿತು ಹೆಜ್ಜೆ?
ಎಷ್ಟು ಭಾವ, ವಿಭಾವ, ಅನುಭಾವಗಳ
ದೇವಯಾನಿಯ ನಾಟ್ಯಕ್ಕೀಗ
ಒಂದೆ ಭಾವದ ಅವಲಂಬ-ವಿಪ್ರಲಂಭ!

ಕಾಡು ಹೂವೆ, ಮಿಂಚು ಹುಳುವೆ ಕಚನ ಕಣ್ಣೆ
ಕಾಡುತ್ತೀರೇಕೆ ಕಾಡು ತೊರೆದರೂ
ಯಯಾತಿಯ ಮೈ-ಮಹಲು ಸೇರಿದರು!

3

ಸಂಜೀವಿನಿ ಮಂತ್ರಕ್ಕೆ ಮಂತ್ರಮುಗ್ಧನಾದವನೆ
ಜೀವ ಸಂಜೀವಿನಿಯ ತೊರೆದವನೆ
ಮರು ಜೀವ ಕೊಟ್ಟವಳ ಮರೆತವನೆ
ಇನ್ನು, ಇನ್ನು ಹೊಳೆ ಹರಿಯುತ್ತಿದೆ ಹಾಡುತ್ತಲೇ
ಘಮಿಸುತ್ತಿದೆ ಎಂದೋ ಕಟ್ಟಿದ ಪುಷ್ಪಮಾಲೆ.



ಎಸ್.ಎಂ. ಕೃಷ್ಣ
ಮುಖ್ಯ ಮಂತ್ರಿಗಳು



ಯುಗಾದಿ

ಸಿಹಿ ಕಹಿಗಳ ಸರಿಗಮ, ಸಾಧನೆಗಳಿಗೆ ಹೊಸ ಆಯಾಮ.

ಯುಗಾದಿ - ವರ್ಷೇ ವರ್ಷೇ ಚೈತ್ರ ಶುದ್ಧ ಪಾಡ್ಯಮಿಯಂದು ಸಂಭ್ರಮದಿ ಬರುವ ಸುದಿನ. ವಿಕ್ರಮ ಶಕೆಯ ವಿಷುನಾಮ ಸಂವತ್ಸರಕ್ಕೆ ಈ ವರ್ಷದ ಯುಗಾದಿಯಂದು ಆಹ್ವಾನ.

ಜೀವನದಲ್ಲಿ ಸಿಹಿಕಹಿಗಳೆರಡನ್ನೂ ಸಮಾನವಾಗಿ ಸ್ವೀಕರಿಸಬೇಕೆಂಬ ತತ್ತ್ವವನ್ನು ಸಾರುವ ಯುಗಾದಿ. ಮನುಕುಲ ಹೊಸ ಭರವಸೆಯೊಂದಿಗೆ ಹೊಸ ಹುರುಪಿನಿಂದ, ಹೊಸ ಬಾಳಿನೆಡೆಗೆ ಮುನ್ನಡೆಯಲು ನಿಸರ್ಗ ನೀಡುವ ನವ ಚೈತನ್ಯ. ಬೇವಿನ ಕಹಿಯೊಂದಿಗೆ, ಬೆಲ್ಲದ ಸಿಹಿ ಸೇರಿದಾಗಲೇ ಸಮರಸ ಬಾಳು ಅರ್ಥಪೂರ್ಣವೆಂಬ ಸಾರ್ವತ್ರಿಕ ಸತ್ಯವನ್ನು ಸೃಷ್ಟಿಯೊಂದಿಗೆ ಮಿಳಿತಗೊಂಡು ಸಾರುವ ಭಾರತೀಯ ಸಂಸ್ಕೃತಿ ಸರ್ವರಿಗೂ ಸಮನ್ವಯ.

ಪ್ರಕೃತಿಯ ಸೊಬಗಿನಿಂದ ಪುಳಕಿತಗೊಂಡು ಮನುಷ್ಯ ಪ್ರಗತಿಯ ಫಲ ಸವಿಯಲು ಸದಾ ಕಾತುರ. ಅದಕ್ಕಾಗಿ ಸಮುದಾಯ ಯತ್ನವೇ ಮೂಲಸಾಧನ.

ಈ ತತ್ತ್ವ - ಧ್ಯೇಯದೊಂದಿಗೆ ತನ್ನ ಜನತೆಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣ ನೇತೃತ್ವದ ಪ್ರಸಕ್ತ ಕರ್ನಾಟಕ ಸರ್ಕಾರ, ಕರ್ನಾಟಕವನ್ನು ಹಲವಾರು ರಂಗಗಳಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರಿಸಿದೆ.

ವಿಷು ನಾಮ ಸಂವತ್ಸರದ ಈ ಯುಗಾದಿ ಕರ್ನಾಟಕವನ್ನು ಸರ್ವಾಂಗೀಣ ಅಭಿವೃದ್ಧಿಯೊಂದಿಗೆ ಮಾದರಿ ರಾಜ್ಯವಾಗಿಸಲೆಂದು ಆಶಿಸುತ್ತಾ, ಹೊಸ ವರ್ಷ ನಾಡಜನತೆಗೆ ಸುಖಶಾಂತಿ, ಸೌಹಾರ್ದತೆ ತರಲೆಂದು ಕರ್ನಾಟಕ ಸರ್ಕಾರದ ಹಾರೈಕೆ.

ಎಲ್ಲರಿಗೂ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

"ಹೊಸ ಚಿಗುರು ಹಳೆಬೇರು
ಕೂಡಿರಲು ಮರಸೊಬಗು"
- ಡಿವಿಜಿ

ಕರ್ನಾಟಕ -
ದುಡಿಯುವ ಜನರ ಒಲುಮೆ,
ನವಚೈತನ್ಯದ ಚಿಲುಮೆ.


ಕರ್ನಾಟಕ ವಾರ್ತೆ

ಜಾನ್ ಫರ್ನಾಂಡಿಸ್‌ರ ವರ್ಣಲೀಲೆ

[illegible] ಅದ್ಭುತ ಕಲಾಕೃತಿಗಳನ್ನು ಚಿತ್ರಿಸುವ ಜಾನ್ ಫರ್ನಾಂಡಿಸ್, [illegible] ಕಲಾವಿದರು. 'ಜಾನ್ ಫರ್ನಾಂಡಿಸ್ ಸುಂದರಿಯರೆಂದೇ' ಪ್ರಸಿದ್ಧವಾಗಿರುವ ಅವರ ಸ್ತ್ರೀ ಚಿತ್ರಗಳಲ್ಲಿ [illegible]. ನಾಡಿನಾದ್ಯಂತ ಕಲಾವಿದ್ಯಾರ್ಥಿಗಳೆಲ್ಲ ಏಕಲವ್ಯರಂತೆ ಅವರನ್ನು ಆರಾಧಿಸುತ್ತಾರೆ. ಜಾನ್ ಫರ್ನಾಂಡಿಸ್ ಮೂಲತಃ ಬೆಳಗಾವಿಯವರು. ಈಗ ಮುಂಬಯಿಯಲ್ಲಿ ನೆಲೆಸಿರುವ ಕಲಾವಿದ. ಕಸ್ತೂರಿ ಪತ್ರಿಕೆಗೆ, ಮೊಟ್ಟಮೊದಲ ಬಾರಿಗೆ ಅವರು ಕೊಟ್ಟಿರುವ ಸಂದರ್ಶನ ಇದು.

ಕನ್ನಡ, ಮರಾಠಿ, ಕೊಂಕಣಿ ಮೂರೂ ಭಾಷೆಯ ಸಾಹಿತ್ಯಾಸಕ್ತ, [illegible] ಕಲಾವಿದ. [illegible]ಯವರೊಡನೆ ಅವರು ತಮ್ಮ ಪ್ರೇರಣೆ, ಶೈಲಿ, ವೈಖರಿಯ ಬಗ್ಗೆ ಪ್ರೀತಿಯಿಂದ ಮಾತಾಡಿದ್ದಾರೆ.





■ ಆನಂದ ವರ್ಟಿ

ಕ್ಯಾನ್‌ವಾಸ್

- ಬೆಳಗಾವಿಯ ಲಿಂಗರಾಜ ಕಾಲೇಜಿನಿಂದ ಮಾನಸಶಾಸ್ತ್ರ ಮತ್ತು ತತ್ವಜ್ಞಾನ ಈ ವಿಷಯಗಳನ್ನು ತೆಗೆದುಕೊಂಡು ನೀವು ಪದವೀಧರರಾಗಿದ್ದೀರಿ. ಹೀಗಿದ್ದಾಗ, ನೀವು ಕಲೆಯ ಆರಾಧನೆಯ ಬದಿಗೆ ಹೇಗೆ ಹೊರಳಿದಿರಿ? ನಿಮ್ಮ ಈ ಕಲಾಭಿರುಚಿಯ ಮೂಲ ಪ್ರೇರಣೆ ಹೇಗಾಯಿತು?

ಚಿಕ್ಕವನಿದ್ದಾಗಿನಿಂದಲೇ ನನಗೆ ಚಿತ್ರಕಲೆಯ ಆಕರ್ಷಣೆ ಇತ್ತು. ಪ್ರಾಥಮಿಕ ಶಾಲೆಯ ಶಿಕ್ಷಕರೂ ಕಪ್ಪು ಹಲಗೆಯ ಮೇಲೆ ನನ್ನ ಕಡೆಯಿಂದ ಚಿತ್ರಗಳನ್ನು ಬಿಡಿಸಿಕೊಳ್ಳುತ್ತಿದ್ದರು. (ನನ್ನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಕನ್ನಡದಲ್ಲಿಯೇ ಆಗಿತ್ತು.) ಇದನ್ನು ಕಂಡ ನನ್ನ ಅಣ್ಣ ಬೆಳಗಾವಿಯ ಖ್ಯಾತ ಕಲಾಶಿಕ್ಷಕರಾದ ಕೆ.ಬಿ. ಕುಲಕರ್ಣಿ ಅವರ ಹತ್ತಿರ ನನ್ನನ್ನು ಕರೆದುಕೊಂಡು ಹೋದರು.



ಜಲವರ್ಣ ಕನ್ಯೆಯರು



ಜಲವರ್ಣ

ಆಗ ನನಗಿನ್ನೂ ಹನ್ನೊಂದು ವರುಷ ವಯಸ್ಸು. ಡ್ರಾಯಿಂಗ್‌ನಲ್ಲಿ ಕುಲಕರ್ಣಿ ಸರ್ ಅವರದು ಪಳಗಿದ ಕೈ. ಅವರ ಮಾರ್ಗದರ್ಶನದಲ್ಲಿಯೇ ನಾನು ಬೆಳೆದೆ. ಶಾಸ್ತ್ರೀಯ ಪದ್ಧತಿಯಿಂದ ಚಿತ್ರಗಳನ್ನು ಹೇಗೆ ರೇಖಿಸುವುದು, ವರ್ಣವಿನ್ಯಾಸದ ರಹಸ್ಯವೇನು, ಛಾಯಾ-ಪ್ರಕಾಶದ ಮಾಟದಿಂದ ಚಿತ್ರ ಹೇಗೆ ಜೀವಂತವಾಗುತ್ತದೆ ಎಂಬುದನ್ನು ನಾನು ಅವರಿಂದ ಕಲಿತೆ. ನನ್ನ ಮೇಲಿನ ಅವರ ಋಣ ಎಂದಿಗೂ ತೀರಿಸಲಾಗದಂತಹುದು. ಒಂಬತ್ತು ವರ್ಷ ನಾನು ಅವರ 'ಚಿತ್ರಮಂದಿರ'ದಲ್ಲಿ

ಮಿಶ್ರಮಾಧ್ಯಮ



ಚಿತ್ರಕಲೆಯ ಸಾಧನೆಯನ್ನು ಮಾಡಿದೆ. ಅದಕ್ಕಾಗಿಯೇ ನನಗೆ ಸಿಕ್ಕಿತು ಸಿದ್ಧಿ. ಇಂತಹ ಸಾಧನೆ ಮಾಡುವ ಅವಕಾಶ ಇನ್ನಾವ ಕಲಾಶಾಲೆಯಲ್ಲಿ ಬಹುಶಃ ನನಗೆ ಸಿಗುತ್ತಿರಲಿಲ್ಲವೇನೋ! ಆದರೆ ಒಂದು ಮಾತು. ಆ ಕಾಲದಲ್ಲಿ ಚಿತ್ರಕಲೆ ಎಂದರೆ ಆತ್ಮಸಂತೋಷಕ್ಕಾಗಿ ಮಾಡುವ ಒಂದು ಹವ್ಯಾಸ ಎಂದೇ ಜನಸಾಮಾನ್ಯರ ತಿಳುವಳಿಕೆ. ಅದು ಜೀವನೋಪಾಯಕ್ಕೆ ಉಪಯುಕ್ತವಾದ ಕೆಲಸ ಎಂದು ಯಾರೂ ತಿಳಿಯುತ್ತಿರಲಿಲ್ಲ. ಹಾಗಾಗಿ ಶಿಕ್ಷಣ ತೆಗೆದುಕೊಂಡು ಎಲ್ಲಿಯಾದರೂ ನೌಕರಿ ಮಾಡುವ ಉದ್ದೇಶವೇ ಎಲ್ಲರದು. ಅದರಿಂದಾಗಿ ನಾನೂ ಪದವೀಧರನಾದೆ. ಚಿತ್ರಕಲೆಯನ್ನೇ ವೃತ್ತಿಯನ್ನಾಗಿ ಸ್ವೀಕರಿಸುವ ಅಂತಃಪ್ರೇರಣೆ ನನ್ನಲ್ಲಿ ಹುಟ್ಟಿತು. ಹೀಗಾಗಿ 1972ರಲ್ಲಿ ನಾನು ಮುಂಬಯಿಗೆ ಬಂದೆ. ಇಲ್ಲಿ ಒಂದು ಜಾಹೀರಾತು ಕಂಪನಿಯಲ್ಲಿ ಒಂಬತ್ತು ವರುಷ ಚಿತ್ರಕಾರನೆಂದು ಕೆಲಸ ಮಾಡಿದೆ. ಎಲ್ಲ ಬಗೆಯ ರೇಖಾಚಿತ್ರಗಳು, ಜಾಹೀರಾತುಗಳು, ಕ್ಯಾಲೆಂಡರ್ ಚಿತ್ರಗಳು, ಗ್ರೀಟಿಂಗ್ ಕಾರ್ಡ್‌ಗಳು, ಪುಸ್ತಕದ ಮುಖಪುಟಗಳು, ಎಲ್ಲವನ್ನೂ ಮಾಡಿದೆ. ಆದರೆ ಕಲೆಯನ್ನು ಹೀಗೆ ಕೇವಲ ವಾಣಿಜ್ಯಕ್ಕಾಗಿ ಉಪಯೋಗಿಸುವಾಗ ಸಂತೋಷವಾಗುತ್ತಿರಲಿಲ್ಲ. ಆದರಿಂದ ಆ ಕೆಲಸವನ್ನು ಬಿಟ್ಟುಬಿಟ್ಟೆ ಮತ್ತು ಸ್ವತಂತ್ರವಾಗಿ ಕಲಾರಾಧನೆಯನ್ನು ಪ್ರಾರಂಭಿಸಿದೆ. ನಾನು ಕಾಲೇಜು ಶಿಕ್ಷಣ ಕೈಗೊಂಡದ್ದು ಒಳ್ಳೆಯದೇ ಆಯಿತು. ಏಕೆಂದರೆ, ಶಿಕ್ಷಣವು ಮನುಷ್ಯನನ್ನು ಸುಶಿಕ್ಷಿತ ಮಾಡುವುದಷ್ಟೇ ಅಲ್ಲ, ಸುಸಂಸ್ಕೃತನನ್ನಾಗಿಯೂ ಮಾಡುತ್ತದೆ. ಕಲಾವಿದನು ಅವನ ಕಲೆಯಲ್ಲಿ ಪ್ರಾವೀಣ್ಯವನ್ನು ಪಡೆಯಬೇಕಷ್ಟೇ ಅಲ್ಲ, ಒಳ್ಳೆಯ ಮನುಷ್ಯನೂ ಆಗಿರಬೇಕು. ಜ್ಞಾನಾರ್ಜನೆಯಲ್ಲಿ ಸ್ವಾರಸ್ಯಬೇಕು, ದೃಷ್ಟಿಕೋನವು ವಿಕಸಿತವಾಗುತ್ತಿರಬೇಕು. ಈಗಿನ ವಿದ್ಯಾರ್ಥಿಗಳು ಹತ್ತನೆಯ ತರಗತಿ ಪಾಸಾದೊಡನೆ ಕಲಾಶಾಲೆಯನ್ನು ಸೇರುತ್ತಾರೆ. ಹೀಗಾಗಿ ಅವರ ಇತರ ವಿಷಯಗಳ ಜ್ಞಾನ ಕುಂದುತ್ತದೆ. ವಿಶೇಷವೆಂದರೆ ಇಂಗ್ಲಿಷ್ ಭಾಷೆಯ ಅನಾಸ್ಥೆ. ಅದರಿಂದಾಗಿ ಇಂಗ್ಲಿಷಿನಲ್ಲಿಯ ಕಲಾವಿಮರ್ಶೆಯ ಒಳ್ಳೆಯ ಗ್ರಂಥಗಳಿಂದ ಅವರು ದೂರವಿರುತ್ತಾರೆ. ಇದೊಂದು ಬೇಸರದ ಸಂಗತಿ.



ಪೆನ್ಸಿಲ್ ಸ್ಕೆಚ್



ಜಲವರ್ಣಗಳು



- ನಿಮ್ಮ ವಿಶೇಷತೆ ಎಂದರೆ ಜಲವರ್ಣ, ತೈಲವರ್ಣ, ಪೇಸ್ಟಲ್ಸ್, ಪೆನ್ಸಿಲ್ ಈ ಎಲ್ಲ ಮಾಧ್ಯಮಗಳಲ್ಲಿಯೂ ಅಷ್ಟೇ ಸುಲಭವಾಗಿ, ಕುಶಲತೆಯಿಂದ ಕೆಲಸ ಮಾಡುತ್ತೀರಿ. ನಿಮಗೆ ಖುಷಿ ಕೊಡುವ ಪ್ರಕಾರ ಯಾವುದು?

ನಿಮ್ಮ ಮನಸ್ಸಿನಲ್ಲಿಯ ಭಾವನೆಯನ್ನು ವ್ಯಕ್ತ ಮಾಡಬೇಕಾದರೆ ನೀವು ಕವಿತೆಯನ್ನು ಬರೆಯಬಹುದು, ಕತೆಯನ್ನು ಬರೆಯಬಹುದು, ನಾಟಕ ಇಲ್ಲವೆ ಕಾದಂಬರಿಯನ್ನು ಬರೆಯಬಹುದು. ಹಾಗೆಯೇ ಪ್ರತಿಯೊಂದು ವಿಷಯ ತನ್ನ 'ಫಾರ್ಮ್' ಮತ್ತು ಮಾಧ್ಯಮವನ್ನು ಆಯ್ದುಕೊಂಡೇ ಪ್ರಕಟಗೊಳ್ಳುತ್ತದೆ. ವಿಷಯದಲ್ಲಿಯ ವಿವಿಧ ಛಾಯೆಗಳನ್ನು, ವಿವರಗಳನ್ನು ಅತ್ಯಧಿಕವಾಗಿ, ಸಂತೋಷಪೂರ್ವಕವಾಗಿ ವ್ಯಕ್ತ ಗೊಳಿಸಬಹುದಾದ ಮಾಧ್ಯಮವನ್ನೇ ನಾನು ಸಹಜವಾಗಿ ಆಯ್ದುಕೊಳ್ಳುತ್ತೇನೆ. ಇದೂ ಒಂದು ಅಂತಃಪ್ರೇರಣೆ.

- ಈಗೀಗ 'ಫಿಗರೇಟಿವ್' ಚಿತ್ರಗಳು ಕಡಿಮೆಯಾಗುತ್ತಿವೆ. ಅಮೂರ್ತ ಚಿತ್ರಗಳೇ ಸಮಕಾಲೀನ ಎಂದು ಹೇಳಲಾಗುತ್ತದೆ. ಆದಾಗ್ಯೂ ನೀವು ಫಿಗರೇಟಿವ್ ಮತ್ತು ನಿಸರ್ಗ ಚಿತ್ರಗಳ ಮಾರ್ಗ ವನ್ನೇ ಆಯ್ದು ಕೊಂಡದ್ದು ಹೇಗೆ?



ಅಮೂರ್ತ ಚಿತ್ರಗಳೇ ಸಮಕಾಲೀನ ಎಂಬುವುದನ್ನು ನಾನು ನಂಬುವುದಿಲ್ಲ. ಪಾಷಾಣ ಯುಗದಲ್ಲಿಯ ಮನುಷ್ಯನು ಗುಹೆಗಳಲ್ಲಿ ಕೊರೆದ ಚಿತ್ರಗಳೂ ಅಮೂರ್ತ ಚಿತ್ರಗಳೇ ಆಗಿರಲಿಲ್ಲವೆ? 'ಸತ್ಯ, ಶಿವ, ಸುಂದರ'ದ ಕಲ್ಪನೆಗೆ ಕಾಲಮಾಪನೆಯ ಅಳತೆಗೋಲು ಹತ್ತುವುದಿಲ್ಲ. ಸೌಂದರ್ಯ ದೃಷ್ಟಿಯು ಶಾಶ್ವತವಾದದ್ದು, ಕಾಲಾತೀತವಾದದ್ದು. ಆದರೆ ಈ ಸೌಂದರ್ಯವನ್ನು ನಿರ್ಮಿಸಬೇಕಾದರೆ ಅದಕ್ಕಾಗಿ ಸಾಧನೆ ಬೇಕು. ಪರಿಪಕ್ವವಾದ ಮನಸ್ಸು ಬೇಕು. ವಿದೇಶದಲ್ಲಿಯ ಚಿತ್ರಕಲೆಯನ್ನೇ ಕಣ್ಮುಂದೆ ಇಟ್ಟು, ಅನುಕರಣೆಯನ್ನು ಮಾಡಿದರೆ ಏನು ಸಾಧ್ಯವಾಗುತ್ತದೆ? ನಮ್ಮ ಸುತ್ತಲೂ ಸೃಷ್ಟಿಯು ಎಂತಹ ಅಪಾರವಾದ ಸಿರಿಸಂಪತ್ತನ್ನು ಸೂರೆಗೊಳ್ಳುತ್ತ ನಿಂತಿದೆ. ಮಾನವನ ಮುಖ, ದೇಹಭಂಗಿಗಳಲ್ಲಿಯೂ ಎಷ್ಟು ವಿವಿಧ ಪ್ರಕಾರಗಳ ಭಾವ-ಭಾವನೆಗಳ ನಾಟ್ಯ ನಡೆದಿರುತ್ತದೆ. ಇದೆಲ್ಲವನ್ನೂ ವಾಸ್ತವವಾಗಿ ಕಲೆಯ ಮೂಲಕ ವ್ಯಕ್ತಗೊಳಿಸಿ ರಸಿಕರಿಗೆ ಆತ್ಮಾನಂದವನ್ನು ಕೊಡುವ ಬದಲು, ವಿಷಯವನ್ನು ವಿರೂಪಗೊಳಿಸಿ, ಅಸ್ಪಷ್ಟಗೊಳಿಸಿ ಒಂದು ತರದ ಭ್ರಮಾವಸ್ಥೆಯನ್ನು ಹುಟ್ಟಿಸುವುದರಲ್ಲಿ ಏನು ಪ್ರಯೋಜನ? ನಿಜವಾಗಿ ಹೇಳಬೇಕಾದರೆ, ಇಂದಿನ ಕಲಾಶಿಕ್ಷಣದಲ್ಲಿ ಶರೀರ ಶಾಸ್ತ್ರ (anatomy) ಕಡೆಗೆ ಕೊಡಬೇಕಾದಷ್ಟು ಲಕ್ಷ್ಯವನ್ನೇ ಕೊಡುತ್ತಿಲ್ಲ. ಪಠ್ಯಕ್ರಮದ ಕೊನೆಯ ಒಂದೆರಡು ವರ್ಷಗಳಲ್ಲಿ ಶರೀರಶಾಸ್ತ್ರವನ್ನು ಕಲಿಸಿದರೆ ಅದರ ಅಭ್ಯಾಸ ಆಗುವುದು ಯಾವಾಗ? ವಿದ್ಯಾರ್ಥಿಗಳಿಗೋ ಕಲಾಶಾಲೆಯಿಂದ ಹೊರಬಿದ್ದಕೂಡಲೇ ಅರ್ಥಾರ್ಜನೆ ಮಾಡುವ ಅವಸರವಿರುತ್ತದೆ. ಸಾಧನೆ ಮಾಡಲು ಅವಕಾಶವಿರುವುದಿಲ್ಲ. ಅತ್ಯಂತ ಕಡಿಮೆ ಕಾಲಾವಧಿಯಲ್ಲಿ ತಯಾರಿಸಬಹುದಾದ ಚಿತ್ರಗಳನ್ನು ಬರೆದು, ಅದಕ್ಕೆ ಅಮೂರ್ತ ಎಂದು ಹೆಸರಿಟ್ಟು, ತಮ್ಮದೇ ಆದ ಗುಂಪನ್ನು ತಯಾರಿಸಿ, ಪರಸ್ಪರ ಪ್ರಶಂಸೆ ಮಾಡುವುದರಲ್ಲಿಯೇ ಶ್ರೇಯಸ್ಸು ಪಡೆಯುವ ಕಲಾವಿದರ ಬಗ್ಗೆ ನಾನೇನು ಹೇಳಲಿ? ಆದರೆ ಅವರಿಗೆ ದೋಷ ಕೊಡುವುದಕ್ಕಿಂತ ನಾನು ಇಂದಿನ ಆರ್ಥಿಕ ಪರಸ್ಥಿತಿಯೇ ಇದಕ್ಕೆ ಕಾರಣವೆಂದು ಬಗೆಯುತ್ತೇನೆ.



- ಕರ್ನಾಟಕದಲ್ಲಿ ಫಿಗರೇಟಿವ್ ಚಿತ್ರಗಳ ಒಂದು ಪರಂಪರೆ ಯಾಕಾಗಲಿಲ್ಲ?

ಕರ್ನಾಟಕದಲ್ಲೇ ಇರಲಿ, ಭಾರತದಲ್ಲಿಯೇ ಆಗಿರಲಿ, ನಮ್ಮ ಪರಂಪರೆ ಶಿಲ್ಪಕಲೆಯದು, ಕೈಕಸಬಿನದು. ನಮ್ಮ ಚಿತ್ರಕಲೆ ಎಂದರೆ ಪುರಾಣ ಗ್ರಂಥಗಳಲ್ಲಿ ಚಿತ್ರಿಸಲಾಗುವ, ಸಸ್ಯ ಬಣ್ಣಗಳನ್ನು ಬಳಸಿದ ಪ್ರಸಂಗ ಚಿತ್ರಗಳು. ಮುಗಲ್ ಕಾಲದಲ್ಲಿ ಮಾತ್ರ ಇರಾಣ್ ದೇಶದಿಂದ ಬಂದ ಚಿತ್ರಶೈಲಿಯು ಜನಪ್ರಿಯವಾಯಿತು. ಆದರೆ ಇವೆಲ್ಲ ಚಿತ್ರಗಳು ಒಂದೇ ಪರಿಮಿತಿಯವು. ನೆಳಲು ಬೆಳಕುಗಳಿಂದ ಪ್ರಕಟವಾಗುವ ಮೂರು ಆಯಾಮದ ಪರಿಮಾಣ ಅವುಗಳಿಗಿದ್ದಿಲ್ಲ. ತೈಲವರ್ಣದಲ್ಲಿಯ ಚಿತ್ರಕಲೆ ನಮ್ಮ ದೇಶದಲ್ಲಿ ಬಂದದ್ದು ಯುರೋಪಿನಿಂದಲೇ. ಅದನ್ನು ಭಾರತೀಯ ಪುರಾಣ ಪ್ರಸಂಗಗಳಿಗಾಗಿ ಸಮರ್ಥವಾಗಿ ಅಳವಡಿಸಿಕೊಂಡಿದ್ದರಿಂದ ರಾಜಾ ರವಿವರ್ಮರಿಗೆ ಇತಿಹಾಸದಲ್ಲಿ ಒಂದು ವಿಶೇಷ ಸ್ಥಾನವಿದೆ. ಅನಂತರ ಈ ತೈಲವರ್ಣದ ಚಿತ್ರಗಳ ಪರಂಪರೆ ಸಾಕಷ್ಟು ಬೆಳೆದು ಬಂದಿಲ್ಲ ಎಂಬುದರ ಕಾರಣ ಅದು ಜನಸಾಮಾನ್ಯರ ಅಳವಿನ ಆಚೆಗಿತ್ತು. ಅದಕ್ಕಾಗಿಯೇ ಈ ಚಿತ್ರಕಲೆ ರಾಜ ದರಬಾರಗಳಲ್ಲಿಯಷ್ಟೇ ಸೀಮಿತವಾಯಿತು. ಮುದ್ರಣ ಕಲೆಯಲ್ಲಾದ ಕ್ರಾಂತಿಯೂ ಇತ್ತೀಚಿನದು. ಇದರಿಂದಾಗಿ ಫಿಗರೇಟಿವ್ ಚಿತ್ರಕಲೆಯ ನಿರ್ಮಿತಿ ಇಲ್ಲವೆ ಪ್ರಸಾರಕ್ಕೆ ಬೇಕಾದ ಪ್ರಚೋದನೆ ಸಿಗಲಿಲ್ಲ.

- ಹೊರನಾಡಿಗರಾದ ನಿಮಗೆ ಮುಂಬಯಿ ಮಹಾನಗರ ಎಂಥ ಪ್ರಚೋದನೆ ಕೊಡುತ್ತಿದೆ?

ಮುಂಬಯಿ ನನಗೆ ಆಶ್ರಯ ಕೊಟ್ಟದ ಮಹಾನಗರ. ಇಲ್ಲಿ ಸಿಗುವಷ್ಟು exposure ಇನ್ನೆಲ್ಲಿಯೂ ಸಿಗಲಿಕ್ಕಿಲ್ಲ. ನಿಮ್ಮ ಬಳಿ ಪರಿಶ್ರಮ ಮತ್ತು ನಿಷ್ಠೆ ಇದ್ದರೆ, ನಿಮ್ಮ ಮಹಾತ್ವಾಕಾಂಕ್ಷೆಯನ್ನು ಈಡೇರಿಸಲು ಈ ಮಹಾನಗರವು ಎಲ್ಲ ಪ್ರಕಾರದ ಸೌಲಭ್ಯವನ್ನು ನೀಡುತ್ತದೆ.

- ಈ ಕಂಪ್ಯೂಟರ್ ಯುಗದಲ್ಲಿ ಹೊಸ ಕಲಾವಿದರಿಗೆ ನಿಮ್ಮ ಸಲಹೆ ಏನು?

ಕಂಪ್ಯೂಟರ್ ಏನಾಗಿದ್ದರೂ ಮಶಿನ್ ತಾನೆ. ಅದು ಅತ್ಯಂತ ತೀವ್ರ ವೇಗದಿಂದ ಕೆಲಸವನ್ನು ಮಾಡಬಹುದು. ನೀವು ಹೇಳಿದ ಹಾಗೆ ಕೆಲಸವನ್ನು ಮಾಡಬಹುದು. ಆದರೆ ಅದರಲ್ಲಿ ನಿಮ್ಮ ವ್ಯಕ್ತಿತ್ವದ, ನಿಮ್ಮ ವಿಚಾರ, ಭಾವನೆಗಳ ಪಡಿನೆಳಲು ಬೀಳುವುದು ಕಷ್ಟ. ಕಂಪ್ಯೂಟರಿಗೆ ಕವಿತೆಯನ್ನು ಬರೆಯಲು ಹೇಳಿದರೆ ಅದು ಬರೆಯಬಹುದೇ? ಹೆಚ್ಚೆಂದರೆ ಅದು ಒಳ್ಳೆಯ ಅಕ್ಷರದಲ್ಲಿ 'ಪ್ರಿಂಟ್' ಮಾಡಬಹುದು. ನಾನು ನನ್ನ ಎಲ್ಲ ಪೇಂಟಿಂಗ್ಸ್‌ಗಳನ್ನು ನನ್ನ ಮುಂದೆ ಮಾಡೆಲ್ ಇಟ್ಟೇ ಚಿತ್ರಿಸುತ್ತೇನೆ. ಬರಿಯ ಫೋಟೋ ನೋಡಿ ಚಿತ್ರ ಬರೆದರೆ ಅದರಲ್ಲಿ spontaneity ಬರಲಾರದು. ಚಿತ್ರ ಬರೆಯುವಾಗಿನ ಕಲಾವಿದನ ಮನಸ್ಸಿನ ಏಕಾಗ್ರತೆ, ಛಾಯಾ-ಪ್ರಕಾಶಗಳನ್ನು ಬಳಸಿಕೊಳ್ಳುವ ಅವನ ರೀತಿ, ಅವನು ಆರಿಸಿದ ಆಶಯ, ವಿವರಗಳಲ್ಲಿಯ ವೈವಿಧ್ಯ, ಸೌಂದರ್ಯ ಇವು ಮಾನವೀಯ ಅಂಶಗಳು. ಕಂಪ್ಯೂಟರ್‌ನಿಂದ ಹೇಗೆ ಜೀವಂತ ಮನುಷ್ಯನನ್ನು ನಿರ್ಮಿಸಲಾಗುವುದಿಲ್ಲವೋ ಹಾಗೆಯೇ ಜೀವಂತ ಕಲಾಕೃತಿಯನ್ನೂ ನಿರ್ಮಿಸಲು ಅಸಾಧ್ಯ. ■



(ಚಿತ್ರ ಕೃಪೆ: ಜಾನ್ ಫರ್ನಾಂಡಿಸ್ ಮತ್ತು 'ನವನೀತ್' ಸಂಗ್ರಹ.)

ಕೊನೇ-ಸಿಪ್

ಚಂದಮಾಮ್

- ಹದಿಮೂರನೇ ಮಹಡಿಯ ಮೇಲೆ ತನ್ನ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಸರ್‌ದಾರ್‌ಜೀಯನ್ನು ಒಬ್ಬರು 'ಏ ಗುರುಮೀತ್ ಸಿಂಗ್, ನಿಮ್ ಮಗಳು ಪ್ರೀತೋಸಿಂಗ್ ಈಗಷ್ಟೆ ಅಪಘಾತದಲ್ಲಿ ತೀರ್ಕೊಂಡ್ಲು..' ಎಂದು ಕೂಗಿದ್ದೇ... ಆಘಾತಗೊಂಡ ಸರ್‌ದಾರ್ ಏನೂ ತೋಚದೆ, ಆಫೀಸಿನ ಕಿಟಕಿಯಿಂದ ಜಿಗಿದುಬಿಟ್ಟ... ... ಹತ್ತನೇ ಮಹಡಿಯ ಬಳಿ ಅವನಿಗೆ 'ಅರೇ ತನಗೆ ಪ್ರೀತೋ ಎಂಬ ಮಗಳೇ ಇಲ್ಲವಲ್ಲ' ಎಂಬುದು ನೆನಪಾಯ್ತು... ಐದನೇ ಮಹಡಿಯ ಬಳಿ... 'ಅರೇ ತನಗೆ ಮದುವೆಯೇ ಆಗಿಲ್ಲ' ಎನ್ನೋದು ನೆನಪಾಯ್ತು ಮತ್ತು ಇನ್ನೇನು ನೆಲಕ್ಕೆ ಅಪ್ಪಳಿಸಬೇಕು ಆಗ ಹೊಳೆಯಿತು 'ತಾನು ಗುರುಮೀತ್ ಸಿಂಗ್ ಅಲ್ಲ!'

- ಪಿ.ಜಿ.ವುಡ್‌ಹೌಸ್‌ನ ಕೃತಿಯಲ್ಲಿನ ಒಂದು ಸುಂದರ ವರ್ಣನೆ ಹೀಗಿದೆ. ''ನಾನು ಸಲೂನ್ ಹೊಕ್ಕವನೇ ಅಲ್ಲಿ ತುಂಬಿದ್ದ ಜನರನ್ನು ಕಂಡು ಎಷ್ಟು ಶರವೇಗದಲ್ಲಿ ಹೊರಳಿ ಹೊರಬಿದ್ದೆನೆಂದರೆ - ಬಾಗಿಲಲ್ಲಿ ನನಗೇ ಢಿಕ್ಕಿ ಹೊಡೆದೆ!''

- ಟಿ.ಪಿ.ಕೈಲಾಸಂ ಅತ್ಯಂತ 'ತೂಕದ' ಗೆಳೆಯರನ್ನೊಮ್ಮೆ ಸ್ವಾಗತಿಸಿದ್ದು ಹೀಗೆ - ''ಬನ್ನಿ ಬನ್ನಿ, three 'chairs' to his 'heaviness', ಶ್ರೀಮಾನ್ ಧಡಿಯರ್, hip hip 'ಹೊರೆ'.''

- ಹೊಸ ಮಠವೊಂದರ ಉದ್ಘಾಟನೆಗೆ ಬಂದಿದ್ದ ಉಡುಪಿಯ ಸ್ವಾಮೀಜಿಯೊಬ್ಬರು ಹೇಳಿದ ವಿದ್ವತ್‌ಪೂರ್ಣ ಮಾತುಗಳು ಹೀಗಿದ್ದವು: 'ನೀವು ಹುಲಿ, ಸಿಂಹ ಹೀಗೆ ಯಾವುದೇ ಪ್ರಾಣಿಯ ಎದುರು ಹೋಗಿ ನಿಲ್ಲಿ. ಅದು ಏನನ್ನುತ್ತದೆ? ಗುರ್... ಗುರ್... ಅಂದರೆ... ಅದು 'ಗುರು' ಬೇಕು ಅಂತ ಹೇಳ್ತಾ ಇದೆ. ಇದರರ್ಥ ನಮಗೆ ಒಬ್ಬ ಗುರು ಬೇಕೇಬೇಕು.....'

- ತುಂಬಾ ಕುಡಿದಿದ್ದ ಕನ್ನಡದ ಜನಪದ ಸೊಗಡಿನ ಕವಿಯೊಬ್ಬರನ್ನು ಹೇಗೋ ಆಟೋದಲ್ಲಿ ಹಾಕಿ ಅವರ ಮನೆಯೆದುರು ನಿಲ್ಲಿಸಿ, ಒಳಗೆ ಬಿಟ್ಟು, ತಿರುಗಿ ಬಂದು ಆಟೋದಲ್ಲಿ ಕುಳಿತ ಗೆಳೆಯನಿಗೆ ಆಟೋದವ ಹೇಳಿದನಂತೆ 'ಸಾರ್ ಎಷ್ಟು ದೊಡ್ಡ ಕವಿಗಳ ಮನೆ ಇದು. ಈ ಕುಡುಕ ಬಡ್ಡೀಮಗನ್ನ ಯಾಕ್ಸಾರ್ ಅಲ್ಲಿ ಬಿಟ್ರಿ?'

- ಆಗಾಗ ಕುಡಿಯುವ ಖಯಾಲಿ ಇರುವ ಕನ್ನಡ ಕವಿಯೊಬ್ಬರು, ಕುಡಿದು ತಡವಾಗಿ ಮನೆಗೆ ಹೋದಾಗೆಲ್ಲ, ಹೆಂಡ್ತಿಯ ಕೆಂಗಣ್ಣಿನಿಂದ ಬಚಾವಾಗಲು '' ಮೆಜೆಸ್ಟಿಕ್ ಹತ್ರ ಕುವೆಂಪು ಸಿಕ್‌ಬಿಟ್ರು, ಕಣೆ, ಮೋಕ್ಷಗುಂಡಂ ವಿಶ್ವೇಶ್ವರಯ್ಯನವರೂ ಇದ್ರು. ಬಾ ಕವೀ ಚರ್ಚೆ ಮಾಡೋಣ ಅಂದ್ರು. ಅಂಥಾ ದೊಡ್ಡವರು ಕರೆದಾಗ ಇಲ್ಲ ಅನ್ನೋಕಾಗಲ್ಲ ನೋಡು. ಸ್ವಲ್ಪ ಕೂತಿದ್ದು ಬಂದೆ'' ... ಹೀಗೆ ತಮ್ಮ ರಕ್ಷಣೆಗೆ ದೇವಮಾನವರನ್ನೆಲ್ಲ ಮತ್ತೆ ಧರೆಗೆ ತರುತ್ತಾರಂತೆ. ಗುಬ್ಬಿವೀರಣ್ಣ, ರವೀಂದ್ರನಾಥ್ ಟಾಗೂರ್, ಬೇಂದ್ರೆ... ಹೀಗೆ ಗಂಡನ ಗೆಳೆಯರ ಬಳಗವನ್ನು ಕಂಡು ಆಕೆಗೆ ಅಸಹಾಯಕ ಅಭಿಮಾನವಂತೆ.

- ಅಮೃತಸರದ ಜಾತ್ರೆಯಲ್ಲಿ ತಲೆಬುರುಡೆ ಇಟ್ಟುಕೊಂಡು ''ಇದು ಗುರುಗೋವಿಂದ್ ಸಿಂಗ್‌ರ ತಲೆಬುರುಡೆ... ಬನ್ನಿ ನೋಡಿ... ದಕ್ಷಿಣೆ ಹಾಕಿ'' ಎಂದೊಬ್ಬ ಕೂಗುತ್ತಿದ್ದ. ಜನ ನೋಡಿ, ನಮಸ್ಕರಿಸಿ, ಹಣ ಹಾಕಿ ಹೋಗ್ತಿದ್ದರು. ತುಸು ಜಾಣನಾದ ಸರ್‌ದಾರ್‌ಜೀಗೆ ಅನುಮಾನ ಬಂತು. 'ಅನ್ಯಾಯ, ಅವರು ಅಷ್ಟು ದೊಡ್ಡ ವ್ಯಕ್ತಿ. ತಲೆಬುರುಡೆ ಇಷ್ಟೇ ಇಷ್ಟು ಸಣ್ಣದಾಗಿದೆಯಲ್ಲ?' ಎಂದು ಧೈರ್ಯ ಮಾಡಿ ಕೇಳಿಯೇ ಬಿಟ್ಟ. ಅದಕ್ಕೆ ಆ ವ್ಯಕ್ತಿ 'ಇದು ಅವರ ಬಾಲ್ಯದ ತಲೆಬುರುಡೆ' ಎಂದ. 'ಓಹೋ, ಹಾಗಾದರೆ ಸರಿ' ಎಂದು ಇವನು ಹಣ ಹಾಕಿ ನಮಸ್ಕರಿಸಿ ಹೋದ.

- ಮುಗುಳುನಗೆ : ಎಷ್ಟೆಲ್ಲಾ ಸಂಗತಿಗಳನ್ನು 'ಸರಳ'ಗೊಳಿಸುವ ಪುಟ್ಟ 'ವಕ್ರ' ರೇಖೆ.

  ಜಿಪುಣ: ಶ್ರೀಮಂತ ಸಾವು ಬರಲಿ ಎಂದು ಬಡತನದಲ್ಲಿ ಬದುಕುವವ.

  ಆಶಾವಾದಿ: ಅಕಸ್ಮಾತ್ ನೀರಿನಲ್ಲಿ ಬಿದ್ದಾಗಲೇ ಸ್ನಾನ ಆರಂಭಿಸಿದವ.

- ಕಚಗುಳಿ : sex ಮತ್ತು bank ಗಳ ನಡುವಿನ ಸಾಮ್ಯ ಏನು?
  withdraw ಮಾಡಿದರೆ interest ಕಡಿಮೆ ಆಗುತ್ತೆ!

Printed, published and owned by **Vijay Sankeshwar**, Published at 1st Floor, "Giriraj Annexe', P.W.D. Circuit House Road, HUBLI - 580 029 Karnataka Ph: 253656, 253657, 253658. Fax: 0836-253630
Printed at Anand Printers & Publishers, 9/A, Pantharapalya Village, Nayandahalli, Mysore Road, Bangalore - 560 039
Editor: **Jayant Kaikini**

Printed at: Rajhans Enterprises, Bangalore- 44 Ph: 3357070
Website: www.rajhansenterprises.com